1135

ಲೇ:-

ಪರಾಮರ್ಶನ ಗ್ರಂಥ

ಸೇಸಂ - 108136

ಅಕ್ಷರ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

ಪರಾಮರ್ಶೆಗಾಗಿ

928
GOR

104

ಜನಗಳ ನಡುವೆ

ಮ್ಯಾಕ್ಸಿಂ [illegible]

ಎಸ್. ಎಸ್. ಹಿರೇಮಠ
ನಿವೃತ್ತ ಪ್ರಾಂಶುಪಾಲರು
ಬೆಳಗಾವಿ

92 B
GOR

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಮ್ಯಾಕ್ಸಿಂ ಗಾರ್ಕಿ

ಜನತೆಯ ನಡುವೆ

(ಆತ್ಮಕಥೆ)

ಅಕ್ಷರ ಗ್ರಂಥಾಲಯ
ಕನ್ನಡ ವಿ.ವಿ., ಹಂಪಿ.

ಅನುವಾದ

ನಿರಂಜನ

ಎಸ್.ಎಸ್. ಹಿರೇಮಠ
ನಿವೃತ್ತ ಪ್ರಾಂಶುಪಾಲರು
ಬೆಳಗಾವಿ

ಭಾರತೀ ಪ್ರಕಾಶನ
ಕೃಷ್ಣಮೂರ್ತಿಪುರಂ : : ಮೈಸೂರು.

This translation of Maxim Gorky's *Into the World* has been published by the kind permission and co-operation of Mezdhunarodnaya kniga, Mocow

923
GOR N

Ⓡ 108136

ಮುಖಚಿತ್ರ : ಆರ್. ಎಸ್. ಎನ್

ಬೆಲೆ : ೨·೫೦

ಜಿ. ಎಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
ಮೈಸೂರು

ಎಸ್. ಎಸ್. ಹಿರೇಮಠ
ನಿವೃತ್ತ ಪ್ರಾಂಶುಪಾಲರು
ಬೆಳಗಾವಿ



ಜನತೆಯ ನಡುವೆ

೧

ಅಂತೂ ನಾನೀಗ ಒಬ್ಬ 'ವೃತ್ತಿ-ಶಿಷ್ಯ.' ಶಹರದ ಮುಖ್ಯ ಬೀದಿಯಲ್ಲಿರುವ 'ಅತ್ಯಾಧುನಿಕ ಪಾದರಕ್ಷೆ'ಗಳ ಅಂಗಡಿಯಲ್ಲಿ ನಾನು 'ಚಾಕರಿ ಹುಡುಗ.'

ನನ್ನ ಯಜಮಾನ, ದುಂಡನೆಯ ಪುಟ್ಟ ಪ್ರಾಣಿ. ಮಂದ ದೃಷ್ಟಿಯ ಮುಖ ಆತನದು; ಪಾಚಿಗಟ್ಟಿದ ಹಲ್ಲುಗಳು; ಜಿಬುರು ಸುರಿಯುವ ಕಣ್ಣುಗಳು. ಆತ ಕುರುಡನಿರಬೇಕು ಎಂಬ ಭಾವನೆ ನನ್ನದು. ಅದನ್ನು ಖಚಿತಗೊಳಿಸುವ ಆಸೆಯಿಂದ, ಆತನ ಕಡೆಗೆ ನೋಡಿ ನಾನು, ಅಣಕಿಸುವ ಹಾವಭಾವಗಳನ್ನು ತೋರುತ್ತೇನೆ.

"ನಿನ್ನ ಮೂತೀನ ಸೊಟ್ಟಗೆ ಮಾಡ್ಬೇಡ," ಎಂದು ಆತ, ಶಾಂತವಾಗಿ—ಆದರೆ ದೃಢವಾಗಿ—ನನಗೆ ಹೇಳುತ್ತಾನೆ.

ಆ ಮಬ್ಬು ಕಣ್ಣುಗಳು ನನ್ನನ್ನು ನೋಡುತ್ತಿವೆಯೆಂದು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ; ಆ ಯೋಚನೆಯೇ ಅಸಹ್ಯವಾದುದು. ಆ ಕಣ್ಣುಗಳು ನನ್ನನ್ನು ನೋಡುತ್ತಿವೆಯೆಂದು ನಾನು ನಂಬುವುದಿಲ್ಲ. ನಾನು ಅಣಕಿಸುತ್ತಿರುವುದನ್ನು; ಯಜಮಾನ ಪ್ರಾಯಶಃ ಊಹಿಸುತ್ತಿರಬಹುದು, ಅಷ್ಟೆ.

"ಮೂತಿ ಸೊಟ್ಟಗೆ ಮಾಡ್ಬೇಡ ಅಂತ ಒಂದು ಸಲ ಹೇಳ್ದೆ," ಎಂಬ ಮಾತನ್ನು, ಮತ್ತಷ್ಟು ಾಂತವಾಗಿ, ತುಟಿಗಳನ್ನು ತೆರೆದೂ ತೆರೆಯದ ರೀತಿಯಲ್ಲಿ, ಆತ ಮತ್ತೆ ಒತ್ತಿ ಹೇಳುತ್ತಾನೆ. ಆತನ ಣ ಪಿಸುಧ್ವನಿ ಹರಿದಾಡುತ್ತಾ ನನ್ನೆಡೆಗೆ ಬರುತ್ತಿರುವಂತೆ ಕಾಣುತ್ತದೆ: "ಕೈ ತುರಿಸಿಕೊಳ್ಳೋ

ದನ್ನು ನಿಲ್ಸು. ಶಹರದ ಮುಖ್ಯ ಬೀದೀಲಿ, ಪ್ರಥಮ ಶ್ರೇಣಿಯ ಅಂಗಡೀಲಿ, ನೀನು ದುಡೀತಾ ಇದ್ದೀ ಅನ್ನೋದನ್ನು ನೆನಪಿಡು. ಚಾಕರಿ ಹುಡುಗ ಬಾಗಿಲ ಹತ್ತಿರ ಕೆತ್ತಿದ್ಬೊಂಬೆ ಹಾಗೆ ನೆಟ್ಟಗೆ ನಿಂತಿರ್ಬೇಕು."

'ಕೆತ್ತಿದ್ಬೊಂಬೆ' ಎಂದರೇನೆಂಬುದು ನನಗೆ ತಿಳಿಯದು. ನನ್ನ ತೋಳು ಕೈಗಳನ್ನು ತುರಿಸದಿರುವುದೂ ನನ್ನಿಂದಾಗದ ಮಾತು. ಯಾಕೆಂದರೆ, ಮೊಣಕೈಗಳವರೆಗೂ ಕೆಂಪು ಕುರಗಳೂ ಬೊಕ್ಕೆಗಳೂ ಹರಡಿಕೊಂಡಿವೆ. ಚರ್ಮದ ಕೆಳಗಡೆಯಿಂದ ಕಜ್ಜಿಯ ತುರಿಕೆ ನಿರ್ದಯವಾಗಿ ನನ್ನನ್ನು ಕಾಡುತ್ತಿದೆ.

"ನಿನ್ನ ಮನೇಲಿ ನೀನು ಏನು ಕೆಲಸ ಮಾಡ್ತಾ ಇದ್ದೆ?" ಎಂದು ಯಜಮಾನ, ನನ್ನ ಕೈಗಳತ್ತ ದೃಷ್ಟಿ ಹರಿಸಿ ಕೇಳುತ್ತಾನೆ.

ನಾನು ಉತ್ತರವಿತ್ತಾಗ, ನರೆಗೂದಲು ಅಂಟಿಕೊಂಡಿದ್ದ ತನ್ನ ಗುಂಡುತಲೆಯನ್ನಾತ ಅಲುಗಿಸಿ, ಕುಟುಕುಮಾತನ್ನು ಆಡುತ್ತಾನೆ:

"ತಿಪ್ಪೆ ಎತ್ತೋ ಕೆಲಸ—ಬೇಡೋದಕ್ಕಿಂತಲೂ ತುಚ್ಛವಾದದ್ದು; ಕದಿಯೋದಕ್ಕಿಂತಲೂ ತುಚ್ಛವಾದದ್ದು."

"ಕದೀತಾನೂ ಇದ್ದೆ," ಎಂದು ಸಾಕಷ್ಟು ಹೆಮ್ಮೆಯಿಂದಲೇ, ನಾನು ಜಾಹೀರು ಪಡಿಸುತ್ತೇನೆ.

ಅದನ್ನು ಕೇಳಿದೊಡನೆ ಆತ, ಬೆಕ್ಕಿನಂತೆ ಅಂಗೈಗಳ ಮೇಲೆಬಾಗಿ, ಆಶ್ಚರ್ಯಗೊಂಡ ಕಣ್ಣುಗಳಿಂದ ನನ್ನ ಮೇಲೆಯೆ ಶೂನ್ಯನೋಟವನ್ನು ನೆಟ್ಟು, 'ಗಲ್ಲ'ದ ಮೇಲಿನಿಂದ ಸುಂಯ್ಗುಡುತ್ತಾನೆ:

"ಏನಂದೆ! ಕದೀತಾನೂ ಇದ್ದಿಯಾ ?"

ಕದಿಯುತಿದ್ದುದು ಹೇಗೆ, ಏನನ್ನು, ಎಂಬುದನ್ನು ನಾನು ವಿವರಿಸಿದೆ.

"ಹುಂ. ಅದನ್ನು ಕ್ಷಮಿಸಬಹುದು. ಆದರೆ, ನನ್ನ ಬೂಟುಗಳನ್ನೋ ನನ್ನ ಹಣವನ್ನೋ ಕದ್ದಿ ಅಂಥರೆ, ನೀನು ಪ್ರಾಯಕ್ಕೆ ಬರೋದಕ್ಮುಂಚೆಯೇ ನಿನ್ನನ್ನು ಜೈಲಿಗೆ ಸೇರಿಸ್ತೀನಿ."

ಇದನ್ನಾತ, ತೀರಾ ಶಾಂತ ರೀತಿಯಲ್ಲೇ ಹೇಳುತ್ತಾನೆ. ಆದರೆ ನನಗೆ ಭಯವಾಗುತ್ತದೆ. ಆತನನ್ನು ಮತ್ತಷ್ಟು ಹೆಚ್ಚು ನಾನು ದ್ವೇಷಿಸುತ್ತೇನೆ.

ಯಜಮಾನನಲ್ಲದೆ, ಅಂಗಡಿಯಲ್ಲಿ ಇಬ್ಬರು ಸಹಾಯಕರಿದ್ದಾರೆ: ನನ್ನ ಸೋದರಮಾವ ಯಾಕೋವ್‌ನ ಮಗ ಸಾಶಾ; ಮತ್ತು ಇನ್ನೊಬ್ಬ—ಹಿರಿಯ ಸಹಾಯಕ, ತೆಳ್ಳಗಿನ ಬಳುಕುವ ಕೆಂಪಗಿನ ಮನುಷ್ಯ, ಸಾಶಾ ತೊಟ್ಟುಕೊಂಡಿರುವುದು, ಬಾದಾಮಿ ಬಣ್ಣದ ಒಳಕೋಟು, ಗಂಜಿಹಾಕಿದ ಅಂಗಿ; ಜತೆಯಲ್ಲಿ, ಒಂದು ಕತ್ತಿನಪಟ್ಟಿ. ನಾನು ಆತನ ಲಕ್ಷ್ಯಕ್ಕೇ ಬೀಳದಷ್ಟು ಜಂಭ ಅವನಿಗೆ.

ಆ ಯಜಮಾನನಲ್ಲಿಗೆ ನನ್ನನ್ನು ಕರೆದುಕೊಂಡು ಬಂದ ದಿನ ನನ್ನ ಅಜ್ಜ, ಕೆಲಸವನ್ನು ಕಲಿತುಕೊಳ್ಳಲು ನನಗೆ ನೆರವಾಗಬೇಕೆಂದು ಸಾಶಾನಿಗೆ ಹೇಳಿದ. ಆಗ ಸಾಶಾ, ಹುಬ್ಬುಗಂಟಿಕ್ಕಿ ದೊಡ್ಡ ಮನುಷ್ಯನಂತೆ ಅಂದ:

"ಮೊದಲು ಆತ, ನನಗೆ ವಿಧೇಯನಾಗಿರೋಕೆ ಕಲೀಬೇಕಾಗುತ್ತೆ."

ಅಜ್ಜ, ನನ್ನ ತಲೆಯ ಮೇಲೆ ತನ್ನ ಕೈಯನ್ನಿರಿಸಿ ಅದನ್ನು ಮುಂದಕ್ಕೆ ತಳ್ಳಿದ.

"ಅವನಿಗೆ ವಿಧೇಯನಾಗಿರು; ವಯಸ್ಸಿನಲ್ಲೂ ಸ್ಥಾನಮಾನದಲ್ಲೂ ಅವನು ನಿನಗಿಂತ ದೊಡ್ಡವನು."

ಸಾಶಾ ಠೀವಿಯಿಂದ ತನ್ನ ಕಣ್ಣುಗಳನ್ನು ಹೊರಳಿಸಿದ.

"ಅಜ್ಜ ಹೇಳಿದ್ದನ್ನು ನೆನಪಿಡು."

ಮೊದಲ ದಿನದಿಂದಲೇ ಆತ, ನಿರ್ದಯವಾಗಿ ತನ್ನ ಹಿರಿತನದ ಲಾಭಪಡೆದ.

"ಕಣ್ಣು ಹೊರಳಿಸೋದು ನಿಲ್ಸು, ಕಾಶಿರಿನ್!" ಎಂದು ಯಜಮಾನ ಆತನಿಗೆ ಎಚ್ಚರಿಕೆ ಇತ್ತ.

"ಇಲ್ಲ. ನಾನು ಹೊರಳಿಸ್ಲಿಲ್ಲ," ಎಂದು ಸಾಶಾ, ತಲೆತಗ್ಗಿಸಿ ಉತ್ತರವಿತ್ತ.

ಆದರೆ ಯಜಮಾನ, ಆತನಿಗೆ ಹೇಳುವುದನ್ನು ಪೂರ್ತಿ ಮುಗಿಸಿರಲಿಲ್ಲ:

"ನಿನ್ನ ಗಲ್ಲವನ್ನು ಹಾಗೆ ಒಳಕ್ಕೆ ಎಳಕೋಬೇಡ. ಗಿರಾಕಿಗಳು ಎಲ್ಲಾದರೂ ನಿನ್ನನ್ನು ಆಡು ಅಂತ ಭಾವಿಸ್ಬಹುದು."

ಹಿರಿಯ ಸಹಾಯಕ ಫಕಫಕನೆ ನಕ್ಕ. ಯಜಮಾನ ತನ್ನ ಕುರೂಪಿ ತುಟಿಗಳನ್ನು ಅಗಲಗೊಳಿಸಿದ. ನಾಚಿಕೆಯಿಂದ ಮುಖ ಅತಿಯಾಗಿ ರಂಗೇರಿದ ಸಾಶಾ, ಹಣಪಡೆಯುವ ಮೇಜಿನ ಕೆಳಗೆ ಅವಿತುಕೊಂಡ.

ಅಂತಹ ಮಾತುಕತೆಯನ್ನು ನಾನು ಇಷ್ಟಪಡುತ್ತಿರಲಿಲ್ಲ. ಈ ಜನರು ಹಲವಾರು ಅಪರಿಚಿತ ಪದಗಳನ್ನು ಬಳಸುತ್ತಿದ್ದರು. ಯಾವುದೋ ವಿದೇಶೀಯ ಭಾಷೆಯಲ್ಲಿ ಅವರು ಮಾತನಾಡುತ್ತಿರುವರೇನೋ? ಎಂದು ಕೆಲವೊಮ್ಮೆ ನನಗೆ ಅನಿಸುತ್ತಿತ್ತು.

ಯಾವಳಾದರೂ ಮಹಿಳೆ ಅಂಗಡಿಯ ಒಳಹೊಕ್ಕಾಗಲೆಲ್ಲ, ಯಜಮಾನ ತನ್ನ ಕೈಯನ್ನು ಜೇಬಿನಿಂದ ಹೊರತೆಗೆದು, ಮೆಲ್ಲನೆ ಮೀಸೆಯನ್ನು ಮುಟ್ಟುತ್ತಿದ್ದ. ಸಕ್ಕರೆಯಂತಹ ಮುಗುಳುನಗೆಯನ್ನು ಮೂಡಿಸುತ್ತಿದ್ದ. ಆತನ ಶೂನ್ಯಕಣ್ಣುಗಳ ಭಾವವನ್ನು ಬದಲಾಯಿಸದೆಯೇ, ಕೆನ್ನೆಗಳ ಮೇಲೆ ನೆರಿಗೆ ಹರಡಿಸುತಿತ್ತು ಆ ಮುಗುಳುನಗು. ಹಿರಿಯ ಸಹಾಯಕ ಚುರುಕಾಗಿ ನಿಲ್ಲುತ್ತಿದ್ದ. ಮೊಣಕೈಗಳು ಬದಿಗಳಿಗೆ ಒತ್ತಿಕೊಳ್ಳುತ್ತಿದ್ದುವು. ನಾಯಿ ಬಾಲ ಆಡಿಸುವಂತೆ, ಕೈಗಳಷ್ಟೇ ಅತ್ತಿತ್ತ ಆಡುತ್ತಿದ್ದುವು. ಸಾಶಾ, ಉಬ್ಬಿಕೊಂಡಿದ್ದ ಕಣ್ಣಬೊಂಬೆಗಳನ್ನು ಮರೆಮಾಡಲೆತ್ನಿಸುತ್ತಾ, ಪಿಳಿಪಿಳಿ ನೋಡುತ್ತಿದ್ದ. ನಾನು, ಕಳ್ಳತನದಿಂದ ಕೈಗಳನ್ನು ತೆರೆದುಕೊಳ್ಳುತ್ತಾ, ಮಾರಾಟದ ಸಮಾರಂಭವನ್ನು ನೋಡುತ್ತಾ, ಬಾಗಿಲಬಳಿ ನಿಲ್ಲುತ್ತಿದ್ದೆ.

ಪಾದರಕ್ಷೆಗಳನ್ನು ತೊಡಿಸಿ ನೋಡಲೆಂದು, ಮಹಿಳೆಯ ಎದುರು ಮಂಡಿಯೂರಿದಾಗಲೆಲ್ಲ, ಹಿರಿಯ ಸಹಾಯಕನ ಬೆರಳುಗಳು ಆಶ್ಚರ್ಯಕರವಾಗಿ ಹರಡಿಕೊಳ್ಳುತಿದ್ದುವು. ಆತನ ಕೈಗಳು ಕಂಪಿಸುತ್ತಿದ್ದುವು. ಸಾಧಾರಣವಾಗಿ ಕಾಲುಕೊಬ್ಬಿದ್ದು, ತಲೆಕೆಳಗಾಗಿ ಇರಿಸಿದ ಇಳಿಮುಖದ ಸೀಸೆಯಂತಿದ್ದರೂ ಕೂಡಾ, ಅದೆಲ್ಲಿ ಮುರಿದು ಹೋಗುವುದೋ ಎಂದು ಭಯಗೊಂಡವನಂತೆ, ಸೂಕ್ಷ್ಮವಾಗಿ ಆತ ಅದನ್ನು ಮುಟ್ಟುತ್ತಿದ್ದ.

ಒಮ್ಮೆ ಸ್ತ್ರೀಯರಲ್ಲೊಬ್ಬಳು, ಸಂಕೋಚಗೊಂಡು, ಹೆಬ್ಬೆಟ್ಟನ್ನು ಮುಂದಕ್ಕೆ ತಳ್ಳಿ ಅಂದಳು:

"ಛೆ! ಹ್ಯಾಗೆ ಕಚಗುಳಿ ಇಡ್ತೀಯಾ ನೀನು!"

"ಅದು ವಿನಯಪ್ರದರ್ಶನ ಅಮ್ಮಾವರೆ," ಎಂದು ಹಿರಿಯ ಸಹಾಯಕ ತಕ್ಷಣವೆ ಉತ್ತರ ವಿತ್ತ.

ಹೆಂಗಸರ ಸುತ್ತುಮುತ್ತಲೂ ಆತ ಎರಗುತ್ತಿದ್ದ ನೋಟ ತಮಾಷೆಯಾಗಿರುತ್ತಿತ್ತು. ನಗೆಯನ್ನು ತಡೆಹಿಡಿಯಲೆಂದು, ನಾನು ಬೇರೆ ಕಡೆಗೆ ಮುಖತಿರುಗಿಸಬೇಕಾಗುತ್ತಿತ್ತು. ಆದರೆ, ಪುನಃ ಅವರೆಡೆಗೆ ನೋಡುವ ಬಯಕೆಯನ್ನು ತಡೆಯಲಾಗುತ್ತಿರಲಿಲ್ಲ. ಅಷ್ಟೊಂದು ಮೋಜಿನವಾಗಿದ್ದ ಆತನ ಚೇಷ್ಟೆಗಳು. ಅಷ್ಟೊಂದು ವಿನಯದಿಂದ ಬೆರಳುಗಳನ್ನು ಹೊರಚಾಚುವುದು, ಅಷ್ಟೊಂದು ದಕ್ಷತೆಯಿಂದ ಇನ್ನೊಬ್ಬರ ಪಾದಗಳಿಗೆ ಪಾದರಕ್ಷೆಗಳನ್ನು ತೊಡಿಸುವುದು, ನನ್ನ ಜೀವಮಾನದಲ್ಲೇ ಸಾಧ್ಯವಿಲ್ಲ—ಎಂದು ನನಗೆ ಅನಿಸುತ್ತಿತ್ತು.

ಅಂಗಡಿಯ ಹಿಂಭಾಗದಲ್ಲಿದ್ದ ಪುಟ್ಟ ಕೊಠಡಿಗೆ ಯಜಮಾನ ಆಗಾಗ್ಗೆ ತೆರಳುತ್ತಿದ್ದ. ಗಿರಾಕಿಗಳ ಜತೆ ಹಿರಿಯ ಸಹಾಯಕನೊಬ್ಬನನ್ನೇ ಬಿಟ್ಟು, ಸಾಶಾನನ್ನು ಆ ಕೊಠಡಿಗೆ ಕರೆಯುತ್ತಿದ್ದ.

ಹಿರಿಯ ಸಹಾಯಕ ಒಮ್ಮೆ, ಗಾತ್ರ ದೇಹದ ಸುಂದರಿಯೊಬ್ಬಳ ಪಾದವನ್ನು ಮುಟ್ಟಿ, ಬೆರಳುಗಳನ್ನು ಜೋಡಿಸಿ ಅವನ್ನು ಚುಂಬಿಸಿದುದು ನನಗೆ ನೆನಪಿದೆ

"ಓ, ಎಂಥಾ ತುಂಟ ನೀನು!" ಎಂದು, ಕುಲುಕುಲು ನಗುತ್ತಾ ಆ ಹೆಂಗಸು ಅಂದಳು.

"ಆ-ಹಾ-ಹಾ!" ಎಂದ ಆತ, ತುಟಿಗಳನ್ನು ಚಪ್ಪರಿಸುತ್ತ.

ನಾನು ಗೊಳ್ಳನೆ ಗಟ್ಟಿಯಾಗಿ ನಕ್ಕೆ. ಬೀಳದಂತೆ ಬಾಗಿಲ ಹಿಡಿಯನ್ನು ಹಿಡಿದುಕೊಳ್ಳಬೇಕಾಯಿತು. ಬಾಗಿಲು ತೆರೆದುಕೊಂಡು, ನನ್ನ ತಲೆ ಗಾಜಿಗೆ ಬಡೆದು, ಗಾಜು ಬಿದ್ದು ಹೋಯಿತು. ಹಿರಿಯ ಸಹಾಯಕ ನನ್ನೆಡೆಗೆ ತಿರುಗಿ, ನೆಲವನ್ನು ಗಟ್ಟಿಯಾಗಿ ತುಳಿದ. ನನ್ನ ಯಜಮಾನ, ಭಾರವಾದ ಬಂಗಾರದ ತನ್ನ ಮುದ್ರೆಯುಂಗುರದಿಂದ ನನ್ನ ತಲೆಗೆ ಕುಟ್ಟಿದ. ಸಾಶಾ, ನನ್ನ ಕಿವಿಗಳನ್ನು ಹಿಂಡಲು ಯತ್ನಿಸಿದ.

ಆ ಸಂಜೆ ಮನೆಗೆ ಹೋಗುತ್ತಿದ್ದಂತೆ, ನನ್ನನ್ನು ಆತ ಕಟುವಾಗಿ ಎಚ್ಚರಿಸಿದ:

"ಈ ರೀತಿ ನೀನು ನಡಕೊಂಡರೆ, ನಿನ್ನನ್ನು ಹೊಡೆದೋಡಿಸ್ತಾರೆ—ನೋಡ್ಕೊ. ... ಅಷ್ಟು ತಮಾಷೆಯಾದ್ದು ಏನಿತ್ತೂಂತ?"

ಬಳಿಕ, ಅಂಗಡಿಯ ಸಹಾಯಕ ಹೆಚ್ಚು ಆಕರ್ಷಕನಾಗಿದ್ದಷ್ಟೂ, ವ್ಯಾಪಾರ ಹೆಚ್ಚುತ್ತದೆಂದು ಆತ ಹೇಳಿದ.

"ಹೊಸ ಪಾದರಕ್ಷೆಗಳ ಅಗತ್ಯವಿಲ್ಲದಿದ್ದರೂ ಕೂಡಾ, ಸುಂದರ ಪುರುಷನನ್ನು ಮತ್ತೊಮ್ಮೆ ನೋಡೋದಕ್ಕೋಸ್ಕರ, ಮತ್ತೂ ಒಂದು ಜತೆ ಕೊಳ್ತಾಳೆ. ಇಷ್ಟು ಅರ್ಥವಾಗೋದಿಲ್ವೆ ನಿನಗೆ ದಡ್ಡ!—ನೀನು ವ್ಯಾಪಾರ ಕಲಿತ್ಕೊಂಡ ಹಾಗೆಯೇ!"

ಅವನ ಮಾತುಗಳಿಂದ ನನಗೆ ನೋವಾಯಿತು. ಅಂಗಡಿಯಲ್ಲಿ ಯಾರೂ ಏನನ್ನೂ ನನಗೆ ಹೇಳಿಕೊಡಲು ಪ್ರಯತ್ನಪಟ್ಟಿರಲಿಲ್ಲ. ಸಾಶಾನಂತೂ ಆ ಯತ್ನ ಮಾಡಿದವನೇ ಅಲ್ಲ.

ನಮ್ಮ ಅಡುಗೆಯವಳು, ಕಾಹಿಲೆಯ ಜಗಳಗಂಟಿ ಹೆಂಗಸು. ಪ್ರತಿ ದಿನವೂ ಬೆಳಗ್ಗೆ ಆಕೆ ಸಾಶಾ ಏಳುತ್ತಿದ್ದುದಕ್ಕಿಂತ ಒಂದು ಗಂಟೆ ಮುಂಚಿತವಾಗಿ ನನ್ನನ್ನು ಎಬ್ಬಿಸುತ್ತಿದ್ದಳು. ನಾನು ನೀರು ಕಾಯಿಸುತಿದ್ದೆ, ಎಲ್ಲ ಒಲೆಗಳಿಗೂ ಬೇಕಾಗುವಷ್ಟು ಸೌದೆ ತರುತ್ತಿದ್ದೆ; ಮುಸು

...ವಿಸುತಿದ್ದರು. ಯಾವುದೋ ಸ್ಮಶಾನ ಯಾತ್ರೆಗೆಂದು ಹೊರಟು ತಡವಾಗಿ ಬಂದವರಂತೆ, ...ಗ ಶವದಾನಿಯನ್ನು ಸಮೀಪಿಸಿ ಹಿಂಬಾಲಿಸಲು ಮಸಣಭೂಮಿಗೆ ಧಾವಿಸುತ್ತಿದ್ದಂತೆ, ಅವರು ...ಂಡರು. ಬಲಿಷ್ಠ ಕುದುರೆಗಳು, ಅಡ್ಡವಾಗಿದ್ದ ಹಿಮಮಳೆಯನ್ನು ಇದಿರಿಸಿ, ತಮ್ಮ ಗಾಡಿಗಳನ್ನು ...ಳೆಎಳೆಯುತ್ತಾ ಹೋದುವು. ಅಂಗಡಿಯ ಹಿಂದಿದ್ದ ಇಗರ್ಜಿಯ ಗಂಟೆಗಳು, ಪ್ರತಿದಿನವೂ ...ಸರದ ಧ್ವನಿ ಹೊರಡಿಸಿದುವು. ಅದು, ಲೆಂಟ್‌ಹಬ್ಬದ ಅವಧಿ. ಒಂದೇ ಸಮನೆ ಬಾರಿಸುತ್ತಿದ್ದ ... ಗಂಟೆಗಳ ಸದ್ದು, ತಲೆಯ ಮೇಲೆ ದಿಂಬಿನಿಂದ ಹೊಡೆದಂತಿರುತ್ತಿತ್ತು. ನೋವಾಗುತ್ತಿರಲಿಲ್ಲ; ...ದರೂ ದಂಗುಬಡೆದಂತಾಗುತ್ತಿತ್ತು..

ಒಂದು ದಿನ, ಸಾಮಗ್ರಿಗಳ ಹೊಸಪೆಟ್ಟಿಗೆಯೊಂದನ್ನು ಬಿಚ್ಚುತ್ತ ನಾನು ಅಂಗಳದಲ್ಲಿದ್ದಾಗ, ...ಇಗರ್ಜಿಯ ಕಾವಲುಗಾರ ನನ್ನ ಬಳಿಗೆ ಬಂದ. ಆತ, ಒಂದು ಭುಜ ಕುಗ್ಗಿ ಜೋತು ಬಿದ್ದಿದ್ದ ...ಮುದುಕ. ಚಿಂದಿ ಬಟ್ಟೆಯ ಬೊಂಬೆಯ ಹಾಗೆ ಮೃದುವಾಗಿದ್ದ. ನಾಯಿಗಳು ಕಚ್ಚಿಹರಿದಿದ್ದಂತೆ, ...ದ್ರವಾಗಿದ್ದ.

"ನನಗೋಸ್ಕರ ಒಂದು ಜತೆ ರಬ್ಬರಿನ ಮೇಲುಪಾದರಕ್ಷೆ ಕದ್ದು ತರ್ತೀಯಾ, ಮಗೂ?" ...ಎಂದು ಆತ ಕೇಳಿದ.

ನಾನು ಸುಮ್ಮನಿದ್ದೆ. ಖಾಲಿಯಾಗಿದ್ದ ಹಲಗೆ ಪೆಟ್ಟಿಗೆಯ ಮೇಲೆ ಕುಳಿತು, ಆಕಳಿಸಿ, ...ತುಟಿಗಳ ಮೇಲಿನಿಂದ ಶಿಲುಬೆಯ ವಂದನೆಮಾಡಿ, ತನ್ನ ವಿನಂತಿಯನ್ನು ಆತ ಪುನಃ ಉಚ್ಚರಿಸಿದ:

"ತರ್ತೀಯಾ, ಹೇಳು."

"ಕದಿಯೋದು ತಪ್ಪು," ಎಂದು ಆತನಿಗೆ ನಾನು ತಿಳಿಸಿದೆ.

"ಕದಿಯೋದುಂಟು. ಬಾ ಮಗೂ, ಮುದುಕನಾದ ನನಗೋಸ್ಕರ...."

ನನ್ನ ಸುತ್ತಲಿನ ಜನರಿಗಿಂತ ಆತ ಭಿನ್ನನಾಗಿದ್ದ. ಹಿತಕರವಾಗಿತ್ತು ಆ ವ್ಯತ್ಯಾಸ. ನಾನು ಕದಿಯುವ ವಿಷಯದಲ್ಲಿ ಆತನಿಗೆ ಯಾವ ಸಂದೇಹವೂ ಇದ್ದಂತೆ ತೋರಲಿಲ್ಲ ... ಆತನ ಆ ಅಭಿ... ಪ್ರಾಯ ಎಷ್ಟೊಂದು ದೃಢವಾಗಿ ಕಂಡಿತೆಂದರೆ, ಒಂದು ಜತೆ ರಬ್ಬರಿನ ... ಮೇಲಪಾದರಕ್ಷೆಗಳನ್ನು ...ು ಮೂಲಕ ಆತನ ಕೈಗೆ ದಾಟಿಸಲು ನಾನು ಒಪ್ಪಿದೆ. ...ದೆ, ಆತನೆಂದ:

...ಂತ ಧ್ವನಿಯಲ್ಲಿ, ವಿಶೇಷ ಸಮಾಧಾನವನ್ನೂ ತೋರಿಸ..., ಆಗಲಿ. ಜನರಿಗೆ ... ಮೋಸಮಾಡು...

"ಒಳ್ಳೇದು. ಮೋಸಮಾಡೋದಿಲ್ಲ ತಾನೆ? ಆಗಲಿ ...ವವರ ಹಾಗೆ ನೀನು ಕಾಣಿಸೋದಿಲ್ಲ."

ಒಂದೋ ಎರಡೋ ನಿಮಿಷಗಳ ಕಾಲ, ತನ್ನ ... ಪಾದರಕ್ಷೆಯ ಹೆಜ್ಜೆ...ಳನ್ನು ಒದ್ದೆಯಾದ ಹೊಲಸಾದ ಹಿಮದ ಮೇಲೆ ತೀಡುತ್ತಾ, ಆತ ಕುಳಿತ್ತು ... ಬಳಿಕ, ಆವೆ ಮಣ್ಣಿನಿಂದ ಮಾಡಿದ್ದ ಹೊಗೆ ಕೊಳವೆಯನ್ನು ಹಚ್ಚಿದ. ಒಮ್ಮೆಲೆ ನನ್ನ ... ಭೀತಿಗೆ ಗುರಿಮಾಡಿದ.

"ನಾನೇ ನಿನಗೆ ಮೋಸಮಾಡ್ತಾ ಇದೀನಿ ...ಂದರೆ, ಏನು ...ೀಯಾ? ಆ ಪಾದರಕ್ಷೆಗಳನ್ನೇ ನಿನ್ನ ಯಜಮಾನನ ಹತ್ತಿರಕ್ಕೆ ...ಡು ಹೋಗಿ, ಅ... ತಗೊಂಡು ... ಎರಡು ... ರೂಬಲಿಗೆ ನೀನದನ್ನು ನನಗೆ ಮಾರಿದೀಯಾ ಅಂತ ಹೇಳಿದರೆ? ಹ್ಞ? ಅದರ ...ಬೆಲೆ ಎರಡು ...ರೂಬಲಿಗಿಂತಲೂ ಹೆಚ್ಚು. ನೀನದನ್ನು ಅರ್ಧ ರೂಬಲಿಗೆ ಮಾರಿದೆ. ನಿನ್ನ ಪುಡಿಖರ್ಚಿಗೋಸ್ಕ... — ಹ್ಞ ?"

ಬೆದರಿಕೆ ಹಾಕಿದಂತೆಯೇ ಆತ ಮಾಡಿಯೇ ... ನಿನ್ನ ಪುಡಿಬಟ್ಟನೆನ್ನುವಂ..., ಆತನನ್ನೆ ಮೂಕನಾಗಿ

ನೋಡಿದೆ. ಅವನಾದರೋ, ಶಾಂತವಾಗಿ, ಮೂಗಿನಿಂದ ಸ್ವರಹೊರಡಿಸುತ್ತ ಮಾತನಾಡುತ್ತಲಿ ಇದ್ದ. ಕಣ್ಣುಗಳು, ತನ್ನ ಪಾದರಕ್ಷೆಗಳ ಮೇಲೆ ನೆಟ್ಟಿದ್ದುವು. ತಲೆ, ನೀಲಿ ಹೊಗೆಯಿಂ ಮುಚ್ಚಿತ್ತು.

"ನನ್ನ ಹುಡುಗ ಹ್ಯಾಗಿದಾನೆ? ಅವನು ಎಷ್ಟರಮಟ್ಟಿಗೆ ಕಳ್ಳ ಅನ್ನೋದನ್ನು ಪರೀಕ್ಷಿ ನೋಡು ಅಂತ ನಿನ್ನ ಯಜಮಾನನೇ ನನಗೆ ಹೇಳಿದ್ದರೆ? ಆಗ ಏನಂತಿಯಾ ?"

"ನಾನು ಪಾದರಕ್ಷೆಗಳನ್ನು ನಿನಗೆ ಕೊಡೋದಿಲ್ಲ," ಎಂದು ಸಿಟ್ಟಿನಿಂದ ನಾನೆಂದೆ.

"ಒಮ್ಮೆ ಭಾಷೆಕೊಟ್ಮೇಲೆ ತಪ್ಪಿಸಿಕೊಳ್ಳೋದಕ್ಕಾಗೋದಿಲ್ಲ !"

ಆತ ನನ್ನ ಕೈಯನ್ನೆತ್ತಿಕೊಂಡು, ತನ್ನೆಡೆಗೆ ನನ್ನನ್ನು ಎಳೆದ. ನನ್ನ ಹಣೆಯನ್ನು ಶೀತಲ ವಾದ ಬೆರಳಿನಿಂದ ತಟ್ಟಿ, ಒರಟು ಸ್ವರದಲ್ಲಿ ಆತ ರಾಗವೆಳೆದ:

"'ಇಕೋ, ನಿನ್ನ ಪಾದರಕ್ಷೆಗಳನ್ನು ತಗೊಂಡು ಹೋಗು' ಅಂತ ನೀನು ಒಪ್ಪಿದ್ದಾದರೂ ಹ್ಯಾಗೆ? ಹ್ಞ ?"

"ಬೇಕೂಂತ ನೀನೇ ಕೇಳ್ದೆ. ಇಲ್ಲವಾ ?"

"ನಾನು ಏನೇನೋ ಕೇಳ್ಬಹುದು. ಇಗರ್ಜಿನ ಲೂಟಿ ಮಾಡು ಅಂತ ನಾನು ಕೇಳಿದರೆ- ನೀನು ಲೂಟಿ ಮಾಡ್ತೀಯೇನು? ಹೀಗೇ ಆದರೆ ಜನರನ್ನು ಹ್ಯಾಗೇಂತ ನಂಬೋದು, ಬೆಪ್ಪುತಕ್ಕಡಿ ?"

ನನ್ನನ್ನು ದೂರಕ್ಕೆ ತಳ್ಳಿ, ಆತ ಎದ್ದುನಿಂತ.

"ಕದ್ದ ಪಾದರಕ್ಷೆ ನನಗೆ ಬೇಕಾಗಿಲ್ಲ. ರಬ್ಬರಿನ ಮೇಲುಪಾದರಕ್ಷೆ ಹಾಕ್ಕೊಳ್ಳೋದಕ್ಕೆ ಅಂಥ ಸದ್ಗೃಹಸ್ಥನೂ ನಾನಲ್ಲ. ಸುಮ್ಮನೆ ತಮಾಷೆಮಾಡ್ತಿದ್ದೆ, ಅಷ್ಟೆ. ಆದರೆ ನಿನಗೆ ನನ್ನಲ್ಲಿ ವಿಶ್ವಾಸವಿರೋದರಿಂದ, ಪುನರುತ್ಥಾನ ಹಬ್ಬದ ಸಮಯದಲ್ಲಿ ಗಂಟೆಗೋಪುರ ಹತ್ತೋಕೆ ನಿನಗೆ ಬಿಡ್ತೇನೆ. ಅಲ್ಲಿಂದ ನೀನು ಗಂಟೆ ಬಾರಿಸ್ಬಹುದು, ಶಹರವನ್ನು ನೋಡ್ಬಹುದು."

"ಶಹರ ನನಗೆ ಗೊತ್ತಿದೆ."

"ಗಂಟೆಗೋಪುರದಿಂದ ಅದು ಎಷ್ಟೋ ಸುಂದರವಾಗಿ ಕಾಣುತ್ತೆ."

ಪಾದರಕ್ಷೆಯ ಹೆಬ್ಬೆರಳುಗಳನ್ನು ಹಿಮದೊಳಕ್ಕೆ ತಳ್ಳುತ್ತಾ, ಆತ ನಿಧಾನವಾಗಿ ನಡೆದು ಹೋದ ಕೊನೆಗೆ, ಇಗರ್ಜಿಯ ಮೂಲೆಯಲ್ಲಿ ತಿರುಗಿ ಆತ ಅದೃಶ್ಯನಾದ. ಹೋಗುತಿದ್ದ ಆತನನ್ನೆ ನೋಡುತ್ತಾ ನಿಂತ ನನ್ನನ್ನು, ಕಸಿವಿಸಿಯ ಅಸಮಾಧಾನ ಕಾಡಿತು. ಮುದುಕ ನಿಜ ವಾಗಿಯೂ ತಮಾಷೆ ಮಾಡುತ್ತಿದ್ದನೆ? ಅಥವಾ ನನ್ನನ್ನು ಪರೀಕ್ಷಿಸಲೆಂದು ಯಜಮಾನ ಆತನನ್ನು ಕಳುಹಿದ್ದನೆ?—ಎಂದು ನಾನು ಆಶ್ಚರ್ಯಪಟ್ಟೆ. ಅಂಗಡಿಯೊಳಕ್ಕೆ ವಾಪಸು ಹೋಗಲು ನನಗೆ ಭಯವಾಯಿತು.

ಸಾಶಾ ಅಂಗಳಕ್ಕೆ ಓಡಿ ಬಂದು ಕೂಗ್ತಾಡಿದ:

"ಇದೇನು ಮಾಡ್ತಿದೀಯಾ ಇಲ್ಲಿ, ಇಷ್ಟು ಹೊತ್ನಿಂದ ?"

ನಾನು ಒಮ್ಮೆಲೆ ಸಿಟ್ಟುಗೊಂಡು, ಕ್ಲೀಕಿಮುಟವನ್ನೆತ್ತಿ ಆತನೆಡೆಗೆ ತೋರಿಸುತ್ತಾ ಅದನ್ನು ಅಲುಗಿಸಿದೆ.

ಆತನೂ ಹಿರಿಯ ಸಹಾಯಕನೂ, ಯಜಮಾನನ ಸಾಮಗ್ರಿಗಳನ್ನು ಕದಿಯುತ್ತಿದ್ದರು.

ಒಂದು ಜತೆ ಬೂಟುಗಳನ್ನೋ ಶೂಗಳನ್ನೋ, ಬಾಗಿಲು ಮುಚ್ಚುವ ವೇಳೆಯವರೆಗೂ ಒಲೆಯ ಹೊಗೆಹಾದಿಯಲ್ಲಿ ಅವರು ಬಚ್ಚಿಡುತ್ತಿದ್ದರು. ಅಂಗಡಿ ಕೆಲಸ ಮುಗಿದ ಬಳಿಕ, ಕದ್ದ ಪ್ಯಾಂಟನ್ನು ಕೋಟಿನೊಳಗೆ ಬಚ್ಚಿಟ್ಟುಕೊಂಡು ಹೊರ ಬೀಳುತ್ತಿದ್ದರು. ಯಜಮಾನನ ಎಚ್ಚರಿಕೆಯ ಮಾತುಗಳನ್ನು ನೆನಪಿಟ್ಟಿದ್ದ ನನಗೆ, ಇದು ಇಷ್ಟವಾಗಲಿಲ್ಲ; ಭಯವೆನಿಸಿತು.

"ನೀನು ಕದೀತೀಯಾ ?" ಎಂದು ಸಾಶಾನನ್ನು ಕೇಳಿದೆ.

ವ್ಯಗ್ರಧ್ವನಿಯಲ್ಲಿ ಆತ ಉತ್ತರವಿತ್ತ:

"ನಾನಲ್ಲ. ಕದಿಯೋದು ಹಿರಿಯ ಸಹಾಯಕ. ನಾನು ಅವನಿಗೆ ಸಹಾಯ ಮಾಡ್ತೀನಿ, ಅಷ್ಟೆ. 'ನಾನು ಹೇಳಿದ್ದನ್ನು ಮಾಡು!' ಅಂತ ಆತ ಹೇಳ್ತಾನೆ. ಮಾಡದೇ ಇದ್ದರೆ, ನನ್ನನ್ನು ಯಾವುದಾದರೂ ಪೇಚಿನಲ್ಲಿ ಸಿಕ್ಕಿಸಿಹಾಕ್ತಾನೆ. ಯಜಮಾನನ ವಿಷಯ....ಸ್ವತಃ ಆತನೇ ಹಿಂದೆ ಯಾರದೋ ಅಂಗಡಿಯಲ್ಲಿ ಸಹಾಯಕನಾಗಿದ್ದ. ಎಲ್ಲಾ ಚತುರೋಪಾಯಗಳೂ ಅವನಿಗೆ ಗೊತ್ತಿವೆ. ಆದರೆ, ನೀನು ಬಾಯಿ ಮುಚ್ಕೊಂಡಿರು !"

ಮಾತನಾಡುತ್ತಿದ್ದಂತೆ ಆತ, ಕನ್ನಡಿಯಲ್ಲಿ ಮುಖನೋಡಿಕೊಂಡು 'ಟೈ' ಕಟ್ಟಿಕೊಳ್ಳುತ್ತಿದ್ದ ಹಿರಿಯ ಸಹಾಯಕ ಮಾಡುತ್ತಿದ್ದ ವಿಶಿಷ್ಟ ರೀತಿಯಲ್ಲೇ ಈತನೂ ತನ್ನ ಬೆರಳುಗಳನ್ನು ಹೊರ ಚಾಚಿದ್ದ. ವಯಸ್ಸಿನಲ್ಲಿ ತಾನು ನನಗಿಂತ ಹಿರಿಯವನೆಂಬುದನ್ನು, ನನ್ನ ಮೇಲೆ ಅಧಿಕಾರ ಚಲಾಯಿಸುವ ಹಕ್ಕು ತನಗಿದೆ ಎಂಬುದನ್ನು, ಸಾಶಾ ಯಾವಾಗಲೂ ತನ್ನ ವರ್ತನೆಯ ಮೂಲಕ ತಿಳಿಯಹೇಳುತ್ತಲೇ ಇದ್ದ. ನನಗೆ ಆಜ್ಞೆಗಳನ್ನೀಯುವಾಗ, ಪಪ್ಪ ಗಂಟಲಿನಲ್ಲಿ ಕೂಗಾಡುತ್ತಿದ್ದ; ಯಜಮಾನಿಕೆಯ ಠೀವಿಯಿಂದ ಹಾವಭಾವಗಳನ್ನು ತೋರುತ್ತಿದ್ದ; ಆತನಿಗಿಂತ ನಾನು ಎತ್ತರವಾಗಿದ್ದೆ, ಹೆಚ್ಚು ಬಲಿಷ್ಠನಾಗಿದ್ದೆ. ಆದರೆ, ತೀರ ತೆಳ್ಳಗಿದ್ದೆ; ಅಡ್ಡಾದಿಡ್ಡಿಯಾಗಿರುತಿತ್ತು ಚಲನೆ. ಆತನಾದರೋ ಮೈತುಂಬಿಕೊಂಡಿದ್ದು, ಗಟ್ಟಿಮುಟ್ಟಾಗಿದ್ದು, ಚುರುಕಾಗಿ ಓಡಾಡುತ್ತಿದ್ದ. ಫ್ರಾಕ್‌ಕೋಟು ತೊಟ್ಟಾಗ, ಸ್ವಲ್ಪ ತಮಾಷೆ ಎನಿಸಿದರೂ, 'ಬಲು ಭರ್ಜರಿ ಆಸಾಮಿ' ಯಾಗಿ ಕಾಣುತಿದ್ದ. ಅಡುಗೆಯವಳನ್ನು ದ್ವೇಷಿಸುತ್ತಿದ್ದ ಆತ-ಆಕೆಯಂತೂ ವಿಚಿತ್ರ ಹೆಂಗಸೇ ಸರಿ. ಆಕೆ ಒಳ್ಳೆಯವಳೋ ಕೆಟ್ಟವಳೋ ನಿರ್ಧರಿಸುವುದು ಸಾಧ್ಯವಿರಲಿಲ್ಲ.

ಉರಿಯುತ್ತಿದ್ದ ಕಪ್ಪು ಕಣ್ಣುಗಳನ್ನು ಅಗಲವಾಗಿ ತೆರೆದು ಆಕೆ ಅನ್ನುತ್ತಿದ್ದಳು:

"ನನಗೆ ಅತ್ಯಂತ ಮೆಚ್ಚುಗೆಯಾಗೋದು ಹೊಡೆದಾಟ. ಯಾರು ಜಗಳಾಡಿದರೂ ಸರಿಯೆ. ಕೋಳಿಗಳೋ, ನಾಯಿಗಳೋ ಅಥವಾ ರೈತರೋ—ಯಾರು ಜಗಳಾಡಿದರೂ ನನಗೆ ಒಂದೇ !"

ಅಂಗಳದಲ್ಲಿ ಕೋಳಿಗಳೋ ಅಥವಾ ಪಾರಿವಾಳಗಳೋ ಜಗಳಾಡತೊಡಗಿದರೆ, ಮಾಡುತ್ತಿದ್ದ ಕೆಲಸವನ್ನು ಅಲ್ಲಿಯೇ ಬಿಟ್ಟು, ಕಲಹ ಮುಗಿಯುವವರೆಗೂ ನೋಡುತ್ತ ಕಿಟಕಿಯ ಬಳಿ ನಿಲ್ಲುತ್ತಿದ್ದಳು. ಯಾರೇ ಕರೆಯಲಿ, ಏನೇ ಮಾಡಲಿ, ಒಂದೂ ಆಕೆಯ ಕಿವಿಗೆ ನಾಟುತ್ತಿರಲಿಲ್ಲ. ಸಂಜೆಯ ಹೊತ್ತು, ನನಗೂ ಸಾಶಾನಿಗೂ ಆಕೆ ಹೇಳುತ್ತಿದ್ದಳು:

"ಯಾಕಿಲ್ಲಿ ಕೂತಿದೀರಾ ಪುಟಾಣಿಗಳೇ ? ಹೊರಗೆ ಹೋಗಿ ಯಾಕೆ ಚೆನ್ನಾಗಿ ಹೊಡೆದಾಡೋದಿಲ್ಲ ?"

ಸಾಶಾ ರೇಗುತ್ತಿದ್ದ.

"ನಾನು ಪುಟಾಣಿಯಲ್ಲ, ಮೂರ್ಖ ಮುದುಕಿ ! ನಾನು ಕಿರಿಯ ಸಹಾಯಕ!"

"ಆಹಾ! ಆದರೆ ನಂಬೋದು ಕಷ್ಟವಪ್ಪ. ನನ್ನ ಮಟ್ಟಿಗೆ, ನಿನ್ನ ಮದುವೆಯ ದಿವಸ ವರೆಗೂ ನೀನು ಪುಟಾಣಿಯಾಗಿಯೇ ಇರ್‍ತೀಯಾ."

"ಮೂರ್ಖ ತಲೆ ಇರೋ ಮೂರ್ಖ ಮುದುಕಿ!"

"ಪಿಶಾಚಿ ಚುರುಕಾಗಿದ್ದಾನೆ. ಆದರೆ, ದೇವರು ಅವನನ್ನು ಇಷ್ಟಪಡೋದಿಲ್ಲ."

ಸಾಶಾ, ಆಕೆಯ ಮಾತಿನ ವೈಖರಿಯಿಂದಲೆ ವಿಶೇಷವಾಗಿ ಕೆರಳುತಿದ್ದ. ತನ್ನ ವಿಷಯದ ಆತ ಕಟೂಕ್ತಿಯನ್ನಾಡಿದೊಡನೆಯೇ, ಧ್ವಂಸಗೊಳಿಸುವ ನೋಟದಿಂದ ಆತನನ್ನೆ ನೋಡು ಆಕೆಯೆನ್ನುತ್ತಿದ್ದಳು:

"ಪೂ ಪುಟ್ಟ ಜಿರಳೆ—ದೇವರು ನಿನ್ನನ್ನು ಸೃಷ್ಟಿಸಿ ದೊಡ್ಡ ತಪ್ಪು ಮಾಡ್ದ."

ಆಕೆಯ ದಿಂಬಿನೊಳಗೆ ಗುಂಡುಸೂಜಿಗಳನ್ನಿಡುವಂತೆ, ನಿದ್ರಿಸಿದ್ದಾಗ ಆಕೆಯ ಮುಖ ಮೇಣವನ್ನೋ ಕರಿಯನ್ನೋ ಹಚ್ಚುವಂತೆ, ಅಥವಾ ಚುರುಕು ಮುಟ್ಟಿಸುವ ಬೇರೆಯಾವುದಾದ ತುಂಟತನ ಮಾಡುವಂತೆ, ನನ್ನನ್ನು ಪುಸಲಾಯಿಸಿ ಒಪ್ಪಿಸಲು ಸಾಶಾ ಎಷ್ಟೋ ಸಾರೆ ಯತ್ನಿಸಿ ಆದರೆ, ಆ ಅಡುಗೆಯವಳಿಗೆ ನಾನು ಹೆದರುತ್ತಿದ್ದೆ. ಸಣ್ಣ ಸಪ್ಪಳವಾದರೂ ಆಕೆಗೆ ಎಚ್ಚರವಾ ತ್ತಿತ್ತು. ನಾನು ಸಿಕ್ಕಿ ಬೀಳುವುದು ಖಂಡಿತವೆಂದು ನನಗೆ ಗೊತ್ತಿತ್ತು. ಎಷ್ಟೋ ವೇಳೆ ಎದ್ದು, ದೀಪಹಚ್ಚಿ, ಯಾವುದಾದರೂ ಮೂಲೆಯನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಾ ಕುಳಿ ಬಿಡುತ್ತಿದ್ದಳು. ಕೆಲವೇಳೆ, ಒಲೆಯ ಹಿಂಬದಿಯಲ್ಲಿದ್ದ ನನ್ನ ಹಾಸುಗೆಯ ಬಳಿಗೆ ಬಂದು, ನನ್ನ ಅಲುಗಿಸಿ ಎಬ್ಬಿಸುತ್ತ ತನ್ನ ದಪ್ಪಗಂಟಲಿನಲ್ಲಿ ಪಿಸುಗುಟ್ಟುತ್ತಿದ್ದಳು:

"ಯಾಕೋ ನಿದ್ದೆ ಬರುತ್ತಿಲ್ಲ, ಅಲ್ಯೋಶಾ. ಒಂದು ಥರಾ ಹೆದರಿಕೆ. ಏನಾದರೂ ಹೇಳ

ಅರ್ಧ ಎಚ್ಚರಗೊಂಡ ನಾನು, ಯಾವುದಾದರೂ ಕಥೆಯನ್ನು ಹೇಳುತ್ತಿದ್ದೆ. ಮೌನವಾ ಹಿಂದಕ್ಕೂ ಮುಂದಕ್ಕೂ ಓಲಾಡುತ್ತ, ಆಕೆ ಕುಳಿತಿರುತ್ತಿದ್ದಳು. ಮೇಣದ-ಇಂಧನದ ವಾಸ ಆಕೆಯ ಬಿಸಿ ದೇಹದಿಂದ ಹೊರಡುತ್ತಿದ್ದಂತೆ ಭಾಸವಾಗುತ್ತಿತ್ತು. ಬೇಗನೆ ಆಕೆ ಸಾಯುವಳೆ ಪ್ರಾಯಶಃ ಆಕ್ಷಣವೆ ಆಕೆ ಪ್ರಾಣಬಿಡುವಳೆಂದು, ಅನಿಸುತ್ತಿತ್ತು. ಭೀತಿಗೊಂಡ ನಾನು ಸ ವೇರಿಸುತ್ತಿದ್ದೆ. ಆದರೆ, ಯಾವಾಗಲೂ ಆಕೆ ನನ್ನನ್ನು ತಡೆಯುತ್ತಿದ್ದಳು.

"ಶ್! ಆ ಹಾದರಕ್ಕೆ ಹುಟ್ಟಿದೋರನ್ನೆಲ್ಲಾ ಎಬ್ಬಿಸಿಬಿಡ್ತೀಯಾ. ನೀನು ನನ್ನ ಪ್ರಣ ಅಂತ ತಿಳಕೊಂಡ್ಬಿಡ್ತಾರೆ, ನೋಡ್ಕೊ."

ಮೈಯೆಲ್ಲ ಮುದುಡಿಕೊಂಡು, ಕೈಗಳನ್ನು ಮೊಣಕಾಲುಗಳ ನಡುವೆ ತುರುಕಿಸಿ, ಯಂತಹ ಕಾಲುಗಳನ್ನು ಬಲವಾಗಿ ಒಟ್ಟಿಗೆ ಒತ್ತಿಕೊಂಡು,-ಯಾವಾಗಲೂ ಒಂದೇ ರೀತಿ ಆಕೆ ಕುಳಿತುಕೊಳ್ಳುತ್ತಿದ್ದಳು. ಆಕೆ ತೊಟ್ಟಿದ್ದುದು ದಪ್ಪಗಿನ ಕೈಮಗ್ಗದ ಒಳಉಡುಗೆಯ ದ್ದರೂ ಕೂಡಾ, ಸಮತಟ್ಟಾದ ಎದೆಯಿದ್ದ ಆಕೆಯ ಶರೀರದ ಮೂಳೆಗಳು, ಮುದುರಿದ ಪಿ ಯಿಯ ಸುತ್ತುಪಟ್ಟಿಗಳಂತೆ ಎದ್ದು ಕಾಣಿಸುತ್ತಿದ್ದುವು. ಬಹಳ ಹೊತ್ತು ಮಾತಿಲ್ಲದೆ ಕು ಬಳಿಕ, ಒಮ್ಮೆಲೆ ಆಕೆ ಪಿಸುಗುಟ್ಟುತ್ತಿದ್ದಳು:

"ಒಮ್ಮೆ ನಾನು ಸತ್ತು ಈಯೆಲ್ಲ ಸಂಕಟಗಳಿಂದ ಮುಕ್ತಳಾಗಿದ್ದರೆ!"

ಅಥವಾ, ಬೇರೆ ಯಾರ ಕಡೆಗಾದರೂ ತಿರುಗಿ ಕೇಳುತ್ತಿದ್ದಳು:

"ಸರಿ, ನನ್ನ ಆಯಸ್ಸು ಮುಗಿಯಿತು. ಇನ್ನೇನು?"

ನಾನು ಕಥೆ ಹೇಳುತ್ತಿದ್ದಾಗ, ನಡುವೆ ಇದ್ದಕ್ಕಿದ್ದಂತೆ, "ಸಾಕು, ನಿದ್ದೆಮಾಡು!" ಎಂದು ಒರಟಾಗಿ ಹೇಳಲು ಆಕೆ ಹಿಂದುಮುಂದು ನೋಡುತ್ತಿರಲಿಲ್ಲ. ಎದ್ದು, ಅಡುಗೆಮನೆಯ ಕತ್ತಲಿನೊಡನೆ ಕರಗಿ ಲೀನಳಾಗುತ್ತಿದ್ದಳು.

ಆಕೆಯ ಬೆನ್ನಹಿಂದೆ, "ಮುದುಕಿ ಮಾಯಾವಿನಿ" ಎಂದು ಸಾಶಾ ಅವಳನ್ನು ಕರೆಯುತ್ತಿದ್ದ. ನೇರವಾಗಿ ಆಕೆಯ ಎದುರೇ ಹಾಗೆ ಕರೆಯಬೇಕೆಂದು ಒಮ್ಮೆ ನಾನು ಸೂಚಿಸಿದೆ.

"ನಾನೇನು, ಹೆದರ್ತೀನಿ ಅಂತ ತಿಳಕೊಂಡಿದೀಯಾ ?" ಎಂದು ಆತ, ಸಿಟಿನ ಉತ್ತರವಿತ್ತ. ಆದರೆ ತಕ್ಷಣವೆ, ಹುಬ್ಬು ಗಂಟಿಕ್ಕಿ ಮಾತುಸೇರಿಸಿದ: "ಇಲ್ಲ, ಅವಳೆದುರು ಹೇಳೋದಿಲ್ಲ. ಆಕೆ ನಿಜವಾಗಿಯೂ ಮಾಯಾವಿನಿಯಾಗಿದ್ದರೂ ಇರಬಹುದು."

ಯಾವಾಗಲೂ ಎಲ್ಲರನ್ನೂ ತುಚ್ಛೀಕಾರದಿಂದ ನೋಡುತ್ತ ಮುಂಗೋಪಿಯಾಗಿದ್ದ ಆಕೆ, ಇತರರಿಗಿಂತ ಹೆಚ್ಚಿನ ದಯೆಯನ್ನೇನೂ ನನ್ನ ವಿಷಯದಲ್ಲಿ ತೋರಿಸಲಿಲ್ಲ. ಬೆಳಗ್ಗೆ ಆರು ಘಂಟೆಗೆ, ಪಾದದಿಂದ ನನ್ನನ್ನು ತುಳಿದೆಳೆದು ಕೂಗಾಡುತ್ತಿದ್ದಳು:

"ಗೊರಕೆ ಹೊಡೆದದ್ದು ಸಾಕು! ಸೌದೆ ತಾ! ನೀರು ಕಾಯಿಸು! ಆಲೂಗಡ್ಡೆಯ ಸಿಪ್ಪೆ ಸುಲಿ!"

ಈ ಕೂಗಾಟದಿಂದ ಸಾಶಾನಿಗೂ ಎಚ್ಚರಿಕೆಯಾಗುತ್ತಿತ್ತು.

"ಯಾಕೆ ಬೊಬ್ಬಿಡ್ತಿದೀಯಾ? ನೀನು ನನಗೆ ನಿದ್ದೆ ಮಾಡೋಕೆ ಬಿಡ್ತಿಲ್ಲಾಂತ ಯಜಮಾನನಿಗೆ ಹೇಳ್ತೀನಿ," ಎಂದು ಆತ ಗೊಣಗುತ್ತಿದ್ದ.

ಮೂಳೆಗಳ ಚೀಲವನ್ನು ಅಡುಗೆಮನೆಯಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಲಗುಬಗೆಯಿಂದ ಒಯ್ಯುತ್ತಾ ಆಕೆ, ನಿದ್ದೆಗೆಟ್ಟು ಉರಿಯುತ್ತಿದ್ದ ತನ್ನ ಕಣ್ಣುಗಳ ನೋಟವನ್ನು ಆತನೆಡೆಗೆ ಝಳಪಿಸುತಿದ್ದಳು.

"ಫೂ, ದೇವರು ಏನೂಂತ ನಿನ್ನನ್ನು ಸೃಷ್ಟಿಮಾಡಿದ್ನೋ? ನೀನೆಲ್ಲಾದರೂ ನನ್ನ ಮಲಮಗನಾಗಿದ್ದಿದ್ದರೆ ಹ್ಯಾಗೆ ತೋರಿಸ್ತಿದ್ದೆ ನಿನಗೆ!"

"ಹಾಳಾಗಿ ಹೋಗು!" ಎಂದು ಸಾಶಾ ಶಪಿಸುತ್ತಿದ್ದ.

ಅನಂತರ, ಅಂಗಡಿಗೆ ಹೋಗುತ್ತ ಹಾದಿಯಲ್ಲಿ ನನ್ನೊಡನೆ ಆತನೆನ್ನುತ್ತಿದ್ದ:

"ಆಕೇನ ಕೆಲಸದಿಂದ ವಜಾ ಮಾಡೋ ಹಾಗೆ ಮಾಡ್ತೀನಿ. ಆಕೆ ನೋಡದೇ ಇದ್ದಾಗ, ಆಹಾರಕ್ಕೆ ಉಪ್ಪು ಸೇರಿಸ್ತೀನಿ. ಪ್ರತಿಯೊಂದಕ್ಕೂ ಉಪ್ಪು ಜಾಸ್ತಿಯಾಗಿದ್ದರೆ ಆಕೇನ ಹೊರಕ್ಕೆ ಅಟ್ಟಿಯೇ ಅಟ್ತಾರೆ. ಅಥವಾ, ಸೀಮೆಎಣ್ಣೆ ಸುರಿದರೂ ಸರಿಯೆ. ನೀನು ಯಾಕೆ ಮಾಡಬಾರದು ಅದನ್ನು?"

"ನೀನೇ ಯಾಕೆ ಮಾಡಬಾರದು?"

"ಹೇಡಿ!" ಎಂದು ಆತ ಗುರುಗುಟ್ಟಿದ.

ಅಡುಗೆಯವಳು ನಮ್ಮ ಕಣ್ಣೆದುರಲ್ಲೇ ಸತ್ತಳು. ನೀರಿನ ಪಾತ್ರೆಯನ್ನು ಎತ್ತಲೆಂದು ಬಾಗಿದ್ದಾಗಲೊಮ್ಮೆ, ಎದೆಗೆ ಯಾರೋ ಗುದ್ದಿ ತಳ್ಳಿದರೇನೋ ಎನ್ನುವಂತೆ, ಇದ್ದಕ್ಕಿದ್ದಂತೆ ಕುಸಿದುಬಿದ್ದಳು. ಶರೀರ, ಒಂದು ಬದಿಗೆ ಬಾಗಿ ಮುದುಡಿತ್ತು. ತೋಳುಗಳು ಚಾಚಿಕೊಂಡಿದ್ದುವು. ಬಾಯಿಯ ಒಂದು ಮೂಲೆಯಿಂದ ರಕ್ತ ತೊಟ್ಟಿಕ್ಕುತ್ತಿತ್ತು.

ಆಕೆ ಸತ್ತಳೆಂಬುದು ಆಕ್ಷಣವೆ ನಮ್ಮಿಬ್ಬರಿಗೂ ತಿಳಿಯಿತು. ಆದರೆ, ಹೆದರಿಕೆಯಿಂದ

ನಾವು, ಒಂದು ಮಾತನ್ನೂ ಆಡಲಾರದೆ, ಆಕೆಯ ಕಡೆಗೆ ನೋಡುತ್ತ ನಿಂತೆವು. ಕೊನೆಯ
ಸಾಶಾ, ಅಡುಗೆಮನೆಯಿಂದ ಹೊರಕ್ಕೋಡಿದ. ನಾನು, ಏನುಮಾಡಬೇಕೆಂದು ತಿಳಿಯ
ಬೀದಿಯ ದೀಪದ ಕಡೆಗೆ ನೋಡುತ್ತ ಕಿಟಕಿಯ ಗಾಜಿಗೆ ಒತ್ತಿಕೊಂಡು ನಿಂತೆ. ಯಜಮಾನ
ಒಳಕ್ಕೆ ಬಂದು, ಕಾತರನಾಗಿ ಆಕೆಯ ಬಳಿ ಬಾಗಿದ. ಆಕೆಯ ಮುಖವನ್ನು ಮುಟ್ಟಿ ಆತನೆಂದ

"ಸತ್ತೇಹೋಗಿದಾಳೆ ಹುಂ, ಏನಂತೀರಾ!"

ಪ್ರತಿಮೆಗಳನ್ನಿರಿಸಿದ್ದ ಮೂಲೆಯಲ್ಲಿ, ಪವಾಡಪುರುಷ ನಿಕೋಲಾನ ಪುಟ್ಟ ಪ್ರತಿಮೆ ಇತ
ಯಜಮಾನ ಅದರ ಕಡೆಗೆ ತಿರುಗಿ, ಶಿಲುಬೆಯ ವಂದನೆ ಮಾಡತೊಡಗಿದ. ಪ್ರಾರ್ಥನೆ ಮು
ಬಳಿಕ ಬಾಗಿಲ ಕಡೆಗೆ ನೋಡಿ, ಆತ ಆಜ್ಞಾಪಿಸಿದ:

"ಕಾಶಿರಿನ್ ಓಡಿಹೋಗಿ ಪೋಲೀಸರಿಗೆ ತಿಳಿಸು!"

ಒಬ್ಬ ಪೋಲೀಸರವನು ಬಂದು, ಅತ್ತಿತ್ತ ನಡೆದು, ಒಂದು ನಾಣ್ಯವನ್ನು ಜೇಬಿಗೆ ಸೇರಿಸಿ
ಹೊರಟುಹೋದ. ಬೇಗನೆ, ಆತ ಒಬ್ಬ ಗಾಡಿ ಹೊಡೆಯುವನನ್ನು ಕರೆದುಕೊಂಡು ಹಿಂತಿರುಗಿದ
ಒಬ್ಬನು ಅಡುಗೆಯವಳ ತಲೆಯನ್ನೂ ಇನ್ನೊಬ್ಬನು ಪಾದಗಳನ್ನೂ ಹಿಡಿದು, ಎತ್ತಿ, ಆಕೆ
ಯನ್ನು ಹೊರಕ್ಕೊಯ್ದರು. ಯಜಮಾನನ ಹೆಂಡತಿ, ಬಾಗಿಲಿನೆಡೆಯಿಂದ ಇಣಿಕಿ ಹೊ
ನೋಡಿದಳು.

"ನೆಲವನ್ನು ಉಜ್ಜಿ ತೊಳೆ!" ಎಂದು ಆಕೆ ನನಗೆ ಅಪ್ಪಣೆ ಇತ್ತಳು.

"ಸಂಜೆಯ ಹೊತ್ತು ಆಕೆ ಸತ್ತದ್ದು ಒಳ್ಳೆಯದಾಯ್ತು," ಎಂದು ಯಜಮಾನ, ತನ್ನ ಅಭಿ
ಮತ ವ್ಯಕ್ತಪಡಿಸಿದ.

ಅದು ಹೇಗೆ ಒಳ್ಳೆಯದಾಯಿತೆಂಬುದು ನನಗೆ ಅರ್ಥವಾಗಲಿಲ್ಲ.

ಮಲಗಿದ ಬಳಿಕ, ಎಂದಿಲ್ಲದ ಪುಕ್ಕಲುಧ್ವನಿಯಲ್ಲಿ ಸಾಶಾ ಹೇಳಿದ:

"ದೀಪ ಆರಿಸ್ಬೇಡ."

"ಹೆದರಿಕೆಯಾಗುತ್ತೇನು?"

ಕಂಬಳಿಯಿಂದ ತಲೆಯನ್ನೂ ಮುಚ್ಚಿಕೊಂಡು ಮೌನವಾಗಿ ಆತ ಬಹಳ ಹೊತ್ತು ಮಲ
ಗಿದ. ಯಾವುದಕ್ಕೋ ಕಿವಿಗೊಡುತ್ತಿದ್ದಂತೆ, ಯಾವುದನ್ನೋ ಇದಿರುನೋಡುತ್ತಿದ್ದಂತೆ
ಇರುಳೂ ಮೌನವಾಗಿತ್ತು. ಮರುಕ್ಷಣದಲ್ಲಿ ಘಂಟೆಗಳ ಢಣಢಣ ಸದ್ದಾಗುವುದೆಂದು, ಶಹರದ
ಜನರು ಅತ್ತಿತ್ತ ಧಾವಿಸತೊಡಗಿ ಭಯವಿಹ್ವಲರಾಗಿ ಕೂಗಾಡುವರೆಂದು, ನನಗೆ ಅನಿಸಿತು.

"ಒಲೆಯಟ್ಟದ ಮೇಲೆ ಇಬ್ಬರೂ ಜತೆಯಾಗಿ ಮಲಗೋಣ," ಎಂದು ಸಾಶಾ, ಕಂಬಳಿ
ಯಿಂದ ಮೂಗನ್ನು ಹೊರಹಾಕಿ, ಮೃದುವಾಗಿ ಸೂಚಿಸಿದ.

"ಒಲೆಯಟ್ಟದಲ್ಲಿ ಶಾಖ ಜಾಸ್ತಿ."

ಪುನಃ ಆತ ಮೌನವಾದ.

ಕೊನೆಯಲ್ಲಿ ಆತನೆಂದ:

"ಇದ್ದಕ್ಕಿದ್ದ ಹಾಗೆ ಆಕೆ ಹೊರಟುಹೋದ್ಲು, ಅಲ್ಲವಾ? ನಾನೋ, ಆಕೆ ಮಾಯಾವಿ
ಅಂತ ಭಾವಿಸಿದ್ದೆ....ನಿದ್ದೆ ಬರೋದಿಲ್ಲವಪ್ಪ ನನಗೆ."

"ನನಗೂ ಅಷ್ಟೆ."

ಸತ್ತವರು ಗೋರಿಗಳಿಂದೆದ್ದು, ತಮ್ಮ ಮನೆಗಳನ್ನೂ ಸಂಬಂಧಿಕರನ್ನೂ ಹುಡುಕುತ್ತ, ನಡುರಾತ್ರಿಯವರೆಗೂ ಶಹರದಲ್ಲೆಲ್ಲಾ ಅಲೆಯುವ ವಿಷಯ ಆತ ಮಾತನಾಡತೊಡಗಿದ.

"ಸತ್ತವರಿಗೆ ಶಹರಗಳಷ್ಟೇ ನೆನಪಿರುತ್ತವೆ. ಬೀದಿಗಳಾಗಲೀ ಮನೆಗಳಾಗಲೀ ನೆನಪಿರುವುದಿಲ್ಲ," ಎಂದು ಆತ ಪಿಸುಗುಟ್ಟಿದ.

ನೀರವತೆ ಮತ್ತಷ್ಟು ಗಾಢವಾಯಿತು. ಕತ್ತಲು ಹೆಚ್ಚು ದಟ್ಟವಾದಂತೆ ಕಂಡಿತು. ಸಾಶಾ ತಲೆ ಎತ್ತಿ ಕೇಳಿದ.

"ನನ್ನ ಪೆಟ್ಟಿಗೇಲಿ ಏನಿದೇಂತ ನೋಡೋಕೆ ಇಷ್ಟಪಡ್ತೀಯೇನೊ?"

ಆ ಪೆಟ್ಟಿಗೆಯಲ್ಲಿ ಆತ ಏನನ್ನು ಬಚ್ಚಿಟ್ಟಿದ್ದನೆಂಬುದು, ಬಹಳ ಕಾಲದಿಂದ ನನಗೆ ಆಶ್ಚರ್ಯಕರ ಒಗಟಾಗಿತ್ತು. ಅದಕ್ಕೆ ಯಾವಾಗಲೂ ಆತ ಬೀಗಹಾಕಿರುತ್ತಿದ್ದ. ಅತಿಶಯವೆನಿಸುವ ಮುನ್ನೆಚ್ಚರಿಕೆ ವಹಿಸುತ್ತಾ ಆತ ಅದನ್ನು ತೆರೆಯುತ್ತಿದ್ದ. ನಾನು ಎಂದಾದರೂ ಒಳಗೆ ಇಣಿಕಿ ನೋಡಲು ಯತ್ನಿಸಿದೆನೆಂದರೆ, "ಅಲ್ಲೇ ನಿಲ್ಲು! ಏನು ನೋಡ್ತಿದೀಯಾ?" ಎಂದು ಆತ ಕರ್ಕಶವಾಗಿ ಹೇಳುತ್ತಿದ್ದ.

ನೋಡಲು ಇಷ್ಟಪಡುವೆನೆಂದು ಈಗ ನಾನು ಹೇಳಿದುದರಿಂದ, ಆತ ಹಾಸಿಗೆಯ ಮೇಲೆ ಎದ್ದು ಕುಳಿತ. ನಿತ್ಯದ ಅಧಿಕಾರವಾಣಿಯಲ್ಲಿ, ಪೆಟ್ಟಿಗೆಯನ್ನು ತಂದು ತನ್ನ ಕಾಲ ಬುಡದಲ್ಲಿರಿಸುವಂತೆ ಆಜ್ಞಾಪಿಸಿದ. ಆತ ಧರಿಸಿದ್ದ ನಾಮಕರಣದ ಕ್ರೂಜೆಯ ಸರದಲ್ಲೇ ಇತ್ತು ಬೀಗದಕ್ಕೆ. ಅಡುಗೆಮನೆಯ ಕತ್ತಲಿನಕಡೆಗೆ ಮೊದಲು ದೃಷ್ಟಿಬೀರಿ ಆತ, ಮಹತ್ವದ ವ್ಯಕ್ತಿಯಂತೆ ಹುಬ್ಬುಗಂಟಿಕ್ಕಿ, ಪೆಟ್ಟಿಗೆಯ ಬೀಗ ತೆಗೆದ; ಮುಚ್ಚಳ ಬಿಸಿಯಾಗಿದೆಯೇನೋ ಎನ್ನುವಂತೆ ಅದರ ಮೇಲೆ ಉಸಿರಿನಿಂದ ಊದಿದ; ಕೊನೆಯಲ್ಲಿ ಅದನ್ನು ತೆರೆದ. ಪೆಟ್ಟಿಗೆಯಿಂದ ಆತ, ಒಳಚಡ್ಡಿಗಳ ಹಲವಾರು ಜತೆಗಳನ್ನು ಹೊರತೆಗೆದ.

ಅರ್ಧ ಪೆಟ್ಟಿಗೆಯೆಲ್ಲಾ, ಮಾತ್ರೆ, ತುಂಬುವ ಕರಂಡಕಗಳಿದ್ದುವು; ಚಹಾ ಪೊಟ್ಟಣಗಳನ್ನು ಸುತ್ತುವ ಬಣ್ಣಬಣ್ಣದ ಕಾಗದಗಳ ಸುರುಳಿಗಳಿದ್ದುವು; ಸಾರ್ಡಿನುಗಳ ಕರಿಬಣ್ಣದ ಖಾಲಿಡಬ್ಬಗಳಿದ್ದುವು.

"ಇದೆಲ್ಲಾ ಏನು?"

"ನೋಡುವಿಯಂತೆ."

ಪೆಟ್ಟಿಗೆಯನ್ನು ತನ್ನ ಕಾಲುಗಳೆಡೆಯಲ್ಲಿ ಒತ್ತುತ್ತಾ, ಅದರ ಮೇಲೆ ಬಾಗಿ, ತಗ್ಗಿದ ಸ್ವರದಲ್ಲಿ ಆತ ಜಪಿಸಿದ:

"ಸ್ವರ್ಗದಲ್ಲಿರುವ ತಂದೆಯೇ...."

ಆಟದ ಸಾಮಾನುಗಳಿರಬಹುದೆಂದು ನಾನು ನಿರೀಕ್ಷಿಸಿದ್ದೆ. ನನ್ನ ಸ್ವಂತದ್ದಾಗಿ ನನ್ನಲ್ಲೆಂದೂ ಆಟಿಗೆಗಳಿರಲಿಲ್ಲ. ಬಹಿರಂಗವಾಗಿ ಅವುಗಳ ವಿಷಯದಲ್ಲಿ ನಾನು ತುಚ್ಛೀಕಾರ ತೋರುತ್ತಿದ್ದರೂ ಆಟಿಗೆಗಳಿದ್ದವರ ಬಗೆಗೆ ನಾನು ಗೋಪ್ಯವಾಗಿ ಅಸೂಯೆಪಡುತ್ತಿದ್ದೆ. ಗಂಭೀರ ಪ್ರಕೃತಿಯ ಸಾಶಾನಲ್ಲೂ ಆಟಿಗೆಗಳಿವೆಯೆಂಬ ವಿಚಾರ, ನನಗೆ ಇಷ್ಟವಾಗಿತ್ತು. ಲಜ್ಜೆಯಿಂದಲೇ ಆತ ಅವನ್ನು ಬಚ್ಚಿಟ್ಟಿರಬೇಕು. ಆದರೆ ಆತನ ನಾಚಿಕೆಯನ್ನು ನಾನು ಮೆಚ್ಚಿದೆ.

ಮೊದಲ ಕರಂಡಕವನ್ನು ಆತ ತೆರೆದು, ಅದರೊಳಗಿಂದ ಕನ್ನಡಕದ ಒಂದು ಚೌಕಟ್ಟನ್ನು

ಹೊರತೆಗೆದ. ಅದನ್ನು ಮೂಗಿನ ಮೇಲೇರಿಸಿ, ತೀಕ್ಷ್ಣನೋಟದಿಂದ ನನ್ನೆಡೆಗೆ ನೋಡಿ, ಆತನೆಂದ:

"ಈ ಕನ್ನಡಕದಲ್ಲಿ ಗಾಜು ಇಲ್ದೆ ಇರೋದರಿಂದ ತೊಂದರೆಯೇನೂ ಇಲ್ಲ. ಅದು ಇರ ಬೇಕಾದ್ದೇ ಹಾಗೆ."

"ನಾನೂ ಇಟ್ಕೊಂಡು ನೋಡಲಾ ?"

"ನಿನ್ನ ಕಣ್ಣುಗಳಿಗೆ ಅದು ಸರಿಹೋಗೋದಿಲ್ಲ. ಅದು ಕರಿದು ಕಣ್ಣುಗಳಿಗೆ ಇಟ್ಕೋ ಬೇಕಾದ ಕನ್ನಡಕ. ನಿನ್ನ ಕಣ್ಣುಗಳ ಬಣ್ಣ ತೆಳು," ಎಂದು ಆತ, ಅದು ಸತ್ಯವೇ ಎನ್ನುವಂತೆ ಹೂಂಕರಿಸಿದ. ಆದರೆ ಧ್ವನಿ, ಅನಿರೀಕ್ಷಿತವಾಗಿ ಏರಿತ್ತು. ಆ ಸ್ವರಕ್ಕೆ ಆತನೇ ಬೆಚ್ಚಿಬಿದ್ದು, ಅಡುಗೆಮನೆಯತ್ತ ಅತ್ತಿತ್ತ ಹೆದರಿಕೆಯ ನೋಟ ಬೀರಿದ.

ಕರಿಬಣ್ಣದ ಒಂದು ಖಾಲಿ ಡಬ್ಬದಲ್ಲಿ, ಅಂಗಿಗುಂಡಿಗಳ ಒಂದು ಸಂಗ್ರಹವಿತ್ತು.

"ಇವೆಲ್ಲಾ ನನಗೆ ಬೀದೀಲಿ ಸಿಕ್ಕಿದ್ದು. ಇಷ್ಟನ್ನೂ ನಾನೊಬ್ಬನೇ ಒಟ್ಟುಕೂಡಿಸ್ದೆ. ಒಟ್ಟು ಮೂವತ್ತೇಳಿವೆ."

ಮೂರನೆಯ ಡಬ್ಬದಲ್ಲಿ ಕೆಲದೊಡ್ಡ ಹಿತ್ತಾಳೆಯ ಸೂಜಿಗಳಿದ್ದುವು. ಅವು ಕೂಡಾ ಬೀದಿ ಯಲ್ಲೆ ಆತನಿಗೆ ದೊರೆತಿದ್ದುವು. ಮೋಜಿಯ ಮೊಳೆಗಳೂ ಪಾದರಕ್ಷೆಯ ಬಕ್‌ಲ್‌ಗಳೂ ಇದ್ದುವು—ಹಳೆಯವು, ಮುರಿದಂಥವು, ಕೆಲವು ಇಡಿಯಾಗಿ ಭದ್ರವಾಗಿದ್ದುವು. ಹಿತ್ತಾಳೆಯ ಒಂದು ಬಾಗಿಲ—ಹಿಡಿಯಿತ್ತು. ಒಂದು ದಂತದ ಹಿಡಿ. ಹೆಂಗಸರ ಬಾಚಣಿಗೆ ಒಂದು. ಒಂದು 'ಸ್ವಪ್ನಗ್ರಂಥ ಮತ್ತು ಭವಿಷ್ಯವಾಣಿ.' ಅದೇ ರೀತಿಯ ಬೇರೆ ಹಲವು ವಸ್ತುಗಳು.

ಚಿಂದಿಗಳನ್ನೂ ಮೂಳೆಗಳನ್ನೂ ಹಿಂದೆ ಆರಿಸುತ್ತಿದ್ದಾಗ ನಾನು, ಬೇಕಿದ್ದರೆ, ಒಂದೇ ತಿಂಗಳಿನಲ್ಲಿ ಆ ಹೊಲಸಿನ ಹತ್ತರಷ್ಟನ್ನು ಸಂಗ್ರಹಿಸಬಹುದಿತ್ತು. ಸಾಶಾನ ನಿಧಿಯನ್ನು ನೋಡಿ ನಾನು ನಿರಾಶನಾದೆ. ನನಗೆ ಸಂಕೋಚವೆನಿಸಿತು. ಆತನ ವಿಷಯದಲ್ಲಿ ಕನಿಕರಹುಟ್ಟಿತು. ಆ ಪ್ರತಿಯೊಂದು ವಸ್ತುವನ್ನೂ ಆತ ಏಕಾಗ್ರಚಿತ್ತದಿಂದ, ತನ್ನ ಬೆರಳುಗಳಿಂದ ಪ್ರೀತಿಪೂರ್ವಕ ವಾಗಿ ತಡವುತ್ತಾ, ದಿಟ್ಟಿಸಿದ. ಆತನ ದಪ್ಪನೆಯ ತುಟಿಗಳು ಹಿರಿತನದಿಂದ ಬಿಗಿದುಕೊಂಡಿದ್ದುವು. ಆ ಉಬ್ಬುಕಣ್ಣುಗಳಲ್ಲಿ ಆಸೆಯಿತ್ತು, ಕಾತರವಿತ್ತು. ಆದರೆ ಆ ಕನ್ನಡಕ ಮಾತ್ರ, ಆತನ ಮಗು ಮುಖವನ್ನು ನಗೆಗೀಡುಮಾಡುತ್ತಿತ್ತು.

"ಇಂಥಾದ್ದನ್ನೆಲ್ಲಾ ಯಾಕಿಟ್ಟುಕೊಂಡಿದೀಯಾ ?"

ಆತ, ತನ್ನ ಕನ್ನಡಕದ ಚೌಕಟ್ಟಿನ ಮೂಲಕ ನನ್ನೆಡೆಗೊಮ್ಮೆ ತೀವ್ರನೋಟ ಬೀರಿದ. ತನ್ನ ವಯೋಮಾನದ ಬಿರುಕುಬಿಟ್ಟ ಸ್ವರದಲ್ಲಿ ಆತನೆಂದ:

"ನಿನಗೆ ಸ್ವಲ್ಪ ಕೊಡಲೇನು ?"

"ಬೇಡ. ಕೇಳಿದ್ದಕ್ಕೆ ಉಪಕೃತ."

ಕ್ಷಣಕಾಲ ಆತ ಉತ್ತರವೀಯಲಿಲ್ಲ. ನನ್ನ ನಿರಾಕರಣೆಯಿಂದಲೂ ತನ್ನ ನಿಧಿಯ ವಿಷಯ ದಲ್ಲಿ ತಾನು ತೋರಿದ ಅನಾಸಕ್ತಿಯಿಂದಲೂ ಆತನಿಗೆ ನೋವಾಗಿತ್ತೆಂಬುದು ಸ್ಪಷ್ಟವಾಗಿತ್ತು.

"ಒಂದು ಚೌಕ ತಗೋ. ಇದನ್ನೆಲ್ಲಾ ಬೆಳಗೋಣ. ಧೂಳು ಕೂಡಿದೆ," ಎಂದು ಆತ ಸೂಚಿಸಿದ.

ನಿಧಿಯನ್ನೆಲ್ಲಾ ಉಜ್ಜಿಬೆಳಗಿ ಸ್ವಸ್ಥಾನವಲ್ಲಿ ಇರಿಸಿದ ಬಳಿಕ, ಆತ ಗೋಡೆಗೆ ಮುಖಮಾಡಿ ತನ್ನ ಪಕ್ಕಕ್ಕೆ ಹೊರಳಿದ. ಮಳೆ ಸುರಿಯಲು ಆರಂಭವಾಗಿತ್ತು. ಗಾಳಿ ಕಿಟಿಕಿಗೆ ಬಡೆಯುತಿತ್ತು.

"ತೋಟದಲ್ಲಿ ನೆಲ ಒಣಗೋವರೆಗೂ ಕಾದಿರು. ಆಗ ಒಂದು ವಸ್ತು ತೋರಿಸ್ತಿನಿ. ನೋಡಿ ಉಸಿರು ಕಟ್ಟಿಹೋಗ್ಬೇಕು!" ಎಂದು ಆತ, ಹೊರಳಿ ನೋಡದೆಯೇ ಹೇಳಿದ.

ಆತನಿಗೆ ಉತ್ತರವೀಯದೆ, ಮೆಲ್ಲನೆ ಸರಿದಾಡುತ್ತಾ ನಾನು ಹಾಸಿಗೆ ಸೇರಿದೆ.

"ಕೆಲನಿಮಿಷಗಳ ಬಳಿಕ ಆತ ಒಮ್ಮೆಲೆ ಹೌಹಾರಿ ಕುಳಿತು, ಗೋಡೆಯನ್ನು ತಿವಿಯ ತೊಡಗಿದ. ನಿಸ್ಸಂದೇಹವಾಗಿಯೂ ಆತ ಭೀತನಾಗಿದ್ದನೆಂಬುದನ್ನು ಸ್ಪಷ್ಟಪಡಿಸುವ ಧ್ವನಿಯಲ್ಲಿ, ಅವನೆಂದ:

"ನನಗೆ ಭಯವಾಗ್ತಿದೆ.....ಓ ದೇವರೆ, ಎಷ್ಟೊಂದು ಭಯವಾಗ್ತಿದೆ ನನಗೆ! ದೇವರೆ, ನನ್ನ ಮೇಲೆ ದಯೆತೋರು!"

ಭಯದಿಂದ ಸ್ವತಃ ನಾನೇ ತಣ್ಣಗಾದೆ. ಅಡುಗೆಯವಳು ನನಗೆ ಬೆನ್ನುಮಾಡಿ ಕಿಟಕಿಯ ಬಳಿ ನಿಂತಿದ್ದಂತೆ, ಕೋಳಿಗಳ ಕಾದಾಟವನ್ನು ಆಕೆ ಹಿಂದೆ ದಿಟ್ಟಿಸುತ್ತಿದ್ದ ರೀತಿಯಲ್ಲೆ ಕಿಟಕಿಯ ಗಾಜಿಗೆ ಹಣೆಯನ್ನು ಒತ್ತಿದ್ದಂತೆ, ನನಗೆ ಅನಿಸಿತು.

ಸಾಶಾ ಬಿಕ್ಕಿ ಅಳುತ್ತ, ಗೋಡೆಯನ್ನು ಉಗುರುಗಳಿಂದ ಕೆರೆಯುತ್ತ ನಿಂತ. ತೀವ್ರತರ ದೈಹಿಕ ಅಸ್ವಾಸ್ಥ್ಯದಿಂದ ಅವನ ಕಾಲುಗಳು ನಡುಗುತ್ತಿದ್ದುವು. ನಿಗಿನಿಗಿ ಕೆಂಡಗಳ ಹಾಸಿಗೆಯನ್ನು ದಾಟುವವನಂತೆ ಅಡುಗೆಮನೆಯ ನೆಲದ ಅಡ್ಡಕ್ಕೆ ನೆಗೆದು, ಆತನ ಪಕ್ಕಕ್ಕೆ ತೆವಳಿದೆ.

ಆಯಾಸಗೊಂಡು ನಿದ್ದೆಹೋಗುವವರೆಗೂ ನಾವು ಅತ್ತೆವು.

ಕೆಲದಿವಸಗಳ ಅನಂತರ ನಮಗೊಂದು ರಜಾದಿನವಿತ್ತು. ಅಂತಹ ದಿನಗಳಲ್ಲಿ ನಾವು ದುಡಿಯುತ್ತಿದ್ದುದು ಮಧ್ಯಾಹ್ನದವರೆಗೆ ಮಾತ್ರ. ಹಗಲಿನ ಊಟಕ್ಕೆ ಮನೆಗೆ ಮರಳುತ್ತಿದ್ದೆವು. ಯಜಮಾನನೂ ಆತನ ಹೆಂಡತಿಯೂ ಅಪರಾಹ್ನದ ಚುಟುಕ ನಿದ್ದೆಗಾಗಿ ತಮ್ಮ ಮಲಗುವ ಕೊಠಡಿಗೆ ಹೋದಾಗ, ರಹಸ್ಯಮಯ ರೀತಿಯಲ್ಲಿ ಸಾಶಾ ನನಗೆಂದ:

"ನನ್ನ ಜತೆ ಬಾ!"

ನೋಡಿ ನನ್ನ ಉಸಿರುಕಟ್ಟಿಹೋಗುವಂಥದನ್ನು ಆತ ತೋರಿಸಲಿದ್ದನೆಂಬುದನ್ನು ನಾನು ಊಹಿಸಿದೆ.

ನಾವು ತೋಟಕ್ಕೆ ಹೋದೆವು. ಎರಡು ಮನೆಗಳ ನಡುವೆ ಅಗಲ ಕಿರಿದಾದ ನೆಲದ ಪಟ್ಟಿಯಲ್ಲಿ, ಹತ್ತೋ ಹದಿನೈದೋ ಬಲು ಹಳೆಯ ಲೈಮ್ ಮರಗಳಿದ್ದುವು. ಅದರ ಬಲಿಷ್ಠ ಕಾಂಡಗಳಲ್ಲಿ ಪಾಚಿಯ ತುಪ್ಪಳವಿತ್ತು. ಬರಿದಾದ ಕರಿಯ ರೆಂಬೆಗಳು ನಿರ್ಜೀವವಾಗಿ ಆಕಾಶಕ್ಕೆ ನೀಡಿಕೊಂಡಿದ್ದುವು. ಅವುಗಳಲ್ಲಿ ಕಾಗೆಗಳ ಒಂದೇ ಒಂದು ಗೂಡೂ ಇರಲಿಲ್ಲ. ದೈತ್ಯಾಕಾರದ ಗೋರಿಕಲ್ಲುಗಳಂತೆ ಮರಗಳು ಎತ್ತರಕ್ಕೆ ಬೆಳೆದಿದ್ದುವು. ಲೈಮ್ ಮರಗಳ ಹೊರತು, ಒಂದೇ ಒಂದು ಪೊದೆಯಾಗಲೀ, ಒಂದು ಗರಿ ಹುಲ್ಲಾಗಲೀ, ಅಲ್ಲಿರಲಿಲ್ಲ. ಹಾದಿಗಳ ನೆಲ, ಕಬ್ಬಿಣದಂತೆ ಗಟ್ಟಿಯಾಗಿ ಕಪ್ಪಾಗಿ ಭದ್ರವಾಗಿತ್ತು. ಅಲ್ಲಿ ಇಲ್ಲಿ ನೆಲದ ಕೆಳಗೆ ಕಳೆದ ವರ್ಷದ ಕೊಳೆತ ಎಲೆಗಳು ಕಾಣಿಸಿದ ಕಡೆ, ನಿಂತ ನೀರನ್ನು ನೀರು ಹುಲ್ಲು ಆವರಿಸಿದಂತೆ ಬೂಜು ಬೆಳೆದಿತ್ತು.

ಸಾಶಾ, ಮನೆಯ ಮೂಲೆಯನ್ನು ಬಳಸಿ ನೇರವಾಗಿ ಬೀದಿಯ ಬೇಲಿಯ ಕಡೆಗೆ ನಡೆದ. ಒಂದು ಲೈಮ್ ಮರದ ಕೆಳಗೆ ನಿಂತ. ಅಲ್ಲಿಂದ, ಪಕ್ಕದ ಮನೆಯ ಕಿಟಕಿಯತ್ತ ನಿಮಿಷಕಾಲ ನೆಟ್ಟದೃಷ್ಟಿಯಿಂದ ನೋಡಿದ. ಬಳಿಕ ನೆಲದ ಮೇಲೆ ಕುಳಿತು, ತನ್ನ ಕೈಗಳಿಂದ ಎಲೆಗಳನ್ನು ಎತ್ತಿ ಸರಿಸಿದ. ಮುರುಟಿಕೊಂಡಿದ್ದ ಬೇರು ಕಾಣಿಸಿತು. ಅದರ ಪಕ್ಕದಲ್ಲೆ ಎರಡು ಇಟ್ಟಿಗೆಗಳನ್ನು ಆಳಕ್ಕೆ ಹುಗಿಯಲಾಗಿತ್ತು. ಆತ ಇಟ್ಟಿಗೆಗಳನ್ನು ಹೊರಕ್ಕೆಳೆದ. ಅವುಗಳ ಕೆಳಗೆ, ಮಾಡನ್ನು ಹೊದಿಸುವ ಅಷ್ಟಗಲದ ಟಿನ್ನಿತ್ತು. ಟಿನ್ನಿನ ಕೆಳಗೆ ಚಚ್ಚೌಕದ ಹಲಗೆ ಇತ್ತು. ಅಂತೂ ಕೊನೆಯಲ್ಲಿ, ಬೇರಿನ ಕೆಳಗೆ ಮುಂದುವರಿದಿದ್ದ ವಿಸ್ತಾರವಾದ ತೂತನ್ನು ನಾನು ಕಂಡೆ.

ಸಾಶಾ ಕಡ್ಡಿ ಕೊರೆದು, ಮೋಂಬತ್ತಿಯ ಒಂದು ತುಣುಕನ್ನು ಹಚ್ಚಿ, ತೂತಿನೊಳಕ್ಕೆ ತಳ್ಳಿ, ನುಡಿದ ;

"ನೋಡು. ಹೆದರ್ಕೋರ್ಬೇಡ, ಅಷ್ಟೆ."

ಸ್ವತಃ ಆತನಿಗೇ ಹೆದರಿಕೆಯಾಗಿತ್ತೆಂಬುದು ಸ್ಪಷ್ಟವಾಗಿತ್ತು. ಮೋಂಬತ್ತಿ ಆತನ ಕೈಯಲ್ಲಿ ನಡುಗಿತು. ಮುಖ ನಿಸ್ತೇಜವಾಯಿತು. ಆತನ ತುಟಿಗಳು ಅಸಹ್ಯ ರೀತಿಯಲ್ಲಿ ಜೋತುವು. ಕಣ್ಣುಗಳು ತೇವಗೊಂಡುವು. ತನ್ನ ಇನ್ನೊಂದು ಕೈಯನ್ನು ಕಂಡೂ ಕಾಣಿಸದಂತೆ ಆತ ಬೆನ್ನ ಹಿಂದಕ್ಕೆ ಸರಿಸಿದ. ಭಯ, ಜಾಡ್ಯವಾಗಿ ನನಗೂ ಅಂಟಿತು. ಅತ್ಯಂತ ಎಚ್ಚರಿಕೆಯಿಂದ, ಆ ಪುಟ್ಟ ಗವಿಗೆ ಕಮಾನಿನಂತಿದ್ದ ಬೇರಿನ ಕೆಳಗಿಂದ ನಾನು ದಿಟ್ಟಿಸಿದೆ. ಮೂರು ಮೋಂಬತ್ತಿಗಳನ್ನೂ ಸಾಶಾ ಹಚ್ಚಿಸಿದ. ತೂತಿನ ಮುಖವನ್ನು ನೀಲಿ ಬೆಳಕಿನಿಂದ ತುಂಬಿದುವು. ಗವಿ ಸುಮಾರು ಸಾಧಾರಣ ರೀತಿಯ ಬಕೀಟಿನಷ್ಟು ಆಳವಾಗಿತ್ತು. ಆದರೆ ಹೆಚ್ಚಾಗಿತ್ತು ಅಗಲ. ಬಣ್ಣದ ಗಾಜುಗಳನ್ನೂ ಪಿಂಗಾಣಿ ಚೂರುಗಳನ್ನೂ ಗೋಡೆಗೆ ಚುಚ್ಚಿ ಅಲಂಕರಿಸಲಾಗಿತ್ತು. ಮಧ್ಯದಲ್ಲಿದ್ದ ತುಸು ಎತ್ತರದ ಜಾಗದಲ್ಲಿ ಪುಟ್ಟದೊಂದು ಶವದಾನಿ ಇತ್ತು. ಶವದಾನಿಯ ಮೇಲೆ ತೆಳ್ಳಗಿನ ಟಿನ್ನನ್ನು ಹೊದೆದು, ಜರಿಯನ್ನು ಹೋಲುವಂತಹ ಯಾವುದೋ ಚಿಂದಿಯಿಂದ ಅರ್ಧ ಮುಚ್ಚಲಾಗಿತ್ತು. ಈ ಹೊದಿಕೆಯೊಳಗಿಂದ, ಒಂದು ಗುಬ್ಬಚ್ಚಿಯ ಬೂದು ಉಗುರುಗಳೂ ಕೊಕ್ಕೂ ಹೊರಕ್ಕೆ ಕಾಣಿಸುತ್ತಿದ್ದುವು. ತಲೆಯ ಬಳಿ ಪುಟ್ಟ ವೇದಿಕೆ ಇತ್ತು. ಅದರಲ್ಲಿ ಸಣ್ಣದೊಂದು, ಹಿತ್ತಾಳೆಯ ನಾಮಕರಣ-ಕ್ರೂಜೆ. ಮೂರು ಬದಿಗಳಲ್ಲಿ, ಮಿಠಾಯಿಗೆ ಸುತ್ತುವ ಬಂಗಾರದ ಹಾಗೂ ಬೆಳ್ಳಿಯ ಬಣ್ಣದ ಕಾಗದಗಳಿಂದ ಅಲಂಕರಿಸಿದ್ದ ಹಿಡಿಗಳಲ್ಲಿ, ಮೋಂಬತ್ತಿಗಳು ಉರಿಯುತ್ತಿದ್ದುವು.

ಮೋಂಬತ್ತಿಗಳ ಚೂಪಾದ ಜ್ವಾಲೆಗಳು ಗವಿಯ ಬಾಗಿಲ ಕಡೆಗೆ ಚಾಚಿದುವು. ವಿವಿಧ ಬಣ್ಣಗಳ ಬೆಳಕಿನ ಹೊಳಪಿನಿಂದಲೂ ಮಚ್ಚೆಗಳಿಂದಲೂ ಗವಿಯ ಒಳಗೋಡೆಗಳು ಮಂದವಾಗಿ ಮಿನುಗಿದುವು. ನೆಲದಹಾಗೂ ಬೆಚ್ಚನೆಯ ಮೇಣದ ವಾಸನೆ, ಕೊಳೆಯುತ್ತಿದ್ದುದರ ದುರ್ಗಂಧ, ಅಲೆಗಳಂತೆ ನನ್ನ ಮುಖಕ್ಕೆ ಬಡೆಯಿತು. ಜರ್ಜರಿತವಾದ ಕಾಮನಬಿಲ್ಲಿನ ಬಣ್ಣಗಳು ನನ್ನ ಕಣ್ಣೆದುರು ಹಾರುತ್ತ ಕಂಪಿಸಿದುವು. ಇವೆಲ್ಲಾ, ಉಸಿರು ಕಟ್ಟಿಸುವಂತಹ ಅಚ್ಚರಿಯ ಭಾವನೆಯನ್ನು ನನ್ನಲ್ಲಿ ಉಂಟುಮಾಡಿದುವು. ಆ ಭಾವನೆ, ನನ್ನ ಭಯವನ್ನು ಅಳಿಸಿತು.

"ಚೆನ್ನಾಗಿದೆಯಾ ?" ಎಂದು ಸಾಶಾ ಕೇಳಿದ.

"ಇದು ಯಾತಕ್ಕೋಸ್ಕರ ?"

ಆತ ವಿವರಿಸಿದ:

"ಇದು ಪವಿತ್ರ, ಗೋರಿ. ಹಾಗೇಂತ ಅನಿಸೋದಿಲ್ವೇನು ?"

"ನನಗೆ ಗೊತ್ತಿಲ್ಲ."

"ಆ ಗುಬ್ಬಚ್ಚಿಯೋ ಶವ. ಮೂಕ ಬಲಿದಾನದ ಹಾಗೆ ಅದು ಸತ್ತ ರೀತೀನ ನೋಡಿದರೆ, ಪ್ರಾಯಶಃ ಅದರ ಶರೀರ, ಯಾವುದಾದರೂ ಪವಾಡದಿಂದ, ಪವಿತ್ರ ಸ್ಮಾರಕವಾಗಿ ಮಾರ್ಪಡಲೂ ಬಹುದು."

"ಸತ್ತು ಬಿದ್ದದ್ದು ನಿನಗೆ ಸಿಗ್ತೆ ?"

"ಅಲ್ಲ, ಅದು ಶೆಡ್ಡಿನೊಳಕ್ಕೆ ಹಾರಿಬಂತು. ನನ್ನ ಟೋಪೀಲಿ ಅದನ್ನು ಹಿಡಿದು ಹಿಸುಕಿ ಕೊಂದೆ."

"ಯಾಕೆ ?"

"ಸುಮ್ಮನೆ."

ನನ್ನ ಕಣ್ಣುಗಳನ್ನೇ ದಿಟ್ಟಿಸಿ ನೋಡಿ ಆತ ಪುನಃ ಕೇಳಿದ:

"ಚೆನ್ನಾಗಿ ಕಾಣ್ತಿದೆ, ಅಲ್ವೆ ?"

"ಇಲ್ಲ !"

ಆತ ಗವಿಯ ಮೇಲಕ್ಕೆ ಬಾಗಿ, ಹಲಗೆಯಿಂದಲೂ ಟಿನ್ನಿನಿಂದಲೂ ಬೇಗನೆ ಅದನ್ನು ಮುಚ್ಚಿ, ಇಟ್ಟಿಗೆಗಳನ್ನು ಮೊದಲಿದ್ದಂತೆ ಇರಿಸಿ, ಎದ್ದುನಿಂತ. ಮೊಣಕಾಲುಗಳಿಗೆ ಅಂಟಿದ್ದ ಕೊಳೆಯನ್ನು ಜಾಡಿಸುತ್ತಾ ಕರ್ಕಶವಾಗಿ ಆತನೆಂದ:

"ನೀನು ಯಾಕೆ ಅದನ್ನು ಇಷ್ಟಪಡೋದಿಲ್ಲ ?"

"ಗುಬ್ಬಚ್ಚಿಗಾಗಿ ಕನಿಕರ ಅನಿಸುತ್ತೆ; ಅದಕ್ಕೋಸ್ಕರ."

ಇದ್ದಕ್ಕಿದ್ದಂತೆ ಕುರುಡನಾದವನಂತೆ, ಶೂನ್ಯ ಬಿರುನೋಟದಿಂದ ನನ್ನನ್ನೇ ನೋಡಿ, ನನ್ನ ಎದೆಗೆ ಗುದ್ದುತ್ತಾ ಕೂಗಾಡಿದ:

"ಬೆಪ್ಪ! ನಿನಗೆ ಹೊಟ್ಟೆಕಿಚ್ಚು, ಅಷ್ಟೆ. ಅದಕ್ಕಾಗಿಯೇ ಅದು ನಿನಗೆ ಚೆನ್ನಾಗಿ ಕಾಣಿಸ್ತಿಲ್ಲ. ಅಲ್ಲಿ ನಿನ್ನ ಕನತ್ನಾಯಾ ಬೀದಿಯ ತೋಟದಲ್ಲಿ ಇತ್ತಲ್ಲ—ಅದನ್ನೆಲ್ಲಾ ಬಹಳ ಚೆನ್ನಾಗಿಯೇ ಮಾಡಿದೀನಿ ಅಂತ ನಿನ್ನ ಅಭಿಪ್ರಾಯವಿರಬಹುದು."

ನನಗೋಸ್ಕರ ನಾನು ಮಾಡಿದ್ದ ಸೊಗಸಾದ ಮೂಲೆಯನ್ನು ನೆನಪಿಗೆ ತಂದುಕೊಳ್ಳುತ್ತ, ಯಾವ ಅಳುಕೂ ಇಲ್ಲದೆ ನಾನು ಉತ್ತರವಿತ್ತೆ:

"ಖಂಡಿತವಾಗಿ. ಅದು ಚೆನ್ನಾಗಿಯೇ ಇತ್ತು."

ಸಾಶಾ ತನ್ನ ಫ್ರಾಕ್‌ಕೋಟನ್ನು ತೆಗೆದೆಸೆದು, ಅಂಗಿಯ ತೋಳುಗಳನ್ನು ಮೇಲಕ್ಕೆ ಸರಿಸಿ, ಅಂಗೈಗಳಿಗೆ ಉಗಿದು ನುಡಿದ:

"ಸರಿ, ಹಾಗಾದರೆ ಹೊಡೆದಾಡಿ ತೀರ್ಮಾನಿಸೋಣ."

ಹೊಡೆದಾಡುವ ಬಯಕೆ ನನಗಿರಲಿಲ್ಲ. ಅದರಿಂದೆಲ್ಲ ನನಗೆ ಬೇಸರವಾಗಿತ್ತು. ನನ್ನ ಸೋದರಮಾವನ ಮಗನ ಸಿಟ್ಟಿನ ಮುಖವನ್ನು ನೋಡುವುದೂ ನನಗೆ ಸಹ್ಯವೆನಿಸಲಿಲ್ಲ.

ಆತ ನನ್ನೆಡೆಗೆ ಧಾವಿಸಿದ. ಎದೆಗೆ ಗುದ್ದಿ ನನ್ನನ್ನು ಉರುಳಿಸಿ, ಸವಾರಿಮಾಡುವವನಂತೆ ನನ್ನ ಮೇಲೆ ಕುಳಿತ.

"ಬದುಕ್ತೀಯೊ? ಸಾಯ್ತೀಯೊ?" ಎಂದು ಆತ ಏರುಸ್ವರದಲ್ಲಿ ಕೇಳಿದ.

ಆತನಿಗಿಂತ ನಾನು ಬಲಿಷ್ಠನಾಗಿದ್ದೆ. ಆತನ ವರ್ತನೆಯಿಂದ, ಮಾತುಗಳಿಂದ, ಪೂರ್ತಿಯಾಗಿ ನಾನು ಕೆರಳಿದೆ. ಒಂದೇ ನಿಮಿಷದ ಬಳಿಕ ಆತ, ನೆಲನೋಡುತ್ತಾ ಗುರುಗುಟ್ಟುತ್ತಾ ಕೈಗಳನ್ನು ತಲೆಯ ಮೇಲಿರಿಸಿ ಮಲಗಿದ್ದ. ನನಗೆ ಬಲುಗಾಬರಿ ಎನಿಸಿ, ಆತನನ್ನು ಮೇಲಕ್ಕೆ ಎತ್ತಲು ಯತ್ನಿಸಿದೆ. ಆದರೆ ಆತ, ಹತ್ತಿರ ಬರಲು ನನ್ನನ್ನು ಬಿಡಲಿಲ್ಲ. ಇದರಿಂದ, ನನ್ನ ಗಾಬರಿ ಮತ್ತಷ್ಟು ಹೆಚ್ಚಿತು. ಏನುಮಾಡಬೇಕೆಂದು ತಿಳಿಯದೆ ನಾನು ದೂರ ಸರಿದೆ.

"ಈಗ ನೀನು ತಪ್ಪಿಸ್ಕೊಳ್ಳಲಾರೆ. ಯಜಮಾನ ನನ್ನನ್ನು ಕಾಣೋವರೆಗೂ ಇಲ್ಲಿಂದ ನಾನು ಮಿಸುಕೋದಿಲ್ಲ. ಆಮೇಲೆ, ಅವನಿಗೆ ದೂರುಕೊಡ್ತೀನಿ. ಆತ ನಿನ್ನನ್ನು ಕೆಲಸದಿಂದ ತೆಗೆದುಹಾಕ್ತಾನೆ."

ಆತ ಶಪಿಸಿದ, ಬೆದರಿಸುವ ಮಾತನ್ನಾಡಿದ. ಸಿಟ್ಟಿನಿಂದ ನಾನು ಹುಚ್ಚನಂತಾದೆ. ಆತನ ಗವಿಯತ್ತ ಧಾವಿಸಿ, ಇಟ್ಟಿಗೆಗಳನ್ನು ಎಳೆದು ತೆಗೆದು, ಶವದಾನಿಯನ್ನೂ ಗುಬ್ಬಚ್ಚಿಯನ್ನೂ ಬೇಲಿಯ ಆಚೆಗೆ ಎಸೆದು, ಒಳಗಿದ್ದುದನ್ನೆಲ್ಲಾ ಕಿತ್ತು ಹೊರತೆಗೆದು, ಕಾಲುಗಳ ಕೆಳಗೆ ಹಾಕಿ ತುಳಿದೆ.

"ತಗೋ! ತಗೋ! ನೋಡಿದಿಯಾ?"

ನನ್ನ ಕ್ರೋಧಾಗ್ನಿಗೆ ಸಾಶಾ ತೋರಿದ ಪ್ರತಿಕ್ರಿಯೆ ವಿಚಿತ್ರವಾಗಿತ್ತು. ಆತ ಎದ್ದು, ಬಾಯಿಯನ್ನು ತುಸುತೆರೆದು, ಹುಬ್ಬುಗಳನ್ನು ಗಂಟಿಕ್ಕಿ, ಮಾತಿಲ್ಲದೆ ನೋಡುತ್ತ ಕುಳಿತ. ನನ್ನದು ಮುಗಿದೊಡನೆ, ನಿಧಾನವಾಗಿ ಎದ್ದುನಿಂತು, ಧೂಳು ಝಾಡಿಸಿ, ಕೋಟನ್ನು ಹೆಗಲ ಮೇಲಕ್ಕೆ ಹಾಕಿ ಶಾಂತವಾದ ಬೆದರಿಕೆಯ ಧ್ವನಿಯಲ್ಲಿ ನುಡಿದ:

"ಇನ್ನು ಏನಾಗ್ತದೇಂತ ನೋಡುವಿಯಂತೆ. ಸುಮ್ಮನೆ ಕಾದಿರು ನೀನು. ನಿನಗೋಸ್ಕರವೆಂದೇ ಅದನ್ನು ನಾನು ತಯಾರಿಸಿದೆ. ಅದು ಮಾಟಮಂತ್ರ! ಸಾಕೆ?"

ಆತನ ಮಾತುಗಳು ಹೊಡೆದು ಉರುಳಿಸಿದುವೇನೋ ಎಂಬಂತೆ ನಾನು ಕುಸಿಕುಳಿತೆ. ನನ್ನೊಳಗಿನ ಪ್ರತಿಯೊಂದೂ ತಣ್ಣಗಾಯಿತು. ಹಿಂತಿರುಗಿ ಕೂಡಾ ನೋಡದೆ ಆತ ಹೊರಟು ಹೋದ. ಆತನ ಶಾಂತತೆ ನನ್ನನ್ನು ಸಂಪೂರ್ಣವಾಗಿ ಹಿಚುಕಿಬಿಟ್ಟಿತು.

ಮಾರನೆಯ ದಿನವೇ ಆ ಶಹರದಿಂದ, ಯಜಮಾನನಿಂದ, ಸಾಶಾನಿಂದ, ಆತನ ಮಾಟ ಮಂತ್ರದಿಂದ, ಆ ಎಲ್ಲಾ ಅರ್ಥಹೀನ ಬರಡು ಬದುಕಿನಿಂದ, ಓಡಿಹೋಗಬೇಕೆಂದು ನಾನು ತೀರ್ಮಾನಿಸಿದೆ.

ಮಾರನೆಯ ಬೆಳಗ್ಗೆ ಹೊಸ ಅಡುಗೆಯವಳು ನನ್ನನ್ನು ಎಬ್ಬಿಸಿದಾಗ, ನನ್ನ ಕಡೆ ನೋಡಿ, ಆಕೆ ಕಿರಿಚಿದಳು:

"ಓ ದೇವರೇ! ಏನಾಗಿದೆ ನಿನ್ನ ಮುಖಕ್ಕೆ?"

'ಇದು ಮಾಟಮಂತ್ರದ ಕೆಲಸ.' ಎಂದು, ಇನ್ನೇನು ಎಲ್ಲವೂ ಮುಗಿದಂತೆಯೇ ಎಂಬ ಭಾವನೆಯಿಂದ, ನಾನು ಯೋಚಿಸಿದೆ.

ಆದರೆ ಅಡುಗೆಯವಳು ಗೊಳ್ಳೆಂದು ಗಟ್ಟಿಯಾಗಿ ನಗತೊಡಗಿದಳು. ಆ ನಗು ಕೇಳಿ ಆಕೆಯ ಕನ್ನಡಿಯಲ್ಲಿ ಇಣಿಕಿ ನೋಡಿದ ಸ್ವತಃ ನಾನೇ, ತಡೆಯಲಾರದೆ ಮುಗುಳುನಕ್ಕೆ. ನನ್ನ

ಮುಖಕ್ಕೆ ದಪ್ಪನಾಗಿ ಕರಿ ಸವರಲಾಗಿತ್ತು.

"ಸಾಶಾ ಮಾಡಿದನೆ ?" ಎಂದು ನಾನು ಕೇಳಿದೆ.

"ನಾನೇ ಮಾಡಿದೆನೋ ಏನೊ?," ಎಂದು ಅಡುಗೆಯವಳು ನಕ್ಕಳು.

ನಾನು ಬೂಟುಗಳಿಗೆ ಪಾಲಿಷ್ ಹಾಕತೊಡಗಿದೆ. ಒಂದರೊಳಕ್ಕೆ ಕೈಹಾಕಿದಾಗ ಪಿನ್ನು ಚುಚ್ಚಿತು.

"ಆಹಾ! ತಿಳೀತು ಮಾಟಮಂತ್ರ!" ಎಂದುಕೊಂಡೆ.

ಪಿನ್ನುಗಳನ್ನೂ ಸೂಜಿಗಳನ್ನೂ ಎಲ್ಲಾ ಬೂಟುಗಳೊಳಗೂ ಬಚ್ಚಿಡಲಾಗಿತ್ತು. ನನ್ನ ಮಾಂಸಕ್ಕೆ ಅವು ಚುಚ್ಚಿಯೇ ತೀರುವಂತೆ ಬಲು ಜಾಣ್ಮೆಯಿಂದ ಆ ಕೆಲಸ ಮಾಡಲಾಗಿತ್ತು. ಒಂದು ತಂಬಿಗೆ ತಣ್ಣೀರನ್ನು ಎತ್ತಿಕೊಂಡು, ಇನ್ನೂ ನಿದ್ದೆಮಾಡುತ್ತಿದ್ದ, ಅಥವಾ ನಿದ್ರಿಸುತ್ತಿದ್ದಂತೆ ನಟಿಸುತ್ತಿದ್ದ, ಮಾಯಾವಿಯ ತಲೆಯಮೇಲೆ ಪರಮ ಸಂತೋಷದಿಂದ ನಾನು ಸುರಿದೆ.

ಇಷ್ಟಾದರೂ ನನ್ನ ಬೇಸರ ನೀಗಲಿಲ್ಲ. ಬೂದುಬಣ್ಣದ ಮುರುಟಿದ ಉಗುರುಗಳ, ಕರುಣೆಹುಟ್ಟಿಸುವ ಮಯಣದಂತಹ ಪುಟ್ಟಕೊಕ್ಕಿನ ಗುಬ್ಬಚ್ಚಿಯಿದ್ದ ಶವದಾನಿ; ಕಾಮನಬಿಲ್ಲಾಗಿ ಒಂದುಗೂಡುವಂತೆ ವ್ಯರ್ಥವಾಗಿ ಯತ್ನಿಸುತ್ತಿದ್ದ ವಿವಿಧ ಬಣ್ಣಗಳ ಬೆಳಕು, ಸುತ್ತಲೂ ಹೊಳೆಯುತ್ತಿದ್ದುದು;—ಈ ದೃಶ್ಯ ನನ್ನ ಕಣ್ಣಮುಂದಿನಿಂದ ಮರೆಯಾಗಲೇ ಇಲ್ಲ. ಶವದಾನಿ ವಿಸ್ತಾರಗೊಂಡಿತು. ಹಕ್ಕಿಯ ಉಗುರುಗಳು ಮೇಲಮೇಲಕ್ಕೆ ಹರಡಿಕೊಳ್ಳುತ್ತಾ ಬೆಳೆದು ಮಿಸುಕಿ ಸಜೀವವಾದುವು.

ಆ ಸಂಜೆ ಓಡಿಹೋಗಬೇಕೆಂದು ನಾನು ಹಂಚಿಕೆ ಹಾಕಿದ್ದೆ. ಊಟಕ್ಕೆ ಮುಂಚೆ ಎಣ್ಣೆಯ ಒಲೆಯ ಮೇಲೆ ಸೂಪನ್ನು ನಾನು ಬಿಸಿಮಾಡುತ್ತಿದ್ದಂತೆ, ಸುಮ್ಮನೆ ಯೋಚಿಸುತ್ತ ಕುಳಿತುದರಿಂದ, ಕುದಿಯುತ್ತಿದ್ದ ಸೂಪು ಉಕ್ಕಿಹರಿಯಿತು. ಬೆಂಕಿಯನ್ನು ಆರಿಸುವ ಅವಸರದಲ್ಲಿ, ಪಾತ್ರೆ ನನ್ನ ಕೈಗಳ ಮೇಲೆ ಮಗುಚಿಕೊಂಡಿತು. ಹೀಗಾಗಿ, ನಾನು ಆಸ್ಪತ್ರೆಗೆ ಕಳುಹಲ್ಪಟ್ಟೆ.

ಆಸ್ಪತ್ರೆಯ ದುಃಸ್ವಪ್ನದಂತಹ ಬದುಕು ನನಗೆ ನೆನಪಿದೆ. ಬೂದು ಮತ್ತು ಬಿಳಿಯ ಶವ-ಹೊದಿಕೆಯ ವ್ಯಕ್ತಿಗಳು, ಮಿಸುಕಾಡುತ್ತಿದ್ದ ಹಳದಿ ಶೂನ್ಯದಲ್ಲಿ, ಮುತ್ತಿಕೊಳ್ಳುತ್ತಾ ನರಳುತ್ತಾ ಪಿಸುನುಡಿಯುತ್ತಾ ಇದ್ದುವು. ಊರುಗೋಲುಗಳ ಆಧಾರದ ಮೇಲೆ ನಡೆಯುತ್ತಿದ್ದ ಮನುಷ್ಯನೊಬ್ಬನಿದ್ದ. ಮೀಸೆಗಳ ಹಾಗಿದ್ದ ಹುಬ್ಬುಗಳಿದ್ದುವು ಆತನಿಗೆ. ನೀಳವಾದ ಕರಿಯ ಗಡ್ಡವನ್ನು ಆಡಿಸುತ್ತಾ ಆತ ಕೂಗಾಡುತ್ತಿದ್ದ:

"ನಿನ್ನ ವಿಷಯ ರೆವರೆಂಡ್ ಬಿಷಪ್ಪರಿಗೆ ದೂರುಕೊಡ್ತೀನಿ !"

ಮಂಚಗಳು ಶವದಾನಿಗಳ ನೆನಪು ಹುಟ್ಟಿಸಿದುವು. ಛಾವಣಿಯತ್ತ ಮೂಗುಮಾಡಿ ಮಲಗಿದ್ದ ಕಾಹಿಲೆಯವರು, ಸತ್ತ ಗುಬ್ಬಚ್ಚಿಗಳನ್ನು ಹೋಲುತ್ತಿದ್ದರು. ಹಳದಿ ಗೋಡೆಗಳು ಅತ್ತಿತ್ತ ತೂಗಾಡಿದುವು. ಛಾವಣಿ, ಹಾಯಿಯಂತೆ ಚಲಿಸಿತು. ನೆಲ ಉಬ್ಬಿಬಂತು; ಮಂಚಗಳನ್ನು ಮುಂದಕ್ಕೂ ಹಿಂದಕ್ಕೂ ತೂಗಾಡಿಸಿತು. ಪ್ರತಿಯೊಂದೂ ವಿಚಿತ್ರವಾಗಿತ್ತು, ಅರ್ಥಹೀನವಾಗಿತ್ತು. ಕಿಟಕಿಗಳಾಚೆ ಮರಗಳ ಬರಿದು ಕೊಂಬೆಗಳು, ಅದೃಶ್ಯ ಹಸ್ತವೊಂದು ಬೀಸುತ್ತಿದ್ದ ಚಾಟಿಗಳಂತೆ ಕಾಣಿಸಿಕೊಂಡುವು.

ತೆಳ್ಳಗಿನ, ಕೆಂಪುತಲೆಯ ಶವವೊಂದು, ಕಿರಿದಾದ ಪುಟ್ಟ ತೋಳುಗಳಿಂದ ತನ್ನ ಹೊದಿಕೆ

ಯನ್ನು ಬಿಗಿಯಾಗಿ ಎಳೆದುಕೊಳ್ಳುತ್ತಾ, "ಈ ಹುಚ್ಚರನ್ನೆಲ್ಲಾ ನಾನು ಸಹಿಸಲಾರೆ!" ಎಂದು ಕಿರಿಚಿಕೊಳ್ಳುತ್ತಾ, ಬಾಗಿಲ ಬಳಿ ಕಾಣಿಯಿತು.

"ರೆವರೆಂಡ್ ಬಿಷಪ್ಪರು!" ಎಂದು, ಊರುಗೋಲುಗಳನ್ನು ಆಧರಿಸಿದ್ದ ಮನುಷ್ಯ ಕೂಗಾಡಿದ.

ಆಸ್ಪತ್ರೆಯಲ್ಲಿ ಜನರನ್ನು ಉಪವಾಸ ಕೆಡವಿ ಸಾಯಿಸುತ್ತಿದ್ದರೆಂದು, ಅಜ್ಜಿ, ಅಜ್ಜ ಮತ್ತಿತರ ರೆಲ್ಲರೂ ಯಾವಾಗಲೂ ಹೇಳುತ್ತಿದ್ದರು. ನನ್ನ ಕೊನೆಯೂ ಸಮೀಪಿಸಿತು ಎಂಬ ತೀರ್ಮಾನಕ್ಕೆ ಬಂದೆ. ತಾನೂ ಶವಹೊದಿಕೆ ಧರಿಸಿದ್ದ, ಮೂಗಿನ ಮೇಲೆ ಕನ್ನಡಕವಿದ್ದ, ಹೆಂಗಸೊಬ್ಬಳು ಬಂದು, ನನ್ನ ಮಂಚದ ತಲೆಯ ಭಾಗಕ್ಕೆ ಕಟ್ಟಿದ್ದ ಸ್ಲೇಟಿನ ಮೇಲೆ ಸುಣ್ಣದಲ್ಲಿ ಅದೇನನ್ನೋ ಬರೆದಳು. ಸುಣ್ಣ ಒಡೆಯಿತು; ಪುಡಿಗಳು ನನ್ನ ತಲೆಗೂದಲ ಮೇಲೆ ಬಿದ್ದುವು.

"ನಿನ್ನ ಹೆಸರೇನು?" ಎಂದು ಆಕೆ ಕೇಳಿದಳು.

"ನನಗೆ ಯಾವ ಹೆಸರೂ ಇಲ್ಲ."

"ಯಾವ ಹೆಸರೂ ಇಲ್ಲ?"

"ಇಲ್ಲ."

"ಕಪಿಚೇಷ್ಟೆ ನಿಲ್ಸು. ಇಲ್ಲದೇ ಹೋದರೆ, ಹೊಡೆತ ಬೀಳ್ತದೆ."

ಅವರು ಹೊಡೆಯುವರೆಂಬುದು ನನಗೆ ಖಚಿತವಾಗಿದ್ದುದರಿಂದಲೇ, ಹೆಸರು ಹೇಳಲು ನಾನು ನಿರಾಕರಿಸಿದ್ದೆ. ತನ್ನ ಮಾತುಗಳನ್ನು ಆಕೆ, ಬೆಕ್ಕಿನಂತೆ ಉಗುಳಿದಳು; ಬೆಕ್ಕಿನಂತೆಯೇ ಕಳ್ಳಹೆಜ್ಜೆ ಇರಿಸಿ ಆಕೆ ಮಾಯವಾದಳು.

ಎರಡು ದೀಪಗಳು ಹಚ್ಚಲ್ಪಟ್ಟುವು. ಅವುಗಳ ಹಳದಿ ಕಣ್ಣುಗೊಂಬೆಗಳು, ಪರಸ್ಪರ ಒಂದುಗೂಡುವ ಯತ್ನದಲ್ಲಿ ತೂಗಾಡುತ್ತಾ ಕುರುಡಾಗುವಂತೆ ಮಿಕಿಮಿಕಿ ನೋಡುತ್ತಾ ಇದ್ದ ಕಳೆದುಹೋದ ಕಣ್ಣುಗಳಂತೆ, ಛಾವಣಿಯಿಂದ ನೇತಾಡಿದುವು.

"ಇಸ್ಪೀಟು ಆಡೋಣ," ಎಂದು ಮೂಲೆಯಲ್ಲಿದ್ದ ಯಾವನೋ ಒಬ್ಬ ಹೇಳಿದ.

"ಒಂದೇ ತೋಳಿನಲ್ಲಿ ನಾನು ಆಡೋದು ಹೇಗೆ?"

"ಆಹಾ, ನಿನ್ನ ತೋಳನ್ನು ಅವರು ಕಡಿದೇ ಬಿಟ್ಟರೇನು ಹಾಗಾದರೆ?"

ಇಸ್ಪೀಟು ಆಡಿದ ಕಾರಣದಿಂದಲೇ ಅವನ ತೋಳನ್ನು ಅವರು ಕಡಿದಿರಬೇಕೆಂದು, ತಕ್ಷಣವೇ ನಾನು ಊಹಿಸಿದೆ. ಕೊಲ್ಲೋದಕ್ಕೆ ಮುಂಚಿತವಾಗಿ ನನಗೆ ಅವರೇನು ಮಾಡ ಬಹುದೆಂದು ಆಶ್ಚರ್ಯಕ್ಕೊಳಗಾದೆ.

ನನ್ನ ಎಲುಬುಗಳನ್ನು ಯಾರೋ ಕೀಳುತ್ತಿದ್ದರೆನ್ನುವಂತೆ, ನನ್ನ ಕೈಗಳು ಉರಿಯುತ್ತಿದ್ದುವು, ನೋಯುತ್ತಿದ್ದವು. ಭಯದಿಂದಲೂ ನೋವಿನಿಂದಲೂ ನಾನು ಮೆಲ್ಲನೆ ಅತ್ತೆ. ನನ್ನ ಕಂಬನಿ ಯನ್ನು ಯಾರೂ ಕಾಣಬಾರದೆಂದು ಕಣ್ಣುಗಳನ್ನು ಮುಚ್ಚಿಕೊಂಡೆ, ಆದರೂ ಕಣ್ಣೀರು ಉಕ್ಕಿ ಹರಿದು, ಕೆನ್ನೆಗಳ ಮೇಲಿಂದ ಹಾದು, ಕಿವಿಗಳೊಳಕ್ಕೆ ಇಳಿಯಿತು.

ಕತ್ತಲಾಯಿತು. ಜನರೆಲ್ಲ ಹರಿದಾಡುತ್ತಾ ತಮ್ಮ ಮಂಚಗಳನ್ನು ಸೇರಿದರು. ಬೂದು ಕಂಬಳಿಗಳ ಕೆಳಗೆ ಅವಿತುಕೊಂಡರು. ಪ್ರತಿಕ್ಷಣವೂ ಮೌನ ಹೆಚ್ಚು ಹೆಚ್ಚು ಅಗಾಧವಾಗುತ್ತ ಹೋಯಿತು. "ಅದರಿಂದ ಯಾವ ಒಳ್ಳಿತೂ ಆಗದು, ಅವನೂ ಮೃಗ, ಅವಳೂ ಮೃಗ...."

ಎಂಬ ಗೊಣಗುಧ್ವನಿಯೊಂದೇ ಮೂಲೆಯಿಂದ ಹೊರಟು ಆ ಮೌನವನ್ನು ಮುರಿಯುತ್ತಿತ್ತು.

ಕಾಲಮಿಂಚುವುದಕ್ಕೆ ಮುಂಚೆಯೇ ನನ್ನನ್ನು ರಕ್ಷಿಸಬೇಕೆಂದು ಯಾಚಿಸಿ ಅಜ್ಜಿಗೆ ಬರೆಯಲು ನಾನು ಬಯಸಿದೆ. ಆದರೆ, ನನ್ನ ಕೈಗಳ ದೆಸೆಯಿಂದ, ಕಾಗದವಿಲ್ಲದ ದೆಸೆಯಿಂದ, ಬರೆಯುವು ದಾಗಲಿಲ್ಲ. ಅಲ್ಲಿಂದ ಓಡಿಹೋಗುವುದೇ ಸರಿ ಎಂದು ನಾನು ತೀರ್ಮಾನಿಸಿದೆ.

ಇರುಳು ಬೇರೂರಿ ಸ್ಥಿರವಾಗಿ ನೆಲೆನಿಂತಂತೆ ಕಂಡಿತು. ಮೆಲ್ಲನೆ ನಾನು, ಮಂಚದ ಬದಿ ಯಿಂದ ಪಾದಗಳನ್ನು ಕೆಳಕ್ಕಿಳಿಸಿದೆ. ಹೆಬ್ಬಾಗಿಲ ಬಳಿಗೆ ಹೋದೆ. ಅರ್ಧ ತೆರೆದಿತ್ತು. ಅಲ್ಲೇ ಮೂಲೆಯಲ್ಲಿ ಒಂದು ಬೆಂಚಿನ ಮೇಲೆ, ಹೊಗೆಯ ಹಾರತೊಡಿಸಿದ್ದ ಸಿಕ್ಕುಗೂದಲ ನರೆತ ತಲೆ ಯನ್ನು ಕಂಡೆ. ಆಳಕ್ಕೆ ಇಳಿದಿದ್ದ ಕರಿದು ಕಣ್ಣುಗಳು ನನ್ನ ಮೇಲೆಯೇ ನೆಟ್ಟಿದ್ದುವು. ಅವಿತು ಕೊಳ್ಳಲು ನನಗೆ ಅವಕಾಶವೇ ದೊರೆಯಲಿಲ್ಲ.

"ಯಾರು ಅಲ್ಲಿ ಅಲೀತಿರೋದು ? ಬಾ ಇಲ್ಲಿ !"

ಸ್ವರ ಮೃದುವಾಗಿತ್ತು; ಭಯಕಾರಕವಾಗಿರಲೇ ಇಲ್ಲ, ಆತನ ಕಡೆಗೆ ನಾನು ನಡೆದೆ; ಗಡ್ಡ ತುಂಬಿದ್ದ ದುಂಡು ಮುಖವನ್ನು ನೋಡಿದೆ. ಆ ಮನುಷ್ಯನ ತಲೆಯ ಮೇಲಿನ ನರೆಗೂದಲು ನೀಳವಾಗಿತ್ತು. ರಜತ ಪ್ರಭೆಯ ಹಾಗೆ, ಎಲ್ಲಾ ದಿಕ್ಕುಗಳಿಗೂ ನೇರವಾಗಿ ಚಾಚಿತ್ತು. ಸೊಂಟದ ಪಟ್ಟಿಯಿಂದ ಬೀಗದಕೈಗಳ ಗೊಂಚಲು ತೂಗಾಡುತ್ತಿತ್ತು. ಆತನ ತಲೆಗೂದಲೂ ಗಡ್ಡವೂ ಮತ್ತಷ್ಟು ನೀಳವಾಗಿದ್ದಿದ್ದರೆ, ಸಂತ ಪೀಟರನ ಹಾಗೆಯೇ ಆತ ಕಾಣಿಸುತ್ತಿದ್ದ.

"ಕೈ ಸುಟ್ಟುಕೊಂಡಿರುವವನೇನು ನೀನು ? ಕತ್ತಲೇಲಿ ಯಾತಕ್ಕೋಸ್ಕರ ಅಲೆದಾಡ್ತಿ ದೀಯಾ ? ಹಾಗೆ ಮಾಡೋದು, ನಿಯಮ ನಿಬಂಧನೆಗಳಿಗೆ ವಿರುದ್ಧ."

ಹೊಗೆಯ ಮೋಡವನ್ನು ನನ್ನ ಮುಖಕ್ಕೆ ಊದಿ, ಬೆಚ್ಚನೆಯ ತೋಳಿನಿಂದ ನನ್ನನ್ನು ಸುತ್ತುವರಿದು, ತನ್ನೆಡೆಗೆ ಎಳೆದುಕೊಂಡ.

"ಹೆದರಿದೀಯಾ ?"

"ಹೂಂ."

"ಶುರುವಿನಲ್ಲಿ ಇಲ್ಲಿ ಎಲ್ಲರಿಗೂ ಹೆದರಿಕೆಯೇ. ಆದರೆ, ಹೆದರಬೇಕಾದ ಅಂಶವೇನೂ ಇಲ್ಲಿಲ್ಲ. ಅದರಲ್ಲೂ ನನಗೆ ಹೆದರಬೇಕಾದ್ದೇ ಇಲ್ಲ. ಯಾರಿಗೂ ಕಷ್ಟ ಒದಗೋದಕ್ಕೆ ಬಿಡುವ ವನಲ್ಲ ನಾನು. ತಂಬಾಕು ಸೇದ್ತೀಯಾ? ಬೇಡ, ಬಿಡು—ನೀನು ಸೇದಬೇಕಾದ್ದಿಲ್ಲ. ನೀನು ತೀರಾ ಚಿಕ್ಕವನು—ಇನ್ನೂ ಒಂದೆರಡು ವರ್ಷ ಕಾದಿರು. ನಿನ್ನ ತಾಯಿತಂದೆ ಎಲ್ಲಿದ್ದಾರೆ? ತಾಯಿ ಅಥವಾ ತಂದೆ ಇಲ್ಲವೆ? ಬೇಡ, ಬಿಡು –ಅವರು ಇರಬೇಕಾದ್ದಿಲ್ಲ. ಅವರು ಇಲ್ಲದೆಯೇ ನೀನು ಬದುಕಬಲ್ಲೆ. ಅಂದರೆ, ನೀನು ಪುಕ್ಕಲು ಪ್ರಾಣಿಯಾಗದೇ ಇದ್ದರೆ, ಬದುಕಬಲ್ಲೆ."

ಸರಳವಾದ, ಸ್ನೇಹಪರವಾದ, ಅರ್ಥವಾಗುವಂತಹ ಮಾತುಗಳನ್ನಾಡಿದ ಯಾರನ್ನೇ ಆಗಲಿ ನಾನು ಭೇಟಿಯಾಗಿ ಬಹಳ ಕಾಲವಾಗಿತ್ತು. ಈಗ ಅಂತಹ ಮಾತುಗಳನ್ನು ಕೇಳು ವುದರಲ್ಲಿ ಅನಿರ್ವಚನೀಯವಾದ ಸೊಗಸಿತ್ತು.

ನನ್ನ ಮಂಚದ ಕಡೆಗೆ ನನ್ನನ್ನು ಆತ ವಾಪಸು ಕರೆದೊಯ್ದ.

"ಸ್ವಲ್ಪ ಹೊತ್ತು ನನ್ನ ಹತ್ತಿರ ಕೂತಿರು," ಎಂದು ನಾನು ಬೇಡಿಕೊಂಡೆ.

"ಓಹೋ, ಧಾರಾಳವಾಗಿ," ಎಂದು ಆತ ಉತ್ತರವಿತ್ತ:

"ನೀನು ಯಾರು?"

"ನಾನೊಬ್ಬ ಸೈನಿಕ, ಕೊಕೇಸಸ್ ಯುದ್ಧದಲ್ಲಿ ಭಾಗವಹಿಸಿದಂಥ ನಿಜವಾದ ಸೈನಿಕ. ನಿಜವಾದ ಯುದ್ಧಗಳು. ಅದು ಸ್ವಾಭಾವಿಕ ಅನ್ನು. ಯುದ್ಧಗಳಲ್ಲಿ ಹೋರಾಡೋದಕ್ಕೆ ಸೈನಿಕ ಜೀವಿಸ್ತಾನೆ. ಹಂಗೇರಿಯನ್ನರು, ಸರ್ಕೇಸಿಯನ್ನರು, ಪೋಲರು—ಇವರ ಜತೆಯೆಲ್ಲಾ ನಾನು ಯುದ್ಧಮಾಡ್ದೆ. ಯುದ್ಧ, ತಮ್ಮ, ಯುದ್ಧ ಅನ್ನೋದು ಒಂದು ದೊ-ಡ್ಡ ಕೀಟಲೆ."

ಕ್ಷಣಕಾಲ ನಾನು ಕಣ್ಣು ಮುಚ್ಚಿದೆ.

ಪುನಃ ಕಣ್ಣು ತೆರೆದಾಗ, ಸೈನಿಕನಿದ್ದ ಕಡೆ ಅಜ್ಜಿ ಕುಳಿತಿದ್ದಳು. ಆತ, ಆಕೆಯ ಪಕ್ಕದಲ್ಲಿ ನಿಂತು ಹೇಳುತ್ತಿದ್ದ:

"ಹಾಗಾದರೆ ಅವರೆಲ್ಲಾ ಸತ್ತರು, ಅಂತೀಯಾ? ನಂಬೋದಕ್ಕೇ ಆಗೋದಿಲ್ಲವಪ್ಪ!"

ಕಣ್ಣುಮುಚ್ಚಾಲೆಯಾಡುವ ಮಗುವಿನಂತೆ, ಶುಭ್ರ ಸೂರ್ಯ ಬರುತ್ತಿದ್ದ, ಹೋಗುತ್ತಿದ್ದ. ವಾರ್ಡಿನಲ್ಲಿದ್ದುದನ್ನೆಲ್ಲ ತೀವ್ರಸ್ರೋತದಿಂದ ಬೆಳಗುತ್ತಿದ್ದ, ಒಡನೆಯೇ ಮಾಯವಾಗುತ್ತಿದ್ದ. ಆದರೆ ಮತ್ತೆ, ಬೆಳಕು ಚಿಮ್ಮುತ್ತ ಬಂದೇ ಬರುತ್ತಿದ್ದ.

ಅಜ್ಜಿ ನನ್ನೆಡೆಗೆ ಬಾಗಿ ಅಂದಳು:

"ಏನಾಯ್ತಪ್ಪಾ, ಪಾರಿವಾಳ? ನಿನಗೆ ಘಾಸಿಮಾಡಿದಾರೇನು? ಆ ಕೆಂಪುತಲೆ ತೋಳನಿಗೆ ನಾನು ಅವತ್ತೇ ಹೇಳ್ದೆ...."

ಸೈನಿಕ, ತಾನು ಹೋಗುತ್ತಾ ಅಂದ:

"ಒಂದು ನಿಮಿಷ ತಾಳು. ನಿಯಮ ನಿಬಂಧನೆ ಪ್ರಕಾರ ಎಲ್ಲಾ ಸರಿಪಡಿಸಿ ಬರ್ತೀನಿ."

"ಆ ಸೈನಿಕ ಬಾಲಬ್ನಾದವನಂತೆ," ಎಂದಳು ಅಜ್ಜಿ, ತನ್ನ ಕೆನ್ನೆಗಳ ಮೇಲಿನ ಕಣ್ಣೀರನ್ನು ಒರೆಸಿಕೊಳ್ಳುತ್ತಾ.

ಆಗಲೂ, ನಾನು ಕನಸು ಕಾಣುತ್ತಿರಬೇಕೆಂದೇ ಯೋಚಿಸಿದೆ. ಏನನ್ನೂ ನಾನು ಹೇಳಲಿಲ್ಲ.

ಒಬ್ಬ ಡಾಕ್ಟರು ಬಂದು, ನನ್ನ ಕೈಗಳಿಗೆ ಔಷಧಿ ಹಾಕಿ ಬಟ್ಟೆಸುತ್ತಿದರು. ಬಳಿಕ ಅಜ್ಜಿಯೂ ನಾನೂ ಗಾಡಿಯಲ್ಲಿ ಕುಳಿತು ಶಹರದ ಮೂಲಕ ಹೊರಟೆವು.

ಹೋಗುತ್ತ ಅಜ್ಜಿ ಅಂದಳು:

"ಆ ನಿನ್ನ ಅಜ್ಜನಿಗೆ ಹುಚ್ಚೇ ಹಿಡಿದಿದೆ. ಎಂಥಾ ಜಿಪುಣನಾಗಿದಾನೆ ಅಂತೀಯಾ. ನೆನೆಸಿಕೊಂಡರೆ ವಾಕರಿಕೆ ಬರುತ್ತೆ, ಮೊನ್ನೆಯಷ್ಟೇ—ಅವನ ಹೊಸ ಸ್ನೇಹಿತ—ಜೀನು ತಯಾರಿಸೋ ಖ್ಲಿಸ್ತ್, ಅವನ ಪ್ರಾರ್ಥನಾ ಗ್ರಂಥದಿಂದ ನೂರು ರೂಬಲಿನ ನೋಟನ್ನೇ ಕದ್ದ. ಆಗ ಎಂಥಾ ಗಲಾಟೆಯಾಗ್ಹೋಯ್ತು, ಅಂತೀ! ಊಹ್!"

ಸೂರ್ಯ ಶುಭ್ರವಾಗಿ ಬೆಳಗುತ್ತಿದ್ದ. ಮೋಡಗಳು ಬಿಳಿಯ ಹಕ್ಕಿಗಳಂತೆ, ಆಕಾಶದ ಅಡ್ಡಕ್ಕೆ ತೇಲುತ್ತಿದ್ದುವು. ಹೆಪ್ಪುಗಟ್ಟಿದ್ದ ವೋಲ್ಗಾಗೆ ಅಡ್ಡವಾಗಿ ಹಾಕಿದ್ದ ಹಲಗೆಯ ಹಾದಿಯನ್ನು ನಾವು ದಾಟಿದೆವು. ನದಿಯಲ್ಲಿ, ಹಿಮಗೆಡ್ಡೆ ಕಲಕಲವೆನ್ನುತ್ತಾ ಉಬ್ಬುತ್ತಿತ್ತು. ಹಲಗೆಗಳ ಅಡಿಯಿಂದ, ತೆಳ್ಳಗಿನ ನೀರಪದರೊಂದು ಸುಂಯ್‌ಗುಡುತ್ತ ಹೋಗುತ್ತಿತ್ತು. ಸಂತೆ ಕಟ್ಟೆಯ ಇಗರ್ಜಿಯ, ಊದಿಕೊಂಡಿದ್ದ ಕೆಂಪುಗೋಪುರಗಳ ಮೇಲಿಂದ, ಬಂಗಾರದ ಕ್ರೂಜೆಗಳು ಮಿಂಚುತ್ತಿದ್ದುವು. ರೇಶಿಮೆ ಬಣ್ಣದ ಮೃದುವಾದ ಮರದ ರೆಂಬೆಗಳನ್ನು ಹೊತ್ತ ವಿಶಾಲ

ಮುಖದ ಹೆಂಗಸೊಬ್ಬಳು ನಮಗೆ ಇದಿರಾದಳು. ವಸಂತದ ಆಗಮನವಾಗತೊಡಗಿತ್ತು! ಬೇಗನೆ ಬರಲಿತ್ತು ಪುನರುತ್ಥಾನದ ಹಬ್ಬ!

ನನ್ನ ಹೃದಯ ಬೆಳ್ಳಕ್ಕಿಯಂತೆ ಹಾಡಿತು.

"ನಿನ್ನನ್ನು ನಾನು ಎಷ್ಟೊಂದು ಪ್ರೀತಿಸ್ತೀನಿ, ಅಜ್ಜಿ!"

ಇದರಿಂದ ಆಕೆಗೆ ಆಶ್ಚರ್ಯವೆನಿಸಲಿಲ್ಲ.

ಆಕೆ ಇಷ್ಟೇ ಅಂದಳು:

"ಅದು ಸ್ವಾಭಾವಿಕ—ನೀನು ನನ್ನ ರಕ್ತಸಂಬಂಧಿ, ಆದರೆ, ಅಪರಿಚಿತರು ಕೂಡಾ ನನ್ನನ್ನು ಪ್ರೀತಿಸ್ತಾರೇಂತ ಬಡಾಯಿ ಕೊಚ್ಕೊಳ್ಳದೇನೇ ನಾನು ಹೇಳಬಹುದು. ಪವಿತ್ರ ಕನ್ನಿಕೆಗೆ ಗೆಲುವಾಗಲಿ."

ಮುಗುಳುನಕ್ಕು ಅಜ್ಜಿ ಮಾತು ಸೇರಿಸಿದಳು:

"ಬೇಗನೆ ಆಕೆ ಇನ್ನು ಸಂತೋಷಪಡ್ತಾಳೆ—ಅವಳ ಮಗನ ಪುನುರುತ್ಥಾನವಾಗ್ತದೆ...... ಆದರೆ ನನ್ನ ಮಗಳು, ವರ್‍ಯಾಶಾ....."

ಅಷ್ಟುಹೇಳಿ ಆಕೆ ಮೌನವಾದಳು.

೨

ಅಂಗಳದಲ್ಲಿ, ಮಂಡಿಯೂರಿ ಒಂದು ಕಂಬವನ್ನು ಕೊಡಲಿಯಿಂದ ಮೊನಚುಗೊಳಿಸುತ್ತಲಿದ್ದ ಅಜ್ಜ, ನನ್ನನ್ನು ಸ್ವಾಗತಿಸಿದ. ನನ್ನ ತಲೆಯ ಕಡೆಗೆ ಎಸೆಯುವವನಂತೆ ಆತ ಕೊಡಲಿಯನ್ನೆತ್ತಿದ. ಬಳಿಕ ತನ್ನ ಟೋಪಿ ತೆಗೆಯುತ್ತ, ತುಚ್ಛೀಕಾರದಿಂದ ಅಂದ:

"ನಮ್ಮಲ್ಲಿಗೆ ಸ್ವಾಗತ, ಘನಹೊಂದಿದ ಮಹಾಪ್ರಭು! ನಿನ್ನ ಚಾಕರಿ ಮುಗಿಯಿತೆ ಹಾಗಾದರೆ? ಹುಂ. ಇನ್ನು ನಿನಗೆ ಹೇಗೆ ಸಾಧ್ಯವೆನಿಸುತ್ತೋ ಹಾಗೆ ನೀನು ಜೀವಿಸಬಹುದು. ಪೂ!"

"ಅದೆಲ್ಲಾ ನಮಗೆ ಗೊತ್ತಿದೆ," ಎಂದು ಅಜ್ಜಿ, ತನ್ನ ಕೈ ಬೀಸಿ, ಅಜ್ಜನ ಮಾತನ್ನು ತಡೆದಳು.

ಕೊಠಡಿಯನ್ನು ಹೊಕ್ಕು, ಚಾದಾನಿಯನ್ನು ಬಿಸಿಗೊಳಿಸುತ್ತಿದ್ದಂತೆ ಆಕೆ ಅಂದಳು:

"ಈ ಸಲ ನಿನ್ನ ಅಜ್ಜನನ್ನು ಪೂರ್ತಿಯಾಗಿ ದೋಚಿದ್ದಾರೆ. ತನ್ನಲ್ಲಿದ್ದ ಹಣವನ್ನೆಲ್ಲಾ ತನ್ನ ದೇವಪುತ್ರ ನಿಕೊಲಾಯಿಗ ಕೊಟ್ಟು—ಏನಾದರೂ ಉದ್ದಿಮೆಯಲ್ಲಿ ತೊಡಗಿಸೋದಕ್ಕೆ ಅಂತ. ರಶೀತಿಯನ್ನೂ ತಗೊಳ್ಲಿಲ್ಲ. ಅದು ಹೇಗಾಯಿತೋ ನನಗೆ ತಿಳೀದು. ಅಂತೂ ಅಜ್ಜ ಎಲ್ಲಾ ಕಳಕೊಂಡ್ಬಿಟ್ಟ. ಹಣವೆಲ್ಲಾ ಮಾಯವಾಯ್ತು. ಬಡವರಿಗೆ ಸಹಾಯಮಾಡದೆ, ಅದೃಷ್ಟಹೀನರ ಮೇಲೆ ಕನಿಕರ ತೋರದೆ, ಇದ್ದದ್ದರಿಂದಲೇ ಹಾಗಾಯ್ತು. ಈ ಕಾಶಿರಿನ್ನರ ವಿಷಯದಲ್ಲಿ ನಾನು ಯಾಕೆ ಒಳ್ಳೆಯವನಾಗಿರಬೇಕು?—ಅಂತ ದೇವರು ತನ್ನಷ್ಟಕ್ಕೇ ಯೋಚನೆ ಮಾಡಿದ. ಹಾಗೆ ಯೋಚಿಸಿ ದೇವರು, ಎಲ್ಲವನ್ನೂ ತಗೊಂಡ್ಬಿಟ್ಟ."

ಸುತ್ತು ಮತ್ತೊಮ್ಮೆ ದೃಷ್ಟಿ ಬೀರಿ ಆಕೆ ಮುಂದುವರಿದಳು:

"ಮುದುಕನ ಮೇಲೆ ದೇವರು ಬಹಳ ಕಠಿನನಾಗದ ಹಾಗೆ, ಆತನ ಹೃದಯವನ್ನು ಮೃದು

ಗೊಳಿಸೋದಕ್ಕೆ ನಾನು ಪ್ರಯತ್ನ ನಡೆಸಿದೀನಿ. ರಾತ್ರೆ ಹೊತ್ತು ಹೊರಗೆ ಸುತ್ತಾಡಿ, ನನ್ನ ಸಂಪಾದನೆಯಿಂದ ಒಂದಿಷ್ಟನ್ನು ತೆಗೆದು, ಮಾನದದಯೇನ ಚೆಲ್ಲಿ ಬರ್ತಿದೀನಿ. ನೀನು ಇಷ್ಟ ಪಡೋದಾದರೆ ಇವತ್ತು ರಾತ್ರೆ ಹೋಗೋಣ. ನನ್ನ ಹತ್ತಿರ ಸ್ವಲ್ಪ ಹಣವಿದೆ."

ಸಿಟ್ಟನಿಂದ ಹುಬ್ಬುಗಂಟಿಕ್ಕಿಕೊಂಡು ಅಜ್ಜ ಒಳಕ್ಕೆ ಬಂದ:

"ನುಂಗಿಹಾಕೋದಕ್ಕೆ ಏನಿದೇಂತ ನೋಡ್ತಿದೀರೋ?" ಎಂದು ಕೇಳಿದ.

"ನಿನ್ನದು ಏನೂ ನಾವು ನುಂಗಿಹಾಕ್ತಾ ಇಲ್ಲ. ಇಷ್ಟಪಡೋದಾದರೆ ನಮ್ಮ ಜತೇಲಿ ನೀನೂ ಕೂತ್ಕೋಬಹುದು. ಎಲ್ಲರಿಗೂ ಸಾಕಾಗುವಷ್ಟಿದೆ," ಎಂದಳು ಅಜ್ಜಿ.

ಆತ ಮೇಜಿನ ಬಳಿ ಕುಳಿತ.

"ನನಗೊಂದು ಕಪ್ ಚಾ ಕೊಡು," ಎಂದು ಆತ ವಿನೀತನಾಗಿ ಗೊಣಗಿದ.

ಹೆಚ್ಚಿನದೇನೂ ಬದಲಾವಣೆ ಇಲ್ಲದೆ ಕೊಠಡಿ ಮೊದಲಿನಂತೆಯೇ ಇತ್ತು. ತಾಯಿಯ ಮೂಲೆಯಲ್ಲಷ್ಟೇ ವ್ಯಥೆಹುಟ್ಟಿಸುವ ಶೂನ್ಯವಿತ್ತು. ಅಜ್ಜನ ಹಾಸಿಗೆಯ ಮೇಲ್ಗಡೆ ಗೋಡೆಯಲ್ಲಿ ತೂಗಹಾಕಿದ್ದ ಒಂದು ಕಾಗದದಲ್ಲಿ ದೊಡ್ಡ ಮುದ್ರಿತ ಅಕ್ಷರಗಳಲ್ಲಿ ಹೀಗೆ ಬರೆದಿತ್ತು:

"ಯೇಸು, ನನ್ನ ಆತ್ಮವನ್ನು ರಕ್ಷಿಸು. ಸಾವಿನ ಘಳಿಗೆಯವರೆಗೂ ನನ್ನ ಜೀವಮಾನವೆಲ್ಲಾ ನಿನ್ನ ದಯೆ ನನ್ನ ಮೇಲಿರಲಿ."

"ಅದನ್ನು ಬರೆದವರು ಯಾರು?" ಎಂದು ನಾನು ಕೇಳಿದೆ.

ಅಜ್ಜ ಉತ್ತರವೀಯಲಿಲ್ಲ. ಕೆಲಕ್ಷಣಗಳ ಮೌನದ ಬಳಿಕ ಅಜ್ಜಿ ಮುಗುಳುನಕ್ಕು ಅಂದಳು:

"ಆ ಕಾಗದಕ್ಕೆ ನೂರು ರೂಬಲುಗಳ ಮೌಲ್ಯವಿದೆ."

ಅಜ್ಜ ಕೂಗಾಡಿದ:

"ಅದು ನಿನಗೆ ಸಂಬಂಧಿಸಿದ್ದಲ್ಲ .. ನನ್ನಲ್ಲಿ ಇರೋದನ್ನೆಲ್ಲಾ ನಾನು ಅಪರಿಚಿತರಿಗೆ ಕೊಡ್ತೀನಿ!"

"ಕೊಡೋದಕ್ಕೆ ಇನ್ನೇನೂ ಉಳಿದಿಲ್ಲ. ಇದ್ದಾಗ, ನೀನು ಕೈ ಬಿಚ್ಚಲಿಲ್ಲ," ಎಂದಳು ಅಜ್ಜಿ, ಶಾಂತವಾಗಿ.

"ಸುಮ್ನಿರು!" ಎಂದು ಅಜ್ಜ ಕಿರಿಚಿದ.

ಪ್ರತಿಯೊಂದೂ ಇರಬೇಕಾದಂತೆಯೇ ಇತ್ತು, ಹಿಂದಿನಂತೆಯೇ ಇತ್ತು.

ಮೂಲೆಯಲ್ಲಿ ಟ್ರಂಕಿನ ಮೇಲಿರಿಸಿದ್ದ ತನ್ನ ಬಟ್ಟೆಯ ಬುಟ್ಟಿಯಿಂದ ಕೋಲ್ಯಾ ಎಚ್ಚತ್ತ. ಆತನ ಕಣ್ಣುಗಳ ನೀಲಿ ಹೊಳೆತ, ಭಾರವಾದ ರೆಪ್ಪೆಗಳ ಅಡಿಯಿಂದ ಅಷ್ಟಾಗಿ ಕಾಣಿಸುತ್ತಿರಲಿಲ್ಲ. ಆತನ ಮೈ ಮತ್ತಷ್ಟು ಬೂದು ಬಣ್ಣಕ್ಕೆ ತಿರುಗಿತ್ತು. ಯಾವುದರಲ್ಲೂ ಆತನಿಗೆ ಆಸಕ್ತಿ ಇರಲಿಲ್ಲ. ಅಲ್ಪಾಯುವಿನಂತಿದ್ದ. ನನ್ನನ್ನು ಗುರುತಿಸದೆಯೇ ಆತ, ಮೌನವಾಗಿ ಬೇರೆಕಡೆ ತಿರುಗಿ ಕಣ್ಣುಗಳನ್ನು ಮುಚ್ಚಿಕೊಂಡ.

ಹೊರಗೆ ಬೀದಿಯಲ್ಲಿ ಸುದ್ದಿ ಸಿಕ್ಕಿತು. ವ್ಯಾಖಿರ್ ಸತ್ತಿದ್ದ. ಕ್ರಿಸ್ತನನ್ನು ಶಿಲುಬೆಗೆ ಏರಿಸಿದ ವಾರ. ಆತನನ್ನು 'ಸಿಡುಬು ಒಯ್ದುಬಿಟ್ಟಿತ್ತು'. ಖಾಬಿ ಶಹರಕ್ಕೆ ಹೊರಟು ಹೋಗಿದ್ದ. ಯಾಜ್‌ನ ಕಾಲುಗಳೆರಡೂ ಸನ್ನಿಯಿಂದ ನಿಷ್ಪ್ರಯೋಜಕವಾಗಿ, ಆತ ಮನೆಬಿಟ್ಟು ಹೊರಡುವಂತಿರಲಿಲ್ಲ. ಇದನ್ನೆಲ್ಲ ನನಗೆ ತಿಳಿಸುತ್ತಾ, ಕರಿದು ಕಣ್ಣುಗಳ ಕೊಸ್ಟ್ರೋಮಾ ಸಿಟ್ಟನಿಂದ ಅಂದ:

"ಹುಡುಗರು ಬಹಳ ಬೇಗನೆ ಸತ್ತುಹೋಗ್ತಾರೆ!"

"ಸತ್ತಿರೋದು ವ್ಯಾಖಿರ್ ಒಬ್ಬನೇ."

"ಎಲ್ಲಾ ಒಂದೇ. ಬೀದಿ ಬಿಟ್ಟು ಒಬ್ಬ ಹೊರಟುಹೋದ ಮೇಲೆ ಆತ ಸತ್ತಂತೆಯೇ. ನೀನು ಸ್ನೇಹ ಬೆಳೆಸ್ಕೊಂಡು ಒಬ್ಬನ ಆಪ್ತನಾಗೋ ಹೊತ್ತಿಗೆ, ಆತನನ್ನು ದುಡಿಯೋದಕ್ಕೆ ಕಳಿಸ್ತಾರೆ; ಇಲ್ಲವೆ ಆತ ಸತ್ತು ಹೋಗ್ತಾನೆ. ನಿನ್ನ ಹಿತ್ತಿಲಿನ ಚೆಸ್ನಕೋವರಲ್ಲಿಗೆ ಕೆಲಹೊಸಬರು ಬಂದಿದಾರೆ—ಯೆವ್ಸೆಯೆಂಕೋವರು ಅಂತ. ಅವರಿಗೊಬ್ಬ ನುಷ್ಕಾ ಅನ್ನೋ ಹೆಸರಿನ ಹುಡುಗ ಇದಾನೆ. ಆತ ಪರವಾಗಿಲ್ಲ, ಸಾಕಷ್ಟು ಜಾಣ. ಇಬ್ಬರು ಹುಡುಗೀರಿದ್ದಾರೆ. ಅವರಲ್ಲೊಬ್ಬಳು ಚಿಕ್ಕವಳು, ಇನ್ನೊಬ್ಬಳು ಕುಂಟಿ. ಊರುಗೋಲಿನ ಆಧಾರದ ಮೇಲೆ ನಡೀತಾಳೆ. ಆಕೆ ನೋಡೋದಕ್ಕೆ ಚೆನ್ನಾಗಿದಾಳೆ."

ಒಂದು ನಿಮಿಷ ತನ್ನೊಳಗೇ ಯೋಚಿಸಿ ಆತ ಮಾತು ಸೇರಿಸಿದ:

"ನಾನು ಮತ್ತು ಚುರ್ಕಾ ಆಕೇನಾ ಪ್ರೀತಿಸ್ತೀವಿ. ಇಬ್ಬರೂ ಯಾವಾಗಲೂ ಜಗಳಾಡ್ತಾನೇ ಇರ್‍ತೀವಿ."

"ಆಕೆ ಜತೇಲಿ ಜಗಳಾಡ್ತೀರಾ?"

"ಇಲ್ಲವಪ್ಪ. ನಮ್ಮ ನಮ್ಮೊಳಗೆ. ಆಕೆ ಜತೇಲಿ ಯಾವತ್ತೂ ಇಲ್ಲ."

ದೊಡ್ಡ ಹುಡುಗರು-ವಯಸ್ಕರಾದವರು ಕೂಡಾ-ಪ್ರೇಮಿಸುವ ವಿಷಯ ನನಗೆ ಗೊತ್ತಿತ್ತು. ಪ್ರೇಮ ಅಂದರೇನೆಂಬುದು, ಅದರ ಒರಟು ಸ್ವರೂಪ, ನನಗೆ ತಿಳಿದಿತ್ತು. ಆದರೆ ಈಗ ನನಗೆ ಕೆಡು ಕೆನಿಸಿತು. ಕೊಸ್ಟ್ರೋಮಾನ ಬಗೆಗೆ ನಾನು ಕನಿಕರ ತಳೆದೆ. ಆತನ ಅಡ್ಡಾದಿಡ್ಡಿಯಾದ ಮೈಕಟ್ಟು ಮತ್ತು ಉರಿದುಕರಗುತ್ತಿದ್ದ ಕರಿಯ ಕಣ್ಣುಗಳು, ಯಾಕೋ ನನ್ನನ್ನು ಕಸಿವಿಸಿಗೆ ಗುರಿ ಮಾಡಿದುವು.

ಕುಂಟಹುಡುಗಿಯನ್ನು ಆ ಸಂಜೆಯೇ ನಾನು ನೋಡಿದೆ. ಅಂಗಳದಲ್ಲಿ ಮೆಟ್ಟಲುಗಳನ್ನು ಇಳಿಯುತ್ತಿದ್ದಾಗ ಆಕೆಯ ಊರುಗೋಲು ಬಿದ್ದುಬಿಟ್ಟಿತು. ದುರ್ಬಲಳಾದ, ತೆಳುಶರೀರದ, ಆಕೆ ಅಸಹಾಯಳಾಗಿ, ಮೇಣದಂತಹ ಬೆರಳುಗಳಿಂದ ಕಂಬಿಯನ್ನೇ ಆಸರೆಯಾಗಿ ಹಿಡಿದು, ಅಲ್ಲಿ ನಿಂತಳು. ಊರುಗೋಲನ್ನು ಎತ್ತಿಕೊಡಲು ನಾನು ಯತ್ನಿಸಿದೆ. ಆದರೆ, ನನ್ನ ಕೈಗಳಲ್ಲಿದ್ದ ಬ್ಯಾಂಡೇಜುಗಳು ಅಡ್ಡಿಯಾದುವು ಬಹಳ ಹೊತ್ತು, ನನ್ನ ಅವಸ್ಥೆಗಾಗಿ ನಾನೇ ಸಿಟ್ಟುಗೊಳ್ಳುತ್ತ, ಒದ್ದಾಡಿದೆ. ನನಗಿಂತ ಮೇಲ್ಗಡೆ ಮೃದುವಾಗಿ ನಗುತ್ತ ಆಕೆ ನಿಂತಳು.

"ನಿನ್ನ ಕೈಗಳಿಗೆ ಏನಾಗಿದೆ?" ಎಂದು ಆಕೆ ಕೇಳಿದಳು.

"ಸುಟ್ಟುಕೊಂಡಿದ್ದೇನೆ"

"ನಾನು ಕುಂಟಿ. ನಮ್ಮ ಹಿತ್ತಿಲಲ್ಲೇ ನೀನು ವಾಸಿಸ್ತೀಯಾ? ಆಸ್ಪತ್ರೆಯಲ್ಲಿ ಬಹಳಕಾಲ ಇದ್ದೆಯೇನು? ನಾನೇನೋ ಬಹಳ ದೀರ್ಘಕಾಲ," ಎಂದು ಹೇಳಿ ಆಕೆ ನಿಟ್ಟುಸಿರುಬಿಟ್ಟಳು. ಆಕೆ, ಹಳೆಯದಾದ—ಆದರೆ ಹೊಸತಾಗಿ ಗಂಜಿ ಹಾಕಿದ್ದ—ನೀಲಿ ಲಾಳಗಳ ಚಿತ್ರವಿದ್ದ ಬಿಳಿಯ ಉಡುಪನ್ನು ಧರಿಸಿದ್ದಳು. ನುಣ್ಣಗೆ ಬಾಚಿದ್ದ ತಲೆಗೂದಲು, ಪುಟ್ಟ ದಪ್ಪನೆಯ ಜಡೆ ಯಾಗಿ ಆಕೆಯ ಎದೆಯ ಮೇಲೆ ಇಳಿದಿತ್ತು. ಕಣ್ಣುಗಳು ವಿಶಾಲವಾಗಿದ್ದುವು, ಗಂಭೀರವಾಗಿ ದ್ದುವು. ತಮ್ಮ ಶಾಂತವಾದ ಆಳದಲ್ಲಿ ಉರಿಯುತ್ತ, ಆಕೆಯ ಮುದುಡಿಕೊಂಡಿದ್ದ ನಿಸ್ತೇಜ

ಮುಖವನ್ನು ಬೆಳಗುತ್ತಿದ್ದುವು. ಆಕೆಯ ಕಾಹಿಲೆಯ ಶರೀರವಿಡೀ, "ದಯವಿಟ್ಟು ನನ್ನನ್ನು ಮುಟ್ಟಬೇಡಿ," ಎಂದು ಹೇಳುವಂತೆ ಭಾಸವಾಗುತ್ತಿತ್ತು.

ಆಕೆಯಲ್ಲಿ ನನ್ನ ಸಂಗಾತಿಗಳಿಗೆ ಹೇಗಾದರೂ ಪ್ರೇಮ ಉಂಟಾಯಿತೊ?

"ಬಹಳ ಕಾಲದಿಂದ ನನಗೆ ಕಾಹಿಲೆ," ಎಂದು ಆಕೆ ತಡಮಾಡದೆ ನನಗೆ ತಿಳಿಸಿದಳು. ಹೆಮ್ಮೆಯ ಛಾಯೆಯೂ ಇತ್ತು ಆ ಸ್ವರದಲ್ಲಿ. "ನಮ್ಮ ನೆರೆಮನೆಯವಳು ನನಗೆ ಮಾಟ ಮಾಡಿದ್ಲು. ಆಕೆಗೂ ನನ್ನ ತಾಯಿಗೂ ಒಮ್ಮೆ ಜಗಳವಾಯ್ತು. ಹೀಗಾಗಿ ತಾಯಿನ ದಂಡಿಸೋದಕ್ಕೆ ಅಂತ ನನಗೆ ಆಕೆ ಮಾಟ ಮಾಡಿದ್ಲು. ಆಸ್ಪತ್ರೆಯಲ್ಲಿ ಭಯಂಕರವಾಗಿತ್ತೆ?"

"ಹೌದು."

ಆಕೆಯ ಸಾನ್ನಿಧ್ಯದಲ್ಲಿ ನನಗೆ ಹೇಗೆ ಹೇಗೋ ಎನಿಸಿ, ನಾನು ಒಳಹೋದೆ.

ಮಧ್ಯರಾತ್ರಿಯ ಹೊತ್ತಿಗೆ ಅಜ್ಜಿ ನನ್ನನ್ನು ಎಬ್ಬಿಸಿದಳು.

"ಹೋಗೋಣವಾ? ಪರರಿಗೆ ನೀನು ಒಳ್ಳೇದು ಮಾಡಿದರೆ, ನಿನ್ನ ಕೈಗಳು ಬೇಗನೆ ಗುಣವಾಗ್ತವೆ."

ನಾನು ಕುರುಡನೇನೋ ಎನ್ನುವಂತೆ ನನ್ನ ತೋಳನ್ನು ಹಿಡಿದುಕೊಂಡು, ಕತ್ತಲೆಯ ಹಾದಿಯಾಗಿ ಆಕೆ ನಡೆದಳು. ಇರುಳು ಕರಿದಾಗಿತ್ತು. ತೇವ ತುಂಬಿದ ಚಳಿ ಇತ್ತು. ವೇಗವಾಗಿ ಹರಿಯುವ ನದಿಯಂತೆ ಒಂದೇ ಸಮನೆ ಬೀಸುತ್ತಿತ್ತು ಗಾಳಿ. ತಣ್ಣನೆಯ ಮರಳು ನಮ್ಮ ಪಾದಗಳನ್ನು ಕೊರೆಯುತ್ತಿತ್ತು. ಶಹರನಿವಾಸಿಗಳ ಮನೆಗಳ ಬೆಳಕಿಲ್ಲದ ಕಿಟಕಿಗಳನ್ನು ಬಲು ಎಚ್ಚರಿಕೆಯಿಂದ ಅಜ್ಜಿ ಸಮೀಪಿಸುತ್ತಿದ್ದಳು. ಮೂರು ಬಾರಿ ಶಿಲುಬೆಯ ವಂದನೆ ಮಾಡುತ್ತಿದ್ದಳು. ಐದು ಕೊಪೆಕ್‌ಗಳನ್ನೂ ಮೂರು ಬಿಸ್ಕತ್ತುಗಳನ್ನೂ ಕಿಟಕಿದಂಡೆಯ ಮೇಲೆ ಇರಿಸಿ, ನಕ್ಷತ್ರಗಳಿಲ್ಲದ ಆಕಾಶದ ಕಡೆಗೆ ಕಣ್ಣುಗಳನ್ನೆತ್ತಿ ನೋಡುತ್ತಾ, ಮತ್ತೊಮ್ಮೆ ಶಿಲುಬೆಯ ವಂದನೆಮಾಡಿ, ಪಿಸುಗುಟ್ಟಿದಳು:

"ಸ್ವರ್ಗದ ಪವಿತ್ರ ರಾಣಿಯೇ, ಎಲ್ಲ ಜನರಿಗೂ ಸಹಾಯ ಮಾಡು; ಯಾಕೆಂದರೆ, ನಿನ್ನ ದೃಷ್ಟಿಯಲ್ಲಿ ನಾವೆಲ್ಲರೂ ಪಾಪಿಗಳೇ, ಓ ಪೂಜ್ಯಮಾತೆ."

ನಮ್ಮ ಮನೆಯಿಂದ ನಾವು ದೂರ ಹೋದಷ್ಟೂ, ಪ್ರತಿಯೊಂದೂ ಮತ್ತಷ್ಟು ಕಪ್ಪಗಾಗಿ ನಿರ್ಜನವಾಗಿ ಕಂಡಿತು. ರಾತ್ರಿಯ ಆಕಾಶದ ತಳವರಿಯದ ಆಳದಲ್ಲಿ ಚಂದ್ರನೂ ನಕ್ಷತ್ರಗಳೂ ಎಂದೆಂದೂ ಹೊರಬರದ ಹಾಗೆ ಮುಳುಗಿಯೇ ಹೋಗಿದ್ದಂತೆ ಅನಿಸುತ್ತಿತ್ತು. ನಾಯಿಯೊಂದು ಹೊರಕ್ಕೆ ಓಡಿಬಂದು ನಮ್ಮ ಕಡೆ ನೋಡಿ ಬಗುಳುತ್ತ ನಿಂತಿತು.

ನಾನು ಹೆದರಿ ಅಜ್ಜಿಗೆ ಅಂಟಿಕೊಂಡೆ.

ಅಜ್ಜಿ ಅಂದಳು:

"ಹೆದರಬೇಡ. ಅದು ಬರೀ ನಾಯಿ. ಪಿಶಾಚಿ ಕಾಣಿಸ್ಕೊಳ್ಳೋದಕ್ಕೆ ವೇಳೆ ಮೀರಿದೆ. ಕೋಳಿಗಳು ಆಗಲೇ ಕೂಗಿಬಿಟ್ಟಿವೆ."

ಆಕೆ ನಾಯಿಯನ್ನು ಹತ್ತಿರಕ್ಕೆ ಕರೆದು, ಅದರ ತಲೆಯನ್ನು ತಟ್ಟಿ, ಅಂದಳು:

"ನಾಯಿಮಾ, ನನ್ನ ಮೊಮ್ಮಗನನ್ನು ಹೆದರಿಸಬೇಡವಪ್ಪ!"

ನಾಯಿ ತನ್ನ ಮೈಯನ್ನು ನನ್ನ ಕಾಲುಗಳಿಗೆ ತೀಡಿತು. ನಾವು ಮೂವರೂ ಮುಂದಕ್ಕೆ

ನಡೆದೆವು. ತನ್ನ 'ಮೌನದ ದಯೆ'ಯನ್ನು ದಂಡೆಯ ಮೇಲಿರಿಸಲು, ಅಜ್ಜಿ ಹನ್ನೆರಡು ಸಾರಿ ಕಿಟಿಕಿಗಳ ಬಳಿ ಸಾರಿದಳು. ಆಕಾಶ ಪ್ರಕಾಶಮಾನವಾಯಿತು. ಆ ಕತ್ತಲಲ್ಲಿ ಬೂದು ಮನೆಗಳು ಎದ್ದು ಕಾಣಿಸಿದುವು. ನಪೋಲ್ನಾಯಾ ಇಗರ್ಜಿಯ ಗಂಟೆಗೋಪುರ ಸಕ್ಕರೆಯಷ್ಟು ಬೆಳ್ಳಗಾಯಿತು. ಸ್ಮಶಾನದ ಇಟ್ಟಿಗೆ ಗೋಡೆ, ಹೆಣೆದ ಬೇಲಿಯ ಹಾಗೆ, ಬೆಳಕನ್ನು ಹೊರಸೂಸುತ್ತಿದ್ದಂತೆ ಭಾಸವಾಯಿತು.

ನನ್ನ ಅಜ್ಜಿ ಅಂದಳು:

"ನಿನ್ನ ಮುದಿ ಅಜ್ಜಿಗೆ ಆಯಾಸವಾಗಿದೆ. ಹೊತ್ತಾಯಿತು. ಮನೆಗೆ ಹೋಗಬೇಕು ನಾವಿನ್ನು. ಹೆಂಗಸರು ಬೆಳಗ್ಗೆ ಎದ್ದಾಗ, ಪವಿತ್ರ ಕನ್ನಿಕೆ ಮಕ್ಕಳಿಗೋಸ್ಕರ ದಂಡೆಯ ಮೇಲೆ ಒಂದು ಚೂರು ಬಿಟ್ಟುಹೋಗಿರೋದನ್ನು ಕಾಣ್ತಾರೆ. ಸಾಕಷ್ಟು ಎಲ್ಲರಿಗೂ ಇಲ್ಲದಿರುವಾಗ, ಒಂದು ಚೂರು ಕೂಡಾ ಸ್ವಾಗತಾರ್ಹವೇ. ಆ—ಅಲ್ಯೋಶಾ, ಜನರು ಜೀವಿಸ್ತಿರೋ ಬದುಕು ಬಡತನದ್ದು. ಅವರನ್ನು ನೋಡ್ಕೊಳ್ಳೋದಕ್ಕೆ ಯಾರೂ ಇಲ್ಲ!

"ದೇವರ ಸ್ಮರಣೆಯೆ ಇಲ್ಲಿ ಸಿರಿವಂತನಿಗೆ,
ಕೊನೆ ದಿನದ ಪಾವನ ಪದದ ನೆನಪಿಲ್ಲ ಆತನಿಗೆ;
ಬಡವರ ಬಗೆಗೆ ಆ ಹೃದಯ ತಣ್ಣಗೆ,
ದೃಷ್ಟಿಯೆಲ್ಲಾ ಬಂಗಾರದ ಕಡೆಗೆ;
ನರಕದಿ ಉರಿಯಲು ಸ್ವರ್ಣಾಗ್ನಿಯೆ ಅವನಿಗೆ!"

"ಇದೇ ದುರದೃಷ್ಟಕರ ವಿಷಯ. ಒಬ್ಬರು ಇನ್ನೊಬ್ಬರನ್ನು ರಕ್ಷಣೆ ಮಾಡ್ಕೊಂಡು ನಾವು ಬದುಕಬೇಕು. ದೇವರು ನಮ್ಮೆಲ್ಲರನ್ನೂ ರಕ್ಷಿಸ್ತಾನೆ. ಅಂತೂ ಪುನಃ ನೀನು ನನ್ನ ಪಕ್ಕದಲ್ಲೇ ಇದೀಯಾ ಅಂತ ನನಗೆ ಸಂತೋಷವಾಗಿದೆ."

ಶಾಂತವಾದ ರೀತಿಯಲ್ಲಿ ನನಗೂ ಸಂತೋಷವಾಗಿತ್ತು. ನಾನೆಂದೂ ಮರೆಯಬಾರದಂತಹ ಯಾವುದೋ ಒಂದರ ಜತೆಗೆ ನನ್ನ ಸಂಪರ್ಕವಿತ್ತೆಂದು, ಅಸ್ಪಷ್ಟವಾಗಿ ನನಗೆ ಭಾಸವಾಗುತ್ತಿತ್ತು. ದಯಾಪೂರ್ಣವಾದ ಕ್ಷಮಾಯಾಚನೆಯ ಕಣ್ಣುಗಳ, ನರಿಮುಖದ, ಬಾದಾಮಿ ಬಣ್ಣದ ನಾಯಿ, ನನ್ನ ಮಗ್ಗುಲಲ್ಲೇ ಮೆಲ್ಲನೆ ನಡೆದಿತ್ತು.

"ಈ ನಾಯಿ ನಮ್ಮ ಜತೇಲಿ ವಾಸವಾಗಿರುತ್ತೊ?" ಎಂದು ನಾನು ಕೇಳಿದೆ.

"ಅದು ಇಷ್ಟಪಡೋದಾದರೆ ಯಾಕಾಗಬಾರದು? ಎಲ್ಲಿ, ಅದಕ್ಕೊಂದು ಬಿಸ್ಕತ್ತು ಕೊಡ್ತೀನಿ —ಇನ್ನೂ ನನ್ನ ಹತ್ತಿರ ಎರಡು ಉಳಿದಿವೆ. ಈ ಬೆಂಚಿನ ಮೇಲೆ ಸ್ವಲ್ಪ ಹೊತ್ತು ಕೂತಿರೋಣ. ಯಾಕೋ ಬಹಳ ಆಯಾಸವಾದಂತಿದೆ."

ಒಂದು ಗೇಟಿನ ಬಳಿಯಲ್ಲಿದ್ದ ಬೆಂಚಿನ ಮೇಲೆ ನಾವು ಕುಳಿತೆವು. ನಾಯಿ, ಒಣಬಿಸ್ಕತ್ತನ್ನು ಕಡಿಯುತ್ತಾ ನಮ್ಮ ಪಾದಗಳ ಬಳಿ ಬಿದ್ದುಕೊಂಡಿತು.

"ಇಲ್ಲೊಬ್ಬಳು ಯೆಹೂದಿ ವಾಸವಾಗಿದ್ದಾಳೆ. ಒಂಭತ್ತು ಜನ ಮಕ್ಕಳು ಅವಳಿಗೆ. ಒಂದಕ್ಕಿಂತ ಇನ್ನೊಂದು ಚಿಕ್ಕದು. 'ಹೇಗೆ ಜೀವಿಸ್ತಿದೀಯಾ, ಮೊಸಿಯಿವ್ನಾ?' ಅಂತ ನಾನು ಕೇಳಿದರೆ, 'ನನ್ನ ದೇವರ ಜತೆ ಜೀವಿಸ್ತೀನಿ; ಬೇರೆ ಹೇಗೆ ಬದುಕಿರೋದು ಸಾಧ್ಯ?' ಅಂತಾಳೆ.

ಕೆಲಕ್ಷಣಗಳಲ್ಲೇ, ಅಜ್ಜಿಯ ಬೆಚ್ಚಗಿನ ಮೈಗೆ ಒತ್ತಾಗಿ ಮುರುಟಿಕೊಂಡು ನಾನು ನಿದ್ದೆ ಹೋದೆ.

* * *

ಮತ್ತೊಮ್ಮೆ ಬದುಕು, ವೇಗವಾಗಿ, ತುಂಬಿಕೊಂಡು ಹರಿಯಿತು. ಪ್ರತಿಯೊಂದು ಹೊಸ ದಿನದ ಹಿರಿತೊರೆ, ವಿನೂತನ ಭಾವಗಳಿಂದ ನನ್ನ ಆತ್ಮವನ್ನು ತುಂಬಿದುವು; ಆ ಭಾವಗಳು ನನ್ನನ್ನು ಆನಂದತುಂದಿಲನಾಗಿ ಮಾಡಿದುವು, ಗಾಬರಿಗೊಳಿಸಿದುವು, ನೋಯಿಸಿದುವು, ಇಲ್ಲವೆ ನನ್ನನ್ನು ಯೋಚನಾಪರನನ್ನಾಗಿ ಮಾಡಿದುವು.

ಕುಂಟ ಹುಡುಗಿಯನ್ನು ಸಾಧ್ಯವಾದಷ್ಟು ಸಲ ಆಗಿಂದಾಗ್ಗೆ ನೋಡುತ್ತಿರಬೇಕೆಂಬ, ಆಕೆಯ ಜತೆ ಮಾತನಾಡಬೇಕೆಂಬ, ಇಲ್ಲವೆ ಗೇಟಿನ ಬಳಿ ಇದ್ದ ಬೆಂಚಿನ ಮೇಲೆ ಆಕೆಯ ಪಕ್ಕದಲ್ಲಿ ಮೌನವಾಗಿ ಸುಮ್ಮನೆ ಕುಳಿತಿರಬೇಕೆಂಬ, ಬಯಕೆ ನನ್ನಲ್ಲೂ ಬೇಗನೆ ತುಂಬಿಕೊಂಡಿತು. ಆಕೆಯ ಸಹವಾಸದಲ್ಲಿ ಮೌನವಾಗಿರುವುದೂ ಒಂದು ಸುಖವೆನಿಸುತ್ತಿತ್ತು. ಆಕೆ ಹಕ್ಕಿಯಂತೆ ಸ್ವಚ್ಛ ವಾಗಿದ್ದಳು. ಡಾನ್ ದಂಡೆಗಳ ಮೇಲಣ ಕೊಸ್ಸಾಕರ ಬದುಕನ್ನು ಆಶ್ಚರ್ಯಕರ ರೀತಿಯಲ್ಲಿ ಆಕೆ ಬಣ್ಣಿಸುತ್ತಿದ್ದಳು. ಅಲ್ಲಿ, ಬೆಣ್ಣೆ ತಯಾರಿಸುವ ಕಾರ್ಖಾನೆಯಲ್ಲಿ ಮೆಕ್ಯಾನಿಕ್ ಆಗಿದ್ದ ತನ್ನ ಚಿಕ್ಕಪ್ಪನ ಜತೆ, ಬಹಳಕಾಲ ವಾಸವಾಗಿದ್ದವಳು ಆಕೆ. ಬಳಿಕ ಆಕೆಯ ತಂದೆ—ಒಬ್ಬ ಫಿಟ್ಟರ್—ನಿಜ್ನಿ-ನೊವೊಗೊರೋಡಿಗೆ ಬಂದು ನೆಲೆಸಿದ್ದ.

"ಸ್ವತಃ ಜಾರ್‌ಚಕ್ರವರ್ತಿಗೋಸ್ಕರ ಕೆಲಸಮಾಡುವ ಇನ್ನೊಬ್ಬ ಚಿಕ್ಕಪ್ಪ ನನಗಿದಾನೆ," ಎನ್ನುತ್ತಿದ್ದಳು ಹುಡುಗಿ.

ರಜಾ ದಿನಗಳಲ್ಲಿ ಸಂಜೆ, ಬೀದಿಯ ತಮ್ಮ ಮನೆಗಳಿಂದೆಲ್ಲ ಜನರು ಹೊರಬರುತ್ತಿದ್ದರು. ಎಳೆವಯಸ್ಸಿನ ಹುಡುಗರೂ ಹುಡುಗಿಯರೂ ಸ್ಮಶಾನಕ್ಕೆ ಹಾಡುತ್ತ ವಿಹಾರ ಹೋಗುತ್ತಿದ್ದರು. ಗಂಡಸರು ಪಾನಮಂದಿರಗಳಿಗೆ ಸಾಗುತ್ತಿದ್ದರು. ಬೀದಿಯಲ್ಲಿ ಉಳಿಯುತ್ತಿದ್ದುದು, ಹೆಂಗಸರು ಮತ್ತು ಮಕ್ಕಳು ಮಾತ್ರ. ಹೆಂಗಸರು, ಗೇಟುಗಳ ಬಳಿ ಇರುತ್ತಿದ್ದ ಬೆಂಚುಗಳ ಮೇಲೆ ಆಸೀನ ರಾಗಿ, ಇಲ್ಲವೆ ಅಲ್ಲಿಯೇ ಇದ್ದ ಮರಳಿನ ಮೇಲೆಯೇ ಕುಳಿತು, ತಮ್ಮ ಕಲಹಗಳಿಂದಲೂ ಹರಟೆ ಗಳಿಂದಲೂ ಮಹಾ ಗದ್ದಲ ಎಬ್ಬಿಸುತ್ತಿದ್ದರು. ಹುಡುಗರು ಚೆಂಡಾಟವನ್ನೋ, ಒಂಭತ್ತು ಪಿನ್ನುಗಳನ್ನಿರಿಸಿ ಚೆಂಡಿನಿಂದ ಹೊಡೆಯುವ ಸ್ಕಿಟ್ಲ್ ಆಟವನ್ನೋ, 'ಶರ್ಮಾಜ್ಕೊ' ಆಟವನ್ನೋ ಆಡುತ್ತಿದ್ದರು. ಅವರ ತಾಯಂದಿರು, ಜಾಣ್ಮೆಗಾಗಿ ಮಕ್ಕಳನ್ನು ಹೊಗಳುತ್ತಿದ್ದರು; ಇಲ್ಲವೆ, ಅವರ ಅಸಾಮರ್ಥ್ಯಕ್ಕಾಗಿ ಛೇಡಿಸುತ್ತಿದ್ದರು. ವಯಸ್ಕರ ಸಾನ್ನಿಧ್ಯದಿಂದಲೂ ಗಮನದಿಂದಲೂ ಹುಡುಗರು ಉದ್ರಿಕ್ತರಾಗುತ್ತಿದ್ದರು. ಹೀಗಾಗಿ ನಾವು, ವ್ಯಗ್ರತಲ್ಲೀನತೆಯಿಂದಲೂ ಸ್ಪರ್ಧಾ ಬುದ್ಧಿಯಿಂದಲೂ ಆಡುತ್ತಿದ್ದೆವು. ಆಟದಲ್ಲಿ ಕೊಸ್ರ್ಟ್ಯೊಮಾ, ಚುರ್ಕಾ ಮತ್ತು ನನ್ನ ತಲ್ಲೀನತೆ ಎಷ್ಟೇ ಇರಲಿ, ಕುಂಟ ಹುಡುಗಿಯ ಬಳಿಗೆ ಓಡಿ ಹೋಗಿ ನಮ್ಮ ಸಾಹಸದ ವಿಷಯ ಬಡಾಯಿ ಕೊಚ್ಚಲು ನಮಗೆ ಸಮಯ ಸಿಕ್ಕಿಯೇ ಸಿಗುತ್ತಿತ್ತು:

"ಒಂಭತ್ತು ಪಿನ್ನುಗಳನ್ನೆಲ್ಲಾ ಒಂದೇ ಸಲಕ್ಕೆ ನಾನು ಉರುಳಿಸಿದ್ದನ್ನು ನೋಡಿದಿಯಾ ಲುದ್ಮಿಲ್ಲಾ?"

ಆಕೆ ಮಧುರವಾಗಿ ಮುಗುಳುನಕ್ಕು ತಲೆಯನ್ನೆ ಅತ್ತಿತ್ತ ಕುಣಿಸುತ್ತಿದ್ದಳು.

ಹಿಂದೆ ಆಟದಲ್ಲಿ, ನಮ್ಮ ಗುಂಪು ಯಾವಾಗಲೂ ಒಂದೇಕಡೆ ಇರಲು ಯತ್ನಿಸುತ್ತಿತ್ತು. ಆದರೆ ಈಗ, ಕೊಸ್ತ್ರೊವಾ ಮತ್ತು ಚುರ್ಕಾ ಎದುರುಬದುರಾಗಿರಲು ಅಪೇಕ್ಷಿಸುತ್ತಿದ್ದರು. ಶಕ್ತಿಯಲ್ಲೂ ಜಾಣ್ಮೆಯಲ್ಲೂ- ಕಾದಾಡಿ ಕಣ್ಣೀರು ಸುರಿಸುವವರೆಗೂ ಕೂಡಾ-ಒಬ್ಬರಿಗೆ ಇದಿರಾಗಿ ಇನ್ನೊಬ್ಬರು ಸೆಣಸಾಡುತ್ತಿದ್ದರು. ಒಂದು ದಿನ ಅವರ ಕಾದಾಟ ಎಷ್ಟೊಂದು ವ್ಯಗ್ರವಾಯಿತೆಂದರೆ, ಹಿರಿಯರು ಮಧ್ಯೆ ಪ್ರವೇಶಿಸಬೇಕಾಯಿತು. ಅವರು ನಾಯಿಗಳೆನ್ನುವಂತೆ ಇಬ್ಬರ ಮೇಲೆಯೂ ನೀರು ಸುರಿದು, ಹೊಡೆದಾಟ ನಿಲ್ಲಿಸಿದರು.

ಆ ಕಾದಾಟ ನಡೆಯುತ್ತಿದ್ದಾಗ, ಬೆಂಚಿನ ಮೇಲೆ ಕುಳಿತಿದ್ದ ಲುದ್ಮಿಲ್ಲಾ, ತನ್ನ ಸರಿಯಾಗಿದ್ದ ಪಾದದಿಂದ ನೆಲವನ್ನು ತುಳಿಯುತ್ತಿದ್ದಳು. ಕಾದಾಡುತ್ತಿದ್ದವರು ತನ್ನೆಡೆಗೆ ಸರಿದಾಗಲೆಲ್ಲ, ತನ್ನ ಊರುಗೋಲಿನಿಂದ ಅವರನ್ನು ದೂರಕ್ಕೆ ನೂಕುತ್ತಾ, "ಸಾಕು! ನಿಲ್ಲಿಸಿ!" ಎಂದು ಭಯಭೀತಳಾಗಿ ಕೂಗುತ್ತಿದ್ದಳು.

ಅಪಸ್ಮಾರಕ್ಕೆ ತುತ್ತಾದವಳಂತೆ ಆಕೆಯ ಮುಖ ವಿವರ್ಣವಾಗಿ, ಕಣ್ಣುಗಳಿಗೆ ಮಂಜು ಕವಿದು, ಕಣ್ಣಗೊಂಬೆಗಳು ಮೇಲಕ್ಕೆ ಹೋಗುತ್ತಿದ್ದುವು.

ಬೇರೊಂದು ಸಾರೆ, ಸ್ಕಿಟ್ಲ್ ಆಟದಲ್ಲಿ ಚುರ್ಕಾನ ಕೈಯಲ್ಲಿ ಸಂಪೂರ್ಣವಾಗಿ ಸೋತ ಕೊಸ್ತ್ರೊವಾ, ಒಂದು ತರಕಾರಿ ಅಂಗಡಿಯಲ್ಲಿ ಓಟ್ ಧಾನ್ಯದ ಪೆಟ್ಟಿಗೆಯ ಹಿಂದೆ ಮುದುಡಿ ಕುಳಿತು, ಸದ್ದಿಲ್ಲದೆ ಅಳತೊಡಗಿದ. ಹೆದರಿಕೆ ಹುಟ್ಟಿಸುವ ಹಾಗಿತ್ತು ಆ ದೃಶ್ಯ. ದವಡೆಯ ಸ್ನಾಯುಗಳು ಊದಿಕೊಂಡು, ತೆಳ್ಳಗಿನ ಮುಖ ಕಲ್ಲಾದಂತೆ ಕಾಣಿಸಿದವರೆಗೂ ಆತ ಹಲ್ಲುಗಳನ್ನು ಔಡುಗಚ್ಚಿದ. ಆತನ ಕರಿಯ ಯೋಚನಾಮಗ್ನ ಕಣ್ಣುಗಳಿಂದ ಗಾತ್ರದ ಕಂಬನಿಗಳು ಉರುಳಿದವು. ನಾನು ಸಂತೈಸಲು ಯತ್ನಿಸಿದಾಗ, ಕಣ್ಣೀರನ್ನು ನುಂಗಿಕೊಂಡು ಉಸಿರಿಗಾಗಿ ಚಡಪಡಿಸುತ್ತ ಆತನೆಂದ:

"ಸ್ವಲ್ಪ ತಡೀಲಿ. ಅವನ ತಲೆಗೆ ಇಟ್ಟಿಗೆಯಿಂದಲೇ ಹೊಡೀತೀನಿ—ನೋಡುವೆಯಂತೆ!"

ಚುರ್ಕಾ ಉದ್ಧಟನಂತೆ ವರ್ತಿಸಿದ. ವಿವಾಹಕ್ಕೆ ಪ್ರಾಪ್ತವಯಸ್ಕರಾದ ಹುಡುಗರಂತೆ, ಟೋಪಿಯನ್ನು ಒಂದು ಬದಿಗೆ ವಾಲಿಸಿ, ಕೈಗಳನ್ನು ಜೇಬುಗಳ ಒಳಗೆ ಇಳಿಬಿಟ್ಟು, ಬೀದಿಯ ಮಧ್ಯದಲ್ಲಿ ಆತ ನಡೆದ.

ತನ್ನ ಇತ್ತೀಚಿನ ಸಾಧನೆಯಾದ ಹಲ್ಲುಗಳ ಎಡೆಯಿಂದ ಉಗುಳುವುದನ್ನು ಪ್ರದರ್ಶಿಸುತ್ತಾ ಆತನೆಂದ:

"ನಾನಿನ್ನು ಬೇಗನೆ ತಂಬಾಕು ಸೇದೋದಕ್ಕೆ ಶುರುಮಾಡ್ತೀನಿ. ಈಗಾಗಲೇ ಎರಡುಸಲ ಸೇದಿನೋಡಿದೀನಿ. ಆದರೆ, ಇನ್ನೂ ನನಗೆ ಅದು ಒಗ್ಗಿಲ್ಲ."

ಇದೊಂದೂ ನನಗೆ ಮೆಚ್ಚುಗೆಯಾಗಲಿಲ್ಲ. ನನ್ನ ಸಂಗಾತಿಗಳನ್ನು ನಾನು ಕಳೆದುಕೊಳ್ಳುತ್ತಿದ್ದೇನೆಂಬುದು ಸ್ಪಷ್ಟವಾಗಿತ್ತು. ಇದಕ್ಕೆ ಲುದ್ಮಿಲ್ಲಾಳೇ ಕಾರಣಳೆಂದು ನನಗೆ ಅನಿಸಿತು.

ಒಂದು ಸಂಜೆ, ನಾನು ಸಂಗ್ರಹಿಸಿದ್ದ ಮೂಳೆಗಳು, ಚಿಂದಿಗಳು, ಮತ್ತಿತರ ಕ್ಷುಲ್ಲಕ ಸಾಮಗ್ರಿಗಳನ್ನೆಲ್ಲಾ ಹಿತ್ತಿಲಲ್ಲಿ ಆರಿಸುತ್ತಿದ್ದಾಗ, ಲುದ್ಮಿಲ್ಲಾ ಅಲ್ಲಿಗೆ ಬಂದಳು. ಊರುಗೋಲನ್ನು ಆಧರಿಸಿ ಅತ್ತಿತ್ತ ಓಲಾಡುತ್ತಾ, ಬಲಗೈಯನ್ನು ಬೀಸುತ್ತಾ, ಅಲ್ಲಿ ನಿಂತಳು.

ಮೂರು ಸಾರೆ ತಲೆಯಾಡಿಸುತ್ತ, "ಹಲ್ಲೋ" ಎಂದು ನುಡಿದು, ಆಕೆ ಕೇಳಿದಳು:

"ಕೊಸ್ತ್ರೊಮಾ ಬಂದಿದ್ದನೆ ನಿನ್ನ ಜತೆಗೆ ?"

"ಹೌದು."

"ಚುರ್ಕಾ ?"

"ಚುರ್ಕಾ ನಮ್ಮ ಜತೆ ಆಟವಾಡೋದನ್ನೇ ಬಿಟ್ಟುಬಿಟ್ಟಿದಾನೆ. ಇದಕ್ಕೆಲ್ಲಾ ನೀನೇ ಕಾರಣ. ಅವರಿಗೆ ನಿನ್ನಲ್ಲಿ ಪ್ರೇಮ ಉಂಟಾಗಿದೆ. ಅದಕ್ಕೇ ಅವರು ಜಗಳಾಡ್ತಿರ್ತಾರೆ."

ಲಜ್ಜೆಯಿಂದ ಆಕೆಯ ಮುಖ ಕೆಂಪೇರಿತು. ಆದರೂ ಅಣಕಿಸುವ ಧ್ವನಿಯಲ್ಲಿ ಅವಳೆಂದಳು:

"ಹಾದೇನು ?! ನನ್ನದೇನು ತಪ್ಪು ಅದರಲ್ಲಿ ?"

"ಅವರು ನಿನ್ನನ್ನು ಪ್ರೀತಿಸೋ ಹಾಗೆ ಯಾಕೆ ಮಾಡಿದೆ ?"

"ಅವರು ನನ್ನನ್ನು ಪ್ರೀತಿಸಿ ಅಂತ ನಾನೇನೂ ಅವರನ್ನು ಕೇಳಲಿಲ್ಲ," ಎಂದು ಆಕೆ ಸಿಡುಕಿನ ಪ್ರತ್ಯುತ್ತರವಿತ್ತಳು. "ಎಲ್ಲಾ ಅರ್ಥವಿಲ್ಲದ ಮಾತು! ಅವರಿಗಿಂತಲೂ ವಯಸ್ಸಿನಲ್ಲಿ ನಾನು ದೊಡ್ಡವಳು. ಹದಿನಾಲ್ಕು ವರ್ಷ ಪ್ರಾಯ ನನಗೆ. ವಯಸ್ಸಿನಲ್ಲಿ ತನಗಿಂತ ದೊಡ್ಡವರಾದ ಹುಡುಗಿಯರನ್ನು ಯಾರೂ ಪ್ರೀತಿಸೋದಿಲ್ಲ," ಎನ್ನುತ್ತ ಆಕೆ ದೂರನಡೆದಳು.

ಆಕೆಯನ್ನು ನೋಯಿಸಲು ಯತ್ನಿಸುತ್ತಾ ಗಟ್ಟಿಯಾದ ಸ್ವರದಲ್ಲಿ ನಾನೆಂದೆ :

"ಅಲ್ಲವೆ ಪಾಪ! ಖ್ಲಿಸ್ತನ ಅಕ್ಕ-ಆ ಅಂಗಡಿಯವಳನ್ನು ನೋಡು. ಅವಳಿಗೆ ನಿಜವಾಗಿಯೂ ವಯಸ್ಸಾಗಿದೆ. ಆದರೂ ಹುಡುಗರು ಅವಳ ಜತೆ ಎಂಥೆಂಥ ಆಟ ಆಡೋದಿಲ್ಲ !"

ಲುಡ್ಮಿಲ್ಲಾ ಸರಕ್ಕನೆ ನನ್ನೆಡೆಗೆ ತಿರುಗಿದಂತೆ ಆಕೆಯ ಊರುಗೋಲು ಮರಳಿನಲ್ಲಿ ಆಳವಾಗಿ ಹೂತುಕೊಂಡಿತು. ನನ್ನನ್ನು ಇದಿರಿಸಿ, ಅಳುತುಂಬಿದ ಧ್ವನಿಯಲ್ಲಿ, ತನ್ನ ಸುಂದರ ಕಣ್ಣುಗಳನ್ನು ಮಿನುಗಿಸುತ್ತ ಆಕೆ ಅಂದಳು:

"ನಿನಗಂತೂ ಏನೂ ತಿಳೀದು. ಆ ಅಂಗಡಿಯವಳು ಕೆಟ್ಟನಡತೆಯ ಹೆಂಗಸು. ಆದರೆ ನಾನು—ನಾನು ಅಂಥವಳೊಂತ ನಿನ್ನ ಅಭಿಪ್ರಾಯವೊ? ನಾನಿನ್ನೂ ಚಿಕ್ಕವಳು. ನನ್ನ ವಿಷಯದಲ್ಲಿ, ಮುಟ್ಟೋದು ಚಿವುಟೋದು ಅದೆಲ್ಲಾ ಯಾರೂ ಮಾಡಬಾರದು. 'ಕಮ್ಚಾಡಲ್ಕಾ'ದ ಎರಡನೆಯ ಭಾಗ ನೀನು ಓದಿದ್ದರೆ ಹಾಗೆಲ್ಲಾ ಹೇಳ್ತಿರಲಿಲ್ಲ !"

ಅವಳು ಸುಂಯ್ಗುಡುತ್ತಾ ಹೊರಟು ಹೋದಳು. ಆಕೆಯ ಬಗೆಗೆ ನನಗೆ ಕೆಡುಕೆನಿಸಿತು. ನನಗಿನ್ನೂ ತಿಳಿಯದೇ ಇದ್ದ ಯಾವುದೋ ಸತ್ಯ ಆಕೆಯ ಮಾತುಗಳಲ್ಲಿ ಅಡಕವಾಗಿದ್ದಂತೆ ಭಾಸವಾಯಿತು. ನನ್ನ ಸಂಗಾತಿಗಳು ಯಾಕೆ ಚಿವುಟಬೇಕು ಆಕೆಯನ್ನು? ಆಕೆಯಲ್ಲಿ ತಮಗೆ ಪ್ರೇಮವಿದೆ ಎಂದು ಬೇರೆ ಅವರು ಸಾರಿದ್ದರು !

ಮಾರನೆಯ ದಿನ, ನನ್ನ ಅಪರಾಧಕ್ಕೆ ಪ್ರಾಯಶ್ಚಿತ್ತಮಾಡಲು ಬಯಸಿ, ಏಳು ಕೊಪೆಕ್‌ಗಳಷ್ಟು 'ಬಾರ್ಲಿ ಸಕ್ಕರೆ'ಯನ್ನು ಕೊಂಡುಕೊಂಡೆ. ಅದು ಲುಡ್ಮಿಲ್ಲಾಳಿಗೆ ಪ್ರಿಯವಾದ ಮಿಠಾಯಿ ಎಂಬುದು ನನಗೆ ಗೊತ್ತಿತ್ತು.

"ನಿನಗೂ ಸ್ವಲ್ಪ ಕೊಡಲೇನು ?" ಎಂದು ಕೇಳಿದೆ.

ಪ್ರಯತ್ನಪೂರ್ವಕವಾಗಿ ಸಿಟ್ಟುಗೊಳ್ಳುತ್ತಾ ಆಕೆ ಅಂದಳು:

"ಹೊರಟುಹೋಗು! ನಿನ್ನ ಜತೆ ನನಗ ಸ್ನೇಹವಿಲ್ಲ !"

ಆದರೆ ಕೆಲನಿಮಿಷಗಳಲ್ಲೆ ಆಕೆ, ಮಿಠಾಯಿ ಸ್ವೀಕರಿಸಿ ಅಂದಳು:

"ನೀನಿದನ್ನು ಕಾಗದದಲ್ಲಿ ಸುತ್ತಿಕೊಂಡಾದರೂ ಬರಬಹುದಾಗಿತ್ತು. ನಿನ್ನ ಕೈಗಳು ಎಷ್ಟು ಕೊಳಕಾಗಿವೆ, ನೋಡು."

"ಕೈಗಳನ್ನು ತೊಳೆದಿದ್ದೇನೆ. ಆದರೂ ಕೊಳೆ ಹೋಗೋದಿಲ್ಲ."

ಆಕೆ ನನ್ನದೊಂದು ಕೈಯನ್ನೆತ್ತಿ, ಬೆಚ್ಚಗಿದ್ದ ಒಣಗಿದ್ದ ತನ್ನ ಕೈಗಳಲ್ಲಿ ಇರಿಸಿಕೊಂಡು, ಪರೀಕ್ಷಿಸಿದಳು.

"ನಿನ್ನ ಕೈಗಳು ಹಾಳುಮಾಡ್ಕೊಂಡಿದೀಯಾ."

"ನಿನ್ನ ಬೆರಳುಗಳಲ್ಲೂ ಕೂಡಾ ತೂತುಗಳಿವೆ."

"ಅವು ಸೂಜಿಯಿಂದಾಗಿರೋ ತೂತುಗಳು. ನಾನು ಬಹಳ ಹೊಲೀತಿರ್ತೀನಿ."

ಕೆಲನಿಮಿಷಗಳ ಬಳಿಕ, ಸುತ್ತಮುತ್ತಲೂ ಒಮ್ಮೆ ನೋಡಿ, ಆಕೆ ಸೂಚಿಸಿದಳು:

"ಎಲ್ಲಾದರೂ ಅವಿತುಕೊಂಡು 'ಕವ್ಯಾಡಲ್ಯಾ' ಓದ್ದೋಣ. ಆದೀತೆ?"

ಯೋಗ್ಯ ಸ್ಥಳ ಸಿಗಲು ನಮಗೆ ಸ್ವಲ್ಪ ಹೊತ್ತು ಹಿಡಿಯಿತು. ಕೊನೆಯಲ್ಲಿ ಸ್ನಾನದ ಮನೆಯ ಪ್ರವೇಶದ್ವಾರವೇ ಸರಿಯೆಂದು ನಾವು ತೀರ್ಮಾನಿಸಿದೆವು. ಅಲ್ಲಿ ಸಾಕಷ್ಟು ಬೆಳಕಿರಲಿಲ್ಲ. ಆದರೆ, ಕಿಟಕಿಯ ಬಳಿ ಕುಳಿತುಕೊಳ್ಳುವುದು ಸಾಧ್ಯವಿತ್ತು. ಶೆಡ್ಡಿನಿಂದ ಕಸಾಯಿಮನೆವರೆಗಿನ ಹುಲ್ಲುಕಸ ಬಿದ್ದಿದ್ದ ಜಾಗ, ಕಿಟಕಿಯಿಂದ ಕಾಣಿಸುತ್ತಿತ್ತು. ಸಾಮಾನ್ಯವಾಗಿ ಯಾರೂ ಆ ಕಡೆಗೆ ಬರುತ್ತಿರಲಿಲ್ಲ.

ಹೀಗೆ, ಕಿಟಕಿಯ ಬಳಿ ಆಕೆ ಕುಳಿತಳು. ಕ್ಷೀಣವಾಗಿದ್ದ ಕಾಲು ಬೆಂಚಿನ ಮೇಲೆ ನೀಡಿತ್ತು. ಭದ್ರವಾಗಿದ್ದ ಇನ್ನೊಂದು ನೆಲದ ಮೇಲಿತ್ತು. ಹಳೆಯದಾಗಿದ್ದ ಹರಿದಿದ್ದ ಪುಸ್ತಕವನ್ನು ಮುಖ ದೆದುರು ಹಿಡಿದುಕೊಂಡು, ನೀರಸವಾದ ಅರ್ಥವಾಗದ ಪದಗಳ ಪ್ರವಾಹವನ್ನೇ ಆಕೆ ಬಾಯಿಂದ ಹೊರಬಿಡುತ್ತಿದ್ದಳು. ಅರ್ಥವಾಗದೆ ಇದ್ದರೂ ನನ್ನ ಹೃದಯವನ್ನು ಅವು ಕಲಕಿದುವು. ಆಕೆಯ ಗಭೀರ ಕಣ್ಣುಗಳ ನೀಲಿ ಜ್ವಾಲೆಗಳೆರಡು ಪುಸ್ತಕದ ಪುಟಗಳ ಅಗಲಕ್ಕೆ ಚಲಿಸುತ್ತಿದ್ದುದು, ನೆಲದ ಮೇಲೆ ನಾನು ಕುಳಿತಿದ್ದ ಕಡೆಯಿಂದ ನನಗೆ ಕಾಣಿಸುತ್ತಿತ್ತು. ಕೆಲವೊಮ್ಮೆ ಕಣ್ಣುಗಳು ಕಂಬನಿ ತುಂಬಿ ಮಸಕಾಗುತ್ತಿದ್ದುವು. ಗ್ರಹಿಸಲಾಗದ ಜೋಡಣೆಗಳಲ್ಲಿ ಅಪರಿಚಿತ ಪದಗಳನ್ನು ಉಚ್ಚರಿಸುತ್ತಿದ್ದಂತೆ, ಹುಡುಗಿಯ ಧ್ವನಿ ನಡುಗುತ್ತಿತ್ತು. ಆ ಪದಗಳನ್ನು ಹಿಡಿದು ಬಗೆಬಗೆಯಾಗಿ ತಿರುವುತ್ತಾ ಕವಿತೆಯಾಗಿ ಮಾರ್ಪಡಿಸಲು ನಾನು ಯತ್ನಿಸಿದೆ. ಈ ಕೆಲಸದಲ್ಲಿ ನಿರತನಾದುದರಿಂದ, ಪುಸ್ತಕದಲ್ಲಿ ಏನು ಬರೆದಿತ್ತೆಂದು ತಿಳಿಯುವುದು ದುಸ್ಸಾಧ್ಯವೇ ಆಯಿತು.

ನನ್ನ ನಾಯಿ ನನ್ನ ಮೊಣಕಾಲುಗಳ ಮೇಲೆ ಮಲಗಿತ್ತು. ಆ ನಾಯಿಗೆ ನೀಳವಾದ ಕಾಲುಗಳಿದ್ದುವು. ಮೈತುಂಬ ರೋಮವಿತ್ತು. ನಡಿಗೆ ವೇಗವಾಗಿತ್ತು. ಶರತ್ಕಾಲದ ಗಾಳಿ, ಹೊಗೆ ಹಾದಿಯಲ್ಲಿ ಭೂಂಗುಡುವಂತೆ ಅದು ಬಗುಳುತ್ತಿತ್ತು. ಹೀಗಾಗಿ ಅದಕ್ಕೆ, 'ಗಾಳಿ' ಎಂದು ನಾನು ಹೆಸರಿಟ್ಟಿದ್ದೆ.

"ಕಿವಿಕೊಟ್ಟು ಕೇಳ್ತಿದೀಯಾ?" ಎಂದಳು ಹುಡುಗಿ.

ಹೌದೆಂದು ತಲೆಯಾಡಿಸಿದೆ. ಸಿಕ್ಕುಗೊಳ್ಳುತ್ತಿದ್ದ ಪದಗಳಿಂದ ನಾನು ಮತ್ತಷ್ಟು ಉದ್ರಿಕ್ತನಾದೆ. ಅವುಗಳನ್ನು ಒಂದು ಗೀತದ ಪದಗಳಾಗಿ, ಪ್ರತಿಯೊಂದನ್ನೂ ಶುಭ್ರವಾದ ಮಿನುಗುವ ನಕ್ಷತ್ರವಾಗಿ, ಪುನರ್ವ್ಯವಸ್ಥೆಗೊಳಿಸಲು ನಾನು ಮತ್ತಷ್ಟು ಕಾತರನಾದೆ.

ಕತ್ತಲಾದೊಡನೆ ಲುಡ್ಮಿಲ್ಲಾ, ಪುಸ್ತಕವನ್ನು ಹಿಡಿದಿದ್ದ ನಿಸ್ತೇಜ ಹಸ್ತವನ್ನು ಕೆಳಕ್ಕೆ ತಂದಳು.

"ಚೆನ್ನಾಗಿಲ್ಲವೆ ? ಚೆನ್ನಾಗಿರುತ್ತೇಂತ ನಾನು ಆಗಲೇ ಹೇಳಿದ್ದೆ," ಎಂದಳು.

ಅನಂತರ ನಾವು ಆಗಾಗ್ಗೆ, ಸ್ನಾನದ ಮನೆಯ ಪ್ರವೇಶ ದ್ವಾರದ ಬಳಿಗೆ ಹೋಗಿ ಕುಳಿತು ಕೊಳ್ಳುತ್ತಿದ್ದೆವು. ಲುಡ್ಮಿಲ್ಲಾ ಬೇಗನೆ 'ಕಮ್ಚ್ಯಾಡಲ್ಕಾ'ವನ್ನು ಬಿಟ್ಟುಕೊಟ್ಟಳು. ಅದರಿಂದ ನನಗೆ ಬಹಳ ಸಂತೋಷವಾಯಿತು. ಆ ಕೊನೆಯಿಲ್ಲದ ಕಥೆಯ ವಸ್ತುವಿನ ಲವಲೇಶವನ್ನೂ ಆಕೆ ಕೇಳಿದ್ದರೆ ಹೇಳಲು ನಾನು ಶಕ್ತನಾಗಿರಲಿಲ್ಲ. 'ಕೊನೆಯಿಲ್ಲದ ಕಥೆ' ಎಂದು ಹೇಳಲು ಕಾರಣವೇನೆಂದರೆ, ನಾವು ಆರಂಭಿಸಿದ ಎರಡನೆಯ ಭಾಗದ ಅನಂತರ ಆ ಪುಸ್ತಕಕ್ಕೆ ಮೂರ ನೆಯ ಭಾಗವೂ ಒಂದು ಇತ್ತಂತೆ. ಅಲ್ಲದೆ, ನಾಲ್ಕನೆಯ ಭಾಗವೂ ಒಂದು ಇದ್ದುದಾಗಿ ಲುಡ್ಮಿಲ್ಲಾ ಹೇಳಿದ್ದಳು.

ಮಳೆ ಸುರಿಯುತ್ತಿದ್ದ ದಿನಗಳಲ್ಲಿ ಆ ಸ್ಥಳದಲ್ಲಿ ನಾವು ವಿಶೇಷ ಸಂತೋಷದಿಂದಿರುತ್ತಿದ್ದೆವು. ಶನಿವಾರಗಳಲ್ಲಿ ಮಾತ್ರ ಆ ಸಂತೋಷವಿರುತ್ತಿರಲಿಲ್ಲ. ಯಾಕೆಂದರೆ, ಆ ದಿನ ನೀರೊಲೆಗೆ ಉರಿ ಹಾಕುತ್ತಿದ್ದರು.

ಮಳೆ ಒಂದೇ ಸಮನೆ ಸುರಿದು, ಎಲ್ಲರೂ ಮನೆಯೊಳಗೆಯೇ ಇರುವಂತೆ ಮಾಡುತ್ತಿತ್ತು. ಹೀಗಾಗಿ, ಬೆಳಕಿಲ್ಲದ ನಮ್ಮ ಕಿಟಕಿಯ ಬಳಿಯಿಂದ ಯಾರೂ ಹಾದುಹೋಗುವ ಸಂಭವವಿರಲಿಲ್ಲ, ನಮ್ಮನ್ನು ಅಲ್ಲಿ ಯಾರಾದರೂ ಕಂಡುಬಿಡುವರೆಂಬ ಭೀತಿ ಲುಡ್ಮಿಲ್ಲಾಗೆ ಬಲವಾಗಿತ್ತು.

"ನಮ್ಮನ್ನು ಇಲ್ಲಿ ನೋಡಿದರೆ ಅವರು ಏನು ಯೋಚಿಸಬಹುದು ಗೊತ್ತೆ ?" ಎಂದು ಆಕೆ ಮೃದುವಾಗಿ ಕೇಳಿದಳು.

ನನಗೆ ಗೊತ್ತಿತ್ತು. ನಮ್ಮನ್ನು ಯಾರಾದರೂ ಅಲ್ಲಿ ಕಂಡುಹಿಡಿಯಬಹುದೆಂದು ನನಗೂ ಭಯವೆನಿಸಿತು. ತಾಸುಗಟ್ಟಲೆ ಮಾತನಾಡುತ್ತ ಅಲ್ಲಿ ನಾವು ಕುಳಿತುಕೊಳ್ಳುತ್ತಿದ್ದೆವು. ಕೆಲವು ಸಲ, ಅಜ್ಜಿ ನನಗೆ ಹೇಳಿದ್ದ ಕಥೆಗಳನ್ನು ಲುಡ್ಮಿಲ್ಲಾಗೆ ನಾನು ಹೇಳುತ್ತಿದ್ದೆ. ಮೆಡ್‌ವೆಡಿಟ್ಸಾ ನದೀ ದಂಡೆಯ ಕೊಸ್ಸಾಕರ ಜೀವನವನ್ನು ಕುರಿತು ಆಕೆ ನನಗೆ ಹೇಳುತ್ತಿದ್ದಳು.

ನಿಟ್ಟುಸಿರುಬಿಟ್ಟು ಆಕೆ ಹೇಳುತ್ತಿದ್ದಳು:

"ಅಲ್ಲಿ ಎಲ್ಲಾ ಸೊಗಸು! ಇಲ್ಲಿಯ ಹಾಗಲ್ಲ ಇದು, ಭಿಕ್ಷುಕರಿಗೆ ಮಾತ್ರ ಯೋಗ್ಯವಾದ ಸ್ಥಳ !"

ದೊಡ್ಡವನಾದಾಗ ಖಂಡಿತವಾಗಿಯೂ ಮೆಡ್‌ವೆಡಿಟ್ಸಾ ನದಿಯನ್ನು ನೋಡಲು ಹೋಗ ಬೇಕೆಂದು ನಾನು ನಿರ್ಧರಿಸಿದೆ.

ಸ್ವಲ್ಪ ಸಮಯದಲ್ಲೆ, ಸ್ನಾನಗೃಹದ ಪ್ರವೇಶದ್ವಾರದ ಬಳಿ ಕುಳಿತಿರಬೇಕಾದ ಅಗತ್ಯ ಬೀಳಲಿಲ್ಲ. ಲುಡ್ಮಿಲ್ಲಾಳ ತಾಯಿಗೆ, ಉಣ್ಣೆಯ ತುಪ್ಪಳ ಸಿದ್ಧಗೊಳಿಸುವ ಒಬ್ಬನ ಬಳಿ ಕೆಲಸ ಸಿಕ್ಕಿತು. ಆಕೆಯ ತಂಗಿ ಶಾಲೆಗೆ ಹೋಗತೊಡಗಿದಳು. ಅಣ್ಣ, ಹಂಚಿನ ಕಾರಖಾನೆಯೊಂದ ರಲ್ಲಿ ದುಡಿಯತೊಡಗಿದ. ಹವಾಮಾನ ಚೆನ್ನಾಗಿರದ ದಿನಗಳಲ್ಲಿ ಅವರಲ್ಲಿಗೆ ಹೋಗಿ, ಆ ಅಡುಗೆಯ ಹುಡುಗಿಗೆ ನಾನು ನೆರವಾಗುತ್ತಿದ್ದೆ ; ಕೊಠಡಿಯನ್ನೂ ಅಡುಗೆಮನೆಯನ್ನೂ ಚೊಕ್ಕಟ ಗೊಳಿಸುತ್ತಿದ್ದೆ.

ಆಕೆ ನಗುತ್ತ ಅಂದಳು:

"ನೀನೂ ನಾನೂ ಗಂಡಹೆಂಡಿರ ಹಾಗೆ ಜೀವಿಸ್ತಿದ್ದೇವೆ. ಒಟ್ಟಿಗೆ ಮಲಗೋದಿಲ್ಲ, ಅಷ್ಟೆ. ಗಂಡಹೆಂಡಿರಿಗಿಂತಲೂ ಚೆನ್ನಾಗಿಯೇ ಜೀವಿಸ್ತಿದ್ದೇವೆ ಎನ್ನಬೇಕು. ಗಂಡಂದಿರು ತಮ್ಮ ಹೆಂಡತಿಯರಿಗೆ ಯಾವತ್ತೂ ಸಹಾಯ ಮಾಡೋದಿಲ್ಲ."

ನನ್ನಲ್ಲಿ ದುಡ್ಡೇನಾದರೂ ಇದ್ದಾಗ, ಒಂದಿಷ್ಟು ಮಿಠಾಯಿ ಕೊಂಡುತರುತ್ತಿದ್ದೆ. ನಾವು ಚಹಾ ತಯಾರಿಸುತ್ತಿದ್ದೆವು. ಬಳಿಕ ನಾವು ಚಾದಾನಿಯನ್ನು ಕಾಯಿಸಿದ್ದು ಲುಡ್ಮಿಲ್ಲಾಳ ಸಿಡುಕಿ ತಾಯಿಗೆ ತಿಳಿಯದಂತೆ, ತಣ್ಣೀರು ಸುರಿದು ಚಾದಾನಿಯನ್ನು ತಣಿಸುತ್ತಿದ್ದೆವು. ಕೆಲವೊಮ್ಮೆ ಅಜ್ಜಿಯೂ ಬಂದು ನಮ್ಮ ಜತೆ ಕುಳಿತುಕೊಳ್ಳುತ್ತಿದ್ದಳು. ಜರಿ ತಯಾರಿಸುತ್ತಲೋ ಕಸೂತಿ ಹಾಕುತ್ತಲೋ ಅದ್ಭುತಕಥೆಗಳನ್ನು ಆಕೆ ನಮಗೆ ಹೇಳುತ್ತಿದ್ದಳು. ಅಜ್ಜ ಶಹರಕ್ಕೆ ಹೋದ ದಿನಗಳಲ್ಲಿ, ಲುಡ್ಮಿಲ್ಲಾ ನಮ್ಮ ಮನೆಗೆ ಬರುತಿದ್ದಳು. ಆಗ ಯಾವ ಯೋಚನೆಯೂ ಇಲ್ಲದೆ, ಹಬ್ಬದ ಸಂಭ್ರಮದಲ್ಲಿ ನಾವಿರುತ್ತಿದ್ದೆವು.

ಅಜ್ಜಿ ಎನ್ನುತ್ತಿದ್ದಳು:

"ನಮ್ಮದು ಭರ್ಜರಿ ಬದುಕೇ ಸರಿ. ಅಲ್ಲವಾ? ಕಾಸು ನನ್ನದಾದರೆ ಖರ್ಚುಮಾಡೋಕೆ ಯಾರದು ಅಡ್ಡಿ?"

ನಮ್ಮ ಗೆಳೆತನದ ಕುಡಿಯನ್ನು ಆಕೆ ನೀರೆರೆದು ಬೆಳೆಸಿದಳು.

"ಹುಡುಗ-ಹುಡುಗಿ ಸ್ನೇಹಿತರಾದಾಗ ಒಳ್ಳೆಯದೇ. ಅವರು ಮೂರ್ಖಕೆಲಸ ಮಾತ್ರ ಏನೂ ಮಾಡಬಾರದು, ಅಷ್ಟೆ."

ಹಾಗೆ ಹೇಳಿ, ಅತ್ಯಂತ ಸರಳರೀತಿಯಲ್ಲಿ, 'ಮೂರ್ಖಕೆಲಸ ಮಾಡುವುದು' ಅಂದರೆ ಏನು ಎಂಬುದನ್ನು ಆಕೆ ವಿವರಿಸಿದಳು. ಆಕೆಯ ಮಾತಿನಲ್ಲಿ ಸೌಂದರ್ಯವಿತ್ತು, ಸ್ಫೂರ್ತಿ ಇತ್ತು. ಪೂರ್ತಿ ಅರಳುವವರೆಗೆ ಹೂಗಳನ್ನು ಮುಟ್ಟಬಾರದು; ಮುಟ್ಟಿದರೆ ಅವು ಸುವಾಸನೆಯನ್ನು ಬೀರುವುದಿಲ್ಲ, ಅವುಗಳಲ್ಲಿ ಫಲವಾಗುವುದಿಲ್ಲ-ಎಂಬುದನ್ನೆಲ್ಲ—ನಾನು ಸುಲಭವಾಗಿ ತಿಳಿದುಕೊಂಡೆ.

'ಮೂರ್ಖತನದ ಕೆಲಸಮಾಡುವ" ಬಯಕೆ ನನಗಿರಲಿಲ್ಲ. ಹಾಗೆಂದು, ಸಾಧಾರಣವಾಗಿ ಬಾಯಿತೆರೆಯದೆಯೇ ಇರುವ ವಿಷಯಗಳ ಬಗೆಗೆ ಲುಡ್ಮಿಲ್ಲಾ ಮತ್ತು ನಾನು ಮಾತನಾಡದೆಯೂ ಇರಲಿಲ್ಲ. ಸ್ವಾಭಾವಿಕವಾಗಿ, ಅಗತ್ಯಬಿದ್ದಾಗಲಷ್ಟೇ ಆ ವಿಷಯ ನಾವು ಮಾತನಾಡುತ್ತಿದ್ದೆವು. ಯಾಕೆಂದರೆ, ಗಂಡು-ಹೆಣ್ಣಿನ ಒರಟು ಸಂಬಂಧದ ಅಂಶ, ನಮ್ಮೆದುರು ಪದೇ ಪದೇ ಎಡೆಬಿಡದೆ ಕಾಣಿಸಿಕೊಳ್ಳುತಿತ್ತು. ನಮ್ಮಿಬ್ಬರನ್ನೂ ಬಹಳವಾಗಿ ನೋಯಿಸುತ್ತಿತ್ತು.

ಲುಡ್ಮಿಲ್ಲಾಳ ತಂದೆ ಯೆವ್‌ಸಿಯೆಂಕೋ, ಸುಮಾರು ನಾಲ್ವತ್ತು ವರ್ಷ ವಯಸ್ಸಿನ ಸ್ಫುರದ್ರೂಪಿಯಾದ ಮನುಷ್ಯ. ಗುಂಗುರು ಕೂದಲು, ಮೀಸೆ, ದಪ್ಪನೆಯ ಹುಬ್ಬುಗಳಿದ್ದುವು. ಆ ಹುಬ್ಬುಗಳನ್ನು ಆತ, ವಿಜಯಿಯ ವಿಚಿತ್ರ ಬೆಡಗಿನಿಂದ ಮೇಲಕ್ಕೆ ಏರಿಸುತಿದ್ದ. ಇನ್ನೂ ಒಂದು ಸೋಜಿಗವೆಂದರೆ, ಆತ ಮಾತನಾಡುತಿದ್ದುದೇ ಕಡಮೆ. ಆತ ಮಾತನಾಡಿದುದನ್ನು ಒಮ್ಮೆಯಾದರೂ ಕೇಳಿದ ನೆನಪು ನನಗಿಲ್ಲ. ತನ್ನ ಮಕ್ಕಳನ್ನು ಮುದ್ದಿಸುವಾಗ, ಕಿವುಡ-ಮೂಗನ ಹಾಗೆ ಆತ ಸದ್ದುಮಾಡುತಿದ್ದ. ಒಂದು ಮಾತು ಕೂಡಾ ಆಡದೆಯೇ ಹೆಂಡತಿಗೆ ಹೊಡೆಯುತ್ತಲೂ ಇದ್ದ.

ರಜಾ ದಿನಗಳಲ್ಲಿ ಸಂಜೆ; ನೀಲಿ ಕುಪ್ಪಸವನ್ನೂ ಅಗಲವಾದ ಮಕಮಲ್ಲಿನ ಷರಾಯಿಗಳನ್ನೂ ಹೊಳೆಯುವ ಬೂಟುಗಳನ್ನೂ ತೊಟ್ಟುಕೊಂಡು ಗೇಟಿನ ಬಳಿಗೆ ಹೋಗುತ್ತಿದ್ದ. ಭುಜ ಮೇಲಿನ ತೂಗುಪಟ್ಟಿಯಿಂದ ದೊಡ್ಡದಾದೊಂದು ಸ್ವರಪೆಟ್ಟಿಗೆ ತೂಗಾಡುತ್ತಿತ್ತು. ಅಲ್ಲಿ ಆತ ಅಸ್ತ್ರ ಧರಿಸಿ ಸಿದ್ಧನಾದ ಸೈನಿಕನಂತೆ ನಿಲ್ಲುತಿದ್ದ. ಸ್ವಲ್ಪ ಹೊತ್ತಿನಲ್ಲಿ, ಹಾಡುತ್ತ ವಿಹಾರ ಹೊರಟ ವರ ತಂಡ ನಮ್ಮ ಗೇಟನ್ನು ಹಾದುಹೋಗಲು ಮೊದಲಾಗುತ್ತಿತ್ತು. ಹುಡುಗಿಯರೂ ಹೆಂಗಸರೂ ಬಾತುಕೋಳಿಗಳಂತೆ ಸಾಲಾಗಿ ನಡೆದು ಹೋಗುತ್ತಿದ್ದರು. ಯೆವ್ಸಯೆಂಕೋನ ಕಡೆಗೆ ರೆಪ್ಪೆಗಳ ಎಡೆಯಿಂದ ಕಳ್ಳನೋಟ ಬೀರುತ್ತಿದ್ದರು. ಅಥವಾ, ಹಸಿದ ಕಣ್ಣುಗಳಿಂದ ಬಿರಬಿರನೆ ನೋಡುತ್ತಿದ್ದರು. ಆತ, ಕೆಳತುಟಿಯನ್ನು ಮುಂದಕ್ಕೆ ನೂಕಿ, ಕರಿದು ಕಣ್ಣುಗಳಿಂದ ಅವರೆ ರನ್ನು ತೀಕ್ಷ್ಣವಾಗಿ ಅವಲೋಕಿಸುತ್ತ, ಅಲ್ಲಿ ನಿಲ್ಲುತಿದ್ದ. ಕಣ್ಣುಗಳ ಆ ಮೌನ ಸಂಭಾಷಣೆಯಲ್ಲಿ ಶಾಪಗ್ರಸ್ತರಂತೆ ಗಂಡಸನ್ನು ಹಾದು ಹೋಗುತಿದ್ದ ಹೆಂಗಸರ ಆ ನಿಧಾನವಾದ ಮೆರವಣಿಗೆಯಲ್ಲಿ ಅಸಹ್ಯವೆನಿಸುವಂತಹ ಶ್ವಾನಸಮಾನವಾದುದೇನೋ ಇತ್ತು, ಆತ ಆಜ್ಞಾಪಿಸುವವನಂತೆ ಕಿರು ಬೆರಳೆತ್ತಿದರೆ ಸಾಕು, ಆ ಹೆಂಗಸರಲ್ಲಿ ಯಾರು ಬೇಕಾದರೂ ಅಲ್ಲಿಯೇ ಬೀದಿಯ ಹೊಲಸು ಮರಳಿನಮೇಲೆ ಬಿದ್ದು ಉದ್ದಂಡ ಪ್ರಣಾಮಮಾಡುವುದು ಖಂಡಿತ ಎಂದು ಭಾಸವಾಗುತ್ತಿತ್ತು.

ಅಂತಹ ಒಂದು ಸಂಜೆ ಆತ ಹಾಗೆ ನಿಂತಿದ್ದಾಗ, ಲುಡ್ಮಿಲ್ಲಾಳ ತಾಯಿ ಗೊಣಗಿದಳು:

"ಕಣ್ಣು ಮಿಟಿಕಿಸುತ್ತಿದ್ದಾನೆ, ಪೋತ! ನಿರ್ಲಜ್ಜ ಹಂದಿ!"

ಸವೆದುಹೋದ ಪೊರಕೆಯ ಹಾಗಿದ್ದಳು ಆಕೆ. ಎತ್ತರಕ್ಕೆ, ತೆಳ್ಳಗೆ, ನೀಳವಾದ ಜೀರ್ಣವಾದ ಮುಖ; ಟೈಫಸ್ ರೋಗ ಹರಡಿದ್ದಾಗ ಕಿರಿದಾಗಿ ಕತ್ತರಿಸಿದ್ದ ತಲೆಗೂದಲು.

ಲುಡ್ಮಿಲ್ಲಾ ತಾಯಿಯ ಬಳಿ ಕುಳಿತು, ಏನಾದರೂ ಪ್ರಶ್ನೆಗಳನ್ನು ಕೇಳುತ್ತ ಆಕೆಯ ಗಮನವನ್ನು ಬೇರೆ ಕಡೆಗೆ ಸೆಳೆಯಲು ವ್ಯರ್ಥವಾಗಿ ಯತ್ನಿಸಿದಳು.

"ನನ್ನ ಪಾಡಿಗೆ ನನ್ನನ್ನು ಬಿಟ್ಬಿಡು, ಪಾಪಿ ಕುಂಟಿಯೇ," ಎಂದು ಲುಡ್ಮಿಲ್ಲಾಳ ತಾಯಿ, ಅ ಮಾಧಾನದಿಂದ ಪಿಳಿಪಿಳಿ ನೋಡುತ್ತಾ, ಗೊಣಗಿದಳು. ಮಂಗೋಲಿಯನರಂತೆ ಆಕೆಗಿದ್ದ ಅ ಕಿರಿದಾದ ಕಣ್ಣುಗಳು ವಿಚಿತ್ರ ರೀತಿಯಲ್ಲಿ ನಿಸ್ತೇಜವಾಗಿದ್ದುವು, ಯಾವುದರಲ್ಲೋ ಸಿಲು ಕೊಂಡ ಹಾಗೆ ಅತ್ತಿತ್ತ ಚಲಿಸದೆ ಇದ್ದುವು.

ಲುಡ್ಮಿಲ್ಲಾ ಅಂದಳು:

"ಸಿಟ್ಟಾಗ್ಬೇಡ ಅಮ್ಮ. ಏನು ಪ್ರಯೋಜನ ಅದರಿಂದ? ಆ ಚಾಪೆ ಹೆಣೆಯುವವನ ವಿಧವೆಯನ್ನು ನೋಡು, ಹೇಗೆ ಸಿಂಗರಿಸಿಕೊಂಡಿದ್ದಾಳೆ!"

"ನೀವು ಮೂವರು ಇಲ್ಲದೇ ಇದ್ದಿದ್ದರೆ ನಾನು ಅವಳಿಗಿಂತ ಚೆನ್ನಾಗಿ ಸಿಂಗರಿಸಿಕೊಳ್ತಿದ್ದೆ. ನೀವು ನನ್ನನ್ನು ಎಲ್ಲಾ ಮುಗಿಸಿಯೇ ಬಿಟ್ಟಿದೀರಾ—ನುಂಗಿಯೇ ಬಿಟ್ಟಿದೀರಾ," ಎಂದು ಆಕೆಯ ತಾಯಿ, ಅತಿಗಾತ್ರದ ಆ ವಿಧವೆಯ ಕಡೆಗೇ ನೆಟ್ಟನೋಟದಿಂದ ನೋಡುತ್ತ, ಸಂಕಟದ ಹೃದಯಹೀನತೆಯಿಂದ ಉತ್ತರವಿತ್ತಳು.

ಆ ವಿಧವೆ ಪುಟ್ಟಪೆಟ್ಟಿಗೆಯೊಂದು ಮನೆಯನ್ನು ಹೋಲುತಿದ್ದಳು. ಆಕೆಯ ಎದೆ, ಮಹಡಿಯ ಮೇಲಿನ ಮುಖಮಂಟಪದಂತೆ ಮುಂದಕ್ಕೆ ಬಂದಿತ್ತು. ಬಲವಾಗಿ ಬಿಗಿದಿದ್ದ ಹಸುರು ಕರವಸ್ತ್ರ

ದಿಂದ ಸುತ್ತುವರಿಯಲ್ಪಟ್ಟಿದ್ದ ಆಕೆಯ ಮುಖ, ಸೂರ್ಯಾಸ್ತದಲ್ಲಿ ಪ್ರಜ್ವಲಿಸುವ ಭಾವಣಿ ಕಿಂಡಿಯನ್ನು ನೆನಪಿಗೆ ತರುತ್ತಿತ್ತು.

ಯೆವ್‌ಸೆಯೆಂಕೋ, ಸ್ವರಪೆಟ್ಟಿಗೆಯನ್ನು ಎದೆಯ ಮೇಲಕ್ಕೆ ತೂಗಿ ಅದನ್ನು ನುಡಿಸತೊಡಗಿದ. ವಾದನದಿಂದ ಸಮೃದ್ಧವಾದ ಮಧುರ ಸ್ವರಗಳು ಹೊರಟುವು; ಶ್ರೋತೃಗಳನ್ನು ಕಂಡರಿಯದ ತಾಣಗಳಿಗೆ ಸೆಳೆದುವು, ವಾದಕನ ಪಾದಕ್ಕೆ ಬೀಳಲು ಬೀದಿಯ ಎಲ್ಲೆಡೆಗಳಿಂದ ಮಕ್ಕಳು ಓಡಿ ಬಂದರು. ಉಸಿರುಕಟ್ಟಿಸುವ ಆನಂದೋದ್ರೇಕದಿಂದ ಅಲ್ಲಿಯೇ ಅವರು ಮಲಗಿದರು.

"ಸ್ವಲ್ಪ ತಾಳು. ಯಾರಾದರೂ ನಿನಗೆ ನಾಲ್ಕು ಬಿಗಿದೇ ಬಿಗೀತಾರೆ," ಎಂದು ಯೆವ್‌ಸೆಯೆಂಕೋನ ಹೆಂಡತಿ ಎಚ್ಚರಿಸಿದಳು.

ಕಡೆಗಣ್ಣಿನ ನೋಟದಿಂದ ಆತ ಆಕೆಯನ್ನೊಮ್ಮೆ ನೋಡಿದ, ಅಷ್ಟೆ; ಉತ್ತರಿಸುವಗೊಡವೆಗೇ ಹೋಗಲಿಲ್ಲ.

ಚಾಪೆ ಹೆಣೆಯುವವನ ವಿಧವೆ, ಖ್ಲಿಸ್ತನ ಅಂಗಡಿಯ ಎದುರಲ್ಲಿದ್ದ ಬೆಂಚಿನ ಮೇಲೆ ಕುಸಿಕುಳಿತಳು. ತಲೆಯನ್ನು ಒಂದು ಬದಿಗೆ ವಾಲಿಸಿ, ಎದೆಯನ್ನು ಏರಿಳಿಸುತ್ತ, ಆಕೆ ವಾದನಕ್ಕೆ ಕಿವಿಗೊಟ್ಟಳು.

ಸ್ಮಶಾನದ ಆಚೆಗಿದ್ದ ಬಯಲಿಗೆ, ಮುಳುಗುತ್ತಿದ್ದ ಸೂರ್ಯನ ಚೆಂಬೆಳಕಿನ ಸ್ನಾನವಾಗುತ್ತಿತ್ತು. ನದಿಯಲ್ಲಿ ತೇಲುವಂತೆ ಬೀದಿಯುದ್ದಕ್ಕೆ, ಸುತ್ತಲೂ ಮುನ್ನುಗ್ಗುತ್ತಿದ್ದ ಮಕ್ಕಳ ಜತೆಗೆ, ಶುಭ್ರ ಬಣ್ಣಗಳ ಉಡುಪುತೊಟ್ಟ ಮಾಂಸದ ಘಟ್ಟಿಗಳು ತೇಲಿ ಬರುತ್ತಿದ್ದುವು. ಗಾಳಿ ಮಾದಕವಾಗಿತ್ತು. ಸೂರ್ಯನ ಬಿಸಿಲುಬಿದ್ದು ಬೆಚ್ಚಗಾಗಿದ್ದ ಮರಳಿನಿಂದ ಸಿಹ್ಯಸ್ರ ವಾಸನೆ ಏಳುತ್ತಿತ್ತು. ಆ ವಾಸನೆಯಲ್ಲಿ, ಕಸಾಯಿ ಮನೆಗಳ ಕೊಬ್ಬಿನ ಮಧುರಗಂಧವೇ-ನೆತ್ತರಿನ ವಾಸನೆಯೇ-ಹೆಚ್ಚಾಗಿತ್ತು. ಜೀನು ತಯಾರಿಸುವವರ ಅಂಗಳದಿಂದ, ಲವಣದ ತೀವ್ರತೆ ಮೂಗಿಗೆ ಬಡಿಯುತ್ತಿತ್ತು. ಹೆಂಗಸರ ಹರಟೆ, ಗಂಡಸರ ಕುಡುಕ ಗರ್ಜನೆ, ಮಕ್ಕಳ ತೀಕ್ಷ್ಣ ಕೂಗು, ಸ್ವರಪೆಟ್ಟಿಗೆಯ ಇಳಿಸ್ವನಿಯ ಆಲಾಪನೆ-ಎಲ್ಲವೂ ಒಂದಾಗಿ ಸಜೀವವಾದ ನೃತ್ಯಸರಣಿಯಾದುವು; ತುಂಬು ಬಸಿರಿನ ಭೂಮಿಯ ಮಹಾ ನಿಟ್ಟುಸಿರಾದುವು. ಪ್ರತಿಯೊಂದೂ ಒರಟಾಗಿತ್ತು, ನಗ್ನವಾಗಿತ್ತು. ನಿರ್ಲಜ್ಜವಾಗಿ ಮೃಗೀಯವಾಗಿದ್ದ—ತನ್ನ ಅಪರಿಮಿತ ಶಕ್ತಿಯು ಹೊರಹರಿಯಲು ಉದ್ವಿಗ್ನಗೊಂಡು ಹಾದಿ ಹುಡುಕುತ್ತಿದ್ದ-ಆ ಕರಿಯ ಬದುಕಿನಲ್ಲಿ, ಅಪಾರವಾದ ಬಲವಾದ ಶ್ರದ್ಧೆಯನ್ನು ಪ್ರತಿಯೊಂದೂ ಹುಟ್ಟಿಸುತ್ತಿತ್ತು.

ಆ ಸಾರ್ವತ್ರಿಕ ಕಲರವವನ್ನೂ ಭೇದಿಸಿ ಕೆಲವೊಮ್ಮೆ, ವಿಶೇಷವಾಗಿ ತೀವ್ರವಾದ ಮಾತುಗಳು ಹೃದಯಕ್ಕೆ ಹೊಡೆತ ಕೊಡುತ್ತಿದ್ದುವು, ಸ್ಮರಣೆಯ ಭಂಡಾರದಲ್ಲಿ ಮನೆಮಾಡುತ್ತಿದ್ದುವು.

"ನೀವೆಲ್ಲರೂ ಒಮ್ಮೆಯೇ ಅವನ ಮೇಲೆ ಬೀಳೋಕೆ ಆಗೋದಿಲ್ಲ-ಒಬ್ಬೊಬ್ಬರಾಗಿ ಗುದ್ದಬೇಕಾಗ್ತದೆ."

"ನಮ್ಮ ಬಗ್ಗೆ ನಮಗೇ ಕನಿಕರವಿಲ್ಲದಿದ್ದರೆ ಬೇರೆ ಯಾರು ಕನಿಕರ ತೋರಿಸ್ತಾರೆ?"

"ತಮಾಷೆಗೋಸ್ಕರವೇ ದೇವರು ಹೆಂಗಸರನ್ನು ಉಂಟುಮಾಡಿದನೇನೋ ಅನಿಸ್ತದೆ."

ಕತ್ತಲಾಗುತ್ತ ಬಂತು. ಗಾಳಿ ಚೇತನಗೊಂಡು ಚಲಿಸತೊಡಗಿತು. ಗದ್ದಲ ನಿಂತಿತು.

ಮರದ ಮನೆಗಳು ನೆರಳನ್ನು ಧರಿಸಿದಂತೆ, ಊದಿಕೊಂಡುವು, ವಿಸ್ತಾರವಾದುವು. ಮಲಗಿ ನಿದ್ದೆ ಹೋಗುವ ಹೊತ್ತಿಗೆ, ಕೆಲಮಕ್ಕಳನ್ನು ಮನೆಗಳಿಗೆ ಎಳೆದೊಯ್ದರು. ಉಳಿದವರು ಬೇಲಿಗಳ ನೆರಳಲ್ಲಿ, ತಮ್ಮ ತಾಯಂದಿರ ಪಾದಗಳ ಬಳಿ ಅಥವಾ ತೊಡಗಳ ಮೇಲೆಯೇ ನಿದ್ದೆಹೋದರು. ರಾತ್ರಿಯ ಹೊತ್ತು ದೊಡ್ಡ ಹುಡುಗರು ಹೆಚ್ಚು ಶಾಂತವಾದರು, ಸಾ ಧು ವಾ ದ ರು. ಯಾರೂ ನೋಡದೆ ಇದ್ದಾಗ ಯೆವ್‌ಸೆಯೆಂಕೋ, ಕರಗಿ ಹೋದನೇನೊ ಎನ್ನುವಂತೆ ಅದೃಶ್ಯನಾದ. ಚಾಪೆ ಹೆಣೆಯುವವನ ವಿಧವೆಯೂ ಅದೃಶ್ಯಳಾದಳು. ಸ್ವರಪೆಟ್ಟಿಗೆಯ ಆಳವಾದ ಗಾನ, ಈಗೆ ಲ್ಲಿಂದಲೋ ಸ್ಮಶಾನದಾಚೆಗೆ ದೂರದಿಂದ ಕೇಳಿಬಂತು. ಲುಡ್ಮಿಲ್ಲಾಳ ತಾಯಿ ಮೈ ಮುದುಡಿ ಕೊಂಡು ಬೆಂಚಿನ ಮೇಲೆ ಕುಳಿತಳು. ಬೆಕ್ಕಿನ ಹಾಗೆ ಅವಳ ಬೆನ್ನು ಕಮಾನಿನಂತೆ ಬಾಗಿತ್ತು. ಅಜ್ಜಿ, ನಮ್ಮ ನೆರೆಹೊರೆಯ ಸೂಲಗಿತ್ತಿಯೂ ಮದುವೆಯ ಜೋಡಿ ಕೂಡಿಸುವವಳೂ ಆದ ಸ್ತ್ರೀಯ ಬಳಿಗೆ, ಚಹಾ ಕುಡಿಯಲೆಂದು ಹೋದಳು. ಗಾತ್ರದ, ತುಂಬಿದ ಮಾಂಸಖಂಡಗಳ, ಹೆಂಗಸು ಆಕೆ. ಬಾತುಕೋಳಿಯ ಕೊಕ್ಕಿನ ಹಾಗೆ ಮೂಗು. ಚಪ್ಪಟೆಯಾಗಿದ್ದ ಗಂಡಸಿಗಿರುವಂತಹ— ಎದೆಯ ಮೇಲೆ, 'ಹತರಾಗುತ್ತಿದ್ದವರನ್ನು ರಕ್ಷಿಸಿದುದಕ್ಕಾಗಿ' ಕೊಡಲಾಗಿದ್ದ ಚಿನ್ನದ ಪದಕವಿತ್ತು. ನಮ್ಮ ಬೀದಿಯಲ್ಲಿ ಪ್ರತಿಯೊಬ್ಬರೂ ಆಕೆಯನ್ನು ಮಾಯಾವಿನಿ ಎಂದು ಭಾವಿಸಿ, ಆಕೆಗೆ ಹೆದರು ತ್ತಿದ್ದರು. ಒಮ್ಮೆ ಅವಳು, ಒಬ್ಬ ಕರ್ನಲನ ಮನೆಗೆ ಬೆಂಕಿಬಿದ್ದು ಉರಿಯುತ್ತಿದ್ದಾಗ, ಆತನ ರೋಗಗ್ರಸ್ತ ಹೆಂಡತಿಯನ್ನೂ ಮೂವರು ಮಕ್ಕಳನ್ನೂ ಹೊರಕ್ಕೆ ಎತ್ತಿತಂದು ರಕ್ಷಿಸಿದ್ದಳಂತೆ.

ಅಜ್ಜಿಯೂ ಆಕೆಯೂ ಸ್ನೇಹಿತೆಯರಾಗಿದ್ದರು. ಬೀದಿಯಲ್ಲಿ ಅವರು ಒಬ್ಬರನ್ನೊಬ್ಬರು ಕಂಡಾಗಲೆಲ್ಲಾ, ದೂರವಿದ್ದಾಗಲೇ, ವಿಶೇಷ ಆತ್ಮೀಯತೆಯಿಂದ ಮುಗುಳುನಗುತ್ತಿದ್ದರು.

ನಮ್ಮ ಗೇಟಿನ ಬಳಿಯಲ್ಲಿದ್ದ ಬೆಂಚಿನ ಮೇಲೆ ಕುಳಿತಿದ್ದ ಲುಡ್ಮಿಲ್ಲಾಳಲ್ಲಿಗೆ ಕೊಸ್ಟ್ರೋಮಾ ಮತ್ತು ನಾನು ಸಾಗಿದೆವು. ಲುಡ್ಮಿಲ್ಲಾಳ ಅಣ್ಣನನ್ನು ಚುರ್ಕಾ ಹೊಡೆದಾಟಕ್ಕೆ ಆಹ್ವಾನಿಸಿದ್ದ. ಅವರು ಈಗ ಪರಸ್ಪರರನ್ನು ಬಿಗಿಯಾಗಿ ಹಿಡಿದುಕೊಂಡು ಬೀದಿಯಲ್ಲಿ ಧೂಳೆಬ್ಬಿಸತೊಡಗಿದ್ದರು.

"ಸಾಕುಮಾಡಿ !" ಎಂದು, ಹೆದರಿಕೊಂಡ ಲುಡ್ಮಿಲ್ಲಾ ಕೂಗಾಡಿದಳು.

ಕೊಸ್ಟ್ರೋಮಾ ತನ್ನ ಕರಿದುಕಣ್ಣುಗಳ ಕುಡಿನೋಟವನ್ನು ಆಕೆಯ ಮೇಲೆಯೇ ನೆಟ್ಟು, ಬೇಟೆಗಾರ ಕಾಲಿನಿನ್ನನ ವಿಷಯ ಆಕೆಗೆ ಹೇಳುತ್ತಿದ್ದ. ನಮ್ಮ ವಸತಿ ಪ್ರದೇಶದ ಪ್ರತಿಯೊಬ್ಬರಿಗೂ ಆ ಬೇಟೆಗಾರನ ಕುಪ್ರಸಿದ್ಧಿ ತಿಳಿದಿತ್ತು. ಅದೇ ಸ್ವಲ್ಪ ಸಮಯ ಹಿಂದೆ ಆತ ಸತ್ತಿದ್ದ. ಕೊಸ್ಟ್ರೋಮಾ ಹೇಳಿದ ಪ್ರಕಾರ, ಆತನ ಶವದಾನಿಯನ್ನು ಸ್ಮಶಾನದ ಮರಳಿನಲ್ಲಿ ಹೂಳುವುದರ ಬದಲು, ನೆಲದ ಮೇಲೆಯೇ, ಇತರ ಗೋರಿಗಳಿಂದ ಪ್ರತ್ಯೇಕವಾಗಿ ಇಟ್ಟುಬಿಟ್ಟಿದ್ದರು. ಕಬ್ಬಿಣದ ಚೌಕಟ್ಟಿನ ಹಿಡಿಯ ಮೇಲಿತ್ತು ಆ ಕರಿಯ ಶವದಾನಿ. ಅದರ ಮುಚ್ಚಳದ ಮೇಲೆ ಒಂದು ಕ್ರೂಜೆಯ, ಈಟಿಯ ಕೋಲಿನ ಮತ್ತು ಎರಡು ಮೂಳೆಗಳ ಬಿಳಿಯ ಚಿತ್ರಗಳಿದ್ದುವು.

ಪ್ರತಿ ರಾತ್ರಿಯೂ ಆ ಮುದುಕ ಶವದಾನಿಯಿಂದೆದ್ದು, ಮೊದಲ ಕೋಳಿ ಕೂಗುವವರೆಗೂ, ಏನನ್ನೋ ಹುಡುಕುತ್ತ ಸ್ಮಶಾನದಲ್ಲೆಲ್ಲ ಅಲೆಯುತ್ತಿದ್ದನೆಂದು ಜನರು ಆಡಿಕೊಳ್ಳುತ್ತಿದ್ದರು.

ಅಂಥ ಭೀಕರ ಸಂಗತಿಗಳ ವಿಷಯ ಮಾತನಾಡಬೇಡಿ !" ಎಂದು ಲುಡ್ಮಿಲ್ಲಾ ಅಂಗ ಲಾಚಿದಳು.

"ಬಿಡು ನನ್ನನ್ನು!" ಎಂದು ಚುರ್ಕಾ ಕೂಗಾಡಿ, ಲುಡ್ಮಿಲ್ಲಾಳ ಅಣ್ಣನ ಹಿಡಿತದಿಂದ

ತನ್ನನ್ನು ಬಿಡಿಸಿಕೊಂಡ. ಕೊಸ್ಟ್ರೊಮಾನ ಕಡೆಗೆ ತಿರುಗಿ ತುಚ್ಛೀಕಾರದ ಧ್ವನಿಯಲ್ಲಿ ಆತನೆಂದ:

"ಯಾಕೆ ಸುಳ್ಳುಹೇಳ್ತಿದೀಯಾ? ಶವದಾನಿಯನ್ನು ನೆಲದಲ್ಲಿ ಹೂತು, ಸಮಾಧಿಕಲ್ಲು ನೆಡೋದಕ್ಕೋಸ್ಕರ ಗೋರಿಯ ತಲೆಯ ಭಾಗವನ್ನು ಮಾತ್ರ ಖಾಲಿಯಾಗಿ ಬಿಟ್ಟಿದ್ದನ್ನು ನಾನು ನೋಡಿಲ್ಲವೇನು? ದೆವ್ವ ರಾತ್ರೆ ಹೊತ್ತು ಸ್ಮಶಾನದಲ್ಲಿ ನಡೆದಾಡೋದೆಲ್ಲಾ, ಆ ಕುಡುಕ ಕಮ್ಮಾರ ಬಿಟ್ಟಿರೋ ಬುರುಡೆ!"

"ಅಷ್ಟೊಂದು ಖಚಿತವಾಗಿ ನಿನಗೆ ಗೊತ್ತಿರೋದಾದರೆ, ಹೋಗಿ ಈ ರಾತ್ರೆಯನ್ನು ಸ್ಮಶಾನದಲ್ಲೇ ಕಳೆ ನೋಡೋಣ!" ಎಂದು ಕೊಸ್ಟ್ರೊಮಾ, ಚುರ್ಕಾನ ಕಡೆಗೆ ದೃಷ್ಟಿ ಕೂಡಾ ಬೀರದೆ, ಸವಾಲು ಹಾಕಿದ.

ಅವರಿಬ್ಬರೂ ವಾದಿಸತೊಡಗಿದರು. ಲುಡ್ಮಿಲ್ಲಾ, ಶೋಕಪೂರ್ಣವಾಗಿ ತಲೆಯಾಡಿಸಿ ತಾಯಿಯ ಕಡೆ ತಿರುಗಿ, ಕೇಳಿದಳು:

"ದೆವ್ವಗಳು ರಾತ್ರೆ ಹೊತ್ತು ನಡೆದಾಡ್ತವಾ, ಅಮ್ಮಾ?"

ಯಾವುದೋ ಯೋಚನೆಯಲ್ಲಿದ್ದವಳು ವಸ್ತುಸ್ಥಿತಿಗೆ ಎಳೆಯಲ್ಪಟ್ಟಂತೆ ಆಕೆಯ ತಾಯಿ "ಹೌದು, ನಡೆದಾಡ್ತವೆ," ಎಂದು ಪುಷ್ಟೀಕರಿಸಿದಳು.

ವಾಲ್ಯೊಕ್ ಅಲ್ಲಿಗೆ ಬಂದ. ಅಂಗಡಿಯವನ ಮಗ ಆತ. ದಪ್ಪಗಿದ್ದ. ಕೆಂಪು ಕೆನ್ನೆಗಳು. ಇಪ್ಪತ್ತು ವರ್ಷ ವಯಸ್ಸಾಗಿತ್ತು. ನಾವು ವಾದಿಸುತ್ತಿದ್ದುದಕ್ಕೆ ಕಿವಿಗೊಟ್ಟು, ಆತನೆಂದ:

"ಬೆಳಗಿನವರೆಗೂ ಆ ಶವದಾನಿಯ ಮೇಲೆ ಮಲಗಿರುವವನಿಗೆ, ಇಪ್ಪತ್ತು ಕೊಪೆಕ್ ಮತ್ತು ಹತ್ತು ಸಿಗರೇಟು ಕೊಡ್ತೀನಿ. ಆದರೆ, ಹೆದರಿಕೊಂಡು ಅಲ್ಲಿಂದ ಓಡಿ ಬಂದರೆ, ಮನಸ್ಸು ತಣಿಯೋವರೆಗೂ ಕಿವಿ ಹಿಂಡ್ತೀನಿ. ಹೂಂ, ಏನಂತೀರಾ?"

ಹತ್ತಿಕ್ಕಿದ ಮೌನ ನೆಲೆಸಿತು. ಲುಡ್ಮಿಲ್ಲಾಳ ತಾಯಿ ಆ ಮೌನವನ್ನು ಮುರಿದಳು.

"ಎಂಥಾ ಹುಚ್ಚುಮಾತು! ಹೀಗೆ ಮಾಡೀಂತ ಚಿಕ್ಕ ಮಕ್ಕಳಿಗೆ ಹೇಳೋದೆ ಯಾರಾದರೂ?"

"ಒಂದು ರೂಬಲ್ ಕೊಡು. ನಾನು ಮಾಡ್ತೀನಿ," ಎಂದು ಚುರ್ಕಾ ಗೊಣಗಿದ.

ಕೆಣಕುವ ಧ್ವನಿಯಲ್ಲಿ ಕೊಸ್ಟ್ರೊಮಾ ಅಂದ:

"ಇಪ್ಪತ್ತು ಕೊಪೆಕ್‌ಗಳಿಗೆ ಮಾಡೋದಕ್ಕೆ ಹೆದರಿಬಿಟ್ಟೆಯೇನೋ? ವಾಲ್ಯೊಕ್, ಒಂದು ರೂಬಲೇ ಕೊಡ್ತೀನಿ ಅನ್ನು. ಹೇಗೂ ಅವನು ಹೋಗೋದಿಲ್ಲ. ಬಡಾಯಿ ಕೊಚ್ತಿದಾನೆ, ಅಷ್ಟೆ."

"ಆಗಲಿ. ಒಂದು ರೂಬಲ್ ಕೊಡ್ತೀನಿ!"

ಚುರ್ಕಾ ಕುಳಿತಲ್ಲಿಂದ ಎದ್ದ. ಬೇಲಿಯನ್ನು ಮುಟ್ಟುತ್ತಾ ಮೆಲ್ಲನೆ ಹೊರಟುಹೋದ. ಕೊಸ್ಟ್ರೊಮಾ ಬೆರಳುಗಳನ್ನು ಬಾಯೊಳಕ್ಕೆ ತುರುಕಿ, ಕರ್ಕಶವಾಗಿ ಶಿಳ್ಳುಹಾಕಿದ. ಲುಡ್ಮಿಲ್ಲಾ ಕಾತರಳಾಗಿ ಅಂದಳು:

"ಅಯ್ಯೋ ನಮ್ಮಪ್ಪ! ಯಾಕಾದರೂ ಆತ ಹಾಗೆ ಬಡಾಯಿ ಕೊಚ್ಚಬೇಕು?"

ವಾಲ್ಯೊಕ್ ಛೇಡಿಸಿದ:

"ಹೇಡಿಗಳ ಮಂದೆ! ಬೀದಿಯ ಹೊಡೆದಾಟದಲ್ಲಿ ಮಾತ್ರ ಅತಿ ಶ್ರೇಷ್ಠರು—ಉಫ್! ನಿಜವಾಗಿ ನೀವು ನಾಯಿಮರಿಗಳೇ ಸರಿ!"

ಅಪಮಾನದ ಆ ಮಾತುಗಳನ್ನು ಸಹಿಸುವುದು ಯಾತನಾಪೂರ್ಣವಾಗಿತ್ತು. ಆ ದಪ್ಪಗಿ

ಆಸಾಮಿಯನ್ನು ನಾವು ಇಷ್ಟಪಡುತ್ತಿರಲಿಲ್ಲ. ಹುಡುಗರು ತುಂಟತನ ಮಾಡುವಂತೆ ಅವನು ಯಾವಾಗಲೂ ಪ್ರೇರೇಪಿಸುತ್ತಿದ್ದ. ಹುಡುಗಿಯರ ಮತ್ತು ಹೆಂಗಸರ ವಿಷಯವಾಗಿ ಹೊಲಸು ವದಂತಿಗಳನ್ನು ಹುಡುಗರಿಗೆ ತಿಳಿಸಿ, ಲೇವಡಿ ಮಾಡುವಂತೆ ಹೇಳಿಕೊಡುತ್ತಿದ್ದ. ಹುಡುಗರು ಆತನ ನಿರ್ದೇಶದಂತೆ ನಡೆಯುತ್ತಿದ್ದರು. ದಂಡನೆಯ ಪ್ರತಿಫಲವನ್ನು ಹೇರಳವಾಗಿ ಅನುಭವಿಸುತ್ತಲೂ ಇದ್ದರು. ಏನೋ ಕಾರಣಕ್ಕಾಗಿ ನನ್ನ ನಾಯಿಯನ್ನು ಆತ ದ್ವೇಷಿಸುತ್ತಿದ್ದ. ಅದರೆಡೆಗೆ ಕಲ್ಲೆಸೆಯುತ್ತಿದ್ದ. ಒಂದು ದಿನ, ಒಳಗೆ ಸೂಜಿ ಇರಿಸಿದ್ದ ಬ್ರೆಡ್ಡಿನ ಒಂದು ತುಣುಕನ್ನೂ ಆತ ಅದಕ್ಕೆ ಕೊಟ್ಟ.

ಈಗ, ಅವಹೇಳನಕ್ಕೆ ಗುರಿಯಾಗಿ ಚುರ್ಕಾ ತಲೆತಗ್ಗಿಸಿ ಹೊರಟುಹೋದುದಂತೂ ನನಗೆ ನುಂಗಲಾರದ ತುತ್ತಾಗಿತ್ತು.

ವಾಲ್ಯೊಕ್‌ನಿಗೆ ನಾನೆಂದೆ:

"ನನಗೆ ಒಂದು ರೂಬಲ್ ಕೊಡು. ನಾನು ಹೋಗ್ತೀನಿ."

ನನ್ನನ್ನು ಭಯಪಡಿಸಲೆಂದು ಗೊಳ್ಳನೆ ನಕ್ಕು, ಒಂದು ರೂಬಲನ್ನು ಆತ, ಲುಡ್ಮಿಲ್ಲಾಳ ತಾಯಿಯತ್ತ ನೀಡಿದ.

"ನನಗೆ ಅದು ಬೇಕಾಗಿಲ್ಲ; ನಾನು ಅದನ್ನು ಮುಟ್ಟೋದಿಲ್ಲ," ಎಂದು ಹೇಳಿ ಆಕೆ, ಸಿಟ್ಟುಗೊಂಡು ಅಲ್ಲಿಂದ ಹೊರಟು ಹೋದಳು. ಲುಡ್ಮಿಲ್ಲಾ ಕೂಡಾ ಆ ಹಣ ತೆಗೆದುಕೊಳ್ಳಲು ನಿರಾಕರಿಸಿದಳು. ಇದರಿಂದ ವಾಲ್ಯೊಕ್, ಮತ್ತಷ್ಟು ಹೆಚ್ಚಾಗಿ ನಮ್ಮನ್ನು ಛೇಡಿಸಿದ. ಹಣ ಸ್ವೀಕರಿಸದೆಯೇ ಸ್ಮಶಾನಕ್ಕೆ ಹೊರಟುಹೋಗಲು ನಾನು ಅಣಿಯಾದೆ. ಆದರೆ ಅಷ್ಟರಲ್ಲೆ, ಅಜ್ಜಿ ಬಂದಳು. ವಿಷಯವೇನೆಂದು ಕೇಳಿ ತಿಳಿದು ಆಕೆ, ರೂಬಲನ್ನು ತೆಗೆದುಕೊಂಡು, ನನ್ನೆಡೆಗೆ ತಿರುಗಿ, ಶಾಂತವಾಗಿ ಅಂದಳು:

"ನಿನ್ನ ಕೋಟು ತೊಟ್ಟುಕೋ. ಕಂಬಳಿಯನ್ನೂ ತಗೋ. ಬೆಳಗಿನ ಜಾವ ಚಳಿಯಾಗ್ತದೆ."

ಭೀಕರವಾದುದೇನೂ ಸಂಭವಿಸದೆಂಬ ನಂಬಿಕೆಯನ್ನು ಆಕೆಯ ಮಾತುಗಳು ನನ್ನಲ್ಲಿ ಹುಟ್ಟಿಸಿದುವು.

ಬೆಳಗಿನವರೆಗೂ ಶವದಾನಿಯ ಮೇಲೆ ನಾನು ಮಲಗಿರಬೇಕು ಇಲ್ಲವೆ ಕುಳಿತಿರಬೇಕು, ಏನೇ ಆದರೂ ಅಲ್ಲಿಯೇ ಇರಬೇಕು, ಮುದುಕ ಕಾಲಿನಿನ್ ಹೊರಕ್ಕೆ ತೆರಳುವಾಗ ಶವದಾನಿ ಅತ್ತಿತ್ತ ಅಲುಗೋದಕ್ಕೆ ಶುರುವಾದರೂ ನಾನು ಮಿಸುಕಬಾರದು—ಎಂಬ ಷರತ್ತುಗಳನ್ನು ವಾಲ್ಯೊಕ್ ಮಂಡಿಸಿದ. ನಾನೇನಾದರೂ ಕೆಳಕ್ಕೆ ಹಾರಿದೆನೆಂದರೆ, ಹಣ ನನಗೆ ಸಿಗುವಂತಿರಲಿಲ್ಲ.

"ಹುಷಾರ್! ರಾತ್ರೆಯೆಲ್ಲಾ ನಾನು ನಿನ್ನ ಮೇಲೆ ದೃಷ್ಟಿ ಇಟ್ಟೇ ಇರ್ತೀನಿ," ಎಂದ ಆತ.

ಸ್ಮಶಾನಕ್ಕೆಂದು ಹೊರಟಾಗ, ಅಜ್ಜಿ ನನ್ನ ಮೇಲ್ಗಡೆ ಶಿಲುಬೆಯ ವಂದನೆ ಮಾಡಿ, ಎಚ್ಚರಿಕೆ ಹೇಳಿದಳು:

"ಏನೋ ಕಣ್ಣಿಗೆ ಕಾಣಿಸ್ತಿದೆ ಅಂತ ನಿನಗೆ ಅನಿಸಿದರೆ, ಕೂತಲ್ಲಿಂದ ಏಳಬೇಡ. ಸುಮ್ಮನೆ ಪವಿತ್ರ ಕನ್ನಿಕೆಗೆ ಒಂದು ಪ್ರಾರ್ಥನೆ ಸಲ್ಲಿಸು."

ಇದೊಮ್ಮೆ ಮುಗಿದು ಹೋದರೆ ಸಾಕೆಂದು, ನಾನು ಬೇಗಬೇಗನೆ ನಡೆದೆ. ವಾಲ್ಯೊಕ್,

ಕೊಸ್ತ್ರೊವಾ ಮತ್ತು ಬೇರೆ ಕೆಲಹುಡುಗರು ಸ್ವಲ್ಪ ದೂರ ನನ್ನ ಜತೆ ಬಂದರು. ಇಟ್ಟಿಗೆ ಗೋಡೆಯನ್ನು ನಾನು ಏರಿ ಹಾರುತ್ತಿದ್ದಾಗ, ಪಾದ ಕಂಬಳಿಯಲ್ಲಿ ಸಿಲುಕಿ, ನಾನು ಬಿದ್ದೆ. ಆದರೆ ತಕ್ಷಣವೆ, ಮರಳಿನಿಂದ, ಹಿಂದಕ್ಕೆ ಎಸೆಯಲ್ಪಟ್ಟವನ ಹಾಗೆ ಹಾರಿ ಎದ್ದೆ. ಗೋಡೆಯ ಆಚೆ ಬದಿಯಿಂದ ಅವರೆಲ್ಲ ನಕ್ಕುದು ಕೇಳಿಸಿತು. ನನ್ನೊಳಗೇನೋ ಕುರುಕ್ಕೆಂದಿತು; ನನ್ನ ಬೆನ್ನಲ್ಲಿ ಮೇಲಕ್ಕೂ ಕೆಳಕ್ಕೂ ಶೀತಲ ನಡುಕ ಹರಿದಾಡಿತು.

ನಾನು ಎಡವುತ್ತ, ಕರಿಯ ಶವಪಾನಿಯ ಬಳಿಗೆ ಬಂದೆ. ಒಂದು ಪಕ್ಕದಲ್ಲಿ, ಒತ್ತಿಯೊತ್ತಿ ಮರಳನ್ನು ಮುಚ್ಚಿದ್ದರು. ಇನ್ನೊಂದು ಪಕ್ಕದಲ್ಲಿ, ಯಾರೋ ಎತ್ತಲು ಪ್ರಯತ್ನಿಸಿ ವಿಫಲರಾಗಿದ್ದಂತೆ, ಚೌಕಟ್ಟಿನ ದಪ್ಪನೆಯ ಪುಟ್ಟ ಕಾಲುಗಳು ಕಾಣಿಸುತ್ತಿದ್ದುವು. ಶವಪಾನಿಯ ಅಂಚಿನ ಮೇಲೆ ಕುಳಿತು ನಾನು ಸುತ್ತಲೂ ನೋಡಿದೆ. ಹಲವಾರು ಗುಪ್ಪೆಗಳಿದ್ದ ಆ ಸ್ಮಶಾನದಲ್ಲಿ ಬೂದು ಬಣ್ಣದ ಕ್ರೂಜೆಗಳು ಹೇರಳವಾಗಿದ್ದುವು. ಆ ಕ್ರೂಜೆಗಳ ನೆರಳುಗಳು ಮೇಲಕ್ಕೆ ಅಗಲಗೊಳ್ಳುತ್ತ ಸಾಗಿದ್ದುವು. ನೆಟ್ಟಗೆ ನಿಂತಿದ್ದ ಗೋರಿಯ ಡುಬ್ಬಗಳನ್ನು ಜೀರ್ಣವಾದ ತೋಳುಗಳು ತಬ್ಬಿಕೊಂಡಂತೆ, ಆ ನೆರಳುಗಳು ಕಂಡುಬಂದುವು. ಅಲ್ಲಿ ಇಲ್ಲಿ ಕ್ರೂಜೆಗಳ ನಡುವೆ, ಸಣಕಲು ಬಡಕಲು ಬರ್ಚ್‌ಗಿಡಗಳಿದ್ದುವು. ಅವುಗಳ ರೆಂಬೆಕೊಂಬೆಗಳು, ಬೇರೆಬೇರೆಯಾಗಿದ್ದ ಗೋರಿಗಳನ್ನು ಒಂದುಗೂಡಿಸುವ ಕೊಂಡಿಗಳಾಗಿದ್ದುವು. ಆ ನೆರಳುಗಳ ಕಸೂತಿ ಕೆಲಸದ ಎಡೆಗಳಿಂದ ಕುರುಚಲು ಗಿಡಗಳು ಬೆಳೆದಿದ್ದುವು. ಎಲ್ಲಕ್ಕಿಂತಲೂ ಹೆಚ್ಚು ಭಯಾನಕವಾಗಿತ್ತು ಈ ಬೂದು ಒರಟು ಸಸ್ಯ. ದೈತ್ಯಾಕಾರದ ಹಿಮರಾಶಿಯ ಹಾಗೆ ಸ್ಮಶಾನದ ಇಗರ್ಜಿ ಎದ್ದು ನಿಂತಿತ್ತು. ಅಚಲವಾಗಿದ್ದ ಮೋಡಗಳೆಡೆಯಲ್ಲಿ, ಪುಟ್ಟ, ಕ್ಷಯಿಸುತ್ತಿದ್ದ, ಚಂದ್ರಬಿಂಬ ಬೆಳಗುತ್ತಿತ್ತು.

ಯಾಜ್‌ನ ತಂದೆ—ಆ 'ಹೊಲಸು ರೈತ'—ಕಾವಲಿನ ಗಂಟೆಯನ್ನು ಯಾವ ಉತ್ಸಾಹವೂ ಇಲ್ಲದೆ ಬಾರಿಸಿದ. ಆತ ಹಗ್ಗವನ್ನು ಎಳೆದ ಪ್ರತಿಸಲವೂ, ಸಡಿಲವಾಗಿದ್ದ ಛಾವಣಿಯ ಒಂದು ತುಣುಕಿಗೆ ಅದು ಸಿಲುಕಿಕೊಂಡು, ಆರ್ತಸ್ವರ ಹೊರಡಿಸುತ್ತಿತ್ತು. ಆ ಸ್ವರವನ್ನು ಹಿಂಬಾಲಿಸಿ, ಆ ಕಿರಿಯ ಗಂಟೆಯ ಚಿಕ್ಕದಾದ ನೀರಸವಾದ ಢಣ್ ಢಣ್ ಸದ್ದು ಕೇಳಿಸುತ್ತಿತ್ತು.

"ನಿದ್ದೆ ಇಲ್ಲದ ರಾತ್ರೆಗಳಿಂದ ದೇವರು ನಮ್ಮನ್ನು ಕಾಪಾಡಲಿ," ಎಂದು, ಆ ಕಾವಲುಗಾರ ಪದೇ ಪದೇ ಹೇಳುತ್ತಿದ್ದ ಮಾತನ್ನು, ನಾನು ನೆನಪಿಗೆ ತಂದುಕೊಂಡೆ.

ಭಯಾನಕವಾಗಿತ್ತು ಪರಿಸ್ಥಿತಿ. ಯಾವ ಕಾರಣಕ್ಕಾಗಿಯೇ ಉಸಿರುಕಟ್ಟಿಸುವಂತಿತ್ತು. ಆ ಸಂಜೆ ತಣುಪಾಗಿದ್ದರೂ ನನ್ನ ಮೈ ಬೆವತಿತ್ತು. ಮುದುಕ ಕಾಲಿನಿನ್ ತನ್ನ ಶವಪಾನಿಯಿಂದ ಹೊರಬರಲು ತೊಡಗಿದ್ದೇ ಆದರೆ, ಕಾವಲುಗಾರನ ಹಟ್ಟಿಯನ್ನು ತಲಪಲು ನನಗೆ ಸಾಕಷ್ಟು ಸಮಯ ಸಿಗಬಹುದೇನು?

ಆ ಸ್ಮಶಾನವನ್ನು ನಾನು ಚೆನ್ನಾಗಿ ಅರಿತಿದ್ದೆ. ಗೋರಿಗಳೆಡೆಯಲ್ಲಿ ಹಲವಾರುಸಾರೆ, ಯಾಜ್ ಮತ್ತು ನನ್ನ ಇತರ ಸ್ನೇಹಿತರ ಜತೆ ನಾನು ಆಟವಾಡಿದ್ದೆ. ಓ, ಅಲ್ಲಿ ಇಗರ್ಜಿಯ ಸಮೀಪದಲ್ಲಿ ನನ್ನ ತಾಯಿ ಮಣ್ಣಿನಡಿಯಲ್ಲಿ ಮಲಗಿದ್ದಳು.

ಇನ್ನೂ ಎಲ್ಲರೂ ನಿದ್ದೆ ಹೋಗಿರಲಿಲ್ಲ. ವಸತಿ ಪ್ರದೇಶದಿಂದ ನಗೆಯ ಅಲೆಗಳೂ ಹಾಡಿನ ತುಣುಕುಗಳೂ ಅತ್ತಬಂದುವು. ಗುಡ್ಡಗಳಲ್ಲೋ, ರೈಲುದಾರಿಯ ಮರುಳು ಹೊಂಡಗಳಲ್ಲೋ, ಅಥವಾ ಸಮೀಪದ ಕಾಟಿಜೋವ್‌ಕಾ ಹಳ್ಳಿಯಲ್ಲೋ, ಎಲ್ಲೋ ಒಂದೆಡೆ ಸ್ವರಪೆಟ್ಟಿಗೆಯೊಂದು

ಕೀಚಲುಧ್ವನಿ ಹೊರಡಿಸುತ್ತಿತ್ತು, ಬಿಕ್ಕಿ ಬಿಕ್ಕಿ ಅಳುತ್ತಿತ್ತು. ನಿರಂತರ ಕುಡುಕನಾದ ಕಮ್ಮಾರ ಮ್ಯಾಚೋವ್, ಸ್ಮಶಾನದ ಗೋಡೆಯ ಆಚೆ ಬದಿಯಿಂದ ತೂರಾಡುತ್ತಾ ಬಂದ.

ನಮ್ಮ ತಾಯಿ ಬಲು ತುಂಟಿ
ಅವಳಿಗೆ ಅತಿ ಜಂಭ
ಬಂದವರನೆಲ್ಲಾ ಓಡಿಸಿದಳು
ತಂದೆಯೇ ಬೇಕು ತನಗೆ ಅಂತ—

—ಈ ಹಾಡು ಕೇಳಿ ಆತ ಮ್ಯಾಚೋವ್ ಎಂದು ನಾನುಗುರುತಿಸಿದೆ.

ಬದುಕಿನ ಈ ಕೊನೆಯ ಉಸಿರುಗಳಿಗೆ ಕಿವಿಗೊಡುವುದು ಸಮಾಧಾನಕರವಾಗಿತ್ತು. ಆದರೆ, ಘಂಟೆಯ ಪ್ರತಿಯೊಂದು ಸದ್ದಿನೊಡನೆ ಪರಿಸರ ಹೆಚ್ಚು ಶಾಂತವಾಯಿತು. ಹುಲ್ಲು ಗಾವಲಿನ ಮೇಲೆ ಉಕ್ಕಿ ಹರಿದು ಎಲ್ಲವನ್ನೂ ಮುಳುಗಿಸಿ ಮರೆಮಾಚುವ ನದಿಯಂತೆ, ಶಾಂತತೆ ಏರಿಬಂತು. ಪಾರವಿಲ್ಲದ ತಳವಿಲ್ಲದ ಶೂನ್ಯದಲ್ಲಿ, ನನ್ನ ಆತ್ಮ ನಂದಿಹೋಯಿತು. ಸತ್ತು—ಯಾರಿಗೂ ಬೇಡವಾಗಿ—ಪ್ರತಿಯೊಂದೂ ನಿರ್ನಾಮವಾದ, ಕೈಗೆಟಕದ ನಕ್ಷತ್ರಗಳು ಮಾತ್ರ ಜೀವಿಸಿ ಮಿನುಗುತ್ತಿದ್ದ, ಬರಿದು ಸಾಗರದಲ್ಲಿ ನನ್ನ ಆತ್ಮ ಸಂಪೂರ್ಣವಾಗಿ ಕರಗಿಹೋಯಿತು.

ನನ್ನ ಕಂಬಳಿಯನ್ನು ಮೈತುಂಬ ಹೊದೆದುಕೊಂಡೆ. ಪಾದಗಳನ್ನು ಒಳಕ್ಕೆ ಎಳೆದು ಇಗರ್ಜಿಯ ಕಡೆಗೆ ಮುಖಮಾಡಿ, ಕುಳಿತೆ. ನಾನು ಅತ್ತಿತ್ತ ಮಿಸುಕಿದ ಪ್ರತಿಸಲವೂ ಶವದಾನಿ ಕಿರಕ್ಕೆಂದು ಸದ್ದುಮಾಡಿತು, ಮರಳು ಒಂದನ್ನೊಂದು ತೀಡಿತು.

ನನ್ನ ಹಿಂಬದಿಯಲ್ಲಿ ನೆಲವನ್ನು ಯಾವುದೋ ಒಮ್ಮೆ ಬಡೆಯಿತು. ಮತ್ತೊಮ್ಮೆ ಅದೇ ಸದ್ದಾಯಿತು. ಬಳಿಕ, ಇಟ್ಟಿಗೆಯ ತುಂಡೊಂದು ಶವದಾನಿಯ ಬಳಿ ಬಿತ್ತು. ಹೆದರಿಕೊಳ್ಳುವ ಹಾಗಿತ್ತು ಇದು. ಆದರೆ ತಕ್ಷಣವೇ, ಗೋಡೆಯ ಆಚೆಯಿಂದ ವಾಲ್ಯೋಕ್ ಮತ್ತು ಆತನ ಸ್ನೇಹಿತರು ನನ್ನನ್ನು ಹೆದರಿಸುವುದಕ್ಕೋಸ್ಕರ ಕೈಗೆ ಸಿಕ್ಕಿದುದನ್ನೆಲ್ಲ ಎಸೆಯುತ್ತಿರಬೇಕೆಂದು ನಾನು ಊಹಿಸಿದೆ. ಸಮೀಪದಲ್ಲೆ ಜನರಿರುವರೆಂಬ ತಿಳಿವಳಿಕೆಯಿಂದ ನನಗೆ ಮೇಲೆನಿಸಿತು.

ನನ್ನ ತಾಯಿಯ ಬಗೆಗೆ ನಾನು ಯೋಚಿಸತೊಡಗಿದೆ. ಒಮ್ಮೆ ನಾನು ಸೀಗರೇಟು ಸೇದಲು ಯತ್ನಿಸಿದಾಗ ಆಕೆ ನನಗೆ ಚಾಟಿಯಿಂದ ಹೊಡೆಯತೊಡಗಿದ್ದಳು. ಆಗ ನಾನು ಅಂದಿದ್ದೆ :

"ನನ್ನನ್ನು ಮುಟ್ಟಬೇಡ—ಈಗಾಗಲೇ ನನಗೆ ಸಾಕಾಗಿದೆ. ನನ್ನ ಮನಸ್ಸು ಕೆಟ್ಟು ಹೋಗಿದೆ."

ಚಾಟಿ ಏಟುತಿಂದ ಬಳಿಕ, ಒಲೆಯ ಹಿಂಬದಿಗೆ ನಾನು ನುಸುಳಿದೆ. ತಾಯಿ ಅಜ್ಜಿಯೊಡನೆ ಹೇಳುತ್ತಿದ್ದುದು ನನಗೆ ಕೇಳಿಸಿತು :

"ಎಷ್ಟೊಂದು ಕಠಿನ ಹೃದಯದ ಹುಡುಗ! ಅವನು ಯಾರನ್ನೂ ಪ್ರೀತಿಸೋದಿಲ್ಲ!"

ಆ ರೀತಿ ಆಕೆ ಹೇಳಿದುದನ್ನು ಕೇಳಿ ನನಗೆ ನೋವಾಯಿತು. ನನ್ನ ತಾಯಿ ನನ್ನನ್ನು ಶಿಕ್ಷಿಸಿದಾಗಲೆಲ್ಲ ನನಗೆ ಕೆಡಕೆನಿಸುತ್ತಿತ್ತು ; ಆಕೆಯ ಬಗೆಗೆ ಲಜ್ಜೆ ಪಡುವಂತಾಗಿತ್ತು. ಆಕೆ ಕೊಡುತ್ತಿದ್ದ ಶಿಕ್ಷೆ, ಸಾಮಾನ್ಯವಾಗಿ ಎಂದೂ ನ್ಯಾಯೋಚಿತವಾಗಿರುತ್ತಿರಲಿಲ್ಲ.

ಬದುಕಿನಲ್ಲಂತೂ ಯಾತನಾಪೂರ್ಣವಾದುದೆಷ್ಟೋ ನಿಜವಾಗಿಯೂ ಇತ್ತು. ಗೋಡೆಯ ಆಚೆಗಿದ್ದ ಆ ವ್ಯಕ್ತಿಗಳನ್ನೇ ತೆಗೆದುಕೊಳ್ಳಿ. ಇಲ್ಲಿ ಸ್ಮಶಾನದಲ್ಲಿ ಒಂಟಿಯಾಗಿರುವುದು ನನ್ನ

ಪಾಲಿಗೆ ಭಯಾನಕವಾಗಿತ್ತೆಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಹೀಗಿದ್ದೂ ಅವರು ನನ್ನನ್ನು ಮತ್ತಷ್ಟು ಹೆದರಿಸಲು ಯತ್ನಿಸುತ್ತಿದ್ದರು. ಯಾಕೆ?

"ನಿಮ್ಮನ್ನು ದೆವ್ವ ಹಿಡಿಯಲಿ!" ಎಂದು, ಅವರೆಡೆಗೆ ಕೂಗಿ ಹೇಳಲು ನಾನು ಅಪೇಕ್ಷೆ ಪಟ್ಟೆ.

ಆದರೆ, ಹಾಗೆ ಹೇಳುವುದು ಅಪಾಯಕರವಾಗಿತ್ತು. ಅದನ್ನು ಕೇಳಿ ದೆವ್ವಕ್ಕೆ ಹೇಗೆನಿಸುವುದೋ ಯಾರಿಗೆ ಗೊತ್ತು? ದೆವ್ವ ಎಲ್ಲೋ ಸಮೀಪದಲ್ಲೇ ಇತ್ತೆಂಬುದರಲ್ಲಂತೂ ಸಂದೇಹ ವಿರಲಿಲ್ಲ.

ಮರಳಿನಲ್ಲಿ ಅಭ್ರಕದ ತುಣುಕುಗಳು ಹೇರಳವಾಗಿದ್ದುವು. ತಿಂಗಳ ಬೆಳಕಿನಲ್ಲಿ ಅವು ಮಂದವಾಗಿ ಮಿನುಗುತ್ತಿದ್ದುವು. ಅವುಗಳನ್ನು ನೋಡುತ್ತ, ಒಂದು ದಿನ ಓಕಾನದಿಯಲ್ಲಿ ಒಂದು ಕಿರುದೋಣಿಯ ಮೇಲೆ ಮಲಗಿ ನೀರನ್ನು ದಿಟ್ಟಿಸುತ್ತಿದ್ದಾಗ ನಾನು ಕಂಡ ದೃಶ್ಯ, ನೆನಪಿಗೆ ಬಂತು. ಪುಟ್ಟ ನೀರುಪಿಶಾಚಿಯೊಂದು ಒಮ್ಮೆಲೆ ನನ್ನ ಕಣ್ಣೆದುರಿಗೇ ಕಾಣಿಸಿಕೊಂಡಿತ್ತು. ಅದು ಪಕ್ಕಕ್ಕೆ ಹೊರಳಿದಾಗ ಮನುಷ್ಯನ ಕೆನ್ನೆಯನ್ನು ಹೋಲಿತು. ಉದುರುತ್ತಿದ್ದ ಮರದೆಲೆಯಂತೆ ಪಟಪಟನೆ ಸದ್ದುಮಾಡುತ್ತಾ ನೀರಿನ ಆಳಕ್ಕೆ ಮುಳುಗುವುದಕ್ಕೆ ಮುಂಚೆ ಅದು, ಹಕ್ಕಿಯ ಕಣ್ಣುಗಳಂತಹ ದುಂಡಗಿನ ಪುಟ್ಟ ಕಣ್ಣುಗಳಿಂದ ನನ್ನೆಡೆಗೆ ಒಮ್ಮೆ ದೃಷ್ಟಿ ಹರಿಸಿತು.

ಬಗೆಬಗೆಯ ಭಯಕಾರಕ ದೃಶ್ಯಗಳನ್ನು ಸೃಷ್ಟಿಸುವ ಹಟತೊಟ್ಟ ನನ್ನ ಕಲ್ಪನಾಶಕ್ತಿಗಿದಿರು, ನನ್ನ ಸ್ಮರಣಶಕ್ತಿ ತೀಕ್ಷ್ಣವಾಗಿ ಚುರುಕುಗೊಂಡು, ನನ್ನ ಬದುಕಿನ ವಿವಿಧ ಘಟನೆಗಳನ್ನು ರಕ್ಷಣೆಯ ತಡೆಯಾಗಿ ರಾಶಿಹಾಕಿತು.

ಉದಾಹರಣೆಗೆ, ದೃಢವಾದ ತನ್ನ ಪುಟ್ಟ ಪಾದಗಳಿಂದ ಮರಳನ್ನು ಮುಟ್ಟುತ್ತ ಬಂದ ಮುಳ್ಳುಹಂದಿ. ಅವನ್ನು ಕಂಡು, ಕೆವರಿದ ಕೂದಲಿದ್ದ ಅಷ್ಟೇ ಪುಟ್ಟವಾದ ಮನೆಪಿಶಾಚದ ನೆನಪು ನನಗಾಯಿತು.

ಅಜ್ಜಿ, ಒಲೆಯ ಮುಂದೆ ಮುದುಡಿಕೊಂಡು, "ಒಳ್ಳೆಯ ಪುಟ್ಟಪಿಶಾಚಿಯೇ, ಜಿರಳೆಗಳನ್ನು ನುಂಗಿಹಾಕು," ಎಂದು ಜಪಿಸುತ್ತಿದ್ದುದು ನೆನಪಿಗೆ ಬಂತು....

....ದೃಷ್ಟಿಗೆ ಗೋಚರವಾಗದ ಕಡೆ, ಶಹರದಾಚೆಗೆ ಬಲುದೂರದಲ್ಲಿ, ಆಕಾಶ ಶುಭ್ರವಾಗ ತೊಡಗಿತು. ಮುಂಜಾವದ ಚಳಿ, ನನ್ನ ಕೆನ್ನೆಗಳನ್ನು ತೀಕ್ಷ್ಣವಾಗಿ ಹಿಂಡಿತು. ನನ್ನ ರೆಪ್ಪೆಗಳು ಭಾರವಾದುವು. ಚೆಂಡಿನಂತೆ ಮುರುಟಿಕೊಂಡು ಕಂಬಳಿಯನ್ನು ನನ್ನ ತಲೆಯ ಮೇಲಕ್ಕೂ ಎಳೆದೆ. ಬಂದುದುಬರಲಿ-ಎಂದುಕೊಂಡೆ!

ಅಜ್ಜಿ ನನ್ನನ್ನು ಎಚ್ಚರಿಸಿದಳು. ನನ್ನ ಬಳಿ ನಿಂತು, ಕಂಬಳಿಯನ್ನು ಮೆಲ್ಲನೆ ಎಳೆಯುತ್ತಾ, ಆಕೆ ಹೇಳುತ್ತಿದ್ದಳು:

"ಏಳು! ಚಳಿಯಾಗಿದೆಯೇನು? ಹುಂ, ಅಷ್ಟೊಂದು ಭಯಂಕರವಾಗಿತ್ತೆ ರಾತ್ರೆ?"

"ಹೌದು, ಭಯಂಕರವಾಗಿತ್ತು. ಆದರೆ ಯಾರಿಗೂ ಹೇಳಬೇಡ. ಅವರು ಯಾರಿಗೂ ಗೊತ್ತಾಗಬಾರದು."

ತುಸು ಅಚ್ಚರಿಗೊಂಡು ಆಕೆ ಕೇಳಿದಳು:

"ಗೊತ್ತಾದರೇನಂತೆ? ಹೆದರುವಂಥಾದ್ದೇನೂ ಇರಲಿಲ್ಲವೆಂದಾದರೆ, ಜಂಭ ಕೊಚ್ಚಿ

ಕೊಳ್ಳೋದಕ್ಕೆ ಉಳಿಯೋದಾದರೂ ಏನು?"

ನಾವು ಮನೆಗೆ ಹೊರಟೆವು. ಹಾದಿಯಲ್ಲಿ ಆಕೆ ಮೃದುವಾಗಿ ಅಂದಳು:

"ಪ್ರತಿಯೊಂದನ್ನೂ ಸ್ವತಃ ನೀನೇ ಪರೀಕ್ಷಿಸಿ ನೋಡಬೇಕು, ಮುದ್ದು ಪಾರಿವಾಳ. ಪ್ರತಿ ಯೊಂದನ್ನೂ ಸ್ವತಃ ನೀನೇ ಕಲಿತ್ಕೋಬೇಕು. ನೀನಾಗಿಯೇ ತಿಳಕೊಳ್ಳದಿದ್ದರೆ ಬೇರೆ ಯಾರೂ ನಿನಗೆ ಕಲಿಸಿಕೊಡೋದಿಲ್ಲ."

ಸಂಜೆಯೊಳಗಾಗಿ ನಾನು ನಮ್ಮ ಬೀದಿಯ 'ವೀರ'ನಾಗಿದ್ದೆ. ಪ್ರತಿಯೊಬ್ಬರೂ ನನ್ನನ್ನು ಕೇಳಿದರು:

"ಭಯಂಕರವಾಗಿತ್ತಲ್ಲವೆ?"

"ಹೌದು, ಭಯಂಕರವಾಗಿತ್ತು!" ಎಂದು ನಾನೆಂದಾಗ, ಅವರು ತಲೆಯಲುಗಿಸಿ ಇತರರ ಕಡೆ ತಿರುಗಿ ಉದ್ಗರಿಸುತ್ತಿದ್ದರು:

"ನೋಡಿದಿರಾ!"

ಅಂಗಡಿಯವನು ಪೂರ್ಣನಂಬುಗೆಯಿಂದ ಘೋಷಿಸಿದ:

"ಕಾಲಿನಿನ್ ಗೋರಿಯಿಂದ ಹೊರಗೆ ಬರುತ್ತಾನೆ ಅಂತ ಅವರು ಸುಳ್ಳು ಹೇಳಿದರೂಂ ತಾಯ್ತು. ಹಾಗಾದರೆ, ಹೊರಗೆ ಬಂದಿದ್ದರೆ, ಈ ಹುಡುಗನನ್ನು ಕಂಡು ಹೆದರುತ್ತಿದ್ದನೆ ಆತ? ಕೈಯ ಒಂದೇ ಹೊಡತದಿಂದ ಅವನನ್ನು ಸ್ಮಶಾನದ ಹೊರಕ್ಕೆ-ಎಲ್ಲಿಗೆ ಅಂತ ದೇವರೇ ಬಲ್ಲ- ಎಸೆದುಬಿಡ್ತಿದ್ದ."

ಲುಡ್ಮಿಲ್ಲಾ, ಪ್ರೀತಿಯ ಅಚ್ಚರಿಯಿಂದ ನನ್ನೆಡೆಗೆ ನೋಡಿದಳು. ಅಜ್ಜ ಕೂಡಾ ಸಂತುಷ್ಟ ನಾದಂತೆ ಕಂಡಿತು. ಯಾಕೆಂದರೆ, ನನ್ನ ಕಡೆ ನೋಡಿ ಆತ ಕಿಸಿದು ನಗುತ್ತಲೇ ಇದ್ದ. ಚುರ್ಕಾ ಮಾತ್ರ ಒಳಗಿಂದೊಳಗೇ ಸಿಟ್ಟುಗೊಂಡು ನುಡಿದ:

"ಅವನಿಗೆ ಅದು ಸುಲಭ—ಆತನ ಅಜ್ಜಿ ಮಾಯಾವಿನಿ!"

೩

ಮುಂಜಾವದಲ್ಲಿ ನಕ್ಷತ್ರ ಯಾರ ಕಣ್ಣಿಗೂ ಬೀಳದ ಹಾಗೆ ಕಳಾಹೀನವಾಗಿ ಮಾಯವಾಗು ವಂತೆ, ನನ್ನ ತಮ್ಮ ಕೋಲ್ಯಾ ಮರೆಯಾಗಿ ಹೋದ. ಶೆಡ್ಡಿನಲ್ಲಿ, ಒಟ್ಟಲಾಗಿದ್ದ ಮರದ ಹೋಪು ಗಳ ಮೇಲೆ ಅರಿವೆ ಚಿಂದಿಗಳನ್ನು ಹರಡಿ, ಕೋಲ್ಯಾ, ಅಜ್ಜಿ ಮತ್ತು ನಾನು ಮಲಗುತ್ತಿದ್ದೆವು. ಬಲು ತೆಳ್ಳಗಿದ್ದ ಗೋಡೆಯಾಚೆಗೆ, ಮನೆಯ ಮಾಲಿಕ ತನ್ನ ಕೋಳಿಮರಿಗಳನ್ನು ಇರಿಸಿದ್ದ. ಪ್ರತಿಸಂಜೆ, ಹೊಟ್ಟೆ ತುಂಬಿದ್ದ ಹೇಂಟೆಗಳ ಕಲಕಲನಾದವೂ ಅವು ರೆಕ್ಕೆ ಬಡೆಯುತ್ತಿದ್ದ ಸಪ್ಪಳವೂ ಕೇಳಿಸು ತ್ತಿದ್ದುವು. ಪ್ರತಿ ಬೆಳಗ್ಗೆ, ಬಂಗಾರ ಬಣ್ಣದ ಕೋಳಿಯೊಂದರ ಪೂರ್ತಿ ಗಂಟಲ ಕೋಕೋ ಸದ್ದಿನಿಂದ ನಮಗೆ ಎಚ್ಚರವಾಗುತ್ತಿತ್ತು.

"ಯಾರಾದರೂ ನಿನ್ನ ತಲೇನ ಕಡಿದು ಹಾಕ್ಬೇಕು!" ಎಂದು ಅಜ್ಜಿ, ಎಚ್ಚರಗೊಳ್ಳುತ್ತಿದ್ದಂತೆ ಒಂದು ಬೆಳಗ್ಗೆ ಗೊಣಗಿದಳು.

ನನಗಾಗಲೇ ಎಚ್ಚರವಾಗಿತ್ತು, ಗೋಡೆಯ ಬಿರುಕಿನೆಡೆಯಿಂದ ಸೂರ್ಯ ಒಳಕ್ಕೆ ಹರಿಯು ತ್ತಿದ್ದುದನ್ನೂ ಆ ಕಿರಣಗಳಲ್ಲಿ ಬೆಳ್ಳಿಯ ಕಣಗಳು ಯಕ್ಷಿಣಿ ಕಥೆಯ ಪದಗಳಂತೆ ಕುಣಿಯುತ್ತಿದ್ದು ದನ್ನೂ ನೋಡುತ್ತ ನಾನು ಮಲಗಿದ್ದೆ. ಪೊಪ್ರಗಳೆಡೆಯಲ್ಲಿ ಮಸೆ ಇಲಿಗಳು ಸರಸರ ಸದ್ದು ಮಾಡುತ್ತಿದ್ದುವು. ರೆಕ್ಕೆಗಳಲ್ಲಿ ಕರಿಯ ಚುಕ್ಕಿಗಳಿದ್ದ ಪುಟ್ಟಪಾದ ಕೆಂಪು ಬೀಟ್ಲ್‌ಗಳು, ಹಿಂದಕ್ಕೂ ಮುಂದಕ್ಕೂ ಚಲಿಸುತ್ತಿದ್ದುವು.

ಕೆಲವೊಮ್ಮೆ, ಕೋಳಿ ಹಿಕ್ಕೆಯ ಉಸಿರುಕಟ್ಟಿಸುವ ಕಟುವಾಸನೆಯಿಂದ ತಪ್ಪಿಸಿಕೊಳ್ಳಲು, ಶೆಡ್ಡಿನಿಂದ ಹೊರಕ್ಕೆ ನುಸುಳಿ ನಾನು ಮಾಡವನ್ನೇರುತ್ತಿದ್ದೆ. ಅಲ್ಲಿಂದ, ನಿದ್ದೆಯಲ್ಲಿ ಊದಿಕೊಂಡ, ಗಾತ್ರದ, ಕಣ್ಣೇ ಮಾಯವಾದಂತಿದ್ದ. ನೆರೆಹೊರೆಯವರು ಎಚ್ಚರಗೊಳ್ಳುವುದನ್ನು ನಾನು ನಿರೀಕ್ಷಿ ಸುತ್ತಿದ್ದೆ.

ಒಂದು ಕಿಟಿಕಿಯೊಳಗಿಂದ, ಕೆಟ್ಟ ನಾಲಿಗೆಯ ಕುಡುಕ ಅಂಬಿಗ ಫರ್ಮಾಸೋವನ ಸಿಕ್ಕು ಗೂದಲು ತಲೆ ಹೊರಕ್ಕೆ ಇಣಿಕಿತು. ತನ್ನ ಊದು ಕಣ್ಣುಗಳ ಬಿರುಕುಗಳನ್ನಾತ ಸೂರ್ಯನತ್ತ ತಿರುಗಿಸಿ, ಹಂದಿಯಂತೆ ಗುರುಗುಟ್ಟಿದ. ಅಜ್ಜ, ವಿರಳವಾಗಿದ್ದ ತನ್ನ ಕೆಂಪು ತಲೆಗೂದಲನ್ನು ಎರಡೂ ಕೈಗಳಿಂದ ಹಿಂದಕ್ಕೆ ನೀವುತ್ತಾ, ಅಂಗಳಕ್ಕೆ ಓಡಿದ. ಆತ ಧಾವಿಸುತ್ತಿದ್ದುದು ಸ್ನಾನದ ಮನೆಗೆ, ತಣ್ಣೀರಿನಿಂದ ಮೈ ತೋಯಿಸಿಕೊಳ್ಳುವುದಕ್ಕೆ. ಮಾಲಿಕನ ನಾಚಾಳಿ ಅಡುಗೆಯವಳು— ಚೂಪಾದ ಮೂಗೂ ಮುಖದ ತುಂಬ ಪಿಟಿಕೆಗಳೂ ಇದ್ದ ಹೆಂಗಸು—ಕುಕೂ ಹಕ್ಕಿಯನ್ನು ಹೋಲುತ್ತಿದ್ದಳು. ಸ್ವತಃ ಮಾಲಿಕನೇ, ಕೊಬ್ಬಿದ ವಯಸ್ಸಾದ ಪಾರಿವಾಳವನ್ನು ಹೋಲುತ್ತಿದ್ದ. ಪ್ರತಿಯೊಬ್ಬರೂ ಯಾವುದೋ ಹಕ್ಕಿಯ ಇಲ್ಲವೆ ಮೃಗದ ನೆನಪನ್ನು ಹುಟ್ಟಿಸುತ್ತಿದ್ದರು.

ಆ ಪ್ರಾತಃಕಾಲ ಸ್ವಚ್ಛವಾಗಿತ್ತು, ಸುಂದರವಾಗಿತ್ತು. ಆದರೂ ನನಗೆ ಬೇಸರವೆನಿಸಿತು. ನಾನು ಒಂಟಿಯಾಗಿ ಇರಬಹುದಾದ ಹೊಲಗಳೆಡೆಗೆ ದೂರ ಹೋಗಲು ಬಯಕೆಯಾಯಿತು. ಆ ಶುಭ್ರವಾದ ದಿನವನ್ನು ಜನರು ಖಂಡಿತವಾಗಿಯೂ ಹೊಲಸುಗೊಳಿಸುವರೆಂಬುದು ನನಗೆ ಗೊತ್ತಿತ್ತು.

ಒಮ್ಮೆ ನಾನು ಮಾಡದಮೇಲಿದ್ದಾಗ ಅಜ್ಜಿ, ನನ್ನನ್ನು ಕರೆದು, ಹಾಸಿಗೆಯ ಕಡೆ ನೋಡಿ ತಲೆಯನ್ನಾಡಿಸಿ, ಮೃದುಧ್ವನಿಯಲ್ಲಿ ಅಂದಳು:

"ಕೋಲ್ಯಾ ಸತ್ತುಹೋದ."

ಮಗು, ಕೆಂಪು ಕ್ಯಾಲಿಕೋ ಹೊದಿಸಿದ್ದ ತಲೆದಿಂಬಿನಿಂದ ತೆಳುಹಾಸಿಗೆಗೆ ಜಾರಿದ್ದ. ಮೈ ನೀಲಿಯಾಗಿ ಬೆತ್ತಲೆಯಾಗಿತ್ತು. ಅಂಗಿ ಕತ್ತಿನವರೆಗೆ ಮೇಲಕ್ಕೆ ಸರಿದು, ಊದಿಕೊಂಡಿದ್ದ ಹೊಟ್ಟೆಯೂ ಕಜ್ಜಿಯಾಗಿದ್ದ ಕಾಲುಗಳೂ ಕಾಣಿಸುತ್ತಿದ್ದುವು. ಏಳಲು ಯತ್ನಿಸಿದ್ದನೇನೋ ಎನ್ನುವಂತೆ ಕೈಗಳು ಬೆನ್ನ ಹಿಂದಕ್ಕೆ ಸರಿದಿದ್ದುವು. ತಲೆ, ತುಸು ಒಂದು ಪಕ್ಕಕ್ಕೆ ವಾಲಿತ್ತು.

ಆತನ ತಲೆಗೂದಲನ್ನು ಬಾಚುತ್ತಾ ಅಜ್ಜಿ ಅಂದಳು:

"ಅಂತೂ ಸತ್ತನಲ್ಲಪ್ಪ ಸದ್ಯಃ. ಈ ಕಾಹಿಲೆಯ ಬಡಪ್ರಾಣಿ ಬದುಕ್ತಾ ಇರೋದಾದರೂ ಹ್ಯಾಗೆ ಸಾಧ್ಯವಿತ್ತು ?"

ಅಜ್ಜ ಒಂದು, ಮೃತದೇಹದ ಸುತ್ತಲೂ ಅತ್ತಿತ್ತ ಕುಪ್ಪಳಿಸಿದ; ಮಗುವಿನ ಮುಚ್ಚಿದ್ದ ಕಣ್ಣುಗಳನ್ನು ಜಾಗರೂಕತೆಯಿಂದ ಮುಟ್ಟಿದ.

"ಮಲಿನ ಕೈಗಳಲ್ಲಿ ಅಪನನ್ನು ಮುಟ್ಟಬೇಡ," ಎಂದು ಅಜ್ಜಿ ತೀಕ್ಷ್ಣವಾಗಿ ನುಡಿದಳು.

ಅಜ್ಜ ಗೊಣಗಿದ: "ಜಗತ್ತಿಗೆ ಬಂದ—ಉಸಿರಾಡಿದ—ತಿಂದ—ಎಲ್ಲವೂ ವ್ಯರ್ಥ—"

ನಡುವೆ ಬಾಯಿ ಹಾಕಿ ಅಜ್ಜಿ ಎಂದಳು:

"ನೀನು ಏನು ಹೇಳ್ತಿದೀ ಅನ್ನೋದನ್ನು ಯೋಚಿಸು ?"

ಆಕೆಯ ಎಡೆಗೆ ಆತ ಶೂನ್ಯನೋಟ ಬೀರಿ, ಹೊರಗೆ ಅಂಗಳಕ್ಕೆ ಹೋದ.

"ನಿನಗಿಷ್ಟಬಂದಂತೆ ಮಾಡು. ಅಪನ ಶವಸಂಸ್ಕಾರದ ವೆಚ್ಚಕ್ಕೆ ನನ್ನ ಹತ್ತಿರ ಹಣವಿಲ್ಲ," ಎಂದ.

"ಛೆ, ಪಾಪಿ ಪ್ರಾಣಿ !"

ನಾನು ಹೊರಟು ಹೋದೆ; ಸಂಜೆಯಷ್ಟೇ ಹಿಂತಿರುಗಿದೆ.

ಕೋಲ್ಯಾನನ್ನು ಮಾರನೆಯ ದಿನ ಮಣ್ಣು ಮಾಡಿದರು. ನಾನು ಇಗರ್ಜಿಗೆ ಹೋಗಲಿಲ್ಲ. ಅಲ್ಲಿ ಶವಸಂಸ್ಕಾರದ ವಿಧಿಗಳು ಆಗುತ್ತಿದ್ದಂತೆ, ಆ ಸಮಯವನ್ನು ನನ್ನ ತಾಯಿಯ ಗೋರಿಯ ಬಳಿ ಕುಳಿತು ನಾನು ಕಳೆದೆ. ನನ್ನ ಪುಟ್ಟ ತಮ್ಮನನ್ನು ಕೆಳಕ್ಕೆ ಇಳಿಸುವುದಕ್ಕೋಸ್ಕರ ಆ ಗೋರಿಯನ್ನು ಈಗ ಅಗೆದು ತೆರೆದಿದ್ದರು. ನನ್ನ ನಾಯಿ ನನ್ನ ಜತೆ ಇತ್ತು. ಯಾಜ್‌ನ ತಂದೆಯೂ ನನ್ನ ಬಳಿ ಕುಳಿತಿದ್ದ. ಅತ್ಯಲ್ಪ ಹಣಕ್ಕೇ ಗೋರಿ ಅಗೆಯಲು ಒಪ್ಪಿಕೊಂಡಿದ್ದ ಆತ, ಆ ವಿಷಯ ನನ್ನೆದುರು ಬಡಾಯಿಕೊಚ್ಚುತ್ತಲೇ ಇದ್ದ.

"ನೀನು ನನ್ನ ಸ್ನೇಹಿತನಾಗಿರೋದರಿಂದ ಇಷ್ಟು ಕಡಮೆ ತಗೋತಾ ಇದೀನಿ. ಇಲ್ಲದೆ ಹೋಗಿದ್ದರೆ ಒಂದು ರೂಬಲ್ ಕೇಳ್ತಿದ್ದೆ."

ಗೋರಿಯಲ್ಲಿ ಅಗೆದಿದ್ದ ತೂತು ಹಳದಿಯಾಗಿ ಕಾಣುತ್ತಿತ್ತು. ಅದರೊಳಗಿಂದ ದುರ್ಗಂಧ ಹೊರಬರುತ್ತಿತ್ತು. ಆ ತೂತಿನೊಳಕ್ಕೆ ದೃಷ್ಟಿ ಬೀರಿದಾಗ, ಕರಿದಾದ ಬೂಜು ಹಿಡಿದಿದ್ದ ಹಲಗೆಗಳನ್ನು ಒಮ್ಮೆ ಕಂಡೆ. ನಾನು ತುಸು ಮಿಸುಕಿದರೂ ಸಾಕು, ಮರಳು ಹರಿದು ತೂತಿನ ತಳಕ್ಕೆ ಇಳಿಯುತ್ತಿತ್ತು. ಮರಳು ಹಲಗೆಗಳನ್ನು ಮುಚ್ಚಲೆಂದು, ಉದ್ದೇಶಪೂರ್ವಕವಾಗಿಯೇ ನಾನು ಮುಂದಕ್ಕೆ ಚಲಿಸಿದೆ.

"ನಿನ್ನ ತುಂಟತನವೊಂದೂ ಬೇಡ, ಮರಿ," ಎಂದು ಯಾಜ್‌ನ ತಂದೆ, ತನ್ನ ಪೈಪನ್ನು ಚೀಪುತ್ತಾ ಅಂದ.

ಅಜ್ಜಿ, ಪುಟ್ಟದಾದ ಬಿಳಿಯ ಶವದಾನಿಯನ್ನು ಹೊತ್ತುತಂದಳು. ಆ 'ಹೊಲಸು ರೈತ' ಗೋರಿಯ ತೂತಿನೊಳಕ್ಕೆ ಹಾರಿದ. ಆಕೆಯ ಕೈಯಿಂದ ಶವದಾನಿಯನ್ನು ತೆಗೆದುಕೊಂಡ. ಬೂಜು ಹಿಡಿದಿದ್ದ ಹಲಗೆಗಳ ಪಕ್ಕದಲ್ಲಿ ಅದನ್ನು ಇರಿಸಿದ. ಪುನಃ ತೂತಿನಿಂದ ಹೊರಕ್ಕೆ ಹಾರಿ, ಪಾದಗಳಿಂದಲೂ ಹಾರೆಯಿಂದಲೂ ಮರಳನ್ನು ತಳ್ಳತೊಡಗಿದ. ಧೂಪಪಾತ್ರೆಯ ಹಾಗೆ ಆತನ ಪೈಪಿನಿಂದ ಹೊಗೆ ಏಳುತ್ತಿತ್ತು. ಅಜ್ಜಿಯೂ ಅಜ್ಜನೂ ಮೌನವಾಗಿ ಆತನಿಗೆ ನೆರವಾದರು. ಧರ್ಮಗುರುವಿರಲಿಲ್ಲ. ಭಿಕ್ಷುಕರಿರಲಿಲ್ಲ. ಶಿಲುಬೆಗಳ ಸಂದಣಿಯಲ್ಲಿ ನಾವು ಮೂವರು ಮಾತ್ರ ಇದ್ದೆವು.

ಸ್ಮಶಾನದ ಕಾವಲುಗಾರನಿಗೆ ಹಣವನ್ನು ಕೊಡುತ್ತ, ಜರೆಯುವ ಧ್ವನಿಯಲ್ಲಿ ಅಜ್ಜಿ ಅಂದಳು:

ಎತ್ತರದ ಕರಿಯ ಡೇರೆಯಂತೆ, ಪೈನ್‌ಮರಗಳ ಒಂದು ಗುಂಪು ಬೆಳೆದಿತ್ತು. 'ಸಾವ್‌ಲೋವನ ಕೇಸರ' ಎಂದು ಅದನ್ನು ಕರೆಯುತ್ತಿದ್ದರು.

ಆ ಎಲ್ಲ ಸಂಪತ್ತು ಕೌಂಟ್ ಶುವಲೋವ್‌ಗೆ ಸೇರಿತ್ತು. ಅದರ ಕಾವಲಿನ ವಿಷಯದಲ್ಲಿ ಆತ ಉದಾಸೀನನಾಗಿದ್ದ. ಕುನಾವಿನೋ ಪಟ್ಟಣಿಗರು, ಆ ಕಾಡು ತಮ್ಮದೇ ಎಂದು ಭಾವಿಸಿದ್ದರು. ಪೊದೆಕಡ್ಡಿಗಳನ್ನು ಒಯ್ಯುತ್ತಿದ್ದರು. ಸತ್ತಮರಗಳನ್ನು—ಜೀವಂತಮರಗಳನ್ನು ಕೂಡಾ—ಕಡಿದು ಸೀಳುತ್ತಿದ್ದರು. ಶರತ್ಕಾಲದಲ್ಲಿ ಎಷ್ಟೆಷ್ಟೋ ಜನ, ಚಳಿಗಾಲಕ್ಕೋಸ್ಕರ ಸೌದೆ ಸಂಗ್ರಹಿಸಲು, ಕೈಗಳಲ್ಲಿ ಕೊಡಲಿಗಳನ್ನು ಹಿಡಿದು ಸೊಂಟಗಳಿಗೆ ಹಗ್ಗಗಳನ್ನು ಬಿಗಿದು ಅಲ್ಲಿಗೆ ಬರುತ್ತಿದ್ದರು.

ಉಷಃಕಾಲದಲ್ಲಿ ನಾವು ಮೂವರು, ಇಬ್ಬನಿ ತುಂಬಿದ್ದ ಬೆಳ್ಳಿಹಸುರಿನ ಹೊಲಗಳನ್ನು ದಾಟಿದೆವು. ಸೊರಗಿದ ರಷ್ಯನ್ ಸೂರ್ಯ, ಓಕಾ ನದಿಯ ಮೇಲಿಂದ, ದ್ಯಾಟ್ಲೋವಿ ಬೆಟ್ಟಗಳ ನಸುಗೆಂಪು ಮಗ್ಗುಲುಗಳ ಮೇಲಿಂದ, ಹಸುರು ಉದ್ಯಾನಗಳೂ ಬಂಗಾರ ಬಣ್ಣದ ಗೋಪುರಗಳೂ ಇದ್ದ ಬಿಳಿಯ ನಿಜ್ನಿನೊವ್ಗೊರೊಡ್ ನಗರದ ಮೇಲಿನಿಂದ, ಮೆಲ್ಲನೆ ಎದ್ದು ಬರುತ್ತಿದ್ದ. ಶಾಂತವಾಗಿದ್ದ ಮಂದನೀರಿನ, ಓಕಾನದಿಯಿಂದ ಶಾಂತವಾದ, ನಿದ್ದೆಗಣ್ಣಿನ, ಗಾಳಿ ಬೀಸುತ್ತಿತ್ತು. ಬಂಗಾರಬಣ್ಣದ ಗೊಂಡೆಹೂಗಳು ಇಬ್ಬನಿಯಿಂದ ಭಾರವಾಗಿದ್ದ ತಲೆಗಳನ್ನು ಆಡಿಸುತ್ತಿದ್ದುವು. ಅಪರಾಜಿತೆಗಳು ಮೂಕವಾಗಿ ಭೂಮಿಯ ಕಡೆಗೆ ಬಾಗಿದ್ದುವು. ಬಣ್ಣಬಣ್ಣದ ಹುಲ್ಲುಹೂಗಳು ಆಳವಿರದ ಮಣ್ಣಿನಿಂದ ನೆಟ್ಟಗೆ ಕಡ್ಡಿಯಂತೆ ಬೆಳೆದಿದ್ದುವು. 'ನಿಶಾಸುಂದರಿಯರಾ'ದ ನಸುಗೆಂಪು ಹೂಗಳು, ಕಡುಗೆಂಪು ತಾರೆಗಳಾಗಿ ಅರಳಿದ್ದುವು.

ಅರಣ್ಯ ಭುಜಕ್ಕೆ ಭುಜಕೊಟ್ಟು ಸೈನಿಕರಂತೆ ಸಾಲಾಗಿ ಕರಿದಾಗಿ ನಮ್ಮೆಡೆಗೆ ಮುಂದುವರಿಯಿತು. ಕೊಂಬೆಗಳಿದ್ದ ಫರ್‌ಮರಗಳು ಮಹಾಪಕ್ಷಿಗಳಂತಿದ್ದುವು. ಕನ್ನಿಕೆಗಳಂತಿದ್ದುವು ಬರ್ಚ್‌ಮರಗಳು. ಹೊಲಗಳಮೇಲಿಂದ ಜವುಗುಭೂಮಿಯ ಕ್ಷಾರವಾಸನೆ ಬಂತು. ತನ್ನ ನಸುಗೆಂಪು ನಾಲಗೆಯನ್ನು ಹೊರಚಾಚಿ ನನ್ನ ಪಕ್ಕದಲ್ಲೇ ನಡೆದು ಬರುತ್ತಿದ್ದ ನನ್ನ ನಾಯಿ, ನಿಂತಿತು; ಗಾಳಿಯನ್ನು ಮೂಸಿತು; ತೋಳದ ತಲೆಯಂತಿದ್ದ ತನ್ನ ತಲೆಯನ್ನು ಸ್ವಲ್ಪಮಟ್ಟಿನ ಅನಿರ್ಧಾರದಿಂದ ಅಲ್ಲಾಡಿಸಿತು.

ಅಜ್ಜಿಯ ಬೆಚ್ಚಗಿನ ಜಾಕೀಟನ್ನೂ ತುದಿಚಪ್ಪಟೆಯಾಗಿದ್ದ ಹಳೆಯ ಟೋಪಿಯನ್ನೂ ಅಜ್ಜ ತೊಟ್ಟುಕೊಂಡಿದ್ದ. ಯಾರ ಮೇಲೆಯೋ ಹರಿದಾಡುತ್ತ ಮೇಲಕ್ಕೆ ಏರುತ್ತಿದ್ದವನಂತೆ ಆತ, ತನ್ನ ಬುಗರಿಕಾಲುಗಳ ಮೇಲೆ ಕಳ್ಳತನದಿಂದ ಮುಂದುವರಿಯುತ್ತ, ತನ್ನಷ್ಟಕ್ಕೆ ಮುಗುಳುನಗುತ್ತಿದ್ದ. ಅಜ್ಜಿ, ನೀಲಿ ಕುಪ್ಪಸವನ್ನೂ ಕರಿಯಲಂಗವನ್ನೂ ತೊಟ್ಟುಕೊಂಡಿದ್ದಳು. ಬಿಳಿಯ ಕರವಸ್ತ್ರವನ್ನು ತನ್ನ ತಲೆಗೆ ಸುತ್ತಿಕೊಂಡಿದ್ದಳು. ಆಕೆ ವೇಗವಾಗಿ ಮುಂದೆ ಸಾಗುತ್ತಿದ್ದಳು. ಅವಳ ಜತೆ ಸರಿಸಮನಾಗಿ ಹೆಜ್ಜೆ ಇಡುವುದು ಕಷ್ಟಕರವಾಗಿತ್ತು.

ನಾವು ಅರಣ್ಯದ ಹತ್ತಿರಕ್ಕೆ ಬಂದಂತೆ ಅಜ್ಜನ ಉತ್ಸಾಹ ಹೆಚ್ಚಿತು, ಆತ ಹೂಂಕರಿಸುತ್ತ, ಉಸಿರನ್ನು ನೀಳವಾಗಿ ಒಳಕ್ಕೆ ಎಳೆಯತೊಡಗಿದ. ಮೊದಲು ತಡೆತಡೆದು ತೊದಲುತ್ತ, ಬಳಿಕ ಹರ್ಷಚಿತ್ತನಾಗಿ ಸುಂದರವಾಗಿ, ಅಮಲೇರುತ್ತಿತ್ತೇನೋ ಎನ್ನುವಂತೆ, ಅಜ್ಜ ಮಾತನಾಡತೊಡಗಿದ.

"ಅರಣ್ಯಗಳೆಲ್ಲಾ ದೇವರ ಉದ್ಯಾನಗಳು. ಯಾರೂ ನೆಟ್ಟು ಬೆಳೆಸಿದ್ದಲ್ಲ. ಗಾಳಿಯಿಂದ—ಆತನ ಬಾಯಿಯಿಂದ ಹೊರಟ ಪವಿತ್ರ ಶ್ವಾಸದಿಂದ—ಇವು ಹುಟ್ಟಿದುವು. ಹಿಂದೆ ಜಿಗುಲಿಯಲ್ಲಿ, ನಾನು ಯುವಕನಾಗಿದ್ದಾಗ, ನಾನಿನ್ನೂ ಅಂಬಿಗನಾಗಿದ್ದಾಗ, ಆಗ ಹೇಗಿತ್ತು ಅಂತೀಯಾ! ಆ, ಅಲೆಕ್ಸಿ, ಆಗ ನಾನು ಕಂಡದ್ದನ್ನು ನೋಡೋ ಅದೃಷ್ಟ ನಿನಗಿಲ್ಲ! ಓಕಾ ನದಿಯುದ್ದಕ್ಕೂ ಕಾಸಿಮೋವ್‌ನಿಂದ ಮುರೋಮ್‌ವರೆಗೂ ಅರಣ್ಯಗಳು! ಅಥವಾ ವೋಲ್ಗಾದಿಂದಾಚೆಗೆ ನೇರ ಉರಾಲ್‌ವರೆಗೂ ಅರಣ್ಯಗಳು! ಕೊನೆಯೇ ಇಲ್ಲದ ಅದ್ಭುತವಾಗಿತ್ತು ಅದು!"

ಅಜ್ಜ, ಹುಬ್ಬುಗಳ ಅಡಿಯಿಂದ ನನ್ನೆಡೆಗೆ ನೋಡಿ ಕಣ್ಣು ಮಿಟುಕಿಸಿದಳು. ನನ್ನ ಸ್ಮರಣ ಶಕ್ತಿಯಲ್ಲಿ ಬೇರೂರಿದಂತಹ ಕೆಲ ನೀರಸ ಪದಗಳನ್ನು ಚೆಲ್ಲುತ್ತಾ, ಹಾದಿಯ ಹೊಂಡದಲ್ಲಿ ಎಡವುತ್ತಾ, ಅಜ್ಜ ಮುಂದಕ್ಕೆ ಹಾದಿ ನಡೆದ.

"ಸೂರ್ಯಕಾಂತಿ ಬೀಜದ ಎಣ್ಣೆ ತುಂಬಿದ್ದ ಒಂದು ದೊಡ್ಡ ದೋಣಿಯನ್ನು ಸಾರಟೋವ್ ನಗರದಿಂದ ಮಕಾರನ ದಿನದ ಜಾತ್ರೆಗೆ ಸಾಗಿಸುತ್ತಿದ್ದೆವು. ನಮಗೆ ಮುಖ್ಯಸ್ಥನಾಗಿ ಕಿರಿಲ್ಲೋ ಅನ್ನುವ ಹೆಸರಿನ ಒಬ್ಬ ಮೇಸ್ತ್ರಿ ಇದ್ದ—ಪುರೇಖ್‌ನವನು. ಸರಕಿನ ಜವಾಬ್ದಾರಿ ಹೊತ್ತಿದ್ದ ತಾತರ್ ಒಬ್ಬನಿದ್ದ—ಕಾಸಿಮೋವಿನವನು. ಆತನ ಹೆಸರು ಅಸಾಫ್ ಅಂತ ನೆನಪು. ಸರಿ, ನಾವು ಜಿಗುಲಿ ತಲಪುವ ಹೊತ್ತಿಗೆ ಪ್ರತಿಕೂಲಗಾಳಿ ಬೀಸಿ ನಮಗೆ ಹೊಡೆಯಿತು. ನಮ್ಮಲ್ಲಿದ್ದ ಶಕ್ತಿಯನ್ನೇ ಅಪ್ಪಳಿಸಿಬಿಟ್ಟಿತು. ನಮ್ಮನ್ನು ಅಲ್ಲಿ ತಡೆದೇ ಬಿಟ್ಟಿತು. ಉಸಿರಿಗಾಗಿ ನಾವು ಚಡಪಡಿಸುವ ಹಾಗೆ ಮಾಡಿತು. ಹೀಗಾಗಿ ನಾವು, ಗಂಜಿ ಬೇಯಿಸೋದಕ್ಕೆ ಅಂತ ದಡಹತ್ತಿದೆವು. ಭೂಮಿಯ ಮೇಲಾಗ ಮೇ ತಿಂಗಳು. ಸಮುದ್ರದ ಹಾಗಿತ್ತು ವೋಲ್ಗಾ. ಹಂಸಗಳ ಗುಂಪುಗಳು ಹಾಗೆ ನದಿಯ ಮೇಲೆ ತೆರೆಗಳು ಅಂಥವು ಸಾವಿರಾರು ಕ್ಯಾಸ್ಪಿಯನ್ ಸಮುದ್ರಕ್ಕೆ ತೇಲುತ್ತಿದ್ದುವು. ಜಿಗುಲಿಯ ಬೆಟ್ಟಗಳು ವಸಂತದಲ್ಲಿ ಹಸುರಾಗಿ ದೇವಲೋಕವನ್ನೆ ಮುಟ್ಟುತ್ತಿದ್ದುವು. ಅಲ್ಲಿ ಬಿಳಿಯ ಮೋಡಗಳು ಅವನ್ನು ಸವರುತ್ತಿದ್ದುವು. ಸೂರ್ಯ ಭೂಮಿಯ ಮೇಲೆ ಬಂಗಾರವನ್ನೇ ಸುರಿಯುತಿದ್ದ. ನಾವು ವಿಶ್ರಾಂತಿ ಪಡೆದೆವು, ಆ ಸೊಗಸನ್ನೆಲ್ಲ ಸೇವಿಸಿದೆವು. ನಮ್ಮ ಹೃದಯಗಳು ದ್ರವವಾದುವು. ಕೆಳಗೆ ನದಿಯಲ್ಲಿ ಮಹಾಚಳಿ, ಆದರೆ, ದಂಡೆಯ ಮೇಲೆ ಬೆಚ್ಚಗಿತ್ತು. ಸುತ್ತಲೂ ಸುವಾಸನೆ ಇತ್ತು. ಸಂಜೆಯ ಹೊತ್ತಿಗೆ ಆ ನಮ್ಮ ಕಿರಿಲೋ—ವಯಸ್ಸಾಗಿದ್ದ ಗಂಭೀರ ಮುಖಮುದ್ರೆಯ ಹಳ್ಳಿಗಾಡಿನ ಮನುಷ್ಯ—ಎದ್ದುನಿಂತ. ತನ್ನ ಟೋಪಿಯನ್ನು ತಲೆಯ ಮೇಲಿಂದ ತೆಗೆದು ಅಂದ: 'ಸರಿ, ಹುಡುಗರೇ ಇನ್ನು, ನಾನು ನಿಮ್ಮ ಯಜಮಾನನಲ್ಲ. ನೀವು ನನ್ನ ಸೇವಕರಲ್ಲ. ಇನ್ನು ನೀವೇ ಮುಂದಕ್ಕೆ ಹೋಗ್ಬೇಕು, ನಾನು ಕಾಡಿಗೆ ಹೊರಟು ಹೋಗ್ತೀನಿ!' ನಾವು ತೆರೆದ ಬಾಯಿ ಹಾಗೆಯೇ ಬಿಟ್ಟು ಅಲ್ಲಿ ಕೂತೆವು, ಅಂಥ ಸಂಗತಿ ಕೇಳಿದ್ದರಾದರೂ ಯಾರು? ಮಾಲಿಕನೊಡನೆ ನಮ್ಮ ಪರವಾಗಿ ಮಾತನಾಡೋದಕ್ಕೆ ಯಾರಾದರೂ ಇಲ್ಲದೆ ಮುಂದಕ್ಕೆ ಹೋಗೋದು ಹೇಗೆ ಸಾಧ್ಯವಿತ್ತು? ಜನರು ತಲೆ ಇಲ್ಲದೆ ಅಲೆಯೋದಕ್ಕಾಗುತ್ತದೇನು? ವೋಲ್ಗಾ ನದಿಯೇನೋ ಸರಿ. ಆದರೂ ನಮಗೆ ಹಾದಿ ತಪ್ಪಬಹುದು. ಮಾನವನೋ ಮೃಗಗಳಲ್ಲಿ ಅತ್ಯಂತ ಕ್ರೂರನಾದವ—ಇಷ್ಟಕ್ಕೇ ಆತ ತಡೆದಾನು ಎನ್ನುವಂತಿಲ್ಲ. ಹೀಗಾಗಿ ನಮಗೆ ಭಯವಾಯ್ತು. ಆದರೆ ಕಿರಿಲ್ಲೋ ಪಟ್ಟುಹಿಡಿದ: 'ನಿಮಗೆ ಕುರುಬನಾಗಿ ಈ ರೀತಿ ಇರೋದಕ್ಕೆ ಇನ್ನು ನನಗೆ ಇಚ್ಛೆಯಿಲ್ಲ. ನಾನು ಕಾಡಿಗೆ ಹೊರಟೇ-ಬಿಟ್ಟೆ!' ಹೊಡೆದು ಅವನನ್ನು

ಕಟ್ಟಿ ಹಾಕಬೇಕೂಂತ ನಮ್ಮಲ್ಲಿ ಕೆಲವರು ಸೂಚಿಸಿದರು. ಆದರೆ, ಅವನ ಹಾಗೆಯೇ ಯೋಚಿಸಿದವರೂ ಬೇರೆ ಕೆಲವರಿದ್ದರು. "ನಿಲ್ಲು!" ಅಂತ ಅವರು ಕೂಗಿದರು. ಸರಕಿನ ಜವಾಬ್ದಾರಿ ಹೊತ್ತಿದ್ದ ತಾತರ್, "ಅವನ ಜತೆ ನಾನೂ ಹೊರಟೆ!" ಅಂದ. ಪರಿಸ್ಥಿತಿ ನಿಜವಾಗಿಯೂ ಕೆಟ್ಟಿತು. ಮಾಲಿಕ, ಎರಡು ಪ್ರವಾಸಗಳ ವೇತನವನ್ನು ಆಗಲೇ ಆತನಿಗೆ ಕೊಡುವುದಿತ್ತು. ಮೂರನೆಯ ಪ್ರವಾಸವೂ ಆಗಲೇ ಅರ್ಧ ಮುಗಿದಿತ್ತು. ಆಗಿನ ಕಾಲದಲ್ಲಿ ಅದು ಬಹಳ ಹೆಚ್ಚು ಹಣವೇ ಸರಿ. ನಾವು ರಾತ್ರಿಯವರೆಗೂ ಬೊಬ್ಬಿಟ್ಟೆವು. ಕತ್ತಲಾದಾಗ ಏಳು ಜನ, ನಮ್ಮನ್ನು-ಸುಮಾರು ಹದಿನೈದೋ ಹದಿನಾರೋ ಜನರನ್ನು—ಅಲ್ಲೇ ಬಿಟ್ಟು ಹೊರಟುಹೋದರು. ಅರಣ್ಯ ಮನುಷ್ಯನಿಗೆ ಏನು ಮಾಡ್ತದೇಂತ ನೋಡು!"

"ಅವರು ದರೋಡೆಗಾರರಾಗೋದಕ್ಕೋಸ್ಕರ ಹೊರಟು ಹೋದರೆ?"

"ದರೋಡೆಗಾರರಾಗೋದಕ್ಕೂ ಇರಬಹುದು, ಸನ್ಯಾಸಿಗಳಾಗೋದಕ್ಕೂ ಇರಬಹುದು. ಆ ದಿನಗಳಲ್ಲಿ, ಅವೆರಡೂ ಬೇರೆಬೇರೆ ಅಂತ ಜನ ಅಷ್ಟಾಗಿ ಭಾವಿಸ್ತಿರಲಿಲ್ಲ."

ಅಜ್ಜ ಶಿಲುಬೆಯ ವಂದನೆ ಮಾಡಿದಳು.

"ಆ, ದೇವಮಾತೆಯೇ! ಜನರ ವಿಷಯ ಯೋಚಿಸೋದಕ್ಕೆ ಶುರುಮಾಡಿದ್ಧಾಗ, ಹೃದಯದಿಂದ ರಕ್ತ ಸುರೀತದೆ."

"ಪಿಶಾಚಿ ನಮ್ಮನ್ನು ಎಲ್ಲಿಗೆ ಸೆಳೀತಿದೆ ಅಂತ ತಿಳಿಯೋದಕ್ಕೆ ಸಾಕಾಗುವಷ್ಟು ವಿವೇಕವನ್ನು ದೇವರು ನಮಗೆಲ್ಲ ದಯೆಪಾಲಿಸಿದ್ದಾನೆ."

ಬಡಕಲು ಫರ್‌ಮರಗಳ ತೋಪು ಹಾಗೂ ಗುಪ್ಪೆಗುಪ್ಪೆಯಾಗಿದ್ದ ಜವುಗು ಜಾಗ-ಇವುಗಳ ಮಧ್ಯೆ ಇದ್ದ ಒಂದ್ದೆದಾರಿಯ ಮೂಲಕ ನಾವು ಕಾಡಿನ ಒಳಹೊಕ್ಕೆವು. ಪುರೇಖ್‌ನ, ಕಿರಿಲ್ಲೋ ಮಾಡಿದಂತೆ, ಎಂದೂ ಮರಳಿ ಬರದೆ ಇರಲು ಕಾಡಿನೊಳಕ್ಕೆ ಹೊರಟೇ ಹೋಗುವುದು ಎಷ್ಟು ಸೊಗಸು-ಎಂದುಕೊಂಡೆ. ಅರಣ್ಯದಲ್ಲಿ ಹೊಡೆತ ಕುಡಿತ ಜಗಳ ಒಂದೂ ಇರಲಿಲ್ಲ. ಅಜ್ಜನ ದುರಾಶೆಯನ್ನೂ ಮರಳಿನಲ್ಲಿದ್ದ ತಾಯಿಯ ಗೋರಿಯನ್ನೂ-ನೋಯಿಸಿ ಹೃದಯವನ್ನು ಭಾರಗೊಳಿಸಿದ್ದ ಪ್ರತಿಯೊಂದನ್ನು-ಅಲ್ಲಿ ಮರೆತು ಬಿಡುವುದು ಸಾಧ್ಯವಿತ್ತು.

ಒಣಗಿದ್ದೊಂದು ಜಾಗವನ್ನು ನಾವು ತಲಪಿದಾಗ ಅಜ್ಜಯೆಂದಳು:

"ಒಂದಿಷ್ಟು ತಿನ್ನೋ ಸಮಯವಾಯ್ತು. ಕೂತ್ಕೊಳ್ಳಿ."

ತನ್ನ ಬುಟ್ಟಿಯಿಂದ ಆಕೆ, ನವಣೆಯ ಸ್ವಲ್ಪ ರೊಟ್ಟಿಯನ್ನೂ ಹಸಿ ಈರುಳ್ಳಿಗಳನ್ನೂ ಉಪ್ಪಿನಕಾಯಿ-ಉಪ್ಪು ಮತ್ತು ಅರಿವೆಯಲ್ಲಿ ಸುತ್ತಿದ್ದ ಮನೆ ಗಿಣ್ಣನ್ನೂ ಹೊರತೆಗೆದಳು. ಅಜ್ಜ ಅಸಮಾಧಾನಪಡುತ್ತ ಅದನ್ನೆಲ್ಲ ಪಿಳಿಪಿಳಿ ದಿಟ್ಟಿಸಿದ.

"ಹುಂ, ನಾನು ಏನನ್ನೂ ತರಲೇ ಇಲ್ಲ ಅಂದರೆ-ಛೆ!"

"ನಮಗೆ ಎಲ್ಲರಿಗೂ ಸಾಕಾಗುವಷ್ಟಿದೆ."

ಎತ್ತರದ ಒಂದು ಪೈನ್‌ಮರದ ಕಂಚಿನಂತಿದ್ದ ಕಾಂಡಕ್ಕೊರಗಿ ನಾವು ಕುಳಿತೆವು. ಗಾಳಿ, ರಾಳದ ವಾಸನೆಯಿಂದ ತುಂಬಿತ್ತು. ಹೊಲಗಳಿಂದ ಮೃದುವಾದ ತಂಗಾಳಿ, ಹುಲ್ಲಿನ ಮೇಲೆ ಕಮಾನಿನಂತೆ ಬೀಸಿಬಂತು. ಅಜ್ಜಿ ಕಪ್ಪಗಿನ ತನ್ನ ಕೈಯಿಂದ ವಿವಿಧ ಗಿಡಮೂಲಿಕೆಗಳನ್ನು ಕಿತ್ತಳು. ಬಾಳೆಹಣ್ಣಿನ, ಸಂತ ಜಾನನ ಗಿಡದ, ರೋಗನಿವಾರಕಾ ಗುಣಗಳೇನೆಂಬುದನ್ನು

ಫರ್ನ್ ಎಲೆಗಳ, ಜಿಗುಟಾಗಿದ್ದ ಗುಲಾಬಿ ಮೂಲಿಕೆಯ, ಐಂದ್ರಜಾಲಿಕ ಶಕ್ತಿ ಏನೆಂಬುದನ್ನು, ಆಕೆ ನನಗೆ ವಿವರಿಸಿದಳು.

ಅಜ್ಜ ಪೊದೆಗಳನ್ನು ಕಡಿದ. ಅವುಗಳನ್ನೆಲ್ಲ ಒಂದು ಜಾಗದಲ್ಲಿ ನಾನು ಒಟ್ಟಬೇಕಾಗಿತ್ತು. ಆದರೆ ನಾನು ತಪ್ಪಿಸಿಕೊಂಡು, ಪೊದರುಗಳ ಮಧ್ಯೆ ಅಜ್ಜಿಯನ್ನು ಹಿಂಬಾಲಿಸುತ್ತ, ನಡೆದೆ. ಆಕೆ ಮರಗಳ ಬಲಿಷ್ಠಕಾಂಡಗಳೆಡೆಯಲ್ಲಿ ತೇಲುತ್ತ, ನೀರಿನೊಳಕ್ಕೆ ಮುಳುಗುವಂತೆ ಅತಿ ಮೃದುವಾದ ಮಣ್ಣಿನೊಳಕ್ಕೆ ಆಗಾಗ್ಗೆ ಕೈ ತುರುಕುತ್ತ ಮುಂದುವರಿದಳು. ನಡೆದಂತೆ, ತನ್ನಷ್ಟಕ್ಕೇ ಆಕೆ ಮಾತನಾಡಿದಳು.

"ನಾಯಿಕೊಡೆಗಳು ಈ ವರ್ಷ ಬಹಳ ಬೇಗನೆ ಕಾಣಿಸಿಕೊಂಡಿವೆ—ಅಂದರೆ, ಬೆಳೆ ಹೆಚ್ಚಿರೋದಿಲ್ಲ ಅಂತ ಅರ್ಥ. ಬಡವರನ್ನು ಸರಿಯಾಗಿ ನೀನು ನೋಡ್ಕೊಳ್ತಿಲ್ಲ, ದೇವರೆ—ಏನೂ ಇಲ್ಲದವರಿಗೆ ನಾಯಿಕೊಡೆ ಕೂಡಾ ಆಹಾರ."

ಅಜ್ಜಿಯ ಕಣ್ಣಿಗೆ ಬೀಳದಂತೆ ಪ್ರಯತ್ನಪಡುತ್ತಾ, ಸದ್ದುಮಾಡಧೆ ನಾನು ಆಕೆಯನ್ನು ಹಿಂಬಾಲಿಸಿದೆ. ದೇವರೊಡನೆ, ಕಪ್ಪೆಗಳೊಡನೆ, ಹುಲ್ಲುಗಳೊಡನೆ, ಆಕೆ ನಡೆಸಿದ್ದ ಮಾತುಕತೆಯನ್ನು ನಡುವೆ ತಡೆಯಲು ನಾನು ಇಷ್ಟಪಡಲಿಲ್ಲ.

ಆದರೆ, ಆಕೆ ನನ್ನನ್ನು ನೋಡಿಬಿಟ್ಟಳು.

"ಅಜ್ಜನಿಂದ ತಪ್ಪಿಸ್ಕೊಂಡು ಓಡಿ ಬಂದೆ, ಅಲ್ಲ ?"

ಗಿಡಗಳ ಸಮೃದ್ಧವಾದ ಕಸೂತಿಯಲ್ಲಿ ಮೈಮುಚ್ಚಿಕೊಂಡಿದ್ದ ಕರಿಯ ನೆಲದ ಕಡೆಗೆ ಬಾಗಿ, ಮಾನವ ಜೀವಿಗಳ ಮೇಲೆ ದೇವರು ಒಮ್ಮೆ ಹೇಗೆ ವಿಪರೀತ ಸಿಟ್ಟಾಗಿದ್ದನೆಂಬುದನ್ನು, ಆ ಸಿಟ್ಟಿನಲ್ಲಿ ಭೂಮಿಯನ್ನೂ ಎಲ್ಲಾ ಜೀವಂತ ಪ್ರಾಣಿಗಳನ್ನೂ ಹೇಗೆ ಜಲಪ್ರಳಯದಲ್ಲಿ ಮುಳುಗಿಸಿದನೆಂಬುದನ್ನು, ಅಜ್ಜಿ ನನಗೆ ಹೇಳಿದಳು.

"ಆದರೆ, ಕಾಲ ಮಿಂಚುವುದರೊಳಗೆ ದೇವರ ಪವಿತ್ರಮಾತೆ, ಎಲ್ಲಾ ಬೀಜಗಳನ್ನು ತನ್ನ ಬುಟ್ಟಿಯಲ್ಲಿ ಶೇಖರಿಸಿ, ಅವನ್ನು ಬಚ್ಚಿಟ್ಟಳು. ಪ್ರಳಯವಾದ ಮೇಲೆ ಆಕೆ ಸೂರ್ಯನ ಬಳಿಗೆ ಹೋಗಿ, 'ಭೂಮಿಯನ್ನೆಲ್ಲಾ ಕೃಪೆ ಇಟ್ಟು ಒಣಗಿಸು; ಒಳ್ಳೆಯ ಜನರು ಮುಂದೆ ಸದಾ ಕಾಲವೂ ನಿನ್ನ ಗುಣಗಾನಮಾಡ್ತಾರೆ,' ಎಂದಳು. ಹೀಗಾಗಿ ಸೂರ್ಯ, ಭೂಮಿಯನ್ನು ಒಣಗಿಸಿದ. ತಾನು ಬಚ್ಚಿಟ್ಟಿದ್ದ ಬೀಜಗಳನ್ನು ಆಕೆ ಬಿತ್ತಿದಳು. ದೇವರು ಒಮ್ಮೆ ನೋಡಿದ: ಭೂಮಿಯಲ್ಲೆಲ್ಲಾ ಹುಲ್ಲು, ಜಾನುವಾರಗಳು, ಜನರು, ಪುನಃ ಬೆಳೆದಿದ್ದರು! ಎಲಾ! ನನ್ನ ಇಚ್ಛೆಗೆ ಇದಿರಾಗಿ ನಡೆಯೋ ಎದೆಗಾರಿಕೆ ಯಾರದು ?—ಎಂದ. ಆಗ ಆಕೆ, ತಪ್ಪೊಪ್ಪಿಕೊಂಡಳು. ಭೂಮಿಯನ್ನು ಅನಾಥವಾಗಿ ಕಾಣಲು ಸ್ವತಃ ದೇವರಿಗೂ ಕೆಡುಕೆನಿಸಿತು. ಹೀಗಾಗಿ ಆತ ಆಕೆಗೆ, 'ನೀನು ಒಳ್ಳೆಯ ಕೆಲಸಮಾಡಿದೆ, ತಾಯಿ,' ಅಂದ."

ಆ ಕತೆ ನನಗೆ ಇಷ್ಟವಾಯಿತು. ಅದನ್ನು ಕೇಳಿ ನನಗೆ ಆಶ್ಚರ್ಯವೂ ಆಯಿತು. ತೀವ್ರಗಭೀರತೆಯಿಂದ ನಾನೆಂದೆ:

"ಅದು ನಿಜವಾಗಿಯೂ ಹಾಗಿತ್ತೆ? ಕನ್ನಿಕೆ ಪ್ರಳಯವಾಗಿ ಎಷ್ಟೋ ಕಾಲದ ಅನಂತರ ಹುಟ್ಟಿದಳು."

ಈಗ ಆಶ್ಚರ್ಯಗೊಳ್ಳಲು ಅಜ್ಜಿಯ ಸರದಿ.

"ಹಾಗೇಂತ ನಿನಗೆ ಹೇಳಿದವರಾದರೂ ಯಾರು?"

"ಶಾಲೆಯಲ್ಲಿ ಹೇಳಿದರು. ಪುಸ್ತಕಗಳಲ್ಲಿ ಆ ರೀತಿ ಬರೆದಿದೆ."

ಅದನ್ನು ಕೇಳಿ ಅವಳಿಗೆ ಸಮಾಧಾನವಾಯಿತು. ಆಕೆಯೆಂದಳು:

"ಅವರ ಮಾತಿಗೆ ಕಿವಿಕೊಡಬೇಡ. ಪುಸ್ತಕಗಳಲ್ಲಿ ಇರೋದನ್ನು ಮರೆತುಬಿಡು. ಪುಸ್ತಕಗಳಲ್ಲಿರೋದೆಲ್ಲಾ ಸುಳ್ಳು."

ಹಾಗೆ ಹೇಳಿ, ಹರ್ಷಭಾವದಿಂದ ಮೃದುವಾಗಿ ಸಣ್ಣನೆ ಆಕೆ ನಕ್ಕಳು.

"ಮೂರ್ಖರು! ಎಂಥಾ ಸುಳ್ಳು ಕತೆ ಕಟ್ತಾರೆ! ತಾಯಿ ಇಲ್ಲದೆ ದೇವರು ಇರೋದೆ? ಹಾಗಾದರೆ, ದೇವರಿಗೆ ಜನ್ಮ ಕೊಟ್ಟವರು ಯಾರು?"

108136

"ನನಗೆ ಗೊತ್ತಿಲ್ಲ."

"ಅದೀಗ! ನಿನ್ನ ಶಿಕ್ಷಣದ 'ನನಗೆ ಗೊತ್ತಿಲ್ಲ' ಘಟ್ಟವನ್ನು ಮುಟ್ಟಿದೆ."

"ಕನ್ನಿಕೆ, ಜೋಕಿಂ ಮತ್ತು ಅನ್ನಾರಿಗೆ ಹುಟ್ಟಿದಳೂಂತ ಧರ್ಮ ಗುರು ಹೇಳಿದರು."

ಇದಂತೂ ಅಜ್ಜಿಯಪಾಲಿಗೆ ಅತಿ ಎನಿಸಿತು. ಆಕೆ, ಬಿರುನೋಟದಿಂದ ನನ್ನ ಕಣ್ಣುಗಳನ್ನೆ ದಿಟ್ಟಿಸಿ, ಅಂದಳು:

"ಬೇರೆ ಮಾತಿನಲ್ಲಿ ಹೇಳೋದಾದರೆ, ಕನ್ನಿಕೆ, ಮಾರಿಯಾ ಜೋಕಿಮೋವ್ನಾ ಆಗಿದ್ದು, ಅಲ್ಲ? ಅಂಥ ವಿಷಯ ಯೋಚಿಸೋಕೆ ನೀನು ಸಾಹಸ ಮಾಡಿದ್ದೇ ಆದರೆ, ನಿನ್ನ ಚರ್ಮ ಸುಲಿದು ಬಿಡ್ತೀನಿ!"

ಒಂದು ನಿಮಿಷದ ಬಳಿಕ ಆಕೆ ವಿವರಿಸಿದಳು:

"ಪವಿತ್ರ ಕನ್ನಿಕೆ ಯಾವಾಗಲೂ ಇದ್ದಳು-ಬೇರೆ ಎಲ್ಲರು ಬರೋದಕ್ಕೂ ಮುಂಚಿನಿಂದಲೇ. ಆಕೆಗೆ ದೇವರು ಹುಟ್ಟಿದ. ಆ ಮೇಲೆ...."

"ಕ್ರಿಸ್ತನ ವಿಷಯವೇನು?"

ಅಜ್ಜಿ ಅರ್ಥವಾಗದೆ ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು.

"ಕ್ರಿಸ್ತ? ಆ ಹೌದು—ಕ್ರಿಸ್ತ—"

ನಾನು ಗೆದ್ದೆನೆಂಬುದು ಸ್ಪಷ್ಟವಾಗಿತ್ತು. ಸೃಷ್ಟಿಯ ರಹಸ್ಯಗಳಲ್ಲಿ ನಾನು ಆಕೆಯನ್ನು ಸಿಕ್ಕುಗಟ್ಟಿಸಿದ್ದೆ. ಇದರಿಂದ ನನಗೆ ಕಸಿವಿಸಿ ಎನಿಸಿತು.

ಕಾಡಿನಲ್ಲಿ ಮತ್ತೂ ದೂರ, ಬಂಗಾರ ಬಣ್ಣದ ಸೂರ್ಯಕಿರಣಗಳು ಇರಿಯುತ್ತಲಿದ್ದ ನೀಲಿ ಮಂಜಿನೊಳಕ್ಕೆ, ನಾವು ಮುನ್ನಡೆದೆವು. ಬೆಚ್ಚಗಿದ್ದ, ನೆಮ್ಮದಿಯಿಂದಿದ್ದ, ಆ ಕಾಡಿಗೆ ತನ್ನದೇ ಆದ ವಿಚಿತ್ರ ಧ್ವನಿಯಿತ್ತು. ಅದು ಕನಸಿನ ಧ್ವನಿ. ನಾವೂ ಕನಸು ಕಾಣುವಂತೆ ಮಾಡುತ್ತಿತ್ತು. ಕ್ರಾಸ್ಬಿಲ್ ಹಕ್ಕಿಗಳು ಟಿಂವ್‌ಗುಟ್ಟುತ್ತಿದ್ದುವು. ಚಿಲಿಪಿಲಿ ಉಲಿಯುತ್ತಿದ್ದುವು ಪುಟ್ಟಹಕ್ಕಿಗಳು. ಕುಕ್ಕೂಗಳು ನಗುತ್ತಿದ್ದುವು. ಓರಿಯೋಲ್ ಹಕ್ಕಿಗಳು ಸಿಳ್ಳುಹಾಕುತ್ತಿದ್ದುವು. ಅಸೂಯಾಪರ ಗೋಲ್ಡ್‌ಫಿಂಚ್‌ಗಳು, ಒಂದು ಎಡೆಬಿಡದ ಹಾಡನ್ನು ಹಾಡುತ್ತಿದ್ದುವು. ವಿಚಿತ್ರ ಹಕ್ಕಿಯಾದ ಪೈನ್‌ಫಿಂಚ್, ತನ್ನಷ್ಟಕ್ಕೆ ಧ್ಯಾನಮಗ್ನವಾಗಿ ಹಾಡುತ್ತಿತ್ತು. ಕಡು ಹಸುರಾದ ಉದ್ದನೆಯ ಕಪ್ಪೆಗಳು, ನಮ್ಮ ಪಾದಗಳ ಅಡಿಯಿಂದ ಕುಪ್ಪಳಿಸಿದುವು. ಹಸುರುಹಾವು, ತಾನು ಹುದುಗಿ ಕೊಂಡಿದ್ದ ಬೇರುಗಳೆಡೆಯಿಂದ ತನ್ನ ಸ್ವರ್ಣಶಿರವನ್ನು ಮೇಲಕ್ಕೆ ಎತ್ತಿತು. ಕಿರಿದು ಹಲ್ಲು

ಗಳಿಂದ ಕಚಕಚ ಸದ್ದು ಹೊರಡಿಸುತ್ತಾ ಅಳಿಲೊಂದು, ಪೈನ್ ಕೊಂಬೆಗಳೆಡೆಯಿಂದ ಪುಕ್ಕದಂತಹ ತನ್ನ ಬಾಲವನ್ನು ಮಿಂಚಿಸಿತು. ನೋಡುವ ಅಸಂಖ್ಯ ವಸ್ತುಗಳು ಅಲ್ಲಿದ್ದುವು. ಆದರೆ, ಮತ್ತೂ ನೋಡಬೇಕೆಂದು, ಮುಂದುಮುಂದಕ್ಕೆ ಹೋಗಬೇಕೆಂದು ಬಯಕೆಯಾಗುತ್ತಿತ್ತು.

ಪೈನ್ ಕಾಂಡಗಳ ನಡುವೆ, ದೊಡ್ಡದಾದ ದೆವ್ವದಂತಹ ಆಕೃತಿಗಳು ಕಾಣಿಸಿಕೊಂಡುವು. ಆದರೆ, ಕಾಡಿನ ಹಸುರು ಆಳದಲ್ಲಿ ಅವು ಮಾಯವಾಗಿ ಬಿಡುತ್ತಿದ್ದುವು. ಆ ಆಳದೆಡೆಯಿಂದ ನೀಲಿಯಾದ ಬೆಳಗಿನ ಆಕಾಶ ಆಗಾಗ್ಗೆ ಇಣಿಕಿ ನೋಡುತ್ತಿತ್ತು. ಭೂಮಿಯ ಮೇಲೆ ಅಲ್ಲಲ್ಲಿ, ಪಾಚಿಯ ಹಾಸುಗಂಬಳಿಯನ್ನು ಹೇರಳವಾಗಿ ಹರಡಿತ್ತು. ಆ ಹಾಸುಗಂಬಳಿಗೆ ಬ್ಲೂಬೆರಿಗಳ ಕಸೂತಿ ಇತ್ತು. ಕ್ರಾನ್‌ಬೆರಿಗಳ ಪುಷ್ಪಾಲಂಕಾರವಿತ್ತು. ಆ ಬಿಲ್‌ಬೆರಿಗಳು ರಕ್ತದ ಬಿಂದುಗಳಂತೆ ಹುಲ್ಲಿನಲ್ಲಿ ಮಿನುಗಿದುವು. ನಾಯಿಕೊಡೆಗಳ ಸುವಾಸನೆ, ಮನಸೆಳೆಯುತ್ತ ಮೂಗುಗಳಿಗೆ ಏರುತ್ತಿತ್ತು.

"ಪೂಜ್ಯ ಕನ್ನಿಕೆಯೇ, ಲೋಕದ ಬೆಳಕೇ," ಎಂದು ಅಜ್ಜಿ ನಿಟ್ಟುಸಿರುಬಿಟ್ಟು ಪ್ರಾರ್ಥಿಸಿದಳು.

ಕಾಡು ಆಕೆಗೆ ಸೇರಿದ್ದಂತೆ, ಆಕೆ ಕಾಡಿಗೆ ಸೇರಿದವಳಂತೆ, ಅನಿಸುತ್ತಿತ್ತು. ಆಕೆ ದೊಡ್ಡ ಹೆಣ್ಣು ಕರಡಿಯಂತೆ, ಪ್ರತಿಯೊಂದನ್ನು ನೋಡುತ್ತಾ, ಪ್ರತಿಯೊಂದನ್ನೂ ಮೆಚ್ಚಿಕೊಳ್ಳುತ್ತಾ, ಕೃತಜ್ಞತೆಯ ಪದಗಳನ್ನು ತೊದಲುತ್ತಾ, ಮುಂದಕ್ಕೆ ನಡೆದಳು. ಆತ್ಮೀಯತೆ ಆಕೆಯಿಂದ ಆ ಕಾಡಿನೆಡೆಗೆ ಹರಿಯುತ್ತಿದ್ದಂತೆ ಭಾಸವಾಗುತ್ತಿತ್ತು. ಆಕೆಯ ಪಾದ ಒತ್ತಿ ತುಳಿದಮೇಲೂ, ಪಾಚಿ ಪುನಃ ಎದ್ದು ಚೇತನಗೊಳ್ಳುತ್ತಿದ್ದುದನ್ನು ಕಾಣಲು ನನಗೆ ವಿಶೇಷ ಸಂತೋಷವೆನಿಸುತ್ತಿತ್ತು.

ದರೋಡೆಗಾರನಾಗಿ ಶ್ರೀಮಂತರನ್ನು ದೋಚಿ ಬಡವರಿಗೆ ಕೊಡುವುದು ಎಷ್ಟು ಚೆನ್ನಾಗಿರುತ್ತದೆಂದು, ನಡೆಯುತ್ತ ನಾನು ಯೋಚಿಸಿದೆ ಪ್ರತಿಯೊಬ್ಬರೂ ಹರ್ಷಚಿತ್ತರಾಗಿ ಉಂಡು ಸಂತೃಪ್ತರಾಗಿ, ಅಸೂಯೆ ಎಂಬುದನ್ನು ಅರಿಯದೆ, ಹೊಲಸು ನಾಯಿಗಳಂತೆ ಒಬ್ಬರ ಕಡೆಗೊಬ್ಬರು ಬಗುಳದೆ-ಇದ್ದರೆ ಎಷ್ಟು ಸೊಗಸು! ಅಜ್ಜಿಯ ದೇವರ ಬಳಿಗೂ ಆಕೆಯ ಪೂಜ್ಯಕನ್ನಿಕೆಯ ಬಳಿಗೂ ಹೋಗುವುದು; ಎಂತಹ ಯಾತನೆಯಲ್ಲಿ ಜನರು ಬದುಕುತ್ತಿದ್ದರೆಂಬ, ಎಷ್ಟು ಭೀಕರವಾಗಿ ನೋವುಂಟುಮಾಡುತ್ತಾ ಒಬ್ಬರನ್ನೊಬ್ಬರು ಭಯಾನಕ ಮರಳಿನಲ್ಲಿ ಹೂಳುತ್ತಿದ್ದರೆಂಬ, ಪೂರ್ಣ ಸತ್ಯವನ್ನು ಅವರಿಗೆ ತಿಳಿಸುವುದು,—ಎಷ್ಟು ಚೆನ್ನ! ಭೂಮಿಯ ಮೇಲೆ ಅನಗತ್ಯ ಸಂಕಟವಾದರೂ ಎಷ್ಟೊಂದಿತ್ತು! ಕನ್ನಿಕೆಗೆ ನಂಬಿಕೆ ಹುಟ್ಟಿತೆಂದರೆ, ಸ್ಥಿತಿಗತಿಗಳನ್ನು ಬದಲಾಯಿಸಿ ಜನರನ್ನು ಉತ್ತಮರನ್ನಾಗಿ ಮಾಡಲು ಆಕೆ ನನಗೆ ಜ್ಞಾನವನ್ನು ಕೊಡಲಿ. ಜನರು ನನ್ನ ಮಾತಿಗೆ ಕಿವಿಗೊಡಲಿ, ನನ್ನಲ್ಲಿ ವಿಶ್ವಾಸವಿರಿಸಲಿ. ಉತ್ತಮ ಜೀವನಕ್ರಮವನ್ನು ನಾನು ಕಂಡು ಹುಡುಕುವುದು ಖಂಡಿತ! ನಾನಿನ್ನೂ ಮಗುವಾಗಿದ್ದರೇನಂತೆ? ಮಂದಿರದಲ್ಲಿ ಜನರು ತನ್ನ ಮಾತಿಗೆ ಕಿವಿಗೊಡುತ್ತಿದ್ದರೆಂದು ಕ್ರಿಸ್ತ ತಿಳಿದಾಗ, ಆತನಿಗೆ ನನಗಿಂತ ಒಂದು ವರ್ಷವಷ್ಟೇ ಹೆಚ್ಚು ವಯಸ್ಸಾಗಿತ್ತು.

ಒಮ್ಮೆ ನನ್ನ ಯೋಚನೆಗಳಲ್ಲಿ ನಾನು ಎಷ್ಟೊಂದು ನಿಮಗ್ನನಾದೆನೆಂದರೆ, ಆಳವಾದೊಂದು ಹೊಂಡಕ್ಕೆ ನಾನು ಬಿದ್ದುಬಿಟ್ಟೆ. ಮರದಕೊಂಬೆಯ ಒಂದು ಕೊಂಡಿಗೆ ನನ್ನ ಪಕ್ಕ ಒರೆಸಿತು. ತಲೆಯ ಹಿಂಬದಿಯಿಂದ ಚರ್ಮ ಎದ್ದು ಹೋಯಿತು. ಹೊಂಡದ ತಳದಲ್ಲಿದ್ದ ತಣ್ಣಗಿನ ಅಂಟು ಕೆಸರಿನ ಮೇಲೆ ನಾನು ಕುಳಿತಾಗ, ಅಲ್ಲಿಂದ ಹೊರಕ್ಕೇಳಲು ಅಸಮರ್ಥನಾಗಿದ್ದೆಂಬುದು ನನ

ಮನವರಿಕೆಯಾಯಿತು. ನನಗೆ ನಾಚಿಕೆಯೆನಿಸಿತು. ಬೊಬ್ಬಿಟ್ಟು ಅಜ್ಜಿಯನ್ನು ಭೀತಿಗೊಳಿಸಲು ನಾನು ಇಷ್ಟಪಡಲಿಲ್ಲ. ಆದರೆ, ಹಾಗೆ ಮಾಡದೆ ಬೇರೆ ಹಾದಿಯೂ ಇರಲಿಲ್ಲ.

ಆಕೆ ನನ್ನನ್ನು ಸುಲಭವಾಗಿ ಹೊರಕ್ಕೆಳೆದು, ಶಿಲುಬೆಯ ವಂದನೆ ಮಾಡುತ್ತ ಅಂದಳು:

"ದೇವರು ದಯಾಮಯ! ಖಾಲಿ ಹೊಂಡವಾದದ್ದರಿಂದ ಸರಿಹೋಯ್ತು. ಅದರೊಳಗೆ ಕರಡಿ ಏನಾದರೂ ಇದ್ದಿದ್ದರೆ?"

ಕಣ್ಣೀರು ಹರಿಯುತ್ತಿದ್ದಂತೆಯೇ ಆಕೆ ನಕ್ಕಳು. ಬಳಿಕ, ಹರಿಯುತ್ತಿದ್ದ ತೋಡಿನ ನೀರಿನಲ್ಲಿ ನನ್ನನ್ನು ತೊಳೆದಳು. ನೋವು ನಿವಾರಿಸಲೆಂದು, ಗಾಯಗಳ ಮೇಲೆ ಯಾವುದೋ ಎಲೆಗಳನ್ನು ಇರಿಸಿದಳು. ತನ್ನ ರವಕೆಯಿಂದ ಅವುಗಳನ್ನು ಬಿಗಿದಳು. ಮನೆಗೆ ನಡೆಯುವಷ್ಟು ತ್ರಾಣ ನನಗೆ ಇರಲಿಲ್ಲವಾದ್ದರಿಂದ, ರೈಲ್ವೆ ಕಾವಲುಗಾರನ ಗೂಡಾರಕ್ಕೆ ನನ್ನನ್ನು ಒಯ್ದಳು ....

....ಹೆಚ್ಚು ಕಡಮೆ ಪ್ರತಿದಿನವೂ ಅಜ್ಜಿಗೆ ನಾನೆನ್ನುತ್ತಿದ್ದೆ.

"ನಾವು ಕಾಡಿಗೆ ಹೋಗೋಣ."

ಆಕೆ ಸಂತೋಷದಿಂದಲೇ ಒಪ್ಪುತ್ತಿದ್ದಳು. ಹೀಗೆ ಶರತ್ಕಾಲದ ಹೆಚ್ಚಿನ ಭಾಗ ಕಳೆಯುವವರೆಗೂ, ಗಿಡಮೂಲಿಕೆಗಳು ಬೆರ್‍ರಿಹಣ್ಣುಗಳು ನಾಯಿಕೊಡೆಗಳು ಕಾಯಿಗಳು—ಇವನ್ನು ಸಂಗ್ರಹಿಸುತ್ತ ಕಳೆದೆವು. ನಾವು ಶೇಖರಿಸಿದುದನ್ನು ಅಜ್ಜಿ ಮಾರುತ್ತಿದ್ದಳು. ಆ ಹಣದ ಮೇಲೆ ನಾವು ಜೀವಿಸುತ್ತಿದ್ದೆವು.

"ಪರೋಪ ಜೀವಿಗಳು!" ಎಂದು ಅಜ್ಜ, ಆತನ ಆಹಾರವನ್ನು ನಾವೆಂದೂ ಮುಟ್ಟದೇ ಇದ್ದರೂ, ಕಿರಿಲುತ್ತಿದ್ದ.

ಶಾಂತಿಯ ಕಲ್ಯಾಣದ ಭಾವನೆಯನ್ನು ಕಾಡು ನನ್ನಲ್ಲಿ ಹುಟ್ಟಿಸುತ್ತಿತ್ತು. ಈ ಭಾವನೆ ನನ್ನೊಳಗಿನ ಕೊರಗನ್ನು ಕಡಮೆಮಾಡಿತು; ಅಸಹ್ಯವಾದುದನ್ನು ಮರೆಯಲು ನೆರವಾಯಿತು. ಅದೇ ಸಮಯದಲ್ಲಿ ನಾನು ಸೂಕ್ಷ್ಮ ನಿರೀಕ್ಷಣೆಯ ತೀಕ್ಷ್ಣತೆಯನ್ನು ಬಹಳವಾಗಿ ಹೆಚ್ಚಿಸಿದೆ. ನನ್ನ ಸ್ಮರಣಶಕ್ತಿ ಹೆಚ್ಚು ಗಾಢವಾಯಿತು. ಮನಸ್ಸಿನಲ್ಲಿ ಮುದ್ರೆಯೊತ್ತಿದ ಭಾವನೆಗಳ ಭಂಡಾರ ವಿಸ್ತಾರಗೊಂಡಿತು.

ನನ್ನ ಅಜ್ಜಿಯ ಬಗೆಗೆ ಎಂದಿಗಿಂತಲೂ ಹೆಚ್ಚಾಗಿ ನಾನು ಅಚ್ಚರಿಪಟ್ಟೆ. ಆಕೆಯನ್ನು ಇತರರೆಲ್ಲಗಿಂತ ಹಿರಿಯ ವ್ಯಕ್ತಿಯಾಗಿ, ಭೂಮಿಯ ಮೇಲಿನ ಅತ್ಯಂತ ದಯಾಮಯಿಯಾದ ಬುದ್ಧಿವಂತೆಯಾದ ಜೀವವಾಗಿ, ನಾನು ಯಾವಾಗಲೂ ಪರಿಗಣಿಸಿದ್ದೆ. ಆ ನಂಬುಗೆಯನ್ನು ಆಕೆ ಪದೇಪದೇ ದೃಢಗೊಳಿಸಿದಳು.

ನಾಯಿಕೊಡೆಗಳನ್ನು ಸಂಗ್ರಹಿಸಿ ಮನೆಯಕಡೆಗೆ ಹೊರಟ ನಾವು ಒಂದು ಸಂಜೆ ಕಾಡಿನ ಅಂಚನ್ನು ಸಮೀಪಿಸಿದಾಗ, ವಿರಮಿಸಿಕೊಳ್ಳಲೆಂದು ಅಜ್ಜಿ ಕುಳಿತಳು. ನಾನು, ಮತ್ತಷ್ಟು ನಾಯಿಕೊಡೆಗಳು ದೊರೆಯಬಹುದೆಂಬ ಆಸೆಯಿಂದ ಅತ್ತಿತ್ತ ದೂರಹೋದೆ.

ಒಮ್ಮೆಲೆ ನನಗೆ ಆಕೆಯ ಸ್ವರಕೇಳಿಸಿತು. ನಾನು ತಿರುಗಿ ನೋಡಿದೆ. ಆಕೆ ಹಾದಿಯ ಮೇಲೆ ಶಾಂತವಾಗಿ ಕುಳಿತು, ನಮಗೆ ದೊರೆತಿದ್ದ ನಾಯಿಕೊಡೆಗಳ ಬೇರುಗಳನ್ನು ಕಡಿದು ಹಾಕುತ್ತಿದ್ದಳು. ಆಕೆಯ ಬಳಿ, ತೆಳ್ಳಗಿನ ಬೂದು ಬಣ್ಣದ ನಾಯಿಯೊಂದು ನಾಲಿಗೆಯನ್ನು ಹೊರಚಾಚಿ ನಿಂತಿತ್ತು.

ಆಕೆ ಹೇಳುತ್ತಿದ್ದಳು:

"ಹೊರಟುಹೋಗು, ಹೊರಟುಹೋಗಪ್ಪ. ಒಳ್ಳೆಯ ಪ್ರಾಣಿ ನೀನು. ಹೊರಟುಹೋಗು. ದೇವರು ನಿನಗೆ ಒಳ್ಳೇದು ಮಾಡಲಿ."

ಅದಕ್ಕೆ ಸ್ವಲ್ಪ ಸಮಯಕ್ಕೆ ಮುಂಚೆ, ವಾಲ್ಯೋಕ್ ನನ್ನ ನಾಯಿಯನ್ನು ವಿಷಹಾಕಿ ಕೊಂದಿದ್ದ. ಈ ಹೊಸ ನಾಯಿಯನ್ನು ಒಲಿಸಿ ನನ್ನ ಜತೆ ಕರೆದೊಯ್ಯಲು ನಾನು ಇಷ್ಟಪಟ್ಟೆ. ಹಾದಿಯತ್ತ ನಾನು ಓಡಿದೆ. ಆ ನಾಯಿ, ತನ್ನ ತಲೆಯನ್ನು ತಿರುಗಿಸದೆಯೇ ವಿಚಿತ್ರ ರೀತಿಯಲ್ಲಿ ಮೈಯನ್ನು ಕಮಾನಿನಂತೆ ಬಾಗಿಸಿ, ಶೀತಲವಾಗಿದ್ದ ಹಸಿದ ಹಸುರು ಕಣ್ಣುಗಳಿಂದ ನನ್ನೆಡೆಗೆ ನೋಡಿ ಬಾಲವನ್ನು ಕಾಲುಗಳೆಡೆ ಸೇರಿಸಿ, ಕಾಡಿನೊಳಕ್ಕೆ ನೆಗೆಯಿತು. ಆ ಪ್ರಾಣಿಯ ಚಲನೆ ನಾಯಿಯ ಹಾಗಿರಲಿಲ್ಲ. ನಾನು ಶಿಳ್ಳುಹಾಕಿದಾಗ, ಅದು ಪೊದೆಗಳೊಳಕ್ಕೆ ಕೆರಳಿ ಧುಮುಕಿತು.

ಅಜ್ಜಿ ಮುಗುಳುನಕ್ಕು ಅಂದಳು:

"ನೋಡಿದಿಯಾ ಅದನ್ನು? ಮೊದಲು, ಅದು ನಾಯಿ ಇರಬಹುದೂಂತ ಅಂದ್ಕೊಂಡೆ ನಾನು. ಆಮೇಲೆ, ಎರಡನೇ ಸಲ ನೋಡಿದೆ. ತೋಳನ ಹಾಗೆ ಕೋರೆಹಲ್ಲುಗಳು, ಕತ್ತುಕೂಡಾ, ನನಗೆ ತುಂಬಾ ದಿಗಿಲಾಯಿತು. ಆಗಲಿ ಹಾಗಾದರೆ, ಅಂದ್ಕೊಂಡೆ. ನೀನು ತೋಳವೆಂದಾದರೆ, ಹೊರಟು ಹೋಗೋದೆ ಮೇಲು. ನಮ್ಮ ಅದೃಷ್ಟ-ಬೇಸಗೆಯಲ್ಲಿ ತೋಳಗಳು ಶಾಂತವಾಗಿರ್ತವೆ."

ಕಾಡಿನಲ್ಲಿ ಎಂದೂ ಆಕೆಗೆ ಹಾದಿ ತಪ್ಪುತ್ತಿರಲಿಲ್ಲ. ಮನೆಯ ಕಡೆಗೆ ಹಾದಿ ಸರಿಯಾಗಿಯೇ ಗೊತ್ತಾಗುತ್ತಿತ್ತು. ಮೂಲಿಕೆಗಳ ವಾಸನೆಯಿಂದಲೇ, ಯಾವ ಜಾತಿಯ ನಾಯಿಕೊಡೆ ಒಂದು ಜಾಗದಲ್ಲಿ ಬೆಳೆಯುತ್ತದೆ. ಯಾವ ಜಾತಿಯದು ಇನ್ನೊಂದು ಜಾಗದಲ್ಲಿ ಬೆಳೆಯುತ್ತದೆ, ಎಂಬುದನ್ನು ಆಕೆ ಹೇಳುತ್ತಿದ್ದಳು. ಆಗಾಗ್ಗೆ ನನ್ನ ಜ್ಞಾನವನ್ನು ಆಕೆ ಪರೀಕ್ಷಿಸಿದಳು:

"ಕೆಂಪು ನಾಯಿಕೊಡೆಗಳು ಯಾವ ಮರದ ಕೆಳಗೆ ಬೆಳೆಯುತ್ತವೆ?"

"ಇದು ಒಳ್ಳೆಯದು, ಇದು ವಿಷಮಯವಾದದ್ದು, ಅಂತ ಹೇಗೆ ಪ್ರತ್ಯೇಕಿಸ್ತೀಯಾ?"

"ಫರ್ನ್ ಮರಗಳ ಕೆಳಗೆ ಯಾವ ಜಾತಿಯ ನಾಯಿಕೊಡೆ ಅವಿತುಕೊಂಡಿರ್ತದೆ?"

ಮರದ ತೊಗಟೆಯ ಮೇಲೆ ಸುಮ್ಮನೆ ಗೆರೆ ಎಳೆದರೆ ಸಾಕು, ಅಳಿಲಿನ ಬಿಲ್ಲ ಎಲ್ಲಿದೆ ಎನ್ನುವುದು ಆಕೆಗೆ ಗೊತ್ತಾಗುತ್ತಿತ್ತು. ನಾನು ಮರವನ್ನೇರಿ, ಅಳಿಲಿನ ಗೂಡಿನಿಂದ, ಚಳಿಗಾಲಕ್ಕೋಸ್ಕರ ಅದು ಶೇಖರಿಸಿದ್ದ ಕಾಯಿಗಳ ರಾಶಿಯನ್ನು ತೆಗೆದುಬಿಡುತ್ತಿದ್ದೆ. ಕೆಲವೊಮ್ಮೆ, ಹತ್ತು ರಾತಲುಗಳಷ್ಟು ಹೆಚ್ಚು ಕಾಯಿಗಳು ಹಾಗೆ ಸಂಗ್ರಹವಾಗಿರುತ್ತಿದ್ದುವು.

ಒಮ್ಮೆ ನಾನು ಆ ಕೆಲಸ ಮಾಡುತ್ತಿದ್ದಾಗ ಬೇಟೆಗಾರನೊಬ್ಬ, ಪುಟ್ಟಗುಂಡಿನ ಇಪ್ಪತ್ತೇಳು ಚೂರುಗಳನ್ನು ನನ್ನ ಬಲಬದಿಯ ಮಾಂಸದಲ್ಲಿ ನೆಟ್ಟ. ಅಜ್ಜಿ, ಸೂಜಿಯ ಸಹಾಯದಿಂದ ಹನ್ನೊಂದನ್ನು ಹೊರತೆಗೆದಳು. ಉಳಿದುವು ನನ್ನ ಚರ್ಮದ ಕೆಳಗೇ ಹಲವು ವರ್ಷಗಳ ಕಾಲ ಇದ್ದುವು. ನಿಧಾನವಾಗಿ ತಾವಾಗಿಯೇ ತಮ್ಮ ಹಾದಿ ಹುಡುಕಿ ಹೊರಬಿದ್ದುವು.

ನಾನು ಅಷ್ಟೊಂದು ತಾಳ್ಮೆಯಿಂದ ನೋವನ್ನು ಸಹಿಸಿಕೊಳ್ಳುತ್ತಿದ್ದುದನ್ನು ಕಂಡು ಅಜ್ಜಿ, ಸಂತುಷ್ಟಳಾದಳು.

"ಒಳ್ಳೇ ಹುಡುಗ! ನೋವು ಸಹಿಸಿಕೊಳ್ಳೋದು ಅಂದರೆ ಬಂದು ಯುದ್ಧವನ್ನು ಜಯಿಸಿದ ಹಾಗೆ," ಎಂದು ಆಕೆ ಹೇಳುತ್ತಿದ್ದಳು.

ನಾಯಿಕೊಡೆಗಳ ಮತ್ತು ಕಾಯಿಗಳ ಮಾರಾಟದಿಂದ ಒಂದಿಷ್ಟು ಹೆಚ್ಚು ಹಣ ಬಂದಾಗ, ತನ್ನ 'ಶಾಂತವಯೆ'ಯನ್ನು ಕಿಟಕಿಪಂಡೆಗಳ ಮೇಲೆ ಆಕೆ ಇರಿಸುತ್ತಿದ್ದಳು. 'ತಾನು ಮಾತ್ರ, ರಜಾ ದಿನಗಳಲ್ಲೂ ಕೂಡಾ, ತೇಪೆಹಾಕಿದ ಚಿಂದಿಯಾದ ಬಟ್ಟೆಗಳಲ್ಲೇ ನಡೆಪಾಡುತ್ತಿದ್ದಳು.

"ಭಿಕ್ಷುಕಿಗಿಂತಲೂ ಕಡೆಯಾಗಿ ಕಾಣ್ತೀಯ—ನನಗೊಂದು ಅವಮಾನ," ಎಂದು ಅಜ್ಜ ಗೊಣಗಿದ.

"ಏನೂ ಚಿಂತಿಲ್ಲ. ನಾನು ನಿನ್ನ ಮಗಳಲ್ಲ, ವರನಿಗಾಗಿ ಕಾದಿರೋ ಕನ್ಯೆಯಂತೂ ಅಲ್ಲ."

ಬರಬರುತ್ತ ಅವರ ಜಗಳಗಳು ಹೆಚ್ಚಿದುವು.

ತನ್ನ ವೇದನೆಯನ್ನು ಹೊರಗೆಡವುತ್ತ ಅಜ್ಜ ಕೂಗಾಡುತ್ತಿದ್ದ:

"ಬೇರೆಯವರಿಗಿಂತ ಹೆಚ್ಚೇನೂ ನಾನು ಪಾಪಮಾಡಿಲ್ಲ. ಆದರೆ ನನಗೆ ದೊರೆತಿರೋ ಶಿಕ್ಷೆ ಮಾತ್ರ ಬೇರೆಯವರಿಗಿಂತ ಹೆಚ್ಚೇ."

ಅಜ್ಜಿ ಆತನನ್ನು ಮೂದಲಿಸುತ್ತಿದ್ದಳು.

ನಾವು ಇಬ್ಬರೇ ಉಳಿದಾಗ ನನಗೆ ವಿವರಿಸುತ್ತ ಆಕೆ ಎನ್ನುತ್ತಿದ್ದಳು:

"ದೇವ್ರಕ್ಕೆ ಒಬ್ಬ ಮನುಷ್ಯನ ಯೋಗ್ಯತೆ ಗೊತ್ತಿದೆ, ದೇವ್ರ ಅಂದರೆ ಹುಡುಗನಿಗೆ ಮಹಾ ಭಯ. ಈ ಹೆದರಿಕೆಯಿಂದಲೇ ಅವನೆಷ್ಟು ಮುದುಕನಾಗ್ಬಿಟ್ಟಿದಾನೆ, ನೋಡು. ಆ...ಬಡ ಪ್ರಾಣಿ!"

ಕಾಡಿನಲ್ಲಿ ಕಳೆದ ಆ ಬೇಸಗೆ ನನ್ನ ಶರೀರವನ್ನು ಬಲಪಡಿಸಿತು. ಆದರೆ, ಇತರರ ಜತೆ ನಾನು ಸೇರುವುದು ಕಡಮೆಯಾಯಿತು. ನನ್ನ ಆಟದ ಸಂಗಾತಿಗಳ, ಲುಡ್ಮಿಲ್ಲಾಳ, ಬದುಕು ಗಳಲ್ಲಿ ನನಗೆ ಆಸಕ್ತಿ ಕಡಿಮೆಯಾಯಿತು. ಆಕೆಯ ಜಾಣತನ ನನಗೀಗ ಬೇಸರ ಬರಿಸಿತು.

ಒಂದು ದಿನ ಅಜ್ಜ, ಪೂರ್ತಿ ಒದ್ದೆಯಾಗಿ ಶಹರದಿಂದ ಮರಳಿದ. ಅದು ಶರತ್ಕಾಲ ವಾಗಿತ್ತು. ಮಳೆ ಬರುತ್ತಿತ್ತು. ಹೊಸ್ತಿಲ ಮೇಲೆ ನಿಂತು ಗುಬ್ಬಚ್ಚಿಯಂತೆ ಆತ ಮೈ ಪಟಪಟಿಸಿ, ವಿಜಯಿಯಾಗಿ ಬಂದವನ ಧ್ವನಿಯಲ್ಲಿ ನುಡಿದ:

"ಹುಂ, ಸೋಮಾರಿ, ನಾಳೆಯಿಂದ ನೀನು ಕೆಲಸಕ್ಕೆ ಹೋಗ್ತೀಯಾ!"

"ಎಲ್ಲಿಗೆ?" ಎಂದು ಅಜ್ಜಿ, ಅಸಹನೆಯಿಂದ ಕೇಳಿದಳು.

"ನಿನ್ನ ತಂಗಿ ಮಾತ್ರಿಯೋನಾಳಲ್ಲಿಗೆ—ಆಕೆಯ ಮಗನಿಗೋಸ್ಕರ ಕೆಲಸ ಮಾಡೋದಕ್ಕೆ."

"ತಪ್ಪು ಆಯ್ಕೆ ಮಾಡಿದೀಯ, ತಂದೆ!"

"ಸುಮ್ಮನಿರು, ಮುದಿ ಮೂರ್ಖಳೆ! ಇವನನ್ನು ನಕಾಶೆ ತಯಾರಿಸುವವನಾಗಿ ಅವರು ಸಿದ್ಧ ಪಡಿಸಿದರೂ ಪಡಿಸಬಹುದು."

ಅಜ್ಜಿ ಮಾತಿಲ್ಲದೆ ತಲೆ ತಗ್ಗಿಸಿದಳು.

ನಾನು ಶಹರದಲ್ಲಿ ಜೀವಿಸಲು ಹೋಗುವುದಾಗಿ ಆ ಸಂಜೆ ಲುಡ್ಮಿಲ್ಲಾಳಿಗೆ ಹೇಳಿದೆ.

ಯೋಚನಾಮಗ್ನಳಾಗಿ ಆಕೆ ಅಂದಳು:

"ಬೇಗನೆ ನನ್ನನ್ನೂ ಅಲ್ಲಿಗೆ ಕರಕೊಂಡು ಹೋಗ್ತಾರೆ. ನನ್ನ ಕಾಲನ್ನು ವೈದ್ಯರು ಕತ್ತರಿಸಿ ಬಿಡಬೇಕೂಂತ ಅಪ್ಪ ಯೋಚಿಸಿದ್ದಾನೆ. ಹಾಗೆ ಕತ್ತರಿಸಿದರೆ ನಾನು ಹುಷಾರಾಗ್ತೀನಂತೆ."

ಆ ಬೇಸಗೆಯಲ್ಲಿ ಆಕೆ ಮತ್ತಷ್ಟು ಸೊರಗಿದ್ದಳು. ಮುಖಕ್ಕೆ ನೀಲಿ ಛಾಯೆ ಬಂದಿತ್ತು, ಕಣ್ಣುಗಳು ಬಹಳ ದೊಡ್ಡದಾಗಿದ್ದುವು.

"ನೀನು ಹೆದರ್‍ಕೊಂಡಿದೀಯಾ?" ಎಂದು ನಾನು ಕೇಳಿದೆ.

"ಹೌದು," ಎಂದು ಆಕೆ ಉತ್ತರವಿತ್ತಳು; ಸದ್ದಿಲ್ಲದೆ ಅಳಲು ಆರಂಭಿಸಿದಳು.

ಆಕೆಯನ್ನು ಸಂತೈಸಲೆಂದು ನಾನು ಹೇಳಬಹುದಾದುದೇನೂ ಇರಲಿಲ್ಲ. ಶಹರ ಜೀವನದ ಬಗೆಗೆ ನನಗೂ ಭಯವಿತ್ತು. ಬಹಳ ಹೊತ್ತು, ಯಾತನೆಯ ಮೌನದಲ್ಲಿ, ಒಬ್ಬರಿಗೊಬ್ಬರು ಸಮೀಪವಾಗಿ ನಾವು ಮುದುಡಿಕೊಂಡು ಕುಳಿತೆವು.

ಬೇಸಗೆಯಾಗಿದ್ದಿದ್ದರೆ, ಹುಡುಗಿಯಾಗಿದ್ದಾಗ ಭಿಕ್ಷೆ ಬೇಡಲು ಹೋಗುತ್ತಿದ್ದ ಹಾಗೆ ಈಗಲೂ ಹೋಗುವಂತೆ ಅಜ್ಜಿಯನ್ನು ನಾನು ಒಪ್ಪಿಸುತಿದ್ದೆ. ಲುಡ್ಮಿಲ್ಲಾಳನ್ನೂ ನಾವು ಜತೆಯಲ್ಲಿ ಕರೆದೊಯ್ಯಬಹುದಾಗಿತ್ತು. ಆಕೆಯನ್ನು ಪುಟ್ಟದೊಂದು ಕೈಗಾಡಿಯಲ್ಲಿ ನಾನು ಎಳೆಯಬಹುದಾಗಿತ್ತು.

ಆದರೆ, ಅದು ಶರತ್ಕಾಲ, ತೇವತುಂಬಿದ ಗಾಳಿ ಬೀದಿಗಳಲ್ಲಿ ಬೀಸುತ್ತಿತ್ತು. ಕೊನೆಯಿಲ್ಲದ ಮೋಡಗಳಿಂದ ಆಕಾಶ ಆಚ್ಛಾದಿತವಾಗಿತ್ತು. ಭೂಮಿ ಮಾಸಿತು, ಮಲಿನವಾಯಿತು ಮತ್ತು ಖತಿಗೊಂಡಿತು.

೪

ಮತ್ತೊಮ್ಮೆ ನಾನು ಶಹರದಲ್ಲಿ ವಾಸಿಸಲು ತೆರಳಿದೆ. ನಾನು ಹೋದುದು, ಎರಡು ಅಂತಸ್ತುಗಳಿದ್ದ ಬಿಳಿಯ ಮನೆಗೆ. ಅದು, ಅನೇಕ ಜನರನ್ನು ಇರಿಸಲೆಂದು ಕಟ್ಟಿದ ಶವದಾನಿಯಂತಿತ್ತು. ಮನೆ ಹೊಸದು. ಆದರೆ ಅದು, ಕಾಹಿಲೆಯಿಂದ ನರಳುತ್ತಿದ್ದ ಹಾಗಿತ್ತು. ಒಮ್ಮೆಲೆ ಐಶ್ವರ್ಯಕ್ಕೆ ವಾರಸುದಾರನಾಗಿ ಸುಖಲೋಲುಪನಾದ ಭಿಕ್ಷುಕ ಊದಿಕೊಂಡಂತೆ, ಆ ಮನೆ ಕಾಣಿಸುತ್ತಿತ್ತು. ಮನೆಯ ಮಗ್ಗುಲು ಬೀದಿಗೆ ತಗಲಿಕೊಂಡಿತ್ತು. ಬೀದಿಯ ಬದಿಯ ಒಂದೊಂದು ಅಂತಸ್ತಿನಲ್ಲೂ ಎಂಟೆಂಟು ಕಿಟಿಕಿಗಳಿದ್ದುವು. ಮರದ ಅಂಕಣಗಳು ಇರಬೇಕಾಗಿದ್ದ ಎದುರುಭಾಗದಲ್ಲಿ ಅಂತಸ್ತಿಗೆ ನಾಲ್ಕರಂತೆ ಕಿಟಿಕಿಗಳು. ಕೆಳಕಿಟಿಕಿಗಳ ಎದುರು ಅಂಗಳದಲ್ಲಿ ಅಗಲ ಕಿರಿದಾದ ಒಂದು ಕಾಲುಹಾದಿಯಿತ್ತು. ಮೇಲಣ ಕಿಟಿಕಿಗಳಿಂದ, ಬೇಲಿಯಾಚೆಗಿನ ಹೊಲಸು ತೊರೆಯೂ ಒಬ್ಬಳು ಅಗಸರವಳಿಗೆ ಸೇರಿದ್ದ ಸಣ್ಣದೊಂದು ಮನೆಯೂ ಕಾಣಿಸುತ್ತಿದ್ದುವು.

ಬೀದಿ ಎಂಬ ಪದದ ನಿಜವಾದ ಅರ್ಥದಲ್ಲಿ ಅಲ್ಲಿ ಯಾವ ಬೀದಿಯೂ ಇರಲಿಲ್ಲ. ಮನೆಯ ಮುಂಭಾಗದಲ್ಲಿ ಆ ಹೊಲಸು ತೊರೆಯೇ ವಿಸ್ತರಿಸಿಕೊಂಡಿತ್ತು. ಅದಕ್ಕೆ ಅಡ್ಡವಾಗಿ ಎರಡು ಕಡೆ ಅಗಲ ಕಿರಿದಾದ ಅಣೆಕಟ್ಟುಗಳಿದ್ದುವು. ಎಡಭಾಗದಲ್ಲಿ ಅದು, ಸೆರೆಯಾಳುಗಳ ವಸತಿಪ್ರದೇಶದವರೆಗೂ ಚಾಚಿತ್ತು. ಆ ಪ್ರದೇಶದ ಬಳಿ ಗೃಹನಿವಾಸಿಗಳು, ಅಣೆಕಟ್ಟೆನಾಚೆಗೆ ಕಲ್ಮಷವನ್ನು ಎಸೆಯಲು ಒಂದು ಜಾಗವನ್ನು ಆರಿಸಿದ್ದರು. ಹೀಗಾಗಿ, ತೊರೆಯ ತಳವನ್ನು ದಪ್ಪಗಿನ ಹಸುರು ಜವುಗು ಆವರಿಸಿತ್ತು. ಬಲಭಾಗದಲ್ಲಿ ತೊರೆ, ಕೊಳೆತು ನಾರುತ್ತಿದ್ದ ಜ್ವೆಸ್ದಿನ್ ಹೊಂಡದಲ್ಲಿ ಮುಕ್ತಾಯವಾಗಿತ್ತು. ತೊರೆಯ ನಡುಗಡ್ಡೆಯ ನೆಲ ನಮ್ಮ ಮನೆಯ ತೀರಾ ಎದುರುಗಡೆಗಿತ್ತು.

ಅದರ ಅರ್ಧದಷ್ಟು ಕಲ್ಮಶ ತುಂಬಿದ್ದು, ಕಾಡುಮುಳ್ಳುಗಳೂ ಕುರುಚಲುಗಿಡಗಳೂ ಬೇಕಷ್ಟು ಬೆಳೆದಿದ್ದುವು. ಉಳಿದರ್ಧ ಜಾಗವನ್ನು ಪಾದ್ರಿ ಡೊರಿಮೆಡೊಂಟ್ ಪೊಕ್ರೋವ್‌ಸ್ಕಿ ಕೈತೋಟ ವಾಗಿ ಮಾರ್ಪಡಿಸಿದ್ದ. ಕೈತೋಟದ ಮಧ್ಯಭಾಗದಲ್ಲಿ, ತೆಳ್ಳಗಿನ ಹಸಿಸಲಿಕೆಗಳಿಂದ ಕಟ್ಟಿದ್ದ ಬೇಸಗೆ ವಾಸದ ಮನೆಯಿತ್ತು. ಕಲ್ಲುಗಳನ್ನು ಎಸೆದಾಗ ಆ ಸಲಿಕೆಗಳು ಮುರಿದುಹೋಗುತ್ತಿದ್ದುವು.

ಆ ಜಾಗ, ಏನೊಂದು ಸ್ವಾರಸ್ಯವೂ ಇಲ್ಲದ ಸ್ಥಳ. ಅಲ್ಲಿದ್ದುದು, ಒಡೆದುಕಾಣುತ್ತಿದ್ದ ಹೊಲಸು. ಶರತ್ಕಾಲದ ಹವೆಯಲ್ಲಿ, ಕಳೆತುಂಬಿದ ಆವೆಮಣ್ಣಿನ ನೆಲ, ಒಂದು ಬಗೆಯ ಕೆಂಪು ಡಾಮರಾಗಿ ಮಾರ್ಪಟ್ಟಿತ್ತು. ನಿರ್ದಯವಾಗಿ ಪಾದಗಳಿಗೆ ಅಂಟಿಕೊಳ್ಳುತ್ತಿತ್ತು ಅದು. ಅಷ್ಟೊಂದು ಕಡಮೆ ಜಾಗದಲ್ಲಿ ಅಷ್ಟೊಂದು ಹೆಚ್ಚು ಹೊಲಸನ್ನು ಹಿಂದೆಂದೂ ನಾನು ನೋಡಿರ ಲಿಲ್ಲ. ಹೊಲಗಳ ಹಾಗೂ ಕಾಡುಗಳ ಪರಿಶುದ್ಧತೆಗೆ ಒಗ್ಗಿಹೋಗಿದ್ದ ನನ್ನ ಮನಸ್ಸನ್ನು ಶಹರದ ಈ ಕೊಳಕು ಕೊಂಪೆ ಅವರ್ಣನೀಯ ರೀತಿಯಲ್ಲಿ ಕುಗ್ಗಿಸಿತು.

ತೊರೆಯ ಆಚೆಗೆ, ಮುರಿದುಬಿದ್ದು ಹಾಳಾಗಿದ್ದ ಬೂದು ಬಣ್ಣದ ಬೇಲಿಗಳಿದ್ದುವು. ಅವು ಗಳ ಮಧ್ಯೆ ಬಾದಾಮಿ ಬಣ್ಣದೊಂದು ಮನೆಯನ್ನು ನಾನು ಗುರುತಿಸಿದೆ. ಅದು, ಪಾದರಕ್ಷೆಗಳ ಅಂಗಡಿಯಲ್ಲಿ ನಾನು ನೌಕರನಾಗಿದ್ದಾಗ ವಾಸಿಸುತ್ತಿದ್ದ ಮನೆ. ಆ ಮನೆಯ ಸಾಮಿಪ್ಯದಿಂದಂತೂ ನನ್ನ ಮನಸ್ಸು ಮತ್ತಷ್ಟು ಅಸ್ತವ್ಯಸ್ತವಾಯಿತು: ಆ ರೀತಿಯಲ್ಲಿ ಪುನಃ ನಾನು ಯಾಕೆ ವಾಸಿಸ ಬೇಕು ?

ನನ್ನ ಹೊಸ ಯಜಮಾನ ನನಗೆ ಪರಿಚಿತನಾಗಿದ್ದ. ಹಿಂದೆ, ಆತನೂ ಆತನ ತಮ್ಮನೂ ನನ್ನ ತಾಯಿಯನ್ನು ಭೇಟಿಮಾಡಲು ಬಂದಿದ್ದರು. ಆಂದ್ರಿಪಪ್ಪಾ, ಆಂದ್ರಿಪಪ್ಪಾ," ಎಂದು ತಮಾಷೆಯಾಗಿ ಕಿರಲಿದ್ದವನು ಈ ತಮ್ಮನೇ.

ಅವರಿಬ್ಬರಲ್ಲಿ ಯಾರೂ ಒಂದಿಷ್ಟೂ ಬದಲಾಗಿರಲಿಲ್ಲ. ಹಿರಿಯನಿಗೆ ಗಿಡುಗಮೂಗೂ ನೀಳ ವಾದ ಕೂದಲೂ ಇತ್ತು. ಸೊಗಸಾದ ನಡವಳಿಕೆ. ಮೃದು ಹೃದಯದವನಂತೆಯೇ ತೋರುತ್ತಿದ್ದ ಕಿರಿಯವನಾದ ವಿಕ್ಟರ್‌ಗೆ, ಹಿಂದೆ ಇದ್ದ ಕುದುರೆ ಮುಖವೇ, ಆ ಪಿಟಿಕೆಗಳೇ, ಇದ್ದುವು. ಅವರ ತಾಯಿ, ಅಜ್ಜಿಯ ತಂಗಿಯಾಗಿದ್ದಳು. ಆದರೆ ಈಕೆ, ಗದ್ದಲದ ಮುಂಗೋಪಿ ಹೆಂಗಸು. ಹಿರಿಯ ವನು ಕರಿದು ಕಣ್ಣುಗಳ, ಗೋಧಿಯ ರೊಟ್ಟಿಯಷ್ಟೇ ಬೆಳ್ಳಗೂ ಉಬ್ಬಿಕೊಂಡೂ ಇದ್ದ, ಹೆಂಗ ಸೊಬ್ಬಳನ್ನು ಮದುವೆಯಾಗಿದ್ದ.

ಆರಂಭದ ಕೆಲದಿನಗಳಲ್ಲಿ ಎರಡುಸಾರೆ ಆಕೆ ನನ್ನೊಡನೆ ಅಂದಳು:

"ನಿನ್ನ ತಾಯಿಗೆ ಒಮ್ಮೆ ನಾನು, ಹೊಳೆಯುವ ಕಪ್ಪುಮಣಿಗಳಿದ್ದ ರೇಶಿಮೆ ಮೇಲಂಗಿಯನ್ನು ಕೊಟ್ಟಿದ್ದೆ."

ನನ್ನ ತಾಯಿಗೆ ಆಕೆ ಉಡುಗೊರೆ ಕೊಟ್ಟಿದ್ದಳೆಂಬುದನ್ನು, ನನ್ನ ತಾಯಿ ಅದನ್ನು ಸ್ವೀಕರಿಸಿ ದ್ದಳೆಂಬುದನ್ನು, ನಂಬಲು ಯಾಕೋ ಏನೋ ನಾನು ಇಷ್ಟಪಡಲಿಲ್ಲ. ಈ ಮೇಲಂಗಿಯ ವಿಷಯ ಮತ್ತೊಮ್ಮೆ ಆಕೆ ನನ್ನೊಡನೆ ಪ್ರಸ್ತಾಪಿಸಿದಾಗ ನಾನೆಂದೆ:

"ಕೊಟ್ಟಿದ್ದೆ ಎಂದಾದರೆ ಬಡಾಯಿಕೊಚ್ಚೋದು ಯಾಕೆ?"

ಆಕೆ ಅಪ್ರತಿಭಳಾಗಿ ಹೌಹಾರಿದಳು.

"ಏ-ಏ-ನು? ನೀನು ಯಾರ ಜತೆ ಮಾತಾಡ್ತಿದ್ದೀ ಅಂತ ತಿಳ್ಕೊಂಡೆ?"

ಆಕೆಯ ಮುಖ ರಂಗೇರಿ ಕೆಂಪು ಮಚ್ಚೆಗಳು ಕಾಣಿಸಿಕೊಂಡುವು. ಕಣ್ಣುಗಳನ್ನು ಹೊರಳಿ ಸುತ್ತ ಆಕೆ ಗಂಡನನ್ನು ಕರೆದಳು.

ಕಿವಿಯ ಹಿಂಬದಿಯಲ್ಲಿ ಪೆನ್ಸಿಲು ಇರಿಸಿಕೊಂಡು, ಕೈಯಲ್ಲಿ ಕಂಪಾಸ್ ಹಿಡಿದು, ಆತ ಅಡುಗೆಮನೆಯೊಳಕ್ಕೆ ಬಂದ. ಹೆಂಡತಿ ಕೊಟ್ಟ ದೂರನ್ನು ಕೇಳಿದ ಮೇಲೆ, ನನ್ನೆಡೆ ತಿರುಗಿ ಆತನೆಂದ:

"ನೀನು ಯಾವತ್ತೂ ಉದ್ಧಟತನ ತೋರಿಸಬಾರದು."

ಬಳಿಕ, ಅಸಹನೆಯಿಂದ ಹೆಂಡತಿಯ ಕಡೆ ತಿರುಗಿ ಆತ ನುಡಿದ:

"ಇಂಥ ಅರ್ಥವಿಲ್ಲದ್ದಕ್ಕೆಲ್ಲಾ ನನ್ನನ್ನು ಕರೆದು ತೊಂದರೆ ಕೊಡಬೇಡ!"

"ಅರ್ಥವಿಲ್ಲದ್ದು!—ಏನು ಹಾಗೆಂದರೆ? ನಿನ್ನ ಸಂಬಂಧಿಕನೇ"

"ನನ್ನ ಸಂಬಂಧಿಕನನ್ನು ಸುಡ್ತು!" ಎಂದು ಕೂಗಾಡಿ, ಆತ ಹೊರಕ್ಕೆ ಧಾವಿಸಿದ.

ಈ ಜನರು ನನ್ನ ಅಜ್ಜಿಯ ಸಂಬಂಧಿಕರೆಂಬ ಸಂಗತಿಯನ್ನೂ ನಾನು ಇಷ್ಟಪಡಲಿಲ್ಲ ನನ್ನ ನಿರೀಕ್ಷಣೆಯಪ್ರಕಾರ, ಅಪರಿಚಿತರಿಗಿಂತಲೂ ಹೆಚ್ಚಾಗಿ ಸಂಬಂಧಿಕರೇ ಪರಸ್ಪರರೊಡ ಕೆಟ್ಟದಾಗಿ ವರ್ತಿಸುತ್ತಿದ್ದರು. ಪರಸ್ಪರರ ದುರ್ಬಲ ಹಾಗೂ ಅಲ್ಪತನದ ಅಂಶಗಳನ್ನು ಅಪರಿ ತರಿಗಿಂತ ಸಂಬಂಧಿಕರೇ ಚೆನ್ನಾಗಿ ತಿಳಿದಿದ್ದು, ಕೀಳುತರದ ಕುಹಕನುಡಿಗಳನ್ನು ಪ್ರಸಾ ಮಾಡುತ್ತಿದ್ದರು; ತಮ್ಮೊಳಗೇ ಪದೇ ಪದೇ ಜಗಳವಾಡುತ್ತಿದ್ದರು.

ನನ್ನ ಯಜಮಾನನನ್ನು ನಾನು ಇಷ್ಟಪಟ್ಟೆ. ತಲೆಗೂದಲನ್ನು ಹಿಂದಕ್ಕೆ ಹಾರಿಸಿ ಕಿವಿಗಳ ಚೆಗೆ ತಳ್ಳುವ ಆತನ ರೀತಿ ಆಕರ್ಷಕವಾಗಿತ್ತು. ಯಾವ ಕಾರಣಕ್ಕಾಗಿಯೋ, ಆತನನ್ ಕಂಡಾಗ ನನಗೆ 'ಭೇಷ್'ನ ನೆನಪಾಗುತ್ತಿತ್ತು. ಆಗಾಗ್ಗೆ ಆತ ಹೃತ್ಪೂರ್ವಕವಾಗಿ ನಗುತ್ತಿದ್ ಆಗ ಅವನ ಬೂದು ಕಣ್ಣುಗಳು ಸ್ನೇಹಪರವಾಗಿ ಮಿನುಗುತ್ತಿದ್ದುವು. ಗಿಡುಗಮೂಗಿನ ಎರಡು ಬದಿಗಳಲ್ಲಿ ತಮಾಷೆಯಾಗಿರುತ್ತಿದ್ದ ನೆರಿಗೆಗಳು ಕಾಣಿಸಿಕೊಳ್ಳುತ್ತಿದ್ದುವು.

"ಕೂಗಾಡುವ ಕೋಳಿಮರಿಗಳೇ, ಸಾಕು ನಿಮ್ಮ ಕಲಹ," ಎಂದ ಆತ, ಮುಗುಳ ನಕ್ಕು, ಪುಟ್ಟದಾದ ಒಂದಕ್ಕೊಂದು ಒತ್ತಿಕೊಂಡಿದ್ದ ಹಲ್ಲುಗಳನ್ನು ತೋರ್ಪಡಿಸುತ್ತಾ, ತನ ತಾಯಿಗೂ ಹೆಂಡತಿಗೂ ಹೇಳುತ್ತಿದ್ದ.

ಆ ಇಬ್ಬರು ಹೆಂಗಸರು ಪ್ರತಿದಿನವೂ ಜಗಳಾಡುತ್ತಿದ್ದರು. ಅವರ ನಡುವೆ ಕಲಹ ಆರಂ ವಾಗುತ್ತಿದ್ದ ವೇಗವನ್ನು ಕಂಡು ನನಗೆ ಆಶ್ಚರ್ಯವೆನಿಸುತ್ತಿತ್ತು. ಬೇಗನೆ ಬೆಳಗಿನಿಂದಲೇ ಮನೆಗೆ ಬೆಂಕಿ ಬಿದ್ದಿದೆಯೇನೋ ಎನ್ನುವಂತೆ, ತಲೆಗೂದಲು ಬಾಚಿಕೊಳ್ಳದೆ ಬಟ್ಟೆಯನ್ನು ಸ ಯಾಗಿ ತೊಟ್ಟುಕೊಳ್ಳದೆ, ಕೊಠಡಿಗಳ ಮೂಲಕ ಅತ್ತಿತ್ತ ಧಾವಿಸುತ್ತಿದ್ದರು. ದಿನವೆಲ್ ಅವರ ಗದ್ದಲವಿರುತ್ತಿತ್ತು. ಅವರು ವಿಶ್ರಾಂತಿ ಪಡೆಯುತ್ತಿದ್ದುದು, ಮಧ್ಯಾಹ್ನದ ಊಟ, ಚಹ ಮತ್ತು ರಾತ್ರೆಯ ಊಟಗಳ ಸಂದರ್ಭದಲ್ಲಿ ಮೇಜಿನ ಬಳಿಯಲ್ಲಿ ಮಾತ್ರ. ಮಂಕು ಕವಿಯು ವರೆಗೂ ಅವರು ತಿನ್ನುತ್ತಿದ್ದರು, ಕುಡಿಯುತ್ತಿದ್ದರು. ಊಟಮಾಡುತ್ತ ಅವರು ಆಹಾರ ಬಗೆಗೆ ಚರ್ಚಿಸುತ್ತಿದ್ದರು. ತೀವ್ರಕಲಹಕ್ಕೆ ಸಿದ್ಧರಾಗುತ್ತಾ, ಸೋಮಾರಿಗಳಂತೆ ಪದಗಳಿಂ ನುಣುಚಿಕೊಳ್ಳುತ್ತಿದ್ದರು. ಅತ್ತೆ ಏನೇ ಅಡುಗೆ ಮಾಡಿರಲಿ, ಸೊಸೆ ಅನ್ನುತ್ತಿದ್ದಳು:

"ಅಮ್ಮ ಇದನ್ನೆಂದೂ ಆ ರೀತಿ ಮಾಡ್ತಿರಲಿಲ್ಲ."

"ಇನ್ನಷ್ಟು ಕೆಟ್ಟದಾಗಿರ್ತಿತ್ತೊಂತ ಕಾಣ್ತದೆ."

"ಇಲ್ಲ—ಇದಕ್ಕಿಂತ ಚೆನ್ನಾಗಿರ್ತಿತ್ತು."

"ಹಾಗಾದರೆ ನೀನು ತಾಯಿಯ ಹತ್ತಿರಕ್ಕೆ ಹೋಗಿ ಅಲ್ಲಿಯೇ ಯಾಕೆ ವಾಸಿಸಬಾರದು ?"

"ಇಲ್ಲಿ ನಾನು ಒಡತಿ !"

"ನಾನು ಯಾರೂಂತ ತಿಳಕೊಂಡೆ ಹಾಗಾದರೆ ?"

"ಕೂಗಾಡುವ ಕೋಳಿ ಮರಿಗಳೇ, ಸಾಕುಮಾಡಿ ! ಏನಾಯಿತು ನಿಮಗೆ ?—ಹುಚ್ಚು ಹಿಡಿಯಿತೋ ಹೇಗೆ ?" ಎಂದು ಗಂಡ ಹೇಳುತ್ತಿದ್ದ.

ಮನೆಯಲ್ಲಿ ಪ್ರತಿಯೊಂದು ವಿವರಿಸಲಾಗದಷ್ಟು ವಿಚಿತ್ರವಾಗಿತ್ತು, ಹಾಸ್ಯಾಸ್ಪದವಾಗಿತ್ತು. ಅಡುಗೆಮನೆಯಿಂದ ಊಟದಮನೆಗೆ ಬರಬೇಕಾದರೆ, ಅಗಲ ಕಿರಿದಾದ, ಪುಟ್ಟದಾದ, ಆ ಮನೆಯ ಏಕಮಾತ್ರ ಕಕ್ಕಸನ್ನು ಹಾದುಬರುವುದು ಅಗತ್ಯವಾಗಿತ್ತು. ಈ ಕೊಠಡಿಯ ಮೂಲಕವೇ ಆಹಾರವನ್ನೂ ಚಾದಾನಿಯನ್ನೂ ಊಟದ ಮೇಜಿಗೆ ತರಲಾಗುತ್ತಿತ್ತು. ಹೆಚ್ಚಿನ ನಗೆ ಚಾಟಿಗೆಗೂ ಆಗಾಗ್ಗೆ ವಿನೋದಪರ ಸಂಭವಗಳಿಗೂ ಇದು ಕಾರಣವಾಗುತ್ತಿತ್ತು. ಶೌಚದ ತೊಟ್ಟಿಯಲ್ಲಿ ನೀರು ತುಂಬಿರುವಂತೆ ನೋಡುವುದು ನನ್ನ ಕೆಲಸಗಳಲ್ಲೊಂದು. ಕಕ್ಕಸು ಬಾಗಿಲಿಗೆ ಎದುರಾಗಿ, ಮೊಗಸಾಲೆಗೆ ಹೋಗುವ ಹಾದಿಯ ಬಾಗಿಲಿನ ಮಗ್ಗುಲಲ್ಲಿ, ಅಡುಗೆಮನೆಯೊಳಗೆ ನಾನು ಮಲಗುತ್ತಿದ್ದೆ. ಅಡುಗೆಮನೆಯ ಒಲೆಯಿಂದಾಗಿ ನನ್ನ ತಲೆ ಕಾದು ಬಿಸಿಯೇರುತ್ತಿತ್ತು. ಮೊಗಸಾಲೆಯ ಬಾಗಿಲ ಕೆಳಗೆ ಹರಡಿದ್ದ ಕಲ್ಲಿನಿಂದಾಗಿ ನನ್ನ ಪಾದಗಳು ಹೆಪ್ಪುಗಟ್ಟುತ್ತಿದ್ದುವು. ಮಲಗುವಾಗ ನಾನು, ನೆಲದ ಮೇಲಿನ ಚಾಪೆಗಳನ್ನೆಲ್ಲ ಸಂಗ್ರಹಿಸಿ ನನ್ನ ಪಾದಗಳ ಮೇಲೆ ರಾಶಿ ಹಾಕುತ್ತಿದ್ದೆ.

ಹಜಾರ ನೀರಸವಾಗಿರುತ್ತಿತ್ತು, ಬರಿದಾಗಿರುತ್ತಿತ್ತು. ಎರಡು ನಿಲುವುಗನ್ನಡಿಗಳು, ಇಸ್ಪೀಟು ಆಟದ ಮೇಜುಗಳೆರಡು, ನಿಡಿದು ಬೆನ್ನಿನ ಹನ್ನೆರಡು ಕುರ್ಚಿಗಳು, 'ನೀವಾ' ಪತ್ರಿಕೆಯ ಚಂದಾದಾರರಿಗೆ ಉಚಿತ ಕಾಣಿಕೆಗಳಾಗಿ ದೊರೆತ ಗಿಲೀಟು ಚೌಕಟ್ಟಿನ ಚಿತ್ರಗಳು. ಚಿಕ್ಕದಾದ ಬೈಠಕುಖಾನೆ ತುಂಬಾ ಕಡಿದು ಬಣ್ಣಗಳಿಂದ ಅಲಂಕರಿಸಿದ ಪೀಠೋಪಕರಣಗಳಿದ್ದುವು. ವರ ದಕ್ಷಿಣೆಯಾಗಿ ಬಂದಿದ್ದ ಬೆಳ್ಳಿಯ ಪಾತ್ರೆಗಳನ್ನೂ ಚಹಾಸೆಟ್ಟುಗಳನ್ನೂ ಬೀರುಗಳಲ್ಲಿ ಪ್ರದರ್ಶಿಸಿದ್ದರು. ಇದಕ್ಕೆಲ್ಲ ಕಿರೀಟವಿಟ್ಟಂತೆ, ಆಕಾರದಲ್ಲಿ ಒಂದನ್ನೊಂದು ಮೀರಿಸುತ್ತಿದ್ದ ಮೂರು ದೀಪಗಳಿದ್ದುವು. ಕಿಟಕಿಯಿಲ್ಲದ ಮಲಗುವ ಕೊಠಡಿಯಲ್ಲಿ, ಬಲು ದೊಡ್ಡದಾದ ಒಂದು ಮಂಚವಿತ್ತು; ಟ್ರಂಕುಗಳಿದ್ದುವು; ತಂಬಾಕದೆಲೆಯ ಹಾಗೂ ವಾಸನೆಬಳ್ಳಿಯ ಗಂಧವನ್ನು ಹೊರಸೂಸುತ್ತಿದ್ದ ಉಡುಪು ಕಪಾಟಗಳಿದ್ದುವು. ಈ ಮೂರು ಕೊಠಡಿಗಳು ಹೆಚ್ಚುಕಡಿಮೆ ಬರಿದಾಗಿಯೇ ಇರುತ್ತಿದ್ದುವು. ಕುಟುಂಬವೆಲ್ಲ ಕಿರಿದಾದ ಊಟದ ಕೊಠಡಿಯಲ್ಲೇ ತುಂಬಿಕೊಂಡಿರುತ್ತಿತ್ತು. ಅಲ್ಲಿ ಅವರು ಒಬ್ಬರಿಗೊಬ್ಬರು ಅಡ್ಡವಾಗಿ ಬಂದು ತೊಂದರೆಕೊಡುತ್ತಲೇ ಇದ್ದರು. ಎಂಟು ಘಂಟೆಯ ಹೊತ್ತಿಗೆ ಉಪಹಾರವಾದೊಡನೆಯೇ, ಗಂಡನೂ ಆತನ ತಮ್ಮನೂ ಮೇಜನ್ನು ವಿಸ್ತರಿಸಿ, ಬಿಳಿಯ ಕಾಗದದ ಹಾಳೆಗಳನ್ನು ಅದರ ಮೇಲೆ ಹರಡಿ, ನಕಾಶೆ ಬಿಡಿಸುವ ಸಾಧನಗಳನ್ನೂ ಪೆನ್ಸಿಲುಗಳನ್ನೂ ಇಂಡಿಯಾ ಇಂಕ್ ತುಂಬಿದ್ದ ಬಟ್ಟಲುಗಳನ್ನೂ ತರುತ್ತಿದ್ದರು. ಒಬ್ಬನು ಮೇಜಿನ ಒಂದು ತುದಿಯಲ್ಲೂ ಇನ್ನೊಬ್ಬನು ಆತನಿಗೆ ಎದುರಾಗಿಯೂ ಕುಳಿತು ಕೆಲಸ ಆರಂಭಿಸುತ್ತಿದ್ದರು. ಮೇಜು ಅಲುಗಾಡುತ್ತಿತ್ತು. ಇಡಿಯ ಕೊಠಡಿಯನ್ನೇ ಅದು ಆವರಿಸುತ್ತಿತ್ತು. ನನ್ನ ಕಿರಿಯ

ಯಜಮಾನಿಯೂ ಮಗುವಿನ ದಾದಿಯೂ ಮಗುವಿನ ಕೊಠಡಿಯಿಂದ ಹೊರಬಂದಾಗ ಮೇಜಿ
ಢಿಕ್ಕಿ ಹೊಡೆಯುವುದು ಖಂಡಿತವಾಗಿತ್ತು.

"ಅಡ್ಡ ಬರದೆ ದೂರ ಇರೋದಕ್ಕೆ ಆಗೋದಿಲ್ವೇನು ?" ಎಂದು ವಿಕ್ಟರ್, ಅಂತಹ ಒಂದ
ಸಂದರ್ಭದಲ್ಲಿ ರೇಗಾಡಿದ.

ಯಜಮಾನಿತಿ, ನೊಂದುಕೊಂಡ ಮುಖವನ್ನು ತನ್ನ ಗಂಡನೆಡೆಗೆ ತಿರುಗಿಸಿ ಅಂದಳು:

"ವಾಸ್ಯಾ, ನನ್ನ ಮೇಲೆ ಹಾಗೆ ರೇಗಾಡಬಾರದೂಂತ ಆತನಿಗೆ ಹೇಳು."

"ಮೇಜನ್ನು ಅಲುಗಿಸಬೇಡ ಹಾಗಾದರೆ," ಎಂದು ಆಕೆಯ ಗಂಡ ಶಾಂತವಾಗಿ ಸಲಹೆ ಇತ್ತ

"ಆದರೆ ನಾನು ಗರ್ಭಿಣಿ. ಇಲ್ಲಂತೂ ಜಾಗವೂ ಇಲ್ಲ."

"ಸರಿ. ಮೊಗಸಾಲೆಯಲ್ಲಿ ನಮ್ಮ ಕೆಲಸ ಮಾಡ್ತೇವೆ."

"ಓ ದೇವರೇ! ಮೊಗಸಾಲೆಯಲ್ಲಿ ಕೆಲಸ ಮಾಡೋದೆ?—ಸರಿಹೋಯ್ತು!"

ಕಕ್ಕಸಿನ ಹಾದಿಯ ಬಳಿ, ನನ್ನ ಹಿರಿಯ ಯಜಮಾನಿತಿ ಮಾತ್ರಿಯೋನಾ ಇವಾನೋವ್ನಾ
ಮುಖ ಕಾಣಿಸಿತು. ಅದು, ಅಡುಗೆ ಒಲೆಯ ಮೇಲಿಂದ ತೆಗೆದ ಮುಲ್ಲಂಗಿಯಂತೆ ಕೆಂಪಗಿತ್ತು.

"ಹೇಗಿದೆ—ವಾಸ್ಯಾ! ಇಲ್ಲಿ ನೀವು ಮೈಮುರಿದು ದುಡೀತಾ ಇದೀರಿ—ಇವಳು ತನ್ನ ನಾಯ
ಮರಿಗಳನ್ನು ಇಡೋಕೆ ನಾಲ್ಕು ಕೊಠಡಿ ಸಾಲದೂಂತ ದೂರ್ತಿದಾಳೆ! ತಲೇಲಿ ಮೆದುಳೇ ಇಲ್ಲ
ರಾಜಕುಮಾರೀನ ನೀನು ಮದುವೆಯಾಗಿರೋದು!" ಎಂದು ಆಕೆ ಕೂಗಾಡಿದಳು.

ವಿಕ್ಟರ್, ಪ್ರತೀಕಾರ ಭಾವನೆಯಿಂದ ನಕ್ಕ.

"ಸಾಕುಮಾಡಿ!" ಎಂದು ಗಂಡ ಗದರಿದ.

ಆದರೆ ಆತನ ಹೆಂಡತಿ, ಅತ್ತೆಯನ್ನು ಉದ್ದೇಶಿಸಿ ಬೈಗಳ ಪ್ರವಾಹವನ್ನು ಹರಿಸಿದ ಮೇಲ
ಮೇಜಿಗೆ ಅಡ್ಡವಾಗಿ ಬಿದ್ದು ಗೋಳಾಡಿದಳು:

"ನಾನು ಹೊರಟುಹೋಗ್ತೀನಿ! ನಾನು ಸತ್ತುಬಿಡ್ತೀನಿ!"

ಗಂಡ ಆಯಾಸದಿಂದ ಬಿಳಿಚಿಕೊಂಡು ಬೊಬ್ಬಿಟ್ಟ:

"ನನ್ನ ಕೆಲಸಕ್ಕೆ ಅಡ್ಡಿಯಾಗ್ತಿದೀರಾ ನೀವು—ಪಿಶಾಚಿ ನುಂಗಲಿ ನಿಮ್ಮನ್ನ! ಹುಚ್ಚಾಸ್ಪ
ಇದು! ಕೂಗಾಡೋ ಕೋಳಿಮರಿಗಳೇ-ನಾನು ಇಲ್ಲಿ ಬೆನ್ನುಮುರಿದುಕೊಂಡು ದುಡೀತಿರೋ
ನಿಮಗೋಸ್ಕರ—ನಿಮ್ಮನ್ನು ಸಾಕೋದಕ್ಕೋಸ್ಕರ!"

ಆರಂಭದಲ್ಲಿ ಈ ಜಗಳಗಳಿಂದ ನನಗೆ ದಿಗಿಲಾಗುತ್ತಿತ್ತು. ಒಮ್ಮೆ ಹೆಂಡತಿ, ಬ್ರೆಡ
ಕುಯ್ಯುವ ಚಾಕನ್ನು ಅಮುಕಿ ಹಿಡಿದು, ಉಡುಪು ತೊಡುವ ಕೊಠಡಿಯ ಒಳಹೊಕ್ಕು, ಅಗ
ಹಾಕಿಕೊಂಡು, ಕರ್ಣಭೇದಕವಾಗಿ ಕಿರಿಚತೊಡಗಿದಾಗ, ನನಗೆ ವಿಶೇಷ ಹೆದರಿಕೆಯಾಯಿತ
ಒಂದು ಕ್ಷಣ ಎಲ್ಲೆಲ್ಲೂ ಮಸಣದ ಮೌನ ನೆಲೆಸಿತು. ಬಳಿಕ, ಗಂಡ ಬಾಗಿಲಬಳಿಗೆ ಹೋ
ಅದಕ್ಕೆ ಒತ್ತಿಕೊಂಡು ಕೂಗಿದ.

"ಮೇಲಕ್ಕೆ ಹತ್ತು. ಕಿಟಕಿ ಒಡೆದು ಬಾಗಿಲಿನ ಕೊಂಡಿ ಎಳೆದುಬಿಡು!" ಎಂದು ಆ
ನನಗೆ ಕೂಗಿ ಹೇಳಿದ.

ಕ್ಷಣಾರ್ಧದಲ್ಲಿ ನಾನು, ಆತನ ಬೆನ್ನನ್ನೇರಿ ಬಾಗಿಲ ಮೇಲ್ಗಡೆ ಇದ್ದ ಗಾಜನ್ನು ಒಡ
ಆದರೆ, ಕೊಂಡಿ ಕಳಚಲೆಂದು ನಾನು ಕಿಟಕಿಯೊಳಗಿಂದ ಕೆಳಕ್ಕೆ ಬಾಗಿದಾಗ, ಆ ಹೆಂ

ಚಾಕುವಿನ ಹಿಡಿಯಿಂದ ನನ್ನ ತಲೆಗೆ ಹೊಡೆದಳು. ಹೇಗೋ ಮಾಡಿ ನಾನು ಅಗಣಿ ತೆಗೆಯಲು ಸಮರ್ಥನಾದೆ. ಗಂಡ ರಭಸದಿಂದ ಒಳಕ್ಕೆ ನುಗ್ಗಿ, ತನ್ನ ಹೆಂಡತಿಯನ್ನು ಹಿಡಿದು ಊಟದ ಕೊಠಡಿಗೆ ಎಳೆದು ತಂದು, ಆಕೆಯ ಕೈಯಲ್ಲಿದ್ದ ಚಾಕುವನ್ನು ಕಸಿದುಕೊಂಡ. ಜರ್ಜರಿತ ವಾಗಿದ್ದ ನನ್ನ ತಲೆಗೆ ಶುಶ್ರೂಷೆಮಾಡುತ್ತಾ ಅಡುಗೆಮನೆಯಲ್ಲಿ ನಾನು ಕುಳಿತಂತೆ, ವ್ಯರ್ಥವಾಗಿ ನಾನು ಸಂಕಟ ಅನುಭವಿಸಿದೆ ಎಂಬುದು ನನಗೆ ಮನವರಿಕೆಯಾಯಿತು. ಚಾಕು ಎಷ್ಟೊಂದು ಮೊಂಡಾಗಿತ್ತೆಂದರೆ, ಕತ್ತನ್ನು ಬಿಡಿ-ಬೆಣ್ಣೆಯನ್ನು ಕೂಡಾ ಅದರಿಂದ ಕುಯ್ಯುವುದು ಸಾಧ್ಯವಿರ ಲಿಲ್ಲ. ಅಲ್ಲದೆ, ನನ್ನ ಯಜಮಾನನ ಬೆನ್ನ ಮೇಲೆ ನಾನು ಹತ್ತಿ ನಿಲ್ಲುವ ಅಗತ್ಯವೂ ಇರಲಿಲ್ಲ. ಕಿಟಕಿಯನ್ನು ಒಡೆಯುವುದಕ್ಕಾಗಿ ನಾನು ಕುರ್ಚಿಯ ಮೇಲೆ ನಿಂತಿದ್ದರೆ ಸಾಕಾಗುತ್ತಿತ್ತು. ವಯಸ್ಸನಾದವನಿಗಂತೂ ಬಾಗಿಲಕೊಂಡಿಯನ್ನು ಕಳಚುವುದು ಹೆಚ್ಚು ಸುಲಭವಾಗುತ್ತಿತ್ತು. ಆತನ ತೋಳುಗಳು ನನ್ನವಕ್ಕಿಂತ ಹೆಚ್ಚು ಉದ್ದವಾಗಿದ್ದುವು....ಈ ಘಟನೆಯ ಬಳಿಕ, ಈ ಮನೆಯ ಕಲಹಗಳಿಂದ ನಾನು ಭೀತನಾಗಲಿಲ್ಲ.

ಆ ಸೋದರರು, ಇಗರ್ಜಿಯ ವಾದ್ಯವೃಂದದ ಸದಸ್ಯರಾಗಿದ್ದರು. ಕೆಲವು ಸಾರೆ ಕೆಲಸ ಮಾಡುತ್ತ ಅವರು, ಇಳಿದನಿಯಲ್ಲಿ ಹಾಡುತ್ತಿದ್ದರು. ರಾಗವಾಗಿ ಮೃದುಸ್ವರದಲ್ಲಿ ಹಿರಿಯವನು ಆರಂಭಿಸುತ್ತಿದ್ದ:

'ನೊರೆನೊರೆ ನೀರಿಗೆ
ಕನ್ನೆಯ ಉಂಗುರ ನಾನೆಸೆದೆ!'

ಕಿರಿಯವನು ತನ್ನ ಗಂಡಸುಧ್ವನಿಯಲ್ಲಿ ಮುಂದುವರಿಸುತ್ತಿದ್ದ:

'ಉಂಗುರದೊಡನೆ ಆನಂದ
ಈ ಇಳೆಯ ಸುಖ ನಾ ಕಳೆದೆ.'

ಮಕ್ಕಳ ಕೊಠಡಿಯಿಂದ ಕಿರಿಯ ಯಜಮಾನಿತಿಯ ತಗ್ಗಿದ ಕಾತರದ ಧ್ವನಿ ಕೇಳಿಸು ತ್ತಿತ್ತು:

"ಹುಚ್ಚು ಹಿಡಿಯಿತೆ ನಿಮಗೆ? ಮಗು ನಿದ್ದೆಮಾಡ್ತಿರೋದು ತಿಳೀದು?"

ಅಥವಾ:

"ವಾಸ್ಯಾ, ನೀನು ವಿವಾಹಿತ. ಕನ್ಯೆಯರ ವಿಷಯ ನೀನು ಹಾಡೋದು ಯೋಗ್ಯವಲ್ಲ. ಅಲ್ಲದೆ, ಸಾಯಂಪ್ರಾರ್ಥನೆಗೆ ಘಂಟೆ ಬಾರಿಸೋ ಹೊತ್ತಾಯ್ತು."

"ಸರಿ. ಇಗರ್ಜಿಸಂಗೀತ ಹಾಡ್ತೀವಿ, ಹಾಗಾದರೆ."

ಆದರೆ, ಇಗರ್ಜಿ ಸಂಗೀತವನ್ನು ಸಿಕ್ಕಸಿಕ್ಕಲ್ಲೆಲ್ಲ, ಅದರಲ್ಲೂ [ಕಕ್ಕಸು ಬಾಗಿಲ ಕಡೆಗೆ ಅರ್ಥಪೂರ್ಣವಾಗಿ ಕೈಸನ್ನೆಮಾಡಿ] ಇಲ್ಲಿ, ಹಾಡಲೇ ಬಾರದೆಂದು ನನ್ನ ಯಜಮಾನಿತಿ ಪಟ್ಟು ಹಿಡಿಯುತ್ತಿದ್ದಳು.

ನನ್ನ ಯಜಮಾನ ಗುಡುಗುತ್ತಿದ್ದ:

"ಅತಿಯಾಗಿ ಹೋಯ್ತು! ನಾವಿನ್ನು ಯಾವುದಾದರೂ ಬೇರೆ ಮನೆಗೇ ಹೋಗಬೇಕು."

ಅದೇ ರೀತಿ, ಪದೇ ಪದೇ, ಹೊಸತೊಂದು ಮೇಜನ್ನು ತರಬೇಕಾಗುತ್ತದೆಂದೂ ಆತ ಹೇಳುತ್ತಿದ್ದ. ಆದರೆ ಅದನ್ನೇ ಮೂರು ವರ್ಷಗಳಿಂದ ಆತ ಒತ್ತಿ ಒತ್ತಿ ಹೇಳುತ್ತಲಿದ್ದ.

ತಮ್ಮ ನೆರೆಹೊರೆಯವರನ್ನು ಕುರಿತು ಈ ಜನ ಚರ್ಚಿಸಿದಾಗಲೆಲ್ಲ, ಪಾದರಕ್ಷೆಗಳ ಅಂಗಡಿಯ ಹೊಲಸು ಹರಟೆಯ ನೆನಪು ನನಗಾಗುತ್ತಿತ್ತು. ತಾವೇ ಶಹರದ ಅತ್ಯುತ್ತಮ ಮನುಷ್ಯರೆಂದು ನನ್ನ ಈ ಯಜಮಾನರೂ ಭಾವಿಸಿಕೊಂಡಿದ್ದರೆಂಬುದು, ನನಗೆ ಸ್ಪಷ್ಟವಾಯಿತು. ಸಮರ್ಪಕ ವರ್ತನೆಯ ಎಲ್ಲ ನಿಯಮಗಳೂ ಅವರಿಗೆ ತಿಳಿದಿದ್ದುವು. ಉಳಿದ ಎಲ್ಲರ ಬಗೆಗೆ ಆ ನಿಯಮಗಳ ಪ್ರಕಾರವೇ ಅವರು ನಿರ್ದಾಕ್ಷಿಣ್ಯವಾಗಿ ತೀರ್ಪುಕೊಡುತ್ತಿದ್ದರು. ನನ್ನ ತಿಳಿವಳಿಕೆಗಂತು ಆ ನಿಯಮಗಳು ನಿಲುಕುತ್ತಿರಲಿಲ್ಲ. ಇತರರ ವಿಷಯವಾಗಿ ತೀರ್ಪುಕೊಡುತ್ತಿದ್ದ ಅವರ ಅಭ್ಯಾಸ, ಅವರ ಹಾಗೂ ಅವರ ನಿಯಮಗಳ ಬಗೆಗೆ ತೀವ್ರ ವಿರೋಧದ ಭಾವನೆಯನ್ನು ನನ್ನಲ್ಲಿ ಉಂಟುಮಾಡಿದುವು, ಆ ನಿಯಮಗಳನ್ನು ಉಲ್ಲಂಘಿಸಲು ಈಗ ನನಗೆ ಅತ್ಯಂತ ಸಂತೋಷ ವಾಗುತ್ತಿತ್ತು.

ನಾನು ಶ್ರಮಪಟ್ಟು ದುಡಿಯಬೇಕಾಗಿತ್ತು. ಸಾಧಾರಣವಾಗಿ ಮನೆಗೆಲಸದವಳು ಮಾಡುವ ದುಡಿಮೆಯನ್ನೆಲ್ಲ ನಾನು ಮುಗಿಸಿದ ಮೇಲೆ, ಬುಧವಾರಗಳಲ್ಲಿ, ಅಡುಗೆಮನೆಯ ನೆಲವನ್ನು ತೊಳೆದು, ಚಾದಾನಿಯನ್ನೂ ಇತರ ಹಿತ್ತಾಳೆ ಪಾತ್ರೆಗಳನ್ನೂ ಬೆಳಗಬೇಕಾಗುತ್ತಿತ್ತು. ಶನಿವಾರ ಗಳಲ್ಲಿ ಎಲ್ಲ ನೆಲಗಳನ್ನೂ ಎರಡು ಮಹಡಿ ಮೆಟ್ಟಲುಗಳನ್ನೂ ಉಜ್ಜಬೇಕಾಗುತ್ತಿತ್ತು. ಒಲೆಗಳಿ ಗಾಗಿ ನಾನು ಸೌದೆ ಒಡೆದು ತರುತ್ತಿದ್ದೆ; ತರಕಾರಿಗಳನ್ನು ತೊಳೆಯುತ್ತಿದ್ದೆ; ನನ್ನ ಯಜಮಾನಿಯ ಜತೆ ಆಕೆಯ ಬುಟ್ಟಿ ಹೊತ್ತುಕೊಂಡು ಸಂತೆಪೇಟೆಗೆ ಹೋಗುತ್ತಿದ್ದೆ; ದಿನಸಿಯ ಅಂಗಡಿಗೂ ಔಷಧದ ಅಂಗಡಿಗೂ ಹೋಗಿಬರುತ್ತಿದ್ದೆ.

ನನ್ನ ಹಿರಿಯ ಯಜಮಾನಿತಿ—ನನ್ನ ಅಜ್ಜಿಯ, ಗದ್ದಲದ ಸಿಡುಕಿನ ಸೋದರಿ—ಪ್ರತಿ ಬೆಳಗ್ಗೆ ಆರು ಘಂಟೆಗೆ ಏಳುತ್ತಿದ್ದಳು. ಸ್ವಲ್ಪದರಲ್ಲೆ ಮೈ ತೊಳೆದುಕೊಂಡು, ತನ್ನ ಒಳ ಉಡುಪಿನಲ್ಲೆ ದೇವಪ್ರತಿಮೆಗಳ ಮುಂದೆ ಬಾಗಿ, ಬಹಳ ಹೊತ್ತು, ತನ್ನ ಬದುಕನ್ನು ಕುರಿತು ತನ್ನ ಮಕ್ಕಳು ಹಾಗೂ ಸೊಸೆಯನ್ನು ಕುರಿತು, ದೇವರಲ್ಲಿ ದೂರು ಕೊಡುತ್ತಿದ್ದಳು.

ಬೆರಳುಗಳ ತುದಿಗಳನ್ನು ಒಟ್ಟಾಗಿಸಿ ತನ್ನ ಹಣೆಯನ್ನು ಒಂದೆಡೆ ಮುಟ್ಟಿ, ರೋದನದ ಧ್ವನಿಯಲ್ಲಿ ಆಕೆ ದೂರುತ್ತಿದ್ದಳು:

"ಓ ದೇವರೇ, ನಿನ್ನಿಂದ ನನಗೇನೂ ಬೇಕಾಗಿಲ್ಲ ಪ್ರಭೂ....ನೀನು ಇಷ್ಟಪಡೋದಾದರೆ ಒಂದು ಚೂರು ವಿಶ್ರಾಂತಿ—ಒಂದು ಚೂರು ಶಾಂತಿ—ಇದರ ಹೊರತಾಗಿ ನಿನ್ನಿಂದ ನಾನು ಏನನ್ನೂ ಕೇಳೋದಿಲ್ಲ."

ಆಕೆಯ ಕೂಗಾಟದಿಂದ ನನಗೆ ಎಚ್ಚರವಾಗುತ್ತಿತ್ತು. ಕಂಬಳಿಯೊಳಗಿಂದಲೇ ಆಕೆಯನ್ನು ಈಕ್ಷಿಸುತ್ತಾ, ಆಕೆಯ ಭಾವೋದ್ವೇಗದ ಪ್ರಾರ್ಥನೆಗಳಿಗೆ ದಿಗಿಲುಗೊಂಡೇ ಕಿವಿಗೊಡುತ್ತಾ, ನಾನು ಮಲಗುತ್ತಿದ್ದೆ. ಮಳೆಯಿಂದ ತೋಯ್ದಿದ್ದ ಅಡುಗೆಮನೆಯ ಕಿಟಕಿಯ ಎಡೆಯಿಂದ ಶರತ್ಕಾಲದ ಬೆಳಗು, ಮಂದವಾಗಿ ಇಣಿಕುತ್ತಿತ್ತು. ಆ ಶೀತಲ ಮುಂಜಾವದಲ್ಲಿ ಆಕೆಯ ಬೂದು ಆಕೃತಿ ರಭಸದಿಂದ ಆಕೆ ಶಿಲುಬೆಯವಂದನೆ ಮಾಡುತ್ತಿದ್ದಂತೆ, ನೆಲಕ್ಕೆ ಒಂದೇ ಸಮನೆ ಬಾಗುತ್ತಿತ್ತು. ಆಕೆಯ ಕಿರಿಯ ತಲೆಯಿಂದ ಕರವಸ್ತ್ರ ಜಾರಿಬಿದ್ದು, ಆಕೆಯ ತೆಳ್ಳಗಿನ ವಿವರ್ಣವಾದ ತಲೆ ಗೂದಲುಗಳು ಭುಜಗಳ ಮೇಲೆ ಹರಡುತ್ತಿದ್ದುವು. ಎಡಗೈಯನ್ನು ಸರಕ್ಕನೆ ಚಲಿಸಿ ಕರವಸ್ತ್ರ ವನ್ನು ಸರಿಪಡಿಸುತ್ತ ಆಕೆ ಗೊಣಗುತ್ತಿದ್ದಳು:

"ಹಾಳಾದ ಚಿಂದಿ ಅರಿವೆ!"

ಶಿಲುಬೆಯ ವಂದನೆ ಮಾಡುವಾಗ, ಹಣೆಯನ್ನೂ ಭುಜಗಳನ್ನೂ ಹೊಟ್ಟೆಯನ್ನೂ ಚಚ್ಚಿಕೊಳ್ಳುತ್ತಾ, ಕೀರಲು ಧ್ವನಿಯಲ್ಲಿ ತನ್ನ ಅರ್ಜಿಯನ್ನು ಒಪ್ಪಿಸುತಿದ್ದಳು:

"ದೇವರೇ, ನೀನು ನನ್ನನ್ನು ಪ್ರೀತಿಸೋದಾದರೆ, ಆ ನನ್ನ ಸೊಸೆಯನ್ನು ದಂಡಿಸು. ನನ್ನನ್ನು ಆಕೆ ಅವಮಾನಿಸೋದಕ್ಕೆ ತಕ್ಕ ಪ್ರತಿಫಲ ಉಣ್ಣುವ ಹಾಗೆ ಮಾಡು! ನನ್ನ ಮಗನ ಕಣ್ಣುಗಳನ್ನು ತೆರೆಸು—ಅವಳು ನಿಜವಾಗಿಯೂ ಎಂಥವಳು ಅನ್ನೋದನ್ನು, ವಿಕ್ಟರ್ ಎಂಥವನು ಅನ್ನೋದನ್ನು, ಆತ ಕಾಣುವಂತಾಗಲಿ. ವಿಕ್ಟರ್‌ಗೆ ನೆರವಾಗು, ದೇವರೇ. ನಿನ್ನ ಕೃಪಾ ಕಟಾಕ್ಷವನ್ನು ಆತನ ಮೇಲೆ ಬೀರು."

ವಿಕ್ಟರ್ ಕೂಡಾ, ಅಲ್ಲೇ ಅಡುಗೆಮನೆಯಲ್ಲಿ ಎತ್ತರದ ಮಂಚದ ಮೇಲೆ ಮಲಗಿರುತ್ತಿದ್ದ. ತಾಯಿಯ ದೂರುಗಳಿಂದ ಎಚ್ಚರಗೊಂಡು ನಿದ್ದೆಗಣ್ಣಿನಲ್ಲಿ ಆತ ಕೂಗಿ ಹೇಳುತ್ತಿದ್ದ:

"ಇಂಥ ಅಪರಾತ್ರಿಯಲ್ಲಿ ಕಿರಿಚ್ತಿರೋದು! ನೀನು ನಿಜವಾಗಿಯೂ ಪಿಶಾಚಿಯೇ—ಅಮ್ಮಾ!"

"ಶ್! ಶ್! ಪುನಃ ನಿದ್ದೆಮಾಡು," ಎಂದು, ತಪ್ಪಿತಸ್ಥಳ ಧ್ವನಿಯಲ್ಲಿ ಆತನ ತಾಯಿ ಪಿಸುನುಡಿಯುತ್ತಿದ್ದಳು. ಒಂದೆರಡು ನಿಮಿಷ ಹಿಂದಕ್ಕೂ ಮುಂದಕ್ಕೂ ಮೌನವಾಗಿ ತೂಗಾಡುತ್ತಿದ್ದು, ಪುನಃ ದ್ವೇಷಪೂರ್ಣವಾಗಿ ಕೂಗುತ್ತಿದ್ದಳು:

"ಅವರ ಮೂಳೆ ಮೂಳೆಗಳೇ ಹೆಪ್ಪುಗಟ್ಟಲಿ; ಅವರ ರಕ್ತ ಒಣಗಿ ಹೋಗಲಿ!"

ಪರರಿಗೆ ಕೆಡುಕನ್ನು ಬಯಸುವ ದುರ್ಭಾವನೆಯಿಂದ ನನ್ನ ಅಜ್ಜ ಕೂಡಾ ಎಂದೂ ಹಾಗೆ ಪ್ರಾರ್ಥಿಸಿರಲಿಲ್ಲ.

ಪ್ರಾರ್ಥನೆಗಳು ಮುಗಿದ ಬಳಿಕ ನನ್ನನ್ನು ಆಕೆ ಎಬ್ಬಿಸುತ್ತಿದ್ದಳು:

"ಏಳು. ಹೊರಳಾಡಿದ್ದು ಸಾಕು—ನಿನ್ನನ್ನು ನಾವು ಕೆಲಸಕ್ಕೆ ಇಟ್ಟುಕೊಂಡಿರೋದು ಇದಕ್ಕಲ್ಲ. ಚಾದಾನಿಯನ್ನು ಒಲೆಯ ಮೇಲಿರಿಸು—ಸೌದೆ ತಾ. ಆಹಾ!—ಸೌದೆ ಚೂರುಗಳನ್ನು ಸಂಜೆಯೇ ತಯಾರಿಸಿ ಇಡೋದಕ್ಕೆ ಪುನಃ ಮರೆತೆ.

ಈ ಮುದುಕಿಯ ಸುಂಯ್‌ಗುಟ್ಟುವ ಗೊಣಗಾಟದಿಂದ ತಪ್ಪಿಸಿಕೊಳ್ಳಲು, ನಾನು ಬೇಗ ಬೇಗನೆ ದುಡಿಯಲೆತ್ನಿಸಿದೆ. ಆದರೂ ಆಕೆಯನ್ನು ತೃಪ್ತಿಪಡಿಸುವುದು ದುಸ್ಸಾಧ್ಯವಾಗಿತ್ತು. ಹಿಮಗಾಳಿಯಂತೆ ಆಕೆ ಅಡುಗೆಮನೆಯೊಳಕ್ಕೆ ಬೀಸಿ, ಸುಂಯ್‌ಗುಡುತ್ತಿದ್ದಳು:

"ಶ್, ಪುಟ್ಟ ಪಿಶಾಚಿ! ಈ ಸದ್ದಿನಿಂದ ಎಲ್ಲಾದರೂ ವಿಕ್ಟರ್‌ಗೆ ಎಚ್ಚರವಾಗಲಿ, ಆಮೇಲೆ ಹೇಳ್ತೀನಿ! ಅಂಗಡಿಗೆ ಹೋಗಿ ಬಾ!"

ನಿತ್ಯದ ಪ್ರಾತಃಕಾಲದ ಉಪಾಹಾರಕ್ಕಾಗಿ ನಾವು, ಎರಡು ರಾತಲುಗಳಷ್ಟು ಗೋಧಿಯ ಬ್ರೆಡ್ಡನ್ನೂ ಕಿರಿಯ ಯಜಮಾನಿತಿಗೋಸ್ಕರ ಎರಡು ಕೊಪೆಕ್ಕುಗಳಷ್ಟು ಮೃದು ರೊಟ್ಟಿಯನ್ನೂ ಕೊಳ್ಳುತ್ತಿದ್ದೆವು. ಬ್ರೆಡನ್ನು ನಾನು ಮನೆಗೆ ತಂದಾಗ ಹೆಂಗಸರು, ಅದನ್ನು ತಮ್ಮ ಅಂಗೈಗಳಲ್ಲಿಟ್ಟು ತೂಗಿನೋಡುತ್ತಾ ಸಂದೇಹದಿಂದ ಪರೀಕ್ಷಿಸುತ್ತಿದ್ದರು. ಅವರು ಕೇಳುತ್ತಿದ್ದರು:

"ತೂಕದಲ್ಲಿ ಇನ್ನೊಂದು ತುಂಡು ಇರಲಿಲ್ಲವೇನು? ಇಲ್ಲ? ಎಲ್ಲಿ, ಬಾಯಿ ತೆರೆ ನೋಡೋಣ!"

ಬಳಿಕ, ಗೆದ್ದವರಂತೆ ಅವರು ಬೊಬ್ಬಿಡುತ್ತಿದ್ದರು:

"ತುಂಡನ್ನು ಈತ ತಿಂದಿದ್ದಾನೆ! ತಿಂದಿದ್ದಾನೆ! ಇವನ ಹಲ್ಲುಗಳಲ್ಲಿ ಚೂರುಗಳಿವೆ!"

ನಾನು ಮನಃಪೂರ್ವಕವಾಗಿಯೇ ದುಡಿದೆ. ಮನೆಯ ಹೊಲಸನ್ನು ಹೊರಹಾಕುವುದು ನೆಲಗಳನ್ನು ಉಜ್ಜುವುದು, ಹಿತ್ತಾಳೆಯ ಪಾತ್ರೆಗಳನ್ನೂ ಬಾಗಿಲ ಹಿಡಿಗಳನ್ನೂ ಒಲೆಯ ತಟ ಗಳನ್ನೂ ಬೆಳಗುವುದು—ಇವೆಲ್ಲಾ ನನಗೆ ಇಷ್ಟವಾಗಿದ್ದುವು. ಮನೆಯೊಳಗೆ ಶಾಂತಿ ನೆಲೆ ದ್ದಾಗ, ಎಷ್ಟೋ ಸಾರಿ ಹೆಂಗಸರು ಹೇಳುವುದನ್ನು ನಾನು ಕೇಳಿದ್ದೆ:

"ಕಷ್ಟಪಟ್ಟು ದುಡೀತಾನೆ,"

"ಸ್ವಚ್ಛವಾಗಿರ್ತಾನೆ."

"ಆದರೆ, ಬಲು ಉದ್ಧಟ."

"ಅವನನ್ನು ಸಾಕಿದೋರು ಯಾರೂಂತ ನೆನೆಸ್ಕೋ."

ತಮ್ಮಿಬ್ಬರನ್ನೂ ನಾನು ಗೌರವಿಸುವಂತೆ ಮಾಡಲು ಅವರು ಯತ್ನಿಸಿದರು. ಆದ ಅವರಿಬ್ಬರನ್ನೂ ಅರೆಹುಚ್ಚಿಯರೆಂದು ನಾನು ಪರಿಗಣಿಸಿದೆ. ಅವರಿಂದ ನನಗೆ ಯಾವ ಪ್ರಯೋ ನವೂ ಆಗಬೇಕಾದುದಿರಲಿಲ್ಲ. ಅವರಿಗೆ ವಿಧೇಯನಾಗಿರಲು ನಾನು ನಿರಾಕರಿಸಿದೆ. ಯಾವಾಗಲ ಅವರ ಮಾತಿಗೆ ಪ್ರತಿಮಾತು ಹೇಳಿದೆ. ತನ್ನ ಕೆಲವು ನುಡಿಗಳಿಗೆ ನನ್ನ ಪ್ರತಿಕ್ರಿಯೆ ಏನೆಂ ದನ್ನು ಕಿರಿಯ ಯಜಮಾನಿತಿ ಗಮನಿಸಿರಬೇಕು. ಆ ಕಾರಣದಿಂದ, ಆಕೆ ಪದೇಪದೇ ನನ ಹೇಳುತ್ತಿದ್ದಳು:

"ಭಿಕ್ಷುಕರ ಕುಟುಂಬದಿಂದ ನಿನ್ನನ್ನು ನಾವು ತಗೊಂಡಿದ್ದೇವೆ ಅನ್ನೋದನ್ನು ನೀವು ಮ ಬಾರದು. ಒಮ್ಮೆ ನಿನ್ನ ತಾಯಿಗೆ ನಾನು, ಅಂಚಿನಲ್ಲಿ ಅಚ್ಚಗಪ್ಪು ಮಣಿಗಳಿದ್ದ ರೇಶಿಮೆ ಮೇಲಂಗಿ ಉಡುಗೊರೆ ಕೊಟ್ಟಿದ್ದೆ."

ಒಂದು ದಿನ ಆಕೆಗೆ ನಾನೆಂದೆ?

"ಆ ನಿನ್ನ ಮೇಲಂಗಿಗೆ ಬದಲಾಗಿ ನನ್ನ ಚರ್ಮ ಸುಲಿದು ತಗೊಳ್ಳೋದಕ್ಕೆ ಇ ಪಡ್ತೀಯೇನು?"

"ಓ ದೇವರೇ! ಮನೆಗೆ ಬೆಂಕಿ ಹಚ್ಚೋದಕ್ಕೂ ಸಮರ್ಥನಾಗಿದ್ದಾನೆ ಈತ!" ಎಂದು ಭೀ ಯಿಂದ ಆಕೆ ಕೂಗಿದಳು.

ನಾನು ಚಕಿತನಾದೆ—ಯಾತಕ್ಕೋಸ್ಕರ ಮನೆಗೆ ಬೆಂಕಿ ಹಚ್ಚಬೇಕು ನಾನು?

ಅವರಿಬ್ಬರೂ ನನ್ನ ಯಜಮಾನನ ಬಳಿ ನನ್ನ ವಿಷಯ ದೂರು ಕೊಡುತ್ತಲೇ ಇದ್ದ ಕಟುವಾಗಿ ಆತ ನನಗೆ ಹೇಳುತ್ತಿದ್ದ:

"ನೀನು ಸ್ವಲ್ಪ ಹುಷಾರಾಗಿರೋದು ಮೇಲು, ಯುವಕ!"

ಆದರೆ ಒಂದು ದಿನ, ತನ್ನ ಹೆಂಡತಿ ಹಾಗೂ ತಾಯಿಯ ಕಡೆಗೆ ಬೇಸರದಿಂದ ತಿರ ಆತನೆಂದ:

"ಒಳ್ಳೆಯವರು ನೀವು, ನಿಜವಾಗಿಯೂ, ಕುದುರೆ ಸವಾರಿ ಮಾಡೋ ಹಾಗೆ ಆ ಹುಡು ಮೇಲೆ ಏರ್ತೀನಿ. ಬೇರೆ ಯಾರಾದರೂ ಆಗಿದ್ದಿದ್ದರೆ ಯಾವತ್ತೋ ಓಡಿಹೋಗ್ತಿದ್ದ, ಅಥ ದುಡಿತ ಹೆಚ್ಚಾಗಿ ಸತ್ತೇಬಿಡ್ತಿದ್ದ!"

ಈ ಮಾತಿನಿಂದಂತೂ ಹೆಂಗಸರಿಗೆ, ಕಣ್ಣೀರು ತೊಟ್ಟಿಕ್ಕುವಷ್ಟು ಸಿಟ್ಟುಬಂತು.

ಆತನ ಹೆಂಡತಿ ಕೋಪಾವಿಷ್ಟಳಾಗಿ, ಪಾದದಿಂದ ನೆಲವನ್ನು ತುಳಿಯುತ್ತಾ ಕೂಗಾಡಿದಳು:

"ಉದ್ದ ಕೂದಲ ಮೂರ್ಖ! ಆ ಹುಡುಗನ ಎದುರಿಗೇ ಅಂಥ ಮಾತನ್ನು ಹೇಳೋಕೆ ಎಷ್ಟು ಧೈರ್ಯ ನಿನಗೆ! ಅಂಥದಕ್ಕೆಲ್ಲ ಕಿವಿಗೊಟ್ಟಮೇಲೆ ನನಗೆ ಅವನು ವಿಧೇಯನಾಗಿರೋದಾರೂ ಹೇಗೆ? ನಾನು ಗರ್ಭಿಣಿ ಅನ್ನೋದನ್ನು ಮರೀಬೇಡ !"

ಆತನ ತಾಯಿ ರೋದನದ ಧ್ವನಿಯಲ್ಲಿ ಪ್ರಲಾಪಿಸಿದಳು:

"ದೇವರು ನಿನ್ನನ್ನು ಕ್ಷಮಿಸಲಿ, ವಾಸಿಲಿ; ಆದರೆ ನನ್ನ ಮಾತನ್ನು ನೆನಪಿಡು: ಆ ಹುಡುಗ ನನ್ನು ಕೆಡಿಸಿಬಿಡ್ತೀಯ, ನೀನು !"

ಅವರಿಬ್ಬರೂ ಸೆಟೆದುಕೊಂಡು ಹೊರಟುಹೋದರು.

ಆತ ನನ್ನೆಡೆಗೆ ನೋಡಿ ಕಳಿನ ಧ್ವನಿಯಲ್ಲಿ ಅಂದ:

"ಪುಟ್ಟಪಿಶಾಚಿ, ನಿನ್ನಿಂದಾಗಿ ಎಂಥ ಕಲಹವಾಯ್ತು, ನೋಡಿದಿಯಾ? ನಿನ್ನ ಅಜ್ಜನಲ್ಲಿಗೆ ನಿನ್ನನ್ನು ವಾಪಸು ಕಳಿಸಿಬಿಡ್ತೀನಿ, ನೋಡ್ಕೊ; ಪುನಃ ನೀನು ಹಾಳುಮೂಳಿನಿಂದ ಆರಿಸೋ ಕೆಲಸ ಮಾಡಬಹುದು."

ಆ ಅವಮಾನವನ್ನು ಸಹಿಸಲಾಗದೆ ನಾನು ಪ್ರತ್ಯುತ್ತರವಿತ್ತೆ:

"ನಿಮ್ಮ ಜತೆ ವಾಸವಾಗಿರೋದಕ್ಕಿಂತ, ಹಾಳುಮೂಳಿನಿಂದ ಆರಿಸೋ ಕೆಲಸವೇ ವಾಸಿ- ನನ್ನನ್ನು ಇಲ್ಲಿಗೆ ಶಿಷ್ಯನಾಗಿ ಕರಕೊಂಡು ಬಂದೆ; ಆದರೆ ನನಗೇನು ಹೇಳ್ಕೊಡ್ತಿದೀಯಾ? ಮನೆ ಹೊಲಸನ್ನು ಹೊರಕ್ಕೆ ಹೇಗೆ ಸಾಗಿಸೋದು ಅಂತಲೆ ?"

ನನ್ನ ಯಜಮಾನ, ನನ್ನ ತಲೆಗೂದಲನ್ನು ಮೃದುವಾಗಿ ಅಮುಕಿ, ನನ್ನ ಕಣ್ಣುಗಳನ್ನೇ ದಿಟ್ಟಿಸಿನೋಡುತ್ತ ಅಂದ:

"ನೀನೊಬ್ಬ ಪುಟ್ಟ ಸೈತಾನನೇ ನಿಜ! ಇದು ಸರಿಯಲ್ಲ, ಸೋದರ; ಸರಿಯಲ್ಲವೇ-ಅಲ್ಲ-!"

ನನ್ನನ್ನು ಆತ ಕಳುಹಿಬಿಡುವನೆಂದು ನನಗೆ ಖಂಡಿತವಾಗಿತ್ತು. ಆದರೆ ಎರಡು ದಿನಗಳ ಅನಂತರ ಆತ, ಒಂದು ಪೆನ್ಸಿಲು, ರೂಲರು, ಟಿ-ಸ್ಕ್ವೇರ್, ಕಾಗದದ ಸುರುಳಿ ಇಷ್ಟನ್ನು ಎತ್ತಿ ಕೊಂಡು ಅಡುಗೆಮನೆಗೆ ಬಂದ.

"ಚಾಕುಗಳನ್ನು ಬೆಳಗಿ ಆದಮೇಲೆ ಇದನ್ನು ಪ್ರತಿಮಾಡು," ಎಂದು ಹೇಳಿದ.

"ಅಲ್ಲಿದ್ದುದು, ಅಸಂಖ್ಯಾತ ಕಿಟಿಕಿಗಳೂ ಗಾರೆಯ ಅಲಂಕಾರವೂ ಇದ್ದ, ಎರಡು ಅಂತಸ್ತು ಗಳ ಒಂದು ಮನೆಯ ಎದುರು ಭಾಗದ ನಕಾಶೆ.

"ಇದು ಕಂಪಾಸ್. ಎಲ್ಲಾ ಗೆರೆಗಳನ್ನೂ ಅಳೆ. ಆ ಕಾಗದದ ಮೇಲೆ ಚುಕ್ಕಿ ಹಾಕಿ ಗುರುತಿಸು. ಆಮೇಲೆ ರೂಲರ್ ಇಟ್ಟು, ಚುಕ್ಕಿಗಳನ್ನು ಜೋಡಿಸು. ಮೊದಲು ಉದ್ದಕ್ಕೆ— ಅದು ನೆಲಮಟ್ಟದ ಪ್ರಕಾರ, ಆಮೇಲೆ ಮೇಲಕ್ಕೆ ಕೆಳಕ್ಕೆ—ಅಂದರೆ, ನೆಲದಮೇಲೆ ನೆಟ್ಟಗೆ ಶುರುಮಾಡು."

ಸ್ವಚ್ಛವಾದ ಕೆಲಸ ದೊರೆಯಿತೆಂದು, ಅಭ್ಯಾಸ ಆರಂಭವಾಯಿತೆಂದು, ನಾನು ಹರ್ಷಿತ ನಾದೆ. ಆದರೆ, ಆ ಕಾಗದ ಮತ್ತು ಸಾಧನಗಳನ್ನು, ಏನೊಂದೂ ಅರ್ಥವಾಗದೆ, ಭೀತಿಯಿಂದ ದಿಟ್ಟಿಸಿದೆ.

ಅದೇನಿದ್ದರೂ, ತಕ್ಷಣವೇ ನಾನು ಕೈಗಳನ್ನು ತೊಳೆದು, ಕೆಲಸಕ್ಕೆ ಕೈಹಾಕಿದೆ. ನೆಲದ

ಮಟ್ಟಕ್ಕೆ ಅನುಗುಣವಾಗಿ ಇದ್ದುದಕ್ಕೆಲ್ಲ ಗುರುತುಹಾಕಿ, ಅವುಗಳನ್ನೆಲ್ಲಾ ಒಂದುಗೂಡಿಸಿದೆ. ಒಳ್ಳೇದು! ಒಂದೇ ಕೊರತೆಯೆಂದರೆ, ಯಾವುದೋ ಕಾರಣಕ್ಕಾಗಿ ಮೂರು ಹೊಸ ಗೆರೆಗಳು ಕಾಣಿಸಿಕೊಂಡುವು, ಅಷ್ಟೆ. ಬಳಿಕ ನೇರ ಗೆರೆಗಳನ್ನು ಎಳೆದೆ. ಮನೆಯ ಸ್ವರೂಪ ವಿಚಿತ್ರ ರೀತಿಯಲ್ಲಿ ಬದಲಾಗಿದ್ದುದನ್ನು ಕಂಡು ಬಹುವಾಗಿ ಆಶ್ಚರ್ಯಪಟ್ಟೆ. ಕಿಟಿಕಿಗಳು, ನಡುವೆ ಬರುತ್ತಿದ್ದ ಗೋಡೆಯ ಜಾಗಕ್ಕೆ ಹತ್ತಿದ್ದುವು. ಒಂದಂತೂ ಮನೆಯಾಚೆಗೆ ಗಾಳಿಯಲ್ಲಿ ತೂಗಾಡುತ್ತಿತ್ತು. ಮುಖ್ಯ ದ್ವಾರವೂ ಕೂಡಾ ಮೇಲಣ ಮಾಳಿಗೆಯವರೆಗೆ ಏರಿಬಿಟ್ಟಿತ್ತು. ಗೋಡೆಯ ಅಂಚು ಛಾವಣಿಯಿಂದ ಮೇಲಿತ್ತು. ಹೊಗೆಹಾದಿಯ ಮೇಲಕ್ಕೆ ಹೋಗಿತ್ತು ಛಾವಣಿ ಕಿಟಿಕಿ.

ಕಂಬನಿ ಬಂದಂತಾಗಿ, ಆ ವಿಕೃತ ಸ್ವರೂಪವನ್ನು ನೋಡುತ್ತಾ, ಯಾಕೆ ಹೀಗಾಯಿತೆಂಬುದನ್ನು ತಿಳಿದುಕೊಳ್ಳಲು ಯತ್ನಿಸುತ್ತಾ, ಬಹಳ ಹೊತ್ತು ನಾನು ನಿಂತೆ. ಕೊನೆಯಲ್ಲಿ ನನ್ನ ಕಲ್ಪನಾ ಶಕ್ತಿಯಿಂದ ಪರಿಸ್ಥಿತಿಯನ್ನು ಸರಿಪಡಿಸಲು ನಾನು ನಿರ್ಧರಿಸಿದೆ. ಎಲ್ಲಾ ಗೋಡೆ ಅಂಚುಗಳ ಮೇಲೂ ಛಾವಣಿಗಳು ಸಂಧಿಸಿದ ಕಡೆಗಳಲ್ಲೂ ಗುಬ್ಬಚ್ಚಿ—ಕಾಗೆ—ಪಾರಿವಾಳಗಳನ್ನು ನಾನು ಚಿತ್ರಿಸಿದೆ. ನೆಲದ ಮೇಲೆ ಕಿಟಿಕಿಗಳೆದುರು, ಕೊಡೆ ಹಿಡಿದ ಡೊಂಕು ಕಾಲುಗಳ ಜನರ ಚಿತ್ರಗಳನ್ನು ಬಿಡಿಸಿದೆ. ಅಂಗನ್ಯೂನತೆಗಳನ್ನು ಆ ಕೊಡೆಗಳು ಸಂಪೂರ್ಣವಾಗಿ ಮರೆಮಾಡುತ್ತಿರಲಿಲ್ಲ. ಬಳಿಕ ಇಡಿಯ ಚಿತ್ರವನ್ನು ವಾಲಿದ ಗೆರೆಗಳಿಂದ ಮುಚ್ಚಿ, ನನ್ನ ಯಜಮಾನನ ಬಳಿಗೆ ಅದನ್ನೊಯ್ದೆ.

ಆತ ಹುಬ್ಬುಗಳನ್ನು ಮೇಲಕ್ಕೇರಿಸಿ, ಒಂದು ಹಿಡಿ ತಲೆಗೂದಲನ್ನು ತಿರುವಿ, ಸಿಟ್ಟಿನಿಂದ ಕೇಳಿದ:

"ಏನಿದು ?"

ನಾನು ವಿವರಿಸಿದೆ:

"ಮಳೆ ಬರ್ತಿದೆ. ಮಳೆ ಬಂದಾಗ, ಮಳೆ ಡೊಂಕಾಗಿರೋದರಿಂದ ಮನೆಗಳೂ ಡೊಂಕಾಗಿ ಕಾಣ್ತವೆ. ಹಕ್ಕಿಗಳು—ಇವೆಲ್ಲಾ ಹಕ್ಕಿಗಳು—ಗೋಡೆ ಅಂಚುಗಳ ಮೇಲೆ ಅಡಗಿಕೊಂಡಿವೆ. ಮಳೆ ಬಂದಾಗ ಅವು ಮಾಡೋದೇ ಹಾಗೆ. ಈ ಜನರೆಲ್ಲಾ ಮನೆಗಳಿಗೆ ಧಾವಿಸ್ತಿದಾರೆ. ಈಕೆ, ಕೆಳಗೆ ಬಿದ್ದಿರುವ ಹುಡುಗಿ; ಈತ, ನಿಂಬೆಹುಳಿ ಮಾರಾಟಗಾರ."

ತಲೆಗೂದಲು ಕಾಗದದ ಹಾಳೆಯ ಮೇಲೆ ಹರಿದಾಡುವವರೆಗೂ ಮೇಜಿಗೆ ಅಡ್ಡವಾಗಿ ಬಾಗಿ, ಮೈನಡುಗುವಂತೆ ನಗುತ್ತಾ, ನನ್ನ ಯಜಮಾನನೆಂದ:

"ಖಂಡಿತವಾಗಿಯೂ ನಾನು ನಿನಗೆ ಕೃತಜ್ಞನಾಗಿದ್ದೇನೆ. ಕೂಗಾಡೋ ಪುಟ್ಟ ಗುಬ್ಬಚ್ಚಿ—ಈ ಭೂಮಿಯಿಂದ ನಿನ್ನನ್ನು ನಾನು ತೊಡೆದುಹಾಕ್ಬೇಕು ? ಇದೀಗ ನಾನು ಮಾಡಬೇಕಾದ್ದು!"

ಓಪಾಯಿಯಂತೆ ತೂಗಾಡುತ್ತಿದ್ದ ಹೊಟ್ಟೆಯೊಡನೆ ಕಿರಿಯ ಯಜಮಾನಿತಿ ಒಳ ಬಂದು, ನನ್ನ ನಕಾಶೆಯ ಕಡೆ ನೋಡಿದಳು.

"ನಾಲ್ಕೇಟು ಬಾರಿಸು ಆತನಿಗೆ," ಎಂದು ತನ್ನ ಗಂಡನಿಗೆ ಹೇಳಿದಳು.

"ಇಲ್ಲವಪ್ಪ. ನಾನು ಶುರುಮಾಡಿದಾಗಲೂ ಇದಕ್ಕಿಂತ ಚೆನ್ನಾಗೇನೂ ಬರೆದಿರಲಿಲ್ಲ," ಎಂದು ಆತ ಶಾಂತವಾಗಿ ಉತ್ತರಿಸಿದ.

ಕೆಂಪು ಪೆನ್ಸಿಲಿನಿಂದ ನನ್ನ ನಕಾಶೆಯ ತಪ್ಪುಗಳನ್ನು ಗುರುತು ಹಾಕಿ, ಬೇರೊಂದು

ಕಾಗದದ ತುಂಡನ್ನು ಆತ ಕೊಟ್ಟ.

"ಪುನಃ ಪ್ರಯತ್ನಿಸು. ಇದು ಸರಿಯಾಗಿ ಬರೋವರೆಗೂ ನೀನು ಬಿಡಿಸ್ತಾನೇ ಇರಬೇಕು."

ನನ್ನ ಎರಡನೆಯ ಯತ್ನ ಹಿಂದಿನವಕ್ಕಿಂತ ಮೇಲಾಗಿತ್ತು. ಒಂದೇ ನ್ಯೂನತೆಯೆಂದರೆ, ಕಿಟಕಿಗಳಲ್ಲೊಂದು ಎದುರು ಬಾಗಿಲಿನ ಮೇಲೆ ಕುಳಿತಿತ್ತು. ಆದರೆ, ಮನೆಯನ್ನು ಬರಿದಾಗಿಯೆ ತೋರಿಸಲು ನಾನು ಇಷ್ಟಪಡಲಿಲ್ಲ. ಹೀಗಾಗಿ, ನಾನಾಬಗೆಯ ಜನರನ್ನು ಅದರೊಳಗೆ ನಾನು ತುಂಬಿದೆ. ಕಿಟಕಿಗಳ ಬಳಿ, ಯುವತಿಯರು ಬೀಸಣಿಗೆಗಳಿಂದ ಗಾಳಿ ಹಾಕಿಕೊಳ್ಳುತ್ತಾ, ಯುವಕರು ಸಿಗರೇಟು ಸೇದುತ್ತಾ ಕುಳಿತರು. ಸಿಗರೇಟು ಸೇದದೇ ಇದ್ದ ಒಬ್ಬ ಸುಮ್ಮನೆ ಕುಳಿತು, ಹೆಬ್ಬೆಟ್ಟನ್ನು ಮೂಗಿಗೆ ತಗಲಿಸಿ ಇತರರನ್ನು ಛೇಡಿಸುತ್ತಿದ್ದ. ಹೆಬ್ಬಾಗಿಲ ಹತ್ತಿರ ಗಾಡಿ ಹೊಡೆಯುವವನೊಬ್ಬ ನಿಂತಿದ್ದ. ಆತನ ಪಾದಗಳ ಬಳಿ ನಾಯಿ ಮಲಗಿತ್ತು.

"ಪುನಃ ಯಾಕೆ ಹೀಗೆ ಕೆಡಿಸಿದೆ?" ಎಂದು ನನ್ನ ಯಜಮಾನ ಕೋಪದಿಂದ ಕೇಳಿದ.

ಜನರಿಲ್ಲದೆ ಆ ನಕಾಶೆಯಲ್ಲಿ ಸ್ವಾರಸ್ಯವಿರುವುದಿಲ್ಲವೆಂದು ನಾನು ವಿವರಿಸಿದೆ. ಆದರೆ ಆತ, ಬಯ್ಯತೊಡಗಿದ.

"ಸುಟ್ಟಿತು! ಕಲೀಬೇಕೊಂತಿದ್ದರೆ ನೀನು ಮನಸ್ಸಿಟ್ಟು ಕೆಲಸ ಮಾಡ್ಬೇಕು. ಇದೆಲ್ಲಾ ಬರೇಹುಚ್ಚುಚ್ಚಾರ."

ಕೊನೆಯಲ್ಲಿ ಕೆಲದಿನಗಳಲ್ಲೇ ನಾನು, ಮೂಲವನ್ನೆ ಹೋಲುತ್ತಿದ್ದ ಒಂದು ಪ್ರತಿಯನ್ನು ಸಿದ್ಧಗೊಳಿಸಲು ಸಮರ್ಥನಾದಾಗ, ಆತನಿಗೆ ತುಂಬಾ ಸಂತೋಷವಾಯಿತು.

"ನೀನು ಪ್ರಯತ್ನಪಟ್ಟರೆ ಏನು ಮಾಡೋದಕ್ಕೆ ಸಾಧ್ಯ ಅಂತ ನೋಡು. ಇದೇ ರೀತಿ ನೀನು ಮುಂದುವರಿದರೆ ಬೇಗನೆ ಅಭಿವೃದ್ಧಿಗೆ ಬರ್ತೀಯಾ."

ಹಾಗೆ ಹೇಳಿ, ಒಂದು ಹೊಸ ಕೆಲಸವನ್ನು ಆತ ನನಗೆ ಒಪ್ಪಿಸಿದ.

"ನಮ್ಮ ಈ ಅಂತಸ್ತಿನ ಒಂದು ನಕಾಶೆ ತಯಾರಿಸು. ಕೊಠಡಿಗಳು ಹೇಗಿವೆ, ಬಾಗಿಲು ಗಳೂ ಕಿಟಕಿಗಳೂ ಎಲ್ಲೆಲ್ಲಿವೆ, ಪ್ರತಿಯೊಂದನ್ನೂ ಎಲ್ಲೆಲ್ಲಿ ಇರಿಸಿದೆ—ಇದನ್ನೆಲ್ಲಾ ತೋರಿಸಿ. ಹೇಗೆ ಬಿಡಿಸೋದೂಂತ ನಾನು ಹೇಳಿಕೊಡೋದಿಲ್ಲ. ಪ್ರತಿಯೊಂದನ್ನೂ ಸ್ವತಃ ನೀನೇ ಮಾಡ ಬೇಕು."

ನಾನು ಅಡುಗೆಮನೆಯೊಳಕ್ಕೆ ಹೋದೆ. ಎಲ್ಲಿ ಮೊದಲು ಮಾಡಬೇಕೆಂಬ ತೀರ್ಮಾನಕ್ಕೆ ಬರಲು ಯತ್ನಿಸಿದೆ.

ಆದರೆ ಆ ಘಟ್ಟಕ್ಕೆ, ನಕಾಶೆ ಬಿಡಿಸುವ ನನ್ನ ಪಾಠಗಳು ಕೊನೆಗಂಡುವು.

ಮುದುಕಿ ಯಜಮಾನಿತಿ ನನ್ನ ಬಳಿಗೆ ಬಂದು, ದ್ವೇಷ ತುಂಬಿದ ಧ್ವನಿಯಲ್ಲಿ ಅಂದಳು:

"ನಕಾಶೆ ಬಿಡಿಸುವವನಾಗಬೇಕೊಂತಿದೀಯಾ ನೀನು ಹಾಗಾದರೆ?"

ನನ್ನ ತಲೆಗೂದಲನ್ನು ಹಿಡಿದು ಅಮುಕಿ, ನನ್ನ ತಲೆಯನ್ನು ಆಕೆ ಮೇಜಿಗೆ ಜಪ್ಪಿದಳು. ಎಷ್ಟೊಂದು ಬಲವಾಗಿ ಜಪ್ಪಿದಳೆಂದರೆ, ನನ್ನ ಮೂಗು ಮತ್ತು ತುಟಿಹರಿದುವು. ಮೇಲಕ್ಕೂ ಕೆಳಕ್ಕೂ ಹಾರಾಡುತ್ತಾ ಆಕೆ, ನನ್ನ ನಕಾಶೆಯನ್ನು ಹರಿದಳು; ನನ್ನ ಉಪಕರಣಗಳನ್ನು ನೆಲಕ್ಕೆಸೆದಳು ಸೊಂಟದ ಮೇಲೆ ಕೈಗಳನ್ನಿರಿಸಿ ವಿಜಯಿಯಂತೆ ಒದರಾಡಿದಳು:

"ಇನ್ನೊಮ್ಮೆ ಮಾಡಿನೋಡು! ಏನಾಗ್ತದೇಂತ ನೋಡುವಿಯಂತೆ! ತನಗೋಸ್ಕರ ದುಡಿಯೋ

ದಕ್ಕೆ ಬೇರೆ ಯಾರನ್ನಾದರೂ ಗೊತ್ತುಮಾಡಿ, ತನ್ನದೇ ಮಾಂಸ—ರಕ್ತವಾದ ತನ್ನ ತಮ್ಮನನ್ನು ಓಡಿಸಿಬಿಡಬೇಕೂಂತಿದಾನಂತೋ?"

ನನ್ನ ಯಜಮಾನ ಓಡಿಬಂದ. ಆತನ ಹಿಂದೆ, ಪುಟ್ಟಪುಟ್ಟ ಹೆಜ್ಜೆಗಳನ್ನಿರಿಸಿ ಓಡುತ್ತಾ ಆತನ ಹೆಂಡತಿಯೂ ಬಂದಳು. ಕೋಲಾಹಲವೇ ಉಂಟಾಯಿತು. ಬಡಬಡನೆ ಮಾತನಾಡುತ್ತಾ ಮೂವರೂ ಒಬ್ಬರ ಮೇಲೊಬ್ಬರು ಬಿದ್ದರು. ಕೊನೆಯಲ್ಲಿ, ಹೆಂಗಸರು ಅಳಲು ಹೊರಟು ಹೋದರು; ಯಜಮಾನ ನನ್ನೊಡನೆ ಹೇಳಿದ:

"ಸದ್ಯಕ್ಕೆ ಇದನ್ನೆಲ್ಲಾ ನೀನು ಬಿಟ್ಟುಬಿಡೋದು ವಾಸಿ, ಕಲಿಯೋದನ್ನು ನಿಲ್ಲಿಸು. ಕಲಿತರೆ ಪರಿಣಾಮ ಏನು ಅನ್ನೋದನ್ನು ನೀನೇ ನೋಡಿದೀಯಲ್ಲ."

ಈ ಹೆಂಗಸರ ಕೂಗಾಟಗಳಿಂದ ಸದಾ ಕಾಲವೂ ಅಪ್ಪಚ್ಚಿಯಾಗುತ್ತಿದ್ದ, ಮನಸ್ಸು ಮುದುಡಿ ಹತಾಶನಾಗುತ್ತಿದ್ದ, ಆತನ ಬಗೆಗೆ ನನಗೆ ಕನಿಕರವೆನಿಸಿತು.

ನಾನು ಕಲಿಯುವುದು ಮುದುಕಿಗೆ ಇಷ್ಟವಿರಲಿಲ್ಲವೆಂಬುದೂ ಅದನ್ನು ತಡೆಗಟ್ಟಲು ತನ್ನ ಸಾಮರ್ಥ್ಯದಲ್ಲಿದ್ದುದನ್ನೆಲ್ಲ ಆಕೆ ಮಾಡುತ್ತಿದ್ದಳೆಂಬುದೂ ಆ ಘಟನೆಗೆ ಮುಂಚೆಯೇ ನನಗೆ ಮನ ವರಿಕೆಯಾಗಿತ್ತು. ನಕಾಶೆ ಬರೆಯಲು ಕುಳಿತುಕೊಳ್ಳುವುದಕ್ಕೆ ಮುಂಚೆ, ನಾನು ಯಾವಾಗಲೂ ಆಕೆಯನ್ನು ಕೇಳುತ್ತಿದ್ದೆ:

"ಇನ್ನೇನಾದರೂ ಕೆಲಸ ಬಾಕಿ ಇದೆಯೇನು?"

ನನ್ನ ಸಹನೆಯನ್ನು ಪರೀಕ್ಷಿಸುವಂತೆ ಆಕೆ ಉತ್ತರೀಯುತ್ತಿದ್ದಳು:

"ಇದ್ದಾಗ ಹೇಳ್ತೀನಿ. ಮೇಜಿನ ಹತ್ತಿರ ಕೂತು ಸಮಯ ಹಾಳುಮಾಡೋದಕ್ಕಷ್ಟೆ ನೀನು ತಕ್ಕವನು.

ಬಳಿಕ ಕೆಲವೇ ನಿಮಿಷಗಳಲ್ಲಿ ಯಾವುದಾದರೂ ಕೆಲಸಕ್ಕೆ ಆಕೆ ನನ್ನನ್ನು ಕಳುಹುವುದು ಖಂಡಿತವಾಗಿತ್ತು. ಆಕೆ ಎನ್ನುತ್ತಿದ್ದಳು:

"ಪ್ರವೇಶದ್ವಾರದ ಮೆಟ್ಟಲುಗಳನ್ನು ನೀನು ಗುಡಿಸಿದ ರೀತಿಯೊ! ಮೂಲೆಗಳಲ್ಲೆಲ್ಲಾ ಧೂಳು ಮತ್ತು ಹೊಲಸು ತುಂಬಿವೆ! ಹೋಗಿ ಪುನಃ ಗುಡಿಸು!"

ನೋಡಲೆಂದು ನಾನು ಹೋಗುತ್ತಿದ್ದೆ. ಆದರೆ ಧೂಳು ಎಲ್ಲಿಯೂ ಕಾಣಿಸುತ್ತಿರಲಿಲ್ಲ.

"ನಿನಗೆ ನನ್ನ ಜತೆ ವಾದಿಸೋಕೆ ಇಷ್ಟವೋ ಹಾಗಾದರೆ?" ಎಂದು ಆಕೆ ಕಿರಿಚುತ್ತಿದ್ದಳು.

ಒಂದು ದಿನ, ನನ್ನ ನಕಾಶೆಗಳ ಮೇಲೆಲ್ಲ ಆಕೆ ಗಿಣ್ಣು ಸುರಿಸಿದಳು. ಇನ್ನೊಂದುಸಾರಿ ದೇವರ ದೀಪದೆಣ್ಣೆಯ ಶೀಷೆಯನ್ನು ಅವುಗಳ ಮೇಲೆ ಉರುಳಿಸಿದಳು. ಮಗುವಿನಂತೆ ಮಗುತನದ ಚತುರೋಪಾಯದಿಂದ, ಅದನ್ನು ಬಚ್ಚಿಡಲಾಗದ ಮಗುತನದ ಅಸಾಮರ್ಥ್ಯ ದಿಂದ, ಆಕೆ ತುಂಟತನದ ಕೆಲಸವನ್ನು ಮಾಡುತ್ತಿದ್ದಳು. ಆಕೆಯಷ್ಟು ಬೇಗನೆ ಮತ್ತು ಸುಲಭ ವಾಗಿ ಸಿಡುಕುಗೊಳ್ಳುತ್ತಿದ್ದ ವ್ಯಕ್ತಿಯನ್ನು, ಅಥವಾ, ಪ್ರತಿಯೊಂದರ ಪ್ರತಿಯೊಬ್ಬರ ವಿಷಯ ವಾಗಿ ದೂರುವ ಅಷ್ಟೊಂದು ಅತ್ಯಾಸಕ್ತಿ ಇದ್ದ ವ್ಯಕ್ತಿಯನ್ನು, ಬೇರೆಲ್ಲೂ ನಾನೆಂದೂ ನೋಡಿ ಲಿಲ್ಲ. ಸಾಮಾನ್ಯವಾಗಿ, ದೂರುವುದೆಂದರೆ ಜನರಿಗೆ ಇಷ್ಟ. ಆದರೆ ಆಕೆ ಆ ಕೆಲಸವನ್ನು, ಹಾಡು ಗಾರ ತನ್ನ ಹಾಡಿನ ಬಗೆಗೆ ತೋರುತ್ತಿದ್ದ ಹರ್ಷಾತಿರೇಕದಿಂದ ಮಾಡುತ್ತಿದ್ದಳು.

ತನ್ನ ಮಗನ ಬಗೆಗೆ ಆಕೆಗಿದ್ದ ಪ್ರೀತಿಯನ್ನು ಒಂದು ವಿಧದ ಹುಚ್ಚೇ ಎನ್ನಬಹುದು. ಅದ

ತೀವ್ರತೆಯಿಂದ ನನಗೆ ತಮಾಷೆಯೆನಿಸುತ್ತಿತ್ತು, ಭಯವೂ ಆಗುತ್ತಿತ್ತು. ಅದನ್ನು, ಚಿತ್ತ ವಿಭ್ರಮೆಯ ತೀವ್ರತೆ ಎಂದಷ್ಟೇ ನಾನು ಬಣ್ಣಿಸಬಲ್ಲೆ. ಕೆಲವೊಮ್ಮೆ, ಬೆಳಗಿನ ಪ್ರಾರ್ಥನೆಗಳ ಬಳಿಕ ಆಕೆ, ಒಲೆಯಟ್ಟಕ್ಕೆ ಹತ್ತಿ, ತನ್ನ ಮೊಣಕೈಗಳನ್ನು ಮಂಚದ ಬದಿಯಲ್ಲಿರಿಸಿ ಬಲು ಶ್ರದ್ಧೆಯಿಂದ ಪಿಸುಗುಟ್ಟುತ್ತಿದ್ದಳು:

"ನನ್ನ ಒಲವಿನ ಕೂಸು. ನನ್ನ ರಕ್ತದ ರಕ್ತ, ವಜ್ರದಂತೆ ಪರಿಶುದ್ಧ, ದೇವತೆಯ ಪುಕ್ಕದಷ್ಟು ಹಗುರ! ಆತ ನಿದ್ರಿಸಿದ್ದಾನೆ. ನಿದ್ರಿಸು, ನನ್ನ ಮುದ್ದೇ, ನಿದ್ರಿಸು. ಸುಖಸ್ವಪ್ನಗಳಿಂದ ನಿನ್ನ ಹೃದಯವನ್ನು ಹೊದ್ದುಕೋ. ನಿನಗೋಸ್ಕರ, ಸುಂದರಿಯರಲ್ಲಿ ಸುಂದರಿಯಾದ, ಶ್ರೀಮಂತ ರಾಜಕುಮಾರಿಯಾದ, ಅಥವಾ ವ್ಯಾಪಾರಿಯ ಮಗಳಾದ ವಧುವನ್ನು ಕನಸಿನಲ್ಲಿ ಕಂಡುಕೋ. ನಿನ್ನ ವೈರಿಗಳೆಲ್ಲಾ ತಾವು ಹುಟ್ಟೋದಕ್ಕೆ ಮುಂಚೆಯೇ ಸಾಯಲಿ. ನಿನ್ನ ಸ್ನೇಹಿತರು ನೂರು ವರ್ಷಕಾಲ ಬಾಳಲಿ. ಕನ್ನೆಯರು, ಗಂಡು ಬಾತಿನ ಹಿಂದೆ ಹೆಣ್ಣು ಬಾತುಗಳು ಹೋಗುವ ಹಾಗೆ, ಹಿಂಡುಹಿಂಡಾಗಿ ನಿನ್ನನ್ನು ಹಿಂಬಾಲಿಸಿ."

ಪಕ್ಕೆಗಳು ಬಿರಿಯುವಷ್ಟು ತಮಾಷೆಯದಾಗಿ ಇದು ನನಗೆ ಕಂಡಿತು. ಒರಟನಾದ, ಸೋಮಾರಿಯಾದ, ನೀಳಮೂಗಿನ, ವರ್ಣರಂಜಿತ ಉಡುಪಿನ, ಉದ್ಧಟತನದ, ಮೂರ್ಖತನದ ವಿಕ್ಟರ್, ಎಲ್ಲದಕ್ಕಿಂತ ಹೆಚ್ಚಾಗಿ ಮರಕುಟಿಗ ಹಕ್ಕಿಯನ್ನು ಹೋಲುತ್ತಿದ್ದ.

ಕೆಲವುಸಲ, ತನ್ನ ತಾಯಿಯ ಪಿಸುಗುಟ್ಟುವಿಕೆಯಿಂದ ಆತನಿಗೆ ಎಚ್ಚರವಾಗುತ್ತಿತ್ತು. ನಿದ್ದೆಗಣ್ಣಿನಲ್ಲಿ ಆತ ಗೊಣಗುತ್ತಿದ್ದ:

"ನೀನು ನರಕಕ್ಕೆ ಹೋಗಬೇಕೂಂತ ನನ್ನ ಅಪೇಕ್ಷೆ, ಅಮ್ಮ. ನನ್ನ ಮೇಲೆಲ್ಲಾ ಉಗುಳಿಕೊಂಡು ಅಲ್ಲಿ ಯಾತಕ್ಕೆ ನಿಂತಿದೀಯಾ? ನಿನ್ನ ಜತೆ ಬದುಕೋದು ಸಾಧ್ಯವಿಲ್ಲವಪ್ಪಾ, ಇಲ್ಲ!"

ಸಾಧಾರಣವಾಗಿ ಆಕೆ, ತೆಪ್ಪಗೆ ಕೆಳಕ್ಕಿಳಿದು, ನಕ್ಕು ಹೇಳುತ್ತಿದ್ದಳು:

"ಹೂಂ. ಇನ್ನೂ ನಿದ್ದೆ ಮಾಡು—ನಿದ್ದೆ ಮಾಡು, ಪೆದ್ದೂ."

ಆದರೆ ಕೆಲವುಸಾರೆ, ಆಕೆಯ ಕಾಲುಗಳು ಕುಸಿಯುತ್ತಿದ್ದುವು. ಆಕೆ ಕೆಳಕ್ಕೆ ಒಲೆಯ ಬದಿಗೆ ಕುಸಿಬೀಳುತ್ತಿದ್ದಳು. ನಾಲಿಗೆ ಸುಟ್ಟಿತೇನೋ ಎನ್ನುವಂತೆ, ಬಾಯಿ ತೆರೆದುಕೊಂಡು ಉಸಿರಿಗಾಗಿ ಚಡಪಡಿಸುತ್ತಿದ್ದಳು. ಚುಚ್ಚುವ ಮಾತುಗಳನ್ನು ಹೊರಬಿಡುತ್ತಿದ್ದಳು.

"ಏ—ನು—? ನಿನ್ನ ತಾಯಿಯನ್ನೇ ನೀನು ನರಕಕ್ಕೆ ಕಳಿಸ್ತೀಯಾ, ಹಾದರಕ್ಕೆ ಹುಟ್ಟಿದವನೇ? ಉಪ್, ನನ್ನ ಆತ್ಮದ ಮೇಲಿನ ಕಳಂಕವೇ, ಸ್ವತಃ ಪಿಶಾಚಿ ನನ್ನ ಹೃದಯಕ್ಕೆ ಚುಚ್ಚಿದ ಹೊಲಸು ಚೂರೇ! ಹುಟ್ಟೋದಕ್ಕೆ ಮುಂಚೆಯೇ ನೀನು ಕೊಳೆತು ಹೋಗಬಾರದಾಗಿತ್ತೆ!"

ಬೀದಿಯಲ್ಲಿ ಕುಡುಕರು ಆಡುವ ಹೊಲಸು ಮಾತುಗಳನ್ನೇ ಆಕೆ ಬಳಸುತ್ತಿದ್ದಳು. ಆ ಮಾತುಗಳಿಗೆ ಕಿವಿಕೊಡಲು ಭಯವೆನಿಸುತಿತ್ತು.

ಆಕೆ ನಿದ್ರಿಸುತ್ತಿದ್ದುದು ಕಡಮೆ. ಅದೂ ಹೊರಳಾಡುತ್ತ. ಕೆಲವೊಮ್ಮೆ, ರಾತ್ರೆ ಹಲವು ಸಾರೆ ಒಲೆಯಟ್ಟದಿಂದ ಆಕೆ ಇಳಿದು, ನನ್ನ ಹಾಸಿಗೆಯ ಕಡೆಗೆ ನುಗ್ಗಿ, ನನ್ನನ್ನು ಎಬ್ಬಿಸುತಿದ್ದಳು.

"ಏನಾಯ್ತು?"

"ಶ್! "ಎಂದು ಆಕೆ ಪಿಸುಗುಟ್ಟಿ, ಶಿಲುಬೆಯ ವಂದನೆ ಮಾಡುತ್ತ ಕತ್ತಲಲ್ಲಿ ಯಾವುದರ ಕಡೆಗೋ ದಿಟ್ಟಿಸುತ್ತ, ಅನ್ನುತಿದ್ದಳು: "ಓ ದೇವರೇ!....ಪ್ರವಾದಿ ಎಲಿಜಾ....ಪೂಜ್ಯ ಹುತಾತ್ಮ

ಳಾದ ವಾರ್ವರಾ....ಅಪಮೃತ್ಯುವಿನಿಂದ ನಮ್ಮನ್ನು ರಕ್ಷಿಸು....”

ನಡುಗುತ್ತಿದ್ದ ಕೈಯಿಂದ ಆಕೆ ಮೋಂಬತ್ತಿಯನ್ನು ಹಚ್ಚುತ್ತಿದ್ದಳು. ಆ ಮಬ್ಬುಬೆಳಕಿನಲ್ಲಿ ವಿಕೃತವಾಗಿ ಕಾಣಿಸುತ್ತಿದ್ದ ವಸ್ತುಗಳನ್ನು ದಿಟ್ಟಿಸುತ್ತಿದ್ದಂತೆ, ಆಕೆಯ ದೊಡ್ಡ ಮೂಗಿನ ದುಂಡ ಮುಖ ಆಯಾಸದಿಂದ ಊದಿಕೊಳ್ಳುತ್ತಿತು ; ಆಕೆಯ ಬೂದುಕಣ್ಣುಗಳು ಅಂಜಿಕೆಯಿಂದ ಪಿಳಿ ಪಿಳಿ ಎನ್ನುತ್ತಿದ್ದುವು. ಅಡುಗೆಮನೆ ವಿಸ್ತಾರವಾಗಿತ್ತು. ಆದರೆ, ಟ್ರಂಕುಗಳೂ ಕಪಾಟಗಳು ಹೇರಳವಾಗಿದ್ದುದರಿಂದ, ಚಿಕ್ಕದಾಗಿ ಕಾಣಿಸುತ್ತಿತ್ತು. ಇಲ್ಲಿ ತಿಂಗಳಬೆಳಕು ಶಾಂತವಾ ವಿರಮಿಸುತ್ತಿತ್ತು. ಎಂದೂ ಆರದ ಬೆಂಕಿ ಪವಿತ್ರ ಪ್ರತಿಮೆಗಳೆರಡು ಮಿಣುಗುಟ್ಟುತ್ತಿತ್ತು ಗೋಡೆಯ ಮೇಲೆ ತೂಗಾಡುತ್ತಿದ್ದ ಅಡುಗೆಮನೆ ಚಾಕುಗಳು, ಮಂಜುಗಡ್ಡೆಯ ಕಣಗಳಂ ಹೊಳೆಯುತ್ತಿದ್ದುವು. ಕಪಾಟಗಳಿಂದ ತೂಗಾಡುತ್ತಿದ್ದ ನೀಳ ಕೈಗಳ ಕರಿದು ಪ್ರಾತೆಗಳು ದುಷ್ಟ ಕುರುಡು ಮುಖಗಳನ್ನು ಹೋಲುತ್ತಿದ್ದವು.

ಯಾವಾಗಲೂ ಮುದುಕಿ, ದಂಡೆಯಿಂದ ನೀರಿಗೆ ಇಳಿಯುತ್ತಿರುವಳೇನೋ ಎನ್ನುವಂತ ಬಲು ಎಚ್ಚರಿಕೆಯಿಂದ ಒಲೆಯಟ್ಟದಿಂದ ಕೆಳಕ್ಕಿಳಿಯುತ್ತಿದ್ದಳು. ಬಳಿಕ, ಬರಿಯ ಪಾದಗಳ ನೀರಿನ ಡಬ್ಬವನ್ನಿರಿಸಿದ್ದ ಮೂಲೆಗೆ ನಡೆಯುತ್ತಿದ್ದಳು. ಅದು, ಬದಿಗಳು ಮಡಚಿದ್ದ ಡಬ್ಬ ಕಲಗಚ್ಚಿನ ಬಕೀಟಿನ ಮೇಲೆ ತುಂಡರಿಸಿದ ತಲೆಯಂತೆ ಅದು ತೂಗುತ್ತಿತ್ತು. ಶುದ್ಧ ನೀರಿ ಒಂದು ಪಾತ್ರೆಯೂ ಅಲ್ಲಿಯೇ ಇತ್ತು. ಸದ್ದುಮಾಡುತ್ತ ಕುಡಿದ ಬಳಿಕ, ಕಿಟಕಿಯ ಗಾಜಿ ಮೇಲಿದ್ದ ಮಂಜಿನ ನೀಲಿ ಕೆತ್ತನೆಯ ಮೂಲಕ ಇಣಿಕಿನೋಡುತ್ತಿದ್ದಳು.

“ನನ್ನ ಮೇಲೆ ದಯೆ ಇಡು, ಓ ದೇವರೇ ; ನನ್ನ ಆತ್ಮದ ಮೇಲೆ ದಯೆ ಇಡು,” ಎಂದ ಆಕೆ, ಇಳಿಧ್ವನಿಯಲ್ಲಿ ಯಾಚಿಸುತ್ತಿದ್ದಳು.

ಮತ್ತೆ ಕೆಲವು ಸಾರೆ, ಮೋಂಬತ್ತಿಯನ್ನು ಕೆಳಕ್ಕಿರಿಸಿ, ಮೊಣಕಾಲುಗಳನ್ನು ನೆಲದ ಮೇ ಊರಿ, ಕಟುವಾಗಿ ಗೊಣಗುತ್ತಿದ್ದಳು.

“ನನ್ನನ್ನು ಯಾರೂ ಪ್ರೀತಿಸೋದಿಲ್ಲ, ದೇವರೇ ; ಯಾರಿಗೂ ನಾನು ಬೇಕಾಗಿಲ್ಲ.”

ಪುನಃ ಒಲೆಯಟ್ಟವನ್ನು ಏರಿದ ಮೇಲೆ ಆಕೆ, ಹೊಗೆ ಹಾದಿಯ ಬಾಗಿಲಕಡೆಗೆ ನೋ ಶಿಲುಬೆಯ ವಂದನೆಮಾಡುತ್ತಿದ್ದಳು. ಬಳಿಕ, ಉರಿಯನ್ನು ಹತೋಟಿಯಲ್ಲಿಡುವ ಸಾಧನ ಸ ಯಾಗಿದೆಯೇ ಎಂದು ನೋಡಲು, ಕೈಯನ್ನು ಒಳಕ್ಕೆ ತುರುಕುತ್ತಿದ್ದಳು. ಕೈಗೆ ಕರಿ ಮೆ ಕೊಳ್ಳುತ್ತಿತ್ತು. ಆಗ ಪಿಸುಧ್ವನಿಯಲ್ಲಿ ಶಪಿಸುತ್ತಿದ್ದಳು. ಅದಾದ ಮೇಲೆ ತಕ್ಷಣವೇ, ಮಂ ಮುಗ್ಧಳಾದವಳಂತೆ ನಿದ್ದೆಹೋಗುತ್ತಿದ್ದಳು. ನನ್ನನ್ನು ಆಕೆ ನೋಯಿಸಿದಾಗಲೆಲ್ಲ, ನನ್ನ ಅ ಈಕೆಯನ್ನು ಮದುವೆಯಾಗದೆ ಹೋದುದು ಎಂತಹ ಅನ್ಯಾಯ—ಎಂದು ಯೋಚಿಸುತ್ತಿ ಆಕೆ ಆತನನ್ನು ಸರಿಯಾಗಿಯೇ ಅತ್ತಿತ್ತ ಆಡಿಸುತ್ತಿದ್ದಳು ! ಆದರೆ, ಆಕೆಗೂ ತಕ್ಕ ಜೋಡಿಯೆ ಆಗುತ್ತಿದ್ದ ಆತ. ಆಕೆಯ ಕುಹಕ ವರ್ತನೆಯಿಂದ ನಾನು ಪದೇಪದೇ ಸಂಕಟ ಅನುಭವಿ ತ್ತಿದ್ದೆ. ಆದರೆ, ಆಕೆಯ ಊದಿಕೊಂಡ ಹತ್ತಿಯಂತಹ ಮುಖದಲ್ಲಿ ವ್ಯಥೆ ಕಾಣಿಸಿಕೊಂಡ ಕಣ್ಣುಗಳನ್ನು ಕಂಬನಿಯ ಪರದೆ ಕವಿಯುವುದೂ ಇತ್ತು. ಅಂತಹ ಸಂದರ್ಭಗಳಲ್ಲಿ ಆ ಹೇಳುತ್ತಿದ್ದಳು:

“ಇದನ್ನೆಲ್ಲಾ ಸಹಿಸೋದು ನನಗೆ ಸುಲಭ ಅಂದ್ಕೊಂಡಿದೀಯೇನು? ನನ್ನ ಮಕ್ಕಳಿಗೆ ನಾ

ಜನ್ಮವಿತ್ತೆ. ಅವರನ್ನು ಲಾಲಿಸಿಪಾಲಿಸಿದೆ. ಜೀವನದಲ್ಲಿ ಅವರಿಗೆ ದಾರಿ ತೋರಿಸಿಕೊಟ್ಟೆ. ಇದಕ್ಕೆಲ್ಲಾ ಪ್ರತಿಯಾಗಿ ನನಗೆ ಸಿಕ್ಕಿರೋದೇನು? ಅವರ ಅಡುಗೆಮನೆಯಲ್ಲಿ ಅಡುಗೆಯವಳಾಗಿ ದುಡಿಯೋದು. ಸಹಿಸೋದಕ್ಕೆ ಅದೇನು ಸುಲಭದ ವಿಷಯವೆ? ನನ್ನ ಮಗ, ನನ್ನ ಸ್ಥಾನವನ್ನು ಆಕ್ರಮಿಸೋದಕ್ಕೆ—ತನ್ನದೇ ಮಾಂಸದ ರಕ್ತದ ಸ್ಥಾನವನ್ನು ಆಕ್ರಮಿಸೋದಕ್ಕೆ—ಆ ಹೆಂಗಸನ್ನು ತರೋದು! ಅದು ಸರಿಯೆ?"

"ಅಲ್ಲ, ಅದು ಸರಿಯಲ್ಲ," ಎಂದು ನಾನು ಹೃತ್ಪೂರ್ವಕವಾಗಿ ನುಡಿದೆ.

"ಆಹ್, ಅಲ್ಲವೆ ಮತ್ತೆ?"

ಹಾಗೆ ಹೇಳಿ ಆಕೆ, ಸೊಸೆಯನ್ನು ಕುರಿತು ನಿರ್ಲಜ್ಜವಾದ ಟೀಕೆಯ ಉಪನ್ಯಾಸವನ್ನು ಆರಂಭಿಸಿದಳು.

"ಅವಳ ಜತೆ ನಾನು ಸ್ನಾನದ ಮನೆಗೆ ಹೋಗಿದೀನಿ. ನೋಡಬೇಕಾದ್ದು ಏನಿದೆಯೋ ಅದನ್ನೆಲ್ಲಾ ನೋಡಿದೀನಿ. ಅದೇನು ಅವನ ಮನಸ್ಸನ್ನು ಸೆಳೆಯಿತೋ? ಅವಳಂಥ ಬಳುಕುವ ಬಳ್ಳಿಯಿಂದಲೇ ಗಂಡಸು ಮರುಳಾಗೋದು?"

ಗಂಡಸರು ಮತ್ತು ಹೆಂಗಸರೊಳಗಿನ ಸಂಬಂಧದ ವಿಷಯವಾಗಿ ಆಕೆ ಯಾವಾಗಲೂ ಅತ್ಯಂತ ಹೊಲಸಾಗಿ ಮಾತನಾಡುತ್ತಿದ್ದಳು. ಮೊದಮೊದಲು ಆಕೆಯ ಮಾತಿನಿಂದ ನನಗೆ ಹೇಸಿಕೆ ಎನಿಸುತ್ತಿತ್ತು. ಆದರೆ ಬೇಗನೆ, ಗಮನವಿಟ್ಟು, ಅತ್ಯಂತ ಆಸಕ್ತಿಯಿಂದ, ಕೇಳತೊಡಗಿದೆ. ಆಕೆಯ ಮಾತುಗಳ ಹಿಂದೆ ಯಾವುದೋ ಕಹಿಯಾದ ಸತ್ಯವಿದ್ದಂತೆ ನನಗೆ ಭಾಸವಾಯಿತು.

"ಸ್ತ್ರೀ ಬೀರುವ ಶಕ್ತಿ ಅಸಾಧಾರಣವಾದದ್ದು. ಸ್ವತಃ ದೇವರನ್ನು ಕೂಡಾ ಮೋಸಗೊಳಿಸೋದಕ್ಕೆ ಆಕೆ ಶಕ್ತಳಾದಳು," ಎಂದು, ಮೇಜನ್ನು ತನ್ನ ಅಂಗೈಯಿಂದ ತಟ್ಟಿ ಒತ್ತಿಹೇಳಿ, ಆಕೆ ಮುಂದುವರಿದಳು: "ಎಲ್ಲ ಜನರೂ ನರಕಕ್ಕೆ ಹೋಗುವಂತೆ ಮಾಡುವಾಕೆ ಸ್ತ್ರೀ. ಅದನ್ನು ಮರೀಬೇಡ."

ಸ್ತ್ರೀಯ ಶಕ್ತಿಯನ್ನು ಕುರಿತು ಕೊನೆಯೇ ಇಲ್ಲದಂತೆ ವಾದಿಸಲು ಆಕೆ ಸಮರ್ಥಳಾಗಿದ್ದಳು. ಅಂತಹ ಮಾತಿನಿಂದ ಯಾರನ್ನೋ ಹೆದರಿಸಲು ಆಕೆ ಯತ್ನಿಸುತ್ತಿದ್ದಳೆಂದು, ನನಗೆ ಯಾವಾಗಲೂ ಅನಿಸುತ್ತಿತ್ತು. ಈವ್ ದೇವರನ್ನು ಕೂಡಾ ಮೋಸಗೊಳಿಸಿದಳೆಂದು ಆಕೆ ಹೇಳಿದುದು ವಿಶೇಷವಾಗಿ ನನ್ನ ನೆನಪಿನಲ್ಲಿತ್ತು.

ನಮ್ಮ ವಠಾರದಲ್ಲಿ ನಮ್ಮದರಷ್ಟೇ ದೊಡ್ಡದಾಗಿದ್ದ ಇನ್ನೊಂದು ಮನೆಯಿತ್ತು. ಅಲ್ಲಿದ್ದ ಕೊಠಡಿಗಳು ಎಂಟು. ನಾಲ್ಕರಲ್ಲಿ ಸೈನ್ಯಾಧಿಕಾರಿಗಳು ವಾಸವಾಗಿದ್ದರು. ಇನ್ನೊಂದರಲ್ಲಿ ತುಕ್ಕಡಿಯ ಧರ್ಮಗುರುವಿದ್ದ. ಅಂಗಳ ಯಾವಾಗಲೂ ಕುದುರೆಗಳ ಉಸ್ತುವಾರಿ ನೋಡುತ್ತಿದ್ದ ಜನರಿಂದಲೂ ಅವರ ಸ್ನೇಹಿತೆಯರಿಂದಲೂ ತುಂಬಿರುತ್ತಿತ್ತು. ಆ ಹೆಂಗಸರೆಲ್ಲಾ, ಅಡುಗೆಯವರು, ಅಗಸಗಿತ್ತಿಯರು ಇಲ್ಲವೆ ಊಳಿಗದ ಸ್ತ್ರೀಯರು. ಅಡುಗೆಮನೆಯಲ್ಲಿ ಪದೇಪದೇ ನಾಟಕಗಳೇ ನಡೆಯುತ್ತಿದ್ದುವು—ಪ್ರೇಮಪ್ರಕರಣಗಳು, ಜತೆಯಲ್ಲೆ ಕಂಬನಿ, ಕಲಹ, ಜಗಳ. ಸೈನಿಕರು ತಮ್ಮತಮ್ಮೊಳಗೆ, ಹೊಂಡ ಅಗೆಯುವವರೊಡನೆ ಅಥವಾ ಮನೆಗೆಲಸದವರೊಡನೆ ಕಾದಾಡುತ್ತಿದ್ದರು. ಹೆಂಗಸರಿಗೆ ಯಾವಾಗಲೂ ಹೊಡೆತ ಸಿಗುತ್ತಿತ್ತು. ಸ್ವಚ್ಛಂದ ಪ್ರವೃತ್ತಿಯಿಂದ, ವಿಷಯಲೋಲುಪತೆಯಿಂದ,—ಆರೋಗ್ಯವಂತ ಯುವಕರ ಮೃಗೀಯವಾದ ನಿರಂಕುಶವಾದ

ಹಸಿವಿನಿಂದ, ನಮ್ಮ ವಠಾರ ಯಾವಾಗಲೂ ತುಂಬಿ ತುಳುಕುತ್ತಿತ್ತು. ಮಧ್ಯಾಹ್ನದ ಊಟದ ಹೊತ್ತಿನಲ್ಲಿ, ಚಹಾ ಕುಡಿಯುವಾಗ ಇಲ್ಲವೆ ರಾತ್ರೆ ಊಟಮಾಡುವಾಗ, ನನ್ನ ಯಜಮಾನನೂ ಯಜಮಾನಿತಿಯೂ ಆ ವಿಷಯಗಳನ್ನು ಕುರಿತು ಪ್ರಸ್ತಾಪಿಸುತ್ತಿದ್ದರು. ಒರಟು ವಿಷಯಾಸಕ್ತಿ, ಅರ್ಥಹೀನ ಕ್ರೌರ್ಯ, ಹೆಣ್ಣಿನ ಮೇಲಣ ವಿಜಯದ ಹೊಲಸು ಬಡಾಯಿ—ಇವೆಲ್ಲದರ ಬಗೆಗೆ ಸಿನಿಕತನದಿಂದ ವಿವರವಾಗಿ ಅವರು ಚರ್ಚಿಸುತ್ತಿದ್ದರು. ವಠಾರದಲ್ಲಿ ನಡೆದುದೆಲ್ಲವೂ ಮುದುಕಿಗೆ ಯಾವಾಗಲೂ ತಿಳಿದಿರುತಿತ್ತು. ಅದನ್ನು ಆಕೆ ಬಲು ಆಸಕ್ತಿಯಿಂದ ಬಣ್ಣಿಸುತ್ತಿದ್ದಳು.

ಯುವತಿಯಾದ ಹೆಂಡತಿ, ತುಟಿಗಳ ಮೇಲೆ ಪೂರ್ತಿಯಾಗಿ ಮುಗುಳುನಗೆ ಕುಣಿಸುತ್ತಾ ಆ ಕಥೆಗಳಿಗೆ ಕಿವಿಗೊಡುತ್ತಿದ್ದಳು. ವಿಕ್ಟರ್ ಬಿದ್ದುಬಿದ್ದು ನಗುತ್ತಿದ್ದ. ಆದರೆ, ನನ್ನ ಯಜಮಾನ ಮುಖ ಗಂಟಿಕ್ಕಿ ಹೇಳುತ್ತಿದ್ದ:

"ಸಾಕುಮಾಡು, ಅಮ್ಮ."

ಕಥೆ ಹೇಳುತ್ತಿದ್ದಾಕೆ ಆಕ್ಷೇಪಿಸುತ್ತಿದ್ದಳು:

"ಅಯ್ಯೋ! ನಾನು ಬಾಯಿ ತೆರೆಯೋದಕ್ಕೆ ಕೂಡಾ ಬಿಡೋದಿಲ್ವಲ್ಲಾ ನೀನು!"

"ಇರಲಿ ಬಿಡಮ್ಮ. ಇಲ್ಲಿ ನೀನು ಸಂಕೋಚಪಡಬೇಕಾದ್ದೇನೂ ಇಲ್ಲ; ನಾವೆಲ್ಲಾ ಒಂದೇ ಕುಟುಂಬ ತಾನೆ?" ಎಂದು ವಿಕ್ಟರ್ ಪ್ರೋತ್ಸಾಹಿಸುತ್ತಿದ್ದ.

ತನ್ನ ತಾಯಿಯ ಬಗೆಗೆ ಹಿರಿಯಮಗ ಅಸಹ್ಯವೆನಿಸಿ ಕನಿಕರ ತೋರುತ್ತಿದ್ದ. ಆಕೆಯ ಜತೆಯಲ್ಲಿ ಎಂದೂ ತಾನೊಬ್ಬನೇ ಇರದಂತೆ ಆತ ನೋಡಿಕೊಳ್ಳುತ್ತಿದ್ದ. ಎಲ್ಲಾದರೂ ಒಬ್ಬನೇ ಕೈಗೆ ಸಿಕ್ಕಿದನೆಂದರೆ ಆತನ ತಾಯಿ, ಅವನ ಹೆಂಡತಿಯ ಬಗೆಗೆ ದೂರುಗಳ ಮಳೆಯನ್ನೇ ಸುರಿಸುತ್ತಿದ್ದಳು. ಬಳಿಕ, ತಪ್ಪದೆ, ಹಣ ಕೇಳುತ್ತಿದ್ದಳು. ಆತ ಎರಡೋ ಮೂರೋ ರೂಬಲುಗಳನ್ನೂ ಸ್ವಲ್ಪ ಚಿಲ್ಲರೆಯನ್ನೂ ಅವಸರವಾಗಿ ಆಕೆಯ ಕೈಗೆ ತುರುಕುತ್ತಿದ್ದ.

"ಈ ಹಣ ತಗೊಳ್ತಿರೋದು ಮೂರ್ಖತನ, ಅಮ್ಮ. ಕೊಡೋದಕ್ಕೆ ಇಷ್ಟವಿಲ್ಲವೆಂತಲ್ಲ. ಆದರೆ ನೀನದನ್ನು ತಗೋಬಾರದು."

"ಭಿಕ್ಷುಕರಿಗಾಗಿ—ದೇವರ ಮುಂದೆ ಹಚ್ಚಿಡೋದಕ್ಕೆ ನಾನು ಒಂದಿಷ್ಟು ಮೋಂಬತ್ತಿ ಕೊಳ್ಳೋದಕ್ಕಾಗಿ."

"ಭಿಕ್ಷುಕರು! ವಿಕ್ಟರ್‌ನನ್ನು ಹಾಳುಮಾಡ್ತೀಯಾ ನೀನು."

"ನಿನ್ನ ತಮ್ಮನನ್ನು ನೀನು ಪ್ರೀತಿಸೋದಿಲ್ಲ. ಪಾಪ ತಟ್ಟದೆ ನಿನಗೆ!"

ಅಸಹನೆಯಿಂದ ಕೈಯನ್ನು ಬೀಸಿ ಆತ ಹೊರಟುಹೋಗುತ್ತಿದ್ದ.

ವಿಕ್ಟರ್ ತನ್ನ ತಾಯಿಯ ವಿಷಯದಲ್ಲಿ ಒರಟಾಗಿ ತಿರಸ್ಕಾರದಿಂದ ವರ್ತಿಸುತ್ತಿದ್ದ. ಆತ, ಎಷ್ಟು ತಿಂದರೂ ತೃಪ್ತಿಯಾಗದ ತಿಂಡಿಪೋತ. ಭಾನುವಾರಗಳಲ್ಲಿ ಮುದುಕಿ ತೆಳುರೊಟ್ಟಿಗಳನ್ನು ಮಾಡುತ್ತಿದ್ದಳು. ಆತನಿಗೋಸ್ಕರ ಹೆಚ್ಚಿಗೆ ಕೆಲವನ್ನು ಪ್ರತ್ಯೇಕವಾಗಿ ತೆಗೆದಿರಿಸಿ ನಾನು ಮಲಗುತ್ತಿದ್ದ ಮಂಚದ ಕೆಳಗೆ ಒಂದು ಭರಣಿಯಲ್ಲಿ ಬಚ್ಚಿಡುತ್ತಿದ್ದಳು. ಬೆಳಗಿನ ಪ್ರಾರ್ಥನೆ ಮುಗಿಸಿ ಇಗರ್ಜಿಯಿಂದ ಹಿಂತಿರುಗಿದೊಡನೆ ವಿಕ್ಟರ್, ಭರಣಿಯ ಕಡೆಗೆ ನುಗ್ಗಿ, ಗೊಣಗುತ್ತಿದ್ದ:

"ಇನ್ನೂ ಒಂದಷ್ಟು ಇಡಿಬಾರದಾಗಿತ್ತಾ, ಜಿಪುಣ ಮುದುಕಿ!"

"ಬೇಗ! ಯಾರಾದರೂ ನೋಡೋದಕ್ಕೆ ಮುಂಚೆ ಅವನ್ನು ನುಂಗಿಬಿಡು."

"ಪಕ್ಕೆಗೆ ಅಂಟಿಕೊಂಡಿರುವ ಹಳೆಯ ನೋವೇ, ಯಾರಾದರೂ ನನ್ನನ್ನು ನೋಡಿದ ತೆಳು ರೊಟ್ಟಿಗಳನ್ನು ನೀನೇ ನನಗೋಸ್ಕರ ಕದ್ದೆ ಅಂತ ಹೇಳ್ತೀನಿ."

ಒಂದು ದಿನ ಭರಣಿಯನ್ನು ಹೊರತೆಗೆದು ಒಂದೆರಡನ್ನು ನಾನೇ ತಿಂದೆ. ಅದಕ್ಕಾಗಿ ವಿಕ್ಟರ್ ನನ್ನನ್ನು ಹೊಡೆದ. ನಾನು ಅವನನ್ನು ಎಷ್ಟು ತಿರಸ್ಕಾರದಿಂದ ಕಾಣುತ್ತಿದ್ದೆನೋ ಅಷ್ಟೇ ತಿರಸ್ಕಾರ ದಿಂದ ಆತ ನನ್ನನ್ನು ಕಾಣುತ್ತಿದ್ದ. ಆತ ನನ್ನನ್ನು ಪೀಡಿಸುತ್ತಿದ್ದ. ದಿನಕ್ಕೆ ಮೂರುಸಾರೆ ನನ್ನ ಕೈಯಲ್ಲಿ ತನ್ನ ಬೂಟುಗಳನ್ನು ಪಾಲಿಷ್ ಮಾಡಿಸುತ್ತಿದ್ದ. ಮಂಚದ ಮೇಲೆ ಮಲಗಿ, ಹಲಗೆಯನ್ನು ಬದಿಗೆ ತಳ್ಳಿ, ಆ ಸಂದಿನ ಎಡೆಯಿಂದ ನನ್ನ ತಲೆಗೆ ಗುರಿಯಿಟ್ಟು ಉಗುಳುತ್ತಿದ್ದ.

ಜನರನ್ನು ಸದಾ "ಕೂಗಾಡುತ್ತಿರೋ ಕೋಳಿ ಮರಿಗಳೇ" ಎಂದು ಸಂಬೋಧಿಸುತ್ತಿದ್ದ ಅಣ್ಣನನ್ನು ಪ್ರಾಯಶಃ ಅನುಕರಿಸಿ, ತಮ್ಮನೂ ಪದೇಪದೇ ಉಚ್ಚರಿಸಲು ಇಷ್ಟಪಡುತ್ತಿದ್ದ ಕೆಲವು ಪದಪ್ರಯೋಗಗಳಿದ್ದುವು. ಆದರೆ ಅವು, ಅಚ್ಚರಿಪಡಿಸುವಷ್ಟು ಅವಿವೇಕದ್ದಾಗಿರುತ್ತಿದ್ದುವು, ಅಸಾಮಯಿಕವಾಗಿರುತ್ತಿದ್ದುವು.

"ಅಮ್ಮಾ, ಅಟೆನ್‌ಶನ್! ನನ್ನ ಕಾಲು ಚೀಲಗಳೆಲ್ಲಿ?"

ಅರ್ಥ ಹೀನ ಪ್ರಶ್ನೆಗಳಿಂದ ನನ್ನನ್ನು ಆತ ಹಿಂಸಿಸುತ್ತಿದ್ದ:

"ಅಲೆಕ್ಸಿ, 'ನೀಲಿ' ಅಂತ ಬರೆದು 'ಕೀಲಿ' ಅಂತ ಯಾಕೆ ಉಚ್ಚರಿಸ್ತಾರೆ ಅನ್ನೋದನ್ನು ನೀನು ಹೇಳಬಲ್ಲೆ, ಅಲ್ಲ? 'ಗೋರಿ ಮತ್ತು ಕಲ್ಲು' ಅನ್ನದೆ 'ಗೋರ್ಕಲ್ಲು' ಅಂತ ಯಾಕೆ ಹೇಳ್ತಾರೆ? 'ಅ—ಮಾನಿಸು' ಅನ್ನದೆ 'ಅವಮಾನಿಸು' ಅಂತ ಯಾಕೆ ಹೇಳ್ತಾರೆ?"

ಅವರೆಲ್ಲರ ಮಾತಿನ ರೀತಿಯನ್ನು ನಾನು ದ್ವೇಷಿಸುತ್ತಿದ್ದೆ. ನನ್ನ ಅಜ್ಜಿ ಮತ್ತು ಅಜ್ಜನ ಸುಂದರವಾದ ಭಾಷೆಯನ್ನು ಕಲಿತೇ ಬೆಳೆದಿದ್ದ ನನಗೆ, 'ಭಯಂಕರ ತಮಾಷೆ', 'ತಿನ್ನೋಕೆ ಸಾಯ್ತಿದೀನಿ,' 'ಭೀಕರ ಹರ್ಷ' ಎಂದು ಒಂದಕ್ಕೊಂದು ಜೋಡಿಸಲಾಗದಂತಹ ಪದಗಳ ಜಂಟೀಪ್ರಯೋಗ ಮೊದಲು ನನಗೆ ಅರ್ಥವಾಗಲಿಲ್ಲ. ತಮಾಷೆ ಭಯಂಕರವಾಗಿರುವುದು ಸಾಧ್ಯವಿಲ್ಲವೆಂದೂ ಹರ್ಷ ಭೀಕರವಾಗಲಾರದೆಂದೂ ನನಗೆ ಅನಿಸುತ್ತಿತ್ತು. ಈ ಜನರ ನಾಲಿಗೆಯ ರುಚಿಯಲ್ಲಿ ಸಾವನ್ನು ಸೂಚಿಸುವಂತಹದನ್ನೂ ನಾನೇನೂ ಕಾಣಲಿಲ್ಲ.

"ಆ ರೀತಿ ಮಾತನಾಡೋದು ಸರಿಯೆ?" ಎಂದು ನಾನು ಅವರನ್ನು ಕೇಳಿದೆ.

ಅವರು ಸಿಟ್ಟಿನಿಂದ ಉತ್ತರವಿತ್ತರು:

"ನಮ್ಮ ಉಪಾಧ್ಯಾಯರಾಗಿ ಯಾರು ಕೆಲಸ ವಹಿಸಿದಾರೇಂತ ನೋಡಬಾರದೆ ಒಮ್ಮೆ! ಅವನ ಕಿವಿಗಳನ್ನು ಕೀಳಬೇಕು!"

'ಕಿವಿಗಳನ್ನು ಕೀಳುವುದು' ಕೂಡಾ ತಪ್ಪೆಂದು ನನಗೆ ಕಂಡಿತು. ಗಿಡ—ಹೂ—ಹಣ್ಣು ಗಳನ್ನು ಕೀಳಬಹುದು, ಕಿವಿಗಳನ್ನಲ್ಲ.

ಕಿವಿಗಳನ್ನು ಕೀಳುವುದು ಖಂಡಿತವಾಗಿಯೂ ಸಾಧ್ಯ ಎಂಬುದನ್ನು ತೋರಿಸಿಕೊಡಲು, ನನ್ನ ಕಿವಿಗಳನ್ನು ಅವರು ಎಳೆದರು. ಆದರೂ ನನಗೆ ನಂಬಿಕೆ ಹುಟ್ಟಲಿಲ್ಲ. ಗೆದ್ದವನಂತೆ ವಿರುಧ್ವನಿಯಲ್ಲಿ ನಾನೆಂದೆ:

"ಆದರೆ ನನ್ನ ಕಿವಿಗಳನ್ನು ಕೀಳೋದು ನಿಮ್ಮಿಂದ ಆಗಿಲ್ಲ."

ನನ್ನ ಸುತ್ತುಮುತ್ತೆಲ್ಲ ಹೃದಯಶೂನ್ಯ ತುಂಟಾಟವನ್ನೂ ಹೊಲಸು ನಿರ್ಲಜ್ಜತನವನ್ನೂ

ನಾನು ಕಂಡೆ. ಕುನಾವಿನೋದದಲ್ಲೂ ವೇಶ್ಯಾಗೃಹಗಳಿಗಾಗಲೀ ಬೀದಿಯಲ್ಲಿ ಕಾದಿರುತ್ತಿದ್ದ ಹೆಂಗಸರಿಗಾಗಲೀ ಕೊರತೆ ಇರಲಿಲ್ಲ. ಆದರೆ, ಆ ಬೀದಿಗಳಲ್ಲಿ ನಾನು ಕಂಡುದಕ್ಕೂ ಇಲ್ಲಿನ ದಕ್ಕೂ ಹೋಲಿಕೆಯೇ ಇರಲಿಲ್ಲ. ಕುನಾವಿನೋದ ಹೊಲಸು ಮತ್ತು ತುಂಟಾಟಗಳ ಹಿಂದೆ ಅವು ಅನಿವಾರ್ಯವೆಂದು ವಿವರಿಸುವಂಥದೇನೋ ಇದ್ದುದರ ಅರಿವಾಗುತ್ತಿತ್ತು. ಅಲ್ಲಿತ್ತು ಮೈಮುರಿಯುವ ದುಡಿಮೆ, ಯಾತನಾಪೂರ್ಣವಾದ ಅರೆಹೊಟ್ಟೆಯ ಬದುಕು. ಇಲ್ಲಿ ಜನರು ಸುಖಸೌಕರ್ಯಗಳಿಂದ ಜೀವಿಸುತ್ತಿದ್ದರು. ದುಡಿಮೆಯ ಬದಲು ಅರ್ಥಹೀನ ಭಾವೋದ್ವೇಗ ವಿರುತ್ತಿತ್ತು. ಪ್ರ ತಿ ಯೊ ಂ ದ ರ ಮೇಲೂ, ಕುಹಕದ, ಸಿಟ್ಟುಬರಿಸುವ, ಬೇಸರದ ಛಾಯೆ ಇಲ್ಲಿರುತ್ತಿತ್ತು.

ನಾನು ಅತ್ಯಂತ ದುಃಖಿಯಾಗಿದ್ದೆ. ಆದರೆ, ಅಜ್ಜಿ ನನ್ನನ್ನು ನೋಡಲು ಬಂದಾಗಲೆಲ್ಲ ಆ ದುಃಖ ಮತ್ತಷ್ಟು ಹೆಚ್ಚುತ್ತಿತ್ತು. ಆಕೆ ಯಾವಾಗಲೂ ಹಿತ್ತಿಲ ಬಾಗಿಲಿಂದ ಅಡುಗೆಮನೆಯೊಳಕ್ಕೆ ಬರುತ್ತಿದ್ದಳು. ದೇವಪ್ರತಿಮೆಗಳ ಮುಂದೆ ಶಿಲುಬೆಯ ವಂದನೆಮಾಡಿದ ಬಳಿಕ, ತಂಗಿಯ ಎದುರು ನಡುವಿನವರೆಗೂ ಬಾಗಿ ನಮಸ್ಕರಿಸುತ್ತಿದ್ದಳು. ಹಾಗೆ ಆಕೆ ಬಾಗುವುದನ್ನು ಕಂಡಾಗ ಮಣಗಟ್ಟಲೆ ಭಾರ ನನ್ನ ಮೇಲೆ ಬಿದ್ದಂತೆ ನನ್ನ ಮನಸ್ಸು ಅಪ್ಪಚ್ಚಿಯಾಗುತ್ತಿತ್ತು.

"ಓ, ಯಾರು, ಅಕುಲಿನಾ?" ಎಂದು ನನ್ನ ಯಜಮಾನಿತಿ, ಆತ್ಮೀಯತೆಯಿಲ್ಲದ ನಿರಾಸಕ್ತ ಧ್ವನಿಯಲ್ಲಿ ಅನ್ನುತ್ತಿದ್ದಳು.

ಅಜ್ಜಿ ಅಪರಿಚಿತಳಂತೆ ನನಗೆ ಕಂಡಳು. ತನ್ನ ಮುಖಭಾವವೇ ಪೂರ್ತಿಯಾಗಿ ಬದಲಾಗಿ ವಂತೆ, ತುಟಿಗಳನ್ನು ಆಕೆ ದೈನ್ಯದಿಂದ ಕಚ್ಚುತ್ತಿದ್ದಳು. ಸದ್ದಿಲ್ಲದೆ ಆಕೆ, ಬಾಗಿಲ ಹತ್ತಿರ ಕಲಗಚ್ಚು ಬಕೀಟಿನ ಬಳಿ, ಬೆಂಚಿನ ಮೇಲೆ ಕುಳಿತು, ಯಾವುದೋ ಪಾತಕಮಾಡಿದ ತಪ್ಪಿತಸ್ಥ ಳಂತೆ ಮೌನವಾಗಿರುತಿದ್ದಳು. ತಂಗಿಯ ಪ್ರಶ್ನೆಗಳಿಗೆ ಆಕೆ, ಮೆಲುಧ್ವನಿಯಲ್ಲಿ ದೈನ್ಯದಿಂದ ಉತ್ತರವೀಯುತ್ತಿದ್ದಳು.

ಇದನ್ನು ಸಹಿಸಲಾರದೆ ಒಮ್ಮೆ ಸಿಟ್ಟಿನಿಂದ ನಾನೆಂದೆ;

"ಅಲ್ಲಿ ಯಾಕೆ ಕೂತಿದೀಯಾ?"

ನನ್ನೆಡೆಗೆ ನೋಡಿ ಒಲವಿನಿಂದ ಕಣ್ಣುಮಿಟಿಕಿಸಿ, ಗಂಭೀರವಾಗಿ ಆಕೆ ಅಂದಳು:

"ನಾಲಗೆ ಬಿಗಿಹಿಡಿ. ಇಲ್ಲಿ ನೀನಲ್ಲ ಯಜಮಾನ."

ನನ್ನ ಯಜಮಾನಿತಿ, ದೂರುಕೊಡಲು ಆರಂಭಿಸುತ್ತಾ ಅಂದಳು:

"ಮಹಾ ಅಧಿಕಪ್ರಸಂಗಿ. ಎಷ್ಟು ಬೈಯಲಿ ಹೊಡೆಯಲಿ ತನ್ನ ಬುದ್ಧಿ ಬಿಡೋದಿಲ್ಲ."

ಕೆಲವುಸಾರೆ, ದ್ವೇಷ ತುಂಬಿದ ಧ್ವನಿಯಲ್ಲಿ ತನ್ನ ಅಕ್ಕನಿಗೆ ಆಕೆ ಹೇಳುತ್ತಿದ್ದಳು:

"ಹಾಂ, ಅಕುಲಿನಾ—ಹಾಗಾದರೆ ನೀನು ಭಿಕ್ಷುಕಳೇ ಆಗಿದೀಯಾ ಅನ್ನು...."

"ಅದು ಕೆಟ್ಟದೇನೂ ಅಲ್ಲ."

"ಮಾನ ಹೋಗದೇ ಇದ್ದರೆ ಯಾವುದೂ ಹಾನಿಕರವಲ್ಲ."

"ಸ್ವತಃ ಕ್ರಿಸ್ತನೇ ಬೇಡುತ್ತಿದ್ದ ಅನ್ತಾರೆ."

"ಹಾಗೆಲ್ಲಾ ಹೇಳೋದು, ಬೆಪ್ಪುತಕ್ಕಡಿಗಳು ಮತ್ತು ನಾಸ್ತಿಕರು ಮಾತ್ರ. ಮುದಿ ಮೂರ್ಖ ಳಾದ ನೀನು ಅದಕ್ಕೆಲ್ಲಾ ಕಿವಿಗೊಡ್ತೀಯಾ! ಕ್ರಿಸ್ತ ಭಿಕ್ಷುಕನಾಗಿರಲಿಲ್ಲ. ಅವನು ದೇವಪುತ್ರ

ಪುಸ್ತಕದಲ್ಲಿ ಬರೆದಿರೋ ಹಾಗೆ, ಬದುಕಿದವರನ್ನೂ ಸತ್ತವರನ್ನೂ ವಿಚಾರಣೆಮಾಡಿ ತೀರ್ಪು ಕೊಡೋದಕ್ಕೆ ಆತ ಬರ್ತಾನೆ—ಸತ್ತವರನ್ನು ಕೂಡಾ ವಿಚಾರಣೆ ಮಾಡ್ತಾನೆ, ತಿಳಿದರು! ಅವನಿಂದ ಅವಿತಿಟ್ಟುಕೊಳ್ಳೋದು ಸಾಧ್ಯವಿಲ್ಲ—ಸುಟ್ಟುಕೊಂಡು ಭಸ್ಮವಾದರೂ ಕೂಡಾ ಸಾಧ್ಯವಿಲ್ಲ. ನೀನೂ ವಾಸಿಲಿಯೂ ಅಷ್ಟೊಂದು ಜಂಭ ಮಾಡ್ತಿದ್ದಿರಲ್ಲ, ನನ್ನ ಒಳ್ಳೆಯ ಶ್ರೀಮಂತ ಸಂಬಂಧಿಕರಲ್ಲಿಗೇಂತ ನಾನು ಸಹಾಯ ಕೇಳೋದಕ್ಕೆ ಬಂದಾಗ ಬರಿ ಕೈಲಿ ಕಳಿಸಿದಿರಲ್ಲ—ಅದಕ್ಕೆಲ್ಲ ಆತ ಶಾಸ್ತಿ ಮಾಡಿಯೇ ಮಾಡ್ತಾನೆ."

ಶಾಂತವಾಗಿಯೇ ಇದ್ದು ಅಜ್ಜಿ ಉತ್ತರವೀಯುತ್ತಿದ್ದಳು:

"ನನ್ನಿಂದ ಏನು ಸಾಧ್ಯವಿತ್ತೋ ಅದನ್ನೆಲ್ಲಾ ನಿನಗೋಸ್ಕರ ನಾನು ಮಾಡ್ತಿದ್ದೆ. ಆದರೆ, ನಮ್ಮನ್ನು ದಂಡಿಸೋದೇ ಸರಿ ಅಂತ ದೇವರು ಭಾವಿಸಿದಾನೆ ಅನ್ನೋದು, ನಿಮಗೆಲ್ಲಾ—"

"ನಿಮಗೆ ಅಷ್ಟಾದದ್ದು ಸಾಲದು—ಅಷ್ಟು ಸಾಲದು!"

ಆಯಾಸವನ್ನೇ ಕಂಡರಿಯದ ನಾಲಿಗೆಯಿಂದ ಆ ಒಡಹುಟ್ಟಿದಾಕೆ ಅಜ್ಜಿಯ ಮೇಲೆ ಬರೆ ಎಳೆಯುತ್ತ, ಒಂದೇ ಸಮನೆ ಮಾತು ಮುಂದುವರಿಸುತ್ತಿದ್ದಳು. ಆ ಬೊಗಳುವಿಕೆಗೆ ಕಿವಿಗೊಡುತ್ತಿದ್ದಂತೆ, ಅದನ್ನೆಲ್ಲ ಅಜ್ಜಿ ಸಹಿಸುತ್ತಿರುವಳಾದರೂ ಹೇಗೆ—ಎಂದು ಆಶ್ಚರ್ಯಪಡುತ್ತಿದ್ದೆ. ಅಂತಹ ಘಳಿಗೆಗಳಲ್ಲಿ ಆಕೆಯನ್ನು ನಾನು ಪ್ರೀತಿಸುತ್ತಿರಲಿಲ್ಲ.

ಕಿರಿಯ ಯಜಮಾನಿತಿ ಅಡುಗೆಮನೆಯೊಳಕ್ಕೆ ಬಂದು ಬಿಂಕದಿಂದ ಅಜ್ಜಿಯ ಕಡೆ ನೋಡಿ ತಲೆಯಲ್ಲಾಡಿಸಿ ಒಮ್ಮೆ ಅಂದಳು:

"ಊಟದ ಮನೆಯೊಳಕ್ಕೆ ಬಾ. ಪರವಾಗಿಲ್ಲ—ಹಾಗೇ ಬಾ."

ಪಾದಗಳನ್ನು ಒರೆಸಿಕೋ ಬಡಕಲು ಮುದಿ ಪ್ರಾಣಿ!" ಎಂದು ಆ ಮುದುಕಿ, ಅಜ್ಜಿ ಹೊರ ಹೋಗುತ್ತಿದ್ದಂತೆ ಕೂಗಿ ನುಡಿದಳು.

ನನ್ನ ಯಜಮಾನ ಹರ್ಷ ವ್ಯಕ್ತಪಡಿಸುತ್ತಾ ಆಕೆಯನ್ನು ಸ್ವಾಗತಿಸಿದ:

"ಆ್ಹ, ಸಂತಳಾದ ಅಕುಲಿನಾ! ಹೇಗಿದೀಯಾ? ಮುದುಕ ಕಾಶಿರಿನ್ ಇನ್ನೂ ಬದುಕಿದ್ದಾನೇನೊ?"

ಆತನನ್ನು ನೋಡಿ ನನ್ನ, ಅಜ್ಜಿ, ತನ್ನ ಅತ್ಯಂತ ಸೌಹಾರ್ದಮಯ ಮುಗುಳುನಗೆಯೊಂದನ್ನು ಬೀರಿದಳು.

"ಇನ್ನೂ ಬೆವರು ಸುರೀತಿದಾನೆ ಅಂದಿಯಾ? ದುಡೀತಿದಾನಾ?" ಎಂದು, ಅಜ್ಜಿಯ ಉತ್ತರ ಕೇಳಿ ಆತ ನುಡಿದ.

"ದುಡೀತಿದಾನೆ. ಖೈದಿಯ ಹಾಗೆ."

ಆತನೊಡನೆ ಆತ್ಮೀಯತೆಯಿಂದ, ಪ್ರೀತಿಯಿಂದ, ಅಜ್ಜಿ ಮಾತನಾಡುತ್ತಿದ್ದಳು. ಆದರೆ ಧ್ವನಿಯಲ್ಲಿ ಹಿರಿತನವಿರುತ್ತಿತ್ತು. ಕೆಲವೊಮ್ಮೆ ಆತ ನನ್ನ ತಾಯಿಯ ವಿಷಯ ಪ್ರಸ್ತಾಪಿಸುತ್ತಿದ್ದ.

"ಹುಂ—ವರ್ವರಾ ವಾಸಿಲ್ಯೇವ್ನಾ.... ಎಂಥಾ ಹೆಂಗಸು! ಪೂರ್ತಿ ಗಂಡುಬೀರಿಯೇ ಸರಿ!"

ಆತನ ಹೆಂಡತಿ ನಡುವೆ ಬಾಯಿಹಾಕಿ, ಅಜ್ಜಿಯ ಕಡೆಗೆ ತಿರುಗಿ ಅಂದಳು:

"ಆಕೆಗೆ ನಾನು ಆ ಮೇಲಂಗಿ ಕೊಟ್ಟದ್ದು ನೆನಪಿದೆಯೆ?—ಕರೀ ರೇಶ್ಮೆಯದು, ಕರಿಮಣಿಗಳಿದ್ದದ್ದು?"

"ಓಹೋ. ನೆನಪಿಲ್ಲದೆ ಏನು ?"

"ಹೊಸದರಷ್ಟೇ ಚೆನ್ನಾಗಿತ್ತು."

"ಹುಂ—ಮೇಲಂಗಿ—ಕೋಲಂಗಿ—ಬದುಕೇ ಕಮಂಗಿ," ಎಂದು ನನ್ನ ಯಜಮಾನ ಗೊಣಗಿದ.

"ಏನದು ?" ಎಂದು ಆತನ ಹೆಂಡತಿ ಸಂಶಯಾತ್ಮಕಳಾಗಿ ಕೇಳಿದಳು.

"ಏನೂ ಇಲ್ಲ—ಏನೇನೂ ಇಲ್ಲ. ಸಂತೋಷದ ದಿನಗಳು ಕಳೆದುಹೋಗ್ತಿವೆ; ಹಾಗೆಯೇ ಸೊಗಸಾದ ಜನರೂ ನಷ್ಟವಾಗ್ತಿದಾರೆ...."

"ಅಂಥ ಮಾತುಗಳನ್ನೆಲ್ಲ ಯಾಕಾದರೂ ಹೇಳಬೇಕು ನೀನು ?" ಎಂದು ಆತನ ಹೆಂಡತಿ ಕಾತರಳಾಗಿ ಅಂದಳು.

ಬಳಿಕ, ಹೊಸ ಮಗುವನ್ನು ನೋಡಲೆಂದು ಅಜ್ಜಿಯನ್ನು ಅವರು ಒಳಕ್ಕೆ ಕರೆದೊಯ್ದರು. ಅವರೆಲ್ಲಾ ಚಹಾ ಕುಡಿದಿದ್ದ ಕಪ್ಪುಗಳನ್ನೂ ತಟ್ಟೆಗಳನ್ನೂ ತೆಗೆಯಲು ನಾನು ನಿಂತೆ.

"ಆ ನಿನ್ನ ಅಜ್ಜಿ, ಸೊಗಸಾದ ಮುದುಕಿ," ಎಂದು ನನ್ನ ಯಜಮಾನ ಮೃದುವಾಗಿ, ಕನವರಿಸುತ್ತಿದ್ದವನಂತೆ, ಹೇಳಿದ.

ಆ ಮಾತುಗಳಿಗಾಗಿ ನಾನು ಅವನಿಗೆ ಅತ್ಯಂತ ಋಣಿಯಾದೆ.

ಅಜ್ಜಿಯೊಡನೆ ನಾನೊಬ್ಬನೇ ಇದ್ದಾಗ, ನೋಯುತ್ತಿದ್ದ ಹೃದಯದಿಂದ ಆಕೆಗೆ ಹೇಳಿದೆ:

"ನೀನಿಲ್ಲಿಗೆ ಯಾಕೆ ಬರ್ತೀಯಾ? ಅವರು ಎಂಥವರು ಅನ್ನೋದು ನಿನಗೆ ಕಾಣೋದಿಲ್ಲವೆ ?"

ತನ್ನ ಅದ್ಭುತ ಮುಖದ ಮೇಲೆ ದಯಾಪೂರ್ಣ ಮುಗುಳುನಗೆ ಮೂಡಿಸುತ್ತ, ನನ್ನೆಡೆಗೆ ದಿಟ್ಟಿಸಿ, ಆಕೆ ಉತ್ತರವಿತ್ತಳು:

"ಕಾಣುತ್ತಪ್ಪಾ ಅಲ್ಯೋಶಾ; ನನಗೆಲ್ಲಾ ಕಾಣ್ತದೆ."

ಆಕ್ಷಣವೆ ನನಗೆ ನಾಚಿಕೆ ಎನಿಸಿತು. ಆಕೆಗೆ ಪ್ರತಿಯೊಂದೂ ಕಾಣಿಸುತ್ತಿತ್ತು, ಪ್ರತಿಯೊಂದೂ ತಿಳಿದಿತ್ತು—ಆ ಘಳಿಗೆಯಲ್ಲಿ ನನ್ನೊಳಗೆ ಏನು ನಡೆಯುತ್ತಿತ್ತೆನ್ನುವುದು ಕೂಡಾ.

ಹತ್ತಿರ ಯಾರೂ ಇಲ್ಲವೆಂಬುದನ್ನು ಖಚಿತಮಾಡಿಕೊಳ್ಳಲು ಎಚ್ಚರಿಕೆಯಿಂದ ಅತ್ತಿತ್ತ ದಿಟ್ಟಿಸಿದ ಬಳಿಕ, ನನ್ನನ್ನು ಅಪ್ಪಿಕೊಂಡು, ಅತಿ ಹೃದಯಸ್ಪರ್ಶಿಯಾಗಿ ಆಕೆ ಅಂದಳು:

"ನಿನಗೋಸ್ಕರವಲ್ಲದೇ ಹೋಗಿದ್ದರೆ, ನಾನಿಲ್ಲಿಗೆ ಯಾವತ್ತೂ ಬರ್ತಾನೇ ಇರಲಿಲ್ಲ. ಅವರಲ್ಲಿ ಏನು ಕೆಲಸ ನನಗೆ? ಈಗ ನೋಡು, ಅಜ್ಜ, ಅಸ್ವಸ್ಥವಾಗಿದ್ದಾನೆ. ನನಗೆಲ್ಲಾ ಅವನ ಆರೈಕೆಯೇ ಆಯ್ತು. ಕೆಲಸ ಮಾಡೋದಕ್ಕೆ ಆಗ್ತಾ ಇಲ್ಲ. ಹೀಗಾಗಿ, ನನ್ನ ಹತ್ತಿರ ಹಣವಿಲ್ಲ. ಮಗ ಮಿಖೇಯ್ಲೋ ತನ್ನ ಸಾಶಾನನ್ನು ಹೊರಗೆ ಹಾಕ್ಬಿಟ್ಟಿದಾನೆ. ಅವನಿಗೆ ಊಟತಿಂಡಿ ಒದಗಿಸೋದೂ ನನ್ನ ಮೇಲೆಯೇ ಬಿದ್ದಿದೆ. ನಿನಗೆ ವರ್ಷಕ್ಕೆ ಆರು ರೂಬಲು ಕೊಡ್ತೀವಿ ಅಂತ ಮಾತು ಕೊಟ್ಟಿದ್ರು. ನನ್ನಷ್ಟಕ್ಕೇ ನಾನು ಯೋಚಿಸ್ಕೊಂಡೆ—ಈಗ ಒಂದು ರೂಬಲು ಅವರು ಕೊಟ್ಟರೂ ಕೊಡಬಹುದು ಅಂತ. ನೀನು ಇಲ್ಲಿ ದುಡಿಯೋದಕ್ಕೆ ಶುರುಮಾಡಿ ಅರ್ಧ ವರ್ಷವಾಗ್ತಾ ಬಂತು ಅಲ್ಲವಾ ?"....

ನನ್ನೆಡೆಗೆ ಬಾಗಿ ಆಕೆ, ನನ್ನ ಕಿವಿಯಲ್ಲಿ ಪಿಸುನುಡಿಯತೊಡಗಿದಳು:

"ನಿನಗೆ ನಾನು ಬಯ್ಯಬೇಕು ಅಂತ ಅವರು ಹೇಳಿದ್ರು. ನೀನು ಅವಿಧೇಯನಾಗಿರ್ತೀಯಂತೆ

ಮುದ್ದು ಪಾರಿವಾಳ, ಸ್ವಲ್ಪ ಸಮಯವಾದರೂ ನೀನಿಲ್ಲಿ ಪಾಟಿಸೋದು ಸಾಧ್ಯವಾದರೆ—ನಿನ್ನ ಕಾಲ ಮೇಲೆಯೇ ನೀನು ಗಟ್ಟಿಯಾಗಿ ಇರೋದು ಸಾಧ್ಯವಾಗುವ ತನಕ, ಒಂದು ವರ್ಷವೋ ಅಥವಾ ಎರಡು ವರ್ಷವೋ, ಇದನ್ನು ಸಹಿಸ್ಕೊಂಡಿರೋದಕ್ಕೆ ಪ್ರಯತ್ನಿಸು....ಪ್ರಯತ್ನಿಸ್ತೀಯಾ?"

ಹಾಗೆ ಮಾಡುವೆನೆಂದು ನಾನು ಮಾತುಕೊಟ್ಟೆ.

ಆದರೆ, ಅದರಂತೆ ನಡೆಯುವುದು ಬಲುಪ್ರಯಾಸವಾಗಿತ್ತು. ಹೊಟ್ಟೆಯಪಾಡಿಗೋಸ್ಕರ ಬೆಳಗಿನಿಂದ ರಾತ್ರಿಯವರೆಗೆ ಓಡಾಡುವ. ಸಂಕಟದ, ಬೇಸರದ ಬದುಕಿನಿಂದ ನಾನು ಕುಗ್ಗಿ ಹೋದೆ. ಕೆಟ್ಟಕನಸು ಕಾಣುತ್ತಿದ್ದಂತೆ ನಾನು ಜೀವಿಸಿದೆ.

ಕೆಲವುಸಾರೆ, ಓಡಿಹೋಗುವ ಬಯಕೆಯಾಗುತ್ತಿತ್ತು. ಆದರೆ, ಹಾಳಾದ ಚಳಿಗಾಲ ಆಗ ತನ್ನ ಪರಾಕಾಷ್ಠೆಯಲ್ಲಿತ್ತು. ರಾತ್ರೆ ಹಿಮಗಾಳಿ ಬೀಸುತ್ತಿತ್ತು. ಛಾವಣಿಯಲ್ಲಿ ಗಾಳಿಗೋಳಾಡು ತ್ತಿತ್ತು. ಮಾಡದ ಹಲಗೆಗಳು ಚಳಿಯ ಬಿಗಿಹಿಡಿತದಲ್ಲಿ ಸಿಕ್ಕುತಿರಲಿದುವು. ನಾನು ಓಡಿಹೋಗು ವುದು ಹೇಗೆ ಸಾಧ್ಯವಿತ್ತು?....

....ಹೊರಹೋಗಿ ನಾನು ಆಡಲು ಸಮ್ಮತಿ ಇರಲಿಲ್ಲ. ಅಲ್ಲದೆ, ಹೊರಹೋಗಲು ನನಗೆ ಬಿಡುವೂ ಇರಲಿಲ್ಲ. ಚಳಿಗಾಲದ ಕಿರಿದು ದಿನಗಳು, ಹತ್ತಾರು ನಾನಾ ತೆರನಾದ ಕೆಲಸಗಳ ಮಧ್ಯೆ ಮಿಂಚಿ ಮಾಯವಾದುವು.

ಆದರೆ, ಶನಿವಾರಗಳಲ್ಲಿ ಸಾಯಂಪ್ರಾರ್ಥನೆಗೂ ಭಾನುವಾರಗಳಲ್ಲಿ ಪೂರ್ವಾಹ್ನದ ಕಡೆಯ ಪ್ರಾರ್ಥನೆಗೂ ನಾನು ಇಗರ್ಜಿಗೆ ಹೋಗಲೇ ಬೇಕಾಗಿ ಬಂತು.

ಇಗರ್ಜಿಗೆ ಹೋಗಲು ನನಗೆ ಸಂತೋಷವೆನಿಸುತ್ತಿತ್ತು. ಕತ್ತಲಿದ್ದ ಬರಿದಾದ ಮೂಲೆ ಯನ್ನು ಆರಿಸಿ, ಪ್ರತಿಮೆಗಳ ವೇದಿಕೆಯನ್ನು ಕಣ್ತುಂಬ ಮೆಚ್ಚಿಕೊಳ್ಳುತ್ತ ನಿಲ್ಲುತ್ತಿದ್ದೆ. ಮೋಂಬ ತ್ತಿಗಳ ಬೆಳಕಿನಲ್ಲಿ ಅದು ಕರಗಿ, ಅಗಲವಾದ ಬಂಗಾರದ ಪ್ರವಾಹಗಳಲ್ಲಿ ಕಲ್ಲಿನ ನೆಲದ ಮೇಲೆ ಹರಿಯುತ್ತಿದ್ದಂತೆ, ದೂರದಿಂದ ಭಾಸವಾಗುತ್ತಿತ್ತು. ಆ ಕಪ್ಪು ಪ್ರತಿಮೆಗಳು ಮೃದುವಾಗಿ ಮಿಸುಕಿದವು. ರಾಜದ್ವಾರಗಳ ಮೇಲಿನ ಬಂಗಾರದ ಕುಸುರು ಕೆಲಸದಿಂದ, ಸೊಗಸಾದ ಕಿಡಿ ಗಳು ಪ್ರತಿಬಿಂಬಿತವಾದುವು. ನೀಲಿಗಾಳಿಯಲ್ಲಿ ಮೋಂಬತ್ತಿಗಳು, ಚಿನ್ನದ ದುಂಬಿಗಳಂತೆ ತೂಗಾಡುತ್ತಿದ್ದುವು. ಹೆಂಗಸರ ಮತ್ತು ಹುಡುಗಿಯರ ತಲೆಗಳು, ಆ ದುಂಬಿಗಳು ಎರಗುತ್ತಿದ್ದ ಹೂಗಳಂತೆ ಕಂಡುವು.

ಇಗರ್ಜಿಯ ವಾದ್ಯವೃಂದದ ಹಾಡುಗಾರಿಕೆಯೊಡನೆ ಪ್ರತಿಯೊಂದೂ ಮಧುರತರವಾಗಿ ಲೀನಗೊಂಡಿತು. ಯಕ್ಷಿಣಿ ಕಥೆಯಲ್ಲಿರುವ ಹಾಗಿತ್ತು ಪ್ರತಿಯೊಂದೂ. ಕಗ್ಗತ್ತಲೆಯಲ್ಲಿ ತೊಟ್ಟಿಲು ತೂಗಾಡುವಂತೆ, ಇಡಿಯ ಇಗರ್ಜಿ ನಿಧಾನವಾಗಿ ಅತ್ತಿತ್ತ ತೂಗಿತು.

ಕೆಲವುಸಾರೆ, ಇಗರ್ಜಿಯು ಒಂದು ಸರೋವರದಲ್ಲಿ ಮುಳುಗಿದ್ದಂತೆ, ಇತರ ಎಲ್ಲಾ ಬದುಕಿಗಿಂತ ಭಿನ್ನವಾಗಿ ಜೀವಿಸುವುದಕ್ಕೋಸ್ಕರ ಜಗತ್ತಿನಿಂದ ಅವಿತುಕೊಂಡಿದ್ದಂತೆ, ನನಗೆ ಅನಿಸುತ್ತಿತ್ತು. ಪ್ರಾಯಶಃ ಈ ವಿಚಾರ, ಸಿರಿವಂತಿಕೆಯ ನಗರವಾದ ಕಿಟೆಜ್ ಬಗೆಗೆ ಅಜ್ಜಿ ಹೇಳಿದ್ದ ಕಥೆಯ ನೆನಪಿನಿಂದ ಹುಟ್ಟಿರಬೇಕು. ವಾದ್ಯವೃಂದದ ಹಾಡು, ಪಿಸುಧ್ವನಿಯ ಪ್ರಾರ್ಥನೆ, ಭಕ್ತಾದಿಗಳ ನಿಟ್ಟುಸಿರು—ಇವೇ ಜೋಗುಳವಾಗಿ, ಆಗಾಗ್ಗೆ, ನಾನಿದ್ದಲ್ಲೇ ಮಂಪರು ಬಂದು ತೂಕ

ಡಿಸುವಂತಾದಾಗ, ಶೋಕಪೂರ್ಣವಾದ ಇಂಪಾದ ಆ ಕಥೆಯನ್ನು ನನ್ನಷ್ಟಕ್ಕೇ ನಾನು ನೆನೆಸಿ ಕೊಳ್ಳುತ್ತಿದ್ದೆ:

ಬಳಿಕ ಬಂತು ಖಳತಾತರರ ಹಿಂಡು,
ಕುದುರೆಗಳನೇರಿ ಶಸ್ತ್ರಾಸ್ತ್ರ ಹಿಡಿದು,
ಸುಂದರ ಕಿಟೆಜ್‌ಗ್ರಾಡ ಮುತ್ತಿದರು,
ಬೆಳಗು ಪ್ರಾರ್ಥನೆಯ ಪವಿತ್ರ ಘಳಿಗೆಯ್ಯಲ್ಲಿ
    ಓ, ಪ್ರಿಯ ವಿಶ್ವನಾಥ,
    ಓ, ಪ್ರಿಯ ಧವಳಕನ್ನೆ,
ಬನ್ನಿ, ದೇವ—ದಾಸರ ನೆರವಿಗೆ,
    ಶಾಂತಿಯಲಿ ಪ್ರಾರ್ಥನೆಯ ಮುಗಿಸಲೆಂದು,
    ದೈನ್ಯದಲಿ ನಿನ್ನ ನುಡಿ ತಿಳಿಯಲೆಂದು,
ದೇವಮಂದಿರವಾಗದಿರಲಿ ಮಲಿನ,
ಆಗದಿರಲಿ ಬಾಲೆಯರ ಮಾನ ಹರಣ,
ಎಳೆಹಸುಳೆಗಳಿಗಾಗದಿರಲಿ ಸಾವು,
ಮುಪ್ಪು ಕಾಹಿಲೆಯರಿಗೆ ಹಾನಿ.
    ಆಗ ಮಹಾದೇವ ಜೀಹೋವ,
    ಆಗ ಪೂಜ್ಯ ಧವಳಕನ್ನೆ,
    ಪ್ರಲಾಪದಿಂ ಮನಸುಕದಡಿ,
    ದೀನಪ್ರಾರ್ಥನೆಯಿಂದ ಕೆರಳಿ,
    ಹಿರಿಯದೇವತೆ ಮಿಖೇಲನೊಡನೆ
    ಮಹಾದೇವ ಜಿಹೋವ ನುಡಿದ.
"ನರಲೋಕಕಿಳಿ ಮಿಖೇಲ,
ಕಿಟೆಜ್‌ಗ್ರಾಡ ನೆಲವ ಕುಲುಕು,
ಬರಲಿ ನೀರ ಮಹಾಪೂರ.
ಬಳಿಕ ದೇವರದಾಸರು
ಮನದಣಿಯೆ, ಕೊನೆ ಇರದೆ,
ಪ್ರಾರ್ಥಿಸಲಿ, ಬೇಸರಿಸದೆ,
ಮುಂಜಾವದಿಂದ ಸಂಜೆಯತನಕ,
ಜಾವಜಾವಕೂ ವರ್ಷವರ್ಷಕೂ
ಅನಂತಕಾಲದವರೆಗೂ!"

ಜೇನುತೊಟ್ಟಿಯೊಳಗೆ ಮಧು ಇರುವಂತೆ ನನ್ನ ತುಂಬಾ ಆಗ ಅಜ್ಜಿಯ ಕವನಗಳಿರುತ್ತಿದ್ದುವು. ನನ್ನ ವಿಚಾರಗಳು ಕೂಡಾ ಆಕೆಯ ಕವನಗಳ ಮಾದರಿಯನ್ನೆ ಅನುಸರಿಸುತ್ತಿದ್ದಂತೆ ತೋರುತ್ತಿತ್ತು.

ನಾನೆಂದೂ ಇಗರ್ಜಿಯಲ್ಲಿ ಪ್ರಾರ್ಥಿಸುತ್ತಿರಲಿಲ್ಲ. ಅಜ್ಜನ ದ್ವೇಷ ತುಂಬಿದ ಪ್ರಾರ್ಥನೆಗಳನ್ನೂ ಶೋಕಪೂರ್ಣ ಗೀತಗಳನ್ನೂ ಅಜ್ಜಿಯ ದೇವರೆದುರು ಹೇಳಲು ನಾನು ಅಳುಕಿದೆ. ನನ್ನ ಹಾಗೆಯೇ ಅಜ್ಜಿಯ ದೇವರೂ ಅಂತಹ ಪ್ರಾರ್ಥನೆಗಳನ್ನು ಇಷ್ಟಪಡುತ್ತಿರಲಾರನೆಂಬುದು ನನಗೆ ಖಚಿತವಾಗಿತ್ತು. ಅದು ಸಾಲದೆ, ಅವುಗಳೆಲ್ಲಾ ಪುಸ್ತಕದಲ್ಲಿ ಅಚ್ಚಾಗುತ್ತಿದ್ದುವು. ಆದುದರಿಂದ, ಇತರ ಯಾರೇ ಅಕ್ಷರಸ್ಥರ ಹಾಗೆ ದೇವರಿಗೂ ಅವು ತಿಳಿದಿರಬೇಕು ಎಂದಾಯಿತು.

ಆದಕಾರಣ, ಯಾವುದೋ ಮಧುರ ಯಾತನೆಯಿಂದ ನನ್ನ ಹೃದಯ ಕುಗ್ಗಿದಾಗ, ಅಥವಾ ದಿನದ ಸಣ್ಣಪುಟ್ಟ ಅವಮಾನಗಳಿಂದ ನೋವಾದಾಗ, ನಾನೇ ಸ್ವಂತವಾಗಿ ಪ್ರಾರ್ಥನೆಗಳನ್ನು ರಚಿಸಲು ಯತ್ನಿಸುತ್ತಿದ್ದೆ. ನನ್ನ ಯಾರಿಗೂ ಬೇಡವ ದುರವಸ್ಥೆಯ ಬಗೆಗೆ ಯೋಚಿಸಿದರೇ ಸಾಕು, ನನ್ನ ಯಾವ ಯತ್ನವೂ ಇಲ್ಲದೆ ಪದಗಳು ತಮಷ್ಟಕ್ಕೆ ರೂಪುತಳೆಯುತ್ತಿದ್ದುವು.

ಓ ದೇವರೇ, ಓ ದೇವರೇ, ಎಷ್ಟೊಂದು ದುಃಖಿ ನಾನು !
ಇಷ್ಟರಲ್ಲೇ ನನ್ನನ್ನು ದೊಡ್ಡವನಾಗಿ ಮಾಡಿದ್ದಿದ್ದರೆ !
ಕ್ಷಮಿಸು ದೇವರೆ, ನನ್ನನ್ನು ನಾನೇ ಕೊಂದರೆ;
ಸಹಿಸಿದೆ ನಾನು ಮಾನವಗಾಗುವಷ್ಟು.
ಇವರಿಲ್ಲಿ ನನಗೇನೂ ಕಲಿಸರೆಂದೆಂದೂ.
ಅಜ್ಜಿಯ ತಂಗಿ, ಕುರೂಪಿ ಮಾಯಾವಿನಿ,
ಬರೇ ಬಯ್ದು ಕಿವಿಯೆಳೆವಳು.
ಜೀವನವೇ ಭೀಕರ ಹೆಣ್ಣುನಾಯಿ.

ನನ್ನ 'ಪ್ರಾರ್ಥನೆ'ಗಳಲ್ಲಿ ಹಲವು ಈಗಲೂ ನನಗೆ ನೆನಪಿವೆ. ಮಗುಮನಸ್ಸಿನ ರೀತಿನೀತಿಗಳು ಆತ್ಮದ ಮೇಲೆ ಎಷ್ಟೊಂದು ಆಳವಾದ ಮುದ್ರೆಯನ್ನು ಒತ್ತುತ್ತವೆಂದರೆ. ಕೆಲವೊಮ್ಮೆ, ಸಾಯುವವರೆಗೂ ಅವು ಉಳಿಯುತ್ತವೆ.

ಇಗರ್ಜಿಯಲ್ಲಿ ಹೊತ್ತು ಕಳೆಯುವುದು ಸೊಗಸಾಗಿತ್ತು. ಹಿಂದೆ ಹೊಲಗಳಲ್ಲೂ ಕಾಡುಗಳಲ್ಲೂ ಪಡೆಯುತ್ತಿದ್ದಂತೆ, ಈಗ ವಿಶ್ರಾಂತಿಯನ್ನು ಇಗರ್ಜಿಯಲ್ಲಿ ನಾನು ದೊರಕಿಸಿಕೊಂಡೆ. ಆಗಲೇ ಎಷ್ಟೋ ವೇಳೆ ಗಾಯಗೊಂಡಿದ್ದ, ಅಷ್ಟರಲ್ಲೇ ಬದುಕಿನ ಒರಟುತನದ ಅನುಭವವಾಗಿದ್ದ, ನನ್ನ ಶಿಶುಹೃದಯ, ಅಸ್ಪಷ್ಟವಾದ ಆದರೆ ಬಲವತ್ತರವಾದ ಕನಸುಗಳಿಂದ ಮೃದುವಾಯಿತು.

ಒಮ್ಮೊಮ್ಮೆ ಚಳಿ ಅತಿಯಾಗಿರುತ್ತಿತ್ತು. ಅಥವಾ, ಶಹರದ ಮೂಲಕ ಹಿಮಗಾಳಿ, ಆಕಾಶವನ್ನೇ ಹೆಪ್ಪುಗಟ್ಟಿಸುತ್ತ, ಹಿಮಮೋಡಗಳಿಂದ ಅದನ್ನು ಮುಚ್ಚುತ್ತ, ರಭಸದಿಂದ ಬೀಸುತ್ತಿತ್ತು. ಆಗ, ಗಾಳಿತಂದ ಹಿಮರಾಶಿಯ ಕೆಳಗೆ ಹೆಪ್ಪುಗಟ್ಟುತ್ತಿದ್ದ ಭೂಮಿ, ಪುನಃ ಚೇತರಿಸಲು, ಅಥವಾ ಬದುಕಿನ ಚಿಹ್ನೆಗಳನ್ನು ಮುಂದೆಂದೂ ತೋರಿಸಲು, ಅಸಮರ್ಥವಾದಂತೆ ಕಾಣುತ್ತಿತ್ತು, ಅಂತಹ ದಿನಗಳಲ್ಲಿ ಮಾತ್ರ, ನಾನು ಇಗರ್ಜಿಗೆ ಹೋಗುತ್ತಿದ್ದೆ.

ಶಾಂತವಾಗಿದ್ದ ರಾತ್ರಿಗಳಲ್ಲಿ, ಇಗರ್ಜಿಗೆ ಹೋಗುವುದರ ಬದಲು ಬೀದಿಗಳಲ್ಲಿ ನಾನು ನಡೆಯುತ್ತಿದ್ದೆ. ಒಂದು ರಸ್ತೆಯಲ್ಲಿ ಹೋಗಿ ಇನ್ನೊಂದು ರಸ್ತೆಯಲ್ಲಿ ಹಿಂತಿರುಗುತ್ತಿದ್ದೆ. ಆದಷ್ಟು ದೂರದ ಮೂಲೆಗಳನ್ನು ಹುಡುಕುತ್ತ ಅಲೆದಾಡುತ್ತಿದ್ದೆ. ಆಕಾಶದಲ್ಲಿನ ಚಂದ್ರನಷ್ಟೇ ಒಂಟಿ

ಯಾಗಿ ನಾನು, ರೆಕ್ಕೆಗಳಿದ್ದವನಂತೆ ಧಾವಿಸುತ್ತ ಹೋಗುತ್ತಿದ್ದೆ. ನನ್ನ ನೆರಳು ನನಗಿಂತಲೂ ಮುಂಚಿತವಾಗಿ, ಹಿಮದ ಮೇಲಿದ್ದ ಬೆಳಕಿನ ಕಿಡಿಗಳನ್ನು ನಂದಿಸುತ್ತ, ದೀಪಸ್ತಂಭಗ ಮೇಲಿಂದಲೂ ಬೇಲಿಯ ಮೇಲಿಂದಲೂ ತಮಾಷೆಯಾಗಿ ಜಾರುತ್ತ, ಹೋಗುತ್ತಿತ್ತು. ದೊ ದಾದ ಕುರಿ ತುಪ್ಪಳ ತೊಟ್ಟ ರಾತ್ರಿಯ ಕಾವಲುಗಾರ, ಮಾರ್ಗಮಧ್ಯದಲ್ಲಿ ಬರುತ್ತಿದ್ದ. ಕೈಯ ಬಡಿಗೆ ಇರುತ್ತಿತ್ತು. ಅವನ ಪಕ್ಕದಲ್ಲೊಂದು ನಾಯಿ. ಆತನ ಗಾತ್ರದ ಆಕೃತಿಯನ್ನು ಕಂಡ ಲೆಲ್ಲ, ತಾನಿದ್ದ ಅಂಗಳದಿಂದ ಹೊರಕ್ಕೆ ಸರಿದು ಬೀದಿಯಲ್ಲಿ ಗೊತ್ತಿಲ್ಲದ ಯಾವುದೋ ದಿಕ್ಕಿ ಹೊರಟುಹೋದ ನಾಯಿಯ ಲಾಯ ಮತ್ತು ಕಕ್ಕಾವಿಕ್ಕಿಯಾಗಿ ಲಾಯವನ್ನು ಹಿಂಬಾಲಿಸುತ್ತಿ ನಾಯಿ—ಈ ಚಿತ್ರ ನನ್ನ ಕಣ್ಣೆದುರು ಕಟ್ಟುತ್ತಿತ್ತು.

ಆಗೊಮ್ಮೆ ಈಗೊಮ್ಮೆ, ನಗುತ್ತ ಬರುತ್ತಲಿದ್ದ ಎಳೆಯ ಹುಡುಗಿಯರನ್ನೂ ಅವರ ಪ್ರಣ ಗಳನ್ನೂ ಬೀದಿಯಲ್ಲಿ ನಾನು ಸಂಧಿಸುತ್ತಿದ್ದೆ. ಅವರೂ ಸಾಯಂಪ್ರಾರ್ಥನೆಯಿಂದ ತಪ್ಪಿ ಕೊಂಡು ಬಂದವರಿರಬೇಕೆಂದು ತೀರ್ಮಾನಿಸುತ್ತಿದ್ದೆ.

ಕೆಲವೊಮ್ಮೆ, ಬೆಳಕಿದ್ದ ಕಿಟಿಕಿಗಳ ಸಂದಿಯಿಂದ, ವಿಚಿತ್ರ ವಾಸನೆಗಳು ಬರುತ್ತಿದ್ದು ಭಿನ್ನರೀತಿಯ ಜೀವಸವನ್ನು ಸೂಚಿಸುತ್ತಿದ್ದ, ಪರಿಮಳಯುಕ್ತವಾದ ಅಪರಿಚಿತ ವಾಸನೆಗ ಎಂತಹ ಜನರು ಅಲ್ಲಿ ಜೀವಿಸುತ್ತಿದ್ದರೆಂಬುದನ್ನೂ ಅವರ ಬದುಕು ಎಂತಹದೆಂಬುದನ್ನೂ ತಿಳಿ ಕೊಳ್ಳಲು ಯತ್ನಿಸುತ್ತಾ, ಕಿಟಿಕಿಗಳ ಕೆಳಗೆ ನಿಂತು ಗಾಳಿಯನ್ನು ಮೂಸಿನೋಡುತ್ತಿದ್ದೆ. ಸ ರೆಲ್ಲಾ ಸಾಯಂಪ್ರಾರ್ಥನೆಗೆಂದು ಇಗರ್ಜಿಯಲ್ಲಿ ಇರಬೇಕಾದ ವೇಳೆ, ಇವರು ನಗುತ್ತಾ ಮಾ ನಾಡುತ್ತಾ, ಮಧುರಸ್ವರಗಳನ್ನು ಕಿಟಿಕಿಯಿಂದ ಹೊರಕಳುಹುತ್ತಿದ್ದ ವಿಶಿಷ್ಟ ರೀತಿಯ ಗಿತಾರ ನುಡಿಸುತ್ತಾ, ಇಲ್ಲಿದ್ದರು.

ಟಿಖೊನೊವ್‌ಸ್ಕಾಯಾ ಮತ್ತು ಮಾರ್ಟಿನೋವ್‌ಸ್ಕಾಯಾ ಎಂಬ ಹೆಸರಿನ ಎರಡು ಶಾ ಬೀದಿಗಳ ಮೂಲೆಯಲ್ಲಿ, ತಗ್ಗಾದ ಒಂದಂತಸ್ತಿನ ಒಂದು ಮನೆಯಿತ್ತು. ನನ್ನ ಆಸಕ್ತಿಯ ಅದು ವಿಶೇಷವಾಗಿ ಕೆರಳಿಸಿತು. ಶ್ರೊವ್‌ಟೈಡಿಗೆ ಮುಂಚೆ ಹಿಮಕರಗುತ್ತಲಿದ್ದ ಒಂ ಬೆಳುದಿಂಗಳ ರಾತ್ರೆ, ಆ ಮನೆಯನ್ನು ಅಕಸ್ಮಾತ್ತಾಗಿ ನಾನು ಕಂಡೆ. ಕಿಟಿಕಿಯ ಸಂದಿಯಿ ಹೊರಹರಿಯುತ್ತಿದ್ದ ಆವಿಯ ಜತೆಗೆ, ಅಚ್ಚರಿಗೊಳಿಸುವ ಸ್ವರವೂ ಬಂತು. ಅತಿ ಬಲಿ ಆರೋಗ್ಯವಂತನೊಬ್ಬ ಮುಚ್ಚಿದ ತುಟಿಗಳೆಡೆಯಿಂದ ಹಾಡುತ್ತಲಿದ್ದ ಹಾಗಿತ್ತು ಸ್ವರ. ಗಳು ಅಸ್ಪಷ್ಟವಾಗಿದ್ದುವು. ಯಾವುದೋ ತಂತಿವಾದ್ಯ, ಹಾಡಿನ ಪ್ರವಾಹವನ್ನು ಬೇರವೆನಿ ವಷ್ಟು ಅಡ್ಡಿಪಡಿಸುತ್ತಿದ್ದುದರಿಂದ, ಹಾಡು ಸರಿಯಾಗಿ ನನಗೆ ಕೇಳುತ್ತಿರಲಿಲ್ಲ. ಆದರೂ ಅ ತೀರಾ ಪರಿಚಿತವಾಗಿ, ಅರ್ಥಗ್ರಹಣ ಸುಲಭವಾಗಿ ಕಂಡಿತು. ಹೊರಗೆ, ಮರ ಕಡಿದು ಉ ದಿದ್ದ ಒಂದು ಕಾಂಡದ ಮೇಲೆ ನಾನು ಕುಳಿತೆ. ಅದ್ಭುತವಾದ, ಅಸಹನೀಯವೂ ಆದ, ಶ ಯುಳ್ಳ ಪಿಟೀಲಿನಿಂದ ಆ ಸಂಗೀತ ಹೊರಡುತ್ತಿರಬೇಕೆಂದು ತೀರ್ಮಾನಿಸಿದೆ. ಕೆಲವುಸ ಎಷ್ಟೊಂದು ಶಕ್ತಿಪೂರ್ಣವಾಗಿ ಹಾಡು ಹೊರಡುತ್ತಿತ್ತೆಂದರೆ, ಇಡೀ ಮನೆಯೇ ನಡುಗುತ್ತಿದ್ದಂ ಕಿಟಿಕಿಗಳ ಗಾಜು ಕಂಪಿಸುತ್ತಿದ್ದಂತೆ ಅನಿಸುತ್ತಿತ್ತು. ಕರಗುತ್ತಿದ್ದ ಹಿಮ ಛಾವಣಿಯಿ ತೊಟ್ಟಿಕ್ಕುತ್ತಿತ್ತು. ಕೆನ್ನೆಗಳ ಮೇಲಿಂದ ಸದ್ದಿಲ್ಲದೆ ಕಂಬನಿ ಇಳಿಯುತ್ತಿತ್ತು.

ರಾತ್ರಿಯ ಕಾವಲುಗಾರ ಹತ್ತಿರ ಬಂದುದು, ನನ್ನನ್ನು ಆತ ಕಾಂಡದಿಂದ ತಳ್ಳುವವರೆಗೂ ನನಗೆ ತಿಳಿಯಲಿಲ್ಲ.

"ಇಲ್ಲಿ ಯಾತಕ್ಕೆ ಪೋಲಿ ಅಲೀತಿದೀಯಾ?" ಎಂದು ಆತ ಕೇಳಿದ.

"ಸಂಗೀತ...." ಎಂದು ನಾನು ವಿವರಣೆ ಕೊಡಲು ಹೊರಟೆ.

"ಸಂಗೀತವಿದ್ದರೇನಾಯ್ತು? ಹೊರಟ್ಹೋಗು!"

ನಾನು ಬೇಗನೆ ಓಡಿ, ಸುತ್ತಲಮನೆಗಳನ್ನು ಬಳಸಿ, ಪುನಃ ಅಲ್ಲಿಗೆ ಬಂದೆ. ಆದರೆ, ಯಾರೂ ಈಗ ವಾದನವನ್ನು ನುಡಿಸುತ್ತಿರಲಿಲ್ಲ. ಕಿಟಿಕಿಯೊಳಗಿಂದ ಸಂತಸದ ಸ್ವರಗಳ ಗೊಂದಲ ಕೇಳಿ ಬರುತ್ತಿತ್ತು: ಶೋಕಸಂಗೀತಕ್ಕೂ ಅದಕ್ಕೂ ಏನೇನೂ ಹೋಲಿಕೆ ಇರಲಿಲ್ಲ. ನಾನು ಎಲ್ಲೋ ಕನಸುಕಂಡಿರಬೇಕು—ಎಂದೇ ಅನಿಸಿತು.

ಹೆಚ್ಚುಕಡಮೆ ಪ್ರತಿ ಶನಿವಾರವೂ ಆ ಮನೆಗೆ ನಾನು ಬರುತ್ತಿದ್ದೆ. ಆದರೆ, ಸೆಲ್ಲೋವಾದನ ನನಗೆ ಪುನಃ ಕೇಳಿಬಂದುದು, ವಸಂತದಲ್ಲಿ ಒಮ್ಮೆ ಮಾತ್ರ. ಅಂದು ಒಮ್ಮೆಯೂ ನಿಲ್ಲದೆ, ಸುಮಾರು ಮಧ್ಯರಾತ್ರಿಯವರೆಗೂ ಅದರ ವಾದನ ನಡೆಯಿತು. ಮನೆಗೆ ಮರಳಿದಾಗ ನನಗೆ ಏಟು ಬಿತ್ತು.

ಈ ತೆರನಾಗಿ, ಚಳಿಗಾಲದ ನಕ್ಷತ್ರಗಳ ಕೆಳಗೆ, ಶಹರದ ಬರಿದು ರಸ್ತೆಗಳುದ್ದಕ್ಕೆ, ನಡಸಿದ ರಾತ್ರಿಯ ಅಲೆದಾಟದಿಂದ ನನ್ನ ಅನುಭವ ಬಲು ಹಿರಿದಾಯಿತು. ಉದ್ದೇಶಪೂರ್ವಕವಾಗಿಯೇ ನಾನು ಹೊರವಲಯದ ಬೀದಿಗಳನ್ನು ಆರಿಸುತ್ತಿದ್ದೆ. ಮುಖ್ಯರಸ್ತೆಗಳಲ್ಲಿ ಹಲವಾರು ದೀಪಗಳ ಬೆಳಕಿತ್ತು. ಅಲ್ಲಿ ನನ್ನ ಮಾಲಿಕರ ಸ್ನೇಹಿತರು ಯಾರಾದರೂ ನನ್ನನ್ನು ಕಂಡರೆಂದರೆ, ನಾನು ಸಾಯಂಪ್ರಾರ್ಥನೆಗೆ ಹೋಗಲಿಲ್ಲವೆನ್ನುವುದು ಅವರಿಗೆ ತಿಳಿದುಬಿಡುತ್ತಿತ್ತು. ಅಲ್ಲದೆ, ಮುಖ್ಯ ರಸ್ತೆಗಳಲ್ಲಿ, ಕುಡುಕರಿಂದ ಪೋಲೀಸರಿಂದ ಬೀದಿನಡೆಯುತ್ತಿದ್ದ ಸ್ತ್ರೀಯರಿಂದ, ನನ್ನ ಅಲೆದಾಟಕ್ಕೆ ಭಂಗಬರುತ್ತಿತ್ತು. ದೂರದ ಬೀದಿಗಳಲ್ಲಿ ಮನೆಗಳ ಮೊದಲ ಅಂತಸ್ತಿನ ಕಿಟಿಕಿಗಳ ಮೂಲಕ, ಪರದೆಯಾಗಲೀ ಹಿಮವಾಗಲೀ ಇರದೇ ಇದ್ದರೆ, ಒಳಕ್ಕೆ ನೋಡುವುದು ಸಾಧ್ಯವಿತ್ತು.

ಆ ಕಿಟಿಕಿಗಳ ಮೂಲಕ ಅನೇಕ ದೃಶ್ಯಗಳ ಇಣಿಕುನೋಟ ನನಗೆ ದೊರೆಯುತ್ತಿತ್ತು. ಪ್ರಾರ್ಥಿಸುತ್ತಿದ್ದ, ಚುಂಬಿಸುತ್ತಿದ್ದ, ಜಗಳಾಡುತ್ತಿದ್ದ, ಇಸ್ಪೀಟು ಆಡುತ್ತಿದ್ದ, ಗಂಭೀರವಾದ ಸದ್ದಿಲ್ಲದ ಸಂಭಾಷಣೆಗಳನ್ನು ನಡಸುತ್ತಿದ್ದ, ಜನರನ್ನು ನಾನು ಕಾಣುತ್ತಿದ್ದೆ. ಚಿತ್ರಪೆಟ್ಟಿಗೆಗಳೊಳಗೆ ಕಾಣುತ್ತಿದ್ದಂತೆ, ಮೂಕವಾದ ಶೀತಲವಾದ ದೃಶ್ಯ ವಿಸ್ತಾರ ನನ್ನ ಕಣ್ಣುಗಳೆದುರು ಸರಿಯುತ್ತಿತ್ತು.

ನೆಲಮಾಳಿಗೆಯ ಒಂದು ಕಿಟಿಕಿಯ ಮೂಲಕ, ಇಬ್ಬರು ಹೆಂಗಸರನ್ನು ನಾನು ಕಂಡೆ. ಒಬ್ಬಾಕೆ ತೀರಾ ಚಿಕ್ಕವಳು, ಇನ್ನೊಬ್ಬಳು ಅವಳಿಗಿಂತ ತುಸು ದೊಡ್ಡವಳು. ಮೇಜಿನ ಬಳಿ ಅವರು ಕುಳಿತಿದ್ದರು. ಅವರ ಎದುರುಗಡೆಯಲ್ಲಿ ನೀಳತಲೆಗೂದಲ ಯುವಕನೊಬ್ಬ, ಒಂದು ಪುಸ್ತಕವನ್ನು ಓದಿಹೇಳುತ್ತ ಅತಿಯಾಗಿ ಹಾವಭಾವಗಳನ್ನು ಮಾಡುತ್ತಿದ್ದ. ಕಿರಿಯವಳು, ಶ್ರದ್ಧೆಯಿಂದ ಕೇಳುತ್ತ, ತನ್ನ ಕುರ್ಚಿಯಲ್ಲಿ ಹಿಂದಕ್ಕೆ ವಾಲಿದ್ದಳು. ಆಕೆಯ ಹುಬ್ಬುಗಳು ತೀಕ್ಷ್ಣರೇಖೆಯಾಗಿ ಪರಸ್ಪರ ಸೆಳೆಯಲ್ಪಟ್ಟಿದ್ದುವು. ಬಲು ತೆಳ್ಳಗಿದ್ದ, ಮೃದು ತಲೆಗೂದಲ, ಹಿರಿಯವಳು ಒಮ್ಮೆಲೆ ಕೈಗಳಿಂದ ತನ್ನ ಮುಖವನ್ನು ಮರೆಸಿಕೊಂಡು ಬಿಕ್ಕಿ ಅತ್ತಳು. ವಿದ್ಯಾರ್ಥಿ

ಪುಸ್ತಕವನ್ನು ಕೆಳಕ್ಕೆಸೆದ. ಕಿರಿಯವಳು ಹಾರಿ ಎದ್ದು ಕೊಠಡಿಯ ಹೊರಕ್ಕೆ ಓಡಿದಳು. ಆತ ಮೃದುಕೂದಲಿದ್ದ ಯುವತಿಯ ಎದುರು ಮಂಡಿಯೂರಿ ಆಕೆಯ ಕೈಗಳನ್ನು ಚುಂಬಿಸತೊಡಗಿದ

ದಪ್ಪನೆಯ, ಗಡ್ಡವಿದ್ದ, ಮನುಷ್ಯನೊಬ್ಬ, ಕೆಂಪು ಕುಪ್ಪಸ ತೊಟ್ಟಿದ್ದ ಹೆಂಗಸೊಬ್ಬಳನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಚಿಕ್ಕ ಮಗುವಿನಂತೆ ಆಕೆಯನ್ನು ಅತ್ತಿತ್ತ ಆಡಿಸುತ್ತಿದ್ದುದು, ಇನ್ನೊಂದು ಕಿಟಕಿಯ ಮೂಲಕ ನನಗೆ ಕಾಣಿಸಿತು. ಅವನು ಹಾಡುತ್ತಿದ್ದಿರಬೇಕು ಯಾಕೆಂದರೆ, ಬಾಯಿಯನ್ನು ಅಗಲವಾಗಿ ತೆರೆದು ತನ್ನ ಕಣ್ಣುಗಳನ್ನು ಅತ್ತಿತ್ತ ಹೊರಳಿಸುತ್ತಿದ್ದ ಆಕೆ ಬಿದ್ದುಬಿದ್ದು ನಗುತ್ತಿದ್ದಳು. ಆತನ ತೋಳುಗಳ ಮೇಲೆ ಹಿಂದಕ್ಕೆ ಒರಗಿ, ತನ್ನ ಪಾದಗಳನ್ನೆತ್ತಿ ಗಾಳಿಯಲ್ಲಿ ಆಡಿಸುತ್ತಿದ್ದಳು. ಪುನಃ ಆಕೆಯನ್ನು ಸರಿಯಾಗಿ ಕೂರಿಸಿಕೊಂಡು ಆತ ಹಾಡುತ್ತ ಹೋದ; ಆಕೆ ನಗುತ್ತ ಇದ್ದಳು. ನಾನು, ಬಹಳ ಹೊತ್ತು ಅವರನ್ನೇ ನೋಡುತ್ತ ನಿಂತೆ. ರಾತ್ರೆಯೆಲ್ಲ ಇದೇ ರೀತಿ ಇವರು ಹರ್ಷದಿಂದ ಇರುವುದು ಖಂಡಿತವೆಂಬ ಭಾವನೆಯಿಂದ ಅಲ್ಲಿಂದ ನಾನು ಹೊರಟುಹೋದೆ.

ಅಂತಹ ಎಷ್ಟೋ ದೃಶ್ಯಗಳು ನನ್ನ ಸ್ಮರಣೆಯಲ್ಲಿ ಸ್ಥಿರವಾಗಿ ಅಚ್ಚೊತ್ತಿದುವು. ಇಂತಹ ಚಿತ್ರಗಳನ್ನು ಒಡಮೂಡಿಸಿಕೊಂಡ ರಾತ್ರೆಗಳಲ್ಲಿ ಎಷ್ಟೋ ವೇಳೆ ನಾನು ಮನೆಗೆ ಹಿಂದಿರುಗುವುದು ತಡವಾಗುತ್ತಿತ್ತು. ಇದರಿಂದ ನನ್ನ ಮಾಲಿಕರು ಸಂಶಯ ತಾಳುತ್ತಿದ್ದರು.

"ನೀನು ಯಾವ ಇಗರ್ಜಿಗೆ ಹೋದೆ?" "ಯಾವ ಧರ್ಮಗುರು ಸರ್ವಿಸನ್ನು ಓದಿದ್ದ?" ಎಂದೆಲ್ಲ ಅವರು ಕೇಳುತ್ತಿದ್ದರು.

ಶಹರದಲ್ಲಿನ ಎಲ್ಲ ಧರ್ಮಗುರುಗಳ ಪರಿಚಯವೂ ಅವರಿಗಿತ್ತು. ಬೈಬಲಿನ ಯಾವ ಅಧ್ಯಾಯವನ್ನು ಆ ಸಂಜೆ ಓದಲಾಗುತ್ತಿತ್ತೆಂಬುದೂ ಅವರಿಗೆ ಗೊತ್ತಿತ್ತು. ನನ್ನ ಸುಳ್ಳನ್ನು ಕಂಡುಹಿಡಿಯುವುದು ಅವರಿಗೆ ಬಲು ಸುಲಭವಾಗಿತ್ತು.

ನನ್ನ ಯಜಮಾನಿತಿಯರಿಬ್ಬರೂ ನನ್ನ ಅಜ್ಜನ ಕೋಪಾವಿಷ್ಟ ದೇವರನ್ನೇ ಪೂಜಿಸುತ್ತಿದ್ದರು. ಭಕ್ತಾದಿಗಳು ಭಯಭೀತಿಯಿಂದಿರಬೇಕೆಂದು ಅಪೇಕ್ಷಿಸುತ್ತಿದ್ದ ದೇವರು ಆತ. ಅವನ ಹೆಸರು ಸದಾಕಾಲವೂ—ಜಗಳಾಡುತ್ತಿದ್ದಾಗಲೂ ಕೂಡಾ—ಅವರ ನಾಲಿಗೆಯ ಮೇಲಿರುತ್ತಿತ್ತು.

"ತಾಳು ಸ್ವಲ್ಪ! ದೇವರು ನಿನಗೆ ಶಿಕ್ಷೆ ಕೊಟ್ಟೇಕೊಡ್ತಾನೆ! ಕೆಟ್ಟ ಹೆಣ್ಣೆ, ನಿನ್ನ ಮಾಂಸ ಮುರುಟಿ ಸುಕ್ಕುಗಟ್ಟೋ ಹಾಗೆ ಅವನು ಮಾಡ್ತಾನೆ!"

ಲೆಂಟ್‌ಹಬ್ಬದ ಮೊದಲ ಭಾನುವಾರ ಮುದುಕಿ, ತೆಳುರೊಟ್ಟಿಗಳನ್ನು ಮಾಡಿದಳು. ಅವು ಕಾವಲಿಗೇ ಅಂಟಕೊಳ್ಳುತ್ತಿದ್ದುವು.

"ನಿನ್ನನ್ನು ದೆವ್ವ ತಿನ್ನಲ್ಲ!" ಎಂದು, ಬೆಂಕಿಯಿಂದ ಮುಖ ಕೆಂಪಡರುತ್ತಿದ್ದಂತೆ, ಆಕೆ ಶಪಿಸಿದಳು.

ಇದ್ದಕ್ಕಿದ್ದಂತೆ ಕಾವಲಿಯನ್ನು ಮೂಸಿನೋಡಿದಳು. ಆಕೆಯ ಮುಖ ಕಪ್ಪಾಯಿತು. ಕಾವಲಿಯನ್ನು ನೆಲದ ಮೇಲೆಸೆದು ಆಕೆ ಕಿರಿಚಿದಳು:

"ನಮ್ಮಪ್ಪ ದೇವರೇ! ಈ ಪಾತ್ರೇಲಿ ಕೊಬ್ಬು ಇದೆ! ಪರಿಶುದ್ಧ ಸೋಮವಾರ ಈ ಹೊಲಸನ್ನು ಸುಟ್ಟುಬಿಡೋದಕ್ಕೆ ನಾನು ಮರೆತೆ! ಓ ದೇವರೇ!"

ಮೊಣಕಾಲುಗಳ ಮೇಲೆ ಬಿದ್ದು ಅಳುತ್ತ ಆಕೆ ಅಂಗಲಾಚತೊಡಗಿದಳು:

"ಪ್ರಿಯದೇವರೇ, ನಾನು ಪಾಪಿ, ನನ್ನನ್ನು ಕ್ಷಮಿಸು; ಕೃಪಾಳುವೇ ನನ್ನನ್ನು ಕ್ಷಮಿಸು. ನನ್ನಂಥ ಮುದಿಮೂರ್ಖಳನ್ನು ದಂಡಿಸ್ಬೇಡ. ಓ, ಪ್ರಿಯದೇವರೇ !"

ಕೆಟ್ಟುಹೋದ ತೆಳುರೊಟ್ಟಿಗಳನ್ನು ನಾಯಿಗೆ ಹಾಕಲಾಯಿತು. ಕಾವಲಿಯನ್ನು ಸುಟ್ಟು ಸ್ವಚ್ಛಪಡಿಸಲಾಯಿತು. ಆದರೆ ಅಂದಿನಿಂದ, ಕಿರಿಯ ಯಜಮಾನಿತಿ ಆ ಘಟನೆಯ ಬಗೆಗೆ ಹಿರಿಯಳಿಗೆ ನೆನಪು ಹುಟ್ಟಿಸುತ್ತಲೇ ಇದ್ದಳು.

"ಲೆಂಟ್‌ಹಬ್ಬದ ಸಮಯದಲ್ಲೂ ಕೂಡಾ ಮಲಿನ ಪಾತ್ರೆಯಲ್ಲಿ ತೆಳುರೊಟ್ಟಿ ತಯಾರಿಸು ವವಳು ನೀನು!" ಎಂದು, ಅವರು ಜಗಳಾಡಿದಾಗಲೆಲ್ಲ ಆಕೆ ಹೇಳುತ್ತಿದ್ದಳು.

ಗೃಹಕೃತ್ಯದ ಕಲಹಗಳಲೆಲ್ಲ, ಅವರ ಅಲ್ಪ ಬದುಕಿನ ಪ್ರತಿಯೊಂದು ಕತ್ತಲು ಮೂಲೆಗೂ, ದೇವರನ್ನು ಅವರು ಎಳೆಯುತ್ತಿದ್ದರು. ತಮ್ಮ ಪ್ರತಿಯೊಂದು ನಿಮಿಷವೂ ಯಾವುದೋ ಹಿರಿಯ ಶಕ್ತಿಯ ಸೇವೆಗೆ ಮೀಸಲೆಂಬಂತೆ ಆ ರೀತಿ ಕ್ಷಣಕ್ಷಣವೂ ದೇವರ ಹೆಸರೆತ್ತುವುದು, ಅವರ ನೀಜ ಬದುಕಿಗೊಂದು ಮಹತ್ವವನ್ನೂ ಪ್ರಾಧಾನ್ಯವನ್ನೂ ಕೊಟ್ಟಂತೆ ಭಾಸವಾಗುತ್ತಿತ್ತು. ಪ್ರತಿ ಯೊಂದು ಚಿಕ್ಕ ವಿಷಯದೊಡನೆಯೂ ದೇವರ ಸಂಬಂಧ ಕಲ್ಪಿಸುವ ಅವರ ಅಭ್ಯಾಸ ನನಗೂ ಅಂಟಿತು. ನನಗರಿಯದಂತೆಯೇ ನಾನು, ಯಾವುದೋ ಅಗೋಚರ ಕಣ್ಣು ನನ್ನನ್ನು ದಿಟ್ಟಿಸು ತ್ತಿದೆಯೆಂಬ ತಿಳಿವಳಿಕೆಯಿಂದ, ಮೂಲೆಗಳೆಡೆಗೆ ದೃಷ್ಟಿಹಾಯಿಸುತ್ತಿದ್ದೆ. ರಾತ್ರೆಯ ಹೊತ್ತು, ಶೀತಲ ಭೀತಿ ನನ್ನನ್ನು ಆವರಿಸುತ್ತಿತ್ತು. ಕರಿದು ಪ್ರತಿಮೆಗಳೆದರು ಸದಾ ಉರಿಯುತ್ತಿದ್ದ ದೀಪ ವಿದ್ದ ಅಡುಗೆಮನೆಯ ಮೂಲೆಯಿಂದ ಆ ಭೀತಿ ಬರುತ್ತಿತ್ತು.

ದೇವಪ್ರತಿಮೆಗಳಿದ್ದ ಕಪಾಟದ ಪಕ್ಕದಲ್ಲೇ ದೊಡ್ಡದೊಂದು ಕಿಟಿಕಿ ಇತ್ತು. ಅದಕ್ಕೆ, ನೇರವಾದ ಮರದ ತುಂಡೊಂದು ಪ್ರತ್ಯೇಕಿಸಿದ್ದ ಎರಡು ಚೌಕಟ್ಟುಗಳಿದ್ದುವು. ಕಿಟಿಕಿಯ ಆಚೆಗೆ ವಿಸ್ತಾರವಾದ ನೀಲಿ ಶೂನ್ಯವಿತ್ತು. ನನ್ನನ್ನೂ ಒಳಗೊಂಡು, ಮನೆ, ಅಡುಗೆಮನೆ, ಎಲ್ಲವೂ ಆ ಶೂನ್ಯದ ತೀರಾ ಅಂಚಿನ ಮೇಲೆಯೇ ತೂಗಾಡುತ್ತಿದ್ದುವೇನೋ ಎಂಬಂತೆ ಅನಿಸು ತ್ತಿತ್ತು. ತುಸುಮಿಸುಕಿದರೂ ಸಾಕು, ನಾವೆಲ್ಲ ಶೀತಲ ನೀಲಿ ಪ್ರಪಾತಕ್ಕೆ, ನಕ್ಷತ್ರಗಳಾಚೆ, ಮಸಣಮೌನಕ್ಕೆ, ನೀರಿಗೆಸೆದ ಕಲ್ಲಿನಂತೆ, ಎಸೆಯಲ್ಪಡುವೆವೇನೋ ಎಂದು ಭಾಸವಾಗುತ್ತಿತ್ತು. ನಿಶ್ಚಲನಾಗಿ, ದೀರ್ಘಕಾಲ, ಅತ್ತಿತ್ತ ಮಿಸುಕುವುದಕ್ಕೂ ಹೆದರಿ, ಜಗತ್ತಿನ ಭಯಾನಕ ಅಂತ್ಯ ವನ್ನು ಇದಿರುನೋಡುತ್ತ, ಹಾಸಿಗೆಯ ಮೇಲೆ ನಾನು ಮಲಗಿರುತ್ತಿದ್ದೆ.

ಈ ಭೀತಿಯಿಂದ ಹೇಗೆ ನಾನು ಚೇತರಿಸಿಕೊಂಡೆನೋ ನನಗೆ ನೆನಪಿಲ್ಲ. ಚೇತರಿಸಿಕೊಂಡ ದ್ದೇನೋ ನಿಜ; ಅದೂ ಬೇಗನೆ. ಸ್ವಾಭಾವಿಕವಾಗಿಯೇ ನನ್ನ ಅಜ್ಜಿಯ ದಯಾಮಯ ದೇವರು ನನ್ನ ನೆರವಿಗೆ ಬಂದಿರಬೇಕು. ಆಗಲೂ ಕೂಡಾ, ಸರಳವಾದೊಂದು ಸತ್ಯದ—ನಾನೇನೂ ತಪ್ಪುಮಾಡಿಲ್ಲ; ನಾನು ನಿರಪರಾಧಿಯಾದರೆ ನನ್ನನ್ನು ದಂಡಿಸುವ ಯಾವ ಶಾಸನವೂ ಇಲ್ಲ; ಬೇರೆ ಯವರ ಪಾಪಗಳಿಗೆ ನನ್ನನ್ನು ಹೊಣೆಗಾರನಾಗಿ ಮಾಡುವಂತಿಲ್ಲ—ಎಂಬ ಸತ್ಯದ ಅರಿವು ನನಗಿದ್ದಂತೆ ಅನಿಸುತ್ತಿತ್ತು.

ಬೆಳಗಿನ ಪ್ರಾರ್ಥನೆಯಿಂದ ಕೂಡಾ—ಅದೂ ವಿಶೇಷವಾಗಿ ವಸಂತದಲ್ಲಿ—ನಾನು ತಪ್ಪಿಸಿಕೊಳ್ಳತೊಡಗಿದೆ. ಪ್ರಕೃತಿಯ ಪುನರ್ಜನ್ಮದ ಅಜೇಯ ಶಕ್ತಿ, ಒಂದೇ ಸಮನೆ ಇಗರ್ಜಿ ಯಿಂದ ನನ್ನನ್ನು ದೂರಕ್ಕೆ ಒಯ್ದಿತು. ಜತೆಯಲ್ಲಿ, ವೇದಿಕೆಯ ಮೋಂಬತ್ತಿಗೆಂದು ಕೆಲ

ಕೊಪೆಕ್‌ಗಳನ್ನು ಕೊಟ್ಟಿದ್ದರಂತೂ ನನ್ನನ್ನು ಹಿಡಿಯುವವರೇ ಇರಲಿಲ್ಲ. ಆ ಹಣದಿಂದ ಗೋಲಿಗಳನ್ನು ಕೊಂಡುಕೊಂಡು ಪ್ರಾರ್ಥನೆ ಮುಗಿಯುವವರೆಗೂ ಆಟವಾಡುತ್ತಿದ್ದೆ; ಅನಿವಾರ್ಯವಾಗಿ ಮನೆಗೆ ತಡವಾಗಿ ಮರಳುತ್ತಿದ್ದೆ. ಒಂದು ದಿನ, ದೇವಭೋಜನದ ರೊಟ್ಟಿಗೋಸ್ಕರ ಹಾಗೂ ಗತಿಸಿದವರನ್ನು ಕುರಿತ ಪ್ರಾರ್ಥನೆಗೋಸ್ಕರ ನನ್ನ ವಶ ಹತ್ತು ಕೊಪೆಕ್ ಕೊಟ್ಟಿದ್ದರು. ಅವನ್ನು ಹೇಗೋ ನಾನು ಖರ್ಚುಮಾಡಿಬಿಟ್ಟೆ. ಪರಿಣಾಮವಾಗಿ ಧರ್ಮಾಧಿಕಾರಿ ವೇದಿಕೆಯಿಂದ ಹೊತ್ತುತಂದ ತಟ್ಟೆಯಿಂದ ಬೇರೆ ಯಾರದೋ ಬ್ರೆಡ್ಡನ್ನೆತ್ತಿಕೊಂಡು ನಾನು ಮನೆಗೆ ನಡೆದೆ.

ಆಟಗಳೆಂದರೆ ನನಗೆ ಅತ್ಯಂತ ಪ್ರೀತಿ. ಯಾವ ಬೇಸರವೂ ಇಲ್ಲದೆ ಎಷ್ಟು ಹೊತ್ತು ಬೇಕಾದರೂ ಆಡುತ್ತಿದ್ದೆ. ನಾನು ಗಟ್ಟಿಮುಟ್ಟಾಗಿ ಚುರುಕಾಗಿದ್ದೆ. ಬಲು ಬೇಗನೆ, ಚೆಂಡಾಟ, ಗೋಲಿ ಮತ್ತು ಸ್ಕಿಟಲ್ಸ್ ಆಟದಲ್ಲಿ, ನಮ್ಮ ಜಿಲ್ಲೆಯಲ್ಲೆಲ್ಲಾ ನಾನು ಹೆಸರುಗೊಳಿಸಿದೆ.

ಲೆಂಟ್‌ಹಬ್ಬದ ಅವಧಿಯಲ್ಲಿ ನಾನು ಸರಿಯಾದ ಮತಪ್ರವೇಶಕ್ಕೆ ಸಿದ್ಧನಾಗಬೇಕಾಯಿತು. ಅಪರಾಧಕಥನಕ್ಕೋಸ್ಕರ ನಾನು, ನಮ್ಮ ನೆರೆಹೊರೆಯವನಾದ ಪಾದ್ರಿ ಡೋರಿಮೆಡೊಂಟ್ ಪೊಕ್ರೋವ್‌ಸ್ಕಿಯ ಬಳಿಗೆ ಹೋದೆ. ಆತ ಕಠಿನಮನಸ್ಕನೆಂದೂ ಆತನ ವಿಷಯದಲ್ಲಿ ನಾನು ಮಾಡಿದ್ದ ಪಾಪಗಳನ್ನೆಲ್ಲ ತಿಳಿದಿದ್ದನೆಂದೂ ನಾನು ಭಾವಿಸಿದ್ದೆ. ಆತನ ಬೇಸಗೆಮನೆಯನ್ನು ಕಲ್ಲುಗಳನ್ನೆಸೆದು ನಾನು ಕೆಡಿಸಿದ್ದೆ; ಆತನ ಮಕ್ಕಳೊಡನೆ ಜಗಳವಾಡಿದ್ದೆ; ಆತನ ಕೆಂಗಣ್ಣ ನೋಟಕ್ಕೆ ನನ್ನನ್ನು ಒಳಗುಮಾಡಿರಬಹುದಾದ ಇನ್ನೆಷ್ಟೋ ಪಾತಕಗಳನ್ನು ಎಸಗಿದ್ದೆ. ಗಾಳಿ ಓಡಾಡದ ಆ ಪುಟ್ಟ ದೇವಮಂದಿರದಲ್ಲಿ, ತಪ್ಪೊಪ್ಪಿಕೊಳ್ಳಲು ನನ್ನ ಸರದಿ ಕಾಯುತ್ತ ನಾನು ನಿಂತಾಗ, ಈಯೆಲ್ಲ ವಿಷಯಗಳು ನನ್ನ ಮನಸ್ಸಿನಲ್ಲಿದ್ದುವು; ನನ್ನ ಹೃದಯ ಯಾತನೆಯನ್ನುಂಟು ಮಾಡುತ್ತ ಬಡಿದುಕೊಳ್ಳುತ್ತಿತ್ತು.

ಆದರೆ ಪಾದ್ರಿ, ಡೋರಿಮೆಡೊಂಟ್, ಹುಸಿಮುನಿಸಿನಿಂದ ನನ್ನನ್ನು ಇದಿರ್ಗೊಂಡು ಉದ್ಗರಿಸಿದ:

"ಆ, ನಮ್ಮ ನೆರೆಮನೆಯವನು! ಹುಂ, ಮೊಣಕಾಲು ಊರು. ನಿನ್ನ ಪಾಪಗಳನ್ನು ಹೇಳು."

ಭಾರವಾದ ಮಕಮಲ್ಲಿನ ತುಂಡಿನಿಂದ ನನ್ನ ತಲೆಯನ್ನು ಆತ ಮುಚ್ಚಿದ. ಮೇಣಬ ಹಾಗೂ ಧೂಪದ ವಾಸನೆ ನನ್ನನ್ನು ಉಸಿರುಕಟ್ಟಿಸಿತು. ನಾನು ಹೇಳಲು ಇಷ್ಟಪಡದಿದ್ದ ಮಾತುಗಳನ್ನು ಉಚ್ಚರಿಸುವುದು ಮತ್ತಷ್ಟು ಕಷ್ಟವಾಯಿತು.

"ನಿನ್ನ ಹಿರಿಯರಿಗೆ ನೀನು ವಿಧೇಯನಾಗಿದ್ದೀಯೇನು?"

"ಇಲ್ಲ."

"'ನಾನು ಪಾಪಿ'—ಅಂತ ಹೇಳು."

ನನಗೇ ಅಚ್ಚರಿಯಾಗುವಂತೆ ಒಮ್ಮೆಲೆ ನಾನು ಗಟ್ಟಿಯಾಗಿ ನುಡಿದೆ:

"ದೇವಭೋಜನದ ರೊಟ್ಟಿ ನಾನು ಕದ್ದೆ."

"ಏನಂದೆ? ಎಲ್ಲಿ?" ಎಂದು ಧರ್ಮಗುರು ನಿಧಾನವಾಗಿ, ಆದರೆ ತುಸು ಯೋಚಿಸಿದ ಬಳಿಕ ಕೇಳಿದ.

"ಮೂವರು ಸಂತರ ಇಗರ್ಜಿಯಲ್ಲಿ, ಪೊಕ್ರೋವ್ ದೇವಮಂದಿರದಲ್ಲಿ, ನಿಕೊಲಾ—"

"ನಿಲ್ಲು, ನಿಲ್ಲು. ಈ ಎಲ್ಲಾ ಇಗರ್ಜಿಗಳಲ್ಲೂ ಕದ್ದೆ ಅಂತಲೇ ನೀನು ಹೇಳೋದು? ಹಾಗೆ ಮಾಡಿದ್ದು ತಪ್ಪು, ಮಗನೆ—ಪಾಪ. ಅರ್ಥವಾಯ್ತ?"

"ಆಯ್ತು."

"'ನಾನು ಪಾಪಿ' ಅಂತ ಹೇಳು, ಬುದ್ಧಿ ಇಲ್ಲದ ಹುಡುಗ—ತಿನ್ನೋದಕ್ಕೋಸ್ಕರ ಅದನ್ನು ಕದ್ದಿಯಾ?"

"ಕೆಲವುಸಾರೆ ತಿಂದೆ. ಆದರೆ ಕೆಲವುಸಾರೆ, ಸ್ಕಿಟ್ಲ್‌ನಲ್ಲಿ ಹಣ ಕಳೆದುಹೋಗಿತ್ತು. ದೇವಭೋಜನದ ರೊಟ್ಟೀನ ಮನೆಗೆ ತರಲೇಬೇಕಾಗ್ತಿತ್ತು. ಹೀಗಾಗಿ ಕದ್ದೆ."

ಮತ್ತೂ ಕೆಲಪ್ರಶ್ನೆಗಳನ್ನು ಕೇಳುತ್ತ ಪಾದ್ರಿ ಡೋರಿಮೆಡೊಂಟ್, ಅದೇನನ್ನೋ ಇಳಿಧ್ವನಿಯಲ್ಲಿ ಗೊಣಗಿದ. ಬಳಿಕ ಒಮ್ಮೆಲೆ, ಕಠಿನ ಸ್ವರದಲ್ಲಿ ಕೇಳಿದ:

"ಗುಪ್ತ ಅಚ್ಚುಕೂಟದವರು ಮುದ್ರಿಸಿರೋ ಪುಸ್ತಕಗಳನ್ನು ನೀನು ಎಂದಾದರೂ ಓದಿದ್ದೀಯಾ?"

ಪ್ರಶ್ನೆ ನನಗೆ ಅರ್ಥವಾಗಲಿಲ್ಲ.

"ಏನಂದಿರಿ?" ಎಂದು ಕೇಳಿದೆ.

"ನಿಷಿದ್ಧ ಪುಸ್ತಕಗಳು—ಅವನ್ನು ಎಂದಾದರೂ ನೀನು ಓದಿದ್ದೀಯಾ?"

"ಇಲ್ಲ, ಓದಿಲ್ಲ."

"ಸರಿ. ನಿನ್ನ ಪಾಪಗಳನ್ನು ಮನ್ನಿಸಲಾಗಿದೆ. ಏಳು."

ಸ್ವಲ್ಪಮಟ್ಟಿನ ಆಶ್ಚರ್ಯದಿಂದ ನಾನು ಆತನ ಮುಖವನ್ನು ನೋಡಿದೆ. ಮುಖಭಾವ ದಯಾಪೂರ್ಣವಾಗಿತ್ತು, ಯೋಚನಾಮಗ್ನವಾಗಿತ್ತು. ನನಗೆ ನಾಚಿಕೆ ಎನಿಸಿತು. ಅಪರಾಧ ಕಥನಕ್ಕೆ ನನ್ನನ್ನು ಕಳುಹಿದಾಗ ನನ್ನ ಯಜಮಾನಿತಿ, ಎಲ್ಲ ತಪ್ಪುಗಳನ್ನೂ ನಾನು ತಿಳಿಸಿಬಿಡುವಂತೆ ಹೆದರಿಕೆ ಹುಟ್ಟಿಸುವಂತಹ ಅನೇಕ ವಿಷಯಗಳನ್ನು ಹೇಳಿದ್ದಳು.

"ನಿಮ್ಮ ಬೇಸಗೆಮನೆಗೆ ನಾನು ಕಲ್ಲೆಸೆದೆ," ಎಂದೆ.

ಧರ್ಮಗುರು ತಲೆಯನ್ನೆತ್ತಿದ.

"ಅದೂ ತಪ್ಪೇ. ಓಡಿ ಹೋಗು ಈಗ."

"ನಿಮ್ಮ ನಾಯಿಗೂ ಕಲ್ಲೆಸೆದೆ."

ನನ್ನನ್ನು ದಾಟಿನೋಡುತ್ತ ಪಾದ್ರಿ ಡೋರಿಮೆಡೊಂಟ್ ಅಂದ:

"ಮುಂದಿನವರು!"

ನೋವಿನ ಹಾಗೂ ಮೋಸಹೋದೆನೆಂಬ ಭಾವನೆಯಿಂದ ನಾನು ಹೊರಟುಹೋದೆ. ಈ ಅಪರಾಧಕಥನದ ನಿರೀಕ್ಷೆಯಿಂದ ನನ್ನ ನರಗಳೆಲ್ಲ ಮಿಡುಕಿದ್ದುವು. ಆದರೆ, ಅಲ್ಲೇನೂ ಇರಲೇ ಇಲ್ಲ. ಸ್ವಾರಸ್ಯಪೂರ್ಣವೂ ಆಗಿರಲಿಲ್ಲ. ರಹಸ್ಯಗ್ರಂಥಗಳ ಬಗೆಗೆ ಆತ ಕೇಳಿದ್ದ ಪ್ರಶ್ನೆಯೊಂದೇ ಸ್ವಾರಸ್ಯದ್ದಾಗಿತ್ತು. ನೆಲಮಾಳಿಗೆಯಲ್ಲಿ ಆ ವಿದ್ಯಾರ್ಥಿ ಹೆಂಗಸರಿಗೆ ಓದಿ ಹೇಳುತ್ತಿದ್ದ ಪುಸ್ತಕದ ನೆನಪಾಯಿತು. 'ಭೀಷ್' ನೆನಪೂ ಆಯಿತು. ಆತನಲ್ಲೂ ಅರ್ಥವಾಗದ ಚಿತ್ರಗಳಿದ್ದ ದಪ್ಪಗಿನ ಕಪ್ಪು ಪುಸ್ತಕಗಳು ಅನೇಕವಿದ್ದುವು.

ಮಾರನೆಯ ದಿನ ಹದಿನೈದು ಕೊಪೆಕ್‌ಗಳನ್ನಿತ್ತು ನನ್ನನ್ನು ಮತದೀಕ್ಷೆಗೆ ಕಳುಹಿದರು.

ಆ ವರ್ಷ ಈಸ್ಟರ್ ಹಬ್ಬ ತಡವಾಗಿ ಬಂತು. ಹಿಮ ಆಗಲೇ ಕರಗಿತ್ತು. ಒಣಗಿದ್ದ ಬೀದಿಗ ಮೇಲೆ ಧೂಳಿನ ಪುಟ್ಟ ಮುದ್ದೆಗಳ ಸುರುಳಿಗಳಿದ್ದುವು. ಸೂರ್ಯಪ್ರಕಾಶವಿದ್ದು, ಆಹ್ಲಾದಕ ವಾಗಿತ್ತು ಹವಾಮಾನ.

ಇಗರ್ಜಿ ಗೋಡೆಯ ಬಳಿ ಕೆಲಕಾರ್ಮಿಕರು, ಉತ್ಸಾಹದಿಂದ ಸ್ಕಿಟ್ಲ್ ಆಟ ನಡಸಿದ್ದರು ಮತದೀಕ್ಷೆಗೆ ಮತ್ತೂ ಹೊತ್ತಿರುತ್ತದೆಂದು ನಾನು ಭಾವಿಸಿದೆ.

"ನನಗೂ ಆಟವಾಡೋದಕ್ಕೆ ಬಿಡ್ತೀರಾ?" ಎಂದು ನಾನು ಕೇಳಿದೆ.

"ಒಂದು ಆಟಕ್ಕೊಂದು ಕೊಪೆಕ್," ಎಂದು, ಕೆಂಪುತಲೆಯ, ಸಿಡುಬಿನ ಕಲೆಗಳಿದ ಮುಖದ ಮನುಷ್ಯನೊಬ್ಬ ಹೆಮ್ಮೆಯಿಂದ ಗಟ್ಟಿಯಾಗಿ ನುಡಿದ.

ಅಷ್ಟೇ ಹೆಮ್ಮೆಯಿಂದ ನಾನು ಉತ್ತರವಿತ್ತೆ:

"ಎಡದಿಂದ ಎರಡನೇ ಸ್ಕಿಟ್ಲ್ ಕೆಳಗೆ ಮೂರು ಕೊಪೆಕ್ ಇಡ್ತೀನಿ."

"ಎಲ್ಲಿ, ಹಣ ನೋಡೋಣ!"

ಸರಿ, ನಡೆಯಿತು ಆಟ!

ಹದಿನೈದು ಕೊಪೆಕ್‌ಗಳ ನಾಣ್ಯಕ್ಕೆ ಚಿಲ್ಲರೆ ಪಡೆದು, ಮೂರನ್ನು ನನ್ನ ಸ್ಕಿಟ್ಲ್‌ನ ಕೆಳಗಿ ಸಿದೆ. ಆ ಸ್ಕಿಟ್ಲನ್ನು ಉರುಳಿಸಿದವನಿಗೆ ನನ್ನ ಹಣ ಸಿಗುತ್ತಿತ್ತು. ಗುರಿತಪ್ಪಿದವನು ನನ ಮೂರು ಕೊಪೆಕ್ ಕೊಡಬೇಕಾಗುತ್ತಿತ್ತು. ಚೆನ್ನಾಗಿತ್ತು ನನ್ನ ಅದೃಷ್ಟ. ಇಬ್ಬರು ನ ಸ್ಕಿಟ್ಲ್‌ಗೆ ಗುರಿ ಇಟ್ಟರು. ಇಬ್ಬರಿಗೂ ಗುರಿತಪ್ಪಿತು. ವಯಸ್ಕರಾದವರಿಂದ ಆರು ಕೊಪೆಕ ಗಳನ್ನು ನಾನು ಗೆದ್ದಹಾಗಾಯಿತು! ಇದರಿಂದ ಉತ್ಸಾಹಿತನಾಗಿ ನಾನು ಉಬ್ಬಿಹೋದೆ.

"ಅವನ ಮೇಲೆ ಕಣ್ಣಿಡಿ, ಸ್ನೇಹಿತರೇ. ಗೆದ್ದದ್ದನ್ನು ಎತ್ಕೊಂಡು ಓಡಿಹೋದಾನು ಎಂದು ಆಟಗಾರರಲ್ಲೊಬ್ಬ ನುಡಿದ.

ಈ ಮಾತು ನನ್ನನ್ನು ನೋಯಿಸಿತು.

"ಎಡಕ್ಕಿರುವ ಕೊನೇ ಕಿಟ್ಲ್‌ನ ಕೆಳಗೆ ಒಂಭತ್ತು ಕೊಪೆಕ್," ಎಂದು ನಾನು ತಕ್ಷ ತೀಪ್ರ ಧ್ವನಿಯಲ್ಲಿ ನುಡಿದೆ.

ನನ್ನ ಅಬ್ಬರ ಆಟಗಾರರ ಮೇಲೆ ಯಾವ ಪರಿಣಾಮವನ್ನೂ ಮಾಡಿದಂತೆ ತೋರಲಿ ಆದರೆ, ನನ್ನಷ್ಟೇ ವಯಸ್ಸಿನ ಹುಡುಗನೊಬ್ಬ ಎಚ್ಚರಿಕೆ ನುಡಿದ:

"ಅವನ ಮೇಲೆ ನೀವು ಕಣ್ಣಿಡಿ! ಅವನೊಬ್ಬ ಅದೃಷ್ಟವಂತ ಪಿಶಾಚಿ. ನಾನು ಅವನನ ಬಲ್ಲೆ!"

"ಪಿಶಾಚಿ ಅಂದೆಯಾ? ಹುಂ-ಂ-ಂ, ನೋಡೋಣ!" ಎಂದು ತೊಗಲು ಹದಮಾಡುವ ನಂತೆ ವಾಸನೆ ಬರುತ್ತಿದ್ದ ತೆಳ್ಳಗಿನ ಕೂಲಿಕಾರನೊಬ್ಬ ಉತ್ತರವಿತ್ತ.

ಜಾಗರೂಕತೆಯಿಂದ ಆತ ಗುರಿ ಇಟ್ಟು ನನ್ನ ಸ್ಕಿಟ್ಲನ್ನು ಉರುಳಿಸಿದ.

"ಈಗ ಏನಂತೀಯಾ?" ಎಂದು ನನ್ನೆಡೆಗೆ ಬಾಗಿ ಆತ ಕೇಳಿದ.

"ಬಲಕ್ಕಿರುವ ಕೊನೇ ಸ್ಕಿಟ್ಲ್ ಕೆಳಗೆ ಪುನಃ ಮೂರು ಕೊಪೆಕ್," ಎಂದು ನಾನ ಪ್ರತ್ಯುತ್ತರವಿತ್ತೆ.

"ಅವನ್ನೂ ತಗೊಂಡುಬಿಡ್ತೀನಿ," ಎಂದು ತೊಗಲಿನ ಕೆಲಸಗಾರ ಜಂಭಕೊಚ್ಚಿದ. ಆದರೆ, ಗುರಿ ತಪ್ಪಿತು.

ನಿಯಮಗಳ ಪ್ರಕಾರ ಒಂದು ಸ್ಕಿಟ್ಲ್‌ನ ಕೆಳಗೆ ಒಂದೇ ಸಮನೆ ಮೂರಕ್ಕಿಂತಲೂ ಹೆಚ್ಚು ಸಲ ಹಣ ಇಡುವಂತಿಲ್ಲ. ಇತರರ ಹಣಕ್ಕೋಸ್ಕರ ನಾನು ಆಡತೊಡಗಿದೆ. ಮತ್ತೂ ನಾಲ್ಕು ಕೊಪೆಕ್‌ಗಳನ್ನೂ ಗಳಿಸಿದೆ. ಪುನಃ ಹಣವಿಡಲು ನನ್ನ ಸರದಿ ಬಂದಾಗ ಎಲ್ಲವನ್ನೂ ಕಳೆದು ಕೊಂಡೆ. ಹೀಗಾಗುವುದಕ್ಕೂ ಪ್ರಾರ್ಥನೆ ಮುಗಿಯುವುದಕ್ಕೂ ಸರಿಹೋಯಿತು. ಘಂಟೆಗಳು ಬಾರಿಸತೊಡಗಿದುವು. ಇಗರ್ಜಿಯಿಂದ ಜನರು ಹೊರಬರಲಾರಂಭಿಸಿದರು.

ನನ್ನ ತಲೆಗೂದಲನ್ನು ಅಮುಕಿ ಹಿಡಿಯಲೆತ್ನಿಸುತ್ತಾ, ತೊಗಲಿನ ಕೆಲಸಗಾರ ಕೇಳಿದ:

"ಕೈಸುಟ್ಟುಕೊಂಡಿಯಾ?"

ನಾನು ಅವನ ಕೈಗೆ ಸಿಗದೆ ಓಡಿಹೋದೆ. ಭಾನುವಾರದ ಉಡುಗೆ ಧರಿಸಿದ್ದ ಯುವಕ ನೊಬ್ಬನನ್ನು ಸಮಾಪಿಸಿ, ವಿನಯದಿಂದ ಕೇಳಿದೆ:

"ಇದೇ ಇವತ್ತು ನಿಮಗೆ ಮತದೀಕ್ಷೆಯಾಯಿತೆ?"

"ಆಗಿದ್ದರೆ ಏನಂತೆ?" ಎಂದು, ನನ್ನನ್ನು ಸಂದೇಹದಿಂದ ನೋಡುತ್ತಾ, ಆತ ಉತ್ತರವಿತ್ತ.

ಮತದೀಕ್ಷೆಯ ವಿಧಾನವನ್ನು, ಧರ್ಮಗುರು ಏನು ಹೇಳಿದರೇನೆಂಬುದನ್ನು, ದೀಕ್ಷೆ ಪಡೆಯು ವಾತ ಏನೇನು ಮಾಡಬೇಕಾಗುತ್ತದೆಂಬುದನ್ನು, ನನಗೆ ತಿಳಿಸಬೇಕೆಂದು ನಾನು ಆತನನ್ನು ಕೇಳಿದೆ.

ಯುವಕ ತನ್ನ ತಲೆತಗ್ಗಿಸಿ, ಗೂಳಿಯಂತೆ ಹೂಂಕರಿಸಿದ:

"ಮತದೀಕ್ಷೆಯನ್ನು ತಪ್ಪಿಸಿ, ಓಡಿಹೋಗಿದ್ದೆಯಾ, ನಾಸ್ತಿಕ? ಸರಿ. ನಿನಗೆ ಏನನ್ನೂ ಹೇಳೋದಿಲ್ಲ. ನಿನ್ನ ತಂದೆ ಚೆನ್ನಾಗಿ ಬಾರಿಸಲಿ ನಿನಗೆ!"

ನನ್ನನ್ನು ಪ್ರಶ್ನಿಸತೊಡಗಿ, ನಾನು ಮತದೀಕ್ಷೆ ಪಡೆದಿಲ್ಲವೆಂಬುದನ್ನು ಕಂಡುಹಿಡಿಯುವ ರೆಂಬ ನಂಬಿಕೆಯಿಂದಲೇ ನಾನು ಮನೆಗೆ ಓಡಿದೆ.

ಆದರೆ, ನನ್ನನ್ನು ಅಭಿನಂದಿಸಿದ ಬಳಿಕ, ಮುದುಕಿ ಒಂದೇ ಒಂದು ಪ್ರಶ್ನೆಯನ್ನು ಕೇಳಿದಳು:

"ಧರ್ಮಾಧಿಕಾರಿಗೆ ಎಷ್ಟು ಕೊಟ್ಟೆ?"

ಪ್ರಶ್ನೆಗೊಂದು ಉತ್ತರ ಎಂದುಕೊಂಡು, ನಾನೆಂದೆ:

"ಐದು ಕೊಪೆಕ್‌ಗಳು."

"ಬೆಪ್ಪ. ಮೂರು ಧಾರಾಳ ಸಾಕಾಗ್ತಿತ್ತು. ಏಳು ನಿನಗೋಸ್ಕರವೇ ಉಳೀತಿತ್ತು."

ಅದು ವಸಂತ ಋತುವಾಗಿತ್ತು. ಪ್ರತಿದಿನವೂ ಹಿಂದಿನ ದಿನಕ್ಕಿಂತ ಹೆಚ್ಚು ಶುಭ್ರವಾದ ಹೆಚ್ಚು ಸೊಗಸಾದ ಪೋಷಾಕು ಧರಿಸಿ ಬರುತ್ತಿತ್ತು. ಎಳೆಹುಲ್ಲಿನಿಂದಲೂ ಬರ್ಚ್‌ಗಿಡಗಳ ಹೊಸ ಹಸುರಿನಿಂದಲೂ ಮತ್ತೇರಿಸುವ ಸುವಾಸನೆ ಹೊರಡುತ್ತಿತ್ತು. ಹೊಲಗಳಿಗೆ ಹೊರಟು ಹೋಗಲು, ಅಲ್ಲಿ ಬೆಚ್ಚಗಿನ ಭೂಮಿಯ ಮೇಲೆ ಆಕಾಶ ನೋಡುತ್ತ ಮಲಗಿ ಬೆಳ್ಳಕ್ಕಿಗಳ ಇಂಚರಕ್ಕೆ ಕಿವಿಗೊಡಲು, ತಡೆಯಲಾಗದ ಬಯಕೆಯಾಗುತ್ತಿತ್ತು. ನಾನಾದರೋ, ಚಳಿಗಾಲದ ಉಡುಪು ಗಳ ಧೂಳು ಝಾಡಿಸಿ ಅವನ್ನು ಟ್ರಂಕುಗಳಲ್ಲಿ ಮಡಚಿ ಇಡಲು ನೆರವಾಗುತ್ತ, ತಂಬಾಕದೆಲೆ

ಯನ್ನು ಪುಡಿಮಾಡುತ್ತ, ಪೀಠೋಪಕರಣಗಳ ಧೂಳು ಹೊಡೆಯುತ್ತ, ಬೆಳಗಿನಿಂದ ರಾತ್ರಿ ವರೆಗೆ ಅಪ್ರಿಯವೂ ಅನಗತ್ಯವೂ ಆಗಿ ಕಂಡ ಕೆಲಸಗಳನ್ನೆ ಮಾಡುತ್ತ ಇಲ್ಲೇ ಇದ್ದೆ.

ಬಿಡುವಿನ ವೇಳೆಯಲ್ಲಿ ಏನು ಮಾಡುವುದಕ್ಕೂ ಇರಲಿಲ್ಲ. ನಮ್ಮ ನೀರಸ ಬೀದಿಯ ಯಾವ ಆಕರ್ಷಣೆಯೂ ಇರಲಿಲ್ಲ. ಅದರಾಚೆಗೆ ಹೋಗುವುದಕ್ಕಂತೂ ಸಮ್ಮತಿ ಇರಲಿಲ್ಲ. ನಮ್ಮ ವಠಾರ, ಆಯಾಸಗೊಂಡ ಸಿಡುಕಿನ ಹೊಂಡ ಅಗೆಯುವವರಿಂದ, ಕೂದಲು ಕೆದರಿ ಅಡುಗೆ ಸ್ತ್ರೀಯರು ಮತ್ತು ಅಗಸಗಿತ್ತಿಯರಿಂದ, ತುಂಬಿರುತ್ತಿತ್ತು. ಪ್ರತಿ ಸಂಜೆಯೂ ಅತ್ಯಂ ಹೊಲಸಾದ ಬೇಟಕೂಟ ನಡೆಯುತ್ತಿದ್ದುವು. ಇದು ಎಷ್ಟೊಂದು ತುಚ್ಛವಾಗಿ ಆಕ್ಷೇಪಕರವಾ ನನಗೆ ಕಂಡಿತೆಂದರೆ, ನಾನು ಕುರುಡನಾಗಿರಬಾರದಿತ್ತೆ—ಎನಿಸಿತು.

ನಾನು ಕತ್ತರಿಯನ್ನೂ ಒಂದಿಷ್ಟು ಬಣ್ಣದ ಕಾಗದವನ್ನೂ ತೆಗೆದುಕೊಂಡು ಭಾವಣಿ ನ್ನೇರಿದೆ. ಅಲ್ಲಿ, ಜರಿಯ ಆಕೃತಿಯಲ್ಲಿ ಕಾಗದವನ್ನು ಕತ್ತರಿಸಿ ಹಲಗೆಗಳನ್ನು ಅಲಂಕರಿಸಿ ನನ್ನ ಬೇಸರ ನೀಗಲು ಅದು ಸ್ವಲ್ಪವಾದರೂ ಸಹಾಯವಾಯಿತು. ಜನರು ಕಡಮೆ ನಿದ್ರಿಸ ತ್ತಿದ್ದ, ಕಡಮೆ ಜಗಳವಾಡುತ್ತಿದ್ದ, ಪಟ್ಟುಹಿಡಿದು ತಮ್ಮ ದೂರುಗಳನ್ನು ದೇವರ ಮುಂ ಒಪ್ಪಿಸದ ಅಥವಾ ತಮ್ಮ ಒರಟು ಅಭಿಪ್ರಾಯಗಳಿಂದ ಇತರರನ್ನು ಪದೇಪದೇ ನೋಯಿಸ ಜನರಿರುವ ಕಡೆಗೆ ಹೊರಟುಹೋಗುವ ತೀವ್ರ ಬಯಕೆ ನನ್ನನ್ನು ಆವರಿಸಿತು.

ಈಸ್ಟರ್ ಹಬ್ಬಕ್ಕೆ ಹಿಂದಿನ ಶನಿವಾರ, ಒರಾನ್ಸ್ಕಿ ಮಠದಿಂದ ನಮ್ಮ ಶಹರಕ್ಕೆ, ಪವಾ ಪ್ರತಿಮೆಯಾದ ವ್ಲಾಡಿ ಮಿರ್‌ಸ್ಕಾಯಾ ಕನ್ನೆಯನ್ನು ತಂದರು. ಜೂನ್ ಮಧ್ಯದವರೆಗೂ ಕನ ಶಹರದ ಅತಿಥಿಯಾಗಿರಬೇಕೆಂದು ಗೊತ್ತಾಗಿತ್ತು. ಆ ನಡುವೆ ಆಕೆ ಪ್ರತಿಯೊಬ್ಬ ಶಹ ವಾಸಿಯ ಮನೆಗೂ ಭೇಟಿಕೊಡಬೇಕೆಂದು ಏರ್ಪಾಟಾಗಿತ್ತು.

ವಾರದ ಮಧ್ಯೆ ಒಂದು ಪ್ರಾತಃಕಾಲ ನನ್ನ ಮಾಲಿಕರ ಮನೆಗೆ ಆಕೆಯನ್ನು ತಂದರು ಹಿತ್ತಾಳೆ ಪಾತ್ರೆಗಳನ್ನು ಉಜ್ಜುತ್ತ ನಾನು ಅಡುಗೆಮನೆಯಲ್ಲಿದ್ದೆ. ಪಕ್ಕದ ಕೊಠಡಿಯಿಂ ಕಿರಿಯ ಯಜಮಾನಿತಿ ಬೆದರಿದ ಧ್ವನಿಯಲ್ಲಿ ಕೂಗಿದುದು ನನಗೆ ಕೇಳಿಸಿತು:

"ಹೋಗು, ಎದುರುಬಾಗಿಲನ್ನು ತೆರೆ! ಒರನ್ಸ್ಕಾಯಾ ಕನ್ನೆಯನ್ನು ತರುತ್ತಿದ್ದಾರೆ!"

ಎಣ್ಣೆಯ ಜಿಗುಟೂ ಇಟ್ಟಿಗೆಯ ಪುಡಿಯೂ ನನ್ನ ಕೈಗಳಿಗೆ ಮೆತ್ತಿದ್ದು ಮಲಿನವಾಗಿ ನಾನು, ಕೆಳಕ್ಕಿಳಿದು ಓಡಿ ಬಾಗಿಲನ್ನು ತೆರೆದೆ. ಹೊಸ್ತಿಲಲ್ಲಿ ಯುವಕ ಸನ್ಯಾಸಿಯೊಬ್ಬ, ಒಂದ ಕೈಯಲ್ಲಿ ಕಂದೀಲನ್ನೂ ಇನ್ನೊಂದರಲ್ಲಿ ಧೂಪಪಾತ್ರೆಯನ್ನೂ ಹಿಡಿದು ನಿಂತಿದ್ದ.

"ಬಹಳ ತಡಮಾಡ್ತೀಯಾ. ಬಾ, ಸಹಾಯ ಮಾಡು," ಎಂದು ಆತ ಗೊಣಗಿದ.

ಶಹರವಾಸಿಗಳಿಬ್ಬರು ಭಾರವಾದ ಪ್ರತಿಮೆಯ ಚೌಕಟ್ಟನ್ನು, ಅಗಲ ಕಿರಿದಾದ ಮಹ ಮೆಟ್ಟಲುಗಳ ಮೇಲೆ ಹೊತ್ತರು. ಒಂದು ಮೂಲೆಗೆ ನನ್ನ ಭುಜ ಕೊಟ್ಟು, ನನ್ನ ಕೊಳಕ ಕೈಗಳಿಂದ ಅದನ್ನು ಹಿಡಿಯುತ್ತ, ನಾನು ಸಹಾಯ ಮಾಡಿದೆ. ನಮ್ಮ ಹಿಂದುಗಡೆ ದಪ್ಪಗಿ ಸನ್ಯಾಸಿಗಳು ಕೆಲವರು, ಮನಸ್ಸಿಲ್ಲದ ಮನಸ್ಸಿನಿಂದ ದಪ್ಪ ಗಂಟಲಲ್ಲಿ ಜಪಿಸುತ್ತ ಸದ್ದುಮಾಡ ತ್ತಿದ್ದರು:

"ಪವಿತ್ರ ಕನ್ನೆಯೇ, ನಮ್ಮ ಪರವಾಗಿ ನೀನು ಒಳ್ಳೆಯ ಮಾತು—"

ಕೊಳಕು ಕೈಗಳಲ್ಲಿ ಆಕೆಯನ್ನು ಹೊತ್ತುದಕ್ಕೆ, ನನ್ನ ತೋಳುಗಳೇ ಉದುರಿ ಹೋಗ

ವಂತೆ ಆಕೆ ಮಾಡಬಹುದು," ಎಂದು, ಸಂಕಟಪಡುತ್ತ ನಾನು ಯೋಚಿಸಿದೆ.

ಪ್ರತಿಮೆಯನ್ನು ಒಂದು ಮೂಲೆಯಲ್ಲಿ ಬಿಳಿಯ ವಸ್ತ್ರದಿಂದ ಮುಚ್ಚಿದ್ದ ಎರಡು ಕುರ್ಚಿಗಳ ಮೇಲೆ ಇರಿಸಿದರು. ಎರಡೂ ಪಕ್ಕಗಳಲ್ಲಿ ಅದನ್ನು, ಇಬ್ಬಿಬ್ಬರು ಯುವಕರಾದ ಸ್ಫುರದ್ರೂಪಿಗಳಾದ ಸನ್ಯಾಸಿಗಳು ಹಿಡಿದು ನಿಂತಿದ್ದರು. ಅವರ ಶುಭ್ರಕಣ್ಣುಗಳೂ ಮೃದುತಲೆಗೂದಲೂ ಸಂತುಷ್ಟಮುಖಗಳೂ ಅವರು ದೇವತೆಗಳೇನೋ ಎಂಬ ಭಾವನೆಯನ್ನು ಹುಟ್ಟಿಸುತ್ತಿದ್ದುವು.

ಸೇವೆ ಆರಂಭವಾಯಿತು.

"ದೇವರ ಪೂಜ್ಯಮಾತೆಯೇ...." ಎಂದು, ಗಾತ್ರದ ಧರ್ಮಗುರುವೊಬ್ಬ, ಕೂದಲ ರಾಶಿಯ ಕೆಳಗೆ ಅವಿತಿದ್ದ ಉಬ್ಬುಕಿವಿಯನ್ನು ಮುಟ್ಟುತ್ತ ಕರ್ಕಶವಾಗಿ ಜಪಿಸಿದ.

"ಪವಿತ್ರಕನ್ನೆಯೇ ನಮ್ಮ ಮೇಲೆ ಕೃಪೆಯನ್ನು ತೋರು," ಎಂದು ಸನ್ಯಾಸಿಗಳು ಬೇಸರದಿಂದ ಹಾಡಿದರು.

ಕನ್ನೆಯನ್ನು ನಾನು ಇಷ್ಟಪಟ್ಟೆ. ಅಜ್ಜಿಯ ಕಥೆಗಳ ಪ್ರಕಾರ, ಬಡವರಿಗೆ ಸಮಾಧಾನವಾಗಲೆಂದು, ಸಂತೃಪ್ತಿಯ ಹೂಗಳನ್ನೂ ಬಿಳಿತಾದುದು ಸುಂದರವಾದುದು ಎಲ್ಲವನ್ನೂ ಭೂಮಿಯ ಮೇಲೆ ಚೆಲ್ಲಿದವಳು ಆಕೆ. ಆಕೆಯನ್ನು ಚುಂಬಿಸುವ ಸಮಯಬಂದಾಗ, ವಯಸ್ಕರು ಹೇಗೆ ಮಾಡಿದರೆಂಬುದನ್ನು ಗಮನಿಸದಿದ್ದ ನಾನು, ನಡುಗುತ್ತ ನನ್ನ ತುಟಿಗಳನ್ನು ಆಕೆಯ ಬಾಯಿಯ ಮೇಲೆ ಒತ್ತಿದೆ.

ಯಾರದೋ ಬಲಿಷ್ಠ ತೋಳು ಬಾಗಿಲ ಬಳಿಯ ಮೂಲೆಗೆ ನನ್ನನ್ನು ಎಸೆಯಿತು. ಸನ್ಯಾಸಿಗಳು ಪ್ರತಿಮೆಯನ್ನು ಹೊತ್ತು ಹೊರಕ್ಕೆ ಒಯ್ದುದು ನನಗೆ ನೆನಪಿಲ್ಲ. ಆದರೆ, ನನ್ನ ಯಜಮಾನನೂ ಯಜಮಾನಿತಿಯರೂ ನೆಲದ ಮೇಲೆ ಕುಳಿತಿದ್ದ ನನ್ನ ಸುತ್ತಲೂ ನಿಂತು, ನನಗೆ ಏನು ಸಂಭವಿಸಬಹುದೆಂಬುದನ್ನು ಚರ್ಚಿಸುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ.

ಸಣ್ಣನೆ ಬೈಯುತ್ತಾ ನನ್ನ ಯಜಮಾನನೆಂದ:

"ನಾವು ಧರ್ಮಗುರುವಿನ ಹತ್ತಿರ ಪ್ರಸ್ತಾಪಿಸಬೇಕು. ಇಂಥ ವಿಷಯ ನಮಗಿಂತ ಚೆನ್ನಾಗಿ ಅವರಿಗೆ ತಿಳೀತದೆ.....ಬೆಪ್ಪುತಕ್ಕಡಿ! ಕನ್ನೆಯನ್ನು ತುಟಿಗಳ ಮೇಲೆ ಚುಂಬಿಸಬಾರದೂಂತ ನಿನಗೆ ತಿಳೀದೆ? ನೀನು ಶಾಲೆಗೆ ಹೋಗಿ ಅದೇನು ಕಲಿತೆಯೋ ?"

ಬಹಳ ದಿನಗಳವರೆಗೆ, ಮರಣದಂಡನೆಯನ್ನು ಇದಿರುನೋಡುವವನಂತೆ ನಾನು ಕಾದಿದ್ದೆ. ಮೊದಲನೇದಾಗಿ, ಕೊಳಕು ಕೈಗಳಿಂದ ಕನ್ನೆಯನ್ನು ನಾನು ಹಿಡಿದಿದ್ದೆ. ಎರಡನೇದಾಗಿ, ತಪ್ಪುರೀತಿಯಲ್ಲಿ ಚುಂಬಿಸಿದ್ದೆ. ಓ! ಇದಕ್ಕೆ ವಿಚಾರಣೆ ಇಲ್ಲದೆ, ಉಂಟೆ? ಖಂಡಿತವಾಗಿಯೂ ವಿಚಾರಣೆ ಇರುತ್ತದೆ!

ಆದರೆ, ಅರಿಯದೇ ಆದ ನನ್ನ ಪಾಪಗಳು ಪ್ರೇಮದಿಂದ ಸ್ಫೂರ್ತಿಪಡೆದಿದ್ದುದರಿಂದ, ಕನ್ನೆ ಅವನ್ನು ಕ್ಷಮಿಸಿರಲೇಬೇಕು. ಅಥವಾ ಪ್ರಾಯಶಃ ಆಕೆಯ ಶಿಕ್ಷೆ ಬಲು ಕಡಮೆಯಾಗಿದ್ದು ಈ ಒಳ್ಳೆಯ ಜನರು ಆಗಾಗ್ಗೆ ನನಗೆ ಕೊಡುತ್ತಲಿದ್ದ ದಂಡನೆಯ ನಡುವೆ ಗಮನಕ್ಕೆ ಬರದೇ ಹೋಗಿರಬೇಕು.

ಎಂದಾದರೊಮ್ಮೆ, ಮುದುಕಿಯನ್ನು ಕೆರಳಿಸುವುದಕ್ಕೋಸ್ಕರ, ದೈನ್ಯ ನಟಿಸುತ್ತಾ ನಾನೆನ್ನುತ್ತಿದ್ದೆ:

"ಕನ್ನೆ ನನ್ನನ್ನು ದಂಡಿಸೋದಕ್ಕೆ ಮರೆತುಬಿಟ್ಟಳು ಅನಿಸ್ತದೆ."

"ಸ್ವಲ್ಪ ತಾಳು. ಇನ್ನೂ ತಡವಾಗಿಲ್ಲ," ಎಂದು ಆಕೆ ಉತ್ತರಿಸುತ್ತಿದ್ದಳು.

ಮಹಡಿಯ ಮೇಲೆ, ನಸುಗೆಂಪು ಬಣ್ಣದ ಚಹಾ ಹೊದಿಕೆಗಳಿಂದಲೂ ತೆಳುತಗಡಿನಿಂದಲ ಎಲೆಗಳಿಂದಲೂ ಮತ್ತಿತರ ಕ್ಷುಲ್ಲಕವಸ್ತುಗಳಿಂದಲೂ ಹಲಗೆಗಳನ್ನು ಅಲಂಕರಿಸುತ್ತಿದ್ದಾ ನನ್ನ ತಲೆಗೆ ಹೊಳೆದುದರ ಬಗೆಗೆಲ್ಲಾ ಕವನ ಕಟ್ಟುತ್ತಿದ್ದೆ. ಕಾಲ್ಮಿಕ್ ಜನರು ಕುದುರೆಗ ಮೇಲೆ ಪ್ರಯಾಣಮಾಡುವಾಗ ಹಾಡುವಂತೆ, ಇಗರ್ಜಿ ಹಾಡುಗಳ ರಾಗದಲ್ಲಿ ಅವುಗಳನ ಅನ್ನುತ್ತಿದ್ದೆ.

"ಪುನಃ ಇರುವೆ ನಾನಿಲ್ಲಿ,
ಮಹಡಿ ನೆಲದಲ್ಲಿ,
ಕತ್ತರಿಸುತ್ತಾ ಕಾಗದ ಚೂರು,
ಕರಗಿಸುತ್ತಾ ಮೋಂಬತ್ತಿ ಚೂರು.
ಆಗಿದ್ದಿದ್ದರೆ ನಾನೊಂದು ನಾಯಿ,
ಹೋಗುತ್ತಲ್ಲಿದ್ದೆ ಇಲ್ಲಿಂದ ಓಡಿ.
ಇಲ್ಲಿ ಇವರನ್ನೋದೊಂದೆ :
ಬಾಯ್ಮುಚ್ಚು ಬೆಪ್ಪನೇ,
ದುಡಿಯೋಕೆ ಕಲಿ ತೆಪ್ಪಗೆ!"

ನಾನು ಸಿಂಗರಿಸಿದುದನ್ನು ಕಂಡಾಗ ಮುದುಕಿ, ಹೂಂಕರಿಸಿ, ತಲೆಯಲುಗಿಸಿದಳು.

"ಇದೇ ರೀತಿ ಅಡುಗೆಮನೇನ ಯಾಕೆ ಅಲಂಕರಿಸಬಾರದು?" ಎಂದಳು.

ಒಂದು ದಿನ ನನ್ನ ಯಜಮಾನ ಮಹಡಿಯ ಮೇಲಕ್ಕೆ ಬಂದು, ನನ್ನ ಕೈಗೆಲಸವನ ನೋಡಿ, ನಿಟ್ಟುಸಿರುಬಿಟ್ಟು ಅಂದ:

"ಎಲ ಎಲಾ! ನೀನೊಳ್ಳೇ ತಮಾಷೆಯವನು ಕಣೋ-ಪೆಶ್ಕೋವ್. ಮುಂದೆ ಏನಾಗ್ತಿಯಪ ನೀನು? ಜಾದುಗಾರ ಆಗ್ತೀಯೇನು? ಹೇಳೋಹಾಗಿಲ್ಲ—"

ಹಾಗೆ ಹೇಳಿ, ಮೊದಲನೆಯ ನಿಕೊಲಸನ ಕಾಲದ ಐದು ಕೊಪೆಕ್‌ಗಳ ನಾಣ್ಯವನ್ನು ಅ ನನಗೆ ಕೊಟ್ಟ.

ತೆಳ್ಳಗಿನ ಸರಿಗೆಯಿಂದ ಆ ನಾಣ್ಯಕ್ಕೊಂದು ಹಿಡಿ ಹೆಣೆದು, ಪದಕದಂತೆ, ನನ್ನ ಕ್ಷು ವರ್ಣಾಲಂಕಾರದ ಮಧ್ಯೆ ಅತ್ಯಂತ ಪ್ರಮುಖ ಸ್ಥಳದಲ್ಲಿ ಅದನ್ನು ತೂಗಹಾಕಿದೆ.

ಆದರೆ ಮಾರನೆಯದಿನ, ಸರಿಗೆಯ ಹಿಡಿಯೊಡನೆ ಹಣವೂ ಮಾಯವಾಗಿತ್ತು. ಮುದುಕಿಯ ಅದನ್ನು ಕದ್ದಿರಬೇಕೆಂಬ ವಿಷಯದಲ್ಲಿ ನನಗೆ ಸಂದೇಹವಿರಲಿಲ್ಲ.

೫

ವಸಂತ ಋತುವಿನಲ್ಲಿ ಕೊನೆಗೂ ನಾನು ಓಡಿಯೇ ಹೋದೆ. ಒಂದು ದಿನ ಬೆಳಗ್ಗೆ ಪೂರ್ವಾಹ್ನದ ಉಪಾಹಾರಕ್ಕೆಂದು ನಾನು ಬ್ರೆಡ್ಡು ಕೊಳ್ಳುತ್ತಿದ್ದಾಗ, ಬ್ರೆಡ್ಡು ತಯಾರಿಸುವವನಿಗೂ ಆತನ ಹೆಂಡತಿಗೂ ಜಗಳವಾಯಿತು. ಆತ, ಬಹಳ ಭಾರದ ಏನನ್ನೋ ಎತ್ತಿ ಆಕೆಯ ಹಣೆಗೆ ಹೊಡೆದ. ಆಕೆ ಬೀದಿಗೆ ಓಡಿದಳು. ಅಲ್ಲೇ ಕುಸಿದುಬಿದ್ದಳು. ಜನರ ಗುಂಪು ನೆರೆಯಿತು. ಆಕೆಯನ್ನು ಗಾಡಿಯಲ್ಲಿರಿಸಿ ಆಸ್ಪತ್ರೆಗೆ ಒಯ್ದರು. ನಾನು ಗಾಡಿಯ ಹಿಂದೆಯೇ ಓಡಿದೆ. ಬಳಿಕ ಹೇಗಾಯಿತೋ ಏನೋ, ನನ್ನ ಅರಿವಿಲ್ಲದಂತೆಯೇ ವೋಲ್ಗಾನದಿಯ ದಡವನ್ನು ನಾನು ತಲಪಿದ್ದೆ. ಕೈಯಲ್ಲಿ ಇಪ್ಪತ್ತು ಕೊಪೆಕ್‌ಗಳಿದ್ದುವು.

ವಸಂತದ ಹಗಲು ಮೃದುವಾಗಿ ಮುಗುಳುನಕ್ಕಿತು. ವೋಲ್ಗಾ ಬಲು ಅಗಲಕ್ಕೆ ಉಕ್ಕೇರಿತು. ನೆಲ ವಿಸ್ತಾರವಾಗಿ ಸಜೀವವಾಗಿತ್ತು. ನಾನು ಮಾತ್ರ ಮೂಷಿಕದಂತೆ ಆ ದಿನದವರೆಗೂ ಬಿಲದಲ್ಲಿದ್ದೆ. ನನ್ನ ಯಜಮಾನನಲ್ಲಿಗೆ ಹಿಂದಿರುಗುವುದಿಲ್ಲವೆಂದು ತೀರ್ಮಾನಿಸಿದೆ. ಕುನಾವಿನೋಗೆ ಅಜ್ಜಿಯಲ್ಲಿಗೂ ಹೋಗುವುದಿಲ್ಲವೆಂದುಕೊಂಡೆ. ಕೊಟ್ಟಮಾತಿನಂತೆ ನಾನು ನಡೆದಿರಲಿಲ್ಲ. ಆಕೆಯ ಎದುರು ನಿಲ್ಲಲು ನನಗೆ ಲಜ್ಜೆ ಎನಿಸಿತು ಅಲ್ಲದೆ, ಅಜ್ಜನಂತೂ ನಾನು ವಾಪಸಾದುದನ್ನು ಕಂಡು ಛೇಡಿಸುವುದರಲ್ಲಿ ಸಂದೇಹವಿರಲಿಲ್ಲ.

ಎರಡು ಮೂರು ದಿನಗಳವರೆಗೆ ನದೀ ದಂಡೆಯಲ್ಲೇ ನಾನು ಅಲೆದಾಡಿದೆ. ಒಳ್ಳೆಯವರಾದ ಹಮಾಲರು ನನಗೆ ಆಹಾರ ನೀಡಿದರು. ರಾತ್ರೆ ಧಕ್ಕೆಗಳಲ್ಲೇ ಅವರ ಜತೆ ನಾನು ಮಲಗುತ್ತಿದ್ದೆ. ಕೊನೆಯಲ್ಲಿ ಅವರಲ್ಲೊಬ್ಬ ನನ್ನೊಡನೆ ಅಂದ:

"ಇಲ್ಲೇ ಅಲೀತಿರೋದರಿಂದ ಏನು ಪ್ರಯೋಜನವೂ ಆಗೋದಿಲ್ಲ, ಹುಡುಗ. ನೀನು 'ಡೋಬ್ರಿ' ಹಡಗಿಗೆ ಯಾಕೆ ಹೋಗಬಾರದು? ಅವರಿಗೊಬ್ಬ ತಟ್ಟೆತೊಳೆಯುವವನ ಅಗತ್ಯ ಇದೆ."

ನಾನು ಹೋದೆ. ಎತ್ತರದ, ಗಡ್ಡವಿದ್ದ, ಕಪ್ಪುರೇಶಿಮೆಯ ಟೋಪಿ ಧರಿಸಿದ್ದ, ಹಡಗಿನ ಸ್ಟುವರ್ಡ್ ಮುಸುಕಾಗಿದ್ದ, ಕನ್ನಡವೇರಿಸಿದ್ದ, ಕಣ್ಣುಗಳಿಂದ ನನ್ನನ್ನು ನೋಡಿದ.

ಆತ ಶಾಂತವಾಗಿ ನುಡಿದ:

"ತಿಂಗಳಿಗೆ ಎರಡು ರೂಬಲು. ರಹದಾರಿ ಇದೆಯೇನು?"

ನನ್ನ ಹತ್ತಿರ ರಹದಾರಿ ಇರಲಿಲ್ಲ. ಅಧಿಕಾರಿ ಒಂದುಕ್ಷಣ ಯೋಚಿಸಿ ಹೇಳಿದ:

"ನಿನ್ನ ತಾಯಿಯನ್ನು ಕರಕೊಂಡು ಬಾ."

ನಾನು ಅಜ್ಜಿಯಲ್ಲಿಗೆ ಓಡಿದೆ. ನನ್ನ ಯೋಜನೆಗೆ ಆಕೆ ಒಪ್ಪಿಗೆ ಇತ್ತಳು. ವ್ಯಾಪಾರ ಮಂಡಲಕ್ಕೆ ಹೋಗಿ ರಹದಾರಿ ತರುವಂತೆ ಅಜ್ಜನನ್ನು ಒಪ್ಪಿಸಿದಳು. ಸ್ವತಃ ಆಕೆಯೇ ಹಡಗಿನ ಬಳಿಗೆ ನನ್ನೊಡನೆ ಬಂದಳು.

ನಮ್ಮೆಡೆಗೆ ಒಮ್ಮೆ ದೃಷ್ಟಿ ಹಾಯಿಸಿ, ಹಡಗಿನ ಸ್ಟುವರ್ಡ್ ಅಂದ:

"ಸರಿ. ಬಾ."

ಆತ, ಹಡಗಿನ ಹಿಂಭಾಗಕ್ಕೆ ನನ್ನನ್ನು ಒಯ್ದ. ಅಲ್ಲಿ, ಬಿಳಿಯ ಕೋಟನ್ನೂ ಬಿಳಿಯ ಟೋಪಿಯನ್ನೂ ಧರಿಸಿದ್ದ ಟೊಣಪ ಅಡುಗೆಯವನೊಬ್ಬ ಒಂದು ಮೇಜಿನ ಬಳಿ ಚಹಾ ಹೀರುತ್ತಾ ದಪ್ಪಗಿನ ಸಿಗರೇಟು ಸೇದುತ್ತಾ ಕುಳಿತಿದ್ದ. ಸ್ಟುವರ್ಡ್ ಆತನೆಡೆಗೆ ನನ್ನನ್ನು ತಳ್ಳಿದ.

"ತಟ್ಟೆ ತೊಳೆಯುವವನು."

ತಕ್ಷಣವೇ ಸ್ಟುವರ್ಡ್ ಹೊರಟುಹೋದ. ಅಡುಗೆಯವನು ಹೂಂಕರಿಸಿದ. ಆತ ಮಾ... ನಾಡತೊಡಗಿದಂತೆ ಕರಿಯಮೀಸೆ ಮಿಸುಕಿತು.

"ಅಗ್ಗವಾಗಿದ್ದರೆ ಸರಿ, ದೆವ್ವವನ್ನೇ ಬೇಕಾದರೂ ಕೆಲಸಕ್ಕೆ ಇಟ್ಕೋತೀಯಾ ನೀನು!"

ಗಿಡ್ಡನೆ ಕತ್ತರಿಸಿದ ಕರಿಯ ತಲೆಗೂದಲಿದ್ದ ತನ್ನ ದೊಡ್ಡ ತಲೆಯನ್ನು ಆತ ಸಿಟ್ಟಿನಿಂ... ಹಿಂದಕ್ಕೆ ಸರಿಸಿದ. ಕರಿದು ಕಣ್ಣುಗಳಿಂದ ನನ್ನನ್ನೆ ದುರುಗುಟ್ಟಿ ನೋಡಿದ. ಉಫ್ ಎಂ... ಕೆನ್ನೆಗಳಿಂದ ಉಸಿರು ಹೊರಹಾಕಿ, ಗದರಿಸುವ ಧ್ವನಿಯಲ್ಲಿ ಅಂದ:

"ಯಾರು ನೀನು ?"

ನಾನು ಆ ಮನುಷ್ಯನನ್ನು ಇಷ್ಟಪಡಲೇ ಇಲ್ಲ. ಎಲ್ಲಾ ಬಿಳಿಯುಡುಪನ್ನೇ ಧರಿಸಿದ್ದರೂ ಆ... ಕೊಳಕಾಗಿ ಕಂಡ. ಆತನ ಬೆರಳುಗಳಲ್ಲಿ ದಟ್ಟನೆಯ ಕೂದಲಿತ್ತು. ಆತನ ದೊಡ್ಡ ಕಿವಿಗಳಿಂ... ನೀಳಕೂದಲು ಎದ್ದುನಿಂತಿತ್ತು.

"ನನಗೆ ಹಸಿವಾಗಿದೆ," ಎಂದೆ.

ಆತ ಪಿಳಿಪಿಳಿ ನೋಡಿದ. ಬಳಿಕ ಒಮ್ಮೆಲೆ, ಆತನ ಕ್ರೂರಮುಖ ಬದಲಾಯಿತು. ಅಗ... ವಾದೊಂದು ಮುಗುಳುನಗೆ, ಕೆಂಪುಕೆನ್ನೆಗಳನ್ನು ಅಲೆಯಲೆಯಾಗಿ ಕಿವಿಗಳವರೆಗೆ ಹಿಂದ... ತಳ್ಳಿತು; ದೊಡ್ಡದಾದ ಕುದುರೆ ಹಲ್ಲುಗಳನ್ನು ತೋರಿಸಿಕೊಟ್ಟಿತು. ಮೀಸೆ ಮೃದುವಾಗಿ ಕೆಳ... ವಾಲಿತು. ದಪ್ಪಗಿನ, ಒಳ್ಳೆಯ ಸ್ವಭಾವದ, ಗೃಹಿಣಿಯಂತೆ ಆತ ಕಂಡ.

ಕಪ್ಪಿನಲ್ಲಿ ಉಳಿದಿದ್ದ ಚಹಾವನ್ನು ಹೊರಕ್ಕೆ ನದಿಗೆ ಎಸೆದು, ಕಪ್ಪನ್ನು ಮತ್ತೊ... ತುಂಬಿದ. ಆತ ಮುಟ್ಟದೇ ಇದ್ದ ಬ್ರೆಡ್ಡಿನೊಂದು ಹೋಳು ಹಾಗೂ ಉಪ್ಪುಹಾಕಿದ ಮಾಂ... ದೊಡ್ಡ ತುಂಡಿನ ಜತೆಗೆ, ಕಪ್ಪನ್ನು ನನ್ನೆಡೆಗೆ ತಳ್ಳಿದ.

"ತಗೊಂಡ್ಬಿಡು. ತಂದೆ ತಾಯಿ ಇದಾರೇನು? ಕದಿಯೋದಕ್ಕೆ ಬರುತ್ತೋ? ಚಿಂತಿ... ಇಲ್ಲಿರುವವರೆಲ್ಲಾ ಕಳ್ಳರೇ-ಬೇಗನೆ ನಿನಗೆ ಹೇಳಿಕೊಡ್ತಾರೆ."

ತನ್ನ ಪದಗಳನ್ನಾತ ಬಾಯಿತೆರೆದು ಉಗುಳುತ್ತಿದ್ದ. ಅಗಲವಾದ ಕೆನ್ನೆಗಳು ಮುಖಕ್... ಮಾಡಿ ನೀಲಿಯಾಗಿದ್ದುವು. ಆತನ ಮೂಗಿನ ಹತ್ತಿರವಿದ್ದ ಮಾಂಸ, ಮಲಿನ ರಕ್ತನಾಳ... ಸೊಗಸಾದ ಹೆಣಿಗೆಯಿಂದ ಆವೃತವಾಗಿತ್ತು, ಆತನ ಕೆಂಪಗಿನ ಊದಿಕೊಂಡಿದ್ದ ಮೂ... ಮೀಸೆಯ ಮೇಲೆ ಒತ್ತರಿಸಿತ್ತು. ಆತನ ಕೆಳತುಟಿ ತಿರಸ್ಕಾರದಿಂದ ಕೆಳಕ್ಕೆ ಜೋಲುತ್ತಿ... ಬಾಯಿಯ ಕೊನೆಯಲ್ಲಿ ಸಿಗರೇಟೊಂದು ಹೊಗೆಯಾಡುತ್ತಿತ್ತು. ಅದೇ ಆಗ ಆತ ಸ್ನಾನಮು... ಬಂ...ರಬೇಕು. ಯಾಕೆಂದರೆ, ಆತನ ಮೈಯಿಂದ ಬರ್ಚ್ ಕೊಂಬೆಗಳ ಹಾಗೂ ಕರಿಮೆಣ... ಬ್ರಾಂದಿ...ಯ ವಾಸನೆ ಬರುತ್ತಿತ್ತು. ಆತನ ಕತ್ತು ಹಾಗೂ ಕಿರುಕೆನ್ನೆಗಳಲ್ಲಿ ಬೆವರಿನ ಆಣಿಮು... ಗಳಿದ್ದು...ವು.

ನಾನು ಉಪಾಹಾರ ಮುಗಿಸಿದಾಗ, ಆತ ನನಗೊಂದು ರೂಬಲ್ ಕೊಟ್ಟ.

"ಹೋಗಿ ಕತ್ತಿನಕೊಂಡಿ ಇರೋ ಎರಡು ಏಪ್ರನ್ ಕೊಂಡುಕೋ. ತಾಳು ! ನಾನೇ ಕೊಂಡ್ಕೊಂಡು ಬರ್ತೀನಿ."

ಟೋಪಿಯನ್ನು ಸರಿಪಡಿಸಿ, ಒಂದು ಬದಿಯಿಂದ ಇನ್ನೊಂದು ಬದಿಗೆ ಓಲಾಡುತ್ತ, ಕರಡಿ ಯಂತೆ ಪಾದಗಳನ್ನಿರಿಸುತ್ತಾ, ಡೆಕ್ಕಿನಿಂದ ಇಳಿದ.

* * *

....ರಾತ್ರಿ. ಶುಭ್ರವಾದ ಚಂದ್ರ ಹಡಗಿನಿಂದ ಎಡಕ್ಕೆ ಹುಲ್ಲುಗಾವಲುಗಳ ಕಡೆಗೆ ಅವಸರ ವಾಗಿ ಧಾವಿಸುತ್ತಿದ್ದಾನೆ. ಬಿಳಿಸುತ್ತಿನ ಹೊಗೆ ಕೊಳಾಯಿಯ, ಪುರಾತನದ್ದಾದ ಬಾದಾಮಿ ಬಣ್ಣದ ನಮ್ಮ ಹಡಗು, ಸೋಮಾರಿತನದಿಂದ ಬೆಳ್ಳಿನೀರಿನ ಮೂಲಕ ಹುಟ್ಟುಗಳನ್ನು ಬಡೆಯು ತ್ತಿದೆ. ಮೆಲ್ಲಮೆಲ್ಲನೆ ಕರಿಯ ನದೀತಟಗಳು, ಗುಡಿಸಲು ಕಿಟಿಕಿಗಳಲ್ಲಿನ ಬೆಳಕುಗಳ ಛಾಯೆ ಚೆಲ್ಲಿದ ನೆರಳನ್ನು ಬೀರುತ್ತಾ, ಹಡಗನ್ನು ಇದಿರ್ಗೊಳ್ಳಲು ಏಳುತ್ತಿವೆ. ಹಳ್ಳಿಯಿಂದ ಹಾಡಿನ ಧ್ವನಿ ಕೇಳಿಬರುತ್ತಿದೆ. ಹುಡುಗಿಯರು ಗಾನವಿಹಾರ ನಡೆಸಿದ್ದಾರೆ. 'ಐಲೂಲಿ' ಪಲ್ಲವಿ 'ಹಲ್ಲೆ ಲೂಜಾ' ಧ್ವನಿಯಂತೆ ಕೇಳುತ್ತಿದೆ.

ನಮ್ಮ ಹಡಗು, ಬಲವಾದ ನೀಳಕಂಬಿ ಬಿಗಿದ ಒಂದು ಫತ್ತೇಮಾರನ್ನು ಎಳೆಯುತ್ತಿದೆ. ಫತ್ತೇಮಾರಿನ ಬಣ್ಣವೂ ಬಾದಾಮಿ. ಅದರ ಡೆಕ್ಕಿನ ಮೇಲೆ ದೊಡ್ಡದಾದೊಂದು ಕಬ್ಬಿಣದ ಪಂಜರವಿದೆ. ಪಂಜರದಲ್ಲಿ ಗಡೀಪಾರು ಶಿಕ್ಷೆಗೂ ಸಶ್ರಮದಂಡನೆಗೂ ಗುರಿಯಾಗಿರುವ ಕೈದಿ ಗಳಿದ್ದಾರೆ. ಮುಂಭಾಗದಲ್ಲಿ ನಿಂತಿರುವ ಪಹರೆ ಸೈನಿಕನ ಬಯನೆಟು, ಮೋಂಬತ್ತಿಯಂತೆ ಬೆಳಗು ತ್ತಿದೆ. ಆಳವಾದ ನೀಲಿ ಆಕಾಶದಲ್ಲಿರುವ ನಕ್ಷತ್ರಗಳೂ ಪುಟ್ಟ ಮೋಂಬತ್ತಿಗಳಂತೆ ಕಾಣಿಸುತ್ತವೆ. ಫತ್ತೇಮಾರಿನಲ್ಲಿ ಪ್ರತಿಯೊಂದೂ ಶಾಂತವಾಗಿದೆ; ತಿಂಗಳ ಬೆಳಕಿನಿಂದ ಬೆಳಗುತ್ತಿದೆ. ಪಂಜರದ ಕಬ್ಬಿಣ ಸಲಾಕೆಗಳ ಹಿಂದೆ, ವೃತ್ತಾಕಾರದ ಬೂದು ನೆರಳುಗಳು ಕಾಣುತ್ತಿವೆ. ಅವರು, ಕುಳಿತು ಕೊಂಡು ವೋಲ್ಗಾದ ಕಡೆಗೆ ದಿಟ್ಟಿಸುತ್ತಿರುವ ಕೈದಿಗಳು. ನೀರು ಜುಳುಜುಳು ಸದ್ದುಮಾಡುತ್ತಾ ಹರಿದು ಹೋಗುತ್ತಿದೆ—ಪ್ರಾಯಶಃ ಅಳುತ್ತಿದೆ ಪ್ರಾಯಶಃ ಅಳುಕುತ್ತ ನಗುತ್ತಿದೆ. ಪ್ರತಿಯೊಂದ ರಲ್ಲೂ ಇಗರ್ಜಿಯ ವಾತಾವರಣದ್ದೇನೋ ಇದೆ. ಎಣ್ಣೆಯ ವಾಸನೆ ಕೂಡಾ ಧೂಪದ ನೆನಪನ್ನು ತರುತ್ತದೆ.

ಫತ್ತೆಮಾರನ್ನು ದಿಟ್ಟಿಸುತ್ತ ನನಗೆ ಬಾಲ್ಯದ ಮೊದಲ ವರ್ಷಗಳ ನೆನಪಾಗುತ್ತದೆ: ಅಸ್ಟ್ರಾಖಾನಿನಿಂದ ನಿಜ್ನಿಗೆ ಮಾಡಿದ ಪ್ರವಾಸ; ಮುಖವಾಡ ಧರಿಸಿರುವಳೇನೋ ಎನ್ನುವಂತಿದ್ದ ನನ್ನ ತಾಯಿಯ ಮುಖ; ಕಠಿನವಾದ, ಆದರೆ ಸ್ವಾರಸ್ಯಕರವಾದ, ಈ ಬದುಕಿಗೆ ನನ್ನನ್ನು ಮುನ್ನಡೆ ಸಿದ ನನ್ನ ಅಜ್ಜಿ. ಅಜ್ಜಿಯನ್ನು ಕುರಿತು ಯೋಚಿಸಿದಾಗಲೆಲ್ಲಾ, ಬದುಕಿನ ತುಚ್ಛವಾದ ಖೇದವುಂಟುಮಾಡುವ ಅಂಶಗಳನ್ನೆಲ್ಲ ನಾನು ಮರೆಯುತ್ತೇನೆ. ಆಗ ಪ್ರತಿಯೊಂದೂ ಬದಲಾಗು ತ್ತದೆ. ಹೆಚ್ಚು ಸ್ವಾರಸ್ಯಕರವೂ ಹಿತಕರವೂ ಆಗುತ್ತದೆ. ಜನರು ಒಳ್ಳೆಯವರಾಗಿ ಪ್ರೀತಿಗೆ ಹೆಚ್ಚು ಅರ್ಹರಾಗಿ ಕಾಣುತ್ತಾರೆ.

ರಾತ್ರಿಯ ಸೌಂದರ್ಯ ನನ್ನ ಮೇಲೆ ಮೂಡುವ ಪರಿಣಾಮದಿಂದ ಕಂಬನಿ ತೊಟ್ಟಿಕ್ಕುವ ಹಾಗಾಗುತ್ತದೆ. ಶವದಾನಿಯನ್ನು ಹೋಲುತ್ತಿದ್ದ ಫತೇಮಾರಿನಿಂದ ನಾನು ಆಕರ್ಷಿತನಾಗಿ ದ್ದೇನೆ. ಹರಿಯುತ್ತಿರುವ ನದಿಯ ವಿಸ್ತಾರವಾದ ಎದೆಯ ಮೇಲೆ, ಬೆಚ್ಚಗಿನ ಇರುಳಿನ ಈ

ಧ್ಯಾನಮಗ್ನ ಮೌನದಲ್ಲಿ, ಅದು ಇಲ್ಲಿರುವುದು ಅನುಚಿತವಾಗಿ ತೋರುತ್ತದೆ. ಈಗ ಏಳುತ್ತಲೊ ಈಗ ಬೀಳುತ್ತಲೋ ಇದ್ದ, ಒಂದೇ ಸಮನಾಗಿರದ, ನದಿಯ ರೂಪುರೇಖೆಗಳು, ನನ್ನ ಎದೆಬಡಿ ವನ್ನು ತೀವ್ರಗೊಳಿಸುತ್ತವೆ. ಒಳ್ಳೆಯವನಾಗಿರಲು, ಮಾನವಕೋಟಿಗೆ ಉಪಯುಕ್ತನಾಗಿರಲ ಅಪೇಕ್ಷಿಸುವಂತೆ ಮಾಡುತ್ತವೆ.

ನಮ್ಮ ಪ್ರಯಾಣಿಕರನ್ನು ಕುರಿತು ವಿಶಿಷ್ಟವಾದುದೇನೋ ಇದೆ. ಮುದುಕರು, ಯುವಕರ ಗಂಡಸರು, ಹೆಂಗಸರು—ಎಲ್ಲರೂ ಒಂದೇ ತೆರನಾಗಿದ್ದಂತೆ ನನಗೆ ಭಾಸವಾಗುತ್ತದೆ. ನಮ ಹಡಗು ನಿಧಾನವಾಗಿ ಚಲಿಸುತ್ತದೆ. ಅವಸರವಿರುವ ಜನ ಪ್ರವಾಸಮಾಡುವುದು ಅಂಚೆ ಹಡಗಿನಲ್ಲಿ. ಮಾಡಲು ಕೆಲಸವಿಲ್ಲದ ಶಾಂತರಾದ ಪ್ರಯಾಣಿಕರು ನಮಗೆ ಸಿಗುತ್ತಾರೆ. ಬೆಳ ನಿಂದ ರಾತ್ರಿಯವರೆಗೆ ಅವರು ತಿನ್ನುತ್ತ ಕುಡಿಯುತ್ತ, ಅಸಂಖ್ಯ ತಟ್ಟೆಗಳನ್ನು ಚಾಕು-ಫೋರ್ಕ್ ಚಮಚಗಳನ್ನೂ ಹೊಲಸುಗೊಳಿಸುತ್ತಾರೆ. ತಟ್ಟೆಗಳನ್ನು ತೊಳೆದು, ಚಾಕು, ಫೋರ್ಕ್ ಗಳನ್ನು ಬೆಳಗುವುದು ನನ್ನ ಕೆಲಸ. ಬೆಳಗ್ಗೆ ಆರು ಘಂಟೆಯಿಂದ ಮಧ್ಯರಾತ್ರಿಯವರೆಗೂ ನಾ ಅದನ್ನೇ ಮಾಡುತ್ತಿರುತ್ತೇನೆ. ಅಪರಾಹ್ನ ಎರಡರಿಂದ ಆರರವರೆಗೆ, ಹಾಗೂ ಸಂಜೆ ಹತ್ತರಿಂ ಹನ್ನೆರಡರವರೆಗೆ, ಊಟಗಳ ಬಳಿಕ ಪ್ರಯಾಣಿಕರು ಚಹಾವನ್ನೋ ಬೀರನ್ನೋ ವೋಡ್ಕಾವನ್ನೊ ಕುಡಿಯುತ್ತಿರುವುದರಿಂದ ನನಗೆ ಕೆಲಸ ಕಡಮೆ.

ಆ ಘಂಟೆಗಳ ಅವಧಿಯಲ್ಲಿ ಎಲ್ಲಾ ಕೆಲಸಗಾರರಿಗೂ ಬಿಡುವಿರುತ್ತದೆ. ಅವರಲ್ಲೊಂ ಗುಂಪು ಚಹಾಪಾನಕ್ಕೆಂದು ಹೊಗೆ ಕೊಳವೆಯ ಹತ್ತಿರವಿರುವ ಮೇಜಿನಬಳಿ ಕೂಡಿರುತ್ತದೆ. ಗುಂಪಿನಲ್ಲಿರುವವರು—ಅಡುಗೆಯವನಾದ ಸ್ಮುರಿ; ಆತನ ಸಹಾಯಕನಾದ ಯಾಕೋವ್ ಇವ ನೋವಿಶ್; ಅಡುಗೆಮನೆಯಲ್ಲಿ ಪಾತ್ರೆಗಳನ್ನು ತೊಳೆಯುವ ಮಾಕ್ಸಿಮ್; ಮತ್ತು ಗೂನುಬೆನ್ನಿ ಸಿಡುಬಿನ ಕಲೆಗಳಿರುವ ಅಗಲವಾದ ಮುಖದ, ಎಣ್ಣೆಗಣ್ಣುಗಳ, ಡೆಕ್ಕಿನ ಮೇಲಣ ಪ್ರಯಾಣಿಕ ಅವಶ್ಯತೆ ಪೂರೈಸುವ ಮಾಣಿಯಾದ, ಸರ್ಗಿ. ಯಾಕೋವ್ ಇವಾನೋವಿಶ್, ತನ್ನ ಹರಕು ಹ ಗಳನ್ನು ತೋರಿಸುತ್ತ, ಬಿಕ್ಕುವ ನಗೆ ನಗುತ್ತ, ಅವರಿಗೆ ಹೊಲಸು ಕಥೆಗಳನ್ನು ಹೇಳುತ್ತಾ ಸರ್ಗೀ, ಕಪ್ಪೆಬಾಯಿಯನ್ನು ಕಿವಿಯಿಂದ ಕಿವಿಯವರೆಗೂ ತೆರೆಯುತ್ತಾನೆ. ಕೋಪಿಷ್ಟನಾ ಮಾಕ್ಸಿಂ, ಅನಿರ್ದಿಷ್ಟ ಬಣ್ಣದ ಕಠಿನ ಕಣ್ಣುಗಳಿಂದ ಇತರರನ್ನು ದಿಟ್ಟಿಸುತ್ತ, ಮೌನವಾ ಆರಿಸುತ್ತಾನೆ.

"ನರಭಕ್ಷಕರು! ಮೊರ್ಡೋವಿಯನ್ನರು!" ಎಂದು ಹಿರಿಯ ಅಡುಗೆಯವನು ತನ್ನ ದಪ್ಪಗಂ ಲ್ಲಿ ಆಗಿಂದಾಗ್ಗೆ ನಡುವೆ ಉದ್ಗರಿಸುತ್ತಿರುತ್ತಾನೆ.

ಈಮೆಲ್ಲ ಜನರನ್ನು ನಾನು ಇಷ್ಟಪಡುವುದಿಲ್ಲ. ದಪ್ಪಗಿನ, ಬೊಕ್ಕತಲೆಯ, ಯಾಕೋವ ಇವಾನೋವಿಶ್ ಸ್ತ್ರೀಯರ ವಿಷಯಮಾತ್ರ ಮಾತನಾಡುತ್ತಾನೆ. ಹಾಗೆ ಮಾತನಾಡುತ್ತಿದ್ದು ಯಾವಾಗಲೂ ಅಶ್ಲೀಲವಾದ ರೀತಿಯಲ್ಲೇ. ಆತನದು, ಅಲ್ಲಲ್ಲಿ ನೀಲಿಬಣ್ಣ ಹೆಪ್ಪುಗಟ್ಟಿದ ನಿವಿ ಕಾರ ಮುಖಮುದ್ರೆ. ಒಂದು ಕೆನ್ನೆಯ ಮೇಲೆ ಗಂತಿ ಇದೆ. ಅದರಿಂದ ಕೆಂಪು ರೋಮಗ ಹೊರಟಿವೆ. ಅವನ್ನು ಆತ ತಿರುವಿ ಕಡ್ಡಿಯಾಗಿ ಮಾಡುತ್ತಾನೆ. ಸರಸಿಯಾದ, ಸವಿಮಾ ಮಾತನಾಡುವುದು ಸಾಧ್ಯವಿದ್ದ, ಹೆಣ್ಣು ಹಡಗಿನ ಮೇಲೆ ಕಾಣಿಸಿಕೊಂಡಾಗಲೆಲ್ಲ, ಆತ ದೀನತ ಯಿಂದ ಭಿಕ್ಷುಕನಂತೆ ಆಕೆಯನ್ನು ಹಿಂಬಾಲಿಸುತ್ತ, ಮಧುರವಾದ ಯಾಚನೆಯ ಧ್ವನಿಯಲ್ಲಿ ಆ

ಯೊಡನೆ ಮಾತನಾಡುತ್ತಾನೆ. ಆತನ ತುಟಿಗಳ ಮೇಲೆ ನೊರೆ ಇರುತ್ತದೆ. ಅದನ್ನು ಆತ, ತನ್ನ ಹೊಲಸು ನಾಲಗೆಯ ತೀವ್ರ ಚಲನೆಯಿಂದ ನೆಕ್ಕುತ್ತಾನೆ. ಯಾಕೋ ಏನೋ, ಸಾರ್ವಜನಿಕ ಕಟುಕರೂ ಕೂಡಾ ಅಷ್ಟೇ ಕೊಬ್ಬಿಯೂ ತೈಲಮಯವಾಗಿಯೂ ಇರಬೇಕೆಂದು ನನಗೆ ಅನಿಸು ತ್ತದೆ....

"ಹೆಂಗಸರನ್ನು ಬಿಸಿಗೊಳಿಸೋದು ಹೇಗೇಂತ ತಿಳಿದಿರಬೇಕು," ಎಂದು ಆತ ಒಮ್ಮೆ ರ್ಗಿಗೂ ಮ್ಯಾಕ್ಸಿಮ್‌ಗೂ ಹೇಳಿದ. ಶ್ರದ್ಧೆಯಿಂದ ಕಿವಿಗೊಡುತ್ತಿದ್ದ ಅವರು ಉಬ್ಬಿದರು; ಮುಖ ರಂಗೇರಿತು.

"ನರಭಕ್ಷಕರು!" ಎಂದು ಸ್ಮುರಿ ತುಚ್ಛೀಕಾರದಿಂದ ಗುಡುಗಿದ. ಮೆಲ್ಲನೆ ಎದ್ದು, ಕಾಲು ಗಳ ಮೇಲೆ ನಿಂತು, ನನ್ನೊಡನೆ ಆತನೆಂದ:

"ಪೆಶ್ಕೋವ್! ನನ್ನ ಜತೆ ಬಾ!"

ಆತನ ಕೊಠಡಿಯನ್ನು ನಾವಿಬ್ಬರೂ ತಲಪಿದಾಗ, ಚರ್ಮದ ಹೊದಿಕೆ ಹಾಕಿದ್ದ ಪುಟ್ಟ ದೊಂದು ಪುಸ್ತಕವನ್ನು ಆತ ನನ್ನ ಕೈಗಿತ್ತ. ತಣುಪು ಪದಾರ್ಥಗಳ ದಾಸ್ತಾನು ಕೊಠಡಿಯ ಗೋಡೆಗೆ ಒತ್ತಿಕೊಂಡಿದ್ದ ಮಂಚದ ಮೇಲೆ ಆತ ಮೈಚಾಚಿದ.

"ನನಗೆ ಓದಿ ಹೇಳು!"

ಮಕರೋನಿ ತುಂಬಿದ್ದ ಒಂದು ಬುಟ್ಟಿಯ ಮೇಲೆ ನಾನು ಕುಳಿತುಕೊಂಡು, ವಿಧೇಯತೆ ಯಿಂದ ಓದತೊಡಗಿದೆ.

"ನಕ್ಷತ್ರ ಚೆಲ್ಲಿರುವ ಅಂಬ್ರಾಕ್ಯುಲಮ್ [ನಡುಭಾಗ] ಎಂದರೆ, ಸ್ವರ್ಗದೊಡನೆ ಸಂಪರ್ಕ ಬೆಳೆಸಲು ಯೋಗ್ಯಸ್ಥಳ. ಆ ಸ್ವರ್ಗವನ್ನು ಅವರು ಅಜ್ಞಾನಿಗಳಿಂದಲೂ ಪ್ರವಾದಿಗಳಿಂದಲೂ ಮುಕ್ತಗೊಳಿಸಿದ್ದಾರೆ—"

ಸ್ಮುರಿ, ಸಿಗರೇಟು ಹೊಗೆಯ ಮೋಡವನ್ನು ಹೊರ ಉಗುಳಿ ಹೂಂಕರಿಸಿದ:

"ಒಂಟೆಗಳು! ಎಂಥ ಕೆಟ್ಟುದನ್ನು ಬರೆದಿದ್ದಾರೆ!"

"ತೆರೆದ ಎಡಸ್ತನ ಎಂದರೆ ನಿಷ್ಕಲ್ಮಷ ಹೃದಯ ಎಂದರ್ಥ."

"ಯಾರ ತೆರೆದ ಎಡಸ್ತನ?"

"ಯಾರದೂಂತ ಬರೆದಿಲ್ಲ."

"ಹಾಗಾದರೆ ಅದು ಹೆಂಗಸಿನದೇ ಇರಬೇಕು. ಥುತ್! ಸೂಳೆಯರು!"

ಕಣ್ಣುಗಳನ್ನು ಮುಚ್ಚಿಕೊಂಡು ಆತ, ತೋಳನ್ನು ತಲೆಯ ಕೆಳಗಿರಿಸಿ ಮೇಲಕ್ಕೆ ನೋಡುತ್ತ ಮಲಗಿದ. ಬಾಯಿಯ ಮೂಲೆಯಲ್ಲಿ ಅಂಟಿಕೊಂಡು ಹೊಗೆಯಾಡುತ್ತಲಿದ್ದ ಸಿಗರೇಟಿನ ಸ್ಥಾನ ಬದಲಿಸಿ, ದೀರ್ಘವಾಗಿ ಎಳೆದ. ಎಳೆದುದು ಎಷ್ಟು ದೀರ್ಘವಾಗಿತ್ತೆಂದರೆ, ಎದೆಯೊಳಕ್ಕೆ ಏನೋ ಶಿಳ್ಳುಹಾಕಿತು; ಮುಖ ಹೊಗೆಯಿಂದ ಮುಚ್ಚಿಹೋಯಿತು. ಕೆಲವೊಮ್ಮೆ, ಆತ ನಿದ್ದೆ ಹೋಗಿರಬೇಕೆಂದು ನನಗೆ ಅನಿಸುತ್ತಿತ್ತು. ಆಗ ನಾನು ಓದುವುದನ್ನು ನಿಲ್ಲಿಸಿ, ಆ ಪಾಪಿ ಪುಸ್ತಕವನ್ನೆ ನಾನು ದುರುಗುಟ್ಟಿ ನೋಡುತ್ತಿದ್ದೆ.

"ಓದು!" ಎಂದು ಆತ ಅರಚುತ್ತಿದ್ದ.

"ಮಾನನೀಯ ಉತ್ತರವಿತ್ತ: ಇತ್ತನೋಡು, ನನ್ನ ಒಳ್ಳೆಯ ಫ್ರೇರ್ ಸುವೇರಿಯನ್—"

"ಸೆವೇರಿಯನ್."

"ಸುವೇರಿಯನ್ ಅಂತ ಬರೆದಿದೆ."

"ಅದರ ಮನೆ ಹಾಳಾಯ್ತು! ಕೆಳಗಡೆ ಸ್ವಲ್ಪ ಕವಿತೆ ಇದೆ. ಅಲ್ಲಿಂದ ದೌಡಾಯಿಸು."

ನಾನು ಅಲ್ಲಿಂದಲೇ ದೌಡಾಯಿಸಿದೆ.

"ನಮ್ಮ ಸಮಸ್ಯೆಗಳನರಿಯ ಬಯಸುವ
ಓ ಮೂಢ ಪ್ರಾಣಿಗಳೇ!
ನಿಮ್ಮ ಬಡಮನಸುಗಳೆಂದೂ ಅದರ
ಬಳಿ ಕೂಡ ಸಾರವು!
ಸನ್ಯಾಸಿಗಳ ಜಪಗಳನೂ ನೀವು
ಅರಿಯಲಾರಿರೆಂದೂ!"

ಸ್ಮುರಿ ಕೂಗಾಡಿದ:

"ನಿಲ್ಲಿಸು! ಕವಿತೆ ಅನ್ತೀಯಾ ಅದನ್ನು? ಇಲ್ಲಿ ಕೊಡು ಆ ಪುಸ್ತಕ."

ಆತ, ಆ ದಪ್ಪಗಿನ ನೀಲಿ ಸಂಪುಟದ ಪುಟಗಳನ್ನು ಸಿಟ್ಟಿನಿಂದ ಮಗುಚಿ, ಮಂಚದ ಕೆಳ ಅದನ್ನು ಎಸೆದ.

"ಬೇರೊಂದು ಹೇಗಿದೆಯೋ ನೋಡು."

ಆತನ ಕಬ್ಬಿಣದ ಕೊಂಡಿಗಳಿದ್ದ ಕರಿಯ ಟ್ರಂಕಿನಲ್ಲಿ ಅನೇಕ ಪುಸ್ತಕಗಳಿದ್ದುದನ ಕಂಡು ನನಗೆ ಬಲುಗಾಬರಿಯೇ ಆಯಿತು. 'ಒಮಿಾರನ ನೀತಿಬೋಧೆಗಳು,' 'ಶಸ್ತ್ರಪಡೆ ಸ್ಮರಣೆಗಳು', 'ಅಪಾಯಕಾರಿ ಕೀಟವಾದ ಜಿಗಣೆಯನ್ನು ಕುರಿತು—ಅವುಗಳನ್ನು ನಾಶಪಡಿಸು ಹಾಗೂ ಕಡಿತದ ದುಷ್ಪರಿಣಾಮಗಳನ್ನು ಇದಿರಿಸುವ ಬಗೆ,'—ಈ ಪುಸ್ತಕಗಳು ಆ ರಾಶಿಯ ದ್ದುವು. ಆರಂಭ-ಕೊನೆ ಎರಡೂ ಕಳೆದುಹೋಗಿದ್ದ ಪುಸ್ತಕಗಳಿದ್ದುವು. ಕೆಲವೊಮ್ಮೆ ಆ ಅಡು ಯವನು, ಅಂತಹ ಪುಸ್ತಕಗಳ ಪುಟ ಮಗುಚಿ ನೋಡಿ ನಾನು ತಲೆಕಟ್ಟುಗಳನ್ನು ತಿಳಿಸುವ ಹೇಳುತ್ತಿದ್ದ. ಹಾಗೆ ನಾನು ಮಾಡುತ್ತಿದ್ದಾಗ, ಆತ ಸಿಟ್ಟಿನಿಂದ ಗೊಣಗುತ್ತಿದ್ದ:

"ಎಂಥೆಂಥ ಪುಸ್ತಕಗಳನ್ನು ಬರೀತಾರಪ್ಪಾ, ಲಫಂಗರು! ಯಾವ ಒಳ್ಳೆಯ ಕಾರಣ ಇಲ್ಲದೆ ಮುಖಕ್ಕೇ ಹೊಡೆದಹಾಗೆ. 'ಜೆರ್ವಾಸ್ಸಿ!' ಜೆರ್ವಾಸ್ಸಿಯಿಂದ ನನಗೇನು ಆಗಬೇಕಾಗಿ ಅಂಬ್ರಾಕ್ಯುಲಮ್!"

ಆ ವಿಚಿತ್ರ ಪದಗಳೂ ಅಪರಿಚಿತ ಹೆಸರುಗಳೂ ನನ್ನ ಸ್ಮರಣೆಯಲ್ಲಿ ನೆಟ್ಟು ತೊಂ ಕೊಟ್ಟುವು. ಶಬ್ದಿಸುವುದರಿಂದಲಾದರೂ ಆ ಪದಗಳ ಅರ್ಥ ವ್ಯಕ್ತವಾದೀತೇನೋ ಎನ್ನುವಂ ಅವುಗಳನ್ನು ಉಚ್ಚರಿಸಲು ನನ್ನ ನಾಲಿಗೆ ತುರಿಸುತ್ತಿತ್ತು. ಕಿಟಿಕಿಯಾಚೆಗೆ ನದಿ, ಕೊನೆಯಿಲ್ಲ ಹಾಡುತ್ತಿತ್ತು, ನೀರ ಸಪ್ಪಳಮಾಡುತ್ತಿತ್ತು. ಮೇಲ್ಗಡೆ ಡೆಕ್ಕಿಗೆ ಹೋಗಲು ನಾನು ಆಸೆಪ ಅಲ್ಲಿ ಹಡಗಿನ ಕೆಲಸಗಾರರೂ ಉಗಿವಿಭಾಗದವರೂ ಸಾಮಾನು ಪೆಟ್ಟಿಗೆಗಳ ಮೇಲೆ ಕುಳಿ ಹಾಡುತ್ತಲೋ, ಕಥೆ ಹೇಳುತ್ತಲೋ, ಇಸ್ಪೀಟು ಆಟದಲ್ಲಿ ಪ್ರಯಾಣಿಕರ ಹಣವನ್ನು ಗ ತ್ತಲೋ ಇದ್ದರು. ಅವರ ಜತೆ ಕುಳಿತುಕೊಂಡು, ಅವರ ಸರಳವಾದ, ಅರ್ಥವಾಗುವ, ಗಳಿಗೆ ಕಿವಿಗೊಡುತ್ತ, ಕಾಮಾನದಿಯ ದಂಡೆಗಳನ್ನು ದಿಟ್ಟಿಸುವುದು ಎಷ್ಟು ಸೊಗಸು! ಅ

ತಾಮ್ರದ ಕಂಬಿಗಳಂತೆ ಗಟ್ಟಿಯಾಗಿದ್ದು ಎತ್ತರಕ್ಕೆ ಏರಿದ್ದ ಪೈನ್ ಕಾಂಡಗಳಿದ್ದುವು. ಇಳಿತದ ನೀರು ಪುಟ್ಟ ಸರೋವರಗಳನ್ನು ಬಿಟ್ಟುಹೋಗಿದ್ದ ಹುಲ್ಲುಗಾವಲುಗಳಿದ್ದುವು. ನೀಲಿ ಆಕಾಶವನ್ನು, ಒಡೆದ ಕನ್ನಡಿಯ ಚೂರುಗಳಂತೆ ಅವು ಪ್ರತಿಬಿಂಬಿಸುತ್ತಿದ್ದುವು. ನಮ್ಮ ಹಡಗು ಭೂಮಿಗಿಂತ ದೂರವಾಗಿತ್ತು. ಆ ದೂರವನ್ನು ಉಳಿಸಿಕೊಂಡೇ ಅದು ಮುಂದಕ್ಕೆ ಚಲಿಸುತ್ತಿತ್ತು. ಸಂಜೆಯ ಪ್ರಶಾಂತತೆಯಲ್ಲಿ, ಅಗೋಚರವಾದ ಯಾವುದೋ ಇಗರ್ಜಿಯ ಘಂಟಾನಾದದ ಅಲೆ ದಂಡೆಯಿಂದ ನಮ್ಮಲ್ಲಿಗೆ ತಲಪುತ್ತಿತ್ತು. ಶಹರಗಳ ಮತ್ತು ಜನರ ಯೋಚನೆಯನ್ನು ಅದು ಉಂಟುಮಾಡುತ್ತಿತ್ತು. ಬೆಸ್ತನ ದೋಣಿಯೊಂದು, ಬ್ರೆಡ್ಡಿನ ತುಣುಕಿನಂತೆ ನೀರಿನ ಮೇಲೆ ಓಲಾಡಿತು. ಗ್ರಾಮವೊಂದು ಕಾಣಿಸತೊಡಗಿತು. ಕೆಲ ಪುಟ್ಟಹುಡುಗರು ನೀರಾಟವಾಡುತ್ತಿದ್ದರು. ಕೆಂಪು ಕುಪ್ಪಸ ತೊಟ್ಟಿದ್ದ ರೈತನೊಬ್ಬ, ಹಳದಿ ಬಣ್ಣದ ಮರಳಿನ ಪಟ್ಟಿಯಲ್ಲಿ ನಡೆದು ಬರುತ್ತಿದ್ದ. ದೂರದ ನೋಟಕ್ಕೆ ಪ್ರತಿಯೊಂದೂ ಆಕರ್ಷಕವಾಗಿತ್ತು. ವಸ್ತುಗಳು ಆಟಿಗೆಯಷ್ಟು ಚಿಕ್ಕವಾಗಿ, ತಮಾಷೆ ಎನಿಸುವಷ್ಟು ಪುಟ್ಟವಾಗಿ, ವರ್ಣರಂಜಿತವಾಗಿ, ಕಂಡುವು. ನದೀದಂಡೆಗೆ—ನದೀ ದಂಡೆಗೆ ಹಾಗೂ ಫತೇಮಾರಿ—ದಯಾಪೂರ್ಣವಾದ ಪ್ರೀತಿಪೂರ್ವಕವಾದ ಏನನ್ನಾದರೂ ಕೂಗಿ ಹೇಳಲು ನನಗೆ ಮನಸ್ಸಾಯಿತು.

ಬಾದಾಮಿ ಬಣ್ಣದ ಫತೇಮಾರಿನಿಂದ ನಾನು ಆಕರ್ಷಿತನಾದೆ. ಕೆಸರು ನೀರಲ್ಲಿ ಅದು ತನ್ನ ಮೊಂಡು ಮೂಗನ್ನು ಮುನ್ನೂಕುವುದನ್ನು ಘಂಟೆ ಘಂಟೆಗಳ ಕಾಲ ಮಂತ್ರಮುಗ್ಧನಾಗಿ ನೋಡುತ್ತ ಕುಳಿತಿರುವುದು ನನ್ನಿಂದ ಸಾಧ್ಯವಿತ್ತು. ಹಗ್ಗಕಟ್ಟಿದ ಹಂದಿಯನ್ನು ಎಳೆಯುವಂತೆ, ಹಡಗು ಅದನ್ನೆಳೆಯುತ್ತಿತ್ತು. ಸಡಿಲವಾದಾಗ, ಕಂಬಿ ನೀರಿಗೆ ಬಡೆಯುತ್ತಿತ್ತು. ತಪ್ಪದೆ ಪುನಃ ನೇರವಾಗುತ್ತಿತ್ತು. ಫತ್ತೇಮಾರನ್ನು ಮೂಗು ಹಿಡಿದು ಎಳೆಯುತ್ತಿದ್ದಂತೆ ನೀರು ಜುಳುಜುಳು ಸದ್ದುಮಾಡುತ್ತಿತ್ತು. ಕಬ್ಬಿಣದ ಪಂಜರದಲ್ಲಿ ಪ್ರಾಣಿಗಳಂತೆ ಕುಳಿತಿದ್ದ ಜನರ ಮುಖಗಳನ್ನೊಮ್ಮೆ ನೋಡಲು ನಾನು ಬಯಸಿದೆ. ಪರ್ಮ್‌ನಲ್ಲಿ ಅವರು ದಡಕ್ಕೆ ಒಯ್ಯಲ್ಪಟ್ಟಾಗ, ಸೇತುವೆ ಹಲಗೆಯನ್ನು ನಾನು ಏರಿನಿಂತೆ. ಹಲವಾರು ಬೂದು ಪ್ರಾಣಿಗಳು ದಪ್ಪ ದಪ್ಪನೆ ಹೆಜ್ಜೆಗಳನ್ನಿಡುತ್ತಾ, ಬೇಡಿಗಳ ಸದ್ದುಮಾಡುತ್ತಾ, ತಮ್ಮ ಹೇರುಗಳ ಭಾರದ ಕೆಳಗೆ ಬಾಗುತ್ತಾ, ನನ್ನನ್ನು ಹಾದು ಹೋದುವು. ಅವರಲ್ಲಿ ಗಂಡಸರು ಹೆಂಗಸರು, ಇಳಿವಯಸ್ಸಿನವರು ಯುವಕಯುವತಿಯರು, ಕುರೂಪಿಗಳು ಸ್ಫುರದ್ರೂಪಿಗಳು ಎಲ್ಲರೂ ಇದ್ದರು: ಇತರ ಜನರಂತೆಯೇ ಇದ್ದರು ಅವರು. ವ್ಯತ್ಯಾಸವೆಂದರೆ, ಉಡುಪು ಬೇರೆಯಾಗಿತ್ತು, ತಲೆಗಳನ್ನು ಬೋಳಿಸಿದ್ದುದರಿಂದ ವಿಕೃತವಾಗಿ ಕಾಣುತ್ತಿದ್ದರು. ಅವರು ಸಮಾಜ ಬಾಹಿರರೆಂಬುದರಲ್ಲಿ ಸಂದೇಹವಿರಲಿಲ್ಲ. ಆದರೆ ಅಜ್ಜ ಸಮಾಜಬಾಹಿರರ ಬಗೆಗೆ ಸೊಗಸಾದ ಎಷ್ಟೋ ವಿಷಯಗಳನ್ನು ನನಗೆ ಹೇಳಿದ್ದಳು!

ಅವರೆಲ್ಲರಿಗಿಂತ ಹೆಚ್ಚು ಹತಾಶನಾದ ಸಮಾಜಬಾಹಿರನಾಗಿ ಸ್ಮುರಿಯೇ ಕಾಣಿಸುತ್ತಿದ್ದ.

"ಇಂಥ ದುರವಸ್ಥೇನ ದೇವರು ನನಗೆ ಒದಗಿಸದಿರಲಿ!" ಎಂದು ಆತ, ಫತೇಮಾರಿನ ಕಡೆ ನೋಡಿ ಗೊಣಗಿದ.

ಒಂದು ದಿನ ಆತನೊಡನೆ ನಾನು ಅಂದುಬಿಟ್ಟೆ:

"ಉಳಿದವರೆಲ್ಲಾ ಕಳ್ಳರೂ ಕೊಲೆಗಡಕರೂ ಆಗಿರುವಾಗ ನೀನೊಬ್ಬ ಅಡುಗೆಯವನು ಯಾಕಾಗಿದೀಯಾ?"

"ನಾನು ಅಡುಗೆ ಕೆಲಸದವನಲ್ಲ—ಅಡುಗೆಯವರ ಮುಖ್ಯಸ್ಥ. ಅಡುಗೆ ಹೆಂಗಸರ ಕೆಲಸ," ಎಂದು ಹೂಂಕರಿಸಿ ಆತ ಹೇಳಿದ.

ಬಳಿಕ ಕ್ಷಣಕಾಲ ಯೋಚಿಸಿ ಆತನೆಂದ:

"ಜನರೊಳಗೆ ವ್ಯತ್ಯಾಸವಿರೋದು ಅವರ ತಲೆಗೆ ಸಂಬಂಧಿಸಿ. ಕೆಲವರು ಚುರುಕುಬುದ್ಧಿಯವರು, ಕೆಲವರು ಮಂದ ಬುದ್ಧಿಯವರು, ಕೆಲವರು ಬರೇ ದಡ್ಡರು. ಮಂತ್ರತಂತ್ರ ಅಂದ್ರೆ ಸರಿಯಾದ ಪುಸ್ತಕ ಓದಿ ನೀನು ಜಾಣನಾಗಬಹುದು. ನೀನು ಎಲ್ಲಾ ಪುಸ್ತಕಗಳನ್ನು ಓದಬೇಕು. ಸರಿಯಾದ ಪುಸ್ತಕ ಯಾವುದೂಂತ ಕಂಡು ಹಿಡಿಯೋದಕ್ಕೆ ಅದೊಂದೇ ಹಾದಿ."

ಆತ ಯಾವಾಗಲೂ ನನಗೆ ಹೇಳುತ್ತಿದ್ದ:

"ಓದು ಪುಸ್ತಕ ಅರ್ಥವಾಗದಿದ್ದರೆ, ಅದನ್ನು ಏಳುಸಾರೆ ಓದು. ಏಳುಸಾರೆ ಓದಿಯೂ ಅರ್ಥವಾಗದಿದ್ದರೆ ಹನ್ನೆರಡುಸಾರೆ ಓದು."

ಸ್ಮರಿ, ಮಿತಭಾಷಿಯಾದ ಅಧಿಕಾರಿಯನ್ನೂ ಒಳಗೊಂಡು ಎಲ್ಲರ ವಿಷಯದಲ್ಲೂ ಒರಟಾಗಿರುತ್ತಿದ್ದ. ಯಾರೊಡನಾದರೂ ಮಾತನಾಡುವಾಗ, ತಿರಸ್ಕಾರದಿಂದ ಕೆಳತುಟಿಯನ್ನು ಮುಂದಕ್ಕೆ ಚಾಚುತ್ತಿದ್ದ; ಮೀಸೆಯನ್ನು ಮಿಸುಕಾಡಿಸುತ್ತಿದ್ದ; ಬೆಣಚುಕಲ್ಲುಗಳಂತೆ ಪದಗಳನ್ನು ಉಗುಳುತ್ತಿದ್ದ. ನನ್ನೊಡನೆ ಆತ ನಯವಾಗಿದ್ದು, ನನ್ನ ಬಗೆಗೆ ಆಸಕ್ತಿ ತೋರುತ್ತಿದ್ದ. ಆದರೆ, ದಿಗಿಲು ಉಂಟುಮಾಡುವಂಥದೇನೋ ಆ ಆಸಕ್ತಿಯಲ್ಲಿತ್ತು. ಅಜ್ಜಿಯ ತಂಗಿಯ ಹಾಗೆ ಈ ಅಡುಗೆಯವನ ಮನೋಸ್ವಾಸ್ಥ್ಯವೂ ಎಲ್ಲರಂತಿಲ್ಲವೆಂದು ಕೆಲವೊಮ್ಮೆ ನನಗೆ ಅನಿಸುತ್ತಿತ್ತು.

"ಓದೋದು ನಿಲ್ಲಿಸು!" ಎಂದು ಆತ ನುಡಿಯುತ್ತಿದ್ದ. ಬಹಳ ಹೊತ್ತು ಕಣ್ಣುಮುಚ್ಚಿಕೊಂಡು ಮಲಗಿರುತ್ತಿದ್ದ. ಮೂಗಿನ ಮೂಲಕ ಕರ್ಕಶವಾಗಿ ಉಸಿರಾಡುತ್ತಿದ್ದ. ದೊಡ್ಡ ಹೊಟ್ಟೆ ಏರಿಳಿಯುತ್ತಿತ್ತು. ಶವದ ಕೈಗಳಂತೆ ಆತನ ಕೈಗಳು ಒಂದನ್ನೊಂದು ಹಾದಿರುತ್ತಿದ್ದುವು. ಕಲೆಗಳಿದ್ದ, ರೋಮತುಂಬಿದ, ಬೆರಳುಗಳು, ಅಗೋಚರ ಸೂಜಿಗಳಿಂದ ಅಗೋಚರ ಕಾಲುಚೀಲವೊಂದನ್ನು ಆತ ಕಸೂತಿ ಹಾಕುತ್ತಿದ್ದನೇನೋ ಎನ್ನುವಂತೆ, ಕಿವುಚಿಕೊಳ್ಳುತ್ತಿದ್ದುವು. ಬಳಿಕ ಒಮ್ಮೆಲೆ ಆತ, ಗೊಣಗಲು ಆರಂಭಿಸುತ್ತಿದ್ದ.

"ಉದಾಹರಣೆಗೆ, ಮೆದುಳುಗಳು! ಎಲ್ಲಿ, ಅದನ್ನು ಎತ್ತಿಕೊಂಡು ಏನುಮಾಡೋದಕ್ಕೆ ಸಾಧ್ಯವೋ ನೋಡು! ಮೆದುಳನ್ನು ಬಹಳ ಕಡಮೆ ಹಂಚಿದ್ದಾರೆ. ಅಸಮವಾಗಿ; ಪ್ರತಿಯೊಬ್ಬರಿಗೂ ಒಂದೇ ಪ್ರಮಾಣದಲ್ಲಿ ಇದ್ದಿದ್ದರೆ—ಆದರೆ ಹಾಗಿಲ್ಲ. ಈ ಮನುಷ್ಯನಿಗೆ ಅರ್ಥವಾಗ್ತದೆ, ಅವನಿಗೆ ಅರ್ಥವಾಗೋದಿಲ್ಲ; ಮತ್ತೊಬ್ಬನಿಗೆ ಅರ್ಥಮಾಡಿಕೊಳ್ಳೋ ಇಷ್ಟವಿಲ್ಲ."

ಪದಗಳ ಮೇಲೆ ಎಡವುತ್ತಾ ತನ್ನ ಸೈನಿಕ ಜೀವನದ ಕಥೆಗಳನ್ನು ಆತ ನನಗೆ ಹೇಳುತ್ತಿದ್ದ. ಆ ಕಥೆಗಳಲ್ಲಿ ಯಾವ ಉದ್ದೇಶವೂ ಎಂದೂ ನನಗೆ ಕಾಣುತ್ತಿರಲಿಲ್ಲ. ಯಾವಾಗಲೂ ಅವು ನೀರಸವಾಗಿ ತೋರುತ್ತಿದ್ದುವು. ಅದೂ, ಮೊದಲಿನಿಂದಲೇ ಎಂದೂ ಆರಂಭಿಸದೆ ಇಷ್ಟಬಂದಲ್ಲಿಂದ ಆತ ಹೇಳುತ್ತಿದ್ದುದರಿಂದ, ಅವುಗಳಲ್ಲಿ ಸ್ವಾರಸ್ಯವಿರುವುದು ಸಾಧ್ಯವೂ ಇರಲಿಲ್ಲ.

"ತುಕ್ಕಡಿಯ ಅಧಿಪತಿ ಆ ಸೈನಿಕನನ್ನು ಕರೆದು ಹೇಳ್ತಾನೆ; ಲೆಫ್ಟಿನೆಂಟ್ ನಿನಗೆ ಹೇಳಿದ್ದು ಏನು? ಆತ ಪ್ರತಿಯೊಂದನ್ನು ತಿಳಿಸ್ತಾನೆ, ಹೇಗಿತ್ತೋ ಹಾಗೆ. ಯಾಕೆಂದರೆ, ಸತ್ಯ ಹೇಳೋದು ಸೈನಿಕನ ಕರ್ತವ್ಯ. ಕಲ್ಲುಗೋಡೆಯೋ ಎನ್ನುವ ಹಾಗೆ ಲೆಫ್ಟಿನೆಂಟ್ ಆತನನ್ನೇ ನೋಡ್ತಾನೆ.

ಮುಖತಿರುಗಿಸಿ, ದೃಷ್ಟಿ ಕೆಳಹಾಕ್ತಾನೆ. ಹುಂ."

ಅಡುಗೆಯವನು ಸುರುಸುರು ಎಂದು ಉಸಿರೆಳೆದು ಗೊಣಗಿದ.

"ಒಬ್ಬ ಏನು ಹೇಳಬಹುದು, ಏನು ಹೇಳಬಾರದು, ಅನ್ನೋದು ನನಗೆ ಗೊತ್ತಿದ್ದರೆ! ಲೆಫ್ಟಿನೆಂಟನ್ನು ಅವರು ಸೆರೆಯಲ್ಲಿಟ್ಟರು. ಅವನ ತಾಯಿ....ಓ ನಮ್ಮಪ್ಪ ದೇವರೇ! ನನಗೆ ಯಾವತ್ತೂ ಯಾರೂ ಏನನ್ನೂ ಕಲಿಸಲಿಲ್ಲ !"

ಸೆಖೆಯಾಯಿತು. ಪ್ರತಿಯೊಂದೂ ಅಲುಗಿಕೊಂಡು ಮೆಲುಧ್ವನಿಯಲ್ಲಿ ಗುಣುಗುಣಿಸಿತು. ಕೊಠಡಿಯ ಲೋಹದ ಗೋಡೆಗಳಾಚೆಗೆ ಹುಟ್ಟುಗಳ ಚಕ್ರ ಸದ್ದುಮಾಡಿತು; ನೀರು ಸೀರಾಡಿತು. ಬೆಳಕಿಂಡಿಯನ್ನು ಹಾದು ಅಗಲವಾದ ಪ್ರವಾಹವಾಗಿ ನದಿ ಹರಿಯಿತು. ಹುಲ್ಲುಗಾವಲ ಪಟ್ಟಿಯೊಂದು ದೂರದಲ್ಲಿ ಕಾಣಿಸಿತು. ದೂರದಲ್ಲಿ ಮರಗಳು ಅಸ್ಪಷ್ಟವಾಗಿ ತೋರಿಸಿಕೊಂಡುವು. ಎಲ್ಲ ಸದ್ದುಗಳೂ ನನ್ನ ಕಿವಿಗೆ ಎಷ್ಟೊಂದು ರೂಢಿಯಾಗಿದ್ದುವೆಂದರೆ, ಹಡಗಿನ ಮುಂಭಾಗದಲ್ಲಿ ಕುಳಿತ ನಾವಿಕನೊಬ್ಬ ಬೇಸರ ಬರುವಂತೆ "ಏ-ಳು, ಏ-ಳು!" ಎಂದು ಉಚ್ಚರಿಸುತ್ತಿದ್ದರೂ, ಮೌನದ ಅರಿವು ಮಾತ್ರ ನನಗಿತ್ತು,

ಪ್ರತಿಯೊಂದರಿಂದಲೂ ದೂರವಿರಲು ನಾನು ಇಷ್ಟಪಟ್ಟೆ. ಕಿವಿಗೊಡುವುದು, ಕೆಲಸ ಮಾಡುವುದು, ಯಾವುದೂ ನನಗೆ ಬೇಕಾಗಿರಲಿಲ್ಲ. ಅಡುಗೆಮನೆಯ ಬಿಸಿಯಾದ ಜಿಗುಟು ವಾಸನೆ ಬರದಕಡೆ ಎಲ್ಲೋ ದೂರದಲ್ಲಿ ಕುಳಿತು, ಶಾಂತವಾದ ಆಯಾಸಗೊಂಡ ಆ ಬದುಕು ನೀರಮೇಲೆ ಜಾರಿಹೋಗುವುದನ್ನು, ತೂಕಡಿಸುತ್ತಿರುವ ಕಣ್ಣುಗಳಿಂದ ದಿಟ್ಟಿಸುತ್ತ ಕುಳಿತುಕೊಳ್ಳಲು ನಾನು ಅಪೇಕ್ಷಿಸಿದೆ.

"ಓದು!" ಎಂದು ಅಡುಗೆಯವನು ನನ್ನ ತಾಳ್ಮೆಯನ್ನು ಪರೀಕ್ಷಿಸುತ್ತ ಆಜ್ಞಾಪಿಸಿದ.

ಮೊದಲ ತರಗತಿಯ ಚಾಕರರೂ ಆತನಿಗೆ ಹೆದರುತ್ತಿದ್ದರು. ಮೆತ್ತಗಿನ, ಬಾಯಿಮುಚ್ಚಿಯೇ ಇರುತ್ತಿದ್ದ, ಅಧಿಕಾರಿಯೂ ಸ್ಮುರಿಗೆ ಹೆದರುತ್ತಿದ್ದನೆಂದು ಅನಿಸುತ್ತಿತ್ತು.

ಪಾನಮಂದಿರದ ನೌಕರರೆಡೆಗೆ ಅವನು ಕೂಗಿ ಹೇಳುತ್ತಿದ್ದ:

"ಹೇಯ್, ಹಂದಿ! ಬಾ ಇಲ್ಲಿ, ಕಳ್ಳ! ನರಭಕ್ಷಕರು! ಅಂಬ್ರಾಕ್ಯುಲಮ್ !"

ಹಡಗಿನ ಕೆಲಸಗಾರರೂ ಉಗಿ ವಿಭಾಗದವರೂ ಆತನನ್ನು ಗೌರವದಿಂದ ಕಾಣುತ್ತಿದ್ದರು. ಆತನ ಒಲವನ್ನು ಸಂಪಾದಿಸಿ ಅದು ಇದು ಇಸಕೊಳ್ಳುತ್ತಿದ್ದರು ಕೂಡಾ. ಆತ ಅವರಿಗೆ, ಸಾರಿಯಿಂದ ಮಾಂಸದ ಚೂರುಗಳನ್ನು ಕೊಡುತ್ತಿದ್ದ; ಅವರ ಸಂಸಾರಗಳ ವಿಷಯ, ಹಳ್ಳಿಯಲ್ಲಿನ ಜೀವನದ ವಿಷಯ, ವಿಚಾರಿಸುತ್ತಿದ್ದ. ಕರಿ ಮುಚ್ಚಿದ, ಜಿಗುಟಾದ, ಬಯೆಲೋ ರಷ್ಯನ್ ಉಗಿ ಕೆಲಸಗಾರರನ್ನು, ಹಡಗಿನಲ್ಲಿ ತುಚ್ಛವಾಗಿ ಕಾಣಲಾಗುತ್ತಿತ್ತು. ರಷ್ಯನರು ಅವರನ್ನು ಹಿಮ ಗಂತ್ತುಗಳೆಂದು ಕರೆಯುತ್ತಿದ್ದರು. ಹೇರೆತ್ತು, ಹೇರೆತ್ತು, ಹೊರಗೆ ಹಾಕ್ಬೇಕು ನಿನ್ನನ್ನು," ಎಂದು ಪೀಡಿಸುತ್ತಿದ್ದರು.

ಸ್ಮುರಿಗೆ ಇದರಿಂದ ರೇಗುತ್ತಿತ್ತು. ಆತ ಉದ್ವಿಗ್ನನಾಗುತ್ತ, ಮುಖ ಕೆಂಪಾಗಿಸಿಕೊಂಡು, ಉಗಿಕೆಲಸಗಾರರ ಮೇಲೆ ಕೂಗಾಡುತ್ತಿದ್ದ:

"ನಿಮ್ಮ ಮೇಲೆ ಹೀಗೆ ತುಳಿದಾಡೋದಕ್ಕೆ ಯಾವ ಸುಡುಗಾಡಿಗೆ ನೀವು ಅವರಿಗೆ ಬಿಡೋದು?

ಹಾಳಾದ ಕಾತ್ಸಪರು*—ಗುದ್ದಿ ರಂತೆ ಅವರ ಮುಸುಡಿಗೆ!"

ಒಂದು ದಿನ, ಹಡಗು ಕಾರ್ಮಿಕರ ಮೇಲಧಿಕಾರಿ—ಉದ್ಧಟನಾದ ಸೊಗಸುಗಾರ—ಆ ನಿಗೆ ಅಂದೆ."

"ಹೇರಿತ್ತುಗಳು ಮತ್ತು ಖೊಖೋಲರು?* ಒಬ್ಬನು ಇನ್ನೊಬ್ಬನಷ್ಟೇ ಒಳ್ಳೆಯವನು."

ಅಡುಗೆಯವನು ಆತನ ಸೊಂಟಪಟ್ಟಿಗೂ ಕತ್ತಿನ ಹಿಂಭಾಗಕ್ಕೂ ಕೈಹಾಕಿ, ಆತನನ ಗಾಳಿಯಲ್ಲಿ ಮೇಲಕ್ಕೆ ಎತ್ತಿ, ಅಲುಗಿಸತೊಡಗಿದ.

"ಜಜ್ಜಿ ಮುದ್ದೆ ಮಾಡಲಾ ನಿನ್ನನ್ನು?" ಎಂದು ರೇಗಾಡಿದ.

ಹಡಗಿನಲ್ಲಿ ಆಗಾಗ್ಗೆ ಜಗಳಗಳು ಉಂಟಾಗಿ ಹೊಡೆದಾಟದಲ್ಲಿ ಪರಿಣಮಿಸುತ್ತಿದ್ದುವ ಆದರೆ, ಸ್ಮುರಿಗೆ ಎಂದೂ ಯಾರೂ ಹೊಡೆಯಲಿಲ್ಲ. ಒಂದು ವಿಷಯವೆಂದರೆ, ಆತ ಅಸಾಧಾರ ವಾಗಿ ಬಲಿಷ್ಠನಾಗಿದ್ದ. ಇನ್ನೊಂದೆಂದರೆ, ಕಪ್ತಾನನ ಹೆಂಡತಿಯೊಡನೆ ಆತ ಒಳ್ಳೆಯ ಸಂಬಂ ರಿಸಿಕೊಂಡಿದ್ದ. ಆಕೆ, ಎತ್ತರದ ಚೆಲುವೆ. ಗಂಡಸುತನ ತೋರುವ ಮುಖವಿತ್ತು ಆಕೆ ತಲೆಗೂದಲನ್ನು ಹುಡುಗನ ಕ್ರಾಪಿನಂತೆ ಆಕೆ ಕತ್ತರಿಸಿದ್ದಳು.

ಆತ ಶೀಷೆಗಟ್ಟಲೆ ವೋಡ್ಕಾ ಕುಡಿಯುತ್ತಿದ್ದ. ಆದರೆ ಎಂದೂ ಅಮಲೇರುತ್ತಿರಲಿಲ್ಲ ಬೆಳಗ್ಗೆಯೇ ಕುಡಿಯಲು ಆರಂಭಿಸುತ್ತಿದ್ದ. ಒಂದು ಶೀಷೆ ನಾಲ್ಕು ಘಟ್ಟಗಳಲ್ಲಿ ಮುಗಿಯ ತ್ತಿತ್ತು. ಬೀರ್‌ಪಾನೀಯವನ್ನಾದರೆ ದಿನವೆಲ್ಲಾ ಕುಡಿಯುತ್ತಲೇ ಇರುತ್ತಿದ್ದ. ಕ್ರಮಕ್ರಮೇ ಆತನ ಮುಖ ರಂಗೇರುತ್ತಿತ್ತು. ಕರಿದು ಕಣ್ಣುಗಳು ಅಚ್ಚರಿಗೊಂಡವನಂತೆ ದ್ರವಿಸುತ್ತಿದ್ದುವ

ಕೆಲವೊಮ್ಮೆ ಸಂಜೆ ಆತ, ಘಂಟೆಘಂಟೆಗಳ ಕಾಲ ಡೆಕ್ಕಿನ ಮೇಲೆ ಕುಳಿತಿರುತ್ತಿದ ಗಾತ್ರದ ಆ ಬಿಳಿಯ ಆಕೃತಿ, ಹಿಂದಕ್ಕೆ ಸರಿಯುತ್ತಿದ್ದ ದೂರವನ್ನು ವ್ಯಗ್ರವಾಗಿ ದಿಟ್ಟಿಸುತ್ತಿತ್ತು ಅಂತಹ ಘಳಿಗೆಗಳಲ್ಲಿ ಹೆಚ್ಚಿನ ಜನ ಆತನ ಬಗೆಗೆ ವಿಶೇಷ ಭೀತಿಯಿಂದಿರುತ್ತಿದ್ದರು. ಆದ ನನಗೆ, ಅವನ ವಿಷಯದಲ್ಲಿ ಕನಿಕರವೆನಿಸುತ್ತಿತ್ತು.

ಯಾಕೋವ್ ಇವಾನೋವಿಶ್, ಮುಖಕೆಂಪೇರಿ, ಬೆವರುಸುರಿಸುತ್ತ, ಅಡುಗೆಮನೆಯಿಂ ಹೊರಬಂದು, ತನ್ನ ಬೊಕ್ಕತಲೆಯನ್ನು ಕೆರೆಯುತ್ತಿದ್ದ. ಬಳಿಕ, ನಿರಾಶೆಯಿಂದ ಕೈಬೀ ಮಾಯವಾಗುತ್ತಿದ್ದ. ಅಥವಾ, ದೂರದಲ್ಲೆ ನಿಂತು ಆತ ಹೇಳುತ್ತಿದ್ದ:

"ಪುಟ್ಟಮೀನು ನಾರ್ತಿದೆ."

"ಸಾಲಾಡ್ ಮಾಡು."

"ಮೀನಿನ ಸೂಪೋ ಬೇಯಿಸಿದ ಮೀನೋ ಬೇಕೂಂತ ಯಾರಾದರೂ ಕೇಳಿದರೆ ಏ ಮಾಡೋಣ?"

"ಕೇಳಿದ್ದನ್ನೇ ಮಾಡು. ಅವರು ಏನು ಕೊಟ್ಟರೂ ತಿನ್ತಾರೆ."

ಕೆಲವೊಮ್ಮೆ ನಾನು, ಧೈರ್ಯ ತಳೆದು ಅವನ ಬಳಿ ಸಾರುತ್ತಿದ್ದೆ.

ಪ್ರಯಾಸಪಟ್ಟು, ನನ್ನೆಡೆಗೆ ತಿರುಗಿ ಆತ ಕೇಳುತ್ತಿದ್ದ:

---

*ಕಾತ್ಸಪರು— ರಷ್ಯನರಿಗಿರುವ ಅವಮಾನದ ಅಡ್ಡ ಹೆಸರು.

*ಖೊಖೋಲರು—ಉಕ್ರೇನಿನವನಿಗೆ ಅವಮಾನದ ಅಡ್ಡ ಹೆಸರು.

"ಏನು ಬೇಕು?"

"ಏನೂ ಇಲ್ಲ."

"ಒಳ್ಳೇದು."

ಒಮ್ಮೆ ಆತನಿಗೆ ನಾನೆಂದೆ.

"ನಿನ್ನನ್ನು ಕಂಡು ಪ್ರತಿಯೊಬ್ಬರೂ ಯಾಕೆ ಇಷ್ಟು ಹೆದರ್ತಾರೆ? ನೀನು ಎಷ್ಟೊಂದು ಒಳ್ಳೆಯವನು."

ನನ್ನ ಪ್ರಶ್ನೆಯಿಂದ ಆತ ಸಿಟ್ಟಾಗಲಿಲ್ಲವೆಂದು ನನಗೆ ಅತ್ಯಂತ ಆಶ್ಚರ್ಯವೇ ಆಯಿತು.

"ನಾನು ಒಳ್ಳೆಯವನಾಗಿರೋದು ನಿನ್ನ ವಿಷಯದಲ್ಲಿ ಮಾತ್ರ," ಎಂದು ಆತ ಉತ್ತರವಿತ್ತ. ತಕ್ಷಣವೇ, ಯೋಚನಾಪೂರ್ಣವಾದ ಸದ್ಭಾವನೆಯ ಸ್ವರದಲ್ಲಿ ಆತ ಮಾತು ಸೇರಿಸಿದ: "ಅಥವಾ ಎಲ್ಲರ ವಿಷಯದಲ್ಲೂ ನಾನು ಒಳ್ಳೇಯವನಾಗೇ ಇದೇನೋ ಏನೋ. ನಾನು ಅದನ್ನು ತೋರಿಸಿಕೊಳ್ಳೋದಿಲ್ಲ, ಅಷ್ಟೆ. ನೀನು ಒಳ್ಳೇಯವನೆಂದು ಜನರಿಗೆ ತೋರಿಸಬಾರದು. ಹಾಗೆ ಮಾಡಿದರೆ, ಅವರು ನಿನ್ನನ್ನು ಮುಗಿಸಿಯೇ ಬಿಡ್ತಾರೆ. ಒಳ್ಳೆಯ ಮನುಷ್ಯನ ಮೇಲೆ ಜನರು, ಸುರಿಯುತ್ತಿರೋ ಮಂಜಿನ ಮಧ್ಯೆ ಬೆಚ್ಚಗಿನ ತಿಟ್ಟೆ ಅಂತ, ಹತ್ತಿ ಕೂತು, ಆತನನ್ನು ಕೆಳಕ್ಕೆ ತುಳೀತಾರೆ. ಹೋಗು, ಒಂದಿಷ್ಟು ಬೀರ್ ತಾ."

ಒಂದು ಗ್ಲಾಸಿನ ಬಳಿಕ ಇನ್ನೊಂದಾಗಿ ಆ ಬೀರನ್ನು ಕುಡಿದಾದ ಮೇಲೆ, ಮೀಸೆಯನ್ನು ನಾಲಿಗೆಯಿಂದ ಸವರಿ, ಆತನೆಂದ:

ನೀನು ಸ್ವಲ್ಪ ದೊಡ್ಡ ಹಕ್ಕಿಯಾಗಿದ್ದಿದ್ದರೆ, ನಿನಗೆ ನಾನು ಎಷ್ಟೋ ವಿಷಯ ಹೇಳಿಕೊಡಬಹುದಾಗಿತ್ತು. ಕಿವಿಗೊಟ್ಟು ಕೇಳಬೇಕಾದ ಒಂದೆರಡು ವಿಷಯಗಳು ನನಗೆ ಗೊತ್ತಿವೆ. ನಾನೇನೂ ಮೂರ್ಖನಲ್ಲ. ನೀನು ಪುಸ್ತಕಗಳನ್ನು ಓದಬೇಕು; ನೀನು ತಿಳಿಯಬೇಕಾದದ್ದನ್ನೆಲ್ಲಾ ಪುಸ್ತಕಗಳು ಹೇಳ್ತವೆ. ಪುಸ್ತಕವೆನ್ನುವುದು ಅಪೂರ್ವವಸ್ತು. ಒಂದಿಷ್ಟು ಬೀರ್ ಕೊಡಲೇನು?"

"ನಾನು ಅದನ್ನು ಇಷ್ಟಪಡೋದಿಲ್ಲ."

"ಒಳ್ಳೇದು. ಕುಡಿಯೋದಕ್ಕೆ ಶುರು ಮಾಡ್ಬೇಡ, ಕುಡಿತ, ಒಂದು ಮಹಾಯಾತನೆ. ವೋಡ್ಕಾ, ಪಿಶಾಚಿ ಸೃಷ್ಟಿಯೇ ಸರಿ. ನಾನು ಶ್ರೀಮಂತನಾಗಿದ್ದಿದ್ದರೆ ನಿನ್ನನ್ನು ಶಾಲೆಗೆ ಕಳಿಸ್ತಿದ್ದೆ. ವಿದ್ಯೆ ಇಲ್ಲದ ಮನುಷ್ಯ ಬರೇ ಹೇರೆತ್ತೇ ಸರಿ. ಬಂಡಿ ಎಳೆಯೋದಕ್ಕೆ ಕಟ್ಟಲಿ, ಕಡಿದು ಮಾಂಸ ಮಾಡಲಿ,—ಆತನಿಗೆ ಗೊತ್ತಿರೋದೊಂದೇ : ಬಾಲ ನೆಟ್ಟಗೆ ಮಾಡೋದು."

ಕಪ್ತಾನನ ಹೆಂಡತಿ ಆತನಿಗೆ ಗೊಗೋಲನ ಒಂದು ಗ್ರಂಥವನ್ನು ಕೊಟ್ಟಳು. 'ಭೀಕರ ಪ್ರತೀಕಾರ'ವನ್ನು ನಾನು ಆತನಿಗೆ ಓದಿ ಹೇಳಿದೆ. ನನಗೆ ಅದು ಬಹಳ ಇಷ್ಟವಾಯಿತು: ಆದರೆ ಸ್ಮೂರಿ ಸಿಟ್ಟಿನಿಂದ ಕೂಗಾಡಿದ:

"ಬರೇ ಬುರುಡೆ, ಅರ್ಥವಿಲ್ಲದ್ದು. ಯಕ್ಷಿಣಿ ಕಥೆ. ಇದಕ್ಕಿಂತ ಬೇರೆ ರೀತಿಯ ಪುಸ್ತಕಗಳಿವೆ ಅಂತ ನನಗೆ ಖಂಡಿತ ಗೊತ್ತು."

ಆ ಪುಸ್ತಕವನ್ನು ಆತ ನನ್ನಿಂದ ಸೆಳೆದುಕೊಂಡು, ಕಪ್ತಾನನ ಹೆಂಡತಿಗೆ ಹಿಂದಿರುಗಿಸಿ, ಬೇರೊಂದನ್ನು ತಂದ.

ಯಾವುದೋ ಯೋಚನೆಯಲ್ಲಿದ್ದವನಂತೆ ಆತ ಆಜ್ಞಾಪಿಸಿದ:

"ಎಲ್ಲಿ, ಇದನ್ನೋದು: 'ತಾರಾಸ್'—ಅವನ ಇನ್ನೊಂದು ಹೆಸರೇನು? ಕಥೆ ಏನೂಂತ ಕಂಡು ಹಿಡಿ. ಇದು ಚೆನ್ನಾಗಿದೆ ಅಂತ ಹೇಳ್ತಾಳೆ. ಯಾರಿಗೆ ಚೆನ್ನಾಗಿದೆ? ಪ್ರಾಯಶಃ ಆಕೆಗೆ ಚೆನ್ನಾಗಿರಬಹುದು, ನನಗೆ ಕೆಟ್ಟದಾಗಿರಬಹುದು. ತನ್ನ ತಲೆಗೂದಲನ್ನು ಹೇಗೆ ಕತ್ತರಿಸಿಕೊಂಡಿದ್ದಾಳೆ, ನೋಡಿದಿಯಾ? ತನ್ನ ಕಿವಿಗಳನ್ನು ಯಾಕೆ ಕತ್ತರಿಸಿಕೊಳ್ಳಲಿಲ್ಲವೊ?"

ಓಸ್ಟಾಪನ್ನು ತಾರಾಸ್ ಹೋರಾಟಕ್ಕೆ ಆಹ್ವಾನಿಸಿದ ಅಂಶವನ್ನು ನಾವು ತಲಪಿದಾಗ ಅಡುಗೆಯವನು ಕರ್ಕಶವಾಗಿ ನಕ್ಕು, ಅಂದ:

"ಏನಂತೀಯಾ ಇದಕ್ಕೆ? ಒಬ್ಬನ ತಲೇಲಿ ಮೆದುಳಿದೆ; ಇನ್ನೊಬ್ಬನ ತಲೇಲಿ ಗೊಬ್ಬರ ಒಂಟೆಗಳು! ಎಂಥೆಂಥಾದ್ದು ಬರೀತಾರೆ!"

ಆತ ಶ್ರದ್ಧೆಯಿಂದ ಆಲಿಸಿದ; ಆದರೆ ಆಗಾಗ್ಗೆ ಗೊಣಗಿದ:

"ಹುಂ, ಮೂರ್ಖತನ! ಭುಜದಿಂದ ನಡುವಿನವರೆಗೂ ಒಂದೇ ಏಟಿಗೆ ಒಬ್ಬನನ್ನು ಸೀಳೋಕಾಗೋದಿಲ್ಲ. ಸಾಧ್ಯವೇ ಇಲ್ಲ. ಈಟಿಯಲ್ಲಿ ತಿವಿದು, ಒಬ್ಬ ಮನುಷ್ಯನನ್ನು ಮೇಲಕ್ಕೆ ಎತ್ತೋಕಾಗೋದಿಲ್ಲ. ಅದು ಮುರಿದು ಹೋದೀತು. ಸ್ವತಃ ನಾನೂ ಸೈನಿಕನಾಗಿರಲಿಲ್ಲವೇನು?"

ಆಂದ್ರಿ ದ್ರೋಹ ಬಗೆದುದನ್ನು ತಿಳಿದು ಆತ ದಂಗಾದ.

"ನೀಚ! ಒಬ್ಬಳು ಹೆಂಗಸಿಗೋಸ್ಕರ! ಹುಂ!"

ಆದರೆ ತಾರಾಸ್ ತನ್ನ ಮಗನಿಗೇ ಗುಂಡಿಕ್ಕಿ ಕೊಂದಾಗ, ಅಡುಗೆಯವನು ತನ್ನ ಕಾಲುಗಳನ್ನು ಮಂಚದಿಂದ ಕೆಳಕ್ಕೆ ಸರಿಸಿ, ಅದರ ಅಂಚುಗಳನ್ನು ಎರಡೂ ಕೈಗಳಿಂದ ಅಮುಕಿ ಹಿಡಿದು, ಅತ್ತ. ಕಂಬನಿ ನಿಧಾನವಾಗಿ ಆತನ ಕೆನ್ನೆಗಳ ಮೇಲಿಂದ ಕೆಳಕ್ಕುರುಳಿತು, ನೆಲಕ್ಕೆ ತೊಟ್ಟಿಕ್ಕಿತು. ಮೂಗಿನಿಂದ ಸುರುಸುರು ಸದ್ದು ಮಾಡುತ್ತಾ ಆತ ಗೊಣಗಿದ.

"ಓ ದೇವರೇ, ಓ ದೇವರೇ!"

ಒಮ್ಮೆಲೆ ಆತ ನನ್ನೆಡೆ ನೋಡಿ ಅರಚಿದ:

"ನೀನು ಓದುತ್ತ ಹೋಗು, ಪಿಶಾಚಿ ಸಂತಾನವೇ!"

ಮರಣದಂಡನೆಗೆ ಗುರಿಯಾದ ಓಸ್ಟಾಪ್ ತನ್ನ ತಂದೆಯನ್ನು ಉದ್ದೇಶಿಸಿ, "ತಂದೆ! ನಾನು ಕರೆಯೋದು ಕೇಳ್ತಿದಿಯಾ?" ಎಂದಾಗ, ಸ್ಮುರಿ ಮತ್ತಷ್ಟು ಗಟ್ಟಿಯಾಗಿ ಗೋಳೋ ಎಂದು—ಅತ್ತ.

ಸುಂಯ್ ಗುಟ್ಟುತ್ತ ಸ್ಮುರಿ ಅಂದ.

"ಎಲ್ಲಾ ಮುಗಿದೇ ಹೋಯ್ತು, ಎಲ್ಲವೂ. ಹಾ, ಕೊನೆ ಇದೇ ಹಾಗಾದರೆ? ಛೆ, ಎಂಥ ದುಷ್ಟ ವ್ಯವಹಾರ! ಆಗಿನ ಕಾಲದ ಜನರೇ ನಿಜವಾದ ಮಾನವರು. ಆ ತಾರಾಸ್—ಹ್ಞೆ? ಅವ ನಿಜವಾದ ಮಾನವ—ದೇವರಾಣೆಗೂ!"

ಪುಸ್ತಕವನ್ನು ನನ್ನ ಕೈಯಿಂದ ಇಸಿದುಕೊಂಡು, ಹೊದಿಕೆಯನ್ನು ತನ್ನ ಕಣ್ಣೀರಿನಿಂದ ತೋಯಿಸುತ್ತ, ಅದನ್ನೇ ಆತ ಬಲು ಗಮನವಿಟ್ಟು ದಿಟ್ಟಿಸಿದ.

"ಒಳ್ಳೆಯ ಪುಸ್ತಕವೆಂದರೆ ಸರಿಯಾದ ರಜಾ ದಿನ!"

ಅದರ ಬಳಿಕ ನಾವು 'ಐವಾನ್ ಹೋ' ಓದಿದೆವು. ರಿಚರ್ಡ್ ಪ್ಲಾಂಟಾಜೆನೆಟನ್ನು ಸ್ಮುರಿ ಇಷ್ಟಪಟ್ಟ.

"ಅವನೀಗ ರಾಜ!" ಎಂದು ಆತ, ಮೆಚ್ಚುಗೆಯ ಗಾಂಭೀರ್ಯದಿಂದ ನುಡಿದ. ಆದರೆ ಪುಸ್ತಕ ಆತನಿಗೆ ನೀರಸವಾಗಿ ಕಂಡಿತು.

ಸಾಧಾರಣವಾಗಿ ನಮ್ಮ ಅಭಿರುಚಿಗಳು ಬೇರೆ ಬೇರೆಯಾಗಿದ್ದುವು.

'ಅನಾಥ ಟಾಮ್‌ಜೋನ್ಸನ ಚರಿತ್ರೆ'ಯ ಹಳೆಯ ಭಾಷಾಂತರವಾದ 'ಥಾಮಸ್‌ಜೋನ್ಸನ ಕಥೆ' ನನಗೆ ಬಹಳವಾಗಿ ಹಿಡಿಸಿತು.

ಆದರೆ ಸ್ಮುರಿ ಗೊಣಗಿದ.

"ಅರ್ಥವಿಲ್ಲದ್ದು! ಆ ಥಾಮಸ್ ನನಗೇನಾಗಬೇಕು? ಅವನಿಂದ ನನಗೆ ಆಗಬೇಕಾದ್ದಾದರೂ ಏನು? ಬೇರೆ ಪುಸ್ತಕಗಳಿರಲೇಬೇಕು."

ಬೇರೆ ಪುಸ್ತಕಗಳು—'ನಿಷಿದ್ಧ ಪುಸ್ತಕಗಳು, ರಹಸ್ಯ ಪುಸ್ತಕಗಳು, ರಾತ್ರೆ ಹೊತ್ತು ನೆಲ ಮಾಳಿಗೆಯಲ್ಲಷ್ಟೇ ಓದಬೇಕಾದಂಥವು, ಇವೆ ಎಂಬುದು ನನಗೆ ಗೊತ್ತಿದೆಯೆಂದು ಒಂದು ದಿನ ಆತನಿಗೆ ನಾನು ಹೇಳಿದೆ.

ಆತನ ಕಣ್ಣುಗಳು ಅಗಲಗೊಂಡು, ಮೀಸೆ ನೆಟ್ಟಗಾಯಿತು.

"ಏನದು? ಇದೆಂಥಾ ಸುಳ್ಳು ಹೇಳ್ತಿದೀಯಾ?"

"ನಾನು ಸುಳ್ಳು ಹೇಳ್ತಿಲ್ಲ, ಒಮ್ಮೆ ಅಪರಾಧ ಕಥನದ ಸಮಯದಲ್ಲಿ ಧರ್ಮಗುರು ಅವುಗಳ ವಿಷಯ ನನ್ನನ್ನು ಕೇಳಿದ. ಅದಕ್ಕಿಂತಲೂ ಮುಂಚೆ ಅವನ್ನು ಓದುತ್ತಾ ಜನರು ಅಳ್ತಾ ಇದ್ದದ್ದನ್ನು ಕಂಡೆ."

ಅಡುಗೆಯವನು ಜಡನೋಟದಿಂದ ನನ್ನ ಕಡೆ ನೋಡಿದ.

"ಯಾರು ಅತ್ತರು?"

"ಓದೋದನ್ನು ಕೇಳ್ತಿದ್ದ ಒಬ್ಬಳು ಸ್ತ್ರೀ. ಇನ್ನೊಬ್ಬಳು ಹೆದರ್ಕೊಂಡು ಓಡಿಯೇ ಹೋದಳು."

"ಎಚ್ಚರವಾಗು; ನೀನು ಕನಸು ಕಾಣ್ತಿದೀಯಾ," ಎಂದು ಸ್ಮುರಿ ತನ್ನ ಕಣ್ಣುಗಳನ್ನು ನಿಧಾನವಾಗಿ ಕಿರಿದುಗೊಳಿಸುತ್ತ ಹೇಳಿದ. ಒಂದು ಕ್ಷಣ ತಡೆದು, ಆತ ಮುಂದುವರಿಸಿದ.

"ಖಂಡಿತವಾಗಿಯೂ, ರಹಸ್ಯವಾದದ್ದೇನೋ ಎಲ್ಲಿಯೋ ಇರಲೇಬೇಕು. ಇಲ್ಲದಿರೋದು ಸಾಧ್ಯವೇ ಇಲ್ಲ....ಆದರೆ ನಾನು ಮುದುಕನಾದೆ....ಅಲ್ಲದೆ, ಅದಕ್ಕೆ ತಕ್ಕವನೂ ಅಲ್ಲ ...ಆದರೂ, ಆ ವಿಷಯ ಯೋಚಿಸಿದಾಗ...."

ಅಂತಹ ವಾಗ್ಝರಿಯಿಂದ ಆತ ತಾಸುಗಟ್ಟಲೆ ಮಾತನಾಡಲು ಸಮರ್ಥನಾಗಿದ್ದ.

ಏನೇನೂ ಅದರ ಅರಿವಿಲ್ಲದೆಯೇ ಓದುವ ಚಟವನ್ನು ನಾನು ರೂಪಿಸಿಕೊಂಡೆ. ಸಂತೋಷದಿಂದ ಓದಿದೆ. ಪುಸ್ತಕಗಳು ಹೇಳುತ್ತಿದ್ದುದೆಲ್ಲ ಜೀವನದಲ್ಲಿ ಇದ್ದುದಕ್ಕಿಂತ ಭಿನ್ನವಾಗಿ ಹರ್ಷದಾಯಕವಾಗಿತ್ತು. ಇದರಿಂದಾಗಿ ಬದುಕು, ಎಂದಿಗಿಂತ ಹೆಚ್ಚು ದುಸ್ತರವಾಗಿ ಕಂಡಿತು.

ಪುಸ್ತಕಗಳಲ್ಲಿ ಸ್ಮುರಿಯ ಆಸಕ್ತಿಯೂ ಹೆಚ್ಚಿತು. ದುಡಿಯುತ್ತಿದ್ದ ನನ್ನನ್ನು ಆಗಾಗ್ಗೆ ಆತ ಕರೆದುಬಿಡುತ್ತಿದ್ದ.

"ಪೆಶ್ಕೋವ್! ಬಾ, ಓದು."

"ತೊಳೆಯೋದಕ್ಕೆ ಗ್ಲಾಸು ತಟ್ಟೆಗಳ ರಾಶಿಯೇ ಇದೆ."

"ಮಾಕ್ಸಿಂ ತೊಳೀತಾನೆ."

ಒರಟಾಗಿ, ವಯಸ್ಕನಾದ ತಟ್ಟೆ ತೊಳೆಯುವವನಿಂದ ನನ್ನ ಕೆಲಸವನ್ನೂ ಸ್ಮುರಿ ಮಾಡಿಸು ತ್ತಿದ್ದ. ಮಾಕ್ಸಿಂ ಗ್ಲಾಸುಗಳನ್ನೊಡೆದು ಸೇಡು ತೀರಿಸಿಕೊಂಡ.

"ನಿನ್ನನ್ನು ಹಡಗಿನಿಂದ ಹೊರಕ್ಕೆ ಇಳಿಸ್ತೀನಿ," ಎಂದು ಸ್ಟ್ಯುವಾರ್ಡ್ ಶಾಂತಧ್ವನಿಯಲ್ಲಿ ನನಗೆ ಎಚ್ಚರಿಕೆ ಇತ್ತ.

ಒಂದು ದಿನ ಮಾಕ್ಸಿಂ ಉದ್ದೇಶಪೂರ್ವಕವಾಗಿಯೇ, ಮಲಿನ ನೀರಿದ್ದ ಪಾತ್ರೆಯಲ್ಲಿ ಕೆಲವು ಗ್ಲಾಸುಗಳನ್ನು ಬಿಟ್ಟ. ಹೀಗಾಗಿ, ಪಾತ್ರೆಯ ನೀರನ್ನೆತ್ತಿ ನದಿಗೆ ಸುರಿದಾಗ, ಗ್ಲಾಸುಗಳು ಹೋದುವು.

"ಅದು ನನ್ನ ತಪ್ಪು. ನನ್ನ ಲೆಕ್ಕಕ್ಕೆ ಬರಿ," ಎಂದು ಸ್ಮುರಿ, ಸ್ಟ್ಯುವಾರ್ಡಿಗೆ ಹೇಳಿದ.

ಹಡಗಿನ ಚಾಕರರು ಅರ್ಥಪೂರ್ಣನೋಟದಿಂದ ನನ್ನೆಡೆಗೆ ನೋಡತೊಡಗಿದರು.

"ಸರಿ, ಪುಸ್ತಕ ಕೀಟವೇ, ನಿನಗೆ ಸಂಬಳ ಕೊಡ್ತಿರೋದು ಯಾತಕ್ಕೋಸ್ಕರ ಅಂದ್ಕೊಂಡೆ?" ಎಂದು ಅವರು ಕೇಳುತ್ತಿದ್ದರು.

ಅವರು ಬೇಕುಬೇಕೆಂದೇ ಪಾತ್ರೆಗಳನ್ನು ಮಲಿನಗೊಳಿಸಿ ರಾಶಿಹಾಕಿ, ನನ್ನ ಕೆಲಸ ಹೆಚ್ಚಿಸಿ ದರು. ಇದು ಅನರ್ಥದಲ್ಲೇ ಪರ್ಯವಸಾನವಾಗುವುದೆಂದು ನಾನು ಗ್ರಹಿಸಿದೆ. ನನ್ನ ಗ್ರಹಿಕೆ ತಪ್ಪಾಗಿರಲಿಲ್ಲ.

ಒಂದು ಸಂಜೆ ಕೆಂಪುಮುಖದ ಹೆಂಗಸೊಬ್ಬಳು, ಹಳದಿ ಕರವಸ್ತ್ರವಿದ್ದ, ಹೊಸ ನಸುಗೆಂಪು ಕುಪ್ಪಸವಿದ್ದ, ಒಬ್ಬಳು ಹುಡುಗಿಯೊಡನೆ ನಮ್ಮ ಹಡಗನ್ನೇರಿದಳು. ಇಬ್ಬರೂ ತುಸುಕುಡಿ ದಿದ್ದರು. ಹೆಂಗಸು ಏಕಪ್ರಕಾರವಾಗಿ ಮುಗುಳುನಗುತ್ತ, ಪ್ರತಿಯೊಬ್ಬರಿಗೂ ಬಾಗಿ ವಂದಿಸುತ್ತ, ಧರ್ಮಾಧಿಕಾರಿಯಂತೆ ಪುನಃ ಪುನಃ ಕೆಲಪದಗಳನ್ನು ಜಪಿಸುತ್ತ, ಇದ್ದಳು.

"ನನ್ನನ್ನು ಕ್ಷಮಿಸಿ, ನನ್ನ ಮುದ್ದುಗಳೇ. ನಾನು ಕುಡಿದಿರೋದು ಒಂದು ಪುಟ್ಟ ಗುಟುಕು ಮಾತ್ರ. ಅವರು ನನ್ನನ್ನು ನ್ಯಾಯಾಸ್ಥಾನಕ್ಕೆ ಕರಕೊಂಡುಹೋಗಿ, ಬಿಡುಗಡೆಮಾಡಿದರು. ಒಂದಿಷ್ಟು ಕುಡಿದು ಆ ಬಿಡುಗಡೇನ ನಾನು ಆಚರಿಸಿದೆ."

ಹುಡುಗಿ ಅಸ್ಪಷ್ಟ ನಗುತ್ತ, ಅಸ್ಪಷ್ಟ ನೋಟಗಳನ್ನು ಎಲ್ಲರೆಡೆಗೂ ಬೀರುತ್ತ, ಹೆಂಗಸಿನ ಪಕ್ಕೆಯನ್ನು ಒಂದೇ ಸಮನೆ ತಿವಿಯುತ್ತಿದ್ದಳು.

"ನಿನ್ನಷ್ಟಕ್ಕೇ ನೀನು ಹೋಗು ಚೆಲುವೆ! ಹೋಗು!"

ಎರಡನೆಯ ತರಗತಿಯ ವಿಭಾಗದ ಬಳಿ, ಯಾಕೋವ್ ಇವಾನೋವಿಶನೂ ಸರ್ಗಿಯೂ ಮಲಗುತ್ತಿದ್ದ ಕೊಠಡಿಯ ಎದುರುಗಡೆ, ಅವರು ಆಸೀನರಾದರು. ಹೆಂಗಸು ಬೇಗನೆ ಅಲ್ಲಿಂದ ಮಾಯವಾದಳು. ಸರ್ಗಿ, ಕಪ್ಪೆಬಾಯನ್ನು ಶಿಥಿಲವಾಗಿ ತೆರೆದು ಕಿಸಿಯುತ್ತ, ಹುಡುಗಿಯ ಪಕ್ಕ ದಲ್ಲಿ ಕುಳಿತ.

ಆ ರಾತ್ರೆಯ ದುಡಿಮೆ ಮುಗಿದು, ನಾನು ಮಲಗುತ್ತಲಿದ್ದ ಮೇಜಿನ ಮೇಲಕ್ಕೆ ಆಗಲೆ ನಾನು ಹತ್ತಿದ್ದೆ. ಸರ್ಗಿ ನನ್ನ ಬಳಿಗೆ ಬಂದು, ನನ್ನ ಕೈಯನ್ನು ಬಿಗಿಹಿಡಿದ.

"ಬಾ, ನಿನಗೆ ಜೋಡಿಕೊಡಿಸ್ತೇವೆ."

ಆತನಿಗೆ ಅಮಲೇರಿತ್ತು. ನನ್ನ ಕೈಯನ್ನು ಬಿಡಿಸಿಕೊಳ್ಳಲು ಯತ್ನಿಸಿದಾಗ ಆತ ನನಗೆ ಹೊಡೆದ.

"ಬಾ ಅಂದರೆ ಬರಬೇಕು !"

ಮಾಕ್ಸಿಂ ಓಡಿಬಂದ. ಆತನಿಗೂ ಅಮಲೇರಿತ್ತು. ಇಬ್ಬರೂ ನನ್ನನ್ನು, ಡೆಕ್ಕಿನ ಮೇಲ್ಗಡೆ ಮಲಗಿದ್ದ ಪ್ರಯಾಣಿಕರನ್ನು ದಾಟಿ, ತಮ್ಮ ಕೊಠಡಿಯ ಕಡೆಗೆ ಎಳೆದೊಯ್ದರು. ಆದರೆ ಸ್ಮುರಿ ಬಾಗಿಲಬಳಿ ಇದ್ದ. ಆ ಬಾಗಿಲಲ್ಲೇ ಹುಡುಗಿಯ ಎದುರು ಯಾಕೋವ್ ಇವಾನೋವಿಶ್ ನಿಂತಿದ್ದ. ಹುಡುಗಿ ಒಂದೇ ಸಮನೆ ಆತನ ಬೆನ್ನಿಗೆ ಗುದ್ದುತ್ತಿದ್ದಳು.

"ನನ್ನನ್ನು ಹೋಗೋದಕ್ಕೆ ಬಿಡು!" ಎಂದು ಕುಡುಕಸ್ವರದಲ್ಲಿ ಆಕೆ ಕೂಗಾಡುತ್ತಲೇ ಇದ್ದಳು.

ಸೆರ್ಗಿ ಮತ್ತು ಮಾಕ್ಸಿಮರ ಬಿಗಿ ಹಿಡಿತದಿಂದ ಸ್ಮುರಿ ನನ್ನನ್ನು ಸೆಳೆದುಕೊಂಡ. ಅವರಿಬ್ಬರ ತಲೆಗೂದಲನ್ನೂ ಅಮುಕಿಹಿಡಿದು, ಒಂದು ತಲೆಯನ್ನು ಇನ್ನೊಂದಕ್ಕೆ ಕುಟ್ಟಿದ. ಬಳಿಕ, ಡೆಕ್ಕಿನ ಮೇಲೆ ಅವರು ಹರಡಿಬೀಳುವಂತೆ ಅವರನ್ನು ಎತ್ತಿ ಎಸೆದ.

"ನರಭಕ್ಷಕರು!" ಎಂದು ಯಾಕೋವನ ಕಡೆ ನೋಡಿ ನುಡಿದು, ಬಾಗಿಲನ್ನು ಆತನ ಮುಖಕ್ಕೇ ಧಡಾರನೆ ಮುಚ್ಚಿದ. ನನಗೊಂದು ಒದೆಕೊಟ್ಟು ಅರಚಿದ:

"ಹೊರಟುಹೋಗು ಇಲ್ಲಿಂದ!"

ಹಡಗದ ಹಿಂಭಾಗಕ್ಕೆ ನಾನು ಓಡಿದೆ. ಆ ಇರುಳು, ಮೋಡ ಮುಸುಕಿತ್ತು. ಕರಿದಾಗಿತ್ತು ನದಿ. ಹಡಗಿನ ಹಿಂದೆ ಎರಡು ಬೂದು ಹಾದಿಗಳು ಪರಸ್ಪರ ದೂರವಾಗುತ್ತ ಅಗೋಚರ ದಂಡೆಗಳೆಡೆಗೆ ಚಾಚಿದ್ದುವು. ಆ ಹಾದಿಗಳ ಮಧ್ಯೆ ಬರುತ್ತಿತ್ತು ಥತೇಮಾರು. ಒಮ್ಮೆ ಎಡಕ್ಕೆ ಒಮ್ಮೆ ಬಲಕ್ಕೆ ಕೆಂಪು ಬೆಳಕುಗಳು ಕಾಣಿಸುತ್ತಿದ್ದುವು. ಅವು ಏನನ್ನೂ ಬೆಳಗುತ್ತಿರಲಿಲ್ಲ. ಬೇಗನೆ, ಕೊಂಕುಗಳಾಚೆ ನದಿಯಲ್ಲಿ ಮಾಯವಾಗುತ್ತಿದ್ದುವು. ಅವು ಮಾಯವಾದಾಗ, ಇರುಳು ಎಂದಿಗಿಂತ ಹೆಚ್ಚು ಕರಿದಾಗಿ, ಹೆಚ್ಚು ವ್ಯಗ್ರವಾಗಿ, ಕಂಡಿತು.

ಅಡುಗೆಯವನು ಬಂದು, ಆಳವಾದ ನಿಟ್ಟುಸಿರು ಬಿಡುತ್ತ ನನ್ನ ಪಕ್ಕದಲ್ಲೆ ಕುಳಿತು, ಸಿಗರೇಟು ಹಚ್ಚಿದ.

"ಆ ಸೂಳೆ ಹತ್ತಿರಕ್ಕೆ ನಿನ್ನನ್ನು ಎಳಕೊಂಡು ಹೋದರೊ ಅವರು? ಹಂದಿಗಳು! ನಿನ್ನಲ್ಲಿಗೆ ಅವರು ಓಡ್ತಿದ್ದದ್ದು ನನಗೆ ಕೇಳಿಸ್ತು."

"ಅವರಿಂದ ಆಕೆಯನ್ನು ನೀನು ರಕ್ಷಿಸಿದೀಯಾ?"

"ಆಕೆಯನ್ನು?" ಆತ ಹುಡುಗಿಯನ್ನು ಶಪಿಸಿ ನೊಂದಧ್ವನಿಯಲ್ಲಿ ಮುಂದುವರಿಸಿದ: "ಇಲ್ಲಿರುವರೆಲ್ಲಾ ಹಂದಿಗಳು. ಈ ಹಡಗು ಹಳ್ಳಿಗಿಂತಲೂ ಹೊಲಸು. ನೀನು ಎಂದಾದರೂ ಹಳ್ಳಿಯಲ್ಲಿ ವಾಸವಾಗಿದ್ದೆಯಾ?"

"ಇಲ್ಲ."

"ಹಳ್ಳಿ ಕೊಳೆತು ನಾರ್ತದೆ. ಅದೂ ವಿಶೇಷವಾಗಿ ಚಳಿಗಾಲದಲ್ಲಿ."

ಉರಿದು ಮುಗಿದ ಸಿಗರೇಟಿನ ತುಣುಕನ್ನು ನದಿಗೆ ಎಸೆದು, ಆತ ಮುಂದುವರಿದ:

"ಈಯೆಲ್ಲಾ ಹಂದಿಗಳ ನಡುವೆ ನೀನು ದಿಕ್ಕಿಲ್ಲದವನಾಗ್ತೀಯಾ. ನಿನ್ನ ವಿಷಯದಲ್ಲಿ ನನಗೆ

ಕೆಡುಕೆನಿಸ್ತದೆ, ಪುಟ್ಟಮೂಷಿಕ. ಕೆಲವುಸಲ, ಏನುತಾನೆ ನಾನು ಮಾಡಲಾರೆ, ಅನಿಸುತ್ತೆ ಮುಂಡಿಯೂರಿ 'ಇದೇನು ನೀವು ಮಾಡ್ತಿರೋದು, ಹಾದರಕ್ಕೆ ಹುಟ್ಟಿದೋರೆ? ನಿಮಗೆ ಕಣ್ಣು ಕಾಣಿಸ್ತದೆಯೋ ಇಲ್ಲವೋ?' ಎಂದೆಲ್ಲ ಹೇಳೋಣ ಅನಿಸುತ್ತೆ. ಒಂಟೆಗಳು!"

ಹಡಗು ನೀಳವಾದ ಶಿಳ್ಳುಹಾಕಿತು. ತಂತಿಯ ಹಗ್ಗ ನೀರನ್ನು ಬಡೆಯಿತು. ಒಂದು ಕಂದೀಲಿನ ಬೆಳಕು ಕತ್ತಲೆಯನ್ನು ಬಸಿದು ತೂಗಾಡಿತು. ಧಕ್ಕೆಯನ್ನು ತೋರಿಸಿಕೊಟ್ಟಿತು. ಮಬ್ಬಿನಿಂದ ಸಣ್ಣಪುಟ್ಟ ದೀಪಗಳು ಕಾಣಿಸಿಕೊಂಡುವು.

ಅಡುಗೆಯವನು ಗೊಣಗಿದ:

" 'ಕುಡುಕ ಕಾಡು' ಅಂತ. 'ಕುಡುಕ ನದಿ' ಅಂತಲೂ ಬಂದಿದೆ. ಒಮ್ಮೆ, 'ಕುಡುಕ...' ಅಂತ ಒಬ್ಬ ರೇಷ್ಟ ಆಫೀಸರೂ ಇದ್ದ. 'ಅಮಲುತಲೆ' ಅಂತ ಒಬ್ಬ ಗುಮಾಸ್ತನೂ ಇದ್ದ... ನಾನು ದಡಕ್ಕೆ ಹೋಗ್ತೀನಿ."

ಕಾಮಾಪ್ರದೇಶದ ಗಟ್ಟಿಮುಟ್ಟಾದ ಹೆಂಗಸರು, ನೀಳವಾದ ಕೈಗಾಡಿಗಳಲ್ಲಿ ಸೌದೆ ಎಳೆಯುತ್ತಿದ್ದರು. ಪುಟ್ಟ ಚುರುಕು ಹೆಜ್ಜೆಗಳನ್ನಿಡುತ್ತ, ಭಾರದ ಕೆಳಗೆ ಬಾಗುತ್ತ, ಇಬ್ಬಿಬ್ಬರಾಗಿ ಅವರು ಉಗಿ ವಿಭಾಗದ ಕರಿದು ದ್ವಾರದ ಬಳಿಗೆ ಬರುತ್ತಿದ್ದರು. 'ಹಿಯ್!' ಎಂದು, ಪ್ರತಿಧ್ವನಿಸುವ ಸ್ವರಗಳಲ್ಲಿ ನುಡಿಯುತ್ತ, ಆ ದ್ವಾರದೊಳಕ್ಕೆ ನಾಲ್ಕಡಿ ಉದ್ದದ ಕೊರಡುಗಳನ್ನು ಎಸೆಯುತ್ತಿದ್ದರು.

ಅವರು ಕೊರಡುಗಳನ್ನು ಎಳೆಯುತ್ತಿದ್ದಂತೆ, ಅಂಬಿಗರು ಅವರ ಕಾಲುಗಳನ್ನೋ ಸ್ತನಗಳನ್ನೋ ಅಮುಕಿ ಹಿಡಿಯಲು ಯತ್ನಿಸುತ್ತಿದ್ದರು. ಹೆಂಗಸರು ಕೀಚಲುಧ್ವನಿ ಹೊರಡಿಸಿ ಅವರೆಡೆಗೆ ಉಗುಳುತ್ತಿದ್ದರು. ಹಿಂತಿರುಗುವಾಗ ಹೆಂಗಸರು, ತಟ್ಟುವ ಚಿವುಟುವ ಕೈಗಳಿಂದ ರಕ್ಷಿಸಿಕೊಳ್ಳಲು, ಕೈಗಾಡಿಗಳಿಂದಲೆ ಹೊಡೆಯಬೇಕಾಗುತ್ತಿತ್ತು. ಇದನ್ನು ನಾನು, ಹತ್ತಾರು ಸಾರಿ, ಪ್ರತಿಸಲದ ಪ್ರವಾಸದಲ್ಲೂ ಕಂಡಿದ್ದೆ. ನಾವು ಸೌದೆ ಪಡೆಯುತ್ತಿದ್ದ ಪ್ರತಿಯೊಂದು ನಿಲ್ದಾಣದಲ್ಲೂ ಅಂಥದೇ ಆಗುತ್ತಿತ್ತು.

ನಾನು, ಆ ಹಡಗಿನಲ್ಲಿ ಅದೆಷ್ಟೋ ವರ್ಷಗಳ ಕಾಲ ಜೀವಿಸಿದ್ದು, ನಾಳೆ—ಮುಂದಿನ ವಾರ—ಮುಂದಿನ ಶರತ್ಕಾಲದಲ್ಲಿ ಏನೇನು ಆಗುವುದೆಂಬುದನ್ನೆಲ್ಲಾ ತಿಳಿದಿದ್ದ ಮುದುಕನೆಂದು ನನಗೆ ಅನಿಸುತ್ತಿತ್ತು.

ಬೆಳಗಾಗತೊಡಗಿತು. ನದಿಯೊಳಕ್ಕೆ ಚಾಚಿದ್ದ ಮರಳು ಜಾಗದಲ್ಲಿ ಪೈನ್ ಮರಗಳ ದೊಡ್ಡದಾದ ಕಾಡೊಂದು ಇದ್ದುದು ಗೋಚರವಾಯಿತು. ಹೆಂಗಸರು ಗುಡ್ಡವನ್ನೇರಿ, ನಗುತ್ತ ಹಾಡುತ್ತ ಕಿರಿಚುತ್ತ, ಕಾಡಿನ ಕಡೆಗೆ ನಡೆದಿದ್ದರು. ನೀಳವಾದ ಕೈಗಾಡಿಗಳಿಂದ ಸಜ್ಜಿತರಾಗಿದ್ದ ಅವರು ಸೈನಿಕರಂತೆ ಕಂಡರು.

ನನಗೆ ಅಳಬೇಕೆನ್ನಿಸಿತು. ನನ್ನೆದೆಯಲ್ಲಿ ಕಂಬನಿ, ಹೃದಯಕ್ಕೆ ಒತ್ತುತ್ತ ಕುದಿಯಿತು. ಇದರಿಂದ ನನಗೆ ನೋವಾಯಿತು!

ಆದರೆ, ಅಳಲು ನನಗೆ ನಾಚಿಕೆಯಾಯಿತು. ಹೀಗಾಗಿ, ಡೆಕ್ಕನ್ನು ತೊಡೆಯಲು, ಹಡಗಿನ ಚಾಕರ ಬೋರಿನ್‌ಗೆ ನಾನು ನೆರವಾದೆ.

ಬೋರಿನ್ ಒಬ್ಬ ಕ್ಷುಲ್ಲಕ ಮನುಷ್ಯ. ಆತ ಮ್ಲಾನನಾಗಿ ನಿಸ್ತೇಜನಾಗಿ ಇರುತ್ತಿದ್ದ

ಯಾರೂ ಇಲ್ಲದ ಮೂಲೆಗಳನ್ನು ಆರಿಸಿ, ತನ್ನ ಪುಟ್ಟ ಕಣ್ಣುಗಳಿಂದ ಪಿಳಿಪಿಳಿ ನೋಡುತ್ತ ಕುಳಿತಿರುತ್ತಿದ್ದ. ಒಮ್ಮೆ ಆತ ನನ್ನೊಡನೆ ಅಂದ:

"ನನ್ನ ನಿಜವಾದ ಅಡ್ಡಹೆಸರು ಬೋರಿನ್ ಅಲ್ಲ—ಪ್ಲೋರಿನ್ ಅಂತ. ನನ್ನ ತಾಯಿ ಫ್ಲೋರ್-ಸೂಳೆ-ಆಗಿದ್ದಳು, ಅದಕ್ಕೆ. ನನಗೊಬ್ಬಳು ಒಡಹುಟ್ಟಿದವಳಿದ್ದಾಳೆ. ಆಕೆಯೂ ಸೂಳೆ. ಹಾಗೆ ಬಾಳಬೇಕು ಅನ್ನೋದು ಅವರ ವಿಧಿಯಾಗಿತ್ತೂಂತ ಕಾಣ್ತದೆ. ತಮ್ಮ, ವಿಧಿ ಅನ್ನೋದು ಕೊರಳಿಗೆ ಕಟ್ಟಿರೋ ಕಲೆ. ಏಳಬೇಕೂಂತ ನೀನು ಇಷ್ಟಪಡ್ತೀಯಾ. ಆದರೆ, ಆಗೋದಿಲ್ಲ."

ಡೆಕ್ಕನ್ನು ಸ್ವಚ್ಛಗೊಳಿಸುತ್ತಿದ್ದಂತೆ, ಶಾಂತಸ್ವರದಲ್ಲಿ ಆತನೆಂದ:

"ಹುಡುಗೀರನ್ನು ಅವರು ಹೇಗೆ ಕೆರಳಿಸ್ತಾರೆ ಅಂತ ನೋಡಿದಿಯಾ? ಯೋಚಿಸು ಸ್ವಲ್ಪ! ಬಹಳ ಪ್ರಯತ್ನಪಟ್ಟರೆ, ಒದ್ದೆ ಕೊರಡು ಕೂಡಾ ಉರಿಯೋ ಹಾಗೆ ಮಾಡಬಹುದು. ನಾನದನ್ನು ಇಷ್ಟಪಡೋದಿಲ್ಲ, ತಮ್ಮ. ನನ್ನಿಂದ ಅದನ್ನು ಸಹಿಸೋಕೆ ಆಗೋದಿಲ್ಲ. ನಾನು ಹುಡುಗಿಯಾಗಿದ್ದಿದ್ದರೆ, ಯಾವುದಾದರೂ ಕೆರೆಹೊಂಡದಲ್ಲಿ ಮುಳುಗಿ ಸಾಯ್ತಿದ್ದೆ—ದೇವರೇ ಕಾಪಾಡಲಿ ಅಂತ! ನಾವು ಮಾಡಲೇಬೇಕಾದ ದುಡಿಮೆಯಲ್ಲೇ ಸಾಕಾಗಿ ಹೋಗುತ್ತೆ. ಆದರೆ ಜತೆಗೆ, ಹೀಗೆ ಭಾವನೆಗಳನ್ನು ಕೆದಕೋದು! ನಾನು ಹೇಳ್ತೀನಿ—ಸ್ಕೋಪ್ಸಿಗಳು ಖಂಡಿತ ಮೂರ್ಖರಲ್ಲ. ಸ್ಕೋಪ್ಸಿಗಳ ವಿಷಯ ಕೇಳಿದೀಯೇನು? ಷಂಡರು. ಬಹಳ ಚುರುಕು ಜನ. ಜೀವಿಸೋಕೆ ಸರಿಯಾದ ವಿಧಾನ ಯಾವುದೂಂತ ಅವರು ತಿಳಕೊಂಡರು. ಬದುಕಿನ ಹೊಲಸು ಅಲ್ಪ ವಿಷಯಗಳನ್ನೆಲ್ಲ ತೊಡೆದುಹಾಕಿ, ಪರಿಶುದ್ಧವಾಗಿ ದೇವರ ಸೇವೆ ಮಾಡೋದು.

ಕಪ್ತಾನನ ಹೆಂಡತಿ, ಕೊಳಚೆ ರಾಶಿಗಳ ನಡುವಿನಿಂದ ಲಂಗವನ್ನು ತುಸು ಎತ್ತಿಹಿಡಿದು ನಡೆಯುತ್ತ, ನಮ್ಮನ್ನು ಹಾದುಹೋದಳು. ಪ್ರತಿದಿನವೂ ಆಕೆ ಬೇಗನೆ ಏಳುತ್ತಿದ್ದಳು. ಎತ್ತರವಾಗಿದ್ದು, ಶ್ರೀಮದ್ಗಾಂಭೀರ್ಯದಿಂದ ಇರುತ್ತಿದ್ದಳು. ಆಕೆಯ ಮುಖ ಎಷ್ಟೊಂದು ಸ್ಪಷ್ಟವಾಗಿ ಸರಳವಾಗಿತ್ತೆಂದರೆ, ಆಕೆಯ ಹಿಂದೆ ಓಡಿಹೋಗಿ, "ದಯವಿಟ್ಟು ನನಗೆ ಏನನ್ನಾದರೂ ಹೇಳು," ಎಂದು ಹೃತ್ಪೂರ್ವಕವಾಗಿ ನುಡಿಯಲು ಮನಸ್ಸಾಗುತ್ತಿತ್ತು.

ಹಡಗು ನಿಧಾನವಾಗಿ ಧಕ್ಕೆಯಿಂದ ದೂರಸರಿಯಿತು.

"ಹೊರಟೆವು," ಎಂದು ಶಿಲುಬೆಯ ವಂದನೆ ಮಾಡುತ್ತ, ಬೋರಿನ್ ನುಡಿದ.

೬

ಸರಾಪುಲ್‌ನಲ್ಲಿ ಮಾಕ್ಸಿಂ ಹಡಗನ್ನು ಬಿಟ್ಟುಹೋದ. ಆತ ಹೊರಟುಹೋದುದು ಮೌನವಾಗಿ, ಯಾರಿಗೂ ವಿದಾಯದ ವಂದನೆ ಹೇಳದೆ, ಶಾಂತವಾಗಿ, ಗಂಭೀರವಾಗಿ. ಆತನ ಹಿಂದೆ ತಮಾಷೆಯ ಹೆಂಗಸೂ ಹೋದಳು. ಆಕೆ ನಗುತ್ತಲೇ ಇದ್ದಳು. ಎಲ್ಲಾ ಮುದುಡಿಕೊಂಡಿದ್ದ ಹುಡುಗಿಯೂ ಇಳಿದು ಹೋದಳು. ಆಕೆಯ ಕಣ್ಣುಗಳು ಊದಿಕೊಂಡಿದ್ದುವು. ಸರ್ಗಿ ಬಹಳ ಹೊತ್ತು ಕಪ್ತಾನನ ಕೊಠಡಿಯ ಮುಂದೆ ಮಂಡಿಯೂರಿ ಕುಳಿತಿದ್ದ. ಬಾಗಿಲ ಚೌಕಟ್ಟು

ಗಳನ್ನು ಚುಂಬಿಸುತ್ತ, ತನ್ನ ಹಣೆಯನ್ನು ಅದಕ್ಕೆ ಚಚ್ಚಿಕೊಳ್ಳುತ್ತ ಆತ ಅಲ್ಲಿದ್ದ.

"ನನ್ನನ್ನು ಕ್ಷಮಿಸಿ. ಅದು ನನ್ನ ತಪ್ಪಲ್ಲ. ಎಲ್ಲಾ ಮಾಕ್ಸಿಂ ಮಾಡಿದ್ದು," ಎಂದು ಅ ಗೋಳಾಡಿದ.

ಹಡಗಿನ ಚಾಕರು, ಪಾನಮಂದಿರದವನು, ಕೆಲ ಪ್ರಯಾಣಿಕರೂ ಕೂಡಾ, ಆತ ಹೇ ತ್ತಿದ್ದುದು ಸುಳ್ಳೆಂಬುದನ್ನು ತಿಳಿದಿದ್ದರು. ಆದರೂ ಅವರು ಅವನಿಗೆ ಉತ್ತೇಜನ ನೀಡಿದರು.

"ಹಾಗೇ ಇರು, ಬಿಡಬೇಡ! ಅವನು ನಿನ್ನನ್ನು ಕ್ಷಮಿಸೋದು ಖಂಡಿತ."

ಅವರೆಂದಂತೆ, ಕಪ್ತಾನ ಆತನನ್ನು ಕ್ಷಮಿಸಿಯೂ ಬಿಟ್ಟ. ಆದರೆ, ಒಂದು ಒದೆತ ದೊರೆಯಿತ ಸರ್ಗಿ ಎಸೆಯಲ್ಪಟ್ಟುಬಿದ್ದ. ಮರುಕ್ಷಣವೇ ಸರ್ಗಿ, ಬೆಳಗಿನ ಉಪಾಹಾರದ ತಟ್ಟೆಗಳನ ಹೊತ್ತುಕೊಂಡು ಓಡಾಡುತ್ತಿದ್ದ. ಏಟು ಬಿದ್ದ ನಾಯಿಯಂತೆ, ದಾಸಾನುದಾಸನಂತೆ, ಜನರೆ ನೋಡುತ್ತಿದ್ದ.

ಮಾಕ್ಸಿಮನ ಸ್ಥಾನಕ್ಕೆ, ವಿಯಾಟ್ಕಾದಲ್ಲಿ ಒಬ್ಬ ಮಾಜಿ ಸೈನಿಕನನ್ನು ತೆಗೆದುಕೊಂಡ ಆತನದು ಕಿರಿಯ ಆಕೃತಿ. ಪುಟ್ಟ ತಲೆಯೂ ಕೆಂಪು-ಬಾದಾಮಿ ಕಣ್ಣುಗಳೂ ಇದ್ದು ಸ್ಮುರಿಯ ಸಹಾಯಕ ಅಡುಗೆಯವನು, ತಕ್ಷಣವೇ ಆತನನ್ನು ಕೆಲ ಕೋಳಿಮರಿಗಳನ್ನು ಕೊಲ್ಲ ಕಳುಹಿದ. ಎರಡನ್ನು ಸೈನಿಕ ಕೊಂದ. ಉಳಿದುವು ತಪ್ಪಿಸಿಕೊಂಡು ಡೆಕ್ಕಿನ ಮೇಲೆ ಓಡಾ ದುವು. ಪ್ರಯಾಣಿಕರು ಅವನ್ನು ಹಿಡಿದುಕೊಳ್ಳಲು ಯತ್ನಿಸಿದರು. ಆದರೆ ಮೂರು ಕೋ ಗಳು ನದಿಗೆ ಹಾರಿದುವು. ಹತಾಶನಾಗಿ ಸೈನಿಕ, ಅಡುಗೆಮನೆಯ ಬಳಿ ಇದ್ದ ಸೌದೆ ರಾಶಿ ಮೇಲೆ ಕುಳಿತು, ಗೋಳೋ ಎಂದು ಅಳತೊಡಗಿದ.

ಸ್ಮುರಿ ಅಚ್ಚರಿಗೊಂಡು ಕೇಳಿದ:

"ಏನಾಯ್ತು, ಮೂರ್ಖ? ಸೈನಿಕ ಅಳೋದು ಅಂದರೆ ಇದೇನು?"

"ನಾನು ಹೋರಾಡುತ್ತಿದ್ದ ಸೈನಿಕನಲ್ಲ," ಎಂದು ಆ ಯೋಧ ಮೆಲ್ಲನೆ ಉತ್ತರವಿತ್ತ.

ಹಾಗೆ ಹೇಳಿ ಆತ ಕೆಟ್ಟ. ಅರ್ಧ ಘಂಟೆಯೊಳಗೆ, ಹಡಗಿನ ಮೇಲಿದ್ದ ಪ್ರತಿಯೊಬ್ಬ ಅವನನ್ನು ನೋಡಿ ನಗತೊಡಗಿದರು. ಅವರು ಒಬ್ಬೊಬ್ಬರಾಗಿ ಬಂದು, ಸೈನಿಕನ ಕಡೆಗೆ ಬ ಗಣ್ಣಿನಿಂದ ನೋಡಿ, "ಈತ" ಎಂದು, ಗೊಳ್ಳನೆ ಕರ್ಕಶವಾದ ಅಪಮಾನದ ನಗೆ ನಗುತ್ತಿದ್ದರು.

ಮೊದಲು, ಸೈನಿಕ ಅವರನ್ನಾಗಲೀ ಅವರ ನಗೆಯನ್ನಾಗಲೀ ಗಮನಿಸಲಿಲ್ಲ. ಕಣ್ಣೀರನ ತನ್ನ ತೋಳಿನಲ್ಲಿ ಮರೆಸುತ್ತಿರುವನೇನೋ ಎನ್ನುವಂತೆ, ತನ್ನ ಹಳೆಯ ನೂಲಿನಂಗಿಯ ತೊ ನಲ್ಲಿ ಕಂಬನಿ ಒರೆಸುತ್ತ ಸುಮ್ಮನೆ ಕುಳಿತ. ಆದರೆ, ಬೇಗನೆ ಆತನ ಕೆಂಪು-ಬಾದಾಮಿ ಕಣ್ಣು ಸಿಟ್ಟಿನಿಂದ ಉರಿಯತೊಡಗಿದುವು. ವಿಯಾಟ್ಕಾ ಜನರ ವೈಖರಿಯಂತೆ ಚಿಲಿಪಿಲಿ ಎಂದು ಬಂ ಸಮನೆ ಆತ ಅನ್ನತೊಡಗಿದ:

"ನನ್ನ ಮೇಲೆ ಯಾಕೆ ದೃಷ್ಟಿ ನೆಟ್ಟಿರಾ? ದೆವ್ವದ ಹತ್ತಿರಕ್ಕೆ ಹೋಗಿ ಅಲ್ಲೇ ವಾಸವಾ

ನೆರೆದವರಿಗೆ ಮತ್ತಷ್ಟು ಕಚಗುಳಿ ಇಟ್ಟಹಾಗಾಯಿತು. ಆತನ ಪಕ್ಕೆಗಳಿಗೆ ಅವರು ಬೆ ತುರುಕಲೂ ಶರಟನ್ನೂ ಏಪ್ರನನ್ನೂ ಎಳೆಯಲು ತೊಡಗಿದರು. ಹೀಗೆ, ಮಧ್ಯಾಹ್ನದ ಊ ವರೆಗೂ ನಿರ್ದಯವಾಗಿ ಅವನಿಗೆ ಕೀಟಲೆ ಕೊಟ್ಟರು. ಊಟವಾದ ಮೇಲೆ ಯಾರೋ, ಒ ನಿಂಬೆಯ ತೊಗಟೆಯನ್ನು ಮರದ ಚಮಚದ ತುದಿಗೆ ಚುಚ್ಚಿ, ಏಪ್ರನಿನ ಹಗ್ಗಕ್ಕೆ ಕಟ್ಟಿದ

ಸೈನಿಕ ಅತ್ತಿತ್ತ ನಡೆಯುತ್ತಿದ್ದಂತೆ ಚಮಚ ಹಿಂದಕ್ಕೂ ಮುಂದಕ್ಕೂ ತೂಗಾಡಿತು. ಇದನ್ನು ನೋಡಿ ಪ್ರತಿಯೊಬ್ಬರೂ ನಕ್ಕರು. ಆದರೆ ಸೈನಿಕ, ಅವರ ವಿನೋದದ ಕಾರಣವನ್ನು ಊಹಿಸಲಾಗದೆ, ಬೋನಿನಲ್ಲಿ ಬಿದ್ದ ಇಲಿಯಂತೆ, ಕಿಡಿಕಾರಿದ.

ಸ್ಮುರಿ, ಒಂದು ಮಾತನ್ನೂ ಆಡದೆ, ಗಂಭೀರವಾಗಿ, ಅವನನ್ನೇ ನೋಡುತ್ತ ನಿಂತ. ಹೆಂಗಸಿನಂತೆ ಆತನ ಮುಖ ಮೃದುವಾಯಿತು.

ಸೈನಿಕನ ಬಗೆಗೆ ನನಗೆ ಕೆಡುಕೆನಿಸತೊಡಗಿತು.

"ಚಮಚದ ಸಂಗತಿ ಅವನಿಗೆ ತಿಳಿಸಲಾ?" ಎಂದು ಸ್ಮುರಿಯನ್ನು ನಾನು ಕೇಳಿದೆ.

ಆತ ಒಪ್ಪಿಗೆಯಿತ್ತು ತಲೆಯಾಡಿಸಿದ.

ಎಲ್ಲರೂ ನಗುತ್ತಿರುವುದೇಕೆಂದು ಸೈನಿಕನಿಗೆ ನಾನು ಹೇಳಿದಾಗ, ಆತ ಚಮಚವನ್ನು ಹಿಡಿದೆಳೆದು, ನೆಲಕ್ಕೆಸೆದು, ಕಾಲಿನಿಂದ ಅದರಮೇಲೆ ತುಳಿದ; ಎರಡೂ ಕೈಗಳಿಂದ ನನ್ನ ತಲೆಗೂದಲನ್ನು ಅಮುಕಿ ಹಿಡಿದ. ನಾವು ಹೊಡೆದಾಡತೊಡಗಿದೆವು. ತಕ್ಷಣವೇ ನಮ್ಮ ಸುತ್ತಲೂ ನೆರೆದ ಪ್ರೇಕ್ಷಕರಿಗಂತೂ ಆನಂದವಾಯಿತು.

ಸ್ಮುರಿ ಆ ಗುಂಪನ್ನು ಚೆದರಿಸಿದ. ಮೊದಲು ನನ್ನ ಕಿವಿ ಹಿಂಡಿ, ಬಳಿಕ ಸೈನಿಕನ ಕಿವಿಯನ್ನು ಹಿಡಿದು, ನಮ್ಮಿಬ್ಬರನ್ನೂ ಬೇರ್ಪಡಿಸಿದ. ಸ್ಮುರಿಯ ಹಿಡಿತದಿಂದ ತನ್ನನ್ನು ಬಿಡಿಸಿಕೊಳ್ಳಲು ಈ ಸಣ್ಣ ಮನುಷ್ಯ ಮೈತಿರುವುತ್ತ ಹಾರಾಡುತ್ತಿದ್ದುದನ್ನು ಕಂಡು, ಜನರು ಸಂತೋಷದಿಂದ ಅರಚಿದರು, ಶಿಳ್ಳುಹಾಕಿದರು, ಬಿದ್ದುಬಿದ್ದು ನಗುತ್ತ ನೆಲವನ್ನು ತುಳಿದಾಡಿದರು.

"ಸೈನ್ಯಪಡೆಗೆ ಜಯವಾಗಲಿ! ಅಡುಗೆಯವನ ಹೊಟ್ಟೆತಿವಿ!"

ಮಾನವ ಜೀವಿಗಳ ಮಂದೆಯ ಈ ಹುಚ್ಚುಕುಣಿತ, ಒಂದು ಕೊರಡನ್ನೆತ್ತಿಕೊಂಡು ಅವರ ತಲೆಗಳನ್ನೆಲ್ಲ ಚಚ್ಚಬೇಕೆಂಬ ಬಯಕೆಯನ್ನು ನನ್ನಲ್ಲಿ ಹುಟ್ಟಿಸಿತು.

ಸ್ಮುರಿ ಸೈನಿಕನನ್ನು ಬಿಟ್ಟುಕೊಟ್ಟು, ಕಾಡುಮೃಗದಂತೆ ಜನರೆಡೆಗೆ ತಿರುಗಿದ. ಕೈಗಳು ಬೆನ್ನ ಹಿಂದಿದ್ದುವು. ಹಲ್ಲುಗಳೆಲ್ಲ ಕಾಣಿಸುತ್ತಿದ್ದುವು. ಮೀಸೆ ಮಿಸುಕುತ್ತಿತ್ತು.

"ಪ್ರತಿಯೊಬ್ಬರೂ ತಂತಮ್ಮ ಸ್ಥಳಕ್ಕೆ ಹೋಗಿ—ಮಾರ್ಚ್! ನರಭಕ್ಷಕರು!"

ಪುನಃ ಸೈನಿಕ ನನ್ನ ಮೇಲೆ ಬಿದ್ದ. ಸ್ಮುರಿ ಒಂದು ಕೈಯಿಂದ ಆತನನ್ನು ಮೇಲಕ್ಕೆತ್ತಿ, ನೀರಿನ ಕೊಳಾಯಿಯ ಹತ್ತಿರಕ್ಕೆ ಒಯ್ದ. ಅಲ್ಲಿ ನೀರಿನ ಕೆಳಗೆ ಆತನ ತಲೆಯೊಡ್ಡಿಸಿದ. ಆತ ಬಟ್ಟೆ ಚಿಂದಿಯ ಬೊಂಬೆಯೇನೋ ಎನ್ನುವಂತೆ, ಸೈನಿಕನ ಕಿರಿಯ ಕಡ್ಡಿದೇಹವನ್ನು ಅತ್ತಿತ್ತ ತಿರುವಿ, ಚೆನ್ನಾಗಿ ತೋಯಿಸಿದ.

ಹಡಗಿನ ಕೆಲಸಗಾರರು ಕೆಲವರು. ಅವರ ಮೇಲಧಿಕಾರಿ ಮತ್ತು ಉಪಕಪ್ತಾನ ಓಡಿಬಂದರು. ಮತ್ತೊಮ್ಮೆ ಜನರ ಗುಂಪು ನೆರೆಯಿತು. ಎಲ್ಲರ ತಲೆಗಳಿಂದ ಮೇಲಕ್ಕೆ ಸ್ಟ್ಯುವಾರ್ಡ್ ಎಂದಿನಂತೇ ಮೆತ್ತಗೆ ಮಾತಿಲ್ಲದೆ, ಕಾಣಿಸಿಕೊಂಡ.

ಸೈನಿಕ ಸೌದೆ ರಾಶಿಯ ಮೇಲೆ ಕುಳಿತು, ನಡುಗುತ್ತಿದ್ದ ಕೈಗಳಿಂದ ತನ್ನ ಬೂಟುಗಳನ್ನು ಎಳೆದು ತೆಗೆದ. ಪಾದಗಳನ್ನು ಸುತ್ತಿದ್ದ ಬಟ್ಟೆ ಚಿಂದಿಗಳನ್ನು ಹಿಂಡತೊಡಗಿದ. ಆದರೆ ಅವು ಒಣಗಿಯೇ ಇದ್ದುವು. ನೀರು, ಆತನ ಅಸ್ತವ್ಯಸ್ತವಾಗಿದ್ದ ತಲೆಗೂದಲಿಂದ ತೊಟ್ಟಿಕ್ಕಿತು. ಇದನ್ನು ಕಂಡು ಜನರು ಪುನಃ ನಗತೊಡಗಿದರು.

ಗಟ್ಟಿಯಾದ ಕೀರಲುಧ್ವನಿಯಲ್ಲಿ ಸೈನಿಕನೆಂದ:

"ನೋಡ್ತಿರಿ. ಆ ಹುಡುಗನನ್ನು ನಾನು ಕೊಂದೇ ತೀರ್ತೇನಿ!"

ಸ್ಮುರಿ ನನ್ನ ಭುಜ ಹಿಡಿದು ನಿಲ್ಲಿಸಿ, ಉಪಕಪ್ತಾನನಿಗೆ ಏನನ್ನೋ ಹೇಳಿದ. ಹಡಗದ ಕೆಲ
ಗಾರರು ಜನರನ್ನು ಚೆದರಿಸಿದರು.

ಎಲ್ಲರೂ ಹೊರಟುಹೋದ ಬಳಿಕ, ಸೈನಿಕನನ್ನು ಉದ್ದೇಶಿಸಿ ಸ್ಮುರಿ ಹೇಳಿದ:

"ನಿನ್ನನ್ನು ಕಟ್ಕೊಂಡು ಏನಪ್ಪಾ ಮಾಡೋದು ನಾವು?"

ಸೈನಿಕ ಏನನ್ನೂ ಹೇಳಲಿಲ್ಲ. ಆತ ಉಗ್ರಕಣ್ಣುಗಳಿಂದ ನನ್ನನ್ನೇ ನೋಡುತ್ತಿದ್ದ. ಅವ
ದೇಹವಿಡೀ ವಿಚಿತ್ರರೀತಿಯಲ್ಲಿ ಕಿವುಚಿಕೊಳ್ಳುತ್ತಿತ್ತು.

"ಟೇನ್‌ಶನ್, ಅಳುಬುರುಕ!"

"ನಿನ್ನ ತಲೆ! ಇದು ಸೈನ್ಯವಲ್ಲ!" ಎಂದು ಸೈನಿಕ ಉತ್ತರವಿತ್ತ.

ಅದನ್ನು ಕೇಳಿ ಅಡುಗೆಯವನು ಅಪ್ರತಿಭನಾದುದು ನನಗೆ ಕಾಣಿಸುತ್ತಿತ್ತು. ಉಬ್ಬಿ
ಆತನ ಕೆನ್ನೆಗಳು ಇಳಿದುವು. ಆತ ಉಗುಳಿ, ನನ್ನನ್ನೂ ಕರೆದುಕೊಂಡು ಅಲ್ಲಿಂದ ನಡೆ
ಹೋದ. ದಂಗಾದ ನಾನು, ತಿರುತಿರುಗಿ ಸೈನಿಕನನ್ನೆ ನೋಡುತ್ತಿದ್ದೆ. ಆದರೆ, ಸ್ಮುರಿ ಗೊಣಗಿ

"ಜಂಭದ ಮನುಷ್ಯ, ಹ್ನೆ? ಬಾ ನೀನು."

ಸರ್ಗಿ ಓಡಿ ಬಂದು ಪಿಸುಗುಟ್ಟಿದ:

"ಆತ ತನ್ನ ಗಂಟಲು ಕತ್ತರಿಸ್ಕೊಳ್ತಾನಂತೆ!"

"ಏನು!" ಎಂದು ಸ್ಮುರಿ ಬೊಬ್ಬಿಟ್ಟು, ಹಿಂತಿರುಗಿ ಓಡಿದ.

ಪಾನಮಂದಿರದವನ ಕೊಠಡಿಯ ಬಾಗಿಲೆದುರು ಸೈನಿಕ ನಿಂತಿದ್ದ. ಆತನ ಕೈಯಲ್ಲ
ಕೋಳಿಗಳ ತಲೆ ಕಡಿಯುವುದಕ್ಕೂ ಸೌದೆಯನ್ನು ಚೂರು ಮಾಡುವುದಕ್ಕೂ ಉಪಯೋಗಿಸುತ್ತಿ
ದೊಡ್ಡ ಚಾಕುವಿತ್ತು. ಅಲಗುವೊಂಡಾಗಿ, ಗರಗಸದಂತೆ ಕಚ್ಚುಗಳಿದ್ದುವು. ನೀರು ತೊಟ್ಟಿಕ
ತ್ತಿದ್ದ ತಲೆಗೂದಲ ಈ ತಮಾಷೆಯ ಪುಟ್ಟ ಮನುಷ್ಯನನ್ನು ನೋಡಲು, ಕೊಠಡಿಯ ಮುಂ
ಜನರ ಗುಂಪೊಂದು ಸೇರಿತ್ತು. ಆತನ ಮೊಂಡು ಮೂಗಿನ ಮುಖ, ಜೆಲ್ಲಿಯಂತೆ ಕಂಪಿಸುತ್ತಿತ
ಬಾಯಿ, ತೆರೆದು ಜೋತಿತ್ತು. ತುಟಿಗಳು ಕಿವುಚಿಕೊಳ್ಳುತ್ತಿದ್ದುವು. ಆತ ಒಂದೇ ಸಮ
ಗೊಣಗುತ್ತಿದ್ದ:

"ರಾಕ್ಷಸರು. ರಾ—ಕ್ಷ—ಸ—ರು!"

ನಾನು ಯಾವುದರ ಮೇಲೆಯೋ ಹಾರಿನಿಂತು, ಜನರ ತಲೆಗಳ ಮೇಲಿಂದ ಅವರ ಮು
ದತ್ತ ನೋಡಿದೆ. ಅವರು ನಗುತ್ತ, ಕೆನೆಯುತ್ತ, ಒಬ್ಬರಿಗೊಬ್ಬರು ಅನ್ನುತ್ತಿದ್ದರು:

"ನೋಡು, ನೋಡು!"

ಮಾಂಸವಿಲ್ಲದ, ಮಗುವಿನ ಕೈಯಂತಹ, ಕೈಯಿಂದ ಆತ, ತನ್ನ ಶರಟನ್ನು ಷರಾ
ಯೊಳಕ್ಕೆ ತಳ್ಳತೊಡಗಿದಾಗ, ನನ್ನ ಪಕ್ಕದಲ್ಲಿ ನಿಂತಿದ್ದ ಸ್ಫುರದ್ರೂಪಿ ಮನುಷ್ಯನೊಬ್ಬ, ನಿಟ
ಸಿರುಬಿಟ್ಟು ನುಡಿದ:

"ತನ್ನನ್ನು ತಾನು ಕೊಲ್ಲಬೇಕೊಂತ ಆತ ಇರೋದಾದರೆ, ಷರಾಯಿನ ಯಾಕೆ ಮೇಲ
ಎಳೀತಿದ್ದಾನೆ?"

ಅದನ್ನು ಕೇಳಿ ಜನರು ಮತ್ತಷ್ಟು ಗಟ್ಟಿಯಾಗಿ ನಕ್ಕರು. ಆ ರೀತಿ ಸಾಯಲು ಆತ ಶಕ್ತ ೦ದು ಯಾರೂ ನಂಬಿರಲಿಲ್ಲವೆನ್ನುವುದು ಸ್ಪಷ್ಟವಾಗಿತ್ತು. ನಾನೂ ಅದನ್ನು ನಂಬಲಿಲ್ಲ. ಆದರೆ ್ಮೂರಿ, ಆರಕ್ಷಣ ಆತನನ್ನು ದಿಟ್ಟಿಸಿದ ಬಳಿಕ, ತನ್ನ ಹೊಟ್ಟೆಯಿಂದ ಜನರನ್ನು ಅತ್ತಿತ್ತ ತಳ್ಳ ೂಡಗಿ, ಜರೆದಾಡಿದ :

"ಹೊರಟುಹೋಗಿ ಇಲ್ಲಿಂದ, ಮೂರ್ಖ !"

ಏಕವಾಚಕ ಪದವನ್ನು ಸಾಮುದಾಯಿಕ ನಾಮಪದವಾಗಿ ಬಳಸುವುದು ಆತನಿಗೆ ಇಷ್ಟ ಾಗಿತ್ತು. ಆತ ಜನರ ಗುಂಪಿನ ಬಳಿಗೆ ಹೋಗಿ ಎಲ್ಲರನ್ನೂ ಒಟ್ಟಾಗಿ ಸೇರಿಸಿ ಅನ್ನುತ್ತಿದ್ದ.

"ಹೊರಟುಹೋಗಿ, ಮೂರ್ಖ !"

ಇದು ತಮಾಷೆಯಾಗಿರುತ್ತಿತ್ತು. ಆದರೆ ಆ ದಿನ, ಬೆಳಬೆಳಗ್ಗಿನಿಂದ ಹಿಡಿದು ಎಲ್ಲಾ ನರೂ ಒಂದು ದೊಡ್ಡ ಮೂರ್ಖನಾಗಿದ್ದುದರಿಂದ, ಸ್ಮೂರಿ ಹಾಗೆ ಅಂದುದು ಸಮರ್ಪಕವಾಗಿತ್ತು.

ಗುಂಪನ್ನು ಚೆದರಿಸಿದ ಬಳಿಕ ಆತ, ಸೈನಿಕನ ಹತ್ತಿರಕ್ಕೆ ಹೋಗಿ, ತನ್ನ ಕೈಚಾಚಿದ.

"ಆ ಚಾಕು ಕೊಡು."

"ಅದು ಇಲ್ಲದಿದ್ದರೂ ಪರವಾಗಿಲ್ಲ," ಎಂದು ಸೈನಿಕ, ಚಾಕು ಕೊಡುತ್ತಾ ಅಂದ. ಅಡುಗೆ ುವನು ಅದನ್ನು ನನ್ನ ಕೈಗಿತ್ತು, ಸೈನಿಕನನ್ನು ಕೊಠಡಿಯೊಳಕ್ಕೆ ತಳ್ಳಿದ.

"ಮಲಗಿ, ನಿದ್ದೆ ಹೋಗು. ಅಲ್ಲಿ, ಯಾಕೆ ಹೀಗೆ ಮಾಡ್ತೀಯಾ ನೀನು—ಅಂತ ?"

ಸೈನಿಕ ಒಂದು ಮಾತನ್ನೂ ಆಡದೆ ಮಂಚದ ಮೇಲೆ ಕುಳಿತ.

"ಅವನು ಏನಾದರೂ ತಿಂಡಿಯನ್ನು ಒಂದಿಷ್ಟು ವೋಡ್ಕಾವನ್ನೂ ತರ್ತಾನೆ. ನಿನಗೆ ವೋಡ್ಕಾ ುಡಿಯೋ ಅಭ್ಯಾಸ ಇದೆಯೋ ?"

"ಸ್ವಲ್ಪ ಇದೆ."

"ಅವನನ್ನು ಮುಟ್ಬೇಡ ನೀನು. ನಿನ್ನನ್ನು ನೋಡಿ ನಕ್ಕಿದ್ದು ಅವನಲ್ಲ, ತಿಳೀತೆ? ವನಲ್ಲ ಅಂತ ನಾನು ಹೇಳ್ತಿದೀನಿ."

"ನನ್ನನ್ನು ಅವರು ಯಾತಕ್ಕೆ ಆ ರೀತಿ ಹಿಂಸಿಸಬೇಕಾಗಿತ್ತು ?" ಎಂದು ಸೈನಿಕ ಮೃದುವಾಗಿ ೀಳಿದ.

ಒಂದು ನಿಮಿಷ ಸ್ಮೂರಿ ಏನನ್ನೂ ಹೇಳಲಿಲ್ಲ.

ಕೊನೆಯಲ್ಲಿ ಆತನೆಂದ:

"ನನಗೆ ಗೊತ್ತಿದೆ ಅಂದ್ಕೊಂಡಿಯಾ ?"

ಆತನೂ ನಾನೂ ಅಡುಗೆಮನೆಗೆ ಹಿಂತಿರುಗಿದೆವು.

ಹಾದಿಯಲ್ಲಿ ಆತ ಗೊಣಗಿದ:

"ಹುಂ, ಅವರು ಎತ್ತಿಕೊಂಡು ಗೋಳಾಡಿಸಿದ್ದು ಬಡಪಾದರಿಯ ಮನುಷ್ಯನನ್ನು. ನೋಡಿ ಯಾ ನೀನು ? ಜನರು ನಿನಗೆ ಹುಚ್ಚು ಹಿಡಿಸಬಲ್ಲರು, ತಮ್ಮಾ, ಖಂಡಿತ ಹಿಡಿಸಬಲ್ಲರು ಜಿಗ ಣೆಯ ಹಾಗೆ ನಿನಗೆ ಅಂಟ್ಕೊಳ್ತಾರೆ—ಆಮೇಲೆ ಗೊತ್ತೇ ಇದೆ! ಏನು ಹೇಳ್ತಿರೋದು ನಾನು— ಜಿಗಣೆಯೆಂದೆ ? ಎಂಥ ಜಿಗಣೆಗಿಂತಲೂ ಸಾವಿರ ಪಾಲು ಕೆಟ್ಟವರು ಅವರು !"

ಸ್ವಲ್ಪ ಬ್ರೆಡ್ಡು, ಮಾಂಸ ಮತ್ತು ವೋಡ್ಕಾವನ್ನು ಸೈನಿಕನಲ್ಲಿಗೆ ನಾನು ತಂದಾಗ, ಆತ

ಮಂಚದ ಮೇಲೆ ಕುಳಿತು, ಹಿಂದಕ್ಕೂ ಮುಂದಕ್ಕೂ ಓಲಾಡುತ್ತಾ, ಹೆಂಗಸಿನಂತೆ ಮೃದುವಾ ಅಳುತ್ತಿದ್ದ.

"ತಿನ್ನು," ಎಂದೆ.

"ಬಾಗಿಲು ಮುಚ್ಚು."

"ಬೆಳಕಿರೋದಿಲ್ಲ."

"ಮುಚ್ಚು; ಇಲ್ಲದೇ ಇದ್ದರೆ ಅವರೆಲ್ಲಾ ಪುನಃ ಬರ್ತಾರೆ."

ಬಾಗಿಲೆಳೆದುಕೊಂಡು ನಾನು ಹೊರಹೋದೆ. ಆ ಸೈನಿಕ ನನಗೆ ಇಷ್ಟವಾಗಲಿಲ್ಲ. ಸಹಾ ಭೂತಿಯನ್ನಾಗಲೀ ಕರುಣೆಯನ್ನಾಗಲೀ ಆತ ನನ್ನಲ್ಲಿ ಹುಟ್ಟಿಸಲಿಲ್ಲ. ಇದರಿಂದ ನನಗೆ ಅಸಮ ಧಾನವಾಯಿತು. ಅಜ್ಜಿ ಯಾವಾಗಲೂ ನನಗೆ ಹೇಳಿದ್ದಳು:

"ಜನರ ಮೇಲೆ ಕನಿಕರ ತೋರಬೇಕು—ಬಡ ಅದೃಷ್ಟಹೀನರು, ತೊಳಲಾಡ್ತಾ ಇ ವವರು—"

ನಾನು ಹಿಂತಿರುಗಿದಾಗ ಅಡುಗೆಯವನು ಕೇಳಿದ:

"ಕೊಟ್ಟು ಬಂದೆಯಾ ? ಸರಿ. ಹೇಗಿದಾನೆ ?"

"ಅಳುತ್ತಿದ್ದಾನೆ."

"ಹುಂ, ಬಡಪಾಯಿ! ಸೈನಿಕ ಅಂತ ಕರೀತೀಯಾ ಅವನನ್ನು? "

"ಅವನ ವಿಷಯದಲ್ಲಿ ನನಗೆ ವಿಷಾದವೆನಿಸೋದಿಲ್ಲ."

"ಏನು ಹಾಗೆಂದರೆ"?

"ಜನರ ವಿಷಯದಲ್ಲಿ ಒಬ್ಬ ವ್ಯಕ್ತಿ ಯಾವಾಗಲೂ ಕರುಣೆ ತೋರಬೇಕು."

ಸ್ಮುರಿ ನನ್ನ ಕೈಹಿಡಿದು, ನನ್ನನ್ನು ಹತ್ತಿರಕ್ಕೆ ಎಳೆದ.

ಪರಿಣಾಮಕಾರಿಯಾದ ರೀತಿಯಲ್ಲಿ ಆತನೆಂದ:

"ವಿಷಾದಿಸೋಹಾಗೆ ನಮ್ಮನ್ನು ನಾವೇ ಮಾಡೋಕೆ ಆಗೋದಿಲ್ಲ. ಸುಳ್ಳು ಹೇಳೋದಂತ ಸರಿಯಲ್ಲ. ಕೇಳಿಸ್ತೆ? ಹೆಣ್ಣಿಗನಾಗ್ಬೇಡ. ನಿನ್ನ ಮನಸ್ಸನ್ನು ನೀನು ತಿಳಿದುಕೋ."

ನನ್ನನ್ನು ದೂರಕ್ಕೆತಳ್ಳಿ, ನಿರುತ್ಸಾಹದಿಂದ ಆತ ಮಾತು ಸೇರಿಸಿದ:

"ಇದು ನಿನಗೆ ತಕ್ಕ ಜಾಗವಲ್ಲ. ಇಗೋ, ಒಂದು ಸಿಗರೇಟು ತಗೋ."

ಪ್ರಯಾಣಿಕರ ವರ್ತನೆ, ನನ್ನ ಭಾವನೆಗಳನ್ನು ಆಳವಾಗಿ ಕೆದಕಿತ್ತು. ಅವರು ಸೈನಿಕನ ಕೀಟಲೆಕೊಟ್ಟ ರೀತಿಯಲ್ಲಿ, ಸ್ಮುರಿ ಆತನ ಕಿವಿ ಹಿಂಡಿದಾಗ ಸಂತೋಷದಿಂದ ಅವರು ನಕ್ಕ ರಿ ಯಲ್ಲಿ, ವ್ಯಕ್ತಪಡಿಸಲಾಗದಷ್ಟು ಅವಮಾನಕರವಾದುದೇನನ್ನೋ ನಾನು ಗ್ರಹಿಸಿದೆ. ಅಷ್ಟೊಂ ತುಚ್ಛವೂ ಕರುಣಾಜನಕವೂ ಆದ ಸಂಗತಿಯಿಂದ ಅವರು ಸಂತೋಷಪಡುವುದು ಹೇಗೆ ಸಾ ವಿತ್ತು? ಅಷ್ಟೊಂದು ವಿಪರೀತ ತಮಾಷೆಯದು ಅದರಲ್ಲೇನಿತ್ತು?

ಮತ್ತೊಮ್ಮೆ, ಹಡಗದ ಮೇಲಿನ ಬದುಕು ಮೊದಲಿನಂತೆಯೇ ಆಯಿತು. ಪ್ರಯಾಣಿಕ ಕುಳಿತುಕೊಂಡೋ ಮಲಗಿಕೊಂಡೋ ಜಗಿಯುತ್ತಲೋ ಕುಡಿಯುತ್ತಲೋ ಹೊತ್ತು ಕಳೆ ತ್ತಿದ್ದರು. ಇಸ್ಪೀಟು ಆಟವಾಡುತ್ತಿದ್ದರು. ಶಾಂತವಾಗಿ, ಗೌರವಪೂರ್ವಕವಾಗಿ, ಮಾತನಾ ತ್ತಿದ್ದರು. ನದಿಯನ್ನು ದಿಟ್ಟಿಸುತ್ತಿದ್ದರು. ಒಂದು ತಾಸಿನ ಹಿಂದೆ, ಅಷ್ಟೊಂದು ಉದ್ರೇಕದಿಂ

ಗೇಲಿಮಾಡಿ ಶಿಳ್ಳೆಹಾಕುತ್ತಿದ್ದ ಜನರು ತಾವಲ್ಲವೇ ಅಲ್ಲವೇನೋ ಎನ್ನುವಂತಿತ್ತು ಅವರ ವರ್ತನೆ. ಪುನಃ ಅವರು, ಎಂದಿನಷ್ಟೇ ಶಾಂತವಾಗಿದ್ದರು, ಸೋಮಾರಿಗಳಾಗಿದ್ದರು. ಬೆಳಗಿನಿಂದ ರಾತ್ರಿಯವರೆಗೆ ಹಡಗದ ಎಲ್ಲಾ ಕಡೆ, ನೊಣಗಳಂತೆ ಅಥವಾ ಸೂರ್ಯಕಿರಣದಲ್ಲಿ ಕಂಡು ಬರುವ ಧೂಳಿನ ಕಣಗಳಂತೆ, ನಿಧಾನವಾಗಿ ಗುಂಪು ಗುಂಪಾಗಿ ಅಲೆಯುತ್ತಿದ್ದರು. ಹಲವು ಹದಿನೆಂಟು ಜನ ಸೇತುವೆ ಹಲಗೆಯ ತಲೆಯ ಬಳಿ ಗುಂಪುಕೂಡಿ, ಧಕ್ಕೆಗೆ ಇಳಿಯುವುದಕ್ಕೆ ಮುನ್ನ ಶಿಲುಬೆಯ ವಂದನೆ ಮಾಡುತ್ತಿದ್ದರು. ಅವರಂತೆಯೇ ಇದ್ದ, ಅಂಥದೇ ಪೋಷಾಕು ಧರಿಸಿದ್ದ, ಹಲವು ಹದಿನೆಂಟು ಜನ, ಗಂಟುಮೂಟೆಗಳ ಭಾರದ ಕೆಳಗೆ ಬಾಗುತ್ತ, ಹಡಗನ್ನೇರುತ್ತಿದ್ದರು.

ಪದೇಪದೇ ಆಗುತ್ತಿದ್ದ ಜನರ ಈ ವಿನಿಮಯದಿಂದ, ಹಡಗದ ಮೇಲಣ ಬದುಕಿನಲ್ಲೇನೂ ಬದಲಾವಣೆಯಾಗಲಿಲ್ಲ. ಬೇರೆಯವರು ಚರ್ಚಿಸಿದ್ದುದನ್ನೇ ಹೊಸ ಪ್ರಯಾಣಿಕರೂ ಚರ್ಚಿಸುತ್ತಿದ್ದರು: ಭೂಮಿ, ಕೆಲಸ, ದೇವರು, ಹೆಂಗಸರು....ಒಂದೇ ರೀತಿಯ ಪದಗಳನ್ನು ಕೂಡಾ ಅವರು ಬಳಸುತ್ತಿದ್ದರು.

"ನಾವು ಇದನ್ನೆಲ್ಲಾ ಸಹಿಸಬೇಕು ಅನ್ನೋದು ದೇವರ ಇಚ್ಛೆ. ಹೀಗಾಗಿ, ಸಹಿಸ್ತಾ ಇದ್ದೇವೆ. ಅದರ ಬಗ್ಗೆ ನಾವು ಮಾಡುವಂಥಾದ್ದೇನೂ ಇಲ್ಲ. ಅದು ನಮ್ಮ ವಿಧಿ."

ಅವರ ಆ ಮಾತುಗಳಿಗೆಲ್ಲ ಕಿವಿಗೊಡುವುದರಿಂದ ಬೇಸರವೆನಿಸುತ್ತಿತ್ತು, ಸಿಟ್ಟೂ ಬರುತ್ತಿತ್ತು. ಕಶ್ಮಲವನ್ನು ಸಹಿಸುವುದು ನನ್ನಿಂದಾಗುತ್ತಿರಲಿಲ್ಲ. ಕ್ರೂರವಾಗಿ, ಅನ್ಯಾಯವಾಗಿ, ನಡೆಸಿಕೊಳ್ಳುವುದನ್ನು ಸಹಿಸುವ ಅಪೇಕ್ಷೆಯೂ ನನಗಿರಲಿಲ್ಲ. ಅಂತಹ ನಡವಳಿಕೆಗೆ ಅರ್ಹನಾಗುವಂಥದೇನನ್ನೂ ನಾನು ಮಾಡಿರಲಿಲ್ಲವೆಂಬುದು ನನಗೆ ಖಂಡಿತ ಗೊತ್ತು. ಸೈನಿಕನಿಗೂ ಅಂತಹ ದಂಡನೆ ನ್ಯಾಯೋಚಿತವಾಗಿರಲಿಲ್ಲ. ನಗೆಪಾಟಲಾಗುವಂತೆ ಕಾಣಿಸಿಕೊಳ್ಳಬೇಕೆಂದು ಖಂಡಿತವಾಗಿಯೂ ಅವನು ಇಷ್ಟಪಟ್ಟಿರಲಿಲ್ಲ.

ಗಂಭೀರನಾದ ಮೃದು ಹೃದಯದ ಮಾಕ್ಸಿಮನ್ನು ಅವರು ಹಡಗಿನಿಂದ ಹೊರಕ್ಕೆ ಕಳುಹಿದರು. ತುಚ್ಛನಾದ ಸರ್ಗಿಯನ್ನು ಇರಿಸಿಕೊಂಡರು. ಒಬ್ಬ ಮನುಷ್ಯನಿಗೆ ಹುಚ್ಚು ಹಿಡಿಸುವವರೆಗೂ ಚಿತ್ರಹಿಂಸೆಕೊಡಲು ಸಮರ್ಥರಾಗಿದ್ದ ಈ ಜನರು, ಹಡಗಿನ ಕೆಲಸಗಾರರ ಒರಟು ಆಜ್ಞೆಗಳನ್ನು ತಪ್ಪಗಿದ್ದು ಪಾಲಿಸುತ್ತಿದ್ದರೇಕೆ? ಅತಿಕೆಟ್ಟ ಬೈಗಳನ್ನು ಒಂದಿಷ್ಟೂ ಆಕ್ಷೇಪಿಸದೆ ಕೇಳುತ್ತಿದ್ದರೇಕೆ?

ಕೆಲಸಗಾರರ ಅಧಿಕಾರಿ, ಕ್ರೂರವಾದ ತನ್ನ ಸುಂದರ ಕಣ್ಣುಗಳನ್ನು ಕಿರಿದುಗೊಳಿಸುತ್ತಾ, ಗದರಿದ:

"ಕಂಬಿಗಳಿಂದ ದೂರ ಹೋಗಿ! ಹಡಗು ವಾಲುತ್ತಿರೋದು ಕಾಣಿಸ್ತಿಲ್ಲವೆ? ಹೊರಡಿ, ದೆವ್ವಗಳೇ!"

ದೆವ್ವಗಳು ವಿಧೇಯತೆಯಿಂದ ಡೆಕ್ಕಿನ ಇನ್ನೊಂದು ಭಾಗಕ್ಕೆ ಧಾವಿಸುತ್ತಿದ್ದುವು. ಅಲ್ಲಿಂದ ಪುನಃ ಕುರಿಮಂದೆಯಂತೆ ಅವರನ್ನು ಅಟ್ಟಲಾಗುತ್ತಿತ್ತು.

"ಉಫ್, ಇಲಿಗಳು!"

ಹಗಲೆಲ್ಲಾ ಬಿಸಿಯೇರಿದ ಲೋಹದ ತಗಡಿನ ಛಾವಣಿಯ ಕೆಳಗೆ ಸೆಖೆಯ ರಾತ್ರಿಗಳಲ್ಲಿ ಮಲಗುವುದು, ದುಸ್ಸಹವಾಗಿತ್ತು. ಪ್ರಯಾಣಿಕರು ಡೆಕ್ಕಿನ ಮೇಲೆ ಜಿರಳೆಗಳಂತೆ ಹರಿದಾಡುತ್ತಾ,

ಇಷ್ಟ ಬಂದಲ್ಲಿ ನಿದ್ರಿಸುತ್ತಿದ್ದರು. ಹಡಗು ನಿಂತಾಗಲೆಲ್ಲಾ ಕೆಲಸಗಾರರು, ತುಳಿಯುತ್ತಲೊ ಹೊಡೆಯುತ್ತಲೋ ಅವರನ್ನು ಎಬ್ಬಿಸುತ್ತಿದ್ದರು.

"ಹೇಯ್, ಹಾದಿ ಬಿಡಿ. ನಿಮ್ಮ ಜಾಗಗಳಿಗೆ ವಾಪಸು ಹೋಗಿ!"

ಅವರು ಎದ್ದು ನಿದ್ದೆಗಣ್ಣಿನಲ್ಲಿ, ಗೊತ್ತು ಗುರಿ ಇಲ್ಲದೆ ಎಲ್ಲಿಗಾದರೂ ಅಲೆಯುತ್ತಿದ್ದರು.

ಹಡಗಿನ ಕೆಲಸಗಾರರಿಗೂ ಪ್ರಯಾಣಿಕರಿಗೂ ಇದ್ದ ವ್ಯತ್ಯಾಸ, ಅವರ ಉಡುಗೆ ಮಾತ್ರ ಹೀಗಿದ್ದರೂ ಪೋಲೀಸರಂತೆ ಅವರು ಆಜ್ಞಾಪಿಸುತ್ತಿದ್ದರು.

ಜನರ ವಿಷಯದಲ್ಲಿ ಅತಿ ಮುಖ್ಯವಾಗಿ ಕಾಣುವುದು ಅವರ ಸಂಕೋಚಸ್ವಭಾವ, ದೈನ ಬಂದುದನ್ನೆಲ್ಲಾ ಸಹಿಸುವ ದುಃಖಪ್ರವೃತ್ತಿ, ಈ ಸಹನೆಯ ಗಟ್ಟಿ ಕೆಲವೊಮ್ಮೆ ಕ್ರೂರಹರ್ಷೋ ದ್ರೇಕದ ನಿಮಿಷಗಳಿಂದ ಒಡೆಯುತ್ತಿತ್ತು. ಹಾಗಾಗುವುದು ವಿಚಿತ್ರವಾಗಿರುತ್ತಿತ್ತು, ಭಯಾನ ವಾಗಿರುತ್ತಿತ್ತು. ಅಂತಹ ನಿಮಿಷಗಳು ವಾಸ್ತವವಾಗಿ ಆಕರ್ಷಕವಾಗಿಯೂ ಇರುತ್ತಿರಲಿಲ್ಲ ತಮ್ಮನ್ನು ಎಲ್ಲಿಗೆ ಒಯ್ಯುತ್ತಿರುವರೆಂಬುದು ಈ ಜನರಿಗೆ ತಿಳಿದಿರಲಿಲ್ಲವೆಂದು ನನಗೆ ಅನಿಸುತ್ತಿತ್ತು ಹಡಗಿನಿಂದ ತಮ್ಮನ್ನು ಎಲ್ಲಿ ಇಳಿಸಿದರೂ ಒಂದೇ ಎಂದು ಇವರು ಭಾವಿಸಿದ್ದಂತೆ ಭಾಸವಾಗು ತ್ತಿತ್ತು. ಎಲ್ಲಿ ಇಳಿದರೂ ದಡದ ಮೇಲೆ ಅವರು ಇರುತ್ತಿದ್ದುದು ಸ್ವಲ್ಪಹೊತ್ತು ಮಾತ್ರ. ಪುನ ಇದೇ ಹಡಗನ್ನು, ಅಥವಾ ಬೇರೆ ಯಾವುದಾದರೂ ಹಡಗೊಂದನ್ನು ಅವರು ಏರುತ್ತಿದ್ದರು. ಹಡಗು ಪುನಃ ಅವರನ್ನು ಎಲ್ಲಿಗಾದರೂ ಒಯ್ಯುತ್ತಿತ್ತು. ಅವರೆಲ್ಲರೂ ನಿರ್ಗತಿಕರಾದ ನಿರಂತ ಸಂಚಾರಿಗಳು. ಎಲ್ಲಾ ದೇಶಗಳೂ ಅವರಿಗೆ ಪರಕೀಯವಾಗಿದ್ದುವು. ಎಲ್ಲಾ ಜನರೂ ಅವ ಪಾಲಿಗೆ ಅತ್ಯಂತ ಹೇಡಿಗಳಾಗಿದ್ದರು.

ಒಮ್ಮೆ, ನಡುರಾತ್ರಿಯ ಬಳಿಕ ಸ್ವಲ್ಪ ಹೊತ್ತಿನಲ್ಲೇ, ಯಂತ್ರಗಳಲ್ಲೊಂದು ಕೆಟ್ಟ ಹೋಯಿತು. ಫಿರಂಗಿಯಿಂದ ಗುಂಡು ಹಾರಿಸಿದಂತೆ ಸ್ಫೋಟನವಾಯಿತು. ಯಂತ್ರಗಳಿಂ ಹೊರಟ ಬಿಳಿಯ ಉಗಿ ಡೆಕ್ಕನ್ನೆಲ್ಲ ಆವರಿಸಿತು. ಎಲ್ಲ ಬಿರುಕುಗಳ ಮೂಲಕವೂ ದಪ್ಪನೆ ಸುರು ಸುರುಳಿಯಾಗಿ ಹೊರಬಿತ್ತು. ಯಾರೋ ಒಬ್ಬರು ಕಿವಿಯೊಡೆಯುವಂತೆ ಬೊಬ್ಬಿಟ್ಟರು:

"ಗಾವ್ರಿಲೋ! ಒಂದು ತುಂಡು ಫೆಲ್ಟ್ ಮತ್ತು ಕೆಂಪು ಸೀಸ!"

ಯಂತ್ರಗಳ ಕೊಠಡಿಯ ಪಕ್ಕದಲ್ಲಿ, ತಟ್ಟೆಗಳನ್ನು ತೊಳೆಯುತ್ತಿದ್ದ ಮೇಜಿನ ಮೇ ನಾನು ಮಲಗುತ್ತಿದ್ದೆ. ಸ್ಫೋಟನದ ಸದ್ದು ಕೇಳಿ ಬೆಚ್ಚಿಬಿದ್ದ ನನಗೆ ಎಚ್ಚರವಾಯಿತು. ಡೆಕ್ಕಿ ಮೇಲೆ ಪ್ರತಿಯೊಂದೂ ಶಾಂತವಾಗಿತ್ತು. ಯಂತ್ರಗಳು ಉಗಿಯಿಂದ ಸುಂಯ್‌ಗುಡುತ್ತಿದ್ದು ಸುತ್ತಿಗೆಗಳು ಬೇಗಬೇಗನೆ ಬಡಿದು ಸದ್ದುಮಾಡುತ್ತಿದ್ದವು. ಆದರೆ ಮರುಕ್ಷಣದಲ್ಲೆ, ಡೆಕ್ಕಿ ಪ್ರಯಾಣಿಕರೆಲ್ಲ, ಅತ್ಯಂತ ಭಯಾನಕರೀತಿಯಲ್ಲಿ ಕಿರಿಚಾಡುತ್ತಿದ್ದರು, ಬೊಬ್ಬಿಡುತ್ತಿದ್ದರು.

ಬೇಗಬೇಗನೆ ಚೆದರುತ್ತಿದ್ದ ದಟ್ಟನೆಯ ಬಿಳಿಮಂಜಿನಲ್ಲಿ, ಬಿಚ್ಚಿದ ಕೇಶರಾಶಿಯ ಹೆಂಗಸರ ಕೆದರಿದ ತಲೆಗೂದಲ ಮೀನುಗಣ್ಣುಗಳ ಗಂಡಸರೂ, ಒಬ್ಬರನ್ನೊಬ್ಬರು ಕೆಡವುತ್ತ ಅತ್ತಿ ಧಾವಿಸುತ್ತಿದ್ದರು. ಎಲ್ಲರೂ ಗಂಟುಮೂಟೆಗಳನ್ನೂ ಸೂಟ್‌ಕೇಸುಗಳನ್ನೂ ತಬ್ಬಿಕೊಂಡಿದ್ದರ ಎಡವುತ್ತ, ಬೀಳುತ್ತ, ಒಬ್ಬರನ್ನೊಬ್ಬರು ಹೊಡೆಯುತ್ತ, ದೇವರಿಗೂ ಸಂತ ನಿಕೊಲಾಯಿಗ ಮೊರೆಯಿಡುತ್ತಲಿದ್ದರು. ದೃಶ್ಯ ಹೆದರಿಕೆ ಹುಟ್ಟಿಸುವಂತಿತ್ತು, ಆದರೆ ಸ್ವಾರಸ್ಯವಾಗಿರಲಿ ಅವರೇನು ಮಾಡುವರೆಂದು ನೋಡಲು ನಾನು ಜನರ ಹಿಂದೆಯೇ ಓಡುತ್ತಲಿದ್ದೆ.

ನನಗೆ ಅದು, ರಾತ್ರೆ ಹೊತ್ತಿನ ಅಪಾಯದ ಮೊದಲ ಅನುಭವ. ಅದೆಲ್ಲಾ ತಪ್ಪುಗ್ರಹಿಕೆಯ ದ್ದಲವೆಂದೇ ಯಾಕೋ ನನಗೆ ಅನಿಸಿತು. ಹಡಗು ಎಂದಿನ ವೇಗದಲ್ಲಿ ಸಾಗುತ್ತಿತ್ತು. ಬಲ ಡದ ಉದ್ದಕ್ಕೆ ಬಲು ಸಮೀಪದಲ್ಲೇ, ಹುಲ್ಲುಮಾಡುವವರ ಶಿಬಿರಾಗ್ನಿಗಳು ಉರಿಯುತ್ತಿದ್ದುವು. ತ್ತರದಲ್ಲಿ ಪೂರ್ಣಚಂದ್ರ ಬೆಳಗುತ್ತಲಿದ್ದು, ಇರುಳು ಶುಭ್ರವಾಗಿತ್ತು.

ಆದರೂ ಜನರು, ಹೆಚ್ಚು ಹೆಚ್ಚು ಉದ್ವಿಗ್ನಗೊಂಡು ಓಡಾಡುತ್ತಿದ್ದರು. ಮೇಲ್ತರಗತಿಯ ್ರವಾಸಿಗರೂ ಕಾಣಿಸಿಕೊಂಡರು. ಯಾರೋ ಒಬ್ಬರು ನೀರಿಗೆ ಹಾರಿದರು; ಇತರರು ಹಿಂಬಾಲಿ ದರು. ಇಬ್ಬರು ರೈತರೂ ಒಬ್ಬ ಸನ್ಯಾಸಿಯೂ ಕೆಲಕೊರಡುಗಳನ್ನು ಎತ್ತಿಕೊಂಡು, ಡೆಕ್ಕಿಗೆ ೂಳೆ ಹೊಡೆದಿದ್ದ ಒಂದು ಬೆಂಚನ್ನು ಕಿತ್ತರು. ಹಡಗದ ಹಿಂಭಾಗದ ಮೇಲಿಂದ ಕೋಳಿಗಳ ೂಡ್ಡ ಪಂಜರವೊಂದು ಎಸೆಯಲ್ಪಟ್ಟಿತು. ಡೆಕ್ಕಿನ ಮಧ್ಯದಲ್ಲಿ, ಕಪ್ತಾನನ ವೇದಿಕೆಗೆ ಹೋಗುವ ಾದಿಯಲ್ಲಿ, ರೈತನೊಬ್ಬ ನಿಂತುಕೊಂಡು, ತನ್ನನ್ನು ಹಾದು ಓಡುತ್ತಿದ್ದವರಿಗೆಲ್ಲ ಬಾಗಿ ನಮಸ್ಕರಿ ುತ್ತ, ತೋಳನಂತೆ ಅರಚುತ್ತಿದ್ದ:

"ಓ ನಿಜವಾದ ಆಸ್ತಿಕರೇ, ನಾನು ಪಾಪಿ!"

"ಒಂದು ದೋಣಿ ತನ್ನಿ, ದೆವ್ವಗಳೇ!" ಎಂದು, ದಪ್ಪನೆಯ ಸದ್ಗೃಹಸ್ಥನೊಬ್ಬ ಮುಷ್ಟಿಯಿಂದ ನೆದೆಯನ್ನು ಬಡೆದುಕೊಳ್ಳುತ್ತ, ಬೊಬ್ಬಿಟ್ಟ. ಚಡ್ಡಿಯ ಹೊರತು ಬೇರೇನೂ ಆತನ ಮೈಮೇಲಿ ರಲಿಲ್ಲ.

ಹಡಗಿನ ಕೆಲಸಗಾರರು ಅತ್ತಿತ್ತ ಓಡಾಡುತ್ತಿದ್ದರು. ಕತ್ತಿನ ಹಿಂಭಾಗದಲ್ಲಿ ಜನರನ್ನು ಮುಕಿ ಹಿಡಿಯುತ್ತಿದ್ದರು. ತಲೆಗೆ ಗುದ್ದುತ್ತಿದ್ದರು. ಪಕ್ಕಕ್ಕೆ ಎಸೆಯುತ್ತಿದ್ದರು. ರಾತ್ರೆಯ ಡುಗೆಯ ಮೇಲೊಂದು ಕೋಟು ತೊಟ್ಟುಕೊಂಡು ಸ್ಮುರಿ, ಭಾರವಾದ ಹೆಜ್ಜೆಗಳನ್ನಿಡುತ್ತ ಡೆದಾಡಿದ.

ಗುಡುಗುಧ್ವನಿಯಲ್ಲಿ ಆತ ಪ್ರತಿಯೊಬ್ಬರಿಗೂ ಆಗ್ರಹಪೂರ್ವಕವಾಗಿ ವಿನಂತಿ ಮಾಡುತ್ತಿದ್ದ.

ನಾಚಿಕೆಯೂ ಆಗೋದಿಲ್ವೆ ನಿಮಗೆ? ಪೂರ್ತಿ ಹುಚ್ಚು ಹಿಡಿಯಿತೆ? ಹಡುಗು ಭದ್ರವಾಗಿದೆ, ುಳುಗ್ತಿಲ್ಲ. ಕಲ್ಲೆಸೆತದ ದೂರದಲ್ಲೇ ದಡವಿದೆ. ನೀರಿಗೆ ಹಾರಿದ ಮೂರ್ಖರನ್ನೆಲ್ಲ ಹುಲ್ಲು ಾಡುವವರು ಎಳೆದು ಹಾಕಿದ್ದಾರೆ. ನೋಡಿ, ಕಾಣಿಸ್ತಿದೆಯೇನು? ಎರಡು ದೋಣಿ ತುಂಬು ಟ್ಟಿದ್ದಾರೆ."

ಮೂರನೆಯ ತರಗತಿಯ ಪ್ರಯಾಣಿಕರ ತಲೆಗಳ ಮೇಲೆ ಆತ ಮುಷ್ಟಿಪ್ರಯೋಗಿಸಿದ. ಗಾಗಿ, ಡೆಕ್ಕಿನ ಮೇಲೆಲ್ಲಾ ಆ ಪ್ರಯಾಣಿಕರು, ಚೀಲಗಳಂತೆ ಮುಚ್ಚಿಕೊಂಡು ಮುದುಡಿದರು.

ಉದ್ವಿಗ್ನತೆ ಕಡಮೆಯಾಗುವುದರೊಳಗೆ, ತೋಳುಗಳಿಲ್ಲದ ಗಿಡ್ಡನೆಯ ಮೇಲಂಗಿ ತೊಟ್ಟ ಮಂತ ಮಹಿಳೆಯೊಬ್ಬಳು, ಒಂದು ಚಮಚವನ್ನು ಕೈಲಿಹಿಡಿದು ಬೆದರಿಸುತ್ತಾ, ಸ್ಮುರಿಯ ಗೆ ಧಾವಿಸಿ ಕೂಗಾಡಿದಳು:

"ಎಂಥಾ ಸೊಕ್ಕು ನಿನಗೆ!"

ಬೆವರುತ್ತಿದ್ದ ಸದ್ಗೃಹಸ್ಥನೊಬ್ಬ ಆಕೆಯನ್ನು ಹಿಡಿದುಕೊಂಡು ತಡೆದ.

"ಆ ಮೂರ್ಖನನ್ನು ಅವನ ಪಾಡಿಗೇಬಿಡು," ಎಂದು, ತನ್ನ ಮೀಸೆಯನ್ನು ಚೀಪುತ್ತಾ, ುನಿಸಿನಿಂದ ನುಡಿದ.

ಸ್ಮುರಿ ತನ್ನ ಭುಜಕುಣಿಸಿ, ಒಂದೂ ಅರ್ಥವಾಗದವನಂತೆ ಪಿಳಿಪಿಳಿ ದಿಟ್ಟಿಸಿ, ನನ್ನೆಡೆ ತಿರುಗಿ ನುಡಿದ:

"ಏನಂತಿಯಾ ಇದಕ್ಕೆ? ನನ್ನಿಂದ ಅವಳಿಗೆ ಆಗಬೇಕಾದ್ದಾದರೂ ಏನು? ಈ ಮೊದಲು ನನ್ನ ಜೀವಮಾನದಲ್ಲೇ ಅವಳನ್ನು ನೋಡಿಲ್ಲ!"

ಗಿಡ್ಡ ರೈತನೊಬ್ಬ, ತನ್ನ ಮೂಗಿನಿಂದ ಹರಿಯುತ್ತಿದ್ದ ರಕ್ತವನ್ನು ಹಿಂದಕ್ಕೆ ಎಳೆದು ಕೊಳ್ಳುತ್ತಾ ಕೂಗಾಡಿದ:

"ಎಂಥ ಜನರು! ಎಂಥ ದರೋಡೆಖೋರರು!"

ಆ ಬೇಸಗೆಯಲ್ಲಿ ನಾನು, ಉಗಿ ಹಡಗದ ಮೇಲೆ ಎಂತಹ ಗಾಬರಿಯನ್ನು ಎರಡು ಸಲ ಕಂಡೆ. ಎರಡು ಸಲವೂ, ನಿಜವಾದ ಅಪಾಯದ ಫಲವಾಗಿ ಆ ಗಾಬರಿ ಉಂಟಾಗಿರಲಿಲ್ಲ—ಅಪಾಯವನ್ನು ಕುರಿತು ಭೀತಿಯಿಂದ ಉಂಟಾಗಿತ್ತು. ಮೂರನೆಯ ಸಲ ಪ್ರಯಾಣಿಕರು ಇಬ್ಬರ ಕಳ್ಳರನ್ನು ಹಿಡಿದುದರಿಂದ ಗದ್ದಲ ಉಂಟಾಯಿತು. ಅವರಲ್ಲೊಬ್ಬ, ಯಾತ್ರಿಕನಂತೆ ವೇಷ ಪಲ್ಲಟಮಾಡಿದ್ದ. ಪ್ರಯಾಣಿಕರು, ಹಡಗಿನ ಕೆಲಸಗಾರರ ಕಣ್ಣಿಗೆ ಬೀಳದಷ್ಟು ದೂರ ಆ ಕಳ್ಳರನ್ನು ಒಯ್ದು, ಸುಮಾರು ಒಂದು ಘಂಟೆಯ ಕಾಲ ಹೊಡೆದರು. ಕಟ್ಟಕಡೆಯಲ್ಲಿ ಹಡಗಿನ ಕೆಲಸಗಾರರು, ಪ್ರಯಾಣಿಕರ ಕೈಯಿಂದ ಆ ಕಳ್ಳರನ್ನು ಕಾಪಾಡಿದಾಗ, ಜನರ ಗುಂಪು ಅವರ ಮೇಲೆ ಏರಿಬಂತು.

"ಕಳ್ಳರು ಕಳ್ಳರನ್ನೇ ಮರೆಮಾಡ್ತಾರೆ, ನಾವು ನಿಮ್ಮನ್ನು ಬಲ್ಲೆವು!" ಎಂದು ಅವರು ಬೊಬ್ಬಿಟ್ಟರು.

"ನೀವು ಸ್ವತಃ ಕಳ್ಳರು; ಅದಕ್ಕೋಸ್ಕರ ಇವರನ್ನು ಕಾಪಾಡೋದಕ್ಕೆ ಬರ್ತೀರಾ!"

ಪ್ರಜ್ಞೆ ತಪ್ಪುವಂತೆ ಕಳ್ಳರಿಗೆ ಹೊಡೆಯಲಾಗಿತ್ತು. ಮುಂದಿನ ಧಕ್ಕೆಯಲ್ಲಿ ಪೋಲೀಸರ ಕೈಗೆ ಅವರನ್ನು ಒಪ್ಪಿಸಿದಾಗಲು, ತಮ್ಮ ಕಾಲಮೇಲೆಯೇ ತಾವು ನಿಲ್ಲಲು ಅವರು ಶಕ್ತರಾಗಿರಲಿಲ್ಲ.

ಅಂತಹ ಅನೇಕ ಘಟನೆಗಳಾದುವು. ಅದೆಲ್ಲಾ ಎಷ್ಟೊಂದು ವ್ಯಥೆಯನ್ನುಂಟುಮಾಡುತ್ತಿತ್ತೆಂದರೆ, ಮೂಲಭೂತವಾಗಿ ಜನರು ಒಳ್ಳೆಯವರೆ ಅಥವಾ ಕೆಟ್ಟವರೆ? ದುರ್ಬಲರೆ, ಅಥವಾ ಭಯೋತ್ಪಾದಕರೆ?—ಎಂದು ಅಚ್ಚರಿಪಡುವಂತಾಗುತ್ತಿತ್ತು. ಅವರು ಯಾತಕ್ಕೆ ಅಷ್ಟೊಂದು ಕ್ರೂರವಾಗಿ ಮೃಗೀಯವಾಗಿ ದುಷ್ಟತನ ತೋರುತ್ತಿದ್ದರು? ಯಾತಕ್ಕೆ ಅಷ್ಟೊಂದು ನಿರ್ಲಜ್ಜವಾಗಿ ದಾಸರಾಗಿರುತ್ತಿದ್ದರು?

ಅಡುಗೆಯವನನ್ನು ನಾನು ಕೇಳಿದರೆ, ಆತ ಸಿಗರೇಟಿನ ಹೊಗೆಯಿಂದ ಮುಖವನ್ನು ಮುಚ್ಚಿ ಸಿಡುಕಿನಿಂದ ಉತ್ತರವೀಯುತ್ತಿದ್ದ:

"ನಿನಗೇನು ಅದರಿಂದ? ಜನರು ಯಾವಾಗಲೂ ಜನರೇ. ಒಬ್ಬನು ಚತುರ, ಇನ್ನೊಬ್ಬನು ಮೂರ್ಖ. ಪುಸ್ತಕಗಳನ್ನೋದು, ಸುಮ್ಮನೆ ತಲೆಕೆಡಿಸಿಕೊಳ್ಳೋದು ನಿಲ್ಲಿಸು. ಅವು ಸರಿಯಾದ ಪುಸ್ತಕಗಳಾದರೆ, ಎಲ್ಲಾ ಉತ್ತರಗಳೂ ಅವುಗಳಲ್ಲೇ ಇರುತ್ತವೆ."

ಧಾರ್ಮಿಕ ಗ್ರಂಥಗಳನ್ನು, 'ಸಂತರ ಜೀವನಗಳು' ಪುಸ್ತಕವನ್ನು ಆತ ಇಷ್ಟಪಡುತ್ತಿರಲಿಲ್ಲ.

"ಅವೆಲ್ಲಾ ಧರ್ಮಗುರುಗಳಿಗೋಸ್ಕರ, ಅಥವಾ ಧರ್ಮಗುರುಗಳ ಮಕ್ಕಳಿಗೋಸ್ಕರ," ನ್ನುತ್ತಿದ್ದ.

ಅವನಿಗೆ ಇಷ್ಟವಾಗುವಂತೆ ಒಳ್ಳೆಯದೇನನ್ನಾದರೂ ಮಾಡಲು ಅಪೇಕ್ಷಿಸಿ, ಒಂದು ಪುಸ್ತಕ ನ್ನು ಕಾಣಿಕೆಯಾಗಿ ಕೊಡಲು ನಿರ್ಧರಿಸಿದೆ. ಕಜಾನ್ ಧಕ್ಕೆಯಲ್ಲಿ, ಐದು ಕೊಪೆಕ್‌ಗಳನ್ನು ೂಟ್ಟು, 'ಮಹಾಪೀಟರನನ್ನು ಸೈನಿಕನೊಬ್ಬ ಹೇಗೆ ರಕ್ಷಿಸಿದನೆಂಬ ಅದ್ಭುತ ಕಥೆ'ಯನ್ನು ಕೊಂಡು ೂಂಡೆ. ಆದರೆ, ಆಗ ಅಡುಗೆಯವನಿಗೆ ಅಮಲೇರಿತ್ತು ಅದು, ಆತನ ಹತ್ತಿರಹೋಗಲು ಹೆದರಿಕೆ ೂಗುವ ಘಳಿಗೆ. ಹೀಗಾಗಿ, 'ಅದ್ಭುತ ಕಥೆ'ಯನ್ನು ಆತನಿಗೆ ಕೊಡುವುದಕ್ಕೆ ಮುಂಚೆ ನಾನೇ ದಲು ನಿರ್ಧರಿಸಿದೆ. ನನಗೆ ಅದು ಬಲು ಮೆಚ್ಚುಗೆಯಾಯಿತು. ಪ್ರತಿಯೊಂದೂ ಬಲು ಸರಳ ಾಗಿ, ಸ್ಪಷ್ಟವಾಗಿ, ಚುಟುಕಾಗಿ, ಸ್ವಾರಸ್ಯಕರವಾಗಿತ್ತು. ಆ ಪುಸ್ತಕದಿಂದ ಆತನಿಗೆ ಬಹಳ ಂತೋಷವಾಗುವುದೆಂದು ನನಗೆ ಖಚಿತವಾಯಿತು.

ಆದರೆ ಅದನ್ನು ನಾನು ಆತನ ಕೈಗಿತ್ತಾಗ, ಆತ ಅದನ್ನು ಚೆಂಡಿನಂತೆ ಮುದುಡಿ, ಒಂದು ಾತನ್ನೂ ಆಡದೆ ನದಿಗೆ ಎಸೆದ.

ಸಿಟ್ಟಿನಿಂದ ಆತನೆಂದ:

"ಒಳ್ಳೇ ಪುಸ್ತಕ ತಂದೆ, ಮೂರ್ಖ! ನೀನು ಬೇಟೆನಾಯಿಯೇನೋ ಅನ್ನುವ ಹಾಗೆ ಹಗಲೂ ತ್ರೆಯೂ ನಿನ್ನನ್ನು ನಾನು ತರಬೇತು ಮಾಡ್ತಾ ಇದ್ದರೆ, ನೀನಿನ್ನೂ ಹಕ್ಕಿಗಳನ್ನು ತಿನ್ತಾನೇ ೋಗ್ತೀಯಾ."

ಪಾದದಿಂದ ನೆಲವನ್ನು ತುಳಿದು ಆತ ಗದರಿದ.

"ಅದೆಂಥ ಸುಡುಗಾಡಿನ ಪುಸ್ತಕ? ಆ ಹುಚ್ಚುಚ್ಚಾರವನ್ನೆಲ್ಲಾ ನಾನು ಓದಿದೇನೆ! ಅಲ್ಲಿ ರೆದಿರೋದು ಸತ್ಯವೆ? ಸ್ವಲ್ಪ ಹೇಳು ನೋಡೋಣ!"

"ನನಗೆ ಗೊತ್ತಿಲ್ಲ."

"ಸರಿ, ನನಗೆ ಗೊತ್ತಿದೆ! ಮೊದಲನೆಯವನ ತಲೆಯನ್ನು ಅವರು ಕಡಿದಾಗ, ಆತ ಏಣಿ ಂದ ಕೆಳಕ್ಕೆ ಬೀಳ್ತಿದ್ದ. ಉಳಿದವರು ಹುಲ್ಲಿನ ಬಣವೆಗೆ ಹತ್ತುತ್ತಲೇ ಇರಲಿಲ್ಲ. ಸೈನಿಕರೇನೂ ೂರ್ಖರಲ್ಲ! ಹುಲ್ಲಿನ ಬಣವೆಗೆ ಬೆಂಕಿ ಕೊಡ್ತಿದ್ದರು. ಅಲ್ಲಿಗೆ ಮುಗೀತಿತ್ತು! ತಿಳೀತೆ?"

"ಹೌದು."

"ಈಗ ಅರ್ಥವಾಯ್ತಾ? ಆ ಜಾರ್ ಚಕ್ರವರ್ತಿ ಪೀಟರ್ ವಿಷಯ ನನಗೆ ಗೊತ್ತು— ಂಥದ್ದೇನೂ ಅವನಿಗೆ ಸಂಭವಿಸಲಿಲ್ಲ. ಹೊರಟುಹೋಗು ಈಗ!"

ಅಡುಗೆಯವನು ಹೇಳಿದುದು ಸರಿ ಎಂದು ನನಗೆ ಮನವರಿಕೆಯಾಯಿತು. ಆದರೂ ಆ ಸ್ತಕವನ್ನು ನಾನು ಇಷ್ಟಪಟ್ಟೆ. ಪುನಃ 'ಅದ್ಭುತ ಕಥೆ'ಯ ಬೇರೊಂದು ಪ್ರತಿಯನ್ನು ಕೊಂಡು ಂದು, ಓದಿದೆ. ಅದು ಅನಿವಾರ್ಯವಾಗಿಯೂ ನಿಷ್ಪ್ರಯೋಜಕ ಪುಸ್ತಕವೇ—ಎಂಬುದು ಾವಾಗಿ ಅಚ್ಚರಿಪಟ್ಟೆ. ಇದರಿಂದ ನನಗೆ ನಾಚಿಕೆ ಎನಿಸಿತು. ಅಡುಗೆಯವನನ್ನು ನಾನು, ತ್ತಷ್ಟು ಹೆಚ್ಚು ಗೌರವದಿಂದ ವಿಶ್ವಾಸದಿಂದ, ಕಾಣತೊಡಗಿದೆ, ಆತ, ಯಾಕೋ ಏನೋ, ೇಳುತ್ತಲೇ ಇದ್ದ.

"ಛೆ! ನೀನು ವ್ಯಾಸಂಗ ಮಾಡ್ತಿರಬೇಕು! ಇದು ನಿನಗೆ ತಕ್ಕ ಸ್ಥಳವಲ್ಲ!"

ಅದು ನನಗೆ ತಕ್ಕ ಸ್ಥಳವಲ್ಲವೆಂದು ನನಗೂ ಅನಿಸಿತು. ಸರ್ಗಿ ನನ್ನೊಡನೆ ಬಲು ಹೇ
ವಾಗಿ ನಡೆದುಕೊಳ್ಳುತ್ತಿದ್ದ. ಅನೇಕವೇಳೆ ಆತ ನನ್ನ ಮೇಜಿನಿಂದ ಚಹಾದ ಸಾಧನಗಳನ
ಕದ್ದು, ಸ್ಟ್ಯುವರ್ಡ್ ನೋಡದೇ ಇದ್ದಾಗ ಪ್ರಯಾಣಿಕರಿಗೆ ಮಾರುತ್ತಿದ್ದುದನ್ನು ನಾನು ಕಂ
ಹಿಡಿದೆ. ಆತ ಮಾಡುತ್ತಿದ್ದುದಕ್ಕೆ ಕಳ್ಳತನವೆನ್ನುತ್ತಿದ್ದರೆಂಬುದು ನನಗೆ ಗೊತ್ತಿತ್ತು.

"ಹುಷಾರಿ! ನಿನ್ನ ಮೇಜಿನಿಂದ ಚಾಕುಗಳನ್ನೋ ಫೋರ್ಕ್‌ಗಳನ್ನೋ ಕೆಲಸಗಾರ
ಕದಿಯದಂತೆ ನೋಡಿಕೋ!" ಎಂದು ಸ್ಮುರಿ ಎಷ್ಟೋ ಸಾರೆ ನನಗೆ ಎಚ್ಚರಿಕೆ ನುಡಿದಿದ್ದ.

ನನಗೆ ಕೆಡುಕು ಉಂಟಾಗುವುದನ್ನೇ ಸಾರುತ್ತಿದ್ದ ಬೇರೆಯೂ ಎಷ್ಟೋ ವಿಷಯಗಳಿದ್ದು
ಆಗಾಗ್ಗೆ, ಮುಂದಿನ ನಿಲ್ದಾಣದಲ್ಲೇ ಹಡಗದಿಂದಿಳಿದು ಕಾಡಿಗೆ ಓಡಿಹೋಗಲು ಬಯಕೆಯಾ
ತ್ತಿತ್ತು. ಸ್ಮುರಿಯ ಕಾರಣದಿಂದ ಹಾಗೆ ನಾನು ಮಾಡುವುದಾಗಲಿಲ್ಲ. ದಿನದಿಂದ ದಿನಕ್ಕೆ ನ
ಬಗೆಗೆ ಆತನ ಆತ್ಮೀಯತೆ ಹೆಚ್ಚುತ್ತಲಿತ್ತು. ನಿರಂತರವಾಗಿ ಚಲಿಸುತ್ತಿದ್ದ ಹಡಗಿನ ಆಕರ್ಷ
ಯಿಂದಲೂ ಅದನ್ನು ಬಿಟ್ಟು ಹೋಗುವುದಾಗಲಿಲ್ಲ. ಧಕ್ಕೆಗಳಲ್ಲಿ ಹಡಗು ನಿಲ್ಲುತ್ತಿದ್ದುದನ
ನಾನು ಇಷ್ಟಪಡುತ್ತಿರಲಿಲ್ಲ. ಏನಾದರೂ ಸಂಭವಿಸಿ, ಕಾಮಾನದಿಯಿಂದ ನಾವು ಬೆಲಾಯ
ಗಿಳಿದು, ವಿಯಾಟ್ಕಾತನಕ ಸಂಚಾರಮಾಡುವುದು, ಅಥವಾ ವೋಲ್ಗಾಗೆ ಇಳಿಯುವುದು, ಅ
ಹೊಸದಂಡೆಗಳನ್ನೂ ಶಹರಗಳನ್ನೂ ಜನರನ್ನೂ ನೋಡುವುದು ಸಾಧ್ಯವಾದೀತೆಂದು ನಾ
ಕಾದಿದ್ದೆ.

ಆದರೆ ಏನೂ ಸಂಭವಿಸಲಿಲ್ಲ. ಹಡಗಿನ ಮೇಲಿನ ನನ್ನ ಬದುಕು, ಇದ್ದಕ್ಕಿದ್ದಂತೆ ಅ
ಮಾನಕರವಾಗಿ ಕೊನೆಗಂಡಿತು. ಒಂದು ಸಂಜೆ, ಕಜಾನಿನಿಂದ ನಿಜ್ನಿಗೆ ನಾವು ಪ್ರಯಾಣ ಬ
ಸುತ್ತಿದ್ದಾಗ, ಸ್ಟ್ಯುವರ್ಡ್ ನನಗೆ ಕರೆಕಳುಹಿದ. ನಾನು ಹೋಗಿ ನಿಂತಾಗ, ಆತ ಬಾಗಿಲನ
ಮುಚ್ಚಿದ. ಕಂಬಳಿ ಹೊದೆಸಿದ್ದ ಸ್ಟೂಲಿನ ಮೇಲೆ ಮ್ಲಾನಮುಖದಿಂದ ಅಲ್ಲೇ ಕುಳಿತಿ
ಸ್ಮುರಿಯ ಕಡೆಗೆ ತಿರುಗಿ ಆತನೆಂದ:

"ಬಂದಿದಾನೆ."

"ಸರ್ಗಿಗೆ ನೀನು ಚಮಚಗಳನ್ನೂ ಇತರ ಸಾಧನಗಳನ್ನೂ ಕೊಡ್ತೀಯಾ?" ಎಂದು ಅ
ಒರಟಾಗಿ ನನ್ನನ್ನು ಕೇಳಿದ.

"ನಾನು ನೋಡದೇ ಇರುವಾಗ ಅವನೇ ಸ್ವತಃ ತಗೋತಾನೆ."

"ನೀನು ಅವನನ್ನು ನೋಡೋದಿಲ್ಲ; ಆದರೆ ಅವನು ತಗೊಳ್ಳೋ ವಿಷಯ ನಿನಗೆ ಗೊತ್ತಿದ
ಎಂದು ಸ್ಟ್ಯುವರ್ಡ್ ಶಾಂತಧ್ವನಿಯಲ್ಲಿ ನುಡಿದ.

ಸ್ಮುರಿ ತನ್ನ ಮೊಣಕಾಲ ಮೇಲೆ ಮುಷ್ಟಿಯಿರಿಸಿ, ಆ ಜಾಗವನ್ನು ತೆರೆದ.

"ಸ್ವಲ್ಪ ತಾಳು, ಅವಸರವಿಲ್ಲ," ಎಂದು ಹೇಳಿ ಆತ ಯೋಚನಾಮಗ್ನನಾದ.

ನಾನು ಸ್ಟ್ಯುವರ್ಡನ ಕಡೆಗೆ ನೋಡಿದೆ. ಆತ ನನ್ನತ್ತ ನೋಡಿದ. ಆದರೆ, ಆತನ ಕನ್ನ
ಕದ ಗಾಜುಗಳ ಆಚೆ ಬದಿಯಲ್ಲಿ ಕಣ್ಣುಗಳಿದ್ದುದರ ಅರಿವೇ ನನಗಾಗಲಿಲ್ಲ.

ಶಾಂತವಾಗಿ ಆತ ಜೀವಿಸುತ್ತಿದ್ದ; ಸದ್ದಿಲ್ಲದೆ ನಡೆಯುತ್ತಿದ್ದ; ತಗ್ಗಿದ ಧ್ವನಿಯಲ್ಲಿ ಮಾ
ನಾಡುತ್ತಿದ್ದ. ಕೆಲವೇಳೆ ಆತನ ಮಾಸಿದ ಗಡ್ಡವೂ ಶೂನ್ಯ ಕಣ್ಣುಗಳೂ ಯಾವುದೋ ಮೂ
ಯಿಂದ ಮಿನುಗುತ್ತಿದ್ದುವು; ತಕ್ಷಣವೇ ಮಾಯವಾಗುತ್ತಿದ್ದುವು. ಶಯನಕ್ಕೆ ಮುಂಚೆ ಅ

ದೇವಪ್ರತಿಮೆಯ ಎದುರು ಮಂಡಿಯೂರಿ ಬಹಳ ಹೊತ್ತು ಇರುತ್ತಿದ್ದ. ಪ್ರತಿಮೆಯ ಮೇಲ್ಗಡೆ ದೀಪವೊಂದು ಸದಾ ಉರಿಯುತ್ತಿತ್ತು. ಬಾಗಿಲಲ್ಲಿದ್ದ ವಜ್ರದ ಆಕಾರದ ಕಿಟಕಿಯ ಮೂಲಕ ನಾನೆಷ್ಟೋ ಹೊತ್ತು ನಿರೀಕ್ಷಿಸುತ್ತಿರಲಿ, ಆತ ಪ್ರಾರ್ಥಿಸುತ್ತಿದ್ದುದು ನನಗೆ ಕಂಡುಬರುತ್ತಲೇ ಇರಲಿಲ್ಲ. ಸುಮ್ಮನೆ ಮಂಡಿಯೂರಿ, ನಿಟ್ಟುಸಿರುಬಿಡುತ್ತ, ತನ್ನ ಗಡ್ಡವನ್ನು ತೀಡುತ್ತ, ದೀಪದ ಹಾಗೂ ಪ್ರತಿಮೆಯ ಕಡೆಗೆ ದಿಟ್ಟಿಸುತ್ತಿದ್ದ.

"ಸರ್ಗಿ ನಿನಗೇನಾದರೂ ಹಣ ಕೊಟ್ಟನೆ?" ಎಂದು ಸ್ವಲ್ಪ ತಡೆದು, ಸ್ಮುರಿ ಕೇಳಿದ.

"ಇಲ್ಲ."

"ಯಾವತ್ತೂ ಕೊಟ್ಟಿಲ್ಲವೆ?"

"ಯಾವತ್ತೂ ಇಲ್ಲ."

"ಇವನು ಸುಳ್ಳು ಹೇಳ್ತಿರಲಾರ," ಎಂದು ಸ್ಮುರಿ, ಸ್ಟ್ಯುವರ್ಡಿಗೆ ನುಡಿದ. ಆದರೆ ಸ್ಟ್ಯುವರ್ಡ್ ಮೃದುವಾಗಿ ಉತ್ತರವಿತ್ತ:

"ಏನಿದ್ದರೂ ಒಂದೇ. ಬೇರೆ ಮಾತಿಲ್ಲ."

"ಬಾ," ಎಂದು ಅಡುಗೆಯವನು ನನ್ನನ್ನು ಕರೆದುಕೊಂಡು ಬಂದ. ನನ್ನ ಮೇಜಿನ ಬಳಿ ಸಾರಿ, ನನ್ನ ತಲೆಯ ಹಿಂಬದಿಗೆ ಮೆಲ್ಲನೆ ತಟ್ಟಿ, ನುಡಿದ:

"ಮೂರ್ಖ! ನಾನೂ ಮೂರ್ಖನೇ! ನಿನ್ನ ಮೇಲೆ ಕಾವಲಿರಬೇಕಾಗಿತ್ತು ನಾನು."

ನಿಜ್ನಿಯಲ್ಲಿ ಸ್ಟ್ಯುವರ್ಡ್ ಲೆಕ್ಕ ಸಂದಾಯಮಾಡಿದ. ಸುಮಾರು ಎಂಟು ರೂಬಲುಗಳು ನನಗೆ ದೊರೆತುವು. ಅಷ್ಟೊಂದು ಹಣ ನಾನು ಸಂಪಾದಿಸಿದ್ದುದು ಅದೇ ಮೊದಲು.

ನನ್ನನ್ನು ಬೀಳ್ಕೊಡುತ್ತ ಸ್ಮುರಿ, ಬೇಸರದಿಂದ ಅಂದ:

"ಹುಂ. ಮುಂದೆ ಯಾವಾಗಲೂ ಕಣ್ಣು ತೆರಕೊಂಡಿರು, ಕೇಳಿಸ್ತೆ? ಎಲ್ಲೋ ನೋಡ್ತಾ ನೊಣ ಹೊಡೀತಿರಬೇಡ."

ಶುಭ್ರವಾದ ಮಣಿಗಳಿದ್ದ ತಂಬಾಕದ ಒಂದು ಸಂಚಿಯನ್ನು ನನ್ನ ಕೈಗೆ ಆತ ತುರುಕಿದ.

"ತಗೋ. ಸೊಗಸಾಗಿದೆ—ನನ್ನ ದೇವ ಪುತ್ರಿ ನನಗೋಸ್ಕರ ಮಾಡ್ಕೊಟ್ಟಿದ್ದು. ಒಳ್ಳೆದು, ಕೊನೇ ನಮಸ್ಕಾರ. ಪುಸ್ತಕಗಳನ್ನು ಓದು—ನೀನು ಮಾಡಬಹುದಾದ ಕೆಲಸ, ಅದಕ್ಕಿಂತ ಉತ್ತಮವಾದದ್ದು ಬೇರೆ ಇಲ್ಲ!"

ನನ್ನ ತೋಳುಗಳ ಕೆಳಗೆ ಕೈಹಾಕಿ, ಚುಂಬಿಸಲೆಂದು ಆತ ಮೇಲಕ್ಕೆ ಎತ್ತಿದ. ಬಳಿಕ, ಭದ್ರವಾಗಿ ಧಕ್ಕೆಯ ಮೇಲಿರಿಸಿದ. ಅವನ ಬಗೆಗೂ ನನ್ನ ಬಗೆಗೂ ನನಗೆ ಕೆಡುಕೆನಿಸಿತು. ಗಾತ್ರದ, ಅಡ್ಡಾದಿಡ್ಡಿಯಾಗಿ ಚಲಿಸುತ್ತಿದ್ದ, ಆ ಒಂಟಿ ಮನುಷ್ಯ, ಹಮಾಲರನ್ನು ನೂಕುತ್ತ ಹಾದಿ ಮಾಡಿಕೊಂಡು ಹಡಗಿಗೆ ಮರಳಿದ. ಅದನ್ನು ನೋಡುತ್ತ ಉಕ್ಕಿಬಂದ ಕಂಬನಿಯನ್ನು ತಡೆಯುವುದು ಆಗಲೇ ಇಲ್ಲ.

ಅಷ್ಟೇ ದಯಾಮಯರಾದ, ಅಷ್ಟೇ ಏಕಾಂತ ಜೀವಿಗಳಾದ, ಬದುಕಿನಿಂದ ಅಷ್ಟೇ ದೂರ ಸರಿದಿದ್ದ, ಅಂತಹದೇ ಎಷ್ಟೊಂದು ಜನರನ್ನು ಅನಂತರದ ವರ್ಷಗಳಲ್ಲಿ ನಾನು ಸಂಧಿಸಲಿಲ್ಲ!

೭

ಅಜ್ಜಿಯೂ ಅಜ್ಜನೂ ಮತ್ತೊಮ್ಮೆ ಶಹರದಲ್ಲಿ ನೆಲೆಸಿದ್ದರು. ಕೋಪಾವಿಷ್ಟಕಲಹಪ್ರಿಯ
ಮನೋಸ್ಥಿತಿಯಲ್ಲಿ ನಾನು ಅವರೆಡೆಗೆ ಮರಳಿದೆ. ನನ್ನ ಹೃದಯ ಭಾರವಾಗಿತ್ತು. ಕಳ್ಳ ಎಂದೇಕೆ
ನನಗೆ ನಾಮಕರಣ ಮಾಡಿದ್ದರು. ಆ ಜನ?

ಅಜ್ಜಿ, ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡಳು. ತಕ್ಷಣವೆ, ಚಾದಾನಿಯನ್ನು ಬಿಸಿ
ಮಾಡಲು ಒಲೆಯ ಬಳಿಗೆ ನಡೆದಳು. ಅಜ್ಜ ಎಂದಿನ ವ್ಯಂಗ್ಯಧ್ವನಿಯಿಂದಲೇ ಮಾತನಾಡಿದ.

"ಬಹಳ ಬಂಗಾರ ಉಳಿಸಿದೀಯೇನು?"

"ನಾನು ಉಳಿಸಿರೋದೆಲ್ಲಾ ನನಗೇ ಸೇರಿದ್ದು," ಎಂದು ನಾನು, ಕಿಟಕಿಯ ಬಳಿ ಕುಳಿತು
ಕೊಳ್ಳುತ್ತ ಉತ್ತರವಿತ್ತೆ. ನನ್ನ ಜೇಬಿನಿಂದ ಸಿಗರೇಟು ಪ್ಯಾಕನ್ನು ಹೆಮ್ಮೆಯಿಂದ ಹೊರತೆಗೆದು,
ಒಂದನ್ನು ಹಚ್ಚಿದೆ.

ನನ್ನ ಪ್ರತಿಯೊಂದು ಚಲನವಲನವನ್ನೂ ದಿಟ್ಟಿಸುತ್ತಿದ್ದ ಅಜ್ಜನೆಂದ:

"ಓಹೋ! ನಿಜವಾಗಿಯೂ! ದೆವ್ವ ಬೆಳೆಸಿದ ಕಳೆ ಸೇದೋಕೆ ಶುರುಮಾಡಿದೀಯಾ ಹಾಗಾ
ದರೆ? ಬಹಳ ಬೇಗನೆ ಆಗಲಿಲ್ಲವೇನು?"

"ನನ್ನ ಹತ್ತಿರ ತಂಬಾಕದ ಒಂದು ಸಂಚಿಕೂಡಾ ಇದೆ," ಎಂದು ನಾನು ಜಂಭಕೊಚ್ಚಿದೆ.

ಕೀಚಲುಧ್ವನಿಯಲ್ಲಿ ಅಜ್ಜನೆಂದ:

"ಸಂಚಿ! ಏನಿದು? ಸುಮ್ಮನೆ ಚುಡಾಯಿಸ್ತಿದೀಯೇನು ನನ್ನನ್ನು?"

ತನ್ನ ತೆಳುವಾದ ಬಲವಾದ ತೋಳುಗಳನ್ನು ಮುಂದಕ್ಕೆ ಚಾಚಿ, ಮಿನುಗುತ್ತಿದ್ದ ಹಸುರು
ಕಣ್ಣುಗಳೊಡನೆ, ನನ್ನೆಡೆಗೆ ಆತ ನುಗ್ಗಿದ. ನಾನು ಹಾರಿನಿಂತು, ನನ್ನ ಮುಷ್ಟಿಯಿಂದ ಆತನ
ಹೊಟ್ಟೆಯನ್ನು ತಿವಿದೆ. ಮುದುಕ ನೆಲದ ಮೇಲೆ ಕುಸಿದುಬಿದ್ದ. ಪ್ರತಿಯೊಂದೂ ಸ್ತಬ್ಧವಾದಂತೆ
ಕಂಡ ಕೆಲಕ್ಷಣಗಳ ಕಾಲ, ನನ್ನೆಡೆಗೆ ಅಚ್ಚರಿಯಿಂದ ಪಿಳಿಪಿಳಿ ನೋಡುತ್ತ ಆತ ಕುಳಿತ. ತೆರೆದು
ಕೊಂಡು ಜೋತಾಡಿತು ಆತನ ಕರಿಯ ಬಾಯಿ.

ಕೊನೆಯಲ್ಲಿ ಆತ, ಬಳಲಿದ ಧ್ವನಿಯಲ್ಲಿ ಅಂದ:

"ನನ್ನನ್ನೇ ಕೆಳಕ್ಕೆ ಉರುಳಿಸಿಬಿಟ್ಟೆ ಹಾಗಾದರೆ—ನಿನ್ನ ಅಜ್ಜನನ್ನೇ—ನಿನ್ನ ಸ್ವಂತ
ತಾಯಿಯ ತಂದೆಯನ್ನೇ?

ನನ್ನ ವರ್ತನೆ ಅಸಹ್ಯಕರವಾಗಿತ್ತೆಂಬುದನ್ನು ಮನಗಂಡ ನಾನು ತೊದಲಿದೆ:

"ನಿನ್ನ ಕೈಲಿ ಹೊಡೆತ ತಿಂದು ನನಗೆ ಸಾಕಾಗಿದೆ."

ಹಗುರವಾದ ಚುರುಕಾದ ಚಲನೆಯಿಂದ ಅಜ್ಜ ಎದ್ದುನಿಂತು ನನ್ನ ಪಕ್ಕದಲ್ಲೆ ಕುಳಿತ.
ಸಿಗರೇಟನ್ನು ನನ್ನ ಕೈಯಿಂದ ಕಸಿದುಕೊಂಡು, ಕಿಟಕಿಯ ಹೊರಕ್ಕೆ ಅದನ್ನೆಸೆದ.

"ಮೂರ್ಖ! ನಿನ್ನ ಈ ನಡತೇನ ಜೀವಮಾನವೆಲ್ಲಾ ದೇವರು ಕ್ಷಮಿಸಲಾರ ಅನ್ನೋದು
ನಿನಗೆ ತಿಳೀದೆ?" ಎಂದು ಆತ ಬೆದರಿದ ಧ್ವನಿಯಲ್ಲಿ ಕೇಳಿದ. ಬಳಿಕ ಅಜ್ಜಿಯ ಕಡೆ ತಿರುಗಿ

ಡಿದ: "ತಾಯಿ, ಏನ್ಹೇಳ್ತೀಯಾ ಇದಕ್ಕೆ? ಹೊಡೆದದ್ದು ಈತ—ನನಗೆ. ಈತ, ನನಗೆ ಹೊಡೆದ್ದು. ಅಲ್ಲವೆ ಏನೂಂತ ಅವನನ್ನೇ ಕೇಳು."

ಹಾಗೆಲ್ಲ. ಕೇಳುವ ಉಸಾಬರಿಗೆ ಹೋಗದೆ, ಆಕೆ ನಾನು ಕುಳಿತಿದ್ದಲ್ಲಿಗೆ ಬಂದು, ನನ್ನ ಲೆಗೂದಲನ್ನು ಹಿಡಿದು ಕುಲುಕತೊಡಗಿದಳು.

"ಹಾಗೆ ಮಾಡಿದ್ದಕ್ಕೆ ಇದು ಶಿಕ್ಷೆ! ತಗೋ ಒಂದು! ತಗೋ ಇನ್ನೊಂದು!" ಎಂದಳು ಆಕೆ.

ದೈಹಿಕವಾಗಿ ನನಗೇನೂ ನೋವಾಗಲಿಲ್ಲ. ಆದರೆ, ಹೃದಯ ಬಹಳವಾಗಿ ಘಾಸಿಗೊಂಡಿತು. ಅದೂ ವಿಶೇಷವಾಗಿ ಅಜ್ಜನ ಪ್ರತೀಕಾರದ ನಗೆಯಿಂದ. ಕುರ್ಚಿಯಲ್ಲಿ ಕುಳಿತಿದ್ದ ತ ಮೇಲಕ್ಕೂ ಕೆಳಕ್ಕೂ ಹಾರುತ್ತಾ, ತನ್ನ ಮೊಣಕಾಲುಗಳನ್ನು ತಟ್ಟುತ್ತಾ, ಕರ್ಕಶ ಧ್ವನಿಯಲ್ಲಿ ಕೂಗಾಡಿದ:

"ಹಾಗೆ! ಅದೀಗ!"

ನಾನು ಅಜ್ಜಿಯ ಹಿಡಿತದಿಂದ ಬಿಡಿಸಿಕೊಂಡು ಬಾಗಿಲ ಬಳಿಗೆ ಓಡಿದೆ. ಒಂದು ಮೂಲೆಯಲ್ಲಿ ಬಿದ್ದುಕೊಂಡೆ. ಅಲ್ಲಿ ಸಂಕಟಪಡುತ್ತ, ನಿರಾಸೆಗೊಳ್ಳುತ್ತ, ಚಾದಾನಿಯ ಸುಂಯ್‌ಗುಡುವದ್ದಿಗೆ ಕಿವಿಗೊಡುತ್ತ ಮಲಗಿದೆ.

ಅಜ್ಜಿ ಹೊರಬಂದಳು. ನನ್ನ ಮೇಲ್ಗಡೆ ಬಾಗಿದಳು. ಅಸ್ಪಷ್ಟವಾಗಿ ಕೇಳುತ್ತಲಿದ್ದ ಪಿಸುಧ್ವನಿಯಲ್ಲಿ ಅಂದಳು:

"ನನ್ನನ್ನು ಕ್ಷಮಿಸು. ನಿಜವಾಗಿಯೂ ನೋವಾಗೋ ಹಾಗೆ ನಾನೇನೂ ಮಾಡಿಲ್ಲ, ಅಲ್ಲವೆ? ಸುಮ್ಮನೆ ತೋರಿಕೆಗೋಸ್ಕರ ಹಾಗೆ ಮಾಡ್ದೆ. ಬೇರೇನು ಮಾಡೋದಕ್ಕೆ ಆಗ್ತಿತ್ತು, ಹೇಳು? ಷ್ಟೆಂದರೂ ಅಜ್ಜ ಮುದುಕ. ನೀನು ಅವನನ್ನು ಗೌರವಿಸುತ್ತಿರಬೇಕು. ಬದುಕಿನಲ್ಲಿ ಆತ ೀತು ಸುಣ್ಣವಾಗಿದಾನೆ. ದುಃಖದಿಂದ ಅವನ ಹೃದಯ ಉಕ್ಕಿ ಹರೀತಿದೆ. ನೀನು ವನನ್ನು ನೋಯಿಸ್ತಿರಬಾರದು. ನೀನೀಗ ಚಿಕ್ಕಮಗು ಅಲ್ಲವೇ ಅಲ್ಲ. ನಿನಗೆ ಅರ್ಥವಾಗ್ತದೆ. ೀನು ಅರ್ಥಮಾಡಿಕೊಳ್ಳಲೇಬೇಕು, ಅಲ್ಯೋಶಾ. ಆತ ಒಂದು ದೊಡ್ಡ ಮಗುವಿದ್ದ ಹಾಗೆ, ಷ್ಟೆ—ಹೆಚ್ಚೂ ಅಲ್ಲ, ಕಡಮೆಯೂ ಅಲ್ಲ."

ಬೆಚ್ಚನೆಯ ನೀರಿನ ಹಾಗೆ ಆಕೆಯ ಪದಗಳು ನನ್ನ ಮೇಲಿಂದ ಆಪ್ಯಾಯಮಾನವಾಗಿ ಹರಿವು. ಆಕೆಯ ಮಾತು ಸ್ನೇಹಪೂರ್ಣವಾಗಿ ಸುಳಿದು ನನ್ನ ನೋವನ್ನು ಹಗುರಗೊಳಿಸಿತು; ನು ನಾಚುವಂತೆ ಮಾಡಿತು. ಅಜ್ಜಿಯನ್ನು ನಾನು ಬಿಗಿಯಾಗಿ ಅಪ್ಪಿಕೊಂಡೆ. ಒಬ್ಬರಿಬ್ಬರು ನಾವು ಮುತ್ತುಕೊಟ್ಟೆವು.

"ಒಳಕ್ಕೆ ಅವನ ಹತ್ತಿರಕ್ಕೆ ಹೋಗು; ನೇರವಾಗಿ ಹೋಗು. ಎಲ್ಲಾ ಸರಿಹೋಗ್ತದೆ. ಗೆ ಇಷ್ಟಕ್ಕಿದ್ದಂತೆ ಅವನ ಎದುರು ಸೇದಬೇಡ-ಅಷ್ಟೆ. ಅದು ರೂಢಿಯಾಗೋದಕ್ಕೆ ಅವನಿಗೆ ಲ್ಪ ಕಾಲಾವಕಾಶಕೊಡು."

ಕೊಠಡಿಯನ್ನು ಹೊಕ್ಕು ಅಜ್ಜನೆಡೆಗೆ ನಾನು ನೋಡಿದಾಗ, ನಗದೆ ಇರುವುದೇ ನನ್ನಿಂದಾಗಲ್ಲ. ನಿಜವಾಗಿಯೂ ಆತ ಹಸುಳೆಯಂತೆ ಹರ್ಷಚಿತ್ತನಾಗಿದ್ದ. ಆತನ ಮುಖ ಪ್ರಕಾಶಮಾನವಾಗಿತ್ತು. ಪಾದಗಳಿಂದ ಆತ ತುಳಿದಾಡುತ್ತಿದ್ದ. ಕೆಂಪುರೋಮಗಳಿಂದ ಆವೃತನಾದ ಮುಷ್ಟಿಗಳಿಂದ ಆತ ಮೇಜನ್ನು ಗುದ್ದುತ್ತಿದ್ದ.

"ಹುಂ. ಇನ್ನಷ್ಟು ತಿವಿಯೋಕೆ ಬಂದಿದೀಯೇನೊ ಹೋತ?—ಹ್ಣೆ? ಥೂ, ಪುಟ್ಟ ದರೋ
ಖೋರ! ಎಲ್ಲಾ ನಿನ್ನ ತಂದೆಯ ಹಾಗೆಯೇ! ಶಿಲುಬೆಯ ವಂದನೆ ಕೂಡಾಮಾಡದೆ ಮನೆಯೊಳ
ಆ ರೀತಿ ಜರೋದು, ಬಂದವನೇ ಮೊದಲು ಸಿಗರೇಟು ಸೇದೋದು. ಥೂ, ಮೂರು ಕಾಸಿ
ಪುಟ್ಟ ನೆಪೋಲಿಯನ್!"

ನಾನು ಉತ್ತರವೀಯಲಿಲ್ಲ. ಪದಗಳ ಭಂಡಾರ ಬರಿದಾಗಿ, ಅಜ್ಜ ಬೇಸರದಿಂದ ಸುವ
ನಾದ. ಆದರೆ, ಚಹಾ ಕುಡಿಯುತ್ತಿದ್ದಾಗ ಆತ, ನನ್ನನ್ನು ಉದ್ದೇಶಿಸಿ ಮತ್ತೊಮ್ಮೆ ಉಪನ್ಯಾ
ಆರಂಭಿಸಿದ:

"ಒಬ್ಬ ವ್ಯಕ್ತಿಗೆ ದೇವರಭಯ, ಕುದುರೆಗೆ ಕಡಿವಾಣವಿರುವಷ್ಟೇ ಅಗತ್ಯ. ನಮ್ಮ ಜ
ಸ್ನೇಹದಿಂದಿರೋದಕ್ಕೆ ದೇವರ ಹೊರತು ಬೇರೆ ಯಾರೂ ಇಲ್ಲ. ಮನುಷ್ಯನೇ ಮನುಷ್ಯನ ಕ
ಹಗೆ."

ಮನುಷ್ಯರೇ ಹಗೆಗಳೆಂಬ ಮಾತಿನ ಸತ್ಯತೆಯಿಂದ ನಾನು ಅಪ್ರತಿಭನಾದೆ. ಮಿಕ್ಕಮಾ
ಮಾತ್ರ ನನ್ನ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ.

"ಈಗ ನೀನು, ನಿನ್ನ ಚಿಕ್ಕಮ್ಮ ಮಾತ್ರಿಯೋನಾಳಿಗೋಸ್ಕರ ದುಡಿಯೋದಕ್ಕೆ, ವಾಪಸಾ
ಬೇಕು. ವಸಂತದಲ್ಲಿ ಯಾವುದಾದರೂ ಹಡಗಿನ ಕೆಲಸಕ್ಕೆ ಹಿಂತಿರುಗಬಹುದು. ಆದರೆ, ಚ
ಗಾಲವನ್ನು ಮಾತ್ರ ಅವರ ಜತೆಯಲ್ಲೇ ಕಳೆ. ವಸಂತದಲ್ಲಿ ಹೊರಟುಹೋಗೋ ವಿಷ
ಅವರಿಗೆ ಹೇಳಬೇಡ."

ಆಗತಾನೇ ನನ್ನನ್ನು ಹಿಡಿದು ಕುಲಿಕಿದ ನಟನೆಮಾಡಿ ಅಜ್ಜನನ್ನು ವಂಚಿಸಿದ್ದ ಅಜ್ಜಿ, ನಡು
ಅಂದಳು:

"ಜನರನ್ನು ವಂಚಿಸೋದು ಯಾಕೆ?"

"ಜನರನ್ನು ವಂಚಿಸದೆ ಬದುಕೋದು ಸಾಧ್ಯವಿಲ್ಲ. ಯಾರೂ ಆ ರೀತಿ ಬದುಕೋದಿಲ್ಲ
ಎಂದು ಅಜ್ಜ ಒತ್ತಿಹೇಳಿದ.

ಆ ಸಂಜೆ ಅಜ್ಜ ಗೀತಸ್ತೋತ್ರವನ್ನು ಓದಲು ಕುಳಿತಾಗ, ಅಜ್ಜಿಯೂ ನಾನೂ ಗೇಟ
ಮೂಲಕ ಹೊರಬಿದ್ದು ಹೊಲಗಳೆಡೆಗೆ ಹೋದೆವು. ಅಜ್ಜ ಈಗ ವಾಸಿಸುತ್ತಿದ್ದ ಎರಡೇ ಕಿಟ
ಗಳ ಆ ಪುಟ್ಟ ಗುಡಿಸಲು, ಶಹರದ ತೀರಾ ಅಂಚಿನಲ್ಲಿ, ಕನಟ್ನಾಯಾ ರಸ್ತೆಯ ಕೊನೆಯಲ್ಲಿತ
ಆ ರಸ್ತೆಯಲ್ಲೇ ಹಿಂದೆ ಸ್ವಂತದ ಮನೆಯಿತ್ತು ಅಜ್ಜನಿಗೆ.

ಅಜ್ಜಿ ನಗುತ್ತ ನುಡಿದಳು:

"ಎಂಥಾ ಗುಡಿಸಲಿಗೆ ನಾವು ಬಂದಿದೀವಿ ಅಂತ ನೋಡು! ಆತ್ಮಕ್ಕೆ ನೆಮ್ಮದಿ ದೊರೆಯ
ಸ್ಥಳವೇ ಅಜ್ಜನಿಗೆ ಸಿಗ್ತಾ ಇಲ್ಲ. ಹೀಗಾಗಿ, ವಸತಿ ಬದಲಾಯಿಸ್ತಲೇ ಇರ್ತಾನೆ. ಈಗಿರೋ
ಆತನಿಗೆ ಒಪ್ಪಿಗೆಯಾಗಿಲ್ಲ. ನನಗೆ ಮಾತ್ರ ಇದು ಅನುಕೂಲವಾಗಿದೆ."

ನಮ್ಮ ಮುಂದುಗಡೆ ಸುಮಾರು ಮೂರು ವರ್ಸ್ಟ್‌ಗಳ ದೂರಕ್ಕೆ ಹುಲ್ಲಿನ ಬೇರುಗಳು
ಡಿದ್ದ ಚಿಕ್ಕ ಪಟ್ಟಿಯಿತ್ತು. ನಡುನಡುವೆ ಕಂದರಗಳಿದ್ದುವು. ಕೊನೆಯಲ್ಲಿ, ಬರ್ಚ್ ಗಿಡ
ಒಂದು ಸಾಲಿತ್ತು. ಕಜಾನ್‌ಗೆ ಹೋಗುವ ಬೀದಿಗೆ ಗುರುತು, ಆ ಸಾಲುಮರಗಳು. ಕಂದರ
ಮೇಲ್ಗಡೆ, ಪೊದರುಗಳ ಬರಿದು ಕಡ್ಡಿಗಳು ಮುಂದಕ್ಕೆ ಮೈಚಾಚಿದ್ದುವು. ಸೂರ್ಯಾಸ್

ೀತಲ ಹೊಳಪಿನಲ್ಲಿ ರಕ್ತಸಿಕ್ತ ಚಾಟಿಗಳಂತೆ ಅವು ಕಂಡುವು. ಸಂಜೆಯ ಮೃದುಮಾರುತ ಂದ ಹುಲ್ಲು ಮಿಸುಕಿತು. ಅಂಥದೇ ಚಲನೆಯ ಪುನರಾವರ್ತನೆ ಅತಿ ಸಮೀಪದ ಕಂದರದ ಾಚೆಗೂ ಆಯಿತು. ಅಲ್ಲಿ, ಶಹರದಿಂದ ಬಂದು ಅಲೆದಾಡುತ್ತಿದ್ದ ಗಂಡುಹೆಣ್ಣು ಜೋಡಿಗಳ ಾಯಾ ಆಕೃತಿಗಳು ಮಿಸುಕಿದುವು. ಬಲದಿಕ್ಕಿನಲ್ಲಿ ದೂರ, ಭಿನ್ನಾಭಿಪ್ರಾಯದವರ ಮಸಣ ೂಮಿಯ ಕೆಂಪುಗೋಡೆ ಕಾಣಿಸುತ್ತಿತ್ತು. ಅದನ್ನು ಅವರು 'ಜಗ್ರೋವ್‌ಸ್ಕಿ ಗುಡಿಸಲು' ಂದು ಕರೆಯುತ್ತಿದ್ದರು. ಎಡದಲ್ಲಿದ್ದ ಮರಗಳ ಕಿರಿಯ ಗುಂಪು, ಯೆಹೂದಿಯರ ಮಸಣ ೂಮಿಗೆ ಗುರುತಾಗಿತ್ತು. ಪ್ರತಿಯೊಂದೂ ಅನಾಥವಾಗಿ ಕಂಡಿತು ಪ್ರತಿಯೊಂದೂ ಛಿದ್ರ ಿದ್ರವಾದ ಭೂಮಿಗೆ ಮೌನವಾಗಿ ಅಂಟಿಕೊಂಡಿತ್ತು. ಶಹರದ ಈ ಅಂಚಿನಲ್ಲಿದ್ದ ಪುಟ್ಟ ಮನೆ ಳ ಕಿಟಕಿಗಳು, ಧೂಳು ತುಂಬಿದ ರಸ್ತೆಯ ಕಡೆ ಸಂಕೋಚದಿಂದ ನೋಡುತ್ತ ಕಣ್ಣು ಮಿಟಿಕಿಸು ್ತಿದ್ದಂತೆ ಕಂಡಿತು. ಆ ರಸ್ತೆಯಲ್ಲಿ, ಸೊರಗಿದ ಸಣ್ಣಸಣ್ಣ ಹೇಟೆಗಳು ಚಲಿಸುತ್ತಿದ್ದುವು. ತೆ ವಿ ಚಿ ಕಾನ್ವೆಂಟನ್ನು ಅಂಬಾ ಎಂದು ಅರಚುತ್ತಲಿದ್ದ ಹಸುಗಳ ಗುಂಪೊಂದು ಹಾದು ೋಯಿತು. ಹತ್ತಿರದೊಂದು ಸೈನ್ಯ ಶಿಬಿರದಿಂದ, ಸಮರ ಸಂಗೀತ ಕೇಳಿಸಿತು; ಕಹಳೆಗಳು ೊಳಗುತ್ತಿದ್ದುವು; ಕೊಂಬುಗಳು ಕೂ ಅನ್ನುತ್ತಿದ್ದುವು.

ಹುಡುಕನೊಬ್ಬ, ಸ್ವರಪೆಟ್ಟಿಗೆಯೊಂದನ್ನು ಒರಟಾಗಿ ಎಳೆಎಳೆದು ಸದ್ದುಮಾಡುತ್ತಾ, ಡವುತ್ತಾ, ಗೊಣಗಿಕೊಂಡು ಬಂದ:

"ಏನಾದರೂ, ಹಿಡೀದೆ ಇರೋದಿಲ್ಲ ನಿನ್ನ—ಖಂಡಿತ."

ಸೂರ್ಯನ ಕೆಂಪು ಬೆಳಕಿನೆದುರು ಕಣ್ಣು ಕಿರಿದುಗೊಳಿಸುತ್ತಾ ಅಜ್ಜಿ ಅಂದಳು:

"ಯಾರನ್ನು ಜೆಪ್ಪೆ ನೀನು ಹಿಡಿಯೋದು? ಬಿದ್ದುಕೊಂಡು ಇನ್ನು ನೀನು ನಿದ್ದೆ ೋಗ್ತೀಯಾ. ನಿದ್ದೇಲಿ ನಿನ್ನದನ್ನೆಲ್ಲಾ ಯಾರಾದರೂ ದೋಚಿಕೊಂಡು ಹೋಗ್ತಾರೆ; ನಿನ್ನ ೃದಯದ ಹರ್ಷವಾಗಿರೋ ಸ್ವರಪೆಟ್ಟಿಗೆಯನ್ನೂ ಕಿತ್ತುಕೊಂಡು ಹೋಗ್ತಾರೆ."

ಹಡಗಿನ ಮೇಲಣ ಬದುಕಿನ ಬಗೆಗೆ ಅಜ್ಜಿಗೆ ಹೇಳುತ್ತ ನಾನು, ಸುತ್ತುಮುತ್ತಲೂ ದೃಷ್ಟಿ ಹರಿಸುತ್ತಿದ್ದೆ. ಅಲ್ಲಿ ಕಂಡಿದ್ದ ಬದುಕಿನ ಬಳಿಕ ಈಗಿನ ಪರಿಸರ ಸಪ್ಪೆಯಾಗಿ ನನಗೆ ತೋರಿತು. ನನಗೆ ಸಂಕಟವೆನಿಸಿತು. ನಾನು ಆಕೆಯ ಮಾತುಗಳಿಗೆ ಯಾವಾಗಲೂ ಕಿವಿಗೊಡುತ್ತಿದ್ದಂತೆಯೆ, ಷ್ಟೇ ಶ್ರದ್ಧೆಯಿಂದ, ಈಗ ನನ್ನ ಮಾತುಗಳಿಗೆ ಅಜ್ಜಿ ಕಿವಿಗೊಟ್ಟಳು. ಸ್ಮುರಿಯ ವಿಷಯವಾಗಿ ಾನು ಹೇಳಿದಾಗ, ಭಕ್ತಿಭಾವದಿಂದ, ಆಕೆ ಶಿಲುಬೆಯ ವಂದನೆಮಾಡಿ ಅಂದಳು:

"ಆ ಮುದ್ದೂ, ಒಳ್ಳೇ ಮನುಷ್ಯ! ಪೂಜ್ಯಕನ್ನಿಕೆ ಆತನಿಗೆ ಸಹಾಯಮಾಡಲಿ! ಅವನನ್ನು ರೀಬೇಡ ತಿಳೀತೆ? ಒಳ್ಳೇ ವಿಷಯಗಳನ್ನು ಯಾವಾಗಲೂ ನಿನ್ನ ಸ್ಮರಣೆಯಲ್ಲಿ ಭದ್ರವಾಗಿಡು. ೆಟ್ಟ ವಿಷಯಗಳನ್ನಾದರೋ, ಸುಮ್ಮನೆ ಆಚೆಗೆ ಎಸೆದುಬಿಡು."

ಹಡಗಿನ ಕೆಲಸದಿಂದ ನನ್ನನ್ನು ಯಾಕೆ ತೆಗೆದು ಹಾಕಿದ್ದರೆಂಬುದನ್ನು ಆಕೆಗೆ ತಿಳಿಸುವುದು ನನಗೆ ಬಲು ಪ್ರಯಾಸವೆನಿಸಿತು. ಹಲ್ಲುಕಡಿದು ಹೇಗೋ ಅದನ್ನು ಹೇಳಿಬಿಟ್ಟೆ. ಆ ಕಥೆ ಆಕೆಯ ಮೇಲೆ ಎಳ್ಳಷ್ಟು ಪರಿಣಾಮವನ್ನೂ ಮಾಡಲಿಲ್ಲ.

ನಿರಾಸಕ್ತಿಯಿಂದ ಆಕೆ ಅಂದಳು.

"ನೀನಿನ್ನೂ ತೀರಾ ಎಳೆಯವನು; ಹೇಗೆ ಬದುಕಬೇಕೂಂತ ನೀನಿನ್ನೂ ಕಲಿತಿಲ್ಲ."

"ಹೇಗೆ ಬದುಕಬೇಕು ಅನ್ನೋದನ್ನು ಕಲಿತಿಲ್ಲ ಅಂತಲೇ ಜನರು ಒಬ್ಬರಿಗೊಬ್ಬರು ಹೇಳ್ತಾಲೇ ಇರ್ತಾರೆ—ರೈತರು, ಹಡಗಿನ ಕೆಲಸಗಾರರು, ಎಲ್ಲರೂ. ಚಿಕ್ಕಮ್ಮ ಮಾತ್ರಿಯೋನ ತನ್ನ ಮಗನಿಗೆ ಹೇಳ್ತಿರ್ತಾಳೆ. ಕಲಿಯುವಂಥಾದ್ದು ಏನಿದೆ?"

ಅಜ್ಜಿ ತನ್ನ ತುಟಿಗಳನ್ನು ಬಿಗಿದುಕೊಂಡು ತಲೆಯಲುಗಿಸಿದಳು.

"ಅದು ನನಗೆ ತಿಳೀದು," ಎಂದು ಆಕೆ ಉತ್ತರವಿತ್ತಳು.

"ಆದರೆ ನೀನೂ ಅದೇ ಮಾತು ಹೇಳ್ತಿದೀಯಾ!"

ಅಜ್ಜಿ, ಶಾಂತವಾಗಿ ಉತ್ತರವಿತ್ತಳು:

"ಯಾಕೆ ಹೇಳಬಾರದು? ಆದರೆ, ಅದರಿಂದ ನೀನೇನೂ ನೊಂದ್ಕೋಬೇಡ. ನೀನಿನ್ನೂ ತೀರಾ ಚಿಕ್ಕವನು. ಹೇಗೆ ಬದುಕಬೇಕು ಅನ್ನೋದು ನಿನಗೆ ತಿಳಿದಿರ್ತದೆ ಅಂತ ಯಾರೂ ನಿರೀಕ್ಷಿಸೋದಿಲ್ಲ. ಅಲ್ಲದೆ, ಗೊತ್ತಿದೆಯಾದರೂ ಯಾರಿಗೆ? ಕಳ್ಳರಿಗೆ ಮಾತ್ರ. ನಿನ್ನ ಅಜ್ಜನನ್ನೆ ತಗೋ. ಆತ ಚುರುಕಾಗಿದಾನೆ, ಪುಸ್ತಕ ಓದಿ ತಿಳಕೊಂಡಿದ್ದಾನೆ. ಆದರೆ, ಅವನಿಗೆ ಅದರಿಂದೇನೂ ಪ್ರಯೋಜನವಾಗಿಲ್ಲ."

"ನಿನಗೆ ದೊರತಿರೋದು ಒಳ್ಳೇ ಬದುಕೆ?"

"ನನಗೆ ಆ್ಹ, ಹೌದು, ಒಳ್ಳೇ ಬದುಕು. ಕೆಟ್ಟ ಬದುಕು ಕೂಡಾ. ಒಮ್ಮೆ ಹಾಗೆ, ಒಮ್ಮೆ ಹೀಗೆ."

ಜನರು, ತಮ್ಮ ಹಿಂದೆ ನೆರಳುಗಳನ್ನು ಎಳೆದುಕೊಳ್ಳುತ್ತಾ, ನಮ್ಮನ್ನು ಹಾದುಹೋದರು. ಅವರ ಪಾದಗಳ ಅಡಿಯಿಂದ ಧೂಳು ಹೊಗೆಯಂತೆ ಎದ್ದು, ಅವರ ನೆರಳುಗಳನ್ನು ಮುಚ್ಚಿತು. ಸಂಜೆ ಹೊತ್ತಿನ ವ್ಯಥೆಯ ಭಾವನೆ ಹೆಚ್ಚಿತು. ಕಿಟಕಿಯೊಳಗಿಂದ ಅಜ್ಜನ ಗೊಣಗುಧ್ವನಿ ಕೇಳಿ ಬಂತು:

"ಓ ದೇವರೇ, ನಿನ್ನ ಕ್ರೋಧದ ಪೂರ್ಣಶಕ್ತಿಯನ್ನು ನನ್ನ ಮೇಲೆ ಪ್ರಯೋಗಿಸಬೇಡ. ಸಹಿಸುವುದಕ್ಕೆ ನನಗೆಷ್ಟು ಶಕ್ತಿ ಇದೆಯೋ ಅಷ್ಟರಮಟ್ಟಿಗೆ ನನ್ನನ್ನು ದಂಡಿಸು—"

ಅಜ್ಜಿ ಮುಗುಳುನಕ್ಕಳು. ಆಕೆಯೆಂದಳು:

"ಇವನ ಪ್ರಾರ್ಥನೆ ಕೇಳಿ ಕೇಳಿ, ಸಾಕೋಸಾಕಾಗಿ, ದೇವರು ಬೇಸತ್ತಿರಬೇಕು. ಪ್ರತಿ ಸಂಜೆಯೂ ಆತ ಈ ರೀತಿ ಗೋಳಾಡ್ತಾನೆ. ಯಾತಕ್ಕೋಸ್ಕರ? ವಯಸ್ಸಾಗಿದೆ. ಇನ್ನು ಆಗಬೇಕಾದ್ದೇನೂ ಇಲ್ಲ. ಆದರೂ ಈ ರೀತಿ ಗೊಣಗಾಡ್ತಾ ದೂರು ಕೊಡೋದು! ಪ್ರತಿ ಸಂಜೆ ಇವನ ಸ್ವರ ಕೇಳ್ತಾ, ಹೊಟ್ಟೆತುಂಬಾ ದೇವರು ನಗ್ತಿರಬೇಕು: 'ವಾಸಿಲಿ ಕಾಶಿರಿನ್‌ನದು ಪುನಃ ಶುರುವಾಯ್ತು'—ಅಂತ! ಹುಂ! ಸರಿ, ಬಾ, ಮಲಗೋಣ."

* * *

ಹಾಡುವ ಹಕ್ಕಿಗಳನ್ನು ಹಿಡಿಯುವ ಉದ್ಯಮ ಕೈಗೊಳ್ಳಲು ನಾನು ನಿರ್ಧರಿಸಿದೆ. ಜೀವನ ನಿರ್ವಹಣಕ್ಕೆ ಅದೊಳ್ಳೆಯ ಮಾರ್ಗ ಎಂದು ನನಗೆ ಅನಿಸಿತು. ನಾನು ಹಕ್ಕಿಗಳನ್ನು ಹಿಡಿಯುವುದು, ಅಜ್ಜಿ ಮಾರುವುದು. ಹೀಗಾಗಿ, ಒಂದು ಬಲೆಯನ್ನೂ ಒಂದು ಚಕ್ರ ಮತ್ತು ಕೆಲಹಕ್ಕಿ ಹಿಡಿಯುವ ಗೂಡುಗಳನ್ನೂ ಕೊಂಡುಕೊಂಡು, ಕೆಲಪಂಜರಗಳನ್ನು ಮಾಡಿ, ಇಗೋ, ಮುಂಜಾವ

ೊತ್ತು ಒಂದು ಕಂದರದ ಪೊದೆಗಳ ಹಿಂದೆ ನಾನು ಅವಿತುಕುಳಿತಿದ್ದೇನೆ. ಅಜ್ಜಿ ಒಂದು ಚೀಲ ನ್ನೂ ಬುಟ್ಟಿಯನ್ನು ಹಿಡಿದುಕೊಂಡು, ಕೊನೆಕೊನೆಯ ನಾಯಿಕೊಡೆಗಳನ್ನೂ ಬೆರ್ರಿ ಹಣ್ಣು ಳನ್ನೂ ಕಾಯಿಗಳನ್ನೂ ಹುಡುಕಿಕೊಂಡು, ಸಮಿಾಪದ ಕಾಡುಗಳಲ್ಲಿ ಅಲೆಯುತ್ತಿದ್ದಾಳೆ.

ಬಳಲಿದಂತೆ ಕಾಣುವ ಸೆಪ್ಟೆಂಬರ್ ತಿಂಗಳ ಸೂರ್ಯ ಇದೇ ಈಗ ಮೇಲಕ್ಕೆ ಏರಿದ್ದಾನೆ. ವನ ಮ್ಲಾನ ಕಿರಣಗಳು ಒಮ್ಮೆ ಮೋಡಗಳಲ್ಲಿ ಮರೆಯಾಗುತ್ತವೆ; ಮತ್ತೊಮ್ಮೆ ತಮ್ಮ ಳ್ಳಿಯ ಚಾಮರವನ್ನು ನಾನು ಅಡಗಿರುವ ಕಡೆಗೂ ಹರಡುತ್ತವೆ. ನೆರಳುಗಳನ್ನೂ ಕಂದರದ ಳದಲ್ಲಿ ಅಲೆದಾಡುತ್ತಿವೆ. ಬಿಳಿಯ ಮಂಜು ಏಳುತ್ತಿದೆ. ಕಡಿದಾದ ಆವೆಮಣ್ಣಿನ ಒಂದು ದಂಡೆ, ರಿದಾಗಿ, ಬರಿದಾಗಿ ತೋರುತ್ತದೆ. ಇನ್ನೊಂದು, ಮೃದುವಾದ ಇಳಿಜಾರು. ಹುಲ್ಲೂ ಶುಭ್ರವಾದ ಂಪು ಹಳದಿ ಮತ್ತು ಬಾದಾಮಿ ಬಣ್ಣದ ಎಲೆಗಳಿರುವ ಪಟ್ಟಸೆಯ ಪೊದೆಗಳೂ ಆ ದಂಡೆಯಲ್ಲಿವೆ. ಾಳಿ ಆ ಎಲೆಗಳನ್ನು ಕಿತ್ತು, ಕಂದರದಲ್ಲೆಲ್ಲಾ ಹರಡುತ್ತಿದೆ.

ತಳದಲ್ಲಿರುವ ಒರಟು ಗಿಡಗಳಲ್ಲಿ, ಗೋಲ್ಡ್ ಫಿಂಚ್ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿವೆ. ವುಗಳ ಅಹಂಭಾವದ ಪುಟ್ಟ ತಲೆಗಳ ಮೇಲಿರುವ ಕಡುಗೆಂಪು ಟೋಪಿಗಳು ಅಲ್ಲಿ ಇಲ್ಲಿ, ರಕಲು ಎಲೆಗಳೆಡೆಯಿಂದ ನನಗೆ ಕಾಣುತ್ತಿವೆ. ಟಿಟ್‌ಮೌಸ್ ಹಕ್ಕಿಗಳು ನನ್ನ ಸುತ್ತುಮುತ್ತೆಲ್ಲ ತೂಹಲದಿಂದ ಚೀಂವ್‌ಗುಡುತ್ತಿವೆ. ರಜಾದಿನಗಳಲ್ಲಿ ಕುನಾವಿನೋದ ಹುಡುಗಿಯರು ಾಡುವಂತೆ ತಮ್ಮ ಕೆನ್ನೆಗಳನ್ನು ಉಬ್ಬಿಸಿಕೊಳ್ಳುತ್ತ ಗದ್ದಲಮಾಡುತ್ತಿವೆ. ವೇಗವಾದ, ುರುಕಾದ, ಉದ್ಧಟ ಹಕ್ಕಿಗಳು. ಪ್ರತಿಯೊಂದನ್ನೂ ಅವು ತಿಳಿಯಲೇಬೇಕು, ಮುಟ್ಟಲೇ ೕಕು. ಹೀಗಾಗಿ, ಒಂದರ ಹಿಂದೊಂದು ಅವು ನನ್ನ ಬಲೆಯೊಳಕ್ಕೆ ಬೀಳುತ್ತದೆ. ಅವುಗಳ ದ್ದಾಟವನ್ನು ನಿರೀಕ್ಷಿಸುವುದು ಯಾತನೆಯ ಕೆಲಸ. ಆದರೆ ನಾನು, ವ್ಯವಹಾರಕ್ಕೆ ಇಳಿದಿರುವ ನುಷ್ಯ; ನಿರ್ದಯನಾಗಿರಬೇಕು. ಹಕ್ಕಿಗಳನ್ನು ತೆಗೆದು ಇನ್ನೊಂದು ಪಂಜರಕ್ಕೆ ಸ್ಥಳಾಂತರಿ ತ್ತೇನೆ, ಆ ಉದ್ದೇಶಕ್ಕಾಗಿಯೇ ಸಿದ್ಧಗೊಳಿಸಿರುವ ಪಂಜರ ಅದು. ಅವು ಶಾಂತವಾಗಿರು ಂತೆ ಮಾಡಲು, ಗೋಣಿಯಿಂದ ಪಂಜರವನ್ನು ಮುಚ್ಚುತ್ತೇನೆ.

ಸಿಸ್ಕಿನ್ ಹಕ್ಕಿಗಳ ಒಂದು ತಂಡ, ಸೂರ್ಯಪ್ರಭೆಯಿಂದ ಬೆಳಗುತ್ತಿರುವ ಒಂದು ುಳ್ಳು ಪೊದೆಯ ಮೇಲೆ ಎರಗುತ್ತದೆ. ಸೂರ್ಯನನ್ನು ಕಂಡು ಆನಂದಾತಿರೇಕ ಹಕ್ಕಿಗಳಿಗೆ. ಲಾ ಹುಡುಗರ ಗುಂಪಿನಂತೆ, ಹೆಚ್ಚಿನ ಸಂತೋಷದಿಂದ ಅವು ಚಿಂವ್‌ಗುಡುತ್ತಿವೆ. ದಕ್ಷಿಣಕ್ಕೆ ಾರಿಹೋಗಲು ತಡವಾಗಿರುವ ಮಿತವ್ಯಯಿಯಾದ ಜಿಪುಣನಾದ ಕಟುಕಹಕ್ಕಿ, ಕಾಡು ಲಾಬಿಯ ಬಳುಕುವ ರೆಂಬೆಯ ಮೇಲೆ ಕುಳಿತು, ತನ್ನ ರೆಕ್ಕೆಗಳನ್ನು ತೀಡಿ ಸರಿಪಡಿಸುತ್ತಾ, ೕಟೆಗಾಗಿ ಕರಿಮಣಿಯಂತಹ ಕಣ್ಣನ್ನು ಅತ್ತಿತ್ತ ಹೊರಳಿಸುತ್ತಿದೆ. ಒಮ್ಮೆಲೆ ಬೆಳ್ಳಕ್ಕಿಯಂತೆ ತ್ತರಕ್ಕೆ ಹಾರಿ, ದೊಡ್ಡ ದುಂಬಿಯೊಂದನ್ನು ಹಿಡಿಯುತ್ತದೆ. ಬೇಟೆಯನ್ನು ಒಂದು ಮುಳ್ಳಿಗೆ ಚ್ಚಿ, ಪಕ್ಕದಲ್ಲಿದ್ದು, ತನ್ನ ಬೂದು ಬಣ್ಣದ ಚೋರಶಿರವನ್ನು ತಿರುವುತ್ತ ತಿರುಗಿಸುತ್ತ, ಕಾವ ುತ್ತದೆ. ಪೈನ್‌ಫಿಂಚ್ ಹಕ್ಕಿಯೊಂದು ಮೌನವಾಗಿ ಹಾರಿಹೋಗುತ್ತದೆ. ನನ್ನ ಹೃದಯದ ಯಕೆಯಾಗಿರುವುದು ಆ ಹಕ್ಕಿಯೇ. ಒಂದೇ ಒಂದನ್ನು ಹಿಡಿಯುವುದು ನನ್ನಿಂದ ಸಾಧ್ಯವಾದರೆ! ಂಪಗಿನ, ಸೇನಾನಿಯಂತೆ ಬಿಂಕ ತೋರುವ, ಬುಲ್‌ಫಿಂಚ್ ಹಕ್ಕಿಯೊಂದು ತಂಡವನ್ನು ಬಿಟ್ಟು, ರಮಿಸಲೆಂದು, ಒಂದು ಪೊದೆಗೆ ಬರುತ್ತದೆ. ಅಲ್ಲಿ ತನ್ನ ಕರಿಯ ಕೊಕ್ಕನ್ನು ಮೇಲಕ್ಕೂ

ಕೆಳಕ್ಕೂ ಆಡಿಸುತ್ತಾ, ಕುಳಿತ ರೆಂಬೆಯನ್ನು ನೋಡಿ, ಪರೀಕ್ಷಾರ್ಥವಾಗಿ ಚಿಂವ್ ಗುಟ್ಟುತ್ತದೆ

ಸೂರ್ಯ ಎತ್ತರಕ್ಕೆ ಏರಿದಷ್ಟೂ ಹಾರಾಡುತ್ತ ಬರುವ ಹಕ್ಕಿಗಳ ಸಂಖ್ಯೆ ಹೆಚ್ಚು. ಅವುಗಳ ಹಾಡುಕೂಡಾ ಮತ್ತಷ್ಟು ಹರ್ಷಪೂರ್ಣ. ಇಡಿಯ ಕಂದರವೇ ಅವುಗಳ ಸಂಗೀತದಿಂದ ತುಂಬಿ ಹೋಗುತ್ತದೆ. ಗಾಳಿಯಲ್ಲಿ ಪೊದೆಗಳು ಮಾಡುವ ಸರಸರಸದ್ದು, ಆ ಸಂಗೀತಕ್ಕೆ ನಿರಂತರ ಪಕ್ಕವಾದ್ಯವಾಗುತ್ತದೆ. ಹಕ್ಕಿಗಳ ಎಡೆಬಿಡದ ಸ್ವರಗಳು, ಈ ಮೃದುವಾದ ಮಧುರವೂ ಶೋಕಪೂರ್ಣವೂ ಆದ ಸರಸರಸದ್ದನ್ನು ಅಣಗಿಸಲು ಶಕ್ತವಾಗುವುದಿಲ್ಲ. ಆ ಸದ್ದಿನಲ್ಲಿ ಬೇಸಗೆಯ ವಿದಾಯದ ಹಾಡನ್ನು ನಾನು ಕೇಳುತ್ತೇನೆ. ಗೀತವಾಗಿ ಹೆಣೆದುಕೊಳ್ಳುವ ಪದಗಳನ್ನು ಅದು ಪಿಸುಗುಡುತ್ತದೆ. ಸ್ಮರಣೆಯಲ್ಲಿ ನನಗರಿವಿಲ್ಲದಂತೆಯೇ ಹಳೆಯ ದೃಶ್ಯಗಳು ಮರ ಕಳಿಸುತ್ತವೆ.

ಎಲ್ಲಿಂದಲೋ ಮೇಲ್ಗಡೆಯಿಂದ ಅಜ್ಜಿ ಕರೆಯುತ್ತಾಳೆ:

"ಎಲ್ಲಿದೀಯಾ ನೀನು ?"

ಆಕೆ ಕಂದರದ ಅಂಚಿನಲ್ಲಿ, ಕರವಸ್ತ್ರವನ್ನು ತನ್ನ ಪಕ್ಕದಲ್ಲಿ ಹರಡಿಕೊಂಡು ಕುಳಿತಿದ್ದಾಳೆ ಕರವಸ್ತ್ರದ ಮೇಲೆ ಬ್ರೆಡ್ಡು, ಉಪ್ಪಿನಕಾಯಿ ಗೆಡ್ಡೆ ಮತ್ತು ಸೇಬುಗಳಿವೆ. ಈಯೆಲ್ಲ ಭವ್ಯವಸ್ತುಗಳ ನಡುವೆ, ಗಾಜಿನ ಸುಂದರವಾದೊಂದು ಚಿಕ್ಕ ಶೀಷೆ ಹೊಳೆಯುತ್ತಿದೆ. ನೆಪೋಲಿಯನ್ನನ ತಲೆಯ ಪ್ರತಿಬಿಂಬವಿದ್ದ ಸ್ಫಟಿಕದಂತಹ ಮುಚ್ಚಳವಿದೆ ಆ ಶೀಷೆಗೆ. ಆ ಶೀಷೆಯಲ್ಲಿ, ಸಂತ ಜಾನನ ಮಾದಕ ಬೇರನ್ನು ಸೇರಿಸಿದ್ದ ಸ್ವಲ್ಪ ವೋಡ್ಕಾ ಇದೆ.

"ಓ ದೇವರೆ, ಎಲ್ಲ ಎಷ್ಟೊಂದು ಚೆನ್ನಾಗಿದೆ!" ಎಂದು ಅಜ್ಜಿ ಕೃತಜ್ಞತಾಪೂರ್ವಕವಾಗಿ ಉಸಿರುಬಿಡುತ್ತಾಳೆ.

"ನಾನೊಂದು ಕವಿತೆ ಕಟ್ಟಿದ್ದೇನೆ!"

"ನಿಜವಾಗಿಯೂ ?"

ಕೆಲಸಾಲುಗಳನ್ನು ಆಕೆಯ ಮುಂದೆ ನಾನು ಅನ್ನುತ್ತೇನೆ:

"ಬರುತಲಿದೆ ಚಳಿಗಾಲ, ಮುಗಿದುವು ಹೂಗಳೂ—
ಬೇಸಗೆಗೆ ವಿದಾಯ, ಬೆಚ್ಚಗಿನ ಸೂರ್ಯಗೂ......"

ನನ್ನದನ್ನು ಪೂರ್ತಿ ಕೇಳದೆಯೇ ಅಜ್ಜಿಯೆನ್ನುತ್ತಾಳೆ:

"ಈಗಾಗಲೇ ಅಂಥದೊಂದು ಹಾಡಿದೆ. ನಿನ್ನದಕ್ಕಿಂತ ಅದು ಚೆನ್ನಾಗಿದೆ, ಅಪ್ಪ."

ಬಳಿಕ, ರಾಗವಾಗಿ ಆಕೆ ಅನ್ನುತ್ತಾಳೆ:

> "ಆ್ಹ, ಮುಳುಗುತಲಿರುವನು ಬೇಸಗೆ ಸೂರ್ಯ,
> ಕೋಗಿಲೆ ಹೊರಟೇ ಹೋಗಿಹುದು;
> ಇಹೆ ನಾನಿಲ್ಲೆ, ಒಬ್ಬಳೆ ಕನ್ನೆ,
> ಬಿಸಿದಿನಗಳ ಮಮಸುಖ ಇನ್ನಿಲ್ಲ."
>
> "ಆ್ಹ, ಸುಖಿಯಾದೆನ್ನಯ ಕರನೀ ಪಿಡಿದು,
> ಈಗಿರುವೀ ತಣಪಾಗಸದಡಿಯಲಿ,

ನಡಸಿದ ಸುಖಮಯ 'ಮೇ' ಮಾಸವನು,
ಅಲೆಯುವೆ ಬೆಳಗಲಿ ನೆನೆಸುತ್ತ."

"ಆ, ಕರುಣೆಯ ಕನ್ನೆಯರೇ, ಅತಿಯೊಲವಿನ ತಂಗಿಯರೇ,
ಚಳಿಗಾಲದ ಮಾರುತ ಬೀಸಿದ ಬಳಿಕ,
ಶೋಕದಿ ಉರಿದಿಹ ಮಮಹೃದಯವನೆತ್ತಿ,
ಮಾಡಿರಿ ಮರೆ ಹಿಮರಾಶಿಯ ಕೆಳಗೆ...."

ಕವಿಯಾದ ನನ್ನ ಹೆಮ್ಮೆ ಏನೇನೂ ಘಾಸಿಗೊಳ್ಳುವುದಿಲ್ಲ. ಆಕೆಯ ಹಾಡನ್ನು ನಾನು ಶಿಯಾಗಿ ಇಷ್ಟಪಡುತ್ತೇನೆ. ಆ ಕನ್ನೆಗಾಗಿ ಕನಿಕರ ತೋರುತ್ತೇನೆ.

ಅಜ್ಜಿಯೆನ್ನುತ್ತಾಳೆ:

"ದುಃಖವನ್ನು ಹಾಡೋದೇ ಹಾಗೆ. ಅದನ್ನು ಹಾಡಿದವಳು ಆ ಕನ್ನೆ. ಬೇಸಗೆಯಲ್ಲಿ ಯತಮನ ಜತೆ ಆಕೆ ಅಲೆದಾಡಿದಳು. ಆದರೆ ಚಳಿಗಾಲ ಬಂದಾಗ, ಆಕೆಯೊಬ್ಬಳನ್ನೇ ಟ್ಟು ಹೊರಟುಹೋದ. ಬಹುಶಃ ಇನ್ನೊಬ್ಬಳಲ್ಲಿಗೆ ಹೋದ ಅಂತ ಕಾಣುತ್ತದೆ. ಆಕೆ ದುಃಖ ಂದ ಅತ್ತಳು. ಸ್ವತಃ ನಿನಗೆ ಅನುಭವವಾಗದೇ ಇರೋದನ್ನು ನೀನೆಂದೂ ಹಾಡಲಾರೆ. ಆಕೆ ಾಡನ್ನು ಎಷ್ಟು ಸೊಗಸಾಗಿ ಕಟ್ಟಿದಳು, ನೋಡು!"

....ಮೊದಲ ಬಾರಿ ಕೆಲಹಕ್ಕಿಗಳನ್ನು ನಾಲ್ವತ್ತು ಕೊಪೆಕ್‌ಗಳಿಗೆ ಮಾರಿದಾಗ, ಅಜ್ಜಿ ಹಳವಾಗಿ ಅಚ್ಚರಿಗೊಂಡಳು.

"ಹೇಗಿದೆ! ಪುಟ್ಟಹುಡುಗನ ಬರೀ ಹುಚ್ಚಾಟ—ಇದರಿಂದ ಸಂಪಾದನೆಯಾಗೋದು ಅಷ್ಟ ಲ್ಲಿ ಇದೆ—ಅಂದ್ಕೊಂಡಿದ್ದೆ. ಆದರೆ, ಒಳ್ಳೇ ಆದಾಯವೇ ಬಂದ್ಬಿಟ್ಟಿದೆ, ನೋಡು!"

"ನೀನು ಬಹಳವಾಗಿ ಅಗ್ಗವಾಗಿ ಮಾರಿಬಿಟ್ಟೆ."

"ಅಹಾ? ಹೌದಾ?"

ಸಂತೆಯ ದಿನಗಳಲ್ಲಿ ಒಂದು ರೂಬಲನ್ನೋ, ಅಥವಾ ಅದಕ್ಕಿಂತಲೂ ಹೆಚ್ಚನ್ನೋ, ಅಜ್ಜಿ ಂಪಾದಿಸುತಿದ್ದಳು. ಆಗಂತೂ ಭಾವನೆಗಳನ್ನು ಅದುಮಿಡುವುದು ಆಕೆಯಿಂದ ಆಗುತ್ತಿರಲಿಲ್ಲ. ಲ್ಲರೆ ವಿಷಯಗಳಿಂದಲೇ ಎಷ್ಟೊಂದು ಹಣ ಸಂಪಾದಿಸುವುದು ಸಾಧ್ಯವಿತ್ತು!

"ಒಬ್ಬಳು ಹೆಂಗಸು ದಿನವೆಲ್ಲಾ ಬಟ್ಟೆ ಒಗೆದರೂ ನೆಲ ಉಜ್ಜಿದರೂ ಸಿಗೋದು ಇಪ್ಪತ್ತೈದು ೂಪೆಕ್ ಮಾತ್ರ! ನಾವು ಹೀಗೆಲ್ಲಾ ಸಂಪಾದಿಸೋದರಲ್ಲಿ ಅರ್ಥವಿಲ್ಲ. ಇದೆಲ್ಲಾ ತಪ್ಪು. ಹಕ್ಕಿ ಳನ್ನು ಪಂಜರಗಳಲ್ಲಿಡೋದೂ ತಪ್ಪು. ಈ ವ್ಯವಹಾರವನ್ನು ನೀನು ಬಿಟ್ಬಿಡಬೇಕು, ಅಲ್ಯೋಶಾ."

ಆದರೆ, ಹಕ್ಕಿ ಹಿಡಿಯುವುದರಲ್ಲಿ ನನ್ನ ಆಸಕ್ತಿ ಹೆಚ್ಚಿತು. ಆ ಕೆಲಸದಿಂದ ನನಗೆ ಸಂತೋಷ ಾಗುತ್ತಿತ್ತು. ಹಕ್ಕಿಗಳ ಹೊರತಾಗಿ ಬೇರೆ ಯಾರಿಗೂ ಎಳ್ಳಿನಷ್ಟೂ ತೊಂದರೆಯನ್ನುಂಟು ಾಡದೆ, ನನ್ನ ಸ್ವಾತಂತ್ರ್ಯವನ್ನು ಅದು ಉಳಿಸಿಕೊಂಡಿತು. ಒಳ್ಳೆಯ ಸಲಕರಣೆಗಳಿಂದ ನಾನು ಜ್ಜಿತನಾದೆ. ಅನುಭವಿಕರಾದ ಹಕ್ಕಿ ಹಿಡಿಯುವವರೊಡನೆ ಮಾತನಾಡಿ, ನಾನು ಎಷ್ಟನ್ನೋ ಳಿದುಕೊಂಡಿದ್ದೆ. ನಾನು ಒಬ್ಬಂಟಿಗನಾಗಿ ಹೆಚ್ಚು ಕಡಿಮೆ ಮೂವತ್ತು ವರ್ಸ್ಟಗಳ ದೂರ, ೋಸ್ತೋವ್‌ಸ್ಕಿ ಕಾಡುಗಳಿಗೆ ಅಥವಾ ವೋಲ್ಗಾ ದಡಗಳಿಗೆ ಹೋಗತೊಡಗಿದೆ. ಅಲ್ಲಿ ಎತ್ತರದ

ಪೈನ್ ಮರಗಳಲ್ಲಿ, ಕ್ರಾಸ್‌ಬಿಲ್‌ಗಳನ್ನು ಅಥವಾ ಪಕ್ಷಿಪ್ರೇಮಿಗಳು ಬಹಳವಾಗಿ ಇಷ್ಟಪಡುತ್ತಿದ್ದ ಒಂದು ವಿಶೇಷ ಜಾತಿಯ ಟಿಟ್‌ಮೌಸನ್ನು-ನೀಳಬಾಲದ ಅಪೂರ್ವ ಸೌಂದರ್ಯದ ಬಿಳಿ ಮಾ... ರಿಯ ಹಕ್ಕಿಯನ್ನು—ಹಿಡಿಯುತ್ತಿದ್ದೆ.

ಕೆಲವೊಮ್ಮೆ ಸಂಜೆಯ ಹೊತ್ತು ಹೊರಟು, ಕಜಾನ್ ರಸ್ತೆಯಲ್ಲಿ ರಾತ್ರಿಯೆಲ್ಲಾ ನಡೆಯು... ತ್ತಿದ್ದೆ. ಆಗಾಗ್ಗೆ, ಶರತ್ಕಾಲದ ಮಳೆ ಇರುತ್ತಿತ್ತು, ಮೊಣಕಾಲವರೆಗೂ ಕೆಸರಿರುತ್ತಿತ್ತು. ಹೀಗಿದ್ದರು... ನಡೆಯುತ್ತಿದ್ದೆ. ನನ್ನ ಬಲೆ—ಗೂಡುಗಳು, ಪಂಜರಗಳು, ಹಕ್ಕಿಗಳನ್ನು ಮರುಳುಗೊಳಿಸಲು... ತಿಂಡಿ—ಇವನ್ನೆಲ್ಲಾ ಎಣ್ಣೆ ಬಟ್ಟೆಯ ಒಂದು ಚೀಲದಲ್ಲಿರಿಸಿ ಬೆನ್ನಮೇಲೆ ಹೊರುತ್ತಿದ್ದೆ. ಕಡು... ಗೆಂಪು ಬಾದಾಮಿ ಬಣ್ಣದ ದಪ್ಪನೆಯ ನಡೆಗೋಲು ನನ್ನ ಕೈಯಲ್ಲಿರುತ್ತಿತ್ತು. ಶರತ್ಕಾಲದ ಇರುಳು... ಚಳಿಚಳಿಯಾಗಿ ಭಯಾನಕವಾಗಿರುತ್ತಿತ್ತು—ಬಲು ಭಯಾನಕವಾಗಿರುತ್ತಿತ್ತು. ಬೀದಿಂ... ಬದಿಯಲ್ಲಿ, ಹಳೆಯ, ಮಿಂಚು ಬಡೆದ, ಬರ್ಚ್‌ಮರಗಳಿರುತ್ತಿದ್ದುವು. ಅವುಗಳ ಒದ್ದೆ ಕೊಂ... ಗಳು ನನ್ನ ತಲೆಯ ಮೇಲ್ಗಡೆ ಒಂದಾಗುತ್ತಿತ್ತು. ನನ್ನ ಎಡಕ್ಕೆ ಗುಡ್ಡಗಳ ಬುಡದಲ್ಲಿ, ವೋಲ... ನದಿಯಿದ್ದ ಭಾಗದಲ್ಲಿ, ಆಗಾಗ್ಗೆ ಬೆಳಕುಗಳು ತೇಲುತ್ತಿದ್ದುವು. ಆ ಋತುವಿನ ಕೊನೆಯ ಹಡಗು... ಗಳ ಹಾಗೂ ಥತ್ತೇಮಾರುಗಳ ಹಾಯಿಕಂಬಗಳ ಮೇಲಿಂದ ಹಾದು ಬರುತ್ತಿತ್ತು ಅಂತಹ ಬೆಳಕ... ಹಿಂದಕ್ಕೆ, ತಳವಿಲ್ಲದ ಪ್ರಪಾತದೊಳಕ್ಕೆ, ಅವು ಸರಿಯುತ್ತಿದ್ದಂತೆ ಅನಿಸುತ್ತಿತ್ತು. ಅವುಗ... ಕಹಳೆ ಶಿಳ್ಳುಗಳೂ ಹುಟ್ಟುಗಾಲಿಗಳ ಚಲನದ ಸದ್ದೂ ನನಗೆ ಕೇಳಿಸುತ್ತಿದ್ದುವು.

ನಾನು ದಾಟಿಹೋಗುತ್ತಿದ್ದ ಹಳ್ಳಿಗಳಲ್ಲಿ, ಬೀಡುಕಬ್ಬಿಣದಂತಹ ನೆಲದಿಂದ ಗುಡಿಸಲುಗಳು... ಎದ್ದಿರುತ್ತಿದ್ದುವು. ಹಸಿದ, ಕ್ರೂರ, ನಾಯಿಗಳು ನನ್ನ ಕಾಲುಗಳೆಡೆಗೆ ಧಾವಿಸುತ್ತಿದ್ದುವು... ರಾತ್ರಿಯ ಕಾವಲುಗಾರರು ತಮ್ಮ ಬಡಿಗೆಗಳಿಂದ ಸದ್ದು ಮಾಡಿ, ಭೀತಿಗೊಂಡ ಸ್ವರಗಳಲ್ಲಿ ಕೂ... ಕೇಳುತ್ತಿದ್ದರು:

ಯಾರು ಅಲ್ಲಿ ಹೋಗ್ತಿರೋದು? ರಾತ್ರಿಯ ಹೊತ್ತು ಹೇಳಬಾರದ ಹೆಸರಾದ ದೆವ್ವ... ಯಾರನ್ನು ಕರಕೊಂಡು ಬಂದಿದೆ?"

ಅಂತಹ ಕಾವಲುಗಾರರು, ನನ್ನ ಬಲೆ—ಗೂಡುಗಳನ್ನು ಕಸಿದುಕೊಳ್ಳುವರೆಂಬ ಭಂ... ವಿತ್ತು ನನಗೆ. ಆ ಕಾರಣದಿಂದ, ಕಾವಲುಗಾರರಿಗೆ ಲಂಚ ನೀಡಲೆಂದು, ಐದು ಕೊಪೆಕ್ ನಾಣ್ಯ... ಗಳನ್ನು ನಾನು ಯಾವಾಗಲೂ ಒಯ್ಯುತ್ತಿದ್ದೆ. ಫೊಕಿನೋ ಗ್ರಾಮದ ರಾತ್ರಿ ಕಾವಲುಗಾರ ನನ್ನ... ಸ್ನೇಹಿತನಾದ. ನನ್ನ ಸಾಹಸಗಳನ್ನು ಕಂಡು ಆತ ಬೆರಗಾಗುತ್ತಿದ್ದ.

"ಪುನಃ ನೀರು? ಎಂಥ ನಿರ್ಭೀತ, ಅವಿಶ್ರಾಂತ, ನಿಶಾಪಕ್ಷಿ ನೀನು! ಹ್ಣ? ಎಂದು ಆ... ಅನ್ನುತ್ತಿದ್ದ.

ನಿಫೊಂಟ್ ಎಂದು ಅವನ ಹೆಸರು. ಆಕೃತಿ ಚಿಕ್ಕದು. ಕೂದಲು ನರೆತ್ತಿತ್ತು. ಯಾವನೋ... ಒಬ್ಬ ಸಂತನಂತೆ ಕಾಣುತ್ತಿದ್ದ. ಅನೇಕ ವೇಳೆ, ತನ್ನ ಜೇಬಿನಿಂದ ಗೆಣಸನ್ನೋ ಅಥವಾ ಒಂದು... ಸೇಬನ್ನೋ ಇಲ್ಲವೇ ಒಂದು ಹಿಡಿ ಪೀಕಾಯಿಗಳನ್ನೋ ತೆಗೆದು, ನನ್ನ ಕೈಗೆ ತುರುಕಿ ಹೇಳುತ್ತಿದ...

"ತಗೋ, ಗೆಳೆಯ. ನಿನಗೋಸ್ಕರ ಈ ಉಪಾಹಾರ ಕೂಡಿಟ್ಟಿದ್ದೆ. ನಿನಗಿದು ಇಷ್ಟವಾದೀ... ತೂಂತ ನಂಬಿಕೆ."

ಅನಂತರ, ಗ್ರಾಮದ ಅಂಚಿನವರೆಗೂ ನನ್ನ ಜತೆ ಆತ ಬರುತ್ತಿದ್ದ.

"ವಿದಾಯ. ದೇವರು ನಿನ್ನ ಜತೆಗಿರಲಿ."

ಉಷಃಕಾಲದ ಹೊತ್ತಿಗೆ ನಾನು ಕಾಡನ್ನು ತಲಪಿ, ನನ್ನ ಬಲೆ—ಗೂಡುಗಳನ್ನಿರಿಸಿ, ಹಕ್ಕಿಗಳನ್ನು ಬರಸೆಳೆಯುವ ತಿಂಡಿಯನ್ನು ತೂಗಹಾಕಿ, ಕಾಡಿನ ಅಂಚಿನಲ್ಲಿ ಹಗಲನ್ನು ಇದುರು ನೋಡುತ್ತ ಮಲಗುತ್ತಿದ್ದೆ. ಎಲ್ಲೆಲ್ಲೂ ನೀರವತೆ. ನನ್ನ ಸುತ್ತುಮುತ್ತೆಲ್ಲ ಪ್ರತಿಯೊಂದೂ ಶರತ್ಕಾಲದ ಗಾಢನಿದ್ದೆಯ ಬಿಗಿ ಹಿಡಿತದೊಳಗೆ ಮಲಗಿತ್ತು. ಮಬ್ಬು ಬೆಳಕಿನಲ್ಲಿದ್ದ ಗುಡ್ಡಗಳ ಬುಡದಲ್ಲಿ, ವೋಲ್ಗಾ ನದಿಯ ನೀರು ಕೊರೆದಿದ್ದ ವಿಸ್ತಾರವಾದ ಹುಲ್ಲುಗಾವಲುಗಳ ಅಸ್ಪಷ್ಟ ನೋಟ ಕಂಡಿತು. ಆ ನೋಟದ ಅಂತ್ಯಭಾಗ ಮಂಜಿನಲ್ಲಿ ಕರಗಿಹೋಗಿತ್ತು. ದೂರದಲ್ಲಿ, ಹುಲ್ಲುಗಾವಲುಗಳನ್ನು ಸುತ್ತುವರಿದಿದ್ದ ಕಾಡುಗಳಾಚೆ, ಮೆಲ್ಲನೆ ಸೂರ್ಯ ಮೇಲೆದ್ದ; ಕಾಡಿನ ಕರಿದು ಕೇಸರಕ್ಕೆ ಕಿಚ್ಚನ್ನಿಟ್ಟ. ಬಳಿಕ ಆರಂಭವಾಯಿತು, ವಿಚಿತ್ರವಾದ, ಆತ್ಮವನ್ನೆ ಕುಲುಕುವ ಚಲನೆಯೊಂದು. ಮಂಜು ತೀವ್ರಗತಿಯಿಂದ ದಟ್ಟವಾಯಿತು. ಸೂರ್ಯನ ಬೆಳಕಿನಲ್ಲಿ ಬೆಳ್ಳಿಯಂತೆ ಬೆಳಗಿತು. ಅದರ ಕೆಳಗೆ ಪೊದೆಗಳೂ ಮರಗಳೂ ಹುಲ್ಲು ಬಣವೆಗಳೂ ನಿಧಾನವಾಗಿ ನೆಲವನ್ನು ಬಿಟ್ಟು ಮೇಲೆದ್ದುವು. ಸೂರ್ಯನ ಶಾಖಕ್ಕೆ ಹುಲ್ಲುಗಾವಲುಗಳೆಲ್ಲ ಕರಗಿ, ಬಂಗಾರದ—ಬಾದಾಮಿ ಬಣ್ಣದ ಪ್ರವಾಹವಾಗಿ ಎಲ್ಲಾ ದಿಕ್ಕುಗಳಿಗೂ ಹರಿಯುತ್ತಿದ್ದಂತೆ ಅನಿಸಿತು. ಈಗ ಸೂರ್ಯ, ನದೀದಡದಲ್ಲಿ ಶಾಂತವಾಗಿದ್ದ ನೀರನ್ನು ಮುಟ್ಟಿದ. ತನ್ನ ಬಂಗಾರದ ಬೆರಳುಗಳನ್ನು ಆತ ಮುಳುಗಿಸಿದ್ದ ಜಾಗಕ್ಕೇ ಇಡೀ ನದಿಯೇ ಹರಿದಂತೆ ಕಂಡಿತು. ಬಂಗಾರದ ಆ ವೃತ್ತ, ಮೇಲುಮೇಲಕ್ಕೆ ಏರಿದಂತೆ, ಸುತ್ತುಮುತ್ತೆಲ್ಲ ಹರ್ಷದ ಆಶೀರ್ವಾದವನ್ನು ಬೀರುತ್ತ, ಚಳಿಗೊಂಡು ನಡುಗುತ್ತಲಿದ್ದ ಭೂಮಿಯನ್ನು ಬಿಸಿಗೊಳಿಸಿತು. ಭೂಮಿ ಕೃತಜ್ಞತೆಯಿಂದ, ಶರತ್ಕಾಲದ ಮಧುರ ಸುವಾಸನೆಯ ಉಸಿರನ್ನು ಹೊರಗೆಡವಿತು. ಪಾರದರ್ಶಕ ಹವೆಯ ಮೂಲಕ ನೋಡಿದಾಗ, ಭೂಮಿಯ ಗಾತ್ರ ಬಲು ದೊಡ್ಡದಾಗಿ, ಅನಂತವಾದ ಬೃಹತ್‌ರೂಪವಾಗಿ ಕಂಡಿತು. ಪ್ರತಿಯೊಂದೂ, ಭೂಮಿಯ ಆ ನೀಲಿ ಅಂತ್ಯದ ಕಡೆಗೇ ಸೆಳೆಯುತ್ತ, ದೂರದ ಬಗೆಗೆ ಬಯಕೆ ಹುಟ್ಟಿಸಿತು. ಆ ಜಾಗದಿಂದ ಸೂರ್ಯೋದಯವನ್ನು ಹಲವಾರು ಬಾರಿ ನಾನು ಇದಿರುನೋಡಿದ್ದೆ. ಪ್ರತಿಸಲವೂ ನನ್ನೆದುರು, ಹೊಸ ಲೋಕ—ವಿಶಿಷ್ಟ ಸೌಂದರ್ಯವಿದ್ದ ಲೋಕ—ಜನ್ಮ ತಳೆಯುತ್ತಿತ್ತು.

ಯಾಕೋ ಏನೋ ಸೂರ್ಯನ ಬಗೆಗೆ ವಿಶೇಷ ಪ್ರೇಮ ನನಗೆ. ಸೂರ್ಯ ಎಂಬ ಹೆಸರೇ ನನಗೆ ಇಷ್ಟ—ಅದರ ಮಧುರಧ್ವನಿ, ಶ್ರೀಮಂತ ಝೇಂಕಾರ, ನನಗೆ ಮೆಚ್ಚು. ನನ್ನ ಕಣ್ಣುಗಳನ್ನು ಮುಚ್ಚಿ, ಬೆಚ್ಚಗಿನ ಕಿರಣದೆಡೆಗೆ ನನ್ನ ಮುಖ ತಿರುಗಿಸಲು ನಾನು ಅಪೇಕ್ಷಿಸುವೆ. ಬೇಲಿಯ ಬಿರುಕಿನೆಡೆಯಿಂದಲೋ ಮರದ ಕೊಂಬೆಗಳ ಮೂಲಕವೋ ಕಿರಣ ಖಡ್ಗದಂತೆ ಇರಿಯುವಾಗ, ಅಂಗೈಯಲ್ಲಿ ಅದನ್ನು ಹಿಡಿಯುವ ಆಸೆ ನನಗೆ. "ಸೂರ್ಯನೆದುರು ತಲೆಬಾಗಲು ನಿರಾಕರಿಸಿದ ರಾಜಕುಮಾರನ ಮಿಖೈಲ್ ಚೆರ್ನಿಗೊವ್‌ಸ್ಕಿ ಮತ್ತು ಬೊಯಾರಿನ್ ಫೆಯೊದೋರ್" ಇವರ ಬಗೆಗೆ, ಅಜ್ಜನಿಗೆ ಅತ್ಯಂತ ಗೌರವವಿತ್ತು. ಆದರೆ, ನಾನು ಅವರನ್ನು ದುಷ್ಟ ಜನರಾಗಿ ಕಲ್ಪಿಸಿದ್ದೆ. ಗಿಪ್ಸಿ ಜನರಂತೆ ಜಡ ಹಾಗೂ ಕರಿಯ ವ್ಯಕ್ತಿಗಳಾಗಿ, ಮೊರ್ಡೋವಿಯದ ರೈತರ ಹಾಗೆ ನೀರು ಒಸರುವ ಕಣ್ಣುಗಳಿರುವವರಂತೆ, ಅವರನ್ನು ಚಿತ್ರಿಸಿದ್ದೆ. ಹುಲ್ಲುಗಾವಲುಗಳ

ಮೇಲಿಂದ ಸೂರ್ಯ ಏರಿ ಬಂದಾಗ, ನನಗೆ ಅರಿವಿಲ್ಲದಂತೆಯೇ ನಾನು ಸಂತೋಷದಿಂದ ಮುಗುಳುನಕ್ಕೆ.

ನನ್ನ ಮೇಲ್ಗಡೆ ನಿತ್ಯ ಹಸುರು ಮಿಸುಕಿತು; ತನ್ನ ರೆಂಬೆಗಳಿಂದ ಇಬ್ಬನಿಯನ್ನು ಕೊಡವಿತು. ವೃಕ್ಷಗಳ ಕೆಳಗೆ ನೆರಳಲ್ಲಿ, ಹೂಬಿಡವ ಸಸಿಗಳ ಹಸುರೆಲೆಗಳ ಹೆಣಿಗೆಯ ಮೇಲೆ, ಬೆಳ್ಳಿಯ ಕಸೂತಿಯಂತೆ ಬಿಳಿಯ ಇಬ್ಬನಿ ಇದ್ದುದನ್ನು ನಾನು ಕಂಡೆ. ಮಳೆಯ ಹೊಡೆತಕ್ಕೆ ಬಾಗಿದ ಬಾದಾಮಿ ಬಣ್ಣದ ಹುಲ್ಲು, ಭೂಮಿಯ ಮೇಲೆ ನಿಶ್ಚಲವಾಗಿ ಮಲಗಿತ್ತು. ಆದರೂ ಸೂರ್ಯನ ರಶ್ಮಿ ತಗಲಿದೊಡನೆ, ಹುಲ್ಲು ತುಸು ಮಿಸುಕಾಡಿದಂತೆ, ಪ್ರಾಯಶಃ ಬದುಕಿ ಉಳಿಯಲು ಕೊನೆಯ ಯತ್ನಮಾಡಿದಂತೆ, ಕಂಡುಬರುತ್ತಿತ್ತು.

ಹಕ್ಕಿಗಳು ಎಚ್ಚೆತ್ತುವು. ನಯಗೂದಲ ಬೂದ ಬಣ್ಣದ ಉಂಡೆಗಳು-ಟಿಟ್‌ಮೈಸ್‌ಗಳು-ಕೊಂಬೆಯಿಂದ ಕೊಂಬೆಗೆ ಹಾರಾಡಿದುವು. ತೀಕ್ಷ್ಣಪ್ರವೃತ್ತಿಯ ಕ್ರಾಸ್‌ಬಿಲ್‌ಗಳು, ಪೈನ್ ಮರಗಳ ಮೇಲ್ತುದಿಗಳನ್ನು ಕುಟುಕತೊಡಗಿದುವು. ಕಾಳು ಮೆಲ್ಲುವ ಪುಟ್ಟ ಹಕ್ಕಿಯೊಂದು ತನ್ನ ಪುಕ್ಕಗಳನ್ನು ಕೊಕ್ಕಿನಿಂದ ಶುಚಿಗೊಳಿಸುತ್ತ, ನನ್ನ ಬಲೆಗಳ ಕಡೆಗೆ ಸಂಶಯದ ದೃಷ್ಟಿ ಬೀರುತ್ತ, ಒಂದು ರೆಂಬೆಯ ತುದಿಯಲ್ಲಿ ಓಲಾಡಿತು. ಒಂದೇ ಕ್ಷಣದ ಹಿಂದೆ ಗಂಭೀರ ಧ್ಯಾನದಲ್ಲಿ ಮಗ್ನವಾಗಿದ್ದ ಇಡೀ ಅಡವಿ, ನೂರಾರು ಪಕ್ಷಿಧ್ವನಿಗಳಿಂದ ತೊದಲತೊಡಗಿದೆ—ಎಂಬುದನ್ನು, ಒಮ್ಮೆಲೆ ನಾನು ಮನಗಂಡೆ. ಕಾಡೆಲ್ಲ, ಅತ್ಯಂತ ಪರಿಶುದ್ಧವಾದ ಈ ಜೀವಂತ ಪ್ರಾಣಿಗಳು ಗದ್ದಲದಿಂದ ತುಂಬಿತು. ಆ ಜೀವಿಗಳಾದರೂ ಎಂಥವು! ಲೌಕಿಕ ಸೊಬಗಿನ ತಂದೆಯಾದ ಮಾನವ ತನ್ನ ಸ್ವಂತದ ಸಂತೋಷಕ್ಕಾಗಿ, ಆ ಜೀವಿಗಳ ತದ್ರೂಪವಾಗಿ ದೈವಿಕ ಶಕ್ತಿಗಳನ್ನೂ ದೇವತಾವಾದ್ಯ ವೃಂದವನ್ನೂ ಸೃಷ್ಟಿಮಾಡಿದನೇನೋ—ಎನಿಸುವಂತಿತ್ತು.

ಆ ಹಕ್ಕಿಗಳನ್ನು ಸೆರೆಹಿಡಿಯುವುದು ಕನಿಕರದ ವಿಷಾದದ ಸಂಗತಿ; ಪಂಜರಗಳಲ್ಲಿ ಅವುಗಳನ್ನು ಬಂಧಿಸುವುದು ಲಜ್ಜೆಯ ವಿಷಯ. ಅವುಗಳನ್ನು ಸುಮ್ಮನೆ ಈಕ್ಷಿಸುತ್ತ ಇರುವುದರಲ್ಲೇ ನನಗೆ ಅಪಾರವಾದ ಸಂತೋಷ ದೊರೆಯುತ್ತಿತ್ತು. ಆದರೆ, ಬೇಟೆಗಾರನ ಹುಮ್ಮಸೂ ಹಣ ಸಂಪಾದಿಸಬೇಕೆಂಬ ಆಸೆಯೂ ನನ್ನ ಕನಿಕರವನ್ನೆಲ್ಲ ನಿವಾರಿಸಿದುವು.

ಹಕ್ಕಿಗಳ ಜಾಣಾಕ್ಷತನ ಕಂಡು ನನಗೆ ಮೋಜೆನಿಸುತ್ತಿತ್ತು. ನೀಲಿ ಟಿಟ್‌ಮೌಸ್ ಹಕ್ಕಿಯೊಂದು ಅತ್ಯಂತ ಗಮನವಿತ್ತು ಬಲೆಯನ್ನೆ ದಿಟ್ಟಿಸಿತು. ಅದರಲ್ಲಿನ ಅಪಾಯವನ್ನು ಮನಗಂಡ ಬಳಿಕ, ಒಂದು ಪಕ್ಕದಿಂದ ಬಲು ಎಚ್ಚರಿಕೆಯಿಂದ ಬಲೆಯ ಬಳಿ ಸಾರಿತು. ಮರದ ಕಂಬಿಗಳೆಡೆಯಿಂದ ಕಾಳನ್ನು ಜಾಣ್ಮೆಯಿಂದ ಕಸಿಯತೊಡಗಿತು. ಟಿಟ್‌ಮೌಸ್‌ಗಳು ಜಾಣಹಕ್ಕಿಗಳು. ಆದರೆ, ಅತಿ ಕುತೂಹಲ ಪ್ರವೃತ್ತಿ. ಅವುಗಳ ನಾಶವಾಗುವುದೂ ಅದರಿಂದಲೇ. ಸಾಧುಬುದ್ಧಿಯ ಬುಲ್‌ಫಿಂಚ್‌ಗಳು ಮೂರ್ಖ ಹಕ್ಕಿಗಳು. ತಂಡತಂಡಗಳಾಗಿ, ಇಗರ್ಜಿಗೆ ಹೋಗುವ ಹೊಟ್ಟೆ ತುಂಬಿದ ನಾಗರೀಕನಂತೆ ನನ್ನ ಬಲೆಯೊಳಗೆ ಸಾಲಾಗಿ ಸಾಗಿಬಂದುವು. ಹೊದಿಕೆಯನ್ನು ನಾನು ಥಟ್ಟನೆ ಮುಚ್ಚಿದಾಗ ಅವುಗಳಿಗೆ ಬಹಳವಾಗಿ ಆಶ್ಚರ್ಯವೆನಿಸಿತು. ಕಣ್ಣುಗಳನ್ನು ಹೊರಳಿಸುತ್ತ, ತಮ್ಮ ದಪ್ಪಗಿನ ಕೊಕ್ಕುಗಳಿಂದ ನನ್ನ ಬೆರಳುಗಳನ್ನು ಅವು ಕುಕ್ಕಿದುವು. ಕ್ರಾಸ್‌ಬಿಲ್ ಹಕ್ಕಿ, ಶಾಂತವಾಗಿ ಠೀವಿಯಿಂದ ತನ್ನ ಬಲೆಯೊಳಕ್ಕೆ ನಡೆಯುತ್ತಿತ್ತು. ವಿಶಿಷ್ಟ ಜಾತಿಯ ಹಕ್ಕಿಯಾದ ಫಿಂಚ್, ಅಗಲವಾದ ತನ್ನ ಬಾಲದ

ಮೇಲೆ ಹಿಂದಕ್ಕೊರಗಿ, ತನ್ನ ನೀಳವಾದ ಕೊಕ್ಕನ್ನು ಬದಿಯಿಂದ ಬದಿಗೆ ನಿಧಾನವಾಗಿ ಓಲಾಡಿಸುತ್ತ, ನನ್ನ ಬಲೆಯ ಎದುರು ಬಹಳ ಹೊತ್ತು ಕುಳಿತಿರುತ್ತಿತ್ತು. ಯಾವಾಗಲೂ ಟಿಟ್‌ಮೌಸ್‌ಗಳ ಹಿಂದಿರುತ್ತ, ಮರಕುಟಿಗನ ಹಾಗೆ ಮರಗಳ ಕಾಂಡಗಳ ಮೇಲಕ್ಕೂ ಕೆಳಕ್ಕೂ ಹೋಗಿಬರುತ್ತಿರುವುದು ಅದರ ಅಭ್ಯಾಸ. ತೀರಾ ಏಕಾಂಗಿಯಾದ, ಯಾರಿಂದಲೂ ಪ್ರೀತಿಸಲ್ಪಡದ ಯಾರನ್ನೂ ಪ್ರೀತಿಸದ, ಬೂದು ಬಣ್ಣದ ಈ ಪುಟ್ಟ ಹಕ್ಕಿಯನ್ನು ಕಂಡಾಗ, ಅತ್ಯಂತ ಕೆಡುಕೆನಿಸುವಂತಿತ್ತು. ಪಾರಿವಾಳ ಜಾತಿಯ ಒಂದು ಪಕ್ಷಿಯಂತೆ, ಶುಭ್ರವಾದ ಪುಟ್ಟ ವಸ್ತುಗಳನ್ನು ಅದು ಕದ್ದು, ಎಲ್ಲಾದರೂ ಬಚ್ಚಿಡುತ್ತಿತ್ತು.

ಮಧ್ಯಾಹ್ನದ ಹೊತ್ತಿಗೆ ನನ್ನ ಕೆಲಸವನ್ನು ಮುಗಿಸಿ, ಕಾಡುಗಳ ಹಾದಿಯಾಗಿ, ಹೊಲಗಳನ್ನು ದಾಟಿ, ನಾನು ಮನೆಗೆ ಹೋಗುತ್ತಿದ್ದೆ. ಹಳ್ಳಿಗಳ ಮೂಲಕ ಮುಖ್ಯ ಬೀದಿಯನ್ನು ನಾನು ಹಿಡಿದೆನೆಂದರೆ, ಇತರ ಹುಡುಗರೋ ಗ್ರಾಮಗಳ ಗುಂಡರೋ ನನ್ನ ಪಂಜರಗಳನ್ನು ಕಸಿದುಕೊಂಡು, ಬೋನುಗಳನ್ನು ಮುರಿದು ಹಾಕುವುದು ಖಂಡಿತವಾಗಿತ್ತು. ಇದನ್ನು ನಾನು ಕಹಿ ಅನುಭವದಿಂದ ಕಲಿತಿದ್ದೆ.

ನಾನು ಮನೆ ಸೇರುತ್ತಿದ್ದುದು ಸಂಜೆಯ ಹೊತ್ತು, ಆಯಾಸಗೊಂಡು, ಹಸಿದು. ಆದರೆ, ನನಗೇನೋ ಲಾಭವಾಗಿದೆಯೆಂಬ, ಶಕ್ತಿಯಲ್ಲೂ ಜ್ಞಾನದಲ್ಲೂ ನಾನು ಬೆಳೆದಿರುವೆನೆಂಬ ಭಾವನೆಯೊಂದು ನನ್ನಲ್ಲಿ ತುಂಬಿರುತ್ತಿತ್ತು. ಈ ಹೊಸ ಸಾಮರ್ಥ್ಯದಿಂದಾಗಿ, ಅಜ್ಜನ ಭರ್ತ್ಸನೆಯನ್ನೆಲ್ಲ ಶಾಂತವಾಗಿ ಕಿವಿಗೊಡಲು ನಾನು ಶಕ್ತನಾದೆ. ಇದನ್ನು ಕಂಡು, ಗಂಭೀರ ಪ್ರವಚನವನ್ನ ಆತ ಆರಂಭಿಸುತ್ತಿದ್ದ:

"ಸಾಕು ಈ ಹುಚ್ಚಾಟ; ನಾನು ಹೇಳ್ತಿದೀನಿ—ಸಾಕಿದು. ಯಾರೂ ಈ ಪ್ರಪಂಚದಲ್ಲಿ ಹಕ್ಕಿ ಹಿಡಿದೇ ಮುಂದೆ ಬಂದದ್ದೂಂತಿಲ್ಲ. ನಿನಗಾಗಿ ಒಂದು ಜಾಗ ಕಂಡುಕೋ, ಬುದ್ಧಿ ಖರ್ಚುಮಾಡಿ ಅಲ್ಲಿ ಅಭಿವೃದ್ಧಿಗೆ ಬಾ ಮನುಷ್ಯ ಹುಟ್ಟಿರೋದು, ಚಿಲ್ಲರೆ ವಿಷಯಗಳಿಗಾಗಿ ಜೀವನ ಕಳೆಯೋದಕ್ಕಲ್ಲ. ಆತ, ದೇವರು ಬಿತ್ತಿದ ಬೀಜ. ಬಿತ್ತಿರೋದು, ಒಳ್ಳೇ ಧಾನ್ಯ ಉತ್ಪನ್ನವಾಗೋದಕ್ಕೋಸ್ಕರ. ಮನುಷ್ಯ, ಒಂದು ರೂಬಲ್ ಇದ್ದಹಾಗೆ. ಒಳ್ಳೇ ಉಪಯೋಗಕ್ಕೆ ಅದನ್ನು ಹಾಕಿದೆ ಅಂದರೆ, ಮೌಲ್ಯದ ಮೂರುಪಟ್ಟಾಗ್ತದೆ. ಬದುಕು ಸುಲಭ ಅಂತ ತಿಳಕೊಂಡಿದೀಯೇನು? ಬಹಳ ಕಷ್ಟದ್ದು ಈ ಬದುಕು ಅನ್ನೋದು. ಪ್ರಪಂಚ—ಒಂದು ಕತ್ತಲ ರಾತ್ರಿ. ಪ್ರತಿಯೊಬ್ಬ ಮನುಷ್ಯನೂ ತನಗೋಸ್ಕರ ತಾನೇ ಬೆಳಕು ಹಚ್ಕೋಬೇಕು. ನಾವೆಲ್ಲರು ಹುಟ್ಟಿದಾಗಲೂ ನಮ್ಮ ಕೈಗಳಲ್ಲಿದ್ದದ್ದು ಹತ್ತೇ ಬೆರಳು. ಆದರೂ ತನ್ನ ಕೈಗಳು ಅತ್ಯಂತ ದೂರದವರೆಗೂ ಚಾಚಬೇಕು, ಅತಿ ಹೆಚ್ಚನ್ನು ದೋಚಬೇಕು—ಅಂತ ಪ್ರತಿಯೊಬ್ಬನೂ ಅಪೇಕ್ಷಿಸ್ತಾನೆ. ನೀನು ಬಲಿಷ್ಠನಾಗಿರಬೇಕು; ಇಲ್ಲವಾದರೆ ತಂತ್ರಗಾರನಾಗಿರಬೇಕು. ದುರ್ಬಲರೂ ಕಡ್ಡಿ ಜೀವಿಗಳೂ ಸೋತುಹೋಗೋದು ಖಂಡಿತ. ಜನರ ಜತೆ ಸ್ನೇಹವಾಗಿಯೇ ಇರು; ಆದರೆ, ನೀನು ಒಬ್ಬಂಟಿಯೇ ಅನ್ನೋದನ್ನು ಯಾವಾಗಲೂ ನೆನಪಿಡು. ಎಲ್ಲರ ಮಾತಿಗೂ ಕಿವಿಗೊಡು; ಆದರೆ, ಯಾರನ್ನೂ ನಂಬಬೇಡ. ನಿನ್ನ ಕಣ್ಣನ್ನು ನೀನು ನಂಬಿದೆ ಅಂದರೆ, ತೂಕತಪ್ತದೆ. ಯಾವಾಗಲೂ ತುಟಿ ಬಿಗಿಹಿಡಿದಿರು. ಪಟ್ಟಣಗಳನ್ನೂ ನಗರಗಳನ್ನೂ ಕಟ್ಟಿರೋದು ನಾಲಗೆಯಲ್ಲ,—ರೂಬಲು ಮತ್ತು ಸುತ್ತಿಗೆ. ಹೇನು ಮತ್ತು ಕುರಿಗಳಷ್ಟೇ ಆಸ್ತಿಯಾಗಿರೋ ಬಾಶ್ಕೀರಿಯನ್ ಇಲ್ಲವೆ

ಕಾಲ್ಮಿಕ್ ಜನಾಂಗದವನು ನೀನಲ್ಲ."

ಸಂಜೆ ಇಡೀ ಅದೇ ರೀತಿ ಮುಂದುವರಿಯಲು ಆತ ಶಕ್ತನಾಗಿದ್ದ. ಆ ಪದಗಳೆಲ್ಲ ನನಗೆ ಕಂಠಪಾಠವಾಗಿದ್ದುವು. ಅವುಗಳ ಧ್ವನಿಯನ್ನು ನಾನು ಇಷ್ಟಪಡುತ್ತಿದ್ದೆ; ಆದರೆ ಅರ್ಥದ ಬಗ್ಗೆ ಸಂದೇಹವಿತ್ತು. ಆತ ಹೇಳಿದ್ದರ ಮೇಲಿಂದ, ಬದುಕನ್ನು ಜಟಿಲಗೊಳಿಸುತ್ತಿರುವ ಶಕ್ತಿಗಳೆಂದರೆ, ದೇವರು ಮತ್ತು ಜನರು—ಇವೆರಡೇ—ಎಂದು ನಾನು ತೀರ್ಮಾನಿಸಿದೆ.

ಅಜ್ಜಿ ಕಿಟಕಿಯ ಬಳಿ ಕುಳಿತು, ಕಸೂತಿ ಕೆಲಸಕ್ಕಾಗಿ ನೂಲು ತಿರುವುತ್ತಿದ್ದಳು. ಆಕೆಯ ದಕ್ಷ ಬೆರಳುಗಳಲ್ಲಿ, ತಿರುಗುತ್ತಿದ್ದ ತಕಲಿ ನಿನದಿಸುತ್ತಿತ್ತು. ಅಜ್ಜನ ಮಾತುಗಳನ್ನೆಲ್ಲ ಮೌನವಾಗಿ ಸ್ವಲ್ಪ ಹೊತ್ತು ಕೇಳಿದ ಬಳಿಕ, ಆಕೆಯೆನ್ನುತ್ತಿದ್ದಳು:

"ಪ್ರತಿಯೊಂದೂ, ದೇವರ ಮಾತೆ ಹೇಗೆ ಇಷ್ಟಪಡ್ತಾಳೋ ಹಾಗೆಯೇ ಫಲಕಾರಿಯಾಗ್ತದೆ."

ಅಜ್ಜ ಬೊಬ್ಬಿಟ್ಟು ನುಡಿಯುತ್ತಿದ್ದ:

"ಏನದು? ದೇವರು? ದೇವರ ವಿಷಯ ನಾನು ಮರೆತಿಲ್ಲ. ದೇವರನ್ನು ನಾನು ಚೆನ್ನಾಗಿಯೇ ಬಲ್ಲೆ! ದೇವರು ಈ ಭೂಮಿಯನ್ನೆಲ್ಲಾ ಮೂ ರ್ಖ ರಿಂ ದ ಲೇ ತುಂಬಿದಾನೆ ಅಂದ್ಕೊಂಡ್ಯಾ, ಮುದಿ ಮೂರ್ಖಳೇ?"

....ಸೈನಿಕರು ಮತ್ತು ಕೊಸ್ಸಾಕರಷ್ಟು ಚೆನ್ನಾಗಿ ಬೇರೆ ಯಾರೂ ಜೀವಿಸುತ್ತಿಲ್ಲವೆಂದು ನನಗೆ ಅನಿಸುತ್ತಿತ್ತು. ಹರ್ಷದಾಯಕವಾಗಿ ಸರಳವಾಗಿ ಇರುತ್ತಿತ್ತು ಅವರ ಬದುಕು. ಸೊಗಸಾದ ಪ್ರಾತಃಕಾಲಗಳಲ್ಲಿ ನಮ್ಮ ಮನೆಯ ಎದುರಿಗಿನ ಕಂದರದಾಚೆಗೆ ಅವರು ಕಾಣಿಸಿಕೊಳ್ಳುತ್ತಿದ್ದರು; ಹೊಲಗಳಲ್ಲಿ ಚೆದರಿಕೊಂಡು, ಉದ್ವಿಗ್ನಗೊಳಿಸುವಂಥ ಜಟಿಲರೀತಿಯ ಆಟವನ್ನು ಆರಂಭಿಸುತ್ತಿದ್ದರು. ಬಿಳಿಯಂಗಿ ಧರಿಸಿದ ಬಲಿಷ್ಠರಾದ ಹಗುರಹೆಜ್ಜೆಯ ಈ ಜನರು, ಕೈಗಳಲ್ಲಿ ಬಂದೂಕು ಹಿಡಿದು, ಕಲಕಲ ಸದ್ದುಮಾಡುತ್ತ, ಬಯಲಿಗಡ್ಡವಾಗಿ ಓಡುತ್ತಿದ್ದರು, ಕಂದರದಲ್ಲಿ ಅದೃಶ್ಯರಾಗುತ್ತಿದ್ದರು. ಬಳಿಕ ಒಮ್ಮೆಲೆ, ತುತೂರಿಯ ಸದ್ದು ಕೇಳಿದೊಡನೆ, "ಹುರ್ರಾ!" ಎಂದು ಬೊಬ್ಬಿಡುತ್ತ, ಭೇರಿಗಳ ಭೀತಿಕಾರಕ ವಾದನದೊಡನೆ, ಪುನಃ ಬಯಲಿಗೆ ಧಾವಿಸಿ ಬರುತ್ತಿದ್ದರು. ಬಂದೂಕುಗಳನ್ನು ಝಳಪಿಸುತ್ತ, ಹುಲ್ಲಿನ ಬಣವೆಯ ಹಾಗೆ ನಮ್ಮ ಮನೆಯನ್ನು ತಲೆಕೆಳಗುಮಾಡಲು ಹೊರಟಾರೇನೋ ಎಂಬಂತೆ, ನೇರವಾಗಿ ನಮ್ಮ ಬೀದಿಯ ಕಡೆಗೇ ಸಾಗುತ್ತಿದ್ದರು.

ನಾನು ಕೂಡಾ "ಹುರ್ರಾ!" ಎಂದು ಬೊಬ್ಬಿಡುತ್ತ, ಅವರ ಬೆನ್ನಹಿಂದೆಯೇ ಓಡುತ್ತಿದ್ದೆ. ಭೇರಿಗಳ ಭಯೋತ್ಪಾದಕ ಧ್ವನಿ, ಏನನ್ನಾದರೂ ನಾಶಗೊಳಿಸಬೇಕೆಂಬ-ಯಾವುದಾದರೂ ಬೇಲಿಯನ್ನು ಕಿತ್ತುಹಾಕಬೇಕೆಂಬ ಇಲ್ಲವೆ ಯಾರಿಗಾದರೂ ಹೊಡೆಯಬೇಕೆಂಬ ಅದಮ್ಯವಾದ ಆಸೆಯನ್ನು ನನ್ನಲ್ಲಿ ಕೆರಳಿಸುತ್ತಿತ್ತು.

ಬಿಡುವಿನ ವೇಳೆಯಲ್ಲಿ ಸೈನಿಕರು, ವಿಶಿಷ್ಟ ತಂಬಾಕನ್ನು ಸೇವಿಸಲೆಂದು ನನಗೆ ಕೊಡುತ್ತಿದ್ದರು; ತಮ್ಮ ಭಾರವಾದ ಬಂದೂಕುಗಳನ್ನು ತೋರಿಸುತ್ತಿದ್ದರು. ಅವರಲ್ಲಿ ಯಾವನಾದರೊಬ್ಬ ತನ್ನ ಬಯನೆಟನ್ನು ನನ್ನ ಹೊಟ್ಟೆಯ ಕಡೆಗೆ ಗುರಿಮಾಡಿ, ಅತಿಶಯವಾದ ಭೀ ಕ ರ ತೆ ಯಿಂ ದ ಅರಚುತ್ತಿದ್ದ:

"ಜೊಂಡುಗನನ್ನು ತಿವಿಯಿರಿ!"

ಸೂರ್ಯನ ಬೆಳಕಿನಲ್ಲಿ ಬಯನೆಟು, ಕಚ್ಚಲು ಸಿದ್ಧವಾಗಿ ಮಿಸುಕಾಡುವ ಜೀವಂತ ಹಾ

ನಂತೆ ಕಾಣಿಸುತ್ತ, ಹೊಳೆಯುತ್ತಿತ್ತು. ಅದರಿಂದ ಹೆದರಿಕೆಯಾಗುತ್ತಿತ್ತು; ಆದರೂ ಸಂತೋಷವೆನಿಸುತ್ತಿತ್ತು.

ಮೊರ್ಡೋವಿಯಾ ಪ್ರಾಂತದ ಭೇರಿಬಾರಿಸುವ ಹುಡುಗನೊಬ್ಬ, ಭೇರಿಯ ಕೋಲುಗಳನ್ನು ಹೇಗೆ ಹಿಡಿಯಬೇಕೆಂಬುದನ್ನು ನನಗೆ ಕಲಿಸಿಕೊಟ್ಟ. ಮೊದಲು ನನ್ನ ಕೈಗಳನ್ನು ತನ್ನ ಕೈಗಳಲ್ಲಿತ್ತಿಕೊಂಡು, ಅವು ನೋಯುವವರೆಗೂ ಹಿಂಡಿದ. ಬಳಿಕ, ನನ್ನ ನಿರ್ಜೀವ ಬೆರಳುಗಳಿಗೆ ಕೋಲುಗಳನ್ನು ತುರುಕಿದ.

ಹಕ್ಕಿ ನೋಡುವಂತೆ ಪುಟ್ಟ ಕಣ್ಣುಗಳಿಂದ ನನ್ನೆಡೆಗೆ ದಿಟ್ಟಿಸುತ್ತ, ಕರ್ಕಶವಾಗಿ ಆತ ಕೂಗಾಡಿದ:

"ಹೊಡೆ—ಒಮ್ಮೆ, ಪುನಃ—ಒಮ್ಮೆ, ಪುನಃ! ಟ-ಟ-ಟ-ಟಾ! ಎಡಕೋಲು ಹಗುರಕ್ಕೆ, ಬಲಕೋಲು ಬಲವಾಗಿ-ಟ-ಟ-ಟ-ಟಾ!"

ಸೈನಿಕರ ಜತೆ ಅವರ ಕವಾಯತು ಮುಗಿಯುವವರೆಗೂ ನಾನು ಅತ್ತಿತ್ತ ಓಡುತ್ತಿದ್ದೆ. ಬಳಿಕ ಅವರ ಜತೆ ಬರಾಕುಗಳ ಕಡೆಗೆ, ಅವರ ಏರುಧ್ವನಿಯ ಹಾಡುಗಳಿಗೆ ಕಿವಿಗೊಡುತ್ತ, ಅದೇ ಆಗ ಟಂಕಸಾಲೆಯಿಂದ ಬಂದ ಐದು ಕೊಪೆಕ್ ನಾಣ್ಯಗಳಂತೆ ಹೊಸದಾಗಿ ಶುಭ್ರವಾಗಿದ್ದ ಆ ದಯಾಪೂರಿತ ಮುಖಗಳನ್ನು ದಿಟ್ಟಿಸುತ್ತ, ಇಡೀ ಶಹರವನ್ನು ದಾಟಿ ನಾನು ಸಾಗುತ್ತಿದ್ದೆ.

ಒಂದೇ ರೀತಿಯಾಗಿದ್ದ ಈ ಜನರ ಘನರಾಶಿ, ಹರ್ಷದಿಂದ ದಾರಿಗುಂಟ ಸಾಗಿತು. ಪ್ರತಿಯೊಬ್ಬರಲ್ಲೂ ಸಂತಸವನ್ನೂ, ನದಿಗೆ ಹಾರುವಂತೆ ಅದಕ್ಕೆ ಧುಮುಕಬೇಕೆಂಬ-ಅಡವಿಗೆ ನುಗ್ಗುವಂತೆ ಅದನ್ನು ಹೊಗಬೇಕೆಂಬ-ಬಯಕೆಯನ್ನೂ ತುಂಬಿತು. ಈ ಜನರಿಗೆ ಯಾವುದರ ಭಯವೂ ಇರಲಿಲ್ಲ. ಪ್ರತಿಯೊಂದರ ಕಡೆಗೂ ಧೈರ್ಯದಿಂದ ಅವರು ದಿಟ್ಟಿಸುತ್ತಿದ್ದರು. ಏನನ್ನು ಬೇಕಾದರೂ ಜಯಿಸಲು ಸಮರ್ಥರಾಗಿದ್ದರು. ಬಯಸಿದುದನ್ನೆಲ್ಲ ಸಾಧಿಸಲು ಶಕ್ತರಾಗಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ, ಸರಳರಾಗಿಯೂ ದಯಾಮಯರಾಗಿಯೂ ಇದ್ದರು.

ಆದರೆ ಒಂದು ದಿನ, ನಡುವಿನ ಬಿಡುವಿನಲ್ಲಿ, ಯುವಕನಾದ ಕೆಳ ಅಧಿಕಾರಿಯೊಬ್ಬ ದಪ್ಪನಾದ ಒಂದು ಸಿಗರೇಟನ್ನು ನನಗೆ ಕೊಟ್ಟ.

"ತಗೋ, ಸೇದು. ಇದು ಬಹಳ ವಿಶೇಷ ಬಗೆಯ ಸಿಗರೇಟು. ನಿನಗಲ್ಲದೆ ಬೇರೆ ಯಾರಿಗೂ ನಾನಿದನ್ನು ಕೊಡ್ತಿರಲಿಲ್ಲ. ಅಷ್ಟು ಒಳ್ಳೆಯವನು ನೀನು!"

ನಾನು ಆ ಸಿಗರೇಟು ಹಚ್ಚಿದೆ. ಆತ ಹಿಂದಕ್ಕೆ ಸರಿದ. ಒಮ್ಮೆಲೆ ಕೆಂಪುಜ್ವಾಲೆಯೊಂದು ನನ್ನನ್ನು ಕುರುಡಾಗಿ ಮಾಡಿತು; ನನ್ನ ಬೆರಳುಗಳು-ಮೂಗು ಹುಬ್ಬುಗಳನ್ನು ಸುಟ್ಟಿತು. ಬೂದು ಬಣ್ಣದ ಕಹಿಯಾದ ಹೊಗೆಯೊಂದು, ನಾನು ಸೀನುವಂತೆ ಕೆಮ್ಮುವಂತೆ ಮಾಡಿತು. ಕಣ್ಣು ಕಾಣಿಸದೆ, ಭೀತನಾಗಿ, ನಿಂತ ಜಾಗದಲ್ಲೆ ನಾನು ಕುಪ್ಪಳಿಸಿದೆ. ಸೈನಿಕರು ನನ್ನ ಸುತ್ತಲೂ ಭದ್ರವಾದ ವೃತ್ತಾಕಾರ ರಚಿಸಿ, ಬೃಹದಾನಂದದಿಂದ ನಕ್ಕರು. ನಾನು ಮನೆಗೆ ಹೊರಟುಹೋದೆ. ನನ್ನ ಹಿಂದಿನಿಂದ, ಅವರ ನಗೆಯೂ ಶಿಳ್ಳಿನ ಧ್ವನಿಯೂ ಕೇಳಿಸಿದುವು. ಕುರುಬನ ಚಾಟಿಯು ಚಪ್ಪಳದಂತೆ ಛಟ್ ಲೆಂದು ಸದ್ದಾಯಿತು. ನನ್ನ ಬೆರಳುಗಳು ನೋಯುತ್ತಿದ್ದುವು. ಮುಖವೆಲ್ಲಾ ನೋವಿತ್ತು. ಕಂಬನಿ ನನ್ನ ಕಣ್ಣುಗಳಿಂದ ಹರಿಯಿತು. ಆದರೆ ಈ ನೋವಿಗಿಂತಲೂ ಮಂದವಾದ ವೇದನೆಯುಂಟುಮಾಡುತ್ತಿದ್ದ-ಅಚ್ಚರಿಯೊಂದು, ನನ್ನನ್ನು ಹೆಚ್ಚಿನ ಯಾತನೆಗೆ ಗುರಿಮಾಡಿತ್ತು.

ನನಗೆ ಹೀಗೆ ಯಾಕೆ ಮಾಡಬೇಕಿತ್ತು ಅವರು? ಅಷ್ಟು ಒಳ್ಳೆಯ ಜನರಿಗೆ ಅದು ಒಂದು ತಮಾಷೆ ಯಾಗಿ ಯಾಕೆ ಕಂಡಿತು? ಮನೆ ಸೇರಿದ ಬಳಿಕ ನಾನು ಅಟ್ಟಕ್ಕೆ ಹತ್ತಿದೆ. ನನ್ನ ಪುಟ್ಟ ಜೀವ ಮಾನದಲ್ಲಿ ನಾನು ಕಂಡಿದ್ದ ಅರ್ಥವಾಗದ ಕ್ರೌರ್ಯವನ್ನೆಲ್ಲ ನೆನೆಸಿಕೊಳ್ಳುತ್ತ, ಬಹಳ ಹೊತ್ತು ಅಲ್ಲಿಯೇ ನಾನು ಕುಳಿತೆ. ಸರಾಪುಲಿನ ಪುಟ್ಟ ಸೈನಿಕನ ಬಗೆಗೆ ನನ್ನ ನೆನಪು ಹೆಚ್ಚು ಸ್ಪಷ್ಟವಾಗಿತ್ತು ನಿಜಜೀವನದಲ್ಲಿರುವಷ್ಟೆ ಸಹಜವಾಗಿ ಆತ ನನ್ನೆದುರು ನಿಂತ.

"ಹುಂ. ಅರ್ಥವಾಯ್ತು ನಿನಗೆ?" ಎಂದು ಆತ ಕೇಳಿದ.

ಆದರೆ ಅದಾದ ಬಳಿಕ ಬೇಗನೆ, ಅದಕ್ಕಿಂತಲೂ ಎಷ್ಟೋ ಹೆಚ್ಚು ಕ್ರೂರವಾದ, ಮತ್ತಷ್ಟು ಹೆಚ್ಚು ದಂಗು ಬಡೆಸುವಂಥ, ಬೇರೊಂದು ಘಟನೆಯನ್ನು ನಾನು ಕಂಡೆ.

ಪೆಚೆರ್‌ಸ್ಕಾಯಾ ಸ್ಲೊಬೋಡಾದ ಹತ್ತಿರ, ಕೊಸ್ಸಾಕರು ವಾಸವಾಗಿದ್ದ ಬರಾಕುಗಳಿಗೆ ನಾನು ಆಗಾಗ್ಗೆ ಹೋಗಿಬರತೊಡಗಿದೆ. ಕೊಸ್ಸಾಕರು, ಸೈನಿಕರಿಗಿಂತ ಭಿನ್ನವಾಗಿದ್ದರು ಅವರು ಪರಿಣತರಾದ ಕುದುರೆ ಸವಾರರಾಗಿದ್ದುದಾಗಲೀ, ಹೆಚ್ಚು ಚೆನ್ನಾಗಿ ಪೋಷಾಕು ಧರಿಸುತ್ತಿ ದ್ದುದಾಗಲೀ, ಆ ಭಿನ್ನತೆಗೆ ಕಾರಣವಲ್ಲ. ಅವರು ಮಾತನಾಡುತ್ತಿದ್ದ ರೀತಿಯೇ ಬೇರೆ; ಬೇರೆಯೇ ಹಾಡುಗಳನ್ನು ಅವರು ಹಾಡುತ್ತಿದ್ದರು; ನಿಷ್ಣಾತರಾದ ನರ್ತಕರಾಗಿದ್ದರು. ಕೆಲವೇಳೆ ಸಂಜೆಯ ಹೊತ್ತು, ತಮ್ಮ ಕುದುರೆಗಳನ್ನು ಪಾಲೀಸು ಮಾಡಿದ ಬಳಿಕ, ಲಾಯಗಳ ಬಳಿ ವೃತ್ತಾಕಾರವಾಗಿ ಅವರು ಗುಂಪು ಕೂಡುತ್ತಿದ್ದರು. ಕೆಂಪು ತಲೆಯ ಪುಟ್ಟ ಆಕೃತಿಯ ಕೊಸ್ಸಾಕನೊಬ್ಬ, ಪದರ ಪದರಾದ ಅಲೆಯಲೆಯಾದ ತನ್ನ ತಲೆಕೂದಲನ್ನು ಹಿಂದಕ್ಕೆ ಹಾರಿಸಿ, ಕ್ಲಾರಿನೆಟ್ ವಾದನದ ಹಾಗೆ ಎತ್ತರದ ಧ್ವನಿಯಲ್ಲಿ ಹಾಡಲು ತೊಡಗುತ್ತಿದ್ದ. ನೆಟ್ಟಗೆ ಮಿಸುಕದೆ ನಿಂತು, ಶಾಂತವಾದ ಡಾನ್ ನದಿಯನ್ನು ಕುರಿತ ಇಲ್ಲವೆ ನೀಲಿ ಡಾನ್ಯೂಬ್ ನದಿಯನ್ನು ಕುರಿತ ಮೃದುವಾದ ವ್ಯಥೆ ತುಂಬಿದ ಗೀತವನ್ನು ಹಾಡುತ್ತಿದ್ದ. ಸತ್ತು ಭೂಮಿಗೆ ಉರುಳುವವರೆಗೂ ಹಾಡುವ ಉಷಃ ಕಾಲದ ಹಕ್ಕಿಯಂತೆ, ತನ್ನ ಕಣ್ಣುಗಳನ್ನು ಆತ ಮುಚ್ಚಿರುತ್ತಿದ್ದ. ಆತನ ಕುಪ್ಪಸ ಕತ್ತಿನ ಬಳಿ ತೆರೆದಿದ್ದು, ಕೊರಳ ಎಲುಬುಗಳು ಕಂಚಿನ ಲಾಡಿಗಳಂತೆ ತೆರೆದು ಕಾಣಿಸುತ್ತಿದ್ದುವು. ವಾಸ್ತವ ವಾಗಿ ಆತನ ಇಡಿಯ ಆಕೃತಿಯೇ ಕಂಚಿನಲ್ಲಿ ಎರಕಹೊಯ್ದಂತಿತ್ತು. ಕಣ್ಣು ಕಾಣಿಸದವರಂತೆ ತೋಳುಗಳನ್ನು ಬೀಸುತ್ತ, ಕಾಲಕೆಳಗಿನ ಭೂಮಿ ಏದುಸಿರು ಬಿಡುತ್ತಿದೆಯೇನೋ ಎನ್ನುವಂತೆ ತನ್ನ ಬಡಕಾಲುಗಳ ಮೇಲೆ ಅತ್ತಿತ್ತ ಓಲಾಡುತ್ತ, ಆತ ನಿಲ್ಲುತ್ತಿದ್ದ. ಈಗ ಈತ ಮನುಷ್ಯನಲ್ಲ ತುತೂರಿಯವನ ಕಹಳೆಯಾಗಿಯೋ ಕುರುಬನ ಕೊಳಲಾಗಿಯೋ ಮಾರ್ಪಟ್ಟಿದ್ದಾನೆ—ಎನಿಸು ತ್ತಿತ್ತು. ಹಿಮ್ಮುಖವಾಗಿ ಭೂಮಿಗೆ ಆತ ಬಿದ್ದುಬಿಡುವ, ಉಷಃಕಾಲದ ಹಕ್ಕಿಯಂತೆ ಆತ ಸತ್ತುಹೋಗುವ—ಎಂದು ಕೆಲವೊಮ್ಮೆ ನಾನು ಭ್ರಮಿಸುತ್ತಿದ್ದೆ. ಯಾಕೆಂದರೆ, ತನ್ನ ಆತ್ಮ ವನ್ನೆಲ್ಲ ತನ್ನ ಶಕ್ತಿಯನ್ನೆಲ್ಲ ಹಾಡಾಗಿ ಆತ ಹರಿಸಿಬಿಟ್ಟಿದ್ದ.

ಆತನ ಸಂಗಾತಿಗಳು ತಮ್ಮ ಜೇಬುಗಳಲ್ಲಿ ಕೈಗಳನ್ನಿರಿಸಿಯೋ, ವಿಶಾಲವಾದ ತಮ್ಮ ಬೆನ್ನುಗಳ ಹಿಂದೆ ಅವುಗಳನ್ನು ಮಡಚಿಯೋ, ಅವನ ಕಂಚಿನ ಮುಖವನ್ನೂ ಬೀಸುತ್ತಿದ್ದ ತೋಳುಗಳನ್ನೂ ಕಟುವಾಗಿ ದಿಟ್ಟಿಸುತ್ತ, ಅವನ ಸುತ್ತಲೂ ನಿಲ್ಲುತ್ತಿದ್ದರು. ಶಾಂತವಾಗಿ, ಶ್ರೀಮ ಯಿಂದ, ಇಗರ್ಜಿಯ ವಾದ್ಯವೃಂದದಂತೆ ತಾವೂ ಹಾಡುತ್ತಿದ್ದರು. ಅಂತಹ ಘಳಿಗೆಗಳಲ್ಲಿ ಅವರೆಲ್ಲರೂ—ಗಡ್ಡವಿದ್ದರು, ಗಡ್ಡವಿಲ್ಲದವರು, ಎಲ್ಲರೂ—ದೇವಪ್ರತಿಮೆಗಳನ್ನು ಹೋಲುತ್ತಿ

ದ್ದರು. ಅಷ್ಟೇ ಭೀಕರವಾಗಿ, ಅಷ್ಟೇ ವಿದೂರವಾಗಿ. ಹಾಡು ರಾಜಬೀದಿಯಂತೆ, ಅಗಲವಾಗಿ, ಸಮತಟ್ಟಾಗಿ, ವರ್ಷವರ್ಷಗಳ ಜ್ಞಾನದಿಂದ ತುಂಬಿ ಹರಡಿಕೊಳ್ಳುತ್ತಿತ್ತು. ಅದಕ್ಕೆ ಕಿವಿಗೊಡುತ್ತ, ಅದು ರಾತ್ರಿಯೆ ಅಥವಾ ಹಗಲೆ ಎನ್ನುವುದನ್ನು, ಮರೆತುಬಿಡುತ್ತಿದ್ದೆ. ಪ್ರತಿಯೊಂದೂ ಮರೆತುಹೋಗುತ್ತಿತ್ತು. ಕ್ರಮೇಣ ಹಾಡುವವರ ಸ್ವರಗಳು ಕಂತಿಹೋಗುತ್ತಿದ್ದುವು. ಕೊನೆಯಲ್ಲಿ, ಬಯಲುಗಳ ಮೇಲೆ ಹರಿದಾಡುವ ಶರತ್ಕಾಲದ ಇರುಳಿನ ಎಡೆಬಿಡದ ಚಲನೆ, ಮತ್ತು ಹುಲ್ಲುಗಾವಲುಗಳಲ್ಲಿ ಸ್ವಚ್ಛಂದವಾಗಿ ಅಲೆದಾಡುವ ಕನಸು ಕಾಣುತ್ತಿದ್ದ ಕುದುರೆಗಳ ನಿಟ್ಟುಸಿರು—ಇಷ್ಟೇ ಕೇಳಿಸುತ್ತಿದ್ದುವು. ಈ ಅಸಾಧಾರಣವಾದ ಭಾವನೆಯಿಂದಲೂ ಜನರು ಹಾಗೂ ಭೂಮಿಯನ್ನು ಕುರಿತ ವಿಸ್ತಾರವಾದ ಮೂಕಪ್ರೇಮದಿಂದಲೂ ನನ್ನ ಹೃದಯ ಉಕ್ಕೇರಿ ಬಿರಿಯುತ್ತಿತ್ತು.

ಪುಟ್ಟ ಆಕೃತಿಯ—ಕಂಚಿನ ಪ್ರತಿಮೆಯಂತಹ—ಆ ಕೊಸ್ಸಾಕ್, ಸಾಮಾನ್ಯ ಮನುಷ್ಯನಷ್ಟೇ ಅಲ್ಲ, ಹೆಚ್ಚಿನ ಮಹತ್ವ ಆತನಿಗಿದೆ. ಆತನ ಎಲ್ಲ ನಶ್ವರ ಜೀವಿಗಳಿಗಿಂತಲೂ ಉತ್ತಮನಾದ ಕಥಾಪುರುಷ, ಎಂದು ನನಗೆ ಅನಿಸುತ್ತಿತ್ತು. ಅವನೊಡನೆ ಮಾತನಾಡುವ ಸಾಮರ್ಥ್ಯವೇ ನನಗಿರಲಿಲ್ಲ. ಆತ ನನಗೊಂದು ಪ್ರಶ್ನೆ ಕೇಳುವಂತಿದ್ದರೆ, ನಾನು ಸುಖಿಯಾಗಿ ಮುಗುಳುನಗುತ್ತಿದ್ದೆ, ಆದರೆ ಸಂಕೋಚದಿಂದ ಮೌನವಾಗಿರುತ್ತಿದ್ದೆ. ಅವನನ್ನು ಹೆಚ್ಚು ವೇಳೆ ನೋಡಲು, ಆತನ ಹಾಡಿಗೆ ಕಿವಿಗೊಡಲು, ಸಾಧ್ಯವಾಗುವಂತಿದ್ದರೆ, ವಿಧೇಯ ನಾಯಿಯಂತೆ ಅವನನ್ನು ಹಿಂಬಾಲಿಸಲು ನಾನು ಸದಾ ಸಿದ್ಧನಿದ್ದೆ.

ಒಂದು ದಿನ ಲಾಯದ, ಒಂದು ಮೂಲೆಯಲ್ಲಿ ನಿಂತು, ತನ್ನ ಬೆರಳಲ್ಲಿದ್ದ ಸರಳವಾದೊಂದು ಬೆಳ್ಳಿಯ ಉಂಗುರವನ್ನೇ ದಿಟ್ಟಿಸುತ್ತಿದುದು ನನಗೆ ಕಾಣಿಸಿತು. ಅವನ ಸೊಗಸಾದ ತುಟಿಗಳು ಚಲಿಸುತ್ತಿದ್ದುವು; ಪುಟ್ಟ ಕೆಂಪುಮೀಸೆ ಕಿವುಚಿಕೊಳ್ಳುತ್ತಿತ್ತು; ಮುಖದ ಮೇಲೆ, ವ್ಯಥೆಯ ನೋವಿನ ಭಾವವಿತ್ತು.

ಮತ್ತೊಂದು ದಿನ, ಮಬ್ಬುಕವಿದಿದ್ದ ಸಂಜೆಯ ಹೊತ್ತು, ಸ್ತರಾಯಾ ಸೆನ್ನಾಯಾ ಚೌಕದಲ್ಲಿದ್ದ ಪಾನಮಂದಿರಕ್ಕೆ ನನ್ನ ಪಂಜರಗಳನ್ನು ನಾನು ತಂದೆ. ಹಾಡುವ ಹಕ್ಕಿಗಳೆಂದರೆ ಪಾನಮಂದಿರದ ಒಡೆಯನಿಗೆ ಅತಿಯಾದ ಪ್ರೀತಿ. ಅಂತಹ ಹಕ್ಕಿಗಳನ್ನು ಆಗಾಗ್ಗೆ ನನ್ನಿಂದ ಆತ ಕೊಳ್ಳುತ್ತಿದ್ದ.

ಮಾದಕ ಪಾನೀಯಗಳನ್ನು ಮಾರುವ ಬಾರ್‌ನ ಬಳಿ ಒಂದು ಮೂಲೆಯಲ್ಲಿ, ಒಲೆ ಮತ್ತು ಗೋಡೆಯ ನಡುವೆ, ಆ ಕೊಸ್ಸಾಕ್ ಕುಳಿತಿದ್ದ. ಆತನ ಪಕ್ಕದಲ್ಲಿ, ಅವನಿಗಿಂತ ಸುಮಾರು ಇಮ್ಮಡಿ ಗಾತ್ರವಿದ್ದ ದಪ್ಪನೆಯ ಹೆಂಗಸೊಬ್ಬಳಿದ್ದಳು. ಅವಳ ದುಂಡನೆಯ ಮುಖ ಕುರಿಯ ತೊಗಲಿನಂತೆ ಹೊಳೆಯುತ್ತಿತ್ತು. ಹೆತ್ತವಳು ಬೀರುವ ಮಮತೆಯ-ಒಂದು ಬಗೆಯ ಕಾತರದ-ನೋಟದಿಂದ, ಅವನೆಡೆಗೆ ಅವಳು ನೋಡುತ್ತಿದ್ದಳು. ಅವನಿಗೆ ಅಮಲೇರಿತ್ತು. ನೆಲದ ಮೇಲಿನ ಪಾದಗಳನ್ನು ಅತ್ತಿತ್ತ ಆತ ಚಲಿಸುತ್ತಿದ್ದ. ಅವನು ಅವಳನ್ನು ತುಳಿದಿರಲೇಬೇಕು. ಯಾಕೆಂದರೆ, ಅವಳು ಬೆಚ್ಚಿಬಿದ್ದು, ಹುಬ್ಬುಗಂಟಿಕ್ಕಿ, ಅವನೊಡನೆ ಮೃದುವಾಗಿ ಅಂದಳು:

"ನಿನ್ನ ಹುಚ್ಚಾಟ ನಿಲ್ಲಿಸು!"

ಕೊಸ್ಸಾಕ್ ವಿಶೇಷ ಪ್ರಯತ್ನಮಾಡಿ ತನ್ನ ಹುಬ್ಬುಗಳನ್ನೆತ್ತಿದ. ಆದರೆ, ಒಡನೆಯೇ ಕೆಳ

ಗಿಳಿಸಿದ. ಆತನಿಗೆ ಸೆಖೆಯಾಗಿತ್ತು. ತನ್ನ ಕೋಟನ್ನೂ ಅಂಗಿಯನ್ನೂ ಅವನು ಎಳೆದು ಬಿಚ್ಚಿ ತನ್ನ ಗಂಟಲನ್ನು ಗಾಳಿಗೆ ಒಡ್ಡಿದ. ಆ ಹೆಂಗಸು ತನ್ನ ತಲೆಗೆ ಸುತ್ತಿದ್ದ ಕರವಸ್ತ್ರವನ್ನು ಹಿಂದಕ್ಕೆ ಭುಜಗಳ ಮೇಲಕ್ಕೆ ಸರಿಸಿದಳು. ತನ್ನ ಬಲಿಷ್ಠವಾದ ಬಿಳಿಯ ತೋಳುಗಳನ್ನು ಮೇಜಿನ ಮೇಲಿ ರಿಸಿದಳು. ಬೆರಳಿನ ಗಂಟುಗಳು ಬಿಳಿಯಾಗುವಷ್ಟು ಬಿಗಿಯಾಗಿ ಕೈಗಳನ್ನು ಆಕೆ ಮಡಚಿದಳು. ಅವರನ್ನು ನೋಡಿದಷ್ಟೂ ಹೆಚ್ಚಾಗಿ, ಆ ಕೊಸ್ಸಾಕನು ಮಮತೆಯ ತಾಯಿಯ ಅವಿಧೇಯ ಮಗ ನೆಂದು ನನಗೆ ಅನಿಸಿತು. ಆಕೆ ಅವನನ್ನು ಪ್ರೀತಿಪೂರ್ವಕವಾಗಿ ಟೀಕಿಸಿದಳು. ಆತ ದುರ್ಬಲ ನಾಗಿ ಮೌನವಾಗಿದ್ದ. ಅವಳ ನ್ಯಾಯಸಮ್ಮತವಾದ ಪ್ರತಿಭಟನೆಯ ಪ್ರಲಾಪಕ್ಕಿದಿರಾಗಿ ಹೇಳ ವಂತಹದೇನೂ ಅವನಲ್ಲಿರಲಿಲ್ಲ.

ಒಮ್ಮೆಲೆ, ಏನೋ ಕಚ್ಚಿದವನಂತೆ, ಆತ ಎದ್ದುನಿಂತ. ತನ್ನ ಹಣೆಯನ್ನೆಲ್ಲ ಮುಚ್ಚುವಂತೆ ಟೋಪಿಯನ್ನು ಕೆಳಕ್ಕೆಳೆದ; ಕೆಳಮುಖವಾಗಿ ಅದನ್ನು ತಟ್ಟಿದ. ಬಳಿಕ, ತನ್ನ ಕೋಟಿಗೆ ಗುಂಡಿ ಹಾಕದೆಯೇ ಬಾಗಿಲಕಡೆಗೆ ನಡೆದ. ಆ ಹೆಂಗಸೂ ಎದ್ದಳು.

"ಒಂದು ನಿಮಿಷದಲ್ಲಿ ವಾಪಸು ಬರ್ತೀವಿ, ಕುಜ್ಮಿಚ್," ಎಂದು, ಪಾನಮಂದಿರದ ಒಡೆಯ ನಿಗೆ ಅವಳು ಅಂದಳು.

ಮಂದಿರದ ಪೋಷಕವೃಂದದ ನಗೆಯೂ ಹಾಸ್ಯೋಕ್ತಿಯೂ ಆ ಇಬ್ಬರ ನಿರ್ಗಮನವನ್ನು ಹಿಂಬಾಲಿಸಿದುವು.

"ಚಾಲಕ ಊರಿಗೆ ವಾಪಸು ಬಂದಾಗ, ಚೆನ್ನಾಗಿ ಬಿಗೀತಾನೆ ಅವಳಿಗೆ!" ಎಂದು, ಅವರ ಲ್ಲೊಬ್ಬ ಗಂಭೀರವಾಗಿ ನುಡಿದ.

ನಾನು ಆ ಇಬ್ಬರನ್ನು ಹಿಂಬಾಲಿಸಿ ಹೊರಹೋದೆ. ಕತ್ತಲಲ್ಲಿ, ನನಗಿಂತಲೂ ಸುಮಾರು ಹನ್ನೆರಡು ಹೆಜ್ಜೆ ಮುಂದಕ್ಕೆ ಅವರು ನಡೆದರು. ಕೊಚ್ಚೆಯಾಗಿದ್ದ ಬೀದಿ ಚೌಕವನ್ನು ದಾಟಿದರು, ನೇರವಾಗಿ, ವೋಲ್ಗಾನದಿಯ ಎತ್ತರದ ದಂಡೆಯ ಕಡೆಗೆ ಸಾಗಿದರು. ಕೊಸ್ಸಾಕನಿಗೆ ಆಧಾರ ವಾಗುವ ಯತ್ನದಲ್ಲಿ ಆ ಹೆಂಗಸು ಬಾಗುತ್ತಿದ್ದುದು ನನಗೆ ಕಾಣಿಸುತ್ತಿತ್ತು. ಅವರಿಬ್ಬರ ಪಾದಗಳ ಕೆಳಗೆ ಕೆಸರು ಮಣ್ಣು ಸೀರಾಡುತ್ತಿದ್ದುದು ಕೇಳಿಸುತ್ತಿತ್ತು.

"ಎಲ್ಲಿಗೆ ಹೋಗ್ತಿದೀಯಾ ನೀನು? ಎಲ್ಲಿಗೆ ಹೋಗ್ತಿದೀಯಾ ನೀನು?" ಎಂದು ಆ ಹೆಂಗಸು ಮೆಲುದನಿಯಲ್ಲಿ ಒಂದೇ ಸಮನೆ ಕೇಳುತ್ತಿದ್ದಳು.

ನನ್ನ ದಾರಿ ಬೇರೊಂದು ದಿಕ್ಕಿಗಿದ್ದರೂ ಕೊಚ್ಚೆಯನ್ನು ಹಾದು ಅವರನ್ನು ನಾನು ಅನುಸರಿ ಸಿದೆ. ದಡದ ಅಂಚನ್ನು ತಲಪಿದಾಗ ಕೊಸ್ಸಾಕ್ ತಡೆದು ನಿಂತ. ಒಂದು ಹೆಜ್ಜೆ ಹಿಂದಕ್ಕೆ ಸರಿದ. ಇದ್ದಕ್ಕಿದ್ದಂತೆ ಆಕೆಯ ಮುಖಕ್ಕೆ ಬಲವಾಗಿ ಹೊಡೆದ. ಭಯದಿಂದಲೂ ಆಶ್ಚರ್ಯದಿಂದಲೂ ಅವಳು ಕೂಗಿ ನುಡಿದಳು:

"ಓ! ಯಾಕೆ ಹೊಡೀಬೇಕು ನೀನು?"

ನನಗೂ ಭಯವಾಯಿತು. ಅವರ ಬಳಿಗೆ ನಾನು ಓಡಿದೆ. ಆದರೆ ಕೊಸ್ಸಾಕ್, ಹೆಂಗಸಿನ ನಡುಕಟ್ಟಿಗೆ ಕೈಹಾಕಿ ಅವಳನ್ನು ಅಮುಕಿ ಹಿಡಿದು, ಕಂಬಿಯಾಚೆಗೆ ಅವಳನ್ನು ಎತ್ತಿ ಹಾಕಿ, ಆಕೆಯ ಹಿಂದೆ ತಾನೂ ಹಾರಿದ. ಇಬ್ಬರೂ ಒಂದು ಕರಿಯ ಮುದ್ದೆಯಾಗಿ, ದಂಡೆಯ ಹುಲ್ಲಿನ ಮೇಲೆ ಉರುಳುತ್ತ ಕೆಳಕ್ಕೆ ಹೋದರು. ನಾನು ದಂಗುಬಡಿದವನಂತಾದೆ. ಕೆಳಗಿನಿಂದ ಕೇಳಿ

ರುತ್ತಿದ್ದ, ಹೊರಳಾಟದ-ಉಡುಪು ಹರಿಯುತ್ತಿದ್ದುದರ-ಕೊಸ್ಸಾಕನ ಕರ್ಕಶ ಉಸಿರಾಟದ ದ್ದಿಗೆಲ್ಲ ಕಿವಿಗೊಡುತ್ತ, ನಿಶ್ಚಲನಾಗಿ ನಾನು ನಿಂತೆ. ಇಳಿದನಿಯಲ್ಲಿ ಹೆಂಗಸು ಗೊಣಗುತ್ತಲೇ ದ್ದಳು:

"ನಾನು ಕೂಗಾಡ್ತೀನಿ. ನಾನು ಕೂಗಾಡ್ತೀನಿ."

ಬಳಿಕ, ಗಟ್ಟಿಯಾದ ಯಾತನಾಪೂರ್ಣವಾದ ನರಳಾಟವೊಂದು ಆಕೆಯಿಂದ ಹೊರಟಿತು. ್ರತಿಯೊಂದೂ ಸ್ತಬ್ಧವಾಯಿತು. ನಾನು ಒಂದು ಕಲ್ಲನ್ನು ತಡವಿ ಎತ್ತಿ ದಂಡೆಯ ಕೆಳಕ್ಕೆ ಎಸೆದೆ. ೀಳಿಸಿದುದು, ಕಳೆಹುಲ್ಲಿನ ಸರಸರ ಸದ್ದೊಂದೇ, ದೂರದಲ್ಲಿ ಪಾನಮಂದಿರದ ಗಾಜಿನ ಬಾಗಿಲು ಡೆದುಕೊಂಡಿತು. ಕೆಳಕ್ಕೆ ಬಿದ್ದನೇನೋ ಎನ್ನುವಂತೆ, ಯಾರೋ ಗೊಗ್ಗರ ಧ್ವನಿ ಹೊರಡಿಸಿ ರು. ಪುನಃ, ಸುಪ್ತಭೀತಿಯಿಂದ ತುಂಬಿದ ಮೌನ ನೆಲೆಸಿತು.

ದಂಡೆಯ ಅರ್ಧಹಾದಿಯಲ್ಲಿ ಮೇಲಕ್ಕೆ, ದೊಡ್ಡದಾದುದು ವಿಸ್ತಾರವಾದುದು ಏನೋ ಕಾಣಿ ತು. ನಿಧಾನವಾಗಿ, ಅತ್ತಿತ್ತ ತೂರಾಡುತ್ತ, ಬಿಕ್ಕುತ್ತ, ಕುಂಯ್‌ಗುಡುತ್ತ; ಆ ಆಕೃತಿ ಮೇಲಕ್ಕೆ ತ್ತಿತು. ಬರುತ್ತಿದ್ದುದು ಆ ಹೆಂಗಸು ಎಂಬುದನ್ನು ಗುರುತಿಸಿದೆ. ಕುರಿಯಂತೆ, ಕೈಕಾಲುಗಳ ಲ್ಲ ಉಪಯೋಗಿಸಿ, ಆಕೆ ಹತ್ತುತ್ತಿದ್ದಳು. ನಡುವಿನವರೆಗೂ ಆಕೆ ನಗ್ನಳಾಗಿದ್ದಳೆಂಬುದು ನಗೆ ಕಾಣಿಸುತ್ತಿತ್ತು. ಅವಳ ಗಾತ್ರದ ದುಂಡಗಿನ ಸ್ತನಗಳು, ಬೆಳ್ಳಗೆ ಮಿನುಗುತ್ತಿದ್ದುವು. ೀಗಾಗಿ, ಅವಳಿಗೆ ಮೂರು ಮುಖಗಳಿದ್ದಂತೆ ಅನಿಸುತ್ತಿತ್ತು. ಅಂತೂ ಕೊನೆಗೊಮ್ಮೆ ಕಂಬಿ ಯನ್ನು ತಲುಪಿ, ನನ್ನ ಸಮೀಪದಲ್ಲಿ, ಬಸವಳಿದ ಕುದುರೆಯ ಹಾಗೆ ಉಸಿರಾಡುತ್ತ, ಅಸ್ತವ್ಯಸ್ತ ಾಗಿದ್ದ ತಲೆಗೂದಲನ್ನು ಸರಿಗೊಳಿಸಲು ಯತ್ನಿಸುತ್ತ, ಅವಳು ಕುಳಿತಳು. ಆಕೆಯ ಬಿಳಿಯ ೀಹದ ಮೇಲೆ ಕೊಳೆಯ ಕಪ್ಪುಕಲೆಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದುವು. ಆಕೆ ಅತ್ತಳು. ಂಬನಿಯನ್ನೆಲ್ಲ, ತನ್ನ ಮುಖವನ್ನು ತೊಳೆಯುವ ಬೆಕ್ಕಿನ ಹಾಗೆ ಚಟುವಟಿಕೆಯಿಂದ ತೊಡೆದು ಾಕಿದಳು.

ನಾನು ಕಣ್ಣಿಗೆ ಬಿದ್ದೊಡನೆ, ಮೆಲುದನಿಯಲ್ಲಿ ಅವಳು ಉದ್ಗರಿಸಿದಳು:

"ಓ ದೇವರೇ ಯಾರು ನೀನು? ಹೊರಟುಹೋಗು, ನಾಚಿಕೆ ಇಲ್ಲದ ಹುಡುಗ!"

ಹೊರಟುಹೋಗುವುದು ನನ್ನಿಂದ ಸಾಧ್ಯವಿರಲಿಲ್ಲ. ಅಚ್ಚರಿಯಿಂದಲೂ ಕಹಿಯಾದ ದುಃಖ ಂದಲೂ ನಾನು ನಿಶ್ಚೇಷ್ಟಿತನಾಗಿದ್ದೆ. ನನ್ನ ಅಜ್ಜಿಯ ಒಡಹುಟ್ಟಿದಾಕೆ ಆಡಿದ್ದ ಮಾತುಗಳು ನ್ನ ನೆನಪಿಗೆ ಬಂದುವು:

"ಸ್ತ್ರೀ—ಗಮನಿಸಲೇಬೇಕಾದ ಶಕ್ತಿ. ಈವಳು ಸ್ವತಃ ದೇವರನ್ನೇ ಮೋಸಗೊಳಿಸಲಿಲ್ಲವೆ?"

ಆ ಹೆಂಗಸು ಎದ್ದಳು. ಪೋಷಾಕಿನ ಉಳಿದ ಚಿಂದಿಯಿಂದ ಸ್ತನಗಳನ್ನು ಮುಚ್ಚಿ ಂಡಳು. ಹೀಗೆ ಮಾಡಿದಾಗ ಅವಳ ಕಾಲುಗಳು ಕಾಣಿಸಿದುವು. ಅಂತೂ ಅವಳು ಬೇಗ ಗನೆ ದೂರ ನಡೆದಳು. ದಂಡೆಯ ಮೇಲ್ಗಡೆಗೆ ಯಾವುದೋ ಬಿಳಿ ಪೋಷಾಕನ್ನು ಗಾಳಿಯಲ್ಲಿ ರಾಡಿಸುತ್ತಾ, ಕೊಸ್ಸಾಕ್ ಹತ್ತಿದ. ಆತ ಇಳಿದನಿಯಲ್ಲಿ ಶಿಳ್ಳುಹಾಕಿದ. ಕಿವಿಗೊಟ್ಟು ಳಿದ. ಬಳಿಕ ಹರ್ಷದ ಧ್ವನಿಯಲ್ಲಿ ಅಂದ:

"ದಾರ್‍ಯಾ! ಹುಂ. ಕೊಸ್ಸಾಕ್ ಯಾವಾಗಲೂ ತಾನು ಬಯಸಿದ್ದನ್ನ ಪಡೆದೇ ಪಡೀತಾ ಂತ ನಾನು ಹೇಳ್ಲಿಲ್ವೆ ನಿನಗೆ? ನನಗೆ ಅಮಲೇರಿತ್ತೂಂತ ತಿಳಕೊಂಡೆ, ಅಲ್ವಾ? ಇಲ್ಲ, ಇಲ್ಲ!

ಅದೆಲ್ಲಾ ನಿನ್ನನ್ನು ಪುಸಲಾಯಿಸೋದಕ್ಕೆ ಮಾಡಿದ ನಟನೆ! ದಾರ್‍ಯಾ!"

ಆತ ತನ್ನ ಪಾದಗಳ ಮೇಲೆ ಭದ್ರವಾಗಿ ನಿಂತಿದ್ದ. ಅಮಲಿನ ಛಾಯೆ ಧ್ವನಿಯಲ್ಲಿ ಇರಲಿ ಇಲ್ಲ. ಅದರಲ್ಲಿ ಪರಿಹಾಸ್ಯ ತುಂಬಿತ್ತು. ಕೆಳಕ್ಕೆ ಬಾಗಿ, ಆ ಸ್ತ್ರೀಯ ಉಡುಪಿನಿಂದ ತನ ಬೂಟುಗಳ ಮೇಲಿನ ಕೆಸರನ್ನು ಒರೆಸಿ, ಆತ ಮಾತು ಮುಂದುವರಿಸಿದ:

"ಎಲ್ಲಿ, ತಗೋ ನಿನ್ನ ಕುಪ್ಪಸ! ಬಾ, ದಾರ್‍ಯಾ, ಕೋಪಿಸ್ಕೋಬೇಡ:"

ಬಳಿಕ ಗಟ್ಟಿಯಾದ ಧ್ವನಿಯಲ್ಲಿ ಆಕೆಯನ್ನು ಕುರಿತು ಅಶ್ಲೀಲ ಹೆಸರೊಂದನ್ನು ಆ ಉಚ್ಚರಿಸಿದ.

ಇರುಳಿನ ಮೌನದಲ್ಲಿ ಅತೀವ ಒಂಟಿಯಾಗಿ, ಅಷ್ಟೊಂದು ಹಿಂಡಿಹಿಸುಕುವ ದರ್ಪದಿಂದ ಕೇಳಿಸಿದ ಆ ಧ್ವನಿಗೆ ಕಿವಿಗೊಡುತ್ತ, ಪೊದೆಪೊದರುಗಳ ಮೇಲೆ ನಾನು ಕುಳಿತೇ ಇದ್ದೆ.

ಚೌಕದಲ್ಲಿನ ಕಂದೀಲು ದೀಪಗಳು ನನ್ನ ಕಣ್ಣುಗಳೆದುರು ಕುಣಿದುವು. ಬಲಬದಿಯಲ್ಲಿದ ಕರಿದುಮರಗಳ ಗುಂಪಿನ ಮೇಲಿನಿಂದ, ಶ್ರೀಮಂತ ಪುತ್ರಿಯರ ಶಾಲೆಯ ಬಿಳಿಯ ಕಟ್ಟಡ ಕಾ ಸಿತು. ಹೊಲಸು ಪದಗಳನ್ನು ಸೋಮಾರಿಯಂತೆ ನಿಧಾನವಾಗಿ ಆಡುತ್ತ, ಬಿಳಿಯ ಉಡು ಗಳನ್ನು ಬೀಸುತ್ತ, ಆ ಕೊಸ್ಸಾಕ್ ಚೌಕದ ಕಡೆಗೆ ಏರಿಹೋಗಿ, ಒಂದು ಕೆಟ್ಟ ಕನಸಿನಂ ಅದೃಶ್ಯನಾದ.

ಕೆಳಗಿದ್ದ ಜಲಾಶಯದ ಗೋಪುರದಿಂದ ನೀರು ಹೊರ ಹರಿಯುವ ಕೊಳವೆಯ ಮೂಲ ಉಗಿ ಸುಂಯ್‌ಗುಡುತ್ತಿತ್ತು. ಕುದುರೆ ಗಾಡಿಯೊಂದು ಇಳಿಜಾರಿನಲ್ಲಿ ಕಟಕಟ ಸದ್ದು ಮಾಡುತ್ತ ನದಿಯ ಕಡೆಗೆ ಇಳಿಯಿತು. ಒಬ್ಬನೇ ಒಬ್ಬ ಮನುಷ್ಯನೂ ಎಲ್ಲೂ ಕಾಣಿಸಲಿಲ್ಲ. ಕೊಸ್ಸಾಕ ಕಡೆ ಎಸೆಯಬೇಕೆಂದು ನಾನು ಉದ್ದೇಶಿಸಿದ್ದ ಶೀತಲ ಕಲ್ಲನ್ನು ನನ್ನ ಕೈಯಲ್ಲಿ ಬಿಗಿಹಿಡಿದು ಮನಸಿನ ಸಂಕಟದಿಂದ, ನದೀದಂಡೆಯ ಅಂಚಿನ ಮೇಲೆ ಉದ್ದಕ್ಕೂ ನಡೆದೆ. ವಿಜೇತ ಸಂ ಜಾರ್ಜನ ಇಗರ್ಜಿಯ ಬಳಿ ರಾತ್ರೆಯ ಕಾವಲುಗಾರ ನನ್ನನ್ನು ತಡೆದು ನಿಲ್ಲಿಸಿದ. ನಾನ ಯಾರೆಂದು, ಬೆನ್ನಮೇಲಿನ ಚೀಲದಲ್ಲಿ ಹೊತ್ತಿರುವುದೇನೆಂದು, ಸಿಟ್ಟಿನಿಂದ ಆತ ಕೇಳಿದ.

ಕೊಸ್ಸಾಕನ ವಿಷಯವಾಗಿ ಅವನಿಗೆ ನಾನು ತಿಳಿಸಿದಾಗ, ಗೊಳ್ಳೆಂದು ಆತ ನಕ್ಕ.

ಧ್ವನಿ ಏರಿಸಿ ಆತನೆಂದ:

"ಇದ್ದರೆ ಹಾಗಿರಬೇಕು! ಕೊಸ್ಸಾಕರು ಹಿಂದುಮುಂದು ನೋಡ್ತಾ ಕಾಲ ಕಳೆಯೋರಲ್ಲ ತಮ್ಮಾ! ಅವರಿಗೆ ನಾವು ಸಾಟಿಯಲ್ಲ. ಆ ಹೆಂಗಸಂತೂ ಸೂಳೆಯೇ ಸರಿ!"

ಹಾಗೆ ಹೇಳಿ, ಪುನಃ ಆತ ಬಿದ್ದುಬಿದ್ದು ನಗತೊಡಗಿದ. ಅದರಲ್ಲಿ ನಗುವಂತಹದು ಆತನಿ ಏನು ಕಂಡಿತೆಂದು ಆಶ್ಚರ್ಯಪಡುತ್ತ, ನನ್ನ ಹಾದಿಯಲ್ಲಿ ನಾನು ಮುಂದಕ್ಕೆ ಸಾಗಿದೆ.

ಭಯಭೀತನಾಗಿ ನಾನು ಯೋಚಿಸುತ್ತಲೇ ಇದ್ದೆ: ಆ ಹೆಂಗಸು ನನ್ನ ತಾಯಿಯೋ ಅಥವಾ ಅಜ್ಜಿಯೋ ಆಗಿದ್ದಿದ್ದರೆ?

೮

ಮೊದಲ ಹಿಮ ಬಿದ್ದಾಗ, ಅಜ್ಜ ಮತ್ತೊಮ್ಮೆ, ಅಜ್ಜಿಯ ಸೋದರಿಯ ಬಳಿಗೆ ನನ್ನನ್ನು
ಯ್ದ.

"ಇದರಿಂದ ನಿನಗೆ ಏನೂ ಅಪಾಯವಾಗೋದಿಲ್ಲ—ಏನೂ ಅಪಾಯವಾಗೋದಿಲ್ಲ,"
ಂದ ಆತ.

ಬೇಸಗೆಯ ಅವಧಿಯಲ್ಲಿ, ಅದ್ಭುತ ಅನುಭವಗಳು ನನ್ನ ಬದುಕಿನಲ್ಲಿ ಆಗಿದ್ದುವೆಂದು,
ನ್ನನ್ನು ಅವು ಹೆಚ್ಚು ವಯಸ್ಕನಾಗಿಯೂ ಹೆಚ್ಚು ಬುದ್ಧಿವಂತನಾಗಿಯೂ ಮಾಡಿದ್ದುವೆಂದು,
ನಗೆ ಭಾಸವಾಗುತ್ತಿತ್ತು. ಆದರೆ, ನನ್ನ ಮಾಲಿಕರ ಮನೆಯಲ್ಲಿ ಮಾತ್ರ ಬದುಕು, ಎಂದಿಗಿಂತ
ಚ್ಚು ನೀರಸವಾಗಿತ್ತು. ಈ ಜನರು ಹಿಂದಿನ ರೀತಿಯಲ್ಲೇ ಅತಿಯಾಗಿ ತಿಂದು, ತಮ್ಮ
ರೋಗ್ಯವನ್ನು ಕೆಡಿಸಿಕೊಳ್ಳುತ್ತಿದ್ದರು. ಹಿಂದಿನ ಬೇಸರ ಪಡಿಸುವ ರೀತಿಯಲ್ಲೇ ವಿವರ
ವರವಾಗಿ ತಮ್ಮ ಕಾಹಿಲೆಗಳ ಬಗೆಗೆ ಮಾತನಾಡುತ್ತಿದ್ದರು. ಮುದುಕಿ, ಹಿಂದಿನ ಭಯ
ಟ್ಟಿಸುವಂತಹ ಪ್ರತೀಕಾರಭಾವದಿಂದಲೇ, ತನ್ನ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದಳು.
ರಿಯ ಯಜಮಾನಿತಿ, ಮತ್ತೊಂದು ಮಗುವನ್ನು ಹೆತ್ತಬಳಿಕ ಇನ್ನಷ್ಟು ತೆಳುವಾಗಿದ್ದಳು. ಈಗ
ಕೆಗೆ ಕಡಮೆ ಜಾಗ ಸಾಲುತ್ತಿದ್ದರೂ, ಗರ್ಭಿಣಿಯಾಗಿದ್ದಾಗ ನಡೆಯುತ್ತಿದ್ದ ರೀತಿಯಲ್ಲೇ
ಜಗಮನೆಯಾಗಿ ಈಗಲೂ ಅತ್ತಿತ್ತ ಚಲಿಸುತ್ತಿದ್ದಳು. ಮಕ್ಕಳ ಅರಿವೆಗಳನ್ನು ಹೊಲಿಯುತ್ತ,
ಂದೇ ಒಂದಾದ ಹಾಡನ್ನು ಮೆಲುದನಿಯಲ್ಲಿ ಹಾಡುತ್ತಿದ್ದಳು.

ವಾನ್ಯಾ, ವಾನ್ಯಾ, ವಾನ್ಯಿಚ್ಕಾ
ವಾನ್ಯಾ ಸೋದರ, ಒಲವಿನ ಸೋದರ
ಜಾರುಬಂಡಿಯ ಪ್ರವಾಸಿ ನಾನು
ಹಿಂದಿನ ಪೀಠದಿ ಚಾಲಕನು ನೀನು

ಯಾರಾದರೂ ಕೊಠಡಿಯನ್ನು ಹೊಕ್ಕರೆ, ಆಕೆ ತಕ್ಷಣವೇ ಹಾಡು ನಿಲ್ಲಿಸಿ, ಸಿಟ್ಟಿನಿಂದ
ನ್ನುತ್ತಿದ್ದಳು:

"ಏನು ಬೇಕು ನಿನಗೆ?"

ಆಕೆಗೆ ಗೊತ್ತಿದ್ದ ಹಾಡು ಅದೊಂದೇ ಎನ್ನುವುದು ನನಗೆ ಖಚಿತವಾಗುತ್ತಿತ್ತು.

ಒಡತಿಯರು, ಸಂಜೆಯ ಹೊತ್ತು ಯಾವಾಗಲೂ ಊಟದ ಕೊಠಡಿಗೆ ನನ್ನನ್ನು ಕರೆದು
ನ್ನುತ್ತಿದ್ದರು:

"ಉಗಿ ಹಡಗದ ಮೇಲಿನ ನಿನ್ನ ಜೀವನದ ವಿಷಯ ನಮಗೆ ಹೇಳು."

ಕಕ್ಕಸಿನ ಬಾಗಿಲ ಬಳಿ ಒಂದು ಕುರ್ಚಿಯ ಮೇಲೆ ಕುಳಿತು, ಎಲ್ಲವನ್ನೂ ಅವರಿಗೆ ನಾನು
ಳುತ್ತಿದ್ದೆ. ನನ್ನ ಇಚ್ಛೆಗೆ ಇದಿರಾಗಿ ನಾನು ತಳ್ಳಲ್ಪಟ್ಟಿದ್ದ ಈ ಬದುಕಿನ ನಡುವೆ, ಆ ಬದುಕನ್ನು

ನೆನೆಸಿಕೊಳ್ಳುವುದು ಹರ್ಷಪ್ರದವಾಗಿತ್ತು. ನನ್ನ ಕಥೆಯಲ್ಲಿ ತಲ್ಲೀನನಾದಂತೆ, ಶ್ರೋತೃಗಳನ್ನು ನಾನು ಮರೆತುಬಿಡುತ್ತಿದ್ದೆ. ಆದರೆ ಇಂತಹ ತಲ್ಲೀನತೆ ಬಹಳ ಹೊತ್ತು ಸಾಧ್ಯವಿರಲಿಲ್ಲ. ಆ ಹೆಂಗಸರೆಂದೂ ಉಗಿಹಡಗದ ಮೇಲೆ ಹೋಗಿರಲಿಲ್ಲ. ಹೀಗಾಗಿ ಅವರು ಕೇಳುತ್ತಿದ್ದರು:

"ನಿನಗೆ ಭಯವಾಗಲಿಲ್ವೆ?"

ಭಯವಾಗುವಂತಹದು ಏನಿತ್ತೆಂಬುದು ನನಗೆ ಅರ್ಥವಾಗಲಿಲ್ಲ.

"ಆಳವಾದ ಜಾಗದಲ್ಲಿ ಹಡಗು ತಳಕುಮಳಕಾಗಿ ಮುಳುಗಿದ್ದರೆ?"

ನನ್ನ ಒಡೆಯ ನಕ್ಕ. ಆಳವಾದ ಜಾಗಗಳಲ್ಲಿ ಹಡಗುಗಳು ತಳಕುಮಳಕಾಗಿ ಮುಳುಗುವು ದಿಲ್ಲವೆಂಬುದು ನನಗೆ ಗೊತ್ತಿದ್ದರೂ, ಅದನ್ನು ಹೆಂಗಸರಿಗೂ ಮನಗಾಣಿಸಿಕೊಡಲು ನಾನು ಅಸಮರ್ಥನಾದೆ. ಹಡಗುಗಳು ನೀರಿನ ಮೇಲೆ ತೇಲುವುದೊಂದೇ ಇಲ್ಲ; ರಸ್ತೆಯಲ್ಲಿ ಚಲಿಸುವ ಗಾಡಿಯ ಚಕ್ರಗಳ ಹಾಗೆ ಹಡಗಿನ ಹುಟ್ಟುಚಕ್ರಗಳು ನೀರಿನ ತಳದಲ್ಲಿ ಚಲಿಸುತ್ತಿರಬೇಕು— ಎಂಬುದು ಹಿರಿಯವಳ ನಂಬಿಕೆಯಾಗಿತ್ತು.

"ಅದು ಕಬ್ಬಿಣವೆಂದಾದರೆ ಹೇಗೆ ತೇಲೀತು? ಕೊಡಲಿ ತೇಲೋದಿಲ್ಲ, ತೇಲುತ್ತೇನು?"

"ಆದರೆ ತಪ್ಪಲೆ ತೇಲ್ತದೆ."

"ಒಳ್ಳೇ ಹೋಲಿಕೆ! ತಪ್ಪಲೆ ಚಿಕ್ಕದು. ಅದರೊಳಗೆ ಏನೂ ಇರೋದೂ ಇಲ್ಲ."

ಸ್ಮರಿ ಮತ್ತು ಅವನ ಪುಸ್ತಕಗಳ ವಿಷಯವಾಗಿ ಅವರಿಗೆ ನಾನು ಹೇಳಿದಾಗ, ಸಂಶಯದ ದೃಷ್ಟಿಯಿಂದ ನನ್ನನ್ನು ಅವರು ನೋಡಿದರು. ಮೂರ್ಖರು ಮತ್ತು ನಾಸ್ತಿಕರಷ್ಟೇ ಪುಸ್ತಕಗಳನ್ನು ಬರೆಯುವರೆಂದು ಮುದುಕಿ ಸಾರಿದಳು.

"ಗೀತಸ್ತೋತ್ರದ ವಿಷಯವೇನು? ಅರಸು ಡೇವಿಡ್ ಮೂರ್ಖನೆ—ಹುಚ್ಚನೆ?"

"ಗೀತಸ್ತೋತ್ರವು ಪವಿತ್ರ ಪುಸ್ತಕ; ಹೀಗಿದ್ದೂ ಅರಸು ಡೇವಿಡ್, ಸ್ತೋತ್ರಗಳಿಗಾಗಿ ದೇವರ ಕ್ಷಮೆಯನ್ನು ಕೇಳಿದ."

"ಹಾಗೇಂತ ಎಲ್ಲಿ ಬರೆದಿದಾರೆ?"

"ಇಲ್ಲಿ, ನನ್ನ ಕೈಮೇಲೆ! ಎಲ್ಲೀಂತ ನಿನಗೆ ಕಲಿಸೋದಕ್ಕೆ ನಿನ್ನ ಹಿಂತಲೆಗೇ ಸರಿಯಾಗಿ ಒಂದು ಬಿಗೀತೀನಿ!"

ಎಲ್ಲವನ್ನೂ ಬಲ್ಲವಳಾಗಿದ್ದಳು ಆಕೆ. ಯಾವಾಗಲೂ ಅಸಂಬದ್ಧವಾಗಿಯೇ ಇರುತ್ತಿದ್ದ ತನ್ನ ಅಭಿಪ್ರಾಯಗಳನ್ನೆಲ್ಲ, ಅತ್ಯಂತ ಆತ್ಮವಿಶ್ವಾಸದಿಂದ ಆಕೆ ವ್ಯಕ್ತಪಡಿಸುತ್ತಿದ್ದಳು.

"ಪೆಚೋರ್ಸ್ಕಾ ರಸ್ತೆಯಲ್ಲಿನ ತಾತರ ಸತ್ತಾಗ, ಅವನ ಆತ್ಮ ಡಾಮರಿನಷ್ಟು ಕಪ್ಪಾಗಿ ಗಂಟಲಿನಿಂದ ಹರಿದುಬಂತು."

"ಆತ್ಮ ಅನ್ನೋದು ಒಂದು ಚೇತನ," ಎಂದೆ ನಾನು.

ಸಿಡಿಲಿನಂತೆ ಅವಳು ಪ್ರತಿ ನುಡಿದಳು:

"ನಾನು ಮಾತನಾಡ್ತಿರೋದು ತಾತರನ ವಿಷಯ, ಮೂರ್ಖನೆ."

"ಪುಸ್ತಕಗಳ ವಿಷಯದಲ್ಲಿ ನನ್ನ ಕಿರಿಯ ಯಜಮಾನಿತಿಗೂ ಭಯವಿತ್ತು. ಆಕೆಯೆಂದಳು:

"ಪುಸ್ತಕಗಳನ್ನು ಓದೋದು ಅಪಾಯಕರ——ಅದೂ ಚಿಕ್ಕ ವಯಸ್ಸಿನಲ್ಲಿ. ನಮ್ಮ ರಸ್ತೇಲಿ- ಗ್ರೆಬಿಶೊಕ್‌ರಸ್ತೆ ಅಂತ—ಒಬ್ಬಳು ಹುಡುಗಿ ವಾಸವಾಗಿದ್ಲು. ಒಳ್ಳೇ ಕುಟುಂಬದವಳು

ಆದರೆ, ಓದೋಕೆ ಶುರುಮಾಡಿದ್ಲು. ಓದಿ, ಓದಿ,—ಕೊನೇಲಿ ಧರ್ಮಾಧಿಕಾರಿಯಲ್ಲೇ ಅನುರಕ್ತೆ ಯಾಗೋವರೆಗೂ ಓದಿದ್ಲು! ಆ ಧರ್ಮಾಧಿಕಾರಿಯ ಹೆಂಡತಿ ಅವಳಿಗೆ ಹೇಗೆ ಶಾಸ್ತಿಮಾಡಿದ ಳೊಂತ. ಪರಚಿ, ಕಚ್ಚಿ, ಹೊಡೆದು ಅಪ್ಪಚ್ಚಿಮಾಡಿದ್ಲು! ರಸ್ತೇಲೇ, ಎಲ್ಲರ ಎದುರಿಗೆ! ಭಯಂಕರ ವಾಗಿತ್ತಪ್ಪ!"

ಕೆಲವೇಳೆ, ಸ್ಮರಿಯ ಪುಸ್ತಕಗಳ ಕೆಲವು ಪದಗಳನ್ನು ನಾನು ಬಳಸುತ್ತಿದ್ದೆ. ಒಂದು ಪುಸ್ತಕದಲ್ಲಿ ನಾನು ಓದಿದ್ದೆ: "ಕಟ್ಟುನಿಟ್ಟಾಗಿ ಹೇಳುವುದಾದರೆ, ಸಿಡಿಮದ್ದನ್ನು ಯಾರೂ ಕಂಡು ಹಿಡಿಯಲಿಲ್ಲ. ಸಣ್ಣಪುಟ್ಟ ನಿರೀಕ್ಷಣೆ ಸಂಶೋಧನೆಗಳ ಸುದೀರ್ಘ ಕಾರ್ಯವಿಧಾನದ ಫಲವಾಗಿ ಅದು ಕಾಣಿಸಿಕೊಂಡಿತು."

ಗ್ರಹಿಸಲಾಗದ ಯಾವುದೋ ಕಾರಣಕ್ಕಾಗಿ ಈ ಪದಗಳು ನನ್ನ ಮನಸ್ಸಿನಲ್ಲಿ ನೆಟ್ಟಿದ್ದುವು. 'ಕಟ್ಟುನಿಟ್ಟಾಗಿ' ಎಂಬ ಪದಪ್ರಯೋಗ ಬಲು ಶಕ್ತಿಪೂರ್ಣವಾಗಿ ನನಗೆ ಕಂಡು, ಅದರ ಬಗೆಗೆ ನನ್ನಲ್ಲಿ ವಿಶೇಷ ಒಲವು ಉತ್ಪನ್ನವಾಯಿತು. ಅದರ ಉಪಯೋಗದಿಂದಾಗಿ ಹೆಚ್ಚಿನ ಸಂಕಟ ವನ್ನು—ತೀರಾ ಸಾಧಾರಣ ಬಗೆಯ ಅನಗತ್ಯ ಸಂಕಟವನ್ನು—ನಾನು ಅನುಭವಿಸಬೇಕಾಯಿತು.

ಒಂದು ಸಂಜೆ, ಉಗಿ ಹಡಗದ ಮೇಲಿನ ನನ್ನ ಅನುಭವಗಳನ್ನು ತಿಳಿಸೆಂದು ಆ ಸಂಸಾರ ಕೇಳಿದಾಗ, ನಾನು ಉತ್ತರವಿತ್ತೆ:

"ಕಟ್ಟುನಿಟ್ಟಾಗಿ ಹೇಳುವುದಾದರೆ, ತಿಳಿಸುವಂಥದು ಏನೂ ಇಲ್ಲ."

ಅವರು ತಬ್ಬಿಬ್ಬಾದರು, ಕಿರಲತೊಡಗಿದರು:

"ಏನದು? ಏನಂದೆ ನೀನು?"

ಆ ನಾಲ್ವರೂ ನಗಲು ಆರಂಭಿಸಿದರು.

"'ಕಟ್ಟುನಿಟ್ಟಾಗಿ!' ನಮ್ಮಪ್ಪ ದೇವರೇ!" ಎಂದು ಪುನಃ ಪುನಃ ಅವರು ಉಚ್ಚರಿಸಿದರು.

ನನ್ನ ಯಜಮಾನ ಕೂಡಾ ನನ್ನೊಡನೆ ಅಂದ:

"ಅರ್ಥವಿಲ್ಲದ ಹುಚ್ಚುಚ್ಚಾರ ನೀನು ಆಡಿದ್ದು."

ಆದಾದ ಬಳಿಕ ಬಹಳ ಕಾಲದವರೆಗೂ 'ಕಟ್ಟುನಿಟ್ಟಾಗಿ' ಎಂದೇ ನನ್ನನ್ನು ಅವರು ಕರೆದರು.

"ಏಯ್ 'ಕಟ್ಟುನಿಟ್ಟಾಗಿ'! ಇಲ್ಲಿಗೊಮ್ಮೆ ಬಂದು ಮಗು ಇಸ್ಸಿ ಮಾಡಿರೋ ನೆಲ ಒರೆಸ್ತಿ ಯೇನೋ 'ಕಟ್ಟುನಿಟ್ಟಾಗಿ'?"

ಈ ಅರ್ಥಹೀನ ಟೀಕೆಯಿಂದ, ನೋವಿಗಿಂತಲೂ ಹೆಚ್ಚು ಅಚ್ಚರಿಯೇ ನನಗಾಯಿತು.

ಮಂಕು ಕವಿಸುವಂತಹ ಯಾತನೆಯ ಮಂಜಿನಲ್ಲಿ ನಾನು ಜೀವಿಸಿದೆ. ಆದಷ್ಟು ಹೆಚ್ಚು ಶ್ರಮಪಟ್ಟು ದುಡಿದು ಆ ಯಾತನೆಯನ್ನು ಕಳೆಯಲು ನಾನು ಯತ್ನಿಸಿದೆ. ಕೆಲಸ ಬೇಕಷ್ಟಿತ್ತು. ಮನೆಯಲ್ಲಿ ಎರಡು ಕೂಸುಗಳಿದ್ದುವು. ದೋಷಾನ್ವೇಷಿಯರಾದ ನನ್ನ ಒಡತಿಯರು ದಾದಿಯನ್ನು ಯಾವಾಗಲೂ ಕೆಲಸದಿಂದ ವಜಾಮಾಡುತ್ತಲೇ ಇದ್ದುದರಿಂದ, ಕೂಸುಗಳ ಆರೈಕೆಯ ಹೆಚ್ಚಿನಂಶ ನನ್ನ ಪಾಲಿಗೇ ಬೀಳುತ್ತಿತ್ತು. ಪ್ರತಿದಿನವೂ ನಾನು ಕೂಸುಗಳ ಅರಿವೆ ತೊಳೆಯುತ್ತಿದ್ದೆ. ವಾರ ಕ್ಕೊಮ್ಮೆ 'ಪೋಲೀಸರ ನದಿ'ಗೆ ಹೋಗಿ ಬಟ್ಟೆಗಳನ್ನು ತೊಳೆಯುತ್ತಿದ್ದೆ. ಅಲ್ಲಿರುತ್ತಿದ್ದ ಅಗಸರ ಹೆಂಗಸರು, ನನ್ನನ್ನು ನೋಡಿ ನಗುತ್ತಿದ್ದರು.

"ಈ ಹೆಂಗಸಿನ-ಕೆಲಸ ನೀನ್ಯಾಕೊ ಮಾಡ್ತಿದೀಯಾ?" ಎಂದು ಅವರು ಕೇಳುತ್ತಿದ್ದರು.

ಕೆಲವೊಮ್ಮೆ ಅವಳ ಈ ಕೀಟಲೆಯ ಫಲವಾಗಿ, ಒದ್ದೆಬಟ್ಟೆಗಳನ್ನು ಅವರೆಡೆಗೆ ನಾನು ಬೀಸು ತ್ತಿದ್ದೆ. ಅವರೂ ನನ್ನೆಡೆಗೆ ಅದೇ ರೀತಿ ಮಾಡುತ್ತಿದ್ದರು. ಅವರ ಜತೆ ಇರುವುದು ಸಂತೋಷ ಪ್ರದವಾಗಿ ಸ್ವಾರಸ್ಯಕರವಾಗಿ ನನಗೆ ಕಾಣುತ್ತಿತ್ತು.

'ಪೋಲೀಸರ ನದಿ' ಆಳವಾದೊಂದು ಕಂದರದ ತಳವಲ್ಲಿ ಹರಿಯುತ್ತಿತ್ತು. ಅದು ಸೇರು ತ್ತಿದ್ದುದು ಓಕಾನದಿಯನ್ನು. ಆ ಕಂದರ, ಶಹರವನ್ನು ಒಂದು ಬಯಲಿನಿಂದ ಬೇರ್ಪಡಿಸಿತ್ತು. ಪುರಾತನ ಸ್ಲಾವ್ ಜನರ ದೇವರಾದ ಯಾರಿಲೋನ ಹೆಸರಿತ್ತು ಆ ಬಯಲಿಗೆ. ಸೆಮಿಕ್ ದಿನ— ಪುನರುತ್ಥಾನ ಹಬ್ಬದ ಅನಂತರದ ಏಳನೆಯ ವಾರದ ಗುರುವಾರ-ಕುಡಿತ ಕುಣಿತಗಳ ವಿಹಾರಕ್ಕೆ ಆ ಬಯಲಿಗೆ ಬರುತ್ತಿದ್ದರು. ತಾನಿನ್ನೂ ಯುವತಿಯಾಗಿದ್ದಾಗ ಯಾರಿಲೋನಲ್ಲಿ ಜನರಿಗೆ ನಂಬಿಕೆ ಇತ್ತೆಂದೂ ಅವರು ಆತನಿಗೆ ಗೌರವ ಸಲ್ಲಿಸುತ್ತಿದ್ದರೆಂದೂ ಅಜ್ಜಿ ಹೇಳುತ್ತಿದ್ದಳು. ಒಂದು ಚಕ್ರಕ್ಕೆ ಡಾಮರು ಬಳಿದು, ಅದಕ್ಕೆ ಬೆಂಕಿಹಚ್ಚಿ, ಹಾಡುತ್ತ ಗದ್ದಲ ಮಾಡುತ್ತ ಅದನ್ನು ಗುಡ್ಡ ದಿಂದ ಕೆಳಕ್ಕೆ ಉರುಳಿಸುತ್ತಿದ್ದರು. ಅದು ಓಕಾನದಿಯನ್ನು ತಲಪಿದರೆ, ಯಾರಿಲೋ ತಮ್ಮ ಕಾಣಿಕೆಯನ್ನು ಸ್ವೀಕರಿಸಿದನೆಂದು, ಬೇಸಗೆ ಸೊಗಸಾಗಿದ್ದು ಎಲ್ಲರಿಗೂ ಸುಖವನ್ನು ತಂದು ಕೊಡುತ್ತದೆಂದು, ಅದರ ಅರ್ಥ.

ಅಗಸ ಹೆಂಗಸರಲ್ಲಿ ಹೆಚ್ಚಿನವರು ಯಾರಿಲೋ ಬಯಲಲ್ಲಿ ವಾಸಿಸುತ್ತಿದ್ದರು. ಅವರೆಲ್ಲರೂ ಚೈತನ್ಯ ಉಳ್ಳವರಾಗಿಯೂ ತೀಕ್ಷ್ಣನಾಲಿಗೆಯವರಾಗಿಯೂ ಇದ್ದರು. ಅವರಿಗೆ ಶಹರ ಜೀವನದ ಬಗೆಗೆ ಚೆನ್ನಾದ ಪರಿಜ್ಞಾನವಿತ್ತು. ತಾವು ಒಗೆಯುತ್ತಿದ್ದ ಅರಿವೆಗಳ ಒಡೆಯರಾದ ವ್ಯಾಪಾರಿಗಳು, ಗುಮಾಸ್ತೆಯರು ಮತ್ತು ಅಧಿಕಾರಿಗಳ ಬಗೆಗೆ ಅವರು ಆಡುತ್ತಿದ್ದುದು, ಕೇಳಲು ಸ್ವಾರಸ್ಯಕರ ವಾಗಿರುತ್ತಿತ್ತು. ಚಳಿಗಾಲದಲ್ಲಿ ಆ ಕಾರಂಜಿಯ ಮಂಜುಗಡ್ಡೆಯಂತಹ ನೀರಿನಲ್ಲಿ ಅರಿವೆಗಳನ್ನು ಒಗೆಯುವುದು, ಕ್ರೂರಕೆಲಸವಾಗಿತ್ತು. ಹೆಂಗಸರ ಕೈಗಳು ಚರ್ಮಬಿರಿಯುವವರೆಗೂ ಹೆಪ್ಪು ಗಟ್ಟುತ್ತಿದ್ದುವು. ಹಳೆಯ ನಾದುರಸ್ತಿಯಾದ ಮರದ ಛಾವಣಿಯ ಕೆಳಗೆ, ಗಾಳಿ ಹಿಮಗಳಿಂದ ಹೆಚ್ಚಿನ ರಕ್ಷಣೆಯೇನೂ ಇಲ್ಲದೆ, ನೀರು ಹರಿದು ತುಂಬುತ್ತಿದ್ದ ಮರದ ಪಾತ್ರೆಗಳ ಮೇಲೆ ಅವರು ಬಾಗುತ್ತ ನಿಂತರು. ಮುಖಗಳು ಕೆಂಪಡರುತ್ತಿದ್ದುವು; ಹಿಮದ ಕಡಿತಕ್ಕೆ ಒಳಗಾಗುತ್ತಿದ್ದುವು ನೋಯುತ್ತಿದ್ದ ಬೆರಳುಗಳು ಮಡಚಲು ನಿರಾಕರಿಸುತ್ತಿದ್ದುವು. ಕಣ್ಣುಗಳಿಂದ ಕಂಬನಿ ಹರಿ ಯುತ್ತಿತ್ತು. ಆದರೂ ಅವರು ಎಡೆಬಿಡದೆ ಹರಟುತ್ತಿದ್ದರು. ಇತ್ತೀಚಿನ ಸಂಭವಗಳ ಬಗೆಗೆ ಪರಸ್ಪರರಿಗೆ ಮಾಹಿತಿ ಒದಗಿಸುತ್ತ, ವಸ್ತುಸ್ಥಿತಿಯನ್ನೂ ಜನರನ್ನೂ ಅಸಾಧಾರಣ ಧೈರ್ಯದಿಂದ ಒಪ್ಪಿಕೊಳ್ಳುತ್ತ, ಇದ್ದರು.

ಅತ್ಯಂತ ಸೊಗಸಾಗಿ ಮಾತನಾಡುತ್ತಿದ್ದವಳು, ನತಾಲ್ಯಾ ಕೊಜ್ಲೊವ್‌ಸ್ಕಾಯಾ. ಮೂವ ತ್ತನ್ನು ಮೀರಿದ ವಯಸ್ಸಿನ, ಹೊಸ ಹರೆಯದ ಹುಮ್ಮಸಿದ್ದ, ಬಲಿಷ್ಠಳಾದ, ಛೇಡಿಸುವ ಕಣ್ಣುಗಳ ವಿಶೇಷ ತೀಕ್ಷ್ಣವಾದ ಹಾಗೂ ಅದ್ಭುತವಾದ ನಾಲಗೆಯ ಹೆಂಗಸು. ಆಕೆ ಮಾತನಾಡಿದಾಗ ಉಳಿದ ಹೆಂಗಸರೆಲ್ಲ ಗಮನವಿಟ್ಟು ಆಲಿಸುತ್ತಿದ್ದರು. ಆಕೆಯ ಸಲಹೆ ಕೇಳುತ್ತಿದ್ದರು. ದುಡಿಮೆ ಯಲ್ಲಿ ಅವಳು ತೋರುತಿದ್ದ ಜಾಣ್ಮೆ, ಚೊಕ್ಕಟವಾಗಿ ಅವಳು ಉಡುಪು ತೊಡುತ್ತಿದ್ದ ರೀತಿ ಕಲಾಶಾಲೆಯಲ್ಲಿ ಓದಲೆಂದು ತನ್ನ ಮಗಳನ್ನು ಅವಳು ಕಳುಹಿದ್ದುದು-ಈಯೆಲ್ಲ ಕಾರಣಗಳಿಗಾಗಿ

ಉಳಿದ ಹೆಂಗಸರು ಆಕೆಯನ್ನು ಗೌರವಿಸುತ್ತಿದ್ದರು. ಎರಡು ಬುಟ್ಟಿತುಂಬ ಇದ್ದ ಒದ್ದೆಬಟ್ಟೆಗಳ ಭಾರದಿಂದ ನಡುಬಾಗಿ, ಜಾರುಹಾದಿಯಲ್ಲಿ ಅವಳು ಇಳಿದು ಬಂದಾಗ, ಇತರರೆಲ್ಲ ಮಂದಹಾಸ ಬೀರುತ್ತ ಆಕೆಯನ್ನು ಸ್ವಾಗತಿಸುತ್ತಿದ್ದರು.

"ನಿನ್ನ ಮಗಳು ಹೇಗಿದಾಳೆ?" ಎಂದು ಕೇಳುತ್ತಿದ್ದರು.

"ಅವಳು ಚೆನ್ನಾಗಿದಾಳೆ?" ದೇವರು ದೊಡ್ಡವನು—ಓದ್ತಿದಾಳೆ."

"ನೀನು ಗಮನಿಸೋದಕ್ಕೆ ಮುಂಚೆಯೇ ಸುಶಿಕ್ಷಿತ ಮಹಿಳೆಯಾಗ್ಬಿಡ್ತಾಳೆ."

"ಅವಳನ್ನು ನಾನು ಶಾಲೆಗೆ ಕಳಿಸಿದ್ದೇ ಆ ಉದ್ದೇಶಕ್ಕಾಗಿ. ಸುಂದರ ಮಹಿಳೆಗೆ ಬಂಗಾರದ ಕೊದಲು ಎಲ್ಲಿಂದ್ಬಂತು? ಭೂಮಿಯ ಕಲ್ಮಶವಾದ ನಮ್ಮಿಂದ ಬಂತು. ಬೇರೆಲ್ಲಿಂದ ಬಂತು? ಹೆಚ್ಚು ತಿಳಕೊಂಡಷ್ಟೂ ಹೆಚ್ಚು ಸೊಗಸಾಗಿ ಬೆಳೀತೀಯಾ. ದೇವರು ನಮ್ಮನ್ನು ಎಳೆಯ ರಾಗಿಯೂ ಮೂರ್ಖರಾಗಿಯೂ ಈ ಪ್ರಪಂಚಕ್ಕೆ ಕಳಿಸಿದ. ಮುದುಕರಾಗಿಯೂ ಜ್ಞಾನಿಗಳಾ ಗಿಯೂ ಈ ಪ್ರಪಂಚವನ್ನು ನಾವು ಬಿಡಬೇಕೂಂತ ಆತನ ಅಪೇಕ್ಷೆ. ಹೀಗಾಗಿ, ಓದಿ ಕಲಿತುಕೋ ಬೇಕಾದ್ದು ನಮ್ಮ ಜವಾಬ್ದಾರಿ."

ಅವಳು ಮಾತನಾಡಿದಾಗ, ಉಳಿದ ಪ್ರತಿಯೊಬ್ಬರೂ ಮೌನವಾಗುತ್ತಿದ್ದರು. ಖಡಾಖಂಡಿತ ವಾದ ನಿರರ್ಗಳವಾದ ಅವಳ ಮಾತನ್ನು ಶ್ರದ್ಧೆಯಿಂದ ಕೇಳುತ್ತಿದ್ದರು. ಅವಳ ಸಾಮರ್ಥ್ಯ, ಸಹನೆ, ಜಾಣ್ಮೆಗಳ ಬಗೆಗೆ ಅಚ್ಚರಿಪಡುತ್ತ, ಅವಳನ್ನು ಎದುರಲ್ಲೂ ಹೊಗಳುತ್ತಿದ್ದರು, ಬೆನ್ನ ಹಿಂದೆಯೂ ಹೊಗಳುತ್ತಿದ್ದರು. ಆದರೆ, ಅವಳನ್ನು ಅನುಕರಣಮಾಡಲು ಯಾರೂ ಯತ್ನಿಸಲಿಲ್ಲ. ಬೂಟಿನ ತುದಿಗಳನ್ನು ಕತ್ತರಿಸಿ ಜೋಡಿಸಿ ತೊಗಲಿನ ಒಂದು ಬಗೆಯ ಹೊದಿಕೆಗಳನ್ನು, ಮೊಣ ಕೈಗಳವರೆಗೆ ತನ್ನ ತೋಳುಗಳನ್ನು ರಕ್ಷಿಸುವುದಕ್ಕಾಗಿಯೂ ಉಡುಪಿನ ತೋಳುಗಳು ಒದ್ದೆಯಾಗ ದಂತೆ ನೋಡುವುದಕ್ಕಾಗಿಯೂ ಆಕೆ ತಯಾರಿಸಿದಳು. ಅದು ಬಲು ಜಾಣ್ಮೆಯ ಕೆಲಸ ಎಂದು ಎಲ್ಲರೂ ಅಂದರು. ಆದರೆ ಬೇರೆ ಯಾರೂ ಅಂಥದನ್ನೇ ಮಾಡಲಿಲ್ಲ. ನಾನು ಅಂಥವನ್ನು ತಯಾ ರಿಸಿ ತೊಟ್ಟುಕೊಂಡು ಹೋದಾಗ, ಆ ಹೆಂಗಸರು ನನ್ನನ್ನು ನೋಡಿ ನಗೆಯಾಡಿಯೇ ಬಿಟ್ಟರು.

"ಹೊ, ಹೊ! ಹೆಂಗಸಿನಿಂದ ಕಲೀತಿವಾನೆ!" ಎಂದು ಲೇವಡಿ ಮಾಡಿದರು.

ಅಲ್ಲದೆ, ಆಕೆಯ ಮಗಳ ಬಗೆಗೆ ಅವರೆನ್ನುತ್ತಿದ್ದರು.

"ಎಂಥ ಮಹತ್ವದ ಎಳೇ ಕುಮಾರಿ! ಹುಂ. ಸುಶಿಕ್ಷಿತ ಮಹಿಳೆಯರ ಸಂಖ್ಯೆ ಒಂದು ಹೆಚ್ಚಾಗ್ತದೆ. ಏನಂತೆ ಅದರಿಂದ? ತನ್ನ ಅಧ್ಯಯನವನ್ನು ಅವಳು ಪೂರ್ತಿಗೊಳಿಸದೆಯೇ ಇರ ಬಹುದು. ಬಹುಶಃ, ಅದಕ್ಕಿಂತಲೂ ಮೊದಲು ಅವಳು ಸತ್ತೇ ಹೋಗಬಹುದು."

"ವಿದ್ಯಾವತಿಯರಿಗೂ ಬದುಕೇನೂ ಅಷ್ಟು ಸುಲಭವಾಗೋದಿಲ್ಲ. ಬಾಖಿಲೋವರ ಮಗಳಿ ಲ್ವೆ?—ಎಷ್ಟು ದೀರ್ಘಕಾಲ ಅವಳು ಕಲಿತಳೂಂತ ಸ್ವಲ್ಪ ನೋಡಿ. ಕೊನೇಲಿ ಅವಳೇನಾದಳು? ಅಧ್ಯಾಪಿಕೆ. ಒಮ್ಮೆ ಅಧ್ಯಾಪಿಕೆಯಾದಳೂಂದರೆ, ಮುಂದೆ ವೃದ್ಧಕನ್ನಿಕೆಯಾಗಿಯೇ ಉಳೀತಾಳೆ ಅಂತ ಅರ್ಥ."

"ನಿಜ ಹೇಳ್ಲೆ. ಪುಸ್ತಕ ಪಾಂಡಿತ್ಯವಿಲ್ಲದೇ ಇದ್ದರೂ ಗಂಡಸಾದವನು ಹಿಡಕೊಂಡ್ಬಿಡ್ತಾನೆ. ಹಿಡಕೊಳ್ಳೋದಕ್ಕೆ ಏನಾದರೂ ಇರಬೇಕು, ಅಷ್ಟೆ!"

"ಒಬ್ಬ ಹೆಂಗಸಿನ ಮಿದುಳು ಇರೋದು ಅವಳ ತಲೆಯೊಳಗಲ್ಲ!"

ಅಷ್ಟೊಂದು ನಿರ್ಲಜ್ಜವಾಗಿ ತಮ್ಮ ಬಗೆಗೇ ಅವರು ಮಾತನಾಡುತ್ತಿದ್ದುದನ್ನು ಕೇಳ ವಿಚಿತ್ರವೆನಿಸುತ್ತಿತ್ತು, ಅಸಮಾಧಾನವಾಗುತ್ತಿತ್ತು. ಸೈನಿಕರೂ ನಾವಿಕರೂ ಚರಂಡಿ ಅಗೆಯ ವವರೂ ಹೆಂಗಸರ ಬಗೆಗೆ ಹೇಗೆ ಮಾತನಾಡುವರೆಂಬುದನ್ನು ನಾನು ಅರಿತಿದ್ದೆ. ಗಂಡಸರು ಪರಸ್ಪ ರೊಡನೆ ತಮ್ಮ ಪ್ರತಾಪ ಹಾಗೂ ತಾವು ಮೋಸಗೊಳಿಸಿದ ಹೆಂಗಸರ ಸಂಖ್ಯೆಯನ್ನು ಕುರಿ ಬಡಾಯಿಕೊಚ್ಚುತ್ತಿದ್ದುದನ್ನು ನಾನು ಕೇಳಿದ್ದೆ. 'ಲಂಗಗಳ' ಬಗೆಗೆ ಅವರಿಗಿದ್ದ ದ್ವೇಷ ನನ ಅರಿವಾಗುತ್ತಿತ್ತು. ಯಾವನೇ ಗಂಡಸು ತನ್ನ ವಿಜಯಗಳ ಬಗೆಗೆ ಹೇಳುತ್ತಿದ್ದುದನ್ನು ಕೇಳಿದಾ ಆ ಬಡಾಯಿಯ ವೈಖರಿ ಕಂಡು, ಇದರಲ್ಲಿ ಸತ್ಯಕ್ಕಿಂತಲೂ ಅತಿಶಯೋಕ್ತಿಯೇ ಹೆಚ್ಚು—ಎಂ ನಾನು ಯೋಚಿಸುವಂತಾಗುತ್ತಿತ್ತು.

ಅಗಸ ಹೆಂಗಸರು ತಮ್ಮ ಪ್ರಣಯ ಪ್ರಸಂಗಗಳ ವಿಷಯ ಪರಸ್ಪರರಿಗೆ ಹೇಳುತ್ತಿರಲಿಲ್ಲ ಆದರೆ, ಗಂಡಸರ ಬಗೆಗೆ ಅವರು ಮಾತನಾಡಿದಾಗ, ಅದರಲ್ಲಿ ತುಚ್ಛೀಕಾರದ ಪ್ರತೀಕಾರದ ಭಾ ವಿರುತ್ತಿತ್ತು. ಸ್ತ್ರೀಯರು ಗಮನಿಸಬೇಕಾದ ಶಕ್ತಿ ಎಂಬ-ಹೇಳಿಕೆಯನ್ನು ಅದು ಪುಷ್ಟೀಕರಿಸುತ್ತಿತ

ಒಂದು ದಿನ ನತಾಲ್ಯಾ ಅಂದಳು:

"ದಾಟಿ ಮುಂದಕ್ಕೆ ಹೋಗೋದಕ್ಕೆ ಗಂಡಸರು ಎಷ್ಟು ಪ್ರಯತ್ನಪಟ್ಟರೂ ಹೆಂಗಸರಲ್ಲಿ ಖಂಡಿತವಾಗಿಯೂ ಅವರು ವಾಪಸು ಬಂದೇ ಬರ್ತಾರೆ."

ಮುದಿಗೂಬೆಯೊಬ್ಬಳು ಕರ್ಕಶ ಸ್ವರದಲ್ಲಿ ಕೂಗಾಡುತ್ತಾ ಅಂದಳು:

"ಪರಿಪೂರ್ಣ ಸತ್ಯ. ಸನ್ಯಾಸಿಗಳೂ ವಿರಕ್ತರೂ ನಮ್ಮ ಹತ್ತಿರ ಬರೋದಕ್ಕೋಸ್ಕರ ಸ್ವ ದೇವರನ್ನೇ ತ್ಯಜಿಸೋದಿಲ್ವೆ?"

ಶುಚಿಗೊಳಿಸುವ ಹಿಮವೂ ಬಹಳ ಹೊತ್ತು ಇರಲಾರದಂತಹ ಕಂದರದ ತಳದಲ್ಲಿದ್ದ ಹೊಲಸು ಮೂಲೆಯಲ್ಲಿ ಇಂತಹ ಮಾತು; ಅದಕ್ಕೆ ಹಿಮ್ಮೇಳವಾಗಿದ್ದ ಅರಿವೆ ಒಗೆಯುವ ಸ ಗದ್ದಲ; ಎಲ್ಲ ಜನಗಳೂ ಪಂಗಡಗಳೂ ಚಿಮ್ಮುವಂತಹ ಮೂಲದ ಬಗೆಗೆ—ಒಂದು ಮ ರಹಸ್ಯದ ಬಗೆಗೆ—ಅವಮಾನಕರವಾದ ದುಷ್ಟವಾದ ಈ ಮಾತು, ಹೇಸಿಕೆಯ ಭಯಕಂಪನವ ನನ್ನಲ್ಲಿ ಉಂಟುಮಾಡುತ್ತಿದ್ದುವು. ನನ್ನನ್ನು ಎಡೆಬಿಡದೆ ಆವರಿಸುತ್ತಿದ್ದ ಎಲ್ಲ 'ಪ್ರೇಮಪ್ರಸಂ ಗಳಿಂದ, ನನ್ನ ಯೋಚನೆಗಳೂ ಸೂಕ್ಷ್ಮಭಾವಗಳೂ ಮುದುಡುವಂತೆ ಮಾಡುತ್ತಿದ್ದುವು. ನ ಮನಸ್ಸಿನಲ್ಲಿ ಬಹಳ ಕಾಲದವರೆಗೆ, 'ಪ್ರೇಮ'ವನ್ನು ಕುರಿತ ನನ್ನ ಕಲ್ಪನೆ, ಈ ಹೊಲಸಾ ಬೀಭತ್ಸವಾದ ಪ್ರಕರಣಗಳಿಗೆ ನಿಕಟ ವರ್ತಿಯಾಗಿತ್ತು.

ಹೀಗಿದ್ದರೂ, ಅಗಸ ಹೆಂಗಸರ ನಡುವೆ ಕಂದರದಲ್ಲಿ, ಇಲ್ಲವೆ ಅಧಿಕಾರಿಗಳ ಚಾಕರರ ಅಡುಗೆಮನೆಗಳಲ್ಲಿ, ಅಥವಾ ಕೂಲಿಕಾರರ ನಡುವೆ ಕೊಠಡಿಗಳಲ್ಲಿ, ಬದುಕು ಮನೆಯೊಳಗಿ ಜೀವನಕ್ಕಿಂತಲೂ ಅದೆಷ್ಟೋ ಪಾಲು ಹೆಚ್ಚು ಸ್ವಾರಸ್ಯಕರವಾಗಿ ಕಾಣಿಸುತ್ತಿತ್ತು. ಮನೆಯಲ್ಲಿ ದಾದರೋ ಹೆಪ್ಪುಗಟ್ಟಿದಂತಹ ವಾಗ್ವೈಖರಿ, ವಿಚಾರಗಳು, ಸಂಭವಗಳು. ಇವು ನನ್ನ ನೀರಸವಾದ ಸಿಡುಕಿನ ಬೇಸರವನ್ನಲ್ಲದೆ ಬೇರೇನನ್ನೂ ಪ್ರೇರೇಪಿಸುತ್ತಿರಲಿಲ್ಲ. ನನ್ನ ಒಡೆ ರೆಲ್ಲರ ಬದುಕು ವಿಷವರ್ತುಲವಾಗಿ ಚಲಿಸುತ್ತಿತ್ತು. ತಿನ್ನುವುದು, ನಿದ್ದೆಹೋಗುವುದು, ಕಾ ಬೀಳುವುದು, ಪುನಃ ತಿಂದು ನಿದ್ರಿಸಲು ಗಡಿಬಿಡಿಮಾಡುತ್ತ ಸಿದ್ಧರಾಗುವುದು. ಅವರು ಸ ಕಾಲವೂ ಪಾಪ ಮತ್ತು ಸಾವಿನ ಬಗೆಗೇ ಮಾತನಾಡುತ್ತಿದ್ದರು. ಬೀಸುವಕಲ್ಲಿನ ಸುತ್ತ

ಕಾಳು ಮುತ್ತಿಕೊಳ್ಳುವಂತೆ, ಸುಚ್ಚುನೂರಾಗುವ ಭೀಕರ ನಿರೀಕ್ಷೆಯಲ್ಲಿ, ಈ ಭಯಗಳ ಸುತ್ತಲೂ ಅವರು ಅಂಟಿಕೊಳ್ಳುತ್ತಿದ್ದರು.

ಬಿಡುವಿನ ವೇಳೆಯಲ್ಲಿ, ನಾನು ಹೊರಗೆ ಶೆಡ್ಡಿಗೆ ಹೋಗಿ, ಒಂಟಿಯಾಗಿಯೇ ಇರುವುದ ಕ್ಕೋಸ್ಕರ ಕಟ್ಟೆಗೆ ಸೀಳುತ್ತಿದ್ದೆ. ಆದರೆ, ಏಕಾಂತ ಸಾಧಾರಣವಾಗಿ ನನಗೆ ಸಿಗುತ್ತಲೇ ಇರ ಲಿಲ್ಲ. ಯಾಕೆಂದರೆ, ಅಧಿಕಾರಿಗಳ ಚಾಕರರು ಅಲ್ಲಿಗೆ ಬಂದು, ನಮ್ಮ ಅಂಗಳದಲ್ಲಿದ್ದ ಜನರ ಬಗೆಗೆ ಮಾತನಾಡತೊಡಗುವುದು ಖಂಡಿತವಾಗಿತ್ತು.

ಹೆಚ್ಚಿನ ವೇಳೆ ಯೆರ್ಮೋಖಿನ್‌ನಾಗಲೀ ಸಿದೊರೋವ್ ಆಗಲೀ ನನ್ನನ್ನು ಸೇರುತ್ತಿ ದ್ದರು. ಮೊದಲಿನವನು ಎತ್ತರದ ಕುಸಿದ ಭುಜಗಳ ಮನುಷ್ಯ. ಕಾಲುಗಾದವನು. ಸಣ್ಣ ತಲೆ. ಮಂಜುಕವಿದಂತಿದ್ದ ಕಣ್ಣುಗಳು. ಪೂರ್ತಿಯಾಗಿ ದಪ್ಪನೆಯ ಬಳಬಾದ ಸ್ನಾಯು ಗಳಿಂದಲೆ ಹೆಣೆದ ಹಾಗಿತ್ತು ದೇಹ. ಅವನು ಸೋಮಾರಿಯಾಗಿದ್ದ. ಪರಮಾವಧಿ ಮೂರ್ಖ ನಾಗಿದ್ದ. ಅವನ ಚಲನವಲನಗಳು ನಿಧಾನವಾಗಿರುತ್ತಿದ್ದುವು, ಅಡ್ಡಾದಿಡ್ಡಿಯಾಗಿರುತ್ತಿದ್ದುವು. ಹೆಂಗಸೊಬ್ಬಳ ಮೇಲೆ ಕಣ್ಣು ನೆಟ್ಟಿತೆಂದರೆ, ಅವಳ ಪಾದಗಳಿಗೆ ಬೀಳುವನೇನೋ ಎನ್ನುವಂತೆ ಎಡವಿ ಮುಂದಕ್ಕೆ ಎರಗುತ್ತಿದ್ದ. ಅಡುಗೆಯವರನ್ನೂ ಪರಿಚಾರಿಕೆಯರನ್ನೂ ಆತ ಜಯಿಸುತ್ತಿದ್ದ ವೇಗ, ನಮ್ಮ ಅಂಗಳದ ಯಾವ ಗಂಡಸರಿಗೂ ಅರ್ಥವಾಗುತ್ತಿರಲಿಲ್ಲ. ಎಲ್ಲರೂ ಅವನ ಬಗೆಗೆ ಅಸೂಯೆಪಡುತ್ತಿದ್ದರು. ಆತನ ಕರಡಿಯಂತಹ ಸಾಮರ್ಥ್ಯದ ವಿಷಯದಲ್ಲಿ ಭಯಪಡುತ್ತಿದ್ದರು. ಸಿದೊರೊವ್ ತುಲಾ ಪ್ರದೇಶದವನು. ತೆಳ್ಳಗಿನ ಸಣಕಲ. ಯಾವಾಗಲೂ ವ್ಯಥೆ ತುಂಬಿದ ಮುಖಭಾವ. ಮಾತು ಮೆತ್ತಗೆ. ಅಳುಕುತ್ತ ಅಳುಕುತ್ತ ಕೆಮ್ಮುತ್ತಿದ್ದ. ಅವನ ಕಣ್ಣುಗಳು ಮಿಣಿಮಿಣಿ ಬೆಳಕಿನಿಂದ ಉರಿಯುತ್ತಿದ್ದುವು. ಕತ್ತಲ ಮೂಲೆಗಳೆಡೆಗೆ ಆತ ನೋಡುತ್ತಲೇ ಇದ್ದ. ತಗ್ಗಿಸಿದ ಧ್ವನಿಯಲ್ಲಿ ಮಾತನಾಡುತ್ತಿದ್ದಾಗ, ಇಲ್ಲವೆ ಮೌನವಾಗಿ ಕುಳಿತಿದ್ದಾಗ, ಕಣ್ಣು ಗಳನ್ನು ಅತ್ಯಂತ ಕತ್ತಲಾಗಿದ್ದ ಮೂಲೆಗೇ ಅಚಲವಾಗಿ ನೆಟ್ಟಿರುತ್ತಿದ್ದ.

"ನೀನು ಏನನ್ನು ನೋಡ್ತಿದೀಯಾ?"

"ಪ್ರಾಯಶಃ ಒಂದು ಇಲಿ ಹೊರ ಬೀಳಬಹುದು. ಇಲಿಗಳನ್ನು ನಾನು ಇಷ್ಟಪಡ್ತೀನಿ. ವೇಗವಾದ ಶಾಂತವಾದ ಪುಟ್ಟ ಪ್ರಾಣಿಗಳು."

ತಮ್ಮ ಪ್ರೇಯಸಿಯರಿಗೋ ಇಲ್ಲವೆ ಹಳ್ಳಿಯಲ್ಲಿರುವ ತಮ್ಮ ಕುಟುಂಬಗಳಿಗೋ ಕಾಗದ ಬರೆಯಲು ಆ ಚಾಕರರಿಗೆ ನಾನು ನೆರವಾಗುತ್ತಿದ್ದೆ. ಹಾಗೆ ಬರೆದುಕೊಡುವುದು, ಅದರಲ್ಲೂ ವಿಶೇಷವಾಗಿ ಸಿದೊರೋವನಿಗೆ ನೆರವಾಗುವುದು, ಹರ್ಷದಾಯಕವಾಗಿತ್ತು. ಪ್ರತಿ ಶನಿವಾರ, ತುಲಾದಲ್ಲಿದ್ದ ತನ್ನ ತಂಗಿಗೆ, ಆತ ಬರೆಯುತ್ತಿದ್ದ.

ನನ್ನನ್ನು ತನ್ನ ಅಡುಗೆಮನೆಗೇ ಆತ ಆಹ್ವಾನಿಸಿ, ಮೇಜಿನ ಬಳಿ ನನ್ನ ಪಕ್ಕದಲ್ಲಿ ಕುಳಿತು, ನುಣ್ಣನೆ ಕೂದಲು ಕತ್ತರಿಸಿದ್ದ ತಲೆಯನ್ನು ವೇಗವಾಗಿ ಉಜ್ಜುತ್ತಾ, ನನ್ನ ಕಿವಿಯಲ್ಲಿ ಪಿಸುನುಡಿ ಯುತ್ತಿದ್ದ.

"ಹುಂ, ಶುರುಮಾಡೋಣ. ಮೊದಲು—ಮಾಮೂಲು ಪ್ರಕಾರ. 'ಅತ್ಯಂತ ಗೌರವಾನ್ವಿತ ತಂಗಿ! ವರ್ಷ ವರ್ಷಗಳವರೆಗೆ ನಿನಗೆ ಒಳ್ಳೇ ಆರೋಗ್ಯಭಾಗ್ಯ ಲಭಿಸಲಿ'—ಇತ್ಯಾದಿ. ಮುಗಿ ಯಿತೆ? ಒಳ್ಳೇದು. ಈಗ ಬರಿ: 'ನೀನು ಕಳಿಸಿದ ರೂಬಲು ತಲಪಿತು. ಆದರೆ ನೀನು ಹಾಗೆಲ್ಲಾ

ಮಾಡಬಾರದು. ನಿನಗೆ ನಾನು ಬಹಳ ಉಪಕೃತ. ನನಗೆ ಏನೂ ಬೇಕಾಗಿಲ್ಲ. ನಾವು ಸುಖವಾಗಿದೇವೆ.' ನಾವು ಏನೇನೂ ಸುಖವಾಗಿಲ್ಲ. ನಾಯಿಗಳ ಒಂದು ಹಿಂಡಿನ ಹಾಗೆ ಜೀವಿಸ್ತಿದೇವೆ. ಆದರೆ, ಅವಳಿಗೆ ಅದನ್ನು ತಿಳಿಸಬೇಕಾದ ಅಗತ್ಯವಿಲ್ಲ. ಬರೆ: 'ನಾವು ಸುಖವಾಗಿದೇವೆ.' ಅವಳಿನ್ನೂ ತೀರಾ ಚಿಕ್ಕವಳು. ಹದಿನಾಲ್ಕೇ ವರ್ಷ ವಯಸ್ಸು. ಪ್ರತಿಯೊಂದೂ ಅವಳಿಗೆ ಯಾಕೆ ತಿಳಿದಿರಬೇಕು?....ಮುಂದೆ, ನೀನು ಕಲಿತಿರೋ ಹಾಗೆ ಬರಕೊಂಡು ಹೋಗು."

ನನ್ನ ಎಡಭುಜದ ಮೇಲೆ ಬಾಗಿ, ಬಿಸಿಯಾದ ವಾಸನೆಯ ಉಸಿರನ್ನು ನನ್ನ ಮುಖಕ್ಕೆ ಬಿಡುತ್ತಾ, ಎಡೆಬಿಡದೆ ಪಿಸುನುಡಿಯುತ್ತಿದ್ದ:

"ತಬ್ಬಿಕೊಳ್ಳೋದಕ್ಕೆ, ಎದೆ ಮುಟ್ಟೋದಕ್ಕೆ ಅಥವಾ ಬೇರೇನಾದರೂ ಮಾಡೋದಕ್ಕೆ ಹುಡುಗರಿಗೆ ಬಿಡ್ಕೊಡದೂಂತ ಅವಳಿಗೆ ತಿಳಿಸು. ಹೂಂ. ಬರೆ: 'ಯಾವನಾದರೂ ನಿನ್ನ ಜತೆ ನಯವಾಗಿ ಮಾತನಾಡಿದರೆ, ಅವನನ್ನು ನಂಬಬೇಡ. ನಿನಗೆ ಮೋಸಮಾಡಿ ನಿನ್ನನ್ನು ದುರ್ಗತಿಗೆ ಇಳಿಸೋದನ್ನೇ ಅವನು ಅಪೇಕ್ಷಿಸ್ತಾನೆ!"

ಕೆಮ್ಮದೇ ಇರಲು ಆತ ಮಹಾಪ್ರಯತ್ನ ಮಾಡುತ್ತಿದ್ದ. ಬೂದು ಬಣ್ಣದ ಅವನ ಮುಖ ಕಡುಗೆಂಪಾಗುತ್ತಿತ್ತು. ಕೆನ್ನೆಗಳು ಉಬ್ಬುತ್ತಿದ್ದುವು. ಕಣ್ಣುಗಳಲ್ಲಿ ಕಂಬನಿ ತುಂಬುತ್ತಿತ್ತು. ಕುಳಿತಲ್ಲೇ, ನನಗೆ ಢಿಕ್ಕಿಹೊಡೆಯುತ್ತ, ಆತ ಮತ್ತಷ್ಟು ಬಾಗುತ್ತಿದ್ದ:

"ನೀನು ನನ್ನ ತೋಳನ್ನು ತಳ್ತಿದೀಯಾ!"

"ಇರಲಿ, ಇರಲಿ. ನೀನು ಮುಂದುವರಿಸು, ಬರೆ: 'ಎಲ್ಲರಿಗಿಂತಲೂ ಹೆಚ್ಚಾಗಿ ಸುಶಿಕ್ಷಿತ ಸದ್ಗೃಹಸ್ಥರ ವಿಷಯದಲ್ಲಿ ಎಚ್ಚರದಿಂದಿರು. ಅವರೆಲ್ಲಾ ಮೊದಲಸಲಕ್ಕೇ ಒಬ್ಬ ಹುಡುಗೀನ ಪುಸಲಾಯಿಸಿ ಬಿಡ್ತಾರೆ. ಹೇಗೆ ಮಾತನಾಡಬೇಕು ಅನ್ನೋದು ಅವರಿಗೆ ಗೊತ್ತಿದೆ. ಏನನ್ನು ಬೇಕಾದರೂ ಅವರು ಹೇಳಬಲ್ಲರು. ಒಮ್ಮೆ ಅವರನ್ನು ನೀನು ನಂಬಿದೆ ಎಂದರೆ, ಮುಂದೆ ವೇಶ್ಯಾವಾಟವೊಂದೇ ನಿನಗೆ ಗತಿ. ನೀನು ಒಂದು ರೂಬಲು ಉಳಿಸಿದೆಯೆಂದರೆ, ಅದನ್ನು ಧರ್ಮಗುರುವಿಗೆ ಕೊಡು. ಅವನು ಒಳ್ಳೆಯವನಾಗಿದ್ದರೆ ನಿನಗೋಸ್ಕರ ಅದನ್ನು ತೆಗೆದಿಡ್ತಾನೆ. ಆದರೆ, ಅದಕ್ಕಿಂತಲೂ ನೆಲದಲ್ಲಿ ಎಲ್ಲಾದರೂ ಹುಗಿದಿಡೋದು ಮೇಲು. ಹುಗಿಯುವಾಗ ಯಾರೂ ನೋಡ್ತಿಲ್ಲಾಂತ ಖಂಡಿತ ಮಾಡ್ಕೊ. ಜಾಗ ಯಾವುದೂಂತ ನೆನಪಿಟ್ಕೊ."

ಮೇಲ್ಗಡೆ ಇದ್ದ ಪುಟ್ಟ ಕಿಟಿಕಿಯ ಸಂದಿಕೀಲಿಗಳ ಕರ್ಕಶ ಸದ್ದಿನಲ್ಲಿ, ಮುಳುಗಿ ಹೋಗುತ್ತಿತ್ತು ಆತನ ಪಿಸುಮಾತು. ಅವನ ಆ ಧ್ವನಿಗೆ ಕಿವಿಗೊಡುವುದು ಬಲು ಯಾತನಾಮಯವಾಗಿತ್ತು. ಕರಿ ತುಂಬಿದ ಒಲೆಯ ಕಡೆಗೂ ನೊಣದ ಕಲೆಗಳಿದ್ದ ಸಣ್ಣ ಕಪಾಟದ ಕಡೆಗೂ ದೃಷ್ಟಿ ಬೀರಿದೆ. ಬಣ್ಣಿಸಲಾಗದಷ್ಟು ಹೊಲಸಾಗಿತ್ತು ಅಡುಗೆ ಮನೆ. ತುಂಬ ತಗಣೆಗಳು, ಎಲ್ಲಿ ನೋಡಿದರೂ ಹೊಗೆ, ಚೆಲ್ಲಿದ ಸೀಮೆಎಣ್ಣೆ, ಕರಿದಕೊಬ್ಬು. ಜೊಂಡುಗಗಳು, ಒಲೆಯ ಮೇಲೂ ಜ್ವಾಲೆಗಳ ನಡುವೆಯೂ ಹರಿದಾಡುತ್ತಿದ್ದುವು. ನನ್ನ ಆತ್ಮ ಏಕಾಂಗಿಯಾಗಿ ಸಂಕಟಕ್ಕೊಳಗಾಗಿತ್ತು. ಆ ಬಡ ಸೈನಿಕನಿಗಾಗಿಯೂ ಅವನ ತಂಗಿಗಾಗಿಯೂ ಅಳುವುದಕ್ಕೂ ನಾನು ಸಿದ್ಧನಾಗಿದ್ದೆ. ಆ ರೀತಿ ಬದುಕುವುದು ಹೇಗೆ ಸಾಧ್ಯವಿತ್ತು?

ಸಿದೊರೋವನ ಪಿಸುಮಾತಿನ ಕಡೆಗೆ ಲಕ್ಷ್ಯವನ್ನೇ ಕೊಡದೆ, ಯಾವಾಗಲೂ ನಾನು ಬರೆಯುತ್ತ ಹೋದೆ. ಬದುಕು ಎಷ್ಟೊಂದು ನೀರಸವಾಗಿದೆ, ಯಾತನಾಮಯವಾಗಿದೆ-ಎಂಬುದನ್ನು

ನಾನು ಬರೆದೆ. ಒಮ್ಮೆ ಆತ ನಿಟ್ಟುಸಿರುಬಿಟ್ಟು ನನ್ನೊಡನೆ ಅಂದ:

"ಬಹಳ ಬರೆದೆ. ಉಪಕಾರವಾಯ್ತು. ಯಾತರ ವಿಷಯದಲ್ಲಿ ಹೆದರಿಕೆಯಿಂದಿರಬೇಕೂಂತ ಈಗ ಅವಳಿಗೆ ಗೊತ್ತಾದೀತು."

ಸ್ವತಃ ನನಗೇ ಹಲವಾರು ವಿಷಯಗಳ ಬಗೆಗೆ ಭಯವಿದ್ದರೂ ಕೂಡಾ, "ಯಾವುದಕ್ಕೂ ಮನುಷ್ಯ ಹೆದರಲೇಬಾರದು," ಎಂದು ಸಿಟ್ಟಿನಿಂದ ಪ್ರತಿಯಾಡಿದೆ.

ಸೈನಿಕ ನಕ್ಕು, ತನ್ನ ಗಂಟಲನ್ನು ಸರಿಪಡಿಸಿದ.

"ಮೂರ್ಖಮಾತು! ಹೆದರದೇ ಇರೋದು ಹೇಗೆ ಸಾಧ್ಯ? ಆ ಶೋಕೀ ಸದ್ಗೃಹಸ್ಥರ ಬಗ್ಗೆ ಏನಂತೀಯಾ? ದೇವರ ವಿಷಯವೇನು? ಬೇರೆ ಎಷ್ಟೋ ವಿಷಯಗಳ ಬಗ್ಗೆ ಏನು?"

ತನ್ನ ತಂಗಿಯಿಂದ ಪತ್ರ ಬಂದೊಡನೆ, ಕಾತರದಿಂದ ಅವನೆನ್ನುತ್ತಿದ್ದ:

"ತಡಮಾಡ್ಬೇಡ. ಬೇಗ ಓದಿ ಹೇಳು."

ನಿರಾಸೆ ಹುಟ್ಟಿಸುವಷ್ಟು ಚುಟುಕಾಗಿದ್ದ, ನೀರಸವಾಗಿದ್ದ, ಓದುವುದೇ ಸಾಧ್ಯವಾಗದಂತಹ ಕೆಟ್ಟ ಅಕ್ಷರದಲ್ಲಿ ಬರೆದಿದ್ದ, ಆ ಕಾಗದವನ್ನು ಮೂರುಸಾರೆ ನನ್ನಿಂದ ಆತ ಓದಿಸುತ್ತಿದ್ದ.

ಆತ ದಯಾಪರ, ಮೃದುಹೃದಯಿ. ಆದರೆ, ಹೆಂಗಸರ ಬಗೆಗೆ ಅವನ ವರ್ತನೆ ಮಾತ್ರ, ಉಳಿದೆಲ್ಲರ ಹಾಗೆಯೇ ಇತ್ತು. ಅಷ್ಟೇ ಒರಟು, ಅಷ್ಟೇ ಅನಾಗರಿಕ. ಆ 'ಪ್ರಸಂಗ'ಗಳು ನನ್ನ ಕಣ್ಣೆದುರಲ್ಲೇ ತೀವ್ರಗತಿಯಿಂದ ರೂಪುಗೊಳ್ಳುತ್ತಿದ್ದುವು. ಸ್ವಯಂಪ್ರೇರಣೆಯಿಂದಲೂ ಅನಪೇಕ್ಷಿತವಾಗಿಯೂ ಅವುಗಳಿಗೆಲ್ಲ ನಾನು ಸಾಕ್ಷಿಯಾಗಿದ್ದೆ. ಸಿದೊರೋವ್ ಸೈನಿಕನ ಕೀನ ಜೀವನವನ್ನು ಕುರಿತ ತನ್ನ ಗೋಳಾಟದಿಂದ ಹೆಂಗಸು ಕನಿಕರಪಡುವಂತೆ ಮಾಡುತ್ತಿದ್ದುದನ್ನೂ ನಟನೆಯ ಬಲವಿನಿಂದ ಅವಳನ್ನು ಮೆಚ್ಚಿಸಿಕೊಳ್ಳುತ್ತಿದ್ದುದನ್ನೂ ನಾನು ಕಾಣುತ್ತಿದ್ದೆ. ಆದರೆ ಮುಂದೆ, ಯೆರ್ಮೋಖಿನ್‌ನೊಡನೆ ತನ್ನ ವಿಜಯದ ಬಗೆಗೆ ಹೇಳುವಾಗ, ಅವೇ ಆಗ ಕಹಿಗುಟುಕನ್ನೇನೋ ಕುಡಿದವನಂತೆ ಅವನು ಎಂಜಲು ಉಗುಳಿ ಮುಖಸೊಟ್ಟಗೆ ಮಾಡುತ್ತಿದ್ದ. ಇದರಿಂದ ನನಗೆ ಅತೀವ ಸಂಕಟವಾಗುತ್ತಿತ್ತು. ಅವರೆಲ್ಲ ಸುಳ್ಳಾಡುತ್ತಿದ್ದುದು, ಹೆಂಗಸರನ್ನು ಮೋಸಗೊಳಿಸಿ ಅವರನ್ನು ನಗೆಗೀಡು ಮಾಡುತ್ತಿದ್ದುದು, ಒಬ್ಬರು ಇನ್ನೊಬ್ಬರಿಗೆ ಕೈವಾಟಿಸುತ್ತಿದ್ದುದು, ಕೆಲವೇಳೆ ಅವರಿಗೆ ಹೊಡೆಯುತ್ತಿದ್ದುದು ಕೂಡಾ—ಯಾಕೆಂದು ಅವನನ್ನು ನಾನು ಕೇಳಿದೆ.

ಆತ ಸುಮ್ಮನೆ ಮೃದುವಾಗಿ ನಕ್ಕು, ನುಡಿದ:

"ಇಂಥವಕ್ಕೆಲ್ಲಾ ನೀನು ಲಕ್ಷ್ಯ ಕೊಡಲೇಬೇಡ. ಇದೆಲ್ಲಾ ಕೆಟ್ಟದು, ಪಾಪ ಕೂಡಾ. ನೀನು ತೀರಾ ಚಿಕ್ಕವನು. ಇದನ್ನೆಲ್ಲಾ ತಿಳಕೊಳ್ಳೋ ವಯಸ್ಸಲ್ಲ ನಿನ್ನದು."

ಆದರೆ ಒಂದು ದಿನ, ಹೆಚ್ಚು ನಿರ್ದಿಷ್ಟವಾದ, ಎಂದೂ ನಾನು ಮರೆಯಲಾಗದಂತಹ, ಉತ್ತರವನ್ನು ಅವನಿಂದ ಪಡೆಯಲು ನಾನು ಸಮರ್ಥನಾದೆ.

ಕಣ್ಣುಮಿಟಿಕಿಸಿ, ಕೆಮ್ಮಿ, ಅವನೆಂದ:

"ನಾನು ಮೋಸಗೊಳಿಸ್ತಿದೀನಿ ಅಂತ ಅವಳಿಗೆ ತಿಳೀದು ಅಂದ್ಕೊಂಡೆಯಾ? ಅವಳಿಗೆಲ್ಲಾ ಗೊತ್ತಿದೆ! ತನ್ನನ್ನು ನಾನು ಮೋಸಗೊಳಿಸಬೇಕೂಂತಲೇ ಅವಳ ಅಪೇಕ್ಷೆ. ಅಂಥ ಸಂಗತಿಗಳ ಬಗ್ಗೆ ಎಲ್ಲರೂ ಸುಳ್ಳಾಡ್ತಾರೆ. ಅವರಿಗೆಲ್ಲಾ ನಾಚಿಕೆ. ಯಾಕೆಂದರೆ, ಯಾರೂ ಯಾರನ್ನೂ ವಾಸ್ತವ

ವಾಗಿ ಪ್ರೀತಿಸೋದಿಲ್ಲ. ಇದನ್ನೆಲ್ಲಾ ಅವರು ಮಾಡೋದು ತಮಾಷೆಗೆ ಇದು ಬಹಳ ಲಜ್ಜಾಸ್ಪದ ವಾದ ವಿಷಯ. ಸ್ವಲ್ಪ ತಾಳು. ಸ್ವತಃ ನೀನಾಗಿಯೇ ಕಲಿತ್ಕೊಳ್ಳುವಿಯಂತೆ. ಅದನ್ನು ನೀನು ರಾತ್ರೆ ಮಾಡಬೇಕಾಗ್ತದೆ. ಅಥವಾ, ಹಗಲಾದರೆ, ದಾಸ್ತಾನು ಕೋಣೆಯಂತಹ ಯಾವುದಾದರೂ ಕತ್ತಲೆ ಮೂಲೇಲಿ ಅವಿತುಕೊಂಡು ಮಾಡಬೇಕಾಗ್ತದೆ. ದೇವರು, ಆದಮನ್ನೂ ಈವಳನ್ನೂ ಸ್ವರ್ಗದಿಂದ ಓಡಿಸಿದ್ದು ಇದಕ್ಕಾಗಿಯೇ. ಜನರೆಲ್ಲಾ ದುಃಖಿಗಳಾಗಿರುವುದೂ ಈ ಕಾರಣ ದಿಂದಲೇ."

ಇದನ್ನು ಆತ ಎಷ್ಟೊಂದು ಚೆನ್ನಾಗಿ, ಎಷ್ಟೊಂದು ವ್ಯಥೆಯಿಂದ, ಎಷ್ಟೊಂದು ಪಶ್ಚಾತ್ತಾಪ ಭಾವದಿಂದ ಹೇಳಿದನೆಂದರೆ, ಅದು ಆತನ ಎಲ್ಲ 'ಪ್ರಕರಣ'ಗಳಿಗೂ ಪರಿಹಾರದಂತಿತ್ತು. ಯೆರ್ಮೋಖಿನನ ಜತೆ ಇದ್ದುದಕ್ಕಿಂತಲೂ ಅವನೊಡನೆ ನಾನು ಹೆಚ್ಚು ಸ್ನೇಹದಿಂದಿದ್ದೆ. ಯೆರ್ಮೋಖಿನನನ್ನು ನಾನು ದ್ವೇಷಿಸುತ್ತಿದ್ದೆ. ಅವನಿಗೆ ಹಿಂಸೆ ಕೊಡಲು, ಅವನನ್ನು ಅವಹೇಳ ನಕ್ಕೆ ಗುರಿಮಾಡಲು, ಪ್ರತಿಯೊಂದು ರೀತಿಯಲ್ಲೂ ನಾನು ಯತ್ನಿಸುತ್ತಿದ್ದೆ. ನನ್ನ ಯತ್ನಗಳು ಜಯಪ್ರದವಾಗುತ್ತಿದ್ದುವು. ಎಷ್ಟೋವೇಳೆ ಘಾಸಿಪಡಿಸುವ ಉದ್ದೇಶದಿಂದ, ಅಂಗಳದಲ್ಲಿ ನನ್ನನ್ನು ಆತ ಬೆನ್ನಟ್ಟುತ್ತಿದ್ದ. ಆದರೆ ಸಾಧಾರಣವಾಗಿ, ಆತ ಚುರುಕಾಗಿರದ ಪ್ರಯುಕ್ತ ಆ ಯತ್ನಗಳು ವಿಫಲವಾಗುತ್ತಿದ್ದುವು.

"ಅದು ನಿಷಿದ್ಧವಾದದ್ದು," ಎಂದ ಸಿದೊರೋವ್

'ಅದು' ನಿಷಿದ್ಧವಾದುದೆಂಬುದು ನನಗೆ ಗೊತ್ತಿತ್ತು. ಆದರೆ, ಮಾನವಕೋಟಿಯ ದುಃಖಕ್ಕೆಲ್ಲ ಅದೇ ಕಾರಣವೆಂದು ನಂಬಲು ನಾನು ಸಿದ್ಧನಿರಲಿಲ್ಲ. ಯಾಕೆಂದರೆ, ಅನೇಕವೇಳೆ, ಅನುರಕ್ತ ರಾಗಿದ್ದ ಜನರ ಕಣ್ಣುಗಳಲ್ಲಿ ಅಸಾಧಾರಣವಾದ ಭಾವವನ್ನು ನಾನು ಕಂಡಿದ್ದೆ. ಪ್ರಣಯಿಗಳು ಅಸಾಮಾನ್ಯವಾದ ಉದಾರಭಾವವನ್ನು ತೋರುವರೆಂಬುದನ್ನು ನಾನು ಅರಿತಿದ್ದೆ. ಪ್ರೇಮಜನ ವಾಗಿ ಹೃದಯಕ್ಕೆ ದೊರೆತ ರಜಾದಿನವನ್ನು ದಿಟ್ಟಿಸುವುದು, ಹಬ್ಬವೆನಿಸುತ್ತಿತ್ತು.

ಆದರೆ ನನಗೆ ನೆನಪಿರುವ ಹಾಗೆ ಆ ಕಾಲದಲ್ಲಿ ಬದುಕು ಮತ್ತಷ್ಟು ನೀರಸವಾಗಿಯೂ ಕ್ರೂರವಾಗಿಯೂ ಬೆಳೆಯುತ್ತಿದ್ದಂತೆ ಅನಿಸುತ್ತಿತ್ತು. ಬದುಕು, ನಾನು ದಿನದಿಂದ ದಿನಕ್ಕೆ ಕಾಣುತ್ತಿದ್ದ ಆಕೃತಿಗಳಲ್ಲೂ ಸಂಬಂಧಗಳಲ್ಲೂ ಮತ್ತೆಂದೂ ಮಾರ್ಪಡದಹಾಗೆ ಘನೀಭವಿಸು ತ್ತಿದ್ದಂತೆ ಕಾಣುತ್ತಿತ್ತು. ದಿನದಿನವೂ ಏಕಪ್ರಕಾರವಾಗಿದ್ದ ಆಗಿನ ಇರುವಿಕೆಗಿಂತ, ನನ್ನನು ಆಗ ಇದಿರ್ಗೊಂಡ ಸ್ಥಿತಿಗತಿಗಳಿಗಿಂತ, ಉತ್ತಮವಾದುದು ಸಾಧ್ಯವೆ—ಎಂಬ ವಿವೇಚನೆಯನು ಕೂಡಾ ಎಂದೂ ನಾನು ಮಾಡಲಿಲ್ಲ.

ಒಮ್ಮೆ ಸೈನಿಕರು ಹೇಳಿದ ಒಂದು ಸಂಗತಿ ಮಾತ್ರ, ನನ್ನ ಹೃದಯವನ್ನು ಆಳವಾ ಕಲಕಿತು.

ಮಹಡಿ ಕಟ್ಟಡಗಳ ಒಂದು ವಸತಿಯಲ್ಲಿ, ಶಹರದ ಅತ್ಯುತ್ತಮ ದರ್ಜಿ ಅಂಗಡಿಯ ಅರಿ ಕತ್ತರಿಸುವ ಉದ್ಯೋಗಿಯೊಬ್ಬ ವಾಸವಾಗಿದ್ದ. ಶಾಂತಸ್ವಭಾವದ, ವಿನಯಶೀಲನಾದ ಮನುಷ್ಯ. ಆತ ರಷ್ಯನ್‌ನಲ್ಲ. ಅವನ ಹೆಂಡತಿ ಸಣ್ಣ ಆಕೃತಿಯ ಹೆಂಗಸು. ಅವಳಿಗೆ ಮಕ್ಕಳಿ ಲ್ಲಿಲ್ಲ. ದಿನವೆಲ್ಲಾ ಆಕೆ ಪುಸ್ತಕ ಓದುತ್ತ ಕಾಲಕಳೆಯುತ್ತಿದ್ದಳು. ನಮ್ಮ ಅಂಗಳದ ಗದ್ದಲ ಮಧ್ಯೆಯೂ ನಮ್ಮ ಮನೆಯಲ್ಲಿ ವಾಸವಾಗಿದ್ದ ಅಷ್ಟೊಂದು ಜನ ಕುಡುಕರ ನಡುವಿನಲ್ಲೂ ಅವ

ಬ್ಬರು ಯಾರಕಣ್ಣಿಗೂ ಬೀಳದೆ ಯಾವ ಸಪ್ಪಳವೂ ಇಲ್ಲದೆ ಇರುತ್ತಿದ್ದರು. ಸ್ನೇಹಿತರನ್ನು ಕರೆದು ವಿನೋದ ಕೂಟಗಳನ್ನು ಅವರು ಏರ್ಪಡಿಸುತ್ತಿರಲಿಲ್ಲ. ರಜಾದಿನಗಳಲ್ಲಿ ರಂಗಮಂದಿರಕ್ಕೆ ಭೇಟಿ ಕೊಡುವುದರ ಹೊರತಾಗಿ ಬೇರೆಲ್ಲಿಗೂ ಅವರು ಹೋಗುತ್ತಿರಲಿಲ್ಲ.

ಗಂಡ ತೀರಾ ಬೆಳಗ್ಗಿನಿಂದ ರಾತ್ರಿ ಬಹಳ ಹೊತ್ತಿನವರೆಗೂ ಹೊರಗೆ ದುಡಿಯುತ್ತಲೇ ಇರುತ್ತಿದ್ದ. ಎಳೆಯ ಹುಡುಗಿಯಂತೆ ಕಾಣಿಸುತ್ತಿದ್ದ ಅವನ ಹೆಂಡತಿ, ವಾರಕ್ಕೆರಡು ಬಾರಿ ಅಪರಾಹ್ನಗಳಲ್ಲಿ ಗ್ರಂಥ ಭಂಡಾರಗಳಿಗೆ ಹೋಗುತ್ತಿದ್ದಳು. ಪುಟ್ಟ ಹೆಜ್ಜೆಗಳನ್ನಿಡುತ್ತ, ತುಸು ಕುಂಟಿ ಕೊಂಡು, ಗಲ್ಲಿಯುದ್ದಕ್ಕೂ ಆಕೆ ಹೋಗುತ್ತಿದ್ದುದನ್ನು ಆಗಾಗ್ಗೆ ನಾನು ನೋಡುತ್ತಿದ್ದೆ. ಅವಳ ಪುಟ್ಟ ಕೈಗಳಿಗೆ ಸೊಗಸಾದ ಹೊದಿಕೆ ಇರುತ್ತಿತ್ತು. ಶಾಲೆಗೆ ಹೋಗುವ ಹುಡುಗಿಯಂತೆ ಚರ್ಮದ ಪಟ್ಟಿಗಳಲ್ಲಿ ಪುಸ್ತಕಗಳನ್ನು ತೂಗಾಡಿಸುತ್ತ ಸಾಗುತ್ತಿದ್ದಳು. ಅಷ್ಟೊಂದು ಸರಳವಾಗಿ, ಪ್ರಫುಲ್ಲಿತಳಾಗಿ, ನೂತನವಾಗಿ, ಸ್ವಚ್ಛವಾಗಿ ಅವಳು ಕಾಣುತ್ತಿದ್ದಳು. ಹಕ್ಕಿಗಿರುವಂತಹ ಮುಖವಿತ್ತು. ವೇಗವಾಗಿ ಚಲಿಸುತ್ತಿದ್ದ ಕಿರಿಯ ಕಣ್ಣುಗಳು. ಒಲೆಯಟ್ಟದ ಮೇಲಿನ ಪಿಂಗಾಣಿ ಬೊಂಬೆಯ ಹಾಗೆ ಸುಂದರವಾಗಿದ್ದಳು. ಬಲಮಗ್ಗುಲಲ್ಲಿ ಆಕೆಗೊಂದು ಪಕ್ಕೆಲುಬು ಇಲ್ಲವೆಂದೂ ಆ ಕಾರಣದಿಂದಲೇ ಅವಳು ಕುಂಟುತ್ತಿದ್ದಳೆಂದೂ ಸೈನಿಕರು ಹೇಳುತ್ತಿದ್ದರು. ಆದರೆ ನನಗೆ, ಅವಳು ಕುಂಟುತ್ತಿದ್ದ ರೀತಿ ಇಷ್ಟವಾಗಿತ್ತು. ನಮ್ಮ ವಠಾರದಲ್ಲಿದ್ದ ಅಧಿಕಾರಿಗಳ ಹೆಂಡತಿಯರಿಗಿಂತ ಬೇರೆಯಾಗಿ ಈಕೆ ಕಾಣಿಸಲು ಆ ಕುಂಟುನಡಿಗೆ ಸಹಾಯಕವಾಗಿತ್ತು. ಕರ್ಕಶಧ್ವನಿಗಳು, ಆಡಂಬರದ ಉಡುಪುಗಳು, ಸದ್ದುಗದ್ದಲಗಳು—ಇಷ್ಟೆಲ್ಲಾ ಇದ್ದರೂ ಆ ಹೆಂಗಸರು ಹಳಬರಾಗಿ ಬಳಲಿದವರಾಗಿ ಕಾಣುತ್ತಿದ್ದರು. ಯಾವುದೋ ಕತ್ತಲಿನ ಕೊಠಡಿಯಲ್ಲಿ ಪರಿತ್ಯಕ್ತ ವಸ್ತುಗಳ ನಡುವೆ ಬಹಳ ಕಾಲದಿಂದ ಬಿದ್ದಿದ್ದು ಮರೆಯಲ್ಪಟ್ಟಿದ್ದ ವಸ್ತುಗಳ ಹಾಗಿದ್ದರು.

ಅರಿವೆ ಕತ್ತರಿಸುವವನ ಆ ಪುಟ್ಟ ಹೆಂಡತಿ ಎಲ್ಲರಂತಿಲ್ಲವೆಂಬುದು, ನೆರೆಹೊರೆಯವರ ಅಭಿಪ್ರಾಯವಾಗಿತ್ತು. ಓದಿ ಓದಿ ಮನಸ್ಸುಕೆಟ್ಟು, ಗೃಹಕೃತ್ಯದ ವಿಚಾರಗಳನ್ನು ನೋಡಿಕೊಳ್ಳುವುದು ಅವಳಿಂದ ಆಗುತ್ತಲೇ ಇಲ್ಲ, ಎಂದು ಅವರು ಹೇಳುತ್ತಿದ್ದರು. ಸಂತೆಯಿಂದ ಸಾಮಗ್ರಿಗಳನ್ನೆಲ್ಲ ಕೊಂಡು ತರುತ್ತಿದ್ದುದು ಗಂಡನೇ. ಅಡುಗೆಯ ಕೆಲಸಕ್ಕೆ, ಗಾತ್ರದೇಹಿಯಾದ ಸಿಡುಕಿನ ವಿದೇಶೀಯ ಹೆಂಗಸೊಬ್ಬಳಿದ್ದಳು. ಅವಳ ಒಂದು ಕಣ್ಣು ನೀರು ಒಸರುತ್ತಿದ್ದ ಕೆಂಗಣ್ಣಾಗಿತ್ತು. ಇನ್ನೊಂದು ಕಣ್ಣಿನ ಜಾಗದಲ್ಲಿ, ನಸುಗೆಂಪಿನ ಕಿರಿಯ ಬಿರುಕೊಂದಿತ್ತು: ಅವಳಿಗೆ ಆಜ್ಞೆ ಈಯುತ್ತಿದ್ದುದೆಲ್ಲ ಗಂಡನೇ. ಆಡುತ್ತಿದ್ದವರ ವರದಿಯ ಪ್ರಕಾರ, ದನದ ಮಾಂಸ ಯಾವುದು ಮಾಸಿನ ತುಣುಕು ಯಾವುದು, ಎಂದು ಪ್ರತ್ಯೇಕಿಸಿ ಹೇಳುವುದಕ್ಕೂ ಮನೆಯೊಡತಿ ಅಸಮರ್ಥಳಾಗಿದ್ದಳು. ಒಮ್ಮೆ, ಒಂದು ಕಾಯಿ ಪಲ್ಯವೆಂದು ಭಾವಿಸಿ ಇನ್ನೊಂದನ್ನು ಕೊಂಡುತಂದು ಸ್ವತಃ ನಗೆಗೀಡಾದಳು.

ಎಷ್ಟೊಂದು ಲಜ್ಜಾಸ್ಪದ ವಿಷಯ—ಕಲ್ಪಿಸಿಕೊಳ್ಳಿ!

ಆ ಮೂವರಿಗೂ ಅವರಿದ್ದ ಮನೆಗೂ ಸಾಮರಸ್ಯವೇ ಇದ್ದಂತಿರಲಿಲ್ಲ. ಚಳಿಗಾಲದ ಹಿಮಗಾಳಿಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ, ಹೊಲಸಾದ, ಗಾಳಿ ಓಡಾಡದ, ಮಾನವನಿವಾಸದೊಳಕ್ಕೆ ಕಿಟಕಿಯ ಮೂಲಕ ಹಾರಿಬಂದ ಹಕ್ಕಿಗಳ ಹಾಗೆ, ಅಪ್ಪಿತಪ್ಪಿ ಅಲ್ಲಿಗೆ ಬಂದು ಬಿದ್ದವರಂತಿದ್ದರು.

ಅರಿವೆ ಕತ್ತರಿಸುವವನ ಆ ಪುಟ್ಟ ಹೆಂಡತಿಯೊಡನೆ, ಅಧಿಕಾರಿಗಳು ಕೆಟ್ಟದಾದ ತುಚ್ಛವಾದ ಆಟ ಆಡುತ್ತಿದ್ದರೆಂದು ಅಧಿಕಾರಿಗಳ ಚಾಕರರು ಆ ಮೇಲೆ ತಿಳಿಸಿದರು. ಹೆಚ್ಚು ಕಡಮೆ ಪ್ರತಿ ದಿನವೂ ಅವರಲ್ಲೊಬ್ಬ ಅವಳಿಗೊಂದು ಕಾಗದ ಕಳುಹುತ್ತಿದ್ದ. ಅದರಲ್ಲಿ, ತನ್ನ ಪ್ರೇಮ ಹಾಗೂ ಹೃದಯವೇದನೆಯ ಬಗೆಗೆ ಹೇಳಿ, ಅವಳ ಸೌಂದರ್ಯವನ್ನು ಮೇರೆ ಮೀರಿ ಹೊಗಳುತ್ತಿದ್ದ. ತನ್ನನ್ನು ನೆಮ್ಮದಿಯಲ್ಲಿ ಇರಗೊಡಬೇಕು; ಅವರ ಯಾತನೆಗೆ ಕಾರಣಳಾದುದಕ್ಕಾಗಿ ತನಗೆ ವಿಷಾದವೆನಿಸುತ್ತದೆ; ಅವರನ್ನು ಬಾಧಿಸುತ್ತಿರುವ ಆಕರ್ಷಣೆಯಿಂದ ಮುಕ್ತಗೊಳಿಸುವಂತೆ ದೇವರನ್ನು ಪ್ರಾರ್ಥಿಸುವೆ-ಎಂದೆಲ್ಲ ಅವಳು ಉತ್ತರವೀಯುತ್ತಿದ್ದಳು. ಅಂತಹ ಉತ್ತರ ಬಂದಾಗ, ಅಧಿಕಾರಿಗಳೆಲ್ಲ ಅದನ್ನು ಒಟ್ಟಾಗಿ ಓದಿ, ಬಿದ್ದು ಬಿದ್ದು ನಗುತ್ತಿದ್ದರು. ಬಳಿಕ ಒಟ್ಟಾಗಿ ಮತ್ತೊಂದು ಕಾಗದವನ್ನು ಬರೆಯುತ್ತಿದ್ದರು. ಅದಕ್ಕೆ ಅವರಲ್ಲಿ ಯಾರಾದರೊಬ್ಬರು ಸಹಿ ಹಾಕುತ್ತಿದ್ದರು.

ಇದನ್ನು ನನಗೆ ತಿಳಿಸುತ್ತ ಚಾಕರರೂ ನಕ್ಕರು; ಆ ಹೆಂಗಸನ್ನು ಬಯ್ದರು.

"ಬುದ್ಧಿಯಿಲ್ಲದ, ಕುಂಟಿಯಾದ, ಪುಟ್ಟ ಮೂರ್ಖಳು," ಎಂದು ಯೆರ್ಮೋಖಿನ್ ದಪ್ಪಗಂಟಲ್ಲಿ ನುಡಿದ.

ಸಿದೊರೋವ್ ಧ್ವನಿಗೂಡಿಸಿದ:

"ಟೋಪಿ ಬೀಳಿಸಿಕೊಳ್ಳೋದು ಎಲ್ಲಾ ಹೆಂಗಸರಿಗೂ ಇಷ್ಟ. ಅವರಿಗೆಲ್ಲಾ ಸರಿಯಾಗಿಯೇ ತಿಳೀತದೆ."

ಅವರು ತನ್ನನ್ನು ಪರಿಹಾಸ್ಯಕ್ಕೆ ಗುರಿಮಾಡುತ್ತಿರುವರೆಂಬುದನ್ನು ಅರಿವೆ ಕತ್ತರಿಸುವವನ ಹೆಂಡತಿ ಮನಗಂಡಿರುವಳೆಂದು, ನಾನು ನಂಬಲಿಲ್ಲ. ಅವಳಿಗೆ ಇದನ್ನು ತಿಳಿಸಲು ನಾನು ನಿರ್ಧರಿಸಿದೆ. ಒಂದು ದಿನ, ಅಡುಗೆಯವಳು ನೆಲಮಾಳಿಗೆಗೆ ಹೋದುದನ್ನು ಕಂಡಾಗ, ಹಿಂದಿನ ಮಹಡಿ ಮೆಟ್ಟಲಿನಿಂದ ಆ ಪುಟ್ಟ ಹೆಂಗಸಿನ ವಸತಿಗೆ ನಾನು ಓಡುತ್ತ ಹತ್ತಿದೆ. ಅಡುಗೆಮನೆಯೊಳಕ್ಕೆ ಕಾಲಿರಿಸಿದೆ. ಅಲ್ಲಿ ಯಾರೂ ಇರಲಿಲ್ಲ. ಊಟದ ಕೊಠಡಿಗೆ ಹೋದೆ. ಅಲ್ಲಿ ದರ್ಜಿಯ ಹೆಂಡತಿ, ಭಾರವಾದ ಬಂಗಾರ ಬಣ್ಣದ ಕಪ್ಪನ್ನು ಒಂದು ಕೈಯಲ್ಲಿ ಹಿಡಿದು, ಇನ್ನೊಂದರಲ್ಲಿ ಒಂದು ಪುಸ್ತಕವನ್ನು ಹಿಡಿದುಕೊಂಡು, ಮೇಜಿನ ಬಳಿ ಕುಳಿತಿದ್ದಳು. ಓಡಿ ಬಂದ ನನ್ನನ್ನು ಕಂಡು, ಭೀತಳಾಗಿ, ಪುಸ್ತಕವನ್ನು ಎದೆಗೆ ಅವಚಿಕೊಂಡು, ಸಣ್ಣ ಸ್ವರದಲ್ಲಿ ಆಕೆ ಕೂಗಿ ನುಡಿದಳು:

"ಯಾರದು? ಆಗಸ್ತಾ! ಯಾರು ನೀನು?"

ಸಿಕ್ಕು ಸಿಕ್ಕಾದ ಗಲಿಬಿಲಿಯ ಪದಗಳನ್ನು ಒಂದೇ ಸಮನೆ ನಾನು ಹೊರಗೆಡವಿದೆ. ಕೈಯಲ್ಲಿದ್ದ ಕಪ್ಪನ್ನು ನನ್ನೆಡೆಗೆ ಅವಳು ಎಸೆಯಬಹುದೆಂಬುದು ನನ್ನ ನಿರೀಕ್ಷೆಯಾಗಿತ್ತು. ಬಾದಾಮಿ ಕಡುಗೆಂಪು ಬಣ್ಣದ ದೊಡ್ಡದೊಂದು ಆರಾಮ ಕುರ್ಚಿಯಲ್ಲಿ ಅವಳು ಕುಳಿತಿದ್ದಳು. ನೀಲಿ ನಿಲುವಂಗಿಯನ್ನು ತೊಟ್ಟಿದ್ದಳು. ಅದರ ಅಂಚಿನಲ್ಲಿ ನೆರಿಗೆ ಇತ್ತು. ಕತ್ತಿನ ಬಳಿಯೂ ಮಣಿಗಂಟುಗಳಲ್ಲೂ ಜರಿ ಇತ್ತು. ಅಲೆಯಲೆಯಾದ ಬಾದಾಮಿ ಕೂದಲು ಭುಜಗಳ ಸುತ್ತಲೂ ಹರಿಯುತ್ತಿತ್ತು. ಇಗರ್ಜಿಯೊಳಗಿನ ರಾಜದ್ವಾರದ ದೇವಕನ್ನಿಕೆಯಂತೆ ಅವಳು ಕಂಡಳು. ಕುರ್ಚಿಯಲ್ಲಿ ಹಿಂದಕ್ಕೆ ಒರಗಿಕೊಂಡು, ತನ್ನ ದುಂಡನೆಯ ಕಣ್ಣುಗಳನ್ನು ನನ್ನ ಮೇಲೆಯೇ ಅವಳು ನೆಟ್ಟಳು. ಆ ದೃಷ್ಟಿಯಲ್ಲಿ ಮೊದಲು ಸಿಟ್ಟಿತ್ತು. ಬಳಿಕ ಬೇಗನೆ, ಅಚ್ಚರಿಯ ಮುಗುಳುನಗೆಯಾಗಿ ಅವಳ ಮುಖಭಾವ ಮೃದುಗೊಂಡಿತು.

ಅವಳಿಗೆ ಎಲ್ಲವನ್ನೂ ಹೇಳಿ ಮುಗಿದ ಮೇಲೆ, ಹೊರಡಲೆಂದು ನಾನು ತಿರುಗಿದೆ.

"ತಡೆ!" ಎಂದು ಅವಳು ಕೂಗಿ ನುಡಿದಳು.

ಕೈಯಲ್ಲಿದ್ದ ಕಪ್ಪನ್ನು ಟ್ರೇಯ ಮೇಲಿರಿಸಿ, ಪುಸ್ತಕವನ್ನು ಮೇಜಿನ ಮೇಲಕ್ಕೆ ಎಸೆದು, ಕೈಗಳನ್ನು ಮಡಚಿ, ಪ್ರಾಯಪ್ರಬುದ್ಧರ ತುಂಬುಗಂಟಲಲ್ಲಿ ಅಂದಳು:

"ಎಂಥ ವಿಚಿತ್ರ ಹುಡುಗ ನೀನು! ಬಾ ಇಲ್ಲಿ."

ನಾನು ಅಳುಕುತ್ತ ಅವಳ ಬಳಿ ಸಾರಿದೆ. ಆಕೆ ನನ್ನ ಕೈಯನ್ನೆತ್ತಿಕೊಂಡು, ತಣ್ಣನೆಯ ಚಿಕ್ಕ ಬೆರಳುಗಳಿಂದ ಅದನ್ನು ತಟ್ಟಿದಳು.

ಆಕೆ ಕೇಳಿದಳು:

"ನನಗೆ ಹೀಗೆ ಹೇಳೂಂತ ಯಾರೂ ನಿನ್ನನ್ನು ಕಳಿಸಿಕೊಟ್ಟಿಲ್ಲ, ಅಲ್ವೆ? ಹೂಂ, ಸರಿ. ನಾನು ನಿನ್ನನ್ನು ನಂಬ್ತೀನಿ. ಬಂದು ಹೇಳಬೇಕೂಂತ ನೀನೇ ಯೋಚಿಸ್ದೆ."

ನನ್ನ ಕೈಯನ್ನು ಬಿಟ್ಟುಕೊಟ್ಟು, ತನ್ನ ಕಣ್ಣುಗಳನ್ನು ಮುಚ್ಚಿಕೊಂಡು, ಮೃದುವಾದ, ನೋವು ತುಂಬಿದ ಧ್ವನಿಯಲ್ಲಿ ಅವಳೆಂದಳು:

"ಇದೀಗ ಆ ಹೊಲಸು ಸೈನಿಕರು ನನ್ನ ವಿಷಯ ಆಡ್ತಿರೋದು, ಅಲ್ಲ!"

"ನೀನು ಇಲ್ಲಿಂದ ಹೊರಟು ಹೋಗೋದು ವಾಸಿ," ಎಂದು ನಾನು ಗಂಭೀರವಾಗಿ ಸಲಹೆ ಇತ್ತೆ.

"ಯಾಕೆ ?"

"ನಿನ್ನ ಸರ್ವನಾಶಕ್ಕೆ ಇವರು ಕಾರಣರಾಗ್ತಾರೆ."

ಅವಳು ಹಿತಕರವಾಗಿ ನಕ್ಕಳು.

"ನಿನಗೆ ಏನಾದರೂ ವಿದ್ಯಾಭ್ಯಾಸ ಆಗಿದೆಯಾ ? ಪುಸ್ತಕಗಳನ್ನು ಓದೋದಕ್ಕೆ ನೀನು ಇಷ್ಟಪಡ್ತೀಯಾ ?" ಎಂದು ಆಕೆ ಕೇಳಿದಳು.

"ಓದೋದಕ್ಕೆ ನನಗೆ ಪುರಸೊತ್ತಿಲ್ಲ."

"ಓದೋದು ಇಷ್ಟವಿದ್ದರೆ ಪುರಸೊತ್ತು ಸಿಕ್ಕಿಯೇ ಸಿಗುತ್ತೆ. ಆಗಲಿ, ನಾನು ನಿನಗೆ ಬಹಳ ಉಪಕೃತೆ."

ಹೆಬ್ಬೆರಳು ಮತ್ತು ತೋರುಬೆರಳ ನಡುವೆ ಒಂದು ಬೆಳ್ಳಿಯ ನಾಣ್ಯ ಇರಿಸಿದ್ದ ತನ್ನ ಪುಟ್ಟ ಕೈಯನ್ನು ಅವಳು ಮುಂದಕ್ಕೆ ಚಾಚಿದಳು. ಈ ಶೀತಲ ಪ್ರತಿಫಲವನ್ನು ಸ್ವೀಕರಿಸಲು ನನಗೆ ನಾಚಿಕೆ ಎನಿಸಿತು. ಆದರೆ ನಿರಾಕರಿಸಲು ನಾನು ಧೈರ್ಯಪಡಲಿಲ್ಲ. ಹೊರಟುಬರುತ್ತ, ಮಹಡಿ ಮೆಟ್ಟಿಲಿನ ಕಂಬದ ಮೇಲೆ ಅದನ್ನು ನಾನು ಇರಿಸಿದೆ.

ನಾನು ಹಿಂತಿರುಗಿ ಬಂದುದು, ಆಳವಾದ, ತೀರಾಹೊಸದಾದ, ಭಾವನೆಯೊಡನೆ. ಹಗಲು ಇದ್ದಕ್ಕಿದ್ದಂತೆ ನನಗೋಸ್ಕರ ಉದಿಸಿತೇನೋ ಎನ್ನುವಂತೆ ಭಾಸವಾಯಿತು. ಅನಂತರ ಸ್ವಲ್ಪ ಕಾಲ, ಆ ವಿಶಾಲವಾದ ಕೊಠಡಿಯನ್ನೂ ದೇವಕನ್ಯೆಯಂತೆ ನೀಲಿಯುಡುಪು ಧರಿಸಿದ್ದ ದರ್ಜಿಯ ಪುಟ್ಟ ಹೆಂಡತಿಯನ್ನೂ ಸ್ಮರಿಸಿಕೊಳ್ಳುವ ಆನಂದದಲ್ಲೇ ನಾನು ಜೀವಿಸಿದೆ. ಅಲ್ಲಿ ಪ್ರತಿಯೊಂದ ರಲ್ಲೂ ಅಪರಿಚಿತ ಸೊಬಗಿತ್ತು. ಅವಳ ಪಾದಗಳಡಿಯಲ್ಲಿ, ದಪ್ಪನೆಯ ಬಂಗಾರ ಬಣ್ಣದ ಕಂಬಳಿ ಹರಡಿತ್ತು. ಚಳಿಗಾಲದ ಹಗಲು, ಆಕೆಯ ಸಾನ್ನಿಧ್ಯದಲ್ಲಿ ತನ್ನನ್ನು ತಾನೇ ಬಿಸಿಗೊಳಿ

ಸುವುದಕ್ಕೆನ್ನುವಂತೆ, ಬೆಳ್ಳಿಬಣ್ಣದ ಕಿಟಕಿಯ ಎಡೆಯಿಂದ ಇಣಿಕಿ ನೋಡುತ್ತಿತ್ತು.

ಅವಳನ್ನು ಮತ್ತೊಮ್ಮೆ ನೋಡಬೇಕೆಂದು ನಾನು ಆಸೆಪಟ್ಟೆ. ನಾನು ಅವಳ ಬಳಿಗೆ ಹೋಗಿ, ಒಂದು ಪುಸ್ತಕವನ್ನು ಕೇಳಿದರೊ?

ನಾನು ಹೋದೆ. ಸರಿಯಾಗಿ ಹಿಂದಿನ ಸಾರೆ ಕಂಡಿದ್ದ ಜಾಗದಲ್ಲೇ ಅವಳನ್ನು ಕಂಡೆ. ಈಗಲೂ ಅವಳ ಕೈಯಲ್ಲೊಂದು ಪುಸ್ತಕವಿತ್ತು. ಆದರೆ ಈಸಲ, ಬಾದಾಮಿ ಬಣ್ಣದೊಂದು ಕರವಸ್ತ್ರದಿಂದ ಕಟ್ಟಲ್ಪಟ್ಟಿತ್ತು ಅವಳ ಮುಖ. ಒಂದು ಕಣ್ಣು ಊದಿಕೊಂಡಿತ್ತು. ಕರಿಯ ಹೊದಿಕೆ ಇದ್ದ ಒಂದು ಪುಸ್ತಕವನ್ನು ನನ್ನ ಕೈಗಿತ್ತು, ಅಸ್ಪಷ್ಟವಾದುದೇನನ್ನೋ ಅವಳು ತೊದಲಿದಳು. ಬೇಸರದಿಂದ ಆ ಪುಸ್ತಕವನ್ನೆತ್ತಿಕೊಂಡು ನಾನು ಮರಳಿದೆ. ಔಷಧಿಗಳ ವಾಸನೆ ಇತ್ತು ಪುಸ್ತಕಕ್ಕೆ. ಮನೆ ಸೇರಿದ ಬಳಿಕ, ಅದನ್ನು ಕಾಗದದಲ್ಲೂ ಸ್ವಚ್ಛವಾದ ಕುಪ್ಪಸದಲ್ಲೂ ಹೊದಿಸಿದೆ. ನನ್ನ ಒಡೆಯರ ಕಣ್ಣಿಗೆ ಬಿದ್ದು ಅವರು ಅದನ್ನು ನಾಶಮಾಡಬಾರದೆಂದು, ಅಟ್ಟದ ಮೇಲೆ ಬಚ್ಚಿಟ್ಟೆ.

ಪೋಷಾಕಿನ ಮಾದರಿಗಳ ಚಿತ್ರವೂ ಪುರವಣಿಗಳೂ ದೊರೆಯುತ್ತಿದ್ದುವೆಂದು, ನನ್ನ ಒಡೆಯರು 'ನಿವಾ' ಪತ್ರಿಕೆಗೆ ಚಂದಾದಾರರಾಗಿದ್ದರು. ಆ ಪತ್ರಿಕೆಯನ್ನು ಅವರೆಂದೂ ಓದುತ್ತಿರಲಿಲ್ಲ. ಬದಲು, ಚಿತ್ರಗಳನ್ನು ನೋಡಿದ ಬಳಿಕ, ಶಯ್ಯಾಗೃಹದಲ್ಲಿ ಪೋಷಾಕು ಕಪಾಟದ ಮೇಲೆ ಇರಿಸುತ್ತಿದ್ದರು. ವರ್ಷದ ಕೊನೆಯಲ್ಲಿ ಅವನ್ನೆಲ್ಲ ಒಟ್ಟಾಗಿ ಸೇರಿಸಿ ಹೊಲಿದು, ಮಂಚದ ಕೆಳಕ್ಕೆ, 'ಪಿಕ್ಚರ್ ರಿವ್ಯೂ'ನ ಮೂರು ಸಂಪುಟಗಳ ಜತೆ ಬಚ್ಚಿಡುತ್ತಿದ್ದರು. ಶಯ್ಯಾಗೃಹದ ನೆಲವನ್ನು ನಾನು ತೊಳೆದಾಗಲೆಲ್ಲ, ಪುಸ್ತಕಗಳು ಕೊಳೆನೀರಿನಿಂದ ತೋಯ್ದುಹೋಗುತ್ತಿದ್ದುವು. ನನ್ನ ಯಜಮಾನ 'ರಷ್ಯನ್ ಕೊರೀಯರ್' ವೃತ್ತಪತ್ರಿಕೆಗೆ ಚಂದಾದಾರನಾಗಿದ್ದ.

ಸಂಜೆಯ ಹೊತ್ತು ಅದನ್ನೋದುತ್ತ ಆತ ಹೇಳುತ್ತಿದ್ದ:

"ಇಂಥದನ್ನೆಲ್ಲ ಅವರು ಯಾಕೆ ಬರೀತಾರೋ ಆ ಪಿಶಾಚಿಗೇ ಗೊತ್ತು. ಓದಿ ಬೇಜಾರು ಬರ್ತದೆ!"

ಶನಿವಾರದಿನ, ಅಟ್ಟದಮೇಲೆ ಬಟ್ಟೆಗಳನ್ನು ಒಣಹಾಕುತ್ತಿದ್ದಾಗ, ನನಗೆ ಪುಸ್ತಕದ ನೆನಪಾಯಿತು. ಅದನ್ನು ಹೊರತೆಗೆದು, ಕಟ್ಟನ್ನು ಬಿಚ್ಚಿ, ಮೊದಲ ಸಾಲನ್ನು ಓದಿದೆ.

"ಮನೆಗಳು ಜನಗಳಿದ್ದ ಹಾಗೆ. ಯಾಕೆಂದರೆ, ಪ್ರತಿಯೊಂದಕ್ಕೂ ತನ್ನದೇ ಆದ ರೇಖಾಶಾಸ್ತ್ರವಿದೆ."

ಈ ಪ್ರಸ್ತಾವನೆಯ ಸತ್ಯ ಕಂಡು ನಾನು ಮೂಕನಾದೆ. ನಾನು ಓದುತ್ತ ಹೋದೆ. ಇಳಿಜಾರು ಛಾವಣಿಯ ಆ ನೇರ ಕಿಟಕಿಯ ಬಳಿ ಕುಳಿತು, ಚಳಿ ಅಸಹನೀಯವಾಗುವವರೆಗೂ ಓದಿದೆ. ಆ ಸಂಜೆ, ನನ್ನ ಮಾಲಿಕರು ಸಾಯಂಪ್ರಾರ್ಥನೆಗೆ ಹೋದಾಗ, ಪುಸ್ತಕವನ್ನು ನಾನು ಅಡುಗೆ ಮನೆಯೊಳಕ್ಕೆ ಒಯ್ದು, ಶರತ್ಕಾಲದ ಹಳದಿ ಎಲೆಗಳಂತೆ ಜೀರ್ಣವಾಗಿದ್ದ ಆ ಪುಟಗಳಲ್ಲಿ ಮೈಮರೆತೆ. ಭಿನ್ನ ಹೆಸರುಗಳಿದ್ದ ಸಂಬಂಧಗಳಿದ್ದ ಬೇರೆಯೇ ಒಂದು ಲೋಕಕ್ಕೆ ಅವು ನನ್ನನ್ನು ಒಯ್ದುವು. ಅಲ್ಲಿ ದಿವ್ಯನಾಯಕಮಣಿಗಳನ್ನೂ ನನಗೆ ಪರಿಚಿತರಾದ ವ್ಯಕ್ತಿಗಳಂತಿದ್ದ ತುಚ್ಛಖಳರನ್ನೂ ನಾನು ಸಂಧಿಸಿದೆ. ಅದು, ಮೊಂತಿಪಿನ್ ಬರೆದಿದ್ದ ದೀರ್ಘವಾದೊಂದು ಕಾದಂಬರಿ. ಜನರಿಂದಲೂ ಸಂಭವಗಳಿಂದಲೂ ತುಂಬಿದ್ದ, ವಿಚಿತ್ರವಾದ, ಚೇತನಾಪೂರ್ಣವಾದ ಬದುಕನ್ನು ಅದು ಚಿತ್ರಿಸು

ತ್ತಿತ್ತು. ಕಾದಂಬರಿಯಲ್ಲಿ ಪ್ರತಿಯೊಂದೂ ಅದ್ಭುತವೆನಿಸುವಷ್ಟು ಸರಳವಾಗಿತ್ತು. ಸಾಲುಗಳ ಮಧ್ಯದಲ್ಲಿ ಮರೆಯಾಗಿದ್ದ ಯಾವುದೋ ಬೆಳಕು ಒಳ್ಳಿತನ್ನೂ ಕೆಟ್ಟುದನ್ನೂ ಬೆಳಗಿದಂತೆ, ಪ್ರೀತಿಸುವುದಕ್ಕೂ ದ್ವೇಷಿಸುವುದಕ್ಕೂ ಓದುಗನಿಗೆ ನೆರವಾದಂತೆ, ಈ ಎಲ್ಲ ಜನರು ಸಿಲುಕಿ ಬಿದ್ದಿದ್ದ ಸನ್ನಿವೇಶಗಳ ಬಲೆಯೊಳಗಿಂದ ಓದುಗನನ್ನು ಮುಂದುಮುಂದಕ್ಕೆ ಒಯ್ದಂತೆ ಅನಿಸುತ್ತಿತ್ತು. ಈಯೊಬ್ಬನಿಗೆ ನೆರವಾಗಬೇಕೆಂಬ, ಆ ಒಬ್ಬನಿಗೆ ಅಡ್ಡಿ ಮಾಡಬೇಕೆಂಬ, ಬಯಕೆಯೊಂದು ಪದೇ ಪದೇ ಉತ್ಪನ್ನವಾಗುತ್ತಿತ್ತು. ಅಷ್ಟೊಂದು ಅನಿರೀಕ್ಷಿತವಾಗಿ ಕಾಣಿಸಿಕೊಂಡಿದ್ದ ಈಯೆಲ್ಲ ಬದುಕು ಇದ್ದುದು ಕಾಗದದ ಹಾಳೆಯ ಮೇಲೆ ಮಾತ್ರ ಎಂಬುದನ್ನು ಓದುಗ ಮರೆತೇ ಬಿಡುತ್ತಿದ್ದ. ಒಂದು ನಿಮಿಷ ಸಂತೋಷ, ಮತ್ತೊಂದು ನಿಮಿಷ ನಿರಾಸೆ. ತುಮುಲದ ಈ ಏರಿಳಿತಗಳಲ್ಲಿ ವಾಸ್ತವವಾಗಿ ಪ್ರತಿಯೊಂದೂ ಮರೆತೇ ಹೋಗುತ್ತಿತ್ತು.

ನನ್ನ ಈ ವಾಚನದಲ್ಲಿ ನಾನು ಎಷ್ಟೊಂದು ತಲ್ಲೀನನಾಗಿದ್ದೆನೆಂದರೆ, ಬಾಗಿಲ ಗಂಟೆ ಬಾರಿಸಿದಾಗ, ಬಾರಿಸುತ್ತಿರುವವರು ಯಾರು-ಯಾಕೆ-ಎಂಬುದೇ ಮೊದಲು ನನಗೆ ತಿಳಿಯದೆ ಹೋಯಿತು.

ಉರಿಯುತ್ತಿದ್ದ ಮೋಂಬತ್ತಿ ಹೆಚ್ಚು ಕಡಮೆ ಮುಗಿದೇ ಹೋಗಿತ್ತು. ಆ ಬೆಳಗ್ಗೆ ನಾನು ತಯಾರಿಸಿದ್ದ ಮೋಂಬತ್ತಿ ಕಡ್ಡಿಗೆ ಹಚ್ಚಿದ್ದುದಂತೂ ಮೇಣವನ್ನು, ದೇವಪ್ರತಿಮೆಯ ದೀಪವನ್ನು ರಿಸುವ ಜವಾಬ್ದಾರಿ ಇದ್ದುದು ನನ್ನಮೇಲೆ. ಆದರೆ ಬತ್ತಿ ಚೌಕಟ್ಟಿನಿಂದ ಹೊರಕ್ಕೆ ಜಾರಿಬಿದ್ದು ಆರಿಹೋಗಿತ್ತು. ನನ್ನ ಪಾತಕದ ಗುರುತುಗಳನ್ನು ಮುಚ್ಚಿಡಲು ಯತ್ನಿಸುತ್ತಾ ನಾನು ಅತ್ತಿತ್ತ ಓಡಾಡಿದೆ. ಪುಸ್ತಕವನ್ನು ಒಲೆಯ ಕೆಳಕ್ಕೆ ತಳ್ಳಿದೆ. ದೀಪವನ್ನು ಸರಿಪಡಿಸಲೆತ್ನಿಸಿದೆ.

ಮಲಗುವ ಕೊಠಡಿಯಿಂದ ಹೊರಕ್ಕೆ ಓಡುತ್ತ ದಾದಿ ಕೂಗಾಡಿದಳು:

"ಕಿವುಡನೇನು ನೀನು? ಗಂಟೆ ಬಾರಿಸ್ತಿರೋದು ಕೇಳಿಸ್ತಾ ಇಲ್ವೆ?"

ನಾನು ತಲೆಬಾಗಿಲ ಕಡೆಗೆ ಧಾವಿಸಿದೆ.

"ನಿದ್ದೆ ಮಾಡ್ತಿದ್ದೆಯೇನು?" ಎಂದು ನನ್ನ ಯಜಮಾನ ಕಟುವಾದ ಸ್ವರದಲ್ಲಿ ಕೇಳಿದ. ನಾನು ಬಾಗಿಲು ತೆರೆಯಲು ತಡಮಾಡಿ, ತಾನು ಚಳಿಹಿಡಿದು ತತ್ತರಿಸಿ ಸಾಯಲು ಕಾರಣನಾದೆನೆಂದು ಅವನ ಹೆಂಡತಿ ಪ್ರಲಾಪಿಸಿದಳು. ಅವನ ತಾಯಿ ನನ್ನನ್ನು ಛೇಡಿಸತೊಡಗಿದಳು. ಅಡುಗೆಮನೆಯನ್ನು ಹೊಕ್ಕೊಡನೆ, ಉರಿದಿದ್ದ ಮೋಂಬತ್ತಿಯನ್ನು ಕಂಡು, ನಾನೇನು ಮಾಡುತ್ತಾ ಇದ್ದೆ ಎಂದು ಕೇಳಿದಳು.

ಪುಸ್ತಕ ಅವಳ ಕೈಗೆ ಬೀಳಬಹುದೆಂಬ ಭಯದಿಂದ ನಾನು ತಣ್ಣಗಾದೆ. ಮಹಾ ಎತ್ತರದಿಂದ ಕೆಳಕ್ಕೆ ಬಿದ್ದು ಮಾತು ಉಡುಗಿ ಹೋದವನಂತೆ ನಿಶ್ಚೇಷ್ಟಿತನಾದೆ. ಅವರೆಲ್ಲ ನನ್ನ ಮೇಲೆ ಕಣ್ಣಿಡದೇ ಇದ್ದರೆ, ಮುಂದೆ ಮನೆಯನ್ನೇ ನಾನು ಸುಟ್ಟುಬಿಡುವುದು ಖಂಡಿತವೆಂದು ಮುದುಕಿ ಬೊಬ್ಬಿಟ್ಟಳು. ನನ್ನ ಯಜಮಾನನೂ ಅವನ ಹೆಂಡತಿಯೂ ಊಟಕ್ಕೆಂದು ಒಳಬಂದಾಗ ಅವಳೆಂದಳು:

"ನೋಡಿ ಸ್ವಲ್ಪ. ಇಡೀ ಒಂದು ಮೋಂಬತ್ತಿಯನ್ನೇ ಅವನು ಉರಿಸಿ ಮುಗಿಸಿದಾನೆ. ಇನ್ನು ಮನೆಯನ್ನೂ ಉರಿಸಿಬಿಡೋದು ಖಂಡಿತ."

ಊಟದ ನಡುವೆ ಆ ನಾಲ್ವರೂ ನನ್ನನ್ನು ಬಯ್ಯುತ್ತಲೇ ಇದ್ದರು. ನನ್ನ ಸ್ವಂತದ ಇಚ್ಛೆಯಿಂದಲೂ ನನಗೆ ತಿಳಿಯದೆಯೂ ನಾನು ಮಾಡಿದ್ದ ಪಾತಕಗಳನ್ನೆಲ್ಲ ನೆನಪು ಮಾಡಿಕೊಟ್ಟರು.

ದುರಂತದಲ್ಲೇ ನನ್ನ ಅವಸಾನವಾದೀತೆಂದು ಎಚ್ಚರಿಸಿದರು. ಆ ಮಾತುಗಳು ದ್ವೇಷದಿಂದಾಗಲೀ ಔದಾರ್ಯದಿಂದಾಗಲೀ ಪ್ರೇರಿತವಾದುದಲ್ಲ, ಬೇಸರ ಕಳೆಯುವುದಕ್ಕಷ್ಟೇ ಅವರು ಮಾತಾಡು ತ್ತಿದ್ದರು—ಎಂಬುದು ನನಗೆ ಗೊತ್ತಿತ್ತು. ಪುಸ್ತಕದೊಳಗಿನ ವ್ಯಕ್ತಿಗಳಿಗೆ ಹೋಲಿಸಿದಾಗ ಇವ ರೆಲ್ಲ ಕ್ಷುಲ್ಲಕರಾಗಿ ಅಲ್ಪರಾಗಿ ಕಂಡರು. ವಿಚಿತ್ರವಾಗಿತ್ತು ಅಂತಹ ತಿಳಿವಳಿಕೆ.

ಉಣ್ಣುವುದು ಮುಗಿದು ಹೊಟ್ಟೆ ಭಾರವಾದಾಗ, ಆಕಳಿಸುತ್ತ ತಮ್ಮ ಹಾಸಿಗೆಗಳ ಕಡೆಗೆ ಅವರು ಹೊರಳಿದರು. ಮುದುಕಿ ದೇವರ ಮುಂದೆ, ದುಷ್ಟವಿಚಾರದ ಪ್ರಲಾಪಗಳನ್ನು ಪ್ರಾರ್ಥ ನೆಯ ರೂಪದಲ್ಲಿ ಸಲ್ಲಿಸಿದ ಬಳಿಕ, ಹರಿದಾಡಿಕೊಂಡು ಒಲೆಯಟ್ಟವನ್ನೇರಿ ಮೌನವಾದಳು. ಅನಂತರ, ಒಲೆಯ ಕೆಳಗಿಂದ ನನ್ನ ಪುಸ್ತಕವನ್ನು ಹೊರತೆಗೆದು, ಕಿಟಕಿಯ ಬಳಿ ಕುಳಿತು ಕೊಳ್ಳಲು ಹೋದೆ. ಇರುಳು ಶುಭ್ರವಾಗಿತ್ತು. ಮೇಲೆ ಹುಣ್ಣಿಮೆಯ ಚಂದ್ರ ಹೊಳೆಯುತ್ತಿದ್ದ. ಆದರೆ, ಹಾಗಿದ್ದರೂ, ಓದಲು ಸಾಧ್ಯವಾಗದಷ್ಟು ಕಿರಿದಾಗಿತ್ತು ಅಕ್ಷರ. ಓದಬೇಕೆಂಬ ನನ್ನ ಬಯಕೆ ಮಾತ್ರ ಅದಮ್ಯವಾಗಿತ್ತು. ಗೋಡೆಕಪಾಟದಿಂದ ಒಂದು ತಾಮ್ರದ ತಟ್ಟೆಯನ್ನು ಹೊರ ತೆಗೆದು, ಅದರಲ್ಲಿ ತಿಂಗಳಬೆಳಕನ್ನು ಹಿಡಿದು ಪುಸ್ತಕದ ಮೇಲಕ್ಕೆ ಹೊರಳಿಸಿದೆ. ಆದರೆ, ಓದು ವುದು ಮತ್ತಷ್ಟು ದುಸ್ತರವಾಯಿತು. ಹೆಚ್ಚು ಕತ್ತಲಾಯಿತು ಅದರಿಂದ. ಬಳಿಕ, ಮೂಲೆಯಲ್ಲಿದ್ದ ಒಂದು ಬೆಂಚಿನ ಮೇಲೆ ನಿಂತು, ದೇವರ ದೀಪದ ಬೆಳಕಿನಲ್ಲಿ ಓದತೊಡಗಿದೆ. ಬಳಲಿಕೆಯಿಂದ ಬೆಂಚಿನ ಮೇಲೆ ಕುಸಿದು ಬಿದ್ದು ನಿದ್ದೆಹೋದೆ. ಮುದುಕಿಯ ಕೂಗಾಟ ಹೊಡೆತಗಳಿಂದ ನನಗೆ ಎಚ್ಚರವಾಯಿತು. ಬರಿಗಾಲಲ್ಲಿ ಅವಳು ಅಲ್ಲಿ ನಿಂತಿದ್ದಳು. ಮೈಮೇಲಿದ್ದುದು ಒಳ ಅರಿವೆ ಮಾತ್ರ. ಸಿಟ್ಟಿನಿಂದ ತಲೆಯನ್ನು ಹೊಯ್ದಾಡಿಸುತ್ತಿದ್ದಳು. ಮುಖ ಕೆಂಪೇರಿತ್ತು ಕೋಪದಿಂದ. ಕೈಯಲ್ಲಿ ನನ್ನ ಪುಸ್ತಕವನ್ನು ಹಿಡಿದುಕೊಂಡು, ಅದರಿಂದ ನನ್ನ ಭುಜಗಳಿಗೆ ಹೊಡೆಯುತ್ತಿದ್ದಳು.

ವಿಕ್ಟರ್ ತನ್ನ ಮಂಚದ ಮೇಲಿಂದಲೆ ರಾಗವೆಳೆದ:

"ಸಾಕಮ್ಮ, ಕೂಗಾಡೋದನ್ನು ನಿಲ್ಸು, ನಿನ್ನನ್ನು ಕಟ್ಟಿಕೊಂಡು ಬದುಕೋದು ಸಾಧ್ಯವೇ ಇಲ್ಲ."

'ಪುಸ್ತಕದ ಗತಿಯಾಯ್ತು—ಇವಳು ಅದನ್ನು ಹರಿದು ಹಾಕೋದೇ ಸರಿ,' ಎಂದು ಕೊಂಡೆ.

ಮಾರನೆಯ ಬೆಳಗ್ಗೆ ಉಪಹಾರದ ಹೊತ್ತಿನಲ್ಲಿ, ನನ್ನಿಂದ ವಿವರಣೆಯನ್ನು ಕೇಳಲಾಯಿತು.

ಕಠಿಣ ಮುಖಭಾವದಿಂದ ನನ್ನ ಯಜಮಾನ ಕೇಳಿದ:

"ಆ ಪುಸ್ತಕ ನಿನಗೆಲ್ಲಿ ಸಿಕ್ತು?"

ಹೆಂಗಸರು, ನನ್ನ ಮೇಲೆರಗಿ ಕೂಗಾಡುವ ವಿಷಯದಲ್ಲಿ ಪರಸ್ಪರ ಸ್ಪರ್ಧಿಸಿದರು. ವಿಕ್ಟರ್ ಪುಸ್ತಕವನ್ನೆತ್ತಿ ಮೂಸಿನೋಡಿದ. ಆತನೆಂದ:

"ಸುಗಂಧದ್ರವ್ಯದ ಪರಿಮಳ ಬರ್‍ತಿದೆ, ದೇವರಾಣೆಯಾಗಿಯೂ!"

ಆ ಪುಸ್ತಕ ಧರ್ಮಗುರುವಿನದೆಂದು ನಾನು ಹೇಳಿದಾಗ, ಅವರು ಆಶ್ಚರ್ಯದಿಂದ ಅದನ್ನು ಪರೀಕ್ಷಿಸಿ ನೋಡಿದರು. ಧರ್ಮಗುರು ಕಾದಂಬರಿಗಳನ್ನು ಓದುವನಲ್ಲಾ ಎಂದು ಸಿಟ್ಟುಬೆಂಕಿ ಯಾದರು. ಏನಿದ್ದರೂ, ಇದರಿಂದ ಅವರು ತುಸು ಶಾಂತವಾಗುವಂತಾಯಿತು. ನನ್ನ ಯಜಮಾನ ಮಾತ್ರ, 'ಓದುವುದು ಅಪಾಯಕರ—ಹಾನಿಕರ!' ಎಂದು ಎಚ್ಚರಿಕೆಯನ್ನೇ ಇತ್ತ.

"ಅವರೇ—ಓದುವವರೇ—ರೈಲುಹಳಿಯನ್ನು ಕಿತ್ತುಹಾಕಿದ್ದು....—ಕೊಲ್ಲೋಕೆ ಯತ್ನಿಸಿದ್ದು."

ಅವನ ಹೆಂಡತಿ ಭೀತಳಾಗಿ ನಡುವೆ ಬಾಯಿ ಹಾಕಿದಳು:

"ಹುಚ್ಚು ಹಿಡಿಯಿತೆ ನಿನಗೆ? ಎಂಥ ವಿಚಾರಗಳನ್ನು ಅವನ ತಲೆಯೊಳಗೆ ತುಂಬ್ತಿದೀಯಾ!"

ಮೊಂತಿಪನನ್ನು ಸೈನಿಕನಲ್ಲಿಗೆ ಒಯ್ದು, ನಡೆದುದೇನೆಂಬುದನ್ನು ಅವನಿಗೆ ತಿಳಿಸಿದೆ. ಸಿದೊರೋವ್ ಮರುಮಾತಿಲ್ಲದೆ ಪುಸ್ತಕವನ್ನೆತ್ತಿಕೊಂಡ. ಸಣ್ಣದೊಂದು ಪೆಟ್ಟಿಗೆಯನ್ನು ತೆರೆದ. ಶುಭ್ರವಾದೊಂದು ಟವಲನ್ನು ತೆಗೆದು, ಪುಸ್ತಕವನ್ನು ಅದರಲ್ಲಿ ಸುತ್ತಿ, ಪೆಟ್ಟಿಗೆಯೊಳಗೆ ಬಚ್ಚಿಟ್ಟ.

ಆತನೆಂದ:

"ಅವರು ಹೇಳಿದ್ದನ್ನೆಲ್ಲಾ ಮನಸ್ಸಿಗೆ ಹಚ್ಚಿಕೋಬೇಡ. ಇಲ್ಲಿಗೆ ಬಂದು ಓದು. ನಾನು ಯಾರಿಗೂ ಹೇಳೋದಿಲ್ಲ. ನಾನು ಮನೇಲಿ ಇಲ್ಲದೇ ಇರುವಾಗ ನೀನು ಬಂದೆ ಅಂದರೆ, ದೇವರ ಪ್ರತಿಮೆಯ ಹಿಂಭಾಗದಿಂದ ಕೀಲಿ ಕೈ ಎತ್ತಿಕೋ. ಪೆಟ್ಟಿಗೆ ತೆರೆದು, ನಿನಗೆ ಪೂರ್ಣತೃಪ್ತಿಯಾಗೋವರೆಗೂ ಓದು."

ಪುಸ್ತಕದ ಬಗೆಗೆ ನನ್ನ ಮಾಲಿಕರು ತೋರಿದ ವರ್ತನೆಯಿಂದಾಗಿ, ಪುಸ್ತಕವನ್ನು ಅತ್ಯಂತ ಮಹತ್ವದ್ದಾಗಿಯೂ ಹೆದರಿಕೆ ಹುಟ್ಟಿಸುವಂತಹ ರಹಸ್ಯವಾಗಿಯೂ ನಾನು ಪರಿಗಣಿಸುವಂತಾಯಿತು. ಕೆಲ 'ಓದುಗರು' ಯಾರನ್ನೋ ಕೊಲ್ಲುವ ಯತ್ನದಲ್ಲಿ ರೈಲುಹಳಿಯನ್ನು ಛೇದಿಸಿದ್ದರೆಂಬ ಸಂಗತಿಯಲ್ಲಿ ನನಗೇನೂ ಆಸಕ್ತಿ ಇರಲಿಲ್ಲ. ಆದರೂ, ಅಪರಾಧ ಕಥನದ ವೇಳೆಯಲ್ಲಿ ಪಾದ್ರಿ ಕೇಳಿದ್ದ ಪ್ರಶ್ನೆ, ನೆಲಮನೆಯಲ್ಲಿ ವಿದ್ಯಾರ್ಥಿ ಓದುತ್ತಿದ್ದುದು, 'ಯೋಗ್ಯ ಪುಸ್ತಕಗಳ' ಬಗೆಗೆ ಸ್ಮುರಿಯ ಪ್ರಸ್ತಾಪ, ಇವೊಂದನ್ನು ನಾನು ಮರೆತೇ ಇರಲಿಲ್ಲ. ಇವಲ್ಲದೆ, ಅಜ್ಜ ಹೇಳಿದುದೊಂದಿತ್ತು: ಕರಾಳ ಪುಸ್ತಕಗಳನ್ನೋದಿ ಮಾಯಾ ಕೃತ್ಯಗಳಲ್ಲಿ ತೊಡಗುತ್ತಿದ್ದ 'ರಹಸ್ಯ ಬಂಧು'ಗಳ ವಿಷಯ. ಅದನ್ನೂ ನಾನು ಮರೆತಿರಲಿಲ್ಲ.

"ಜಾರ್ ಅಲೆಕ್ಸಾಂಡರ್ ಪಾವ್ಲೋವಿಶನ ಘನ ಆಳ್ವಿಕೆಯಲ್ಲಿ, ಸುಸಂಸ್ಕೃತ ಶ್ರೀಮಂತರು ಕರಾಳ ಗ್ರಂಥವಾದಿಗಳ ಜತೆಯಲ್ಲೂ ರಹಸ್ಯಬಂಧುಗಳ ಜತೆಯಲ್ಲೂ ಒಳಸಂಚು ಮಾಡ್ಕೊಂಡು, ರೋಮಿನ ಪೋಪನ ಕೈಗೆ—ಏಸುವಾದಿಗಳ ಕೈಗೆ—ಇಡೀರಷ್ಯದ ಜನತೆಯನ್ನು ಕೊಡೋದಕ್ಕೆ ಹೊರಟರು. ಆಗ ಜನರಲ್ ಆರಕ್ಚೆಯಿವ್ ಮುಂದಕ್ಕೆ ಬಂದ. ಅವರನ್ನೆಲ್ಲ ಹಿಡಿದ. ಬಿರುದು-ಬಾವಲಿ ಸ್ಥಾನಮಾನಗಳನ್ನು ಗಣನೆಗೇ ತರದೆ ಅವರನ್ನೆಲ್ಲ ಸೈಬೀರಿಯಾಕ್ಕೆ ಕಳಿಸಿದ. ಅಲ್ಲಿ ಸಾಮಾನ್ಯ ಕೈದಿಗಳ ಹಾಗೆ ದುಡಿದೂ ದುಡಿದೂ, ಯಾವುದೇ ಹೊಲಸು ಕೊಳೆತು ಹೋಗೋದಿಲ್ವೆ—ಹಾಗೆ ಅವರು ನಾಶವಾಗಿ ಹೋದರು."

'ನಕ್ಷತ್ರ ಚುಕ್ಕೆಗಳಿರೋ ಗ್ರಹಣಮಧ್ಯಭಾಗ,' 'ಜೆರ್ವಾಸ್ಸಿ'—ಈ ಪದಗಳೂ 'ನಮ್ಮ ವಿಷಯಗಳನ್ನು ತಿಳಿಯೋದಕ್ಕೆ ಯತ್ನಿಸ್ತಿರೋ ಅಜ್ಞಾನಿ ಪ್ರಾಣಿಗಳೇ! ನಿಮ್ಮ ಅಲ್ಪ ಮನಸ್ಸುಗಳೆಂದೂ ಅವುಗಳನ್ನು ಲವಲೇಶವೂ ತಿಳಿಯಲಾರವು!' ಎಂಬ ಗಂಭೀರವಾದ ಹೀಗಳೆಯುವ ಮಾತುಗಳೂ ನನಗೆ ನೆನಪಿದ್ದುವು.

ಯಾವುದೋ ಮಹಾರಹಸ್ಯದ ಹೊಸ್ತಿಲಲ್ಲಿ ನಾನಿದ್ದಂತೆ ನನಗೆ ಭಾಸವಾಯಿತು. ಈ ಭಾವನೆಯಿಂದಾಗಿ, ಆವೇಶ ಬಂದವರಂತೆ ನಾನು ಜೀವಿಸಿದೆ. ಅಧಿಕಾರಿಯ ಚಾಕರನ ಆ ಅಡುಗೆಮನೆ

ಯಲ್ಲಿ ಪುಸ್ತಕ ಕಳೆದು ಹೋಗಬಹುದು ಇಲ್ಲವೆ ಹಾಳಾಗಬಹುದು ಎಂಬ ಭಯ ನನಗಿತ್ತು. ನನ್ನನ್ನು ಕಾಡುತ್ತಿದ್ದುದು, ಅದನ್ನು ಬೇಗನೆ ಓದಿ ಮುಗಿಸಬೇಕೆಂಬ ಆಕಾಂಕ್ಷೆಯೊಂದೇ. ಪುಸ್ತಕ ಹಾಳಾಯಿತೆಂದರೆ, ದರ್ಜಿಯ ಹೆಂಡತಿಗೆ ಯಾವ ವಿವರಣೆಯನ್ನು ನಾನು ಕೊಡುವುದು ಸಾಧ್ಯವಿತ್ತು ?

ಆ ಸೈನಿಕನಲ್ಲಿಗೆ ನಾನು ಭೇಟಿ ಕೊಡದಂತೆ, ಮುದುಕಿ ನನ್ನ ಮೇಲೆ ತೀಕ್ಷ್ಣದೃಷ್ಟಿಯನ್ನಿರಿಸಿದ್ದಳು. ಪದೇಪದೇ ನನ್ನನ್ನು ಛೇಡಿಸುತ್ತಲೇ ಇದ್ದಳು.

"ಪುಸ್ತಕಕೀಟ! ನೀತಿಗೆಟ್ಟ ಜೀವನವನ್ನಷ್ಟೇ ಪುಸ್ತಕಗಳು ಹೇಳ್ಕೊಡೋದು. ಹೊತ್ತನ್ನೆಲ್ಲಾ ಪುಸ್ತಕಗಳ ಜತೆಯಲ್ಲೇ ಕಳೆಯೋ ಆಕೆಯನ್ನು ನೋಡು. ಇನ್ನು ಮಾರ್ಕೆಟಿಗೆ ಹೋಗಿ ಬರೋದು ಕೂಡಾ ಅವಳಿಂದ ಆಗುವಂತಿಲ್ಲ. ಅಧಿಕಾರಿಗಳ ಜತೆ ಯಾವಾಗಲೂ ಚೆಲ್ಲಾಟ! ಹಗಲು ಹೊತ್ತು ತನ್ನನ್ನು ನೋಡೋಕೆ ಅವರನ್ನೆಲ್ಲ ಬರಬಿಡ್ತಾಳೆಂತ ನನಗೆ ಗೊತ್ತಿಲ್ವೆ ?"

"ಅದು ಸುಳ್ಳು ! ಅವಳು ಅವರ ಜತೆ ಚೆಲ್ಲಾಟವಾಡೋದಿಲ್ಲ !" ಎಂದು ಕೂಗಿ ನುಡಿಯಬೇಕೆಂಬ ಬಯಕೆ ನನಗಾಯಿತು.

ಆದರೆ, ಪುಸ್ತಕ ಅವಳದೆಂದು ಮುದುಕಿ ಊಹಿಸಬಹುದೆಂಬ ಭಯದಿಂದ, ದರ್ಜಿಯ ಹೆಂಡತಿಯ ಪಕ್ಷವಹಿಸಿ ಮಾತನಾಡಲು ನಾನು ಧೈರ್ಯಪಡಲಿಲ್ಲ.

ಹಲವಾರು ದಿನಗಳ ಕಾಲ ಅತೀವ ಯಾತನೆಯಲ್ಲೇ ನಾನು ಜೀವಿಸಿದೆ. ಮನಸೆಲ್ಲ, ಮೊಂತೆಪಿನ್‌ಗೆ ಎಂತಹ ಗತಿ ಒದಗುವುದೋ ಎಂಬ ಕಾತರದಿಂದಲೇ ತುಂಬಿ, ನನಗೆ ಮರವೆ ಹೆಚ್ಚಾಯಿತು ; ನಿದ್ದೆ ಬರುತ್ತಿರಲಿಲ್ಲ. ಒಂದು ದಿನ ದರ್ಜಿಯ ಮನೆಯ ಅಡುಗೆಯವಳು, ಅಂಗಳದಲ್ಲಿ ನನ್ನನ್ನು ತಡೆದು ನಿಲ್ಲಿಸಿ ಅಂದಳು:

"ಪುಸ್ತಕ ವಾಪಸು ತಾ."

ಮಧ್ಯಾಹ್ನ ಭೋಜನದ ಅನಂತರದ ವೇಳೆಯನ್ನು ನಾನು ಆರಿಸಿದೆ. ಅದು, ನಡು ಹಗಲಿನ ವಿಶ್ರಾಂತಿಗಾಗಿ ನನ್ನ ಮಾಲಿಕರು ನಿದ್ದೆಹೋಗುತ್ತಿದ್ದ ಹೊತ್ತು. ಮ್ಲಾನಮುಖದೊಡನೆ ಕಾತರ—ಸಂಕೋಚಗಳೊಡನೆ ದರ್ಜಿಯ ಹೆಂಡತಿಯ ಎದುರು ಕಾಣಿಸಿಕೊಳ್ಳಲೆಂದು ಹೊರಟೆ.

ಈಗಲೂ ಮೊದಲಬಾರಿ ಕಂಡಿದ್ದಂತೆಯೇ ಅವಳನ್ನು ನೋಡಿದೆ. ಬೇರೆ ಪೋಷಾಕನ್ನು ಆಕೆ ತೊಟ್ಟಿದ್ದುದೊಂದೇ ವ್ಯತ್ಯಾಸ. ಬೂದು ಬಣ್ಣದ ಲಂಗವನ್ನೂ ಕಪ್ಪು ಮಕಮಲ್ಲಿನ ಕುಪ್ಪಸವನ್ನೂ ತೊಟ್ಟಿದ್ದಳು. ಕತ್ತಿನಲ್ಲಿ ಪಚ್ಚೆಕಲ್ಲಿನ ಕ್ರೂಜೆ ಇತ್ತು. ಅವಳನ್ನು ಕಂಡಾಗ, ನನಗೆ ಬುಲ್‌ಫಿಂಚ್ ಹಕ್ಕಿಯ ನೆನಪಾಯಿತು.

ಪುಸ್ತಕವನ್ನೋದಿ ಮುಗಿಸಲು ನನಗೆ ಸಮಯವಿರಲಿಲ್ಲವೆಂದೂ ನಾನು ಓದುವುದನ್ನು ಮನೆಯಲ್ಲಿ ನಿಷೇಧಿಸಿರುವರೆಂದೂ ಅವಳಿಗೆ ತಿಳಿಸಿದೆ. ಆ ನೋವಿನ ಅನುಭವದಿಂದ ಹಾಗೂ ಅವಳನ್ನು ಪುನಃ ಕಂಡು ಆದ ಸಂತೋಷದಿಂದ, ನನ್ನ ಕಣ್ಣುಗಳಲ್ಲಿ ಕಂಬನಿ ತುಂಬಿತು.

ತನ್ನ ಸೊಗಸಾದ ಹುಬ್ಬುಗಳನ್ನು ಮೇಲಕ್ಕೆ ಏರಿಸಿ ಅವಳೆಂದಳು:

"ಎಂಥ ಮೂರ್ಖಜನ! ನಿನ್ನ ಯಜಮಾನನಿಗೆ ಸ್ವಾರಸ್ಯಕರವಾದ ಮುಖವಿದೆ ಅಂತ ನಾನು ಭಾವಿಸಿದ್ದೆ. ಇದರಿಂದ ನೀನು ಇಷ್ಟೊಂದು ಗಾಬರಿ ಆಗಬಾರದು. ನಾನು ಇದಕ್ಕೊಂದು ಪರಿಹಾರ ಹುಡುಕ್ತೀನಿ. ಅವನಿಗೆ ಬರೆದು ತಿಳಿಸ್ತೀನಿ."

ಇದರಿಂದ ನಾನು ಹೆದರಿದೆ. ಪುಸ್ತಕ ಧರ್ಮಗುರುವಿನದೆಂದು ನನ್ನ ಯಜಮಾನನ ಜತೆ ನಾನು ಸುಳ್ಳಾಡಿರುವುದಾಗಿ ತಿಳಿಸಿದೆ. ಅವಳನ್ನು ನಾನು ಬೇಡಿಕೊಂಡೆ:

"ದಯವಿಟ್ಟು ಬರೀಬೇಡಿ. ನಿಮ್ಮ ವಿಷಯದಲ್ಲಿ ಅವರು ಸುಮ್ಮನೆ ನಗೆಯಾಡಿ ನಿಮ್ಮನ್ನ ಬಯ್ತಾರೆ, ಅಷ್ಟೆ. ನಮ್ಮ ಮನೇಲಿ ಯಾರೂ ನಿಮ್ಮನ್ನ ಇಷ್ಟಪಡೋದಿಲ್ಲ. ಎಲ್ಲರೂ ನಿಮ್ಮನ್ನ ಲೇವಡಿಮಾಡ್ತಾರೆ. ನಿಮ್ಮನ್ನ ಬೆಪ್ಪುತಕ್ಕಡಿ ಅಂತ ಕರೀತಾರೆ. ನಿಮ್ಮ ಒಂದು ಪಕ್ಕೆಲುಬು ಕಾಣೆಯಾಗಿದೆ ಅಂತ ಹೇಳ್ತಾರೆ."

ನನ್ನ ಪದಗಳು ಪ್ರವಾಹದಂತೆ ಒಮ್ಮೆಲೆ ಬಂದುವು. ಆಡಿದ ಬಳಿಕ ಅವು ಅವಮಾನಕರ ಮಾತುಗಳೆಂದು ನಾನು ಮನಗಂಡೆ. ಅವಳು ಮೇಲಣ ತುಟಿಯನ್ನು ಕಚ್ಚಿದಳು. ತಾನು ಕುದುರೆಯ ಮೇಲೆ ಕುಳಿತಿರುವಳೇನೋ ಎನ್ನುವಂತೆ, ತನ್ನ ಹಿಂಭಾಗವನ್ನು ತಟ್ಟಿದಳು. ನಾನು ತಲೆತಗ್ಗಿಸಿದೆ. ಭೂಮಿ ಬಾಯಿತೆರೆದು ನನ್ನನ್ನು ನುಂಗಬಾರದೆ ಎಂದು ಆಶಿಸಿದೆ. ಆದರೆ ಅಷ್ಟರಲ್ಲೇ ಆಕೆ, ಕುರ್ಚಿಯ ಮೇಲೆ ಕುಸಿಕುಳಿತು, ಗೊಳ್ಳೆಂದು ನಗತೊಡಗಿದಳು.

ನನ್ನೆಡೆಗೆ ನೆಟ್ಟ ದೃಷ್ಟಿಯಿಂದ ನೋಡುತ್ತ ತನ್ನನ್ನೇ ಆಕೆ ಕೇಳಿಕೊಂಡಳು:

"ಎಂಥ ಮೂರ್ಖತನ! ಎಷ್ಟೊಂದು ಮೂರ್ಖತನ! ಆದರೆ ನಾನೇನು ಮಾಡೋದು ಸಾಧ್ಯ?"

ಬಳಿಕ, ನಿಟ್ಟುಸಿರುಬಿಟ್ಟು, ಅವಳೇ ಮಾತು ಸೇರಿಸಿದಳು:

"ನೀನೊಬ್ಬ ವಿಚಿತ್ರ ಹುಡುಗ—ಬಹಳ ವಿಚಿತ್ರ ಹುಡುಗ."

ಆಕೆಯ ಮಗ್ಗುಲಲ್ಲಿದ್ದ ಕನ್ನಡಿಯತ್ತ ದೃಷ್ಟಿಹರಿಸಿ ನನ್ನನ್ನು ನಾನು ನೋಡಿದೆ. ಕೆನ್ನೆಯ ಮೂಳೆಗಳು ಎದ್ದುನಿಂತಿದ್ದ, ಅಗಲ ಮೂಗಿನ, ಒಂದು ಮುಖ ಕಂಡಿತು. ಹಣೆಯ ಮೇಲೆ ಗಾಯದ ದೊಡ್ಡದೊಂದು ಕಲೆ ಇತ್ತು. ಕತ್ತರಿ ಕಾಣದ ತಲೆಗೂದಲು ನಾನಾ ದಿಕ್ಕುಗಳತ್ತ ಎದ್ದು ನಿಂತಿತ್ತು. 'ಬಹಳ ವಿಚಿತ್ರ ಹುಡುಗ' ಎಂದುದು ಈತನನ್ನೇ ಏನು? ಈ ವಿಚಿತ್ರ ಹುಡುಗ ಹಾಗೂ ಆ ಸೊಗಸಾದ ಪಿಂಗಾಣಿ ಬೊಂಬೆ—ಇವುಗಳ ನಡುವೆ ಹೋಲಿಕೆ ಮಾತ್ರ ಖಂಡಿತ ವಾಗಿಯೂ ಏನೇನೂ ಇಲ್ಲ.

"ಹೋದಸಾರಿ ನಾನು ನಿನಗೆ ಕೊಟ್ಟ ಹಣವನ್ನು ನೀನು ಒಯ್ಯಲಿಲ್ಲ. ಯಾಕೆ?"

"ನನಗೆ ಅದರ ಅಗತ್ಯವಿರಲಿಲ್ಲ."

ಅವಳು ನಿಟ್ಟುಸಿರುಬಿಟ್ಟಳು.

"ಸರಿ. ನಾನೇನೂ ಮಾಡೋಹಾಗಿಲ್ಲ. ಓದೋದಕ್ಕೆ ಅವರು ನಿನಗೆ ಸಮ್ಮತಿಕೊಟ್ಟರೆ ಮತ್ತೆ ಬಾ. ಪುಸ್ತಕಗಳನ್ನು ಕೊಡ್ತೇನೆ."

ಒಲೆಯ ಮೇಲ್ಗಡೆಯ ಗೋಡೆ ಕಪಾಟದಲ್ಲಿ ಮೂರು ಪುಸ್ತಕಗಳಿದ್ದುವು. ನಾನು ಅದೇ ಆಗ ಹಿಂತಿರುಗಿಸಿದ್ದುದೇ ಅತಿ ಹೆಚ್ಚುಗಾತ್ರದ್ದು. ವ್ಯಥೆಯಿಂದ ಅದನ್ನೇ ನಾನು ದಿಟ್ಟಿಸಿದೆ. ಅರಿವೆ ಕತ್ತರಿಸುವವನ ಹೆಂಡತಿ ತನ್ನ ಪುಟ್ಟ ನಸುಗೆಂಪು ಕೈಯನ್ನು ಮುಂದಕ್ಕೆ ಚಾಚಿ ಅಂದಳು:

"ಸರಿ. ವಿದಾಯದ ನಮಸ್ಕಾರ."

ನಾನು ಜಾಗರೂಕತೆಯಿಂದ ಅವಳ ಕೈಯನ್ನು ಮುಟ್ಟಿ, ಅವಸರವಾಗಿ ಹೊರಟುಹೋದೆ. ಅವಳ ಬಗೆಗೆ ಅವರೆಲ್ಲ ಹೇಳುತ್ತಿದ್ದುದು, ಅವಳಿಗೆ ಏನೂ ಅರ್ಥವಾಗುತ್ತಿಲ್ಲವೆಂದು ಅವರೆ

ನ್ನುತ್ತಿದ್ದುದು, ಪ್ರಾಯಶಃ ನಿಜವೇನೋ. ಇಪ್ಪತ್ತು ಕೊಪೆಕ್‌ಗಳನ್ನು, ಚಿಕ್ಕಮಗುವಿನಂತೆ ಹಣ ವೆಂದು, ಅದೇ ಆಗ ಆಕೆ ಕರೆದಿರಲಿಲ್ಲವೆ?

ಆದರೂ ಅವಳ ಈ ಗುಣವನ್ನು ನಾನು ಇಷ್ಟಪಟ್ಟೆ.

೬

ಓದುವುದರ ಬಗೆಗೆ ಇದ್ದಕ್ಕಿದ್ದಂತೆ ನನ್ನಲ್ಲುಂಟಾದ ಈ ರಾಗೋದ್ವೇಗದ ಫಲವಾಗಿ ನಾನು ಅನುಭವಿಸಬೇಕಾಗಿ ಬಂದ ಅಪಮಾನ, ನೋವು, ಗಾಬರಿ ಅಷ್ಟಿಷ್ಟಲ್ಲ. ಅದನ್ನೆಲ್ಲ ಈಗ ಸ್ಮರಿಸಿ ಕೊಳ್ಳಲು ವ್ಯಥೆ ಎನಿಸುತ್ತದೆ, ತಮಾಷೆ ಎನಿಸುತ್ತದೆ.

ಅರಿವೆ ಕತ್ತರಿಸುವವನ ಹೆಂಡತಿಯ ಆ ಪುಸ್ತಕಗಳು ಬಹಳ ಬೆಲೆಯವೆಂದು ನನಗೆ ಅನಿ ಸಿತು. ನನ್ನ ಮುದಿಯಜಮಾನಿ ಆ ಪುಸ್ತಕಗಳನ್ನು ಸುಟ್ಟುಬಿಡಬಹುದೆಂಬ ಭಯದಿಂದ, ಅವು ಗಳನ್ನು ಮರೆತೇಬಿಡಲು ನಾನು ಯತ್ನಿಸಿದೆ. ಬೆಳಗಿನ ಉಪಾಹಾರಕ್ಕಾಗಿ ಬ್ರೆಡ್ಡು ತರುತ್ತಿದ್ದ ಅಂಗಡಿಯಿಂದ ಬಣ್ಣಬಣ್ಣದ ಸಣ್ಣ ಪುಸ್ತಕಗಳನ್ನು ಪಡೆಯಲು ಆರಂಭಿಸಿದೆ.

ಅಂಗಡಿಯವನು ಅತ್ಯಂತ ಅಸಹ್ಯ ಹುಟ್ಟಿಸುವಂತಹ ಮನುಷ್ಯ. ದಪ್ಪನೆಯ ತುಟಿಗಳು. ಬೆವರು ಸುರಿಯುತ್ತಲೇ ಇರುತ್ತಿತ್ತು. ಉಬ್ಬಿಕೊಂಡಿದ್ದ ಜಿಗುಟಾದ ಮುಖ. ಚುಕ್ಕೆಗಳಿದ್ದುವು. ಕ್ಷಯದ ಮೊದಲ ಮೆಟ್ಟಲೆನ್ನುವಂತೆ ಗ್ರಂಥಿಗಳಿದ್ದು ವಿಕಾರವಾಗಿತ್ತು. ನಿಸ್ತೇಜ ಕಣ್ಣುಗಳು. ಊದಿಕೊಂಡ ಕೈಗಳು. ಅವುಗಳ ಕೊನೆಯಲ್ಲಿ ಮೊಟಕು ಬೆರಳುಗಳಿದ್ದುವು.

ಸಂಜೆಯ ಹೊತ್ತು ಅವನ ಅಂಗಡಿ, ನಮ್ಮ ಬೀದಿಯ ಸ್ವೇಚ್ಛಾಚಾರಿಗಳಾದ ಹುಡುಗ ಹುಡುಗಿಯರಿಗೆಲ್ಲ ಬೇಟಿಯ ಸ್ಥಳವಾಗಿತ್ತು. ನನ್ನ ಯಜಮಾನನ ತಮ್ಮ, ಹೆಚ್ಚು ಕಡಮೆ ಪ್ರತಿ ಸಂಜೆಯೂ, ಬೀರ್ ಕುಡಿಯಲೆಂದು ಇಸ್ಪೀಟು ಆಡಲೆಂದು ಅಲ್ಲಿಗೆ ಹೋಗುತ್ತಿದ್ದ. ರಾತ್ರಿಯ ಊಟಕ್ಕೆ ಅವನನ್ನು ಕರೆಯಲು ಆಗಾಗ್ಗೆ ನನ್ನನ್ನು ಕಳುಹುತ್ತಿದ್ದರು. ಅಂಗಡಿಕಾರನ ಶೋಕಿಯ ಮೂರ್ಖ ಹೆಂಡತಿ, ಅಂಗಡಿಯ ಹಿಂದಿದ್ದ ಜನ ತುಂಬಿರುತ್ತಿದ್ದ ಸಣ್ಣ ಕೊಠಡಿಯಲ್ಲಿ ವಿಕ್ಟರನ ತೊಡೆಯ ಮೇಲೋ ಅಥವಾ ಬೇರೆ ಯಾರಾದರೂ ಯುವಕನ ತೊಡೆಯ ಮೇಲೋ ಕುಳಿತಿರುತ್ತಿದ್ದ ದೃಶ್ಯ ಆಗಾಗ್ಗೆ ನನ್ನ ಕಣ್ಣಿಗೆ ಬೀಳುತ್ತಿತ್ತು. ಅಂಗಡಿಯವನು ಸಿಟ್ಟಾದಂತೆಯೇ ಕಾಣುತ್ತಿರಲಿಲ್ಲ. ಅವನ ತಂಗಿಯೊಬ್ಬಳು, ಗಿರಾಕಿಗಳ ಬೇಡಿಕೆಗಳನ್ನು ಪೂರೈಸುವ ವಿಷಯ ದಲ್ಲಿ ಅವನಿಗೆ ನೆರವಾಗುತ್ತಿದ್ದಳು. ಅವಳನ್ನು ಸೈನಿಕರು, ಹಾಡುಗಾರರು, ಅಥವಾ ಇಷ್ಟಪಟ್ಟ ಯಾರು ಬೇಕಾದರೂ ಅಪ್ಪಿಕೊಳ್ಳುತ್ತಿದ್ದರು. ಅದಕ್ಕೂ ಆತ ಆಕ್ಷೇಪಿಸುತ್ತಿರಲಿಲ್ಲ. ಅಂಗಡಿ ಯಲ್ಲಿ ಮಾರಾಟದ ಸಾಮಗ್ರಿಗಳಿದ್ದುದೇ ಬಲು ಸ್ವಲ್ಪ. ಉದ್ಯಮ ಹೊಸದು, ಸಾಕಷ್ಟು ಸರಕು ಗಳನ್ನು ತಂದಿಡಲು ಬಿಡುವೇ ದೊರೆತಿಲ್ಲ—ಎಂದು ಅಂಗಡಿಯವನು ವಿವರಿಸುತ್ತಿದ್ದ. ಅಂಗಡಿ ಯನ್ನು ಅವನು ತೆರೆದಿದ್ದುದು ಮಾತ್ರ ಬಹಳ ಹಿಂದೆ, ಶರತ್ಕಾಲದಲ್ಲೇ. ತನ್ನ ಗಿರಾಕಿಗಳಿಗೆ ಆತ ಹೊಲಸು ಚಿತ್ರಗಳನ್ನು ತೋರಿಸುತ್ತಿದ್ದ. ಅಶ್ಲೀಲ ಕವಿತೆಗಳನ್ನು ಪ್ರತಿಮಾಡಿಕೊಳ್ಳಲು ಬಯಸಿದವರಿಗೆ ಅವಕಾಶವೀಯುತ್ತಿದ್ದ.

ಮಿಶಾ ಯೆವ್‌ಸ್ತಿಗ್ನಿಯಿವನ ನೀರಸ ಪುಸ್ತಕಗಳನ್ನು ನಾನು ಓದಿದೆ. ಬಾಡಿಗೆಯೆಂದು ಒಂದೊಂದು ಪುಸ್ತಕಕ್ಕೆ ಒಂದೊಂದು ಕೊಪೆಕ್ ನಾನು ಕೊಡಬೇಕಾಯಿತು. ಈ ವೆಚ್ಚ ದುಬಾರಿಯಾಗಿ ನನಗೆ ಕಂಡಿತು. ಆ ಪುಸ್ತಕಗಳಂತೂ ಯಾವ ತೃಪ್ತಿಯನ್ನೂ ನನಗೆ ಕೊಡಲಿಲ್ಲ. ಗ್ವಾಕ್ ಅಥವಾ ನಿಜಸ್ನೇಹ,' 'ವೆನಿಸಿನ ಫ್ರಾನ್ಸಿಲ್,' 'ಕಬಾರ್ಡಿನ್ನಿಯನರ ಜತೆ ರಷ್ಯನರ ಕದನ,' 'ತನ್ನ ಪ್ರಣಯಿಯ ಶವದಾನಿಯ ಮೇಲೆ ಸತ್ತ ಮುಹಮದೀಯ ಮಹಿಳೆ'—ಇಂಥ ಸಾಹಿತ್ಯದಿಂದ ನನಗೆ ತೃಪ್ತಿಯಾಗಲಿಲ್ಲ. ಬದಲು, ಎಷ್ಟೋ ವೇಳೆ ನನ್ನನ್ನು ಕೋಪೋದ್ರಿಕ್ತನನ್ನಾಗಿ ಅವು ಮಾಡಿದುವು. ಅಂತಹ ಅಸಂಭವನೀಯ ವಿಷಯಗಳನ್ನು ಅಷ್ಟೊಂದು ಒರಟು ಭಾಷೆಯಲ್ಲಿ ಹೇಳಿ, ನನ್ನನ್ನೊಬ್ಬ ಮೂರ್ಖನೆಂದು ಪರಿಗಣಿಸಲು ಆ ಪುಸ್ತಕಗಳು ಯತ್ನಿಸುತ್ತಿದ್ದಂತೆ ಅನಿಸಿತು.

'ಸ್ಟ್ರೆಲ್‌ತ್ಸಿ', 'ಯೂರಿ ಮಿಲೊಸ್ಲಾವ್‌ಸ್ಕಿ', 'ರಹಸ್ಯಮಯಿಯಾದ ಸನ್ಯಾಸಿ', 'ತಾತರ್ ಸವಾರ ಯಾಪಂಚ'—ಇವು ನನಗೆ ಹೆಚ್ಚು ತೃಪ್ತಿಯನ್ನು ನೀಡಿದುವು. ಓದಿದ ಬಳಿಕ ಮನಸ್ಸಿನಲ್ಲಿ ಸ್ವಲ್ಪಮಟ್ಟಿಗಾದರೂ ಉಳಿದುವು. ಆದರೆ, ಅತ್ಯಂತ ಹೆಚ್ಚು ನಾನು ಇಷ್ಟಪಟ್ಟದು 'ಸಂತರ ಜೀವನಗಳು' ಎಂಬ ಪುಸ್ತಕವನ್ನು. ಗಭೀರವಾದುದು, ನಿಜವೆಂದು ಮನಗಾಣಿಸಿಕೊಡುವಂಥದು,—ಕೆಲವೇಳೆ ಬಲು ಹೃದಯಸ್ಪರ್ಶಿಯಾದುದು ಕೂಡಾ—ಇಲ್ಲಿತ್ತು. ಯಾವುದೋ ಕಾರಣಕ್ಕಾಗಿ, ಪುರುಷಹುತಾತ್ಮರೆಲ್ಲ 'ಭೇಷ್'ನ ನೆನಪನ್ನೂ ಸ್ತ್ರೀಹುತಾತ್ಮರೆಲ್ಲ ನನ್ನ ಅಜ್ಜಿಯ ನೆನಪನ್ನೂ ಉನ್ನತ ಧರ್ಮಾಧಿಕಾರಿಗಳು ಅತ್ಯುತ್ತಮ ಘಳಿಗೆಗಳಲ್ಲಿ ಅಜ್ಜ ಇರುತ್ತಿದ್ದ ರೀತಿಯ ನೆನಪನ್ನೂ ಮಾಡಿಕೊಡುತ್ತಿದ್ದರು.

ಪುಸ್ತಕವಾಚನವನ್ನು ಮೇಲೆ ಅಟ್ಟದಲ್ಲಿ, ಇಲ್ಲವೆ ಸೌದೆ ಸೀಳಲು ಹೋದಾಗ ಹೊರಗೆ ಶೆಡ್ಡಿನಲ್ಲಿ, ಮಾಡುತ್ತಿದ್ದೆ. ಎರಡು ಸ್ಥಳಗಳೂ ಒಂದಕ್ಕೊಂದು ಕಡಮೆ ಇಲ್ಲದಂತೆ ಶೀತಲವಾಗಿದ್ದುವು; ಅಲ್ಲಿ ಯಾವ ಅನುಕೂಲವೂ ಇರಲಿಲ್ಲ. ಪುಸ್ತಕದಲ್ಲಿ ವಿಶೇಷ ಸ್ವಾರಸ್ಯವಿದ್ದರೆ, ಅಥವಾ ಅವಸರದಲ್ಲಿ ಅದನ್ನು ಮುಗಿಸಬೇಕಾಗಿ ಬಂದರೆ, ರಾತ್ರೆ ಎದ್ದು ಮೋಂಬತ್ತಿಯ ಬೆಳಕಿನಲ್ಲಿ ಓದುತ್ತಿದ್ದೆ. ಆದರೆ, ರಾತ್ರೆ ಹೊತ್ತು ಮೋಂಬತ್ತಿಗಳು ಚಿಕ್ಕವಾಗತ್ತಿದ್ದುದನ್ನು ಮುದುಕಿ ಗಮನಿಸಿದಳು. ಒಂದು ಸೌದೆಯ ಕಡ್ಡಿಯಲ್ಲಿ ಮೋಂಬತ್ತಿಗಳನ್ನು ಅಳೆದು ಆ ಚೂರನ್ನು ಬಚ್ಚಿಡತೊಡಗಿದಳು. ಸಾಧಾರಣವಾಗಿ ನಾನು ಆ ಕಡ್ಡಿಯನ್ನು ಕಂಡುಹಿಡಿದು, ಉರಿದು ಚಿಕ್ಕದಾದ ಮೋಂಬತ್ತಿಯ ಅಳತೆಗೆ ಸರಿಯಾಗಿ ಕತ್ತರಿಸಿ ಇಡುತ್ತಿದ್ದೆ. ಹಾಗೇನಾದರೂ ಮಾಡದೆ ಹೋದೆನೆಂದರೆ, ಮಾರನೆಯ ಬೆಳಗ್ಗೆ ಮುದುಕಿ ಸೌದೆ ಕಡ್ಡಿಗೂ ಮೋಂಬತ್ತಿಗೂ ಇರುವ ವ್ಯತ್ಯಾಸವನ್ನು ಕಂಡು ಹಿಡಿದು, ಗದ್ದಲ ಆರಂಭಿಸುತ್ತಿದ್ದಳು. ಅಡುಗೆ ಮನೆಯ ಆರಂಬಾಟ ತಡೆಯಲಾಗದೆ, ಮಂಚದ ಮೇಲೆ ಮಲಗಿದ್ದಲ್ಲಿಂದಲೆ ವಿಕ್ಟರ್ ಸಿಟ್ಟುಗೊಂಡು ಒಮ್ಮೆ ಕೂಗಾಡಿದ:

“ಬೊಗಳೋದು ನಿಲ್ಸೇ, ಅಮ್ಮ! ನಿನ್ನ ಜತೆ ವಾಸ ಸಾಧ್ಯವೇ ಇಲ್ಲ! ಪುಸ್ತಕಗಳನ್ನು ಓದೋದರಿಂದ ಅವನು ಮೋಂಬತ್ತಿ ಉರಿಸಿಯೇ ಉರಸ್ತಾನೆ. ಆ ಪುಸ್ತಗಳನ್ನು ಕೆಳಗಿನ ಅಂಗಡಿಯಿಂದ ತರ್ತಾನೆ. ನಾನು ನೋಡಿದೀನಿ. ಹೋಗಿ ಅಟ್ಟವನ್ನು ಶೋಧಿಸು.”

ಮುದುಕಿ ಅಟ್ಟವನ್ನು ಓಡಿಹತ್ತಿದಳು. ಸಣ್ಣದೊಂದು ಪುಸ್ತಕ ಅವಳ ಕಣ್ಣಿಗೆ ಬಿತ್ತು. ಅದನ್ನು ಚೂರು ಚೂರಾಗಿ ಹರಿದು ಹಾಕಿದಳು.

ಸ್ವಾಭಾವಿಕವಾಗಿಯೇ ಇದೊಂದು ಆಘಾತವಾಯಿತು. ಆದರೆ, ಓದುವ ಬಯಕೆಯನ್
ಅದು ಮತ್ತಷ್ಟು ಹೆಚ್ಚಿಸಿತು, ಅಷ್ಟೆ. ಸಂತರಲ್ಲೊಬ್ಬ ಈ ಮನೆಗೆ ಬಂದಿಳಿದನೆಂದರೆ, ನನ್ನ ಯಜ
ಮಾನಿಯರು, ಆತ ಹೇಗೆ ವರ್ತಿಸಬೇಕೆಂದು ಅವನಿಗೆ ಹೇಳಿಕೊಡುವುದು ಖಂಡಿತ; ಒಟ್ಟಿನಲ್ಲಿ
ತಮಗೆ ಸರಿಕಂಡಂತೆ ಅವನನ್ನು ರೂಪಿಸಿಯೇ ರೂಪಿಸುತ್ತಾರೆ—ಎಂಬುದು ನನಗೆ ಖಚಿತವಾಗಿತ್ತು
ಇದನ್ನು ಅವರು ಮಾಡುವುದು ಕೂಡಾ, ಮಾಡಲು ಇದಕ್ಕಿಂತ ಉತ್ತಮವಾದ ಬೇರೆ ಕೆಲ
ಇಲ್ಲದೆ ಇರುವುದರಿಂದ ತೂಗಾಡುವುದನ್ನು, ಜನರ ಬಗೆಗೆ ತೀರ್ಮಾನಕೊಡುವುದನ್ನು, ಅವರನ್
ಪರಿಹಾಸ್ಯ ಮಾಡುವುದನ್ನು ಇವರು ಎಂದಾದರೂ ನಿಲ್ಲಿಸಿಬಿಟ್ಟರೆಂದರೆ, ಇವರೆಲ್ಲ ಮೂಕರೇ ಆಗ
ವರು. ಮಾತನಾಡಲು ಅಸಮರ್ಥರಾಗಿ, ವಿಸ್ಮೃತಾವಸ್ಥೆಗಿಳಿಯುವರು. ತನ್ನನ್ನು ತಾನ
ಅರಿತಿರಬೇಕಾದರೆ, ಬೇರೆಯವರ ಜತೆ ಒಬ್ಬ ವ್ಯಕ್ತಿಗೆ ಪ್ರಜ್ಞಾಪೂರ್ಣವಾದ ಸಂಬಂಧವಿರಬೇಕು
ನನ್ನ ಮಾಲಿಕರಿಗೆ ತಿಳಿದಿದ್ದ ಏಕಮಾತ್ರ ಸಂಬಂಧವೆಂದರೆ, ಅಧ್ಯಾಪಕನ ಹಾಗೂ ನ್ಯಾಯ
ಧೀಶನ ಸಂಬಂಧ. ಒಬ್ಬ ಮನುಷ್ಯ ಅವರ ಮಾದರಿಯ ಬದುಕನ್ನೇ ಜೀವಿಸತೊಡಗಿದನೆಂದರ
ಅದಕ್ಕೋಸ್ಕರವಾಗಿಯೂ ಅವನ ಬಗೆಗೆ ಅವರು ತೀರ್ಪುಕೊಡುವರು. ಅವರ ಸ್ವಭಾ
ಅಂತಹದು.

ಓದು ಸಾಧ್ಯವಾಗುವಂತೆ, ಬಗೆಬಗೆಯ ತಂತ್ರಗಳನ್ನು ನಾನು ಹೂಡತೊಡಗಿದೆ. ಅನೇ
ಸಲ ಮುದುಕಿ ನನ್ನ ಪುಸ್ತಕಗಳನ್ನು ನಾಶಪಡಿಸಿದಳು. ಹೀಗಾಗಿ ಕೊನೆಯಲ್ಲಿ, ಅಂಗಡಿಯವನಿ
ನಾನು ಸಾಲಗಾರನಾಗಿ ಹೋದೆ. ಸಾಲದ ಹಣವೋ ನಾಲ್ವತ್ತೇಳು ಕೊಪೆಕ್‌ಗಳಷ್ಟು, ದೊ
ಮೊತ್ತ! ಹಣ ತಕ್ಷಣವೇ ಬೇಕೆಂದು ಆತ ತಗಾದೆ ಪಡಿಸಿದ. ಬ್ರೆಡ್ಡಿಗೋಸ್ಕರ ನಾನು ಬಂದಾ
ಮಾಲಿಕರ ಹಣದಿಂದ ಅಷ್ಟನ್ನು ತೆಗೆದುಬಿಡುವುದಾಗಿ ಬೆದರಿಸಿದ.

"ಆಗ ಏನಾದೀತು?" ಎಂದು ಆತ ಛೇಡಿಸುತ್ತ ಕೇಳಿದ.

ಅಸಹ್ಯವೆನಿಸುವಷ್ಟು ಅಪ್ರಿಯನಾಗಿ ಆತ ನನಗೆ ಕಂಡ. ಸಹಜವಾಗಿಯೇ ಅವನಿಗೆ ಇದ
ಅರಿವಾಗಿರಬೇಕು. ಯಾಕೆಂದರೆ, ನಾನಾ ಬಗೆಯ ಬೆದರಿಕೆಗಳಿಂದ ನನ್ನನ್ನು ಚಿತ್ರಹಿಂಸೆ
ಗುರಿಪಡಿಸುವುದರಲ್ಲಿ ಆತ ವಿಶೇಷ ಹರ್ಷವನ್ನು ತೋರುತ್ತಿದ್ದ. ಅಂಗಡಿಯನ್ನು ನಾನು ಹೊಕ್ಕಾ
ಲೆಲ್ಲ ಅವನ ಕೆಂಪು ಮಚ್ಚೆಗಳ ಮುಖಕ್ಕೆ ಮುಗುಳನಗೆಯ ಲೇಪನವಾಗುತ್ತಿತ್ತು.

ಮೆಲುದನಿಯಲ್ಲಿ ಆತ ಕೇಳುತ್ತಿದ್ದ:

"ನನಗೆ ಸಲ್ಲಬೇಕಾದ ಹಣ ತಂದಿದೀಯಾ?"

"ಇಲ್ಲ."

ಇದರಿಂದ ಅವನಿಗೆ ಅಸಮಾಧಾನವಾದಂತೆ ಅನಿಸುತ್ತಿತ್ತು. ಆತ ಹುಬ್ಬುಗಂಟಿಕ್ಕುತ್ತಿದ

"ಇಲ್ಲ? ನಿನ್ನನ್ನು ಏನಪ್ಪ ಮಾಡಬೇಕು ನಾನು? ನ್ಯಾಯಾಸ್ಥಾನಕ್ಕೆ ದೂರು ಒಯ
ಅವರು ನಿನ್ನನ್ನು ಹಡಗಿನಲ್ಲಿ ಹಾಕಿ ಹುಡುಗರ ಸೆರೆಮನೆಗೆ ಸಾಗಿಸೋ ಹಾಗೆ ಮಾಡಲೆ?"

ಆ ಹಣ ದೊರಕಿಸುವ ಯಾವ ಹಾದಿಯೂ ನನಗಿರಲಿಲ್ಲ. ಯಾಕೆಂದರೆ, ನನ್ನ ಸಂಬ
ವನ್ನು ನನ್ನ ಅಜ್ಜನಿಗೇ ಕೊಡುತ್ತಿದ್ದರು. ಏನುಮಾಡಬೇಕೆಂಬುದು ನನಗೆ ತೋಚಲಿಲ್ಲ. ಹ
ಕ್ಕಾಗಿ ಸ್ವಲ್ಪ ಸಮಯ ತಾಳೆಂದು ಅಂಗಡಿಯವನಿಗೆ ಹೇಳಿದೆ. ಅವನು ಸಿಹಿರೊಟ್ಟಿಯ ಹಾ
ಉಬ್ಬಿಕೊಂಡು ಜಿಗುಟಾಗಿದ್ದ ಕೈಯನ್ನು ಮುಂದಕ್ಕೆ ಚಾಚಿ, ಅಂದ:

"ಇದನ್ನು ಚುಂಬಿಸು. ಹಣಕ್ಕಾಗಿ ಕಾಯ್ತಾನಿ."

'ಗಲ್ಲ'ದ ಮೇಲಿನಿಂದ ತೂಕದ ಕಲ್ಲನ್ನೆತ್ತಿಕೊಂಡು ಅವನ ತಲೆಗೇ ಗುರಿ ಇಟ್ಟೆ. ಆತ ಅದು ತಗಲದಂತೆ ತಪ್ಪಿಸಿಕೊಂಡು ಬೊಬ್ಬಿಟ್ಟ:

"ಏಯ್, ಏನ್ಮಾಡ್ತಿದೀಯಾ? ನಾನು ತಮಾಷೆಗೆ ಹೇಳ್ದೆ, ಅಷ್ಟೆ!"

ಅದು ತಮಾಷೆಯ ಮಾತಲ್ಲವೆಂದು ನನಗೆ ಅನಿಸಿತು. ಅವನ ಕಾಟದಿಂದ ಮುಕ್ತನಾಗುವುದಕ್ಕೋಸ್ಕರ ಹಣ ಕದಿಯಲು ನಾನು ತೀರ್ಮಾನಿಸಿದೆ. ಬೆಳಗ್ಗೆ ನನ್ನ ಯಜಮಾನನ ಉಡುಪುಗಳನ್ನು ಬ್ರಶ್ಶಿನಿಂದ ತೀಡುವಾಗ, ಆಗಾಗ್ಗೆ, ಜೇಬುಗಳಲ್ಲಿ ಚಿಲ್ಲರೆ ದುಡ್ಡನ್ನು ನಾನು ಕಾಣುತ್ತಿದ್ದೆ. ಕೆಲವೇಳೆ ಅದು ನೆಲಕ್ಕೆ ಬೀಳುತ್ತಿತ್ತು. ಒಮ್ಮೆ ಒಂದು ನಾಣ್ಯ, ಮಹಡಿಮೆಟ್ಟಿಲ ಕೆಳಗಿದ್ದ ಸೌದೆ ರಾಶಿಯೊಳಕ್ಕೆ ಉರುಳಿತು. ಅದರ ವಿಷಯ ನನ್ನ ಒಡೆಯನಿಗೆ ಹೇಳುವುದು ಮರೆತುಹೋಯಿತು. ಸ್ವಲ್ಪ ಕಾಲದ ಅನಂತರ ಸೌದೆಗಳ ಮಧ್ಯೆ ಇಪ್ಪತ್ತು ಕೊಪೆಕ್ ನಾಣ್ಯವೊಂದನ್ನು ನಾನು ಕಂಡಾಗ, ಅದನ್ನು ಹಿಂತಿರುಗಿಸಿದೆ. ಆಗ ಅವನ ಹೆಂಡತಿ ಆತನೊಡನೆ ಅಂದಳು:

"ನೋಡಿದಿಯಾ? ಜೇಬುಗಳಲ್ಲಿ ನೀನು ಹಣ ಬಿಟ್ಟಾಗ, ಎಷ್ಟಿವೆ ಅಂತ ಎಣಿಸಬೇಕು."

"ಓ, ಇಲ್ಲ—ಇವನೇನನ್ನೂ ಕದಿಯಲಾರ," ಎಂದು ನನ್ನೆಡೆಗೆ ನೋಡಿ ಮುಗುಳುನಗುತ್ತ ಅವನು ಉತ್ತರವಿತ್ತ.

ಹಣ ಕದಿಯಲು ಈಗ ತೀರ್ಮಾನಿಸಿದಾಗ, ಅವನ ಆ ಮಾತುಗಳೂ ವಿಶ್ವಾಸದ ಆ ಮುಗುಳುನಗೆಯೂ ನೆನಪಿಗೆ ಬಂದುವು. ಇದರಿಂದ ನನ್ನ ಕೆಲಸ ಕಠಿನವಾಯಿತು. ಎಷ್ಟೋ ವೇಳೆ ಅವನ ಜೇಬುಗಳಿಂದ ಚಿಲ್ಲರೆಯನ್ನು ನಾನು ಹೊರತೆಗೆದೆ, ಎಣಿಸಿದೆ, ಬಳಿಕ—ಪುನಃ ಅಲ್ಲೇ ಇರಿಸಿದೆ. ಮೂರು ದಿನಗಳವರೆಗೆ ನನ್ನೊಳಗೇ ನಾನು ಚಡಪಡಿಸಿದೆ. ಬಳಿಕ ಇದ್ದಕ್ಕಿದ್ದಂತೆ, ಬಹು ಸುಲಭವಾಗಿ, ಸಮಸ್ಯೆ ಬಗೆಹರಿಯಿತು.

ನನ್ನ ಯಜಮಾನ ಅನಿರೀಕ್ಷಿತವಾಗಿ ಕೇಳಿದ:

"ಈಚೀಚೆಗೆ ನಿನಗೇನಾಗಿದೆ ಪೆಶ್ಕೋವ್? ನೀನು ಮೊದಲು ಇದ್ದಹಾಗಿಲ್ಲ. ಆರೋಗ್ಯ ಸರಿ ಇಲ್ವೇನು?"

ನನ್ನನ್ನು ಏನು ಕಾಡುತ್ತಿತ್ತೆಂಬುದನ್ನು ಸ್ಪಷ್ಟವಾಗಿ ಅವನಿಗೆ ನಾನು ಹೇಳಿದೆ.

ಸ್ವಲ್ಪ ಹುಬ್ಬು ಗಂಟಿಕ್ಕಿ ಅವನೆಂದ:

"ಪುಸ್ತಕಗಳಿಂದ ಎಂಥ ಪರಿಣಾಮ ಆಗ್ತದೆ—ನೀನೇ ನೋಡು. ಒಂದಲ್ಲ ಒಂದು ರೀತೀಲಿ ಅವು ನಿನಗೆ ಹಾನಿಯುಂಟುಮಾಡೋದೇ ಖಂಡಿತ.

ಆದರೆ ಆತ ಐವತ್ತು ಕೊಪೆಕ್‌ಗಳನ್ನು ಕೊಟ್ಟು, ಜತೆಯಲ್ಲಿ ಎಚ್ಚರಿಕೆಯ ಮಾತನ್ನು ಹೇಳಿದ.

"ನನ್ನ ಹೆಂಡತಿಗಾಗಲೀ ತಾಯಿಗಾಗಲೀ ಇದು ಗೊತ್ತಾಗದ ಹಾಗೆ ನೋಡ್ಕೊ. ಇಲ್ಲದೇ ಹೋದರೆ ತೊಂದರೆಯಾಗ್ತದೆ."

ಬಳಿಕ, ಸೌಹಾರ್ದಪೂರ್ಣನಗೆ ನಕ್ಕು ಆತ ಮಾತು ಸೇರಿಸಿದ:

"ನೀನು ಅದಮ್ಯನಾದ ಪುಟ್ಟ ಪಿಶಾಚಿಯೇ ಸರಿ! ಹಾಳಾಗಿ ಹೋಗಲಿ ಇದೆಲ್ಲ! ಹುಂ. ಆಗಲಿ.

ಇದು ಕೆಟ್ಟ ಗುಣವೇನೂ ಅಲ್ಲ. ಆದರೆ, ಪುಸ್ತಕಗಳ ಸಹವಾಸ ಬಿಟ್ಟುಬಿಡು! ಹೊಸ ವರ್ಷದಿಂದ ಒಂದು ಒಳ್ಳೇ ವೃತ್ತಪತ್ರಿಕೆಗೆ ಚಂದಾಕಟ್ತೇನಿ. ಆಗ, ನಿನಗೆ ಓದೋದಕ್ಕೆ ಏನಾದರೂ ಇರ್ತದೆ."

ಅವನು ಹಾಗೆಯೇ ಮಾಡಿದ. ಪ್ರತಿ ಸಂಜೆಯೂ ಚಹಾ ಮತ್ತು ರಾತ್ರೆಯ ಭೋಜನಗಳ ನಡುವೆ, ನನ್ನ ಮಾಲಿಕರಿಗೆ 'ಮಾಸ್ಕೋ ಕರಪತ್ರ'ವನ್ನು ನಾನು ಓದಿ ಹೇಳತೊಡಗಿದೆ. ಮಾಡಲು ಕೆಲಸವಿಲ್ಲದೆ ಬೇಸರದಿಂದ ಸಾಯುತ್ತಿರುವ ಜನರಿಗಾಗಿಯೇ ಬರೆಯುತ್ತಿದ್ದ ಯಾಶ್ಕೋವ್, ರೊಕ್ಷಾನಿನ್, ರುದ್ನಿಕೋವ್‌ಸ್ಕಿ ಮತ್ತಿತರ ಗ್ರಂಥಕರ್ತರ ಕಾದಂಬರಿಗಳು ಆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು.

ಗಟ್ಟಿಯಾಗಿ ಓದುವುದನ್ನು ನಾನು ಇಷ್ಟಪಡುತ್ತಿರಲಿಲ್ಲ. ಅದರಿಂದ, ಬರೆವಣಿಗೆಯ ವಿಷಯವನ್ನು ತಿಳಿದುಕೊಳ್ಳಲು ನನಗೆ ತಡೆಯಾಗುತ್ತಿತ್ತು. ಆದರೆ ನನ್ನ ಶ್ರೋತೃಗಳು ಶ್ರದ್ಧೆಯಿಂದ ಆಲಿಸುತ್ತಿದ್ದರು. ಅವರಲ್ಲಿ ಒಂದು ಬಗೆಯ ಭಕ್ತಿಪೂರ್ವಕವಾದ ವಿಶ್ವಾಸವಿರುತ್ತಿತ್ತು. ನಡೆಯಲಾದ ದೌರ್ಜನ್ಯದ ವಿವರ ಕೇಳಿ, ಉಸಿರು ಬಿಗಿಹಿಡಿದು ಉದ್ಗರಿಸುತ್ತ, ಹೆಮ್ಮೆಯಿಂದ ಅವರು ಪರಸ್ಪರ ನುಡಿಯುತ್ತಿದ್ದರು:

"ನಾವಾದರೋ, ಹೊರಗಿನ ಪ್ರಪಂಚದಲ್ಲಿ ಏನಾಗ್ತಿದೆ ಅನ್ನೋದರ ಪರಿವೆಯೇ ಇಲ್ಲದೆ, ಇಷ್ಟೊಂದು ಶಾಂತವಾಗಿ ನೆಮ್ಮದಿಯಿಂದ ಜೀವಿಸ್ತಿದ್ದೇವೆ. ದೇವರು ತೇಜೋಮಯ!"

ಅವರು ಒಂದನ್ನು ಇನ್ನೊಂದಕ್ಕೆ ಬೆರೆಸಿಬಿಡುತ್ತಿದ್ದರು. ಪ್ರಖ್ಯಾತ ದರೋಡೆಗಾರ ಚುರ್ಕಿನ್ನನ ಗೆಯ್ಮೆಯನ್ನು, ಕೋಚ್‌ಮನ್ ಫೋಮಾಕ್ರುಚಿನಾ ಮಾಡಿದ್ದು–ಎನ್ನುತ್ತಿದ್ದರು. ಅವರ ಕೈಯಲ್ಲಿ ಹೆಸರುಗಳು ಪದೇಪದೇ ಅದಲುಬದಲಾಗುತ್ತಿದ್ದುವು. ನಾನು ಸರಿಪಡಿಸಿ ತಿಳಿಸಿದಾಗ, ಅಚ್ಚರಿಯಿಂದ ಅವರೆನ್ನುತ್ತಿದ್ದರು:

"ಎಂಥ ಜ್ಞಾಪಕಶಕ್ತಿ ಇದೆ ಹುಡುಗನಿಗೆ!"

ಎಷ್ಟೋ ಸಾರೆ 'ಮಾಸ್ಕೋ ಕರಪತ್ರ' ಲಿಯೊನಿಡ್ ಗ್ರೇವ್ ಬರೆದ ಕವನವನ್ನು ಪ್ರಕಟಿಸುತ್ತಿತ್ತು. ಅದನ್ನು ನಾನು ಅತ್ಯಂತ ಇಷ್ಟಪಡುತ್ತಿದ್ದೆ; ನನ್ನ ಟಿಪ್ಪಣಿ ಪುಸ್ತಕದಲ್ಲಿ ಪ್ರತಿಮಾಡಿಕೊಳ್ಳುತ್ತಿದ್ದೆ. ಆದರೆ ನನ್ನ ಒಡತಿಯರು ಕವಿಯ ಬಗೆಗೆ ಅನ್ನುತ್ತಿದ್ದುದೇ ಬೇರೆ:

"ಅಲ್ಲ, ಮುದುಕ ಕವಿತೆ ಬರೀತಿದಾನಲ್ಲಾ. ಎಷ್ಟು ನಾಚಿಕೆಗೇಡು!"

"ಕುಡುಕ–ದುರ್ಬಲ ಮನಸ್ಸಿನವನು. ಅವನಿಗೆ ಯಾತರ ನಾಚಿಕೆ?"

ಸ್ಟ್ರುಜ್‌ಕಿನ್ ಮತ್ತು ಕೌಂಟ್ ಮೆಮೆಂಟೊ–ಮೊರಿಯ ಕವಿತೆಗಳನ್ನೋದಿ ನಾನು ಬಹಳವಾಗಿ ಸಂತೋಷಪಟ್ಟೆ. ಆದರೆ, ಮುದುಕಿ ಮತ್ತು ಯುವತಿ ಇಬ್ಬರೂ ಕವಿತೆಯು ಶುದ್ಧ ಹುಚ್ಚುಚ್ಚಾರವೆಂದು ಪಟ್ಟುಹಿಡಿದರು:

"ವಿದೂಷಕರು ಮತ್ತು ನಟರು ಮಾತ್ರ ಕವಿತೆ ನುಡೀತಾರೆ."

ಗಾಳಿ ಓಡಾಡದ ಆ ಪುಟ್ಟ ಕೊಠಡಿಯಲ್ಲಿ, ನನ್ನ ಮಾಲಿಕರ ನೆಟ್ಟದೃಷ್ಟಿಗಳಡಿಯಲ್ಲಿ, ಚಳಿಗಾಲದ ಆ ಸಂಜೆಗಳನ್ನು ಕಳೆಯುವುದು ಎಷ್ಟೊಂದು ಪ್ರಯಾಸಕರವಾಗಿತ್ತು! ಕಿಟಕಿಯಾಚೆಗೆ, ಸಾವಿನಷ್ಟು ನೀರವವಾಗಿದ್ದ ಇರುಳು ಪ್ರಭುತ್ವ ನಡೆಸಿತ್ತು. ಆಗೊಮ್ಮೆ ಈಗೊಮ್ಮೆ ಮಂಜು ಮುರಿದ ಸಪ್ಪಳವಾಗುತ್ತಿತ್ತು. ಆದರೆ ಈ ಜನರು ಮಾತ್ರ, ಮೇಜಿನ ಸುತ್ತಲೂ ಮಾತಿಲ್ಲದೆ ಹೆಪ್ಪುಗಟ್ಟಿದ ಮೀನುಗಳಂತೆ ಕುಳಿತಿರುತ್ತಿದ್ದರು. ಇಲ್ಲವೆ ಗಾಳಿ, ಗೋಡೆಗಳನ್ನೂ ಕಿಟಕಿಯ

ಗಾಜುಗಳನ್ನೂ ತಿವಿಯುತ್ತಿತ್ತು; ಹೊಗೆಕೊಳವೆಗಳ ಹಾದಿಯಾಗಿ ಕೆಳಕ್ಕೆ ಕಿರಿಚುತ್ತ ನುಗ್ಗುತ್ತಿತ್ತು; ಉರಿಹದಗೊಳಿಸುವ ಡಬ್ಬಕ್ಕೆ ಬಡೆಯುತ್ತಿತ್ತು. ಮಕ್ಕಳ ಕೊಠಡಿಯಿಂದ ಕೂಸುಗಳ ರೋದನ ಕೇಳಿಸುತ್ತಿತ್ತು. ಇದೆಲ್ಲ, ಯಾವುದಾದರೂ ಕತ್ತಲ ಮೂಲೆಗೆ ನುಸುಳಿ ತೋಳನಂತೆ ಕೂಗಾಡಬೇಕೆಂಬ ಬಯಕೆಯನ್ನು ನನ್ನಲ್ಲಿ ಉಂಟುಮಾಡುತ್ತಿತ್ತು.

ಮೇಜಿನ ಒಂದು ಕೊನೆಯಲ್ಲಿ, ಕಾಲುಚೀಲಗಳನ್ನು ಹೊಲಿಯುತ್ತ ಹೆಂಗಸರು ಕುಳಿತಿರುತ್ತಿದ್ದರು. ಇನ್ನೊಂದು ಕೊನೆಯಲ್ಲಿ, ತಾನು ಪ್ರತಿಮಾಡುತ್ತಿದ್ದ ಯಾವುದೋ ನಕ್ಕಾಶೆಯ ಮೇಲೆ ಮನಸ್ಸಿಲ್ಲದ ಮನಸ್ಸಿನಿಂದ ಬಾಗಿ, ವಿಕ್ಟರ್ ಇರುತ್ತಿದ್ದ. ಆಗಾಗ್ಗೆ ಆತ ರೇಗಾಡುತ್ತಿದ್ದ:

"ಮೇಜು ಅಲುಗಾಡಿಸೋದನ್ನ ನಿಲ್ಲಿಸಿ! ಸುತ್ತಿಗೆ ಮಾನುಗಳು, ಭಾರೀ ಭೇರಿಗಳು, ನಿಮ್ಮ ಜತೆ ವಾಸ ಸಾಧ್ಯವಿಲ್ಲವಪ್ಪ!"

ಒಂದು ಬದಿಯಲ್ಲಿ ದೂರದಲ್ಲಿ, ಬಲುಗಾತ್ರದ ಒಂದು ಚೌಕಟ್ಟಿನೆದುರು ನನ್ನ ಯಜಮಾನ ಕುಳಿತು, ಒಂದು ಮೇಜುವಸ್ತ್ರಕ್ಕೆ ಅಡ್ಡ ಹೊಲಿಗೆಯನ್ನು ಹಾಕುತ್ತಿದ್ದ. ಅವನ ಚುರುಕು ಬೆರಳುಗಳ ಕೆಳಗಿಂದ, ಕೆಂಪು ಏಡಿಗಳು, ನೀಲಿಮಾನು, ಹಸುರು ಚಿಟ್ಟೆಗಳು, ಬಾದಾಮಿ ಬಣ್ಣದ ಗ್ರೀಷ್ಮ ಋತುವಿನ ಎಲೆಗಳು ಸೃಷ್ಟಿಯಾಗುತ್ತಿದ್ದುವು. ಆ ಮಾದರಿಯನ್ನು ಆತನೇ ತಯಾರಿಸಿದ್ದ. ಮೂರು ಚಳಿಗಾಲಗಳಿಂದ ಆ ಕೆಲಸದಲ್ಲೇ ನಿರತನಾಗಿದ್ದ. ಈಗಂತೂ ಅವನಿಗೆ ಬಲು ಬೇಸರ ಬಂದು ಬಿಟ್ಟಿತ್ತು. ಹಗಲುಹೊತ್ತು ಎಷ್ಟೋ ವೇಳೆ, ನಾನು ಸ್ವಲ್ಪ ಬಿಡುವಾಗಿದ್ದರೆ, ನನಗೆ ಅನ್ನುತ್ತಿದ್ದ.

"ಹೂಂ, ಪೆಶ್ಕೋವ್. ಈ ಮೇಜಿನವಸ್ತ್ರ ನೀನೂ ಒಂದು ಕೈನೋಡು."

ಹೀಗೆ, ಭಾರವಾದ ಸೂಜಿಯನ್ನೆತ್ತಿಕೊಂಡು ನಾನೂ ಒಂದು ಕೈ ನೋಡುತ್ತಿದ್ದೆ. ನನ್ನ ಯಜಮಾನನ ಬಗೆಗೆ ನನಗೆ ಕನಿಕರವಿತ್ತು. ಸಾಧ್ಯವಿದ್ದ ಯಾವುದೇ ಬಗೆಯಲ್ಲಿ ಅವನಿಗೆ ನೆರವಾಗಲೂ ನಾನು ಯಾವಾಗಲೂ ಕಾತರನಾಗಿದ್ದೆ. ಕೆಲವು ಸಾರೆ ಆತ, ಇದ್ದಕ್ಕಿದ್ದಂತೆ ಕೆಲಸ ನಿಲ್ಲಿಸಿ, ಮೊದಲ ಬಾರಿಗೆ ಕಾಣುತ್ತಿರುವನೇನೋ ಎನ್ನುವಂತೆ ಅಚ್ಚರಿಯ ನೋಟದಿಂದ ಅದನ್ನೆ ದಿಟ್ಟಿಸುವುದಿತ್ತು. ದಿಟ್ಟಿಸುತ್ತ ಯಾವುದೋ ಕನಸನ್ನು ಕಾಣುವುದಿತ್ತು. ಒಂದುದಿನ, ನಕಾಶೆ ಬಿಡಿಸುವ ಹೊಲಿಯುವ ಇಸ್ತ್ರೀಟಾಡುವ ಕೆಲಸವನ್ನೆಲ್ಲ ನಿಲ್ಲಿಸಿ, ಬೇರೆ ಏನನ್ನಾದರೂ—ತಾನು ಕನಸು ಕಾಣುತ್ತಿದ್ದ ಸ್ವಾರಸ್ಯವಾದುದನ್ನೇನಾದರೂ ಆತ ಮಾಡುವನೆಂದು ನನಗೆ ಅನಿಸುತ್ತಿತ್ತು. ಹುಬ್ಬುಗಳ ಮೇಲೂ ಕೆನ್ನೆಗಳಮೇಲೂ ಕೂದಲು ಹರಿದಾಡುತ್ತ ಆತ ಅಲ್ಲಿ ನಿಂತಾಗ, ಸನ್ಯಾಸಿಗಳ ಮಠವನ್ನು ಸೇರಿದ ಹೊಸಬನಂತೆ ಕಾಣಿಸುತ್ತಿದ್ದ.

"ಯಾವ ವಿಷಯ ಯೋಚಿಸ್ತಿದೀಯಾ?" ಎಂದು ಅವನ ಹೆಂಡತಿ ಕೇಳುತ್ತಿದ್ದಳು.

ತನ್ನ ಕೆಲಸ ಮುಂದುವರಿಸುತ್ತ ಆತ ಉತ್ತರವೀಯುತ್ತಿದ್ದ:

"ವಿಶೇಷವಾದ್ದೇನೂ ಇಲ್ಲ."

ಮೌನವಾಗಿ ನಾನು ಅಚ್ಚರಿಪಡುತ್ತಿದ್ದೆ. ಯಾವ ವಿಷಯ ಯೋಚಿಸುತ್ತಿರುವೆ ಎಂದು ಒಬ್ಬ ವ್ಯಕ್ತಿಯನ್ನು ಕೇಳುವುದು ಹೇಗೆ? ಅಂತಹ ಪ್ರಶ್ನೆಗೆ ಅವನು ಉತ್ತರವೀಯುವುದಾದರೂ ಹೇಗೆ? ಒಬ್ಬ ವ್ಯಕ್ತಿ ಏಕಕಾಲದಲ್ಲೇ ಎಷ್ಟೋ ವಿಷಯ ಯೋಚಿಸಬಹುದು:—ಅವನ ಕಣ್ಣುಗಳು ಈಗ ಕಾಣುತ್ತಿರುವುದನ್ನು, ಅಥವಾ ನಿನ್ನೆ ಕಂಡುದನ್ನು, ಇಲ್ಲವೆ ಕಳೆದ ವರ್ಷ ನೋಡಿದುದನ್ನು. ಈ ಎಲ್ಲ ಚಿತ್ರಗಳು ಅಸ್ಪಷ್ಟವಾಗಿರುತ್ತವೆ, ಸಿಕ್ಕುಸಿಕ್ಕಾಗಿರುತ್ತವೆ; ಸದಾ ಚಲಿಸುತ್ತಿರುತ್ತವೆ, ಸದಾ

ಬದಲಾಗುತ್ತಿರುತ್ತವೆ.

'ಮಾಸ್ಕೋ ಕರಪತ್ರ'ದಲ್ಲಿದ್ದ ಲೇಖನಗಳು ಒಂದೇ ಸಂಜೆಗೆ ಸಾಲುತ್ತಿದ್ದುವು. ಮಲಗುವ ಮನೆಯಲ್ಲಿ ಮಂಚದ ಕೆಳಗೆ ರಾಶಿಹಾಕಿದ್ದ ವಾಸಪತ್ರಿಕೆಗಳನ್ನು ಓದಬಹುದೆಂದು ನಾನು ಸಲಹೆ ಮಾಡಿದೆ.

ನನ್ನ ಕಿರಿಯ ಯಜಮಾನಿತಿ ಶಂಕಿಸುತ್ತ ಕೇಳಿದಳು:

"ಓದಲು ಅವುಗಳಲ್ಲೇನಿದೆ? ಬರೇ ಚಿತ್ರಗಳು. ಬೇರೆ ಏನೂ ಇಲ್ಲ."

ಮಂಚದ ಕೆಳಗೆ ಕೂಡಿ ಇಟ್ಟಿದ್ದುದು, 'ಪಿಕ್ಚರ್‌ರಿವ್ಯೂ' ['ಚಿತ್ರಸಮೀಕ್ಷೆ'] ಒಂದೇ ಅಲ್ಲ. 'ಜ್ವಾಲೆ'ಯೂ ಅಲ್ಲಿತ್ತು. ಅದರಿಂದ, ಸಾಲಿಯಾಸ್ ಬರೆದ 'ಕೌಂಟ್ ತ್ಯಾತಿನ್—ಬಾಲ್ಟೈಸ್ಕಿ' ಯನ್ನು ನಾವು ಓದತೊಡಗಿದೆವು. ಈ ಕಥೆಯ ಮೂರ್ಖನಾಯಕ, ನನ್ನ ಯಜಮಾನನಿಗೆ ಬಹಳ ಪ್ರಿಯನಾದ. ಆ ಯುವಕ ಸದ್ಗೃಹಸ್ಥನ ವಿಷಾದಕರ ಸಾಹಸಗಳಿಗಾಗಿ, ಕೆನ್ನೆಗಳ ಮೇಲೆ ಕಂಬನಿ ಹರಿಯುವವರೆಗೂ ಬಿದ್ದುಬಿದ್ದು ನಗುತ್ತಿದ್ದ.

"ಓ! ಎಷ್ಟೊಂದು ತಮಾಷೆಯಾಗಿದೆ!" ಎಂದು ಅವನು ಕೂಗಿ ನುಡಿಯುತ್ತಿದ್ದ.

ತನ್ನ ಅಭಿಪ್ರಾಯ ಸ್ವಾತಂತ್ರ್ಯವನ್ನು ಪ್ರದರ್ಶಿಸುವುದಕ್ಕಾಗಿ, ಅವನ ಹೆಂಡತಿ ಅನ್ನುತ್ತಿದ್ದಳು:

"ಇದೆಲ್ಲಾ ಕಟ್ಟುಕಥೆ."

ಮಂಚದ ಕೆಳಗಿದ್ದ ಸಂಪುಟಗಳಿಂದ ನನಗೆ ದೊಡ್ಡ ಸಹಾಯವಾಯಿತು. ಅವುಗಳಿಂದಾಗಿ, ನಿಯತಕಾಲಿಕಗಳನ್ನು ಅಡುಗೆಮನೆಗೆ ಒಯ್ದು ರಾತ್ರೆಹೊತ್ತು ಓದುವ ಹಕ್ಕನ್ನು ನಾನು ಗಳಿಸಿದೆ.

ನನ್ನ ಅದೃಷ್ಟವೆನ್ನಬೇಕು, ದಾದಿ ಕುಡಿತದ ಕೇಳಿಗಾಗಿ ಹೊರಹೋದೊಡನೆ, ಮುದುಕಿ ನಿದ್ದೆಹೋಗಲೆಂದು ಮಲಗುವ ಮನೆಗೆ ತೆರಳುತ್ತಿದ್ದಳು. ನಾನು ಪುಸ್ತಕ ಓದುವುದಕ್ಕೆ ವಿಕ್ಟರನ ಆಕ್ಷೇಪವಿರಲಿಲ್ಲ. ಎಲ್ಲರೂ ನಿದ್ದೆಹೋದ ಬಳಿಕ ಆತ ಸದ್ದಿಲ್ಲದೆ ಪೋಷಾಕುಧರಿಸಿ, ಬೆಳಗಿನ ವರೆಗೂ ಮಾಯವಾಗುತ್ತಿದ್ದ. ನನ್ನ ಒಡತಿ ಯಾವಾಗಲೂ ಮೋಂಬತ್ತಿಯನ್ನು ಇನ್ನೊಂದು ಕೊಠಡಿಗೆ ಒಯ್ಯುತ್ತಿದ್ದಳು. ಹೀಗಾಗಿ, ನನ್ನಲ್ಲಿ ಯಾವ ದೀಪವೂ ಇರುತ್ತಿರಲಿಲ್ಲ. ಮೋಂಬತ್ತಿ ಕೊಳ್ಳಲು ನನ್ನ ಹತ್ತಿರ ಹಣವಿರಲಿಲ್ಲವಾದ್ದರಿಂದ, ಮೋಂಬತ್ತಿಗಳಿಂದ ಕರಗಿ ಸುರಿಯುತ್ತಿದ್ದ ಮೇಣವನ್ನು ಗುಟ್ಟಾಗಿ ಸಂಗ್ರಹಿಸಿ, ಸಾರ್ಡಿನುಗಳ ಖಾಲಿಡಬ್ಬದಲ್ಲಿ ಹಾಕಿಡುತ್ತಿದ್ದೆ. ದೇವರ ದೀಪದ ಎಣ್ಣೆಯಿಂದ ಅದನ್ನು ಮುಚ್ಚಿ, ನೂಲನ್ನು ತಿರುವಿ ಒಂದು ಬತ್ತಿ ಮಾಡುತ್ತಿದ್ದೆ. ಈ ರೀತಿಯಾಗಿ, ಹೊಗೆ ಬರುತ್ತಿದ್ದ ಒಂದು ದೀಪ ಸಿದ್ಧವಾಗುತ್ತಿತ್ತು. ಅದನ್ನು ಒಲೆಯ ಮೇಲ್ಗಡೆ ಇರಿಸುತ್ತಿದ್ದೆ.

ಈ ಗಾತ್ರದ ಸಂಪುಟಗಳ ಪುಟ ಮಗುಚಿದಾಗಲೆಲ್ಲ, ಜ್ಯೋತಿಯ ಪುಟ್ಟ ಕೆಂಪು ನಾಲಗೆ ಹೊಯ್ದಾಡಿ, ನಂದಿಹೋಗುವ ಭೀತಿ ತೋರುತ್ತಿತ್ತು. ಬತ್ತಿ, ವಾಸನೆ ಬರುತ್ತಿದ್ದ ಮೇಣದಲ್ಲಿ ಮುಳುಗುತ್ತಲೇ ಇತ್ತು. ಹೊಗೆ, ನನ್ನ ಕಣ್ಣುಗಳನ್ನು ಕುಕ್ಕುತ್ತಿತ್ತು. ಆದರೆ ಈ ತೊಂದರೆಗಳಿಗಿಂತಲೂ, ಚಿತ್ರಗಳನ್ನು ಈಕ್ಷಿಸಿ ಅವುಗಳ ಕೆಳಗಿದ್ದ ವಿವರಣೆಗಳನ್ನು ಓದುವುದರಲ್ಲಿ ನಾನು ತೋರುತ್ತಿದ್ದ ಹರ್ಷ ಅದೆಷ್ಟೋ ಪಾಲು ಮಿಗಿಲಾಗಿತ್ತು.

ಐಶ್ವರ್ಯವಂತ ಶಹರಗಳಿದ್ದ, ಎತ್ತರದ ಪರ್ವತಗಳಿದ್ದ, ಸುಂದರ ಕಡಲದಂಡೆಗಳಿದ್ದ

ಈ ಪ್ರಪಂಚವನ್ನು ಕುರಿತ ನನ್ನ ನೋಟ ಹೆಚ್ಚುಹೆಚ್ಚು ವಿಶಾಲವಾಗುತ್ತ ನಡೆಯಿತು. ಬದುಕು ಅತ್ಯಾಶ್ಚರ್ಯಕರ ರೀತಿಯಲ್ಲಿ ವಿಸ್ತಾರಗೊಂಡಿತು. ಈ ಭೂಮಿಯಲ್ಲಿನ ಪಟ್ಟಣಗಳು, ಜನರು, ಅವರ ಆಸಕ್ತಿಗಳು ಎಷ್ಟೋ ಪಾಲು ಹೆಚ್ಚು ಹೆಚ್ಚಾಗಿದ್ದುದನ್ನು ನಾನು ಅರಿತಂತೆ ಭೂಮಿ ಮತ್ತಷ್ಟು ಸುಂದರವಾಗಿ ನನಗೆ ಕಂಡಿತು. ವೋಲ್ಗಾ ನದಿಯಾಚೆಗಿನ ವಿಸ್ತಾರವನ್ನು ಈಗ ನಾನು ದಿಟ್ಟಿಸಿದಂತೆ, ಅಲ್ಲಿರುವುದು ಶೂನ್ಯಜಾಗವಷ್ಟೇ ಅಲ್ಲ ಎಂಬುದನ್ನು ನಾನು ಮನಗಂಡೆ. ಈ ಒಳಭೂಭಾಗದ ಕಡೆ ನೋಡಿದಾಗಲೆಲ್ಲ, ಯಾವಾಗಲೂ ನನ್ನ ಮನಸ್ಸು ವಿಶೇಷವಾಗಿ ಕುಗ್ಗುತ್ತಿತ್ತು. ಭೂಮಿಯ ಮೇಲೆ ಬಯಲುಗಳು ಅಂಗಾತ ಮಲಗಿರುತ್ತಿದ್ದುವು. ಅಲ್ಲಲ್ಲಿ, ಪೊದೆಪೊದರುಗಳ ಕರಿಯ ಮಚ್ಚೆಗಳು. ಬಯಲುಗಳಾಚೆ ಅಡವಿಯ ಅಂಕಡೊಂಕಾದ ಅಂಚಿರುತ್ತಿತ್ತು. ಮೇಲ್ಗಡೆ ಶೀತಲವಾದ ಮೋಡಕವಿದ ಆಕಾಶದಿಂದ ಆವೃತವಾಗಿರುತ್ತಿತ್ತು ಅಡವಿ. ಭೂಮಿ ಬರಿದಾಗಿ ಏಕಾಂಗಿಯಾಗಿತ್ತು. ನನ್ನ ಹೃದಯವೂ ಬರಿದಾಗಿತ್ತು. ಮೃದುವಾದೊಂದು ವ್ಯಥೆಗೆ ಅದು ಒಳಗಾಗಿತ್ತು. ಎಲ್ಲ ಬಯಕೆಗಳೂ ಮಾಯವಾಗಿ, ಯೋಚಿಸಲು ಏನೂ ಇರುತ್ತಿರಲಿಲ್ಲ. ಕಣ್ಣುಗಳನ್ನು ಮುಚ್ಚಿಕೊಳ್ಳಬೇಕೆಂಬುದಷ್ಟೇ ನನಗಿರುತ್ತಿದ್ದ ಅಪೇಕ್ಷೆ. ಹೃದಯದ ಪ್ರತಿಯೊಂದು ಬಯಕೆಯನ್ನೂ ಹಿಂಡಿಹಾಕುತ್ತಿದ್ದ ಈ ಅನಾಥವಾದ ಶೂನ್ಯದಲ್ಲಿ ನಾಳೆಯ ಬಗೆಗೆ ಯಾವ ಆಸೆಯೂ ಇರಲಿಲ್ಲ.

ಚಿತ್ರಗಳ ಕೆಳಗಿದ್ದ ವಿವರಗಳು, ಬೇರೆ ಭೂಮಿಗಳನ್ನು ಕುರಿತು, ಬೇರೆ ಜನರನ್ನು ಕುರಿತು, ಸರಳವಾಗಿ ಹೇಳಿದುವು. ಗತಕಾಲದ ಹಾಗೂ ವರ್ತಮಾನಕಾಲದ ಅನೇಕ ಘಟನೆಗಳ ಬಗೆಗೆ ಅವು ತಿಳಿಸಿದುವು. ಅವುಗಳಲ್ಲೆಷ್ಟೋ ನನಗೆ ಅರ್ಥವಾಗಲಿಲ್ಲ. ಇದರಿಂದ ನನಗೆ ಕೆಡುಕೆನಿಸಿತು. ಕೆಲವೇಳೆ, 'ಪ್ರಜ್ಞಾವಾದ' 'ನಿರಂತರವಾದ' 'ಚಾರ್ಟಿಸ್ಟ್' ಇಂತಹ ವಿಚಿತ್ರ ಪದಗಳು ನನ್ನ ಮಿದುಳನ್ನು ಇರಿಯುತ್ತಿದ್ದುವು. ಸಾಕೋ ಸಾಕೆನಿಸುವಷ್ಟು ಅವು ಹಿಂಸೆಕೊಡುತ್ತಿದ್ದುವು. ಬೇರೆಲ್ಲವನ್ನೂ ಹಿಂದಕ್ಕೆ ತಳ್ಳಿ ಮನಸ್ಸನ್ನೆಲ್ಲ ತಾವೇ ಆಕ್ರಮಿಸುತ್ತಿದ್ದುವು. ಈ ಪದಗಳ ಅರ್ಥವನ್ನು ಕಂಡು ಹಿಡಿಯಲಾರದೇ ಹೋದೆನೆಂದರೆ, ಎಂದೆಂದೂ ಬೇರೇನೂ ಅರ್ಥವಾಗದು-ಎಂದು ನನಗೆ ಅನಿಸುತ್ತಿತ್ತು. ಎಲ್ಲ ರಹಸ್ಯಗಳ ಹೊಸ್ತಿಲಲ್ಲಿ ಕಾವಲಿರುತ್ತಿದ್ದುದೇ ಆ ಪದಗಳು. ಎಷ್ಟೋ ಸಾರಿ, ಮಾಂಸಕ್ಕೆ ಚುಚ್ಚಿದ ಲೋಹದ ಚೂರುಗಳಂತೆ, ಇಡೀ ವಾಕ್ಯಗಳೇ ನನ್ನ ನೆನಪಿನಲ್ಲಿ ಉಳಿಯುತ್ತಿದ್ದುವು. ಬೇರೇನನ್ನು ಕುರಿತು ಯೋಚಿಸುವುದಕ್ಕೂ ಅವು ಆಸ್ಪದಕೊಡುತ್ತಿರಲಿಲ್ಲ.

ಕೆಲ ವಿಚಿತ್ರ ಸಾಲುಗಳನ್ನು ಓದಿದುದು ನನಗೆ ನೆನಪಿದೆ:

> ಮರಳುಕಾಡ ಮೇಲಿನಿಂದ ಸಾಗಿರುವನು ಅಟ್ಟಿಲಾ,
> ಉಕ್ಕಿನುಡುಪು ಧರಿಸಿಹ, ಹೂಣರ ನಾಯಕ
> ಗೋರಿಯಷ್ಟೆ ಕರಿಯವ, ಆದರಷ್ಟೇ ನೀರವ.

ಅವನ ಹಿಂದೆ ಯೋಧರ ಕರಿಯ ಮೋಡ ಸವಾರಿ ಮಾಡಿತು. ಅವರು ಕೂಗಿನುಡಿಯುತ್ತಿದ್ದರು:

> ಎಲ್ಲಿಹುದು ರೋಮ್, ಬಲಶಾಲಿ ರೋಮ್?

ರೋಮ್ ಒಂದು ನಗರವೆಂಬುದು ನನಗೆ ಗೊತ್ತಿತ್ತು. ಆದರೆ ಹೂಣರು ಯಾರು? ಇದನ್ನು

ನಾನು ಕಂಡು ಹಿಡಿಯಬೇಕಾಯಿತು.

ಅನುಕೂಲ ಘಳಿಗೆ ಒದಗಿಬಂದಾಗ, ನನ್ನ ಯಜಮಾನನನ್ನು ಕೇಳಿ ನೋಡಿದೆ.

ಸ್ವಲ್ಪಮಟ್ಟಿನ ಆಶ್ಚರ್ಯದಿಂದ ಆತನೆಂದ:

"ಹೂಣರು? ಅವರು ಯಾರೋ—ದೈವಕ್ಕೆ ಮಾತ್ರ ಗೊತ್ತು. ಪ್ರಾಯಶಃ ಬರೇ ಕೆಲ ಭಿಕ್ಷುಕರಿರಬಹುದು."

ಅಸಮ್ಮತಿಸೂಚಕವಾಗಿ ತನ್ನ ತಲೆಯನ್ನು ಆತ ಅಲುಗಿಸಿದ.

"ನಿನ್ನ ತಲೆ ತುಂಬಾ ಕಸ ಸೇರ್ಕೊಂಡಿದೆ, ಪೆಶ್ಕೋವ್. ಇದು ಏನೇನೂ ಒಳ್ಳೆಯದಲ್ಲ."

ಒಳ್ಳೆಯದೋ ಕೆಟ್ಟದೋ, ಅರ್ಥವನ್ನಂತೂ ನಾನು ತಿಳಿಯುವುದು ಅಗತ್ಯವಿತ್ತು.

ಸೇನಾತುಕ್ಕಡಿಯ ಧರ್ಮಗುರು ಸೊಲೊವ್ಯೋವ್‌ಗೆ ಹೂಣರು ಯಾರೆಂಬುದು ಗೊತ್ತಿರಲೇ ಬೇಕು ಎಂದು ನಾನು ಭಾವಿಸಿದೆ. ಅಂಗಳದಲ್ಲಿ ಅವನನ್ನು ಸಂಧಿಸಿದಾಗ ನಾನು ಕೇಳಿದೆ.

ಆತ ನಿಸ್ತೇಜಮುಖದ, ಕಾಹಿಲೆಯ, ನಿತ್ಯಸಿಡುಕಿನ ಮನುಷ್ಯ. ಕೆಂಪಗಿನ ಕಣ್ಣುಗಳು ಹುಬ್ಬುಗಳೇ ಇರಲಿಲ್ಲ. ಹಳದಿ ಬಣ್ಣದ ಪುಟ್ಟ ಗಡ್ಡವಿತ್ತು.

ತನ್ನ ಕರಿಯ ನಡೆಗೋಲನ್ನು ನೆಲದೊಳಕ್ಕೆ ತಿವಿದು, ಆತನೆಂದ:

"ಅವರು ಯಾರಾದರೆ ನಿನಗೇನು ?"

ಲೆಫ್ಟಿನೆಂಟ್ ನೆಸ್ತೆರೋವನಿಗೆ ಆ ಪ್ರಶ್ನೆಯನ್ನು ನಾನು ಕೇಳಿದಾಗ, ಅವನು ವ್ಯಗ್ರನಾಗಿ ಉತ್ತರವಿತ್ತ:

"ಏ—ನಂ—ದೆ ?"

ಔಷಧದ ಅಂಗಡಿಗೆ ಹೋಗಿ, ಸ್ನೇಹಪರನಾದ ಕೆಮಿಸ್ಟನನ್ನು ಕೇಳಬೇಕೆಂದು ತೀರ್ಮಾನಿಸಿದೆ. ಅವನಿಗೆ ತಿಳಿವಳಿಕೆಯನ್ನು ಸೂಚಿಸುವ ಮುಖಭಾವವಿತ್ತು. ತನ್ನ ದೊಡ್ಡ ಮೂಗಿನ ಮೇಲೆ, ಬಂಗಾರದ ಚೌಕಟ್ಟಿನ ಕನ್ನಡಕವನ್ನು ಆತ ಧರಿಸಿದ್ದ.

ಕೆಮಿಸ್ಟನಾದ ಪಾವೆಲ್ ಗೋಲ್ಡ್‌ಬರ್ಗ್ ಅಂದ:

"ಹೂಣರು, ಕಿರ್ಗಿಜ್ ಜನರ ಹಾಗೆ ಅಲೆಯುವ ಜನಾಂಗ. ಈಗ ಅವರು ಇಲ್ಲವೇ ಇಲ್ಲ ಅವರ ವಂಶವೇ ಅಳಿದುಹೋಯಿತು."

ನನಗೆ ನಿರಾಸೆಯಾಯಿತು, ಅಸಮಾಧಾನವೆನಿಸಿತು. ಹಾಗಾದುದು ಹೂಣರ ವಂಶ ಅಳಿಯಿತೆಂದಲ್ಲ. ನನ್ನನ್ನು ಅಷ್ಟೊಂದು ಹಿಂಸೆಗೆ ಗುರಿಮಾಡಿದ್ದ ಈ ಪದದ ಅರ್ಥ ಇಷ್ಟೊಂದು ಸರಳವೆನಿಸಿತಲ್ಲ, ನನ್ನಮಟ್ಟಿಗೆ ಯಾವ ಮಹತ್ವವೂ ಅದಕ್ಕೆ ಇಲ್ಲದೆ ಹೋಯಿತಲ್ಲ—ಎಂಬ ಕಾರಣದಿಂದ.

ಆದರೆ ಹೂಣರಿಗೆ ನಾನು ಆಭಾರಿಯಾದೆ. ಅವರಿಗೆ ಸಂಬಂಧಿಸಿದ ನನ್ನ ಆ ಅನುಭವದ ಬಳಿಕ, ಪದಗಳು ನನಗೆ ತೊಂದರೆ ಕೊಡುವುದು ನಿಂತಿತು. ಅಟ್ಟಿಲಾನ ಕೃಪೆಯಿಂದಾಗಿ ಕೆಮಿಸ್ಟ್ ಗೋಲ್ಡ್‌ಬರ್ಗನ ಪರಿಚಯ ನನಗಾಯಿತು.

ಪಾಂಡಿತ್ಯಪೂರ್ಣ ಪದಗಳೆಲ್ಲದರ ಸರಳ ಅರ್ಥ ಈ ಮನುಷ್ಯನಿಗೆ ಗೊತ್ತಿತ್ತು. ಪ್ರತಿಯೊಂದು ರಹಸ್ಯದ ಕೀಲಿಕೈಯೂ ಅವನ ಬಳಿ ಇತ್ತು. ಎರಡು ಬೆರಳುಗಳಿಂದ ತನ್ನ ಕನ್ನಡಕವನ್ನು ಆತ ಸರಿಪಡಿಸುತ್ತಿದ್ದ. ದಪ್ಪಗಿನ ಗಾಜುಗಳ ಮೂಲಕ ನನ್ನ ಕಣ್ಣುಗಳೊಳಕ್ಕೇ ನೆಟ್ಟದೃಷ್ಟಿಯಿಂದ

ನೋಡುತ್ತಿದ್ದ. ನನ್ನ ತಲೆಯೊಳಕ್ಕೆ ಸಣ್ಣ ಮೊಳೆಗಳನ್ನು ಹೊಡೆಯುವವನಂತೆ ನನ್ನೊಡನೆ ಮಾತನಾಡುತ್ತಿದ್ದ.

"ನನ್ನ ಕಿರಿಯ ಸ್ನೇಹಿತನೇ, ಪದಗಳು ಮರದ ಮೇಲಿರುವ ಎಲೆಗಳ ಹಾಗೆ. ಎಲೆಗಳು ಯಾಕೆ ಹಾಗಿವೆ ಅನ್ನೋದನ್ನು ತಿಳಿಯೋದಕ್ಕೆ, ಮರ ಹೇಗೆ ಬೆಳೀತದೆ ಅಂತ ಮೊದಲು ತಿಳಿಕೋಬೇಕು. ನೀನು ಅಭ್ಯಾಸ ಮಾಡ್ಬೇಕು. ಪುಸ್ತಕಗಳು ಸುಂದರವಾದೊಂದು ಉದ್ಯಾನವಿದ್ದ ಹಾಗೆ, ನನ್ನ ಕಿರಿಯ ಸ್ನೇಹಿತ. ಸೊಗಸಾದದ್ದು, ಉಪಯುಕ್ತವಾದದ್ದು—ಎಲ್ಲಾ ಈ ಉದ್ಯಾನದಲ್ಲಿ ಸಿಗ್ತವೆ."

ಯಾವಾಗಲೂ ಎದೆಯುರಿಯಿಂದ ನರಳುತ್ತಿದ್ದ ದೊಡ್ಡಮ್ಮರಿಗಾಗಿ ಸೋಡಾ ಮತ್ತು ಮ್ಯಾಗ್ನೀಸಿಯಾ ತರಲು, ಎಳೆಯ ಕೂಸುಗಳಿಗಾಗಿ ಸುವಾಸನೆ ಎಣ್ಣೆ ಹಾಗೂ ಔಷಧಿಗಳನ್ನು ತರಲು, ಕೆಮಿಸ್ಟನ ಅಂಗಡಿಗೆ ಆಗಾಗ್ಗೆ ನಾನು ಓಡುತ್ತಿದ್ದೆ. ಕೆಮಿಸ್ಟನ ಸರಳಬೋಧನೆಗಳಿಂದ ಸ್ಫೂರ್ತಿಗೊಂಡು, ಪುಸ್ತಕಗಳ ಬಗೆಗೆ ಹೆಚ್ಚು ಗಂಭೀರವಾದ ಧೋರಣೆಯನ್ನು ನಾನು ತಳೆದೆ. ಮುಂದೆ, ನನಗೆ ಅದರ ಅರಿವಿಲ್ಲದೆಯೇ, ಕುಡುಕನಿಗೆ ವೋಡ್ಕಾ ಅವಶ್ಯವೆನಿಸುವಂತೆ, ನನ್ನ ಪಾಲಿಗೆ ಪುಸ್ತಕಗಳು ಅನಿವಾರ್ಯವಾದುವು.

ತೀರಾ ಭಿನ್ನವಾದ ಬದುಕನ್ನು, ಮಹಾಬಯಕೆಗಳಿಂದ ಭಾವೋದ್ವೇಗಗಳಿಂದ ಕೂಡಿದ್ದು ಪಾತಕ ಇಲ್ಲವೆ ಸಾಹಸದೆಡೆಗೆ ಜನರನ್ನು ಒಯ್ಯುವ ಬದುಕನ್ನು, ಪುಸ್ತಕಗಳು ನನಗೆ ತೋರಿಸಿಕೊಟ್ಟುವು. ನನ್ನ ಸುತ್ತಲಿನ ಜನರು, ಪಾತಕಕ್ಕಾಗಲೀ ಸಾಹಸದ ಕೆಲಸಕ್ಕಾಗಲೀ ಅಸಮರ್ಥರೆಂಬುದನ್ನು ನಾನು ಗಮನಿಸಿದೆ. ಪುಸ್ತಕಗಳು ಬರೆದುದಕ್ಕಿಂತೆಲ್ಲ ಬೇರೆಯೇ ಆಗಿ ಅವರು ಜೀವಿಸುತ್ತಿದ್ದರು. ಅವರ ಜೀವನಗಳಲ್ಲಿ ಸ್ವಾರಸ್ಯವಾದುದನ್ನೇನಾದರೂ ಕಂಡುಹಿಡಿಯುವುದು ಕಷ್ಟವಾಗಿತ್ತು. ಅಂತೂ ಒಂದು ವಿಷಯ ನನಗೆ ತಿಳಿದಿತ್ತು—ಅವರಂತೆ ಜೀವಿಸಲು ನಾನು ಇಷ್ಟಪಡಲಿಲ್ಲ.

ಪ್ರಾಗ್, ಲಂಡನ್ ಇಲ್ಲವೆ ಪ್ಯಾರಿಸ್‌ಗಳಲ್ಲಿ ನಗರದ ಕೇಂದ್ರ ಭಾಗದಲ್ಲಿ ತಿಪ್ಪೆತುಂಬಿದ ಅಣೆಕಟ್ಟುಗಳೂ ಕಂದರಗಳೂ ಇಲ್ಲವೆಂದು, ಚಿತ್ರಗಳ ಕೆಳಗಿದ್ದ ವಿವರಣೆಗಳಿಂದ ನಾನು ಅರಿತೆ. ಅಲ್ಲಿ ಬೀದಿಗಳು ನೇರವಾಗಿಯೂ ಅಗಲವಾಗಿಯೂ ಇದ್ದುವು. ಕಟ್ಟಡಗಳೂ ಇಗರ್ಜಿಗಳೂ ತೀರಾ ಬೇರೆಯೇ ಆಗಿದ್ದುವು. ಅಲ್ಲಿ, ಆರು ತಿಂಗಳಷ್ಟು ದೀರ್ಘವಾದ ಚಳಿಗಾಲದ ದೆಸೆಯಿಂದ ಮನೆಗಳೊಳಗೇ ಜನರು ಕುಳಿತುಕೊಳ್ಳುತ್ತಿರಲಿಲ್ಲ. ಉಪ್ಪುಹಾಕಿದ ಕೋಸುಗಡ್ಡೆ, ಉಪ್ಪುಹಾಕಿದ ನಾಯಿಕೊಡೆಗಳು, ಓಟ್‌ಹಿಟ್ಟು, ಅಸಹ್ಯವಾದ ಸಣಬಿನೆಣ್ಣೆ ಬೆರೆಸಿ ಕೊಡುತ್ತಿದ್ದ ಆಲೂಗಡ್ಡೆ-ಇವುಗಳ ಹೊರತಾಗಿ ಬೇರೇನನ್ನೂ ತಿನ್ನಬಾರದಂತಹ ಲೆಂಟ್ ಹಬ್ಬವನ್ನು ಅಲ್ಲಿ ಜನ ಆಚರಿಸುತ್ತಿರಲಿಲ್ಲ. ಲೆಂಟ್ ಹಬ್ಬದ ಅವಧಿಯಲ್ಲಿ ಪುಸ್ತಕಗಳನ್ನು ಓದುವುದು ನಿಷಿದ್ಧವಾಗಿತ್ತು. 'ಚಿತ್ರಸಮೀಕ್ಷೆ'ಯನ್ನು ನನ್ನಿಂದ ತೆಗೆದುಕೊಂಡುಬಿಟ್ಟರು. ಅನಿವಾರ್ಯವಾಗಿ ನಾನು, ಬರಿದಾದ ನೀರಸ ಜೀವನದ ಒಂದಂಗವಾಗಬೇಕಾಯಿತು. ಪುಸ್ತಕಗಳಲ್ಲಿ ವರ್ಣಿತವಾದ ಬದುಕಿನೊಡನೆ ಇದನ್ನು ಹೋಲಿಸಲು ಈಗ ನಾನು ಶಕ್ತನಾಗಿದ್ದುದರಿಂದ, ಈ ಬದುಕು ಮತ್ತಷ್ಟು ಬೋಳಾಗಿ ಕುರೂಪವಾಗಿ ಕಂಡಿತು. ಈ ಓದುವಿಕೆಯ ಪ್ರಭಾವದ ಕೆಳಗೆ, ನಾನು ಹೆಚ್ಚು ಬಲಿಷ್ಠನೆನಿಸಿತು. ಕೆಲಸ ಎಷ್ಟು ಬೇಗನೆ ಮುಗಿಯುತ್ತದೋ ಅಷ್ಟು ಹೆಚ್ಚು ಹೊತ್ತು ಓದಲು ಸಿಗುವುದು—ಎಂಬ

ಧ್ಯೇಯ ಈಗ ನನ್ನ ಮುಂದಿದ್ದುದರಿಂದ, ಮನಸ್ಸಿಟ್ಟು ಉದ್ವೇಗದಿಂದ ನಾನು ದುಡಿದೆ. ಪುಸ್ತಕಗಳನ್ನು ಕಳೆದುಕೊಂಡೊಡನೆ ನಾನು ಸೋಮಾರಿಯಾದೆ, ಮನಸಿನ ನೆಮ್ಮದಿ ನಷ್ಟವಾಯಿತು. ಹಿಂದೆಂದೂ ತಿಳಿದಿರದಂತಹ ಅಸ್ವಾಸ್ಥ್ಯವೆನಿಸುವ ಮರವೆ ಈಗ ನನ್ನನ್ನು ಆವರಿಸಿತು.

ರಹಸ್ಯಪೂರ್ಣವಾದೊಂದು ಘಟನೆ ಈ ನೀರಸ ದಿನಗಳಲ್ಲಿ ನಡೆಯಿತೆಂಬುದು ನನಗೆ ನೆನಪಿದೆ. ಒಂದು ಸಂಜೆ, ಎಲ್ಲರೂ ಪವಡಿಸುತ್ತಿದ್ದ ವೇಳೆ, ಇಗರ್ಜಿಯ ಘಂಟೆ ಇದ್ದಕಿದ್ದಂತೆ ಬಾರಿಸತೊಡಗಿತು. ತಕ್ಷಣವೇ ಎಚ್ಚರಗೊಂಡು, ತೊಟ್ಟಿದ್ದ ಅರೆಪೋಷಾಕಿನಲ್ಲೇ ಎಲ್ಲರೂ ಕಿಟಿಕಿಗಳತ್ತ ಧಾವಿಸಿದರು.

"ಅಪಾಯದ ಗಂಟೆಯೆ? ಬೆಂಕಿ ಬಿತ್ತೆ?" ಎಂದು ಅವರು ಒಬ್ಬರನ್ನೊಬ್ಬರು ಕೇಳಿದರು.

ಆಚೀಚಿನ ಮಹಡಿ ಮನೆಗಳಲ್ಲೂ ಜನ ಅತ್ತಿತ್ತ ಚಲಿಸುತ್ತಿದ್ದುದು, ಬಾಗಿಲುಗಳಿಗೆ ಬಡಿಯುತ್ತಿದ್ದುದು, ನಮಗೆ ಕೇಳಿಸುತ್ತಿತ್ತು. ಕಡಿವಾಣವನ್ನು ಕೈಲಿಹಿಡಿದು ಕುದುರೆ ನಡೆಸಿಕೊಂಡು ಅಂಗಳದ ಮೂಲಕ ಯಾರೋ ಓಡಿದರು. ನನ್ನ ಮುದಿಯಜಮಾನಿ, ಇಗರ್ಜಿಯನ್ನು ಕಳ್ಳರು ಕೊಳ್ಳೆಹೊಡೆದಿರಬೇಕೆಂದು ಬೊಬ್ಬಿಟ್ಟಳು. ಆದರೆ ನನ್ನ ಒಡೆಯ, ಆಕೆಯ ಬಾಯಿ ಮುಚ್ಚಿಸಿದ.

"ಶಾಂತಳಾಗಮ್ಮ! ಅದು ಅಪಾಯದ ಗಂಟೆ ಅಲ್ಲ ಅನ್ನೋದು ಯಾರಿಗಾದರೂ ತಿಳಿದೀತು."

"ಹಾಗಾದರೆ ಬಿಶಪರು ಸತ್ತಿರಬೇಕು."

ವಿಕ್ಟರ್ ತನ್ನ ಮಂಚದಿಂದ ಕೆಳಕ್ಕಿಳಿದ. ಉಡುಪು ಧರಿಸುತ್ತ ಅವನೆಂದ:

"ಏನು ಸಂಭವಿಸಿದೆ ಅನ್ನೋದು ನನಗೆ ಗೊತ್ತು, ನನಗೆ ಗೊತ್ತು."

ಆಕಾಶ ಬೆಳಗುತ್ತಿದೆಯೇ ಎಂದು ನೋಡುವುದಕ್ಕೋಸ್ಕರ ನನ್ನ ಯಜಮಾನ ನನ್ನನ್ನು ಅಟ್ಟದ ಮೇಲಕ್ಕೆ ಕಳುಹಿದ. ನಾನು ಮೇಲಕ್ಕೆ ಓಡಿ, ಛಾವಣಿ ಕಿಟಕಿಯಿಂದ ಹೊರನುಸುಳಿ, ಮಾಡದ ಮೇಲೆ ನಿಂತೆ. ಏನೂ ಬೆಳಗುತ್ತಿರಲಿಲ್ಲ. ಆದರೆ, ಶಾಂತವಾದ ಹೆಪ್ಪುಗಟ್ಟಿದ ಗಾಳಿಯಲ್ಲಿ ದೊಡ್ಡ ಗಂಟೆ ಬಾರಿಸುತ್ತಲೇ ಇತ್ತು. ಓಡುತ್ತಿದ್ದ ಅಪರಿಚಿತ ಜನರ ಕಾಲ್ತುಳಿತದ ಕೆಳಗೆ ಮಂಜುಗಡ್ಡೆ ಕರಕ್ಕೆಂದು ಸದ್ದುಮಾಡುತ್ತ ನಜ್ಜುಗುಜ್ಜಾಯಿತು. ಧಾವಿಸುತ್ತಿದ್ದ ಹಿಮಗಾಡಿಗಳ ಕರ್ಕಶಧ್ವನಿ ಕೇಳಿಸಿತು. ಎಲ್ಲದಕ್ಕಿಂತಲೂ ಹೆಚ್ಚು ಅಶುಭಸೂಚಕವಾಗಿ ಧ್ವನಿಸಿತು ದೊಡ್ಡ ಘಂಟೆ. ನಾನು ಕೆಳಕ್ಕೆ ಮರಳಿದೆ.

"ಬೆಂಕಿ ಇಲ್ಲ."

"ತ್ಸು-ತ್ಸು!" ಎಂದು, ಆಗಾಗಲೇ ಹ್ಯಾಟ್ ಮತ್ತು ಕೋಟು ಧರಿಸಿದ್ದ ನನ್ನ ಯಜಮಾನನೆಂದ. ಆತ ಕಾಲರನ್ನು ಮೇಲಕ್ಕೆಳೆದುಕೊಂಡು, ಪಾದರಕ್ಷೆಗಳೊಳಕ್ಕೆ ಅನಿಶ್ಚಿತವಾಗಿ ತನ್ನ ಪಾದಗಳನ್ನು ತಳ್ಳತೊಡಗಿದ.

"ಹೋಗ್ಬೇಡ, ಹೋಗ್ಬೇಡ," ಎಂದು ಅವನ ಹೆಂಡತಿ ಯಾಚಿಸಿದಳು.

"ತಲೆಹರಟೆ."

ತಾನೂ ಹ್ಯಾಟು ಮತ್ತು ಕೋಟು ಧರಿಸಿದ್ದ ವಿಕ್ಟರ್, ಪ್ರತಿಯೊಬ್ಬರನ್ನೂ ಛೇಡಿಸುತ್ತಲೇ ಇದ್ದ.

"ಅದೇನೂಂತ ನನಗೆ ಗೊತ್ತು!"

ಸೋದರರಿಬ್ಬರೂ ಹೊರಟ ಬಳಿಕ, ಸ್ತ್ರೀಯರು, ಚಾದಾನಿ ಬಿಸಿಮಾಡುವಂತೆ ನನಗೆ ಆಜ್ಞಾಪಿಸಿದರು. ತಾವು ಕಿಟಿಕಿಗಳ ಬಳಿ ಕುಳಿತುಕೊಂಡರು. ಆದರೆ ಆಕ್ಷಣವೇ ಯಜಮಾನ ಹೊರಗಿಂದ ಬಾಗಿಲಗಂಟೆ ಬಾರಿಸಿದ. ಮೌನವಾಗಿ ಮಹಡಿಯ ಮೇಲಕ್ಕೆ ವೇಗವಾಗಿ ಹತ್ತಿದ. ನಡುಮನೆಯ ಬಾಗಿಲನ್ನು ತೆರೆದು, ದಪ್ಪನೆಯ ಧ್ವನಿಯಲ್ಲಿ ಸಾರಿದ:

"ಜಾರ್‌ನ ಕೊಲೆಯಾಗಿದೆ!"

"ಕೊಲೆಯಾಗಿದೆ ಅಂದೆಯೇನಪ್ಪ!" ಎಂದು ಮುದುಕಿ ಉದ್ಗರಿಸಿದಳು.

"ಹೌದು, ಕೊಲೆಯಾಗಿದೆ. ಒಬ್ಬ ಅಧಿಕಾರಿ ಹೇಳಿದ. ಈಗ ಏನಾಗುತ್ತೊ?"

ಅಷ್ಟರಲ್ಲೇ ವಿಕ್ಟರನೂ ಬಾಗಿಲಗಂಟೆ ಬಾರಿಸಿಬಂದ. ಪಾದರಕ್ಷೆಗಳನ್ನೂ ಪೋಷಾಕನ್ನೂ ಕಳಚುತ್ತಾ, ಪದಗಳನ್ನು ತೂಗಿತೂಗಿ ಅಂದ:

"ಯುದ್ಧ ಶುರುವಾಯ್ತೇನೊ ಅಂದ್ಕೊಂಡಿದ್ದೆ ನಾನು!"

ಆ ಬಳಿಕ ಎಲ್ಲರೂ ಚಹಾ ಕುಡಿಯುವುದಕ್ಕೂ ತಗ್ಗಿದ—ಅತಿ ಎಚ್ಚರದ—ಧ್ವನಿಗಳಲ್ಲಿ ಮಾತನಾಡುವುದಕ್ಕೂ ತೊಡಗಿದರು. ಹೊರಗೆ ಪ್ರತಿಯೊಂದೂ ನಿಶ್ಶಬ್ದವಾಗಿತ್ತು. ಗಂಟೆ ಬಾರಿಸುವುದು ನಿಂತಿತ್ತು.....ಎರಡು ದಿನಗಳವರೆಗೂ ಜನರು ಪಿಸುದನಿಯಲ್ಲೇ ಮಾತ ನಾಡಿದರು. ಸ್ನೇಹಿತರಲ್ಲಿಗೆ ಹೋಗಿಬಂದರು. ತಾವೂ ಸ್ನೇಹಿತರನ್ನು ಬರಮಾಡಿಕೊಂಡರು. ಪ್ರತಿಯೊಂದರ ಬಗೆಗೂ ವಿವರವಾಗಿ ಆಡಿದ್ದನ್ನೇ ಆಡಿದರು. ನಿಜವಾಗಿ ನಡೆದುದೇನೆಂಬುದನ್ನು ತಿಳಿದುಕೊಳ್ಳಲು ನಾನು ಬಹಳವಾಗಿ ಯತ್ನಿಸಿದೆ. ಆದರೆ ನನ್ನ ಮಾಲಿಕರು, ವೃತ್ತಪತ್ರಿಕೆ ಗಳನ್ನು ನನ್ನಿಂದ ಬಚ್ಚಿಟ್ಟರು. ಯಾಕೆ ಜಾರ್‌ನ ಕೊಲೆಯಾಯಿತೆಂದು ಸಿದೊರೋವ್‌ನನ್ನು ನಾನು ಕೇಳಿದಾಗ, ಆತ ಮೃದುವಾಗಿ ಉತ್ತರವಿತ್ತ:

"ಆ ವಿಷಯ ಮಾತನಾಡೋದು ನಿಷಿದ್ಧ."

ನಿತ್ಯದ ಬದುಕಿನ ಯೋಚನೆ ಸಮಸ್ಯೆಗಳ ಮರೆಯಲ್ಲಿ ಘಟನೆಯಿಡೀ ಬೇಗನೆ ಮರೆಯಲ್ಪಟ್ಟಿತು. ಸ್ವಲ್ಪ ಸಮಯದಲ್ಲೇ ನನಗೆ ಅತ್ಯಂತ ಅಪ್ರಿಯವಾದೊಂದು ಅನುಭವವಾಯಿತು.

ಒಂದು ಭಾನುವಾರ ಕುಟುಂಬ ಪ್ರಾತಃಕಾಲದ ಪ್ರಾರ್ಥನೆಗೆ ಹೋಗಿದ್ದಾಗ, ಚಾದಾನಿಯನ್ನು ಬಿಸಿಮಾಡಿ, ವಸತಿಯನ್ನು ಚೊಕ್ಕಟಪಡಿಸತೊಡಗಿದೆ. ಆಗ ಮಗು ಅಡುಗೆಮನೆಯನ್ನು ಹೊಕ್ಕಿತು. ಚಾದಾನಿಯ ಮುಚ್ಚಳವನ್ನು ಎಳೆದು ತೆಗೆದು, ಅದರೊಡನೆ ಆಟವಾಡಲೆಂದು ಮೇಜಿನ ಕೆಳಕ್ಕೆ ಹರಿಯಿತು. ಚಾದಾನಿಯ ಕೊಳವೆಯೊಳಗೆ ಉರಿಯುತ್ತಿದ್ದ ಕಲ್ಲಿದ್ದಲಿತ್ತು. ನೀರು ಹೊರಕ್ಕೆ ಹರಿಯತೊಡಗಿದಾಗ, ಇಡೀ ಚಾದಾನಿಯೇ ಬಿಚ್ಚಿಕೊಂಡು ಬಂತು. ವಿಚಿತ್ರ ರಭಸದಿಂದ ಅದು ಮಾಡುತ್ತಿದ್ದ ಗರಗರಸದ್ದು, ಇನ್ನೊಂದು ಕೊಠಡಿಯಲ್ಲಿದ್ದ ನನಗೆ ಕೇಳಿಸಿತು. ನಾನು ಅಡುಗೆಮನೆಗೆ ಧಾವಿಸಿ ಬಂದೆ. ಚಾದಾನಿ ಕಪ್ಪಗಾಗಿ ಚಳಿಜ್ವರ ಹಿಡಿದವರಂತೆ ನಡುಗುತ್ತಿದ್ದುದನ್ನು ಕಂಡು ತಲ್ಲಣಗೊಂಡೆ. ಮುಚ್ಚಳ ಅಂಟಿಸಿದ್ದ ಕೊಳವೆ ಕಳಚಿ ಬಂದು, ಅಸಹಾಯವಾಗಿ ತೂಗಾಡುತ್ತಿತ್ತು. ಮುಚ್ಚಳ ಹೊರಳಿಬಿದ್ದಿತ್ತು. ಹಿಡಿಗಳ ಕೆಳಗೆ ಬೂದು ಬಣ್ಣದ ತಗಡು ಕರಗಿ ತೊಟ್ಟಿಕ್ಕುತ್ತಿತ್ತು. ಕುಡಿದು ಅಮಲೇರಿದ ಹಾಗಿತ್ತು ಕಪ್ಪು-ನೀಲಿ ಬಣ್ಣದ ಚಾದಾನಿ. ಅದರ ಮೇಲಕ್ಕೆ ನಾನು ತಣ್ಣೀರೆರಚಿದಾಗ, ಅದು ಸುಂಯ್‌ಗುಟ್ಟಿ ವ್ಯಥೆಯಿಂದ ನೆಲದ ಮೇಲೆ ಕುಸಿದುಬಿತ್ತು.

ಆ ಘಳಿಗೆಯಲ್ಲೇ ಹೊರಗೆ ಬಾಗಿಲಗಂಟೆಯ ಸದ್ದಾಯಿತು. ನಾನು ಕದ ತೆರೆದಾಗ ಮುದುಕಿ ಕೇಳಿದ ಮೊದಲ ಪ್ರಶ್ನೆ:

"ಚಾದಾನಿ ಮರಳಿದೆಯೆ?"

"ಹೌದು, ಮರಳಿದೆ," ಎಂದು ನಾನು ಚುಟುಕಾಗಿ ಉತ್ತರವಿತ್ತೆ.

ಈ ಉತ್ತರ ಹೊರಟುದು, ಭಯದಿಂದ—ನಾಚಿಕೆಯಿಂದ. ಆದರೆ ಅದು, ಹಾಸ್ಯೋಕ್ತಿ ಯಾಡಲು ನಾನು ನಡಸಿದ ಒಂದು ಕೆಟ್ಟ ಯತ್ನ—ಎಂದು ಪರಿಗಣಿಸಲ್ಪಟ್ಟಿತು. ಆ ಪ್ರಕಾರ ನನ್ನ ಶಿಕ್ಷೆ ಹೆಚ್ಚಿತು. ಭಡಿ ಏಟು ದೊರೆಯಿತು. ಪೈನ್ ಮರದ ಕೋಲುಗಳ ಒಂದು ಕಟ್ಟನ್ನೇ ತಂದು, ಮುದುಕಿಯೇ ಆ ದಂಡನೆಯನ್ನು ವಿಧಿಸಿದಳು. ಶಿಕ್ಷೆಯ ಕ್ರಿಯೆಯಿಂದ ಅಷ್ಟೊಂದು ನೋವಾಗಲಿಲ್ಲ. ಆದರೆ, ಕೋಲುಗಳ ಅಸಂಖ್ಯ ಚೂರುಗಳು ನನ್ನ ಮಾಂಸವನ್ನು ಆಳಕ್ಕೆ ಹೊಕ್ಕುಬಿಟ್ಟುವು. ಸಂಜೆಯೊಳಗಾಗಿ ನನ್ನ ಬೆನ್ನು ತಲೆದಿಂಬಿನಂತೆ ಊದಿಕೊಂಡಿತು. ಮಾರನೆಯ ಮಧ್ಯಾಹ್ನದ ಹೊತ್ತಿಗೆ, ನನ್ನ ಯಜಮಾನ ನನ್ನನ್ನು ಆಸ್ಪತ್ರೆಗೆ ಒಯ್ಯಬೇಕಾಯಿತು.

ಡಾಕ್ಟರು ತಮಾಷೆ ಎನಿಸುವಷ್ಟು ಎತ್ತರಕ್ಕೆ—ತೆಳ್ಳಗೆ—ಇದ್ದರು.. ಅವರು ನನ್ನನ್ನು ಪರೀಕ್ಷಿಸಿ, ಆಳವಾದ ಶಾಂತಸ್ವರದಲ್ಲಿ ಅಂದರು:

"ಈ ಕ್ರೌರ್ಯಕ್ಕೊಂದು ಅಧಿಕೃತ ಸಾಕ್ಷಿಪತ್ರವನ್ನು ನಾನು ತಯಾರುಮಾಡಬೇಕಾಗಿದೆ."

ನನ್ನ ಯಜಮಾನನ ಮುಖ ರಂಗೇರಿತು. ಆತ ತನ್ನ ಪಾದಗಳನ್ನು ಅತ್ತಿತ್ತ ಬದಲಿಸಿದ. ಡಾಕ್ಟರರೊಡನೆ ಏನನ್ನೋ ತೊದಲತೊಡಗಿದ. ಆದರೆ ಡಾಕ್ಟರು, ಅವನ ತಲೆಯ ಮೇಲಿಂದ ನೆಟ್ಟಗೆ ನೋಡಿ, ಸರಳವಾಗಿ ಉತ್ತರವಿತ್ತರು:

"ಹಾಗೆ ಮಾಡೋಕಾಗೋದಿಲ್ಲ. ಹಕ್ಕಿಲ್ಲ."

ಬಳಿಕ ನನ್ನೆಡೆಗೆ ತಿರುಗಿ ಅವರೆಂದರು:

"ದೂರು ಕೊಡೋದಕ್ಕೆ ಅಪೇಕ್ಷಿಸ್ತೀಯೇನು?"

ನನ್ನ ಬೆನ್ನು ಬಹಳವಾಗಿ ನೋಯುತ್ತಿತ್ತು. ಆ ನೋವೊಂದನ್ನೆ ನೆನೆಸುತ್ತ ನಾನೆಂದೆ:

"ಇಲ್ಲ, ಅಪೇಕ್ಷಿಸೋದಿಲ್ಲ. ನನಗೋಸ್ಕರ ಬೇಗನೆ ಏನಾದರೂ ಸ್ವಲ್ಪಮಾಡಿ."

ಅವರು ನನ್ನನ್ನು ಬೇರೊಂದು ಕೊಠಡಿಗೆ ಒಯ್ದರು. ಮೇಜಿನ ಮೇಲೆ ಮಲಗಿಸಿದರು. ತಣ್ಣಗೆ ಕೊರೆಯುವಂಥ ಇಕ್ಕುಳಗಳಿಂದ, ಡಾಕ್ಟರು ಆ ಚೂರುಗಳನ್ನು ಎಳೆದು ತೆಗೆದರು. ನಗೆ ಮಾತುಗಳನ್ನಾಡುತ್ತಲೇ ಕೆಲಸವನ್ನು ಮಾಡಿದರು.

"ಈ ನಿನ್ನ ತೊಗಲಿಗೆ ಯಾವ ಗತಿ ಮಾಡಿಬಿಟ್ಟಿದಾರಂತೀಯಾ, ತಮ್ಮ! ಇವತ್ತಿನಿಂದ ನಿನಗೆ ನೀರೇ ತಟ್ಟದು."

ಸಹಿಸಲಾಗದಂತೆ ಕಚಗುಳಿ ಇಡುತ್ತ ತಮ್ಮ ಕೆಲಸವನ್ನು ಮುಗಿಸಿದ ಬಳಿಕ ಅವರೆಂದರು:

"ನಾಲ್ವತ್ತೆರಡು ಚೂರುಗಳನ್ನು ಎಳೆದು ತೆಗೆದೆ, ತಮ್ಮ! ನಿನ್ನ ಸಂಗಡಿಗರ ಜತೆ ಧಾರಾಳ ವಾಗಿ ಬಡಾಯಿಕೊಚ್ಚಬಹುದು ನೀನು! ಬ್ಯಾಂಡೇಜು ಬದಲಾಯಿಸಿಕೊಳ್ಳೋದಕ್ಕೆ ನಾಳೆ ಇದೇ ಹೊತ್ತಿಗೆ ಬಾ. ನಿನಗೆ ಅವರು ಪದೇ ಪದೇ ಹೊಡೀತಾರೇನು?"

ಒಂದುಕ್ಷಣ ಯೋಚಿಸಿ ನಾನು ಉತ್ತರವಿತ್ತೆ:

"ಹಿಂದೆ 'ಇನ್ನೂ ಹೆಚ್ಚು ಹೆಚ್ಚು ಸಾರೆ ಹೊಡೀತಿದ್ರು."

ತಮ್ಮ ಆಳವಾದ ಧ್ವನಿಯಲ್ಲಿ ಡಾಕ್ಟರು ನಕ್ಕರು.

"ಇದೆಲ್ಲಾ ಒಳ್ಳೇದಕ್ಕೇ ತಮ್ಮ, ಎಲ್ಲಾ ಒಳ್ಳೇದಕ್ಕೇ!"

ಹೊರಗೆ ನನ್ನ ಯಜಮಾನನಿದ್ದಲ್ಲಿಗೆ ನನ್ನನ್ನು ಪುನಃ ಒಯ್ದಾಗ, ಅವನೊಡನೆ ಅವರು ನುಡಿದರು:

"ಹೊಸವಸ್ತಾಲೇ ಅನ್ನೋಹಾಗೆ ರಿಪೇರಿಯಾಗಿದಾನೆ. ನಾಳೆ ವಾಪಸು ಕಳಿಸಿ. ಪುನಃ ಬ್ಯಾಂಡೇಜು ಕಟ್ಟೋಣ. ಹುಡುಗನಿಗೆ ಹಾಸ್ಯಪ್ರವೃತ್ತಿ ಇರೋದು ನಿಮ್ಮ ಅದೃಷ್ಟ.

ಗಾಡಿಯಲ್ಲಿ ಕುಳಿತು ನಾವು ವಾಪಸು ಬರುತ್ತಿದ್ದಾಗ ಯಜಮಾನ ನನ್ನೊಡನೆ ಅಂದ:

"ಹಿಂದೆ ನನಗೂ ಹೊಡೀತಿದ್ರು, ಪೆಶ್ಕೋವ್. ಏನು ಮಾಡೋದಕ್ಕಾಗುತ್ತೆ ಹೇಳು? ಹ್ಯಾಗೆ ಹೊಡೀತಿದ್ದರು ಅಂತೀಯಾ, ತಮ್ಮ! ನಿನಗಾದರೋ ಅನುತಾಪ ತೋರಿಸೋದಕ್ಕೆ ನಾನಿದೇನೆ; ಆದರೆ, ನನ್ನ ವಿಷಯದಲ್ಲಿ ಯಾರೂ ಯಾವತ್ತೂ ಅನುತಾಪ ತೋರಿಸ್ತಿರಲಿಲ್ಲ. ಯಾವನೂ ಇಲ್ಲ. ಎಲ್ಲಿ ನೋಡಿದರೂ ಜನರ ಗುಂಪುಗಳು—ಆದರೆ, ಒಂದಿಷ್ಟು ಕರುಣೆ ತೋರಿಸೋ ಹಾದರಕ್ಕೆ ಹುಟ್ಟಿದವನು ಮಾತ್ರ ಒಬ್ಬನೂ ಇಲ್ಲ. ಛೆ, ಎಂಥ ಚೀರಾಡುವ ಕೋಳಿ ಮರಿಗಳು!"

ಹಾದಿಯುದ್ದಕ್ಕೂ ಅವನು ಹೀಗೆಯೇ ಮಾತನಾಡುತ್ತಿದ್ದ. ಅವನ ಬಗೆಗೆ ನನಗೆ ಕನಿಕರವೆನಿಸಿತು. ಅಷ್ಟೊಂದು ದಯಾಪೂರ್ಣವಾಗಿ ನನ್ನೊಡನೆ ಮಾತನಾಡಿದುದಕ್ಕೋಸ್ಕರ ಅವನಿಗೆ ನಾನು ಋಣಿಯೂ ಆದೆ.

ನಾವು ಮನೆ ಸೇರಿದಾಗ, ವಿಜಯಿಾವೀರನಂತೆ ನಾನು ಸ್ವಾಗತಿಸಲ್ಪಟ್ಟೆ. ಚೂರುಗಳನ್ನು ಡಾಕ್ಟರು ಹೇಗೆ ಹೊರಗೆ ತೆಗೆದರು, ಏನೆಂದರು, ಎಂಬುದನ್ನೆಲ್ಲಾ ಆ ಹೆಂಗಸರು ನನ್ನಿಂದ, ಹೇಳಿಸಿದರು. ನನ್ನ ಮಾತಿನ ನಡುನಡುವೆ ಅವರಿಂದ 'ಓ!' 'ಆ!' ಎಂಬ ಉದ್ಗಾರಗಳು ಬರುತ್ತಿದ್ದುವು. ತಮ್ಮ ತುಟಿಗಳನ್ನು ಅವರು ಚಪ್ಪರಿಸುತ್ತಿದ್ದರು. ಭಯಹುಟ್ಟಿಸುವಂತಹ ವಿವರಗಳನ್ನು ಕೇಳುತ್ತ ಹುಬ್ಬುಗಂಟಿಕ್ಕಿಕೊಳ್ಳುತ್ತಿದ್ದರು. ಕಾಹಿಲೆಯಲ್ಲೂ ಯಾತನೆಯಲ್ಲೂ ಎಲ್ಲಾ ಬಗೆಯ ಹಿತಕರವಲ್ಲದ ವಿಷಯಗಳಲ್ಲೂ ಅವರಿಗಿದ್ದ ಕೀಳು ಆಸಕ್ತಿಯನ್ನು ಕಂಡು ನಾನು ಅಚ್ಚರಿಪಟ್ಟೆ.

ಅವರ ವಿರುದ್ಧ ದೂರುಕೊಡಲು ನಾನು ನಿರಾಕರಿಸಿದ್ದುದರಿಂದ ಅವರಿಗೆಷ್ಟೋ ಸಂತೋಷವಾಗಿತ್ತು. ಇದನ್ನು ಕಂಡು ನಾನು, ಅರಿವೆ ಕತ್ತರಿಸುವವನ ಹೆಂಡತಿಯಿಂದ ಪುಸ್ತಕಗಳನ್ನು ಎರವಲು ಪಡೆಯಲು ನಾನು ಸಮ್ಮತಿ ಕೇಳಿದೆ. ಆಗಿನ ಪರಿಸ್ಥಿತಿಯಲ್ಲಿ, 'ಕೂಡದು' ಎನ್ನುವ ಧೈರ್ಯ ಅವರಿಗಿರಲಿಲ್ಲ. ಆದರೆ ಮುದುಕಿ ಆಶ್ಚರ್ಯದಿಂದ ಉದ್ಗರಿಸಿದಳು.

"ಖಂಡಿತವಾಗಿಯೂ ಪುಟ್ಟಪಿಶಾಚಿಯೇ ಕಣಪ್ಪ ನೀನು!"

ಮಾರನೆಯ ದಿನ, ಅರಿವೆ ಕತ್ತರಿಸುವವನ ಹೆಂಡತಿಯ ಎದುರು ನಿಂತೆ ನಾನು. ಅವಳು ನನಗೆ ಅಂದಳು:

"ನಿನಗೆ ಕಾಹಿಲೆ, ನಿನ್ನನ್ನು ಆಸ್ಪತ್ರೆಗೆ ಒಯ್ದಿದಾರೆ-ಅಂತ ಹೇಳಿದರಲ್ಲೋ! ಸುಳ್ಳು ಕಿಂವದಂತಿಗಳು ಹೇಗಿರ್ತವೆ ನೋಡು!"

ನಾನು ಅಲ್ಲಗಳೆಯಲಿಲ್ಲ. ಸತ್ಯಾಂಶವನ್ನು ತಿಳಿಸಲು ನನಗೆ ನಾಚಿಕೆ ಎನಿಸಿತು. ಅಷ್ಟೊಂದು ಒರಟಾದ ಬೇಸರದ ವಿಷಯವನ್ನು ಹೇಳಿ ಅವಳಿಗೆ ಅಸಮಾಧಾನವನ್ನಾದರೂ ಯಾಕೆ ಉಂಟು

ಮಾಡಬೇಕು? ಬೇರೆ ಜನರಂತೆ ಅವಳಿರಲಿಲ್ಲವೆನ್ನುವುದು ನನಗೆ ಸಂತೋಷದ ವಿಷಯವಾಗಿತ್ತು.

ಹಿರಿಯ ಡ್ಯೂಮಾ, ಪೊನ್ಸನ್‌ದು—ತೆರೇಯಿಲ್, ಪೋಂಟೆಪಿನ್, ಜಾಕ್ಯೋನ್, ಗಾಬೊರಿಯೊ, ಐವಾರ್ಡ್, ಬೋ—ರಾಬರ್ಟ್,—ಈಯೆಲ್ಲ ಗಾತ್ರದ ಪುಸ್ತಕಗಳನ್ನು ನಾನು ಓದತೊಡಗಿದೆ. ಇವನ್ನೆಲ್ಲ, ಒಂದರ ಅನಂತರ ಒಂದಾಗಿ ಬೇಗಬೇಗನೆ ನಾನು ಓದಿದೆ. ಇವು ನನ್ನನ್ನು ಸುಖಿಯಾಗಿ ಮಾಡಿದುವು. ನಾನು ಅಸಾಧಾರಣವಾದ ಬದುಕಿನ ಒಂದಂಗವೆಂದು ನನಗೆ ಭಾಸವಾಯಿತು. ಇದು, ಮಧುರಭಾವೋದ್ವೇಗಗಳನ್ನು ನನ್ನಲ್ಲಿ ಕೆದರಿಸಿತು. ನನ್ನನ್ನು ಚೈತನ್ಯದಿಂದ ತುಂಬಿತು. ನಾನೇ ತಯಾರಿಸಿದ್ದ ದೀಪ ಮತ್ತೊಮ್ಮೆ ಹೊಗೆಯಾಡತೊಡಗಿತು. ಯಾಕೆಂದರೆ, ನಾನು ಓದುತ್ತಿದ್ದುದೇ ರಾತ್ರೆ ಹೊತ್ತು-ನಸುಕು ಹರಿಯುವವರೆಗೂ. ನನ್ನ ಕಣ್ಣುಗಳು ಊದಿಕೊಂಡುವು. ಮುದಿಯಜಮಾನಿ ಪಿಶಾಚತೃಪ್ತಿಯಿಂದ ಅನ್ನುತ್ತಿದ್ದಳು:

"ಸ್ವಲ್ಪ ತಾಳು, ಪುಸ್ತಕ ಕೀಟ! ನಿನ್ನ ಕಣ್ಣಗೊಂಬೆಗಳು ಬಿರೀತವೆ, ನೀನು ಕುರುಡನಾಗ್ತೀಯಾ!"

ಬೇಗನೆ ಒಂದಂಶ ನನಗೆ ಹೊಳೆಯಿತು. ಈ ಸ್ವಾರಸ್ಯಕರ ಪುಸ್ತಕಗಳೆಲ್ಲ, ವಸ್ತುವಾತಾವರಣಗಳಲ್ಲಿ ವೈವಿಧ್ಯವಿದ್ದರೂ, ಹೇಳುತ್ತಿದ್ದುದು ಒಂದೇ ವಿಷಯವನ್ನು: ಸಜ್ಜನರು ಯಾವಾಗಲೂ ಅಸುಖಿಗಳು; ದುರ್ಜನರು ಅವರನ್ನು ಹಿಂಸೆಪಡಿಸುತ್ತಲೇ ಇರುತ್ತಾರೆ. ದುರ್ಜನರು ಯಾವಾಗಲೂ ಸಜ್ಜನರಿಗಿಂತ ಹೆಚ್ಚು ಅದೃಷ್ಟವಂತರು; ಹೆಚ್ಚು ಜಾಣರು. ಆದರೆ ಕೊನೆಯಲ್ಲಿ, ವಿವರಿಸಲಾಗದ ಯಾವುದೋ ಅಂಶ ದುಷ್ಟ ಶಕ್ತಿಯನ್ನು ಜಯಿಸುತ್ತದೆ; ಸದ್ಗುಣ ಅನಿವಾರ್ಯವಾಗಿ ವಿಜಯಿಯಾಗುತ್ತದೆ. 'ಪ್ರೇಮ'ದ ಬಗೆಗಂತೂ ಎಲ್ಲಾ ಗಂಡಸರೂ ಹೆಂಗಸರೂ ನಿರ್ದಿಷ್ಟವಾಗಿ ಒಂದೇ ರೀತಿಯ ಪದಗಳಲ್ಲಿ ಮಾತನಾಡುತ್ತಿದ್ದರು. ಇದರಿಂದಂತೂ ನನಗೆ ತೀರಾ ಅಸಹ್ಯವೆನಿಸಿತು. ಬೇಸರ ಬರಿಸುವುದರ ಜತೆಗೆ, ಈ ಕ್ಷುಲ್ಲಕತನ, ಅಸ್ಪಷ್ಟ ಸಂದೇಹಗಳನ್ನೂ ನನ್ನಲ್ಲಿ ಉಂಟುಮಾಡಿತು.

ಕೆಲವೇಳೆ, ಒಂದಷ್ಟು ಪುಟಗಳನ್ನು ಓದಿದ ಬಳಿಕ, ಕೊನೆಯಲ್ಲಿ ಯಾರು ಜಯಿಸುತ್ತಾರೆ, ಯಾರು ಸೋತುಹೋಗುತ್ತಾರೆ—ಎಂಬುದನ್ನು ಊಹಿಸಿಬಿಡುತ್ತಿದ್ದೆ. ಕಥಾವಸ್ತುವಿನ ವ್ಯೂಹ ಸ್ಪಷ್ಟವಾದೊಡನೆಯೇ, ಅದನ್ನು ಬಿಡಿಸುವುದರಲ್ಲಿ ನಾನು ನಿರತನಾಗುತ್ತಿದ್ದೆ. ಪುಸ್ತಕವನ್ನು ಬದಿಗಿರಿಸಿ, ಅದು ಗಣಿತದ ಪ್ರಶ್ನೆ ಎನ್ನುವಂತೆ ಯೋಚಿಸತೊಡಗುತ್ತಿದ್ದೆ. ಪಾತ್ರಗಳಲ್ಲಿ ಯಾರು ಯಾರು ಸ್ವರ್ಗಕ್ಕೆ ಹೋಗುತ್ತಾರೆ, ಯಾರು ಯಾರು ತಾತ್ಕಾಲಿಕ ನರಕಕ್ಕೆ ತಳ್ಳಲ್ಪಡುತ್ತಾರೆ—ಎಂಬ ನನ್ನ ಉತ್ತರಗಳು ಹೆಚ್ಚು ಹೆಚ್ಚು ಸಾರೆ ಸರಿಯಾಗಿಯೇ ಇರುತ್ತಿದ್ದುವು.

ಆದರೆ, ಇದೆಲ್ಲದರ ಆಚೆಗೆ, ನನ್ನ ಪಾಲಿಗೆ ಹೆಚ್ಚು ಮಹತ್ವದ ಒಂದು ಸಂಗತಿ ನನಗೆ ಅರಿವಾಯಿತು. ಬೇರೆಯೇ ಸಂಬಂಧಗಳಿದ್ದ ಬೇರೊಂದು ಬಗೆಯ ಬದುಕಿನ ರೂಪುರೇಖೆಗಳನ್ನು ನಾನು ತುಸು ಕಂಡೆ. ಪ್ಯಾರಿಸ್‌ನ ಗಾಡಿ ಹೊಡೆಯುವವರು, ಕೆಲಸಗಾರರು, ಸೈನಿಕರು ಮತ್ತು ಇತರ 'ಚಿಲ್ಲರೆ ಜನರು,' ನಿಜ್ನಿನೊವೊಗೊರೊಡ್, ಕಜಾನ್, ಪರ್ಮ್‌ಗಳ ಆ ಬಗೆಯ ಜನರ ಹಾಗಿಲ್ಲವೆಂಬುದು ನನಗೆ ಸ್ಪಷ್ಟವಾಯಿತು. ಸುಶಿಕ್ಷಿತ ಶ್ರೀಮಂತರೊಡನೆ ಅವರು ಹೆಚ್ಚು ಧೈರ್ಯದಿಂದ ಮಾತನಾಡುತ್ತಿದ್ದರು. ಅವರೆದುರಲ್ಲಿ ಹೆಚ್ಚು ನಿಸ್ಸಂಕೋಚವಾಗಿಯೂ ಸ್ವಾತಂತ್ರ್ಯದಿಂದಲೂ ವರ್ತಿಸುತ್ತಿದ್ದರು. ಅಲ್ಲಿನ ಸೈನಿಕ, ನನ್ನ ಪರಿಚಯದ ಯಾವನೇ ಸೈನಿಕನನ್ನೂ

ಹೋಲುತ್ತಿರಲಿಲ್ಲ. ಸಿದೊರೋವ್, ಅಥವಾ ಉಗಿ ಹಡಗದ ಮೇಲಿದ್ದ ಸೈನಿಕ ಇಲ್ಲವೆ ಯೆರ್ಮೋಖಿನ್—ಯಾರನ್ನೂ ಅವನು ಹೋಲುತ್ತಿರಲಿಲ್ಲ. ಇವರೆಲ್ಲರಿಗಿಂತ ಹೆಚ್ಚಾಗಿ ಆತನೇ ಮನುಷ್ಯಪ್ರಾಣಿ ಎನಿಸಿಕೊಳ್ಳುವಂತಿದ್ದ. ಸ್ಮೂರಿಗೂ ಆತನಿಗೂ ಸ್ವಲ್ಪ ಸಾಮ್ಯವಿತ್ತು. ಸ್ಮೂರಿಗಿಂತ ಆತ ಕಡಮೆ ಒರಟ, ಕಡಮೆ ಕ್ರೂರಿ. ಅಥವಾ, ಒಬ್ಬ ಅಂಗಡಿಕಾರ. ನನ್ನ ಪರಿಚಯದ ಎಲ್ಲ ಅಂಗಡಿಕಾರರಿಗಿಂತಲೂ ಅವನು ಉತ್ತಮನಾಗಿದ್ದ. ಪುಸ್ತಕಗಳಲ್ಲಿದ್ದ ಧರ್ಮಗುರುಗಳೂ ನನಗೆ ಗುರುತಿದ್ದ ಧರ್ಮಗುರುಗಳಂತಿರಲಿಲ್ಲ. ಅವರಿಗೆ ಜನರ ಬಗೆಗೆ ಹೆಚ್ಚು ಪ್ರೇಮವಿತ್ತು, ಹೆಚ್ಚು ಸಹಾನುಭೂತಿ ಇತ್ತು. ಒಟ್ಟಿನಲ್ಲಿ, ಪುಸ್ತಕಗಳಲ್ಲಿ ಚಿತ್ರಿಸಿದ್ದ ವಿದೇಶೀಯ ಬದುಕು, ನನಗೆ ಗೊತ್ತಿದ್ದ ಬದುಕಿಗಿಂತ ಉತ್ತಮವಾಗಿತ್ತು, ಸುಲಭತರವಾಗಿತ್ತು. ಹೆಚ್ಚು ಸ್ವಾರಸ್ಯಕರವಾಗಿತ್ತು. ಪರದೇಶಗಳಲ್ಲಿ ಜನರು ಅಷ್ಟೊಂದು ಪದೇಪದೇ ಮತ್ತು ಅಷ್ಟೊಂದು ಮೃಗೀಯವಾಗಿ ಹೊಡೆದಾಡುತ್ತಿರಲಿಲ್ಲ. ಹಡಗಿನಲ್ಲಿ ಆ ಸೈನಿಕನನ್ನು ಪ್ರಯಾಣಿಕರು ನಗೆಗೀಡು ಮಾಡಿದಂತೆ, ಒಬ್ಬ ಮನುಷ್ಯನನ್ನು ಜನರು ದುಷ್ಟರೀತಿಯಲ್ಲಿ ಲೇವಡಿಮಾಡುತ್ತಿರಲಿಲ್ಲ. ದೇವರನ್ನು, ನನ್ನ ಮುದಿಯಜಮಾನಿ ಮಾಡುತ್ತಿದ್ದಂತೆ ಪ್ರತೀಕಾರ ಭಾವದಿಂದ ಪ್ರಾರ್ಥಿಸುತ್ತಿರಲಿಲ್ಲ.

ಪುಸ್ತಕಗಳಲ್ಲಿ ಖಳರನ್ನೂ ನೀಚ ಹಾಗೂ ದುರಾಶೆಯ ಪ್ರವೃತ್ತಿಯುಳ್ಳ ಜನರನ್ನೂ ಬಣ್ಣಿಸುವ ರೀತಿಯಲ್ಲಿ, ಒಂದು ಅಂಶವನ್ನು ನಾನು ವಿಷವಾಗಿ ಗಮನಿಸಿದೆ. ನನಗೆ ಚಿರಪರಿಚಿತವಾದಂತಹ, ವಿವರಿಸಲಾಗದ ಕ್ರೌರ್ಯ ಮತ್ತು ಇತರರನ್ನು ತುಚ್ಛವಾಗಿ ಕಾಣುವ ತೀವ್ರಾಸಕ್ತಿ, ಆ ಪಾತ್ರಗಳಲ್ಲಿ ಕಂಡುಬರುತ್ತಿರಲಿಲ್ಲ. ಪುಸ್ತಕದಲ್ಲಿನ ಖಳರು ಪ್ರಾಯೋಗಿಕ ರೀತಿಯಲ್ಲಿ ಕ್ರೂರಿಗಳಾಗಿದ್ದರು. ಅವರ ಕ್ರೌರ್ಯವನ್ನು, ಹೆಚ್ಚು ಕಡಮೆ ಯಾವಾಗಲೂ ಅರ್ಥಮಾಡಿಕೊಳ್ಳುವುದು ಸಾಧ್ಯವಿತ್ತು. ನಾನಾದರೋ ಅರ್ಥವಿಲ್ಲದ, ಉದ್ದೇಶವಿಲ್ಲದ ಕ್ರೌರ್ಯವನ್ನು—ಬರಿದೆ ವಿನೋದಕ್ಕೋಸ್ಕರವೇ, ಬೇರೆ ಯಾವ ಗುರಿಯೂ ಇಲ್ಲದೆ ಮಾಡಲಾಗುವ ಕ್ರೌರ್ಯವನ್ನು—ಕಂಡಿದ್ದೆ.

ಪ್ರತಿಯೊಂದು ಹೊಸಪುಸ್ತಕವೂ, ರಷ್ಯದಲ್ಲಿನ ಜೀವನ ಹಾಗೂ ಇತರ ರಾಷ್ಟ್ರಗಳಲ್ಲಿನ ಜೀವನ—ಇವೆರಡರ ನಡುವಣ ವ್ಯತ್ಯಾಸವನ್ನು ಒತ್ತಿ ಹೇಳುತ್ತಿತ್ತು. ನನ್ನಲ್ಲಿ ಅಸ್ಪಷ್ಟವಾದೊಂದು ಅತೃಪ್ತಿಯನ್ನು ಕೆರಳಿಸಿ, ಹಲವಾರು ಜನ ಓದಿರುವ ಈ ಹಳದಿ ಪುಟಗಳಲ್ಲಿರುವುದು ಸಂಪೂರ್ಣ ಸತ್ಯವಲ್ಲವೆಂಬ ನನ್ನ ಸಂಶಯವನ್ನು ಹೆಚ್ಚಿಸುತ್ತಿತ್ತು.

ಗೊನ್‌ಕೋರ್ಟನ ಕಾದಂಬರಿ 'ಜೆಮ್‌ಗಾನ್ನೋ ಸೋದರರು' ನನಗೆ ಓದಲು ದೊರೆಯಿತು. ಅದನ್ನು ಒಂದು ರಾತ್ರಿಯಲ್ಲೇ ಓದಿಮುಗಿಸಿದೆ. ಅದರ ಹೊಸತನದಿಂದ ಅಚ್ಚರಿಗೊಂಡು, ವ್ಯಥೆಯುಂಟುಮಾಡುವ ಆ ಸರಳ ಕಥೆಯನ್ನು ಪುನಃ ಓದಿದೆ. ಸಿಕ್ಕುಸಿಕ್ಕಾದ ಕಥಾವಸ್ತು ಅದರಲ್ಲಿರಲಿಲ್ಲ. ತೇಲಿಕೆಯ ಆಕರ್ಷಣೆ ಇರಲಿಲ್ಲ. ಮೊದಲಲ್ಲಿ, 'ಸಂತರ ಜೀವನಗಳು' ಪುಸ್ತಕದಷ್ಟೇ ನೀರಸವಾಗಿ ಗಭೀರವಾಗಿ ಅದು ಕಂಡಿತು. ಅಷ್ಟೊಂದು ನಿರ್ದಿಷ್ಟವಾದ, ಆಡಂಬರವಿಲ್ಲದ ಭಾಷೆ, ಆರಂಭದಲ್ಲಿ ನನ್ನನ್ನು ನಿರಾಸೆಗೊಳಿಸಿತು. ಚುಟುಕಾದ ಶಬ್ದಗಳು, ಬಲಿಷ್ಠವಾದ ಪದಪ್ರಯೋಗಗಳು, ನನ್ನ ಹೃದಯಕ್ಕೆ ನೇರವಾಗಿ ತಟ್ಟಿದುವು; ಸಹೋದರ ಡೊಂಬರ ಈ ಕಥೆ ಮನ ಮುಟ್ಟುವಂತೆ ಮಾಡಿದುವು. ಇದನ್ನೋದಿ ನಾನು ಹರ್ಷೋದ್ವೇಗದಿಂದ ಕಂಪಿಸಿದೆ. ಮುರಿದ ಕಾಲುಗಳ ಡೊಂಬ, ತಮ್ಮ ಪ್ರೀತಿಯ ವಿದ್ಯೆಯನ್ನು ಗುಪ್ತವಾಗಿ ಅಭ್ಯಸಿಸುತ್ತಿದ್ದ ತನ್ನ ಸೋದರನೆಡೆಗೆ

ಅಟ್ಟವನ್ನೇರಿದಾಗ, ನಾನು ಒಂದೇ ಸಮನೆ ಅತ್ತೆ; ಹೃದಯ ಬಿರಿದುಹೋಗುವುದೇನೋ ಎನ್ನು ವಷ್ಟರವರೆಗೂ ಅತ್ತೆ.

ಅರಿವೆ ಕತ್ತರಿಸುವವನ ಹೆಂಡತಿಗೆ ಈ ಅದ್ಭುತ ಪುಸ್ತಕವನ್ನು ಹಿಂತಿರುಗಿಸಿದಾಗ, ಇಂಥದೇ ಇನ್ನೊಂದನ್ನು ಕೊಡಬೇಕೆಂದು ಅವಳನ್ನು ಕೇಳಿದೆ.

"ಇಂಥದೇ ಇನ್ನೊಂದು ಅಂದರೆ ಏನರ್ಥ?" ಎಂದು ಅವಳು ನಕ್ಕು ಕೇಳಿದಳು.

ಆ ನಗೆಯಿಂದ ನಾನು ಸಂಕೋಚಗೊಂಡೆ. ನನಗೇನು ಬೇಕೆಂಬುದನ್ನು ನಾನು ವಿವರಿಸ ಲಾಗದೇ ಹೋದಾಗ, ಅವಳೆಂದಳು:

"ಅದು ನೀರಸ ಪುಸ್ತಕ. ಸ್ವಲ್ಪದಿನ ತಾಳು. ನಿನಗೆ ಅದಕ್ಕಿಂತಲೂ ಉತ್ತಮ ಎನಿಸು ವಂಥದ್ದನ್ನು, ಹೆಚ್ಚು ಸ್ವಾರಸ್ಯವಾದದ್ದನ್ನು, ಹುಡುಕಿಕೊಡುವೆ."

ಕೆಲದಿವಸಗಳ ಬಳಿಕ ಅವಳು, ಗ್ರೀನ್‌ವುಡ್ ಬರೆದ "ಪುಟ್ಟ ಪೋಲಿಯೊಬ್ಬನ ನೈಜಕಥೆ" ಯನ್ನು ನನಗೆ ಕೊಟ್ಟಳು. ಪುಸ್ತಕದ ಶೀರ್ಷಿಕೆಯನ್ನೋದಿದಾಗ ನನ್ನನ್ನು ನಾನೇ ನೆನೆಸಿಕೊಂಡು ಮನಸ್ಸು ಚಿಳ್ಳೆಂದಿತು. ಆದರೆ ಮೊದಲ ಪುಟವೇ ಹರ್ಷದ ಮುಗುಳುನಗೆಯನ್ನು ನನ್ನಲ್ಲಿ ಮೂಡಿಸಿತು. ಈ ಬಗೆಯ ಸಂತಸದಿಂದಲೇ-ಮೊದಲ ಹೊದಿಕೆಯಿಂದ ಕೊನೆಯ ಹೊದಿಕೆ ಯವರೆಗೂ ಓದಿದೆ. ಕೆಲವಾಕ್ಯವೃಂದಗಳನ್ನಂತೂ ಎರಡುಮೂರುಸಾರೆ ಓದಿದೆ.

ಹಾಗಾದರೆ ವಿದೇಶಗಳಲ್ಲೂ ಕೂಡಾ ಪುಟ್ಟ ಹುಡುಗರಿಗೆ ಬದುಕು ಕಷ್ಟಕರವಾಗಿಯೇ ಇತ್ತು! ವಾಸ್ತವವಾಗಿ, ಅದರೊಡನೆ ಹೋಲಿಸಿದರೆ ನನ್ನ ಬದುಕು ಸುಲಭದ್ದೆಂದೇ ಹೇಳಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಧೀರನಾಗಲು ಯಾವ ಕಾರಣವೂ ಇರಲಿಲ್ಲ.

ಗ್ರೀನ್‌ವುಡ್‌ನ ಕೃತಿಯನ್ನೋದಿ ನನಗೆ ಭಾರೀ ಉತ್ತೇಜನ ದೊರೆಯಿತು. ಅನಂತರ ಸ್ವಲ್ಪ ಸಮಯದಲ್ಲೆ, ವಾಸ್ತವವಾಗಿಯೂ 'ಸರಿಯಾದುದೆ'ನಿಸುವ ಪುಸ್ತಕವೊಂದು—ಯೂಜೆನಿ ಗ್ರಾಂದೆತ್-ನನ್ನ ಕೈಗೆ ಬಿತ್ತು.

ಮುದುಕ ಗ್ರಾಂದೆತ್, ನನ್ನ ಅಜ್ಜನ ಸುಸ್ಪಷ್ಟ ನೆನಪನ್ನು ಮಾಡಿಕೊಟ್ಟ. ಪುಸ್ತಕ ಅಷ್ಟೊಂದು ಚಿಕ್ಕದಾಗಿತ್ತೆಂದು ನನಗೆ ಕೆಡುಕೆನಿಸಿತು. ಅದರಲ್ಲಿ ಅಡಕವಾಗಿದ್ದ ಸತ್ಯದ ಪರಿ ಮಾಣವನ್ನು ಕಂಡು ಆಶ್ಚರ್ಯವೆನಿಸಿತು. ಈ ಸತ್ಯವನ್ನು ನನಗೆ ಸುಪರಿಚಿತವಾಗಿ ಮಾಡಿ ಕೊಟ್ಟಿತ್ತು ಬದುಕು. ಆದರೆ ಆ ಸತ್ಯವನ್ನು ಈ ಪುಸ್ತಕ ಹೊಸ ಬೆಳಕಿನಲ್ಲಿ, ಶಾಂತ ನಿರ್ವಿಕಾರ ನಿರೀಕ್ಷಣೆಯ ಬೆಳಕಿನಲ್ಲಿ, ತೋರಿಸಿಕೊಟ್ಟಿತು. ಗೊನ್‌ಕಾರ್ಟನ ಹೊರತಾಗಿ ನಾನು ಓದಿದ್ದ ಲೇಖಕರೆಲ್ಲ, ಜನರ ಬಗೆಗೆ, ನನ್ನ ಮಾಲಿಕರು ಮಾಡುವಂತೆ ನಿಷ್ಠುರವಾದ ಘಂಟಾಘೋಷವಾದ ತೀರ್ಪನ್ನು ಕೊಡುತ್ತಿದ್ದರು. ಎಷ್ಟೋವೇಳೆ, ಖಳನ ಬಗೆಗೆ ಓದುಗ ಸಹಾನುಭೂತಿ ತೋರಿಸು ವಂತೆಯೂ ಸಜ್ಜನ ಪಾತ್ರಗಳಿಂದ ಬೇಸರಗೊಳ್ಳುವಂತೆಯೂ ಆಗುತ್ತಿತ್ತು. ಒಬ್ಬ ವ್ಯಕ್ತಿ ಎಷ್ಟೇ ವಿಚಾರಮಾಡಿರಲಿ ಎಷ್ಟೇ ಯತ್ನಿಸಿರಲಿ, ಅವನ ಸಂಶೋಧನೆಗಳಿಗೆಲ್ಲ ಸಜ್ಜನರೇ ಯಾವಾಗಲೂ ಅಡ್ಡಿಯಾಗುತ್ತಿದ್ದರು. ಆತನ ಹಾದಿಯಲ್ಲಿ, ಮೊದಲ ಪುಟದಿಂದ ಕೊನೆಯವರೆಗೂ ಕಲ್ಲುಗೋಡೆ ಯಂತೆ ಅಚಲವಾಗಿ ನಿಲ್ಲುತ್ತಿದ್ದರು. ಈ ನೋಟ ಯಾವಾಗಲೂ ನನ್ನನ್ನು ಕಳವಳಕ್ಕೆ ಈಡು ಮಾಡುತ್ತಿತ್ತು. ದುಷ್ಟವೃತ್ತಿಯ ದುರುದ್ದೇಶಗಳೆಲ್ಲ ಈ ಗೋಡೆಗೆ ಬಡಿದು ಪುಡಿಯಾಗುವುದು ಖಂಡಿತವಾಗಿತ್ತು. ಆದರೆ, ಕಲ್ಲಿನ ಬಗೆಗೆ ಯಾರಿಗಾದರೂ ಒಲವು ಉತ್ಪನ್ನವಾಗುತ್ತದೇನು?

ಒಂದು ಗೋಡೆ ಎಷ್ಟೇ ಬಲಿಷ್ಠವಿರಲಿ, ಸುಂದರವಿರಲಿ, ಅದರಾಚೆಗಿರುವ ಸೇಬುಗಳಿಗೆ ನಮ್ಮ ಕೈ ಎಟಕಲೇಬೇಕೆಂದು ನಾವು ತೀರ್ಮಾನಿಸಿರುವುದಾದರೆ, ಗೋಡೆಯ ಕಲ್ಲುಗಳನ್ನು ಹಾಡಿ ಹೊಗಳಲು ಏನೇನೂ ಮನಸ್ಸಾಗುವುದಿಲ್ಲ. ಅತ್ಯಂತ ಸತ್ಯವಾದುದೆಲ್ಲ, ಅತ್ಯಂತ ಮುಖ್ಯವಾದುದೆಲ್ಲ, ಈ ಸಜ್ಜನರ ಹಿಂದೆಯೇ ಅವಿತಿರುತ್ತಿದ್ದುವೆಂದು ನನಗೆ ಅನಿಸುತ್ತಿತ್ತು.

ಗೊನ್‌ಕಾರ್ಟ್, ಗ್ರೀನ್‌ವುಡ್ ಮತ್ತು ಬಾಲ್ಜಾಕರ ಕೃತಿಗಳಲ್ಲಿ, ಖಳರೂ ಇರುತ್ತಿರಲಿಲ್ಲ, ನಾಯಕರೂ ಇರುತ್ತಿರಲಿಲ್ಲ. ಅದ್ಭುತವೆನಿಸುವಷ್ಟು ಸಜೀವವಾಗಿರುತ್ತಿದ್ದ ಸರಳ ಜನರಷ್ಟೇ ಇದ್ದರು. ಅವರು ಆಡಿದುದು ಮಾಡಿದುದೆಲ್ಲ ಅದೇ ರೀತಿಯಲ್ಲೇ ಆಯಿತು; ಬೇರೆ ಯಾವುದೇ ರೀತಿಯಲ್ಲಿ ಅದನ್ನು ಆಡುವುದು, ಮಾಡುವುದು, ಸಾಧ್ಯವೇ ಇಲ್ಲ—ಎಂದು ಯಾರೂ ಸಂದೇಹಪಡುವಂತಿರಲಿಲ್ಲ.

ಈ ರೀತಿಯಾಗಿ ನಾನು, 'ಒಳ್ಳೆಯ ಪುಸ್ತಕವನ್ನು, ಸರಿಯಾದ ಪುಸ್ತಕವನ್ನು' ಓದಿದಾಗ ಆಗುವ ಮಹದಾನಂದವೇನೆಂಬುದನ್ನು ಕಲಿತೆ. ಆದರೆ, ಅಂತಹ ಪುಸ್ತಕಗಳು ನನಗೆ ದೊರೆಯಬೇಕಾದರೂ ಹೇಗೆ? ಅರಿವೆ ಕತ್ತರಿಸುವವನ ಹೆಂಡತಿಯಿಂದ ನನಗೆ ಸಹಾಯವಾಗುವಂತಿರಲಿಲ್ಲ.

"ಕೆಲ ಒಳ್ಳೇ ಪುಸ್ತಕಗಳು ಇಲ್ಲಿವೆ," ಎನ್ನುತ್ತ ಆಕೆ, ಆರ್ಸೆನ್ ಹೌಸ್ಸಾಯ ಬರೆದ 'ಕೈತುಂಬ ಚೆಂಗುಲಾಬಿ, ಬಂಗಾರ, ನೆತ್ತರು' ಎಂಬ ಪುಸ್ತಕವನ್ನೂ ಜತೆಯಲ್ಲಿ ಬೆಲ್ಲಾವ್, ಪಾಲ್ ದಕಾಕ್ ಮತ್ತು ಪಾಲ್ ಫೆವಾಲ್ ಬರೆದ ಕಾದಂಬರಿಗಳನ್ನೂ ನನಗೆ ಕೊಟ್ಟಳು. ಆದರೆ ಈಗ ಅಂತಹ ಪುಸ್ತಕಗಳನ್ನು ಓದುವುದು ಪ್ರಯಾಸವೆನಿಸಿತು.

ಮಾರಿಯಾತ್ ಮತ್ತು ವೆರ್ನೆರ್ ಬರೆದ ಕಾದಂಬರಿಗಳು ಅವಳಿಗೆ ಪ್ರಿಯವಾಗಿದ್ದುವು. ನನಗೆ ಅವು ಬೇಸರಬರಿಸುತ್ತಿದ್ದುವು. ಸ್ಪೀಲ್‌ಹಾಗೆನ್ ಬರೆದುದೂ ನನಗೆ ಇಷ್ಟವಾಗಲಿಲ್ಲ. ಆದರೆ ಆರ್‌ಬಾಕನ ಕಥೆಗಳನ್ನು ಬಹು ಸಂತೃಪ್ತಿಯಿಂದ ನಾನು ಓದಿದೆ. ಸ್ಯೂ ಮತ್ತು ಹ್ಯೂಗೋರಿಗಿಂತ ಸರ್‌ವಾಲ್ಟರ್‌ಸ್ಕಾಟ್ ನನಗೆ ಇಷ್ಟವೆನಿಸಿದ. ನನ್ನ ರಾಗೋದ್ವೇಗಗಳನ್ನು ಜಾಗೃತಗೊಳಿಸುವ, ನನ್ನನ್ನು ಸುಖಿಯಾಗಿ ಮಾಡುವ, ಪುಸ್ತಕಗಳು ನನಗೆ ಬೇಕಿದ್ದುವು; ಅದ್ಭುತ ಲೇಖಕನಾದ ಬಾಲ್ಜಾಕನ ಕೃತಿಗಳಂಥವು ನನಗೆ ಅಗತ್ಯವಿದ್ದುವು. 'ಪಿಂಗಾಣಿ ಬೊಂಬೆ'ಯೂ ನನಗೀಗ ಮೊದಲಿನಷ್ಟು ಮೆಚ್ಚುಗೆಯಾಗಲಿಲ್ಲ.

ಅವಳನ್ನು ನೋಡಲು ಹೋದಾಗಲೆಲ್ಲ, ಸ್ವಚ್ಛವಾದ ಕುಪ್ಪಸತೊಟ್ಟು; ತಲೆಗೂದಲು ಬಾಚಿರುತ್ತಿದ್ದೆ, ನನ್ನ ಸಾನ್ನಿಧ್ಯ ಮೆಚ್ಚುಗೆಯಾಗುವಂತೆ ಎಲ್ಲಾ ರೀತಿಯಲ್ಲೂ ಯತ್ನಿಸುತ್ತಿದ್ದೆ. ನಾನು ಯಶಸ್ವಿಯಾದೆನೆನ್ನುವ ವಿಷಯದಲ್ಲಿ ನನಗೆ ಸಂದೇಹವಿದೆ. ಮುಟ್ಟಿದರೆ ಬಿರಿಯುವ ಮುಗುಳುನಗೆ ಇರುತ್ತಿತ್ತು ಅವಳ ಮುಖದ ಮೇಲೆ. ಮುಖವಂತೂ ಎಷ್ಟು ಪ್ರಕಾಶಮಾನವಾಗಿ ಸ್ವಚ್ಛವಾಗಿ ಇರುತ್ತಿತ್ತೆಂದರೆ, ಆ ಸಂದರ್ಭಕ್ಕೋಸ್ಕರವೇ ವಿಶೇಷವಾಗಿ ಅದನ್ನು ಧರಿಸಲಾಯಿತೇನೋ ಎಂದು ಯಾವಾಗಲೂ ನನಗೆ ಅನಿಸುತ್ತಿತ್ತು. ಈಗ, ನಾನು ಗೌರವಾನ್ವಿತನೆಂಬುದನ್ನು ಕಂಡಾಗ, ಅಂತಹ ಕೃತ್ರಿಮ ಮುಗುಳುನಗೆ ಇಲ್ಲದೆ, ಹೆಚ್ಚು ಸರಳವಾದ ಸ್ನೇಹಪರವಾದ ರೀತಿಯಲ್ಲಿ ನನ್ನೊಡನೆ ಅವಳು ಮಾತನಾಡುವಳೆಂದು ನಾನು ಆಶಿಸಿದೆ. ಆದರೆ ಅವಳು ಮುಗುಳುನಕ್ಕು, ಮಧುರವಾದ ಬಳಲಿದ ಧ್ವನಿಯಲ್ಲಿ ಕೇಳಿಯೇ ಕೇಳುತ್ತಿದ್ದಳು:

"ಅದನ್ನು ಓದಿದೆಯೇನು? ನಿನಗದು ಇಷ್ಟವಾಯ್ತೇನು?"

"ಇಲ್ಲ."

ಸೊಗಸಾದ ಹುಬ್ಬುಗಳನ್ನು ತುಸುಮೇಲಕ್ಕೇರಿಸಿ, ನಿಟ್ಟುಸಿರುಬಿಡುತ್ತ, ಮೂಗಿನಿಂದಲೆ ಹೊರಡುವ ಪರಿಚಿತ ಧ್ವನಿಯಲ್ಲಿ ಅವಳು ಅನ್ನುತ್ತಿದ್ದಳು:

"ಯಾಕಿಲ್ಲ?"

"ಆ ವಿಷಯ ಆಗಲೇ ನಾನು ಓದಿದೇನೆ."

"ಯಾವ ವಿಷಯ?"

"ಪ್ರೇಮದ ವಿಷಯ."

ಹುಬ್ಬುಗಂಟಿಕ್ಕಿ, ಕೃತಕವೆನಿಸುವ ನಗೆಯನ್ನು ಅವಳು ನಗುತ್ತಿದ್ದಳು.

"ಅಯ್ಯೋ ನಮ್ಮಪ್ಪ! ಎಲ್ಲಾ ಪುಸ್ತಕಗಳಲ್ಲಿ ಬರೆದಿರೋದೂ ಪ್ರೇಮದ ವಿಷಯವೇ!"

ಅಲ್ಲಿ, ದೊಡ್ಡ ಆರಾಮ ಕುರ್ಚಿಯಲ್ಲಿ ಕುಳಿತು, ತುಪ್ಪಳದ ಸ್ಲಿಪ್ಪರುಗಳೊಳಗೆ ತನ್ನ ಪುಟ್ಟ ಪದಗಳನ್ನು ಓಲಾಡಿಸುತ್ತ, ಅವಳು ಆಕಳಿಸುತ್ತಿದ್ದಳು; ತನ್ನ ನೀಲಿ ನಿಲುವಂಗಿಯನ್ನು ಭುಜಗಳ ಸುತ್ತಲೂ ಮತ್ತಷ್ಟು ಬಿಗಿಯಾಗಿ ಎಳೆದುಕೊಳ್ಳುತ್ತಿದ್ದಳು; ತನ್ನ ತೊಡೆಯ ಮೇಲಿದ್ದ ಪುಸ್ತಕದ ರಟ್ಟನ್ನು ನಸುಗೆಂಪಾದ ತುದಿಬೆರಳುಗಳಿಂದ ತಟ್ಟುತ್ತಿದ್ದಳು.

"ನೀನು ಯಾಕೆ ಇಲ್ಲಿಂದ ಹೊರಟುಹೋಗೋದಿಲ್ಲ? ಅಧಿಕಾರಿಗಳು ಈಗಲೂ ನಿನಗೆ ಕಾಗದಗಳನ್ನು ಬರೆದು ಲೇವಡಿ ಮಾಡ್ತಾನೇ ಇದಾರೆ," ಎಂದು ಅವಳಿಗೆ ಹೇಳಬೇಕೆನಿಸಿತು.

ನನ್ನ ಯೋಚನೆಗಳಿಗೆ ಮಾತಿನ ರೂಪ ಕೊಡಲು ಧೈರ್ಯಸಾಲದೆ, 'ಪ್ರೇಮ'ವನ್ನು ಕುರಿತು ಮತ್ತೊಂದು ದಪ್ಪನೆಯ ಪುಸ್ತಕವನ್ನೆತ್ತಿಕೊಂಡು, ಹೃದಯತುಂಬ ನಿರಾಸೆಯೊಡನೆ, ನಾನು ಹೊರಟುಹೋಗುತ್ತಿದ್ದೆ.

ಕೆಳಗೆ ವಠಾರದಲ್ಲಿ ಈ ಹೆಂಗಸನ್ನು ಕುರಿತು ಹಾಳು ಹರಟೆ, ಹೆಚ್ಚುಹೆಚ್ಚು ತಾತ್ಸಾರದಿಂದ ಕೂಡತೊಡಗಿತ್ತು, ಹೆಚ್ಚು ಕುಹಕದಿಂದ ಬೆರೆಯಿತು. ನಿಸ್ಸಂದೇಹವಾಗಿ ಯಾವ ಸತ್ಯಾಂಶವೂ ಇಲ್ಲದಂತಹ ಈ ಮಾತನ್ನೆಲ್ಲ ಕೇಳುವುದು ನನಗೆ ಯಾತನೆಯ ವಿಷಯವಾಗಿತ್ತು. ನಾನು ಅವಳ ಜತೆ ಇಲ್ಲದೇ ಇದ್ದಾಗ, ಆಕೆಯ ವಿಷಯದಲ್ಲಿ ಕನಿಕರಪಡುತ್ತಿದ್ದೆ, ಆಕೆಗೋಸ್ಕರ ಭೀತನಾಗುತ್ತಿದ್ದೆ. ಆದರೆ, ಅವಳ ಸಾನ್ನಿಧ್ಯದಲ್ಲಿದ್ದು, ಆಕೆಯ ತೀಕ್ಷ್ಣ ಕಣ್ಣುಗಳನ್ನೂ ಅವಳ ಪುಟ್ಟ ದೇಹದ ಬೆಕ್ಕಿನಂತಹ ಸೊಬಗನ್ನೂ ಅವಳ ತೋರಿಕೆಯ ಮುಖವನ್ನೂ ಕಂಡಾಗ, ನನ್ನ ಭಯವೂ ಕರುಣೆಯೂ ಇಬ್ಬನಿಯಂತೆ ಮಾಯವಾಗುತ್ತಿದ್ದುವು.

ವಸಂತದಲ್ಲಿ ಇದ್ದಕ್ಕಿದ್ದಂತೆ ಅವಳು ಹೊರಟುಹೋದಳು. ಕೆಲದಿನಗಳ ಅನಂತರ ಅವಳ ಗಂಡನೂ ಆ ಮನೆಯನ್ನು ಬಿಟ್ಟ.

ಆ ವಸತಿ ಇನ್ನೂ ಖಾಲಿ ಇದ್ದಾಗಲೇ ಅಲ್ಲಿಗೊಮ್ಮೆ ಹೋದೆ. ತಿರುವಿದ ಮೊಳೆಗಳಿಂದಲೂ ಮೊಳೆತೂತುಗಳಿಂದಲೂ ಚಿತ್ರಗಳನ್ನು ತೂಗಿದ್ದ ಕಡೆ ವಿವರ್ಣವಾಗಿದ್ದ ಅಂಶಗಳಿಂದಲೂ ವಿಕೃತವಾಗಿದ್ದ ಬರಿಯ ಗೋಡೆಗಳನ್ನು ಕಂಡೆ. ಬಣ್ಣ ಬಳಿದ ನೆಲಗಳಲ್ಲಿ, ಚಿಂದಿಕಾಗದಗಳೂ ಬೆಳಗುತ್ತಿದ್ದ ಚೂರುಪಾರುಗಳೂ ಔಷಧಿಗುಳಿಗೆಗಳ ಖಾಲಿ ಪೆಟ್ಟಿಗೆಗಳೂ ಸುಗಂಧ ದ್ರವ್ಯದ ಶೀಷೆಗಳೂ ಚೆಲ್ಲಾಪಿಲ್ಲಿಯಾಗಿದ್ದುವು. ಅವುಗಳ ಮಧ್ಯೆ ಹಿತ್ತಾಳೆಯ ಪಿನ್ನೊಂದು ಹೊಳೆಯುತ್ತಿತ್ತು.

ನನಗೆ ಬೇಸರವೆನಿಸಿತು. ಅರಿವೆ ಕತ್ತರಿಸುವವನ ಪುಟ್ಟ ಹೆಂಡತಿಯನ್ನು ಮತ್ತೊಮ್ಮೆ ಕಾಣಲು, ನಾನೆಷ್ಟು ಋಣಿ ಎಂಬುದನ್ನು ಅವಳಿಗೆ ತಿಳಿಸಲು, ನಾನು ಬಯಸಿದೆ.

೧೦

ಅರಿವೆ ಕತ್ತರಿಸುವವನು ಮತ್ತು ಅವನ ಹೆಂಡತಿ ಹೊರಟು ಹೋದುದಕ್ಕೂ ಮುಂಚೆಯೇ ನಮ್ಮ ಕೆಳಗಣ ವಸತಿಯನ್ನು ಕಪ್ಪುಕಣ್ಣುಗಳ ಯುವತಿಯೊಬ್ಬಳು ಬಾಡಿಗೆಗೆ ಹಿಡಿದಿದ್ದಳು. ಅವಳ ಜತೆ ಆಕೆಯ ಪುಟ್ಟ ಮಗಳೂ ಆಕೆಯ ತಾಯಿಯೂ ಇದ್ದರು. ತಾಯಿ ನಸುಹಳದಿಯ ಹಿಡಿಯಲ್ಲಿ ಸಿಗರೇಟನ್ನಿರಿಸಿ ಯಾವಾಗಲೂ ಸೇದುತ್ತಲೇ ಇರುತ್ತಿದ್ದಳು. ಯುವತಿ ಬಹಳ ಚೆಲುವೆಯಾಗಿದ್ದಳು. ಜತೆಗೆ, ಹೆಮ್ಮೆಯ ದರ್ಪದ ನಿಲುವು. ಆಳವಾದ ಹಿತಕರವಾದ ಧ್ವನಿ. ಜನರೊಡನೆ ಮಾತನಾಡುವಾಗ, ಅವರು ಸ್ಪಷ್ಟವಾಗಿ ಕಾಣಿಸದಷ್ಟು ದೂರವಿರುವರೆನ್ನುವಂತೆ, ತಲೆಯನ್ನು ಹಿಂದಕ್ಕೆ ತಳ್ಳಿ, ಕಣ್ಣುಗಳನ್ನು ಕಿರಿದುಗೊಳಿಸುತ್ತಿದ್ದಳು. ಅವಳಿಗೆ ತುಫ್ಯಾಯಿಯಾವ್ ಎಂಬ ಸೈನಿಕ-ಸೇವಕನೊಬ್ಬನಿದ್ದ. ಆತ, ಹೆಚ್ಚು ಕಡಮೆ ಪ್ರತಿದಿನವೂ, ತೆಳುಕಾಲುಗಳ ಬಾದಾಮಿ ಬಣ್ಣದ ಕುದುರೆಯೊಂದನ್ನು, ಅವಳ ವಸತಿಯ ಮುಂಭಾಗಕ್ಕೆ ನಡೆಸಿ ತರುತ್ತಿದ್ದ. ಉಕ್ಕಿನಂತೆ ಬೂದು ಬಣ್ಣದ ನೀಳವಾದ ಮಕಮಲ್ಲಿನ ಸವಾರಿ ಪೋಷಾಕು, ಬಿಳಿಯ ದಪ್ಪನೆಯ ಕೈಹೊದಿಕೆಗಳು, ಬಾದಾಮಿ ಬಣ್ಣದ ಬೂಟುಗಳು—ಇವನ್ನು ಧರಿಸಿ ಆ ಹೆಂಗಸು ಕಾಣಿಸಿಕೊಳ್ಳುತ್ತಿದ್ದಳು. ಒಂದು ಕೈಯಲ್ಲಿ ಬೆನ್ನ ಹಿಂದೆ ಹರಿಯುತ್ತಿದ್ದ ನೀಳವಾದ ಉತ್ತರೀಯವನ್ನೂ ಬೆಲೆಬಾಳುವ ಕಲ್ಲುಕೂರಿಸಿದ ಚಾಟಿಯನ್ನೂ ಹಿಡಿದುಕೊಂಡು, ಇನ್ನೊಂದು ಕೈಯಿಂದ ತನ್ನ ಕುದುರೆಯ ಮೂಗನ್ನು ತಟ್ಟುತ್ತಿದ್ದಳು. ಆ ಪ್ರಾಣಿ ತನ್ನ ಹಲ್ಲುಗಳನ್ನು ತೋರಿಸುತ್ತ, ಕಣ್ಣುಗಳನ್ನು ಹೊರಳಿಸುತ್ತ, ಗಟ್ಟಿ ನೆಲವನ್ನು ಮುಂಗಾಲಿನಿಂದ ಕೆರೆಯುತ್ತಿತ್ತು. ಅದರ ಇಡೀ ಶರೀರವೇ ಉದ್ವೇಗದಿಂದ ಕಂಪಿಸುತ್ತಿತ್ತು.

ಆ ಕುದುರೆಯ ಸೊಗಸಾಗಿ ಬಾಗಿದ್ದ ಕತ್ತನ್ನು ತಟ್ಟುತ್ತ, "ರಾಬ್ಬೀ, ರಾಬ್ಬೀ," ಎಂದು ಅವಳು ಮೃದುವಾಗಿ ಉಲಿಯುತ್ತಿದ್ದಳು.

ಬಳಿಕ ಅವಳು, ತುಫ್ಯಾಯಿಯಾವನ ಮೊಣಕಾಲ ಮೇಲೆ ತನ್ನ ಪಾದವನ್ನಿರಿಸಿ,ಜೀನಿನ ಮೇಲಕ್ಕೆ ಹಗುರವಾಗಿ ನೆಗೆದು, ಅಣೆಕಟ್ಟೆನುದ್ದಕ್ಕೂ ಕುದುರೆ ನೆಗೆದಾಡುವಂತೆ ಮಾಡುತ್ತಿದ್ದಳು. ಈಕೆ ಕುದುರೆಯ ಮೇಲೆಯೇ ಹುಟ್ಟಿಬೆಳೆದವಳೇನೋ ಎನ್ನುವಂತಿತ್ತು, ಅವಳು ಕುಳಿಕೊಳ್ಳುತ್ತಿದ್ದ ಠೀವಿ.

ಯಾವಾಗಲೂ ಹೊಸದಾಗಿ ವಿಶಿಷ್ಟವಾಗಿ ತೋರುತ್ತಿದ್ದ, ಮತ್ತೇರಿಸುವಂತಹ ಸಂತಸದಿಂದ ಹೃದಯವನ್ನು ಯಾವಾಗಲೂ ತುಂಬುತ್ತಿದ್ದ, ಅಪೂರ್ವ ಚೆಲುವಿನಿಂದ ಕೂಡಿದ ಸುಂದರಿಯಾಗಿದ್ದಳು ಆಕೆ. ಅವಳ ಕಡೆಗೆ ನೋಡುತ್ತಿದ್ದಂತೆ, ದಿಯಾನ್ ದಿ-ಪೊಯಿತೀಯರ್ಸ್, ರಾಣಿ ಮಾರ್ಗೊಟ್, ಲಾ ವಾಲ್ಲೀಯರ್ ಮತ್ತು ಚಾರಿತ್ರಿಕ ಕಾದಂಬರಿಗಳ ಇತರ ಮೋಹಕ ನಾಯಿಕೆಯರು ಹೀಗೆಯೇ ಇದ್ದಿರಬೇಕು ಎಂದು ನಾನು ಭಾವಿಸುತ್ತಿದ್ದೆ.

ನಮ್ಮ ನಗರದಲ್ಲಿ ಬೀಡು ಬಿಡುತ್ತಿದ್ದ ತುಕ್ಕಡಿಗಳ ಅಧಿಕಾರಿಗಳು ನಿರಂತರವಾಗಿ ಆಕೆಯನ್ನು ಮುತ್ತಿಕೊಂಡೇ ಇರುತ್ತಿದ್ದರು. ಸಂಜೆಗಳಲ್ಲಿ ಅವರು ಅವಳ ಮನೆಗೆ ಬಂದು, ಪಿಯಾನೋ—ಪಿಟೀಲು—ಗಿತಾರ್‌ಗಳನ್ನು ಬಾರಿಸುತ್ತಿದ್ದರು, ಹಾಡುತ್ತಿದ್ದರು, ನರ್ತಿಸುತ್ತಿದ್ದರು. ಮೇಜರ್ ಒಲಿಸೋವ್ ತನ್ನ ಗಿಡ್ಡನೆಯ ಪುಟ್ಟ ಕಾಲುಗಳಲ್ಲಿ ಅವಳ ಮುಂದೆ ನೆಗೆದಾಡಿ, ಇತರರನ್ನೆಲ್ಲ ಮೀರಿಸುತ್ತಿದ್ದ. ಆತ ದಪ್ಪನೆಯ ಮನುಷ್ಯ. ಕೂದಲು ನರೆತಿತ್ತು. ಕೆಂಪನೆಯ ಮುಖ, ಗಾಣದವನ ಮುಖದಷ್ಟು ಜಿಗುಟಾಗಿರುತ್ತಿತ್ತು. ಆತ ಗಿತಾರನ್ನು ಚೆನ್ನಾಗಿ ನುಡಿಸುತ್ತಿದ್ದ. ತಾನು ಆ ಯುವತಿಯ ಬಡ ವಿಧೇಯ ಸೇವಕನೆನ್ನುವಂತೆ ವರ್ತಿಸುತ್ತಿದ್ದ.

ದುಂಡು ದುಂಡಗಿನ, ಗುಂಗುರುಗೂದಲಿನ, ಐದು ವರ್ಷ ವಯಸ್ಸಿನ ಅವಳ ಮಗಳಿಗೂ ತಾಯಿಯಷ್ಟೇ ಪ್ರಕಾಶಮಾನವಾದ ಸೌಂದರ್ಯವಿತ್ತು. ಅವಳ ವಿಶಾಲವಾದ ನೀಲಿ ಕಣ್ಣುಗಳು ನೆಟ್ಟ ನೋಟವು, ಶಾಂತವಾಗಿ, ಗಂಭೀರವಾಗಿ, ನಿರೀಕ್ಷೆಯಿಂದ ಕೂಡಿ ಇರುತ್ತಿತ್ತು. ಮಗುವಿಗೆ ತಕ್ಕುದಲ್ಲದ ಅದೇನೋ ಅವಳ ಗಾಂಭೀರ್ಯದಲ್ಲಿತ್ತು.

ಮುಂಜಾವದಿಂದ ಇರುಳಿನವರೆಗೂ ಅಜ್ಜಿ ಮನೆಗೆಲಸದಲ್ಲಿ ನಿರತಳಾಗಿರುತ್ತಿದ್ದಳು. ಆ ಕೆಲಸದಲ್ಲಿ ಆಕೆಗೆ, ಸಿಡುಕಿನ ಮೌನದ ತುಫ್ಯಾಯಿಪಾವನೂ ಗಾತ್ರದೇಹದ ಮೆಳ್ಳೆಗಣ್ಣಿನ ಒಬ್ಬಳು ಊಳಿಗದಾಕೆಯೂ ನೆರವಾಗುತ್ತಿದ್ದರು. ಮಗುವನ್ನು ನೋಡಿಕೊಳ್ಳಲು ದಾದಿ ಇರಲಿಲ್ಲ. ಹೇಳಿ ಕೊಳ್ಳುವಂತಹ ಯಾವ ಉಸ್ತುವಾರಿಯೂ ಇಲ್ಲದೆ, ಹಗಲೆಲ್ಲಾ ಜಗಲಿಯ ಮೇಲೋ ಅಥವಾ ಅವರ ಎದುರುಗಿದ್ದ ಕಟ್ಟಿಗೆ ರಾಶಿಯ ಮೇಲೆಯೋ ಆಟವಾಡುತ್ತ ಅದು ಬೆಳೆಯುತ್ತಿತ್ತು. ಸಾಯಂಕಾಲದ ಹೊತ್ತು ಒಮ್ಮೊಮ್ಮೆ ಅವಳೊಡನೆ ಆಟವಾಡುವುದಕ್ಕೋಸ್ಕರ ನಾನು ಹೊರಗೆ ಹೋಗುತ್ತಿದ್ದೆ. ಅವಳನ್ನು ನಾನು ಬಹಳವಾಗಿ ಪ್ರೀತಿಸತೊಡಗಿದೆ. ಅವಳಲ್ಲೂ ಬೇಗನೆ ನನ್ನ ಬಗೆಗೆ ಆತ್ಮೀಯತೆ ಬೆಳೆಯಿತು. ಯಕ್ಷಿಣಿ ಕಥೆಗಳನ್ನು ನಾನು ಅವಳಿಗೆ ಹೇಳಿದಾಗ ನನ್ನ ತೋಳು ಗಳಲ್ಲೇ ಆಕೆ ನಿದ್ದೆ ಹೋಗುತ್ತಿದ್ದಳು. ಅವಳು ನಿದ್ರಿಸಿದಾಗ, ಹಾಸಿಗೆಯ ಬಳಿಗೆ ಅವಳನ್ನು ಹೊತ್ತು ಒಯ್ಯುತ್ತಿದ್ದೆ. ಮುಂದೆ ಬೇಗನೆ ಪರಿಸ್ಥಿತಿ ಮತ್ತಷ್ಟು ತೀವ್ರಗೊಂಡಿತು. ಇರುಳಿನ ವಿದಾಯ ಹೇಳಲು ನಾನು ಬರದ ಹೊರತು, ನಿದ್ದೆಹೋಗಲು ಅವಳು ನಿರಾಕರಿಸಿದಳು. ಅವಳ ಕೊಠಡಿಯನ್ನು ನಾನು ಹೊಕ್ಕೊಡನೆ, ದುಂಡಗಿನ ಪುಟ್ಟ ಕೈಯನ್ನು ಠೀವಿಯಿಂದ ಹೊರಕ್ಕೆ ಚಾಚಿ, ಅವಳೆನ್ನುತ್ತಿದ್ದಳು:

"ನಾಳೆಯವರೆಗೆ ವಿದಾಯ. ಬೇರೆ ಏನು ಹೇಳಬೇಕು, ಅಜ್ಜಮ್ಮ?"

"ದೇವರು ನಿನ್ನನ್ನು ಕಾಪಾಡಲಿ—ಅಂತ," ಎಂದು ಅವಳ ಅಜ್ಜಿ, ಹಲ್ಲುಗಳೆಡೆಯಿಂದಲೂ ಮೂಗಿನಿಂದಲೂ ಹೊಗೆಯ ಎಳೆಗಳನ್ನು ಹೊರಬಿಡುತ್ತ ಉತ್ತರವೀಯುತ್ತಿದ್ದಳು.

ಕಸೂತಿ ಹಾಕಿದ ಅಂಚುಗಳಿದ್ದ ಮೃದು ಹಾಸಿಗೆಯಲ್ಲಿ ಮುದುಡಿಕೊಳ್ಳುತ್ತ, ಮಗು ಪುನರುಚ್ಚರಿಸುತ್ತಿತ್ತು:

"ನಾಳೆಯವರೆಗೆ ದೇವರು ನಿನ್ನನ್ನು ಕಾಪಾಡಲಿ. ಇನ್ನು ನಾನು ನಿದ್ದೆ ಮಾಡ್ತೀನಿ."

ನಾಳೆಯವರೆಗೆ ಅಲ್ಲ—ಯಾವಾಗಲೂ," ಎಂದು ಅವಳ ಅಜ್ಜಿ ತಿದ್ದುತ್ತಿದ್ದಳು.

"ನಾಳೆ ಅಂದರೆ ಯಾವಾಗಲೂ ಅಲ್ಲವೇನು?"

'ನಾಳೆ' ಎಂಬ ಪದವನ್ನು ಅವಳು ಪ್ರೀತಿಸುತ್ತಿದ್ದಳು. ತಾನು ಇಷ್ಟಪಟ್ಟುದನ್ನೆಲ್ಲ ಭವಿಷ್ಯ

ತ್ತಿಗೆ ವರ್ಗಾಯಿಸುತ್ತಿದ್ದಳು. ಒಂದು ಹೂಗೊಂಚಲನ್ನು ಅಥವಾ ಕಡ್ಡಿಗಳನ್ನು ನೆಲದೊಳಕ್ಕೆ ಹೂತು ಅವಳೆನ್ನುತ್ತಿದ್ದಳು:

"ನಾಳೆ ಇದು ಉದ್ಯಾನವಾಗ್ತದೆ."

"ನಾಳೆ ನಾನೊಂದು ಕುದುರೆ ಕೊಂಡ್ಕೊಂಡು ಅಮ್ಮನಹಾಗೆ ಸವಾರಿ ಹೋಗ್ತೀನಿ."

ಅವಳು ಜಾಣೆಯಾದ ಹುಡುಗಿಯಾಗಿದ್ದಳು. ಆದರೆ, ಕೆಚ್ಚು ಹೆಚ್ಚಿರಲಿಲ್ಲ. ಎಷ್ಟೋವೇಳೆ ಆಟದ ನಡುವೆ ಅವಳು ಯೋಚನಾಮಗ್ನಳಾಗಿ ಅನಿರೀಕ್ಷಿತವಾಗಿ ಕೇಳುತ್ತಿದ್ದಳು:

"ಧರ್ಮಗುರುಗಳಿಗೆ ಯಾಕೆ ಹೆಂಗಸರ ಹಾಗೆ ತಲೆಕೂದಲಿದೆ?"

ಒಂದು ದಿನ ಅವಳಿಗೆ ನೆಗ್ಗಿನ ಮುಳ್ಳು ತಗಲಿತು. ಅದರತ್ತ ಬೆದರಿಕೆಯ ಬೆರಳಾಡಿಸುತ್ತ, ಅವಳು ಎಚ್ಚರಿಕೆ ಇತ್ತಳು.

"ಹುಷಾರಾಗಿರು. ಇಲ್ಲದೇ ಹೋದರೆ ನಾನು ದೇವರಲ್ಲಿ ಪ್ರಾರ್ಥಿಸಿಕೊಳ್ತೀನಿ. ಅವನು ನಿನಗೇನಾದರೂ ಕೆಟ್ಟದು ಮಾಡ್ತಾನೆ. ಅವನು ಯಾರಿಗೆ ಬೇಕಾದರೂ—ಅಮ್ಮನಿಗೆ ಕೂಡಾ-ಕೆಟ್ಟದು ಮಾಡಬಲ್ಲ."

ಕೆಲವೇಳೆ ಶಾಂತವಾದ ವ್ಯಸನದಿಂದ ಅವಳು ಆವೃತಳಾಗುತ್ತಿದ್ದಳು. ನನ್ನ ಸಮೀಪಕ್ಕೆ ಒತ್ತಿಕೊಂಡು, ನೀಲಿ ಬಣ್ಣದ, ನಿರೀಕ್ಷೆಯಿಂದ ತುಂಬಿದ, ಕಣ್ಣುಗಳನ್ನು ಆಕಾಶದೆಡೆಗೆ ಎತ್ತಿ, ಅವಳೆನ್ನುತ್ತಿದ್ದಳು:

"ಕೆಲಸಾರೆ ಅಜ್ಜಮ್ಮ ನನಗೆ ಬಯ್ತಾಳೆ. ಆದರೆ ಅಮ್ಮ ಯಾವತ್ತೂ ಬಯ್ಯೋದಿಲ್ಲ-ನಗ್ತಾಳೆ, ಅಷ್ಟೆ. ಅಮ್ಮ ಬಹಳ ಚೆಲುವೆ ಅಂತ—ತನ್ನನ್ನು ಕಾಣೋದಕ್ಕೆ ತನ್ನ ಕಡೆ ನೋಡೋದಕ್ಕೆ ಜನ ಯಾವಾಗಲೂ ಬರ್ತಾರೆ ಅಂತ,—ಅವಳಿಗೆ ಯಾವತ್ತೂ ಬಿಡುವೇ ಇರೋದಿಲ್ಲ ಅಂತ, ಎಲ್ಲರೂ ಅವಳನ್ನು ಪ್ರೀತಿಸ್ತಾರೆ. ಅಮ್ಮ ಅದ್ಭುತ ವ್ಯಕ್ತಿ. ಒಲೆಸೋವ್ ಹೇಳೋದು ಆ ರೀತಿ: ಅದ್ಭುತ ಅಮ್ಮ!"

ನನಗೆ ಅಪರಿಚಿತವಾಗಿದ್ದ ಜಗತ್ತನ್ನು ಕುರಿತು ಮಗು ಕೊಡುತ್ತಿದ್ದ ವಿವರಗಳನ್ನು ಕೇಳಿ ನಾನು ಹರ್ಷಿತನಾದೆ. ತನ್ನ ತಾಯಿಯ ಬಗೆಗೆ ಆತುರದ ಉತ್ಸಾಹದಿಂದ ಆಕೆ ಮಾತನಾಡಿದಳು. ಹೊಸತೊಂದು ಬದುಕು ನನಗೆ ಗೋಚರವಾಗುವಂತೆ ಮಾಡಿದಳು. ಮಾರ್ಗೊಟ್ ರಾಣಿಯ ಕಥೆಯನ್ನು ನೆನಪಿಗೆ ತಂದುಕೊಟ್ಟಳು. ಇದು, ಪುಸ್ತಕಗಳಲ್ಲಿ ನನಗಿದ್ದ ನಂಬುಗೆಯನ್ನೂ ಸುತ್ತುಮುತ್ತಲೂ ನಡೆಯುತ್ತಿರುವುದರ ಬಗೆಗೆ ನನ್ನ ಆಸಕ್ತಿಯನ್ನೂ ಹೆಚ್ಚಿಸಿತು.

ಒಂದು ಸಂಜೆ, ವಾಯುಸೇವನೆಗೆಂದು ಹೋಗಿದ್ದ ನನ್ನ ಯಜಮಾನರು ಹಿಂತಿರುಗುವುದನ್ನೆ ಎದಿರುನೋಡುತ್ತ, ನಾನು ಕುಳಿತಿದ್ದೆ. ನನ್ನ ತೋಳುಗಳಲ್ಲಿ ಮಗು ತೂಕಡಿಸುತ್ತಿತ್ತು. ಕುದುರೆಯ ಮೇಲೆ ಕುಳಿತು ಬರುತ್ತಿದ್ದ ಅದರ ತಾಯಿ ನನ್ನೆಡೆಗೆ ಬಂದಳು. ಜೀನಿನಿಂದ ಹಗುರವಾಗಿ ಧುಮುಕಿ, ತನ್ನ ತಲೆಯನ್ನು ಹಿಂದಕ್ಕೆ ತಳ್ಳಿ, ಕೇಳಿದಳು:

"ನಿದ್ದೆ ಹೋಗಿದಾಳೇನು?"

"ಹೌದು."

"ನಿಜವಾಗಿಯೂ?"

ಸೈನಿಕ ತುಫ್ಯಾಯೆವ್ ಓಡಿಬಂದು, ಕುದುರೆಯನ್ನು ಕರೆದೊಯ್ದ. ಚಾಟಿಯನ್ನು ತನ್ನ

ಸೊಂಟದ ಪಟ್ಟಿಗೆ ತುರುಕಿ, ತನ್ನ ತೋಳುಗಳನ್ನು ಮುಂದಕ್ಕೆ ಚಾಚಿ, ಯುವತಿ ಅಂದಳು:

"ಅವಳನ್ನು ನನ್ನ ಕೈಗೆ ಕೊಡು!"

"ನಾನೇ ಎತ್ತಿಕೊಂಡು ಬರ್ತೀನಿ."

"ಇಲ್ಲ, ಕೂಡದು!" ಎಂದು ಆ ಮಹಿಳೆ, ತನ್ನ ಪಾದವನ್ನು ಎತ್ತಿಕುಕ್ಕಿ, ನಾನು ತನ್ನ ಕುದುರೆ ಯೇನೋ ಎನ್ನುವಂತೆ ಕೂಗಿ ನುಡಿದಳು.

ಪುಟ್ಟ ಹುಡುಗಿಗೆ ಎಚ್ಚರವಾಯಿತು. ಅವಳು ಪಿಳಿಪಿಳಿ ನೋಡಿದಳು; ತಾಯಿ ಕಣ್ಣಿಗೆ ಬಿದ್ದಾಗ ತನ್ನ ತೋಳುಗಳನ್ನು ಮುಂದಕ್ಕೆ ಚಾಚಿದಳು. ಆ ಇಬ್ಬರೂ ಒಳಕ್ಕೆ ಹೋದರು.

ಈ ರೀತಿ ಗದರಿಸಿಕೊಳ್ಳುವುದು ನನಗೆ ರೂಢಿಯಾಗಿತ್ತು. ಆದರೆ, ಈ ಹೆಂಗಸು ಕೂಡಾ ಕೂಗಾಡುವಳೆಂಬುದನ್ನು ತಿಳಿಯುವುದು ವಿಶೇಷವಾಗಿ ಅಪ್ರಿಯವಾಗಿತ್ತು. ತನ್ನ ಅಪೇಕ್ಷೆಯನ್ನು ಎಷ್ಟೇ ಮೆತ್ತಗೆ ನುಡಿದರೂ, ಯಾರೇ ಆಗಲಿ ಅದನ್ನು ಪರಿಪಾಲಿಸುತ್ತಿದ್ದರು.

ಕೆಲ ನಿಮಿಷಗಳಲ್ಲೇ, ಮೆಳ್ಳೆಗಣ್ಣಿನ ಊಳಿಗದಾಕೆ ಬಂದು ನನ್ನನ್ನು ಕರೆದಳು. ನನಗೆ ಇರುಳಿನ ವಿದಾಯ ಹೇಳದೆ ನಿದ್ರಿಸಲಾರೆನೆಂದು ಹಟಹಿಡಿದುಬಿಟ್ಟಿತ್ತು ಮಗು.

ಸ್ವಲ್ಪಮಟ್ಟಿನ ಹೆಮ್ಮೆಯ ಭಾವನೆಯಿಂದಲೇ ಆ ಮನೆಯ ಒಳ ಹಜಾರವನ್ನು ನಾನು ಹೊಕ್ಕೆ. ಅಲ್ಲಿ ಆ ಯುವತಿ, ತನ್ನ ಮಗಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ತೀವ್ರಗತಿ ಯಿಂದ ಅವಳ ಪೋಷಾಕನ್ನು ಕಳಚುತ್ತಿದ್ದಳು.

"ಹೂಂ, ಇಗೋ ಇಲ್ಲಿದ್ದಾನೆ; ಈ ನಿನ್ನ ದೈತ್ಯ ಬಂದಿದಾನೆ," ಎಂದು ಅವಳೆಂದಳು.

"ಅವನು ದೈತ್ಯನಲ್ಲ. ನನ್ನ ಜತೆ ಆಟಗಾರ."

"ನಿಜವಾಗಿಯೂ? ಆಗಲಿ, ಒಳ್ಳೇದು. ನಿನ್ನ ಜತೆ ಆಟಗಾರನಿಗೆ ಒಂದು ಉಡುಗೊರೆ ಕೊಡೋಣ, ಏನಂತೀಯಾ?"

"ಹೂಂ, ಆಗಬಹುದು. ಕೊಡೋಣ."

"ಸರಿ. ನೀನು ಹೋಗಿ ಮಲಗು. ನಾನು ಅವನಿಗೆ ಏನನ್ನಾದರೂ ಕೊಡ್ತೀನಿ."

ಆ ಪುಟ್ಟ ಹುಡುಗಿ ತನ್ನ ಕೈಯನ್ನು ಮುಂದಕ್ಕೆ ಚಾಚಿ ಅಂದಳು:

"ನಾಳೆಯವರೆಗೆ ವಿದಾಯ. ನಾಳೆಯವರೆಗೆ ದೇವರು ನಿನ್ನನ್ನು ಕಾಪಾಡಲಿ."

ತಾಯಿ ಅಚ್ಚರಿಯಿಂದ ಅಂದಳು:

"ಹಾಗೆ ಹೇಳೋದಕ್ಕೆ ಯಾರೇ ನಿನಗೆ ಹೇಳ್ಕೊಟ್ಟೋರು? ಅಜ್ಜಿಯೇನು?"

"ಹೌದು."

ಮಗು ಒಳಕ್ಕೆ ಹೋದಮೇಲೆ, ಆ ಹೆಂಗಸು ತನ್ನೆಡೆಗೆ ಬರಲು ನನಗೆ ಸನ್ನೆಮಾಡಿದಳು.

"ಏನು ಕೊಟ್ಟರಾಗುತ್ತೆ ನಿನಗೆ?"

ನನಗೇನೂ ಬೇಕಾಗಿಲ್ಲವೆಂದು ನಾನು ಉತ್ತರವಿತ್ತೆ. ಪ್ರಾಯಶಃ, ಓದಲು ಒಂದು ಪುಸ್ತಕ ಕೊಟ್ಟರಾದೀತು—ಎಂದೆ.

ಬೆಚ್ಚನೆಯ, ಸುವಾಸನೆ ಸೂಸುತ್ತಿದ್ದ, ಬೆರಳುಗಳಿಂದ ನನ್ನ ಗಲ್ಲವನ್ನೆತ್ತಿ, ಆಪ್ಯಾಯ ಮಾನವಾಗಿ ಮುಗುಳುನಗುತ್ತ ಅವಳೆಂದಳು.

"ಓಹೋ—ಓದೋದು ನಿನಗೆ ಇಷ್ಟವೇನು? ನೀನು ಯಾವ ಯಾವ ಪುಸ್ತಕ ಓದಿ

ದೀಯಾ ?"

ಮುಗುಳುನಕ್ಕಾಗ ಮತ್ತಷ್ಟು ಚೆಲುವೆಯಾಗಿಯೂ ಅವಳು ಕಂಡಳು. ತಬ್ಬಿಬ್ಬಾದ ನಾನು, ನೆನಪಿಗೆ ಬಂದ ಕೆಲಕಾದಂಬರಿಗಳ ಹೆಸರುಗಳನ್ನು ಹೇಳಿದೆ.

ಮೇಜಿನ ಮೇಲೆ ತಾಳಬದ್ಧವಾಗಿ ತಟ್ಟುತ್ತ ಅವಳು ಕೇಳಿದಳು.

"ಆ ಪುಸ್ತಕಗಳಲ್ಲಿ ನಿನಗೆ ತೃಪ್ತಿ ಎನಿಸಿದಂಥಾದ್ದನ್ನು ಏನು ಕಂಡೆ ?"

ಅವಳು, ಹೂಗಳ ಬಲವಾದ ಮಧುರವಾದ ವಾಸನೆಯನ್ನು ಹೊರಸೂಸುತ್ತಿದ್ದಳು. ಆ ಸುವಾಸನೆಯೊಡನೆ ಕುದುರೆಯ ಬೆವರು ವಿಚಿತ್ರ ರೀತಿಯಲ್ಲಿ ಬೆರೆತಿತ್ತು. ನೀಳವಾದ ಕಣ್ಣೆವೆಗಳ ಮೂಲಕ ಧ್ಯಾನಮಗ್ನಳಾಗುತ್ತ ನನ್ನನ್ನೆ ಆಕೆ ದಿಟ್ಟಿಸಿದಳು. ಅದಕ್ಕೂ ಹಿಂದೆ ಯಾರೂ ಆ ರೀತಿ ನನ್ನನ್ನು ನೋಡಿರಲಿಲ್ಲ.

ಮೆತ್ತೆಗಳಿದ್ದ ಸೊಗಸಾದ ಪೀಠೋಪಕರಣಗಳು ಬಹಳ ಇದ್ದುದರಿಂದ ಆ ಕೊಠಡಿ, ಹಕ್ಕಿಯ ಗೂಡಿನಷ್ಟು ಚಿಕ್ಕದಾಗಿ ಕಾಣಿಸುತ್ತಿತ್ತು. ಗಿಡಗಳ ದಟ್ಟನೆಯ ಹಸುರೆಲೆಗಳಿಂದ ಕಿಟಕಿಗಳು ಮರೆಯಾಗಿದ್ದುವು. ಸಂಜೆಯ ಮಬ್ಬುಬೆಳಕಿನಲ್ಲಿ, ಒಲೆಯ ಹಿಮದಷ್ಟು ಬೆಳ್ಳಗಿನ ಹಂಚುಗಳು ಹೊಳೆದುವು. ಅದರ ಮಗ್ಗುಲಲ್ಲಿ ಚಕಚಕಿಸುತ್ತಿದ್ದ ಕರಿಯ ಪಿಯಾನೋ ಒಂದಿತ್ತು. ಗೋಡೆಗಳ ಮೇಲೆ, ಮಂದವಾದ ಗಿಲೀಟು ಹಾಕಿದ ಚೌಕಟ್ಟುಗಳಲ್ಲಿ ಪುರಾತನ ಸ್ಲಾವ್ ಅಕ್ಷರಗಳಲ್ಲಿ ಕಪ್ಪಗೆ ಬರೆದಿದ್ದುದೇನೋ ತೂಗಾಡುತ್ತಿದ್ದುವು. ಅವುಗಳಲ್ಲಿ ಪ್ರತಿಯೊಂದರಿಂದಲೂ, ಕೊನೆಯಲ್ಲಿ ಅಗಲವಾದೊಂದು ಮುದ್ರೆ ಇದ್ದ ದಾರ ನೇತಾಡುತ್ತಿತ್ತು. ಆ ಮಹಿಳೆಯ ಕಡೆಗೆ ಈ ವಸ್ತುಗಳೆಲ್ಲ, ನನ್ನಷ್ಟೆ ವಿನೀತವಾಗಿ ಗೌರವಪೂರ್ವಕವಾಗಿ ದಿಟ್ಟಿಸುತ್ತಿದ್ದುವು.

ಬದುಕು ಬಲು ನೀರಸ ಮತ್ತು ಪ್ರಯಾಸಕರ; ಆದರೆ ಪುಸ್ತಕಗಳನ್ನೋದುವುದರಿಂದ ಜನರು ಇದನ್ನು ಮರೆಯುತ್ತಾರೆ—ಎಂದು, ನನ್ನಿಂದ ಶಕ್ಯವಿದ್ದಷ್ಟು ಚೆನ್ನಾಗಿ ಅವಳೆದುರು ನಾನು ವಿವರಿಸಿದೆ.

ಎದ್ದೇಳುತ್ತ ಅವಳು ಉದ್ಗರಿಸಿದಳು:

"ನಿಜವಾಗಿಯೂ? ಮಾತನ್ನು ಚೆನ್ನಾಗಿಯೇ ಹೇಳಿದೆ-ಅನ್ನಬೇಕು. ನೀನು ಹೇಳಿದ್ದು ಕೂಡಾ ಸರಿಯಾದ್ದೇ ಅನ್ತೀನಿ. ಆದರೆ, ಏನೂ ಮಾಡೋಕೆ ಆಗೋದಿಲ್ಲ, ಅನಿಸುತ್ತೆ. ನಿನಗೆ ಪುಸ್ತಕಗಳನ್ನು ಬಹಳ ಸಂತೋಷದಿಂದಲೇ ಕೊಡಬಲ್ಲೆ. ಸದ್ಯಃ ನನ್ನ ಹತ್ತಿರ ಯಾವುದೂ ಇಲ್ಲ, ಅಷ್ಟೆ. ಓ-ಎಲ್ಲಿ, ಇದನ್ನು ನೀನು ತಗೋಬಹುದು."

ಮಂಚದ ಮೇಲಿಂದ, ಹಳದಿ ಕಟ್ಟುಹಾಕಿದ್ದ ಶೀರ್ಣವಾದೊಂದು ದಪ್ಪನೆಯ ಪುಸ್ತಕವನ್ನು ಅವಳು ಎತ್ತಿಕೊಂಡಳು.

"ಇದನ್ನು ನೀನು ಮುಗಿಸಿದಾಗ, ಎರಡನೇ ಭಾಗವನ್ನು ಕೊಡ್ತೀನಿ. ಒಟ್ಟು ನಾಲ್ಕಿವೆ."

ರಾಜಕುಮಾರ ಮೆಶ್‌ಚೆರ್‌ಸ್ಕಿ ಬರೆದ "ಸೇಯಿಂಟ್ ಪೀಟರ್ಸ್‌ಬರ್ಗಿನ ರಹಸ್ಯಗಳು" ಪುಸ್ತಕವನ್ನೆತ್ತಿಕೊಂಡು ನಾನು ಹೊರಹೋದೆ. ಅತ್ಯಾಸಕ್ತಿಯಿಂದ ಓದತೊಡಗಿದೆ. ಆದರೆ, ಸೇಯಿಂಟ್ ಪೀಟರ್ಸ್‌ಬರ್ಗಿನ 'ರಹಸ್ಯಗಳು', ಮ್ಯಾಡ್ರಿಡ್ ಅಥವಾ ಲಂಡನ್ ಇಲ್ಲವೆ ಪ್ಯಾರಿಸ್‌ಗಳ ರಹಸ್ಯಗಳಿಗಿಂತಲೂ ಹೆಚ್ಚು ನೀರಸವಾದುವು, ಬೇಸರ ತರುವಂಥವು-ಎಂಬುದು ಬೇಗನೆ ನನಗೆ ಸ್ಪಷ್ಟವಾಯಿತು. ಆ ಪುಸ್ತಕದಲ್ಲಿ ನನಗೆ ರುಚಿಸಿದ ಒಂದೇ ಒಂದು ಅಂಶವೆಂದರೆ—

'ಸ್ವಾತಂತ್ರ್ಯ ಮತ್ತು ಡೊಣ್ಣೆ'ಯ ನೀತಿಕಥೆ.

ಸ್ವಾತಂತ್ರ್ಯವೆಂದಿತು:

"ನಾನು ನಿನಗಿಂತ ಮೇಲು-ಯಾಕೆಂದರೆ, ನಾನು ನಿನಗಿಂತ ಹೆಚ್ಚು ಬುದ್ಧಿವಂತ."

ಡೊಣ್ಣೆ ಪ್ರತಿಯಾಡಿತು:

"ಛೆ ಇಲ್ಲ; ನಾನು ನಿನಗಿಂತ ಉತ್ತಮ. ಯಾಕೆಂದರೆ, ನಾನು ನಿನಗಿಂತ ಹೆಚ್ಚು ಬಲಿಷ್ಠ."

ಎರಡೂ ಸ್ವಲ್ಪ ಹೊತ್ತಿನವರೆಗೆ ವಾದಿಸುತ್ತಿದ್ದು, ಜಗಳಾಡಲು ಆರಂಭಿಸಿದುವು. ಡೊಣ್ಣೆ, ಸ್ವಾತಂತ್ರ್ಯಕ್ಕೆ ಬಲವಾಗಿ ನಾಲ್ಕೇಟು ಬಿಗಿಯಿತು. ನನಗೆ ನೆನಪಿರುವಂತೆ, ಮುಂದೆ ಸ್ವಾತಂತ್ರ್ಯವು ಆ ಗಾಯಗಳಿಂದಾಗಿ ಆಸ್ಪತ್ರೆಯಲ್ಲಿ ಸತ್ತಿತು.

ಆ ಪುಸ್ತಕದ ಪಾತ್ರಗಳಲ್ಲಿ ಅರಾಜಕವಾದಿಯ ಪಾತ್ರ ಒಂದಿತ್ತು. ರಾಜಕುಮಾರ ಮೆಶ್ಚೆರ್‌ಸ್ಕಿಯ ಪ್ರಕಾರ, ಅರಾಜಕವಾದಿಯು ಬಲು ಭಯಂಕರನಾದ ವ್ಯಕ್ತಿ. ಅವನ ಒಂದೇ ಒಂದು ನೋಟಕ್ಕೇ, ನಡೆಯುತ್ತಿರುವ ಕೋಳಿಮರಿ ಹಾದಿಯಲ್ಲೇ ಬಿದ್ದು ಸಾಯಬೇಕು. 'ಅರಾಜಕವಾದಿ' ಎಂಬ ಪದವನ್ನು ಅಪಮಾನಕರ, ಅಸಭ್ಯ—ಎಂದು ನಾನು ಪರಿಗಣಿಸತೊಡಗಿದೆ. ಅದರ ಹೊರತಾಗಿ ಬೇರೇನೂ ನನಗೆ ತಿಳಿಯಲಿಲ್ಲ. ಇದರಿಂದ ನನಗೆ ನಿರುತ್ಸಾಹವೆನಿಸಿತು. ಒಳ್ಳೆಯ ಪುಸ್ತಕಗಳನ್ನು ತಿಳಿದುಕೊಳ್ಳಲು ನಾನು ಅಸಮರ್ಥನಾಗಿದ್ದೆನೆಂಬುದು ಸ್ಪಷ್ಟವಾಗಿತ್ತು. ಇದು ಒಳ್ಳೆಯ ಪುಸ್ತಕವೆನ್ನುವುದರ ಬಗೆಗೆ ನನಗೆ ಯಾವ ಸಂದೇಹವೂ ಇರಲಿಲ್ಲ. ಅಂತಹ ಸುಂದರಿಯಾದ ಆಢ್ಯಳಾದ ಮಹಿಳೆ ಕೆಟ್ಟ ಪುಸ್ತಕಗಳನ್ನೋದುವುದು ಸಾಧ್ಯವೇ ಇರಲಿಲ್ಲ!

ಮೆಶ್ಚೆರ್‌ಸ್ಕಿಯ ಕಾದಂಬರಿಯನ್ನು ನಾನು ಹಿಂತಿರುಗಿಸಿದಾಗ ಅವಳು ಕೇಳಿದಳು:

"ಪುಸ್ತಕ ಇಷ್ಟವಾಯ್ತೇನು?"

ಇಷ್ಟವಾಗಲಿಲ್ಲವೆಂದು ಹೇಳಲು ಬಹಳ ಕಷ್ಟವೆನಿಸಿತು. ಆಕೆಯ ಮನನೋಯಿಸುವ ವಿಷಯದಲ್ಲಿ ಭಯವಾಯಿತು.

ಆದರೆ ಅವಳು ಸುಮ್ಮನೆ ನಕ್ಕು, ಮಲಗುವ ಕೋಣೆಯ ಬಾಗಿಲ ಪರದೆಯ ಹಿಂದೆ ಮರೆಯಾದಳು. ಕೆಲನಿಮಿಷಗಳಲ್ಲಿ, ನೀಲಿ ತೊಗಲಿನ ಹೊದಿಕೆಯಿದ್ದ ಒಂದು ಪುಟ್ಟಪುಸ್ತಕದೊಡನೆ ಅಲ್ಲಿಂದ ಹೊರಬಂದಳು.

"ಇದು ನಿನಗೆ ಇಷ್ಟವಾಗುತ್ತೆ. ಪುಸ್ತಕ ಹಾಳಾಗದಂತೆ ಎಚ್ಚರ ವಹಿಸಿಕೋ."

ಪುಸ್ತಕ, ಪುಷ್ಕಿನ್ನನ ಕವಿತೆಗಳ ಸಂಪುಟವಾಗಿತ್ತು. ಒಂದೇ ಉಸಿರಿಗೆ ಅದನ್ನು ಓದಿ ಮುಗಿಸಿದೆ. ಅನಾದೃಶ ಸೊಬಗಿನ ತಾಣವನ್ನು ತಲಪಿ, ಏಕಕಾಲದಲ್ಲೇ ಅದರ ಎಲ್ಲಾ ಮೂಲೆಗಳನ್ನೂ ಪರಿಶೋಧಿಸುವ ಬಯಕೆಯಾಗಿ, ಮಹದಾಶೆಯ ಅನುಭವವಾಗುವುದಿಲ್ಲವೆ? ಅಂತಹ ಆಸೆಯಿಂದ ಅದುಮಲ್ಪಟ್ಟು ಆ ಪುಸ್ತಕವನ್ನು ನಾನು ಓದಿದೆ. ಅದು, ಜವುಗಿನಿಂದ ಹೊರಬಿದ್ದು ಹಾದಿ ತಲಪಿದಂತಿತ್ತು. ಸೂರ್ಯನ ಹೊಂಬೆಳಕು; ಅರಳುತ್ತಿದ್ದ ಹೂಗಳು ಎಲ್ಲೆಲ್ಲೂ. ಒಂದು ಕೊನೆಯಿಂದ ಇನ್ನೊಂದರ ತನಕ ಧಾವಿಸುವುದಕ್ಕೆ ಮುನ್ನ, ಒಂದು ಕ್ಷಣ ಮೋಹಮುಗ್ಧನಾಗಿ ಅಲ್ಲಿಯೇ ನಿಲ್ಲುವ ಜಾಗ. ಮೃದುಹುಲ್ಲನ್ನು ಪ್ರತಿಸಾರಿ ಪಾದ ಮುಟ್ಟಿದಾಗಲೂ ಹರ್ಷಾತಿರೇಕದ ಅನುಭವ.

ಪುಷ್ಕಿನ್ನನ ಕವನಗಳ ಸರಳತೆಯಿಂದಲೂ ಸಂಗೀತದಿಂದಲೂ ನಾನು ಎಷ್ಟೊಂದು ಅಚ್ಚರಿ ಪಟ್ಟೆನೆಂದರೆ, ಬಹಳಕಾಲದವರೆಗೆ, ಗದ್ಯವೆನ್ನುವುದು ಅಸ್ವಾಭಾವಿಕವಾಗಿ ನನಗೆ ಅನಿಸಿತು. ಅದ ನ್ನೋದುವುದು ಕಷ್ಟಕರವಾಗಿ ಕಂಡಿತು. 'ರುಸ್ಲಾನ್ ಮತ್ತು ಲುದ್ಮಿಲ್ಲಾ'ಳ ಆರಂಭಗೀತ, ಅಜ್ಜಿಯ ಅತ್ಯುತ್ತಮ ಕತೆಗಳ ಸಾರಸರ್ವಸ್ವದಂತಿತ್ತು. ಕೆಲಸಾಲುಗಳು, ತಮ್ಮ ಅಪೂರ್ವ ಸಮರ್ಪಕತೆಯಿಂದ ನನ್ನನ್ನು ಮೈಮರೆಸಿದುವು.

ಜನರಿನ್ನೂ ಅರಿಯದ ಪಥದಲಿಹುದು
ಯಾರೂ ಕಾಣದ ಮಿಕವ ಕಾಲಗುರುತೂ....

ಈ ಅದ್ಭುತ ಸಾಲುಗಳನ್ನು ಪುನಃ ಪುನಃ ಉಚ್ಚರಿಸಿದಂತೆ, ನನಗೆ ಚಿರಪರಿಚಿತವಾದ ಕಂಡೂ ಕಾಣಿಸದ ಹಾದಿಗಳನ್ನು, ಪಾದರಸದ ಬಿಂದುಗಳಂತೆ ಹಿಮ ಹೊಳೆಯುತ್ತಿದ್ದ ಹುಲ್ಲನ್ನು, ಹುಲ್ಲನ್ನು ತುಳಿದಿದ್ದ ರಹಸ್ಯಮಯ ಗುರುತುಗಳನ್ನು ನನ್ನೆದುರು ಕಂಡೆ. ತಾನು ವ್ಯಕ್ತಪಡಿಸುವ ವಿಚಾರವನ್ನೆಲ್ಲ ಸಮೃದ್ಧವಾಗಿ ಅಲಂಕರಿಸಿದ್ದ ಪೂರ್ಣಧ್ವನಿಯ ಈ ಕವಿತೆಯನ್ನು ನೆನಪಿಡುವುದು ಅತ್ಯಂತ ಸುಲಭವಾಗಿತ್ತು. ನನ್ನನ್ನು ಅದು ಸಂತಸದಿಂದ ತುಂಬಿತು. ಬದುಕನ್ನು ಸುಲಭ ವಾಗಿಯೂ ಸುಖಕರವಾಗಿಯೂ ಮಾಡಿತು. ವಾಸ್ತವವಾಗಿ, ಆ ಕವಿತೆ ಹೊಸ ಬದುಕಿನ ಹರಿಕಾರನೇ ಎನಿಸುವಂತಾಯಿತು. ಓದಲು ಸಾಧ್ಯವೆನಿಸುವುದು ಎಂತಹ ಆನಂದ!

ಪುಷ್ಕಿನ್ನನ ಸೊಗಸಾದ ಕಥನಕವನಗಳು ಆತನ ಇತರ ಕೃತಿಗಳಿಗಿಂತ, ನನ್ನ ಹೃದ ಯಕ್ಕೂ ತಿಳಿವಳಿಕೆಗೂ ಹೆಚ್ಚು ಸಮೀಪವಾಗಿದ್ದುವು. ಅವನ್ನು ಪುನಃ ಪುನಃ ಓದಿದೆ ಅಷ್ಟಕ್ಕೇ ಅವು ನನಗೆ ಕಂಠಪಾಠವಾದುವು. ಬಳಿಕ, ರಾತ್ರೆ ಮಲಗಿಕೊಂಡಾಗ, ಕಣ್ಣುಗಳನ್ನು ಮುಚ್ಚಿ ನಿದ್ದೆ ಬರುವವರೆಗೂ ನನ್ನಷ್ಟಕ್ಕೇ ಆ ಸಾಲುಗಳನ್ನು ಪಿಸುನುಡಿಯುತ್ತಿದ್ದೆ. ಕೆಲವೇಳೆ, ಅಧಿಕಾರಿ ಗಳ ಚಾಕರರೆದುರು ಅವುಗಳನ್ನು ಅನ್ನುತ್ತಿದ್ದೆ. ಅವರು ನಕ್ಕು, ಅಚ್ಚರಿಯಿಂದ ಉದ್ಗರಿಸುತ್ತಿ ದ್ದರು. ಸಿದೊರೋವ್ ನನ್ನ ತಲೆಯನ್ನು ತಟ್ಟಿ ಮೃದುವಾಗಿ ಹೇಳುತ್ತಿದ್ದ:

"ಇವು ಎಷ್ಟೊಂದು ಸೊಗಸಾಗಿವೆ, ಅಲ್ಲ?"

ನನ್ನ ಈ ಭಾವೋದ್ವೇಗದ ಬದುಕಿನ ಅರಿವು, ನನ್ನ ಒಡೆಯರಿಗಾಯಿತು. ಮುದುಕಿ ನನ್ನನ್ನು ಜರಿಯತೊಡಗಿದಳು.

ಓದೋದರಲ್ಲಿ ಮೈಮರೆತು ನಾಲ್ಕು ದಿನಗಳಿಂದ ಚಾದಾನಿ ಬೆಳಗಿಯೇ ಇಲ್ಲ, ಲಫಂಗ! ಲಟ್ಟಣಿಗೆ ಹಿಡಕೊಂಡು ಒಮ್ಮೆ ಅವನ ಬೆನ್ನು ಹತ್ತಿದೆ ಅಂದರೆ—"

ಆದರೆ ಲಟ್ಟಣಿಗೆ ಯಾವ ಲೆಕ್ಕ ನನಗೆ? ಕವನದಿಂದ ನಾನು ಆತ್ಮರಕ್ಷಣೆಮಾಡಿಕೊಂಡೆ:

"....ಮುದುಕಿ ಮಾಯಾವಿನಿ,
ದುರುಳತನ ತುಂಬಿರುವ ಕರಿಹೃದಯದಾಕೆ...."

ಆ ಸುಂದರ ಯುವತಿಯ ಹಿರಿಮೆ ನನ್ನ ದೃಷ್ಟಿಯಲ್ಲಿ ಮತ್ತಷ್ಟು ಹೆಚ್ಚಾಗಿ ಕಂಡಿತು. ಆಕೆ ಓದುವ ಪುಸ್ತಕ ಅಂತಹದು ಹಾಗಾದರೆ! ಅರಿವೆ ಕತ್ತರಿಸುವವನ ಪಿಂಗಾಣಿ ಬೊಂಬೆ ಅಲ್ಲವೇ ಅಲ್ಲ ಈಕೆ.

ಪುಸ್ತಕವನ್ನು ಅವಳಲ್ಲಿಗೆ ಒಯ್ದು, ವ್ಯಸನದಿಂದ ಹಿಂತಿರುಗಿಸಿದಾಗ, ದೃಢವಿಶ್ವಾಸದಿಂದ ಅವಳೆಂದಳು:

"ಈ ಪುಸ್ತಕ ನಿನಗಿಷ್ಟವಾಯ್ತು, ಅಲ್ಲವೆ? ಪುಷ್ಕಿನ್ನನ ವಿಷಯ ನೀನು ಎಂದಾದರೂ ಕೇಳಿ ಬಲ್ಲೆಯಾ?"

ನಾನು 'ಇಲ್ಲ'ವೆಂದೆ. ಆ ಕವಿಯ ಬಗೆಗೆ ಯಾವುದೋ ಒಂದು ನಿಯತಕಾಲಿಕದಲ್ಲಿ ಕೆಲ ವಿಷಯ ನಾನು ಓದಿದ್ದೆನಾದರೂ ಅವಳೇನು ಹೇಳುವಳೆಂಬುದನ್ನು ಕೇಳಲು ಅಪೇಕ್ಷೆಪಟ್ಟೆ.

ಪುಷ್ಕಿನ್ನನ ಜೀವನ ಮತ್ತು ಸಾವಿನ ಬಗೆಗೆ ಚುಟುಕಾಗಿ ಹೇಳಿದ ಬಳಿಕ, ಬೇಸಗೆಯ ದಿನದಂತೆ ಶುಭ್ರವಾಗಿದ್ದ ಮುಗುಳುನಗೆ ನಕ್ಕು ಆಕೆ ಕೇಳಿದಳು:

"ಹೆಂಗಸನ್ನು ಪ್ರೀತಿಸೋದು ಎಷ್ಟು ಅಪಾಯಕಾರಿ ಅಂತ ಈಗ ತಿಳೀತೇನು?"

ನಾನು ಓದಿದ್ದ ಎಲ್ಲಾ ಪುಸ್ತಕಗಳ ಪ್ರಕಾರವೂ ನಿಜವಾಗಿಯೂ ಇದು ಅಪಾಯಕರ ವಾಗಿತ್ತು; ಆದರೆ—ಒಳಿತಾದುದೂ ಆಗಿತ್ತು.

ನಾನೆಂದೆ:

"ಅದು ಅಪಾಯಕರವಾಗಿರಬಹುದು. ಆದರೆ ಪ್ರತಿಯೊಬ್ಬರೂ ಅನುರಕ್ತರಾಗ್ತಾರೆ. ಹೆಂಗಸರು ಕೂಡಾ ಸಂಕಟಪಡ್ತಾರೆ."

ಎಲ್ಲವನ್ನೂ ನೋಡುವ ತನ್ನ ಅಭ್ಯಾಸದಂತೆ ತಗ್ಗಿಸಿದ ಕಣ್ಣೆವೆಗಳ ಎಡೆಯಿಂದ ನನ್ನ ಕಡೆ ನೋಡಿ, ಗಂಭೀರ ಧ್ವನಿಯಲ್ಲಿ ಅವಳೆಂದಳು:

"ನಿಜವಾಗಿಯೂ? ಇದರ ಅರ್ಥ ಏನೂಂತ ನಿನಗೆ ಗೊತ್ತಿದೆಯೆ? ಗೊತ್ತಿದೆ ಎಂದಾದರೆ, ಅದನ್ನು ನೀನು ಯಾವತ್ತೂ ಮರೆಯೋದಿಲ್ಲ ಅಂತ ಭಾವಿಸ್ತೇನಿ."

ಬಳಿಕ, ನನಗೆ ವಿಶೇಷವಾಗಿ ಮೆಚ್ಚುಗೆಯಾದ ಕವಿತೆಗಳು ಯಾವುವು-ಎಂದು ಅವಳು ಪ್ರಶ್ನಿಸತೊಡಗಿದಳು.

ನಾನು ವಿವರಿಸತೊಡಗಿದೆ, ಉತ್ಸಾಹದಿಂದ, ಹಾವಭಾವಸಹಿತವಾಗಿ, ಕವಿತೆಗಳನ್ನು ಅಂದು ತೋರಿಸಿದೆ. ಗಭೀರಮೌನದಲ್ಲಿ ಅವಳು ಆಲಿಸಿದಳು. ಬಳಿಕ ಎದ್ದು, ಶತಪಥ ತುಳಿಯುತ್ತ, ವಿಚಾರಪೂರ್ಣವಾಗಿ ಅಂದಳು:

"ನನ್ನ ಅಮೂಲ್ಯ ಪುಟ್ಟ ಕೋತಿಯೇ, ನೀನು ಶಾಲೆಗೆ ಹೋಗುತ್ತಿರಬೇಕಪ್ಪ ಇನ್ನು. ಈ ವಿಷಯ ನಾನು ಯೋಚಿಸ್ಬೇಕು. ನೀನು ದುಡೀತಿದೀಯಲ್ಲಾ, ಆ ಮನೆಯವರು ನಿನ್ನ ಸಂಬಂಧಿಕರೆ?"

ನಾನು 'ಹೌದೆಂ'ದಾಗ, ನಾನೇ ತಪ್ಪುಗಾರನೆನ್ನುವಂತೆ, "ಓ!" ಎಂದು ಆಕೆ ಉದ್ಗರಿಸಿದಳು.

'ಬಿರೇಂಜರನ ಗೀತಗಳು' ಪುಸ್ತಕವನ್ನು ಅವಳು ನನಗೆ ಓದಲು ಕೊಟ್ಟಳು. ಹೊಳಪಿನ ಒಪ್ಪಹಾಕಿದ ಅಂಚುಗಳ ಸೊಗಸಾದ ಆ ವೃತ್ತಿ. ಕೆಂಪು ತೊಗಲಿನ ಹೊದಿಕೆ ಹೊರಗೆ ಅಕ್ಷರಗಳನ್ನು ಕೊರೆದಿತ್ತು. ಚುಚ್ಚುವ ಕಹಿ ಹಾಗೂ ಅನಿಯಂತ್ರಿತ ವಿನೋದ-ಇವೆರಡೂ ವಿಚಿತ್ರ ರೀತಿಯಲ್ಲಿ ಬೆರೆತಿದ್ದ ಈ ಹಾಡುಗಳು, ನನ್ನನ್ನು ಮಹದಾನಂದದಿಂದ ತುಂಬಿದುವು.

"ಮುದುಕ ಭಿಕ್ಷುಕ' ಎಂಬ ಕವಿತೆಯ ಕಹಿ ಪದಗಳನ್ನು ಓದಿದಂತೆ, ನನ್ನ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿತು.

ಜನರೆ, ಸಜ್ಜನರೆ, ಕ್ಷುದ್ರಕೀಟದ ತೆರದಿ ನೀವೆನ್ನನು
ತುಳಿದರೆಯಬಾರದೇಕೆ?

ಆ್ಹ ! ಮನುಜಕುಲಕುಪಕಾರಿಯಾಗುವಂತೆನ್ನನು
ತಿದ್ದಿ ತೀಡಿದ್ದರೊ—!
ಆಗಲೋ, ಹೇಮಂತದಾಘಾತದಿಂದ ರಕ್ಷಣೆ ಪಡೆಮ
ಕಾಯಕದ ಇರುವೆಯಾಗುತಲಿತ್ತು ಈ ಹುಳವು.
ಸೋದರನ ತೆರ ಒಲವ ಸೂಸುತಲಿದ್ದೆನಾಗ.
ಆದರೀಗ ನಾನೊಬ್ಬ ಮುದುಕ ಉಂಡಾಡಿ
ಸಾಯುವೆನು ನಾ ನಿಮ್ಮ ಶತ್ರುವಾಗಿ.

ಆದರೆ ಮರುಕ್ಷಣವೆ, 'ಅಳುವ ಗಂಡ' ಕವಿತೆಯನ್ನೋದಿ, ಅಳು ಬರುವವರೆಗೂ ನಾನು ಬಿದ್ದು ಬಿದ್ದು ನಕ್ಕೆ.

ಮಜವಾಗಿರುವ ಕಲೆಯನು ಕಲಿವುದು
ಸರಳ ಜೀವಗಳಿಗೆ ಬಲು ಸುಲಭ....

—ಎಂಬ ಬಿರೇಂಜರನ ಮಾತನ್ನು ನಾನು ವಿಶೇಷವಾಗಿ ನೆನಪಿಟ್ಟೆ.

ಬಿರೇಂಜರ್, ಅದಮ್ಯ ಚೇತನಗಳನ್ನು ನನ್ನೊಳಗಿಂದ ಹೊಡೆದೆಬ್ಬಿಸುತ್ತಿದ್ದ; ತುಂಟತನ ಮಾಡುವ, ಪರಿಹಾಸ್ಯದ ಉದ್ಧಟತನದ ಮಾತುಗಳನ್ನಾಡುವ, ಬಯಕೆಯನ್ನು ನನ್ನಲ್ಲಿ ತುಂಬು ತ್ತಿದ್ದ. ಆ ಬಯಕೆಯನ್ನು ಬೇಗನೆ ನಾನು ಈಡೇರಿಸಿಕೊಳ್ಳತೊಡಗಿದೆ. ಅವನ ಕವಿತೆಗಳನ್ನೂ ನಾನು ಕಂಠಪಾಠಮಾಡಿದೆ. ಅಧಿಕಾರಿಗಳ ಚಾಕರರ ಅಡುಗೆಮನೆಗಳಿಗೆ ಕೆಲ ನಿಮಿಷಗಳ ಮಟ್ಟಿಗೆ ಹೋಗಿ ಬರಲು ಬಿಡುವು ದೊರೆತಾಗಲೆಲ್ಲ, ಅತ್ಯಂತ ಉತ್ಸಾಹಗಳಿಂದ ಅವುಗಳನ್ನು ಅನ್ನುತ್ತಿದ್ದೆ.

ಆದರೆ, ಬೇಗನೆ ಇದನ್ನು ನಾನು ಬಿಟ್ಟುಕೊಡಬೇಕಾಯಿತು.

ಯಾವುದೇ ಟೊಪ್ಪಿಗೆ
ಸರಿಹೋಗುವುದಿಲ್ಲವೆ—
ಹದಿನೇಳರ ಹುಡಿಗೆಗೆ ?

—ಎಂಬ ಸಾಲುಗಳು, ಹೆಂಗಸರನ್ನು ಕುರಿತು ಅತ್ಯಂತ ಅಸಹ್ಯವಾದ ಚರ್ಚೆಗೆ ಎಡೆಮಾಡಿ ಕೊಟ್ಟುದೇ ಅದಕ್ಕೆ ಕಾರಣ. ಅದರಿಂದ ಅವಮಾನಿತನಾದ ನನಗೆ ಹುಚ್ಚೇ ಹಿಡಿದಂತಾಯಿತು. ಆ ಉದ್ವೇಗದಲ್ಲಿ ಬಾಣಲೆಯನ್ನೆತ್ತಿ ಸೈನಿಕ ಯೆರ್ಮೋಖಿನನ ತಲೆಗೇ ನಾನು ಹೊಡೆದೆ. ಆತನ ಕರಡಿ ಹಿಡಿತದಿಂದ, ಸಿದೊರೋವನೂ ಮತ್ತಿತರ ಚಾಕರರೂ ನನ್ನನ್ನು ರಕ್ಷಿಸಿದರು ಆದರೆ, ಅಧಿಕಾರಿಗಳ ಅಡುಗೆಮನೆಗಳ ಕಡೆಗೆ ಮತ್ತೆ ಹೋಗಲು ನಾನು ಧೈರ್ಯಪಡಲಿಲ್ಲ....

ಮನೆಯಿಂದ ಹೊರ ಹೋಗಿ ತಿರುಗಾಡಿಕೊಂಡು ಬರಲು ನನ್ನ ಒಡೆಯರು ನನಗೆ ಸಮ್ಮತಿ ಇತ್ತಿರಲಿಲ್ಲ. ವಾಸ್ತವವಾಗಿ, ಆ ರೀತಿಯ ತಿರುಗಾಟಕ್ಕೆ ವೇಳೆಯೂ ಇರಲಿಲ್ಲ. ನನ್ನ ಕೆಲಸ ಹೆಚ್ಚಿತ್ತು. ಊಳಿಗದಾಕೆ, ತೋಟದಮಾಲಿ, ಚಿಲ್ಲರೆ ಕೆಲಸಗಳ ಹುಡುಗ-ಈ ಮೂರು ಬಗೆಯ ದುಡಿಮೆಗಳೂ ಅಲ್ಲದೆ, ದಿನನಿತ್ಯವೂ ದೊಡ್ಡದೊಂದು ಚೌಕಟ್ಟಿಗೆ ಕ್ಯಾಲಿಕೋವನ್ನು ಹೊಡೆದು

ನಿಲ್ಲಿಸುವ, ನನ್ನ ಯಜಮಾನ ಬರೆದ ನಕಾಶೆಗಳನ್ನು ಅದಕ್ಕೆ ಅಂಟಿಸುವ, ಕಟ್ಟಡದ ಅಂದಾಜು ವೆಚ್ಚಗಳ ಪಟ್ಟಿಗಳನ್ನು ಪ್ರತಿಮಾಡುವ, ಕಂಟ್ರಾಕ್ಟುದಾರರ ಬಿಲ್ಲುಗಳು ಸರಿ ಇವೆಯೇ ಎಂದು ಪರಿಶೀಲಿಸುವ ಕೆಲಸವೂ ನನ್ನ ಮೇಲೆ ಬಿತ್ತು. ನನ್ನ ಯಜಮಾನ, ಯಂತ್ರದಂತೆ ಬೆಳಗಿನಿಂದ ರಾತ್ರಿಯವರೆಗೂ ದುಡಿಯುತ್ತಿದ್ದ.

ಆ ಸಮಯದಲ್ಲಿ, ಜಾತ್ರೆಯ ಪ್ರದೇಶದಲ್ಲಿದ್ದ ಸಾರ್ವಜನಿಕ ಕಟ್ಟಡಗಳು, ವರ್ತಕರ ಅಧೀನಕ್ಕೆ ಬಂದು ಅವರ ಖಾಸಗಿ ಸೊತ್ತುಗಳಾದುವು. ಅಂಗಡಿ ಸಾಲುಗಳನ್ನು ಪುನರ್ನಿರ್ಮಿಸಲು ಅವಸರದ ಯತ್ನಗಳು ನಡೆದುವು. ನನ್ನ ಯಜಮಾನ, ಹಳೇ ಮಳಿಗೆಗಳನ್ನು ದುರಸ್ತಿ ಮಾಡುವುದಕ್ಕೂ ಹೊಸವನ್ನು ಕಟ್ಟುವುದಕ್ಕೂ ಒಪ್ಪಿಕೊಂಡು ಕರಾರು ಪತ್ರಗಳಿಗೆ ಸಹಿಹಾಕಿದ. 'ನೇರವಾದ ಕಮಾನುಗಳನ್ನು ಪುನರ್ರಚಿಸಲು ಹಾಗೂ ಛಾವಣಿ ಕಿಟಿಕಿಗಳನ್ನು ಕಟ್ಟಲು' ಮತ್ತು ಅಂತಹದೇ ಇತರ ಕೆಲಸಗಳಿಗೆ, ನಕಾಶೆಗಳನ್ನು ಆತ ಸಿದ್ಧಪಡಿಸುತ್ತಿದ್ದ. ನಾನು ಆ ನಕಾಶೆಗಳನ್ನೂ ಅವುಗಳ ಜತೆ ಇಪ್ಪತ್ತೈದು ರೂಬಲುಗಳ ಒಂದು ನೋಟಿದ್ದ ಲಕೋಟೆಯನ್ನೂ ಮುದಿ ತಂತ್ರಜ್ಞನೊಬ್ಬನಲ್ಲಿಗೆ ಒಯ್ಯುತ್ತಿದ್ದೆ. ಹಣ ಕೈಸೇರಿದ ಬಳಿಕ, "ಕಟ್ಟಡದ ಕೆಲಸದೊಡನೆ ನಕಾಶೆಗಳನ್ನು ಹೋಲಿಸಿ ಪರಿಶೀಲಿಸಲಾಗಿದೆ; ಕೆಳಗೆ ಸಹಿ ಹಾಕಿದವನ ಸ್ವಂತ ಮೇಲ್ವಿಚಾರಣೆಯಲ್ಲೇ ಎಲ್ಲಾ ಕೆಲಸವೂ ನಡೆದಿದೆ," ಎಂದು ನಕಾಶೆಗಳ ಮೇಲೆ ಅವನು ಬರೆಯುತ್ತಿದ್ದ. ಸ್ವಾಭಾವಿಕವಾಗಿಯೇ ಕಟ್ಟಡದ ಕೆಲಸದೊಡನೆ ಹೋಲಿಸಿ ಪರಿಶೀಲಿಸುವುದೊಂದೂ ಇರಲಿಲ್ಲ. ದೇಹಸ್ಥಿತಿಯಿಂದಾಗಿ ಸದಾಕಾಲವೂ ಮನೆಯೊಳಗೇ ಆತ ಇರಬೇಕಾಗಿದ್ದುದರಿಂದ, ನಿರ್ಮಾಣಕೆಲಸದ ಮೇಲ್ವಿಚಾರಣೆ ನಡೆಸುವುದಂತೂ ಅವನಿಂದ ಸಾಧ್ಯವಿದ್ದಂತೆ ತೋರಲಿಲ್ಲ.

ಜಾತ್ರೆಯ ಇನ್ಸ್ಪೆಕ್ಟರಿಗೂ ಇತರ ಜನರಿಗೂ ನಾನು ಲಂಚಗಳನ್ನು ಒಯ್ದುಕೊಡುತ್ತಿದ್ದೆ. ಅವರಿಂದ ಬೇರೆ ಬೇರೆ ಪತ್ರಗಳು ಸಿಗುತ್ತಿದ್ದುವು. ಆ ಪತ್ರಗಳನ್ನು ಕಾನೂನನ್ನು ಬಗೆಬಗೆಯಾಗಿ ಉಲ್ಲಂಗಿಸಲು ಪರ್ಮಿಟ್ಟುಗಳು—ಎಂದು ನನ್ನ ಯಜಮಾನ ಕರೆಯುತ್ತಿದ್ದ. ಈಯೆಲ್ಲ ಕೆಲಸಕ್ಕೆ ಬಹುಮಾನವಾಗಿ, ಸ್ನೇಹಿತರ ಮನೆಗಳಿಗೆಂದು ನನ್ನ ಮಾಲೀಕರು ಹೋದ ಸಂಜೆಗಳಲ್ಲಿ, ಅವರನ್ನು ಇದಿರುನೋಡುತ್ತ ಅಂಗಳದಲ್ಲಿ ಕಾಯುವ ಹಕ್ಕು ನನಗೆ ದೊರೆಯಿತು. ಅಂತಹ ಸಂದರ್ಭಗಳು ಮಾತ್ರ ಬಹಳ ಕಡಮೆ. ಆದರೆ, ಹಾಗೆ ಹೋದಾಗಲೆಲ್ಲ, ಮಧ್ಯರಾತ್ರಿಯ ಅನಂತರವೇ ಅವರು ಮನೆಗೆ ಮರಳುತ್ತಿದ್ದರು. ಇದರಿಂದ ನನಗೆ ಅನೇಕ ತಾಸುಗಳ ವೇಳೆ ದೊರೆಯುತ್ತಿತ್ತು. ಆ ಅವಧಿಯಲ್ಲಿ, ಮುಖಮಂಟಪದಲ್ಲಾಗಲೀ ಎದುರುಗಿದ್ದ ಕಟ್ಟಿಗೆ ರಾಶಿಯ ಮೇಲಾಗಲೀ ಕುಳಿತು ನನ್ನ ಗೌರವಾನ್ವಿತ ಮಹಿಳೆ ಇರುತ್ತಿದ್ದ ವಸತಿಯ ಕಡೆಗೆ ನೋಡುತ್ತಿದ್ದೆ; ಹರ್ಷಪದಸಂಗೀತಕ್ಕೂ ಅಲ್ಲಿಂದ ಕೇಳಿಸುತ್ತಲಿದ್ದ ಸಂಭಾಷಣೆಗೂ ಕಿವಿಗೊಡುತ್ತಿದ್ದೆ.

ಕಿಟಿಕಿಗಳು ತೆರೆದಿರುತ್ತಿದ್ದುವು. ಪರದೆಗಳು ಹಾಗೂ ದ್ರಾಕ್ಷೆಯ ಬಳ್ಳಿಗಳೆಡೆಯಿಂದ, ಅಧಿಕಾರಿಗಳ ಸೊಗಸಾದ ಆಕೃತಿಗಳು ಕೊಠಡಿಯಲ್ಲಿ ಅತ್ತಿತ್ತ ಚಲಿಸುತ್ತಿದ್ದುದೂ ದುಂಡು ದುಂಡಗಿನ ಮೇಜರ್ ನನ್ನ ಆರಾಧ್ಯಮೂರ್ತಿಯನ್ನು ಹಿಂಬಾಲಿಸುತ್ತಿದ್ದುದೂ ಆಗಾಗ್ಗೆ ಕಾಣಿಸುತ್ತಿತ್ತು. ನನ್ನ ಮಹಿಳೆ ಯಾವಾಗಲೂ ಅತ್ಯಂತ ಸರಳತೆಯಿಂದಲೂ ಸೊಬಗಿನಿಂದಲೂ ಉಡುಪು ಧರಿಸಿ ಇರುತ್ತಿದ್ದಳು.

ನನ್ನ ಮನಸ್ಸಿನಲ್ಲೇನೋ ಮಾರ್ಗೊಟ್ ರಾಣಿ ಎಂದೇ ಅವಳನ್ನು ನಾನು ಕರೆದೆ.

ಮೇಲಕ್ಕೆ ಕಿಟಕಿಯ ಕಡೆ ದಿಟ್ಟಿಸುತ್ತಿದ್ದಂತೆ, ಫ್ರೆಂಚ್ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ
ೋದದ ಬದುಕು ಇದೇ ಹಾಗಾದರೆ!'—ಎಂದು ನನ್ನಷ್ಟಕ್ಕೆ ಯೋಚಿಸುತ್ತಿದ್ದೆ. ಯಾವಾಗಲೂ
ುಸು ಕೆಡುಕೆನಿಸುತ್ತಿತ್ತು. ಹೂವಿನ ಸುತ್ತಲೂ ಹಾರಾಡುವ ತುಂಬಿಗಳಂತೆ ಮಾರ್ಗೊಟ್
ಾಣಿಯ ಸುತ್ತಲೂ ಹಾರಾಡುತ್ತಿದ್ದ ಈ ಜನರನ್ನು ಕಂಡು, ನನ್ನ ಮಗುತನದ ಅಸೂಯೆ ಕೆರಳು
ತ್ತು.

ಇತರರಿಗಿಂತ ಕಡಮೆ ಸಾರಿ ಆಕೆಯ ಸಂದರ್ಶನಕ್ಕೆ ಬರುತ್ತಿದ್ದ ಎತ್ತರದ ಗಂಭೀರನಾದ
ಧಿಕಾರಿಯೊಬ್ಬನಿದ್ದ. ಅವನ ಹಣೆಯ ಮೇಲೊಂದು ಮಚ್ಚೆ ಇತ್ತು. ಕಣ್ಣುಗಳು ಆಳದಿಂದ
ೋಡುತ್ತಿದ್ದುವು. ಆತ ಯಾವಾಗಲೂ ತನ್ನ ಪಿಟೀಲನ್ನು ತರುತ್ತಿದ್ದ. ಸುಂದರವಾಗಿ ಅದನ್ನು
ಡಿಸುತ್ತಿದ್ದ. ಆ ವಾದನ ಎಷ್ಟು ಕರ್ಣಾನಂದಕರವಾಗಿರುತ್ತಿತ್ತೆಂದರೆ, ಹಾದಿಹೋಕರು
ಡೆದು ನಿಂತು ಕಿವಿಗೊಡುತ್ತಿದ್ದರು ; ನಮ್ಮ ಬೀದಿಯ ಜನರು ಬಂದು, ಕಟ್ಟಿಗೆ ರಾಶಿಯ ಮೇಲೆ
ಳಿತುಕೊಳ್ಳುತ್ತಿದ್ದರು ; ಮನೆಯಲ್ಲಿ ಇದ್ದರೆಂದರೆ ನನ್ನ ಮಾಲಿಕರು ಕೂಡಾ ಕಿಟಕಿ ತೆರೆಯು
ದ್ದರು, ವಾದಕನನ್ನು ಹೊಗಳುತ್ತಿದ್ದರು. ದೇವಾಲಯದ ಧರ್ಮಾಧಿಕಾರಿಯನ್ನು ಹೊರತು
ೇರೆ ಯಾರನ್ನೂ ಅವರು ಹಿಂದೆ ಎಂದೂ ಹೊಗಳಿದುದು ನನಗೆ ನೆನಪಿಲ್ಲ. ಆದರೆ, ಇದು ಅಥವಾ
ೇರೆ ಯಾವುದೇ ಸಂಗೀತಕ್ಕಿಂತ ಹೆಚ್ಚಾಗಿ, ರುಚಿಕರವಾದ ಮೀನಿನ ಭಕ್ಷ್ಯವನ್ನು ಅವರು ಇಷ್ಟ
ಡುತ್ತಿದ್ದರೆಂಬುದನ್ನು ನಾನು ಬಲ್ಲೆ.

ಕೆಲವೇಳೆ ಆ ಅಧಿಕಾರಿ, ಕೈಯನ್ನು ತನ್ನ ಹಣೆಗೆ ಒತ್ತಿಕೊಂಡು, ಗಟ್ಟಿಯಾಗಿ ಉಸಿ
ಡುತ್ತ, ದಪ್ಪಗಂಟಲಲ್ಲಿ ಹಾಡುತ್ತಿದ್ದ, ಅಥವಾ ಕವಿತೆಯನ್ನು ಅನ್ನುತ್ತಿದ್ದ. ಒಂದು ದಿನ
ಟಿಕಿಯ ಕೆಳಗೆ ಪುಟ್ಟ ಹುಡುಗಿಯೊಡನೆ ನಾನು ಆಟವಾಡುತ್ತಿದ್ದಾಗ, ಹಾಡುವಂತೆ ಮಾರ್ಗೊಟ್
ಣಿ ಆತನನ್ನು ಬೇಡಿಕೊಂಡಳು. ಸ್ವಲ್ಪ ಹೊತ್ತಿನವರೆಗೆ ಆತ ನಿರಾಕರಿಸಿದ. ಬಳಿಕ ಬಲು
ರ್ದಿಷ್ಟವಾದ ಧ್ವನಿಯಲ್ಲಿ ಅಂದ:

ಗೀತಕಷ್ಟೇ ಚೆಲುವು ಬೇಕು
ಚೆಲುವಿಗಿಲ್ಲ ಹಾಡಗೊಡವೆ....

ಆ ಸಾಲುಗಳು ನನಗೆ ಇಷ್ಟವಾದುವು. ಯಾವ ಕಾರಣಕ್ಕಾಯೋ ಆ ಅಧಿಕಾರಿಯ ಬಗೆಗೆ
ನಗೆ ಕನಿಕರವೆನಿಸತೊಡಗಿತು.

ನನ್ನ ಆರಾಧ್ಯಮೂರ್ತಿ, ಕೊಠಡಿಯಲ್ಲಿ ಬೇರೆ ಯಾರೂ ಇಲ್ಲದೆ, ಪಿಯಾನೋದ ಬಳಿ
ನೊಬ್ಬಳೇ ಕುಳಿತುಕೊಳ್ಳುವುದಿತ್ತು. ಆಗ ಆಕೆಯನ್ನು ದಿಟ್ಟಿಸುತ್ತಿರುವುದೇ ನನಗೆ ಅತ್ಯಂತ
ಯವಾಗಿತ್ತು. ಆ ಸಂಗೀತ ನನ್ನ ತಲೆಗೆ ಅಡರುತ್ತಿತ್ತು. ಆ ಕಿಟಕಿಯ ಹೊರತಾಗಿ ಬೇರೇನೂ
ರಗೆ ಕಾಣಿಸುತ್ತಿರಲಿಲ್ಲ. ಅದರಾಚೆಗಿತ್ತು ಹಳದಿ ಕಂದೀಲು ಬೆಳಕಿನಲ್ಲಿ ಕೊರೆದಂತಹ ಸ್ತ್ರೀಯ
ಗಸಾದ ಆಕೃತಿ. ಸ್ವಾಭಿಮಾನದ ಪಾರ್ಶ್ವಚಿತ್ರ ಬಲು ಸೂಕ್ಷ್ಮವಾಗಿ ಕಾಣಿಸುತ್ತಿತ್ತು.
ಯಾನೋದ ಸ್ವರಪಟ್ಟಿಗಳ ಮೇಲೆ ಆವಳ ಬಿಳಿಯ ಕೈಗಳು, ಹಕ್ಕಿಗಳಂತೆ ರೆಕ್ಕೆ ಬಡೆಯು
ದ್ದುವು.

ನಾನು ಅವಳನ್ನೆ ಈಕ್ಷಿಸುತ್ತ, ಆ ಶೋಕಪೂರ್ಣ ಸಂಗೀತಕ್ಕೆ ಕಿವಿಗೊಟ್ಟೆ. ಅತ್ಯದ್ಭುತ
ನಸುಗಳನ್ನು ಹೆಣೆದೆ: ಮುಂದೆಯೊಂದು ದಿನ ಬಚ್ಚಿಟ್ಟ ನಿಕ್ಷೇಪವನ್ನು ಕಂಡುಹಿಡಿದು, ಅದನ್ನೆಲ್ಲ

ಅವಳಿಗೆ ಕೊಡುವೆ; ಆಕೆ ಶ್ರೀಮಂತಳಾಗಲಿ! ನಾನು ಸ್ಕೊಬೆಲಿವ್ ಆಗಿದ್ದರೆ, ಟರ್ಕ ಮೇಲೆ ಮತ್ತೊಮ್ಮೆ ಯುದ್ಧಸಾರುತ್ತಿದ್ದೆ. ಸೆರೆಯಾಳುಗಳ ಮೇಲೆ ತಲೆಕಾಣ್ಕೆ ಹೇರುತ್ತಿದ್ದೆ ನಗರದ ಅತ್ಯಂತ ಸುಂದರ ಪ್ರದೇಶವಾದ ಒಟ್ಕೋಸ್‌ನಲ್ಲಿ ಅವಳಿಗೋಸ್ಕರ ಒಂದು ಭವನವನ್ನು ಕಟ್ಟುತ್ತಿದ್ದೆ. ನಮ್ಮ ಮನೆಯಿಂದ ಹೊರಟು, ಪ್ರತಿಯೊಬ್ಬನೂ ಆಕೆಯ ಬಗೆಗೆ ಹೊಲಸಾದ ಅವಮಾನಕರವಾದ ಕೆಲವದಂತಿಯನ್ನು ಹಬ್ಬುತ್ತಿದ್ದ ನಮ್ಮ ಬೀದಿಯಿಂದಲೇ ದೂರವಾಗಿ, ಆ ಭವನದಲ್ಲಿ ಆಕೆ ವಾಸಿಸುವಂತೆ ಮಾಡುತ್ತಿದ್ದೆ.

ನಮ್ಮ ಮನೆಯಲ್ಲಿ ದುಡಿಯುತ್ತಿದ್ದ ಎಲ್ಲ ಸೇವಕರು, ಅಲ್ಲಿನ ಎಲ್ಲ ನಿವಾಸಿಗಳು—ಅವರಲ್ಲೂ ಮುಖ್ಯವಾಗಿ ನನ್ನ ಮಾಲಿಕರು—ಹಿಂದೆ ಅರಿವೆ ಕತ್ತರಿಸುವವನ ಹೆಂಡತಿಯ ಬಗೆಗೆ ಮಾತನಾಡುತ್ತಿದ್ದಷ್ಟೇ ತುಚ್ಛವಾಗಿ ಮಾರ್ಗೊಟ್‌ರಾಣಿಯ ಬಗೆಗೂ ಮಾತನಾಡುತ್ತಿದ್ದರು ಒಂದು ವ್ಯತ್ಯಾಸವೆಂದರೆ, ಇವಳ ವಿಷಯವಾಗಿ ಹೆಚ್ಚು ಎಚ್ಚರಿಕೆಯಿಂದ, ತಗ್ಗಿದ ಧ್ವನಿಯಲ್ಲಿ ಅತ್ತಿತ್ತ ಕಳ್ಳನೋಟ ಬೀರಿ ಮಾತನಾಡುತ್ತಿದ್ದರು—ಇಷ್ಟೆ.

ಅವಳು ಉಚ್ಚಕುಲದ ಸದ್ಗೃಹಸ್ಥನೊಬ್ಬನ ವಿಧವೆಯಾಗಿದ್ದುದರಿಂದ, ಪ್ರಾಯಶಃ ಅವಳ ವಿಷಯದಲ್ಲಿ ಅವರಿಗೆ ಹೆದರಿಕೆ ಇದ್ದಿರಬಹುದು. ಗೋಡೆಯಲ್ಲಿ ತೂಗಹಾಕಿದ್ದ ಶಾಸನ ಪತ್ರಗಳೆಲ್ಲ, ಅವಳ ಗಂಡನ ಹಿಂದಿನ ತಲೆಮಾರಿನವರಿಗೆ, ಗೊದುನೋವ್, ಅಲೆಕ್ಸಿ ಮತ್ತು ಮಹಾ ಪೀಟರ್ ಮತ್ತಿತರ ವಿವಿಧ ಜಾರ್ ಚಕ್ರವರ್ತಿಗಳಿಂದ ದೊರೆತ ಘೋಷಣಾಪತ್ರಗಳಾಗಿದ್ದುವು ಹಾಗೆಂದು, ಸಾಕ್ಷರನಾದ, ಯಾವಾಗಲೂ ಬೈಬಲನ್ನೋದುತ್ತಿದ್ದ ತುಫ್ಯಾಯೆವ್ ಒಮ್ಮೆ ನನ ಹೇಳಿದ್ದ. ಬೆಲೆಬಾಳುವ ಹರಳು ಕೂರಿಸಿದ್ದ ತನ್ನ ಚಾಟಿಯಿಂದ ಅವಳು ತಮ್ಮನ್ನು ಥಳಿಸಬಹು ದೆಂದು, ಜನರು ಪ್ರಾಯಶಃ ಹೆದರಿರಬೇಕು. ಒಮ್ಮೆ ಪ್ರಮುಖ ಅಧಿಕಾರಿಯೊಬ್ಬನಿಗೆ ಅದರಿಂ ಆಕೆ ಬಾರಿಸಿದ್ದಳೆಂದು ಅವರು ಹೇಳುತ್ತಿದ್ದರು.

ಆದರೆ ಪಿಸುಮಾತುಗಳು,ಗಟ್ಟಿಯಾಗಿ ಆಡಿದ ಮಾತುಗಳಿಗಿಂತ ಉತ್ತಮವೇನೂ ಆಗಿರಲಿಲ್ಲ ನನ್ನ ಆರಾಧ್ಯದೇವಿ ವಿರೋಧಭಾವದ ಮೋಡದಿಂದ ಆವೃತಳಾಗಿಯೇ ಜೀವಿಸುತ್ತಿದ್ದಳು. ಇ ರಿಂದ ನನಗೆ ನೋವೆನಿಸುತ್ತಿತ್ತು. ನಾನು ಕಕ್ಕಾಬಿಕ್ಕಿಯಾಗುತ್ತಿದ್ದೆ. ವಿಕ್ಟರ್ ಒಮ್ಮೆ ಹೀಗೆಂದ ಒಂದು ರಾತ್ರೆ ನಡುವಿರುಳಿನ ಅನಂತರ ಮನೆಗೆ ಮರಳುತ್ತಿದ್ದಾಗ, ಮಾರ್ಗೊಟ್ ರಾಣಿಯ ಮಲಗುವ ಕೊಠಡಿಯ ಕಿಟಿಕಿಯ ಸಂದಿಯಿಂದ ಅವನು ಇಣಿಕಿ ನೋಡಿದನಂತೆ. ಬರೇ ಒ ಅರಿವೆಯಲ್ಲಷ್ಟೇ ಮಂಚದ ಮೇಲೆ ಅವಳು ಕುಳಿತಿದ್ದುದನ್ನು ಕಂಡನಂತೆ. ಮೇಜರ್ ಅವ ಮುಂದೆ ಮಂಡಿಯೂರಿ, ಆಕೆಯ ಅಂಗುಷ್ಠಗಳ ಉಗುರುಗಳನ್ನು ಕತ್ತರಿಸುತ್ತ, ಸ್ಪಾಂಜ್‌ನಿಂ ಅವಳ ಪಾದಗಳನ್ನು ಒರೆಸುತ್ತಿದ್ದನಂತೆ.

ನನ್ನ ಮುದಿಯಜಮಾನಿತಿ ಥೂಕರಿಸಿ, ವಿಕ್ಟರನನ್ನು ಬಯ್ದಳು. ಕಿರಿಯವಳ ಮು ಮಾತ್ರ ಲಜ್ಜೆಯಿಂದ ಕೆಂಪುಕೆಂಪಗಾಯಿತು. ಕೀಚಲು ಧ್ವನಿಯಲ್ಲಿ ಅವಳೆಂದಳು:

"ಛೆ ವಿಕ್ಟರ್! ನಾಚಿಕೆ ಅನಿಸೋದಿಲ್ವೆ ನಿನಗೆ? ಆ ಸಭ್ಯ ಶ್ರೀಮಂತರು ಎಷ್ಟು ಅಶ್ಲೀ ವಾಗಿರ್ತಾರಪ್ಪ!"

ನನ್ನ ಒಡೆಯ ಮುಗುಳುನಕ್ಕ, ಏನನ್ನೂ ಹೇಳಲಿಲ್ಲ. ಏನೂ ಹೇಳದೆ ಇದ್ದುದಕ್ಕಾ ಅವನಿಗೆ ನಾನು ಬಹಳ ಋಣಿಯಾದೆ. ಈಗಲೂ ಆ ಗದ್ದಲಕ್ಕೆ ತನ್ನ ಧ್ವನಿಯನ್ನೂ ಆತ ಸೇರಿ

ುಹುದೆಂದು ನನಗೆ ಭಯವಾಯಿತು. 'ಛ್ಚಿ!' 'ಛ್ಚಿ!' ಎಂದು ಒಂದೇ ಸಮನೆ ಉದ್ಗರಿಸುತ್ತಾ, ಆ
ಹೆಂಗಸರು ವಿಕ್ಟರನೊಡನೆ, ಆಕೆ ಯಾವ ಭಂಗಿಯಲ್ಲಿ ಕುಳಿತಿದ್ದಳು, ಮೇಜರ್ ಯಾವ ರೀತಿ
ಮಂಡಿಯೂರಿದ್ದ—ಎಂದು ಎಲ್ಲ ವಿವರಗಳನ್ನೂ ಕೇಳಿದರು. ವಿಕ್ಟರ್ ಅವರೆಡೆಗೆ ಆರಿಸಿದ
ಆಣಿಮುತ್ತುಗಳನ್ನು ಎಸೆಯುತೊಡಗಿದ.

"ಅವನ ಮುಖವೆಲ್ಲ ಕೆಂಪಗಾಗಿತ್ತು. ನಾಲಿಗೆ ಹೊರಕ್ಕೆ ಜೋತಾಡ್ತಿತ್ತು...."

ನನ್ನ ದೇವಿಯ ಅಂಗುಷ್ಠದ ಉಗುರನ್ನು ಆ ಮೇಜರ್ ಕತ್ತರಿಸಿದನೆಂಬ ಸಂಗತಿಯಲ್ಲಿ, ಅವಮಾನಕರವಾದುದೇನೂ ನನಗೆ ಕಾಣಿಸಲಿಲ್ಲ. ಆದರೆ, ಅವನ ನಾಲಿಗೆ ಹೊರಕ್ಕೆ ಜೋತಾಡುತ್ತಿತ್ತೆಂಬುದನ್ನು ನಂಬಲು ಮಾತ್ರ ನಾನು ಸಿದ್ಧನಿರಲಿಲ್ಲ. ಇದು, ಅಸಹ್ಯವಾದ ಅಸತ್ಯವಾಗಿ ನನಗೆ ಕಂಡಿತು. ನಾನೆಂದೆ:

"ಅದು ಅಷ್ಟೊಂದು ಅಶ್ಲೀಲ ಎಂದಾದರೆ, ಕಿಟಕಿಯ ಸಂದಿಯಿಂದ ನೀನು ಯಾಕೆ ಇಣಿಕಿ ನೋಡಿದೆ? ನೀನಿನ್ನೂ ಚಿಕ್ಕ ಮಗುವೇನೂ ಅಲ್ಲವಲ್ಲ."

ಅವರೇನೋ ನನಗೆ ಬಯ್ದರು. ಆದರೆ ಆ ಬಯ್ಗುಳನ್ನು ನಾನು ಲೆಕ್ಕಿಸಲಿಲ್ಲ. ಕೆಳಕ್ಕೆ ಓಡಿ ಹೋಗಿ, ಮೇಜರ್ ಮಾಡಿದ್ದಂತೆ ಆ ದೇವಿಯ ಮುಂದೆ ಮಂಡಿಯೂರಿ, "ಈ ಮನೆಬಿಟ್ಟು ಬೇರೆ ಕಡೆಗೆ ಹೋಗು, ದಯವಿಟ್ಟು ಹೋಗು!" ಎಂದು ಹೇಳುವುದಷ್ಟೇ ನನಗೆ ಬೇಕಾಗಿತ್ತು.

ಬೇರೆಯೇ ಬಗೆಯ ಒಂದು ಬದುಕು ಇದೆ, ಬೇರೆಯೇ ಬಗೆಯ ಜನರೂ ಭಾವನೆಗಳೂ ವಿಚಾರಗಳೂ ಇವೆ—ಎಂದು ಈಗ ನನಗೆ ತಿಳಿದುದರಿಂದ, ಈ ಮನೆಯ ಬಗೆಗೂ ಅದರ ನಿವಾಸಿಗಳ ಬಗೆಗೂ ಎಂದಿಗಿಂತ ಹೆಚ್ಚಾಗಿ ನನಗೆ ಹೇಸಿಕೆ ಹುಟ್ಟಿತು. ಈ ಮನೆ, ಸಡಿಲ ನಾಲಿಗೆಯ ಹೊಲಸು ಹರಟೆಯ ಬಲೆಯೊಳಗೆ ಸಿಲುಕಿಕೊಂಡಿತ್ತು. ಒಬ್ಬನೂ ಅದರಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ಸೈನ್ಯದ ತುಕ್ಕಡಿಯ ಬಡ ರೋಗಗ್ರಸ್ತ ಮನುಷ್ಯನಾಗಿದ್ದ ಧರ್ಮಗುರು, ವಿಷಯಲಂಪಟ ಕುಡುಕನೆಂದು ಬಣ್ಣಿತನಾಗಿದ್ದ ನನ್ನ ಮಾಲಿಕರ ಪ್ರಕಾರ, ಎಲ್ಲ ಅಧಿಕಾರಿಗಳೂ ಅವರ ಹೆಂಡಂದಿರೂ ಪಾಪಜೀವನವನ್ನೇ ನಡಸುತ್ತಿದ್ದರು. ಹೆಂಗಸರ ಬಗೆಗೆ ಸೈನಿಕರು ಆಡುತ್ತಿದ್ದ ಬೇಸರಪಡಿಸುವ ಮಾತು ನನಗೆ ತುಚ್ಛವೆನಿಸತೊಡಗಿತು. ಆದರೆ, ಎಲ್ಲಕ್ಕಿಂತಲೂ ಹೆಚ್ಚಾಗಿ, ನನ್ನ ಮಾಲಿಕರೇ ನನಗೆ ತುಚ್ಛವಾಗಿ ಕಂಡರು. ಬೇರೊಬ್ಬರ ಬಗೆಗೆ ಅವರು ಅತ್ಯಾಸಕ್ತಿಯಿಂದ ಕೊಡುತ್ತಿದ್ದ ತೀರ್ಮಾನಗಳ ನಿಜವಾದ ಬೆಲೆ ನನಗೆ ಚೆನ್ನಾಗಿ ತಿಳಿದಿತ್ತು. ಬೇರೆಯವರನ್ನು ಹಿಕ್ಕಿ ಕುಕ್ಕಿ ಚಿಂದಿಯಾಗಿ ಮಾಡುವುದು, ಏಕಮಾತ್ರ ಪುಕ್ಕಟೆ ವಿನೋದವಾಗಿತ್ತು. ಹೀಗಾಗಿ, ಅವರು ಭಾಗವಹಿಸುತ್ತಿದ್ದ ವಿನೋದವೂ ಅದೊಂದೇ ಆಗಿತ್ತು. ತಮ್ಮ ಸ್ವಂತದ ಬದುಕುಗಳ ಜಾಘುತನ, ಬೇಸರ, ಅಪರಿಮಿತ ಶ್ರಮಗಳಿಗಾಗಿ ಅವರು ಪ್ರತೀಕಾರ ಸಲ್ಲಿಸುತ್ತಿದ್ದರೇನೋ ಅನಿಸುತ್ತಿತ್ತು.

ಮಾರ್ಗೊಟ್ ರಾಣಿಯನ್ನು ಕುರಿತು ಅಶ್ಲೀಲ ಕತೆಗಳನ್ನು ಅವರು ಹೇಳಿದಾಗ, ನನ್ನ ವಯಸ್ಸಿಗೆ ಮಿಾರಿದ ಮಾನಸಿಕ ಯಾತನೆ-ರಾಗೋದ್ವೇಗಗಳನ್ನು ನಾನು ಅನುಭವಿಸಿದೆ. ಈ ಹರಟೆ ಮಲ್ಲರ ಮೇಲಿನ ದ್ವೇಷದಿಂದ ನನ್ನ ಹೃದಯ ತುಂಬಿ ಬಿರಿಯುತ್ತಿತ್ತು. ಅವರನ್ನೆಲ್ಲ ಹಿಂಸಿಸಬೇಕೆಂಬ, ಅವರ ವಿರೋಧ ಕಟ್ಟಿಕೊಳ್ಳಬೇಕೆಂಬ ಅದಮ್ಯವಾದ ಬಯಕೆ ನನ್ನನ್ನು ಆವರಿಸುತ್ತಿತ್ತು. ಕೆಲವೇಳೆ, ನನ್ನ ಬಗೆಗೂ ಎಲ್ಲ ಜನರ ಬಗೆಗೂ ಕರುಣೆಯುಕ್ಕಿ ನಾನು ಮನಸೋಲ

ವುದೂ ಇತ್ತು. ದ್ವೇಷಕ್ಕಿಂತಲೂ ಅಭಿವ್ಯಕ್ತಿಗೊಳ್ಳದ ಇಂತಹ ಕರುಣೆಯನ್ನು ಸಹಿಸುವುದ ಹೆಚ್ಚು ಕಷ್ಟತರವಾಗಿತ್ತು.

ನನ್ನ ರಾಣಿಯ ಬಗೆಗೆ ಅವರಿಗಿಂತಲೂ ಹೆಚ್ಚಾಗಿ ನನಗೆ ತಿಳಿದಿತ್ತು. ನನಗೆ ತಿಳಿದಿದ ದನ್ನು ಅವರು ಅರಿತುಬಿಡಬಹುದೆಂದು ನಾನು ಹೆದರಿದ್ದೆ.

ಭಾನುವಾರಗಳಲ್ಲಿ ಬೆಳಗ್ಗೆ, ಸಂಗೀತ ಸಹಿತವಾದ ಪ್ರಾರ್ಥನೆಗೆಂದು ಇಡಿಯ ಕುಟುಂಬ ಇಗರ್ಜಿಗೆ ಹೋದಾಗ, ನನ್ನ ದೇವಿಯ ಸಂದರ್ಶನಕ್ಕೆ ನಾನು ಹೋಗುತ್ತಿದ್ದೆ. ನನ್ನನ್ನು ಅ ತನ್ನ ಶಯ್ಯಾಗೃಹಕ್ಕೆ ಕರೆಯುತ್ತಿದ್ದಳು. ಬಂಗಾರ ಬಣ್ಣದ ರೇಶಿಮೆ ಹೊದಿಕೆಯ ಮೆತ್ತೆ ಇ ಆರಾಮುಕುರ್ಚಿಯಲ್ಲಿ ನಾನು ಕುಳಿತುಕೊಳ್ಳುತ್ತಿದ್ದೆ. ಅವಳ ಪುಟ್ಟ ಹುಡುಗಿ ನನ್ನ ತೊಡೆ ನ್ನೇರುತ್ತಿದ್ದಳು. ನಾನು ಓದಿದ ಪುಸ್ತಕಗಳ ಬಗೆಗೆ ಆ ಹುಡುಗಿಯ ತಾಯಿಗೆ ನಾನು ಹೇಳುತ್ತಿದ ನನ್ನ ರಾಣಿ, ತನ್ನ ಎರಡು ಪುಟ್ಟ ಕೈಗಳನ್ನೂ ತನ್ನ ಕೆನ್ನೆಯ ಕೆಳಗಿರಿಸಿ, ಅಗಲವಾದ ಹಾಸಿ ಯಲ್ಲಿ ಮಲಗಿರುತ್ತಿದ್ದಳು. ಶಯ್ಯಾಗೃಹದ ಪ್ರತಿಯೊಂದರಂತೆ, ಚಾದರದ್ದೂ ಬಂಗಾರದ ಬಣ್ ಆ ಚಾದರದ ಕೆಳಗೆ ಅವಳ ಶರೀರ ಮರೆಯಾಗಿರುತ್ತಿತ್ತು. ಅವಳ ಕಪ್ಪು ತಲೆಗೂದಲ ನಸುಹಳದಿ ಭುಜದ ಮೇಲೆ ಜಡೆಯಾಗಿ ಒರಗಿರುತ್ತಿತ್ತು. ಕೆಲವೇಳೆ, ಹಾಸಿಗೆಯ ಅಂಚಿ ಮೇಲಿಂದ ಕೆಳಕ್ಕೆ ನೆಲದೆಡೆಗೆ ತೂಗಾಡುತ್ತಿತ್ತು.

ಕಿವಿಗೊಟ್ಟು ಕೇಳುತ್ತ, ತನ್ನ ಮೃದುಕಣ್ಣುಗಳಿಂದ ನನ್ನೆಡೆಗೆ ಅವಳು ನೋಡುತ್ತಿದ್ದಳ ಅಸ್ಪಷ್ಟ ಮುಗುಳುನಗೆಯೊಡನೆ ಅನ್ನುತ್ತಿದ್ದಳು:

"ನಿಜವಾಗಿಯೂ ?"

ಆಕೆಯ ಮುಗುಳುನಗೆ ಕೂಡಾ, ರಾಣಿಯೊಬ್ಬಳು ದೊಡ್ಡ ಮನಸ್ಸುಮಾಡಿ ಮುಗಳುನ ತ್ತಿರುವಂತೆ ನನಗೆ ಅನಿಸುತ್ತಿತ್ತು. ಆಳವಾದ ಮೃದುವಾದ ಧ್ವನಿಯಲ್ಲಿ ಅವಳು ಮಾತನಾಡು ದ್ದಳು. ಆದರೆ ಆಕೆ ಯಾವಾಗಲೂ, ಹೇಳಿದುದನ್ನೇ ಹೇಳುತ್ತಿದ್ದಳೆಂದು ನನಗೆ ತೋರುತ್ತಿತ್ತು

"ಬೇರೆಯವರಿಗೂ ನನಗೂ ಹೋಲಿಕೆಯೇ ಇಲ್ಲ. ಅವರಿಗಿಂತ ನಾನೆಷ್ಟೋ ಉತ್ತಮಳ ಇದನ್ನು ನಾನು ಬಲ್ಲೆ. ಅವರು ಯಾರಿಂದಲೂ ನನಗೇನೂ ಆಗಬೇಕಾದುದಿಲ್ಲ," ಎಂಬ ಮಾತನ್ನ ಅವಳು ಪದೇಪದೇ ಹೇಳುತ್ತಿದ್ದಂತೆ ನನಗೆ ಅನಿಸುತ್ತಿತ್ತು.

ಕೆಲವು ಸಾರೆ ನಾನು ಹೋದಾಗ, ಕನ್ನಡಿಯ ಮುಂದೆ ತಗ್ಗಾದ ಒಂದು ಆರಾಮುಕುಚಿ ಯಲ್ಲಿ ಕುಳಿತು, ತಲೆಗೂದಲನ್ನು ಬಾಚುತ್ತ ಇರುತ್ತಿದ್ದಳು. ಅದು ನನ್ನ ಅಜ್ಜಿಯ ತಲೆಗೂದ ನಷ್ಟೇ ಉದ್ದವೂ ದಪ್ಪವೂ ಇರುತ್ತಿತ್ತು. ಅವಳ ಮೊಣಕಾಲುಗಳ ಮೇಲೂ ಕುರ್ಚಿಯ ಕೈಗ ಮೇಲೂ ಅದು ಬಿದ್ದಿರುತ್ತಿತ್ತು. ಬೆನ್ನಮೇಲಿಂದ ಹೆಚ್ಚುಕಡಮೆ ನೆಲದವರೆಗೂ ತೂಗಾಡುತ್ತಿತ್ತು ಅವಳ ದೃಢವಾದ ಮಬ್ಬುಬಣ್ಣದ ಸ್ತನಗಳು ಕನ್ನಡಿಯಲ್ಲಿ ನನಗೆ ಕಾಣಿಸುತ್ತಿದ್ದುವು. ತನ್ನ ಒ ಉಡುಪನ್ನೂ ಕಾಲುಚೀಲಗಳನ್ನೂ ನನ್ನ ಎದುರಲ್ಲೇ ಅವಳು ತೊಟ್ಟುಕೊಳ್ಳುತ್ತಿದ್ದಳು. ಆದ ಅವಳ ನಗ್ನತೆ, ಲಜ್ಜಾಸ್ಪದ ಭಾವನೆಗಳನ್ನು ನನ್ನಲ್ಲಿ ಉಂಟುಮಾಡುತ್ತಿರಲಿಲ್ಲ. ಅವಳ ಸೌಂದರ್ಯ ವಿಷಯದಲ್ಲಿ, ಸಂತಸದ ಹೆಮ್ಮೆ ನನಗೆ ಅನಿಸುತ್ತಿತ್ತು. ಹೂಗಳ ಸುವಾಸನೆಯನ್ನು ಅವ ಯಾವಾಗಲೂ ಹೊರಸೂಸುತ್ತಿದ್ದಳು. ಇದು, ಅವಳನ್ನು ಕುರಿತ ಅಶ್ಲೀಲಯೋಚನೆಗಳಿಗೆ ಶಿಕ್ಷೆ ಎನ್ನುವಂತಿತ್ತು.

ನಾನು ಗಟ್ಟಿಮುಟ್ಟಾಗಿದ್ದೆ, ಆರೋಗ್ಯವಂತನಾಗಿದ್ದೆ. ಲೈಂಗಿಕ ಸಂಬಂಧದ ರಹಸ್ಯ ನನಗೆ ಳಿದಿತ್ತು. ಲೈಂಗಿಕ ವಿಷಯವಾಗಿ, ಬಹಳ ಹೊಲಸಾಗಿ, ನಿರ್ದಯವಾಗಿ, ತುಚ್ಛ ಸಂತೋಷ ಂದ, ಜನರು ಆಡುವುದನ್ನು ನಾನು ಕೇಳಿದ್ದೆ. ಹೀಗಾಗಿ, ಒಬ್ಬ ಗಂಡಸಿನ ಆಲಿಂಗನದಲ್ಲಿರು ಂತೆ ಈ ಹೆಂಗಸನ್ನು ಕಲ್ಪಿಸಿಕೊಳ್ಳುವುದು ನನ್ನಿಂದ ಸಾಧ್ಯವಿರಲಿಲ್ಲ. ಆಕೆಯ ಮೇಲೆ ಬಲವಾದ ರ್ಲಜ್ಜವಾದ ಕೈಯನ್ನು, ಆ ಶರೀರದ ಒಡೆತನವನ್ನೆ ಸಾರುವ ಕೈಯನ್ನು ಇಡುವ ಹಕ್ಕು ಯಾರಿ ಾದರೂ ಇದೆಯೆಂದು ನಾನು ನಂಬಲಿಲ್ಲ. ಅಡುಗೆಮನೆಗಳ ಕುದುರೆಲಾಯಗಳ ಪ್ರೇಮವು ಾರ್ಗೊಟ್ ರಾಣಿಗೆ ಪರಕೀಯವಾದುದೆಂದು, ಬೇರೆ ಯಾವುದೋ ಹೆಚ್ಚು ಉನ್ನತವಾದ ರ್ಷವನ್ನು—ಬೇರೆಯೇ ಬಗೆಯ ಪ್ರೇಮವನ್ನು—ಅವಳು ತಿಳಿದಿದ್ದಳೆಂದು, ನಾನು ದೃಢವಾಗಿ ಂಬಿದ್ದೆ.

ಆದರೆ ಒಂದು ಅಪರಾಹ್ನ ತಡವಾಗಿ ಒಳಹಜಾರವನ್ನು ಪ್ರವೇಶಿಸಿದಾಗ, ಅವಳ ಮಲಗುವ ೋಠಡಿಯ ಬಾಗಿಲ ಪರದೆಯಾಚೆಗಿಂದ, ಆಕೆಯ ಪ್ರತಿಧ್ವನಿಸುವ ನಗೆಯೂ ಒಬ್ಬ ಗಂಡಸಿನ ನಿಯೂ ಕೇಳಿಬಂದು, ನಾನು ಅಲ್ಲಿಯೇ ತಡೆದುನಿಂತೆ.

ಗಂಡಸು ಯಾಚಿಸುತ್ತಿದ್ದ:

"ಅವಸರ ಮಾಡ್ಬೇಡ! ಓ ದೇವರೇ! ನಂಬೋದಕ್ಕೇ ಆಗ್ತಿಲ್ಲ!"

ನಾನು ಹೊರಟು ಹೋಗಬೇಕಾಗಿತ್ತು. ನನಗೆ ಅದು ಮನವರಿಕೆಯಾಯಿತು. ಆದರೆ, ಲಿಸುವ ಶಕ್ತಿಯೇ ನನ್ನಿಂದ ಉಡುಗಿಹೋಯಿತು.

ಸ್ವರವೇರಿಸಿ ಅವಳು ಕೇಳಿದಳು:

"ಯಾರದು? ಓ, ನೀನಾ? ಬಾ ಒಳಕ್ಕೆ."

ಕೊಠಡಿಯ ಹವೆ ಹೂಗಳ ಸುವಾಸನೆಯಿಂದ ಜಡವಾಗಿತ್ತು. ಕಿಟಕಿಗಳಿಗೂ ಪರದೆ ಳಿದಿದ್ದುದರಿಂದ, ಒಳಗೆ ಕತ್ತಲಿತ್ತು. ಮಾರ್ಗೊಟ್ ರಾಣಿ ಹೊದಿಕೆಯ ಅಂಚಿವೆಯನ್ನು ಗಲ್ಲದ ೆಗೂ ಎಳೆದುಕೊಂಡು, ಹಾಸಿಗೆಯ ಮೇಲೆ ಮಲಗಿದ್ದಳು. ಅವಳ ಮಗ್ಗುಲಲ್ಲಿ, ಬೆನ್ನನ್ನು ೋಡೆಗೆ ಆನಿಸಿ, ಪಟಾಲುವಾದಕ ಅಧಿಕಾರಿ ಕುಳಿತ್ತಿದ್ದ. ಮೈಮೇಲಿದ್ದುದು ಒಂದು ಅಂಗಿ ಮಾತ್ರ. ವರ ಕತ್ತು ತೆರೆದಿದ್ದು, ಬಲಭುಜದಿಂದ ಕಿರುಮೊಲೆಯವರೆಗೂ ದೊಡ್ಡದೊಂದು ಮಚ್ಚೆ ಕಾಣಿಸು ತ್ತು. ಅದೆಷ್ಟು ಶುಭ್ರವಾಗಿ ಕೆಂಪಗಿತ್ತೆಂದರೆ, ಆ ಮಬ್ಬು ಬೆಳಕಿನಲ್ಲೂ ಸ್ಪಷ್ಟವಾಗಿ ಅದು ಾಗೆ ಕಾಣಿಸುತ್ತಿತ್ತು. ಅವನ ತಲೆಗೂದಲು ತಮಾಷೆ ಎನಿಸುವಷ್ಟು ಅಸ್ತವ್ಯಸ್ತವಾಗಿತ್ತು. ಅವನ ಥೆ ತುಂಬಿದ ಮಚ್ಚೆಗಳಿದ್ದ ಮುಖದ ಮೇಲೆ, ಮೊದಲ ಸಾರಿಗೆ, ಮುಗುಳುನಗೆಯನ್ನು ನಾನು ೋಡಿದೆ. ವಿಚಿತ್ರ ರೀತಿಯಲ್ಲಿ ಆತ ಮುಗುಳುನಗುತ್ತಿದ್ದ. ಅವನ ವಿಶಾಲವಾದ ಹೆಣ್ಣಿಗಿರು ತಹ ಕಣ್ಣುಗಳು, ನನ್ನ ರಾಣಿಯ ಕಡೆಗೆ, ಆಕೆಯ ಸೌಂದರ್ಯವನ್ನು ಅದೇ ಮೊದಲ ಬಾರಿ ಣುತ್ತಿರುವನೇನೋ ಎನ್ನುವಂತೆ, ನೋಡಿದುವು.

"ಈತ ನನ್ನ ಸ್ನೇಹಿತ," ಎಂದಳು ಮಾರ್ಗೊಟ್ ರಾಣಿ. ಆತನನ್ನು ಉದ್ದೇಶಿಸಿ ಹಾಗೆ ದಳೋ ಅಥವಾ ನನ್ನನ್ನು ಕುರಿತೋ, ಎನ್ನುವುದು ನನಗೆ ಸ್ಪಷ್ಟವಾಗಲಿಲ್ಲ.

ಬಹಳ ದೂರದಿಂದ ಬರುತ್ತಿದ್ದಂತೆ ಕಂಡ ಧ್ವನಿಯಲ್ಲಿ ಅವಳೆಂದಳು:

"ಯಾಕೆ ಈ ರೀತಿ ಹೆದರ್ಕ್ಕೊಂಡಿದೀಯಾ? ಇಲ್ಲಿಗೆ ಬಾ."

ನಾನು ಸಮೀಪಿಸಿದಾಗ, ಬೆಚ್ಚಗಿದ್ದ ಬರಿದಾದ ತೋಳನ್ನು ನನ್ನ ಕತ್ತಿನ ಸುತ್ತಲೂ ಹಾ
ಅವಳೆಂದಳು:

"ನೀನು ದೊಡ್ಡವನಾದಾಗ, ಸುಖವೆಂದರೆ ಏನು ಅನ್ನೋದನ್ನು ನೀನೂ ತಿಳಿಯುವೆ. ಈ
ಹೊರಟುಹೋಗು."

ಪುಸ್ತಕವನ್ನು ಕಿರುಕಪಾಟಿನ ಮೇಲಿರಿಸಿ, ಇನ್ನೊಂದನ್ನು ಎತ್ತಿಕೊಂಡು, ನಾನು ಹೊರ
ಹೋದೆ.

ನನ್ನ ಹೃದಯದೊಳಗೇನೋ ಕುರುಕಿತು. ಸಾಮಾನ್ಯ ಜನರಂತೆಯೇ ನನ್ನ ರಾಣಿಯ
ಪ್ರೀತಿಸುತ್ತಿದ್ದಳೆಂದು ಒಂದು ಕ್ಷಣವೂ ಖಂಡಿತವಾಗಿಯೂ ನಾನು ಯೋಚಿಸಲಿಲ್ಲ. ಆ ಅ
ಕಾರಿಯ ವಿಷಯದಲ್ಲೂ ಹಾಗೆ ಯೋಚಿಸಲು ನಾನು ಸಿದ್ಧನಿರಲಿಲ್ಲ. ಕಲ್ಪನೆಯ ನೋಟದ
ಅವನ ಮುಗುಳುನಗೆಯನ್ನು ನಾನು ಮತ್ತೂ ಮತ್ತೂ ನೋಡಿದೆ. ಮಗು ತೋರುವಷ್ಟೇ ಹ
ದಿಂದ, ತಕ್ಷಣ ಉಂಟಾದ ಅಚ್ಚರಿಯಿಂದ, ಆತ ಮುಗುಳುನಕ್ಕಿದ್ದ. ಇದ್ದಕ್ಕಿದ್ದಂತೆ ಪರಿವರ್ತ
ಗೊಂಡಿತ್ತು ವ್ಯಥೆತುಂಬಿದ ಅವನ ಮುಖ. ಅವನು ಅವಳನ್ನು ಪ್ರೀತಿಸಿರಲೇಬೇಕು. ಅವಳ
ಪ್ರೀತಿಸದೇ ಇರುವುದಂತೂ ಯಾರಿಂದ ಹೇಗೆ ಸಾಧ್ಯ? ಅಷ್ಟೊಂದು ಸುಂದರವಾ
ಪಿಟೀಲು ನುಡಿಸುತ್ತಿದ್ದ ಹಾಗೂ ಅಷ್ಟೊಂದು ಆಳವಾದ ಭಾವನೆಯಿಂದ ಕವಿತೆಗಳ
ಅನ್ನುತ್ತಿದ್ದ ಆ ಮನುಷ್ಯನ ಮೇಲೆ, ಅವಳು ಪ್ರೇಮದ ಮಳೆಕರೆದುದು ಕೂಡಾ ಸಕಾರಣ
ಆಗಿತ್ತು.

ಆದರೆ, ಈಯೆಲ್ಲ ಸಂತೈಸುವ ಯೋಚನೆಗಳನ್ನು ನಾನು ಹುಡುಕಿದೆನೆಂಬ ಸಂಗತಿಯೇ
ಬೇರೇನನ್ನೋ ತೋರಿಕೊಡುತ್ತಿತ್ತು. ಎಲ್ಲವೂ ಸರಿಯಾಗಿರಲಿಲ್ಲವೆಂದು, ನಾನು ನೋಡಿದ್ದರ
ಬಗೆಗೆ-ಸ್ವತಃ ಮಾರ್ಗೊಟ್ ರಾಣಿಯ ವಿಷಯದಲ್ಲಿ ಕೂಡಾ-ನನ್ನ ಧೋರಣೆ ಸರಿಯಾಗಿರಲಿ
ವೆಂದು ಅದು ಸೂಚಿಸಿತು. ಏನನ್ನೋ ನಾನು ಕಳೆದುಕೊಂಡಂತೆ ಭಾಸವಾಯಿತು. ಮು
ಅನೇಕ ದಿನಗಳವರೆಗೆ ನಾನು ಅತ್ಯಂತ ಸಂಕಟಪಟ್ಟೆ.

ಒಂದು ದಿನ, ಲಂಗುಲಗಾಮಿಲ್ಲದ ತುಂಟತನದಿಂದ ನಾನು ವರ್ತಿಸಿದೆ. ಬೇರೊಂ
ಪುಸ್ತಕಕ್ಕಾಗಿ ನನ್ನ ದೇವಿಯ ಬಳಿಗೆ ನಾನು ಬಂದಾಗ, ನಿಷ್ಠುರ ಧ್ವನಿಯಲ್ಲಿ ಅವಳೆಂದಳು:

"ನಿನ್ನೊಬ್ಬ ಪ್ರಚಂಡ ಪುಟ್ಟ ಲಫಂಗನಾಗಿದೀಯಂತಲ್ಲಪ್ಪ! ನೀನು ಇಂಥವನಿರಬಹುದೂ
ನಾನೆಂದೂ ಭಾವಿಸಿರ್ಲಿಲ್ಲ."

ನನ್ನ ಸಹನಾಶಕ್ತಿಗೆ ಮೀರಿತ್ತು ಆ ಮಾತು. ಅವಳ ಬಗೆಗೆ ಜನರು ಕೆಟ್ಟಮಾತುಗಳ
ಆಡಿದಾಗ ನಾನೆಷ್ಟು ಸಂಕಟಪಡುತ್ತಿದ್ದೆ, ಬದುಕನ್ನು ಹೇಗೆ ದ್ವೇಷಿಸುತ್ತಿದ್ದೆ—ಎಂಬುದ
ಅವಳಿಗೆ ಹೇಳತೊಡಗಿದೆ. ಅವಳು ನನ್ನ ಭುಜದ ಮೇಲೆ ಕೈ ಇರಿಸುತ್ತ ನನಗೆದುರಾಗಿ ನಿಂತ
ಮೊದಲಲ್ಲಿ, ಬಹಳ ಲಕ್ಷ್ಯಪೂರ್ವಕವಾಗಿ ಕಿವಿಗೊಟ್ಟಳು. ಬಳಿಕ, ಬೇಗನೆ ನಕ್ಕು ನನ್ನ
ಮೃದುವಾಗಿ ದೂರಕ್ಕೆ ತಳ್ಳಿದಳು.

"ಸಾಕು, ಸಾಕು! ಅದೆಲ್ಲಾ ನನಗೆ ಗೊತ್ತಿದೆ, ತಿಳಿಯಿತೆ? ನನಗೆಲ್ಲಾ ಗೊತ್ತಿದೆ, ಎ
ಗೊತ್ತಿದೆ!"

ಬಳಿಕ ನನ್ನೆರಡೂ ಕೈಗಳನ್ನು ತನ್ನ ಕೈಗಳಲ್ಲಿ ಎತ್ತಿಕೊಂಡು, ಬಹಳ ಆತ್ಮೀಯತೆಯಿಂದ ಂದಳು:

"ಅಂಥ ಹೊಲಸಿನ ಬಗೆಗೆ ಎಷ್ಟು ಕಡಮೆ ಲಕ್ಷ್ಯಕೊಡ್ತೀಯೋ ಅಷ್ಟು ಒಳ್ಳೇದಾಗುತ್ತೆ ನಗೆ.....ನಿನ್ನ ಕೈಗಳನ್ನು ನೀನು ಚೆನ್ನಾಗಿ ತೊಳೆಯೋದಿಲ್ಲ."

ಆ ಮಾತನ್ನು ಅವಳು ಹೇಳದೇ ಇರಬಹುದಾಗಿತ್ತು. ಹಿತ್ತಾಳೆ ಪಾತ್ರೆಗಳನ್ನು ಬೆಳಗು ದು, ನೆಲ ಉಜ್ಜುವುದು, ಮಕ್ಕಳ ಅರಿವೆಗಳನ್ನು ಒಗೆಯುವುದು—ಈ ಎಲ್ಲ ಕೆಲಸಗಳನ್ನು ಕೆಯೂ ಮಾಡಿದ್ದಿದ್ದರೆ, ಅವಳ ಕೈಗಳು ನನ್ನವಕ್ಕಿಂತ ಹೆಚ್ಚೇನೂ ಚೆನ್ನಾಗಿ ಕಾಣಿಸುತ್ತಿರ ಲ್ಲ.

"ಹೇಗೆ ಬದುಕಬೇಕು ಅನ್ನೋದು ಒಂದು ವ್ಯಕ್ತಿಗೆ ತಿಳಿದಿದ್ದರೆ, ಎಲ್ಲರೂ ಆ ವ್ಯಕ್ತಿಯನ್ನು ್ರೀಷಿಸ್ತಾರೆ; ಆತನ ಬಗ್ಗೆ ಅಸೂಯೆಪಡ್ತಾರೆ. ಹೇಗೆ ಬದುಕಬೇಕು ಅನ್ನೋದು ಆ ವ್ಯಕ್ತಿಗೆ ತ್ತಿಲ್ಲದೇ ಇದ್ದರೆ, ಎಲ್ಲರೂ ಅವನನ್ನು ಧಿಕ್ಕರಿಸ್ತಾರೆ," ಎಂದು, ಯೋಚನಾಪೂರ್ಣವಾಗಿ ವಳು ಹೇಳಿದಳು. ಬಳಿಕ, ಮೇಲಕ್ಕೆ ತನ್ನೆಡೆಗೆ ನನ್ನನ್ನೆಳೆದು, ಮುಗುಳುನಗೆಯೊಡನೆ ನನ್ನ ಣ್ಣುಗಳೊಳಕ್ಕೆ ಆಳಕ್ಕೆ ನೋಡಿದಳು.

"ನೀನು ನನ್ನನ್ನು ಪ್ರೀತಿಸ್ತೀಯಾ ?" ಎಂದು ಅವಳು ಕೇಳಿದಳು.

"ಹೌದು."

"ಬಹಳವಾಗಿ ?"

"ಹೌದು."

"ಆದರೆ—ಯಾಕೆ ?"

"ನನಗೆ ಗೊತ್ತಿಲ್ಲ."

"ಉಪಕೃತೆ. ನೀನೊಂದು ಮುದ್ದು. ನನ್ನನ್ನು ಜನರು ಪ್ರೀತಿಸೋದು ನನಗೆ ಇಷ್ಟ."

ಅವಳು ಸಣ್ಣನೆ ನಕ್ಕಳು. ಏನನ್ನೋ ಹೇಳಲು ಹೊರಟಂತೆ ಕಂಡಳು. ಆದರೆ ನನ್ನ ಗಳನ್ನು ಹಿಡಿದೇ ಇದ್ದ ಆಕೆ, ನಿಟ್ಟುಸಿರಿನೊಡನೆ ಮೌನವಾದಳು.

"ಹೆಚ್ಚು ಪದೇಪದೇ ನನ್ನನ್ನು ಬಂದುನೋಡು. ನಿನಗೆ ಸಾಧ್ಯವಿರುವಾಗಲೆಲ್ಲಾ ಬಾ."

ಈ ಆಹ್ವಾನದ ಸದುಪಯೋಗವನ್ನು ನಾನು ಮಾಡಿಕೊಂಡೆ. ಆ ಸ್ನೇಹದಿಂದ ಎಷ್ಟೋ ಭಪಡೆದೆ. ನನ್ನ ಮಾಲಿಕರು ಮಧ್ಯಾಹ್ನದ ಭೋಜನಾನಂತರದ ಚುಟುಕು ನಿದ್ದೆಯಲ್ಲಿದ್ದಾಗ, ನು ಮಹಡಿ ಇಳಿದು ಕೆಳಕ್ಕೆ ಓಡುತ್ತಿದ್ದೆ. ಅವಳು ಮನೆಯಲ್ಲಿದ್ದಳೆಂದರೆ, ಒಂದು ಗಂಟೆ ತ್ತು ಅಥವಾ ಅದಕ್ಕಿಂತಲೂ ಹೆಚ್ಚು ಅವಳ ಜತೆ ಇರುತ್ತಿದ್ದೆ.

ತನ್ನ ಚುರುಕಾದ ಚೆಂಗುಲಾಬಿ ವರ್ಣದ ಬೆರಳುಗಳಿಂದ ಸುವಾಸಿತ ಕೇಶರಾಶಿಯೊಳಕ್ಕೆ ನ್ನುಗಳನ್ನು ತಳ್ಳುತ್ತಲಿದ್ದಂತೆ, ನನಗೆ ಆಕೆ ಹೇಳಿಕೊಟ್ಟಳು.

"ನೀನು ರಷ್ಯನ್ ಪುಸ್ತಕಗಳನ್ನು ಓದಬೇಕು. ರಷ್ಯನ್ ಜೀವನವನ್ನು ಅರಿತುಕೊಳ್ಳೋದು ಗೆ ಅನ್ನೋದನ್ನು ನೀನು ಕಲೀಬೇಕು."

ಬಳಿಕ, ರಷ್ಯನ್ ಬರೆಹಗಾರರ ಹೆಸರುಗಳನ್ನು ಹೇಳುತ್ತ, ಆಕೆ ಕೇಳುತ್ತಿದ್ದಳು:

"ಈ ಹೆಸರುಗಳೆಲ್ಲಾ ನೆನಪಿರುತ್ತೇನು ?"

ಆಗಾಗ್ಗೆ ಧ್ಯಾನಮಗ್ನಳಾಗಿ, ತುಸುಬೇಸರದಿಂದ, ಅವಳು ಉದ್ಗರಿಸುತ್ತಿದ್ದಳು:

"ಓ ನಮ್ಮಪ್ಪ! ನೀನು ಕಲಿಯೋದಕ್ಕೆ ಶುರುಮಾಡ್ಬೇಕು. ನಾನದನ್ನು ಮರೀತಾ ಇದೀನಿ!"

ಅವಳ ಜತೆ ಕುಳಿತಾದ ಬಳಿಕ, ನನ್ನ ಕೈಗಳಲ್ಲೊಂದು ಹೊಸ ಪುಸ್ತಕ ಹಿಡಿದುಕೊಂಡ ಶುಚಿರ್ಭೂತನಾದೆನೆಂಬ ಭಾವನೆಯೊಡನೆ, ಮರಳಿ ಮಹಡಿಯ ಮೇಲಕ್ಕೆ ಓಡುತ್ತಿದ್ದೆ.

ಅಕ್ಸಕೋವನ 'ಸಂಸಾರ ನಾಮಾವಳಿ'. 'ಕಾಡಿನಲ್ಲಿ' ಎಂಬ ಸೊಗಸಾದ ರಷ್ಯನ್ ಕವಿ ಆಶ್ಚರ್ಯಕರ ಕೃತಿಯಾದ 'ಬೇಟೆಗಾರನ ಟಿಪ್ಪಣಿಗಳು', ಗ್ರೆಬೆಂಕಾ ಮತ್ತು ಸೊಲ್ಲೊಗುಬ ಅನೇಕ ಸಂಪುಟಗಳು, ವೆನೆವಿಟಿನೋವ್-ಒದೋಯೆವ್‌ಸ್ಕಿ-ತ್ಯುತ್‌ಚೆವ್ ಇವರ ಕವನಗಳ ಇವನ್ನೆಲ್ಲಾ ಆಗಲೇ ನಾನು ಓದಿದ್ದೆ. ಈ ಪುಸ್ತಕಗಳು ನನ್ನ ಆತ್ಮವನ್ನು ನಿರ್ಮಲಗೊಳಿಸಿದುವ ಕಹಿಯಾದ ಭಿಕಾರಿತನದ ವಾಸ್ತವತೆಯ ಹೊಟ್ಟನಿಂದ ಅದನ್ನು ಮುಕ್ತಗೊಳಿಸಿದ ಒಳ್ಳೆಯ ಪುಸ್ತಕಗಳೆಂದರೇನೆಂಬುದನ್ನು ನಾನೀಗ ಅರಿತೆ; ನನಗೆ ಅವೆಷ್ಟು ಮುಖ್ಯ ಎಂಬುದನ ಮನಗಂಡೆ. ಈ ಭೂಮಿಯ ಮೇಲಿರುವವನು ನಾನೊಬ್ಬನೇ ಅಲ್ಲ; ಬದುಕಿನಲ್ಲಿ ನನ್ನ ಹಾ ಯನ್ನು ಖಂಡಿತವಾಗಿಯೂ ನಾನು ಕಂಡುಕೊಳ್ಳುವೆ—ಎಂಬ ಶಾಂತ ಆತ್ಮವಿಶ್ವಾಸವನ್ನು ಅ ನನ್ನಲ್ಲಿ ತುಂಬಿದುವು.

ಅಜ್ಜಿ ನನ್ನನ್ನು ನೋಡಲು ಬಂದಳು. ಮಾರ್ಗೊಟ್ ರಾಣಿಯ ಬಗೆಗೆ ಅತ್ಯುತ್ಸಾಹ ವರದಿಯನ್ನು ಅವಳಿಗೆ ನಾನು ಒಪ್ಪಿಸಿದೆ. ನಶ್ಯವನ್ನು ಒಂದಿಷ್ಟು ಹೆಚ್ಚಾಗಿಯೇ ಮೇಲಕ್ಕೆಳೆ ಕೊಂಡು ಅವಳೆಂದಳು:

"ಕೇಳೋದಕ್ಕೆ ಹಿತಕರವಾಗಿದೆ ಇದು! ಈ ಭೂಮಿಯ ಮೇಲೆ ಒಳ್ಳೆಯ ಜನರು ಅನೇ ಇದ್ದಾರೆ. ಅವರನ್ನು ಹುಡುಕಬೇಕು, ಅಷ್ಟೆ. ಖಂಡಿತವಾಗಿಯೂ ಅವರು ಸಿಕ್ಕಿಯೇ ಸಿಗ್ತಾ

ಒಂದು ಸಾರೆ ಅವಳೆಂದಳು:

"ಬಹುಶಃ ಆಕೆಯ ಹತ್ತಿರಕ್ಕೆ ಹೋಗಿ, ನಿನ್ನ ಸಂಬಂಧದಲ್ಲಿ ನಾನು ವಂದನೆ ಅರ್ಪಿಸೋ ಸರಿಯೇನೊ?"

"ಇಲ್ಲ. ಬೇಡ."

"ಹಾಗೇ ಆಗಲಿ. ಹೋಗೋದಿಲ್ಲ. ಓ ದೇವರೇ, ದೇವರೇ, ಇದೆಲಾ ಎಷ್ಟು ಚೆ ಯುಗಯುಗಗಳ ಕಾಲ ಬೇಕಾದರೂ ನಾನು ಸಂತೋಷದಿಂದ ಬದುಕ್ತೇನೆ."

...ನನ್ನನ್ನು ಶಾಲೆಗೆ ಸೇರಿಸಿಬಿಡುವ ಅವಕಾಶ ಮಾರ್ಗೊಟ್ ರಾಣಿಗೆ ಸಿಗದೇ ಹೋಯಿ ಈಸ್ಟರ್ ಹಬ್ಬದ ಅನಂತರದ ಬಿಳಿಯ ಭಾನುವಾರ—ವ್ಹಿಟ್ ಭಾನುವಾರ—ಅಪ್ರಿಯವಾ ಘಟನೆಯೊಂದು ಜರಗಿ, ಹೆಚ್ಚು ಕಡಮೆ ನನ್ನ ವಿನಾಶಕ್ಕೇ ಕಾರಣವಾಯಿತು.

ರಜಾ ದಿನಗಳು ಆರಂಭವಾಗಲು ಸ್ವಲ್ಪ ಸಮಯವಷ್ಟೇ ಇದ್ದಾಗ, ನನ್ನ ಕಣ್ಣೆವೆಗಳು ಉ ಕೊಂಡುವು. ಇದರಿಂದ ನನ್ನ ಕಣ್ಣುಗಳು ಸಂಪೂರ್ಣವಾಗಿ ಮುಚ್ಚಿಯೇ ಹೋದುವೆನ್ನಬೇ ನಾನು ದೃಷ್ಟಿಹೀನನಾಗಬಹುದೆಂದು ನನ್ನ ಯಜಮಾನರು ಹೆದರಿದರು, ನನಗೂ ಹೆದ ಯಾಯಿತು. ತಮ್ಮ ಪರಿಚಯದ ಒಬ್ಬ ಡಾಕ್ಟರಲ್ಲಿಗೆ ಅವರು ನನ್ನನ್ನು ಕರೆದೊಯ್ದರು. ಹೀನ್ರಿಶ್ ರೊಡ್‌ಜೆವಿಶ್ ಎಂಬ ಹೆಸರಿನವನು. ಹೆರಿಗೆ ನಿಪುಣ. ಅವನು ನನ್ನ ಕಣ್ಣೆವೆ

ಒಳಭಾಗವನ್ನು ಚುಚ್ಚಿದ. ಮುಂದೆ ಅನೇಕ ದಿನಗಳವರೆಗೆ, ಕಣ್ಣುಗಳ ಮೇಲೆ ಬ್ಯಾಂಡೇಜು ಕಟ್ಟಿಕೊಂಡು, ಕತ್ತಲಲ್ಲೂ ನೋವಿನಲ್ಲೂ ನರಳುತ್ತ, ಮಲಗಿದೆ. ವ್ಹಿಟ್ ಭಾನುವಾರದ ಹಿಂದಿನ ದಿನ ಬ್ಯಾಂಡೇಜನ್ನು ಬಿಚ್ಚಿದರು. ಜೀವಂತ ಹುಗಿದಿದ್ದ ಗೋರಿಯಿಂದಲೇ ಎದ್ದವನಂತೆ, ಮಲಗಿದ್ದ ಲ್ಲಿಂದ ನಾನೆದ್ದೆ. ಕುರುಡುತನವೆನ್ನುವುದು, ಅನಿರ್ವಚನೀಯ ದುರದೃಷ್ಟ. ತನಗೆ ಬಲಿಯಾದವ ಿಂದ, ಜಗತ್ತಿನ ಹತ್ತರಲ್ಲಿ ಒಂಭತ್ತು ಭಾಗಗಳನ್ನು ಅದು ಕಿತ್ತುಕೊಳ್ಳುತ್ತದೆ. ಅದಕ್ಕಿಂತ ಹೆಚ್ಚು ಭಯಾನಕವಾದುದು ಬೇರೇನೂ ಇರುವುದು ಸಾಧ್ಯವಿಲ್ಲ.

ಸಂಭ್ರಮದ ವ್ಹಿಟ್ ಭಾನುವಾರ, ನನ್ನ ಅಸ್ವಾಸ್ಥ್ಯದ ಕಾರಣದಿಂದ ಮಧ್ಯಾಹ್ನವೇ ಮನೆ ಕೆಲಸದಿಂದ ವಿಮುಕ್ತಗೊಳಿಸಲ್ಪಟ್ಟ ನಾನು, ಅಡುಗೆಮನೆಯಿಂದ ಅಡುಗೆ ಮನೆಗೆ, ಅಧಿಕಾರಿಗಳ ಚಾಕರರನ್ನು ಸಂದರ್ಶಿಸುತ್ತ ಹೋದೆ. ಗಂಭೀರನಾಗಿರುತ್ತಿದ್ದ ತುಫ್ಯಾಯಿಾವನ ಹೊರತಾಗಿ ಉಳಿದವರೆಲ್ಲ ಕುಡಿದು ಮತ್ತರಾಗಿದ್ದರು. ಸಂಜೆಯ ಹೊತ್ತಿಗೆ ಯೆರ್ಮೋಖಿನ್, ಒಂದು ಕಟ್ಟಿಗೆ ಯಿಂದ ಸಿದೊರೋವನ ತಲೆಗೆ ಹೊಡೆದ. ಆತ ಬಾಗಿಲ ಹಾದಿಯಲ್ಲಿ ಪ್ರಜ್ಞೆ ತಪ್ಪಿಬಿದ್ದ. ಬೆದ ದ ಯೆರ್ಮೋಖಿನ್ ಕಂದರದಲ್ಲಿ ಅವಿತುಕೊಳ್ಳಲೆಂದು ಓಡಿದ.

ಸಿದೊರೋವ್ ಕೊಲೆ ಮಾಡಲ್ಪಟ್ಟನೆಂಬ ಕಿಂವದಂತಿ ಬಹಳ ಬೇಗನೆ ವಠಾರದಲ್ಲಿ ಹರ ಿತು. ಅಡುಗೆಮನೆಗೆ ಹಾಗೂ ಬಾಗಿಲಿನ ನಡುವೆ ನಿಶ್ಚಲವಾಗಿ ಮೈಚಾಚಿ ಬಿದ್ದಿದ್ದ ಸೈನಿಕನೆಡೆ ಕರುನೋಟದಿಂದ ನೋಡಲು, ಜಗಲಿಯ ಮೇಲೆ ಸಣ್ಣದೊಂದು ಗುಂಪೇ ನೆರೆಯಿತು. ಪೋಲೀಸ ನ್ನು ಕರೆಯುವುದು ಅಗತ್ಯವೆಂದು ಜನರು ಪಿಸುನುಡಿದರು. ಆದರೆ ಯಾರೂ ಅವರನ್ನು ಕರೆಯ ಲ್ಲ. ಆ ಸೈನಿಕನನ್ನು ಮುಟ್ಟುವ ಧೈರ್ಯವೂ ಯಾರಿಗೂ ಇರಲಿಲ್ಲ.

ಅಗಸರಾಕೆ ನತಾಲ್ಯಾ ಕೊಜ್ಲೊವ್‌ಸ್ಕಾಯಾ ಅಲ್ಲಿಗೆ ಬಂದಳು. ಆಕೆ ತೊಟ್ಟಿದ್ದುದು ಸುನೀಲಿ ಬಣ್ಣದ ಕೆಂಪುಛಾಯೆ ಬೆರೆತಿದ್ದ ಹೊಸ ಫ್ರಾಕು. ಭುಜಗಳ ಸುತ್ತಲೂ ಬಿಳಿಯ ಕರ ವಸ್ತ್ರವಿತ್ತು. ಜನರನ್ನು ಸಿಡುಕಿನಿಂದ ಬದಿಗೆ ತಳ್ಳುತ್ತ ಅವಳು ಪ್ರವೇಶದ್ವಾರವನ್ನು ಹೊಕ್ಕು, ದೇಹದ ಪಕ್ಕದಲ್ಲಿ ಕುಳಿತಳು.

ಗಟ್ಟಿಯಾದ ಸ್ವರದಲ್ಲಿ ಅವಳು ಕೂಗಿ ನುಡಿದಳು:

"ಮೂರ್ಖರೇ, ಇವನು ಬದುಕಿದಾನೆ! ಸ್ವಲ್ಪ ನೀರು ತನ್ನಿ!"

"ನಿನಗೆ ಸಂಬಂಧಿಸದ ವಿಷಯದಲ್ಲಿ ಪ್ರವೇಶ ಮಾಡ್ಬೇಡ!" ಎಂದು ಅವಳನ್ನು ಅವಪು ಚ್ಚರಿಸಿದರು.

"ನೀರು ತನ್ನಿ, ಅಂದೆ!" ಎಂದು, ಬೆಂಕಿ ಬಿದ್ದಿದೆಯೇನೋ ಎನ್ನುವಂತೆ ಅವಳು ಬೊಬ್ಬಿ ಟ್ಟಳು. ಬಳಿಕ ಚಾಕಚಕ್ಯತೆಯಿಂದ, ಹೊಸ ಫ್ರಾಕನ್ನು ಮೊಣಕಾಲುಗಳ ಮೇಲಕ್ಕೆ ಎಳೆದು, ಂಗವನ್ನು ಕೆಳಕ್ಕೆ ಸರಿಸಿ, ಸೈನಿಕನ ರಕ್ತ ಸೋರುತ್ತಿದ್ದ ತಲೆಯನ್ನು ತನ್ನ ತೊಡೆಯಮೇಲೆ ರಿಸಿಕೊಂಡಳು.

ಇದಕ್ಕೆಲ್ಲ ಅಸಮ್ಮತಿ ಸೂಚಿಸುತ್ತಿದ್ದ ಪುಕ್ಕಲು ಪ್ರೇಕ್ಷಕರು ಕ್ರಮೇಣ ಚದರಿದರು. ಪ್ರವೇಶದ್ವಾರದ ನಸುಬೆಳಕಿನಲ್ಲಿ, ಅಗಸರವಳ ಕಂಬನಿ ತುಂಬಿದ ಕಣ್ಣುಗಳು ಆಕೆಯ ದುಂಡಗಿನ ಳಿಯ ಮುಖದಲ್ಲಿ ಹೊಳೆಯುತ್ತಿದ್ದುದು ನನಗೆ ಕಾಣಿಸುತ್ತಿತ್ತು. ನಾನು ಒಂದು ಪಾತ್ರೆ ೕರನ್ನು ತಂದೆ. ಸಿದೊರೋವನ ತಲೆಯ ಮೇಲೂ ಎದೆಯ ಮೇಲೂ ಅದನ್ನು ಸುರಿಯುವಂತೆ

ಆಕೆ ನನಗೆ ಹೇಳಿದಳು.

"ಆದರೆ ನನ್ನ ಬಟ್ಟೆ ಒದ್ದೆ ಮಾಡ್ಬೇಡ—ನಾನು ಸ್ನೇಹಿತೆಯರ ಮನೆಗೆ ಹೊರಟಿದೀ[ನಿ]" ಎಂದು ಅವಳು ಎಚ್ಚರಿಸಿದಳು.

ಸೈನಿಕ ಪ್ರಜ್ಞೆ ತಳೆದ. ತನ್ನ ಪರೆಮುಚ್ಚಿದ ಕಣ್ಣುಗಳನ್ನು ತೆರೆದು, ಗೋಳಾಡಿದ.

"ಇವನನ್ನು ಎತ್ತು," ಎಂದು, ಆತನ ಕಂಕುಳುಗಳ ಕೆಳಗೆ ತನ್ನ ಕೈಗಳನ್ನಿಡುತ್ತ, ತ[ನ್ನ] ಉಡುಪು ಮಲಿನವಾಗದಂತೆ ಸಾಕಷ್ಟು ದೂರಕ್ಕೆ ಅವನನ್ನು ಹಿಡಿಯುತ್ತ, ಅವಳೆಂದ[ಳು.] ನಾವಿಬ್ಬರೂ ಅಡುಗೆಮನೆಯೊಳಕ್ಕೆ ಅವನನ್ನು ಹೊತ್ತು ಒಯ್ದು, ಮಂಚದ ಮೇಲೆ ಇರಿಸಿದೆ[ವು.] ಅವಳು ಒದ್ದೆ ಬಟ್ಟೆಯಿಂದ ಅವನ ಮುಖವನ್ನೊರೆಸಿದಳು.

"ಬಟ್ಟೆಯನ್ನು ಆಗಾಗ್ಗೆ ನೀರಿನಲ್ಲಿ ಅದ್ದಿ ಅವನ ತಲೆಗೆ ತಟ್ಟುತ್ತಿರು. ನಾನು ಹೊರಹೋ[ಗಿ] ಆ ಇನ್ನೊಬ್ಬ ಮೂರ್ಖ ಎಲ್ಲಿದಾನೋ ಸ್ವಲ್ಪ ಹುಡುಕಾಡ್ತೀನಿ. ಹುಚ್ಚ ಪಿಶಾಚಿಗಳು-ಕುಡಿ[ದು] ಕುಡಿದೂ ಇವರು ಸೆರೆಮನೆಗೆ ಹೋಗೋದೇ ನಿಜ!" ಎಂದು ಹೇಳುತ್ತ ಆಕೆ ಹೊರಬೀಳ[ಲು] ಅನುವಾದಳು.

ಕಲೆಯಾಗಿದ್ದ ಲಂಗವನ್ನು ಅವಳು ಕೆಳಕ್ಕೆ ಜಾರಿಸಿದಳು. ಅದನ್ನು ಪಾದದಿಂದ ಮೂ[ಲೆಗೆ] ತಳ್ಳಿದಳು. ಹೊಚ್ಚ ಹೊಸದಾಗಿದ್ದ ಫ್ರಾಕನ್ನು ಜಾಗರೂಕತೆಯಿಂದ ಇಳಿಬಿಟ್ಟಳು. ಬ[ಳಿಕ] ಹೊರಹೋದಳು.

ಸಿದೊರೋವ್ ಶರೀರವನ್ನು ಚಾಚಿದ, ಬಿಕ್ಕಳಿಸಿದ, ನರಳಾಡಿದ. ಕರಿದು ರಕ್ತ ಅ[ವನ] ತಲೆಯಿಂದ ನನ್ನ ಬರಿಯ ಪಾದದ ಮೇಲಕ್ಕೆ ತೊಟ್ಟಿಕ್ಕುತ್ತಲೇ ಇತ್ತು. ಇದು ಹಿತಕರವಾ[ಗಿರ]ಲಿಲ್ಲ. ಆದರೆ ಭಯದಿಂದಾಗಿ ನಾನು ನನ್ನ ಪಾದವನ್ನು ಚಲಿಸಲಿಲ್ಲ.

ನನಗೆ ಅತ್ಯಂತ ನಿರಾಸೆಯಾಯಿತು. ಹೊರಗೆ ಪ್ರತಿಯೊಂದೂ, ಅಂದು ಹಬ್ಬವೆಂದು ರ[...] ದಿನವೆಂದು ಸಾರುತ್ತಿತ್ತು. ಎಳೆಯ ಬರ್ಚ್‌ಕೊಂಬೆಗಳಿಂದ ಜಗಲಿಗಳನ್ನೂ ಗೇಟುಗಳನ[್ನೂ] ಅಲಂಕರಿಸಿದ್ದರು. ಇನ್ನಿತರ ಹಸುರು ರೆಂಬೆಗಳನ್ನು ಪ್ರತಿಯೊಂದು ಕಂಬಕ್ಕೂ ಕಟ್ಟಲಾಗಿ[ತ್ತು.] ಬೀದಿಯುದ್ದಕ್ಕೂ ಸಂತಸದ ಕಲರವ ಪ್ರತಿಧ್ವನಿಸುತ್ತಿತ್ತು. ಪ್ರತಿಯೊಂದೂ ಹೊಸದಾಗಿ[...] ಯೌವನವನ್ನು ಹೊರಸೂಸುತ್ತಿತ್ತು. ವಸಂತದ ಸಂಭ್ರಮ ಆರಂಭವಾಯಿತಿನ್ನು; ಮುಂದೆ ಬದು[ಕು] ಹೆಚ್ಚು ಪರಿಶುದ್ಧವೂ ಶುಭ್ರವೂ ಹರ್ಷದಾಯಕವೂ ಆಗುವುದು—ಎಂದು ಬೆಳಗಿನ ಜಾವ ನ[ನಗೆ] ಅನಿಸಿತ್ತು.

ಸೈನಿಕ ವಾಂತಿ ಮಾಡಿದ. ಬಿಸಿ ವೋಡ್ಕಾ ಹಾಗೂ ಈರುಳ್ಳಿಯ ಉಸಿರುಕಟ್ಟಿಸುವ ವಾ[ಸನೆ]ಯಿಂದ ಅಡುಗೆಮನೆ ತುಂಬಿತ್ತು. ಆಗಿಂದಾಗ್ಗೆ, ಅಸ್ಪಷ್ಟವಾದ, ನಜ್ಜುಗುಜ್ಜಾದ ಮೂಗುಗಳಿ[ದ್ದ] ಚಪ್ಪಟೆ ಮುಖಗಳು ಕಿಟಿಕಿಗಾಜಿಗೆ ಹೊರಗಿನಿಂದ ಒತ್ತುತ್ತಿದ್ದುವು. ಎರಡೂಕಡೆ ಕಾಣಿಸುತ್ತಿ[ದ್ದ] ಹರಡಿದ ಅಂಗೈಗಳು, ಭೀಕರ ಕಿವಿಗಳಂತೆ ತೋರುತ್ತಿದ್ದುವು.

ಸೈನಿಕನ ಮನಸ್ಸು ತಿಳಿಗೊಂಡಂತೆ, ಆತ ಗೊಣಗಿದ:

"ಯಾಕೆ ಹೀಗಿದೆ? ನಾನು ಬಿದ್ದೆನೆ? ಯೆರ್ಮೋಖಿನ್? ಒಳ್ಳೇ ಸ್ನೇಹಿತ!"

ಆತ ಕೆಮ್ಮಿದ, ಕುಡುಕನ ಕಂಬನಿಯನ್ನು ಸುರಿಸಿದ, ಗೋಳಾಡಿದ:

"ನನ್ನ ಪುಟ್ಟ ತಂಗಿಯೇ, ನನ್ನ ಬಡ ಪುಟ್ಟ ತಂಗಿಯೇ!"

ತೋಯ್ದುಕೊಂಡು, ಜಾರುತ್ತ, ನಾರುತ್ತ, ಪ್ರಯಾಸಪಟ್ಟು ಆತ ಎದ್ದುನಿಂತ. ಮಗ್ಗುರಿಸಿದ. ಹಾಸಿಗೆಯ ಮೇಲೆ ಪುನಃ ಬಿದ್ದ. ಭಯದಿಂದ ಕಣ್ಣಾಲಿಗಳನ್ನು ಹೊರಳಿಸುತ್ತ ಅಂದ:

"ನನ್ನನ್ನು ಅವನು ಕೊಂದೇ ಬಿಟ್ಟಿದಾನೆ!"

ಇದು ನನಗೆ ತಮಾಷೆಯಾಗಿ ಕಂಡಿತು.

ಸೈನಿಕ ಜಡನೋಟದಿಂದ ನನ್ನನ್ನು ದಿಟ್ಟಿಸಿ ಕೇಳಿದ:

"ಯಾತಕ್ಕೋಸ್ಕರ ನಗ್ತಿದೀಯಾ, ಪಿಶಾಚಿಯೆ? ಈ ರೀತಿ ನನ್ನ ಕೊಲೆಯಾಗಿರುವಾಗ, ನನ್ನ ಕಥೆ ಮುಗಿದೇ ಹೋಗಿರುವಾಗ, ನೀನು ನಗೋದು ಹೇಗೆ ಸಾಧ್ಯ?...."

ಎರಡೂ ಕೈಗಳಿಂದ ನನ್ನನ್ನು ತಳ್ಳತೊಡಗುತ್ತ, ಆತ ಗೊಣಗಿದ:

"ನರಕದಿ ಮೊದಲಿಗ, ಪ್ರವಾದಿ ಇಲ್ಯಾ; ಸಂಕಟ ಸಮಯದಿ ನಾಪತ್ತೆ. ತೊಲಗಾಚೆ, ನೈತ್ಯ!"

"ಹುಚ್ಚುಚ್ಚಾರ ನಿಲ್ಲಿಸು!" ಎಂದು ನಾನೆಂದೆ.

ಆತ ಸಿಟ್ಟಿನಿಂದ ಗರ್ಜಿಸಿ ಪಾದಗಳನ್ನು ಅತ್ತಿತ್ತ ಚಲಿಸಿದ.

"ಅವನು ನನ್ನನ್ನು ಕೊಲೆಮಾಡಿದ. ನೀನು——!"

ಭಾರವಾದ, ಹೊಲಸಾದ, ದುರ್ಬಲವಾದ ಕೈಯಿಂದ ನನ್ನ ಕಣ್ಣುಗಳ ಅಡ್ಡಕ್ಕೆ ಆತ ಹೊಡೆದ. ಕೂಗಾಡುತ್ತ, ಕಣ್ಣು ಕಾಣದೆ, ಅಂಗಳಕ್ಕೆ ನಾನು ಧಾವಿಸಿದೆ. ಅಲ್ಲಿ ಯೆರ್ಮೋಖಿನನ ತೋಳು ಹಿಡಿದು ಎಳೆಯುತ್ತ, "ಬಾ, ಕುದುರೆ!" ಎಂದು ಬೊಬ್ಬಿಡುತ್ತ, ಬರುತ್ತಿದ್ದ ನತಾಲ್ಯಾಳನ್ನು ನಾನು ಸಂಧಿಸಿದೆ.

ನನ್ನನ್ನು ನೋಡುತ್ತಲೆ, ಏರುಧ್ವನಿಯಲ್ಲಿ ಆಕೆ ಕೇಳಿದಳು:

"ಏನಾಯ್ತು?"

"ಅವನು ಕಾದಾಡ್ತಿದಾನೆ."

"ಕಾದಾಡ್ತಿದಾನೆ?" ಎಂದು ನತಾಲ್ಯಾ ಅಚ್ಚರಿಯಿಂದ ಪುನರುಚ್ಚರಿಸಿದಳು. ಬಳಿಕ ಯೆರ್ಮೋಖಿನನನ್ನು ತುಸು ಜಗ್ಗಿ, ಅವನೊಡನೆ ಅಂದಳು:

"ಹುಂ. ಈಸಲ ದೇವರೇ ನಿನ್ನನ್ನು ಕಾಪಾಡಿದ."

ನಾನು ತಣ್ಣೀರಿನಿಂದ ನನ್ನ ಕಣ್ಣುಗಳನ್ನು ತೊಳೆದು, ಬಾಗಿಲಿನೆಡೆಯಿಂದ ಅಡುಗೆಮನೆಯೊಳಕ್ಕೆ ಇಣಿಕಿ ನೋಡಲು ಪುನಃ ಬಂದೆ. ಅಲ್ಲಿ ರಾಗೋದ್ವೇಗದ ರಾಜಿ ಒಪ್ಪಂದದಲ್ಲಿ, ಆ ಇಬ್ಬರು ಸೈನಿಕರೂ ಅಳುತ್ತಿದ್ದುದನ್ನು, ಪರಸ್ಪರ ಅಪ್ಪಿಕೊಳ್ಳುತ್ತಿದ್ದುದನ್ನು, ನಾನು ಕಂಡೆ. ಬಳಿಕ ಅವರು, ನತಾಲ್ಯಾಳನ್ನು ತಬ್ಬಿಕೊಳ್ಳಲು ಯತ್ನಿಸಿದರು. ಆಕೆ ಅವರಿಗೆ ಏಟುಬಿಗಿದು ಹಿಂದಕ್ಕೆ ತಳ್ಳಿ, ಕೂಗಿ ನುಡಿದಳು:

"ನಾಯಿಗಳೇ! ನಿಮ್ಮ ಉಗುರುಕೈಗಳನ್ನು ನನ್ನಿಂದ ದೂರವಿಡಿ! ನಾನು ಏನೂಂತ ತಿಳಿಕೊಂಡಿರಿ? ನಿಮ್ಮ ಭಿಕಾರಿ ವೇಶ್ಯೆಯರಲ್ಲಿ ಒಬ್ಬಳು ಅಂತಲೊ? ನಿಮ್ಮ ಒಡೆಯರು ಬರೋದಕ್ಕೆ ಮುಂಚೆ, ಮಲಕೊಂಡು ಒಂದಿಷ್ಟು ಚುಟುಕು ನಿದ್ದೆಮಾಡಿ. ಬೇಗನೆ! ಇಲ್ಲದಿದ್ದರೆ ಬೀಳುತ್ತೆ ನಿಮಗೆ!"

ಅವಳು ಅವರಿಬ್ಬರನ್ನೂ, ಎಳೆಯ ಮಕ್ಕಳಂತೆ, ಒಬ್ಬನನ್ನು ಮಂಚದ ಮೇಲೂ ಇನ್ನೊಬ್ಬ

ನನ್ನು ನೆಲದ ಮೇಲೂ ಮಲಗಿಸಿದಳು. ಅವರಿಬ್ಬರೂ ಗೊರಕೆ ಹೊಡೆಯತೊಡಗಿದಾಗ, ಅ
ಬಾಗಿಲ ಹೊರಕ್ಕೆ ಬಂದಳು.

"ನನ್ನ ಫ್ರಾಕನ್ನು ಸ್ವಲ್ಪ ನೋಡು—ಎಲ್ಲಾ ಸುಕ್ಕು ಸುಕ್ಕಾಗಿದೆ. ನಾನೋ ಸ್ನೇಹಿ
ಸಂದರ್ಶನಕ್ಕೆ ಹೊರಟಿದೀನಿ! ಅವನು ನಿನಗೆ ಹೊಡೆದನೇನು ? ಬೆಪ್ಪು ಮೂರ್ಖ. ವೋ
ಕುಡಿದರೆ ಆಗೋದೇ ಹೀಗೆ. ಕುಡೀಬೇಡ, ನನ್ನ ಮಗ. ಆ ಅಭ್ಯಾಸ ಯಾವತ್ತೂ ವ
ಬೇಡ."

ಅವಳ ಪಕ್ಕದಲ್ಲಿ ಬೆಂಚಿನ ಮೇಲೆ ಗೇಟಿನ ಬಳಿ ನಾನು ಕುಳಿತುಕೊಂಡೆ. ಅವ
ಕುಡುಕರ ಭಯ ಯಾಕಿಲ್ಲ—ಎಂದು ಕೇಳಿದೆ.

"ಕುಡಿಯದವರ ಭಯವೂ ನನಗಿಲ್ಲ. ಅವರನ್ನೆಲ್ಲಾ ಇಲ್ಲಿ ಹಿಡಿದುಬಿಡ್ತೀನಿ!" ಎಂ
ಕೆಂಪಗಿನ ಬಿಗಿಮುಷ್ಟಿಯನ್ನು ನನಗೆ ತೋರಿಸುತ್ತಾ, ಅವಳೆಂದಳು. "ಸತ್ತುಹೋಗಿರೋ
ಗಂಡ, ಅಸ್ವಸ್ಥನಾಗೋವರೆಗೂ ಕುಡೀತಿದ್ದ. ನಾನು ಅವನ ಕೈಕಾಲು ಕಟ್ಟಿಹಾಕ್ತಿದ್ದೆ.
ಹೋಗಿ ಅಮಲಿಳಿದ ಮೇಲೆ, ಅವನ ಷರಾಯಿಯನ್ನು ಕೆಳಕ್ಕೆ ಎಳೆದು, ಒಳ್ಳೆಯ ಬಲಿಷ್ಠವ
ಬಡಿಗೆಗಳಿಂದ ಹೊಡೀತಿದ್ದೆ: 'ನಿನ್ನ ಮಿತಿಮೀರಿದ ಕುಡುಕತನ ಬಿಟ್ಬಿಡು! ಸುಖ ಅನು
ಸೋದಕ್ಕೆ ಅವಳ ಕಡೆಗೆ ಬರಬೇಕು—ಹೆಂಡದ್ಸ್ಬುಂಡೆ ಎತ್ತೋದಲ್ಲ!' ಆ ರೀತಿ! ಕೈಸೋ
ಹೋಗೋವರೆಗೂ ಅವನಿಗೆ ಹೊಡೀತಿದ್ದೆ. ಅದಾದ ಮೇಲೆ ಆತ, ನನ್ನ ಕೈಯೊಳಗೆ ಪ
ಬೆಳಗುವ ಕ್ಷಾರದ ಹಾಗಿರ್‍ತಿದ್ದ."

ಸ್ವತಃ ದೇವರನ್ನೇ ಮೋಸಗೊಳಿಸಿದ್ದ ಸ್ತ್ರೀ ಈವಳ ನೆನಪು ನನಗಾಯಿತು.

"ನೀನು ಬಲಿಷ್ಠಳಾಗಿದೀಯಾ," ಎಂದು ನಾನೆಂದೆ.

ನತಾಲ್ಯಾ ನಿಟ್ಟುಸಿರುಬಿಟ್ಟು, ಉತ್ತರವಿತ್ತಳು:

"ಗಂಡಸಿಗೆ ಬೇಕಾಗುವುದಕ್ಕಿಂತಲೂ ಹೆಚ್ಚು ಶಕ್ತಿಯ ಅಗತ್ಯ ಹೆಂಗಸಿಗಿದೆ. ಅವರಿಬ್ಬರಿ
ಬೇಕಾಗುವ ಶಕ್ತಿ ಅವಳಲ್ಲಿರಬೇಕು. ಆದರೆ ದೇವರು ಮಾತ್ರ ಆ ವಿಷಯದಲ್ಲಿ ಅವಳಿಗೆ ಮೋ
ಮಾಡಿದ....ರೈತನಾದ ಗಂಡನನ್ನು ನಂಬುವಹಾಗಿಲ್ಲ."

ತೋಳುಗಳನ್ನು ತನ್ನ ವಿಶಾಲವಾದ ಎದೆಗಡ್ಡವಾಗಿ ಮಡಚಿ, ಬೆನ್ನನ್ನು ಬೇಲಿಗೊರಗಿ
ಚೆಲ್ಲಾಪಿಲ್ಲಿಯಾಗಿ ಕಲ್ಮಷ ಬಿದ್ದಿದ್ದ ಅಣೆಕಟ್ಟಿನ ಕಡೆಗೆ ತನ್ನ ಕಣ್ಣುಗಳನ್ನು ನೆಟ್ಟು, ಅಲ್ಲಿ ಕುಳಿ
ಶಾಂತವಾಗಿಯೂ ನಿರ್ವಿಕಾರವಾಗಿಯೂ ಅವಳು ಮಾತನಾಡಿದಳು. ಜ್ಞಾನದಿಂದ ತುಂ
ಅವಳ ಟೀಕೆ ಟಿಪ್ಪಣಿಗಳಿಗೆ ಕಿವಿಗೊಡುತ್ತ ಕುಳಿತಂತೆ, ವೇಳೆ ಕಳೆದುದೇ ನನಗೆ ಗೋಚರವ
ಲಿಲ್ಲ. ಇದ್ದಕ್ಕಿದ್ದಂತೆ, ಯಜಮಾನನೂ ಅವನ ತೋಳಲ್ಲಿ ಕೈತುರುಕಿದ್ದ ಅವನ ಹೆಂಡತಿಯೂ
ಕಟ್ಟಿನ ಆ ಕೊನೆಯತ್ತಣಿಂದ ಬರುತ್ತಿದ್ದುದನ್ನು ನಾನು ಕಂಡೆ. ಅವರಿಬ್ಬರೂ ನಿಧಾನವಾಗಿ,
ಯಿಂದ, ಹುಂಜನೂ ಹೇಟೆಯೂ ಬರುವಂತೆ, ನಮ್ಮೆಡೆಗೆ ದಿಟ್ಟಿಸುತ್ತ ಪರಸ್ಪರ ಏನನ್ನೋ ಹೇಳ
ನಡೆದು ಬರುತ್ತಿದ್ದರು.

ಎದುರು ಬಾಗಿಲನ್ನು ತೆರೆಯಲೆಂದು ನಾನು ಧಾವಿಸಿದೆ. ನಾವು ಮಹಡಿಯ ಮೆಟ್ಟ
ಗಳನ್ನು ಹತ್ತುತ್ತಿದ್ದಂತೆ, ನನ್ನ ಒಡತಿ ಕುಟುಕುವ ಮಾತುಗಳಲ್ಲಿ ಅಂದಳು:

"ಅಗಸರವಳ ಜತೆ ಚೆಲ್ಲಾಟಕ್ಕೆ ಹೊರಟಿದೀಯೇನೋ? ಕೆಳಗಡೆ ಇರೋ ಮಹಿಳೆಯಿ

ಇದೇ ಏನು ನೀನು ಕಲಿತದ್ದು?"

ಆಕೆ ಆಡಿದುದು, ಸಿಟ್ಟುಗೊಳ್ಳುವುದು ಕೂಡಾ ಸಾಧ್ಯವಿಲ್ಲದಷ್ಟು ಮೂರ್ಖಮಾತು.

ನನ್ನ ಯಜಮಾನ ಸಣ್ಣನೆ ನಕ್ಕು, ಅಂದ:

"ಹೂಂ. ಆಟ ಶುರುಮಾಡೋ ವಯಸ್ಸಾಗ್ತಾ ಬಂತು. ಅಲ್ಲ, ಅಂತೀಯಾ?"

ಒಡತಿಯ ಮಾತಿಗಿಂತಲೂ ಯಜಮಾನ ಆಡಿದುದನ್ನು ಕೇಳಿ ನನಗೆ ಹೆಚ್ಚು ನೋವಾಯಿತು.

ಮಾರನೆಯ ಬೆಳಗ್ಗೆ, ಕಟ್ಟಿಗೆ ತರಲೆಂದು ನಾನು ಷೆಡ್ಡಿನೊಳಕ್ಕೆ ಹೋದಾಗ, ಬೆಕ್ಕು ಓಡಾಡುವುದಕ್ಕೋಸ್ಕರ ಬಾಗಿಲಿನಲ್ಲಿದ್ದ ತೂತಿನ ಬಳಿ, ಬರಿದಾದ ಪಾಕೀಟೊಂದನ್ನು ನಾನು ಕಂಡೆ. ಸಿದೊರೋವನ ಬಳಿ ಈ ಪಾಕೀಟು ಇದ್ದುದನ್ನು ಹಲವಾರು ಸಾರಿ ನಾನು ಕಂಡಿದ್ದೆ. ಹೀಗಾಗಿ, ತಕ್ಷಣವೇ ಅದನ್ನು ಆತನೆಡೆಗೆ ಒಯ್ದೆ.

ಪಾಕೀಟಿನೊಳಕ್ಕೆ ಬೆರಳು ಆಡಿಸಿ ಆತ ಕೇಳಿದ:

"ಹಣ ಎಲ್ಲಿದೆ? ಒಂದು ರೂಬಲ್ ಮತ್ತು ಮೂವತ್ತು ಕೊಪೆಕ್ ಕೊಟ್ಟುಬಿಡು."

ತಲೆಯನ್ನು ಒಂದು ಅಂಗವಸ್ತ್ರದಿಂದ ಆತ ಸುತ್ತಿದ್ದ. ಅವನ ಮುಖ ಅರಸಿನ ಬಣ್ಣಕ್ಕೆ ತಿರುಗಿತ್ತು, ಜೋತಿತ್ತು. ನಾನು ಕಂಡಾಗ ಪಾಕೀಟು ಬರಿದಾಗಿಯೇ ಇತ್ತೆಂಬುದನ್ನು ನಂಬಲು ನಿರಾಕರಿಸುತ್ತ, ಊದಿಕೊಂಡಿದ್ದ ಕಣ್ಣುಗಳಿಂದ ನನ್ನೆಡೆಗೆ ಆತ ಪಿಳಿಪಿಳಿ ನೋಡಿದ.

ಯೆರ್ಮೋಖಿನ್ ಅತ್ತಬಂದು, ನಾನೇ ಕಳ್ಳನೆಂಬುದನ್ನು ಅವನಿಗೆ ಮನವರಿಕೆಮಾಡಿಕೊಳ್ಳಲು ಯತ್ನಿಸಿದ.

ನನ್ನೆಡೆಗೆ ತಲೆಯಾಡಿಸುತ್ತ ಅವನೆಂದ:

"ತೆಗೆದಿರೋದು ಇವನೇ. ಈತನ ಯಜಮಾನನ ಹತ್ತಿರಕ್ಕೆ ಇವನನ್ನು ಕರಕೊಂಡು ಹೋಗು. ಒಬ್ಬ ಸೈನಿಕ ಸೋದರ ಸೈನಿಕನದನ್ನು ಕದಿಯೋದಿಲ್ಲ."

ಈ ಮಾತುಗಳಿಂದ, ಹಣವನ್ನು ಕದ್ದು ಪಾಕೀಟನ್ನು ನಮ್ಮ ಷೆಡ್ಡಿನ ಬಳಿ ಇರಿಸಿದವನು ಈತನೇ ಎಂದು ನನಗೆ ಹೊಳೆಯಿತು. ಹೀಗಾಗಿ, ಅಲ್ಲೇ ಆಗಲೇ ಅವನ ಮುಖಕ್ಕೇ ಹೇಳಿದೆ:

"ಅದು ಸುಳ್ಳು. ಕದ್ದಿರೋನು ನೀನು!"

ಅವನ ಒರಟು ಮುಖ ಭೀತಿಯಿಂದಲೂ ಸಿಟ್ಟಿನಿಂದಲೂ ವಿಕೃತವಾದಾಗ, ನನ್ನ ಊಹೆ ಸರಿಯೆಂಬುದು ನನಗೆ ಖಚಿತವಾಯಿತು.

"ರುಜುವಾತು ಮಾಡ್ಕೊಡು," ಎಂದು ಆತ ಕಿರಿಚಿದ.

ರುಜುವಾತು ಮಾಡಿಕೊಡುವುದು ನನ್ನಿಂದ ಹೇಗ ಸಾಧ್ಯವಿತ್ತು? ಬೊಬ್ಬಾಟ ಮಾಡಿ ಯೆರ್ಮೋಖಿನ್ ನನ್ನನ್ನು ಅಂಗಳಕ್ಕೆಳೆದ. ಸಿದೊರೋವ್, ತಾನೂ ಬೊಬ್ಬಿಡುತ್ತ, ನಮ್ಮನ್ನು ಹಿಂಬಾಲಿಸಿದ. ಕಿಟಿಕಿಗಳಿಂದ ತಲೆಗಳು ಹಣಿಕಿಹಾಕತೊಡಗಿದುವು. ಮಾರ್ಗೊಟ್‌ರಾಣಿಯ ತಾಯಿ, ಅನಿವಾರ್ಯವಾದ ತನ್ನ ಸಿಗರೇಟಿನ ಹೊಗೆಯುಗುಳುತ್ತ, ಶಾಂತವಾಗಿ ನಮ್ಮನ್ನು ದಿಟ್ಟಿಸಿದಳು. ನನ್ನ ಬಗೆಗೆ ನನ್ನ ದೇವಿಗಿನ್ನು ಯಾವ ಆದರವೂ ಉಳಿಯದೆಂಬುದನ್ನು ಮನಗಂಡು, ಸಂಪೂರ್ಣವಾಗಿ ನನ್ನ ತಲೆ ಕೆಟ್ಟೇಹೋಯಿತು.

ಸೈನಿಕರು ನನ್ನ ಕೈಗಳನ್ನು ಹಿಡಿದು, ನನ್ನ ಯಜಮಾನನ ಎದುರು ನನ್ನನ್ನು ತಂದು

ನಿಲ್ಲಿಸಿದುದು ನನಗೆ ನೆನಪಿದೆ. ನನ್ನ ಮೇಲಿನ ಆರೋಪಕ್ಕೆ ಕಿವಿಗೊಡುತ್ತ, ಪರಸ್ಪರರ ಕ
ನೋಡಿ ಪದೇ ಪದೇ ಅವರು ತಲೆಯಾಡಿಸುತ್ತಿದ್ದರು.

ನನ್ನ ಕಿರಿಯಜಮಾನಿತಿ ಅಂದಳು:

"ಖಂಡಿತವಾಗಿಯೂ ಇವನ ಕೆಲಸವೇ ಇರಬೇಕು. ನಿನ್ನೆ ರಾತ್ರಿ ಗೇಟಿನ ಹತ್ತಿರ ಅಗಸ
ವಳ ಜತೆ ಈತ ಚೆಲ್ಲಾಟ- ಆಡ್ತಿದ್ದದ್ದನ್ನ ನಾನು ನೋಡಿದೇನೆ. ಇವನ ಹತ್ತಿರ ಹಣ ಇದ್ದಿ
ಬೇಕು—ಹಣವಿಲ್ಲದೆ ಅವಳಿಂದ ಏನೂ ಸಿಗಲಾರದು."

"ಅದು ಸರಿ!" ಎಂದು ಯೆರ್ಮೋಖಿನ್ ಕೂಗಿ ನುಡಿದ.

ನನ್ನ ತಲೆ ಗಿರ‍್ರೆಂದಿತು. ಮೃಗೀಯ ಕ್ರೋಧ ನನ್ನನ್ನು ದಹಿಸಿತು. ನನ್ನ ಯಜಮಾನಿ
ಯನ್ನು ಉದ್ದೇಶಿಸಿ ನಾನು ಗರ್ಜಿಸಿದೆ. ಪ್ರತಿಫಲವಾಗಿ ಅಸಹನೀಯವಾದ ಹೊಡೆತ ಸಿಕ್ಕಿತು

ಆದರೆ, ಹೊಡೆತದಿಂದ ನನಗಾದ ಹಿಂಸೆಗಿಂತಲೂ ನನ್ನ ವಿಷಯದಲ್ಲಿ ಮಾರ್ಗೊಟ
ರಾಣಿಗೆ ಈಗ ಯಾವ ಅಭಿಪ್ರಾಯವಿರಬಹುದೆಂಬ ಯೋಚನೆಯಿಂದ ಹೆಚ್ಚು ಹಿಂಸೆಯುಂಟ
ಯಿತು. ಅವಳ ದೃಷ್ಟಿಯಲ್ಲಿ ನನ್ನನ್ನು ನಾನು ಸಮರ್ಥಿಸಿಕೊಳ್ಳುವುದೆಂತು? ನನ್ನ ಪಾಲಿಗಿದ
ಕಹಿಯಾದ ಘಳಿಗೆಯಾಗಿತ್ತು.

ನನ್ನ ಅದೃಷ್ಟದಿಂದ, ಏನಾಯಿತೆಂಬ ಸುದ್ದಿಯನ್ನು ಸೈನಿಕರು ವಠಾರದ ಎಲ್ಲೆಡೆಗಳಿಗ
ಬೀದಿಯುದ್ದಕ್ಕೂ ಹಬ್ಬಿದರು. ಆ ಸಂಜೆ ಮೇಲುಮಹಡಿಯಲ್ಲಿ ನಾನು ಮಲಗಿದ್ದಾಗ, ನತಾಲ
ಕೊಜ್ಲೋವ್‌ಸ್ಕಾಯಾ ಕೆಳಗಡೆ ಕೂಗಾಡುತ್ತಿದ್ದುದು ನನಗೆ ಕೇಳಿಸಿತು:

"ಯಾಕೆ ನಾನು ಬಾಯಿ ಮುಚ್ಕಿರಲಿ? ಬಾ ಇಲ್ಲಿ, ನನ್ನ ಸದ್ಗೃಹಸ್ಥ, ತಕ್ಷಣ ಬಾ. ಬಾ—
ಅಂದೆ. ಬರದೇ ಇದ್ದರೆ ನಿನ್ನ ಯಜಮಾನನಿಗೆ ಹೋಗಿ ಹೇಳ್ತೀನಿ. ಅವನು ನೀನು ಬರೊ
ಹಾಗೆ ಮಾಡ್ತಾನೆ!"

ಆ ಗದ್ದಲಕ್ಕೂ ನನಗೂ ಏನೋ ಸಂಬಂಧವಿರಬೇಕೆಂದು ತಕ್ಷಣವೇ ನಾನು ಗ್ರಹಿಸಿ
ನಮ್ಮ ಪ್ರವೇಶದ್ವಾರದ ಬಳಿ ನಿಂತು ಅವಳು ಕೂಗಾಡುತ್ತಿದ್ದಳು. ಅವಳ ಗಂಟಲು ಹೆಚ
ಬಲವಾಯಿತು—ವಿಜಯಧ್ವನಿ ಜೋರಾಗಿ ಮೊಳಗಿತು.

"ನೀನು ಎಷ್ಟು ಹಣ ನಿನ್ನೆ ನನಗೆ ತೋರಿಸ್ದೆ? ಅದು ನಿನಗೆಲ್ಲಿ ಸಿಕ್ಕಿತು? ಹೇಳು-ಕೇಳೋ
ವಂತೆ."

ಸಂತಸದಿಂದ ನನ್ನ ಗಂಟಲು ಒತ್ತರಿಸಿತು. ಸಿದೊರೋವ್ ಸಂಕಟಪಡುತ್ತ ಪ್ರಲಾ
ಸುತಿದ್ದುದು ನನಗೆ ಕೇಳಿಸಿತು:

"ಓ, ಯೆರ್ಮೋಖಿನ್, ಯೆರ್ಮೋಖಿನ್!"

"ಹುಡುಗನ ಮೇಲೆ ಆರೋಪ ಹೊರಿಸಿ, ಅವನಿಗೆ ಹೊಡೆತಬಿತ್ತು!"

ಕೆಳಗಡೆಗೆ ಓಡಿಹೋಗಿ, ಆನುದದಿಂದ ಕುಣಿದಾಡಿ, ಅಗಸರವಳ ಕೈಯನ್ನು ಚುಂಬಿಸ
ನಾನು ಅಪೇಕ್ಷೆಪಟ್ಟೆ. ಅಷ್ಟರಲ್ಲೇ ನನ್ನ ಒಡತಿ—ಪ್ರಾಯಶಃ ಕಿಟಿಕಿಯಿಂದಿರಬೇಕು—ಕೂ
ನುಡಿದುದು ನನಗೆ ಕೇಳಿಸಿತು.

"ಕೆಟ್ಟನಾಲಿಗೆಗಾಗಿ ಹುಡುಗನಿಗೆ ಹೊಡೆತ ಬಿತ್ತು. ಆತ ಹಣ ಕದ್ದ ಅಂತ ಎಂದಾದರ
ಯೋಚಿಸಿದವಳು ನೀನೊಬ್ಬಳೇ—ಹಾದರಗಿತ್ತಿ?"

ಸ್ವತಃ ನೀನೇ ಹಾದರಗಿತ್ತಿ, ನನ್ನ ಮುದ್ದು. ನಾನು ಹೇಳೋದಕ್ಕೆ ನಿನ್ನ ಆಕ್ಷೇಪವಿಲ್ಲ ಂದಾದರೆ, ನೀನೊಬ್ಬಳು ಸೊಗಸಾದ ಕೊಬ್ಬಿದ ಆಕಳು ಕೂಡಾ."

ಅವರ ಜಗಳ ನನ್ನ ಕಿವಿಗಳಿಗೆ ಸಂಗೀತವಾಗಿತ್ತು. ಯಾತನೆಯ ಹಾಗೂ ನತಾಲ್ಯಾಳ ುಗೆಗೆ ಕೃತಜ್ಞತೆಯ ಬಿಸಿಕಂಬನಿ ನನ್ನ ಹೃದಯದಲ್ಲಿ ಉಕ್ಕಿಬಂತು. ಅವನ್ನು ತಡೆಯುವ ಯತ್ನ ದಲ್ಲಿ, ಉಸಿರಿಗಾಗಿ ನಾನು ಚಡಪಡಿಸಿದೆ.

ನನ್ನ ಯಜಮಾನ ನಿಧಾನವಾಗಿ ಮೇಲಣ ಅಟ್ಟದ ಮೆಟ್ಟಲುಗಳನ್ನು ಹತ್ತಿಬಂದು, ನನ್ನ ಗ್ಗುಲಲ್ಲಿ, ಮುಂದಕ್ಕೆ ಬಂದಿದ್ದ ಛಾವಣಿಯ ಒಂದು ತೊಲೆಯ ಮೇಲೆ ಕುಳಿತ.

ನನ್ನ ತಲೆಗೂದಲನ್ನು ಹಿಂದಕ್ಕೆ ತೀಡುತ್ತ ಅವನೆಂದ:

"ನೀನು ಅದೃಷ್ಟಹೀನ ಅಂತ ಕಾಣ್ತದೆ, ಪೆಶ್ಕೋವ್."

ನಾನು ಉತ್ತರವೀಯದೆ, ಬೇರೆ ಕಡೆಗೆ ಮುಖ ತಿರುಹಿದೆ.

ಆತ ಮುಂದುವರಿಸಿದ:

"ಆದರೆ, ಅತ್ಯಂತ ಆಕ್ಷೇಪಕರ ಭಾಷೆಯನ್ನೇ ನೀನು ಬಳಸುತ್ತೀ ಅನ್ನೋದನ್ನು ಅಲ್ಲ ಳೆಯೋ ಹಾಗಿಲ್ಲ."

"ಏಳೋದು ಸಾಧ್ಯವಾದ ಕೂಡಲೇ ನಾನು ಇಲ್ಲಿಂದ ಹೊರಟುಹೋಗ್ತೇನೆ," ಎಂದು ಂತವಾಗಿ ನಾನು ಜಾಹೀರುಮಾಡಿದೆ.

ಆತ ಸ್ವಲ್ಪಹೊತ್ತು, ಸಿಗರೇಟು ಸೇದುತ್ತ, ಏನನ್ನೂ ಹೇಳದೆ, ಕುಳಿತ. ಬಳಿಕ, ತನ್ನ ಗರೇಟಿನ ಕೊನೆಯನ್ನು ಸೂಕ್ಷ್ಮವಾಗಿ, ದಿಟ್ಟಿಸಿ ನೋಡುತ್ತ ನುಡಿದ:

"ಸರಿ. ಅದು ನಿನಗೆ ಸೇರಿದ್ದು. ನೀನೇನು ಇನ್ನೂ ಪುಟ್ಟ ಹುಡುಗನಲ್ಲವಲ್ಲ. ಏನು ಮಾಡಬೇಕು ಅನ್ನೋದು ನಿನಗೆ ಚೆನ್ನಾಗಿ ಗೊತ್ತಿರ್ತದೆ."

ಆತ ಎದ್ದು, ಕೆಳಕ್ಕೆ ಇಳಿದುಹೋದ. ಎಂದಿನಂತೆ, ಅವನ ಬಗೆಗೆ ನನಗೆ ಕನಿಕರವೆನಿಸಿತು.

ನಾಲ್ಕು ದಿನಗಳ ಅನಂತರ ನಾನು ಕೆಲಸವನ್ನು ಬಿಟ್ಟೆ. ಮಾರ್ಗೊಟ್‌ರಾಣಿಗೆ ವಿದಾಯ ೇಳಬೇಕೆಂಬ ಪ್ರಬಲೇಚ್ಛೆ ನನಗಿತ್ತು. ಆದರೆ, ಅವಳ ಸಂದರ್ಶನಕ್ಕೆ ಹೋಗಲು ನನಗೆ ೈರ್ಯ ಸಾಲಲಿಲ್ಲ. ನಿಜ ಸಂಗತಿಯೆಂದರೆ ಸ್ವತಃ ಅವಳಾಗಿಯೇ ನನಗೆ ಕರೆಕಳುಹಬಹು ಂದು ನಾನು ಆಸೆ ಇಟ್ಟುಕೊಂಡಿದ್ದೆ.

ಪುಟ್ಟ ಹುಡುಗಿಯನ್ನು ಬೀಳ್ಕೊಡುವಾಗ ನಾನೆಂದೆ:

"ನಿಮ್ಮ ತಾಯಿಗೆ ಹೇಳಬೇಕು: ಅವರಿಗೆ ನನ್ನ ಧನ್ಯವಾದಗಳು—ಬಹಳ, ಬಹಳ ಧನ್ಯ ಾದಗಳು! ನಿನಗೆ ನೆನಪಿರುತ್ತಾ ?"

ಮೃದುವಾದ, ವಾತ್ಸಲ್ಯದಿಂದ ತುಂಬಿದ, ಮುಗುಳುನಗೆಯೊಡನೆ ಅವಳು ಮಾತುಕೊಟ್ಟಳು:

"ಆಗಲಿ, ಹೇಳ್ತೀನಿ. ನಾಳೆಯವರೆಗೂ ವಿದಾಯ."

ಸುಮಾರು ಇಪ್ಪತ್ತು ವರ್ಷಗಳ ಅನಂತರ ಅವಳನ್ನು ನಾನು ಪುನಃ ಸಂಧಿಸಿದೆ. ಅವಳು, ಶಸ್ತ್ರ ಪೋಲೀಸ್‌ದಳದ ಅಧಿಕಾರಿಯೊಬ್ಬನ ಪತ್ನಿಯಾಗಿದ್ದಳು.

೧೧

ಮತ್ತೊಮ್ಮೆ ನಾನು ಮುಸುರೆತಿಕ್ಕುವ ಚಾಕರನಾದೆ. ಈ ಸಲ ಈ ಉದ್ಯೋಗ ದೊರೆತುದು, ದೊಡ್ಡದಾದ, ವೇಗದ, ಹಂಸದಂತೆ ಬಿಳುಪಾದ 'ಪರ್ಮ್' ಹಡಗಿನ ಮೇಲೆ. ಈ ಸಾರಿ ನಾನು, ಮುಸುರೆ ಬೆಳಗುವ ಸಹಾಯಕ ಚಾಕರ,—'ಅಡುಗೆಮನೆಯ ಹುಡುಗ.' ಸಂಬಳ ತಿಂಗಳಿಗೆ ಏಳು ರೂಬಲು. ನನ್ನ ಕೆಲಸ, ಅಡುಗೆಯವನಿಗೆ ನೆರವಾಗುವುದು.

ಸ್ಥೂಲಕಾಯನಾದ, ಉದ್ಧಟತನದಿಂದ ಉಬ್ಬಿದ್ದ, ರಬ್ಬರು ಚೆಂಡಿನಂತಹ ಬೊಕ್ಕತಲೆಯ ಮನುಷ್ಯನೊಬ್ಬ, ಪ್ರವಾಸಿಗರ ಅಗತ್ಯಗಳನ್ನು ಪೂರೈಸುವ ಅಧಿಕಾರಿಯಾಗಿದ್ದ. ತನ್ನ ಕೈಗಳನ್ನು ಬೆನ್ನಹಿಂದೆ ಕಟ್ಟಿಕೊಂಡು, ಸೆಖೆಯ ದಿನ ನೆರಳನ್ನು ಅರಸುವ ಹಂದಿಯಂತೆ, ದಿನವೆಲ್ಲಾ ಆತ ಡೆಕ್ಕಿನ ಮೇಲೆ ಶತಪಥ ತುಳಿಯುತ್ತಿದ್ದ. ಪಾನಮಂದಿರದಲ್ಲಿ ಅವನ ಹೆಂಡತಿ ಕುಳಿತುಕೊಳ್ಳುತ್ತಿದ್ದಳು. ನಾಲ್ವತ್ತು ದಾಟಿದ್ದ ಹೆಂಗಸು. ಹಿಂದೊಮ್ಮೆ ಸುಂದರಿಯಾಗಿದ್ದಾಕೆ. ಈಗ ಸವೆದು ಹೋಗಿದ್ದ ಜೀವ. ಆಕೆ ಪೌಡರನ್ನು ಅತಿಯಾಗಿ ಬಳಸುತ್ತಿದ್ದಳು. ಕೆನ್ನೆಗಳ ಮೇಲಿಂದ ಪದರು ಪದರುಗಳಾಗಿ ಅದು ಎದ್ದು ಬರುತ್ತಿತ್ತು, ಅವಳ ಕಡುಬಣ್ಣದ ಪೋಷಾಕನ್ನು ಜಿಗುಟಾದ ಬಿಳಿಯ ಧೂಳಿನಿಂದ ಮುಚ್ಚುತ್ತಿತ್ತು.

ಅಡುಗೆಮನೆಯ ಮುಖ್ಯಸ್ಥ, ಇವಾನ್ ಇವಾನೋವಿಚ್. 'ಕರಡಿಬೊಂಬೆ' ಎಂಬ ಅಡ್ಡ ಹೆಸರಿತ್ತು ಅವನಿಗೆ. ದುಂಡಗಿನ ಪುಟ್ಟ ಆಕೃತಿ. ಡೊಂಕು ಮೂಗು. ಛೇಡಿಸುವ ಕಣ್ಣುಗಳು. ಬಹಳ ಸೊಗಸುಗಾರ. ಯಾವಾಗಲೂ ಧರಿಸುತ್ತಿದ್ದುದು, ಸ್ಟಾರ್ಚ್‌ಹಾಕಿದ ಕಾಲರುಗಳನ್ನೇ. ಪ್ರತಿನಿತ್ಯ ಮುಖಕ್ಷೌರ ಮಾಡಿಕೊಳ್ಳುತ್ತಿದ್ದ. ಇದರಿಂದಾಗಿ ಅವನ ಕೆನ್ನೆಗಳಿಗೆ ನಸುನೀಲಿ ಬಣ್ಣ ಬಂದಿತ್ತು. ಮೇಲ್ಮೊಗವಾಗಿ ತಿರುವಿದ್ದ ಕಪ್ಪು ಮೀಸೆ ಇತ್ತು ಅವನಿಗೆ. ಬಿಡುವಿದ್ದಾಗಲೆಲ್ಲ, ಕಾದು ಕೆಂಪಗಾಗಿದ್ದ ಬೆರಳುಗಳಿಂದ ಅದನ್ನು ಆತ, ತನ್ನ ಪುಟ್ಟದಾದ ವೃತ್ತಾಕಾರದ ಒಂದು ಕನ್ನಡಿಯಲ್ಲಿ ಹೆಮ್ಮೆಯಿಂದ ನೋಡುತ್ತ, ತಿರುವುತ್ತಿದ್ದ.

ಬೆಂಕಿಗೆ ಇದ್ದಿಲು ತಳ್ಳುವ ಉಗಿಕೆಲಸಗಾರನಾದ ಯಾಕೋವ್ ಷುಮೋವನೇ, ಹಡಗಿನ ಮೇಲಿದ್ದ ಅತ್ಯಂತ ಸ್ವಾರಸ್ಯಕರ ವ್ಯಕ್ತಿ. ರೈತ ಬುಡಕಟ್ಟಿನ ಮನುಷ್ಯ ಆತ. ಚೌಕಾಕೃತಿಯ ವಿಶಾಲ ಭುಜಗಳ ಆಸಾಮಿ. ಅವನ ಮೊಂಡುಮೂಗಿನ ಮುಖ ಹಾರೆಯಷ್ಟೇ ಚಪ್ಪಟೆಯಾಗಿತ್ತು. ದಪ್ಪನೆಯ ಹುಬ್ಬುಗಳಡಿಯಿಂದ ಕರಡಿ ಕಣ್ಣುಗಳು ಹೊರನೋಡುತ್ತಿದ್ದುವು. ಜವುಗುನೆಲದ ಪಾಚಿಯನ್ನು ಹೋಲುತ್ತಿದ್ದ ಗುಂಗುರು ಗಡ್ಡ ಕೆನ್ನೆಗಳನ್ನು ಆವರಿಸಿತ್ತು. ತಲೆಯ ಮೇಲೆ ದಪ್ಪವಾದ ಗುಂಗುರು ಕೂದಲು. ಅವನ ಡೊಂಕು ಬೆರಳುಗಳು ಹಾಯಲಾಗದಷ್ಟು ಒರಟಾಗಿತ್ತು ಅದು.

ಆತ ಅತ್ಯಂತ ಯಶಸ್ವಿಯಾದ ಜೂಜುಗಾರ; ಅಚ್ಚರಿಗೊಳಿಸುವಂತಹ ತಿಂಡಿಪೋತ. ಹಸಿದ ನಾಯಿಯಂತೆ, ಮಾಂಸಕ್ಕಾಗಿಯೋ ಮೂಳೆಗಳಿಗಾಗಿಯೋ ಬೇಡುತ್ತ, ಅಡುಗೆಮನೆಯ ಸುತ್ತ ಅಲೆದಾಡುತ್ತಿದ್ದ. ಸಂಜೆಯ ಹೊತ್ತು ಕರಡಿಬೊಂಬೆಯ ಜತೆ ಚಹಾ ಕುಡಿಯುತ್ತ, ತನ್ನನ್ನು

ಕುರಿತ ಅಸಾಧಾರಣವಾದ ಕಥೆಗಳನ್ನು ಹೇಳುತ್ತಿದ್ದ.

ಬಾಲ್ಯದಲ್ಲಿ ಆತ ರಿಯಜಾನ್‌ನಲ್ಲಿ ಶಹರದ ಕುರಿಗಾಹಿಯೊಬ್ಬನಿಗೆ ಸಹಾಯಕನಾಗಿದ್ದ. ಒಂದು ದಿನ ಆ ಹಾದಿಯಾಗಿ ಬಂದ ಕ್ರೈಸ್ತ ಸನ್ಯಾಸಿಯೊಬ್ಬ ಅವನನ್ನು ಪುಸಲಾಯಿಸಿ ತನ್ನ ಮಠಕ್ಕೆ ಕರೆದೊಯ್ದ. ಅಲ್ಲಿ ನಾಲ್ಕು ವರ್ಷಗಳ ಕಾಲ ವಟುವಾಗಿದ್ದ ಆತ.

ತನ್ನ ಪರಿಹಾಸ್ಯದ ಸರಣಿಯಲ್ಲಿ ಅವನೆಂದ:

"ಪೆನ್ಜಾದಿಂದ ದೈವಭಕ್ತೆಯಾದ ಹೆಂಗಸೊಬ್ಬಳು ನಮ್ಮ ಮಠಕ್ಕೆ ಬರದೇ ಇದ್ದಿದ್ದರೆ, ಈಗಲೂ ಒಬ್ಬ ಸನ್ಯಾಸಿಯಾಗಿಯೇ—ದೇವರ ಕಪ್ಪು ನಕ್ಷತ್ರವಾಗಿಯೇ—ನಾನು ಇರುತ್ತಿದ್ದೆನೆನ್ನಿ. ಸಣ್ಣ ಆಕೃತಿಯ ಜೋರಾದ ಹೆಂಗಸು ಅವಳು. ನನ್ನ ತಲೆಕೆಡಿಸಿಬಿಟ್ಲು. ಅವಳು ಅಂದದ್ದೇನು ಗೊತ್ತೆ? 'ಪ್ಪಿ ಎಷ್ಟು ಚೆನ್ನಾಗಿದೀಯಾ, ಎಷ್ಟು ಬಲಿಷ್ಠವಾಗಿದೀಯಾ! ನಾನು ನೋಡು; ಒಬ್ಬಳು ಪ್ರಾಮಾಣಿಕ ವಿಧವೆ; ಒಂಟಿಯಾಗಿದೀನಿ. ನೀನು ಬಂದು, ನನ್ನ ಮನೆ—ಉಸ್ತುವಾರಿಯವನಾಗಿ ನನ್ನಲ್ಲಿ ದುಡೀಲಾರೆಯಾ? ನನ್ನ ಸ್ವಂತದ ಮನೆ ಇದೆ. ಕೋಳಿಮರಿಗಳ ಪುಕ್ಕ—ಹಕ್ಕಿಗಳು ಪುಕ್ಕ—ಇದರ ವ್ಯಾಪಾರ. ನನ್ನದು', ಅಂತ....ನನ್ನ ಆಕ್ಷೇಪವಿರಲಿಲ್ಲ. ಹೀಗಾಗಿ ನನ್ನನ್ನು ಆಕೆ ಮನೆ—ಉಸ್ತುವಾರಿಯವನನ್ನಾಗಿ ತಗೊಂಡ್ಲು; ಅವಳನ್ನು 'ಯಜಮಾನಿ'ಯಾಗಿ ನಾನು ತಗೊಂಡೆ. ಈ ರೀತಿ ಸುಮಾರು ಮೂರು ವರ್ಷಕಾಲ ಸುಖವಾಗಿದ್ದೆ."

ತನ್ನ ಮೂಗಿನ ಮೇಲಣ ಒಟಿಕೆಯೊಂದನ್ನು ಕಾತರದಿಂದ ದಿಟ್ಟಿಸುತ್ತಿದ್ದ ಕರಡಿಬೊಂಬೆ, ನಡುವೆ ಬಾಯಿಹಾಕಿ ನುಡಿದ:

"ನೀನು ಗಟ್ಟಿಗನಾದ ಸುಳ್ಳುಗಾರ. ಸುಳ್ಳುಹೇಳೋದರಿಂದ ಜನರಿಗೆ ಹಣ ಸಂಪಾದನೆ ಯಾಗೋ ಹಾಗಿದ್ದರೆ, ನೀನು ಶ್ರೀಮಂತನೇ ಆಗ್ತೀಯಾ."

ಬಾಯಲ್ಲಿದ್ದುದನ್ನು ಜಗಿಯುತ್ತ ಈ ಮಾತನ್ನು ಯಾಕೋವ್ ಕೇಳಿದ. ಕೆನ್ನೆಗಳ ಮೇಲಿನ ನರೆಗಡ್ಡ ಮೇಲಕ್ಕೂ ಕೆಳಕ್ಕೂ ಚಲಿಸಿತು. ಕೊಳೆಯ ಲೇಪನವಾಗಿದ್ದ ಕಿವಿಗಳು ಅತ್ತಿತ್ತ ಮಿಸುಕಿದುವು. ಅಡುಗೆಯವನು ನಡುವೆ ಬಾಯಿಹಾಕಿ ಮುಗಿಸಿದ ಬಳಿಕ, ವೇಗವಾದ ಒಂದೇ ಸಮನಾದ ರೀತಿಯಲ್ಲಿ ಆತ ಮುಂದುವರಿದ:

"ಆಕೆ ನನಗಿಂತ ವಯಸ್ಸಿನಲ್ಲಿ ದೊಡ್ಡವಳು. ಹೀಗಾಗಿ ನನಗೆ ಬೇಜಾರೆನಿಸಿತು. ಅವಳ ಸಹವಾಸ ಸಾಕೋ ಸಾಕಾಯ್ತು. ನಾನು ಅವಳ ಸೋದರ ಸೊಸೆಯ ಸಂಬಂಧ ಬೆಳೆಸ್ದೆ. ಅವಳಿಗೆ ಅದು ಗೊತ್ತಾಗಿ ನನ್ನ ಕತ್ತುಹಿಡಿದು ದಬ್ಬಿ ನನ್ನನ್ನು ಹೊರಕ್ಕೆ ಒಗೆದ್ಲು."

ಯಾಕೋವ್ ಆಡುತ್ತಿದ್ದ ಲಘುರೀತಿಯಲ್ಲೇ ಅಡುಗೆಯವನೆಂದ:

"ನಿನಗೆ ಯೋಗ್ಯ ರೀತೀಲೇ ಕೊಟ್ಲು ಸಂಬಳ."

ಯಾಕೋವ್ ದವಡೆಯೊಳಕ್ಕೆ ಒಂದು ಸಕ್ಕರೆ ಗಟ್ಟಿಯನ್ನು ತುರುಕಿ, ಮುಂದುವರಿದ:

"ಹೀಗಾಗಿ, ಆಮೇಲೆ ಸ್ವಲ್ಪ ಸಮಯದವರೆಗೆ ಗಾಳೀಲಿ ಸುತ್ತುಸುತ್ತು ಅಲೀತಾ ಇದ್ದೆ. ಕೊನೇಲಿ, ವ್ಲಾದಿಮೀರಿನ ಮುದುಕ ವರ್ತಕನೊಬ್ಬನಿಗೆ ಅಂಟಿಕೊಂಡೆ. ಅವನೂ ನಾನು ಅರ್ಧ ಪ್ರಪಂಚವೆಲ್ಲಾ ನಡೆದೇ ಸುತ್ತಿದೆವು. ಬಾಲ್ಕನ್ ಅನ್ನೋ ಪರ್ವತಗಳಿಗೆ ಹೋದೆವು. ತುರ್ಕರು, ರುಮಾನಿಯನ್ನರು, ಗ್ರೀಕರು ಮತ್ತು ಬಗೆಬಗೆಯ ಅಸ್ಟ್ರಿಯಾಕ್ ಜನರು—ನಾನಾ ರೀತಿಯ ವರು—ಇವರಲ್ಲಿಗೆಲ್ಲಾ ಹೋದೆವು. ಒಬ್ಬರಿಂದ ಕೊಂಡೆವು; ಇನ್ನೊಬ್ಬರಿಗೆ ಮಾರಿದೆವು."

ಅಡುಗೆಯವನು ತೀರಾ ಗಭೀರನಾಗಿ ಕೇಳಿದ:

"ನೀವು ಕದೀತಿದ್ದಿರೇನು ?"

"ಮುದುಕ ಕದೀತಿರಲಿಲ್ಲ—ಊಹೂಂ. ನನಗೆ ಆತ ಹೇಳ್ತಿದ್ದ: ಪರದೇಶದ ಭೂಮಿ ಮೇಲೆ ಪ್ರಾಮಾಣಿಕನಾಗಿ ನಡೀಬೇಕು; ಅತಿ ಸಣ್ಣ ಕಳವಿಗೂ ತಲೆಯನ್ನೇ ತೆರಬೇಕಾಗ್ತದೆ—ಇದು ಅಲ್ಲಿಯ ನಿಯಮ. ಓ, ನಾನೇನೋ ಕದಿಯೋಕೆ ಪ್ರಯತ್ನಪಟ್ಟೆನೇ ಅನ್ನಿ; ಆಟ ಸಾಗಲಿಲ್ಲ—ಅಷ್ಟೆ. ಒಬ್ಬ ವ್ಯಾಪಾರಿಯ ಲಾಯದಿಂದ ಒಂದು ಕುದುರೇನ ಹೊಡಕೊಂಡು ಹೋಗೋದಕ್ಕೆ ನೋಡ್ದೆ. ಊಹೂಂ—ಆಗಲಿಲ್ಲ. ಅವರು ನನ್ನನ್ನು ಹಿಡಿದರು; ಸ್ವಾಭಾವಿಕವಾಗಿಯೇ ಹೊಡೆಯೋದಕ್ಕೆ ಶುರುಮಾಡಿದರು. ಹೊಡೆದಾದ ಮೇಲೆ ಪೋಲೀಸರಲ್ಲಿಗೆ ಎಳಕೊಂಡು ಹೋದರು. ನಾವು ಇಬ್ಬರಿದ್ದೆವು ಒಬ್ಬ—ನಿಜವಾದ ಪ್ರಾಮಾಣಿಕನಾದ, ಕುದುರೆ ಕಳ್ಳ, ಇನ್ನೊಬ್ಬ—ಏನಾಗ್ತದೇಂತ ನೋಡೋದು ಮುಖ್ಯವಾಗಿದ್ದ ನಾನು. ಆಗ ಆ ವರ್ತಕನಲ್ಲಿ ನಾನು ಕೆಲಸದಲ್ಲಿದ್ದೆ; ಹೊಸ ಸ್ನಾನದ ಮನೇಲಿ ಒಲೆಕಟ್ತಿದ್ದೆ. ವರ್ತಕ ಕಾಹಿಲೆ ಮಲಗಿದ ಅವನಿಗೆ ಕೆಟ್ಟ ಕನಸುಗಳು ಬಿದ್ದುವು. ಆ ಕನಸುಗಳಲ್ಲಿ ನಾನು ಕಾಣಿಸಿಕೊಂಡೆ. ಆತ ಗಾಬರಿಯಾಗಿ ಮೇಲಿನವರೆಗೂ ಹೋಗಿ ಹೇಳ್ಕೊಂಡ: ಅವನನ್ನು [ಅಂದರೆ ನನ್ನನ್ನು] ಬಿಟ್ಬಿಡಿ, ಬಿಟ್ಬಿಡಿ. ನನ್ನ ಕನಸುಗಳಲ್ಲಿ ಅವನು ಕಾಣಿಸ್ಕೊಳ್ತಿದಾನಪ್ಪ. ನಾನವನನ್ನು ಕ್ಷಮಿಸದೇ ಇದ್ದರೆ ನಾನು ಸಾಯಲೂ ಬಹುದು. ಅವನು ಖಂಡಿತವಾಗಿಯೂ ಮಂತ್ರವಾದಿಯೇ ಇರಬೇಕೂಂತೀನಿ.' ನಾನು—ಮಂತ್ರವಾದಿ. ಹುಂ, ಆ ವರ್ತಕ ಪ್ರಸಿದ್ಧನಾದವನು. ಹೀಗಾಗಿ ನನ್ನನ್ನು ಅವರು ಬಿಟ್ಟುಬಿಟ್ಟರು."

"ಬಿಡಬಾರದಾಗಿತ್ತು. ನಿನ್ನ ಕೊರಳಿಗೆ ಒಂದು ಕಲ್ಲುಕಟ್ಟಿ, ಮೂರುದಿನಗಳವರೆಗೆ—ನಿನ್ನ ಹುಚ್ಚಾಟವೆಲ್ಲ ನೆನೆದು ಹೋಗೋ ತನಕವೂ—ನದಿಯಲ್ಲಿ ನಿನ್ನನ್ನು ಮುಳುಗಿಸಬೇಕಾಗಿತ್ತು."

ಯಾಕೋವ್‌ಗೆ ಆ ವಿಚಾರ ತಕ್ಷಣವೇ ಹಿಡಿಸಿತು:

"ನನ್ನಲ್ಲಿ ಒಂದಷ್ಟು ಹುಚ್ಚಾಟವಿದೆ ಅನ್ನೋ ವಿಷಯದಲ್ಲಿ ನಿನ್ನ ಮಾತು ಸರಿ. ನಿಜ ಹೇಳೋದಾದರೆ, ಒಂದಿಡೀ ಗ್ರಾಮಕ್ಕೆ ಸಾಕಾಗುವಷ್ಟು ಹುಚ್ಚಾಟ ನನ್ನಲ್ಲಿದೆ."

ಅಡುಗೆಯವನು ಕಾಲರಿನೊಳಕ್ಕೆ ತನ್ನ ಬೆರಳು ತುರುಕಿ, ಸಿಟ್ಟಿನಿಂದ ಅದನ್ನು ಜಗ್ಗಿದ. ತನ್ನ ತಲೆಯಲುಗಿಸುತ್ತ ತಾತ್ಸಾರದಿಂದ ನುಡಿದ:

"ಹುಂ ! ದಂಡನೆಗೊಳಗಾಗಿ ಜೈಲು ಕಂಡ ಇಂಥ ಮನುಷ್ಯ, ಕುಡೀತಾ ತಿನ್ತಾ ಅಲೀತಾನೆ; ಸೋಮಾರಿಯ ಹಾಗೆ ಹಗಲು ನಿದ್ದೆ ಮಾಡ್ತಾನೆ. ಇಷ್ಟೆಲ್ಲ ಮಾಡೋದು ಯಾತಕ್ಕಾಗಿ ? ಇದನ್ನು ಹೇಳು ನನಗೆ—ನೀನು ಬದುಕಿರೋದು ಯಾತಕ್ಕಾಗಿ ?"

ಉಗಿಕೆಲಸಗಾರ ತುಟಿ ಚಪ್ಪರಿಸಿ, ಉತ್ತರವಿತ್ತ :

"ಅದು ನನಗೆ ತಿಳೀದು. ಇತರರ ಹಾಗೆ ನಾನೂ ಸುಮ್ಮನೆ ಜೀವಿಸ್ತಿದೇನೆ, ಅಷ್ಟೆ. ಕೆಲವರು ಮಲಕೊಂಡಿರ್ತಾರೆ; ಕೆಲವರು ಅತ್ತಿತ್ತ ಸುತ್ತಾಡ್ತಾರೆ. ತಾರಕೂನರು ಇಡೀ ದಿನ ತಮ್ಮ ಮುಕುಳಿ ಮೇಲೆ ಕೂತಿರ್ತಾರೆ. ಏನಿದ್ದರೂ ತಿನ್ನೋದನ್ನಂತೂ ಪ್ರತಿಯೊಬ್ಬರೂ ಮಾಡಲೇಬೇಕು.

ಈ ಮಾತಿನಿಂದ, ಅಡುಗೆಯವನ ಅಸಹನೆ ಮತ್ತಷ್ಟು ಹೆಚ್ಚಿತು.

"ಮಾತಿನಲ್ಲಿ ಬಣ್ಣಿಸೋಕಾಗದಂಥ ಹಂದಿ ನೀನು. ಹಂದಿಗಳು ಕುಡಿಯೋಕೆ ಯೋಗ್ಯ

ಮಾದಂಥ ಕೊಚ್ಚೆ ನೀನು!"

ಯಾಕೋವ್ ಅಚ್ಚರಿಗೊಂಡು ಕೇಳಿದ:

"ನೀನು ಯಾಕೆ ಕೂಗಾಡ್ತಿದೀಯಾ? ರೈತ ಸಂತಾನವಾದ ನಾವೆಲ್ಲಾ ಒಂದೇ ವೃಕ್ಷದ ಫಲಗಳು. ಹುಚ್ಚನಹಾಗೆ ಆಡ್ಬೇಡ. ಆದರಿಂದ ನಾನೇನೂ ಸುಧಾರಿಸೋದಿಲ್ಲ."

ಬೇಗನೆ ಆ ಮನುಷ್ಯನೊಡನೆ ನನಗೆ ಆತ್ಮೀಯತೆ ಬೆಳೆಯಿತು. ಎಂದೂ ಕುಗ್ಗದ ಅಚ್ಚರಿಯಿಂದ ಅವನತ್ತ ನಾನು ನೋಡಿದೆ. ಬೆಕ್ಕಸಬೆರಗಾಗಿ ಬಾಯಿತೆರೆದೇ ಅವನ ಮಾತುಗಳಿಗೆ ಕಿವಿಗೊಟ್ಟೆ. ಜೀವನಾನುಭವದ ಬಲಿಷ್ಠ ಸೌಧವೊಂದನ್ನು ತನ್ನೊಳಗೆ ಆತ ನಿರ್ಮಿಸಿಕೊಂಡಿದ್ದಂತೆ ನನಗೆ ಅನಿಸಿತು. ಪ್ರತಿಯೊಬ್ಬರನ್ನೂ ಅನೌಪಚಾರಿಕವಾಗಿ ಅವನು ಸಂಬೋಧಿಸುತ್ತಿದ್ದ. ಒಂದೇ ಬಗೆಯ ಸ್ಪಷ್ಟ ದಿಟ್ಟತನದಿಂದ—ಸ್ವಾತಂತ್ರ್ಯದಿಂದ—ಎಲ್ಲರನ್ನೂ ಆತ, ದಟ್ಟನೆಯ ತನ್ನ ಹುಬ್ಬುಗಳಡಿಯಿಂದ ನೋಡುತ್ತಿದ್ದ. ಅವನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಕಪ್ತಾನ, ಯೋಗಕ್ಷೇಮಾಧಿಕಾರಿ, ಪ್ರಥಮ ವರ್ಗದ ಪ್ರಮುಖ ಪ್ರಯಾಣಿಕರು—ಇವರನ್ನೆಲ್ಲ, ಹಡಗಿನ ಚಾಕರರು, ಭೋಜನಶಾಲೆಯ ಪರಿಚಾರಕರು, ಮೂರನೆಯ ವರ್ಗದ ಪ್ರಯಾಣಿಕರು ಇವರನ್ನು ನೋಡುವಂತೆಯೇ, ಸ್ವತಃ ತನ್ನನ್ನು ತಾನು ನೋಡುವಂತೆಯೇ, ಕಾಣುತ್ತಿದ್ದ.

ಕೆಲವೇಳೆ, ಕಪ್ತಾನನೋ ಮುಖ್ಯ ಇಂಜಿನಿಯರನೋ, ಸೋಮಾರಿತನಕ್ಕಾಗಿ ಇಲ್ಲವೆ ಇಸ್ಪೀಟಾಟದಲ್ಲಿ ಯಾರನ್ನೋ ಸುಲಿದುದಕ್ಕಾಗಿ, ಯಾಕೋವನನ್ನು ಬೈಯುವುದಿತ್ತು. ಅವರೆದುರು, ತನ್ನ ನೀಳವಾದ-ಕೋತಿಗಿರುವಂತಹ-ತೋಳುಗಳನ್ನು ಬೆನ್ನಹಿಂದೆ ಕಟ್ಟಿ, ಆ ಬೈಗಳನ್ನು ಮೌನವಾಗಿ ಕೇಳುತ್ತ ಯಾಕೋವ್ ನಿಲ್ಲುತ್ತಿದ್ದ. ಅವನ ಮೇಲೆ ಆ ಬೈಗಳಿಂದ ಯಾವ ಪರಿಣಾಮವೂ ಆಗುತ್ತಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ಮುಂದಿನ ತಾಣದಲ್ಲಿ ಹಡಗಿನಿಂದ ಹೊರಹಾಕಲಾಗುವುದೆಂಬ ಬೆದರಿಕೆ, ಆತನನ್ನೆಂದೂ ಭೀತಿಪಡಿಸುತ್ತಿರಲಿಲ್ಲ.

'ಭೇಷ್'ನ ವಿಷಯದಲ್ಲಿದ್ದಂತೆಯೇ ಯಾಕೋವ್‌ನ ವಿಷಯದಲ್ಲೂ ಭಿನ್ನವಾದುದು—ವಿಶಿಷ್ಟವಾದುದು—ಏನೋ ಇತ್ತು. ಇತರರಿಗಿಂತ ತಾನು ಬೇರೆಯಾದವನು, ಇತರರು ತನ್ನನ್ನು ತಿಳಿದುಕೊಳ್ಳುವುದು ಆಗದ ಮಾತು, ಎಂದು ಸ್ವತಃ ಆತನೇ ಮನಗಂಡಿದ್ದನೆಂಬುದು, ಅವನ ನಡೆನುಡಿಗಳಿಂದ ವ್ಯಕ್ತವಾಗುತ್ತಿತ್ತು.

ಈ ಮನುಷ್ಯ ಯೋಚನಾಮಗ್ನನಾಗಿದ್ದುದನ್ನು ಇಲ್ಲವೆ ಸಿಡುಕುಗೊಂಡುದನ್ನು ನಾನೆಂದೂ ಕಂಡುದಿಲ್ಲ. ಬಹಳ ಕಾಲದವರೆಗೆ ಆತ ಮೌನವಾಗಿದ್ದುದು ಕೂಡಾ ನನಗೆ ನೆನಪಿಲ್ಲ. ಪದಗಳು ಅವನ ಬಾಯಿಯಿಂದ, ಕೊನೆಯೇ ಇಲ್ಲದ ಪ್ರವಾಹವಾಗಿ—ಸ್ವತಃ ಆತನ ಇಚ್ಛೆಗೆ ವಿರುದ್ಧವಾಗಿಯೇ ಹೊರಬೀಳುತ್ತಿದ್ದುವೇನೋ ಎನ್ನುವಂತೆ—ಹರಿಯುತ್ತಿದ್ದವು. ಬೈಸಿಕೊಂಡಾಗಲೆಲ್ಲಾ, ಇಲ್ಲವೆ ಸ್ವಾರಸ್ಯಕರವಾದ ಕಥೆಯನ್ನು ಯಾರಿಂದಲೂ ಕೇಳಿದಾಗಲೆಲ್ಲಾ, ತಾನು ಕೇಳಿದುದನ್ನು ಪುನರುಚ್ಚರಿಸುತ್ತಿರುವನೇನೋ ಎನ್ನುವಂತೆ ಅವನ ತುಟಿಗಳು ಚಲಿಸುತ್ತಿದ್ದುವು. ಅಥವಾ ಪ್ರಾಯಶಃ, ತನ್ನ ಯೋಚನೆಗಳನ್ನೇ ಆತ ಸದ್ದಿಲ್ಲದೆ ವ್ಯಕ್ತಪಡಿಸುತ್ತಿದ್ದನೇನೋ. ಪ್ರತಿದಿನವೂ ತನ್ನ ಕೆಲಸ ಮುಗಿದಾಗ ಉಗಿಮನೆಯಿಂದ ಆತ ಹೊರಬರುತ್ತಿದ್ದ. ಮೈಯೆಲ್ಲ ಬೆವರು, ಎಣ್ಣೆ ಜಿಡ್ಡಿನ ಲೇಪನ. ಬರಿಯಪಾದಗಳು. ಒದ್ದೆಯಾಗಿದ್ದ—ಸೊಂಟದಪಟ್ಟಿ ಇಲ್ಲದ-ಕುಪ್ಪಸ ತೆರೆದುಕೊಂಡು, ಗುಂಗುರು ಕೂದಲು ದಟ್ಟನೆ ಬೆಳೆದಿದ್ದ ಎದೆಯನ್ನು ತೋರಿಸುತ್ತಿತ್ತು. ಆತ ಹೊರಬಂದ

ತುಸು ಹೊತ್ತಿನಲ್ಲೇ, ಅವನ ಆಳವಾದ ನೀರಸವಾದ ಧ್ವನಿ, ಪದಗಳನ್ನು ಡೆಕ್ಕಿನ ಮೇಲೆಲ್ಲಾ ಮಳೆಯ ಹನಿಗಳಂತೆ ಚೆಲ್ಲುತ್ತಿದ್ದುದು ನಮಗೆ ಕೇಳಿಸುತ್ತಿತ್ತು.

"ನಮಸ್ಕಾರ, ತಾಯಿ. ಎಲ್ಲಿಗೆ ಪ್ರಯಾಣ? ಚಿಸ್ಟೊಪೋಲ್‌ಗೆ? ಆ ಊರು ನನಗೆ ಗೊತ್ತು. ಒಬ್ಬ ಶ್ರೀಮಂತ ರೈತನ ಕೆಳಗೆ ಅಲ್ಲಿ ನಾನು ದುಡೀತಿದ್ದೆ. ಉಸಾನ್ ಗುಬಾಯ್ದುಲೀನ್ ಅಂತ ಅವನ ಹೆಸರು. ಆ ಮುದುಕನಿಗೆ ಮೂವರು ಹೆಂಡಿರಿದ್ದರು. ಅವನೊಬ್ಬ ಕೆಂಪು ಮೋರೆಯ ನಿಶ್ಶಕ್ತ ಕೊರಡು. ಅವನ ಎಳೇ ಹೆಂಡಿರಲ್ಲೊಬ್ಬಳು-ತಾತರ್ ಹೆಂಗಸು-ಜೋರಾಗಿದ್ದಳು. ನಾನು ಅವಳ ಜತೆ ಅನೀತಿಯಿಂದ ಬಾಳಿದೆ."

ಎಲ್ಲ ಕಡೆಗಳಿಗೂ ಅವನು ಹೋಗಿದ್ದ. ಹೆಚ್ಚು ಕಡಮೆ ತಾನು ಸಂಧಿಸಿದ್ದ ಹೆಂಗಸರೆಲ್ಲರ ಜತೆಯಲ್ಲೂ ಅನೀತಿಯಿಂದ ಬಾಳಿದ್ದ. ಎಲ್ಲವನ್ನೂ ಆತ ಹೇಳುತ್ತಿದ್ದುದು, ಶಾಂತವಾದ ದಯಾಪೂರ್ಣವಾದ ರೀತಿಯಲ್ಲಿ; ಯಾವನೂ ಯಾವತ್ತೂ ತನ್ನ ಮನಸ್ಸಿಗೆ ನೋವುಂಟುಮಾಡಿಲ್ಲ—ತನಗೆ ಬೈದಿಲ್ಲ—ಎನ್ನುವಂತೆ. ಒಂದು ನಿಮಿಷದ ಬಳಿಕ ಅವನ ಮಾತು, ಹಡಗದ ಹಿಂಭಾಗದಿಂದೆಲ್ಲಿಂದಲೋ ಹರಿದು ಬರುತ್ತಿತ್ತು.

"ಇಸ್ಪೀಟು ಆಟಕ್ಕೆ ಯಾರಾದರೂ ಬರ್ತೀರೇನು? ಎಂಥ ಆಟ ಬೇಕಾದರೂ. ಹಿತಕರವಾದ ಆಟ—ಇಸ್ಪೀಟು. ಸುಮ್ಮನೆ ಕೂತು, ವ್ಯಾಪಾರಿಯ ಹಾಗೆ ಹಣ ಸೆಳೆಯೋದು."

'ಒಳ್ಳೆಯ', 'ಕೆಟ್ಟ' ಅಥವಾ 'ದುಷ್ಟ' ಎಂಬ ಪದಗಳನ್ನೆಲ್ಲ ಆತ ಬಹಳ ಕಡಮೆ ಬಳಸುತ್ತಿದ್ದನೆಂಬುದನ್ನು ನಾನು ಗಮನಿಸಿದೆ. ಬದಲು, ಹೆಚ್ಚುಕಡಮೆ ಯಾವಾಗಲೂ 'ಜೋರಾದ' ಇಲ್ಲವೆ 'ಹಿತಕರವಾದ' ಅಥವಾ 'ಸೋಜಿಗದ'—ಎಂಬ ಪದಗಳನ್ನೇ ಬಳಸುತ್ತಿದ್ದ. ಅವನ ಪಾಲಿಗೆ, ಸುಂದರಿಯಾದ ಹೆಂಗಸು—'ಜೋರಾದ ಪುಟ್ಟವಸ್ತು ;' ಬಿಸಿಲು ಬಿದ್ದ ಸೊಗಸಾದ ದಿನ—'ಹಿತಕರವಾದ ದಿವಸ.' ಆತ ಬಹಳವಾಗಿ ಬಳಸುತ್ತಿದ್ದ ಉದ್ಗಾರ:

"ಉಗುಳು ಅದರ ಮೇಲೆ!"

ಅವನು ಸೋಮಾರಿಯೆಂದೇ ಪ್ರತಿಯೊಬ್ಬರೂ ಪರಿಗಣಿಸಿದ್ದರು. ಆದರೆ, ಹೊಲಸು ನಾರುತ್ತಿದ್ದ ಉಸಿರು ಕಟ್ಟಿಸುತ್ತಿದ್ದ ಉಗಿಮನೆಯಲ್ಲಿ ಕುಲಿಮೆಗಳೆದುರು ಇತರರಷ್ಟೇ ಮನಃಪೂರ್ವಕವಾಗಿ ಆತ ದುಡಿಯುತ್ತಿದ್ದನೆಂದು ನನಗೆ ಅನಿಸುತ್ತಿತ್ತು. ಅಲ್ಲದೆ, ಇತರರು ಮಾಡಿದ ಹಾಗೆ, ಆಯಾಸವಾಯಿತೆಂದು ಆತ ಗೊಣಗಿದುದನ್ನಂತೂ ನಾನೆಂದೂ ಕೇಳಿದವನಲ್ಲ.

ಒಂದು ದಿನ, ಪ್ರಯಾಣಿಕರಲ್ಲಿ ಒಬ್ಬಳು ಮುದುಕಿಯ ಹಣದ ಪಾಕೀಟು ಕಳವಾಯಿತು. ಸ್ವಚ್ಛವಾಗಿ ಶಾಂತವಾಗಿತ್ತು ಸಂಜೆ. ಎಲ್ಲರೂ ಉಲ್ಲಾಸಭರಿತರಾಗಿಯೇ ಇದ್ದರು. ಕಪ್ತಾನ ಆ ಮುದುಕಿಗೆ ಐದು ರೂಬಲುಗಳನ್ನು ಕೊಟ್ಟ. ಇತರ ಪ್ರಯಾಣಿಕರು ಅವಳಿಗಾಗಿ ವಂತಿಗೆ ಸಂಗ್ರಹಿಸತೊಡಗಿದರು. ಒಟ್ಟಾದುದನ್ನು ಅವಳ ಕೈಗಿತ್ತಾಗ, ಆಕೆ ಶಿಲುಬೆಯ ವಂದನೆಮಾಡಿ, ನಡುವಿನವರೆಗೂ ಬಾಗಿ ಅಂದಳು:

"ಓ ನನ್ನ ಮುದ್ದುಗಳೇ, ಪಾಕೀಟಿನಲ್ಲಿ ಇದ್ದುದಕ್ಕಿಂತಲೂ ಮೂರು ರೂಬಲು ಹತ್ತು ಕೊಪೆಕ್ ನೀವು ನನಗೆ ಹೆಚ್ಚು ಕೊಟ್ಟಿದೀರಿ."

ಹರ್ಷದ ಧ್ವನಿಯಲ್ಲಿ ಯಾವನೋ ಸ್ವರವೆತ್ತಿ ನುಡಿದ:

"ಇಟ್ಟುಕೋ ಅಜ್ಜಿ. ಉಪಕಾರ ಸ್ಮರಿಸಿಬಿಡು. ಮೂರು ರೂಬಲು ಯಾವಾಗಲೂ ಉಪ

ಯೋಗಕ್ಕೆ ಬಿದ್ದೇ ಬೀಳ್ತದೆ."

ಯಾವನೋ ಇನ್ನೊಬ್ಬ ಯೋಗ್ಯವಾದ ಒಂದು ಮಾತನ್ನು ಆಡಿದ:

"ಹಣವೆಂದರೆ ಜನರಲ್ಲ; ಅದು ಯಾವತ್ತೂ ಬೇಡವಾಗೋದಿಲ್ಲ."

ಆದರೆ ಯಾಕೋವ್ ತನ್ನದೇ ಒಂದು ಸಲಹೆಯೊಡನೆ ಮುದುಕಿಯ ಬಳಿಗೆ ಹೋದ.

"ಹೆಚ್ಚಿನ ಹಣ ನನಗೆ ಕೊಡು. ಅದರ ಸಹಾಯದಿಂದ ಇಸ್ಪೀಟು ಆಡ್ತೀನಿ," ಎಂದ.

ಉಗಿಕೆಲಸಗಾರ ತಮಾಷೆಗೋಸ್ಕರ ಹೀಗೆ ಆಡುತ್ತಿರಬಹುದೆಂದು ಜನರು ನಕ್ಕರು. ಆದರೆ ಆತ, ತೀವ್ರಾಸಕ್ತಿಯಿಂದಲೇ ಒತ್ತಾಯಪಡಿಸಿದ.

"ಕೊಟ್ಟುಬಿಡು ಅಜ್ಜಿ. ಹಣದಿಂದ ನಿನಗೇನಾಗಬೇಕು? ಇವತ್ತೋ ನಾಳೆಯೋ ಗೋರಿ ಯೊಳಕ್ಕೆ ತೆವಳಿ ಹೋಗುವವಳು ನೀನು."

ಜನರು ರೇಗಾಡಿ ಅವನನ್ನು ದೂರಕ್ಕೆ ಓಡಿಸಿದರು. ಆದರೆ ಆತ ಬೆರಗಾಗಿ ನನ್ನೊಡನೆ ಅಂದ:

"ಎಂಥ ವಿಚಿತ್ರ ಜನ! ಇನ್ನೊಬ್ಬರ ವಿಷಯದಲ್ಲಿ ಇವರು ಯಾಕೆ ಕೈ ಹಾಕ್ಬೇಕೊಂತ? ಹೆಚ್ಚಿನ ಹಣ ತನಗೆ ಬೇಕಾಗಿಲ್ಲ ಅಂತ ಸ್ವತಃ ಅವಳೇ ಅಂದಳು. ನನಗಾದರೋ ಮೂರು ರೂಬಲುಗಳಿಂದ ಎಷ್ಟೋ ಅನುಕೂಲವಾಗ್ತದೆ."

ಹಣದ ಅಂದ ಚೆಂದವನ್ನು ನೋಡುವುದೇ ಅವನ ಪಾಲಿಗೊಂದು ದೊಡ್ಡ ತೃಪ್ತಿ—ಎಂದು ನನಗೆ ಅನಿಸುತ್ತಿತ್ತು. ಮಾತನಾಡುತ್ತಲಿದ್ದಾಗ, ಬೆಳ್ಳಿಯ ಇಲ್ಲವೆ ತಾಮ್ರದ ಒಂದು ನಾಣ್ಯವನ್ನು ಷರಾಯಿಯ ಮೇಲೆ ಆತ ತೀಡುತ್ತಿದ್ದ. ಬಳಿಕ, ಅದರ ಹೊಳಪನ್ನು ನೋಡಲೆಂದು ತನ್ನ ಮೊಂಡು ಮೂಗಿನೆದುರು ಅದನ್ನು ಹಿಡಿಯುತ್ತಿದ್ದ. ಆದರೆ ಅವನು, ದುರಾಶೆಯ ಮನುಷ್ಯನೇನೂ ಆಗಿರಲಿಲ್ಲ.

ಒಂದು ದಿನ ನನ್ನನ್ನು ಆತ ಇಸ್ಪೀಟು ಆಟಕ್ಕೆ ಕರೆದ. ಆ ಆಟ ನನಗೆ ಗೊತ್ತಿರಲಿಲ್ಲ.

ಅತ್ಯಾಶ್ಚರ್ಯದಿಂದ ಅವನೆಂದ:

"ಗೊತ್ತಿಲ್ಲ! ಯಾಕಪ್ಪಾ? ಅದರಲ್ಲೂ ಓದೋಕೆ ತಿಳಿದಿರೋ ಆಸಾಮಿ! ಹೂಂ. ನಾನು ನಿನಗೆ ಕಲಿಸಿಕೊಡ್ಬೇಕು. ಬಾ. ತಮಾಷೆಗೆ ಆಡೋಣ. ಸಕ್ಕರೇನ ಪಣವಾಗಿ ಇಡೋಣ."

ಅರ್ಧ ಪೌಂಡು ಗಟ್ಟಿ ಸಕ್ಕರೆಯನ್ನು ನನ್ನಿಂದ ಆತ ಜಯಿಸಿದ. ತುಣುಕು ತುಣುಕಾಗಿ ತನ್ನ ದವಡೆಯೊಳಕ್ಕೆ ಅದನ್ನು ತಳ್ಳಿದ. ಆಟ ನನಗೆ ತಿಳಿಯಿತು ಎನಿಸಿದಾಗ, ಅವನೆಂದ:

"ಈಗ ಸರಿಯಾಗಿ ಆಡೋಣ. ಹಣ ಇಟ್ಟು. ಇದೆಯೇನು ನಿನ್ನ ಹತ್ತಿರ?"

"ಐದು ರೂಬಲು ಇವೆ."

"ನನ್ನ ಹತ್ತಿರ ಎರಡೂ ಚಿಲ್ಲರೆ ಇರಬೇಕು."

ಸಹಜವಾಗಿಯೇ, ನನ್ನಲ್ಲಿದ್ದುದೆಲ್ಲವನ್ನೂ ಬೇಗನೆ ಆತ ಜಯಿಸಿದ. ಅದನ್ನು ಮರಳಿ ಪಡೆಯಲು ಬಯಸಿ, ನನ್ನ ಚಳಿಗಾಲದ ಕೋಟನ್ನು ಐದು ರೂಬಲುಗಳಿಗೆ ಪಣವಾಗಿಟ್ಟೆ: ಅದನ್ನೂ ಕಳೆದುಕೊಂಡೆ. ನನ್ನ ಹೊಸ ಬೂಟುಗಳನ್ನು ಮೂರು ರೂಬಲುಗಳಿಗೆಂದು ಇಟ್ಟೆ; ಅದನ್ನೂ ಕಳೆದುಕೊಂಡೆ. ಆಗ ಯಾಕೋವ್ ಅಸಹನೆಯಿಂದ-ಬಹಳಮಟ್ಟಿನ ಸಿಟ್ಟಿನಿಂದಲೇ- ಅಂದ:

"ಆಟ ಆಡೋಕೆ ಯೋಗ್ಯನಲ್ಲ ನೀನು. ಅತಿ ಜಂಭ ನಿನಗೆ. ನಿನ್ನ ಕೋಟು ಬೂಟುಗಳನ್ನು ವಾಪಸು ತಗೋ. ಇವು ನನಗೆ ಬೇಕಾಗಿಲ್ಲ. ಹಿಡಿ, ಇಲ್ಲಿವೆ. ನಿನ್ನ ಹಣವನ್ನೂ ತಗೋ. ನಾಲ್ಕು ರೂಬಲು. ನೀನು ಆಕ್ಷೇಪಿಸೋದಿಲ್ಲಾಂತಾದರೆ, ಒಂದು ನನಗೆ—ಪಾಠ ಹೇಳ್ಕೊಟ್ಟಿದ್ದಕ್ಕೆ."

ಅವನಿಗೆ ನಾನು ಬಹಳ ಋಣಿಯಾದೆ.

ಕೃತಜ್ಞತೆ ಸೂಚಿಸುವ ನನ್ನ ಮಾತಿಗೆ ಉತ್ತರವಾಗಿ ಅವನೆಂದ:

"ಉಗುಳು ಅದರ ಮೇಲೆ! ಆಟ ಅನ್ನೋದು ಬರೇ ಆಟ—ಅಂದರೆ, ತಮಾಷೆಗಾಗಿ. ಆದರೆ ನೀನು ಅದೊಂದು ಕದನವೇನೋ ಅನ್ನೋ ಹಾಗೆ ಧುಮುಕ್ತೀಯಾ. ಕದನದಲ್ಲೂ ಕೂಡಾ, ತಲೆ ಬಿಸಿ ಏರಿಸ್ಕೋಬೇಕು ಅನ್ನೋದೇನೂ ಇಲ್ಲ. ತಣ್ಣಗಿದ್ಕೊಂಡು ಬಿಗೀಬೇಕು. ಯಾತಕ್ಕೋಸ್ಕರ ಬಿಸಿಯಾಗ್ಬೇಕು, ಹೇಳು? ನೀನು ಚಿಕ್ಕವನು. ನಿನ್ನನ್ನು ನೀನೇ ಭದ್ರವಾಗಿ ಹಿಡಕೋಬೇಕು. ಒಂದುಸಲ ತಪ್ಪಿತು, ಐದುಸಲ ತಪ್ಪಿತು, ಏಳುಸಲ ತಪ್ಪಿತು-ಉಗುಳು ಅದರ ಮೇಲೆ! ಹಿಂದಕ್ಕೆ ಸರಿ, ತಣ್ಣಗಾಗು. ಪುನಃ ಶುರುಮಾಡು-ಆಟ ಆಡಬೇಕಾದ ರೀತಿ ಅದು."

ಅವನ ಬಗೆಗೆ ನನ್ನ ಒಲವು ಹೆಚ್ಚಾಗುತ್ತ ಹೋಯಿತು, ಒಮ್ಮೊಮ್ಮೆ ಕಡಮೆಯೂ ಆಯಿತು. ಕೆಲವೇಳೆ ಆತ ಮಾತನಾಡಿದಾಗ, ನನಗೆ ನನ್ನ ಅಜ್ಜಿಯ ನೆನಪಾಗುತ್ತಿತ್ತು. ನನ್ನನ್ನು ಆಕರ್ಷಣೆಗೆ ಗುರಿಮಾಡಿದ ದೊಡ್ಡದೇನೋ ಅಂಶ ಅವನಲ್ಲಿತ್ತು. ಆದರೆ, ಜನರನ್ನು ಕುರಿತಾದ ಉಪೇಕ್ಷೆಯ ದಪ್ಪಗಿನ ಪದರೊಂದು ಅವನನ್ನು ಆವರಿಸಿತ್ತು. ಅದು ಜೀವನದುದ್ದಕ್ಕೂ ಬಲಗೊಳ್ಳುತ್ತ ಬಂದ ಪದರು. ಅದನ್ನು ಕಂಡಾಗ ಮಾತ್ರ ನಾನು, ಅವನಿಂದ ಹಿಮ್ಮೆಟ್ಟುತ್ತಿದ್ದೆ.

ಒಂದುದಿನ ಸೂರ್ಯಾಸ್ತದ ಹೊತ್ತಿಗೆ, ದ್ವಿತೀಯ ವರ್ಗದ ಒಬ್ಬ ಪ್ರಯಾಣಿಕ—ಪರ್ಮ್ ನಗರದ ಗಾತ್ರದೇಹಿಯಾದ ಒಬ್ಬ ವರ್ತಕ—ಕುಡಿದು ಅಮಲೇರಿ ನೀರಿಗೆ ಬಿದ್ದುಬಿಟ್ಟ. ಚಡಪಡಿಸುತ್ತ ತೋಳುಗಳನ್ನು ಬೀಸುತ್ತಿದ್ದ ಆತನನ್ನು, ಹಡಗಿನ ಹಿಂಭಾಗದ ಕೆಂಪುಹಳದಿ ವರ್ಣರಂಜಿತ ನೀರಧಾರೆ ಹೊತ್ತೊಯ್ದಿತು. ಎಂಜಿನುಗಳನ್ನು ತಕ್ಷಣವೇ ನಿಲ್ಲಿಸಿ, ಹಡಗನ್ನು ಸ್ತಬ್ಧಗೊಳಿಸಲಾಯಿತು. ಹುಟ್ಟುಚಕ್ರಗಳು ಹುಚ್ಚುಹುಚ್ಚಾಗಿ ನೊರೆಯುಗುಳಿದುವು. ಸೂರ್ಯಾಸ್ತದಲ್ಲಿ, ನೆತ್ತರಿನ ಕೆಂಬಣ್ಣಕ್ಕೆ ತಿರುಗಿತ್ತು ನೊರೆ. ಕುದಿಯುತ್ತಿದ್ದ ಈ ರಕ್ತದಲ್ಲಿ, ಆಗಲೇ ದೂರ ಸರಿದಿದ್ದ ಕಪ್ಪು ದೇಹವೊಂದು ಚಡಪಡಿಸುತ್ತಿತ್ತು. ಹೃದಯಭೇದಕ ಚೀರಾಟ ಕೇಳಿಬಂತು ನೀರಿನಿಂದ. ಪ್ರಯಾಣಿಕರು ತಾವೂ ಬೊಬ್ಬಿಟ್ಟರು. ಒಬ್ಬರನ್ನೊಬ್ಬರು ತಳ್ಳುತ್ತ ಹಡಗಿನ ಹಿಂಭಾಗದಲ್ಲಿ ಮುತ್ತಿಕೊಂಡರು. ಮುಳುಗುತ್ತಿದ್ದ ಮನುಷ್ಯನ ಸ್ನೇಹಿತನೊಬ್ಬ ಹಡಗಿನ ಮೇಲಿದ್ದ. ಬೊಕ್ಕತಲೆಯ ನಸುಗೆಂಪು ಬಣ್ಣದ ಈತನಿಗೂ ಅಮಲೇರಿತ್ತು. ಜನಸಂದಣಿಯನ್ನು ಭೇದಿಸಿಕೊಂಡು ಬೊಬ್ಬಿಡುತ್ತ ಹಡಗಿನ ಅಂಚಿಗೆ ಆತ ಬಂದ.

"ಹಾದಿಬಿಡಿ! ಅವನನ್ನು ಹಿಡಕೋತೀನಿ."

ಹಡಗಿನ ನೌಕರರಿಬ್ಬರು ಆಗಲೇ ಪ್ರವಾಹಕ್ಕೆ ಧುಮುಕಿದ್ದರು. ಮುಳುಗುತ್ತಿದ್ದವನ ಕಡೆಗೆ ಈಸುತ್ತಿದ್ದರು. ಒಂದು ಲೈಫ್‌ಬೋಟನ್ನೂ—ಜೀವರಕ್ಷಣೆಯ ದೋಣಿಯನ್ನೂ—ಕೆಳಗಿಳಿಸಲಾಗುತ್ತಿತ್ತು. ಹಡಗಿನ ನೌಕರರ ಬೊಬ್ಬಾಟ, ಹೆಂಗಸರ ಚೀರಾಟ—ಇದನ್ನೆಲ್ಲ ಮೀರಿಸಿ, ಯಾಕೋವನ ಶಾಂತವಾದ ದಪ್ಪಗಂಟಲು ಕೇಳಿಸುತ್ತಿತ್ತು:

"ಕೋಟು ತೊಟ್ಕೊಂಡಿದಾನೆ ನೋಡಿ. ಆದ್ದರಿಂದ ಏನಿದ್ದರೂ ಅವನು ಮುಳುಗಿಯೇ

ಮುಳುಗ್ತಾನೆ. ಮೈಮೇಲೆ ಉದ್ದನೆಯ ಉಡುಪು ಇದ್ದರೆ ಮುಳುಗೋದು ಖಂಡಿತ. ಉದಾಹರಣೆಗೆ ಹೆಂಗಸರನ್ನೇ ತಗೊಳ್ಳಿ—ಯಾವಾಗಲೂ ಗಂಡಸರಿಗಿಂತ ಮುಂಚೆ ಅವರೇ ಯಾಕೆ ಮುಳುಗಿ ಹೋಗ್ತಾರೆ? ಅವರು ಲಂಗ ತೊಡೋದರಿಂದ. ಹೆಂಗಸು ನೀರಿಗೆ ಬಿದ್ದ ಕೂಡಲೇ ತೂಕದ ಕಲ್ಲಿನ ಹಾಗೆ ನೇರವಾಗಿ ತಳಕ್ಕೇ ಹೋಗ್ತಾಳೆ. ನೋಡಿ—ಅವನು ಮುಳುಗಿಯೇ ಹೋದ. ನಾನು ಏನು ಹೇಳಿದೆ ನಿಮಗೆ?"

ಆ ಮನುಷ್ಯ ನಿಜವಾಗಿಯೂ ಮುಳುಗಿ ಹೋಗಿದ್ದ. ಸುಮಾರು ಎರಡು ಘಂಟೆಗಳ ಕಾಲ ಆತನ ದೇಹಕ್ಕಾಗಿ ವ್ಯರ್ಥ ಶೋಧೆ ನಡಸಿದರು. ಈಗ ಅಮಲು ಇಳಿದಿದ್ದ ಅವನ ಸ್ನೇಹಿತ, ಹಡಗಿನ ಹಿಂಭಾಗದಲ್ಲಿ ಅತೀವ ಸಂಕಟ ಅನುಭವಿಸುತ್ತ ಕುಳಿತು ಗೊಣಗುತ್ತಿದ್ದ:

"ಏನಾಗ್ಹೋಯ್ತೂಂತ ನೋಡಿ! ಈಗೇನು ಮಾಡೋದು? ಅವನ ಸಂಬಂಧಿಕರಿಗೆ ನಾನೇನು ಹೇಳ್ಲಿ?—ಹ್ಞ? ಅವನ ಸಂಬಂಧಿಕರಿಲ್ಲದೇ ಹೋಗಿದ್ದರೆ...."

ಯಾಕೋವ್ ತನ್ನ ಕೈಗಳನ್ನು ಬೆನ್ನಹಿಂದೆ ಬಿಗಿದು, ಅವನೆದುರು ನಿಂತು, ಸಂತೈಸುವ ಮಾತನ್ನಾಡಿದ:

"ಯಾರೂ ಏನೂ ಮಾಡೋಹಾಗಿಲ್ಲ, ವರ್ತಕ! ತನ್ನ ಕೊನೆ ಯಾವ ರೀತಿ ಆಗ್ತದೇಂತ ಯಾರಿಗೂ ತಿಳೀದು. ಯಾವನೋ ಒಬ್ಬ ನಾಯಿಕೊಡೆ ತಿನ್ತಾನೆ—ಫ್ಯೂ!—ಸತ್ತೇ ಹೋಗ್ತಾನೆ! ಹೀಗೂ ಆಗ್ತದೆ. ಸಾವಿರಾರು ಜನ ನಾಯಿಕೊಡೆ ತಿಂದು ಆರೋಗ್ಯವಂತರಾಗ್ತಾರೆ—ಯಾವನೋ ಒಬ್ಬನಷ್ಟೇ ಸತ್ತು ಹೋಗ್ತಾನೆ. ಎಲ್ಲಾ ಮಾಡಿ, ನಾಯಿಕೊಡೇಲಿ ಇರೋದಾದರೂ ಏನು?"

ವಿಶಾಲವಾಗಿ, ರುಬ್ಬುಗುಂಡಿನ ಹಾಗೆ ಗಟ್ಟಿಮುಟ್ಟಾಗಿ, ಆ ವರ್ತಕನೆದುರು ಯಾಕ್ಹೋವ್ ನಿಂತ; ಹೊಟ್ಟಿನ ಹಾಗೆ ತನ್ನ ಮಾತುಗಳನ್ನು ಚೆಲ್ಲಿದ. ಆರಂಭದಲ್ಲಿ ಆ ವರ್ತಕ ಸದ್ದಿಲ್ಲದೆ ಅತ್ತ; ಅಗಲವಾದ ಅಂಗೈಯಿಂದ ತನ್ನ ಗಡ್ಡದ ಮೇಲಿನ ಕಣ್ಣೀರನ್ನು ಒರಸುತ್ತ ಅತ್ತ. ಆದರೆ ಯಾಕೋವನ ಮಾತುಗಳ ಅರ್ಥ ಮನವರಿಕೆಯಾದಂತೆ, ಗಟ್ಟಿಯಾಗಿ ರೋದಿಸತೊಡಗಿದ:

"ದೂರ ಹೋಗು, ಪಿಶಾಚಿಯೇ! ನನ್ನ ಆತ್ಮವನ್ನ ಯಾಕೆ ಹರಿದು ತೆಗೀತಿದೀಯಾ? ಓ ದೈವಭಕ್ತರೇ, ಇವನನ್ನು ಎಳಕೊಂಡು ಹೋಗಿ. ಇಲ್ಲದೇ ಹೋದರೆ, ಮುಂದಾಗೋದಕ್ಕೆ ನಾನು ಹೊಣೆಗಾರನಲ್ಲ!"

ಯಾಕೋವ್ ಶಾಂತವಾಗಿ ಹಿಂದಕ್ಕೆ ಸರಿಯುತ್ತ ನುಡಿದ:

"ಜನರು ನಿಜವಾಗಿಯೂ ತಮಾಷೆಯ ವ್ಯಕ್ತಿಗಳೇ ಸರಿ! ಮಾಡೋ ಪ್ರಯತ್ನ ಒಳ್ಳೇದಕ್ಕೆ—ಹೋಗೋದು ವಿಪರೀತಕ್ಕೆ."

ಉಗಿಕೆಲಸಗಾರ ಸರಳಮನಸ್ಕನೆಂದು ಕೆಲವೇಳೆ ನನಗೆ ಅನಿಸುತ್ತಿತ್ತು. ಆದರೆ, ಅದೆಲ್ಲ ಸೋಗೀ ನಟನೆ—ಎಂದು ಹೆಚ್ಚಿನ ಸಾರೆ ನನಗೆ ಭಾಸವಾಗುತ್ತಿತ್ತು. ಆತ ಹೋಗಿದ್ದ ಊರುಗಳ ಬಗೆಗೆ, ಕಂಡಿದ್ದ ವಸ್ತುಗಳ ಬಗೆಗೆ, ಕೇಳಿ ತಿಳಿಯಲು ನಾನು ಅತ್ಯಾತುರನಾಗಿದ್ದೆ. ಆದರೆ ಅವನಿಂದ ನನಗೆ ತೃಪ್ತಿ ದೊರಕಲೇ ಇಲ್ಲ. ತಲೆಯನ್ನು ಹಿಂದಕ್ಕೆಸೆದು, ಕಪ್ಪಗಿನ—ಕರಡಿಯಿರುವಂತಹ—ಕಣ್ಣುಗಳನ್ನು ಅರೆಮುಚ್ಚಿ, ಮಾಂಸ ತುಂಬಿದ ಮುಖವನ್ನು ತಟ್ಟುತ್ತ, ತನ್ನ ಅನುಭವಗಳ ಬಗೆಗೆ ನಿಧಾನವಾಗಿ ಅವನು ಆಡತೊಡಗುತ್ತಿದ್ದ:

"ಇರುವೆಗಳ ಹಾಗೆ ಜನರು ಎಲ್ಲೆಲ್ಲೂ ಇದಾರೆ, ತಮ್ಮಾ. ಇಲ್ಲಿಯೂ ಜನರು, ಅಲ್ಲಿಯೂ

ಜನರು—ಅವರದೇ ಗುಂಪುಗಳು. ಹೆಚ್ಚಾಗಿ ಇರುವವರು ರೈತರು ಅನ್ನು. ಶರತ್ಕಾಲದ ಎಲೆಗಳ ಹಾಗೆ ಭೂಮಿಯ ಮೇಲೆಲ್ಲಾ ಹರಡಿಕೊಂಡಿರ್ತಾರೆ ಇವರು. ಬಲ್ಗರ್ ಜನರೆ? ಬಲ್ಗರ್ ಜನರನ್ನೂ ನಾನು ನೋಡಿದೆ. ಗ್ರೀಕರನ್ನು ಕೂಡಾ. ಸರ್ಬರು, ರುಮಾನಿಯನ್ನರು, ವಿವಿಧ ಗಿಪ್ಸಿಗಳ ಎಲ್ಲಾ ಬಗೆಯವರು! ಅವರು ಹೇಗಿದ್ದರೂಂತಿಯಾ? ಹಂ—ಹೇಗಿರಬಹುದು ಅವರು? ಶಹರ ಗಳಲ್ಲಿ ಶಹರವಾಸಿಗಳು; ಹಳ್ಳಿಗಳಲ್ಲಿ ಹಳ್ಳಿಗರು. ನಮ್ಮವರಹಾಗೆಯೇ. ಬಹಳವೆಲ್ಲಾ ನಮ್ಮದೆ ಹೋಲಿಕೆ. ಕೆಲವರು ಮಾತನಾಡೋದು ಕೂಡಾ ನಮ್ಮ ಹಾಗೆಯೇ. ತೀರಾ ನಮ್ಮ ಹಾಗೆ ಅಲ್ಲ ಅನ್ನು. ಉದಾಹರಣೆಗೆ, ತಾತರರು ಅಥವಾ ಮೊರ್ಡೋವಿಯನ್ನರು. ಗ್ರೀಕರಿಗೆ ನಮ್ಮ ರೀ ಮಾತಾಡೋದಕ್ಕೆ ಬರದು. ತಲೆಗೆ ಬಂದದ್ದನ್ನೆಲ್ಲಾ ಹರಟ್ತಿರ್ತಾರೆ. ಪದಗಳ ಹಾಗೆ ಕೇಳಿಸ್ತದೆ ಆದರೆ, ವಿಷಯ ಏನೊಂತ ಹೇಳೋದು ಕಠಿನ. ಅವರ ಹತ್ತಿರ ಕೈಸನ್ನೆಯಿಂದ ಮಾತಾಡ್ಬೇಕಾ ಗ್ತದೆ. ನನ್ನ ಜತೆ ಇದ್ದ ಮುದುಕ, ಗ್ರೀಕರ ಮಾತೂ ತನಗೆ ಅರ್ಥವಾಗ್ತದೇಂತ ನಟಿಸ್ತಿದ್ದ 'ಕಲಮಾರಾ—ಕಲಮಾರೂ' ಅಂತ ಗಳಹ್ತಾ ಕೆಲಸ ಸಾಗಿಸ್ತಿದ್ದ! ಘಾಟೀ ಮುದುಕನೇ ಸರಿ ಅವರಿಗೆಲ್ಲಾ ಹೇಗೆ ಸಿಟ್ಟು ಬರಿಸ್ತಿದ್ದಾಂತ! ಏನೆಂದೆ? ಅವರು ಹೇಗಿದ್ದರೂಂತ ಪುನಃ ಕೇಳ್ತಿ ದ್ದೀಯಾ? ಚೆಪ್ಪೆ—ಅವರು ಹೇಗಿರೋದು ಸಾಧ್ಯ! ಬಣ್ಣ ಸಹಜವಾಗಿಯೇ ಕಡುಬಣ್ಣ ರುಮಾನಿಯನ್ನರದೂ ಕಡುಬಣ್ಣವೇ. ಅವರೆಲ್ಲಾ ಒಂದೇ ಧರ್ಮದವರು. ಬಲ್ಗರ್ ಜನರು ಕಡುಬಣ್ಣದವರು. ಅವರು ದೇವರನ್ನು ಪ್ರಾರ್ಥಿಸೋದು ನಮ್ಮ ಹಾಗೆಯೇ. ಗ್ರೀಕರು ಮಾತ್ರ ಟರ್ಕರ ಹಾಗೆ."

ಎಲ್ಲವನ್ನೂ ನನಗೆ ಆತ ಹೇಳುತ್ತಿಲ್ಲ; ಏನನ್ನೋ ಮರೆಮಾಚುತ್ತಿದ್ದಾನೆ—ಎಂದು ನನ ಅನಿಸುತ್ತಿತ್ತು.

ನಿಯತಕಾಲಿಕಗಳಲ್ಲಿದ್ದ ಚಿತ್ರಗಳಿಂದ, ಗ್ರೀಸಿನ ಮುಖ್ಯ ಪಟ್ಟಣವು, ಅಥೆನ್ಸ್ ಎಂ ಪುರಾತನವಾದ ಸುಂದರನಗರ ಎಂದು ನಾನು ಅರಿತಿದ್ದೆ. ಆದರೆ ಯಾಕೋವ್, ಸಂದೇಹದಿಂ ತಲೆಯಲುಗಿಸುತ್ತ ಅದನ್ನು ಅಲ್ಲಗಳೆದ.

"ಪತ್ರಿಕೆಗಳಲ್ಲಿದ್ದದ್ದು ಸುಳ್ಳು, ತಮ್ಮ. ಅಥೆನ್ಸ್ ಅನ್ನೋದು ಇಲ್ಲ. ಅಥೊನ್ ಅನ್ನೋದ ಮಾತ್ರ ಇದೆ. ಇದು ಶಹರವಲ್ಲ. ಸನ್ಯಾಸಿಗಳ ಮಠವಿರೋ ಒಂದು ಗುಡ್ಡ. ಅಷ್ಟೇ. ಅದನ ಅಥೊನಿನ ಪವಿತ್ರ ಪರ್ವತ ಅಂತ ಕರೀತಾರೆ. ಅದರ ಚಿತ್ರಗಳಿವೆ. ಮುದುಕ ಅವನ್ನು ಮಾರ ತ್ತಿದ್ದ. ದಾನ್ಯೂಬ್ ನದೀ ದಂಡೆಯಲ್ಲಿ ಬೆಲ್ಗ್ರೊರೊಡ್ ಅಂತ ಒಂದು ಶಹರ ಇದೆ ಯಾರೊಸ್ಲಾವ್ಲ್ ಅಥವಾ ನಿಜ್ನಿಯನ್ನು ಹೋಲ್ತದೆ. ಅಷ್ಟೇನೂ ಚೆನ್ನಾಗಿಲ್ಲ ಅವರ ಶಹರಗಳು ಆದರೆ ಅವರ ಗ್ರಾಮಗಳ ವಿಷಯ ಬೇರೆ. ಅವರ ಹೆಂಗಸರೂ ಕೂಡಾ,—ಜೋರಾಗಿರ್ತಾರೆ ಮಾತಿನಲ್ಲಿ ಬಣ್ಣಿಸೋದು ಸಾಧ್ಯವಿಲ್ಲ. ಅಂಥವಳೊಬ್ಬಳಿಂದಾಗಿ ನಾನು ಅಲ್ಲೇ ಉಳಿದ ಬಿಡ್ತೇನೇನೋ ಅನ್ನೋ ಹಾಗಾಯ್ತು. ಏನಪ್ಪ ಅವಳ ಹೆಸರು?"

ತನ್ನ ಅಂಗೈಗಳನ್ನು ಆತ ಭರದಿಂದ ಮುಖದ ಮೇಲೆ ತೀಡಿದ. ಆತನ ಗಡ್ಡ ಮೃದುವಾ ನುರಿನುರಿ ಸಪ್ಪಳಮಾಡಿತು. ಒಡಕು ಘಂಟೆಯ ಸಪ್ಪಳದ ಹಾಗೆ, ಗಂಟಲಿನ ಆಳದಲ್ಲೆಲ್ಲಿಂದಲೋ ಕಿಸುನಗೆ ಕೇಳಿಬಂತು.

"ಹೇಗೆ ಮರೆತುಹೋಗದೇಂತ! ಎಷ್ಟು ಅನ್ಯೋನ್ಯವಾಗಿದ್ದೆವು ಆಕೆಯೂ ನಾನೂ..

ವಿದಾಯದ ನಮಸ್ಕಾರ ನಾನು ಹೇಳಿದಾಗ ಅವಳು ಅತ್ತುಬಿಟ್ಲು; ನಾನೂ ಅತ್ತೆ—ನಂಬಿದರೆ ನಂಬು ಬಿಟ್ಟರೆ ಬಿಡು...."

ಹೆಂಗಸರೊಡನೆ ಹೇಗೆ ನಡೆದುಕೊಳ್ಳಬೇಕೆಂದು ಶಾಂತವಾದ ನಿರ್ಲಜ್ಜತನದಿಂದ ನನಗೆ ಆತ ಕಲಿಸತೊಡಗಿದ.

ಹಡಗಿನ ಹಿಂಭಾಗದಲ್ಲಿ ನಾವು ಕುಳಿತಿದ್ದೆವು. ಶೀತಲವಾಗಿರದ, ತಿಂಗಳ ಬೆಳಕಿದ್ದ, ಇರುಳು, ನಮ್ಮನ್ನು ಸಂಧಿಸಲೆಂದು ತೇಲಿಬರುತ್ತಿತ್ತು. ಎಡಕ್ಕಿದ್ದ ಹುಲ್ಲುಗಾವಲುಗಳು ಬೆಳ್ಳಿ ನೀರಿನಾಚೆಗೆ ಕಾಣಿಸುತ್ತಲೇ ಇರಲಿಲ್ಲ. ಬಲಕ್ಕಿದ್ದ ಗುಡ್ಡದ ಬದಿಗಳಲ್ಲಿ ಮಿಣಿಮಿಣಿ ಹಳದಿ ದೀಪಗಳು ಬಂಧಿತನಕ್ಷತ್ರಗಳ ಹಾಗೆ ಚೆಲ್ಲಿಕೊಂಡಿದ್ದುವು. ಪ್ರತಿಯೊಂದೂ ಚಲಿಸುತ್ತಿತ್ತು. ಜಾಗೃತ ಸ್ಪಂದನವಿತ್ತು ಎಲ್ಲದರಲ್ಲೂ. ಶಾಂತವಾದ—ಆದರೆ ಗಾಢವಾದ—ಬದುಕಿನ ಉಸಿರಾಟ ವಿತ್ತು. ಮಧುರವಾದ ಚಿಂತಾಗ್ರಸ್ತವಾದ ಆ ಮೌನವನ್ನಿರಿದು ಅವನ ದಪ್ಪಗಂಟಲ ಮಾತುಗಳು ಕೆಳಕ್ಕೆ ಬೀಳುತ್ತಿದ್ದುವು.

ಎಚ್ಚರವಾದ ಹಾಗೆ ತೋಳುಗಳನ್ನು ಮುಂದಕ್ಕೆ ಚಾಚುತ್ತಿದ್ಲು...."

ಯಾಕೋವನ ಕಥೆ ನಿರ್ಲಜ್ಜವಾಗಿರುತ್ತಿತ್ತು. ಆದರೆ ಅಸಹ್ಯವೆನಿಸುತ್ತಿರಲಿಲ್ಲ. ಅದರಲ್ಲಿ ಬಡಿವಾರವಿರಲಿಲ್ಲ, ಕ್ರೌರ್ಯವಿರಲಿಲ್ಲ, ಸ್ವಾರಸ್ಯವೂ ಇರಲಿಲ್ಲ. ತಾಯ್ನಾಡಿನ ಹಂಬಲವಿರುತ್ತಿತ್ತು ಸ್ವಲ್ಪಮಟ್ಟಿಗೆ. ಮೇಲೆ ಆಕಾಶದಲ್ಲಿ, ಚಂದ್ರನ ನಗ್ನತೆ ಅಷ್ಟೇ ನಿರ್ಲಜ್ಜವಾಗಿತ್ತು. ಅದೇ ಬಗೆಯ ವೇದನೆಯನ್ನು ನನ್ನೊಳಗೂ ಅದು ಕೆರಳಿಸಿತು. ಒಳ್ಳೆಯ ಸಂಗತಿಗಳನ್ನಷ್ಟೇ—ಅತ್ಯು ತ್ತಮ ಸಂಗತಿಗಳನಷ್ಟೇ—ನಾನು ನೆನಪಿಡುತ್ತಿದ್ದೆ: ಮಾರ್ಗೊಟ್ ರಾಣಿ; ತಮ್ಮ ಸತ್ಯತೆಯ ಕಾರಣದಿಂದ ಎಂದೂ ಮರೆಯಲಾಗದಂತಹ ಸಾಲುಗಳು—

ಹಾಡಷ್ಟೇ ಬೇಡುವುದು ಸೊಬಗನು
ಸೊಬಗು ಬೇಡುವುದಿಲ್ಲ ಹಾಡನು

ಜೊಂಪನ್ನು ಝಾಡಿಸುವಂತೆ ನನ್ನ ಧ್ಯಾನಮಗ್ನತೆಯ ಪರೆ ಕಳಚಿ, ತನ್ನ ಬದುಕಿನ ಬಗೆಗೆ ತಾನು ಕಂಡುದರ ಬಗೆಗೆ ಹೇಳುವಂತೆ, ಯಾಕೋವನನ್ನು ಪುನಃ ನಾನು ಆಗ್ರಹಪಡಿಸಿದೆ.

ಅವನೆಂದ:

"ವಿಚಿತ್ರ ಹಕ್ಕಿ ನೀನು. ಏನು ಹೇಳಲಪ್ಪ ನಿನಗೆ? ನಾನು ಎಲ್ಲವನ್ನೂ ನೋಡಿದೀನಿ. ಸನ್ಯಾಸಿ ಮಠವೆ? ಹೂಂ. ಸನ್ಯಾಸಿ ಮಠವನ್ನೂ ನೋಡಿದೀನಿ. ಸಾರ್ವಜನಿಕ ಪಾನಮಂದಿರವೆ? ಹೂಂ. ಅದನ್ನೂ ನೋಡಿದೀನಿ. ಸುಶಿಕ್ಷಿತ ಶ್ರೀಮಂತರ ಜೀವನವನ್ನೂ ಕಂಡಿದೀನಿ; ರೈತರ ಬದುಕನ್ನೂ ಕಂಡಿದೀನಿ. ನಾನು ಕೈ ತುಂಬ ಇದ್ದವನೂ ಆಗಿದ್ದೆ; ಬರಿಗೈಯವನೂ ಆಗಿದ್ದೆ."

ನಿಧಾನವಾಗಿ, ಆಳವಾದ ಪ್ರವಾಹದ ಮೇಲಣ ಮುರುಕಲು ಸೇತುವೆಯನ್ನು ದಾಟುತ್ತಿರು ವನೇನೋ ಎನ್ನುವಂತೆ, ಗತಕಾಲವನ್ನು ಆತ ಸ್ಮರಿಸಿಕೊಳ್ಳುತ್ತಿದ್ದ:

"ಉದಾಹರಣೆಗೆ ಇದೊಂದು: ಕುದುರೆ ಕದ್ದೆ ಅಂತ ಲಾಕಪ್ಪಿನಲ್ಲಿ ನಾನಿದೀನಿ. ಈ ಸಲ ಸೈಬೀರಿಯಕ್ಕೆ ಗಡೀಪಾರಾಗೋದೇ ಖಂಡಿತ ಅಂತ ಯೋಚಿಸ್ತಿದೀನಿ. ಎದುರಿಗಿರೋ ಪೋಲೀಸ್ ಅಧಿಕಾರಿ, ಹೊಗೆ ಬರ್‍ತಿದೇಂತ ತನ್ನ ಹೊಸ ಮನೆಯಲ್ಲಿರೋ ಒಲೆಗಳಿಗೆ ಹಿಡಿಶಾಪ ಹಾಕ್ತಿದಾನೆ.

ನಾನು ಅನ್ನೀನಿ ಅವನಿಗೆ: 'ನಿಮಗೋಸ್ಕರ ಅದನ್ನು ಸರಿಪಡಿಸಿಕೊಡಬಲ್ಲೆ, ಮಹಾಪ್ರಭು.' ಅವನೋ, ನನ್ನ ಮೇಲೆ ಹರಿಹಾಯ್ತಾನೆ. 'ನಾಲಿಗೆ ಬಿಗಿಹಿಡಿ! ಶಹರದಲ್ಲಿರೋ ಶ್ರೇಷ್ಠತಮ ಒಲೆ ಕೆಲಸಗಾರನಿಂದ ಅವನ್ನು ಸರಿಪಡಿಸೋದು ಸಾಧ್ಯವಾಗಿಲ್ಲ!' ಆದರೆ ನಾನು ಹೇಳ್ತೇನೆ: ಕೆಲಸಾರೆ ದೊರೆಗಿಂತ ಬೆಪ್ಪುತಕ್ಕಡಿಯೇ ಹೆಚ್ಚು ಚುರುಕಾಗಿರ್ತಾನೆ.' ಸೈಬೀರಿಯಾ ನನ್ನನ್ನು ಅಣಕಿಸ್ತಿತ್ತೂಂತ ಅಷ್ಟೊಂದು ಧೈರ್ಯ ಬಂದಿತ್ತು ನನಗೆ. ಅವನೆಂದ: 'ಆಗಲಿ, ಪ್ರಯತ್ನ ಮಾಡಿ ನೋಡು. ಆದರೆ, ಕೆಲಸ ಮುಗಿದ ಮೇಲೆ ಹೊಗೆ ಎಲ್ಲಾದರೂ ಹೆಚ್ಚಾದರೆ, ನಿನ್ನನ್ನು ಗುದ್ದಿ ಮುದ್ದೆ ಮಾಡ್ತೀನಿ,' ಸರಿ. ಎರಡು ದಿನಗಳಲ್ಲಿ ಒಲೆಗಳು ದುರಸ್ತಿಯಾದುವು. ಇದನ್ನು ಸಹಿಸಿಕೊಳ್ಳೋದು ಕಷ್ಟವಾಯ್ತು ಪೋಲೀಸ್ ಅಧಿಕಾರಿಗೆ. ಪುನಃ ನನ್ನ ಮೇಲೆ ಎಗರ್ತಾನೆ ಆತ: 'ಬೆಪ್ಪ! ಮೂರ್ಖ ಶಿಖಾಮಣಿ! ನಿನ್ನಂಥ ನಿಷ್ಣಾತ ಕೆಲಸಗಾರ ಕುದುರೆ ಕದಿಯೋದು! ಇದಕ್ಕೆ ಏನು ಕಾರಣ ಕೊಡ್ತೀಯಾ ನೀನು?' ನಾನು ಅನ್ತೇನೆ ಅದಕ್ಕೆ: 'ಬರೇ ನನ್ನ ಮೂರ್ಖತನ, ಮಹಾಪ್ರಭು.' ಅವನು ಹೇಳ್ತಾನೆ: 'ನೀನು ಹೇಳೋದು ಸರಿ. ಬರೇ ಮೂರ್ಖತನ. ಎಂಥ ಅನ್ಯಾಯ! ನಿನ್ನ ವಿಷಯದಲ್ಲಿ ನನಗೆ ಕನಿಕರ ಅನಿಸುತ್ತೆ,' ಕೇಳಿಸ್ತೆ? ಒಬ್ಬ ಪೋಲೀಸ್ ಅಧಿಕಾರಿ. ಮೃದುವಾಗಿರೋದಕ್ಕೆ ಅಂಥವರಿಗೆ ಹಕ್ಕಿಲ್ಲ. ಆದರೂ ಆತ ನನ್ನ ವಿಷಯದಲ್ಲಿ ಕನಿಕರ ವ್ಯಕ್ತಿಮಾಡಿದ."

"ಹುಂ. ಮುಂದೇನು?" ಎಂದು ನಾನು ಕೇಳಿದೆ.

"ಏನೂ ಇಲ್ಲ. ಬರೇ ಕನಿಕರ ವ್ಯಕ್ತಮಾಡಿದ. ಬೇರೇನು ಬೇಕು ನಿನಗೆ?"

"ನಿನ್ನ ವಿಷಯದಲ್ಲಿ ಯಾಕೆ ಕನಿಕರಿಸಬೇಕು ಆತ? ಬಂಡೆಕಲ್ಲಿನ ಹಾಗೆ ಬಲಿಷ್ಠವಾಗಿದೀಯ ನೀನು."

ಯಾಕೋವ್ ಮನಃಪೂರ್ವಕವಾಗಿ ನಕ್ಕ.

"ಎಂಥ ವಿಚಿತ್ರ ಹಕ್ಕಿ ನೀನು! ಬಂಡೆಕಲ್ಲು ಅಂದಿಯಾ? ಬಂಡೆಕಲ್ಲನ್ನು ಕೂಡಾ ಗೌರವಿಸ್ಬೇಕು. ಬಂಡೆಕಲ್ಲಿಗೆ ತಾನು ಮಾಡಬೇಕಾದ ಸ್ವಂತದ ಕೆಲಸವಿದೆ. ರಸ್ತೆಗಳಿಗೆ ಹಾಸೋದಕ್ಕೆ ಬಳಸೋದು ಕಲ್ಲುಗಳನ್ನೇ. ಪ್ರತಿಯೊಂದನ್ನೂ ಗೌರವಿಸಬೇಕು. ಪ್ರತಿಯೊಂದಕ್ಕೂ ಅದರ ಪ್ರಯೋಜನ ಇದೆ. ಮರಳನ್ನು ತಗೋ. ಮರಳಿಗೇನು ಬೆಲೆ? ಆದರೂ ಅದರೊಳಗಿಂದ ಹುಲ್ಲು ಬೆಳೀತದೆ."

ಅಂತಹ ವಿಷಯಗಳನ್ನು ಆತ ಹೇಳಿದಾಗಲೆಲ್ಲ, ನನ್ನ ತಿಳಿವಳಿಕೆಗೂ ಮೀರಿದ ಜ್ಞಾನ ಅವನಲ್ಲಿತ್ತೆಂದು ನನಗೆ ವಿಶೇಷವಾಗಿ ಸ್ಪಷ್ಟವಾಗುತ್ತಿತ್ತು.

"ಅಡುಗೆಯವನ ವಿಷಯ ನಿನಗೆ ಏನು ಅನಿಸುತ್ತೆ?" ಎಂದು ನಾನು ಆತನನ್ನು ಕೇಳಿದೆ.

ಯಾಕೋವ್ ಅಲಕ್ಷ್ಯಭಾವದಿಂದ ಪ್ರತಿಯಾಗಿ ಪ್ರಶ್ನಿಸಿದ:

"ಯಾರು—ಕರಡಿ ಬೊಂಬೆಯೆ? ಅವನ ವಿಷಯ ನನಗೆ ಏನು ಅನಿಸಬಹುದು? ಅನಿಸೋದಕ್ಕೆ ಏನೂ ಇಲ್ಲ."

ಅದು ನಿಜವಾಗಿತ್ತು. ಬಹಳ ನಯವಾದ ಸರಿಸಮನಾದ ಮನುಷ್ಯ ಇವಾನ್ ಇವಾನೋವಿಚ್. ಅವನನ್ನು ಕುರಿತ ಯೋಚನೆಗಳು ಅಂಟಿಕೊಳ್ಳೋದಕ್ಕೆ, ಅವನಲ್ಲಿ ಏನೂ ಇರಲಿಲ್ಲ. ಅವನಲ್ಲಿ, ಸ್ವಾರಸ್ಯದ್ದೆಂದು ನನಗೆ ಅನಿಸಿದ ವಿಷಯ ಒಂದೇ ಒಂದು: ಈ ಉಗಿಕೆಲಸಗಾರನನ್ನು ಆತ ಇಷ್ಟ

ಪಡುತ್ತಿರಲಿಲ್ಲ; ಯಾವಾಗಲೂ ಅವನ ಮೇಲೆ ರೇಗಾಡುತ್ತಲೇ ಇರುತ್ತಿದ್ದ. ಇಷ್ಟಿದ್ದರೂ, ಚಹಾ ಪಾನಕ್ಕೆ ಮಾತ್ರ ಯಾವಾಗಲೂ ಆತನನ್ನು ಕರೆಯುತ್ತಿದ್ದ.

ಒಂದು ದಿನ ಯಾಕೋವನಿಗೆ ಅವನೆಂದ:

"ನಮ್ಮಲ್ಲಿನ್ನೂ ಗುಲಾಮಪದ್ಧತಿ ಇದ್ದು, ನಾನು ನಿನ್ನ ಒಡೆಯನಾಗಿದ್ದಿದ್ದರೆ, ವಾರಕ್ಕೆ ಏಳುದಿನ ನಿನ್ನ ಚರ್ಮಸುಲೀತಿದ್ದೆ—ಪೋಲಿ!"

"ವಾರಕ್ಕೆ ಏಳುದಿನ ಸ್ವಲ್ಪ ಹೆಚ್ಚಾಯ್ತು," ಎಂದು ಯಾಕೋವ್ ಗಭೀರನಾಗಿ ಮಾರುತ್ತರ ವಿತ್ತ.

ಎಡೆಬಿಡದೆ ಬಯ್ಯುವುದು ಒತ್ತಟ್ಟಿಗಿದ್ದರೂ ಅಡುಗೆಯವನು ಆತನಿಗೆ ಯಾವುದೋ ಕಾರಣ ಕ್ಕಾಗಿ ತಿಂಡಿತಿನಿಸು ಕೊಡುತ್ತಲೇ ಇದ್ದ. ತಿನ್ನಲೆಂದು ಏನನ್ನಾದರೂ ಕೊಟ್ಟು ಅನ್ನುತ್ತಿದ್ದ:

"ತಗೋ, ಹೊಟ್ಟೆಬಾಕ!"

ತಿನಿಸನ್ನ ಯಾವ ಅವಸರವೂ ಇಲ್ಲದೆ ಜಗಿಯುತ್ತ ಯಾಕೋವನೆನ್ನುತ್ತಿದ್ದ:

"ಇವಾನ್ ಇವಾನೋವಿಶ್, ನಿನ್ನ ಉಪಕಾರದಿಂದ ಎಷ್ಟೋ ಶಕ್ತೀನ ಶೇಖರಿಸಿ ಇಡ್ತಿ ದೀನಪ್ಪ."

"ಅಷ್ಟೆಲ್ಲಾ ಶಕ್ತಿ ಇಟ್ಕೊಂಡು ನಿನಗೆ ಬೇಕಾಗಿರೋದೇನು, ಸೋಮಾರಿ?"

"ಯಾಕೆ ಹಾಗಂತೀಯಾ? ಮುಂದೆ ಇನ್ನೂ ಎಷ್ಟೋ ವರ್ಷ ನಾನು ಬದುಕೋದಿದೆ."

"ಯಾತಕ್ಕೋಸ್ಕರ ನೀನು ಬದುಕಿರಬೇಕು, ಮುದಿಪಿಶಾಚಿ?"

"ಪಿಶಾಚಿಗಳು ಬದುಕಬೇಕು ಅನ್ತವೆ. ಅಥವಾ, ಬದುಕೋದರಲ್ಲಿ ಏನೂ ಸ್ವಾರಸ್ಯ ನಿನಗೆ ಅನಿಸೋದೇ ಇಲ್ಲವೋ ಹೇಗೆ? ಬದುಕು ತಮಾಷೆಯಾಗಿರ್ತದೆ, ಇವಾನ್ ಇವಾನೋವಿಶ್."

"ಶುದ್ಧ ಮೂರ್ಖ ನೀನು!"

"—ದ್ಧಮೂರ್ಖ?"

"ಶುದ್ಧ ಮೂರ್ಖ!"

"ಯಾವ ಪದವಪ್ಪ ಅದು?" ಎಂದು ಯಾಕೋವ್ ಅತ್ಯಾಶ್ಚರ್ಯದಿಂದ ಕೇಳಿದ.

ಕರಡಿಬೊಂಬೆ ನನ್ನೊಡನೆ ಅಂದ:

"ಹೇಗಿದೆ ನೋಡಿದಿಯಾ? ನೀನೂ ನಾನೂ ಈ ಸುಡುಗಾಡು ಒಲೆಗಳ ಮೇಲೆ ಬೆವರು ಸುರಿಸ್ಕೊಂಡು ಬೆಂದ್ಕೊಂಡು ಸಾಯ್ತಿರ್ತೀವಿ. ಈತ ಸುಮ್ಮನೆ ಕೂತ್ಕೊಂಡು ಹಂದಿಯ ಹಾಗೆ ಜಗೀತಾ ಇರ್ತಾನೆ."

ನಿಶ್ಚಿಂತನಾಗಿಯೇ ಉಳಿದು ತಿನಿಸನ್ನು ಜಗಿಯುತ್ತ ಉಗಿಕೆಲಸಗಾರನೆಂದ:

"ಯಾರ ಯಾರ ವಿಧಿ ಹೇಗೆ ಹೇಗೆ ಇದೆಯೋ ಹಾಗಪ್ಪ."

ಒಲೆಗಳ ಬಳಿ ನಿಲ್ಲುವುದಕ್ಕಿಂತಲೂ ಕುಲಿಮೆಗಳಿಗೆ ಇದ್ದಿಲು ಹಾಕುವುದು, ಹೆಚ್ಚು ಉಷ್ಣದ ಹೆಚ್ಚು ಶ್ರಾಖದ ಕೆಲಸವೆಂಬುದು ನನಗೆ ಗೊತ್ತಿತ್ತು. ಒಂದು ಸಲವೋ ಎರಡು ಸಲವೋ ಯಾಕೋವನ ಪಕ್ಕದಲ್ಲಿ ನಿಂತು ಆ ಕೆಲಸಮಾಡಲು ನಾನು ಯತ್ನಿಸಿದ್ದೆ. ತನ್ನ ಉದ್ಯೋಗವೇ ಹೆಚ್ಚು ಕಷ್ಟದ್ದೆಂದು ಆತ ಯಾಕೆ ಒತ್ತಾಯಿಸಿ ನುಡಿಯಲಿಲ್ಲವೆಂಬುದು, ನನಗೆ ಅರ್ಥವಾಗಲೇ ಇಲ್ಲ. ಅವನ ಈ ಧೋರಣೆ, ಯಾವುದೋ ವಿಶೇಷ ಜ್ಞಾನ ಆತನಲ್ಲಿದೆ ಎಂಬ ನಂಬುಗೆಯನ್ನು

ಮತ್ತಷ್ಟು ದೃಢಪಡಿಸಿತು.

ಎಲ್ಲರೂ ಅವನನ್ನು ದೂರುತ್ತಿದ್ದರು. ಕಪ್ತಾನ, ಯಂತ್ರಜ್ಞ, ಹಾಯಿ ಅಧಿಕಾರಿ—ಆತನೊಡನೆ ಯಾವುದೇ ಬಗೆಯ ಸಂಪರ್ಕವಿದ್ದ ಎಲ್ಲರೂ—ಅವನನ್ನು ದೂರುತ್ತಿದ್ದರು. ಅವನನ್ನೇಕೆ ಕೆಲಸದಿಂದ ಅವರು ತಳ್ಳಿ ಹಾಕಿಲ್ಲವೆಂದು ನಾನು ಅಚ್ಚರಿಪಡುತ್ತಿದ್ದೆ. ಬೇರೆ ಉಗಿಕೆಲಸಗಾರರು ಮಾತ್ರ, ಇವನ ವಾಚಾಳಿತನವನ್ನೂ ಇಸ್ಪೀಟು ಚಟವನ್ನೂ ಛೇಡಿಸುತ್ತಿದ್ದರೂ, ಅವನ ಬಗೆಗೆ ಹೆಚ್ಚು ದಯಾಪರರಾಗಿ ನಡೆದುಕೊಳ್ಳುತ್ತಿದ್ದರು.

ಒಮ್ಮೆ ಅವರನ್ನು ನಾನು ಕೇಳಿದೆ:

"ಯಾಕೋವ್ ಒಳ್ಳೇ ಮನುಷ್ಯನೇನು ?"

"ಯಾಕೋವ್ ? ಅವನು ಪರವಾಗಿಲ್ಲ. ಯಾವತ್ತೂ ಸಿಟ್ಟಾಗಿ ಹರಿಹಾಯೋದಿಲ್ಲ. ಅವನ ವಿಷಯದಲ್ಲಿ ಮನಸ್ಸಿಗೆ ಬಂದದ್ದನ್ನು ನಾವು ಮಾಡಬಹುದು. ಬೇಕಾದರೆ ನಿಗಿನಿಗಿ ಇದ್ದಿಲನ್ನು ಅವನ ಗಂಟಲಿನ ಕೆಳಕ್ಕೆ ತಳ್ಳಲೂಬಹುದು."

ಕುಲಿಮೆಗಳ ಬಳಿ ಪರಿಶ್ರಮದ ದುಡಿಮೆ ಇದ್ದರೂ ಕೂಡಾ, ನಾಲಿಗೆಯ ರುಚಿ ಅಗಾಧವಾಗಿದ್ದರೂ ಕೂಡಾ, ಉಗಿಕೆಲಸಗಾರ ಬಹಳ ಕಡಮೆ ನಿದ್ದೆ ಮಾಡುತ್ತಿದ್ದ. ತನ್ನ ಪಾಳಿ ಮುಗಿದೊಡನೆಯೇ, ಮಲಿನವಾದ ಬೆವರು ಸುರಿಸುವ ಶರೀರದೊಡನೆ, ಎಷ್ಟೋ ವೇಳೆ ಉಡುಪನ್ನು ಕೂಡಾ ಬದಲಿಸದೆಯೇ, ಡೆಕ್ಕಿನ ಮೇಲೆ ಕಾಣಿಸಿಕೊಳ್ಳುತ್ತಿದ್ದ. ರಾತ್ರೆಯೆಲ್ಲಾ, ಪ್ರಯಾಣಿಕರ ಜತೆ ಮಾತನಾಡುತ್ತಲೋ ಇಸ್ಪೀಟು ಆಡುತ್ತಲೋ ಕುಳಿತು ಬಿಡುತ್ತಿದ್ದ.

ನನ್ನ ಪಾಲಿಗೆ ಆತ, ಕೀಲಿ ಹಾಕಿದ ಕಪಾಟ. ಅತ್ಯಗತ್ಯವಾದುದೇನನ್ನೋ ಅದರಲ್ಲಿ ಅವನು ಬಚ್ಚಿಟ್ಟಿದ್ದಂತೆ ನನಗೆ ಅನಿಸುತ್ತಿತ್ತು. ನಾನು ಹಟತೊಟ್ಟು, ಆ ಕಪಾಟವನ್ನು ತೆರೆಯಲು ಬೇಕಾದ ಕೀಲಿಕೈಯನ್ನು ಹುಡುಕಿದೆ.

ತನ್ನ ಹುಬ್ಬುಗಳ ಕೆಳಗೆ ಬಹಳ ಆಳದಲ್ಲಿ ಅವಿತುಕೊಂಡಿದ್ದ ಕಣ್ಣುಗಳಿಂದ ನನ್ನನ್ನೇ ಈಕ್ಷಿಸುತ್ತ ಅವನೆಂದ:

"ಸುಡುಗಾಡು ಅದೇನನ್ನು ನೀನು ಹುಡುಕ್ತಿದೀಯೋ ನನಗೆ ಅರ್ಥವಾಗ್ತಿಲ್ಲ, ತಮ್ಮ. ಪ್ರಪಂಚದ ವಿಷಯ ಕೇಳಬೇಕು ಅಂತೀಯೇನು ? ಪ್ರಪಂಚವೆಲ್ಲಾ ನಾನು ಸುತ್ತಾಡಿರೋದು ನಿಜ. ಆದರೆ ಅದರಿಂದೇನು ? ನೀನು ವಿಚಿತ್ರ ಹಕ್ಕಿಯೇ ಸರಿ ! ಹೂಂ. ಒಂದು ದಿನ ನನಗೆ ಏನಾಯಿತು ಅನ್ನೋದನ್ನು ಕೇಳು."

ಈ ಕೆಳಗಿನ ಕತೆಯನ್ನು ಆತ ನನಗೆ ಹೇಳಿದ:

ಹಿಂದೊಮ್ಮೆ ಸಣ್ಣದೊಂದು ಪಟ್ಟಣದಲ್ಲಿ, ಯುವಕನಾದೊಬ್ಬ ಕ್ಷಯಪೀಡಿತ ನ್ಯಾಯಾಧೀಶನಿದ್ದ. ಅವನಿಗೆ ಆರೋಗ್ಯವಂತಳಾದ ಜರ್ಮನ್ ಹೆಂಡತಿಯಿದ್ದಳು. ಮಕ್ಕಳಿಲ್ಲದ ಹೆಂಗಸು ಆಕೆ. ಅಲ್ಲೊಬ್ಬ ವ್ಯಾಪಾರಿಯಿದ್ದ. ಅವನ ಸುಂದರಿ ಹೆಂಡತಿ ಮೂರು ಮಕ್ಕಳನ್ನು ಹೆತ್ತಿದ್ದಳು. ಆ ವ್ಯಾಪಾರಿಯಲ್ಲಿ ನ್ಯಾಯಾಧೀಶನ ಪತ್ನಿ ಅನುರಕ್ತೆಯಾದಳು. ಇದನ್ನು ಗಮನಿಸಿದ ವ್ಯಾಪಾರಿ, ಆಕೆಯನ್ನು ಪರಿಹಾಸ್ಯಕ್ಕೆ ಈಡುಮಾಡಲು ನಿರ್ಧರಿಸಿದ. ರಾತ್ರೆಹೊತ್ತು ಉದ್ಯಾನದಲ್ಲಿ ತನ್ನನ್ನು ಸಂಧಿಸಬೇಕೆಂದು ಆತ ಅವಳನ್ನು ಆಹ್ವಾನಿಸಿದ; ಪೊದೆಗಳ ಮರೆಯಲ್ಲಿ ತನ್ನ ಇಬ್ಬರು ಸ್ನೇಹಿತರನ್ನು ಬಚ್ಚಿಟ್ಟ.

"ಭಾರೀ ಪರಿಹಾಸ್ಯವೇ ಅದು! ಮೈಯೆಲ್ಲ ಬಿಸಿಯಾಗಿ ಉದ್ವಿಗ್ನಳಾಗಿ ಆ ಜರ್ಮನ್ ಸ್ತ್ರೀ ಬರ್‍ತಾಳೆ. ತಾನು ಆತನ ದಾಸಾನುದಾಸಿ ಅನ್ತಾಳೆ. ಆದರೆ, ಅವನು ಆಕೆಗೆ ಹೇಳ್ತಾನೆ: 'ನನಗೆ ಮದುವೆಯಾಗಿರೋದರಿಂದ ನಿನ್ನನ್ನು ನಾನು ಸ್ವೀಕರಿಸೋ ಹಾಗಿಲ್ಲ ಅಮ್ಮಣ್ಣಿ. ಆದರೆ, ನಿನಗೋಸ್ಕರ ನನ್ನಿಬ್ಬರು ಸ್ನೇಹಿತರನ್ನು ಕರಕೊಂಡು ಬಂದಿದೀನಿ—ಒಬ್ಬ ಅವಿವಾಹಿತ, ಇನ್ನೊಬ್ಬ ವಿಧುರ.' ಹೆಂಗಸು ಚೀರಿಕೊಂಡು ಅವನಿಗೆ ಎಂಥ ಹೊಡೆತ ಕೊಟ್ಟಳೂಂದರೆ, ಆತ ಬೆಂಚಿನ ಮೇಲೆ ತಿಪ್ಪರಲಾಗ ಹೊಡೆದ. ಆ ಮೇಲೆ ಆಕೆ ಅವನ ಮುಸುಡನ್ನು ಒದೆಯೋಕೆ ಶುರುಮಾಡಿದ್ಲು; ಆ ಕಾಲದಲ್ಲಿ ನಾನು ನ್ಯಾಯಾಧೀಶನ ಪರಿಚಾರಕನಾಗಿದ್ದೆ. ಉದ್ಯಾನಕ್ಕೆ ಅವಳನ್ನ ಕರಕೊಂಡು ಬಂದಿದ್ದವನು ನಾನು. ಹೀಗಾಗಿ, ಈಗ, ಬೇಲಿಯಲ್ಲಿನ ಒಂದು ಸಂದಿಯೊಳಗಿಂದ ಇಣಿಕಿನೋಡ್ದೆ; ಗಲಾಟೇನ ಕಂಡೆ. ಅವನ ಸ್ನೇಹಿತರು ಪೊದೆಗಳ ಮರೆಯಿಂದ ಹಾರಿಬಂದು, ಅವಳ ಕಡೆಗೆ ಧಾವಿಸಿ, ತಲೆಗೂದಲು ಹಿಡಿದು ಅವಳನ್ನು ಎಳೆಯತೊಡಗಿದರು. ಹೀಗಾಗಿ ನಾನು, ಬೇಲಿಹಾರಿ, ಅವರಿಬ್ಬರನ್ನೂ ಆಚೆ ಈಚೆ ಎಳೆದುಹಾಕ್ದೆ. 'ಇದು ಸರಿಯಲ್ಲ. ಆ ಮಹಿಳೆ ವಿಶ್ವಾಸವಿಟ್ಟು ಅವನಲ್ಲಿಗೆ ಬಂದಿದ್ದಾಳೆ. ಈತ ಈ ರೀತಿ ಅವಳನ್ನು ಅವಮಾನಿಸ್ತಾನೆ!'—ಅಂದೆ. ಅವಳನ್ನು ನಾನು ಅಲ್ಲಿಂದ ಕರಕೊಂಡು ಹೋದೆ. ಇಟ್ಟಿಗೆಯಿಂದ ಅವರು ನನ್ನ ತಲೆಗೆ ಹೊಡೆದರು. ಅವಳಿಗೆ ಬಹಳ ಕೆಡುಕೆನಿಸ್ತು. ತನ್ನನ್ನು ತಾನು ಏನು ಮಾಡ್ಬೇಕೊಂತ ತಿಳೀದೆ, ಅಂಗಳದಲ್ಲಿ ಇತ್ತಿಂದತ್ತ ಅತ್ತಿಂದಿತ್ತ ನಡೀತಾ ಇದ್ಲು. 'ಯಾಕೋವ್, ನಾನು ಹೊರಟ್ಹೋಗ್ತೀನಿ. ನನ್ನವರೇ ಆದ ಜರ್ಮನ್ ಜನರಲ್ಲಿಗೆ ನಾನು ವಾಪಸು ಹೋಗ್ತೀನಿ. ನನ್ನ ಗಂಡ ಸತ್ತ ಕೂಡಲೇ ಹೊರಟು ಬಿಡ್ತೀನಿ!'—ಅಂತ ನನ್ನ ಹತ್ತಿರ ಅಂದ್ಲು. 'ಅದು ಸರಿಯಾದ್ದೇ. ನೀನು ಹೋಗ ಬೇಕಾದ್ದು ನ್ಯಾಯವೇ ಸರಿ' ಅಂತ ನಾನೆಂದೆ. ಹುಂ. ನ್ಯಾಯಾಧೀಶ ತೀರಿಕೊಂಡ—ಅವಳು ಹೊರಟುಹೋದ್ಳು, ಅವಳೊಂದು ಸುಕೋಮಲಪ್ರಾಣಿ ವಿವೇಕವಿದ್ದವಳು. ಆ ನ್ಯಾಯಾಧೀಶನೂ ಸದ್ಗೃಹಸ್ಥನೇ. ಅವನ ಆತ್ಮಕ್ಕೆ ಶಾಂತಿ ಸಿಗಲಿ."

ಈ ಕಥೆಯ ಮಹತ್ವವನ್ನು ಗ್ರಹಿಸಲು ನಾನು ಅಸಮರ್ಥನಾದೆ. ಯಾವ ಪ್ರತಿಕ್ರಿಯೆಯನ್ನೂ ನಾನು ವ್ಯಕ್ತಪಡಿಸಲಿಲ್ಲ. ಸುಪರಿಚಿತವಾದ ಕ್ರೂರವಾದುದೇನೋ ಅರ್ಥಹೀನವಾದುದೇನೋ ಅದರಲ್ಲಿದ್ದಂತೆ ನನಗೆ ಭಾಸವಾಯಿತು. ಆದರೆ ಹೇಳುವಂತಹದು ಏನಿತ್ತು?

"ಕಥೆ ಹಿಡಿಸ್ತೇನು?" ಎಂದು ಯಾಕೋವ್ ಕೇಳಿದ.

ಅಸ್ಪಷ್ಟವಾಗಿ ನಾನೇನನ್ನೋ ಗೊಣಗಿದೆ. ಆದರೆ ಆತ, ಶಾಂತವಾಗಿ ವಿವರಿಸಿದ:

"ಅವರ ರೀತಿಯ ಜನರು, ಹೊಟ್ಟೆಬಟ್ಟೆಗೆ ಬೇಕಷ್ಟಿದ್ದು ಎಲ್ಲ ಅನುಕೂಲಗಳೂ ಇರುವವರು, ಕೆಲವೇಳೆ ಒಂದಿಷ್ಟು ವಿನೋದ ಬೇಕೊಂತ ಆಸೆಪಡ್ತಾರೆ. ಆದರೆ, ಯಾವಾಗಲೂ ಅದು ಸಾಧಿ ಸೋದಿಲ್ಲ. ಅದನ್ನು ಹೇಗೆ ಸಾಧಿಸಬೇಕು ಅನ್ನೋದು ಅವರಿಗೆ ಗೊತ್ತಿರೋದಿಲ್ಲ. ಅವರೆಲ್ಲಾ ವರ್ತಕಗುಣದ ಜಡದೇಹಿಗಳಾಗಿರೋದರಿಂದ ಹಾಗಾಗೋದು ತೀರಾ ಸ್ವಾಭಾವಿಕವೇ. ವ್ಯಾಪಾರ ಮಾಡೋದಕ್ಕೆ ಮೆದುಳು ಬೇಕು. ಎಲ್ಲಾ ವೇಳೆಯಲ್ಲೂ ಮೆದುಳಿನಿಂದಲೇ ಬದುಕ್ತಾ ಇದ್ದರೆ ಬೇಜಾರು ಬಂದುಬಿಡುತ್ತೆ; ಒಂದಿಷ್ಟು ವಿನೋದ ಬೇಕು ಅನಿಸುತ್ತೆ."

ಕೆನೆಕೆನೆಯಾಗಿ ಕಡೆಯುತ್ತ ನೊರೆಯ ಮೋಡವಾಗಿ ನಾವೆಯ ಮೂತಿಯಿಂದ ನದಿ ದೂರ ಸರಿಯುತ್ತಿತ್ತು. ಅದು ಧುಮುಧುಮಿಸುವ ಸಪ್ಪಳ ನಮಗೆ ಕೇಳಿಸುತ್ತಿತ್ತು. ಕರಿಯ ನದಿ

ದಡಗಳು ನಿಧಾನವಾಗಿ ಹಿಂದಕ್ಕೆ ಸರಿಯುತ್ತಿದ್ದುದು ನಮಗೆ ಕಾಣಿಸುತ್ತಿತ್ತು. ಡೆಕ್ಕಿನಿಂ ಪ್ರಯಾಣಿಕರ ಗೊರಕೆಗಳು ಕೇಳಿ ಬಂದುವು. ಕರಿಯ ಪೋಷಾಕುಧರಿಸಿದ್ದ, ಎತ್ತರದ ತೆಳ್ಳಗಿ ಹೆಂಗುಸೊಬ್ಬಳು ಡೆಕ್ಕಿನ ಮೇಲೆ ಕಾಣಿಸಿಕೊಂಡಳು. ಕೂದಲು ನರೆತಿದ್ದ ತಲೆ ಅನಾಚ್ಛಾದಿ ವಾಗಿತ್ತು. ಬೆಂಚುಗಳ ಹಾಗೂ ನಿದ್ದೆ ಹೋಗಿದ್ದ ಶರೀರಗಳ ಎಡೆಯಲ್ಲಿ ಹಾದಿಮಾಡಿಕೊಳ್ಳು ಆಕೆ ಸಾಗಿದಳು. ಉಗಿಕೆಲಸಗಾರ, ಮೊಣಕೈಯಿಂದ ನನ್ನನ್ನು ತಿರುವಿ ಮೃದುವಾಗಿ ಅಂದ:

"ನೋಡು—ಮನಸ್ಸಿನ ಕಾಹಿಲೆಯಿಂದ ಬೇಯ್ತಿದಾಳೆ."

ಇತರರ ಹೃದಯ ವೇದನೆಯಿಂದ ಈತನಿಗೆ ಸಂತೋಷವಾಗುತ್ತಿದ್ದಂತೆ ನನಗೆ ಅನಿಸಿತು.

ಅವನು ಯಾವಾಗಲೂ ನನಗೆ ಕಥೆಗಳನ್ನು ಹೇಳುತ್ತಿದ್ದ. ಆ ಕಥೆಗಳನ್ನು ನಾನ ಆತುರದಿಂದ ಆಲಿಸುತ್ತಿದ್ದೆ. ಆತ ಹೇಳಿದ ಕಥೆಗಳೆಲ್ಲ ನನಗೆ ನೆನಪಿವೆ. ಆದರೆ, ಸಂತಸದಾಯ ವಾದ ಒಂದು ಕತೆಯನ್ನೂ ಆತ ಹೇಳಿದುದು ನೆನಪಿಲ್ಲ. ಪುಸ್ತಕಗಳಲ್ಲಿನ ಕಥನಕ್ಕಿಂತ ಹೆಚ್ಚ ನಿರ್ಲಿಪ್ತಭಾವದಿಂದ ಆತ ನುಡಿಯುತ್ತಿದ್ದ. ಪುಸ್ತಕಗಳಲ್ಲಿ ಹೆಚ್ಚುಸಾರೆ, ಗ್ರಂಥಕರ್ತನ ಭಾವ ಗಳನ್ನು—ಅವನ ಹರ್ಷ ಮತ್ತು ಕ್ರೋಧವನ್ನು, ಅವನ ದುಃಖ ಹಾಗೂ ತಾತ್ಸಾರಭಾವವನ —ನಾನು ಕಾಣುತ್ತಿದ್ದೆ. ಉಗಿಕೆಲಸಗಾರ ಯಾರನ್ನೂ ತಾತ್ಸಾರಭಾವದಿಂದ ಕಾಣುತ್ತಿರಲಿಲ್ಲ ಯಾರ ಬಗೆಗೂ ತೀರ್ಪು ಕೊಡುತ್ತಿರಲಿಲ್ಲ. ಯಾವುದರಿಂದಲೂ ಅವನು ಸಂತುಷ್ಟನಾದಂ ಇಲ್ಲವೆ ವ್ಯಗ್ರನಾದಂತೆ ಹೊರನೋಟಕ್ಕೆ ಕಂಡುಬರುತ್ತಿರಲಿಲ್ಲ. ನಿರ್ಲಿಪ್ತನಾದ ಸಾಕ್ಷಿದಾ ನ್ಯಾಯಾಸ್ಥಾನದಲ್ಲಿ ನುಡಿಯುವಂತೆ, ಕೈದಿ—ಆರೋಪ ಹೊರಿಸಿದಾತ—ನ್ಯಾಯಾಧೀಶ ಎ ರನ್ನೂ ಏಕಭಾವದಿಂದ ಕಾಣುವ ಮನುಷ್ಯನಂತೆ, ಆತ ಮಾತನಾಡುತ್ತಿದ್ದ. ಈ ಅಲಕ್ಷ್ಯಭಾ ನನಗೆ ಸಹ್ಯವಾಗುತ್ತಿರಲಿಲ್ಲ; ನನ್ನ ಮನಸ್ಸನ್ನು ಅದು ಹಿಂಡುತ್ತಿತ್ತು; ನನ್ನ ದ್ವೇಷವನ್ನು ಕೆರ ಸುತ್ತಿತ್ತು.

ಉಗಿಹಂಡೆಗಳ ಕೆಳಗಿನ ಕುಲಿಮೆಗಳಲ್ಲಿನ ಜ್ವಾಲೆಗಳ ಹಾಗೆ, ಬದುಕು ಆತನೆದು ನರ್ತಿಸುತ್ತಿದ್ದಂತೆ ಅನಿಸುತ್ತಿತ್ತು. ಆತನೋ—ತನ್ನ ಕರಡಿಅಂಗೈಯಲ್ಲಿ ಮರದ ಸುತ್ತಿಗೆ ಹಿಡಿದು ಬೆಂಕಿಯ ಪ್ರವಾಹವನ್ನು ಅತಿಗೊಳಿಸುವ ಮಿತಿಗೊಳಿಸುವ ಕೀಲಿಗೆ ಶಾಂತವಾಗಿ ತಟ್ಟುತ್ತಿದ್ದ.

"ನಿನ್ನನ್ನು ಯಾರಾದರೂ ಯಾವತ್ತಾದರೂ ನೋಯಿಸಿದ್ದುಂಟೆ ?"

"ಯಾರಿಂದ ಸಾಧ್ಯ ನನ್ನನ್ನು ನೋಯಿಸೋದು ? ಯಾರನ್ನ ಬೇಕಾದರೂ ಹೊಡೆದ ಅಪ್ಪಳಿಸುವಷ್ಟು ನಾನು ಬಲಿಷ್ಠನಾಗಿದೇನೆ...."

"ಅದಲ್ಲ ನಾನು ಹೇಳಿದ್ದು. ನಿನ್ನ ಒಳಭಾಗವನ್ನು—ನಿನ್ನ ಆತ್ಮವನ್ನು—ನೋಯಿ ದ್ದುಂಟೆ, ಅಂತ."

"ಒಬ್ಬ ಮನುಷ್ಯನ ಆತ್ಮವನ್ನು ನೋಯಿಸೋದಕ್ಕಾಗೋದಿಲ್ಲ. ಆತ್ಮ ಯಾರ ಮೇಲ ವ್ಯಗ್ರವಾಗೋದಿಲ್ಲ. ಅದನ್ನು ಸ್ಪರ್ಶಿಸೋದು ಕೂಡಾ—ಎಂಥದರ ಸಹಾಯದಿಂದಲೂ— ಸಾಧ್ಯವಿಲ್ಲ," ಎಂದ ಆತ.

ಡೆಕ್ಕಿನ ಪ್ರಯಾಣಿಕರು, ಹಡಗಿನ ನೌಕರರು ಮತ್ತು ಪ್ರತಿಯೊಬ್ಬರೂ, ತಮ್ಮ ಹೊಲವನ ಕುರಿತು, ಕೆಲಸವನ್ನು ಕುರಿತು, ಇಲ್ಲವೆ ಆಹಾರ ಅಥವಾ ಹೆಂಗಸರನ್ನು ಕುರಿತು ಮಾತನಾಡಿದಷ್ಟೆ ಹೆಚ್ಚು, ಅದೇ ರೀತಿಯಲ್ಲಿ ಪದೇಪದೇ, ಆತ್ಮವನ್ನು ಕುರಿತೂ ಆಡುತ್ತಿದ್ದರು. ಆತ್ಮ ಎನ್ನುವುದ

ಸರಳ ಜನರ ಶಬ್ದ ಭಾಂಡಾಗದಲ್ಲಿ ಸಾಮಾನ್ಯವಾದ ಪದ. ಐದು ಕೊಪೆಕ್ ನಾಣ್ಯದಷ್ಟೇ ವಿಸ್ತಾರವಾದ ಪ್ರಸಾರವುಳ್ಳದ್ದು. ಈ ಪದ ಅಂಟುನಾಲಗೆಗಳ ಬಿಗಿಹಿಡಿತದಲ್ಲಿದೆಯಲ್ಲಾ ಎಂದು, ನನಗೆ ಕೆಡುಕೆನಿಸುತ್ತಿತ್ತು. ಯಾವನಾದರೂ ರೈತ ಹೊಲಸು ಮಾತುಗಳನ್ನು ಆಡತೊಡಗಿ, ತಮಾಷೆಗಾಗಿಯೋ ಇಲ್ಲವೆ ಮನಃಪೂರ್ವಕವಾಗಿಯೋ, ಆತ್ಮವನ್ನು ಶಪಿಸಿದಾಗಲೆಲ್ಲ, ಅದು ನನ್ನ ಹೃದಯಕ್ಕೇ ತಗಲುತ್ತಿದ್ದ ನೇರಪ್ರಹಾರವಾಗುತ್ತಿತ್ತು.

ಪ್ರೇಮದ—ಸಂತಸದ—ಸೌಂದರ್ಯದ ರಹಸ್ಯಮಯ ಆಗರವಾದ ಆತ್ಮದ ಬಗೆಗೆ, ಅಜ್ಜಿ ಯಾವಾಗಲೂ ಎಷ್ಟೊಂದು ಭಕ್ತಿಯಿಂದ ಮಾತನಾಡುತ್ತಿದ್ದಳೆಂಬುದು ನನಗೆ ಚೆನ್ನಾಗಿ ನೆನಪಿತ್ತು. ಒಳ್ಳೆಯ ಮನುಷ್ಯ ಸತ್ತಾಗಲೆಲ್ಲ, ಶ್ವೇತದೇವತೆಗಳು ಅವನ ಆತ್ಮವನ್ನು ನೀಲಿ ಆಕಾಶಕ್ಕೆ—ಅಜ್ಜಿಯ ದಯಾಮಯ ದೇವನಲ್ಲಿಗೆ—ಒಯ್ಯುತ್ತಿದ್ದವೆಂದು: ಒಲವಿನ ಮೃದುತನದಿಂದ ಆತ ಅದನ್ನು ಸ್ವಾಗತಿಸುತ್ತಿದ್ದನೆಂದು; 'ಆ ನನ್ನ ಪ್ರೇಮ ಬಿಂಬವೇ, ನನ್ನ ಪರಿಶುದ್ಧ ಬಿಂಬವೇ,—ಕೆಳಗೆ ಬಹಳ ಕಷ್ಟವಾಯಿತೇನು? ಬಹಳ ಯಾತನೆ ಇತ್ತೇನು?' ಎಂದು ಉಲಿಯುತ್ತಿದ್ದನೆಂದು, ನಾನು ದೃಢವಾಗಿ ನಂಬಿದ್ದೆ.

ಅಲ್ಲಿ ದೇವರು ಆ ಆತ್ಮಕ್ಕೆ ಘನತೆಯ ಆರು ರೆಕ್ಕೆಗಳನ್ನು ದಯೆಪಾಲಿಸುತ್ತಿದ್ದ.

ಯಾಕೋವ್ ಷುವೋವ್ ಆತ್ಮದ ಬಗೆಗೆ ಮಾತನಾಡುತ್ತಿದ್ದುದೂ ಅಜ್ಜಿಯಷ್ಟೇ ಭಕ್ತಿಪೂರ್ವಕವಾಗಿ, ಅಷ್ಟೇ ಕಡಮೆ, ಮತ್ತು ಅಜ್ಜಿಯ ರೀತಿಯಲ್ಲೇ—ಅಗತ್ಯವೆನಿಸಿದಾಗ ಮಾತ್ರ. ಬೈಗಳ ನುಡಿಗಳನ್ನಾಡಿದಾಗ ಆತ್ಮವನ್ನೆಂದೂ ಆತ ಶಪಿಸುತ್ತಿರಲಿಲ್ಲ. ಬೇರೆಯವರು ಆ ರೀತಿ ಮಾಡುವುದನ್ನು ಕೇಳಿದಾಗ ಆತ ಮೌನವಾಗುತ್ತಿದ್ದ; ತನ್ನ ಕೆಂಪಗಿನ ಹೋರಿಕತ್ತಿನ ಮೇಲೆ ತಲೆಯನ್ನು ತುಸು ತಗ್ಗಿಸುತ್ತಿದ್ದ.

ಆತ್ಮವೆಂದರೇನೆಂದು ಅವನನ್ನು ನಾನು ಕೇಳಿದಾಗ ಆತ ಹೇಳುವುದಿತ್ತು:

"ಒಂದು ಚೇತನ, ದೇವರ ಉಸಿರು."

ಇದರಿಂದ ನನಗೆ ತೃಪ್ತಿಯಾಗುತ್ತಿರಲಿಲ್ಲ. ಬೇರೆ ಪ್ರಶ್ನೆಗಳನ್ನು ಹಾಕಿ ನಾನು ಒತ್ತಾಯಿಸಿದಾಗ, ದೃಷ್ಟಿ ತಗ್ಗಿಸಿ ಅವನೆನ್ನುತ್ತಿದ್ದ:

"ಆತ್ಮದ ವಿಷಯವಾಗಿ ಧರ್ಮಗುರುಗಳಿಗೆ ಕೂಡಾ ಹೆಚ್ಚು ಗೊತ್ತಿಲ್ಲ, ತಮ್ಮ. ಅದು ಗುಪ್ತವಾಗಿರುವಂಥದೇನೋ—"

ಅವನ ಬಗೆಗೆ ನಾನು ಎಡೆಬಿಡದೆ ಯೋಚಿಸುತ್ತಲಿದ್ದೆ. ಆತನನ್ನು ತಿಳಿದುಕೊಳ್ಳಲೆಂದು ನನ್ನೆಲ್ಲ ಯತ್ನಗಳನ್ನೂ ಕೇಂದ್ರೀಕರಿಸುತ್ತಿದ್ದೆ. ಆದರೆ, ಈ ಪ್ರಯತ್ನಗಳೆಲ್ಲ ವಿಫಲವಾಗುತ್ತಿದ್ದುವು. ಯಾಕೋವನ ಹೊರತಾಗಿ ಬೇರೇನೂ ನನಗೆ ಕಾಣಿಸುತ್ತಿರಲಿಲ್ಲ. ಅವನ ದೇಹದ ದೊಡ್ಡ ಗಾತ್ರ ಉಳಿದುದೆಲ್ಲವನ್ನೂ ಮರೆಮಾಡುತ್ತಿತ್ತು.

ಪ್ರಯಾಣಿಕರ ಕ್ಷೇಮಾಧಿಕಾರಿಯ ಹೆಂಡತಿ ನನ್ನ ಬಗೆಗೆ ತೋರುತ್ತಿದ್ದ ಗಮನ ಶಂಕೆ ಹುಟ್ಟಿಸುವ ಹಾಗಿತ್ತು. ದ್ವಿತೀಯವರ್ಗದಲ್ಲಿ ಪುಟ್ಟ ಪರಿಚಾರಿಕೆಯೊಬ್ಬಳಿದ್ದಳು—ಲುಶಾ; ಸ್ವಚ್ಛವಾಗಿದ್ದು ಉತ್ಸಾಹದಿಂದಿರುತ್ತಿದ್ದ ಹುಡುಗಿ. ಅಧಿಕಾರಿಯ ಹೆಂಡತಿಯ ಸ್ನಾನಕ್ಕೆ ನೀರು ತೋಡುವುದು ನ್ಯಾಯವಾಗಿ ಅವಳ ಕೆಲಸ. ಆದರೆ ಅದು ನನ್ನ ಪಾಲಿಗೆ ಬಿದ್ದಿತ್ತು. ಅಗಲ ಕಿರಿದಾದೊಂದು ಕೊಠಡಿಯಲ್ಲಿ ಆ ಹೆಂಗಸಿನ ಮಗ್ಗುಲಲ್ಲಿ ನಾನು ನಿಂತಿರುತ್ತಿದ್ದೆ ನಡುವಿನವರೆಗೂ ಆಕೆ ನಗ್ನ

ವಾಗಿರುತ್ತಿದ್ದಳು. ರೋಗಗ್ರಸ್ತರಂತೆ ಹಳದಿ ಬಣ್ಣಕ್ಕೆ ತಿರುಗಿದ್ದ, ಹುಳಿ ಬಂದ ಹಿಟ್ಟಿನಂತೆ ಉಬ್ಬಿಕೊಂಡಿದ್ದ, ಆ ದೇಹವನ್ನು ಕಂಡು ನನಗೆ ಅಸಹ್ಯವೆನಿಸುತ್ತಿತ್ತು. ಅದನ್ನು ಮಾರ್ಗೊಟ್ ರಾಣಿಯ ದೃಢವಾದ ಕಂಚಿನಂತಹ ಶರೀರದೊಡನೆ ಹೋಲಿಸದಿರುವುದು ದುಸ್ಸಾಧ್ಯವಾಗಿತ್ತು. ಈ ಹೆಂಗಸು ಗೊಣಗುತ್ತ ದೂರುತ್ತಿದ್ದಳು; ಛೇಡಿಸುವ ಮುನಿಸಿನಿಂದ ವಟಗುಟ್ಟುತ್ತಿದ್ದಳು;—ಹೀಗೆ ಏನನ್ನಾದರೂ ತೊದಲುತ್ತಲೇ ಇರುತ್ತಿದ್ದಳು.

ಅವಳು ವ್ಯಕ್ತಪಡಿಸುತ್ತಿದ್ದ ವಿಚಾರಗಳ ಅರ್ಥವನ್ನು ಊಹಿಸುವುದು ಸುಲಭವಾಗಿದ್ದರೂ, ನನ್ನನ್ನು ಅವು ತಟ್ಟುತ್ತಲೇ ಇರಲಿಲ್ಲ. ಆ ವಿಚಾರಗಳಿಗಿದ್ದುದು, ನೀಚವಾದ ನಿರ್ಲಜ್ಜವಾದ ಅರ್ಥ. ಆದರೆ ನನ್ನ ಮೇಲೆ ಇದರಿಂದ ಯಾವ ಪರಿಣಾಮವೂ ಆಗುತ್ತಿರಲಿಲ್ಲ. ಮಾನಸಿಕವಾಗಿ ಆಕೆಗಿಂತ, ಆ ಹಡಗದ ಮೇಲಿನ ಎಲ್ಲ ಘಟನೆಗಳಿಗಿಂತ, ನಾನು ಬಹಳ ದೂರದಲ್ಲಿರುತ್ತಿದ್ದೆ. ಬಲುದೊಡ್ಡದಾದ, ಪಾಚಿ ಬೆಳೆದ, ಶಿಲೆಯೊಂದು, ನನ್ನ ಸುತ್ತಣ ಜಗತ್ತಿನಿಂದ ನನ್ನನ್ನು ಪ್ರತ್ಯೇಕಿಸಿಬಿಟ್ಟಿತ್ತು. ದಿನಕಳೆದಂತೆಲ್ಲ ದೂರದೂರಕ್ಕೆ ಅದು ತೇಲಿ ಹೋಗುತ್ತಿತ್ತು.

ಕನಸಿನಲ್ಲಿ ಕೇಳಿಸಿದಂತೆ ಲುಶಾಳ ಛೇಡಿಸುವ ಪದಗಳು ಹರಿದು ಬಂದುವು:

"ಸ್ಮ್ಯಶವಾರ್ಡನ ಹೆಂಡತಿ ನಿನ್ನಲ್ಲಿ ಅನುರಕ್ತಳಾಗಿ ಬಾಯಿ ಬಾಯಿ ಬಿಡ್ತಿದಾಳೆ! ಅವಕಾಶ ದೊರೆತಿರುವಾಗ ಸುಖಪಡು!"

ನನ್ನನ್ನು ಕುರಿತು ಈ ರೀತಿ ಪರಿಹಾಸ್ಯಮಾಡಿದುದು ಆಕೆಯೊಬ್ಬಳೇ ಅಲ್ಲ. ಆ ಹೆಂಗಸು ತೋರುತ್ತಿದ್ದ ಆಸಕ್ತಿಯ ವಿಷಯ, ಭೋಜನಶಾಲೆಯ ಚಾಕರರಿಗೆಲ್ಲ ಗೊತ್ತಿತ್ತು. ಅಡುಗೆಯವನು ಹಲ್ಲುಕಿಸಿದು ನುಡಿದ:

"ಆ ಸ್ತ್ರೀ ಬೇರೆಲ್ಲದರ ರುಚಿಯನ್ನೂ ನೋಡಿದ್ದಾಯ್ತು. ಈಗ ಫ್ರೆಂಚ್ ಪಕೋಡ ತಿಂದು ನೋಡೋಣಾಂತಿದಾಳೆ! ಫೂ! ಕಣ್ಣು ತೆರೆಕೊಂಡಿರು ಪೆಶ್ಕೋವ್. ಇಲ್ಲದೆ ಹೋದರೆ, ಕಷ್ಟಕ್ಕೆ ಒಳಗಾಗ್ತೀಯೆ!"

ಯಾಕೋವ್ ಕೂಡಾ ಪಿತೃವಾತ್ಸಲ್ಯದ ಹಿತವಚನವನ್ನಾಡಿದ:

"ನೀನು ಎರಡು ಮೂರು ವರ್ಷ ದೊಡ್ಡವನಾಗಿದ್ದಿದ್ದರೆ—ಹುಂ, ನಾನು ಬೇರೆಯೇ ರೀತಿ ಮಾತಾಡ್ತಿದ್ದೆ. ಖಂಡಿತವಾಗಿ. ಆದರೆ ನಿನ್ನ ಈ ವಯಸ್ಸಿನಲ್ಲಿ—ನೀನು ಮಣೀದೇ ಇರೋದೇ ವಾಸಿ. ಆದರೂ ನಿನಗಿಷ್ಟ ಬಂದ ಹಾಗೆ ನೀನು ಮಾಡಬಹುದು."

ನಾನೆಂದೆ:

"ಅದನ್ನು ಮರೆತುಬಿಡು. ಅಂಥ ಹೊಲಸು!"

"ಖಂಡಿತವಾಗಿ."

ಆದರೆ, ಒಂದು ನಿಮಿಷದ ಬಳಿಕ, ತನ್ನ ಸಿಕ್ಕುಗಟ್ಟಿದ ತಲೆಗೂದಲ ಮೇಲೆ ಬೆರಳುಗಳನ್ನೋಡಿಸಿ, ತನ್ನ ದುಂಡಗಿನ ಪುಟ್ಟ ಪದಗಳನ್ನು ಆತ ಬಿತ್ತುತ್ತ ಹೋದ:

"ಅವಳ ನೆಲೆಯಿಂದಲೂ ಇದನ್ನು ನಾವು ನೋಡ್ಬೇಕು. ಅದು ಬೇಸರದ ನೆಲೆ. ಅಲ್ಲಿ ರೋದೆಲ್ಲ ಬರಡು ಚಳಿಗಾಲವೇ. ಒಂದಿಷ್ಟು ಮುದ್ದಿಸೋದನ್ನ ನಾಯಿಕೂಡ ಇಷ್ಟಪಡುತ್ತೆ. ಮನುಷ್ಯಪ್ರಾಣೀದು ಅದಕ್ಕಿಂತಲೂ ಹೆಚ್ಚೇ. ನಾಯಿಕೊಡೆಗೆ ಮಳೆ ಹೇಗೋ ಹಾಗೆ ಚುಂಬನ ಅಪ್ಪುಗೆಗಳು ಹೆಂಗಸಿಗೆ. ಅವುಗಳ ಮೇಲೆಯೇ ಅವಳ ಜೀವನ. ಅವಳಿಗೆ ಲಜ್ಜೆಯಾಗೋದಿಲ್ಲ

ಸೆಂತಲ್ಲ. ಆದರೆ ಅವಳೇನು ಮಾಡೋದು ಸಾಧ್ಯ ? ಶರೀರವೊಂದು ವೇಶ್ಯೆ; ಅಷ್ಟೆ—ಮತ್ತೇನೂ ಇಲ್ಲ."

ಗೂಢವಾಗಿ ಕಂಡ ಅವನ ಕಣ್ಣುಗಳನ್ನೇ ನೇರನೋಟದಿಂದ ದಿಟ್ಟಿಸಿ ನಾನು ಕೇಳಿದೆ:

"ಅವಳ ವಿಷಯದಲ್ಲಿ ನಿನಗೆ ಕನಿಕರವೆನಿಸುತ್ತೊ ?"

"ನನಗೆ ? ಅವಳು ನನ್ನ ತಾಯಿಯಲ್ಲ ತಾನೆ ? ಕೆಲವರಂತೂ ತಮ್ಮ ತಾಯಂದಿರಿಗಾಗಿಯೂ ಕನಿಕರಪಡೋದಿಲ್ಲ. ನೀನು ಖಂಡಿತವಾಗಿಯೂ ಒಂದು ವಿಚಿತ್ರ ಹಕ್ಕಿಯೇ ಸರಿ !"

ಒಡಕು ಘಂಟೆಯ ಸಪ್ಪಳದಂತೆ ನಿತ್ಯದ ಮೃದುನಗೆಯನ್ನು ಆತ ನಕ್ಕ.

ಕೆಲವೇಳೆ ಅವನೆಡೆಗೆ ನೋಡಿದಾಗ, ನೀರವ ಶೂನ್ಯಕ್ಕೆ, ಕತ್ತಲಿನ ತಳವಿಲ್ಲದ ಆಳಕ್ಕೆ, ನಾನು ಧುಮುಕಿದಂತೆ ಅನಿಸುತ್ತಿತ್ತು.

"ಎಲ್ಲರೂ ಮದುವೆ ಮಾಡ್ಕೋತಾರೆ ಯಾಕೋವ್. ನೀನು ಯಾಕೆ ಆಗಬಾರದು ?"

"ಯಾತಕ್ಕೋಸ್ಕರ ? ಹೆಂಗಸು ಯಾವಾಗಬೇಕಾದರೂ ನನಗೆ ಸಿಗ್ತಾಳೆ—ದೇವರ ದಯೆಯಿಂದ ಅದು ಬಹಳ ಸುಲಭ. ಮದುವೆ ಮಾಡ್ಕೊಂಡವನು ಮನೆಗೆ ಅಂಟಿಕೊಂಡು ಹೊಲದಲ್ಲಿ ದುಡೀಬೇಕು: ನನ್ನ ಹೊಲ ಚೆನ್ನಾಗಿಲ್ಲ. ಅದು ಇರೋದು ಸ್ವಲ್ಪ. ಇದ್ದದ್ದನ್ನು ನನ್ನ ಚಿಕ್ಕಪ್ಪ ಕಸಕೊಂಡುಬಿಟ್ಟಿದಾನೆ. ನನ್ನ ಒಡಹುಟ್ಟಿದವನು ಸೈನ್ಯ ಶಿಕ್ಷಣ ಮುಗಿಸಿ ಬಂದು ಚಿಕ್ಕಪ್ಪನ ಜತೆ ಕಿತ್ತಾಡೋದಕ್ಕೆ ಶುರುಮಾಡ್ದ; ನ್ಯಾಯಾಸ್ಥಾನಕ್ಕೆ ಎಳೀತೀನಿ ಅಂದ; ಅವನ ತಲೆಗೆ ಬಡಿಗೆಯಿಂದ ಹೊಡೆದ—ರಕ್ತ ಸುರಿಸಿದ. ಅದಕ್ಕಾಗಿ ಒಂದೂವರೆ ವರ್ಷಕಾಲ ಇವನನ್ನು ಜೈಲಿಗೆ ತಳ್ಳಿದರು. ಅದಾದಮೇಲೆ, ಮಾಜಿ ಅಪರಾಧಿಗೆ ಇರುವ ಹಾದಿ ಒಂದೇ—ಆ ಹಾದಿ ಪುನಃ ಹೋಗಿ ತಲಪೋದು ಜೈಲನ್ನೇ. ಇವನ ಹೆಂಡತಿ ಸ್ವಲ್ಪ ಜೋರಾಗಿದ್ದ ಹೆಣ್ಣು. ಆದರೆ, ಹೇಳುವಂಥಾದ್ದೇನಿದೆ ? ಒಬ್ಬ ಒಮ್ಮೆ ಮದುವೆಯಾದ ಅಂದರೆ, ಒಂದು ಕಡೆ ತಳವೂರಿ ಅವಳನ್ನು ಆಳಲೇಬೇಕು. ಆದರೆ, ತನ್ನ ಸ್ವಂತದ ಬದುಕನ್ನು ಆಳೋದೂ ಒಬ್ಬ ಸೈನಿಕನಿಗೆ ಸಾಧ್ಯವಾಗದ ಮಾತು."

"ನೀನು ದೇವರಿಗೆ ಪ್ರಾರ್ಥನೆ ಸಲ್ಲಿಸ್ತೀಯೇನು ?"

"ಎಂಥ ವಿಚಿತ್ರ ಹಕ್ಕಿ ! ಖಂಡಿತವಾಗಿ ಸಲ್ಲಿಸ್ತೀನಿ."

"ಹೇಗೆ ?"

"ಬೇರೆ ಬೇರೆ ರೀತಿಯಾಗಿ."

"ಯಾವ ಯಾವ ಪ್ರಾರ್ಥನೆಗಳು ನಿನಗೆ ಗೊತ್ತಿವೆ ?"

"ನನಗೆ ಯಾವ ಪ್ರಾರ್ಥನೆಯೂ ಗೊತ್ತಿಲ್ಲ. ಸರಳವಾಗಿ ನಾನು ಹೇಳುವೆ : 'ಪ್ರಭು ಏಸು, ದುಃಖಿತರುವವರ ಮೇಲೆ ಕರುಣೆ ತೋರು ; ಸತ್ತವರಿಗೆ ಶಾಂತಿ ಒದಗಿಸು ; ಕಾಹಿಲೆಯಿಂದ ನಮ್ಮನ್ನು ರಕ್ಷಿಸು ; ಮತ್ತು—' ಹುಂ, ಹೀಗೆಯೇ ಬೇರೆ ಕೆಲವು."

"ಬೇರೆ ಕೆಲವು—ಯಾವುವು ?"

"ಓ, ನನಗೆ ತಿಳೀದು. ನೀನು ಏನು ಹೇಳಿದರೂ ಪ್ರಭುವಿಗೆ ತಲಪ್ತದೆ."

ನಾನು ವಿನೋದಪರ ತುಂಟ ಆಟಗಳನ್ನು ಆಡಬಲ್ಲ ಚತುರ ನಾಯಿಮರಿಯೇನೋ ಎನ್ನುವಂತೆ, ಮೃದುವಾಗಿಯೂ ಒಂದು ಬಗೆಯ ಕುತೂಹಲದಿಂದಲೂ ನನ್ನೊಡನೆ ಆತ ನಡೆದುಕೊಳ್ಳು

ತ್ತಿದ್ದ. ಕೆಲವೇಳೆ ಸಂಜೆ ಹೊತ್ತು ಆತನ ಮಗ್ಗುಲಲ್ಲಿ ನಾನು ಕುಳಿತಿರುತ್ತಿದ್ದೆ. ಎಣ್ಣೆಯ ಬೆಂಕಿಯು, ಈರುಳ್ಳಿಯ ವಾಸನೆ ಬರುತ್ತಿತ್ತು ಆತನ ಮೈಯಿಂದ....ಈರುಳ್ಳಿ ಎಂದರೆ ಅವನಿ ಬಲು ಇಷ್ಟ. ಸೇಬುಗಳ ಹಾಗೆ ಹಸಿ ಹಸಿಯಾಗಿಯೇ ಈರುಳ್ಳಿಗಳನ್ನು ಆತ ತಿನ್ನುತ್ತಿದ್ದ... ಹಾಗೆ ಕುಳಿತಾಗ, ಇದ್ದಕ್ಕಿದ್ದಂತೆ ಆತನೆನ್ನುತ್ತಿದ್ದ:

"ಎಲ್ಲಿ ಅಲ್ಯೋಶಾ, ಒಂದೆರಡು ಹಾಡು ಹೇಳು."

ಎಷ್ಟೋ ಕವಿತೆಗಳು ನನಗೆ ಕಂಠಪಾಠವಾಗಿದ್ದುವು. ಇವಲ್ಲದೆ, ನನ್ನ ಮೆಚ್ಚುಗೆಯ ಕೆಲವನ್ನು ಬರೆದಿರಿಸಿದ್ದ ದಪ್ಪನೆಯ ಟಿಪ್ಪಣಿ ಪುಸ್ತಕವೂ ಒಂದಿತ್ತು. 'ರುಸ್ಲಾನ್ ಮತ್ತು ಲುಡ್ಮಿಲ್ಲಾ ಗೀತವನ್ನು ನಾನು ಅನ್ನುತ್ತಿದ್ದೆ. ಏನನ್ನೂ ನೋಡದೆ, ಏನನ್ನೂ ಆಡದೆ, ತನ್ನ ಗೊಗ್ಗರ ಉ ರಾಟವನ್ನೂ ಬಿಗಿ ಹಿಡಿಯುತ್ತ, ನಿಶ್ಚಲನಾಗಿ ಕುಳಿತು ಆತ ಆಲಿಸುತ್ತಿದ್ದ. ಬಳಿಕ ಮೃದುವಾ ಆತನೆನ್ನುತ್ತಿದ್ದ:

"ಜೋರಾದ ಕಥೆ ಅದು. ಇದನ್ನೆಲ್ಲಾ ನೀನೇ ಕಟ್ಟಿದೆಯೊ? ಪುಷ್ಕಿನ್, ಅಂದೆಯಾ ಮುಖಿನ್—ಪುಷ್ಕಿನ್ ಅಂತ ಶ್ರೀಮಂತ ಜಮೀನ್ದಾರ ಒಬ್ಬನಿದ್ದಾನೆ. ಅವನನ್ನು ನಾನೊಮ್ಮೆ ನೋಡಿದ್ದೆ."

"ಅವನಲ್ಲಾ. ಈ ಪುಷ್ಕಿನನ್ನು ಎಷ್ಟೋ ಕಾಲದ ಹಿಂದೆಯೇ ಕೊಂದರು."

"ಯಾತಕ್ಕೋಸ್ಕರ?"

ಮಾರ್ಗೊಟ್ ರಾಣಿಯಿಂದ ನಾನು ಕೇಳಿದ್ದ ಚುಟುಕು ರೀತಿಯಲ್ಲೇ ಆ ಕಥೆಯನ ಅವನಿಗೆ ನಾನು ತಿಳಿಸಿದೆ. ನಾನು ಮುಗಿಸಿದಾಗ ಶಾಂತವಾಗಿ ಆತನೆಂದ:

"ಹೆಂಗಸರಿಂದಾಗಿಯೇ ಎಷ್ಟೋ ಜನರ ಸರ್ವನಾಶವಾಗ್ತದೆ."

ಆಗಾಗ್ಗೆ ಪುಸ್ತಕಗಳಿಂದ ಕಥೆಗಳನ್ನು ಅವನಿಗೆ ನಾನು ಹೇಳುತ್ತಿದ್ದೆ. ಅವು ಸಿಕ್ಕುಸಿಕ್ಕಾ ಹೆಣೆದುಕೊಂಡು ಒಂದು ದೀರ್ಘ ಕಥೆಯಾಗುತ್ತಿದ್ದುವು. ಕೋಲಾಹಲಕಾರಕವಾಗಿ ಸುಂ ವಾಗಿರುತ್ತಿತ್ತು ಆ ಕಥೆ. ಅದರಲ್ಲಿ ಕಟುವಾದ ಭಾವೋದ್ವೇಗವಿರುತ್ತಿತ್ತು. ಹುಚ್ಚು ಸಾಹ ಉದಾತ್ತವೀರರು, ನಂಬಲಾಗದಂತಹ ಸೌಭಾಗ್ಯ, ದ್ವಂದ್ವಕಾಳಗ, ಸಾವು, ಸೊಗಸಾದ ಮಾ ಗಳು, ಹೇಯ ಕೃತಿಗಳು—ಇವೆಲ್ಲಾ ಆ ಕಥೆಯಲ್ಲಿ ತುಂಬಿರುತ್ತಿದ್ದುವು. ಲಾ ಮೋಲೆ, ಹಾ ಬಾಲ್, ಕೊಲೊನ್ನಾರ ವೀರ ಪ್ರವೃತ್ತಿಗಳನ್ನು ರೊಕಾಂಬೋಲ್‌ಗೆ ನಾನು ಕರುಣಿಸಿ ಗ್ರಾಂಡೆಟ್‌ನ ತಂದೆಯ ಗುಣಗಳನ್ನು ಹನ್ನೊಂದನೆಯ ಲೂಯಿಗಿತ್ತೆ. ನನ್ನ ಕಥನದ ಕಾರ್ನೆಟ್ ಒಟ್ಲೆತಯಿಎವ್ ಮತ್ತು ನಾಲ್ಕನೆಯ ಹೆನ್ರಿ—ಇಬ್ಬರೂ ಒಂದೇ ವ್ಯಕ್ತಿಯಾದ ಸ್ಫೂರ್ತಿಯ ಆ ದೇಶಕ್ಕೆ ಅನುಗುಣವಾಗಿ ಜನರ ಗುಣ ಸ್ವರೂಪಗಳನ್ನು ನಾನು ಬದಲಿಸಿ ಸಂಭವಗಳನ್ನು ಪುನರ್ವ್ಯವಸ್ಥಿತಗೊಳಿಸಿದೆ. ಬೇರೆಯೇ ಜಗತ್ತನ್ನು ರಚಿಸಿದೆ. ಅಲ್ಲಿ, ಇ ಬಂದಂತೆ ಮಾನವ ಪ್ರಾಣಿಗಳೊಡನೆ ಹುಚ್ಚಾಟವಾಡುತ್ತಿದ್ದ ಅಜ್ಜನ ದೇವರಷ್ಟೇ ಏಕಾಧಿಕ ದಿಂದ ನಾನು ಆಳಿದೆ. ಬದುಕಿನ ವಸ್ತುಸ್ಥಿತಿಯನ್ನು ನೋಡಲು ಅಡ್ಡಿಮಾಡದೆಯೇ, ಜೀವ ವ್ಯಕ್ತಿಗಳನ್ನು ತಿಳಿದುಕೊಳ್ಳಬೇಕೆಂಬ ನನ್ನ ಬಯಕೆಯನ್ನು ಕಡಮೆ ಮಾಡದೆಯೇ, ಈ ಪುಸ್ತ ಜಗತ್ತು ನನ್ನ ಸುತ್ತಲೂ ಪಾರದರ್ಶಕವಾದ—ಆದರೆ ಇರಿಯಲಾರದಂತಹ—ಪರದೆಯ ನಿರ್ಮಿಸಿತು. ನನ್ನ ಸುತ್ತಲಿನ ಬದುಕಿನಲ್ಲಿ ಅಡಗಿಕೊಂಡಿದ್ದ ವಿಷಪೂರಿತ ಹೊಲಸಿನಿಂದ

ಸಂಖ್ಯಾತ ಅಂಟುಜಾಡ್ಯಗಳಿಂದಲೂ ನನ್ನನ್ನು ರಕ್ಷಿಸಿತು.

ಪುಸ್ತಕಗಳ ಫಲವಾಗಿ, ಎಷ್ಟೋ ವಿಷಯಗಳಿಗೆ ಸಂಬಂಧಿಸಿ ನಾನು ದುರ್ಭೇದ್ಯನಾದೆ. ಜನರು ಹೇಗೆ ಪ್ರೀತಿಸುವರೆಂಬ—ಯಾತನೆಪಡುವರೆಂಬ—ತಿಳಿವಳಿಕೆಯಿಂದಾಗಿ, ವೇಶ್ಯಾಗೃಹ ವನ್ನು ಪ್ರವೇಶಿಸುವುದು ನನಗೆ ದುಸ್ಸಾಧ್ಯವಾಯಿತು. ಅಂತಹ ವಿಷಯಲೋಲುಪತೆಯು ಹಗುರ ನ, ಆ ಬಗೆಗೆ ನನ್ನ ತುಚ್ಛೀಕಾರವನ್ನೂ ಅದನ್ನು ಸಿಹಿಯಾಗಿ ಕಾಣುವವರ ವಿಷಯದಲ್ಲಿ ನನ್ನ ರಸ್ಕಾರವನ್ನು ಕೆರಳಿಸಿತು. ಪರಿಸರದ ಒತ್ತಡವನ್ನು ಆತ್ಮಸಂಯಮದಿಂದ ಇದಿರಿಸಬೇಕೆಂಬು ನ್ನು ರೊಕಾಂಬೋಲ್ ನನಗೆ ಹೇಳಿಕೊಟ್ಟ. ಡ್ಯೂಮಾನ ಕಥಾನಾಯಕರು, ಯಾವುದೋ ರಿದಾದ ಮಹತ್ವದ ಧ್ಯೇಯಕ್ಕಾಗಿ ನನ್ನ ಬದುಕನ್ನು ಮುಡಿಪಿಡಬೇಕೆಂಬ ಬಯಕೆಯನ್ನು ನನ್ನಲ್ಲಿ ಂಬುತ್ತಿದ್ದರು. ನನ್ನ ಮೆಚ್ಚುಗೆಯ ಪಾತ್ರವೆಂದರೆ—ವಿನೋದಪ್ರಿಯ ಅರಸನಾದ ನಾಲ್ಕನೆಯ ನ್ರಿ.

ಜನಜಂಗುಳಿಗೆಲ್ಲ ಅತ ಪಾನವಿತ್ತ,
ತಾನೂ ಕುಡಿದ—ಎಂಬುದನ್ನು ನಾವು ಬಲ್ಲೆವು.
ಅರಸನೇಕೆ ಹರುಷದಿಂದ ಇರಬಾರದು—
ಪ್ರಜಾಕೋಟಿಯೆಲ್ಲ ಹರುಷದಿಂದಲಿದ್ದರೆ ?

—ಎಂಬ ಕವಿತೆಯನ್ನು ಬಿರಾಂಜರ್ ಬರೆದಾಗ, ಆತನ ಮನಸ್ಸಿನಲ್ಲಿ ನಾಲ್ಕನೆಯ ಹೆನ್ರಿಯ ತ್ರವೇ ಇದ್ದಿರಬೇಕೆಂದು ನನಗೆ ಅನಿಸುತ್ತಿತ್ತು.

ಕಾದಂಬರಿಗಳಲ್ಲಿ ನಾಲ್ಕನೆಯ ಹೆನ್ರಿ, ದಯಾವಂತನಾಗಿ, ತನ್ನ ಪ್ರಜೆಗಳ ಹೃದಯಕ್ಕೆ ಯನಾದ ವ್ಯಕ್ತಿಯಾಗಿ, ಚಿತ್ರಿತನಾಗಿದ್ದ. ಅವನ ಸ್ವಭಾವದ ಹೊಂಬೆಳಕಿನ ಶುಭ್ರತೆಯಿಂದಾಗಿ ಫ್ರಾನ್ಸ್ ಜಗತ್ತಿನಲ್ಲೇ ಅತ್ಯಂತ ಸೊಗಸಾದ ರಾಷ್ಟ್ರ ಎಂಬ ಅಚಲನಂಬುಗೆ ನನ್ನಲ್ಲಿ ಮೂಡಿತು. ನ್ನ ದೃಷ್ಟಿಯಲ್ಲಿ ಫ್ರಾನ್ಸು, ಸಾಹಸಗಳ ಭೂಮಿ; ಅಲ್ಲಿ ರೈತರ ಉಡುಪು ಧರಿಸಿದ್ದವರೂ ಅರಮನೆ ಸುವರ ಪೋಷಾಕು ಧರಿಸಿದವರಷ್ಟೇ ಉದಾತ್ತರು. ಆಂಗೆ ಪಿತಾವ್, ಡಿ·ಆರ್ತಗ್ನೆನಷ್ಟೇ ಧೀರ. ನ್ರಿ ಕೊಲ್ಲಲ್ಪಟ್ಟಾಗ, ನಾನು ಶೋಕದಿಂದ ಅತ್ತೆ; ರಾವಾಯಲ್ಲಾಕನ ಬಗೆಗೆ ದ್ವೇಷದಿಂದ ಲ್ಲುಕಡಿದೆ, ಉಗಿಕೆಲಸಗಾರನಿಗೆ ನಾನು ಹೇಳಿದ ಕಥೆಗಳಲ್ಲೆಲ್ಲ ಹೆಚ್ಚುಕಡಮೆ ಯಾವಾಗಲೂ ನ್ರಿಯೇ ನಾಯಕನಾಗಿರುತ್ತಿದ್ದ. ನನ್ನ ಕಥೆಯನ್ನು ಕೇಳಿ ಕೇಳಿ, ಯಾಕೋವ್ ಕೂಡಾ ನ್ರಿಯನ್ನೂ ಫ್ರಾನ್ಸನ್ನೂ ಪ್ರೀತಿಸುವಂತಾಯಿತೆಂದು ನನಗೆ ಅನಿಸಿತು.

"ಅರಸು ಹೆನ್ರಿ ಸೊಗಸಾದ ಮನುಷ್ಯ. ಅವನ ಜತೆ ಮೀನು ಹಿಡಿಯೋಕೆ ಹೋಗಬಹುದು; —ಅಥವಾ ಬೇರೆ ಏನು ಕೆಲಸ ಬೇಕಾದರೂ ಮಾಡಬಹುದು," ಎಂದು ಯಾಕೋವನೆಂದ.

ಅವನೆಂದೂ ಹರ್ಷಾತಿರೇಕವನ್ನು ವ್ಯಕ್ತಪಡಿಸುತ್ತಿರಲಿಲ್ಲ; ನನ್ನ ಕಥೆಗಳ ನಡುವೆ ಬಾಯಿ ಾಕಿ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. ಆತ ಮೌನವಾಗಿ, ಹುಬ್ಬುಗಳನ್ನೆಳೆದುಕೊಂಡು, ಮುಖ ಾವವನ್ನು ಬದಲಿಸದೆ, ಕಿವಿಗೊಡುತ್ತಿದ್ದ. ಪಾಚಿ ಮುಚ್ಚಿದ್ದ ಪ್ರಾಚೀನ ಶಿಲೆಯ ಹಾಗೆ. ಆದರೆ, ಯಾವುದೇ ಕಾರಣಕ್ಕಾಗಿ ಕಥೆ ಹೇಳುವುದನ್ನು ನಾನು ನಡುವೆ ತಡೆದೆನೆಂದರೆ, ತಕ್ಷಣವೇ ವನೆನ್ನುತ್ತಿದ್ದ:

"ಅಷ್ಟೇ ಏನು ?"

"ಇನ್ನೂ ಇದೆ."

"ಹಾಗಾದರೆ ನಿಲ್ಲಿಸ್ಬೇಡ."

ಒಮ್ಮೆ ಫ್ರೆಂಚರನ್ನು ಕುರಿತು ನಾವು ಮಾತನಾಡುತ್ತಿದ್ದಾಗ, ನಿಟ್ಟುಸಿರುಬಿಟ್ಟು ಅವನೆಂದ:

"ಅವರು ಸೊಗಸಾಗಿ ತಣ್ಣಗೆ ಬಾಳಿದರು."

"ಏನು ಹಾಗೆಂದರೆ ?"

"ನೀನೂ ನಾನು ಸೆಖೆಯಲ್ಲಿ ಜೀವಿಸ್ತೀವಿ; ಯಾವಾಗಲೂ ದುಡೀತಿರ್ತೀವಿ. ಆದರೆ ಅವ ಸೊಗಸಾಗಿ ತಣ್ಣಗೆ ಜೀವಿಸಿದರು. ಏನೂ ಕೆಲಸವಿಲ್ಲ. ಕುಡಿಯೋದು, ಅತ್ತಿತ್ತ ಅಲೆದಾಡೋದ ಜೀವಿಸೋದಕ್ಕೆ ಇದೊಳ್ಳೇ ತಮಾಷೆಯಾದ ವಿಧಾನ."

"ಅವರೂ ದುಡೀತಿದ್ದರು."

"ಹಾಗೇಂತ ನೀನು ಹೇಳೋ ಕಥೆಗಳಿಂದೇನೂ ಕಂಡು ಬರೋದಿಲ್ಲ," ಎಂದು ಉಗಿಕೆಲ ಗಾರ ನ್ಯಾಯೋಚಿತವಾಗಿಯೇ ನುಡಿದ.

ನಾನು ಓದಿದ್ದ ಪುಸ್ತಕಗಳಲ್ಲಿ ತೀರಾ ಬಹುಸಂಖ್ಯೆಯವು, ಜನರು ಹೇಗೆ ದುಡಿಯುತ್ತಿ ರೆಂಬುದರ ಬಗೆಗಾಗಲೀ, ಉಚ್ಚಕುಲದ ನಾಯಕರು ಯಾರ ದುಡಿಮೆಯನ್ನವಲಂಬಿಸಿ ಬದು ತ್ತಿದ್ದರೆಂಬುದರ ಬಗೆಗಾಗಲೀ, ಏನನ್ನೂ ಹೇಳಿಯೇ ಇರಲಿಲ್ಲ ಎಂದರೂ ಸಲ್ಲುವುದು. ಈ ಅಂ ಇದ್ದಕ್ಕಿದ್ದಂತೆ ನನಗೆ ಹೊಳೆಯಿತು.

"ಹುಂ, ಸಣ್ಣದೊಂದು ನಿದ್ದೆ ಮಾಡಿದರಾದೀತೆನಿಸುತ್ತೆ," ಎಂದು ಯಾಕೋವ್, ಬೆ ಮೇಲೆ ಅಂಗಾತ ಮಲಗಿಕೊಂಡು ನುಡಿದ. ಮರುನಿಮಿಷದಲ್ಲೇ ಆತ ಶಾಂತವಾಗಿ ಗೊರ ಹೊಡೆಯುತ್ತಿದ್ದ.

ಶರತ್ಕಾಲದಲ್ಲಿ ಕಾಮಾ ನದಿಯ ದಂಡೆಗಳು ಕೆಂಪು-ಬಾದಾಮಿ ಬಣ್ಣಕ್ಕೆ ತಿರುಗಿದ್ದಾ ಮರಗಳು ಬಂಗಾರ ಬಣ್ಣ ತಳೆದಾಗ, ಇಳಿಜಾರಾದ ಸೂರ್ಯಕಿರಣಗಳು ಮ್ಲಾನವಾದಾ ಯಾಕೋವ್ ಒಮ್ಮಿಂದೊಮ್ಮೆಲೆ ಹಡಗನ್ನು ಬಿಟ್ಟುಹೋದ. ಅದರ ಹಿಂದಿನ ದಿನ ಸಂ ನನ್ನೊಡನೆ ಆತನೆಂದ:

"ಅಲ್ಯೋಶಾ, ನಾಡದು ನೀನೂ ನಾನೂ ಪರ್ಮ್‌ಶಹರವನ್ನು ತಲಪ್ತೀವಿ. ಅಲ್ಲಿ ಸ್ನಾನ ಮನೆಗೆ ಹೋಗಿ ಮನಃಪೂರ್ತಿ ಆವಿ ಏಳೋ ಬಿಸಿನೀರಲ್ಲಿ ಮೈ ತೊಳಕೊಳ್ಳೋಣ. ಅಲ್ಲಿಂ ನೇರವಾಗಿ ಸಂಗೀತವಿರೋ ಪಾನಮಂದಿರಕ್ಕೆ ಹೋಗೋಣ. ಅದು ಹಿತಕರವಾದ ಕೆಲ ಕೈಯಿಂದ ಬಾರಿಸೋ ಸ್ವರಪೆಟ್ಟಿಗೇನ ಅವರು ನುಡಿಸೋದನ್ನು ನೋಡೋದು ಎಷ್ಟು ಇ ನನಗೆ !"

ಆದರೆ ಸರಾಪೂಲಿನಲ್ಲಿ, ಮೈ ಮಾಂಸ ಉಬ್ಬಿದ್ದ ಗಾತ್ರದ ಮನುಷ್ಯನೊಬ್ಬ ಹಡಗ ಹತ್ತಿದ. ಗಡ್ಡವಿಲ್ಲದ ಹೆಂಗಸಿನಂತಹ ಮುಖ ಅವನದು. ಆತ ತೊಟ್ಟುಕೊಂಡಿದ್ದ ನೀಳವಾ ಕೋಟು ಹಾಗೂ ತೋಳಕಿವಿಗಳಿದ್ದ ಟೋಪಿ, ಹೆಂಗಸಿನೊಡನೆ ಆತನ ಸಾಮ್ಯವನ್ನು ಹೆ ಚಿದುವು. ತಕ್ಷಣವೇ ಆತ, ಅಡುಗೆ ಮನೆಗೆ ಸಮೀಪದಲ್ಲಿದ್ದ ಬೆಚ್ಚಗಿನ ಮೂಲೆಯಲ್ಲಿ ಒಂ ಮೇಜನ್ನು ಆರಿಸಿಕೊಂಡ. ಚಹಾ ಬೇಕೆಂದ. ಕೋಟನ್ನಾಗಲೀ ಟೋಪಿಯನ್ನಾಗಲೀ ತೆಗೆ

ದೆಯೇ, ಧಾರಾಳವಾಗಿ ಬೆವರು ಸುರಿಸುತ್ತ, ಕುದಿಯುತ್ತಿದ್ದ ಪಾನೀಯವನ್ನು ತುಸುತುಸುವಾಗಿ ಆತ ಕುಡಿಯತೊಡಗಿದ.

ಶರತ್ಕಾಲದ ಮೋಡಗಳಿಂದ ಸೊಗಸಾದ ಮಳೆಯೊಂದು ಹನಿಯುತ್ತಿತ್ತು. ಆ ಮನುಷ್ಯ ಅರಿವೆಯ ಕರವಸ್ತ್ರದಿಂದ ಮುಖ ಒರೆಸಿದಾಗಲೆಲ್ಲ ಮಳೆ ಹನಿಯುವುದು ನಿಂತಂತೆ, ಆತ ಬೆವರು ಸುರಿಸಿದಷ್ಟೂ ಹೆಚ್ಚಾಗಿ ಮಳೆ ಬಲಗೊಂಡು ಸುರಿದಂತೆ, ಅನಿಸಿತು.

ಸ್ವಲ್ಪ ಹೊತ್ತಿನಲ್ಲೆ ಯಾಕೋವ್ ಆ ಮನುಷ್ಯನ ಪಗ್ಗುಲಲ್ಲಿ ಕುಳಿತುಕೊಂಡ. ಪಂಚಾಂಗದಲ್ಲಿನ ಒಂದು ನಕಾಶೆಯನ್ನು ತೆರೆದು ಅವರಿಬ್ಬರೂ ಈಕ್ಷಿಸತೊಡಗಿದರು. ಆ ಪ್ರಯಾಣಿಕ ತನ್ನ ಬೆರಳನ್ನು ಸರಿಸುತ್ತ ಏನನ್ನೋ ತೋರಿಸಿಕೊಟ್ಟ. ಉಗಿಕೆಲಸಗಾರ ಶಾಂತವಾಗಿ ನುಡಿದ:

"ಆದರೇನಂತೆ? ನನ್ನಂಥವನಿಗೆ ಅದು ಸುಲಭ. ಉಗುಳು ಅದರ ಮೇಲೆ!"

ತನ್ನ ಪಾದದ ಬಳಿ ತೆರೆದುಕೊಂಡಿದ್ದ ತೊಗಲಿನ ಚೀಲದೊಳಕ್ಕೆ ಪಂಚಾಂಗವನ್ನು ತಳ್ಳುತ್ತ ಏರುದನಿಯಲ್ಲಿ ಆ ಪ್ರಯಾಣಿಕನೆಂದ:

"ಒಳ್ಳೇದು."

ಮುಂದೆ ಮೆಲುದನಿಯಲ್ಲಿ ಮಾತನಾಡುತ್ತಾ ಚಹಾ ಕುಡಿಯುತ್ತಾ ಅವರು ಕುಳಿತರು.

ಯಾಕೋವನ ದುಡಿಮೆಯ ಪಾಳಿ ಆರಂಭವಾಗುವುದಕ್ಕೆ ಸ್ವಲ್ಪ ಮುಂಚೆ, ಆ ಮನುಷ್ಯ ಯಾರೆಂದು ಆತನನ್ನು ನಾನು ಕೇಳಿದೆ. ಸಣ್ಣನೆ ನಕ್ಕು ಅವನು ಉತ್ತರವಿತ್ತ:

"ಕಾಡು ಹೂವಿನ ಗಿಡದ ಹಾಗೆ ಕಾಣಿಸ್ತಿದಾನೆ, ಅಲ್ಲ? ಅಂದರೆ, ಆತ ನಪುಂಸಕ ಅಂತ ಆಯ್ತು. ದೂರದ ಸೈಬೀರಿಯಾದಿಂದ ಬಂದಿದಾನೆ. ವಿಚಿತ್ರಹಕ್ಕಿ—ಯೋಜನೆಗಳಿಂದಲೇ ಆತ ಬದುಕೋ ಹಾಗೆ ಕಾಣ್ತದೆ."

ಗೊರಸುಗಳ ಹಾಗೆ ಕರಿದಾಗಿ ಗಟ್ಟಿಯಾಗಿದ್ದ ತನ್ನ ಬರಿಯ ಪಾದಗಳಿಂದ ಡೆಕ್ಕನ್ನು ತುಳಿಯುತ್ತ ಸದ್ದುಮಾಡುತ್ತ ನನ್ನಿಂದ ಆತ ಸರಿದು ಹೋದ. ಆದರೆ, ನಡುವೆನಿಂತು, ಹಿಂದಕ್ಕೆ ತಿರುಗಿ ನೋಡಿ, ತನ್ನ ಪಕ್ಕೆಗಳನ್ನು ತುರಿಸುತ್ತ ಅವನೆಂದ:

"ಆತನ ಕೈಕೆಳಗೆ ಕೆಲಸಮಾಡೋಕೆ ನಾನು ಒಪ್ಕೊಂಡಿದೀನಿ. ಪರ್ಮನ್ನು ತಲಪಿದೊಡನೆಯೇ ಹಡಗನ್ನು ಬಿಟ್ಟುಬಿಡ್ತೀನಿ. ಅದು ವಿದಾಯ—ಅಲ್ಯೋಶಾ. ಅಲ್ಲಿಂದ ನಾವು ಉಗಿಬಂಡೀಲಿ ಹೋಗ್ತೀವಿ. ಮುಂದೆ ನದಿಯಲ್ಲಿ, ಮೇಲಿನ ದಿಕ್ಕಿಗೆ. ಅನಂತರ ಕುದುರೆ ಮೇಲೆ ಪ್ರಯಾಣ. ಅಲ್ಲಿಗೆ ನಾವು ತಲಪೋಕೆ ಒಟ್ಟು ಐದುವಾರ ಹಿಡೀತದೆ. ಎಂಥೆಂಥ ಮೂಲೆಗಳಿಗೆಲ್ಲ ಜನ ಹರಿದುಹೋಗಿದಾರೆ ನೋಡು!"

ಯಾಕೋವನ ಅನಿರೀಕ್ಷಿತ ನಿರ್ಧಾರವನ್ನು ಕಂಡು ಆಶ್ಚರ್ಯಪಟ್ಟು ನಾನು ಕೇಳಿದೆ:

"ಆ ಮನುಷ್ಯನನ್ನು ನೀನು ಬಲ್ಲೆಯೇನು?"

"ಎಲ್ಲಿಂದ ಬಂತು? ಹಿಂದೆಂದೂ ಅವನನ್ನು ನೋಡಿಲ್ಲ. ಅವನು ವಾಸಿಸ್ತಿರೋ ಜಾಗಕ್ಕೆ ನಾನೆಂದೂ ಹೋದವನಲ್ಲ."

ಮಾರನೆಯ ಬೆಳಗ್ಗೆ, ಚಡ್ಡಿಯನ್ನೂ ಎಣ್ಣೆಜಿಗುಟಿನ ಕುರಿತೊಗಲಿನ ಅಂಗಿಯನ್ನೂ ಒಂದು ಕಾಲದಲ್ಲಿ ಕರಡಿಬೊಂಬೆಯ ಸೊತ್ತಾಗಿದ್ದ ಈಗ ನಜ್ಜುಗುಜ್ಜಾದ ಅಂಚಿಲ್ಲದ ಹುಲ್ಲಿನ ಹ್ಯಾಟನ್ನೂ

ಹರಕಲಾದ ಮರದ ತೊಗಟೆಯ ಚಪ್ಪಲಿಗಳನ್ನೂ ತೊಟ್ಟು, ಯಾಕೋವ್ ಕಾಣಿಸಿಕೊಂಡ. ಕಬ್ಬಿಣದಂತಹ ಬೆರಳುಗಳಿಂದ ನನ್ನ ಕೈಯನ್ನು ಬಿಗಿಹಿಡಿದು ಅವನೆಂದ:

"ನನ್ನ ಜತೆ ಬಂದುಬಿಡು, ಹ್ಞ? ನಿನ್ನನ್ನೂ ಅವನು ತಗೋತಾನೆ. ನಾನು ಹೇಳಿದರೆ ಸಾಕು—ಆ ಕಾಡು ಹೂವಿನ ಗಿಡ ನಿನ್ನನ್ನು ತಗೊಳ್ಳೋದು ಖಂಡಿತ. ಹೇಳಲೇನು? ನಿನಗೆ ಅಗತ್ಯವಿಲ್ಲದ್ದನ್ನು ಲೆಕ್ಕದಿಂದ ಬಿಟ್ಟು, ಸ್ವಲ್ಪ ಹಣಕೊಡಬಹುದು. ಮನುಷ್ಯನನ್ನು ಕಸಾಯಿ ಮಾಡೋದೂಂತಂದರೆ ಪರಮವಿನೋದ ಅವರ ಪಾಲಿಗೆ. ಅದಕ್ಕಾಗಿ ಅವರು ಅವನಿಗೆ ಹಣವನ್ನೂ ಕೊಡ್ತಾರೆ."

ಆ ನಪುಂಸಕ ಬಿಳಿಯ ಗಂಟೊಂದನ್ನು ಕಂಕುಳಲ್ಲಿ ಹಿಡಿದು ಕಂಬಿಯ ಬಳಿ ನಿಂತು, ಜಡ ನೋಟದಿಂದ ಯಾಕೋವನೆಡೆಗೆ ದಿಟ್ಟಿಸುತ್ತಿದ್ದ. ಅವನ ಆಕೃತಿ, ನೀರಲ್ಲಿ ಮುಳುಗಿದವನ ಶರೀರದ ಹಾಗೆ ಭಾರವಾಗಿ ಊದಿಕೊಂಡಿತ್ತು. ತಗ್ಗಿದ ದನಿಯಲ್ಲಿ ಅವನನ್ನು ನಾನು ಶಪಿಸಿದೆ. ಉಗಿಕೆಲಸಗಾರ ಮತ್ತೊಮ್ಮೆ ನನ್ನ ಕೈಯನ್ನು ಬಿಗಿಹಿಡಿದ.

"ಉಗುಳು ಅವನ ಮೇಲೆ! ಪ್ರತಿಯೊಬ್ಬನೂ ದೇವರನ್ನು ತನ್ನದೇ ಆದ ರೀತಿಯಲ್ಲಿ ಪ್ರಾರ್ಥಿಸ್ತಾನೆ—ನಿನಗೇನು ಅದರಿಂದ? ಸರಿ, ಕೊನೇ ನಮಸ್ಕಾರ. ನೀನು ಸುಖಿಯಾಗಿರುತ್ತೀ ಅಂತ ನಂಬಿದೀನಿ!"

ಹೀಗೆ ಹೇಳಿ ಯಾಕೋವ್ ಶುಮೋವ್, ದೊಡ್ಡ ಕರಡಿಯ ಹಾಗೆ ವೇಗವಾಗಿ ಹೆಜ್ಜೆಗಳನ್ನಿಡುತ್ತ ಹೊರಟುಹೋದ. ಪರಸ್ಪರ ವಿರುದ್ಧ ಭಾವನೆಗಳು ನನ್ನ ಹೃದಯವನ್ನು ಕಾಡುವಂತೆ ಮಾಡಿ ದೂರಹೋದ. ಆ ಉಗಿಕೆಲಸಗಾರನ ಬಗೆಗೆ ನನಗೆ ಕನಿಕರವೆನಿಸಿತ್ತು. ಅವನ ವಿಷಯದಲ್ಲಿ ಸಿಟ್ಟೂ ಬಂದಿತ್ತು. ಅಷ್ಟೊಂದು ದೂರದ ಅಪರಿಚಿತ ಜಾಗಕ್ಕೆ ಆತ ಹೋಗುವ ಅಗತ್ಯವಾದರೂ ಏನಿತ್ತು? ಅಲ್ಲದೆ, ಈ ಯಾಕೋವ್ ಶುಮೋವನಾದರೂ ಯಾವ ಬಗೆಯ ಮನುಷ್ಯ?—ಎಂದು, ಒಂದಿನಿತು ಅಸೂಯೆಯಿಂದಲೂ ತುಸುಗಾಬರಿಯಿಂದಲೂ ನಾನು ಆಗ ಅಚ್ಚರಿಪಟ್ಟುದು ನನಗೆ ನೆನಪಿದೆ.

೧೨

ಶರತ್ಕಾಲದ ಕೊನೆಯ ಭಾಗದಲ್ಲಿ, ಹಡಗು ಓಡಾಟ ನಿಲ್ಲಿಸಿದಾಗ, ದೇವಪ್ರತಿಮೆಗಳಿಗೆ ಬಣ್ಣ ಬಳಿಯುವ ಒಂದು ಕರ್ಮಾಗಾರದಲ್ಲಿ ನಾನು ವೃತ್ತಿಶಿಷ್ಯನಾದೆ. ಆದರೆ, ನನ್ನ ಅಭ್ಯಾಸದ ಎರಡನೆಯ ದಿನ, ನನ್ನ ಒಡತಿ—ಕುಡಿತದ ಚಟವಿದ್ದ ಮೆತ್ತಗಿನ ಪುಟ್ಟಮುದುಕಿ—ಜಾಹೀರು ಮಾಡಿದಳು:

"ಈಗ ದಿನಗಳು ಚಿಕ್ಕವು, ಸಾಯಂಕಾಲಗಳು ದೀರ್ಘ. ಆದ್ದರಿಂದ, ಪ್ರತಿದಿನವೂ ಬೆಳಗ್ಗೆ ನೀನು ಅಂಗಡಿಗೆ ಹೋಗಿ ವ್ಯಾಪಾರದಲ್ಲಿ ನೆರವಾಗಬೇಕು, ಮತ್ತು ಸಂಜೆಯ ಹೊತ್ತು ಅಭ್ಯಾಸ ಮಾಡ್ಬೇಕು."

ಚುರುಕಾದ, ಮಧುರವೆನಿಸುವ ರೀತಿಯಲ್ಲಿ ಸ್ಫುರದ್ರೂಪಿಯಾದ, ಒಬ್ಬ ಯುವಕ ಅಂಗಡಿ-

ಸಹಾಯಕನ ವಶಕ್ಕೆ ನನ್ನನ್ನು ಆಕೆ ಕೊಟ್ಟಳು. ಆತನೂ ನಾನೂ ಉಷಃಕಾಲದ ಚಳಿಚಳಿಯಾದ ಇರುಳಿನಲ್ಲಿ, ಕೆಳಮಾರ್ಕೆಟನ್ನು ತಲುಪುವವರೆಗೂ, ಜೊಂಪು ಹಿಡಿದ ಇಲ್ಯಾಂಕಾರಸ್ತೆಯಲ್ಲಿ ಶಹರವನ್ನು ಹಾದು ಸಾಗುತ್ತಿದ್ದೆವು. ಕೆಳಮಾರ್ಕೆಟಿನಲ್ಲಿ ವ್ಯಾಪಾರದ ಚಪ್ಪರಹಾದಿಯ ಎರಡನೆಯ ಅಂತಸ್ತಿನಲ್ಲಿ ಆ ಅಂಗಡಿಯಿತ್ತು. ಅದು, ಹಿಂದೆ ದಾಸ್ತಾನು ಕೊಠಡಿಯಾಗಿತ್ತು. ಸಣ್ಣದಾಗಿ ಕತ್ತಲು ತುಂಬಿರುತ್ತಿತ್ತು. ಕಬ್ಬಿಣದೊಂದು ಬಾಗಿಲೂ ಪುಟ್ಟದೊಂದು ಕಿಟಿಕಿಯೂ ಇದ್ದುವು. ಕಿಟಿಕಿಯಾಚೆ ಮುಂಭಾಗದಲ್ಲಿ, ಉದ್ದಕ್ಕೂ, ಕಬ್ಬಿಣದ ಛಾವಣಿಯ ಮುಖಮಂಟಪವಿತ್ತು. ನಮ್ಮ ಅಂಗಡಿಯಲ್ಲಿ ದೊಡ್ಡ ಸಣ್ಣ ಪ್ರತಿಮೆಗಳೂ ಪ್ರತಿಮೆಗಳ ಚೌಕಟ್ಟುಗಳೂ ಹೇರಳವಾಗಿ ತುಂಬಿರುತ್ತಿದ್ದುವು. ಈ ಚೌಕಟ್ಟುಗಳಲ್ಲಿ ಕೆಲವು ಸಾದಾ, ಕೆಲವು ವರ್ಣರಂಜಿತ—ಸಾಲಂಕೃತ. ಹಳದಿ ತೊಗಲಿನ ಹೊದಿಕೆಗಳಿದ್ದ ಹಳೆಯ ಸ್ಲಾವೊನಿಕ್ ಲಿಪಿಯಲ್ಲಿ ಮುದ್ರಿತವಾಗಿದ್ದ ಧಾರ್ಮಿಕ ಗ್ರಂಥಗಳ ದಾಸ್ತಾನೂ ಅಂಗಡಿಯಲ್ಲಿತ್ತು. ನಮ್ಮದರ ಮಗ್ಗುಲಲ್ಲೇ, ದೇವಪ್ರತಿಮೆಗಳ ಹಾಗೂ ಪುಸ್ತಕಗಳ ಇನ್ನೊಂದು ಅಂಗಡಿಯಿತ್ತು. ಅದು, ಕಪ್ಪುಗಡ್ಡದ ವ್ಯಾಪಾರಿಯೊಬ್ಬನದು. ಆತ ಪ್ರಾಚೀನ ನಿಷ್ಠೆಯ ಧರ್ಮಾಂಧ. ಕೆರ್ಜೆನೆಟ್ಸ್ ನದಿಯುದ್ದಕ್ಕೂ ವೋಲ್ಗಾದಾಚೆಗೂ ಆತ ಪ್ರಸಿದ್ಧನಾಗಿದ್ದ. ಅವನಿಗೆ ನನ್ನದೇ ವಯಸ್ಸಿನ ಸಣಕಲು ಮಗನೊಬ್ಬನಿದ್ದ. ಆ ಹುಡುಗನ ಮುಖ, ಮುದುಕನ ಮುಖದಂತೆ ಸುಕ್ಕುಗಟ್ಟಿತ್ತು. ಅವನಿಗೆ, ಅಲೆಯುವ ಇರಿಯುವ ಕಣ್ಣುಗಳಿದ್ದುವು.

ಅಂಗಡಿಯನ್ನು ತೆರೆದ ಬಳಿಕ ಬಿಸಿನೀರಿಗೋಸ್ಕರ ಹತ್ತಿರದ ಪಾನಮಂದಿರಕ್ಕೆ ಓಡುವುದು ನನ್ನ ಪಾಲಿನ ಕೆಲಸವಾಗಿತ್ತು. ಚಹಾ ತಯಾರಿಸಿ ಕುಡಿಯುತ್ತಿದ್ದೆವು. ಬಳಿಕ ನಾನು, ಅಂಗಡಿಯನ್ನು ಓರಣಗೊಳಿಸುತ್ತಿದ್ದೆ. ದಾಸ್ತಾನಿನ ಮೇಲಣ ಧೂಳು ಝಾಡಿಸುತ್ತಿದ್ದೆ. ಎಲ್ಲವೂ ಸರಿಯಾಗಿ ವ್ಯವಸ್ಥೆಗೊಂಡಾಗ, ಮುಂಬಾಗಿಲಲ್ಲಿ ನಿಂತು, ಗಿರಾಕಿಗಳು ಮಗ್ಗುಲಿನ ಅಂಗಡಿಗೆ ಹೋಗದೆ ನಮ್ಮಲ್ಲಿಗೇ ಬರುವಂತೆ ಮಾಡುವುದು ನನ್ನ ಕೆಲಸವಾಗಿತ್ತು.

ಅಂಗಡಿಯ ಸಹಾಯಕ ನನಗೆ ಹೇಳಿದ:

"ಗಿರಾಕಿಗಳು ಮೂರ್ಖರು. ಎಲ್ಲಿಂದ ಕೊಂಡರೂ ಅವರಿಗೆ ಒಂದೇ. ಮುಖ್ಯ, ಸಾಮಾನು ಅಗ್ಗವಿದ್ದರಾಯ್ತು. ಒಳ್ಳೇದು ಯಾವುದು ಕೆಟ್ಟದು ಯಾವುದು ಅಂತ ಹೇಳೋಕೆ ಅವರಿಗೆ ತಿಳೀದು."

ಪ್ರತಿಮೆ—ಹಲಗೆಗಳನ್ನು ವೇಗವಾಗಿ ಒಟ್ಟಿಗೆ ತಟ್ಟುತ್ತ, ವ್ಯಾಪಾರದ ಬಗೆಗೆ ತನ್ನ ಜ್ಞಾನವನ್ನು ಪ್ರದರ್ಶಿಸುತ್ತ, ಆತ ನನಗೆ ಪಾಠ ಹೇಳಿಕೊಡುತ್ತಿದ್ದ:

"ಸೊಗಸಾದ ಒಂದು ಕೃತಿ ಇಲ್ಲದೆ—ಬಹಳ ಅಗ್ಗ, ಮೂರಡಿ ಅಗಲ ನಾಲ್ಕಡಿ ಎತ್ತರ—ಬೆಲೆಗೆ ಯೋಗ್ಯವಾದ ವ್ಹಾಲು; ಇನ್ನೊಂದು: ಆರಡಿ ಅಗಲ ಏಳಡಿ ಎತ್ತರ—ಬೆಲೆಗೆ ಯೋಗ್ಯವಾದ.....ಸಂತರದು ಗೊತ್ತೇನು? ನೆನಪಿಡೋದಕ್ಕೆ ಪ್ರಯತ್ನಿಸು: ವೊನಿಫಾತಿ—ಕುಡುಕರಿಗಾಗಿ; ಹುತಾತ್ಮಳಾದ ವಾರ್ವರಾ—ಹಲ್ಲುನೋವು ಮತ್ತು ಅಕಾಲಮರಣಕ್ಕಾಗಿ; ಧನ್ಯ ವಾಸಿಲಿ—ಜ್ವರ ಮತ್ತು ಉತ್ಕಟಾವಸ್ಥೆಯ ಅರ್ಧಪ್ರಜ್ಞೆಗಾಗಿ. ಕನ್ನಿಕೆಯರದು ಗೊತ್ತೆ? ನೋಡು: ಪರಿತಪಿಸುವ ಕನ್ನಿಕೆ; ಮೂರು ಅಸ್ತ್ರಗಳ ಕನ್ನಿಕೆ; ಅಳುವ ಕನ್ನಿಕೆ; ನನ್ನ ದುಃಖಶಮನವಾಡು ಕನ್ನಿಕೆ; ಕಜಾನ್, ಪೊಕ್ರೋವ್, ಸೆಮಿಸ್ಟೈಲ್ನಾಯ....."

ಆಕೃತಿ ಹಾಗೂ ತಯಾರಿಕೆಯ ಮಟ್ಟಗಳಿಗೆ ಅನುಗುಣವಾಗಿ ದೇವಪ್ರತಿಮೆಗಳ ಬೆಲೆ ಗಳನ್ನು ನಾನು ಕಂಠಪಾಠಮಾಡಿದೆ. ಕನ್ನಿಕೆಯ ಪ್ರತಿಮೆಗಳಲ್ಲಿನ ಭಿನ್ನತೆ—ವ್ಯತ್ಯಾಸಗಳನ್ನು ಕಲಿತೆ. ಆದರೆ, ವಿವಿಧ ಸಂತರು ಕರುಣಿಸುವ ನೆರವನ್ನು ನೆನಪಿಡುವುದು ನನಗೆ ಕಷ್ಟವೆನಿಸಿತು

ಅಂಗಡಿಯ ಬಾಗಿಲಲ್ಲಿ ನಿಂತು ನಾನು, ಹಗಲುಗನಸು ಕಾಣುತ್ತಲಿದ್ದುದನ್ನು ಕಂಡಾಗಲೆಲ್ಲ ಅಂಗಡಿ—ಸಹಾಯಕ, ನನ್ನ ಜ್ಞಾನವನ್ನು ಪರೀಕ್ಷಿಸುತ್ತಿದ್ದ.

"ಹೆರಿಗೆನೋವನ್ನು ನಿವಾರಿಸುವುದಕ್ಕೆ ಯಾರು ?"

ನನ್ನ ಉತ್ತರ ತಪ್ಪಾಗಿದ್ದರೆ, ತಿರಸ್ಕಾರಪೂರ್ವಕವಾಗಿ ಆತನೆನ್ನುತ್ತಿದ್ದ:

"ನಿನಗೆ ತಲೆ ಇರೋದಾದರೂ ಯಾತಕ್ಕೆ ಅಂತೀನಿ?"

ಇದನ್ನೆಲ್ಲ ನೆನಪಿಡುವುದಕ್ಕಿಂತಲೂ ಗಿರಾಕಿಗಳು ಕೊಳ್ಳುವಂತೆ ಮಾಡುವುದು ಹೆಚ್ಚು ಪ್ರಯಾಸದ್ದಾಗಿತ್ತು. ದೇವರ ಪ್ರತಿಮೆಗಳಮೇಲಿನ ಕುರೂಪ ಮುಖಗಳನ್ನು ನಾನು ಇಷ್ಟಪಡುತ್ತಿ ರಲಿಲ್ಲ. ಅವನ್ನು ಹೇಗೆ ಮಾರಬೇಕೆಂಬುದು ನನಗೆ ತೋರುತ್ತಿರಲಿಲ್ಲ. ಅಜ್ಜಿಯ ಕಥೆಗಳಿಂದ, ಕನ್ನಿಕೆಯು ಯುವತಿಯೆಂಬ ಒಳ್ಳೆಯವಳೆಂಬ ಸುಂದರಿಯೆಂಬ ಭಾವನೆ ನನ್ನಲ್ಲಿ ಉಂಟಾಗಿತ್ತು ನಿಯತಕಾಲಿಕಗಳಲ್ಲಿ ಅಚ್ಚಾಗುತ್ತಿದ್ದ ಚಿತ್ರಗಳಲ್ಲೂ ಅದೇ ರೀತಿ ಅವಳಿದ್ದಳು. ಆದರೆ ಪ್ರತಿಮೆಗಳ ಮೇಲೆ ಆಕೆ, ವಯಸ್ಸಾದವಳಂತೆ—ತೀವ್ರಕಾಹಿಲೆಗೆ ತುತ್ತಾದವಳಂತೆ—ಕಾಣಿಸುತ್ತಿದ್ದಳು ನೀಳವಾದ ಡೊಂಕು ಮೂಗೂ ಮರದ ಕೈಗಳೂ ಅವಳಿಗೆ ಇರುತ್ತಿದ್ದುವು.

ಸಂತೆಯ ದಿನಗಳಲ್ಲಿ—ಬುಧವಾರ ಮತ್ತು ಶುಕ್ರವಾರಗಳಲ್ಲಿ ನಮಗೆ ಒಳ್ಳೆಯ ವ್ಯಾಪಾ ವಾಗುತ್ತಿತ್ತು. ನಮ್ಮ ಕಟ್ಟಡದ ಮೆಟ್ಟಿಲುಗಳನ್ನು ರೈತರು, ಮುದುಕಿಯರು,-ಒಮ್ಮೊಮ್ಮೆ ಇಡಿಯ ಕುಟುಂಬಗಳೇ—ಎಡೆಬಿಡದೆ ಹತ್ತುತ್ತಿದ್ದರು. ಅವರೆಲ್ಲ ಪ್ರಾಚೀನ ನಿಷ್ಠೆಯ ಹಿಂಬಾಲಕರು ವೋಲ್ಗಾ ದಂಡೆಯ ಕಾಡುಗಳ ಸಿಡುಕರಾದ ಸಂಶಯಗ್ರಸ್ತರಾದ ಜನ ಕುರಿಯ ತೊಗಲುಗಳನ್ನೂ ಕೈಮುಗ್ಗದ ದಪ್ಪನೆಯ ಅರಿವೆಯನ್ನೂ ಹೊದೆದುಕೊಂಡ, ನಯನಾಜೂಕಿಲ್ಲದ ಅಡ್ಡಾದಿಡ್ಡಿ ಚ ನೆಯ ಮನುಷ್ಯನೊಬ್ಬ, ಕುಸಿದು ಬೀಳುವೆನೇನೋ ಎಂದು ಭಯಪಡುವನಂತೆ, ನಿಧಾನವಾಗಿ ಮು ಮಂಟಪದುದ್ದಕ್ಕೂ ನಡೆದು ಬರುತ್ತಿದ್ದುದನ್ನು ನಾನು ಕಾಣುತ್ತಿದ್ದೆ. ಅವನ ಬಳಿಸಾರಲು ನನ ನಾಚಿಕೆ ಎನಿಸುತ್ತಿತ್ತು, ಸಂಕೋಚವೆನಿಸುತ್ತಿತ್ತು. ಆತನ ಹಾದಿಗೆ ಅಡ್ಡವಾಗಿ ನಿಂತು, ಅವ ಗಾತ್ರದ ಬೂಟುಗಳ ಸುತ್ತಲೂ ಕುಣಿಯಲು, ಗುಂಗಾಡಿನಂತೆ ಟುಂಯ್‌ಗುಟ್ಟಲು, ನಾನು ಬಹ ಪ್ರಯತ್ನಪಡಬೇಕಾಗುತ್ತಿತ್ತು.

"ತಮಗೇನು ಬೇಕು, ಸ್ವಾಮಿ ? ಕೈಪಿಡಿಗಳು, ಪ್ರಾರ್ಥನಾಗ್ರಂಥಗಳು, ಟಿಪ್ಪಣಿಗಳ ವ್ಯಾಖ್ಯೆಗಳೂ ಇರೋ ಗೀತಸ್ತೋತ್ರಗಳು, ಯೆಫ್ರೆಮ್ ಸಿರಿನ್ ಮತ್ತು ಕಿರಿಲ್ಲರ ಗ್ರಂಥಗಳ ಒಮ್ಮೆ ಬಂದು ನೋಡೋ ಕೃಪೆ ತೋರಿಸಿ. ತಾವು ಇಷ್ಟಪಡೋ ಯಾವ ದೇವಪ್ರತಿಮೆ ಬೇಕ ದರೂ ಇದೆ. ತರಹೇವಾರಿ ಬೆಲೆಗಳು, ಅತ್ಯುತ್ತಮ ಕಲೆಗಾರಿಕೆ, ಗಟ್ಟಿ ಬಣ್ಣ. ತಮಗೆ ಬೇಕಾ ಯಾವ ಸಂತನೇ ಇರಲಿ, ಕನ್ನಿಕೆಯೇ ಇರಲಿ, ನಾವು ಬಣ್ಣ ಹಾಕಿಕೊಡ್ತೇವೆ. ಪ್ರಾಯಶ ತಮಗೆ, ಯಾರದಾದರೂ ಪೋಷಕ ಸಂತ ಅಥವಾ ಕುಟುಂಬದ ಸಂತ ಬೇಕಾಗಿದೆಯೇನೊ ಶಪ್ಯಾದಲ್ಲೆಲ್ಲ ನಮ್ಮದೇ ಅತ್ಯುತ್ಕೃಷ್ಟ ಕರ್ಮಾಗಾರ! ಶಹರದಲ್ಲಿ ಇದೇ ಅತಿಶ್ರೇಷ್ಠ ಅಂಗಡಿ

ದುರ್ಭೇದ್ಯನಾದ ಆ ಗಿರಾಕಿ, ನಾನೊಂದು ನಾಯಿಯೇನೋ ಎನ್ನುವಂತೆ, ಸ್ವಲ್ಪ ಹೊತ್ತ

ೌನವಾಗಿ ನನ್ನನ್ನೆ ದಿಟ್ಟಿಸಿ ನೋಡುತ್ತಿದ್ದ. ಬಳಿಕ ಇದ್ದಕ್ಕಿದ್ದಂತೆ, ಕೈಯಿಂದ ನನ್ನನ್ನು ಬಲ ಾಗಿ ಬದಿಗೆ ತಳ್ಳಿ, ನೆರೆಯವನ ಅಂಗಡಿಯನ್ನು ಪ್ರವೇಶಿಸುತ್ತಿದ್ದ. ಇತ್ತ ನಮ್ಮ ಸಹಾಯಕ, ನ್ನ ದೊಡ್ಡ ಕಿವಿಗಳನ್ನು ತೀಡಿಕೊಳ್ಳುತ್ತ, ಸಿಟ್ಟಿನಿಂದ ಗೊಣಗುತ್ತಿದ್ದ:

"ಹೋಗೋಕೆ ಬಿಟ್ಟೆ, ಅಲ್ಲ? ಹುಂ! ಸೊಗಸಾದ ವ್ಯಾಪಾರಗಾರ ನೀನು!"

ಆಗ ಪಕ್ಕದ ಅಂಗಡಿಯಿಂದ, ಮೃದು ಧ್ವನಿಯಿಂದ ಹೊರಟ ಮಧುರ ಪದಗಳು ಕೇಳಿಸು ದ್ದುವು:

"ನನ್ನ ಪ್ರಿಯಗೆಳೆಯ, ನಾವು ಮಾಡ್ತಿರೋದು ಕುರಿ ತೊಗಲುಗಳ ವ್ಯಾಪಾರವಲ್ಲ, ತೊಗಲಿನ ಾದರಕ್ಷೆಗಳ ವ್ಯಾಪಾರವೂ ಅಲ್ಲ. ಇವು ದೇವರ ಕೃಪೆಗಳು; ಬೆಳ್ಳಿ ಅಥವಾ ಬಂಗಾರಕ್ಕಿಂತ ಚ್ಚು ಅಮೂಲ್ಯ; ಲೌಕಿಕ ಬೆಲೆಗೆ ಮೀರಿದ್ದು...."

ನಮ್ಮ ಅಂಗಡಿ ಸಹಾಯಕ, ಅಸೂಯೆಯಿಂದಲೂ ಮೆಚ್ಚುಗೆಯಿಂದಲೂ ಪಿಸುಗುಡುತ್ತಿದ್ದ:

"ಹಾಳಾಗಿ ಹೋಗಲಿ ಇದೆಲ್ಲ! ಆ ರೈತನ ಕಿವಿಗಳನ್ನು ಆತ ಹೇಗೆ ತೊಳೀತಿದಾನೆ, ಕೇಳು! ವನಿಂದ ಪಾಠ ಕಲಿ!"

ಒಂದು ಕೆಲಸವನ್ನು ಒಪ್ಪಿಕೊಂಡಮೇಲೆ ಅದನ್ನು ನಾನು ಚೆನ್ನಾಗಿ ಮಾಡಲೇಬೇಕೆಂಬ ಂಬುಗೆಯಿಂದ, ಮನಃಪೂರ್ವಕವಾಗಿ ಕಲಿತುಕೊಳ್ಳಲು ಯತ್ನಿಸಿದೆ. ಆದರೆ, ಗಿರಾಕಿಗಳನ್ನು ರುಳುಗೊಳಿಸುವುದರಲ್ಲೂ ಅವರು ಕೊಳ್ಳುವಂತೆ ಮಾಡುವುದರಲ್ಲೂ ಪ್ರತಿಭೆಯನ್ನೇನೂ ನು ತೋರಿಸಲಿಲ್ಲ. ಆ ಮೌನದ ಸಿಡುಕ ರೈತರ ಬಗೆಗೂ ಭಯಭೀತ ಹಾಗೂ ಬಡಕಲು ಯಿಯ ಮುಖಭಾವದ ಇಲಿಗಳಂತಹ ಮುದುಕಿಯರ ಬಗೆಗೂ ನನಗೆ ಯಾವಾಗಲೂ ಕನಿಕರ ನಿಸುತ್ತಿತ್ತು. ದೇವಪ್ರತಿಮೆಗಳ ನಿಜವಾದ ಬೆಲೆಯನ್ನು ಅವರ ಕಿವಿಗಳಲ್ಲಿ ಪಿಸುನುಡಿಯ ೇಕೆಂದು, ಹೆಚ್ಚಿನ ಇಪ್ಪತ್ತು ಕೊಪೆಕ್‌ಗಳನ್ನು ಅವರು ಕಳೆದುಕೊಳ್ಳದಂತೆ ಮಾಡಬೇಕೆಂದು, ನಗೆ ಯಾವಾಗಲೂ ಅಪೇಕ್ಷೆಯಾಗುತ್ತಿತ್ತು. ಅವರೆಲ್ಲರೂ ಬಹಳ ಬಡವರಾಗಿ ಹಸಿದವರಾಗಿ ನಗೆ ಕಂಡರು. ಇಂಥ ಸ್ಥಿತಿಯಲ್ಲಿ ಅವರು, ಸಾಧಾರಣವಾಗಿ ಎಲ್ಲರೂ ಕೊಳ್ಳುವ ಗೀತ ್ತೋತ್ರಕ್ಕೆ ಮೂರೂವರೆ ರೂಬಲು ಹೇಗೆ ತೆರಬಲ್ಲರೆಂದು ನಾನು ಆಶ್ಚರ್ಯಪಡುತ್ತಿದ್ದೆ.

ಗ್ರಂಥಗಳ ಬಗೆಗೆ ಅವರ ಪರಿಜ್ಞಾನವನ್ನೂ ದೇವಪ್ರತಿಮೆಗಳ ಅಲಂಕಾರವನ್ನು ಕುರಿತ ಮರ್ಶಾದೃಷ್ಟಿಯನ್ನೂ ಕಂಡು, ನಾನು ಅಪ್ರತಿಭನಾಗುತ್ತಿದ್ದೆ. ಒಂದು ದಿನ, ನಮ್ಮ ಅಂಗಡಿ ೊಳಕ್ಕೆ ಬರುವಂತೆ ಮರುಳುಗೊಳಿಸಲು ನಾನು ಯತ್ನಿಸಿದ ನರೆಗೂದಲ ಮುದುಕನೊಬ್ಬ ನನಗೆ ದ:

"ರಷ್ಯಾದಲ್ಲೇ ಇದು ದೇವಪ್ರತಿಮೆಗಳ ಅತ್ಯುತ್ಕೃಷ್ಟ ಕರ್ಮಾಗಾರ ಅಂತ ನೀನು ಹೇಳಿ ೇದು ನಿಜವಲ್ಲ, ಮಗೂ. ಅತ್ಯುತ್ಕೃಷ್ಟವಾದದ್ದು ಮಾಸ್ಕೋದಲ್ಲಿರೋ ರೊಗೊಜಿನ್ ರ್ಮಾಗಾರ.

ಅವಹೇಳನಗೊಂಡು ನಾನು ಬದಿಗೆ ಸರಿದಂತೆ, ಆತ ಪಕ್ಕದವನ ಅಂಗಡಿಯನ್ನೂ ಹೊಗದೆ ಾನವಾಗಿ ತನ್ನ ಹಾದಿ ಹಿಡಿದು ಹೋದ.

"ಸಿಕ್ಕಿಬಿದ್ದೆಯೇನು?" ಎಂದು ಅಂಗಡಿಸಹಾಯಕ ಕೆಣಕುವ ಧ್ವನಿಯಲ್ಲಿ ಕೇಳಿದ.

"ರೊಗೊಜಿನ್ ಕರ್ಮಾಗಾರದ ವಿಷಯ ನೀನು ಯಾವತ್ತಾದರೂ ನನಗೆ ಹೇಳಿದ್ದೆಯೊ?"

ಸಹಾಯಕ ಶಪಿಸತೊಡಗಿದ:

"ಇವನಂಥ ಶಾಂತವಾದ ರಹಸ್ಯಮಯವಾದ ಪುಟ್ಟ ಪ್ರಾಣಿಗಳೇ ಎಲ್ಲವನ್ನೂ ತಿ
ಕೊಂಡಿದ್ದು, ಅತಿಯಾಗಿ ಮಾತ್ಹಾಡ್ತಾ, ಸುತ್ತುಮುತ್ತೆಲ್ಲ ತೆವಳಿಕೊಂಡು ಹೋಗ್ತವೆ. ಹಾವು!

ಸಂಕುಚಿತ ಮನಸ್ಸಿನ ಸ್ವಯಂತೃಪ್ತಿಯ ಅಹಂಭಾವದ ಈ ಮನುಷ್ಯನಿಗೆ—ಮಾಸಿ
ಸ್ಫುರದ್ರೂಪಿಗೆ—ರೈತರನ್ನು ಕಂಡರೆ ಆಗುತ್ತಿರಲಿಲ್ಲ. ಒಮ್ಮೆ ಆತ ನನ್ನೊಡನೆ ಅಂದ:

"ನನ್ನಲ್ಲಿ ಚಾತುರ್ಯವಿದೆ; ಸ್ವಚ್ಛವಾದ ವಸ್ತುಗಳನ್ನು ಸುವಾಸನೆಗಳನ್ನು—ಸುಗಂ
ದ್ರವ್ಯ ಹಾಗೂ ಶುಚಿಗೊಳಿಸಿದ ನೀರಿನಂತಹ ವಸ್ತುಗಳನ್ನು ನಾನು ಪ್ರೀತಿಸ್ತೇನೆ. ಇಂಥ ಅ
ರುಚಿ ಇರೋ ಮನುಷ್ಯ, ತನ್ನ ಯಜಮಾನಿತಿಗೆ ಐದು ಕೊಪೆಕ್ ಬರಲೀಂತ, ರೈತರಿಗೆ ಬಾ
ನಮಸ್ಕರಿಸಿ ಕುರ್ನೀಸು ಮಾಡೋದನ್ನು ಯೋಚಿಸ್ಕೊ! ಇದನ್ನೆಲ್ಲ ಹೇಗೆ ಸಹಿಸ್ತಿದಿ
ಅಂದ್ಕೊಂಡೆ? ರೈತನ ಯೋಗ್ಯತೆಯಾದರೂ ಎಂಥದು? ನಾರುವ ಕುರಿತೊಗಲು! ಭೂ
ಮೇಲೆ ಹರಿದಾಡೋ ಹೇನು! ನಾನಾದರೋ...."

ಸಂಕಟಗೊಂಡು ಆತ ಮಾತು ನಿಲ್ಲಿಸಿದ.

ನಾನು ರೈತರನ್ನು ಇಷ್ಟಪಟ್ಟೆ. ಅವರಲ್ಲಿ ಪ್ರತಿಯೊಬ್ಬರಲ್ಲೂ, ಯಾಕೋವ್‌ನಲ್ಲಿ ನಾ
ಕಂಡಿದ್ದಂತೆ, ರಹಸ್ಯವಾದುದೇನನ್ನೋ ಗ್ರಹಿಸಿದೆ.

ತನ್ನ ಕುರಿತೊಗಲಿನ ಮೇಲೊಂದು ಉಡುಪು ಎಳೆದುಕೊಂಡ. ಅಡ್ಡಾದಿಡ್ಡಿಯಾಗಿ ನ
ಯುವ ಒಂದು ಮನುಷ್ಯಾಕೃತಿ ಅಂಗಡಿಯೊಳಕ್ಕೆ ಬರುತ್ತಿತ್ತು. ಸಿಕ್ಕುಗಟ್ಟಿದ ಉಣ್ಣೆ ಟೋ
ಯನ್ನು ಆ ಮನುಷ್ಯ ಅಲ್ಲಿ ತಲೆಯ ಮೇಲಿಂದ ತೆಗೆದು, ದೀಪ ಮಿನುಗುತ್ತಿದ್ದ ದೇವಪ್ರತಿಮೆ
ಮೂಲೆಯತ್ತ ತನ್ನ ದೃಷ್ಟಿ ನೆಟ್ಟು, ಎರಡು ಬೆರಳುಗಳಿಂದ ಶಿಲುಬೆಯ ವಂದನೆ ಮಾಡುತ್ತಿ
ಬಳಿಕ, ಪರಿಶುದ್ಧಗೊಳಿಸದೇ ಇದ್ದ ಹೊಸ ಪ್ರತಿಮೆಗಳು ದೃಷ್ಟಿಗೆ ಬೀಳದಂತೆ, ಮುಖತಿರುಗಿ
ತಿದ್ದ. ಕೊನೆಯಲ್ಲಿ, ಸುತ್ತಲೂ ಮೌನನೋಟ ಬೀರಿ ಆತನೆನ್ನುತ್ತಿದ್ದ:

"ವ್ಯಾಖ್ಯೆ ಇರೋ ಗೀತಸ್ತೋತ್ರ ಒಂದು ಕೊಡಿ, ನೋಡೋಣ."

ತನ್ನ ಮೇಲುಡುಪಿನ ತೋಳುಗಳನ್ನು ಹಿಂದಕ್ಕೆ ಮಡಚಿ, ಒಡೆದ ಮಣ್ಣಿನ ಬಣ್ಣದ ತ
ತುಟಿಗಳನ್ನು ನೀರವವಾಗಿ ಚಲಿಸುತ್ತ, ಮೊದಲಪುಟದ ಅಕ್ಷರಗಳನ್ನು ಬಹಳ ಹೊತ್ತು ಶ್ರಮಪಟ
ಓದುತ್ತಿದ್ದ.

"ಬಹುಶಃ ನಿಮ್ಮಲ್ಲಿ ಇದಕ್ಕಿಂತಲೂ ಹಳೆಯದು ಇದೆ—ಅಲ್ಲವೆ?"

"ಹಳೆಯ ಧರ್ಮಗ್ರಂಥಗಳಿಗೆ ಒಂದುಸಾವಿರ ರೂಬಲಾಗ್ತದೆ, ನೋಡಿ."

"ಗೊತ್ತು."

ಬೆರಳನ್ನು ನಾಲಿಗೆಗೆ ಮುಟ್ಟಿಸಿ ತೇವಗೊಳಿಸುತ್ತ ಆತ ಪುಟತಿರುವುತ್ತಿದ್ದ. ಪುಟದ ಅಂ
ನಲ್ಲಿ ಕಪ್ಪುಕಲೆಯೊಂದು ಉಳಿಯುತ್ತಿತ್ತು. ಅಂಗಡಿಸಹಾಯಕ ಸಿಟ್ಟುಬೆಂಕಿಯಾಗಿ,
ರೈತನ ತಲೆಯ ತುದಿಯನ್ನೆ ದುರದುರನೆ ನೋಡುತ್ತ, ಹೇಳುತ್ತಿದ್ದ:

"ಪವಿತ್ರಧರ್ಮಗ್ರಂಥಗಳೆಲ್ಲ ಒಂದೇ ಕಾಲದವು. ಪ್ರಭು ತನ್ನ ಮಾತನ್ನು ಬದಲಾಯಿಸೊ
ದಿಲ್ಲ."

"ಅದನ್ನೆಲ್ಲಾ ನಾವು ಕೇಳಿದೀವಿ. ಪ್ರಭು ಬದಲಾಯಿಸೋದಿಲ್ಲ; ಆದರೆ, ನಿಕೊ

ದಲಾಯಿಸಿದ."

ಆ ಗಿರಾಕಿ ಪುಸ್ತಕವನ್ನು ಮುಚ್ಚಿಟ್ಟು ಮೌನವಾಗಿ ಅಂಗಡಿಯಿಂದ ಹೊರಬೀಳುತ್ತಿದ್ದ.

ಕೆಲವೇಳೆ ದೂರಕಾಡುಗಳ ಈ ಜನ ಅಂಗಡಿಸಹಾಯಕನೊಡನೆ ವಾದಿಸುತ್ತಿದ್ದರು. ಪವಿತ್ರ ರವಣಿಗೆಗಳ ವಿಷಯ ಅವನಿಗಿಂತ ಹೆಚ್ಚಾಗಿ ಅವರಿಗೇ ತಿಳಿದಿತ್ತೆಂಬುದು, ಆ ವಾದದಿಂದ ನನಗೆ ಷ್ಟವಾಗುತ್ತಿತ್ತು.

"ಜವುಗುಕಾಡಿನ ಅನಾಗರಿಕರು," ಎಂದು ಅಂಗಡಿಸಹಾಯಕ ಗೊಣಗುತ್ತಿದ್ದ.

ಬೇರೆಯೂ ಒಂದು ವಿಷಯ ನನಗೆ ತಿಳಿದು ಬಂತು. ಆಧುನಿಕ ಪುಸ್ತಕಗಳನ್ನು ರೈತ ಷ್ಟಪಡದೇ ಇದ್ದರೂ, ಅವುಗಳತ್ತ ಭಕ್ತಿಪೂರ್ವಕವಾಗಿ ಆತ ನೋಡುತ್ತಿದ್ದ. ಹಕ್ಕಿಯ ಾಗೆ ತನ್ನ ಕೈಯಿಂದ ಅವು ಹಾರಿಹೋಗುವವೇನೋ ಎಂಬಂತೆ, ಅವುಗಳನ್ನು ಅತ್ಯಂತ ಎಚ್ಚ ಕೆಯಿಂದ ಆತ ಎತ್ತಿಕೊಳ್ಳುತ್ತಿದ್ದ. ಇದರಿಂದ ನನಗೆ ಬಹಳವಾಗಿ ಸಂತೋಷವಾಗುತ್ತಿತ್ತು. ಾಕೆಂದರೆ, ನನ್ನ ದೃಷ್ಟಿಯಲ್ಲಿ ಒಂದು ಪುಸ್ತಕವು ಅದ್ಭುತವಾದ ವಸ್ತು ; ಗ್ರಂಥಕರ್ತನ ಆತ್ಮ ದರಲ್ಲಿ ಬಂಧಿತವಾಗಿರುತ್ತಿತ್ತು. ಯಾವುದೇ ಪುಸ್ತಕವನ್ನು ನಾನು ಓದಿದಾಗಲೆಲ್ಲ, ಆ ಆತ್ಮ ನ್ನು ನಾನು ವಿಮುಕ್ತಗೊಳಿಸುತ್ತಿದ್ದೆ. ಅದು, ರಹಸ್ಯಮಯವಾದ ರೀತಿಯಲ್ಲಿ ನನ್ನೊಡನೆ ತ್ಮೀಯ ಸಂಪರ್ಕ ಬೆಳೆಸುತ್ತಿತ್ತು.

ಆಗಾಗ್ಗೆ, ಈ ಮುದುಕರೂ ಮುದುಕಿಯರೂ, ಸುಧಾರಕ ನಿಕೊನನ ಕಾಲಕ್ಕಿಂತಲೂ ಂದಿನ ಹಳೆಯ ಪುಸ್ತಕಗಳನ್ನು ಮಾರಲೆಂದು ನಮ್ಮಲ್ಲಿಗೆ ತರುತ್ತಿದ್ದರು. ಅಥವಾ, ಇರ್ಗಿಜಿನ ಲ್ಲವೆ ಕೆರ್‌ಜೆನೆಟ್ಸ್‌ನ ಸನ್ಯಾಸಿಗಳು ಸುಂದರವಾಗಿ ಬರೆದು ಸಿದ್ಧಗೊಳಿಸಿದ ಅಂತಹ ಪುಸ್ತಕ ಳ ಪಟ್ಟಿಯನ್ನು ತರುತ್ತಿದ್ದರು. ದ್ಮಿತ್ರಿ ರೊಸ್ತೊವ್ಸ್ಕಿ ವಿರಚಿತ 'ಜೀವನಗಳು' ಗ್ರಂಥದ ೂಲ ಆ ವೃತ್ತಿಯ ಪ್ರತಿಗಳು, ಪ್ರಾಚೀನ ಪ್ರತಿಮೆಗಳು, ಕ್ರೂಜೆಗಳು, ಇನಾಮೆಲ್ ಹಾಕಿದ ತ್ತಾಳೆಯ ತ್ರಿ-ಚಿತ್ರಗಳು, ವಿದೇಶಗಳಿಂದ ಆಮದಾದ ಲೋಹದ ಕೆಲಸಗಳು, ಮಾಸ್ಕೋದ ಾಜಕುಮಾರರು ತಮ್ಮ ಮೆಚ್ಚುಗೆಯನ್ನು ಗಳಿಸಿದ ಪಾನಮಂದಿರಗಳ ಒಡೆಯರಿಗೆ ಬಹುಮಾನ ಾಗಿ ಕೊಟ್ಟ ಬೆಳ್ಳಿ ಪಾತ್ರೆಗಳು—ಇವನ್ನೂ ತಂದು ತೋರಿಸುತ್ತಿದ್ದರು. ಇವನ್ನೆಲ್ಲ ಅವರು ಾರಲೆಂದು ಬರುತ್ತಿದ್ದುದು ಗೋಪ್ಯವಾಗಿ, ಸುತ್ತುಮುತ್ತಲೂ ಕಳ್ಳನೋಟ ಬೀರುತ್ತಾ.

ನಮ್ಮ ಅಂಗಡಿಸಹಾಯಕನೂ ಮಗ್ಗುಲಿನವನೂ ಮಾರಾಟಕ್ಕೆಂದು ಬರುವ ಅಂತಹ ವಸ್ತು ಳಿಗಾಗಿ ಕಣ್ಣು ತೆರೆದೇ ಕಾದಿರುತ್ತಿದ್ದರು. ಅತ್ಯಂತ ಜಾಣ್ಮೆಯಿಂದ ಭಾರೀ ಲಾಭ ದೊರೆಯು ಂತೆ ಕೊಳ್ಳುವ ವಿಷಯದಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಅವರು ಯತ್ನಿಸುತ್ತಿದ್ದರು. ್ರಾಚೀನ ಅಮೂಲ್ಯ ವಸ್ತುಗಳಿಗೆ ಹತ್ತು ರೂಬಲುಗಳಿಗಿಂತ ಹೆಚ್ಚು ಅವರೆಂದೂ ಕೊಟ್ಟವರಲ್ಲ. ಾಗೆ ಕೊಂಡ ಆ ವಸ್ತುಗಳನ್ನು ಪ್ರಾಚೀನನಿಷ್ಠೆಯ ಶ್ರೀಮಂತ ಅನುಯಾಯಿಗಳಿಗೆ ಅವರು ಾರುತ್ತಿದ್ದುದಾದರೋ ನೂರಾರು ರೂಬಲುಗಳಿಗೆ.

ಅಂಗಡಿಸಹಾಯಕ ನನಗೆ ಎಚ್ಚರಿಸಿ ಹೇಳುತ್ತಿದ್ದ :

"ಆ ಮುದಿ ಮಾಯಾವಿಗಳು ಹಾಗೂ ದೆವ್ವಗಳ ಮೇಲೆ ತೀಕ್ಷ್ಣ ಕಣ್ಣಿಡು. ಅವರು ೂರುತ್ತಿರೋ ಆ ಮೂಟೆಗಳಲ್ಲಿ ನಿಧಿಗಳೇ ಇರ್ತವೆ."

ಒಳ್ಳೆಯ ಒಂದು ವಸ್ತು ಮಾರಾಟಕ್ಕೆಂದು ಬಂದಾಗಲೆಲ್ಲ, ಅಧಿಕಾರವಾಣಿಯಿಂದ ಮಾತ

ನಾಡಬಲ್ಲ ಪುರಾತನ ಧರ್ಮಾನುಯಾಯಿ ಪಿಯೋತರ್ ವಾಸಿಲ್ಯೇವಿಚನ್ನು ಕರೆತರಲೆಂದು ಅಂಗ
ಸಹಾಯಕ ನನ್ನನ್ನು ಕಳುಹುತ್ತಿದ್ದ. ಪ್ರಾಚೀನಗ್ರಂಥಗಳು, ಪ್ರತಿಮೆಗಳು ಮತ್ತು ಅಂತಹ ಇ
ವಸ್ತುಗಳ ಬಗೆಗೆ ಅವನಿಗೆ ಗಾಢವಾದ ಪರಿಜ್ಞಾನವಿತ್ತು.

ಆತ ವಯಸ್ಸಾದ ಎತ್ತರದ ಮನುಷ್ಯ. ಬುದ್ಧಿವಂತಿಕೆಯ ಕಣ್ಣುಗಳಿದ್ದುವು. ಸೊಗಸಾ
ಮುಖ. ಧನ್ಯವಾಸಿಲಿಗಿರುವಂತೆ ನೀಳವಾದ ಗಡ್ಡವಿತ್ತು. ಒಂದು ಪಾದದ ಬೆರಳುಗಳು ನ
ವಾಗಿದ್ದುದರಿಂದ, ಯಾವಾಗಲೂ ಒಂದು ಊರುಗೋಲನ್ನು ಹಿಡಿದಿರುತ್ತಿದ್ದ. ಬೇಸಗೆಯಿರ
ಚಳಿಗಾಲವಿರಲಿ, ಧರ್ಮಗುರುವಿನ ಮೇಲುಡಪನ್ನು ಹೋಲುತ್ತಿದ್ದ ಹಗುರವಾದ ಕೋಟನ
ಮಡಕೆಯಾಕೃತಿಯ ಮಕಮಲ್ಲಿನ ಒಂದು ಟೋಪಿಯನ್ನೂ ತೊಟ್ಟಿರುತ್ತಿದ್ದ.

ಸಾಧಾರಣವಾಗಿ ಆತ, ನೆಟ್ಟಗೆ ಲವಲವಿಕೆಯಿಂದ ನಡೆಯುತ್ತಿದ್ದರೂ, ಅಂಗಡಿಯ ಒ
ಹೊಕ್ಕ ಕ್ಷಣವೇ ಭುಜಗಳನ್ನು ಕುಸಿಬಿಡುತ್ತಿದ್ದ; ಮೃದುವಾಗಿ ನಿಟ್ಟುಸಿರುಬಿಡುತ್ತಿದ್ದ; ತ
ಷ್ಟಕ್ಕೇ ಪ್ರಾರ್ಥನೆಗಳನ್ನೂ ಸ್ತೋತ್ರಗಳನ್ನೂ ವಟಗುಡುತ್ತ ಪ್ರಾಚೀನನಿಷ್ಠೆಯ ಕ್ರಮದ
ಎರಡು ಬೆರಳುಗಳಿಂದ ಶಿಲುಬೆಯವಂದನೆ ಮಾಡುತ್ತಿದ್ದ. ವೃದ್ಧಾಪ್ಯದ ಹಾಗೂ ಧರ್ಮನಿಷ್ಠೆ
ಈ ನಟನೆಯಿಂದ, ಅಪೂರ್ವ ವಸ್ತುಗಳ ಮಾರಾಟಗಾರರಿಗೆ ಭಯವೂ ವಿಶ್ವಾಸವೂ ಹುಟ್ಟುತ್ತಿದ್ದು

"ಲೌಕಿಕ ವ್ಯವಹಾರಕ್ಕೆ ಸಂಬಂಧಿಸಿ ನನ್ನಿಂದ ಏನಾಗಬೇಕಾಗಿದೆ ನಿಮಗೆ?" ಎಂದು ಮುದು
ಕೇಳಿದ.

"ಈ ಮನುಷ್ಯ ನಮ್ಮಲ್ಲಿಗೆ ಒಂದು ದೇವಪ್ರತಿಮೆ ತಂದಿದಾನೆ—ಅದು ಸ್ಟ್ರೊಗಾನೋವ್
ದೂಂತ ಹೇಳ್ತಾನೆ."

"ಎಂಥಾದ್ದು?"

"ಸ್ಟ್ರೊಗಾನೋವ್ ಪ್ರತಿಮೆ."

"ನನಗೆ ಕಿವಿ ಸ್ವಲ್ಪ ಮಂದ. ನಿಕೊನನ ಹಿಂಬಾಲಕರು ಹರಡ್ತಿರೋ ದುಷ್ಟ ವಿಚಾರ ಕೇ
ಸದಿರಲೀಂತ ಪ್ರಭು ನನ್ನ ಕಿವಿಗಳನ್ನು ರಕ್ಷಿಸಿದ್ದಾನೆ."

ತನ್ನ ಟೋಪಿ ತೆಗೆದು, ಪ್ರತಿಮೆಯನ್ನಾತ ಅಡ್ಡವಾಗಿ ಹಿಡಿದು, ಬಣ್ಣದ ಮೈಯನ್ನು ಅಭ
ಸುತ್ತಿದ್ದ. ಬಳಿಕ, ತನ್ನ ಕಣ್ಣುಗಳನ್ನು ಕಿರಿದುಗೊಳಿಸುತ್ತ, ಮರದ ಕೀಲಿಗಳನ್ನು ಪರೀಕ್ಷಿಸುತ್ತ
ಗೊಣಗುತ್ತಿದ್ದ:

"ನಾಸ್ತಿಕ ನಿಕೊನ್‌ವಾದಿಗಳು, ಪ್ರಾಚೀನ ಕಲೆಗಾರಿಕೆಯ ವಿಷಯದಲ್ಲಿ, ನಮಗಿರು
ಮೆಚ್ಚುಗೇನ ನೋಡಿ, ಸುಳ್ಳು ಕಲ್ಪಿಸೋದಕ್ಕೆ ಪಿಶಾಚಿ ಹೇಳಿಕೊಟ್ಟ ಪ್ರಕಾರ, ಈಗಿನ ಕಾಲದ
ಪವಿತ್ರ ಪ್ರತಿಮೆಗಳನ್ನು, ಅಪೂರ್ವ ಜಾಣ್ಮೆಯಿಂದ—ಅತ್ಯದ್ಭುತ ಜಾಣ್ಮೆಯಿಂದ—ಇದ್ದಕ್ಕಿದ್ದಂ
ಪ್ರತಿಮಾಡ್ತಾರೆ. ಮೊದಲನೋಟಕ್ಕೆ ವರ್ಣಲೇಪನದಿಂದ, ನಿಜವಾದ ಸ್ಟ್ರೊಗಾನೊವ್ ಕೃ
ಯೆಂದೋ ಉಸ್ತ್ಯುಗ್ ಕೃತಿಯೆಂದೋ ಸುಜ್ದಾಲ್ ಕೃತಿಯಾಗಿದ್ದರೂ ಆಗಿರಬಹು
ಅಂತಲೋ ಅನಿಸ್ತದೆ. ಆದರೆ ತಕ್ಷಣವೇ ಅಂತರ್ದೃಷ್ಟಿಯ ಬೆಳಕು, ಅದು ಕೃತ್ರಿಮಕೃತಿ ಅನ್ನೊ
ದನ್ನು ಜಾಹೀರುಮಾಡ್ತದೆ!"

ಕೃತಿಮ ಕೃತಿ ಅಂತ ಆತ ಹೇಳಿದನೆಂದರೆ, ಆ ಪ್ರತಿಮೆ ಖಂಡಿತವಾಗಿಯೂ ಅಪೂರ್ವ
ಅಮೂಲ್ಯವೂ ಆಗಿರುತ್ತಿತ್ತು. ಮೊದಲೇ ಗೊತ್ತಾದ ಪದಪ್ರಯೋಗಗಳಿಂದ, ಅದಕ್ಕೆ ಎಷ

ಹಣ ನೀಡಬಹುದೆಂಬುದು ಅಂಗಡಿಸಹಾಯಕನಿಗೆ ಗೊತ್ತಾಗುತ್ತಿತ್ತು. 'ದುಃಖ ಮತ್ತು ಬೇಸರ' ಎಂಬ ಪದಗಳ ಅರ್ಥ ಹತ್ತು ರೂಬಲು, 'ನಿಕೊನ್—ಹುಲಿ' ಎಂದರೆ ಇಪ್ಪತ್ತೈದು—ಎಂಬುದು ನನಗೆ ತಿಳಿದಿತ್ತು. ಮಾರುವವನನ್ನು ಅವರು ಹೇಗೆ ಮೋಸಗೊಳಿಸುತ್ತಿದ್ದರೆಂಬುದನ್ನು ನೋಡಲು ನಾಚಿಕೆಯಾಗುತ್ತಿತ್ತು. ಆದರೆ, ಮುದುಕ ಆಡುತ್ತಿದ್ದ ಆಟ ಕಂಡು ನಾನು ವಿಸ್ಮಿತನಾಗುತ್ತಿದ್ದೆ.

"ನಿಕೊನ್-ಹುಲಿಯ ಕರಿಯ ಸಂತಾನವಾದ ನಿಕೊನ್‌ವಾದಿಗಳಿಗೆ, ಬೇಕುಬೇಕಾದ್ದನ್ನೆಲ್ಲ ಮಾಡಲು ಪಿಶಾಚಿ ಹೇಳ್ಕೊಡ್ತದೆ. ಇಲ್ಲಿ ನೋಡಿ, ಈ ಅಡಿಪಾಯ ಅಪ್ಪಟ ಅಂತ ನೀವು ಭಾವಿಸಬಹುದು. ಪೋಷಾಕುಗಳಿಗೂ ಒಬ್ಬನೇ ಕಲಾವಿದ ಬಣ್ಣ ಬಳಿದಿದಾನೇಂತ ನೀವು ತಿಳಕೋಬಹುದು. ಆದರೆ. ಆ ಮುಖವನ್ನಿಷ್ಟು ನೋಡಿ. ಅದಕ್ಕೆ ಬಣ್ಣ ಬಳಿದಿರೋದು ಬೇರೆಯೇ ಬ್ರಷ್ಶಿನಿಂದ. ಸೈಮನ್ ಉಶಾಕೋವ್‌ನಂಥ ಪುರಾತನ ಕಲಾವೇತ್ತ—ತಾನು ನಾಸ್ತಿಕನಾಗಿದ್ದರೂ ಕೂಡಾ—ಇಡೀ ಪ್ರತಿಮೆಗೆ ಸ್ವತಃ ತಾನೇ ಬಣ್ಣ ಬಳೀತಿದ್ದ; ಉಡುಪುಗಳು, ಮುಖ,....ಆ ಮೇಲೆ ಮೇಲ್ಮೈಯನ್ನು ಮೊನೆಯಾಗಿ ಕೆತ್ತೋದು, ಅಡಿಪಾಯವಿಡೋದು. ಆದರೆ ನಮ್ಮ ಕಾಲದ ಬಡಪ್ರಾಣಿಗಳು ಆ ಮಟ್ಟಕ್ಕೆ ಬರೋದಿಲ್ಲ. ಪ್ರತಿಮೆಗೆ ಬಣ್ಣ ಬಳಿಯೋದು ಹಿಂದೆ ದೇವರ ಕೆಲಸವಾಗಿತ್ತು. ಈಗ ಅದು ಬರೀ ಒಂದು ವೃತ್ತಿ. ತಿಳೀತೇ ನಿಜವಾದ ದೈವ ಭಕ್ತರೇ....?"

ಕೊನೆಗೊಮ್ಮೆ ಆ ಪ್ರತಿಮೆಯನ್ನು ಅಂಗಡಿಯ 'ಗಲ್ಲ'ದ ಮೇಲಿರಿಸಿ, ತನ್ನ ಟೋಪಿ ಇಟ್ಟುಕೊಳ್ಳುತ್ತ, ಅವನು ಅನ್ನುತ್ತಿದ್ದ:

ಅವರ ಆತ್ಮಗಳ ಮೇಲೆ ಪಾಪವಿರಲಿ!"

ಅದರರ್ಥ—ಹೂಂ, ಕೊಂಡುಕೋ, ಎಂದು.

ಆ ಪುರಾತನ ಧರ್ಮಾನುಯಾಯಿಯ ವಾಗ್ಝರಿಗೆ ಮನಸೋತು, ಆತನ ಪರಿಜ್ಞಾನದಿಂದ ಭೀತರಾಗಿ, ಮಾರಾಟಗಾರ ಭಕ್ತಿಪೂರ್ವಕವಾಗಿ ಕೇಳುತ್ತಿದ್ದ:

"ಹಾಗಾದರೆ ಪ್ರತಿಮೆಯ ವಿಷಯವೇನು, ಮಾನ್ಯ ತಂದೆಯೇ?"

"ಈ ಪ್ರತಿಮೆ ನಿಕೊನ್‌ವಾದಿಗಳ ಕೃತಿ."

"ಅದು ಹೇಗೆ ಸಾಧ್ಯ? ನಮ್ಮ ತಾತಂದಿರೂ ಮುತ್ತಾತಂದಿರೂ ಇದೇ ಪ್ರತಿಮೆಗೆ ಪ್ರಾರ್ಥನೆ ಸಲ್ಲಿಸಿದಾರೆ."

"ನಿಕೊನ್ ನಿಮ್ಮ ಮುತ್ತಾತಂದಿರಿಗಿಂತಲೂ ಹಿಂದೆ ಜೀವಿಸಿದ್ದ."

ಮುದುಕ, ಆ ಪ್ರತಿಮೆಯನ್ನು ಮಾರಾಟಗಾರನ ಮುಖದೆದುರು ಎತ್ತಿಹಿಡಿದು, ಪರಿಣಾಮಕಾರಿಯಾಗಿ ಹೇಳುತ್ತಿದ್ದ:

"ಇವಳಲ್ಲಿ ಕಾಣಿಸೋ ಹರ್ಷೋದ್ವೇಗ ನೋಡು. ಇದನ್ನು ದೇವಪ್ರತಿಮೆ ಅಂತ ಕರೀತಿಯೇನು? ಇದೊಂದು ಬರೀ ಚಿತ್ರ, ಕುರುಡು ಕಲೆ, ನಿಕೊನ್‌ವಾದಿಗಳ ಕುತಂತ್ರ. ಇಂಥ ಕೃತಿಯಲ್ಲಿ ಆತ್ಮವಿಲ್ಲ! ನಾನು ಸುಳ್ಳಾಡೋದು ಸಾಧ್ಯವೇನು? ನನ್ನ ನಂಬುಗೆಗಾಗಿ ಹಿಂಸಿಸಲ್ಪಡುತ್ತಿರೋ ಮುದುಕ ನಾನೊಬ್ಬ. ಇನ್ನು ಬೇಗನೆ ನಾನು ನನ್ನ ದೇವರ ಭೇಟಿಗೆ ಹೊರಡುವಾತ. ನನ್ನ ಆತ್ಮವನ್ನು ಮಾರಿ ನನಗೆ ಬರೋ ಲಾಭವೇನು?"

ಹಾಗೆ ಹೇಳಿ ಆತ, ವೃದ್ಧಾಪ್ಯದ ದೌರ್ಬಲ್ಯದಿಂದ ಬಳಲಿ, ತನ್ನ ತೀರ್ಪಿನ ಬಗೆಗೆ ತೋರಲಾದ ಅವಿಶ್ವಾಸದ ಕಾರಣದಿಂದ ನೊಂದು, ಅಂಗಡಿಯಿಂದ ಹೊರಬಿದ್ದು ಮುಖಮಂಟಪಕ್ಕೆ ತೆರಳುತ್ತಿದ್ದ. ಅಂಗಡಿಸಹಾಯಕ ಆ ಪ್ರತಿಮೆಗಾಗಿ ಕೆಲ ರೂಬಲುಗಳನ್ನು ತೆರುತ್ತಿದ್ದ. ಮಾರಾಟಗಾರ, ಪಿಯೋತರ್ ವಾಸಿಲ್ಯೇವಿಶ್‌ಗೆ ಬಾಗಿನಮಿಸಿ ತೆರಳುತ್ತಿದ್ದ. ನನ್ನನ್ನು, ಬಿಸಿನೀರು ತರುವಂತೆ ಪಾನಮಂದಿರಕ್ಕೆ ಕಳುಹುತ್ತಿದ್ದರು. ಹಿಂತಿರುಗಿದಾಗ ನಾನು, ಮುದುಕ ಪುನಃ ಲವಲವಿಕೆಯಿಂದಲೂ ಉತ್ಸಾಹದಿಂದಲೂ ಕೂಡಿದ್ದುದನ್ನು ಕಾಣುತ್ತಿದ್ದೆ. ಆತ, ಕೊಳ್ಳಲಾದ ವಸ್ತುವನ್ನು ಪ್ರೀತಿಯಿಂದ ದಿಟ್ಟಿಸುತ್ತ, ಸಹಾಯಕನಿಗೆ ಹೇಳುತ್ತಿದ್ದ:

"ಎಷ್ಟೊಂದು ಸೊಗಸಾಗಿ ಸರಳವಾಗಿ ಇದಕ್ಕೆ ಬಣ್ಣ ಹಾಕಿದಾರೆ, ಸ್ವಲ್ಪ ನೋಡು! ಈ ಗೆರೆಗಳಲ್ಲೆಲ್ಲ ದೇವರ ಭಯ ತುಂಬಿದೆ-ಮಾನವೀಯವಾದುದೆಲ್ಲ ಇಲ್ಲಿ ತಿರಸ್ಕೃತವಾಗಿದೆ....."

ಉದ್ವೇಗದಿಂದ ಹಾರಾಡುತ್ತ, ಹೊಳೆಯುವ ಕಣ್ಣುಗಳಿಂದ ಅಂಗಡಿಸಹಾಯಕ ಕೇಳುತ್ತಿದ್ದ:

"ಇದರ ಕಲಾಕಾರ ಯಾರು?"

"ಅದನ್ನೆಲ್ಲಾ ನೀನು ತಿಳಕೊಳ್ಳೋದಕ್ಕೆ ಇನ್ನೂ ಸಮಯವಿದೆ."

"ಬಲ್ಲಿದನಾದ ಮನುಷ್ಯ ಇದಕ್ಕೆಷ್ಟು ಕೊಡಬಹುದು?"

"ನನಗೆ ಗೊತ್ತಿಲ್ಲ. ಇದನ್ನು ಯಾರಿಗಾದರೂ ತೋರಿಸ್ತೀನಿ."

"ಆ್ಹ, ಪಿಯೋತರ್ ವಾಸಿಲ್ಯೇವಿಶ್...."

"ನಾನಿದನ್ನು ಮಾರಿದೆ ಅಂದರೆ, ಐವತ್ತು ರೂಬಲು ನಿನಗೆ ಹೋಗ್ತದೆ; ಬಾಕಿ ಏನಿದ್ದರೂ ನನಗೆ."

"ಆ್ಹ...."

"ನಿನ್ನ ಆ್ಹ—ಊ್ಹ ಎಲ್ಲಾ ಸಾಕು...."

ನಿರ್ಲಜ್ಜವಾಗಿ ಚೌಕಾಶಿಮಾಡುತ್ತ, ಪರಸ್ಪರರನ್ನು ಚೋರನೋಟದಿಂದ ನೋಡುತ್ತ, ಅವರು ಚಹಾ ಕುಡಿಯುತ್ತಿದ್ದರು. ಇಂತಹ ವಿಷಯಗಳಲ್ಲಿ ಅಂಗಡಿಸಹಾಯಕ, ಸಂಪೂರ್ಣವಾಗಿ ಆ ಮುದುಕನನ್ನೆ ಆಶ್ರಯಿಸಿದ್ದನೆಂಬುದು ಸ್ಪಷ್ಟವಾಗಿತ್ತು. ಆತ ಹೊರಟುಹೋದೊಡನೆ ಇವನು ನನಗೆ ಹೇಳುತ್ತಿದ್ದ:

"ಈ ವ್ಯವಹಾರದ ವಿಷಯ ಒಡತಿಗೇನೂ ತಿಳಿಸಬಾರದು, ಹ್ಞಾ!"

ಆ ಪ್ರತಿಮೆಯನ್ನು ಮಾರಲು ಏರ್ಪಾಟುಗಳಾದಮೇಲೆ, ಅಂಗಡಿಸಹಾಯಕ ಕೇಳುತ್ತಿದ್ದ:

"ಶಹರದಲ್ಲಿ ಹೊಸ ವಿಶೇಷವೇನಿದೆ, ಪಿಯೋತರ್ ವಾಸಿಲ್ಯೇವಿಶ್?"

ಮುದುಕ ಅರಿಶಿಣಬಣ್ಣಕ್ಕೆ ತಿರುಗಿದ್ದ ತನ್ನ ಕೈಯಿಂದ ಮೀಸೆಯನ್ನು ತಟ್ಟುತ್ತಿದ್ದ; ತನ್ನ ಎಣ್ಣೆಜಿಗುಟಿನ ತುಟಿಗಳನ್ನು ತೋರ್ಪಡಿಸುತ್ತಿದ್ದ; ಧನಿಕ ವರ್ತಕರ ಜೀವನಗಳು, ವ್ಯಾಪಾರ ಜಗತ್ತಿನ ಯಶಸ್ವೀ ವ್ಯವಹಾರಗಳು, ಕಾಹಿಲೆಗಳು, ವಿವಾಹಗಳು, ವಿನೋದಕೇಳಿಗಳು, ಗಂಡ ಹೆಂಡಿರ ಮೋಸಗೊಳಿಸುವ ಪ್ರಕರಣಗಳು—ಈ ಬಗೆಗೆಲ್ಲ ಮಾತನಾಡತೊಡಗುತ್ತಿದ್ದ. ಅನುಭವಿ ಅಡುಗೆಯವನ ಜಾಣ್ಮೆಯಿಂದ ಈ ಶ್ರೀಮಂತ ಕಥೆಗಳನ್ನೆಲ್ಲ ಕಾವಲಿಯಿಂದ ಹಾರಿಸಿ ತೆಗೆದು, ಅವುಗಳ ಮೇಲೆ ಸುಂಯ್‌ಗುಡುವ ನಗೆಯ ರಸವನ್ನು ಸುರಿಯುತ್ತಿದ್ದ. ಅಂಗಡಿಸಹಾಯಕನ ದುಂಡು

ಸುಖ, ಈರ್ಷೆಯಿಂದ ಕೂಡಿದ ಹರ್ಷದಿಂದ ರಂಗೇರುತ್ತಿತ್ತು. ಕನಸು ಕಾಣುವವನಂತೆ ಕಣ್ಣುಗಳು ಕಿರಿದಾಗಿ ...ೀವಗೊಳ್ಳುತ್ತಿರಲು, ನಿಟ್ಟುಸಿರು ಬಿಡುತ್ತ ಅವನೆನ್ನುತ್ತಿದ್ದ !

"ಕೆಲಜನರು ಎಂಥ ಬದುಕನ್ನು ಜೀವಿಸ್ತಿದಾರೆ ! ನಾನಾದರೋ...."

ಪ್ರತಿಧ್ವನಿಸುವ ಸ್ವರದಲ್ಲಿ ಮುದುಕನೆಂದ :

"ಅವರವರ ವಿಧಿ ಅವರವರಿಗೆ. ಒಬ್ಬನದನ್ನು ಬೆಳ್ಳಿಯ ಪುಟ್ಟ ಸುತ್ತಿಗೆಗಳಿಂದ ದೇವತೆಗಳು ರೂಪಿಸಿರ್ತವೆ; ಇನ್ನೊಬ್ಬನದನ್ನು ಕೊಡಲಿಯ ಮೊಂಡು ಕೊನೆಯಿಂದ ಪಿಶಾಚಿ ರೂಪಿಸಿರ್ತದೆ."

ಆ ಬಲಿಷ್ಠನಾದ ಗಟ್ಟಿಯಾದ ಸ್ನಾಯುಗಳ ಮುದುಕನಿಗೆ ಎಲ್ಲವೂ ತಿಳಿದಿತ್ತು—ಇಡೀ ಶಹರದ ಬದುಕು ; ವರ್ತಕರ, ಗುಮಾಸ್ತೆಯರ, ಧರ್ಮ ಗುರುಗಳ, ಶಿಲ್ಪಿಗಳ ಎಲ್ಲ ರಹಸ್ಯಗಳು-ಎಲ್ಲವೂ. ಆತ ಗಿಡುಗನಷ್ಟೇ ತೀಕ್ಷ್ಣ ಕಣ್ಣುಗಳ ಮನುಷ್ಯ. ತೋಳನ ನರಿಯ ಒಂದಂಶವೂ ಅವನಲ್ಲಿತ್ತು. ಅವನನ್ನು ಕೆಣಕಬೇಕೆಂದು ನಾನು ಯಾವಾಗಲೂ ಬಯಸುತ್ತಿದ್ದೆ. ಆದರೆ ಮುಸುಕಾದ ದೂರದಿಂದ ನೋಡುತ್ತಿರುವನೇನೋ ಎನ್ನುವಂತೆ, ನನ್ನೆಡೆಗೆ ಆತ ನೋಡುತ್ತಿದ್ದ ರೀತಿ, ನನ್ನನ್ನು ಅಧೀರನನ್ನಾಗಿ ಮಾಡುತ್ತಿತ್ತು. ಆತನ ಬಳಿ ಸಾರುವ ಎದೆಗಾರಿಕೆ ತೋರಿದ ವರನ್ನೆಲ್ಲ ನುಂಗಿಬಿಡುವಂತಹ ಪ್ರಪಾತ ಅವನ ಸುತ್ತಲೂ ಇತ್ತೆಂದು ನನಗೆ ಅನಿಸುತ್ತಿತ್ತು. ಆತ ಹಾಗೂ ಉಗಿಕೆಲಸಗಾರ ಯಾಕೋವ್ ಷುಮೋವರಿಬ್ಬರಲ್ಲೂ ಸಮಾನವಾದುದೇನೋ ಇದ್ದಂತೆ ನನಗೆ ಭಾಸವಾಗುತ್ತಿತ್ತು.

ಮುದುಕನ ಚಾತುರ್ಯ ಕಂಡು, ಅಂಗಡಿಸಹಾಯಕ ಅತ್ಯಂತ ಹರ್ಷಿತನಾಗುತ್ತಿದ್ದ. ಅದನ್ನು ಅವನೆದುರೂ ಒಪ್ಪಿಕೊಳ್ಳುತ್ತಿದ್ದ, ಬೆನ್ನ ಹಿಂದೆಯೂ ಕೂಡಾ. ಆದರೆ, ಮುದುಕನನ್ನು ರೇಗಿಸಿ ನೋಯಿಸಬೇಕೆಂದು ಅವನಿಗೂ ಅಪೇಕ್ಷೆಯಾಗುತ್ತಿದ್ದ ಕ್ಷಣಗಳಿರುತ್ತಿದ್ದುವು.

"ಜನರ ಕಣ್ಣುಗಳಿಗೆ ಎಷ್ಟು ಚೆನ್ನಾಗಿ ಮಂಕುಬೂದಿ ಎರಚ್ತೀಯಾ ನೀನು !" ಎಂದು ಒಮ್ಮೆ ಆತ, ಸವಾಲು ಹಾಕುವ ನೋಟದಿಂದ ಮುದುಕನೆಡೆಗೆ ನೋಡುತ್ತ ಅಂದ.

ಮುದುಕ ಸೋಮಾರಿತನದ ಕಿರುನಗೆ ಬೀರಿ ಉತ್ತರವಿತ್ತ :

"ಜನರನ್ನು ಯಾವತ್ತೂ ಮೋಸಗೊಳಿಸದೇ ಇರೋದು ದೇವರು ಮಾತ್ರ. ಉಳಿದ ನಾವು ಜೀವಿಸೋದೇ ಮೂರ್ಖರ ಮೇಲೆ. ಒಬ್ಬ ಮೂರ್ಖನನ್ನು ಮೋಸಪಡಿಸೋಕೆ ಆಗದೇ ಇದ್ದರೆ ಆತನ ಉಪಯೋಗವಾದರೂ ಏನು ?"

ಅಂಗಡಿಸಹಾಯಕನಿಗೆ ಸಿಟ್ಟು ಬಂತು.

"ಎಲ್ಲಾ ರೈತರೂ ಮೂರ್ಖರಲ್ಲ; ವರ್ತಕರು ರೈತರಿಂದಲೇ ಬಂದಿರ್ತಾರೆ."

"ವರ್ತಕರಾಗುವವರ ವಿಷಯ ನಾವು ಮಾತಾಡ್ತಿಲ್ಲ. ಮೂರ್ಖರು ಎಂದೂ ಮೋಸಗಾರ ರಾಗೋದಿಲ್ಲ. ಮೂರ್ಖರು, ಏನೇನೂ ಮೆದುಳಿರದ ಸಂತರು."

ಮುದುಕ, ಕೇಳುವವರ ಸೈರಣೆ ಸ್ವಲ್ಪವೂ ಉಳಿಯದ ರೀತಿಯಲ್ಲಿ ತನ್ನ ಪದಗಳನ್ನು ರಾಗ ವೆಳೆಯುತ್ತ ಹೋದ. ಚಲಿಸದೆ ನಿಂತ ನೀರಿನ ಮಧ್ಯದಲ್ಲೊಂದು ಮಣ್ಣಿನ ಹೆಂಟೆಯ ಮೇಲೆ ನಿಂತ ಮನುಷ್ಯನ ಹಾಗಿದ್ದ ಆತ. ಅವನನ್ನು ಕುಲುಕುವುದು ದುಸ್ಸಾಧ್ಯವಾಗಿತ್ತು. ಒಂದೋ, ಆತನಿಗೆ ಸಿಟ್ಟೆಂಬುದೇ ಬರುತ್ತಿರಲಿಲ್ಲ. ಅಥವಾ, ಅದನ್ನು ಬಚ್ಚಿಡುವುದು ಹೇಗೆ ಎಂಬುದನ್ನು ಆತ ತಿಳಿದಿದ್ದ.

ಆದರೆ ಆಗಾಗ್ಗೆ ಆತ, ನನ್ನನ್ನು ಪರಿಹಾಸ್ಯ ಮಾಡತೊಡಗುವುದಿತ್ತು. ತನ್ನ ಗಡ್ಡದೊಳಕ್ಕೆ ಕಿಸಕ್ಕನೆ ನಗುತ್ತ ಅವನೆನ್ನುತ್ತಿದ್ದ:

"ಮತ್ತೆ ಆ ಫ್ರೆಂಚ್ ಸಾಹಿತಿಯ ಹೆಸರೇನಪ್ಪ—ಪೊಂಟೊಸ್ ಎಂತಲೆ ?"

ಹೆಸರುಗಳನ್ನು ವಿರೂಪಗೊಳಿಸುವ ಅವನ ರೀತಿಯಿಂದ ನಾನು ಸಿಟ್ಟು ಬೆಂಕಿಯಾಗುತ್ತಿದ್ದೆ. ಆದರೆ, ಆತ್ಮಸಂಯಮವನ್ನು ಕಳೆದುಕೊಳ್ಳದೆ ನಾನು ಉತ್ತರವೀಯುತ್ತಿದ್ದೆ:

"ಪೊನ್ಸೊನ್ ಡು ಟೆರೇಯಿಲ್."

"ಯಾರ ಕಣ್ಣು ?"

"ಬೆಪ್ಪರ ಹಾಗೆ ಮಾತಾಡ್ಬೇಡ—ನೀನೇನೂ ಮಗುವಲ್ಲ."

"ಸರಿ ಹೇಳ್ದೆ. ನಾನು ಮಗುವಲ್ಲ. ಅದೇನು ನೀನು ಓದ್ತಿರೋದು ?"

"ಯೆಫ್ರೆಮ್ ಸಿರಿನ್."

"ಯಾರು ಚೆನ್ನಾಗಿ ಬರೀತಾರೆ?—ಕಥೆ ಬರೆಯುವರೊ? ಈತನೊ ?"

ನಾನು ಉತ್ತರವೀಯಲಿಲ್ಲ.

" ಆ ಕಥೆಯವರು ಹೆಚ್ಚಾಗಿ ಬರೆಯೋದು ಯಾವ ವಿಷಯ ?" ಎಂದು ಆತ ಆಗ್ರಹಪಟ್ಟು ಕೇಳಿದ.

"ಸಂಭವಿಸೋ ಎಲ್ಲದರ ವಿಷಯ."

"ನಾಯಿಗಳು ಮತ್ತು ಕುದುರೆಗಳ ವಿಷಯ ಕೂಡಾ ? ಅವು ಸಂಭವಿಸ್ತವೆ."

ಅಂಗಡಿಯಸಹಾಯಕ ಗೊಳ್ಳನೆ ನಕ್ಕ. ನಾನು ಕಿಡಿಕಿಡಿಯಾದೆ. ಅಲ್ಲಿಂದ ಓಡಿಯೇ ಹೋಗಿಬಿಡಬೇಕು ಎನ್ನುವಷ್ಟರಮಟ್ಟಿಗಾಯಿತು. ಆದರೆ, ಹೊರಬೀಳಲು ಯತ್ನಿಸಿದನೆಂದರೆ, ಸಹಾಯಕ ರೇಗಿನುಡಿಯುತ್ತಿದ್ದ:

"ಎಲ್ಲಿಗೆ ಹೋಗ್ತಿದೀಯಾ ನೀನು ?"

ಮುದುಕ ನನ್ನ ಸಹನಾಶಕ್ತಿಯನ್ನು ಪರೀಕ್ಷಿಸುತ್ತಲೇ ಹೋದ:

"ಸೂಕ್ಷ್ಮಬುದ್ಧಿಯವನೇ, ಹಾಗಾದರೆ ಈ ಒಗಟನ್ನು ಬಿಡಿಸು ನೋಡೋಣ; ನಿನ್ನ ಎದುರು ಸಾವಿರ ನಗ್ನ ಜನರು ನಿಂತಿದಾರೆ,— ಐದುನೂರು ಗಂಡಸರು, ಐದುನೂರು ಹೆಂಗಸರು. ಅವರ ಪೈಕಿ ಅದಾಂ ಮತ್ತು ಈವ್ ಇದ್ದಾರೆ. ಅವರಲ್ಲಿ ಇಂಥವರೇ ಅದಾಂ ಮತ್ತು ಈವ್ ಅಂತ ಹೇಗೆ ಹೇಳಬಲ್ಲೆ?"

ಸ್ವಲ್ಪ ಹೊತ್ತಿನವರೆಗೂ ಒತ್ತಾಯಿಸಿದ ಬಳಿಕ, ಗೆದ್ದವನ ಧ್ವನಿಯಲ್ಲಿ ಆತ ಜಾಹೀರು ಮಾಡಿದ;

"ದಡ್ಡಶಿಖಾಮಣಿ! ಅವರು ಜನ್ಮತಾಳದೆಯೇ ದೇವರಿಂದ ಸೃಷ್ಟಿಸಲ್ಪಟ್ಟವರು—ಅಂದರೆ, ಅವರಿಗೆ ಹೊಟ್ಟೆಹೊಕ್ಕುಳ ಇಲ್ಲ !"

ಇಂತಹ ಅಸಂಖ್ಯ 'ಒಗಟು' ಗಳು ಆ ಮುದುಕನಿಗೆ ತಿಳಿದಿದ್ದುವು. ಅವುಗಳಿಂದ ಆತ ನನ್ನನ್ನು ಹಿಂಸಿಸುತ್ತಲೇ ಇದ್ದ.

ಅಂಗಡಿಗೆ ನಾನು ಬಂದ ಆರಂಭದ ದಿನಗಳಲ್ಲಿ, ನಾನು ಓದಿದ್ದ ಕೆಲಪುಸ್ತಕಗಳ ಕತೆಗಳನ್ನು ಅಂಗಡಿಯಸಹಾಯಕನಿಗೆ ಹೇಳಿದ್ದೆ. ಅದಕ್ಕಾಗಿ ಈಗ ನಾನು ಪಶ್ಚಾತ್ತಾಪಪಡುವಂತಾ

ಯಿತು. ಸಹಾಯಕ ಆ ಕಥೆಗಳನ್ನು, ಉದ್ದೇಶಪೂರ್ವಕವಾಗಿ ವಿಕೃತಗೊಳಿಸುತ್ತ, ಅವುಗಳಿಗೆ ಅಸಭ್ಯ ಅರ್ಥಕೊಡುತ್ತ, ಪಿಯೋತರ್ ವಾಸಿಲ್ಯೇವಿಚ್‌ನಿಗೆ ತಾನು ಹೇಳಿದ. ಹಾಗೆ ಹೇಳಲು ಅಶ್ಲೀಲಪ್ರಶ್ನೆಗಳನ್ನು ಕೇಳುತ್ತ ಆ ಮುದುಕ ನೆರವಾಗುತ್ತಿದ್ದ. ನನ್ನ ಪ್ರೀತಿಪಾತ್ರ ಯೂಜೆನಿ ಗ್ರಾಂಡೆಟ್, ಲುಡ್ಮಿಲ್ಲಾ ಮತ್ತು ನಾಲ್ಕನೆಯ ಹೆನ್ರಿ—ಇವರ ಮೇಲೆಲ್ಲಾ ತಮ್ಮ ಕೆಟ್ಟನಾಲಗೆಗಳ ಹೊಲಸನ್ನು ಅವರು ಸಿಂಪಡಿಸಿದರು.

ತ್ವೇಷದಿಂದ ಎನ್ನುವುದಕ್ಕಿಂತಲೂ ಹೊತ್ತುಕಳೆಯಲಾಗದ ಅತೀವಬೇಸರದಿಂದ ಅವರು ಹಾಗೆ ಮಾಡುತ್ತಿದ್ದರೆಂಬದು ನನಗೆ ಗೊತ್ತಿತ್ತು. ಆದರೆ, ಈ ತಿಳಿವಳಿಕೆಯಿಂದ, ಅವರ ಮಾತು ಗಳನ್ನು ಸಹಿಸಿಕೊಳ್ಳುವುದೇನೂ ನನಗೆ ಹೆಚ್ಚು ಸುಲಭವಾಗಲಿಲ್ಲ. ಅವರು, ತಾವೇ ಸೃಷ್ಟಿಸಿದ ಕೊಳಚೆಯಲ್ಲಿ ಹಂದಿಗಳಂತೆ ಹೊರಳಾಡುತ್ತಿದ್ದರು; ತಮಗೆ ವಿಚಿತ್ರವಾಗಿಯೂ ಜಟಿಲವಾಗಿಯೂ ಕಂಡ—ಆ ಕಾರಣದಿಂದ—ತಮಾಷೆಯಾಗಿ ತೋರಿದ—ಸುಂದರವಸ್ತುಗಳನ್ನು ಮಲಿನಗೊಳಿ ಸಿದ ಸಂತೋಷದಿಂದ ಡುರುಂಕರಿಸುತ್ತಿದ್ದರು.

ವರ್ತಕರಿಂದಲೂ ಅಂಗಡಿಸಹಾಯಕರಿಂದಲೂ ತುಂಬಿದ್ದ ಆ ಇಡೀ ಚಪ್ಪರಹಾದಿಯೆಲ್ಲ, ತನ್ನದೇ ಆದ ವಿಚಿತ್ರ ರೀತಿಯ ಬದುಕನ್ನು ಜೀವಿಸುತ್ತಿತ್ತು. ಮೂರ್ಖತನದ್ದೂ ಹುಡುಗಾಟಿಕೆ ಯದೂ ಆಗಿದ್ದಷ್ಟೇ ದುಷ್ಟವೂ ಆಗಿದ್ದ ತುಂಟಾಟಗಳನ್ನು ಆಡುತ್ತ, ಅದರಲ್ಲೇ ರಂಜನೆಯನ್ನು ಪಡೆಯುತ್ತಿತ್ತು. ಅದೇ ಮೊದಲ ಬಾರಿಗೆ ನಮ್ಮ ಶಹರಕ್ಕೆ ಬಂದಂತಹ ಒಬ್ಬ ರೈತ, ಯಾವುದಾದ ರೊಂದು ವಿಳಾಸವನ್ನು ಹೇಗೆ ಕಂಡುಹಿಡಿಯಬೇಕೆಂದು ಕೇಳಿದನೆಂದರೆ, ಅವರೆಲ್ಲರೂ ತಪ್ಪದೆ ಆತನನ್ನು ವಿರುದ್ಧ ದಿಕ್ಕಿನಲ್ಲೇ ಕಳುಹುತ್ತಿದ್ದರು. ಈ ಅಭ್ಯಾಸ ತೀರಾ ಸರ್ವಸಾಧಾರಣವೆನಿಸಿ, ಅದರ ಆಕರ್ಷಣೆ ನಷ್ಟವಾಗಿ ಹೋಯಿತು. ವರ್ತಕರು ಎರಡು ಇಲಿಗಳನ್ನು ಹಿಡಿದು, ಅವು ಗಳ ಬಾಲಗಳನ್ನು ಗಂಟುಬಿಗಿಯುತ್ತಿದ್ದರು ಅವು ಕಚ್ಚುತ್ತ ಕೆರೆಯುತ್ತ ವಿರುದ್ಧ ದಿಕ್ಕುಗಳಲ್ಲಿ ಹೋಗಲು ಯತ್ನಿಸುವುದನ್ನು ನೋಡುತ್ತ ನಿಲ್ಲುತ್ತಿದ್ದರು. ಕೆಲವೇಳೆ, ಆ ಬಡಪ್ರಾಣಿಗಳ ಮೇಲೆ ಚಿಮಣಿ ಎಣ್ಣೆ ಸುರಿದು ಬೆಂಕಿ ಹಚ್ಚುವುದೂ ಇತ್ತು. ಅಥವಾ ಅವರು, ಒಂದು ನಾಯಿಯ ಬಾಲಕ್ಕೆ ಎಣ್ಣೆಯ ಡಬ್ಬವನ್ನು ಕಟ್ಟುತ್ತಿದ್ದರು. ಭಯಭೀತವಾದ ಆ ಪ್ರಾಣಿ ಅರಚುತ್ತ ಓಡಿ ಹೋಗುತ್ತಿತ್ತು; ಅದರ ಹಿಂದಿನಿಂದ ಡಬ್ಬ ಡಬಡಬ ಸದ್ದು ಮಾಡುತ್ತಿತ್ತು. ಪ್ರೇಕ್ಷಕರೆಲ್ಲ ಖೋಖೋ ಎಂದು ನಗುತ್ತಿದ್ದರು.

ಅಂತಹ ಎಷ್ಟೋ ತುಂಟಾಟಗಳನ್ನು ಅವರು ಆಡುತ್ತಿದ್ದರು. ಪ್ರತಿಯೊಬ್ಬರೂ—ವಿಶೇಷತಃ ಹಳ್ಳಿಯಿಂದ ಬರುವ ರೈತರು—ಸಂತೆಪೇಟೆಯ ವಿನೋದಕ್ಕಾಗಿಯೇ ಜೀವಿಸಿರುವರೇನೋ ಎನ್ನುವಂತಿತ್ತು. ಯಾರನ್ನಾದರೂ ಅಪಹಾಸ್ಯಕ್ಕೀಡುಮಾಡಿ ನಗುವುದು, ನೋವು ಇಲ್ಲವೆ ಅಸೌಕರ್ಯವನ್ನುಂಟುಮಾಡುವುದು,—ಇವುಗಳಿಗಾಗಿ ಅವಕಾಶವನ್ನು ವರ್ತಕರೂ ಅವರ ಅಂಗಡಿಸಹಾಯಕರೂ ಯಾವಾಗಲೂ ಹುಡುಕುತ್ತಿದ್ದರು. ನಾನು ಓದುತ್ತಿದ್ದ ಪುಸ್ತಕಗಳೊಂದೂ ಈ ಮನೋವೈಕಲ್ಯದ ವಿಷಯ ಏನನ್ನೂ ಹೇಳಲಿಲ್ಲವೆಂದು, ನನಗೆ ವಿಚಿತ್ರವೆನಿಸಿತು.

ಚಪ್ಪರಹಾದಿಯಲ್ಲಿ ನಡೆದ ಅಂತಹ ಒಂದು ಘಟನೆ ವಿಶೇಷವಾಗಿ ನನಗೆ ಅಸಹ್ಯವನ್ನುಂಟು ಮಾಡಿತು.

ನಮ್ಮದರ ಕೆಳಗೆ, ಉಣ್ಣೆಯ ಹಾಗೂ ಫೆಲ್ಟ್‌ಅರಿವೆಯ ಒಂದು ಅಂಗಡಿಯಿತ್ತು.

ಅಲ್ಲೊಬ್ಬ ಅಂಗಡಿಸಹಾಯಕನಿದ್ದ. ಹೊಟ್ಟೆಬಾಕನೆಂದು ಅವನ ಖ್ಯಾತಿ, ಕೆಳವಾರುಕಟ್ಟೆಯಲ್ಲೆಲ್ಲ ಹರಡಿತ್ತು. ತಮ್ಮ ನಾಯಿಗಳ ಕ್ರೌರ್ಯದ ವಿಷಯವಾಗಿ, ಇಲ್ಲವೆ ಕುದುರೆಗಳ ಶಕ್ತಿಯ ವಿಷಯವಾಗಿ ಜನರು ಬಡಾಯಿಕೊಚ್ಚುವಂತೆ, ಆಹಾರ ಸೇವನೆಯಲ್ಲಿ ತನ್ನ ಸಹಾಯಕನ ಸಾಮರ್ಥ್ಯದ ವಿಷಯವಾಗಿ ಆ ಅಂಗಡಿಯ ಒಡೆಯ ಕೊಚ್ಚಿಕೊಳ್ಳುತ್ತಿದ್ದ. ಎಷ್ಟೋ ವೇಳೆ ತನ್ನ ನೆರೆಹೊರೆಯವರೊಡನೆ ಆತ ಪಣಕಟ್ಟುತ್ತಿದ್ದ,

"ಹತ್ತು ರೂಬಲು ಯಾರು ಕಟ್ತೀರಿ? ಮಿಶಾ ಹತ್ತು ಪೌಂಡು ಮಾಂಸವನ್ನು ಎರಡು ಘಂಟೆಗಳಲ್ಲಿ ನುಂಗ್ತಾನೇಂತ ಪಣ ಕಟ್ತೀನಿ."

ಆದರೆ, ಇದನ್ನು ಮಾಡುವ ವಿಷಯದಲ್ಲಿ ಮಿಶಾನ ಸಾಮರ್ಥ್ಯದ ಬಗೆಗೆ ಯಾರಿಗೂ ಸಂದೇಹವಿರಲಿಲ್ಲ. ಆದ್ದರಿಂದ ಅವರೆಂದರು:

"ನಾವು ಯಾವ ರೀತಿಯ ಪಣವನ್ನೂ ಕಟ್ಟೋದಿಲ್ಲ. ಆದರೆ ಅಷ್ಟು ಮಾಂಸವನು ಕೊಂಡು ತರ್ತೀವಿ. ಆತ ಶುರುಮಾಡಲಿ. ನಾವು ತಮಾಷೆ ನೋಡ್ತಾ ನಿಂತಿರ್ತೀವಿ."

"ಒಂದು ವಿಷಯ—ನೀವು ತರೋದು ಹತ್ತು ಪೌಂಡು ಮಾಂಸವಾಗಿರಬೇಕು, ಮೂಳೆ ಇರಬಾರದು."

ದೊಡ್ಡ ದೊಡ್ಡ ಮಾತು ಉರುಳಿಸುತ್ತ ಅವರು ತುಸುವಾದಿಸಿದರು. ಕೊನೆಯಲ್ಲಿ, ಕತ್ತಲು ತುಂಬಿದ ದಾಸ್ತಾನು ಕೊಠಡಿಯಿಂದ ತೆಳ್ಳಗಿನ, ಗಡ್ಡವಿಲ್ಲದ, ಕೆನ್ನೆಯ ಮೂಳೆಗಳು ಕಾಣಿಸುತ್ತಿದ್ದ ಮನುಷ್ಯನೊಬ್ಬ ಹತ್ತಿಬಂದ. ಉಣ್ಣೆಯ ಗೊಂಚಲುಗಳಿಂದ ಮುಚ್ಚಿದ್ದ ನೂಲಿನ ಅರಿವೆಯ ಕೋಟನ್ನು ತೊಟ್ಟಿದ್ದ. ಸೊಂಟದಲ್ಲಿ ಕೆಂಪು ಕರವಸ್ತ್ರದ ಪಟ್ಟಿ ಇತ್ತು. ಗೌರವಪೂರ್ವಕವಾಗಿ ಟೋಪಿ ತೆಗೆದು, ತನ್ನ ಪುಟ್ಟ ತಲೆಯನ್ನು ತೋರ್ಪಡಿಸುತ್ತ, ತನ್ನ ಒಡೆಯನ ದುಂಡಗಿನ, ಒರಟು ಪೊದೆ ಅತಿಯಾಗಿ ಬೆಳೆದಿದ್ದ, ಘನವಾದ ಮುಖದ ಕಡೆಗೆ, ತೇವಗೊಂಡ ದೃಷ್ಟಿಯನ್ನು ಹರಿಸಿದ.

"ಇಷ್ಟು ಮಾಂಸವನ್ನು ಮುಗಿಸಿಬಿಡೋದು ಸಾಧ್ಯವೇನೋ ?" ಎಂದು ಒಡೆಯ ಕೇಳಿದ.

ಕ್ಷೀಣವಾದ, ಇದು ಸಾಮಾನ್ಯ ವಿಷಯವೆನ್ನುವ, ಧ್ವನಿಯಲ್ಲಿ ಮಿಶಾ ಉತ್ತರವಿತ್ತ:

"ಎಷ್ಟು ಹೊತ್ತಿನೊಳಗೆ ?"

"ಎರಡು ತಾಸುಗಳಲ್ಲಿ."

"ಕಷ್ಟಕರ."

"ನಿನಗೆ !?"

"ಒಂದೆರಡು ಮಗ್ ಬೀರ್ ಸೇರಿಸ್ತೀರೇನು ?" ಎಂದು ಮಿಶಾ ಕೇಳಿದ.

"ಶುರುಮಾಡು !" ಎಂದು ಹೇಳಿ ಆತನ ಒಡೆಯ, ತನ್ನ ನೆರೆಹೊರೆಯವರ ಕಡೆಗೆ ತಿರುಗಿ ಜಂಭಕೊಚ್ಚಿದ:

"ಈತ ಬರೀಹೊಟ್ಟೇಲಿ ಆರಂಭಿಸ್ತಿದಾನೇಂತ ಭಾವಿಸಬೇಡಿ ! ಇಲ್ಲವಪ್ಪ, ಈ ಬೆಳಗ್ಗೆ ಎರಡು ಪೌಂಡ್ ಬ್ರೆಡ್ ಮುಗಿಸಿದಾನೆ, ಮಧ್ಯಾಹ್ನ ಪೂರ್ಣ ಗದಸ್ತಾಗಿ ಊಟಮಾಡಿದಾನೆ."

ಅವರು ಮಾಂಸ ತಂದರು. ಪ್ರೇಕ್ಷಕರ ಒಂದು ಗುಂಪೇ ನೆರೆಯಿತು. ಅವರೆಲ್ಲಾ ವರ್ತಕರು. ಚಳಿಗಾಲದ ಭಾರವಾದ ಕೋಟುಗಳನ್ನು ಬಲವಾಗಿ ಬಿಗಿದುಕೊಂಡು, ಬಲು ದೊಡ್ಡ ತೂಕದ ಕಲ್ಲುಗಳಂತೆ ಕಾಣಿಸುತ್ತಿದ್ದರು. ಅವರೆಲ್ಲ ಡೊಳ್ಳುಹೊಟ್ಟೆಯ ಜನರು. ಕೊಬ್ಬಿನ

ನಡುವೆ ಪುಟ್ಟ ಕಣ್ಣುಗಳು ಹುದುಗಿದ್ದು, ಬೇಸರದಿಂದ ಮಿನುಗುತ್ತಿದ್ದುವು.

ತಮ್ಮ ತೋಳಿನ ಕೈಗಳನ್ನು ಮೇಲಕ್ಕೇರಿಸುತ್ತ, ಆ ಹೊಟ್ಟೆಬಾಕನ ಸುತ್ತಲೂ ಬಿಗಿಯಾದ ವೃತ್ತವಾಗಿ ಅವರು ಒತ್ತಿಕೊಂಡರು. ಈಗ ಆತನ ಕೈಯಲ್ಲಿ ಒಂದು ಚಾಕು ಹಾಗೂ ರೈಫ್ಟಾನ್ಯದ ಬ್ರೆಡ್ಡಿನ ದೊಡ್ಡದೊಂದು ತುಣುಕು ಇದ್ದುವು. ವೇಗವಾಗಿ ಹಾಗೂ ಪುನಃ ಪುನಃ ಶಿಲುಬೆಯ ವಂದನೆ ಮಾಡಿದ ಬಳಿಕ, ಉಣ್ಣೆಯ ಒಂದು ರಾಶಿಯ ಮೇಲೆ ಅವನು ಆಸೀನನಾದ; ಮಾಂಸವನ್ನು ಸಾಮಾನು ತುಂಬುವ ಒಂದು ಪೆಟ್ಟಿಗೆಯ ಮೇಲಿರಿಸಿದ; ಶೂನ್ಯ ನೋಟದಿಂದ ಅದನ್ನೇ ಗಮನಿಸಿದ.

ಬಳಿಕ, ಬ್ರೆಡ್ಡಿನ ತೆಳ್ಳಗಿನ ಒಂದು ತುಣುಕನ್ನೂ ಮಾಂಸದ ದಪ್ಪಗಿನ ಒಂದು ತುಣುಕನ್ನೂ ಕತ್ತರಿಸಿದ; ಒಂದರ ಮೇಲೆ ಇನ್ನೊಂದನ್ನು ಚೊಕ್ಕಟವಾಗಿ ಇರಿಸಿದ; ಅವನ್ನು ಎರಡೂ ಕೈಗಳಿಂದ ತನ್ನ ಬಾಯಿಗೆ ಏರಿಸಿದ. ನಾಯಿಯ ನಾಲಗೆಯ ಹಾಗೆ ನೀಳವಾಗಿದ್ದ ತನ್ನ ನಾಲಗೆಯಿಂದ, ನಡುಗುತ್ತಿದ್ದ ತುಟಿಗಳನ್ನು ನೆಕ್ಕಿದ. ಹಾಗೆ ನೆಕ್ಕಿದಾಗ, ಅವನ ಚೂಪಾದ ಪುಟ್ಟ ಹಲ್ಲುಗಳು ಕಾಣಿಸಿಕೊಂಡುವು. ಬಳಿಕ, ನಾಯಿಯ ಹಾಗೆ, ತನ್ನ ದವಡೆಗಳನ್ನು ಆತ ಮಾಂಸದ ಮೇಲೆ ಅಮುಕಿದ.

"ಶುರುಮಾಡ್ದ!"

"ವೇಳೆ ಎಷ್ಟೊಂತ ನೋಡ್ಕೊಳ್ಳಿ!"

ಅವರೆಲ್ಲರ ದೃಷ್ಟಿಗಳೂ ಆ ಹೊಟ್ಟೆಬಾಕನ ಮುಖದಮೇಲೆ, ಸದ್ದುಮಾಡುತ್ತ ಜಗಿಯುತ್ತಿದ್ದ ಅವನ ದವಡೆಗಳಮೇಲೆ, ಕಿವಿಗಳೆದುರು ಅತ್ತಿಂದಿತ್ತ ಚಲಿಸುತ್ತಿದ್ದ ಉಂಡೆಗಳಮೇಲೆ, ಆತನ ಚೂಪಾದ ಗಲ್ಲದ ಲಯಬದ್ಧ ಏರಿಳಿತಗಳ ಮೇಲೆ, ನೆಟ್ಟಿದ್ದುವು. ಆಗಾಗ್ಗೆ ಅವರು ತಮ್ಮ ಅಭಿಪ್ರಾಯಗಳ ಪರಸ್ಪರ ವಿನಿಮಯ ನಡಸಿದರು.

"ಕರಡಿಯ ಹಾಗೆ ಜಗೀತಿದಾನೆ."

"ಕರಡಿ ಜಗಿಯೋದನ್ನು ಯಾವತ್ತಾದರೂ ನೋಡಿದ್ದೀಯೇನು?"

"ನಾನೇನು ಕಾಡಿನಲ್ಲಿ ವಾಸಿಸ್ತೀನಾ?" ಬರೀ ಒಂದು ನಾಣ್ನುಡಿ ಅಷ್ಟೆ: ಕರಡಿಯ ಹಾಗೆ ಜಗೀತಿದಾನೆ—ಅಂತ."

"ನಾಣ್ನುಡಿ ಇರೋದು: ಹಂದಿಯ ಹಾಗೆ ಜಗೀತಾನೆ—ಅಂತ."

"ಹಂದಿಗಳು ಹಂದಿಯನ್ನು ತಿನ್ನೋದಿಲ್ಲ."

ಅವರು ಹರ್ಷವಿಲ್ಲದೆಯೇ ನಕ್ಕರು; ಬಳಿಕ, ಬುದ್ಧಿವಂತಪ್ಪನೊಬ್ಬ ಮಾತು ಸೇರಿಸಿದ:

"ಹಂದಿ ಏನನ್ನು ಬೇಕಾದರೂ ತಿನ್ನುತ್ತದೆ—ತನ್ನ ಮರಿಯನ್ನೇ ತಾನು ತಿನ್ನುತ್ತದೆ, ತನ್ನ ಸ್ವಂತದ ತಂಗಿಯನ್ನೂ ಕೂಡಾ....."

ಕ್ರಮೇಣ ಹೊಟ್ಟೆಬಾಕನ ಮುಖ ಕೆಂಪಗಾಯಿತು, ಕಿವಿಗಳು ನೀಲಿಯಾದುವು. ಆಳಕ್ಕಿಳಿದಿದ್ದ ಕಣ್ಣುಗಳು ತಮ್ಮ ಪರಿಧಿಗಳಿಂದ ಹೊರಬರತೊಡಗಿದುವು. ಉಸಿರಾಟ ಕರ್ಕಶವಾಗತೊಡಗಿತು. ಆದರೆ ಅವನ ಗಲ್ಲ, ಏಕಪ್ರಕಾರವಾದ ಕ್ರಮಬದ್ಧತೆಯಿಂದಲೇ ಚಲಿಸುತ್ತ ಹೋಯಿತು.

ಅವರು ಹುರಿದುಂಬಿಸುತ್ತಲೇ ಇದ್ದರು:

"ಬೇಗ ತಿನ್ನು, ಮಿಶಾ—ಅವಧಿ ಮುಗೀತಾ ಬಂತು!?

ಉಳಿದಿದ್ದ ಮಾಂಸವನ್ನು ಅಸಮಾಧಾನದಿಂದ ಆತ ದಿಟ್ಟಿಸಿ ನೋಡಿದ. ಒಂದಿಷ್ಟು ಬೀರ್ ಕುಡಿದ. ಜಗಿಯುವುದನ್ನು ಮುಂದುವರಿಸಿದ. ಪ್ರೇಕ್ಷಕರು ಹೆಚ್ಚು ಹೆಚ್ಚಾಗಿ ಸಜೀವಗೊಂಡರು. ಮಿಶಾನ ಒಡೆಯನ ಕೈಯಲ್ಲಿದ್ದ ಗಡಿಯಾರದ ಕಡೆಗೆ ಪದೇಪದೇ ನೋಡತೊಡಗಿದರು. ಒಬ್ಬರಸ್ನೊಬ್ಬರು ಎಚ್ಚರಿಸತೊಡಗಿದರು:

ಮುಳ್ಳುಗಳನ್ನು ಆತ ಹಿಂದಕ್ಕೆ ತಿರುಗಿಸದಹಾಗೆ ನೋಡ್ಕೊ! ಗಡಿಯಾರವನ್ನು ಅವನ ಕೈಯಿಂದ ಈಚೆಗೆ ತಗೊಂಡು ಬಿಡೋದೇ ವಾಸಿ."

"ಮಿಶಾನ ಮೇಲೆ ಕಣ್ಣಿಡು! ಸ್ವಲ್ಪವನ್ನು ಅಂಗಿ ತೋಳುಗಳ ಒಳಕ್ಕೆ ಸೇರಿಸಿ ಬಿಡೋದಕ್ಕೆ ಆತ ಯತ್ನಿಸಬಹುದು!"

ಅವಧಿಯೊಳಗಾಗಿ ಇವನು ಖಂಡಿತಾ ಮುಗಿಸಲಾರ?"

ಆದುದಾಗಲೆಂದು ಮಿಶಾನ ಒಡೆಯ ಗುಡುಗಿದ:

"ಮುಗಿಸ್ತಾನೇಂತ ಇಪ್ಪತ್ತೈದು ರೂಬಲ್ ಪಣ ಕಟ್ತೀನಿ! ನಾನು ಸೋಲದಹಾಗೆ ನೋಡ್ಕೊ, ಮಿಶಾ!"

ಪ್ರೇಕ್ಷಕರು ಪ್ರೋತ್ಸಾಹಿಸುವ ನುಡಿಗಳನ್ನಾಡಿದರು. ಆದರೆ ಯಾರೂ ಪಣಕಟ್ಟುವ ಗೋಜಿಗೆ ಹೋಗಲಿಲ್ಲ.

ಮಿಶಾ ಒಂದೇ ಸಮನೆ ಜಗಿಯುತ್ತಲೇ ಇದ್ದ. ಅವನ ಮುಖ, ಮಾಂಸವನ್ನು ಹೋಲತೊಡಗಿತ್ತು. ಚೂಪಾದ ತೆಳ್ಳಗಿನ ಮೂಗಿನಿಂದ ಪ್ರಲಾಪಿಸುವ ಶಿಳ್ಳು ಹೊರಡುತ್ತಿತ್ತು. ಅವನೆಡೆಗೆ ನೋಡುವುದೇ ಭೀತಿಕಾರಕವಾಗಿತ್ತು. ಯಾವ ಕ್ಷಣದಲ್ಲೂ ಆತ ಬೊಬ್ಬಿರಿದು ಕೂಗಾಡಬಹುದು, "ನಿಮ್ಮ ದಮ್ಮಯ್ಯ!" ಅಂತ ಅನ್ನಬಹುದು—ಎಂದು ನಾನು ನಿರೀಕ್ಷಿಸಿದೆ.

ಅಥವಾ, ಗಂಟಲಲ್ಲಿ ತುತ್ತತುದಿಯವರೆಗೂ ಮಾಂಸ ತುಂಬಿದಾಗ, ಪ್ರೇಕ್ಷಕರ ಪಾದಗಳ ಬಳಿ ಆತ ಕುಸಿದುಬಿದ್ದು ಸಾಯಬಹುದು—ಎಂದೂ ನಿರೀಕ್ಷಿಸಿದೆ.

ಅಂತೂ ಕೊನೆಗೊಮ್ಮೆ ಅವನು ತಿಂದು ಮುಗಿಸಿದ. ಜನಸಂದಣಿಯ ಕಡೆಗೆ ಕಣ್ಣುಗಳನ್ನು ಹೊರಳಿಸುತ್ತ, ಬಳಲಿಕೆಯಿಂದ ಏದುಸಿರುಬಿಡುತ್ತ ನುಡಿದ:

"ಕುಡಿಯೋದಕ್ಕೆ ಏನಾದರೂ ಕೊಡಿ."

ಅವನ ಒಡೆಯ ತನ್ನ ಗಡಿಯಾರದತ್ತ ನೋಡಿ ಗೊಣಗಿದ:

"ನಾಲ್ಕು ನಿಮಿಷ ಹೆಚ್ಚು ತಗೊಂಡ, ಹಾದರಕ್ಕೆ ಹುಟ್ಟಿದೋನು!"

ಜನರ ಗುಂಪು ಕೀಟಲೆ ಮಾಡಿತು:

"ನಾವು ಪಣಕ್ಕೆ ಒಪ್ಪಿಕೊಳ್ಳದೇ ಇದ್ದದ್ದು ತಪ್ಪಾಯ್ತು; ನೀನು ಸೋತುಹೋಗ್ತಿದ್ದೆ."

"ಆದರೆ, ಈ ಮನುಷ್ಯ ಕುದುರೆಯಷ್ಟೇ ಗಟ್ಟಿಯಾಗಿದಾನೆ ಅನ್ನೋದನ್ನು ಅಲ್ಲಗಳೆಯೋ ಹಾಗಿಲ್ಲ!"

"ಇವನ ಸ್ಥಾನವಿರೋದು ಸರ್ಕಸಿನಲ್ಲಿ."

"ಕೆಲಜನರನ್ನು ಎಂಥ ವಿಚಿತ್ರ ರೀತಿಯಲ್ಲಿ ದೇವರು ಸೃಷ್ಟಿಸಿರ್ತಾನಪ್ಪ!"

"ಹುಂ, ನಾವು ಒಂದಿಷ್ಟು ಚಹಾ ಕುಡಿಯೋಣ, ಹ್ಞ?"

ಹೀಗೆ ಹೇಳುತ್ತ ಅವರು, ಹೇರುದೋಣಿಗಳ ಒಂದು ಸಾಲೇ ಹೊರಟಂತೆ, ಪಾನಮಂದಿರದ ಕಡೆಗೆ ತೇಲಿಹೋದರು.

ಗಭೀರರಾದ ಈ ಗಾತ್ರದೇಹಿಗಳು ಆ ಬಡಪಾಯಿಯ ಸುತ್ತು ಆ ರೀತಿ ಗುಂಪು ಕಟ್ಟಲು ಏನು ಕಾರಣ? ಅಂತಹ ಆರೋಗ್ಯಕರವಲ್ಲದ ಹೊಟ್ಟೆಬಾಕತನದಲ್ಲಿ ಅವರು ಕಾಣಬಹುದಾಗಿದ್ದ ವಿನೋದವಾದರೂ ಎಂಥದು?—ಎಂದು ನಾನು ಆಶ್ಚರ್ಯಪಟ್ಟೆ.

ಅಗಲ ಕಿರಿದಾದ ಚಪ್ಪರ ಹಾದಿಯಲ್ಲಿ ಅಂಗಡಿಗಳು ಎರಡೂ ಕಡೆ, ಕರಿದಾಗಿ, ಬೇಸರ ಹುಟ್ಟಿಸುವಂತೆ, ಉದ್ದಕ್ಕೂ ಚಾಚಿಕೊಂಡಿದ್ದುವು. ಈ ಅಂಗಡಿಗಳಲ್ಲಿ ಉಣ್ಣೆಯ ಬೇಲುಗಳು, ಸುರಿತೊಗಲುಗಳು, ಸಣಬು, ಹಗ್ಗ, ಅರಿವೆಯ ಬೂಟುಗಳು, ಜೀನುಗಳು—ಇವೆಲ್ಲಾ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ಇಟ್ಟಿಗೆಯ ಸಾಲುಗಳು ಈ ಅಂಗಡಿಗಳನ್ನು ನಡೆಯುವ ಹಾದಿಯಿಂದ ಪ್ರತ್ಯೇಕಿಸಿದ್ದುವು. ಇಟ್ಟಿಗೆಯ ಈ ಸಾಲುಗಳು ದಪ್ಪಗೆ ಅಡ್ಡಾದಿಡ್ಡಿಯಾಗಿದ್ದು, ಹಳೆಯದಾಗಿ ಉದುರತೊಡಗಿದ್ದುವು; ಬೀದಿಯ ಹೊಲಸಿನಿಂದ ಕರಿದಾಗಿದ್ದುವು. ಇಟ್ಟಿಗೆಗಳನ್ನು ಹಾಗೂ ಅವುಗಳ ನಡುವಿನ ಬಿರುಕುಗಳನ್ನು ಸಾವಿರಾರು ಬಾರಿ ನಾನು ಎಣಿಸಿರಬೇಕು. ಹೀಗಾಗಿ, ಆ ವಿಕೃತ ಮಾದರಿಗಳು ಸಮಗ್ರರೂಪ ನನ್ನ ನೆನಪಿನ ಆಳಕ್ಕೆ ಇಳಿದಿತ್ತು.

ಹಾದಿಹೋಕರು, ಯಾವ ಅವಸರವೂ ಇಲ್ಲದೆ, ಆ ದಾರಿಯಾಗಿ ನಡೆದು ಬರುತ್ತಿದ್ದರು. ಅಷ್ಟೇ ನಿಧಾನವಾಗಿ, ಆ ಹಾದಿಯಾಗಿ, ಸಾಮಾನು ಹೇರಿಕೊಂಡ ಬಂಡಿಗಳೂ ಹಿಮಗಾಡಿಗಳೂ ಬರುತ್ತಿದ್ದುವು. ರಸ್ತೆಯ ತೀರಾ ಕೊನೆಯಲ್ಲಿ ಎರಡಂತಸ್ತಿನ ಕೆಂಪು ಇಟ್ಟಿಗೆಗಳ ಅಂಗಡಿಯಿದ್ದ ಒಂದು ಚೌಕವಿತ್ತು. ಇಲ್ಲಿ ನೆಲದಮೇಲೆಲ್ಲಾ ಖಾಲಿ ಪೆಟ್ಟಿಗೆಗಳು, ಹುಲ್ಲು, ಹೊದಿಸುವ ಕಾಗದ ಇವೆಲ್ಲಾ ಹೊಲಸಾದ ಹಿಮದಲ್ಲಿ ನಜ್ಜುಗುಜ್ಜಾಗಿ ತುಳಿಯಲ್ಪಟ್ಟು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು.

ಇಂತಹ ನಿರಂತರ ಚಲನೆ ಇದ್ದರೂ ಕೂಡಾ, ಜನರನ್ನೂ ಕುದುರೆಗಳನ್ನೂ ಒಳಗೊಂಡ ಇದೆಲ್ಲವೂ ಅಗೋಚರ ಸಂಕೋಲೆಗಳಿಂದ ಬಿಗಿಯಲ್ಪಟ್ಟು ಒಂದೇ ನಿರ್ದಿಷ್ಟ ಜಾಗದಲ್ಲಿ ಸುತ್ತು ಸುತ್ತು ಬರುತ್ತಿದ್ದಂತೆ ಅನಿಸುತ್ತಿತ್ತು. ಈ ಬದುಕು, ಧ್ವನಿಯ ದಾರಿದ್ರ್ಯದಿಂದ ಬಳಲಿದ್ದು, ಸ್ಪಷ್ಟ ಮಾತಿನ ಉಚ್ಚಾರವೇ ಇದಕ್ಕಿಲ್ಲವೆಂದು ನನಗೆ ಕಂಡಿತು. ಹಿಮಗಾಡಿಗಳ ಚಾಲಕರು ಹಿಮದ ಮೇಲೆ ಕೀಚಲು ಸದ್ದು ಮಾಡುತ್ತ ಹೋಗುತ್ತಿದ್ದರು. ಅಂಗಡಿ ಬಾಗಿಲುಗಳು ಬಡಿದುಕೊಳ್ಳುತ್ತಿದ್ದುವು. ತಿನಿಸುಗಳ ಬೀದಿ ಮಾರಾಟಗಾರರು ತಮ್ಮಲ್ಲಿ ಏನೇನಿದೆಯೆಂದು ಕೂಗಿ ಹೇಳುತ್ತಿದ್ದರು. ಆದರೆ, ಮನುಷ್ಯ ಸ್ವರಗಳು ಬಹಳ ನೀರಸವಾಗಿ, ನಿರ್ಜೀವವಾಗಿ, ಏಕರೀತಿಯಾಗಿ ಕಂಡು, ಬೇಗನೆ ಕಿವಿ ಅವುಗಳನ್ನು ಆಲಿಸುವುದನ್ನೇ ಬಿಟ್ಟುಬಿಡುತ್ತಿತ್ತು.

ಇಗರ್ಜಿಯ ಗಂಟೆಗಳು ಸಾವನ್ನು ಸೂಚಿಸುವಂತೆ ಸದ್ದು ಮಾಡುತ್ತಿದ್ದುವು. ಅವುಗಳ ನೀರಸ ಸ್ವರವನ್ನೆಂದಿಗೂ ನಾನು ಮರೆಯಲಾರೆ. ಬೆಳಗಿನಿಂದ ರಾತ್ರಿಯವರೆಗೂ ಸಂತೆ ಪ್ರದೇಶದ ಮೇಲ್ಗಡೆ ಅದು ತೇಲುತ್ತಿತ್ತು; ಒಬ್ಬ ವ್ಯಕ್ತಿಯ ವಿಚಾರ-ಭಾವನೆಗಳೆಲ್ಲವನ್ನೂ ಇರಿದು ಇಳಿಯುತ್ತಿತ್ತು: ಒಬ್ಬನ ಭಾವಾನುಭವಗಳ ಮೇಲೆಲ್ಲ ಕಂಚಿನ ಜಡ್ಡನ್ನು ಸವರುತ್ತಿತ್ತು.

ಶೀತಲವಾದ, ನಿರ್ಜೀವಗೊಳಿಸುವ ಬೇಸರ, ಪ್ರತಿಯೊಂದರಿಂದಲೂ ಚಿಮ್ಮುತ್ತಿತ್ತು;—ಹೊಲಸು ಹಿಮದ ಕಂಬಳಿಯ ಅಡಿಯಲ್ಲಿದ್ದ ನೆಲದಿಂದ, ಛಾವಣಿಗಳ ಮೇಲೆ ರಾಶಿಯಾಗಿದ್ದ ಬೂದುಹಿಮದಿಂದ, ಕಟ್ಟಡಗಳ ಮಾಂಸದಷ್ಟೇ ಕೆಂಪಾದ ಇಟ್ಟಿಗೆಗಳಿಂದ-ಪ್ರತಿಯೊಂದರಿಂದಲೂ.

ಬೇಸರ, ಚಿಮಿಣಿಗಳಿಂದ ಬೂದು ಹೊಗೆಯ ಬಳ್ಳಿಗಳಾಗಿ ಹೊರಟು, ಸುತ್ತು ಸುತ್ತು ಬರುತ್ತಿತ್ತು ತೀರ ಕೆಳಗಿದ್ದಂತೆ ಕಂಡ, ನರೆ ಬಣ್ಣದ, ಬರಿದು ಆಕಾಶದ ಅಗಲಕ್ಕೆ, ತೆವಳುತ್ತ ಸಾಗುತ್ತಿತ್ತು ಕುದುರೆಗಳ ಪಕ್ಕೆಗಳಿಂದಲೂ ಮನುಷ್ಯರ ಮೂಗಿನ ಹೊಳ್ಳೆಗಳಿಂದಲೂ ಬೇಸರ ಏರಿಳಿಯುತ್ತಿತ್ತು. ಅದಕ್ಕೆ ತನ್ನದೇ ಆದ ವಿಚಿತ್ರವಾಸನೆಯಿತ್ತು—ಬೆವರಿನ, ಕೊಬ್ಬಿನ, ಹೊಗೆಯ ಸಣಬಿನ ಬೀಜದೆಣ್ಣೆಯ, ಜಿಗುಟು ತಿನಿಸುಗಳ, ಮಂದವಾದ ಭಾರವಾದ ವಾಸನೆಯಿತ್ತು. ಬೆಚ್ಚಗಿನ ಬಿಗಿಯಾದ ಟೋಪಿಯಂತೆ ತಲೆಯ ಮೇಲೆ ರಭಸದಿಂದ ಕುಳಿತು, ತೂತುಗಳಿಂದ ಕೆಳಕ್ಕಿಳಿಯುತ್ತಿತ್ತು. ಹಾಗೆ ಇಳಿಯುತ್ತ, ಆ ಮನುಷ್ಯ ತನ್ನ ಕಣ್ಣುಗಳನ್ನು ಮುಚ್ಚಬೇಕೆಂಬ, ತನ್ನೆಲ್ಲ ಶಕ್ತಿಯಿಂದ ಗರ್ಜಿಸಬೇಕೆಂಬ, ಅತ್ಯಂತ ಹತ್ತಿರದ ಕಲ್ಲಗೋಡೆಗೆ ತನ್ನ ತಲೆ ಬಡೆಯಲೆಂದು ಧಾವಿಸಬೇಕೆಂಬ—ಬಯಕೆಯನ್ನು ಹುಟ್ಟಿಸುವಂತಹ, ಒಂದು ಬಗೆಯ ಮತ್ತೇರಲು ಕಾರಣವಾಗುತ್ತಿತ್ತು.

ಅನೇಕಸಾರೆ, ಆ ವರ್ತಕರ ಮುಖಗಳನ್ನು ನಾನು ಅಭ್ಯಸಿಸುತ್ತಿದ್ದೆ. ಅವು, ಅತಿತೃಪ್ತಿಯಿಂದ ಬೇಸತ್ತ, ದಟ್ಟವಾದ ಸಮೃದ್ಧ ರಕ್ತದಿಂದ ತುಂಬಿದ, ಮಂಜಿನ ಶೀತದಿಂದ ಚುಚ್ಚಲ್ಪಟ್ಟ, ನಿದ್ದೆ ಮಾಡಿರುವರೇನೋ ಎಂಬಂತೆ ನಿಶ್ಚಲವಾದ ಮುಖಗಳು. ದಡಕ್ಕೆಸೆಯಲ್ಪಟ್ಟ ಮೀನುಗಳಂತೆ ತಮ್ಮ ಬಾಯಿಗಳನ್ನು ಅಗಲವಾಗಿ ತೆರೆಯುತ್ತ ಆಗಾಗ್ಗೆ ಅವರು ಆಕಳಿಸುತ್ತಿದ್ದರು.

ಚಳಿಗಾಲದಲ್ಲಿ ವ್ಯಾಪಾರ ಕಡಮೆಯಾಗಿರುತ್ತಿತ್ತು. ಬೇಸಗೆಯಲ್ಲಾದರೋ ವರ್ತಕರ ಕಣ್ಣುಗಳಲ್ಲಿ ಎಚ್ಚರಿಕೆಯ, ಲೆಕ್ಕಾಚಾರದ, ಹೊಳಪಿರುತ್ತಿತ್ತು. ಆ ಹೊಳಪಿನಿಂದ, ಕಣ್ಣುಗಳು ಹೆಚ್ಚುಕಡಮೆ ಸುಂದರವಾಗಿಯೇ ಕಾಣಿಸುತ್ತಿದ್ದುವು. ಈಗ ಆ ಹೊಳಪಿರುತ್ತಿರಲಿಲ್ಲ. ಅವರ ಭಾರವಾದ ಕೋಟುಗಳು ಅವರ ಚಲನವಲನಗಳಿಗೆ ಅಡ್ಡಿಯಾಗುತ್ತಿದ್ದುವು; ನೆಲಕ್ಕೆ ಅವರನ್ನು ಅಂಟಿಸಿಬಿಡುತ್ತಿದ್ದುವು. ವರ್ತಕರು ಸೋಮಾರಿತನದಿಂದ ನಿಧಾನವಾಗಿ ಮಾತನಾಡುತ್ತಿದ್ದರು; ಸಿಟ್ಟುಗೊಂಡಾಗ ದೀರ್ಘವಾಗಿ ವಾದಿಸುತ್ತಿದ್ದರು. ಬೇಕುಬೇಕೆಂದೇ ಅವರು ಹೀಗೆ ಮಾಡುತ್ತಿದ್ದರೆಂದು, ತಾವು ಜೀವಂತರಾಗಿರುವೆವೆಂದು ಪರಸ್ಪರರಿಗೆ ರುಜುಪಡಿಸುವುದಕ್ಕೋಸ್ಕರವೇ ಹೀಗೆ ವರ್ತಿಸುತ್ತಿದ್ದರೆಂದು, ನನಗನಿಸುತ್ತಿತ್ತು !

ಈ ಸರ್ವಭಕ್ಷಕ ಬೇಸರದಡಿಯಲ್ಲಿ ಅವರು ನರಳುತ್ತಿದ್ದರೆಂಬುದು ಸ್ಪಷ್ಟವಾಗಿ ನನಗೆ ಕಾಣಿಸುತ್ತಿತ್ತು. ಅವರ ಕ್ರೂರ ಮತ್ತು ಅರ್ಥಹೀನ ವಿನೋದಗಳೆಲ್ಲ ಆ ಬೇಸರವನ್ನು ಇದಿರಿಸುವ ಕೊನೆಯ ಪ್ರಯತ್ನವೆಂದು, ನಾನು ವಿವರಿಸುವುದು ಸಾಧ್ಯವಿತ್ತು.

ಕೆಲವೇಳೆ ಇದನ್ನು ಕುರಿತು ಪಿಯೋತರ್ ವಾಸಿಲ್ಯೇವಿಚನೊಡನೆ ನಾನು ಮಾತನಾಡುತ್ತಿದ್ದೆ. ಸಾಧಾರಣವಾಗಿ ನನ್ನ ಬಗೆಗೆ ಆತನ ಧೋರಣೆ ವ್ಯಂಗ್ಯವೂ ಕೆಣಕುವಂಥದೂ ಆಗಿದ್ದರೂ, ಪುಸ್ತಕಗಳ ಬಗೆಗೆ ನನಗಿರುವ ಪ್ರೇಮಕಂಡು ಆತ ಸಂತುಷ್ಟನಾಗಿದ್ದ. ಆಗೊಮ್ಮೆ ಈಗೊಮ್ಮೆ ಗಂಭೀರವಾಗಿಯೂ ಬೋಧಪ್ರದವಾಗಿಯೂ ನನ್ನೊಡನೆ ಮಾತನಾಡುವ ಔದಾರ್ಯವನ್ನು ಅವನು ತೋರುತ್ತಿದ್ದ.

"ವರ್ತಕರು ಜೀವಿಸ್ತಿರೋ ರೀತಿ ನನಗಿಷ್ಟವಾಗುವುದಿಲ್ಲ," ಎಂದು ನಾನೆಂದೆ.

ಒಂದಿಷ್ಟು ಗಡ್ಡವನ್ನು ತನ್ನ ಬೆರಳಿನ ಸುತ್ತಲೂ ತಿರುವುತ್ತ ಅವನು ಕೇಳಿದ:

"ಅವರು ಯಾವ ರೀತಿ ಜೀವಿಸ್ತಾರೇಂತ ನಿನಗೆ ಹೇಗೆ ಗೊತ್ತಾಗೋದು ಸಾಧ್ಯ? ಅಥವಾ

ಗಾಗ್ಗೆ ಅವರ ಸಂದರ್ಶನಕ್ಕೆ ಹೋಗ್ತಿರ್ತೀಯಾ? ಇದು ಜೀದಿ, ಮಗು. ಜನರು ಬೀದಿಯಲ್ಲಿ ಾಸಮಾಡೋದಿಲ್ಲ. ಬೀದಿಯಲ್ಲಿ ಅವರು ವ್ಯಾಪಾರಮಾಡ್ತಾರೆ; ಅಥವಾ, ಮನೆಯ ಹಾದಿ ಡಿದು ಅವಸರವಾಗಿ ನಡೆದುಹೋಗ್ತಾರೆ. ರಸ್ತೆಗಳಲ್ಲಿ ಜನರು, ಪೋಷಾಕುಗಳಲ್ಲಿ ಬಿಗಿಯಲ್ಪಟ್ಟ ೂಟೆಗಳಾಗಿರ್ತಾರೆ. ಪೋಷಾಕಿನ ಕೆಳಗೆ ಅವರು ಹೇಗಿರ್ತಾರೋ ತಿಳಿಯೋದು ಸಾಧ್ಯವಿಲ್ಲ. ಬ್ಬ ವ್ಯಕ್ತಿ ಮನೆ ಸೇರಿ ತನ್ನದೇ ಆದ ನಾಲ್ಕು ಗೋಡೆಗಳ ನಡುವೆ ಇದ್ದಾಗ ಮಾತ್ರ, ಅಗಲವಾಗಿ ನಸ್ಸು ತೆರೆದು ಜೀವಿಸ್ತಾನೆ. ಅದು ಯಾವ ರೀತಿ ಇರುತ್ತೇಂತ ತಿಳಿಯೋದಕ್ಕೆ ಯಾವ ಹಾದಿಯೂ ಲ್ಲ."

"ಆದರೆ, ಮನೆ ಅಥವಾ ಇಲ್ಲಿ—ಎಲ್ಲಾದರೂ ಅವರು ಮಾಡೋ ವಿಚಾರಗಳೆಲ್ಲ ಒಂದೇ." ನ್ನೆಡೆಗೆ ತೀಕ್ಷ್ಣದೃಷ್ಟಿಯಿಂದ ದುರದುರನೆ ನೋಡುತ್ತಾ ಗಂಭೀರವಾದ ಧ್ವನಿಯಲ್ಲಿ ಮುದುಕ ಂದ:

"ತನ್ನ ನೆರೆಯವನು ಏನು ಯೋಚಿಸ್ತಿದಾನೇಂತ ಹೇಳೋದು ಯಾರಿಂದ ಸಾಧ್ಯ? ವಿಚಾರ ಳು ಹೇನುಗಳಿದ್ದ ಹಾಗೆ—ಹಳಬರು ಹೇಳೋಹಾಗೆ, ಅವನ್ನು ಲಕ್ಷ್ಯಕ್ಕೆ ತಗೋಬೇಕಾದ್ದಿಲ್ಲ. ನೆ ಸೇರಿದಾಗ ಮನುಷ್ಯ ದೇವರ ಮುಂದೆ ಮಂಡಿಯೂರಿ, ಅಳೋದಕ್ಕೂ 'ನಿನ್ನ ಪವಿತ್ರ ದಿನದಲ್ಲಿ ಾಪಮಾಡಿರೋದಕ್ಕೆ ನನ್ನನ್ನು ಕ್ಷಮಿಸು, ಓ ಪ್ರಭುವೇ!' ಅಂತ ಪ್ರಾರ್ಥಿಸೋದಕ್ಕೂ ಶುರು ಾಡಲೂ ಬಹುದು. ಅಥವಾ, ಅವನ ಮನೆಯೇ ಆತನ ಸನ್ಯಾಸಿ ಮಠವಾಗಿರಬಹುದು; ಲ್ಲಿ ದೇವರ ಜತೆ ಆತ ಒಬ್ಬನೇ ಜೀವಿಸ್ತಿರಬಹುದು. ಪ್ರತಿಯೊಂದು ಜೇಡನೂ ಅದರದರ ೂಲೇಲಿ ಇರಬೇಕು. ನಿನ್ನ ಬಲೇನ ಹೆಣೆ, ಆದರೆ ನಿನ್ನ ಭಾರ ತಿಳಕೋ, ಆ ಬಲೆ ನಿನ್ನ ಾರ ತಡೆಯೋದಕ್ಕೆ ಶಕ್ತವಾಗಿರ್ಬೇಕು."

ಅವನು ಗಂಭೀರವಾಗಿ ಮಾತನಾಡಿದಾಗ, ಮುಖ್ಯರಹಸ್ಯವನ್ನೇನೋ ಗುಟ್ಟಾಗಿ ಹೇಳುವವ ಂತೆ, ಅವನ ಧ್ವನಿ ಮತ್ತಷ್ಟು ಆಳವಾಗುತ್ತಿತ್ತು.

"ನೀನು ವಿಚಾರಮಾಡಿ ಕಾರ್ಯ—ಕಾರಣ ಸಂಬಂಧ ಹುಡುಕ್ತಿದೀಯೆ. ಇದನ್ನೆಲ್ಲಾ ಾಡೋಕೆ ನೀನಿನ್ನೂ ಸ್ವಲ್ಪ ಚಿಕ್ಕವನು. ನಿನ್ನ ಈ ವಯಸ್ಸಿನಲ್ಲಿ ನೀನು ಜೀವಿಸಬೇಕಾದ್ದು ದುಳಿನಿಂದಲ್ಲ-ನಿನ್ನ ಕಣ್ಣುಗಳಿಂದ. ಬೇರೆ ಮಾತಿನಲ್ಲಿ ಹೇಳೋದಾದರೆ, ನೋಡು-ನನ ಡು-ನಾಲಿಗೆ ಬಿಗಿಹಿಡಿ. ಮಿದುಳು ಇರೋದು ವ್ಯವಹಾರಕ್ಕೆ; ಧರ್ಮ ಇರೋದು ಆತ್ಮಕ್ಕೆ. ಸ್ತಕಗಳನ್ನು ಓದೋದು ಪ್ರಶಂಸಾರ್ಹವಾದದ್ದು. ಆದರೆ, ಪ್ರತಿಯೊಂದಕ್ಕೂ ಮಿತಿ ಇದೆ. ಕೆಲ ರು ಅತಿಯಾಗಿ ಓದಿ, ತಮ್ಮ ಮನಸ್ಸನ್ನೂ ಕಳಕೊಳ್ತಾರೆ, ತಮ್ಮ ದೇವರನ್ನೂ ಕಳಕೊಳ್ತಾರೆ."

ಈತ ಸಾವೇ ಇಲ್ಲದ ಮನುಷ್ಯನಿರಬೇಕೆಂದು ನನಗೆ ಅನಿಸಿತು. ಇವನು ಬದಲಾಗುವುದನ್ನು ಲ್ಲವೆ ಇವನಿಗೆ ವಯಸ್ಸಾಗುವುದನ್ನು ಕಲ್ಪಿಸಿಕೊಳ್ಳುವುದು ನನ್ನಿಂದ ಸಾಧ್ಯವಿರಲಿಲ್ಲ. ಪ್ರಸಿದ್ಧಿಗೆ ದಂತಹ ವರ್ತಕರು, ದರೋಡೆಗಾರರು ಅಥವಾ ಖೋಟಾನಾಣ್ಯ ತಯಾರಕರ ವಿಷಯವಾಗಿ ಥೆಗಳನ್ನು ಹೇಳಲು ಅವನು ಇಷ್ಟಪಡುತ್ತಿದ್ದ. ಅಂತಹ ಅನೇಕ ಕಥೆಗಳನ್ನು ಅಜ್ಜನಿಂದ ನಾನು ಳಿದ್ದೆ. ಅಜ್ಜ ಅವುಗಳನ್ನು ಈತನಿಗಿಂತ ಚೆನ್ನಾಗಿ ಹೇಳುತ್ತಿದ್ದ. ಆದರೆ, ಕಥೆಗಳ ವಸ್ತು ಾತ್ರ ಎಲ್ಲಾ ಒಂದೇ ಆಗಿತ್ತು: ಯಾವಾಗಲೂ ಧನಕನಕಗಳ ಸಂಪಾದನೆಯಾಗುತ್ತಿದ್ದುದು, ವರು ಮತ್ತು ಮನುಷ್ಯನಿಗಿದಿರಾಗಿ ಪಾಪಮಾಡಿಯೇ. ಪಿಯೋತರ್ ವಾಸಿಲ್ಯೀವಿಶ್‌ಗೆ ಜನರ

ಬಗೆಗೆ ಕರುಣೆ ಇರಲಿಲ್ಲ. ಆದರೆ ದೇವರ ವಿಷಯವಾಗಿ ಆತ, ನಿಟ್ಟುಸಿರುಬಿಡುತ್ತ, ದೃಷ್ಟಿ ತಗ್
ಸುತ್ತ, ಪ್ರೀತಿಯಿಂದ ಮಾತನಾಡುತ್ತಿದ್ದ.

"ತಮ್ಮ ದೇವರನ್ನು ಜನರು ಹೇಗೆ ಮೋಸಗೊಳಿಸ್ತಿರ್ತಾರೆ, ನೋಡು. ಆದರೆ, ಪ್ರಭು ಏಸ
ವಿಗೆ ಎಲ್ಲವೂ ಕಾಣಿಸ್ತದೆ; 'ಆ್ಹ, ನನ್ನ ಜನರೇ, ನನ್ನ ಬನ್ನಬಡುವ ಜನರೇ, ನಿಮಗೋಸ್ಕರ ಕಾ
ರೋದು ನರಕ!' ಅಂತ ಅವರಿಗಾಗಿ ಆತ ಅಳ್ತಾನೆ."

ಒಂದು ಸಲ ಹೇಗೋ ಧೈರ್ಯ ತಳೆದು ನಾನೆಂದೆ:

"ಆದರೆ ನೀನೂ ರೈತರಿಗೆ ಮೋಸಮಾಡ್ತೀಯೇ."

ಅವನು ಸಿಟ್ಟಾಗಲಿಲ್ಲ. ಆತನೆಂದ:

ಹುಂ! ನಾನು ಉಂಟುಮಾಡೋ ನಷ್ಟ ಲೆಕ್ಕದ್ದಲ್ಲ! ನನಗಾಗಿ ನಾನು ನಾಲ್ಕೋ ಐದೊ
ರೂಬಲು ಹಿಡಕೊಂಡ್ಬಿಡ್ತೀನಿ—ಅಷ್ಟೇ, ಅದಕ್ಕಿಂತ ಹೆಚ್ಚಿಲ್ಲ."

ನಾನು ಓದುತ್ತಿದ್ದುದನ್ನು ಆತ ಕಂಡಾಗ, ನನ್ನ ಕೈಗಳಿಂದ ಪುಸ್ತಕವನ್ನೆತ್ತಿಕೊಂಡು, ಅದ
ತಿರುಳಿನ ಬಗೆಗೆ ನನ್ನನ್ನು ಪ್ರಶ್ನಿಸುತ್ತಿದ್ದ. ಒಂದು ಬಗೆಯ ಸಂದೇಹಗ್ರಸ್ತವಾದ ಅಚ್ಚರಿಯಿಂ
ಅಂಗಡಿಸಹಾಯಕನ ಕಡೆಗೆ ತಿರುಗಿ, ಹೇಳುತ್ತಿದ್ದ:

"ನೋಡಪ್ಪ ಇದನ್ನು ಸ್ವಲ್ಪ—ಪುಸ್ತಕಗಳು ಅರ್ಥವಾಗ್ತವೆ ಇವನಿಗೆ, ಈ ಪುಟ್ಟ ಕೋತಿಗೆ

ಬಳಿಕ, ನಿರ್ದಿಷ್ಟವಾದ ಮರೆಯಲಾಗದಂತಹ ರೀತಿಯಲ್ಲಿ ಅವನು ನನಗೆ ಬೋಧಿಸುತ್ತಿದ್ದ

"ನನ್ನ ಮಾತುಗಳಿಗೆ ಕಿವಿಗೊಡು—ಅವುಗಳಿಂದ ನಿನಗೆ ಪ್ರಯೋಜನವಾಗ್ತದೆ. ಹಿಂ
ಇಬ್ಬರು ಕಿರಿಲ್ಲರಿದ್ದರು. ಇಬ್ಬರೂ ಬಿಷಪರು, ಒಬ್ಬ ಅಲೆಕ್ಸಾಂಡ್ರಿಯದವನು, ಇನ್ನೊಬ್ಬ ಜೆರೂ
ಲೇಮಿನವನು. ಮೊದಲನೆಯವನು, ಪಾಪಿ ದೈವದ್ರೋಹಿ ನೆಸ್ತೊರನ ವಿರುದ್ಧ ಹೋರಾಡಿ
ಈ ನೆಸ್ತೊರ್ ಮಾಡ್ತಿದ್ದದ್ದು ಅಶ್ಲೀಲ ಬೋಧನೆ: ಕನ್ನಿಕೆಯು ಬರೇ ಮನುಷ್ಯಳು, ಆದ್ದರಿಂ
ದೇವರಿಗೆ ಜನ್ಮ ಕೊಟ್ಟಿರಲಾರಳು; ಬದಲು, ಕ್ರಿಸ್ತನೆಂಬ ಹೆಸರಿನ ಮನುಷ್ಯನಿಗೆ ಜನ್ಮಕೊಟ್ಟಳು
ಅವನೇ ಜಗದ್ರಕ್ಷಕನಾದ....ಅಂದರೆ, ಆಕೆಯನ್ನು ದೇವಮಾತೆ ಅಂತ ಕರೆಯಬಾರದು, ಬದಲ
ಕ್ರಿಸ್ತಮಾತೆ ಅಂತ ಕರೀಬೇಕೂಂತಾಯ್ತು. ತಿಳಿಯಿತೆ? ದೈವದ್ರೋಹ ಅನ್ನೋದು ಅದಕ್ಕೆ
ಈಗ....ಜೆರೂಸಲೇಮಿನ ಕಿರಿಲ್, ದೈವದ್ರೋಹಿ ಆರಿಯಾನ ವಿರುದ್ಧ ಹೋರಾಡಿದ...."

ಇಗರ್ಜಿಯ ಇತಿಹಾಸದ ಬಗೆಗೆ ಆತನಿಗಿದ್ದ ಜ್ಞಾನವನ್ನು ಕಂಡು ನಾನು ಬಹಳವಾಗಿ ತ
ದೂಗುತ್ತಿದ್ದೆ. ಮೃದುವಾದ, ಧರ್ಮಾಧಿಕಾರಿಗಿರುವಂತಹ ಕೈಯಿಂದ, ತನ್ನ ಗಡ್ಡವನ್ನು ತಟ್ಟು
ಜಂಭದಿಂದ ಅವನೆನ್ನುತ್ತಿದ್ದ:

"ಅಂಥ ವಿಷಯಗಳಿಗೆ ಬಂದಾಗ, ನಾನೊಬ್ಬ ಸೇನಾನಿ: ಪುನರುತ್ಥಾನ ಹಬ್ಬದ ಅನಂತರ
ಭಾನುವಾರ, ಪಂಡಿತರಾದ ನಿಕೊನ್‌ವಾದಿಗಳು, ಧರ್ಮಗುರುಗಳು ಮತ್ತು ಜನ ಸಾಮಾನ್ಯ
ವಿಷನಾಲಿಗೆಗಳ ವಿರುದ್ಧ ಹೋರಾಡೋದಕ್ಕೆ ನಾನು ಮಾಸ್ಕೋಗೆ ಹೋದೆ. ಪಂಡಿತರಲ್ಲಿ ಪಂಡಿ
ಶಾದವರ ಜತೆ ನಾನು ವಾದಿಸಿದೆ. ನನ್ನ ನಾಲಿಗೆಯ ತೀಕ್ಷ್ಣತೆ ತಡೆಯೋದಕ್ಕಾಗದೆ, ಒಬ್ಬ ಧರ್ಮ
ಶಾಸ್ತ್ರಜ್ಞನ ಮೂಗಿನಿಂದ ರಕ್ತವೇ ಸುರಿಯಿತು. ಏನಂತೀಯಾ ಅದಕ್ಕೆ!"

ಅವನ ಕೆನ್ನೆಗಳು ರಂಗೇರಿ, ಕಣ್ಣುಗಳು ಹೊಳೆದುವು.

ತನ್ನ ವಿರೋಧಿಯ ಮೂಗಿನಿಂದ ರಕ್ತಸುರಿದುದು ತನ್ನ ಅತ್ಯಂತ ದೊಡ್ಡ ಸಾಧನೆಯೆಂದ

ತನ್ನ ಕೀರ್ತಿಯ ಬಂಗಾರದ ಕಿರೀಟದಲ್ಲೊಂದು ಪ್ರಕಾಶಮಾನ ಮಣಿಯೆಂದು, ಆತ ಪರಿಗಣಿಸಿದ್ದನೆಂಬುದು ಸ್ಪಷ್ಟವಾಗಿತ್ತು. ಅದನ್ನು ಕುರಿತು ವಿಜಯ ಧ್ವನಿಯಿಂದ ಅವನು ಮಾತನಾಡುತ್ತಿದ್ದ:

"ಆತ ಸ್ಫುರದ್ರೂಪಿಯಾದ ಆಸಾಮಿ—ದೊಡ್ಡ ದೈತ್ಯನ ಹಾಗಿದ್ದ. ತಟಕ್-ತಟಕ್-ತಟಕ್ ಅಂತ ಮೂಗಿನಿಂದ ರಕ್ತ ತೊಟ್ಟಿಕ್ತಾ ಪ್ರವಚನದ ವೇದಿಕೆಯ ಮೇಲೆ ಅವನು ನಿಂತಿದ್ದ. ರಕ್ತ ಸುರಿದು ಆಗ್ತಿರೋ ಅವಮಾನದ ಅರಿವೇ ಅವನಿಗಿರಲಿಲ್ಲ. ಸಿಂಹದಂತೆ ಭಯಂಕರನಾಗಿದ್ದ; ಬೂಮ್ ಬೂಮ್ ಘಂಟೆಯ ಹಾಗೆ ಧ್ವನಿ. ನಾನಾದರೋ ನನ್ನ ಮಾತುಗಳನ್ನು ಕಠಾರಿಗಳ ಹಾಗೆ ಅವನ ಆತ್ಮಕ್ಕೆ ತಿವಿಯುತ್ತಲೇ ಇದ್ದೆ, ಶಾಂತವಾಗಿ—ಪಕ್ಕೆಗಳ ನಡುವೆ ನೇರವಾಗಿ. ಒಲೆಯ ಮೇಲ್ಭಾಗದ ಹಾಗೆ ಕೆಂಪಗಾಗೋವರೆಗೂ ಮೈ ಬಿಸಿ ಏರಿಸಿಕೊಂಡು ತನ್ನ ದುಷ್ಟ ದೈವ ದ್ರೋಹದ ಮಾತುಗಳನ್ನು ಆತ ಆಡಿದ. ಆ್ಹ, ಎಂಥ ದಿನಗಳು ಅವು!"

ನಮ್ಮ ಅಂಗಡಿಗೆ ಇತರ ಪುರಾತನ ವಾದಿಗಳೂ ಬರುತ್ತಿದ್ದರು. ವಿಶಾಲವಾದ ಹೊಟ್ಟೆಯಿದ್ದ, ಒಂದೇ ಒಂದು ಕಣ್ಣಿದ್ದ, ದಿಂಬಿನಂತಹ ಮನುಷ್ಯ—ಪಾಯೊಮಿ. ಆತ ಮಾತನಾಡುತ್ತಿದ್ದುದು ಹುಂಕರಿಸುವ ರೀತಿಯಲ್ಲಿ. ಜಿಗುಟಾದ ಹಳೆಯ ಕೋಟೊಂದನ್ನು ಅವನು ತೊಟ್ಟಿರುತ್ತಿದ್ದ. ಇನ್ನೊಬ್ಬ—ಮುದುಕ ಲುಕಿಯನ್. ಇಲಿಯಷ್ಟೇ ಪುಟ್ಟ ಆಕೃತಿ ಹಾಗೂ ನಾಜೂಕು. ನಡೆನುಡಿಯಲ್ಲಿ ಮೃದು, ಚುರುಕು. ಅವನ ಜತೆ ಯಾವಾಗಲೂ ಗಾತ್ರದೇಹದ ಸಿಡುಕನೊಬ್ಬ ಇರುತ್ತಿದ್ದ. ಕೋಚ್‌ಗಾಡಿ ಹೊಡೆಯುವವನನ್ನು ಅವನು ಹೋಲುತ್ತಿದ್ದ; ಕಪ್ಪುಗಡ್ಡ, ಅಚಲವಾದ ಕಣ್ಣುಗಳು, ಸುಂದರವಾದ ಆದರೆ ಹುಳಿಹುಳಿಯಾಗಿರುತ್ತಿದ್ದ ಮುಖ, ಅದರ ಮೇಲೆ ಶೂನ್ಯಭಾವ.

ಹಳೆಯ ಪುಸ್ತಕಗಳು, ಪ್ರತಿಮೆಗಳು, ಸುಗಂಧ ದ್ರವ್ಯಗಳನ್ನು ಸುಡುವ ಸಾಮಗ್ರಿಗಳು, ಇಗರ್ಜಿಯ ಪಾತ್ರೆಗಳು—ಇವನ್ನೆಲ್ಲ ನಮಗೆ ಮಾರಲು ಹೆಚ್ಚು ಕಡಿಮೆ ಯಾವಾಗಲೂ ಅವರು ಯತ್ನಿಸುತ್ತಿದ್ದರು. ಆಗೊಮ್ಮೆ ಈಗೊಮ್ಮೆ ತಮ್ಮೊಡನೆ ಅವರು, ಮಾರಾಟಕ್ಕೆಂದು ಸಾಮಗ್ರಿಗಳಿದ್ದ, ವೋಲ್ಗಾನದಿಯಾಚೆಗಿನ ಒಬ್ಬ ಮುದುಕನನ್ನೋ ಮುದುಕಿಯನ್ನೋ ಕರಕೊಂಡು ಬರುತ್ತಿದ್ದರು. ವ್ಯವಹಾರ ಮುಗಿದ ಬಳಿಕ, ಬೇಲಿಯ ಮೇಲೆ ಕುಳಿತುಕೊಳ್ಳುವ ಕಾಗೆಗಳಂತೆ ಅಂಗಡಿಯ ಗಲ್ಲದ ಮೇಲೆ ಇವರು ಕುಳಿತು, ಬನ್ನುಗಳನ್ನೂ ಹಣ್ಣಿನ ಸುವಾಸನೆಯುಳ್ಳ ಸಕ್ಕರೆಯನ್ನೂ ಸವಿಯುತ್ತ, ಚಹಾ ಕುಡಿಯುತ್ತಿದ್ದರು; ನಿಕೊನ್‌ವಾದಿ ಇಗರ್ಜಿಯವರು ಉಂಟುಮಾಡುವ ಯಾತನೆಯ ಬಗೆಗೆ ಮಾತನಾಡುತ್ತಿದ್ದರು: ಇಲ್ಲೊಂದು ಕಡೆ ಶೋಧೆ ನಡೆದಿತ್ತು, ಪವಿತ್ರ ಪುಸ್ತಕಗಳನ್ನು ಹಿಡಿದು ಒಯ್ದಿದ್ದರು; ಅಲ್ಲಿ ಪೋಲೀಸರು ಇವರದೊಂದು ಪ್ರಾರ್ಥನಾ ಮಂದಿರವನ್ನು ಮುಚ್ಚಿಬಿಟ್ಟಿದ್ದರು; ಅಲ್ಲಿ ಪ್ರಾರ್ಥಿಸಿದವರನ್ನು, ೧೦೩ನೆಯ ವಿಧಿಯನ್ನು ಉಲ್ಲಂಘಿಸಿದ ಆರೋಪ ಹೊರಿಸಿ ನ್ಯಾಯಾಸ್ಥಾನಕ್ಕೆ ಎಳೆದಿದ್ದರು.

೧೦೩ನೆಯ ವಿಧಿಯು ಅವರ ಮಾತುಕತೆಯ ಮೆಚ್ಚುಗೆಯ ವಿಷಯವಾಗಿತ್ತು. ಚಳಿಗಾಲದ ಶೀತಹಿಮದ ಹಾಗೆ ಅದೂ ಅನಿವಾರ್ಯವಾದುದೇನೋ ಎಂಬಂತೆ, ಅದರ ಬಗೆಗೆ ನಿರ್ವಿಕಾರ ಮನಸ್ಸಿನಿಂದ ಅವರು ಪ್ರಸ್ತಾಪಿಸುತ್ತಿದ್ದರು.

ಪೋಲೀಸರು, ಶೋಧೆ, ಸೆರೆಮನೆ, ನ್ಯಾಯಾಸ್ಥಾನ, ಸೈಬೀರಿಯಾ ಎಂಬ ಪದಗಳು—

ಧರ್ಮಕ್ಕೋಸುಗ ತಾವು ಪಡುವ ಯಾತನೆಯ ಬಗೆಗೆ ಮಾತನಾಡುವಾಗ ಪದೇ ಪದೇ ಅವರು ಬಳಸುತ್ತಿದ್ದ ಪದಗಳು ಸುಡು ಕೆಂಡಗಳಂತೆ ನನ್ನ ಹೃದಯದ ಮೇಲೆ ಬಿದ್ದುವು; ಆ ಮುದುಕರ ವಿಷಯದಲ್ಲಿ ಸಹಾನುಭೂತಿಯನ್ನೂ ಸದ್ಭಾವನೆಯನ್ನೂ ಉಂಟುಮಾಡಿದುವು. ನಾನು ಓದಿದ್ದ ಪುಸ್ತಕಗಳು, ನೈತಿಕ ಧೈರ್ಯವನ್ನು ನಾನು ಮೆಚ್ಚುವಂತೆ, ಗುರಿಸಾಧನೆಯಲ್ಲಿ ಏಕನಿಷ್ಠೆಯಿಂದಿರುವವರನ್ನು ಗೌರವಿಸುವಂತೆ, ನನಗೆ ಕಲಿಸಿಕೊಟ್ಟಿದ್ದುವು.

ಪುರಾತನ ಪಂಥವೊಂದರ ಈ ದೂತರ ವೈಯಕ್ತಿಕ ದೌರ್ಬಲ್ಯಗಳನ್ನು ನಾನು ಮರೆತೆ. ನನಗಿದ್ದುದು ಅವರ ಶಾಂತ ಆಗ್ರಹದ ಅರಿವು ಮಾತ್ರ. ಆ ಆಗ್ರಹದ ಕೆಳಗೆ, ತಮ್ಮ ಧ್ಯೇಯ ನ್ಯಾಯವಾದುದೆಂಬ ಅಚಲ ನಂಬುಗೆ ಇತ್ತು; ಅದಕ್ಕೋಸ್ಕರ ಎಲ್ಲಾ ಬಗೆಯ ಶ್ರಮವನ್ನೂ ಸಂಕಟಗಳನ್ನೂ ಸಹಿಸುವ ಇಷ್ಟವಿತ್ತು. ಇತ್ತೋ ಇಲ್ಲವೋ, ಅಂತೂ ಹಾಗೆ ನನಗೆ ಅನಿಸಿತು.

ಮುಂದೆ, ಬುದ್ಧಿಜೀವಿಗಳ ಸರಳ ಜನಸಾಮಾನ್ಯರಲ್ಲೂ ಅಂತಹ ಅದೆಷ್ಟೋ ಜನರನ್ನು ನಾನು ಸಂಧಿಸಿದ ಬಳಿಕ, ಸತ್ಯಾಂಶ ನನಗೆ ಮನವರಿಕೆಯಾಯಿತು. ಅವರ ಆಗ್ರಹವು, ಆಗಲೇ ತಲಪಿದ ಗುರಿಯಾಚೆಗೆ ಹೋಗಲು ಸ್ಥಳವೇ ಇಲ್ಲದ ಜನರ ಪರಿತಾಪ ಪ್ರವೃತ್ತಿಯಾಗಿತ್ತು. ವಾಸ್ತವವಾಗಿ, ನಿರ್ಜೀವ ಪದಗಳ ಹಾಗೂ ನಿಷ್ಪ್ರಯೋಜಕ ಕಲ್ಪನೆಗಳ ಬಲೆಯಲ್ಲಿ ಸಿಕ್ಕ ಅವರಿಗೆ, ಮುಂದೆ ಹೋಗುವ ಅಪೇಕ್ಷೆಯೂ ಇರಲಿಲ್ಲ. ಅವರ ಇಚ್ಛಾಶಕ್ತಿ ಸತ್ವಹೀನವಾಗಿತ್ತು; ಭವಿಷ್ಯತ್ತಿನ ಕಡೆಗೆ ಬೆಳೆಯಲು ಅಸಮರ್ಥವಾಗಿತ್ತು. ಇದ್ದಕ್ಕಿದ್ದಂತೆ ಅವರ ವಿಮೋಚನೆಯೇನಾದರೂ ಆಗಿದ್ದರೆ, ಗುಡ್ಡದ ತಪ್ಪಲಿನಲ್ಲಿ ಕಲ್ಲು ಉರುಳುವ ಹಾಗೆ ಯಾಂತ್ರಿಕವಾಗಿ ಅವರು ಕೆಳಕ್ಕೆ ಉರುಳಿ ಹೋಗುತ್ತಿದ್ದರು. ಸತ್ತವಿಚಾರಗಳ ಸ್ಮಶಾನ ಭೂಮಿಯಲ್ಲಿ, ಹಿಂದಿರುಗಿ ನೋಡುವ ನಿರ್ಜೀವ ಶಕ್ತಿಯಿಂದಲೂ ಯಾತನೆ ಹಾಗೂ ಹಿಂಸೆಗಳ ಮೇಲಿನ ಅನಾರೋಗ್ಯಕರ ಒಲವಿನಿಂದಲೂ ಅವರು ಬಂಧಿತರಾಗಿದ್ದರು. ಯಾತನೆ ಅನುಭವಿಸುವ ಅವಕಾಶ ಒಮ್ಮೆ ತಪ್ಪಿಹೋಯಿತೆಂದರೆ, ಅವರ ಸತ್ವವೆಲ್ಲವೂ ಇಂಗಿ ಹೋಗುವುದು; ನಿರ್ಮಲವಾದ, ಗಾಳಿ ಬೀಸುವ ದಿನದಲ್ಲಿ ಮೋಡಗಳು ಮಾಯವಾಗುವಂತೆ ಅದು ಮರೆಯಾಗಿ ಹೋಗುವುದು.

ಅಷ್ಟೊಂದು ಆತುರದಿಂದ, ಹಾಗೂ ಅಂತಹ ಮಿಥ್ಯಾಭಿಮಾನದಿಂದ, ಅವರು ತಮ್ಮನ್ನು ತಾವೇ ಬಲಿಕೊಡುತ್ತಿದ್ದ ಆ ನಿಷ್ಠೆ, ನಿಸ್ಸಂಶಯವಾಗಿಯೂ ದೃಢನಿಷ್ಠೆಯಾಗಿತ್ತು. ಆದರೆ ಅದು, ಕಾಲದ ಹಿಂಸೆಗೂ ಎಟಕದಷ್ಟು ಧೂಳಿನ ಹೊಲಸಿನ ಪದರುಪದರೇ ಕುಳಿತ ಹಳೆಯ ಪೋಷಾಕನ್ನು ಹೋಲುತ್ತಿತ್ತು. ಪೂರ್ವಾಭಿಪ್ರಾಯಗಳ ಹಾಗೂ ಜಡತತ್ವಗಳ ಪೆಟ್ಟಿಗೆಯಲ್ಲಿ ಬಲವಾಗಿ ಮುಚ್ಚಲ್ಪಡುವುದು, ಅವರ ಚಿಂತನೆಗಳಿಗೂ ಭಾವನೆಗಳಿಗೂ ರೂಢಿಯಾಗಿಬಿಟ್ಟಿತ್ತು. ಅವು ವಿಕೃತಗೊಂಡು ಮಣ್ಣುಪಾಲಾಯಿತೆಂಬುದರಿಂದ, ಅವರಿಗೆ ಯಾವ ರೀತಿಯ ಕಸಿವಿಸಿಯೂ ಆಗುವಂತಿರಲಿಲ್ಲ.

ಅಭ್ಯಾಸಬಲದನಿಷ್ಠೆಯು, ನಮ್ಮ ಬದುಕಿನ ಅತ್ಯಂತ ದುಷ್ಟವಾದ, ವಿಷಾದಕರವಾದ, ವಿಶೇಷ ಸಂಗತಿ. ಅಂತಹ ನಿಷ್ಠೆಯ ಸೀಮೆಯೊಳಗೆ, ಕಲ್ಲುಗೋಡೆಯ ನೆರಳಿನಲ್ಲಾಗುವಂತೆ, ಹೊಸತೇನಿದ್ದರೂ ಅದು ನಿಧಾನವಾಗಿ ಬೆಳೆಯುತ್ತದೆ—ಮುರುಟಿಕೊಂಡು, ರಕ್ತಹೀನವಾಗಿ ಬೆಳೆಯುತ್ತದೆ. ಆ ಕರಿದು ನಂಬುಗೆಯನ್ನು ಪ್ರವೇಶಿಸುವ ಪ್ರೇಮದ ಕಿರಣಗಳು ಬಲು ಕಡಿಮೆ. ದ್ವೇಷದ ರಕ್ತ ಸೋದರರಾದ ಪ್ರತೀಕಾರ, ದುರ್ಭಾವನೆ, ಅಸೂಯೆಯ ಕರಣಗಳಾದರೋ ಅನೇಕವಾಗಿ

ಅದನ್ನು ಪ್ರವೇಶಿಸುತ್ತವೆ. ಅಂತಹ ನಂಬುಗೆಯ ಬೆಂಕಿ, ಅವನತಿಯ ರಂಜಕಪ್ರಭೆ ಮಾತ್ರ.

ಇದನ್ನು ನನಗೆ ಮನವರಿಕೆ ಮಾಡಿಕೊಡಲು, ಅನೇಕ ವರ್ಷಗಳ ಕಠಿನ ಜೀವನ ಬೇಕಾಯಿತು. ಹಲವಾರು ಆರಾಧ್ಯಮೂರ್ತಿಗಳನ್ನು ಕಿತ್ತೆಸೆಯುವುದೂ ಹಲವಾರು ವಿಚಾರಗಳನ್ನು ಬುಡಮೇಲು ಮಾಡುವುದೂ ಅವಶ್ಯವಾಯಿತು. ವಾಸ್ತವವಾಗಿ, ನನ್ನ ಸುತ್ತಲಿನ ನೀರಸ ಹಾಗೂ ಲಂಗುಲಗಾಮಿಲ್ಲದ ಬದುಕಿನ ಮಧ್ಯೆ ಈ ದೂತರನ್ನು ಮೊದಲು ಕಂಡಾಗ, ಅಪಾರವಾದ ನೈತಿಕ ಬಲ ಅವರಲ್ಲಿದ್ದಂತೆ, ಇವರೇ ನಿಜವಾದ ನೆಲದ ಮಕ್ಕಳೆಂಬಂತೆ, ನನಗೆ ಅನಿಸಿತ್ತು. ಅವರಲ್ಲಿ ಹೆಚ್ಚು ಕಡಮೆ ಪ್ರತಿಯೊಬ್ಬರೂ ಒಂದಲ್ಲ ಒಂದು ಸಾರೆ ನ್ಯಾಯಾಸ್ಥಾನಕ್ಕೆ ಒಯ್ಯಲ್ಪಟ್ಟಿದ್ದರು; ಸೆರೆಮನೆಗೆ ತಳ್ಳಲ್ಪಟ್ಟಿದ್ದರು; ಶಹರದ ಹೊರಕ್ಕೆ ಓಡಿಸಲ್ಪಟ್ಟಿದ್ದರು; ಇತರ ಅಪರಾಧಿಗಳ ಜತೆ ಗಡೀಪಾರಿನ ಬೇಸರದ ಹಾದಿಯಲ್ಲಿ ಒತ್ತಾಯಪೂರ್ವಕವಾಗಿ ನಡೆಸಲ್ಪಟ್ಟಿದ್ದರು. ಅವರೆಲ್ಲರೂ ಉದ್ವಿಗ್ನ ವಾತಾವರಣದಲ್ಲಿ ತಲೆಮರೆಸಿಕೊಂಡು, ಜೀವಿಸಿದ್ದರು.

ಅದೇನಿದ್ದರೂ, ನಿಕೊನ್‌ವಾದಿಗಳು ನಡಸುವ 'ಆತ್ಮದ ಬೇಟೆ'ಯ ಬಗೆಗೆ ಈ ಮುದುಕರು ದೂರಿಕೊಂಡರೂ, ತಮ್ಮೊಳಗೆ ಮಾತ್ರ ಸ್ವಯಂ ಇಚ್ಛೆಯಿಂದ ಸುವ್ಯಕ್ತ ಸಂತೋಷದಿಂದ ಒಬ್ಬರನ್ನೊಬ್ಬರು ಬೇಟೆಯಾಡುತ್ತಿದ್ದರು. ಇದನ್ನು ನಾನು ಗಮನಿಸಿದೆ.

ಕುಡಿದು ಮತ್ತೇರಿದಾಗ ಒಕ್ಕಣ್ಣ ಪಾಖೊಮಿ, ನಿಜವಾಗಿಯೂ ಆಶ್ಚರ್ಯಕರವೆನಿಸುವಂತಹ ತನ್ನ ಸ್ಮರಣಶಕ್ತಿಯ ಪ್ರದರ್ಶನವನ್ನು ಮಾಡಲು ಇಷ್ಟಪಡುತ್ತಿದ್ದ. ಹೆಬ್ರ್ಯೂ ಬರೆಹಗಾರರಿಗೆ ಟಾಲ್ಮಡ್ ಗೊತ್ತಿರುವಂತೆ, ಕೆಲಪವಿತ್ರ ಪುಸ್ತಕಗಳನ್ನು ಆತ 'ಬೊಟ್ಟು ಗುರುತಿ'ನಿಂದ ತಿಳಿದಿದ್ದ. ಹಿಂದುಮುಂದು ನೋಡದೆ ಪುಸ್ತಕದಲ್ಲಿನ ಯಾವುದೋ ಪದದ ಕಡೆಗೆ ಬೊಟ್ಟುಮಾಡಿ, ಅಲ್ಲಿಂದ ನೆನಪಿನಿಂದಲೇ ಮೃದುವಾದ ಮೂಗಿನ ಧ್ವನಿಯಲ್ಲಿ ಮುಂದುವರಿಯುತ್ತಿದ್ದ. ಅವನ ಬಿರುನೋಟ ಯಾವಾಗಲೂ ನೆಟ್ಟಿರುತ್ತಿದ್ದುದು ನೆಲದ ಮೇಲೆ. ಅವನ ಒಕ್ಕಣ್ಣು ಅಮೂಲ್ಯವಾದುದೇನನ್ನೋ ಹುಡುಕುವಂತೆ ಆತುರದಿಂದ ಅತ್ತಿತ್ತ ಅಲೆಯುತ್ತಿತ್ತು: ಹೆಚ್ಚಿನ ಸಾರೆ ಆತ ತನ್ನ ಪ್ರತಿಭೆಯ ಪ್ರದರ್ಶನಕ್ಕೆಂದು ಅರಸುಕುಮಾರ ಮಿಶೆಟ್ಸ್‌ಕಿಯ "ರಷ್ಯಾದ ದ್ರಾಕ್ಷೆಗಳು" ಎಂಬ ಪುಸ್ತಕವನ್ನು ಬಳಸುತ್ತಿದ್ದ. ಅತ್ಯುತ್ತಮವಾಗಿ ಆತನಿಗೆ ಗೊತ್ತಿದ್ದುದು, 'ಧೀರ ಹಾಗೂ ನಿರ್ಭಯ ಹುತಾತ್ಮರ ಅತ್ಯಂತ ತಾಳ್ಮೆಯ ಹಾಗೂ ಅತ್ಯಂತ ಧೈರ್ಯದ ಯಾತನೆ.' ಪಿಯೋತರ್ ವಾಸಿಲ್ಯೆವಿಶ್ ಅವನ ಪಠನದಲ್ಲಿ ತಪ್ಪು ಹುಡುಕಲು ಯಾವಾಗಲೂ ಯತ್ನಿಸುತ್ತಿದ್ದ.

"ತಪ್ಪು! ಅದು ಸಂಭವಿಸಿದ್ದು. ನಿಷ್ಕಳಂಕ ಡೆನಿಸನಿಗೆ ಪವಿತ್ರ ಕಿಪ್ರಿಯಾನಿಗಲ್ಲ."

"ಡೆನಿಸ್? ಯಾರಪ್ಪ ಆತ? ದಿಯೊನಿಸಿಯಸ್ ಅಂತ ಆ ಹೆಸರು."

"ಹೆಸರಿನ ಮೇಲೆ ಚಿಲ್ಲರೆವಾದ ಬೆಳೆಸ್ಬೇಡ."

"ನೀನು ನನಗೆ ಕಲಿಸಲೂ ಬೇಡ."

ಒಂದು ನಿಮಿಷದಲ್ಲಿ ಅವರು, ಸಿಟ್ಟಿನಿಂದ ಕೆಂಪಗಾಗಿ, ಒಬ್ಬರನ್ನೊಬ್ಬರು ಕೆಟ್ಟಕಣ್ಣಿನಿಂದ ದುರದುರನೆ ಕೆಳನೋಡುತ್ತ, ಹೇಳುತ್ತಿದ್ದರು:

"ಹೊಟ್ಟೆಬಾಕ, ನಿರ್ಲಜ್ಜ ಮುಸುಡಿನವನೆ, ನೋಡು ನಿನ್ನ ಆ ಡೊಳ್ಳು ಹೊಟ್ಟೇನ!"

ಲೆಕ್ಕಗಳನ್ನು ಕೂಡಿಸುವವನ ನಿರ್ಲಿಪ್ತತೆಯಿಂದ ಪಾಖೊಮಿ ಉತ್ತರವೀಯುತ್ತಿದ್ದ:

"ನೀನೊಂದು ಆಡು, ನೀತಿ ಬಾಹಿರ, ಲಂಗಗಳ ಹಿಂದೆ ಅಲೆಯುವವನು."

ಅಂಗಡಿಸಹಾಯಕ, ಅಂಗಿಯ ತೋಳುಗಳ ಮೇಲೆ ಕೈಕಟ್ಟಿ, ದುರ್ಭಾವನೆಯಿಂದ ಮುಗುಳುನಗುತ್ತ, ಪ್ರಾಚೀನ ನಿಷ್ಠೆಯ ಈ ರಕ್ಷಕರನ್ನು, ಅವರು ಶಾಲೆಯ ಹುಡುಗರೇನೋ ಎನ್ನುವಂತೆ, ಹುರಿದುಂಬಿಸುತ್ತಿದ್ದ:

"ಹೂಂ—ಕೊಡು ಹಾಗೆ! ಅದೀಗ ಸರಿ!"

ಒಂದು ದಿನ ಆ ಮುದುಕರ ನಡುವೆ ನಿಜವಾದ ಹೊಡೆದಾಟವೇ ಆಯಿತು. ಪಿಯೋತರ್ ವಾಸಿಲ್ಯೇವಿಶ್, ಪಾಖೊಮಿಯ ಮುಖಕ್ಕೆ ಅಂಗೈಯಿಂದ ಏಟುಕೊಟ್ಟ. ಪಾಖೊಮಿ ಓಡಿಹೋಗ ಬೇಕಾಯಿತು. ಆತ ಓಡುತ್ತಿದ್ದಂತೆ, ತನ್ನ ಹುಬ್ಬಿನ ಮೇಲಣ ಬೆವರನ್ನು ಬೇಸರದಿಂದ ಒರೆಸುತ್ತ, ಪಿಯೋತರ್ ಬೊಬ್ಬಿಟ್ಟ:

"ತಾಳು, ನೋಡು—ಈ ಪಾಪ ಅಂಟಿಕೊಳ್ಳೋದು ನಿನ್ನ ಆತ್ಮಕ್ಕೇ! ನನ್ನ ಕೈ ಪಾಪ ಮಾಡುವಂತೆ ಮಾಡ್ದೋನು ನೀನು. ನಿನ್ನ ಮನೆ ಹಾಳಾಗ!"

ತನ್ನ ಸಂಗಾತಿಗಳ ಮೇಲೆ, ಅವರಿಗೆ ಸಾಕಷ್ಟು ಶ್ರದ್ಧೆ ಇಲ್ಲವೆಂಬ—'ನಕಾರ ಪ್ರವೃತ್ತಿ'ಗೆ ಅವರು ಬಲಿಬಿದ್ದಿರುವರೆಂಬ—ಆರೋಪಣೆ ಹೊರಿಸುವುದರಲ್ಲಿ, ಆತ ವಿಶೇಷವಾಗಿ ಸಂತೋಷಿಸುತ್ತಿದ್ದ.

ನಿಮ್ಮನ್ನೆಲ್ಲಾ ಕೆಡರಿಸ್ತಿರೋನು ಆ ಕೂಗೋ ಕೋಳಿ ಅಲೆಕ್ಸಾಂಡರ್!

'ನಕಾರ ಪ್ರವೃತ್ತಿ'ಯಿಂದ ಅವನು ಪಿಡಿಮಿಡಿಗೊಳ್ಳುತ್ತಿದ್ದ. ಆತ ಅದರಿಂದ ಭೀತನಾಗುತ್ತಿದ್ದನೆಂಬುದೂ ಸ್ಪಷ್ಟವಾಗಿತ್ತು. ಆದರೆ, ಈ ಬೋಧನೆ ಹೇಳುತ್ತಿರುವುದೇನು? ಎಂದು ಕೇಳಿದಾಗ, ಅವನ ವಿವರಣೆ ಹೆಚ್ಚೇನೂ ಸ್ಪಷ್ಟವಾಗಿರಲಿಲ್ಲ."

"ನಕಾರಪ್ರವೃತ್ತಿಯ ದೈವದ್ರೋಹಗಳಲ್ಲೆಲ್ಲಾ ಅತ್ಯಂತ ಕಹಿಯಾದದ್ದು. ಅಲ್ಲಿ ದೇವರಿಗೆ ಸ್ಥಾನವಿಲ್ಲ. ಇರೋದು ಮನಸ್ಸೊಂದೇ. ಉದಾಹರಣೆಗೆ ಕೊಸ್ಸಾಕರನ್ನು ತಗೋ. ಅವರು ಒಪ್ಪಿಕೊಳ್ಳೋದು ಬೈಬಲನ್ನು ಮಾತ್ರ. ಬೈಬಲ್ಲು ಬಂದಿರೋದು ಸಾರಟೋವ್‌ನಲ್ಲಿರೋ ಜರ್ಮನರಿಂದ-ಅವರ ಲೂಥರನಿಂದ. ಅವನ ವಿಷಯ ಏನು ಹೇಳ್ತಾರೆ ಗೊತ್ತೆ? 'ಅವನಿಗೆ, ಲೂಥರ್ ಅನ್ನೋ ಹೆಸರು ಸರಿಯಾಗೇ ಇಟ್ಟಿದಾರೆ. ಲೂಥರ್ ಬಂದಿರೋದು ಲ್ಯೂಸಿಫರ್ ಪದದಿಂದ' ಲಟ್ಯರ್ ಅಂದರೆ ವ್ಯಭಿಚಾರಿ ಅಂತ. ಜರ್ಮನ್ ಕುಲವೇ ತಲೆತಿರುಕರ ಕುಲ....ಇದೆಲ್ಲಾ ಬಂದಿರೋದು ಪಶ್ಚಿಮದಿಂದ, ಅಲ್ಲಿರೋ ದೈವದ್ರೋಹಿಗಳಿಂದ."

ತನ್ನ ಕುಂಟಕಾಲಿನಿಂದ ನೆಲವನ್ನು ತುಳಿಯುತ್ತ, ಶೀತಲವಾದ ಗಭೀರತೆಯಿಂದ ಆತನೆನ್ನುತ್ತಿದ್ದ:

"ಬಿಲಗಳಿಂದ ಹೊರಡಿಸಿ ಬೇಟೆಯಾಡಬೇಕಾದ್ದು ಅವರನ್ನು. ಚಿತ್ರಹಿಂಸೆಕೊಡಬೇಕಾದ್ದು, ಸುಡಬೇಕಾದ್ದು ಅವರನ್ನು; ನಮ್ಮನ್ನಲ್ಲ! ಅತ್ಯಂತ ಪ್ರಾಚೀನ ಕಾಲದಿಂದ ಬಂದಿರೋ ರಷ್ಯನರು ನಾವು. ನಮ್ಮದು ಪೌರಸ್ತ್ಯನಿಷ್ಠೆ, ಅಪ್ಪಟ ರಷ್ಯನ್. ಬೇರೆಯದೆಲ್ಲಾ ಪಶ್ಚಿಮದ್ದು—ಮುರುಟಿಕೊಂಡಿರೋ ಸ್ವತಂತ್ರ ಚಿಂತನೆ. ಜರ್ಮನರಿಂದ, ಫ್ರೆಂಚರಿಂದ, ಅವರಿಂದೇನು ಒಳಿತಾದೀತು? ೧೮೧೨ ರಲ್ಲಿ ಆದದ್ದನ್ನು ನೋಡು—"

ತನ್ನ ಉತ್ಸಾಹದಲ್ಲಿ ಆತ, ಮಾತನಾಡುತ್ತಿರುವುದು ಬರೀ ಹುಡುಗನೊಬ್ಬನೊಡನೆ ಎಂಬುದನ್ನು ಮರೆತುಬಿಡುತ್ತಿದ್ದ. ನನ್ನ ಸೊಂಟದ ಪಟ್ಟಿಯನ್ನು ತನ್ನ ಬಲವಾದ ಕೈಯಿಂದ ಹಿಡಿದು,

ಒಮ್ಮೆ ತನ್ನೆಡೆಗೆ ಎಳೆಯುತ್ತ, ಮತ್ತೊಮ್ಮೆ ನನ್ನನ್ನು ದೂರತಳ್ಳುತ್ತ, ಯುವಕನಂತೆ ಆವೇಗದಿಂದ ಸೊಗಸಾಗಿ ನುಡಿಯುತ್ತ ಹೋಗುತ್ತಿದ್ದ:

"ಮನುಷ್ಯನ ವಿದ್ವತ್ತು, ತಾನೇ ಕಲ್ಪಿಸಿಕೊಂಡ ಕಾಡಿನಲ್ಲಿ ಕುರುಡಾಗಿ ಅಲೀತಿರ್‍ತದೆ. ದೇವರ ಅತ್ಯಂತ ದೊಡ್ಡ ಉಡುಗೊರೆಯಾದ ಮಾನವ ಆತ್ಮವನ್ನೇ ಧಿಕ್ಕರಿಸುವಂತೆ ಪಿಶಾಚಿಯಿಂದ ಸ್ಫೂರ್ತಿಗೊಂಡು, ಕ್ರೂರ ತೋಳನ ಹಾಗೆ ಅಲೀತಿರ್‍ತದೆ. ಪಿಶಾಚಿಯ ಈ ಸೇವಕರು ಯೋಚಿಸಿರೋದೇನು? ನಕಾರ ಪ್ರವೃತ್ತಿಯ ಧರ್ಮಗುರುಗಳ ಬೋಧನೆಗಳು ಇಲ್ಲಿವೆ: ಸೈತಾನನೂ ದೇವರ ಮಗ, ಕ್ರಿಸ್ತ ಏಸುವಿನ ಅಣ್ಣ—ಏನಂತೀಯಾ! ಅಧಿಕಾರವನ್ನು ಉಲ್ಲಂಘಿಸೋದಕ್ಕೆ, ತಮ್ಮ ಕೆಲಸ ನಿಲ್ಲಿಸೋದಕ್ಕೆ, ಹೆಂಡಿರುಮಕ್ಕಳನ್ನು ಬಿಟ್ಟು ಬಿಡೋದಕ್ಕೆ ಅವರು ಜನರಿಗೆ ಬೋಧಿಸ್ತಾರೆ. ಮನುಷ್ಯ ಮಾಡಬೇಕಾದ್ದೇನೂ ಇಲ್ಲ—ಯಾವ ಆಜ್ಞೆಯೂ ಇಲ್ಲ—; ತನಗೆ ಇಷ್ಟ ಬಂದ ಹಾಗೆ, ಅಥವಾ ಪಿಶಾಚಿ ಆಜ್ಞಾಪಿಸಿದ ಹಾಗೆ, ಆತ ಬದುಕಲಿ. ಓ, ಇದೇ ಆ ಅಲೆಕ್ಸಾಂಡರ್, ಆ ಕ್ಷುದ್ರ, ಹುಳ, ಹೇಳೋದು...."

ಕೆಲವೇಳೆ ಅಂಗಡಿಸಹಾಯಕ, ಯಾವುದೋ ಕೆಲಸ ಮಾಡಲೆಂದು ನನ್ನನ್ನು ಒಳಕ್ಕೆ ಕರೆಯುತ್ತಿದ್ದ. ಮುಖಮಂಟಪದಲ್ಲಿ ಒಬ್ಬನೇ ಉಳಿದ ಮೇಲೂ ಆ ಮುದುಕ, ತನ್ನೆದುರಿನ ಶೂನ್ಯವನ್ನು ಉದ್ದೇಶಿಸಿ ಮಾತು ಮುಂದುವರಿಸುತ್ತಿದ್ದ:

"ಓ, ರೆಕ್ಕೆಗಳಿಲ್ಲದ ಆತ್ಮಗಳೇ, ಓ, ಕುರುಡು ನಾಯಿಮರಿಗಳೇ, ಆಶ್ರಯಕ್ಕಾಗಿ ಯಾರಲ್ಲಿಗೆ ನಾನು ಓಡಿ ಹೋಗಲಿ?"

ಬಳಿಕ ತನ್ನ ತಲೆಯನ್ನು ಹಿಂದಕ್ಕೆ ಚಾಚಿ, ಮೊಣಕಾಲುಗಳ ಮೇಲೆ ತನ್ನ ಅಂಗೈಗಳನ್ನಿರಿಸಿ, ಬೂದು ಬಣ್ಣದ ಚಳಿಗಾಲದ ಆಗಸದೆಡೆಗೆ ತದೇಕ ಚಿತ್ತನಾಗಿ ದಿಟ್ಟಿಸುತ್ತ ಅವನು ಕುಳಿತು ಬಿಡುತ್ತಿದ್ದ.

ಕ್ರಮಕ್ರಮೇಣ ನನ್ನ ಬಗೆಗೆ ಆತ ಹೆಚ್ಚು ದಯಾಪೂರ್ಣನಾದ; ನನ್ನ ಕಡೆಗೆ ಹೆಚ್ಚು ಗಮನ ಹರಿಸಿದ. ನಾನು ಪುಸ್ತಕ ಓದುತ್ತಿರುವುದನ್ನು ಕಂಡಾಗಲೆಲ್ಲ, ನನ್ನ ಭುಜವನ್ನು ತಟ್ಟಿ ಅವನೆನ್ನುತ್ತಿದ್ದ:

"ಓದು, ಓದುತ್ತಲೇ ಇರು, ನನ್ನ ಮಗೂ. ಅದರಿಂದ ಪ್ರಯೋಜನವಾಗಿಯೇ ಆಗ್ತದೆ ಭುಜಗಳ ಮೇಲೆ ಒಳ್ಳೆಯ ತಲೆ ನಿನಗಿದ್ದ ಹಾಗಿದೆ. ಆದರೆ, ನಿನಗಿಂತ ಹಿರಿಯರಾದವರ ಮಾತಿಗೆ ನೀನು ಕಿವಿಕೊಡದೇ ಇರೋದು, ಎಲ್ಲರ ವಿರುದ್ಧವೂ ಈ ರೀತಿ ಸೆಟೆದು ನಿಲ್ಲೋದು, ಬಹಳ ಕೆಟ್ಟದು. ಇಂಥ ತುಂಟತನದಿಂದ ನೀನು ಎಷ್ಟು ದೂರ ಸಾಗಬಹುದು ಅಂದ್ಕೊಂಡಿದೀಯಾ? ಅಪರಾಧಿಗಳ ತಂಡವನ್ನು ದಾಟಿ ಮುಂದೆ ಹೋಗಲಾರೆ, ಮಗೂ. ಹೂಂ, ಓದು; ನಿನ್ನ ಪುಸ್ತಕಗಳನ್ನು ಓದುತ್ತಲೇ ಇರು; ಆದರೆ ಮರೀಬೇಡ: ಪುಸ್ತಕ ಎಷ್ಟಿದ್ದರೂ ಪುಸ್ತಕವೇ; ನಿನ್ನ ಮಿದುಳನ್ನು ನೀನೇ ಕೆದರಬೇಕು. ಒಮ್ಮೆ ಖ್ಲಿಸ್ತಿ ಜನರ ಮಧ್ಯೆ ದಾನೀಲ ಅಂತ ಒಬ್ಬ ಬೋಧಕ ಇದ್ದ. ಹೊಸದಿರಲಿ ಹಳೆಯದಿರಲಿ ಯಾವ ಪುಸ್ತಕದಿಂದಲೂ ಏನು ಪ್ರಯೋಜನವೂ ಇಲ್ಲವೆಂದೂ ಅವನು ಹೇಳ್ತಿದ್ದ; ಹೀಗೆ ಆತ ಎಲ್ಲ ಪುಸ್ತಕಗಳನ್ನೂ ತಗೊಂಡು ಹೋಗಿ ನದಿಯಲ್ಲಿ ಮುಳುಗಿಸಿದ. ಇದೂ ಅರ್ಥವಿಲ್ಲದ್ದೇ. ಆ ಮೇಲೆ, ಆ ದುಷ್ಟಮನಸ್ಸಿನ ಅಲೆಕ್ಸಾಂಡರ್ ಇದಾನೆ, ಜನರ ತಲೆಕೆಡಿಸ್ತಾ ಹೋಗ್ತಿರ್‍ತಾನೆ...."

ಅಲೆಕ್ಸಾಂಡರನ ಹೆಸರನ್ನು ಹೆಚ್ಚು ಹೆಚ್ಚುಸಾರೆ ಆತ ಪ್ರಸ್ತಾಪಿಸತೊಡಗಿದ್ದ. ಒಂದು ದಿನ ಚಿಂತಾಕ್ರಾಂತ ಮುಖ ಮುದ್ರೆಯಿಂದ ಅಂಗಡಿಯನ್ನು ಹೊಕ್ಕು, ಅಂಗಡಿಸಹಾಯಕನೊಡನೆ ತೀಕ್ಷ್ಣಧ್ವನಿಯಲ್ಲಿ ಅವನೆಂದ:

ಅಲೆಕ್ಸಾಂಡರ್ ಈ ಶಹರಕ್ಕೆ ಬಂದಿದಾನೆ—ನಿನ್ನೆ ಬಂದ. ನಾನು ಎಲ್ಲಾ ಕಡೆಗಳಲ್ಲೂ ಹುಡುಕ್ತಿದೀನಿ—ಇನ್ನೂ ಅವನು ಸಿಕ್ಕಿಲ್ಲ. ಎಲ್ಲೋ ಅಡಗಿಕೊಂಡಿರಬೇಕು! ನಾನಿಲ್ಲಿ ಸ್ವಲ್ಪ ಹೊತ್ತು ಕೂತಿರ್ತೀನಿ. ಪ್ರಾಯಶಃ ಅವನು ಇಲ್ಲಿಗೆ ಬಂದರೂ ಬರಬಹುದು."

ಅಂಗಡಿಸಹಾಯಕ ವಿರೋಧಭಾವದಿಂದ ಅಂದ:

"ನಾನು ಯಾರನ್ನೂ ಅರಿಯೆ—ನನಗೆ ಏನೂ ತಿಳೀದು!"

ಮುದುಕ ತಲೆಯಾಡಿಸಿ ಅಂದ:

"ಅದು ಸರಿ. ನೀನು ಪರಿಗಣಿಸುವ ಜನರು—ಕೊಳ್ಳುವವರು ಮತ್ತು ಮಾರುವವರು ಮಾತ್ರ, ಬೇರೆ ಯಾರೂ ನಿನ್ನ ದೃಷ್ಟೀಲಿ ಈ ಜಗತ್ತಿನಲ್ಲಿಲ್ಲ....ನೀನು ನನಗೊಂದು ಗ್ಲಾಸ್ ಚಹಾ ಕೊಟ್ಟರಾಗಬಹುದು."

ಬಿಸಿನೀರು ತುಂಬಿದ್ದ ದೊಡ್ಡದಾದ ಹಿತ್ತಾಳೆಯ ಚಹಾದಾನಿಯೊಡನೆ ನಾನು ಹಿಂತಿರುಗಿದಾಗ, ಅಂಗಡಿಯಲ್ಲಿ ಬೇರೆಯೂ ಕೆಲ ಅತಿಥಿಗಳನ್ನು ಕಂಡೆ. ಅವರಲ್ಲೊಬ್ಬ ಮುದುಕ ಲುಕಿಯನ್. ಆನಂದದಿಂದ ಆತ ಹಲ್ಲು ಕಿಸಿಯುತ್ತಿದ್ದ. ಇವನಲ್ಲದೆ, ಬಾಗಿಲ ಹಿಂಬದಿಯ ಕತ್ತಲ ಮೂಲೆಯಲ್ಲಿ ಅಪರಿಚಿತನೊಬ್ಬ ಕುಳಿತಿದ್ದ: ಎತ್ತರದ ಅರಿವೆಯ ಬೂಟುಗಳನ್ನೂ ಹಸುರು ಸೊಂಟದ ಪಟ್ಟಿಯಿದ್ದ ಬೆಚ್ಚಗಿನ ಕೋಟನ್ನೂ ಅವನು ತೊಟ್ಟಿದ್ದ. ಟೋಪಿಯನ್ನು ಕಣ್ಣುಗಳ ಮೇಲಕ್ಕೂ ಬರುವಂತೆ ಎಳೆದಿದ್ದ. ಆತ ಶಾಂತವಾದ ವಿನಯಶೀಲ ಜೀವವಾಗಿ ಕಂಡರೂ ಆ ಮುಖ ಆಕರ್ಷಕವಾಗಿ ನನಗೆ ತೋರಲಿಲ್ಲ. ಇದೇ ಈಗ ಕೆಲಸದಿಂದ ವಜಾಮಾಡಲ್ಪಟ್ಟು ಅದರಿಂದಾಗಿ ಅಪಾರಚಿಂತೆಗೆ ಈಡಾಗಿದ್ದ ಅಂಗಡಿಸಹಾಯಕನನ್ನು, ಅವನು ಹೋಲುತ್ತಿದ್ದ.

ಅವನ ಕಡೆಗೆ ದೃಷ್ಟಿಹರಿಸದೆಯೇ ಪಿಯೋತರ್ ವಾಸಿಲ್ಯೇವಿಶ್ ಅಧಿಕಾರವಾಣಿಯಿಂದ ಅದೇನನ್ನೋ ಹೇಳುತ್ತಿದ್ದ. ಅವನು ಹಾಗೆ ಹೇಳುತ್ತಲಿದ್ದಂತೇ ಅಪರಿಚಿತ, ಕಿವುಚಿಕೊಂಡು ಚಲಿಸುತ್ತಿದ್ದ ಹಾಗೆ ಕಂಡ ತನ್ನ ಬಲಗೈಯಿಂದ ಟೋಪಿಯನ್ನು ಸರಿಸುತ್ತಲೇ ಇದ್ದ. ಅವನ ತೋಳು, ಅದೇ ಆಗ ಶಿಲುಬೆಯ ವಂದನೆ ಮಾಡುವುದಕ್ಕೇನೋ ಎನ್ನುವಂತೆ, ಮೇಲಕ್ಕೆ ಹೋಗುತ್ತಿತ್ತು; ಟೋಪಿಯನ್ನದು ತುಸುತಳ್ಳುತ್ತಿತ್ತು. ಮತ್ತೊಮ್ಮೆ, ಅನಂತರವೊಮ್ಮೆ, ಅವನ ತಲೆಯ ಹಿಂಭಾಗದಲ್ಲಿ ಅದು ಅಪಾಯಕರ ರೀತಿಯಲ್ಲಿ ತೂಗಾಡುವವರೆಗೂ ಟೋಪಿಯನ್ನು ಅವನು ತಳ್ಳುತ್ತಿದ್ದ. ಪುನಃ ಅದನ್ನು ಕಣ್ಣುಗಳ ಮೇಲಿನವರೆಗೂ ಎಳೆಯುತ್ತಿದ್ದ. ಈ ಕಿವುಚಾಟದ ಚಲನೆಗಳು, 'ಜೇಬಿನಲ್ಲಿ ಸಾವು' ಖ್ಯಾತಿಯ ಬೆಪ್ಪುತಕ್ಕಡಿ ಇಗೋಶಾನನ್ನು ನನ್ನ ನೆನಪಿಗೆ ತಂದುವು.

"ನಮ್ಮ ಕಲಕಿದ ನೀರಿನಲ್ಲಿ ಈಸಾಡುತ್ತಾ ಹೋಗಿ, ಅದನ್ನು ಮತ್ತಷ್ಟು ಕಲಕೋ ಮೀನುಗಳು ಅನೇಕ," ಎಂದು ಪಿಯೋತರ್ ವ್ಯಾಸಿಲ್ಯೇವಿಶ್ ನುಡಿದ.

ಅಂಗಡಿಸಹಾಯಕನಂತೆ ಕಾಣಿಸಿದ ಮನುಷ್ಯ, ಮೆಲುದನಿಯಲ್ಲಿ ಮೃದುವಾಗಿ ಕೇಳಿದ:

"ನನ್ನ ವಿಷಯವೇ ನೀನು ಹೇಳ್ತಿರೋದು ?"

"ಇರಬಹುದು, ಏನೀಗ ?"

ಬಳಿಕ ಆ ಮನುಷ್ಯ, ಮೆಲುದನಿಯಲ್ಲಿ—ಆದರೆ ಸತ್ವಪೂರ್ಣವಾಗಿ, ಮತ್ತೊಮ್ಮೆ ಕೇಳಿದ:

"ಸ್ವತಃ ನಿನ್ನ ವಿಷಯದಲ್ಲೇ ನೀನು ಏನು ಹೇಳ್ತೀ ಮಹಾರಾಯ ?"

"ನನ್ನ ವಿಷಯ ನಾನು ಮಾತನಾಡೋದು ದೇವರ ಜತೆ ಮಾತ್ರ; ಅದು ನನಗೆ ಸಂಬಂಧಿಸಿದ್ದು."

ಅಪರಿಚಿತ, ಶಕ್ತಿಪೂರ್ಣವಾಗಿ ಗೆಲುವಿನ ದನಿಯಲ್ಲಿ ನುಡಿದ:

ಇಲ್ಲ ಮಹಾರಾಯ, ಅದು ನನಗೂ ಸಂಬಂಧಿಸಿದೆ. ನಿನ್ನ ಮುಖವನ್ನು ಸತ್ಯದಿಂದ ದೂರ ಸರಿಸಬೇಡ; ಸ್ವಯಂಪೂರ್ಣತೆಯಿಂದ ನಿನ್ನ ಕಣ್ಣುಗಳನ್ನು ಕುರುಡುಗೊಳಿಸಲೂ ಬೇಡ; ಯಾಕೆಂದರೆ, ದೇವರೆದುರಲ್ಲೂ ಮನುಷ್ಯನೆದುರಲ್ಲೂ ಪಾಪ ಬಹಳ ಮಹತ್ವದ್ದು."

ಪಿಯೋತರನನ್ನು ಸಲಿಗೆಯಿಂದ 'ಮಹಾರಾಯ'ನೆಂದು ಆತ ಕರೆದುದು ನನಗೆ ಇಷ್ಟವಾಯಿತು. ಅವನ ಶಾಂತವಾದ ಉಚ್ಚಕಂಠದಿಂದ ನನ್ನ ಮನಸ್ಸು ಕರಗಿತು. ಒಳ್ಳೆಯ ಧರ್ಮಗುರುವೊಬ್ಬನು 'ಪ್ರಭುದೇವರೇ, ಈ ನಶ್ವರದೇಹದ ಸೃಷ್ಟಿಕರ್ತನೇ'.....ಎಂದು ಓದುವ ಹಾಗೆ, ಆತ ಮಾತನಾಡಿದ. ತನ್ನ ಮುಖದೆದುರು ಕೈಯನ್ನು ಬೀಸುತ್ತ, ತನ್ನ ಕುರ್ಚಿಯ ಮೇಲೆ ಮುಂದಕ್ಕೆ ಸರಿಯುತ್ತಲೇ ಇದ್ದ.

"ನನ್ನ ಮೇಲೆ ಯಾಕೆ ತೀರ್ಪು ಕೊಡ್ತಿದೀಯಾ? ನಾನು ನಿನಗಿಂತ ಹೆಚ್ಚಿನ ಪಾಪಿಯೇನೂ ಅಲ್ಲ."

"ಹೇಗೆ ಕುತುಕುತು ಉಗೀತಿದೆ ಚಹಾದಾನಿ!" ಎಂದು ಲುಕಿಯನ್ ಕಟುವಾಗಿ ನುಡಿದ. ಆದರೆ ಅಪರಿಚಿತ, ಅದನ್ನು ಗಮನಿಸದೆಯೇ ಮುಂದುವರಿದ:

"ಪವಿತ್ರ ಚೇತನದ ಉಗಮಸ್ಥಾನಗಳನ್ನು ಯಾರು ಹೆಚ್ಚು ಕಲಕ್ತಾರೆ ಅನ್ನೋದನ್ನು ದೇವರು ಮಾತ್ರ ತಿಳಿಯಬಲ್ಲ. ಪ್ರಾಯಶಃ ಅದೇ ನಿನ್ನ ಪಾಪ,—ಪುಸ್ತಕ ಕೀಟಗಳಾಗಿರೋ ಕಲ್ಲಿದ ಜನರ ಪಾಪ. ನಾನು ಪುಸ್ತಕಗಳನ್ನೂ ತಿಳಿಯೆ, ಪಾಂಡಿತ್ಯವೂ ನನಗಿಲ್ಲ. ನಾನೊಬ್ಬ ಜೀವಂತನಾದ ಸರಳ ಮನುಷ್ಯ."

"ಆ ನಿನ್ನ ಸರಳತೆ ನನಗೆ ಗೊತ್ತಿದೆ. ಅದರ ವಿಷಯ ಬಹಳ ಕೇಳಿದೇನೆ!"

"ಜನರ ತಲೆಕೆಡಿಸುವವರು ನೀವು—ಪುಸ್ತಕಗಳ ವಾಚಕರು, ಪ್ರಾಚೀನ ಯೆಹೂದಿಗಳು, ಸರಳ ವಿಚಾರಗಳನ್ನು ವಿರೂಪಗೊಳಿಸುವವರು. ನನ್ನ ಮಟ್ಟಿಗೆ ಹೇಳೋದಾದರೆ—ನಾನು ಏನು ಬೋಧಿಸ್ತೀನೀಂತ ತಿಳಿಸಬಲ್ಲೆಯಾ ?"

"ನೀನು ಬೋಧಿಸ್ತಿರೋದು ದೈವದ್ರೋಹವನ್ನು!" ಎಂದ ಪಿಯೋತರ್. ಆದರೆ ಅಪರಿಚಿತ ಸುಮ್ಮನೆ ತನ್ನ ಅಂಗೈಯನ್ನು—ಅದರ ಮೇಲೆ ಬರೆದುದನ್ನೇನೋ ಓದುವವನಂತೆ--ಮುಖದೆದುರು ಹಿಡಿದು, ಭಾವಾವೇಶದಿಂದ ಮುಂದುವರಿದ:

"ಜನರನ್ನು ಒಂದು ಕೊಂಪೆಯಿಂದ ಇನ್ನೊಂದು ಕೊಂಪೆಗೆ ಬದಲಾಯಿಸಿ ಅವರ ಸ್ಥಿತಿ ಸುಧಾರಿಸ್ತಿದೀವಿ ಅಂತ ತಿಳಕೊಂಡಿದೀಯೇನು? ಅದು ಹಾಗಿಲ್ಲ—ಅಂತ ನಿನಗೆ ನಾನು ಹೇಳ್ತೀನಿ! ಓ, ಮಾನವ, ನಿನ್ನನ್ನು ನೀನು ಬಿಡುಗಡೆ ಮಾಡಿಕೋ—ಅಂತ ನಿನಗೆ ನಾನು ಹೇಳ್ತೀನಿ! ದೇವರ ಮುಖದೆದುರಲ್ಲಿ, ಮನೆ, ಹೆಂಡತಿ ಮತ್ತಿತರ ಸೊತ್ತುಗಳಿಗೆ ಏನು ಬೆಲೆ?

ಹಿಂಸೆ ಕೊಲೆಗಳ ಕಡೆಗೆ ನಿನ್ನನ್ನು ಒಯ್ಯೋದರಿಂದೆಲ್ಲ, ಬಂಗಾರ ಬೆಳ್ಳಿ ಮತ್ತಿತರ ಸಿರಿವಂತಿಕೆಯಿಂದೆಲ್ಲ, ಓ ಮಾನವನೇ, ನಿನ್ನನ್ನು ನೀನು ಬಿಡುಗಡೆ ಮಾಡಿಕೋ. ಇವೆಲ್ಲಾ ಬರೇಧೂಳು ಹಾಗೂ ಕೊಳೆತದ್ದು! ಈ ಭೂಮಿಯ ಹೊಲಗಳ ಮೇಲೆ ಮನುಷ್ಯನಿಗೆ ಮುಕ್ತಿಸಿಗೋದಿಲ್ಲ; ಅದು ಸಿಗೋದು ಸ್ವರ್ಗದ ಕಣಿವೆಗಳಲ್ಲಿ! ನಾನು ಹೇಳ್ತೇನೆ, ಎಲ್ಲವನ್ನೂ ಪರಿತ್ಯಜಿಸು; ಎಲ್ಲ ಸಂಬಂಧಗಳನ್ನೂ ಬಂಧನಗಳನ್ನೂ ಈ ಜಗತ್ತಿಗೆ ನಿನ್ನನ್ನು ಬಿಗಿದಿರುವುದೆಲ್ಲವನ್ನೂ ಕಡಿದು ಹಾಕು. ಯಾಕೆಂದರೆ, ಈ ಬಂಧನಗಳನ್ನೆಲ್ಲ ಕಲ್ಪಿಸಿರುವವರು ಕ್ರಿಸ್ತವಿರೋಧಿಗಳು. ನೇರವಾದ ಅಗಲ ಕಿರಿದಾದ ಹಾದಿಯಲ್ಲಿ, ಅಚಲ ಚೇತನದಿಂದ, ಈ ಕರಿದು ಜಗತ್ತನ್ನೇ ಅಲ್ಲಗಳೆಯುತ್ತ, ನಾನು ನಡೀತಿದೇನೆ...."

"ಬ್ರೆಡ್ಡು, ನೀರು ನಿನ್ನ ದೇಹವನ್ನು ಮುಚ್ಚೋದಕ್ಕೊಂದು ಅರಿವೆ—ಇವನ್ನೂ ಅಲ್ಲಗಳೀತಿಯೇನು? ಅವು ಕೂಡಾ ಈ ಜಗತ್ತಿನವೇ," ಎಂದು ಮುದುಕ, ತ್ವೇಷದಿಂದ ನಡುವೆ ನುಡಿದ.

ಈ ಮಾತುಗಳು ಅಲೆಕ್ಸಾಂಡರನ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಲಿಲ್ಲ. ಆತ ಮತ್ತಷ್ಟು ಸತ್ವಪೂರ್ಣವಾಗಿ ಮಾತನಾಡುತ್ತ ಹೋದ. ಧ್ವನಿ ತಗ್ಗಿಯೇ ಇದ್ದರೂ ಕೂಡಾ, ಕಂಚಿನ ತುತೂರಿಯನ್ನು ಅವನು ಊದುತ್ತಿದ್ದಂತೆ ಅನಿಸುತ್ತಿತ್ತು.

"ಓ ಮಾನವನೇ, ನಿನ್ನ ಸಿರಿವಂತಿಕೆಯೆಲ್ಲ ಎಲ್ಲಡಗಿವೆ? ಸಿರಿವಂತಿಕೆ ಕಾಣಸಿಗೋದು ದೇವರಲ್ಲಿ ಮಾತ್ರ. ಯಾವ ಕಳಂಕವೂ ಇಲ್ಲದೆ ಅವನೆದುರು ನಿಲ್ಲು. ಈ ಜಗತ್ತಿನ ಸಂಕೋಲೆಗಳನ್ನು ನಿನ್ನ ಆತ್ಮದಿಂದ ಹರಿದೊಗೆದು, ನಿನ್ನ ದೇವರನ್ನು ನೋಡು. ನೀನೊಬ್ಬನೇ, ಅವನೊಬ್ಬನೇ-ಈ ರೀತಿ ನಿನ್ನ ದೇವರನ್ನು ನೀನು ಸಮೀಪಿಸಬೇಕು. ಯಾಕೆಂದರೆ, ಅವನೆಡೆಗೆ ಸಾಗುವ ಹಾದಿ ಒಂದೇ ಒಂದು. 'ತಂದೆ ತಾಯರನ್ನು ತ್ಯಜಿಸಿ, ಎಲ್ಲವನ್ನೂ ತ್ಯಜಿಸಿ, ಮರುಳುಹೋಗಲು ಕಾರಣವಾದ ಕಣ್ಣನ್ನು ಕಿತ್ತು ತೆಗೆದು, ಮುಕ್ತಿಯನ್ನು ಪಡೆ'—ಅಂತ ಹೇಳಲಾಗಿದೆ. ಪ್ರಭುವಿಗೋಸ್ಕರ, ಭೌತಿಕವಾಗಿ ನಿನ್ನನ್ನು ನೀನು ನಾಶಮಾಡು, ನಿನ್ನ ಚೇತನವನ್ನು ರಕ್ಷಿಸಿಕೋ. ಈ ರೀತಿ ನಿನ್ನ ಆತ್ಮ ದಿವ್ಯಪ್ರೇಮದಿಂದ ಸದಾ ಕಾಲವೂ ಬೆಳಗಲಿ...."

ಪಿಯೋತರ್ ವಾಸಿಲ್ಯೇವಿಶ್ ಏಳುತ್ತ ಅಂದ:

"ಥೂ, ನಿನ್ನ ಮನೆ ಹಾಳಾಗ! ಈ ಒಂದು ವರ್ಷದಲ್ಲಿ ನಿನಗೆ ಸ್ವಲ್ಪ ಬುದ್ಧಿ ಬಂದಿರಬಹುದೂಂತಿದ್ದೆ. ಆದರೆ ನೀನು, ಮೊದಲಿಗಿಂತಲೂ ಹೆಚ್ಚು ಕೆಟ್ಟು ಹೋದಂತಿದೀಯಾ."

ಮುದುಕ ಕುಪ್ಪಳಿಸುತ್ತ ಅಂಗಡಿಯಿಂದ ಹೊರಬಿದ್ದು, ಮುಖಮಂಟಪಕ್ಕೆ ಹೋದ. ಇದರಿಂದ ಅಲೆಕ್ಸಾಂಡರನಿಗೆ ಗಾಬರಿಯಾಯಿತು. ಆತ ಅವಸರವಾಗಿ, ತುಸು ಅಚ್ಚರಿಯಿಂದಲೇ, ಕೇಳಿದ:

"ನೀನು ಹೊರಡ್ತಿದೀಯೇನು? ಆದರೆ—ಯಾತಕ್ಕಿದು?"

ಸೌಮ್ಯಸ್ವಭಾವದ ಲುಕಿಯನ್ ಸಂತಯಿಸುವವನಂತೆ ಕಣ್ಣು ಮಿಟುಕಿಸಿ ಅಂದ:

"ಇರಲಿಬಿಡು, ಇರಲಿಬಿಡು."

ಆದರೆ ಅಲೆಕ್ಸಾಂಡರ್ ಅವನ ಮೇಲೆಯೇ ಆಕ್ರೋಶಮಾಡಿದ:

"ನೀನು ಕೂಡಾ—ಈ ಜಗತ್ತಿನ ಬುಡುಬುಡಿಕೆಯವನು, ನಿಷ್ಪ್ರಯೋಜಕ ಬೀಜಗಳನ್ನು

ುತ್ತವವನು. ಏನು ಇದರ ಅರ್ಥ? ಎರಡು ಸಾರಿ ಹಾಡೋ ಗುಣಗಾನ, ಮೂರುಸಾರಿ....."

ಅವನಕಡೆ ನೋಡಿ ಮುಗುಳುನಕ್ಕು, ಲುಕಿಯನನೂ ಹೊರಕ್ಕೆ ಮುಖಮಂಟಪಕ್ಕೆ ಹೋದ. ಅಪರಿಚಿತ ಅಂಗಡಿಸಹಾಯಕನ ಕಡೆಗೆ ತಿರುಗಿ, ದೃಢವಿಶ್ವಾಸದಿಂದ ನುಡಿದ:

"ನನ್ನ ಚೇತನದ ಶಕ್ತಿ ಅವರ ಪಾಲಿಗೆ ಅತಿಯಾಯ್ತು—ಅತಿಯಾಯ್ತು! ಬೆಂಕಿಯಿಂದ ೊಗೆ ಓಡಿಹೋಗೋ ಹಾಗೆ ಅವರು ಓಡ್ತಿದಾರೆ!"

ಅಂಗಡಿಸಹಾಯಕ ಹುಬ್ಬುಗಳಡಿಯಿಂದ ಮೇಲಕ್ಕೆ ನೋಡುತ್ತ, ನೀರಸ ಧ್ವನಿಯಲ್ಲಿ ಅಂದ:

"ನನಗೆ ಇಂಥದರಲ್ಲೆಲ್ಲಾ ಆಸಕ್ತಿಯಿಲ್ಲ."

ಈ ಮಾತಿನಿಂದ ಅಪರಿಚಿತನಿಗೆ ಆಶ್ಚರ್ಯವೆನಿಸಿತು. ತನ್ನ ಟೋಪಿಯನ್ನು ಕೆಳಕ್ಕೆ ಸರಿಸಿ ವನು ಗೊಣಗಿದ:

"ಆಸಕ್ತಿ ಇಲ್ಲದೆ ಇರೋದು ಹೇಗೆ ಸಾಧ್ಯ? ಇಂಥ ಸಂಗತಿಗಳು, ಆಸಕ್ತಿ ವಹಿಸೀಂತ ಾಡಿ ಕೇಳ್ತವೆ."

ಸುಮಾರು ಒಂದು ನಿಮಿಷದಷ್ಟು ಕಾಲವೋ ಏನೋ, ಅವನತಶಿರನಾಗಿ ಮೌನವಾಗಿ ಆತ ಲ್ಲಿಯೇ ಕುಳಿತ. ಬಳಿಕ ಆ ಮುದುಕರು ಅವನನ್ನು ಕರೆದರು. ಆ ಮೂವರೂ ವಿದಾಯದ ಂದನೆಯನ್ನು ಹೇಳದೆಯೇ ಹೊರಟು ಹೋದರು.

ಆ ಅಪರಿಚಿತ, ಕತ್ತಲಲ್ಲಿ ಬಂದ ಕಾಳ್ಗಿಚ್ಚಿನ ಹಾಗೆ ನನ್ನೆದುರು ಚಿಮ್ಮಿದ್ದ. ಜ್ವಾಲೆ ದ್ದಿತ್ತು, ಜ್ವಾಲೆ ಅಡಗಿತ್ತು. ಈ ಜಗತ್ತನ್ನು ಅವನು ಅಲ್ಲಗಳೆದುದರಲ್ಲಿ ಒಂದು ಬಗೆಯ ಚಿತ್ಯವಿತ್ತೆಂಬ ಭಾವನೆಯನ್ನು ನನ್ನಲ್ಲಿ ಮೂಡಿಸಿತ್ತು.

ಆ ಸಂಜೆ ಒಂದು ಅನುಕೂಲ ಘಳಿಗೆಯಲ್ಲಿ, ನಮ್ಮ ಕರ್ಮಾಗಾರದ ಮುಖ್ಯಾಧಿಕಾರಿ ಾಂತಸ್ವಭಾವದ ಸದ್ಗೃಹಸ್ಥ ಇವಾನ್ ಲಾರಿಯೊನಿಶ್‌ಗೆ, ಆ ಅಲೆಕ್ಸಾಂಡರನ ಬಗೆಗೆ ಉತ್ಸಾಹ ಂದ ನಾನು ಬಣ್ಣಿಸಿದೆ. ನನ್ನ ಮಾತನ್ನೆಲ್ಲ ಕೇಳಿದ ಬಳಿಕ ಅವನೆಂದ:

"ಅವನು 'ಓಡುವಾತ' ಇರಬೇಕು-ಅದು, ಯಾವುದನ್ನೂ ಒಪ್ಪಿಕೊಳ್ಳದ ಒಂದು ಗುಂಪು."

"ಅವರು ಹೇಗೆ ಜೀವಿಸ್ತಾರೆ?"

"ಓಡಾಡಿ ಜೀವಿಸ್ತಾರೆ—ಭೂಮಿ ಮೇಲೆಲ್ಲಾ ಅಲೆಯೋದು. ಓಡುವವರು ಅಂತ ಅವರಿಗೆ ಸರು ಬಂದಿರೋದೂ ಅದರಿಂದಲೇ. ಭೂಮಿಯನ್ನೂ ಅದರ ಮೇಲಿರೋ ಪ್ರತಿಯೊಂದನ್ನೂ ಲ್ಲಗಳೀಬೇಕೂಂತ ಅವರು ಹೇಳ್ತಾರೆ. ಪೋಲೀಸರು ಆ ಜನರನ್ನು ಅಪಾಯಕಾರಿಗಳಾಗಿ ರಿಗಣಿಸಿ, ಅವರನ್ನು ಬೇಟೆಯಾಡ್ತಾರೆ."

ನನ್ನ ಬದುಕು ಸಾಕಷ್ಟು ಕಹಿಯಾಗಿಯೇ ಇತ್ತು. ಆದರೂ, ಭೂಮಿಯ ಮೇಲಿನದನ್ನೆಲ್ಲಾ ಾರಾದರೂ ಅಲ್ಲಗಳೆಯುವುದು ಹೇಗೆ—ಎಂಬುದು ನನಗೆ ಗೊತ್ತಾಗಲಿಲ್ಲ. ಆ ಸಮಯದಲ್ಲಿ ನ್ನ ಸುತ್ತಲಿನ ಬದುಕಿನಲ್ಲಿ ಪ್ರಿಯವಾಗಿಯೂ ಸ್ವಾರಸ್ಯಕರವಾಗಿಯೂ ನನಗೆ ಕಂಡ ಅಂಶ ಷ್ಟೋ ಇತ್ತು. ಹೀಗಾಗಿ, ಅಲೆಕ್ಸಾಂಡರನ ಪ್ರತಿಬಿಂಬ ನನ್ನ ಸ್ಮರಣೆಯಿಂದ ಬೇಗನೆ ಮಾಸಿ ೋಯಿತು

ಆದರೆ ಎಂದಾದರೊಮ್ಮೊಮ್ಮೆ, ಕೆಟ್ಟ ಘಳಿಗೆಗಳಲ್ಲಿ, ಹೊಲಗಳ ನಡುವಣ ಬೂದು ಹಾದಿಯ ೕಲೆ ನಡೆಯುತ್ತ ಕಾಡುಗಳತ್ತ ಸಾಗುತ್ತ ಇರುವ ಆತ ಕಾಣಿಸಿಕೊಳ್ಳುತ್ತಿದ್ದ. ದುಡಿಮೆಯಿಂದ

ಮಲಿನವಾಗದ ತನ್ನ ಬಿಳಿಗೈಯ ಕಿವುಚುವ ಚಲನೆಯಿಂದ ತನ್ನ ಟೋಪಿಯನ್ನು ಹಿಂದಕ್ಕೆ ಸರಿಸಿ ಗೊಣಗುತ್ತಿದ್ದ:

"ನೇರವಾದ ಅಗಲಕಿರಿದಾದ ಹಾದಿಯಲ್ಲಿ ನಾನು ನಡೀತಿದೇನೆ; ನಾನು ಪ್ರತಿಯೊಂದನ್ನೂ ಅಲ್ಲಗಳೀತೇನೆ! ಎಲ್ಲ ಬಂಧನಗಳನ್ನೂ ಕಡಿದೊಗೆಯಿರಿ!...."

ಅವನ ಪಕ್ಕದಲ್ಲೇ ನನ್ನ ತಂದೆಯನ್ನೂ ನಾನು ಕಾಣುತ್ತಿದ್ದೆ. ಅಜ್ಜಿಗೆ ಅವಳ ಕನಸಿನಲ್ಲಿ ಕಂಡಂತೆ ಆತ ಕಾಣಿಸಿಕೊಳ್ಳುತ್ತಿದ್ದ. ಕೈಯಲ್ಲಿ ಉದ್ದನೆಯ ಬಡಿಗೆ ಇರುತ್ತಿತ್ತು, ಚುಕ್ಕೆಗಳಿದ್ದ ನಾಯಿಯೊಂದು ಅವನ ಹಿಂದಿನಿಂದಲೆ ಓಡುತ್ತಿತ್ತು. ಅತ್ತಿತ್ತ ಜೋಲಾಡುತ್ತಿತ್ತು ಅದರ ನಾಲಿಗೆ....

೧೩

ದೇವಪ್ರತಿಮೆಗಳ ಕರ್ಮಾಗಾರವಿದ್ದುದು, ಅರ್ಧಭಾಗ ಕಲ್ಲಿನಿಂದ ನಿರ್ಮಿಸಿದ್ದ ಒಂದು ಕಟ್ಟಡದ ಎರಡು ಕೊಠಡಿಗಳಲ್ಲಿ. ಒಂದು ಕೊಠಡಿಗೆ, ಅಂಗಳದ ಬದಿಯಲ್ಲಿ ಮೂರು ಕಿಟಿಕಿಗಳಿದ್ದುವು, ಉದ್ಯಾನಕ್ಕೆ ತಾಗಿಕೊಂಡು ಎರಡು. ಇನ್ನೊಂದು ಕೊಠಡಿಗೆ ಉದ್ಯಾನದ ಬದಿಯಲ್ಲಿ ಒಂದು ಕಿಟಿಕಿ ಇತ್ತು, ಬೀದಿಗೆ ತಾಗಿಕೊಂಡು ಇನ್ನೊಂದು ಕಿಟಿಕಿ. ಕಿಟಿಕಿಗಳು ಚಿಕ್ಕವಾಗಿ ಚಚ್ಚೌಕವಾಗಿದ್ದುವು. ಹಳೆಯದಾಗಿ ಕಾಮನಬಿಲ್ಲಿನ ಬಣ್ಣಕ್ಕೆ ತಿರುಗಿತ್ತು ಗಾಜು. ಅದರ ಮೂಲಕ, ಚಳಿಗಾಲದ ಕ್ಷೀಣವಾದ ಹಂಚಿಹೋದ ಬೆಳಕು, ಹೌದೋ ಅಲ್ಲವೋ ಎನ್ನುವಷ್ಟು ಮಾತ್ರ ಒಳಗೆ ಬರುತ್ತಿತ್ತು

ಎರಡು ಕೊಠಡಿಗಳೂ ಮೇಜುಗಳಿಂದ ತುಂಬಿದ್ದುವು. ಪ್ರತಿಯೊಂದು ಮೇಜಿನ ಮೇಲೂ ಬಾಗಿಕೊಂಡು ಪ್ರತಿಮೆಗಳಿಗೆ ಬಣ್ಣ ಬಳಿಯುವ ಒಬ್ಬ ಕಲಾಕಾರ ಇರುತ್ತಿದ್ದ. ಒಂದೊಂದು ಮೇಜಿನ ಬಳಿ ಇಬ್ಬರೂ ಕೂಡಾ ಇರುತ್ತಿದ್ದರು. ಛಾವಣಿಯಿಂದ, ಬಲವಾದ ಹಗ್ಗಗಳಲ್ಲಿ, ನೀರು ತುಂಬಿದ ಗಾಜಿನ ಚೆಂಡುಗಳು ತೂಗಾಡುತ್ತಿದ್ದುವು. ಇವುಗಳನ್ನು ತೂಗಹಾಕಿದ್ದುದು, ದೀಪಗಳ ಬೆಳಕನ್ನು ಪ್ರತಿಬಿಂಬಿಸುವುದಕ್ಕೋಸ್ಕರ. ಈ ಚೆಂಡುಗಳಿಗಾಗಿ, ದೀಪಗಳ ಬೆಳಕಿನ ಶೀತಲವಾದ ಬಿಳಿಯ ಕಿರಣಗಳು, ಪ್ರತಿಮೆಗಳ ಚಚ್ಚೌಕ ಹಲಗೆಗಳ ಮೇಲೆ ಬೀಳುತ್ತಿದ್ದುವು.

ಕರ್ಮಾಗಾರದೊಳಗೆ ಸೆಖೆ ಇದ್ದು, ಉಸಿರು ಕಟ್ಟುವ ಹಾಗಾಗುತ್ತಿತ್ತು. ಪಲೇಖ್, ಖೊಲುಯಿ, ಮೆಸ್ತೆರಾಗಳ ಸುಮಾರು ಇಪ್ಪತ್ತು ಜನ 'ದೇವ-ಕಲಾಕಾರರು' ಇಲ್ಲಿ ನೆರೆದಿದ್ದರು. ಎಲ್ಲರೂ, ಕತ್ತಿನಬಳಿ ತೆರೆದಿದ್ದ ಒಂದು ಬಗೆಯ ಅರಿವೆಯ ಅಂಗಿಗಳನ್ನೂ ಹಾಸಿಗೆಯ ಹೊದಿಕೆಯಿಂದ ಮಾಡಿದ ಷರಾಯಿಗಳನ್ನೂ ತೊಟ್ಟಿದ್ದರು. ಓಡಾಡುತ್ತಿದ್ದುದು ಬರಿಗಾಲಲ್ಲೇ, ಅಥವಾ ಅವಮಾನಕರವೆನಿಸುವಂತಹ ಹರಕಲು ಚಪ್ಪಲಿಗಳನ್ನು ಮೆಟ್ಟಿಕೊಂಡು. ಕಲಾಕಾರರ ತಲೆಗಳೆಡೆ ತಂಬಾಕದ ಹೊಗೆಯ ಬೂದು ಮೋಡಗಳಿಂದ ಮುಚ್ಚಿರುತ್ತಿದ್ದುವು. ವಾತಾವರಣವೆಲ್ಲ, ಒಣಗುತ್ತಿದ್ದ ಎಣ್ಣೆಯ, ಲಾಕಿಯರಿನ ಮತ್ತು ಕೆಟ್ಟ ಮೊಟ್ಟೆಗಳ ವಾಸನೆಯಿಂದ ಭಾರವಾಗಿತ್ತು. ವ್ಲಾದಿಮಿರ್ ಪ್ರದೇಶದ ಜನಪದ ಹಾಡೊಂದು, ಬಿಸಿ ಡಾಮರಿನಂತೆ ಭಾರವಾಗಿ ಹರಿಯುತ್ತಿತ್ತು

ಹುಡುಗನು ಕನ್ನೆಯ ಕೆಡಿಸಲು ಬಿಟ್ಟರೆ?
ಓ್ಹ, ಎಂಥವರಪ್ಪ ನಿರ್ಲಜ್ಜರು ನೀವು.

ಅಷ್ಟೇ ಉತ್ಸಾಹಶೂನ್ಯವಾದ ಬೇರೆ ಹಾಡುಗಳನ್ನೂ ಅವರು ಹಾಡುತ್ತಿದ್ದರು. ಆದರೆ ದು, ಅವರ ಪ್ರೀತಿಪಾತ್ರವಾದುದಾಗಿತ್ತು. ಈ ಹಾಡಿನ ಅತಿಯಾದ ಆಲಾಪನೆಯಿಂದ, ವಿಚಾರ ಗೆ ತಡೆಯುಂಟಾಗುತ್ತಿರಲಿಲ್ಲ. ಪ್ರಾಣಿಯ ರೋಮದಿಂದ ಮಾಡಿದ ಸೊಗಸಾದ ಬ್ರಷ್ಷು, ತ್ರದ ರೇಖೆಗಳನ್ನು ಪ್ರತಿತೆಗೆಯುತ್ತಿತ್ತು; ಸಂತರ ಪೋಷಾಕಿನ ಮಡಿಕೆಗಳಿಗೆ ಬಣ್ಣ ಬಳೆಯು ತ್ತು; ಬಡಕಲು ಮುಖಗಳಿಗೆ ಯಾತನೆಯ ಮತ್ತಷ್ಟು ಗೆರೆಗಳನ್ನು ಸೇರಿಸುತ್ತಿತ್ತು. ಬ್ರಷ್ಷಿನ ಈ ಾವ ಕೆಲಸಕ್ಕೂ ಹಾಡಿನ ಆಲಾಪನೆಯಿಂದ ತೊಂದರೆಯಾಗುತ್ತಿರಲಿಲ್ಲ, ಕಿಟಿಕಿಯಾಚೆಯಿಂದ, ಕ್ಕೊತ್ತುವ ಗೊಗೊಲೀವನ ಸುತ್ತಿಗೆಯ ಧ್ವನಿ ಕೇಳಿಸುತ್ತಿತ್ತು. ದೊಡ್ಡದಾದ ನೀಲಿಬಣ್ಣದ ೂಗಿದ್ದ ಕುಡುಕ ಮುದುಕ ಆತ. ಸುತ್ತಿಗೆಯ ತೀಕ್ಷ್ಣ ಬಡಿತ, ನಿಧಾನವಾಗಿ ಹರಿಯುತ್ತಿದ್ದ ಡಿಗೆ ತಾಳವಾಗಿತ್ತು. ಅದನ್ನು ಕೇಳುವಾಗ, ಮರವನ್ನು ಕೊರೆಯುವ ಹುಳದ ನೆನಪಾಗು ತ್ತು.

ಈ ದೇವಪ್ರತಿಮೆಗಳಿಗೆ ಬಣ್ಣ ಬಳೆಯುವುದರಲ್ಲಿ ಯಾರಿಗೂ ಆಸಕ್ತಿ ಇರಲಿಲ್ಲ. ಯಾವುದೋ ಷ್ಟ ಧೀಶಕ್ತಿಯೊಂದು ಆ ಕೆಲಸವನ್ನು, ಸೊಬಗು ಎಳ್ಳಷ್ಟೂ ಇಲ್ಲದ ನಿರ್ದಿಷ್ಟ ವಿಧಾನಗಳ ಸರ ಾಲೆಯಾಗಿ ವಿಂಗಡಿಸಿತ್ತು. ಹೀಗಾಗಿ, ಆ ಕೆಲಸದ ಬಗೆಗೆ ಒಲವನ್ನು—ಅಥವಾ ಆಸಕ್ತಿ ನ್ನು ಕೂಡಾ—ಬೆಳೆಸುವುದು ದುಸ್ಸಾಧ್ಯವಾಗಿತ್ತು. ತುಚ್ಛನೂ ಕೆಡುಕು ಸ್ವಭಾವದವನೂ ರ ಮೆಳ್ಳೆಗಣ್ಣಿನ ಬಡಗಿ ಪಾನ್‌ಫಿಲ್, ತಾನು ಸಮತಟ್ಟುಗೊಳಿಸಿ ಅಂಟಿಸಿದ್ದ ವಿವಿಧ ಕೃತಿಯ ಸಿಪ್ರೆಸ್ ಅಥವ ಲಿಂಡೆನ್ ಮರದ ಹಲಗೆಗಳನ್ನು ಒಳಕ್ಕೆ ತರುತ್ತಿದ್ದ. ಕ್ಷಯಪೀಡಿತ ಡುಗ ಡಾವಿಡೋವ್, ಅಡಿಪಾಯವನ್ನಿಡುತ್ತಿದ್ದ. ಅವನ ಸ್ನೇಹಿತ ಸೊರೊತಿನ್, ಬಂಗಾರದ ೕಟು ಹಾಕಲು ಹಲಗೆಯನ್ನು ಸಿದ್ಧಗೊಳಿಸುತ್ತಿದ್ದ. ಮಿಲ್ಯಾಶಿನ್, ಯಾವುದೋ ಮೂಲ ತಿಯಿಂದ ಪ್ರತಿಮೆಯನ್ನು ಸೀಸದ ಕಡ್ಡಿಯಲ್ಲಿ ಪ್ರತಿಮಾಡಿ ಬಿಡಿಸುತ್ತಿದ್ದ; ಗೊಗೊಲೀವ್ ೕಟು ಹಾಕುವ ಕೆಲಸವನ್ನು ಮಾಡುತ್ತಿದ್ದ; ಆಕೃತಿಗಳನ್ನು 'ಬಂಗಾರ'ದಲ್ಲಿ ಅಚ್ಚೊತ್ತುತ್ತಿದ್ದ. ರಳ' ಕಲಾವಿದರು, ದೃಶ್ಯಗಳನ್ನೂ ಸಂತರ ಪೋಷಾಕಗಳನ್ನೂ ಚಿತ್ರಿಸುತ್ತಿದ್ದರು. ಬಳಿಕ ತಲೆ ಲ್ಲದ ಕೈ ಇಲ್ಲದ ಪ್ರತಿಮೆಯನ್ನು ಗೋಡೆಗೆ ಒರಗಿಸಿ ನಿಲ್ಲಿಸುತ್ತಿದ್ದರು. ಅಲ್ಲಿ ಅವು, 'ಮುಖ' ಾವಿದರು ತಮ್ಮ ಸೇವೆ ಸಲ್ಲಿಸುವುದಕ್ಕಾಗಿ ಕಾಯುತ್ತಿದ್ದುವು.

ಇಗರ್ಜಿಯೊಳಗಿನ ಪರದೆಗಾಗಿಯೋ, ಪವಿತ್ರ ವೇದಿಕೆಯ ಬಾಗಿಲುಗಳಿಗಾಗಿಯೋ ಅರ್ಧ ರೂರಿಸಿದ ದೊಡ್ಡ ಪ್ರತಿಮೆಗಳನ್ನು ಮುಖಗಳು ಕೈಗಳು ಅಥವಾ ಪಾದಗಳಿಲ್ಲದೆ, ಬರಿದು ೕಷಾಕು—ರಕ್ಷಾಕವಚ—ಅತ್ಯುಚ್ಚದೇವತೆಯ ಕಿರಿದಾದ ಉಡುಗೆ ಇಷ್ಟರಲ್ಲೇ ನೋಡು ನು ಅತ್ಯಂತ ಅಸಹನೀಯವಾಗಿತ್ತು. ಶುಭ್ರವಾಗಿ ಬಣ್ಣ ಬಳೆಯಲಾದ ಈ ಹಲಗೆಗಳಿಂದ ವಿನ ಭಾವನೆ ಹೊರಸೂಸುತ್ತಿತ್ತು. ಅವುಗಳನ್ನು ಸಚೇತನಗೊಳಿಸಬೇಕಾಗಿದ್ದ ಪ್ರಾಣ ಅಲ್ಲಿ ಣಿಸುತ್ತಿರಲಿಲ್ಲ. ಆದರೆ, ಒಮ್ಮೆ ಅಂತಹ ಪ್ರಾಣ ಅಲ್ಲಿತ್ತು, ಮುಂದೆ ಬರೇ ಹೊರೆಯಾದ ಡುಪನ್ನಷ್ಟೇ ಬಿಟ್ಟು ವಿಸ್ಮಯಕರ ರೀತಿಯಲ್ಲಿ ತಪ್ಪಿಸಿಕೊಂಡಿತ್ತು—ಎಂದು ಅನಿಸುತ್ತಿತ್ತು.

'ಮುಖ' ಕಲಾಕಾರರದು ಆದ ಬಳಿಕ, ಪ್ರತಿಮೆ ಇನ್ನೊಬ್ಬ ಕೆಲಸಗಾರನಲ್ಲಿಗೆ ಹೋಗು

ತ್ತಿತ್ತು. ಆತ, ಬಂಗಾರ ಬಣ್ಣದ ಚೌಕಟ್ಟಿನ ಚಿತ್ತಾರಕ್ಕೆ ಇನಾಮಲ್ ಸೇರಿಸುತ್ತಿದ್ದ. ಹೆಸ
ಕೊರೆಯುವುದನ್ನು ವಿಶೇಷತಜ್ಞನೊಬ್ಬ ಮಾಡುತ್ತಿದ್ದ. ಸಿದ್ಧವಾದ ಪ್ರತಿಮೆಗೆ ಕರ್ಮಾಗಾರ
ಶಾಂತಸ್ವಭಾವದ ಮುಖ್ಯಾಧಿಕಾರಿ ಇವಾನ್ ಲಾರಿಯೊನಿಶನೇ ಸ್ವತಃ ಲಾಕಿಯರ್ ಹಾಕುತ್ತಿದ್

ಅವನಿಗೆ ಬೂದು ಬಣ್ಣದ ಮುಖವಿತ್ತು. ಸೊಗಸಾಗಿ ರೇಶಿಮೆಯಂತಿದ್ದ ಬೂದು ಬಣ್ಣ
ಗಡ್ಡವಿತ್ತು. ವಿಶೇಷ ಬಗೆಯಲ್ಲಿ ಆಳವೂ ದುಃಖಪೂರ್ಣವೂ ಆಗಿ ಕಂಡ ಬೂದು ಕಣ್ಣುಗ
ದ್ದುವು. ವಿನಯದ ಮುಗಳುನಗೆ ಇತ್ತು. ಆದರೂ, ಯಾಕೋ ಏನೋ, ಅವನ ಮಂದಹಾಸ
ಪ್ರತಿಯಾಗಿ ಮುಗುಳುನಗುವುದು ತಪ್ಪೆನಿಸುತ್ತಿತ್ತು. ಅವನು ಸ್ತಂಭದ ಸಿಮಿಯನ್ನನ ಪ್ರತಿ
ಯನ್ನು ಹೋಲುತ್ತಿದ್ದ. ಅಷ್ಟೇ ತೆಳ್ಳಗಿದ್ದು ಜೀರ್ಣವಾಗಿದ್ದ ದೇಹ. ಗೋಡೆಗಳಾಚೆ
ಜನರಾಚೆಗೆ, ದೂರದತ್ತ ಆತ ದಿಟ್ಟಿಸಿದಂತೆ, ಆ ನೆಟ್ಟ ಕಣ್ಣುಗಳಲ್ಲಿ ಪ್ರತಿಮೆಯ ಕಣ್ಣುಗಳನ್ನೆ
ಹೋಲುವ ತಲ್ಲೀನತೆಯ ನೋಟವಿರುತ್ತಿತ್ತು.

ಕರ್ಮಾಗಾರವನ್ನು ನಾನು ಸೇರಿದ ಕೆಲದಿನಗಳ ಅನಂತರ ಒಂದು ಘಟನೆ ನಡೆಯಿತ
ನಮ್ಮಲ್ಲಿ, ಶೀರ್ಷಿಕೆಗಳನ್ನು ಬರೆಯುವ ಕಲಾಕಾರನೊಬ್ಬನಿದ್ದ. ಡಾನ್ ಪ್ರದೇಶದ ಸ್ಫುರದ್ರೂ
ಯಾದ ಬಲಿಷ್ಠನಾದ ಕೊಸ್ಸಾಕ್. ಕಾಪೆಂಡಿಯೂಖಿನ್ ಎಂದು ಅವನ ಹೆಸರು. ಒಂದು ದಿ
ಆತ, ಕುಡಿದು ಮತ್ತನಾಗಿ ಕೆಲಸಕ್ಕೆ ಬಂದ. ಹಲ್ಲುಗಳನ್ನು ಅವುಡುಗಚ್ಚುತ್ತ, ತನ್ನ ಸುಂದ
ವಾದ ಹೆಣ್ಣಿನ ಕಣ್ಣುಗಳನ್ನು ಕಿರಿದುಗೊಳಿಸುತ್ತ, ಮೌನವಾಗಿ, ತನ್ನ ಕಬ್ಬಿಣದ ಮುಷ್ಟಿಗಳಿಂ
ಪ್ರತಿಯೊಬ್ಬನನ್ನೂ ಗುದ್ದತೊಡಗಿದ. ಇಲಿಗಳು ತುಂಬಿದ್ದ ಕೊಠಡಿಯಲ್ಲಿ ಬೆಕ್ಕು ಮಾಡುವಂ
ಅಷ್ಟೇನೂ ದೊಡ್ಡದಲ್ಲದ ಅವನ ಬಳುಕುವ ದೇಹ, ಕರ್ಮಾಗಾರದಲ್ಲೆಲ್ಲ ರಭಸದಿಂದ ಸುತ್ತು
ಯಿತು. ಗಾಬರಿಯಾದ ಜನರು, ಅವಿತುಕೊಳ್ಳಲೆಂದು ಮೂಲೆಗಳಿಗೆ ಧಾವಿಸಿದರು. ಅಲ್ಲಿಂ
ಒಬ್ಬರು ಇನ್ನೊಬ್ಬರಿಗೆ ಕೂಗಿ ನುಡಿದರು:

"ಗುದ್ದು ಅವನಿಗೆ!"

ಒಂದು ಸ್ಟೂಲಿನಿಂದ ಏರಿ ಬಂದಿದ್ದ ಆ ದೈತ್ಯನ ತಲೆಗೇ ಹೇಗೋ ಮಾಡಿ ಹೊಡೆದು, 'ಮು
ಕಲಾಕಾರ ಯೆವ್‌ಜೆನಿ ಸಿತಾನೋವ್ ಅವನನ್ನು ಡಂಗು ಬಡಿಸಿದ. ಆ ಕೊಸಾಕ್ ನೆಲ
ಮೇಲೆ ಕುಸಿದುಬಿದ್ದ. ಕ್ಷಣಾರ್ಧದಲ್ಲೇ ಅವನ ಕೈಕಾಲುಗಳನ್ನು ಅವರು ಚಾಚಿದರು, ಟವ
ಗಳಿಂದ ಅವನನ್ನು ಕಟ್ಟಿಹಾಕಿದರು. ಆ ಅರಿವೆಯ ಗಂಟುಗಳನ್ನಾತ, ಹುಲಿ ಹಲ್ಲುಗಳಿಂದ ಕ
ಹರಿಯಲು ನೋಡಿದ. ಇದನ್ನು ಕಂಡು ಯೆವ್‌ಜೆನಿಯ ಸಿಟ್ಟು ನೆತ್ತಿಗೇರಿತು. ಆತ ಒಂ
ಮೇಜಿನ ಮೇಲಕ್ಕೆ ಹಾರಿ, ಕೊಸ್ಸಾಕನ ಮೇಲ್ಗಡೆ ಧುಮುಕಲೆಂದು ತನ್ನ ಮೊಣಕೈಗಳನ
ಪಕ್ಕಗಳಿಗೆ ಒತ್ತಿಕೊಂಡು ಸಿದ್ಧನಾದ. ಅವನ ಮಹಾಭಾರ ಕಾಪೆಂಡಿಯೂಖಿನನ ಎದೆಯ
ಖಂಡಿತವಾಗಿಯೂ ಅಪ್ಪಚ್ಚಿ ಮಾಡಿಬಿಡುತ್ತಿತ್ತು. ಆದರೆ ಆಕ್ಷಣದಲ್ಲೇ, ಹ್ಯಾಟು ಮ
ಕೋಟು ತೊಟ್ಟಿದ್ದ ಲಾರಿಯೊನಿಶ್ ಅವನ ಬದಿಯಲ್ಲಿ ಕಾಣಿಸಿಕೊಂಡ. ಗದರಿಸುವವನ
ಸಿತಾನೋವನ ಕಡೆಗೆ ಬೆರಳಲುಗಿಸಿ, ಶಾಂತವಾಗಿ, ಏನೂ ಆಗಿಲ್ಲವೆಂಬಂತೆ ಉಳಿದವರಿಗೆ ಅಂ

"ಅವನನ್ನು ಹೊರಕ್ಕೆ ಬಾಗಿಲಿನಾಚೆಗೆ ತೆಗೆದುಕೊಂಡು ಹೋಗಿ; ಅಮಲು ಇಳಿಯಲಿ."

ಅವರು ಆ ಕೊಸ್ಸಾಕನನ್ನು ಕರ್ಮಾಗಾರದಿಂದ ಹೊರಕ್ಕೆ ಎಳೆದೊಯ್ದರು; ಮೇ
ಗಳನ್ನೂ ಪುನಃ ಕುರ್ಚಿಗಳನ್ನೂ ಅವುಗಳಿದ್ದ ಜಾಗದಲ್ಲೇ ಇರಿಸಿದರು. ಕಾಪೆಂಡಿಯೂಖಿ

ಶಕ್ತಿಯ ಬಗೆಗೆ ಪರಸ್ಪರ ಮಾತನಾಡುತ್ತ, ಮುಂದೆಯಾದರೂ ಆತ ಸಾಯುವುದು ಜಗಳದಲ್ಲೇ ಎಂದು ಭವಿಷ್ಯ ನುಡಿಯುತ್ತ, ತಮ್ಮ ಕೆಲಸವನ್ನ ಮುಂದುವರಿಸಿದರು.

ತನಗೆ ಪರಿಪೂರ್ಣ ತಿಳಿವಳಿಕೆ ಇರುವ ಒಂದು ಕೆಲಸದ ಬಗೆಗೆ ಯಾವನಾದರೂ ಮಾತ ನಾಡುವಂತೆ, ಬಲು ಶಾಂತವಾಗಿ, ಸಿತಾನೋವ್ ನುಡಿದ :

"ಅವನನ್ನು ಕೊಲ್ಲೋದು ಸುಲಭವಾಗೋದಿಲ್ಲ."

ಲಾರಿಯೊನಿಶನ ಕಡೆಗೆ ನಾನು ನೋಡಿದೆ. ಇವನ ಆಜ್ಞೆಯನ್ನು ಬಲಿಷ್ಠರಾದ ಶಿಸ್ತು ಸಂಯಮವಿಲ್ಲದ ಈ ಜನರು ಇಷ್ಟೊಂದು ಸಮ್ಮತಿಯಿಂದ ಹೇಗೆ ಪರಿಪಾಲಿಸುವರೆಂದು ಊಹಿಸಲು ನಾನು ಯತ್ನಿಸಿದೆ.

ಹೇಗೆ ಕೆಲಸ ಮಾಡಬೇಕೆಂಬುದನ್ನು ಪ್ರತಿಯೊಬ್ಬನಿಗೂ ಅವನು ತೋರಿಸಿಕೊಡುತ್ತಿದ್ದ. ಅತ್ಯಂತ ಅನುಭವಿಗಳಾದ ಹಿರಿಯ ಕಲಾಕಾರರೂ ಅವನ ಸಲಹೆಯನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದರು. ಇತರರೆಲ್ಲರಿಗಿಂತ ಕಾಪೆಂಡಿಯೂಖಿನನಿಗೆ ಕಲಿಸುವುದರಲ್ಲಿ, ಹೆಚ್ಚು ವೇಳೆ ಯನ್ನೂ ಮಾತುಗಳನ್ನೂ ಅವನು ವ್ಯಯಮಾಡುತ್ತಿದ್ದ.

"ಕಾಪೆಂಡಿಯೂಖಿನ್, ನಿನಗೆ ಏನನ್ತಾರೆ ಗೊತ್ತೆ ?—ಕಲಾವಿದ, ಅಂತ. ಇಟಾಲಿಯ ನ್ನರು ಮಾಡುವ ಹಾಗೆ, ಕಲಾವಿದ ತನ್ನ ಕೃತಿ ಸಜೀವವಾಗಿ ಕಾಣಿಸುವಂತೆ ಮಾಡಬೇಕು. ತೈಲಚಿತ್ರಣದಲ್ಲಿ ಶುಭ್ರ ಸೆಲೆಗಳ ಐಕ್ಯ ಅಗತ್ಯ. ಆದರೆ, ಇಲ್ಲಿ ನೀನು ಎಷ್ಟೊಂದು ಬಿಳಿಹಾಕಿ ದೀಯೆ ನೋಡು. ಕನ್ನಿಕೆಯ ಕಣ್ಣುಗಳು ಇಷ್ಟೊಂದು ಶೀತಲವಾಗಿ ಚಳಿ ಹಿಡಿದಿರುವಂತೆ ಕಾಣಿಸುತ್ತಿರುವುದು ಆ ಕಾರಣದಿಂದ. ಕೆನ್ನೆಗಳು ದುಂಡಗಿದ್ದು ಕೆಂಪಗಿವೆ. ಆದರೆ ಕಣ್ಣು ಗಳು ಸರಿಹೊಂದುವುದಿಲ್ಲ. ಅವುಗಳನ್ನು ಸರಿಯಾಗಿ ಇರಿಸಿಯೂ ಇಲ್ಲ. ಒಂದು, ಮೂಗಿಗೆ ತೀರಾ ಸಮೀಪವಾಗಿದೆ; ಇನ್ನೊಂದು, ಸಂಕೋಚಪಟ್ಕೊಂಡು ಕಿರುಕೆನ್ನೆಯ ತನಕ ಸರಿದಿದೆ. ಹೀಗಾಗಿ, ಮುಖದ ಮೇಲೆ ಪರಿಶುದ್ಧವೂ ಪವಿತ್ರವೂ ಆದ ಭಾವ ಇರುವುದರ ಬದಲು, ಬಹಳ ಕುತಂತ್ರದ ಐಹಿಕ ನೋಟ ಕಂಡು ಬರ್‍ತಿದೆ. ನಿನ್ನ ಕೆಲಸವನ್ನು ಸಾಕಷ್ಟು ಶ್ರದ್ಧೆಯಿಂದ ನೀನು ಮಾಡೋದಿಲ್ಲ, ಕಾಪೆಂಡಿಯೂಖಿನ್."

ಕೊಸ್ಸಾಕ್, ಕಿವಿಗೊಟ್ಟು ಕೇಳುತ್ತ ಮುಖ ಮುರುಟಿಸುತ್ತಿದ್ದ; ಬಳಿಕ ನಿರ್ಲಜ್ಜನಾಗಿ ಹೆಣ್ಣಿನ ಕಣ್ಣುಗಳಿಂದ ಮುಗುಳುನಗುತ್ತಿದ್ದ. ಕುಡಿತದಿಂದ ಸ್ವಲ್ಪ ಮಟ್ಟಿಗೆ ಕರ್ಕಶವಾಗಿ ದ್ದರೂ ಇಂಪಾಗಿದ್ದ ಸ್ವರದಲ್ಲಿ ಅನ್ನುತ್ತಿದ್ದ.

"ಹ್ಣ—ಇವಾನ್ ಲಾರಿಯೊನಿಶ್ ಇದು ನನಗೆ ಹೇಳಿದ ಕೆಲಸವಲ್ಲ ! ಸಂಗೀತ ಸೃಷ್ಟಿಸೋ ದಕ್ಕೆ ಹುಟ್ಟಿದವನು ನಾನು. ಇಗೋ, ಈಗ ಇಲ್ಲೊಂದು ಸನ್ಯಾಸಿಮಠದಲ್ಲಿದೀನಿ."

"ಸಾಕಷ್ಟು ಕಷ್ಟಪಟ್ಟರೆ ಏನನ್ನು ಬೇಕಾದರೂ ನೀನು ಕರಗತಮಾಡ್ಕೋಬಹುದು."

"ಈ ಕೆಲಸ ಮಾಡ್ತಿರೋದಕ್ಕೆ ನಾನು ಯಾರು ? ಮೂರು ಕುದುರೆಗಳ ಗಾಡಿಯೂ ಜೋರಾದ ಕುದುರೆಗಳೂ ಇದ್ದು ಕೋಚ್ ಗಾಡಿ ಹೊಡೆಯುವವನಾಗಬೇಕಿತ್ತು ನಾನು....ಹ್ಣ !...."

ತನ್ನ ಬಾಯಿಯನ್ನು ಅಗಲವಾಗಿ ತೆರೆದು, ದೀರ್ಘವಾದ, ಅತ್ಯುತ್ಸಾಹದ ಧ್ವನಿಯನ್ನು ಆತ ಹೊರಡಿಸಿದ :

ಹೆ–ಹ್ಹೆ–ಹ್ಹೆ ! ನನ್ನ ಗಾಡಿಯನ್ನು ಬೇಗ ಸಿದ್ಧಗೊಳಿಸುವೆ
ಎರಡು ಕುದುರೆ ಬಣ್ಣ ಒಂದು, ಮೂರನೆಯದು ಬೇರೆ
ಹೆ–ಹ್ಹೆ–ಹ್ಹೆ ! ಹೊಳೆವ ಹಿಮದ ಹಾದಿಯಲ್ಲಿ ಓಡಿಸುವೆ ಗಾಡಿಯಾ
ನಿಜದೊಲವಿನ, ದೂರದೂರಿನ, ನಲ್ಲೆಯಲ್ಲಿಗೆ !

ಇವಾನ್ ಲಾರಿಯೊನಿಶ್, ಮುಗುಳುನಗೆಯೊಡನೆ ಸೋಲನ್ನೊಪ್ಪಿಕೊಂಡ. ನೀಲಿ ವರ್ಣಕ್ಕೆ ತಿರುಗಿದ-ವ್ಯಸನಾಕ್ರಾಂತವಾದ-ಮೂಗಿನ ಮೇಲಣ ಕನ್ನಡಕವನ್ನು, ಸರಿಗೊಳಿಸಿದ. ದೂರ ನಡೆದು ಹೋದ. ಅವನು ಹೋದಂತೆ, ಹತ್ತಾರು ಧ್ವನಿಗಳು ಆ ಹಾಡಿನ ಎಳೆಯನ್ನು ಎತ್ತಿಕೊಂಡುವು. ಆ ಧ್ವನಿಗಳೆಲ್ಲ ಒಂದರಲ್ಲೊಂದು ಲೀನವಾಗಿ ಬಲಶಾಲಿಯಾದ ಪ್ರವಾಹ ವಾದುವು. ಅದು, ಇಡಿಯ ಕರ್ಮಾಗಾರವನ್ನೇ ಗಾಳಿಗೆ ಎತ್ತಿ, ಹಿಂದಕ್ಕೂ ಮುಂದಕ್ಕೂ ಮೆಲ್ಲನೆ ತೂಗಿದಂತೆ ಭಾಸವಾಯಿತು

ನನ್ನ ದೇವಿ ವಾಸವಿರುವ ಊರಹಾದಿ
ಕುದುರೆಗಳಿಗೆ ತಿಳಿದೇ ಇತ್ತು ಚೆನ್ನಾಗಿ....

ವೃತ್ತಿಶಿಷ್ಯ ಪಾಶ್ಕಾ ಒಡಿಂಟ್ಸೋವ್, ಪೊಟ್ಟೆಯ ತಿರುಳನ್ನು ಪ್ರತ್ಯೇಕಿಸುತ್ತಿದ್ದುದನ್ನು ನಿಲ್ಲಿಸಿದ. ಒಂದೊಂದು ಕೈಯಲ್ಲೂ ಒಂದೊಂದು ಚಿಪ್ಪು ಹಿಡಿದು, ಮಧುರ ಕಂಠದಲ್ಲಿ ಆ ಸಮೂಹ ಗಾನದ ಹಿರಿತನವನ್ನು ವಹಿಸಿದ.

ಧ್ವನಿಯಿಂದ ಮತ್ತರಾಗಿ ಉಳಿದುದೆಲ್ಲವನ್ನೂ ಅವರು ಮರೆತರು. ಒಂದೇ ಭಾವೋದ್ವೇಗ ದಿಂದ ಪ್ರೇರಿತರಾಗಿ, ಏಕಕಾಲದಲ್ಲೇ ಉಸಿರಾಡಿದರು. ಅವರೆಲ್ಲರ ಒಂದು ಕಣ್ಣು ಕೊಸ್ಸಾಕನ ಮೇಲಿರುತ್ತಿತ್ತು. ಹಾಡಿದಾಗ ಆತ, ಇಡಿಯ ಕರ್ಮಾಗಾರದ ಪ್ರಭುವೂ ಒಡೆಯನೂ ಆಗಿರು ತ್ತಿದ್ದ. ಅಂತಹ ಘಳಿಗೆಯಲ್ಲಿ ಪ್ರತಿಯೊಬ್ಬರೂ ಅವನತ್ತ ತಿರುಗುತ್ತಿದ್ದರು. ಹಾರಿಹೋಗಲು ಸಿದ್ಧನಾಗಿ ನಿಂತವನಂತೆ ಆತ ಬೀಸುತ್ತಿದ್ದ ತೋಳುಗಳ ಚಲನವಲನಗಳನ್ನು ಅವರು ಅನುಸರಿಸು ತ್ತಿದ್ದರು. ತಾನು ಹಾಡುತ್ತಿದ್ದ ಹಾಡನ್ನು ಆತ ಇದ್ದಕ್ಕಿದ್ದಂತೆ ನಡುವೆ ನಿಲ್ಲಿಸಿ, 'ಬನ್ನಿ, ಇದೆಲ್ಲ ವನ್ನೂ ಪುಡಿಪುಡಿ ಮಾಡೋಣ' ಅಂತ ಕೂಗಿ ನುಡಿದಿದ್ದರೆ, ಅತ್ಯಂತ ಕಟ್ಟುನಿಟ್ಟಿನ ಗೌರವಾನ್ವಿತ ಹಿರಿಯ ಕಲಾಕಾರರನ್ನೂ ಒಳಗೊಂಡು ಅವರೆಲ್ಲರೂ ಆ ಕರ್ಮಾಗಾರವನ್ನು ಐದೇ ನಿಮಿಷಗಳಲ್ಲಿ ಪುಡಿಗೊಡಿಸುವರೆಂದು ನಾನು ಖಂಡಿತವಾಗಿ ಬಲ್ಲೆ.

ಅವನು ಹಾಡುತ್ತಿದ್ದುದೇ ಕಡಮೆ. ಆದರೆ ಹಾಡಿದಾಗಲೆಲ್ಲ. ಆ ಹುಚ್ಚು ಹಾಡುಗಳು, ಜಯಸೂಚಕವಾದ—ಮರುಳಾಗದಿರುವುದು ದುಸ್ಸಾಧ್ಯವಾದ—ಶಕ್ತಿಯನ್ನು ಬೀರುತ್ತಿದ್ದುವು. ಜನರು ಎಷ್ಟೇ ಮನಸ್ಸು ಮುದುಡಿಕೊಂಡು ಕುಳಿತಿರಲಿ, ಅವರನ್ನು ಹೊಡೆದೆಬ್ಬಿಸುವುದರಲ್ಲಿ ಅವನು ಯಶಸ್ವಿಯಾಗುತ್ತಿದ್ದ. ಅವರ ನರನರಗಳಲ್ಲಿ ಎಚ್ಚೆತ್ತು ಕುಣಿಯುತ್ತಿದ್ದುವು. ಆ ಎಲ್ಲ ಶಕ್ತಿಗಳ ಮಿಲನದಲ್ಲಿ, ಒಂದು ಪ್ರಬಲ ವಾದನವಾಗಿ ಅವರು ಮಾರ್ಪಡುತ್ತಿದ್ದರು.

ಈ ಹಾಡುಗಳು, ಹಾಡುಗಾರನ ಬಗೆಗೂ ಜನರ ಮೇಲೆ ಆತನಿಗಿದ್ದ ಸೊಗಸಾದ ಹಿಡಿತದ ಬಗೆಗೂ ನಾನು ಬಹಳವಾಗಿ ಅಸೂಯೆ ಪಡುವಂತೆ ಮಾಡಿದುವು. ಕಂಪಿಸುವ ಭೀತಿಯಿಂದ ನನ್ನ ಹೃದಯ ತುಂಬಿತು. ನೋವುಂಟಾಗುವವರೆಗೂ ಅದು ಉಬ್ಬಿತು. ಕಣ್ಣೀರು ಹರಿಸುತ್ತ,

"ನಿಮ್ಮನ್ನೆಲ್ಲ ನಾನು ಎಷ್ಟೊಂದು ಪ್ರೀತಿಸುವೆ!" ಎಂದು, ಹಾಡುವ ಜನರಿಗೆ ಕೂಗಿ ಹೇಳ ಬೇಕೆಂಬ ಬಯಕೆಯಾಯಿತು.

ಕೂದಲೆಲ್ಲ ಜಡೆ ಕಟ್ಟಿದ್ದ, ಹಳದಿ ಮೈ ವರ್ಣದ, ಕ್ಷಯ ಪೀಡಿತ ಡಾವಿಡೋವ್ ಕೂಡಾ, ಅದೇ ಆಗ ಜನ್ಮತಳೆದ ಕಾಗೆ ಮರಿಯ ಹಾಗೆ ತನ್ನ ಬಾಯನ್ನು ಅಗಲವಾಗಿ ತೆರೆದ.

ಆದರೆ, ಅಂತಹ ಹರ್ಷದ ಹುಚ್ಚು ಹಾಡುಗಳನ್ನು ಹಾಡುತ್ತಿದ್ದವನು ಕೊಸ್ಸಾಕ್ ಮಾತ್ರ. ಸಾಧಾರಣವಾಗಿ ಆ ಕಲಾಕಾರರು, 'ಜನರ ಹೃದಯಗಳು ಕಠಿನ',—ಅಥ್ವ, ಅಡವಿ ಹಾದಿಯಾಗಿ, ಪುಟ್ಟ ಅಡವಿ ಹಾದಿಯಾಗಿ', ಅಥವಾ ಮೊದಲನೆಯ ಅಲೆಕ್ಸಾಂಡರನ ಮರಣವನ್ನು ಕುರಿತ ಗೀತವಾದ ತನ್ನ ಧೀರ ಪಡೆಗಳನ್ನು ತೂಗಿನೋಡಲೆಂದು ಬಂದ, ಹೇಗೆ ಬಂದ ನಮ್ಮ ಅಲೆ ಕ್ಸಾಂದರ' ಎಂಬುದನ್ನು—ಈ ಬಗೆಯ ಶೋಕಪೂರಿತ ದೀರ್ಘಾಲಾಪನೆಯ ಗೀತಗಳನ್ನು ಹಾಡ ತ್ತಿದ್ದರು.

ಆಗೊಮ್ಮೆ ಈಗೊಮ್ಮೆ, ನಮ್ಮ ಕರ್ಮಾಗಾರದ ಅತ್ಯುತ್ತಮ 'ಮುಖ' ಕಲಾಕಾರನಾದ ಜಿಖರೇವನ ಸಲಹೆಯಂತೆ ಇಗರ್ಜಿಯ ಸಂಗೀತವನ್ನು ಹಾಡಲು ಅವರು ಒಪ್ಪಿಕೊಳ್ಳುತ್ತಿದ್ದರು. ಆದರೆ ಆ ಯತ್ನ ಸಾಮಾನ್ಯವಾಗಿ ಯಶಸ್ವಿಯಾಗುತ್ತಲೇ ಇರಲಿಲ್ಲ. ಜಿಖರೇವ್ ಯಾವಾಗಲೂ ತನಗೊಬ್ಬನಿಗಷ್ಟೇ ಅರ್ಥವಾಗುವಂತಹ ಸ್ವರಜೋಡಣೆಗಳನ್ನು ಬಯಸುತ್ತಿದ್ದ; ಇತರರ ಹಾಡು ಗಾರಿಕೆಯನ್ನು ಟೀಕಿಸುತ್ತಲೇ ಇರುತ್ತಿದ್ದ.

ಅವನು, ಸುಮಾರು ನಾಲ್ವತ್ತೈದು ವರ್ಷ ವಯಸ್ಸಿನ ತೆಳ್ಳಗಿನ ಮನುಷ್ಯ. ಆತನ ಬೊಕ್ಕ ತಲೆಯನ್ನು, ಗಿಪ್ಸಿ ತಲೆಗೂದಲು ಗುಂಗುರು ಗುಂಗುರಾಗಿ ಅರ್ಧಚಂದ್ರಾಕೃತಿಯಲ್ಲಿ ಅಲಂಕರಿ ಸಿತ್ತು. ಮೀಸೆಗಳಂತೆ ದಟ್ಟವಾದ ಕರಿಯ ಹುಬ್ಬುಗಳು ಅವನಿಗಿದ್ದುವು. ವಿದೇಶೀಯವಾಗಿ ಕಾಣಿಸುತ್ತಿದ್ದ, ಸೊಗಸಾದ ರೂಪುರೇಖೆಗಳ, ಕಡುಬಣ್ಣದ ಮುಖಕ್ಕೆ, ದಟ್ಟನಾದ ಚೂಪುಗಡ್ಡ, ಖಂಡಿತವಾಗಿಯೂ ಒಂದು ಅಲಂಕಾರವಾಗಿತ್ತು. ಆದರೆ ಅವನ ಗಿಡುಗ ಮೂಗಿನ ಕೆಳಗೆ ಜೋರಾದ ಮೀಸೆಗಳಿದ್ದುವು. ದಟ್ಟವಾದ ಹುಬ್ಬುಗಳಿರುತ್ತ, ಈ ಮೀಸೆಯೇ ಅನಗತ್ಯ ಎನಿಸು ವಂತಿತ್ತು. ಅವನ ನೀಲಿ ಕಣ್ಣುಗಳು ಏಕರೀತಿಯಾಗಿರಲಿಲ್ಲ. ಎಡಗಣ್ಣು ಬಲಗಣ್ಣಿಗಿಂತ ದೊಡ್ಡದಾಗಿದ್ದುದು ಎದ್ದು ಕಾಣಿಸುತ್ತಿತ್ತು.

ನನ್ನ ಜತೆಗಾರ ವೃತ್ತಿ-ಶಿಷ್ಯನಿಗೆ ಏರುದನಿಯಲ್ಲಿ ಆತ ಕೂಗಿ ಹೇಳಿದ:

"ಪಾಶ್ಕಾ! 'ನಿನ್ನ ನಾಮ ಹಾಡಿ ಹೊಗಳೆ'—ಆರಂಭಿಸು. ಕೇಳಿ, ಬಂಧುಗಳೇ."

ತನ್ನ ಏಪ್ರನಿನ ಮೇಲೆ ಕೈಗಳನ್ನೊರೆಸುತ್ತಾ, ಪಾಶ್ಕಾ ಆರಂಭಿಸಿದ:

"ನಿನ್ನ—ನಾ—ಮ...."

"ಹಾಡಿ—ಹೊ—ಗಳೆ—ಪ್ರಭೂ," ಎಂದು ಹಲವು ಧ್ವನಿಗಳು ಕೇಳಿಸಿದುವು. ಜಿಖರೇವ್ ಉದ್ವೇಗಗೊಂಡು ಕೂಗಾಡಿದ:

"ಸಿತಾನೋವ್! ಸ್ವರ ಕಡಮೆ ಮಾಡು; ನಿನ್ನ ಆತ್ಮದ ತೀರಾ ಆಳಕ್ಕೇ ಧ್ವನೀನ ಇಳಿಸು!"

ಪೀಪಾಯಿಯ ಬುಡವನ್ನು ಬಡೆಯುತ್ತಿರುವನೇನೋ ಎನ್ನುವಂತೆ ಕೇಳಿಸಿದ ಧ್ವನಿಯಲ್ಲಿ, ಸಿತಾನೋವ್ ಗುಡುಗುತ್ತ ಮುಂದುವರಿದ:

"ಪ್ರಭು-ವಿ-ನ ಗುಲಾಮರೂ....."

"ಥೂ, ಹಾಗಲ್ಲ! ಭೂಮಿಯೇ ನಡುಗಿ, ಕಿಟಿಕಿ ಬಾಗಿಲುಗಳೆಲ್ಲ ತಾವಾಗಿಯೇ ತೆರೆದು ಕೊಳ್ಳೋ ಹಾಗೆ, ನೀವು ಮಾಡ್ತಿದ್ದೀರಾ!"

ಅರ್ಥವಾಗದಂತಹ ಕ್ಷೋಭೆಯಿಂದ ಜಿಖರೇವನ ಶರೀರವೆಲ್ಲ ಕಿವುಚಿಕೊಂಡಿತು. ಅವನ ಅದ್ಭುತ ಹುಬ್ಬುಗಳು ಏರಿಳಿಯುತ್ತ ಹೋದುವು. ಧ್ವನಿ ಒಡೆಯಿತು. ಬೆರಳುಗಳು ಅಗೋಚರ ತಂತಿಗಳನ್ನು ಮಿಾಟಿದುವು.

ಅವನು ಅರ್ಥಪೂರ್ಣವಾಗಿ ಕೇಳಿದ:

"ಪ್ರಭುವಿನ ಗುಲಾಮರು—ಕಾಣಿಸೋದಿಲ್ವೆ ನಿಮಗೆ? ಚಿಪ್ಪನ್ನು ನೇರವಾಗಿ ದಾಟಿ ಅದರ ತಿರುಳನ್ನೇ ನೀವು ಮುಟ್ಟಬೇಕು. ಗುಲಾಮರೇ, ನಿನ್ನ ನಾಮ ಹಾಡಿ ಹೊಗಳೆ! ಇದರ ಅನುಭವ ನಿಮಗಾಗೋದಿಲ್ವೆ ಸದ್ಗೃಹಸ್ಥರೇ?"

ಸಿತಾನೋವ್ ಜಾಣತನದಿಂದ ನುಡಿದ:

"ಆ ಅಂಶ ನಮ್ಮಿಂದ ಸರಿಯಾಗಿ ಆಗೋದೇ ಇಲ್ಲ, ನೋಡು."

"ಸರಿ ಹಾಗಾದರೆ, ಬಿಟ್ಟುಬಿಡಿ."

ಸ್ವಲ್ಪ ಮಟ್ಟಿಗೆ ನೊಂದುಕೊಂಡು, ಜಿಖರೇವ್ ತನ್ನ ಕೆಲಸದಲ್ಲಿ ಮತ್ತೆ ಉದ್ಯುಕ್ತನಾಗು ತ್ತಿದ್ದ. ಆತ ನಮ್ಮ ಅತ್ಯುತ್ಕೃಷ್ಟ ಕಲಾಕಾರನಾಗಿದ್ದ. ಬೈಜಾಂಟಿನ್ ಫ್ರಿಯಾಜಿಸ್ಕಿ ರೀತಿ ಗಳಲ್ಲಿ, ಅಥವಾ ಇಟಲಿಯ ಪರಂಪರೆಯಲ್ಲಿ, ಮುಖಕ್ಕೆ ಬಣ್ಣ ಹಾಕಲು ಆತ ಶಕ್ತನಾಗಿದ್ದ. ವೇದಿಕೆಯ ಪರದೆಗಾಗಿ ಪ್ರತಿಮೆಗಳನ್ನು ಮಾಡಿಕೊಡಲು ಲಾರಿಯೋನಿಚ್ ಒಪ್ಪಿಕೊಂಡಾಗಲೆಲ್ಲ, ಮೂಲಕೃತಿಗಳ ವಿಷಯದಲ್ಲಿ ಪರಿಣತನಾದ ಜಿಖರೇವನ ಅಭಿಪ್ರಾಯವನ್ನು ಪಡೆಯುತ್ತಿದ್ದ. ಫೆಯೊದೊರೋವ್, ಸ್ಮೊಲೆನ್ಸ್ಕ್ ಮತ್ತು ಕಜಾನ್ ಕನ್ನಿಕೆಗಳಂತಹ ಬೆಲೆ ಬಾಳುವ ಪವಾಡ ಪ್ರತಿಮೆಗಳೆಲ್ಲ, ಯಾವಾಗಲೂ ಅವನ ಪರೀಕ್ಷೆಗೆ ಒಳಗಾಗುತ್ತಿದ್ದುವು. ಆದರೆ, ಮೂಲಕೃತಿ ಗಳನ್ನು ಅಭ್ಯಸಿಸುತ್ತ ಏರು ದನಿಯಲ್ಲಿ ಅವನು ದೂರಿಕೊಳ್ಳುತ್ತಿದ್ದ!

"ಈ ಮೂಲ ಪ್ರತಿಗಳಿಗೇ ಅವರು ನಮ್ಮನ್ನು ಕಟ್ಟಿಹಾಕಿದಾರೆ—ಇದೀಗ ಅವರು ಮಾಡಿರೋದು—ಕಟ್ಟಿಹಾಕಿಯೇ ಬಿಟ್ಟಿದಾರೆ!"

ಕರ್ಮಾಗಾರದಲ್ಲಿ ಆತ ಮಹತ್ವದ ಸ್ಥಾನದಲ್ಲಿದ್ದರೂ ಕೂಡಾ, ಇತರರಿಗಿಂತ ಹೆಚ್ಚು ವಿನಯ ಶೀಲನಾಗಿದ್ದ; ವೃತ್ತಿ-ಶಿಷ್ಯರಾದ ಪಾವೆಲ್ ಮತ್ತು ನನ್ನ ವಿಷಯದಲ್ಲಿ ಹೆಚ್ಚು ದಯೆ ತೋರುತ್ತಿದ್ದ. ಅಲ್ಲಿ ತನ್ನ ಕಲೆಯನ್ನು ನಮಗೆ ಕಲಿಸಿಕೊಡುವ ಬಯಕೆಯನ್ನು ತೋರಿಸು ತ್ತಿದ್ದವನು ಅವನೊಬ್ಬನೇ.

ಅವನನ್ನು ತಿಳಿದುಕೊಳ್ಳುವುದು ಕಷ್ಟವಾಗಿತ್ತು. ಒಟ್ಟಿನಲ್ಲಿ ಅವನು ಬಹಳ ಹರ್ಷಚಿತ್ತ ನಾದ ಮನುಷ್ಯ. ಕೆಲವೇಳೆ, ಕಿವುಡಮೂಕನಂತೆ ಒಂದು ಮಾತನ್ನೂ ಆಡದೆ, ಒಂದೇ ಉಸಿರಿಗೆ ವಾರವೆಲ್ಲಾ ದುಡಿಯುತ್ತಿದ್ದ. ನಮ್ಮನ್ನೆಲ್ಲ ಮೊದಲಬಾರಿಗೆ ಕಾಣುತ್ತಿರುವನೇನೋ ಎಂಬಂತೆ, ಪ್ರತಿಯೊಬ್ಬರ ಕಡೆಗೂ ಆತ, ಅಚ್ಚರಿಗೊಂಡ ದೂರದ ನೋಟದಿಂದ ನೋಡುತ್ತಿದ್ದ. ಹಾಡು ಗಾರಿಕೆ ಅವನಿಗೆ ಬಹಳ ಇಷ್ಟವಾಗಿದ್ದರೂ, ಅಂತಹ ವೇಳೆಗಳಲ್ಲಿ ಅವನು ಮೌನವಾಗಿರುತ್ತಿದ್ದ. ಬೇರೆಯವರ ಮಾತುಕೂಡಾ ಅವನಿಗೆ ಕೇಳಿಸುತ್ತಿರಲಿಲ್ಲವೇನೋ ಎನಿಸುತ್ತಿತ್ತು. ಎಲ್ಲರೂ ಅವ

ನೆಡೆಗೆ ನೋಡುತ್ತಲಿರುತ್ತಿದ್ದರು; ಅವನ ಬೆನ್ನ ಹಿಂದೆ ಕಣ್ಣು ಮಿಟಕಿಸುತ್ತಿದ್ದರು. ಇಳಿಜಾರಾಗಿದ್ದ ಪ್ರತಿಮೆ ಹಲಗೆಯ ಮೇಲೆ ಬಾಗಿ ಅವನು ಅಲ್ಲಿ ಕುಳಿತುಕೊಳ್ಳುತ್ತಿದ್ದ. ಹಲಗೆಯ ಒಂದು ಅಂಚು ಅವನ ಮೊಣಕಾಲುಗಳ ಮೇಲಿರುತ್ತಿತ್ತು; ಇನ್ನೊಂದು ಮೇಜಿನ ಬದಿಗೆ ಒರಗಿರುತ್ತಿತ್ತು. ಅವನ ಸೊಗಸಾದ ಬ್ರಷ್ಷು, ಅವನಷ್ಟೇ ಕಡುಬಣ್ಣದ್ದೂ ಪರಕೀಯವೂ ಆದ ಮುಖದ ರೂಪು ರೇಖೆಗಳನ್ನು, ಪರಿಶ್ರಮದಿಂದ ಬಿಡಿಸುತ್ತಿತ್ತು.

ಒಮ್ಮಿಂದೊಮ್ಮೆಲೆ, ಬಲು ನಿರ್ದಿಷ್ಟವಾಗಿ, ನೊಂದಧ್ವನಿಯಲ್ಲಿ ಅವನೆನ್ನುತ್ತಿದ್ದ:

"ಪ್ರೆದ್‌ಟೆಚಾ—ಏನು ಇದರ ಅರ್ಥ? ಹಳೆಯ ಸ್ಲಾವೋನಿಕ್ ಭಾಷೆಯಲ್ಲಿ, 'ಟೆಚ್' ಅಂದರೆ 'ಹೋಗುವುದು'; 'ಪ್ರೆದ್' ಅಂದರೆ 'ಮುಂಚಿತವಾಗಿ.' ಹಾಗಾದ್ರೆ 'ಪ್ರೆದ್‌ಟೆಚಾ' ಅಂದರೆ 'ಮುಂಚಿತವಾಗಿ ಹೋಗುವಾತ' ಅಂತ; 'ಹರಿಕಾರ' ಅಂತ—ಇನ್ನೇನೂ ಅಲ್ಲ."

ನೀರವತೆಯಲ್ಲಿ ಅವನ ವಿಚಿತ್ರ ಪದಗಳು ಧ್ವನಿಮಾಡುತ್ತಿದ್ದಂತೆ, ಪ್ರತಿಯೊಬ್ಬರೂ ಮೌನ ವಾಗಿ ಹಲ್ಲುಕಿಸಿಯುತ್ತಿದ್ದರು; ಅವನತ್ತ ಕಳ್ಳನೋಟಗಳನ್ನು ಬೀರುತ್ತಿದ್ದರು.

"ಕುರಿತೊಗಲಲ್ಲಿ ಇವನನ್ನು ಚಿತ್ರಿಸಬಾರದು; ಬದಲು, ರೆಕ್ಕೆಗಳಿರಬೇಕು....."

ಯಾವನಾದರೂ ಧೈರ್ಯತಳೆದು ಕೇಳುತ್ತಿದ್ದ:

"ನೀನು—ಮಾತಾಡ್ತಿರೋದು—ಯಾರ ಜತೆಗೊ ?"

ಪ್ರಶ್ನೆ ಕೇಳಿಸದೆಯೋ, ಅಥವಾ ಉತ್ತರ ಅನಗತ್ಯವೆಂದೋ, ಅವನು ಮರುನುಡಿಯು ತ್ತಿರಲಿಲ್ಲ. ಬಳಿಕ ಮತ್ತೊಮ್ಮೆ, ನಿರೀಕ್ಷೆಯಿಂದ ತುಂಬಿದ ನೀರವತೆಯನ್ನಿರಿದು, ಅವನ ಪದಗಳು ಬೀಳತೊಡಗುತ್ತಿದ್ದುವು :

"ಇವರ ಜೀವನಗಳನ್ನು ನಾವು ತಿಳಿದಿರೋದು ಅಗತ್ಯ. ಯಾರಿಗೆ ಗೊತ್ತಿವೆ, ಆ ಪವಿತ್ರ ಗ್ರಂಥಗಳನ್ನು ಯಾರು ಓದಿದ್ದಾರೆ? ನಾವೇನು ಬಲ್ಲೆವು ? ಹೇಗೋ ಜೀವಿಸ್ತಿದ್ದೇವೆ—ರೆಕ್ಕೆಗಳಿಲ್ಲ ದೆಯೇ....ಆತ್ಮ ಎಲ್ಲಿದೆ?—ಎಲ್ಲಿದೆ ಆತ್ಮ? ನಾನಿದನ್ನೇ ನಿಮ್ಮನ್ನು ಕೇಳ್ತಿರೋದು! ಮೂಲ ಪ್ರತಿಗಳು ನಮ್ಮಲ್ಲಿವೆ—ಅದು ನಿಜ. ಆದರೆ ಹೃದಯವಿಲ್ಲ."

ಗಟ್ಟಿಯಾಗಿ ಆಡಲಾದ ಈ ಮಾತುಗಳನ್ನು ಕೇಳಿ, ಸಿತಾನೋವನ ಹೊರತಾಗಿ ಉಳಿದೆಲ್ಲರ ತುಟಿಗಳ ಮೇಲೂ ಮುಗುಳುನಗೆ ಮೂಡಿತು. ಸಾಧಾರಣವಾಗಿ ಇಂತಹ ಸಂದರ್ಭಗಳಲ್ಲಿ, ಯಾವನಾದರೊಬ್ಬ ಯಾವಾಗಲೂ; ಪರಿಹಾಸ್ಯದ ಧ್ವನಿಯಲ್ಲಿ ಅನ್ನುತ್ತಿದ್ದ:

"ಶನಿವಾರ ಇವನು ವಿನೋದದ ಕೇಳಿಗೆ ಹೊರಡ್ತಾನೆ."

ಎತ್ತರದ ಬಲಿಷ್ಠ ಸ್ನಾಯುಗಳ ಸಿತಾನೋವ್, ಇನ್ನೂ ಮೊಳೆಯದ ಗಡ್ಡ—ಹುಬ್ಬುಗಳು ಕೂಡಾ ಇಲ್ಲದ - ಇಪ್ಪತ್ತೆರಡರ ದುಂಡು ಮುಖದ ಯುವಕ, ವ್ಯಥೆಯಿಂದಲೂ ಗಂಭೀರನಾಗಿಯೂ ಆ ಮೂಲೆಯತ್ತ ದಿಟ್ಟಿಸುತ್ತಿದ್ದ.

ಒಮ್ಮೆ ಜಿಖರೇವ್ ನಡೆದುಕೊಂಡರೀತಿ ನನಗೆ ನೆನಪಿದೆ. ಫೆಯೋದೋರ್ ಕನ್ನಿಕೆಯ ಸಿದ್ಧಪ್ರತಿಯನ್ನು ಮೇಜಿನ ಮೇಲೇರಿಸುತ್ತ, ಗಟ್ಟಿಯಾದ ಉದ್ವಿಗ್ನಗೊಂಡ ಧ್ವನಿಯಲ್ಲಿ ಅವನು ಘೋಷಿಸಿದ:

"ಧನ್ಯಮಾತೆಯೇ, ಜನರ ಹೃದಯಗಳು ಹಿಂಡಿ ಕಂಬನಿ ಹರಿದು ಬೀಳುವಂಥ ತಳವಿಲ್ಲದ ದಿವ್ಯಪಾತ್ರೆಯೇ, ಮುಗಿಸಿದೆ...."

ಬಳಿಕ, ಯಾರದೋ ಒಂದು ಕೋಟನ್ನು ತನ್ನ ಭುಜಗಳ ಮೇಲೆ ಏರಿಸಿ, ಆತ ಹೊರ ಹೋದ—ಪಾನಮಂದಿರಕ್ಕೆ. ಯುವಕರು ನಕ್ಕರು, ಶಿಳ್ಳು ಹೊಡೆದರು. ವಯಸ್ಸಾದವರು ಅಸೂಯೆಯಿಂದ ನಿಟ್ಟುಸಿರು ಬಿಟ್ಟರು. ಆದರೆ ಸಿತಾನೋವ್, ಪ್ರತಿಮೆಯ ಬಳಿ ಸಾಗಿ, ಆಸಕ್ತಿಯಿಂದ ಅದನ್ನು ಈಕ್ಷಿಸಿ, ಅಂದ:

"ಮತ್ತೇರುವಷ್ಟು ಅವನು ಖಂಡಿತವಾಗಿಯೂ ಕುಡೀತಾನೆ. ಈ ಚಿತ್ರದಿಂದ ಅಗಲ ಬೇಕಾದ ನೋವಿಂದಾಗಿ ಅವನು ಹಾಗೆ ಕುಡೀತಾನೆ. ಎಲ್ಲರಿಗೂ ಇದು ಅರ್ಥವಾಗದು."

ಜಿಖರೇವನ ವಿನೋದಕೇಳಿಗಳು ಯಾವಾಗಲೂ ಶನಿವಾರ ಆರಂಭವಾಗುತ್ತಿದ್ದುವು. ಅವು ಕುಡಿತದ ಚಟವಿದ್ದ ದುಡಿಮೆಗಾರನ ಸಾಮಾನ್ಯ ಅತಿರೇಕಗಳಾಗಿರಲಿಲ್ಲ. ಅವು ಈ ರೀತಿಯಾಗಿ ಆರಂಭವಾಗುತ್ತಿದ್ದುವು: ಬೆಳಗ್ಗೆ ಒಂದು ಚೀಟಿ ಬರೆದು, ಪಾವೆಲ್‌ನೊಡನೆ ಅದನ್ನು ಕೊಟ್ಟು ಕಳುಹುತ್ತಿದ್ದ. ಬಳಿಕ ಊಟದವೇಳೆಗೆ ತುಸುಮುಂಚೆ, ಲಾರಿಯೊನಿಶ್‌ಗೆ ಅವನೆನ್ನುತ್ತಿದ್ದ:

"ಈ ದಿನ ನಾನು ಸ್ನಾನಗೃಹಕ್ಕೆ ಹೋಗ್ತೀನಿ."

"ಬಹಳ ದಿವಸ ಹಿಡಿಯುತ್ತೊ?"

"ಅದು, ಈಗ—"

"ಮಂಗಳವಾರಕ್ಕಿಂತ ಹೆಚ್ಚು ತಡಮಾಡ್ಬೇಡ!"

ಕಣ್ಣ ಹುಬ್ಬುಗಳು ಕುಣಿಯುತ್ತಿದ್ದಂತೆ, ತನ್ನ ಬೋಳು ತಲೆಯನ್ನು ಜಿಖರೇವ್ ತೂಗುತ್ತಿದ್ದ.

ಸ್ನಾನಗೃಹದಿಂದ ಹಿಂತಿರುಗಿದ ಬಳಿಕ, ಶೋಕೀವಾಲನಂತೆ ಅವನು ಉಡುಪು ಧರಿಸುತ್ತಿದ್ದ. ಅಂಗಿಯ ಮುಂಭಾಗದ ಉಡುಗೆಯನ್ನೂ ಕೊರಳ ಅರಿವೆಯನ್ನೂ ತೊಟ್ಟು, ತನ್ನ ರೇಶಿಮೆಯ ಒಳ ಅಂಗಿಗೆ ನೀಳವಾದ ಬೆಳ್ಳಿಯ ಸರಪಳಿಯನ್ನು ಸಿಕ್ಕಿಸುತ್ತಿದ್ದ. ಬಳಿಕ, ಪಾವೆಲನಿಗೂ ನನಗೂ ಕಟ್ಟುನಿಟ್ಟಿನ ನಿರ್ದೇಶವಿತ್ತು, ಹೊರಬೀಳುತ್ತಿದ್ದ.

"ಇವತ್ತು ಸಂಜೆ ಕರ್ಮಾಗಾರವನ್ನು ಹೆಚ್ಚು ಪರಿಶ್ರಮಪಟ್ಟು ಸ್ವಚ್ಛಮಾಡಿ. ಆ ನೀಳ ಮೇಜನ್ನು ತೊಳೆದು ನಯಗೊಳಿಸಿ."

ಒಮ್ಮಿಂದೊಮ್ಮೆಲೆ, ರಜಾದಿನದ ಸಂಭ್ರಮ ಎಲ್ಲರನ್ನೂ ಆವರಿಸಿತು. ಕಲಾಕಾರರು ತಮ್ಮ ಮೇಜುಗಳನ್ನು ಸರಿಯಾದ ಸ್ಥಾನಗಳಲ್ಲಿರಿಸಿದರು. ಸ್ನಾನಗೃಹಕ್ಕೆ ಓಡಿದರು. ಅವಸರವಾಗಿ ಊಟಮಾಡಿದರು. ಊಟದ ಬಳಿಕ ಜಿಖರೇವ್, ಬೀರ್, ವೈನು ಹಾಗೂ ತಿನಿಸಿನೊಡನೆ ಬಂದ. ಅವನ ಹಿಂದಿನಿಂದ, ಅತಿ ದೊಡ್ಡ ಪ್ರಮಾಣದ ಅಳತೆಗಳ ಹೆಂಗಸೊಬ್ಬಳು ಬಂದಳು. ನೋಟಕ್ಕೆ, ಈಕೆ ತಿಕ್ಕಲು ಸೃಷ್ಟಿಯೇ ಸರಿ—ಎನ್ನುವಂತಿದ್ದಳು. ಆಕೆಯ ಎತ್ತರ: ಆರಡಿ, ಐದಂಗುಲ. ಅವಳೆದುರು ನಮ್ಮ ಕುರ್ಚಿ ಸ್ಟೂಲುಗಳೆಲ್ಲ ಆಟಿಗೆಗಳಂತೆ ಕಂಡುವು. ಹೋಲಿಕೆಯಲ್ಲಿ, ಎತ್ತರದ ಸಿತಾನೋವ್ ಕೂಡಾ ಬರೇ ಮಗುವಿನಂತೆ ತೋರಿದ. ಅವಳು ದೃಢಕಾಯಳಾಗಿದ್ದಳು. ಆದರೆ ವಕ್ಷಸ್ಥಳ, ಅವಳ ಗಲ್ಲದವರೆಗೂ ಮೇಲಕ್ಕೆ ಎತ್ತಿಕೊಂಡಿತ್ತು. ಅವಳ ಚಲನವಲನಗಳೆಲ್ಲ ನಯನಾಜೂಕಿಲ್ಲದೆ ನಿಧಾನವಾಗಿದ್ದುವು. ವಯಸ್ಸು ನಾಲ್ವತ್ತು ದಾಟಿದ್ದರೂ, ದುಂಡಗಿನ, ನಿರ್ವಿಕಾರವಾದ, ಕುದುರೆಗಿರುವಂತಹ ದೊಡ್ಡ ಕಣ್ಣುಗಳಿದ್ದ ಮುಖ, ಇನ್ನೂ ಹೊಸತನ

ವನ್ನುಳಿಸಿಕೊಂಡು ನಯವಾಗಿತ್ತು. ಪುಟ್ಟಬಾಯಿ, ಅಗ್ಗದ ಬೊಂಬೆಯಲ್ಲಿರುವಂತೆ, ಬಣ್ಣದಿಂದ ಬಿಡಿಸಿದಂತಿತ್ತು. ಅವಳು ಮುಗುಳುನಗುತ್ತ, ಅಗಲವಾದ ಬೆಚ್ಚಗಿನ ಅಂಗೈಯನ್ನು ಪ್ರತಿಯೊಬ್ಬರೆಡೆಗೂ ಚಾಚುತ್ತ, ಅನಗತ್ಯ ಮಾತುಗಳನ್ನು ಆಡಿದಳು:

"ಹೇಗಿದೀಯಾ? ಇವತ್ತು ಚಳಿ. ಎಂಥ ವಾಸನೆ ನಿಮ್ಮ ಕೊಠಡಿಯಲ್ಲಿ! ಬಣ್ಣಗಳದಿರಬೇಕು. ಹೇಗಿದೀಯಾ?"

ವಿಶಾಲವಾಗಿ ಹರಿಯುವ ನದಿಯ ಹಾಗೆ ಬಲಿಷ್ಠಳೂ ಶಾಂತಳೂ ಆಗಿದ್ದ ಅವಳೆಡೆಗೆ ನೋಡಲು ಹಿತವೆನಿಸುತ್ತಿತ್ತು. ಆದರೆ ಮಾತನಾಡಿದಾಗ ಮಾತ್ರ, ನೀರಸವೂ ಅನಗತ್ಯವೂ ಆದ ಮಾತುಗಳನ್ನೇ ಯಾವಾಗಲೂ ಆಡುತ್ತ, ಅವಳು ಬೇಸರ ಹುಟ್ಟಿಸುತ್ತಿದ್ದಳು. ಯಾವುದಾದರೂ ಪದವನ್ನು ಉಚ್ಚರಿಸುವುದಕ್ಕೆ ಮುಂಚೆ, ನೀಲಿಗೆಂಪು ಕೆನ್ನೆಗಳನ್ನು ಉಬ್ಬಿಸಿಕೊಂಡು, ಅವನ್ನು ಮತ್ತಷ್ಟು ದುಂಡವಾಗಿ ಮಾಡುತ್ತಿದ್ದಳು. ಕಿರಿಯರೆಲ್ಲ ಕುಲುಕುಲು ನಗುತ್ತ ಪರಸ್ಪರ ಪಿಸು ನುಡಿಯುತ್ತಿದ್ದರು:

"ಆ್ಹ, ಎಂಥ ಹೆಂಗಸು!"

"ಒಳ್ಳೇ ಇಗರ್ಜಿ ಗೋಪುರದ ಹಾಗಿದಾಳೆ!"

ತುಟಿಗಳನ್ನು ಬಿಗಿದುಕೊಂಡು, ಕೈಗಳನ್ನು ವಕ್ಷಸ್ಥಲದ ಕೆಳಗೆ ಕಟ್ಟಿಕೊಂಡು, ಚಹಾ ಪಾತ್ರೆಯ ಹಿಂಬದಿಯಲ್ಲಿದ್ದ ಮೇಜಿನ ಬಳಿ ಅವಳು ಕುಳಿತಳು. ಸುಸ್ವಭಾವದ ಕುದುರೆ ಕಣ್ಣುಗಳಿಂದ ಒಬ್ಬೊಬ್ಬರನ್ನಾಗಿ ಎಲ್ಲರನ್ನೂ ನೋಡಿದಳು.

ಎಲ್ಲರೂ ಅವಳೊಡನೆ ಗೌರವಭಾವದಿಂದ ವರ್ತಿಸುತ್ತಿದ್ದರು. ಕಿರಿಯರಂತೂ ಅವಳ ಬಗೆಗೆ ಭಯಭೀತಿಯಿಂದಲೇ ಇರುತ್ತಿದ್ದರು. ಯಾವನಾದರೂ ಹುಡುಗ ಅತಿಗಾತ್ರದ ಆ ದೇಹದೆಡೆಗೆ ಅತ್ಯಾಶೆಯಿಂದ ದಿಟ್ಟಿಸುತ್ತಿದ್ದ. ಆದರೆ, ಅವನ ಕಣ್ಣುಗಳೇನಾದರೂ ಅವಳ ಸರ್ವಗ್ರಾಹಕ ದೃಷ್ಟಿಯನ್ನು ಸಂಧಿಸಿದುವೆಂದರೆ, ಅವನು ನಾಚಿಕೊಂಡು ತಲೆತಗ್ಗಿಸುತ್ತಿದ್ದ. ಜಿಖರೇವ್ ಕೂಡಾ ಅವಳೊಡನೆ ಆದರದಿಂದಲೇ ವರ್ತಿಸುತ್ತಿದ್ದ. ಔಪಚಾರಿಕವಾದ ಸಂಬೋಧನಾ ಕ್ರಮದಂತೆ 'ನೆರೆಯವಳೇ' ಎಂದು ಕರೆಯುತ್ತ, ಮೇಜಿನಿಂದ ಏನನ್ನಾದರೂ ಅವಳಿಗೆ ತಾನು ಕೊಟ್ಟಾಗ ಬಾಗಿನಮಿಸುತ್ತಿದ್ದ.

ಅವಳು ಮಧುರವಾದ ರೀತಿಯಲ್ಲಿ ರಾಗವೆಳೆಯುತ್ತಿದ್ದಳು:

"ಛ್ಹ, ತೊಂದರೆ ಪಟ್ಕೋಬೇಡ. ನಿಜವಾಗಿಯೂ ಎಷ್ಟೊಂದು ತೊಂದರೆ ಪಟ್ಕೋತೀಯಾ ನೀನು!"

ಸ್ವತಃ ಆಕೆ ಎಂದೂ ಅವಸರದಲ್ಲಿದ್ದಂತೆ ಕಾಣಲಿಲ್ಲ. ಮೊಣಗಂಟುಗಳನ್ನು ತನ್ನ ಬದಿಗಳಿಗೆ ಬಲವಾಗಿ ಒತ್ತಿಕೊಂಡು ಅವಳು ಕುಳಿತಿದ್ದುದರಿಂದ, ಅವಳ ತೋಳುಗಳು ಆ ಗಂಟುಗಳ ಕೆಳಗಷ್ಟೇ ಚಲಿಸುತ್ತಿದ್ದುವು. ಅವಳ ಹಿರಿಯ ಶರೀರದಿಂದ, ಹೊಸದಾಗಿ ಬೇಯಿಸಿದ ಬ್ರೆಡ್ಡಿನ ಮಾದಕವಾಸನೆ ಹೊರಡುತ್ತಿತ್ತು.

ಮುದುಕ ಗೊಗೊಲೀವ್ ಆನಂದೋದ್ವೇಗದಿಂದ ತೊದಲುತ್ತ, ಅವಳೆದುರು ಆಕೆಯ ಬಗೆಗೆ ಕೊನೆ ಇಲ್ಲದ ಪ್ರಶಂಸೆಯನ್ನು ನಡೆಸಿದ. ಅದನ್ನೆಲ್ಲ ಅವಳು, ಆತ ಪ್ರಾರ್ಥನೆ ಸಲ್ಲಿಸುತ್ತಿರುವ ಧರ್ಮಗುರುವೇನೋ ಎನ್ನುವಂತೆ, ತನ್ನ ತಲೆಯನ್ನು ಭಕ್ತಿಪೂರ್ವಕವಾಗಿ ತುಸು ವಾಲಿಸಿ

ಕೇಳುತ್ತಿದ್ದಳು. ಗೊಗೊಲೀವ್ ತನ್ನ ಪದಗಳ ಗೊಂದಲದಲ್ಲಿ ತಾನೇ ಸಿಲುಕಿಕೊಂಡಾಗಲೆಲ್ಲ, ಆಕೆಯೂ ತನ್ನ ಪಾಲಿನ ಮಾತುಗಳನ್ನು ಆಡುತ್ತಿದ್ದಳು:

"ಚಿಕ್ಕವಳಿದ್ದಾಗ ನಾನೇನೂ ಸ್ಫುರದ್ರೂಪಿಣಿಯಾಗಿರಲಿಲ್ಲ. ಅದೆಲ್ಲಾ ವೈವಾಹಿಕ ಜೀವನದ ಅನುಭವದಿಂದ ಬಂತು. ಮೂವತ್ತು ವರ್ಷ ವಯಸ್ಸಾಗೋ ಹೊತ್ತಿಗೆ ನಾನು ಬಹಳ ಆಕರ್ಷಕ ಹೆಣ್ಣಾಗಿದ್ದೆ. ಸುಶಿಕ್ಷಿತ ಸದ್ಗೃಹಸ್ಥರೂ ನನ್ನನ್ನು ನೋಡೋಕೆ ಶುರುಮಾಡಿದರು. ಒಬ್ಬ ಜಮೀನ್ದಾರ ಶ್ರೀಮಂತ, ನನಗೊಂದು ಕೋಚ್‌ಗಾಡಿಯನ್ನೂ ಜೋಡಿ...."

ಇಷ್ಟು ಹೊತ್ತಿಗಾಗಲೇ ಮತ್ತೇರಿದ್ದ, ತಲೆಗೂದಲು ಅಸ್ತವ್ಯಸ್ತವಾಗಿದ್ದ ಕಾಪೆಂಡಿಯೂಖಿನ್, ಅವಳತ್ತ ವಿರೋಧಭಾವದ ನೋಟವೆಸದು, ಒರಟಾಗಿ ಅಂದ:

"ಕೋಚ್‌ಗಾಡಿ ಮತ್ತು ಜೋಡಿ....ಯಾವುದಕ್ಕೆ ಬದಲಾಗಿ ?"

"ಸಹಜವಾಗಿಯೇ ನನ್ನ ಪ್ರೇಮಕ್ಕೆ ಬದಲಾಗಿ," ಎಂದು ಅತಿಥಿ ವಿವರಿಸಿದಳು.

ಸ್ವಲ್ಪಮಟ್ಟಿಗೆ ತಲ್ಲಣಗೊಂಡು ಕಾಪೆಂಡಿಯೂಖಿನ್ ಹುಂಕರಿಸಿದ:

"ಪ್ರೇಮ....ಏನು ಪ್ರೇಮ ಅಂದರೆ ?"

"ಪ್ರೇಮದ ವಿಷಯವೆಲ್ಲವೂ ನಿನ್ನಂಥ ಸ್ಫುರದ್ರೂಪಿಗೆ ಗೊತ್ತಿರಲೇ ಬೇಕು," ಎಂದು ಅವಳು ಸರಳವಾಗಿ ಉತ್ತರವಿತ್ತಳು.

ಕರ್ಮಾಗಾರ ನಗೆಯಿಂದ ಓಲಾಡಿತು. ಸಿತಾನೋವ್, ಕಾಪೆಂಡಿಯೂಖಿನನೊಡನೆ ತೊದಲಿದ.

"ಅವಳು ಮೂರ್ಖಳು—ಅಥವಾ ಅದಕ್ಕಿಂತಲೂ ನಿಕೃಷ್ಟ. ಅವಳಂಥ ಹೆಂಗಸಿನಲ್ಲಿ ಅನುರಕ್ತನಾಗೋದಕ್ಕೆ ಬಹಳ ನೋವುಣ್ಣಬೇಕಾದೀತು. ಅದು ಸ್ಪಷ್ಟ."

ವೈನಿನಿಂದಾಗಿ ಅವನ ಮುಖವಾಗಲೇ ಬಿಳುಚಿಕೊಂಡಿತ್ತು; ಕಿರುಕೆನ್ನೆಗಳ ಮೇಲೆ ಬೆವರು ಮಣಿಕಟ್ಟಿತ್ತು; ಆ ಚತುರ ಕಣ್ಣುಗಳಲ್ಲಿ ಎಚ್ಚರಿಕೆಯ ಬೆಂಕಿಗಳನ್ನು ಜ್ವಲಿಸಿತ್ತು. ಮುದುಕ ಗೊಗೊಲೀವ್ ತನ್ನ ಕುರೂಪ ಮೂಗನ್ನು ಅತ್ತಿಂದಿತ್ತ ಇತ್ತಿಂದತ್ತ ತೂಗಾಡಿಸುತ್ತ, ಮಬ್ಬು ಕವಿದ ಕಣ್ಣುಗಳನ್ನು ಬೆರಳುಗಳಿಂದ ಒರೆಸುತ್ತ, ಕೇಳಿದ:

"ಎಷ್ಟು ಕೂಸುಗಳನ್ನು ಹೆತ್ತಿದೀಯಾ ನೀನು ?"

"ಒಂದೇ ಒಂದು."

ಒಂದು ದೀಪ ಮೇಜಿನ ಮೇಲೂ ಇನ್ನೊಂದು ಒಲೆಯಾಚೆಗಿನ ಮೂಲೆಯಲ್ಲೂ ತೂಗಾಡುತ್ತಿದ್ದುವು. ಅವುಗಳ ಅಲ್ಪಪ್ರಕಾಶದಿಂದಾಗಿ, ಕರ್ಮಾಗಾರದ ಮೂಲೆಗಳು ದಟ್ಟವಾದ ನೆರಳುಗಳಿಂದ ತುಂಬಿದ್ದುವು. ಅವುಗಳಿಂದ ಮುಖವಿಲ್ಲದ ಆಕೃತಿಗಳು ಇಣಿಕಿ ನೋಡುತ್ತಿದ್ದುವು. ಕೈಗಳೂ ಮುಖಗಳೂ ಇರಬೇಕಾದ ಕಡೆ ಕಾಣಿಸುತ್ತಿದ್ದ ಬರಿದಾದ ಬೂದುಕಲೆಗಳು, ಐಹಿಕವಲ್ಲದ ಕಲ್ಪನೆಗಳಿಗೆ ಎಡೆಮಾಡಿಕೊಡುತ್ತಿದ್ದುವು. ಈ ಮಂದ ಬೆಳಕಿನ ಕೊಠಡಿಗಳಲ್ಲಿ ಬಣ್ಣ ಬಳಿದ ಪೋಷಾಕುಗಳನ್ನು ಬಿಟ್ಟು ಸಂತರ ಶರೀರಗಳು ರಹಸ್ಯಮಯ ರೀತಿಯಲ್ಲಿ ಓಡಿಹೋಗಿದ್ದುವೆಂದು, ಎಂದಿಗಿಂತ ಹೆಚ್ಚಾಗಿ ಈಗ ಅನ್ನಿಸಿತು. ಗಾಜಿನ ಚೆಂಡುಗಳನ್ನು ಮೇಲಕ್ಕೆತ್ತಿ ಛಾವಣಿಗೆ ತಗಲಿಸಿದ್ದರು. ಅಲ್ಲಿ, ಧೂಮದ ಮೋಡಗಳ ಮಧ್ಯೆ, ನೀಲಿ ವರ್ಣದಿಂದ ಅವು ಹೊಳೆದುವು.

ಜಿಖರೇವ್ ಅವಿಶ್ರಾಂತನಾಗಿ ಮೇಜಿನ ಸುತ್ತಲೂ ಅತ್ತಿತ್ತ ನಡೆಯುತ್ತಿದ್ದ. ಎಲ್ಲರ

ಆತಿಥ್ಯದ ಹೊಣೆಯನ್ನೂ ಅವನೇ ಹೊತ್ತಿದ್ದ. ಅವನ ಬೋಳು ತಲೆಬುರುಡೆ, ಒಮ್ಮೆ ಒಬ್ಬನೆಡೆಗೂ ಮತ್ತೊಮ್ಮೆ ಇನ್ನೊಬ್ಬನೆಡೆಗೂ ವಾಲಿರುತ್ತಿತ್ತು; ಅವನ ಸೊರಗಿದ ಬೆರಳುಗಳು ಎಡೆಬಿಡದೆ ಚಲಿಸುತ್ತಿದ್ದುವು. ಅವನು ಹೆಚ್ಚು ಕೃಶನಾಗಿದ್ದ. ಅವನ ಗಿಡುಗ ಮೂಗು ಮತ್ತಷ್ಟು ತೀಕ್ಷ್ಣವಾಗಿತ್ತು. ಬೆಳಕಿನೆದುರು ನಿಂತಾಗ, ಆ ಮೂಗಿನ ನೀಳವಾದ ಕರಿಯ ನೆರಳು ಕೆನ್ನೆಗೆ ಅಡ್ಡವಾಗಿ ಬೀಳುತ್ತಿತ್ತು.

ತನ್ನ ಪ್ರತಿಧ್ವನಿಸುವ ಸ್ವರದಲ್ಲಿ ಅವನೆಂದ:

"ಕಂಠಪೂರ್ತಿಯಾಗಿ ತಿನ್ನಿರಿ, ಕುಡಿಯಿರಿ, ಸ್ನೇಹಿತರೇ."

ಹೆಂಗಸು, ಆ ವ್ಯವಸ್ಥೆಯ ಒಡತಿಯೇ ತಾನೆಂಬಂತೆ, ಜಪಿಸಿದಳು:

"ಛೆ, ನನ್ನ ನೆರೆಯವನೇ, ನೀನು ಯಾಕೆ ತೊಂದರೆ ಪಟ್ಕೋಬೇಕು? ಪ್ರತಿಯೊಬ್ಬನಿಗೂ ತನ್ನದೇ ಆದ ತೋಳುಗಳಿವೆ; ತನ್ನದೇ ಸ್ವಂತದ ನಾಲಿಗೆರುಚಿಯಿದೆ. ಇಷ್ಟವಿರೋದಕ್ಕಿಂತ ಹೆಚ್ಚು ತಿನ್ನೋದು ಯಾರಿಂದಲೂ ಸಾಧ್ಯವಾಗದು."

ಜಿಖರೇವ್ ಉದ್ವಿಗ್ನಗೊಂಡು ಕೂಗಿ ಹೇಳಿದ:

"ಸಂತೋಷಪಡಿ, ಬಂಧುಗಳೇ; ನಾವೆಲ್ಲ ಪ್ರಭುವಿನ ಗುಲಾಮರು, ಸ್ನೇಹಿತರೇ; ನಾವೆಲ್ಲ 'ನಿನ್ನ ನಾಮವ ಹಾಡಿ ಹೊಗಳೆ' ಗೀತವನ್ನು ಹಾಡೋಣ."

ಹಾಡುಗಾರಿಕೆ ಅಯಶಸ್ವಿಯಾಯಿತು. ಆ ಹೊತ್ತಿಗಾಗಲೇ ಎಲ್ಲರೂ ಆಹಾರದಿಂದಲೂ ವೋಡ್ಕಾದಿಂದಲೂ ಮೆತ್ತಗಾಗಿಬಿಟ್ಟಿದ್ದರು. ಕಾಪೆಂಡಿಯೂಖಿನ್ ಒಂದು ಸ್ವರಪೆಟ್ಟಿಗೆಯನ್ನೆತ್ತಿಕೊಂಡಿದ್ದ. ಕಾಗೆಯಷ್ಟೇ ಗಂಭೀರವೂ ಕಪ್ಪಗೂ ಇದ್ದ ಯುವಕ ವಿಕ್ಟರ್ ಸಲಾವ್‌ತಿನ್, ತಂಬೂರಿ ಬಾರಿಸುತ್ತಿದ್ದ. ಅದು, ಅಂಚಿನಲ್ಲಿದ್ದ ತಟ್ಟೆಗಳ ಸಂತಸದ ಕಿಂಕಿಣಿ ನಾದವನ್ನೂ ಜತೆಗೊಂಡು ಆಳವಾದ ಧ್ವನಿ ಹೊರಡಿಸುತ್ತಿತ್ತು.

ಜಿಖರೇವ್ ಆಜ್ಞಾಪಿಸಿದ:

"ಒಂದು ರಷ್ಯನ್ ನೃತ್ಯ!.....ನೆರೆಯವಳೇ, ದಯೆತೋರಿಸೋಣವಾಗಲಿ!"

ಆ ಹೆಂಗಸು ಏಳುತ್ತ ನಿಟ್ಟುಸಿರುಬಿಟ್ಟಳು:

"ಛೆ, ನನ್ನ....! ನೀನು ಎಷ್ಟೊಂದು ತೊಂದರೆಪಟ್ಕೋತೀಯಪ್ಪಾ!"

ಅವಳ್ನ ಕೊಠಡಿಯ ಮಧ್ಯಕ್ಕೆ ಸಾಗಿ, ಕಾವಲಿನ ಗೋಪುರದಷ್ಟೇ ಭದ್ರವಾಗಿ ಅಲ್ಲಿ ನಿಂತಳು. ಅಗಲವಾದ ಬಾದಾಮಿ ಬಣ್ಣದ ಲಂಗವನ್ನೂ ಹಳದಿ ಬಣ್ಣದ ತೆಳು ಅರಿವೆಯ ಸೊಂಟದ ಪಟ್ಟಿಯನ್ನೂ ಆಕೆ ತೊಟ್ಟಿದ್ದಳು. ಅವಳ ತಲೆಯನ್ನು ಕೆಂಪು ಕರವಸ್ತ್ರವೊಂದು ಆವರಿಸಿತ್ತು.

ಸ್ವರಪೆಟ್ಟಿಗೆಯಿಂದ ಲವಲವಿಕೆಯ ಧ್ವನಿಯೊಂದು ಹೊರಟಿತು. ಅದರ ಪುಟ್ಟ ಘಂಟೆಗಳು ಕಿಂಕಿಣಿ ಸದ್ದು ಮಾಡಿದುವು. ತಂಬೂರಿ, ಭಾರವಾದ ಮಂದವಾದ ಅಲೆಗಳನ್ನು ಹೊರಡಿಸಿತು. ಇದು ಕೇಳಲು ಹಿತಕರವಾಗಿರಲಿಲ್ಲ. ಯಾವನೋ ಹುಚ್ಚನೊಬ್ಬ ಬಿಕ್ಕಿಬಿಕ್ಕಿ ಅಳುತ್ತಿದ್ದಂತೆ, ನಿಟ್ಟುಸಿರು ಬಿಡುತ್ತಿದ್ದಂತೆ, ತನ್ನ ತಲೆಯನ್ನು ಗೋಡೆಗೆ ಒಡೆಯುತ್ತಿದ್ದಂತೆ ಅನಿಸಿತು.

ಜಿಖರೇವ್‌ಗೆ ಹೇಗೆ ನರ್ತಿಸಬೇಕೆಂಬುದು ಗೊತ್ತಿರಲಿಲ್ಲ. ಸುಮ್ಮನೆ ಆತ, ಹೊಳೆಯುತ್ತಿದ್ದ ತನ್ನ ಬೂಟುಗಳ ಹಿಂಗಾಲುಗಳಿಂದ ತಟ್ಟುತ್ತಲೋ, ರಾಗಕ್ಕೆ ತಪ್ಪಿ ಪುಟ್ಟಪುಟ್ಟ ಆಡಿನ ನೆಗೆತಗಳನ್ನು ಮಾಡುತ್ತಲೋ, ತನ್ನ ಪಾದಗಳನ್ನು ಚಲಿಸುತ್ತಿದ್ದ. ಪಾದಗಳು ಅವನವಲ್ಲವೇನೋ

ಎನ್ನುವಂತಿದ್ದುವು. ತನ್ನ ಶರೀರವನ್ನು ಆತ, ಜೇಡನ ಬಲೆಗೆ ಬಿದ್ದ ನೊಣದ ಹಾಗೆ ಅಥವಾ ಬಲೆಗೆ ಬಿದ್ದ ಮೀನಿನ ಹಾಗೆ ಮುರುಟುತ್ತಿದ್ದ. ಅದು ನೋಡಲು ಸಂಕಟವೆನಿಸುವಂತಹ ದೃಶ್ಯವಾಗಿತ್ತು. ಆದರೆ ಪ್ರತಿಯೊಬ್ಬರೂ ಕುಡಿದು ಮತ್ತರಾಗಿದ್ದವರು ಕೂಡಾ—ಅವನ ಕಿವುಚಾಟಗಳನ್ನು ಆಸಕ್ತಿಯಿಂದ ದಿಟ್ಟಿಸುತ್ತಿದ್ದರು; ಅವರ ಕಣ್ಣುಗಳು ಆತನ ಮುಖಕ್ಕೂ ಕೈಗಳಿಗೂ ಅಂಟಿಕೊಂಡಿದ್ದುವು. ಜಿಖರೇವನ ಮುಖಭಾವ ಅಚ್ಚರಿಗೊಳಿಸುವ ರೀತಿಯಲ್ಲಿ ಬದಲಾಗುತ್ತಿತ್ತು. ಒಮ್ಮೆ ಮೃದುವಾಗಿ ಸಂಕೋಚದಿಂದ ತುಂಬಿತು. ಮತ್ತೊಮ್ಮೆ ಹೆಮ್ಮೆಯಿಂದ ಬೀಗಿತು. ಬಳಿಕ, ಕಠಿನ ರೀತಿಯಲ್ಲಿ ಹುಬ್ಬುಗಂಟಿಕ್ಕಿತು. ಇದ್ದಕ್ಕಿದ್ದಂತೆ, ಯಾವುದರಿಂದಲೋ ಆತ ಅಪ್ರತಿಭನಾಗುತ್ತಿದ್ದ. ಅದರಿಂದ ಆತ, ಕಣ್ಣುಗಳನ್ನು ಮುಚ್ಚಿಕೊಂಡು ಆರ್ತಧ್ವನಿ ಮಾಡುವಂತಾಗುತ್ತಿತ್ತು. ಕಣ್ಣುಗಳನ್ನು ಪುನಃ ತೆರೆದಾಗ, ವ್ಯಥೆಯ ಉದ್ವೇಗದಿಂದ ಸೋತ ಹಾಗೆ ಕಾಣಿಸುತ್ತಿದ್ದ. ತನ್ನ ಮುಷ್ಟಿಗಳನ್ನು ಬಿಗಿ ಹಿಡಿದು ಆ ಹೆಂಗಸಿನೆಡೆಗೆ ತೆವಳುತ್ತಿದ್ದ. ಬಳಿಕ ಒಮ್ಮೆಲೆ ತನ್ನ ಪಾದದಿಂದ ನೆಲವನ್ನು ಗಟ್ಟಿಯಾಗಿ ತುಳಿದು, ತನ್ನ ತೋಳುಗಳನ್ನು ಅಗಲವಾಗಿ ಚಾಚಿಕೊಂಡು, ಉದ್ವೇಗತುಂಬಿದ ಮಂದಹಾಸ ಸೂಸುತ್ತಿದ್ದಂತೆ ಹುಬ್ಬುಗಳನ್ನೇರಿಸುತ್ತ ಅವಳೆದುರು ಮಂಡಿಯೂರುತ್ತಿದ್ದ. ಅವಳು ಕೆಳಮೊಗವಾಗಿ ಅವನನ್ನು ನೋಡುತ್ತಿದ್ದಳು; ಸಲಿಗೆಯ ಉತ್ತೇಜನ ಸೂಚಿಸುತ್ತ, ಮುಗುಳುನಗುತ್ತಿದ್ದಳು; ಮತ್ತು ತನ್ನ ಶಾಂತವಾದ ರೀತಿಯಲ್ಲಿ ಅವನನ್ನು ಎಚ್ಚರಿಸುತ್ತಿದ್ದಳು.

"ನೀನು ಸುಸ್ತಾಗಿ ಹೋಗ್ತೀಯಾ, ನೆರೆಯವನೇ!"

ಲಾವಣ್ಯಯುಕ್ತವಾಗಿ ತನ್ನ ಕಣ್ಣುಗಳನ್ನು ಮುಚ್ಚಲು ಅವಳು ಯತ್ನಿಸಿದಳು. ಆದರೆ, ಮೂರು ಕೊಪೆಕ್ ನಾಣ್ಯದ ಆಕೃತಿಯ ಆ ದೊಡ್ಡ ಕಣ್ಣುಗಳು, ಮುಚ್ಚಿಕೊಳ್ಳಲು ನಿರಾಕರಿಸಿದುವು. ತತ್ಪರಿಣಾಮವಾಗಿ ಉಂಟಾದ ನೆರಿಗೆಗಳು ಮಾತ್ರ, ಅವಳ ಮುಖವನ್ನು ಮತ್ತಷ್ಟು ಅಸಹ್ಯಗೊಳಿಸಿದುವು.

ಅವಳ ನರ್ತನವೂ ಅಷ್ಟಕ್ಕಷ್ಟೇ ಇತ್ತು. ತನ್ನ ದೊಡ್ಡ ದೇಹವನ್ನು ಬಹಳ ನಿಧಾನವಾಗಿಯಷ್ಟೇ ಓಲಾಡಿಸಲು, ಸ್ಥಳದಿಂದ ಸ್ಥಳಕ್ಕೆ ಸದ್ದಿಲ್ಲದೆ ಅದನ್ನು ಚಲಿಸಲು, ಅವಳು ಶಕ್ತಳಾಗಿದ್ದಳು. ಅವಳ ಎಡಗೈಯಲ್ಲೊಂದು ಕರವಸ್ತ್ರವಿತ್ತು. ಅದನ್ನು ಆಕೆ ನಿರುತ್ಸಾಹದಿಂದ ಬೀಸುತ್ತಿದ್ದಳು. ಅವಳ ಬಲಗೈ ಟೊಂಕದ ಮೇಲಿರುತ್ತಿತ್ತು. ಇದರಿಂದಾಗಿ, ಭಾರಿ ಪ್ರಮಾಣದ ಕೂಜೆಯಂತೆ ಅವಳು ಕಾಣುತ್ತಿದ್ದಳು.

ಈ ಪ್ರತಿಮೆಯನ್ನು ಸುತ್ತುಸುತ್ತು ಬರುತ್ತಿದ್ದಂತೆ, ಜಿಖರೇವನ ಮುಖದ ಮೇಲೆ ಪರಸ್ಪರ ವಿರೋಧಭಾವಗಳು ಸುಳಿದುಹೋಗುತ್ತಿದ್ದುವು. ಅಲ್ಲಿ ನರ್ತಿಸುತ್ತಿದ್ದುದು ಅವನೊಬ್ಬನೇ ಅಲ್ಲ, ನರ್ತಿಸುತ್ತಿದ್ದವರು ಬೇರೆಬೇರೆಯಾದ ಹತ್ತು ಜನ—ಎಂದು ನೋಡುವವರಿಗೆ ಭಾಸವಾಗುತ್ತಿತ್ತು. ಒಬ್ಬ ಸಂಕೋಚಪ್ರವೃತ್ತಿಯ ವಿನಯಶೀಲ; ಇನ್ನೊಬ್ಬ ಉಗುರುಗಳನ್ನು ಮುಂದಕ್ಕೆ ಚಾಚಿ ಬೆದರಿಸುವಾತ; ಮೂರನೆಯವನು ಸ್ವತಃ ಭೀತನಾಗಿ, ಆ ದೈತ್ಯಾಕಾರದ ಅಸಹ್ಯ ಸ್ತ್ರೀಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತ, ಸಣ್ಣ ಪುಟ್ಟದಾಗಿ ಚೀರಾಡುತ್ತಿದ್ದ ಮನುಷ್ಯ. ಇದ್ದಕ್ಕಿದ್ದಂತೆ ಇನ್ನೊಬ್ಬ ಕಾಣಿಸಿಕೊಂಡ—ಹಲ್ಲುಗಳನ್ನು ತೋರ್ಪಡಿಸುತ್ತ, ಗಾಯಗೊಂಡ ನಾಯಿಯಂತೆ ದೇಹವನ್ನು ತಿರುವುತ್ತ, ಇದ್ದಾತ. ಈ ಕುರೂಪ ನೃತ್ಯ ಕಾಣುತ್ತ ನನ್ನ ಮನಸ್ಸು ಕುಗ್ಗಿ

ಹೋಯಿತು; ಸೈನಿಕರ, ಅಡುಗೆಯವರ, ಅಗಸಗಿತ್ತಿಯರ ಮತ್ತು ನಾಯಿಗಳ ಬೇಟದ ಕೆಟ್ಟ ನೆನಪುಗಳನ್ನು ಅದು ಕೆರಳಿಸಿತು

ಸಿದೊರೋವನ ಶಾಂತವಾದ ಪದಗಳು ನೆನಪಿಗೆ ಬಂದುವು :

"ಅಂಥ ವಿಷಯಗಳ ಬಗ್ಗೆ ಪ್ರತಿಯೊಬ್ಬರೂ ಸುಳ್ಳಾಡ್ತಾರೆ. ನಿಜವಾದ ಪ್ರೇಮವನ್ನು ಯಾರೂ ತೋರಿಸ್ತಿಲ್ಲಾಂತ ಅವರಿಗೆಲ್ಲಾ ನಾಚಿಕೆಯಾಗಿದೆ. ಅವರು ಇದನ್ನು ಮಾಡ್ತಿರೋದು ಬರೇ ತಮಾಷೆಗೆ."

'ಅಂಥ ವಿಷಯಗಳ ಬಗ್ಗೆ ಪ್ರತಿಯೊಬ್ಬರೂ ಸುಳ್ಳಾಡ್ತಾರೆ' ಎಂಬುದನ್ನು ನಂಬಲು ನಾನು ಸಿದ್ಧನಿರಲಿಲ್ಲ. ಮಾರ್ಗೊರ್ಟ್‌ರಾಣಿ ಸುಳ್ಳಾಡಿದಳೆ ? ಜಿಖರೇವನಂತೂ ಖಂಡಿತವಾಗಿಯೂ ಸುಳ್ಳಾಡುವವನಲ್ಲ. ಬೀದಿಗೆ ಬಿದ್ದ ಹೆಂಗಸೊಬ್ಬಳನ್ನು ಸಿತಾನೋವ್ ಪ್ರೀತಿಸುತ್ತಿದ್ದನೆಂಬುದು ನನಗೆ ಗೊತ್ತಿತ್ತು. ಲಜ್ಜೆ ಹುಟ್ಟಿಸುವಂತಹ ಕಾಹಿಲೆಯನ್ನು ಅವನಿಗೆ ಆಕೆ ಅಂಟಿಸಿದ್ದಳು. ಇದಕ್ಕಾಗಿ ಅವಳನ್ನು ಹೊಡೆಯಬೇಕೆಂದು ಅವನ ಸಂಗಾತಿಗಳು ಸಲಹೆಮಾಡಿದ್ದರು. ಆದರೆ, ಅವನು ಹಾಗೆ ಮಾಡಿರಲಿಲ್ಲ. ಬದಲು, ಅವಳಿಗೋಸ್ಕರ ಒಂದು ಕೊಠಡಿಯನ್ನು ಬಾಡಿಗೆಗೆ ಹಿಡಿದು, ಅವಳ ಚಿಕಿತ್ಸೆಗೆ ಏರ್ಪಾಟು ಮಾಡಿದ್ದ. ಅವಳ ಬಗೆಗೆ ಯಾವಾಗಲೂ ವಿಶೇಷ ಮೃದುತನದಿಂದಲೂ ಅತಿಯಾದ ವಿನಯದಿಂದಲೂ ಮಾತನಾಡುತ್ತಿದ್ದ.

ಆ ದೊಡ್ಡ ಹೆಂಗಸು, ಮುಖದ ಮೇಲಿದ ಅಚ್ಚೊತ್ತಿದಂತಹ ಮುಗುಳುನಗೆಯೊಡನೆ, ಕೈಯಲ್ಲಿನ ಕರವಸ್ತ್ರವನ್ನು ಆಡಿಸುತ್ತಾ, ಅಲ್ಲಿ ಓಲಾಡುತ್ತಲೇ ಇದ್ದಳು. ಆಕೆಯ ಸುತ್ತಲೂ ಜಿಖರೇವ್ ಇನ್ನೂ ಕಿವುಚಿಕೊಳ್ಳುತ್ತ ಕುಣಿದಾಡುತ್ತಿದ್ದ. ಅವರನ್ನು ನೋಡುತ್ತಲಿದ್ದಂತೆ ನಾನು ಯೋಚಿಸಿದೆ : ಸ್ವತಃ ದೇವರನ್ನೇ ವಂಚಿಸಿದ ಈವಳು ಪ್ರಾಯಶಃ ಈ ಕುದುರೆಯನ್ನು ಹೋಲುತ್ತಿದ್ದಿರಬಹುದೆ ?—ಅವಳನ್ನು ನಾನು ದ್ವೇಷಿಸತೊಡಗಿದೆ.

ಮುಖಗಳಿಲ್ಲದ ಪ್ರತಿಮೆಗಳು, ಕಪ್ಪು ಗೋಡೆಗಳಿಂದ ಕೆಳಕ್ಕೆ ನೆಟ್ಟ ದೃಷ್ಟಿಯಿಂದ ನೋಡಿದುವು. ಕರಿದು ಇರುಳು ಹೊರಗಿನಿಂದ ಕಿಟಕಿಯ ಗಾಜುಗಳನ್ನು ಒತ್ತಿತು. ಧೂಮ ತುಂಬಿದ ಕರ್ಮಾಗಾರದಲ್ಲಿ ದೀಪಗಳು ಮಂದವಾಗಿ ಉರಿದುವು. ಕೈ ತೊಳೆಯುವ ತಾಮ್ರದ ಬೇಸಿನಿನಿಂದ ಕೊಳೆ ನೀರಿನ ಬಕೀಟಿಗೆ ನೀರು ವೇಗವಾಗಿ ತೊಟ್ಟಿಕ್ಕುತ್ತಿದ್ದ ಸದ್ದು, ಪಾದಗಳ ತುಳಿತವನ್ನೂ ಸ್ವರಗಳ ಗುಂಯಾರವವನ್ನೂ ಮೀರಿಸಿ ನನಗೆ ಕೇಳಿಸುತ್ತಿತ್ತು.

ಪುಸ್ತಕಗಳಲ್ಲಿ ಚಿತ್ರಿತವಾಗಿದ್ದ ಜೀವನಕ್ಕಿಂತ ಎಷ್ಟೊಂದು ಭಿನ್ನವಾಗಿತ್ತು ಇದು ! ಭೀತಿಕಾರಕವೆನಿಸುವಷ್ಟು ಭಿನ್ನ !....ಬೇಗನೆ ಎಲ್ಲರಿಗೂ ಬೇಸರ ಬಂದಿತು. ಕಾಪೆಂಡಿಯೂಖಿನ್ ಸ್ವರಪೆಟ್ಟಿಗೆಯನ್ನು ಸಲಾವ್‌ತಿನನ ಕೈಗೆ ತಳ್ಳಿ ಕೂಗಿ ನುಡಿದ :

"ಬನ್ನಿ, ಹಲಗೆಗಳು ಹೊಗೆಯಾಡೋ ಹಾಗೆ ಮಾಡೋಣ !"

ವಾಂಕಾ ಸಿಗನೋಕನ ಹಾಗೆ, ಗಾಳಿಯಲ್ಲಿ ಹಾರಿಹೋಗುತ್ತಿರುವನೇನೋ ಎನ್ನುವಂತೆ, ಅವನು ನರ್ತಿಸಿದ. ಬಳಿಕ ಪಾವೆಲ್ ಒಡಿನ್‌ತ್ಸೋವನೂ ಸೊರೊಕಿನನೂ ಚುರುಕುಪಾದಗಳಿಂದ ಶೀಘ್ರಗತಿಯ ಕೆಲನರ್ತನಗಳನ್ನು ಮಾಡಿದರು. ಕ್ಷಯಪೀಡಿತ ಡಾವಿಡೋವ್ ಕೂಡಾ, ಕೆಮ್ಮಿಕೊಂಡು, ನೆಲದಮೇಲೆ ನರ್ತಿಸುತ್ತ ತೆವಳಿದ. ಧೂಳಿನಿಂದಾಗಿಯೂ ಧೂಮದಿಂದಾಗಿಯೂ ವೋಡ್ಕಾದ ಹಾಗೂ ಬೇಯಿಸಿ ದಾಸ್ತಾನು ಮಾಡಿದ ಹಂದಿಮಾಂಸದ ತೀಕ್ಷ್ಣವಾಸನೆಯಿಂದಾ

ಗಿಯೂ ಕೆಮ್ಮು ಅನಿವಾರ್ಯವಾಗಿತ್ತು. ಆ ಹಂದಿ ಮಾಂಸವಂತೂ ಯಾವಾಗಲೂ ಹದ ಗೊಳಿಸಿದ ತೊಗಲಿನ ನೆನಪನ್ನುಂಟುಮಾಡುತ್ತಿತ್ತು.

ನರ್ತಿಸುತ್ತ, ಹಾಡುತ್ತ, ಬೊಬ್ಬಿಡುತ್ತ ಅವರು ಮುಂದುವರಿದರು. ವಿನೋದದಿಂದ ಕಾಲ ಕಳೆಯುತ್ತಿರುವೆವೆಂಬ ಅಂಶವನ್ನು ಪ್ರಯತ್ನಪೂರ್ವಕವಾಗಿ ಅವರು ಸಿದ್ಧಪಡಿಸಿ ತೋರಿಸು ತ್ತಿದ್ದಂತೆ ಚುರುಕುತನದ ಹಾಗೂ ಸಹನೆಯ ಪರೀಕ್ಷೆಗೆ ಪ್ರತಿಯೊಬ್ಬರನ್ನೂ ಅವರು ಒಳಗುಮಾಡು ತ್ತಿದ್ದಂತೆ, ಅನಿಸುತ್ತಿತ್ತು.

ಈಗಾಗಲೇ ಮತ್ತೇರಿದ್ದ ಸಿತಾನೋವ್, ಒಬ್ಬನಿಂದ ಇನ್ನೊಬ್ಬನೆಡೆಗೆ ಹೋಗುತ್ತ, ಉದ್ವೇಗ ತುಂಬಿದ ಧ್ವನಿಯಲ್ಲಿ ಕೇಳುತ್ತಿದ್ದ :

"ಆ ರೀತಿಯ ಹೆಂಗಸನ್ನು ಅವನು ಪ್ರೀತಿಸೋದಾದರೂ ಹೇಗೆ ಶಕ್ಯ ? ಹ್ಞ ?"

ಲಾರಿಯೊನಿಶ್ ತನ್ನ ಬಡಕಲು ಭುಜಗಳನ್ನು ಕುಲುಕಿ ಉತ್ತರವಿತ್ತ :

"ಬೇರೆ ಎಷ್ಟೋ ಹೆಂಗಸರಿಗಿಂತ ಇವಳೇನೂ ಹೀನಳಲ್ಲ. ನಿನಗೇನದರಿಂದ ?"

ಆದರೆ ಬೇಗನೆ, ಅವರ ಮಾತುಕತೆಗೆ ವಸ್ತುವಾದ ಗಂಡು-ಹೆಣ್ಣು ಮಾಯವಾದುವು.

ವ್ಯಥೆ ತುಂಬಿದ, ಬೂದು-ನೀಲಿಕಣ್ಣುಗಳ ನೋಟವನ್ನು ಕೊಠಡಿಯುದ್ದಕ್ಕೂ ಹರಿಸುತ್ತ, ಸಿತಾನೋವ್ ಕೇಳಿದ :

"ಅವರು ಹೋದರೇನು ?"

ಅವರು ಸಹಜವಾಗಿಯೇ ಹೋಗಿದ್ದರು. ಜಿಖರೇವ್ ಕರ್ಮಾಗಾರಕ್ಕೆ ಹಿಂತಿರುಗುವುದು ಇನ್ನು ಎರಡು ಅಥವಾ ಮೂರು ದಿನಗಳ ಅನಂತರವೇ—ಎಂಬುದು ನನಗೆ ಗೊತ್ತಿತ್ತು. ಈ ಸ್ನಾನಗೃಹ ಸಂದರ್ಶನದ ಬಳಿಕ, ತನ್ನ ಮೂಲೆಯಲ್ಲಿ ಮೌನವಾಗಿ, ಮಹತ್ವದ ವ್ಯಕ್ತಿಯಂತೆ, ಏಕಾಕಿಯಾಗಿದ್ದು ಸುಮಾರು ಎರಡು ವಾರಗಳವರೆಗೆ ದುಡಿಯುತ್ತ ಹೋಗುತ್ತಿದ್ದ.

ಸಿತಾನೋವ್‌ಗೆ ವಯಸ್ಸಾದ ಮುಖವಿತ್ತು. ಏನೇನೂ ಆಕರ್ಷಣೀಯವಾಗಿರಲಿಲ್ಲ. ಆದರೆ ಆ ಮುಖದಲ್ಲಿ, ಸ್ವಚ್ಛವಾದ, ದಯೆತುಂಬಿದ ಕಣ್ಣುಗಳಿದ್ದುವು.

ನನ್ನ ಬಗೆಗೆ ಆತ ಸ್ನೇಹಪರನಾಗಿದ್ದ. ಹೀಗಿದ್ದುದು, ಕವಿತೆಗಳು ತುಂಬಿದ ನನ್ನ ಟಿಪ್ಪಣಿ ಪುಸ್ತಕದ ಉಪಕಾರದಿಂದ. ದೇವರಲ್ಲಿ ಅವನಿಗೆ ನಂಬಿಕೆ ಇರಲಿಲ್ಲ. ಆದರೆ ಇಲ್ಲಿ, ಲಾರಿ ಯೊನಿಶನ ಹೊರತಾಗಿ, ಬೇರೆ ಯಾರು ದೇವರಲ್ಲಿ ನಂಬಿಕೆ ಇಟ್ಟಿದ್ದರು, ದೇವರನ್ನು ಪ್ರೀತಿಸು ತ್ತಿದ್ದರು—ಎಂದು ಹೇಳುವುದು ಕಠಿನವಾಗಿತ್ತು. ಪ್ರತಿಯೊಬ್ಬರೂ ದೇವರ ಬಗೆಗೆ, ಕಾರ್ಮಿಕರು ತಮ್ಮ ಮಾಲಿಕನ ವಿಷಯವಾಗಿ ಮಾತನಾಡುವಂತೆ, ವ್ಯಂಗ್ಯಭಾವದ ಒಗ್ಗರಣೆಯೊಂದಿಗೇ ಮಾತನಾಡುತ್ತಿದ್ದರು. ಆದರೂ, ಮಧ್ಯಾಹ್ನದ ಊಟಕ್ಕೋ ರಾತ್ರಿಯ ಊಟಕ್ಕೋ ಕುಳಿತಾಗ ಲೆಲ್ಲ, ಅವರು ಶಿಲುಬೆಯ ವಂದನೆಮಾಡುತ್ತಿದ್ದರು ; ರಾತ್ರಿಯ ಶಯನಕ್ಕೆ ಮುನ್ನ ತಮ್ಮ ಪ್ರಾರ್ಥನೆಗಳನ್ನು ಹೇಳುತ್ತಿದ್ದರು. ಮತ್ತು ಆದಿತ್ಯವಾರಗಳಲ್ಲಿ ಅವರೆಲ್ಲರೂ ಇಗರ್ಜಿಗೆ ತೆರಳು ತ್ತಿದ್ದರು.

ಸಿತಾನೋವ್ ಮಾತ್ರ ಇದೊಂದನ್ನೂ ಮಾಡುತ್ತಿರಲಿಲ್ಲ. ಹೀಗಾಗಿ, ನಾಸ್ತಿಕನೆಂದು ಅವನನ್ನು ಪರಿಗಣಿಸಲಾಗಿತ್ತು.

"ದೇವರಿಲ್ಲ" ಎಂದು ಆತ, ಒತ್ತಿ ಹೇಳುತ್ತಿದ್ದ.

"ಹಾಗಾದರೆ ಪ್ರತಿಯೊಂದೂ ಹುಟ್ಟಿರೋದು ಎಲ್ಲಿಂದ?"

"ನನಗೆ ಗೊತ್ತಿಲ್ಲ."

ಒಮ್ಮೆ ಅವನೊಡನೆ ನಾನೆಂದೆ:

"ದೇವರು ಇಲ್ಲದೆ ಇರೋದು ಹೇಗೆ ಸಾಧ್ಯ?"

ತನ್ನ ನೀಳವಾದ ತೋಳನ್ನು ತಲೆಯ ಮೇಲಕ್ಕೆ ಚಾಚಿ, ಅವನು ಉತ್ತರವಿತ್ತ:

"ನಿನಗೆ ತಿಳಿಯೋದಿಲ್ಲವೆ?—ದೇವರು ಅಂದರೆ ಎತ್ತರ...."

ಮುಂದೆ ನೆಲದ ಕಡೆಗೆ ಬೊಟ್ಟುಮಾಡಿ ಮುಂದುವರಿಸಿದ:

"ಮನುಷ್ಯ ಅಂದರೆ ಆಳ. ಅಲ್ಲವೇನು? ಆದರೆ, 'ದೇವರು ಮನುಷ್ಯನನ್ನು ತನ್ನ ಸ್ವಂತದ ಪ್ರತಿಬಿಂಬದಲ್ಲೇ ಅಚ್ಚೊತ್ತಿದ' ಅಂತ ಹೇಳಲಾಗಿದೆ. ಗೊಗೊಲೀವನನ್ನು ಮಾಡಿರೋದು ಯಾರ ಪ್ರತಿ ಬಿಂಬದಲ್ಲಿ?"

ಇದು ನನ್ನನ್ನು ಗೊಂದಲಕ್ಕೀಡು ಮಾಡಿತು. ಅಷ್ಟೊಂದು ವಯಸ್ಸಾಗಿದ್ದರೂ, ಕೊಳಕನಾದ ಕುಡುಕ ಗೊಗೊಲೀವ್, ಓನಾನನ ಪಾಪವನ್ನೆ ಮಾಡಿದ್ದ. ಅಜ್ಜಿಯ ತಂಗಿಯನ್ನೂ ನಾನು ನೆನೆಸಿಕೊಂಡೆ. ವ್ಯಾಟ್ಕಾದ ಸೈನಿಕ ಯೆರ್ಮೊಖಿನನ್ನು ನೆನೆಸಿಕೊಂಡೆ. ಇವರಲ್ಲಿ ದೇವರ ಯಾವ ಛಾಯೆಯನ್ನು ಕಾಣುವುದು ಸಾಧ್ಯವಿತ್ತು?

"ಜನರು ಹಂದಿಗಳು," ಎಂದ ಸಿತಾನೋವ್, ಆದರೆ ಅಕ್ಷಣವೇ, ನನ್ನನ್ನು ಸಂತಯಿಸಲು ಯತ್ನಿಸಿದ.

"ಚಿಂತಿಸಬೇಡ, ಮಾಕ್ಸಿಮಿಶ್. ಅವರಲ್ಲಿ ಒಳ್ಳೆಯವರೂ ಇದ್ದಾರೆ—ನಿಜವಾಗಿಯೂ ಇದ್ದಾರೆ."

ಅವನ ಜತೆ ನಾನು, ಯಾವ ಸಂಕೋಚವೂ ಇಲ್ಲದೆ ಇರುತ್ತಿದ್ದೆ. ಯಾವುದೇ ವಿಷಯ ಅವನಿಗೆ ಗೊತ್ತಿರದಿದ್ದಾಗ, ಹಾಗೆಂದು ಮುಚ್ಚುಮರೆ ಇಲ್ಲದೆ ಅವನು ಒಪ್ಪಿಕೊಳ್ಳುತ್ತಿದ್ದ.

"ನನಗೆ ತಿಳೀದು. ಆ ಬಗ್ಗೆ ನಾನು ಯೋಚಿಸಿಲ್ಲ," ಎನ್ನುತ್ತಿದ್ದ.

ಇದೂ ಅಸಾಧಾರಣವಾಗಿತ್ತು. ನಾನು ಸಂಧಿಸಿದ್ದ ಬೇರೆ ಜನರೆಲ್ಲ, ತಮಗೆ ಎಲ್ಲವೂ ತಿಳಿದಿತ್ತೆಂದು ಭಾವಿಸಿದ್ದರು. ವಿಷಯ ಯಾವುದೇ ಇರಲಿ, ವಾದಿಸುತ್ತ ಹೋಗಲು ಹಿಂದು ಮುಂದು ನೋಡುತ್ತಿರಲಿಲ್ಲ.

ಅವನ ಟಿಪ್ಪಣಿ ಪುಸ್ತಕದಲ್ಲಿ, ಸೊಗಸಾದ ಆತ್ಮವನ್ನು ಕಲಕುವ ಗೀತಗಳ ಜತೆ, ಕೆನ್ನೆಗಳು ರಂಗೇರುವಂತೆ ಮಾಡುವ ಅನೇಕ ಸಾಲುಗಳೂ ಇದ್ದುವು. ನನಗಿದು ವಿಚಿತ್ರವೆನಿಸಿತು. ಪುಷ್ಕಿನ್ನನ ಬಗೆಗೆ ಅವನಿಗೆ ನಾನು ಹೇಳಿದಾಗ, ತಾನು ಪ್ರತಿಮಾಡಿಕೊಂಡಿದ್ದ 'ಗಾವ್ರಿಲಿಯಾದಾ'ದತ್ತ ಅವನು ಬೊಟ್ಟುಮಾಡಿದ.

"ಪುಷ್ಕಿನ್? ಅವನ ಬಗ್ಗೆ ಅಷ್ಟೊಂದು ಲಕ್ಷ್ಯಕೊಡಲಾರೆ. ಆದರೆ ಬೆನೆಡಿಕ್ಟೋವ್—ಈತನೇ ಗಮನಿಸಬೇಕಾದ ವ್ಯಕ್ತಿ, ಮಾಕ್ಸಿಮಿಶ್!"

ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಮೃದುವಾಗಿ ಅವನೆನ್ನುತ್ತಿದ್ದ:

ಈ ಸೊಬಗಿನ ಹೆಣ್ಣಿನ
ಅದ್ಭುತ ಎದೆಯನು ನೀನೋಡು....

ಯಾವುದೋ ಕಾರಣಕ್ಕಾಗಿ ಆತ, ಈ ಸಾಲುಗಳನ್ನು ವಿಶೇಷವಾಗಿ ಒತ್ತಿ ಹೇಳುತ್ತಿದ್ದ ಹರ್ಷದ ಹೆಮ್ಮೆಯಿಂದ ಅವುಗಳನ್ನು ಅನ್ನುತ್ತಿದ್ದ:

ಅವಳೆದೆಯಾಳವ ತಿಳಿವುದಕೆಂದು
ಗಿಡುಗನ ಇರಿಯುವ ನಯನಗಳೂ
ಇರಿಯವು ಈ ಸುಡುದ್ವಾರನೂ.

"ತಿಳಿಯಿತೆ ?"

ಅವನನ್ನು ಅಷ್ಟೊಂದು ಹರ್ಷಗೊಳಿಸಿದುದು ನನಗೆ ತಿಳಿಯಲಿಲ್ಲವೆಂದು ಒಪ್ಪಿಕೊಳ್ಳ ನಾನು ನಾಚಿದೆ.

೧೪

ಕರ್ಮಾಗಾರದಲ್ಲಿನ ನನ್ನ ದುಡಿಮೆ ಜಟಿಲವಾದುದೇನೂ ಆಗಿರಲಿಲ್ಲ. ಬೆಳಗ್ಗೆ ಇತ ರೆಲ್ಲರೂ ಏಳುವುದಕ್ಕೆ ಮುನ್ನ, ಕಲಾಕಾರರಿಗೋಸ್ಕರ ಚಹಾದಾನಿಯನ್ನು ಬಿಸಿಮಾಡಬೇಕಾ ತ್ತಿತ್ತು. ಅಡುಗೆಮನೆಯಲ್ಲಿ ಅವರು ಚಹಾಪಾನಮಾಡುತ್ತಿದ್ದಾಗ, ಪಾವೆಲ್ ಮತ್ತು ನಾನು ಕೊಠ ಗಳನ್ನು ಸ್ವಚ್ಛಪಡಿಸುತ್ತಿದ್ದೆವು ; ಬಣ್ಣಗಳನ್ನು ಮಿಶ್ರಗೊಳಿಸಲು ಬೇಕಾದ ಕೋಳಿ ತತ್ತಿಯೊಳಗಿ 'ಹಳದಿ'ಯನ್ನು 'ಬಿಳಿ'ಯಿಂದ ಪ್ರತ್ಯೇಕಿಸುತ್ತಿದ್ದೆವು. ಬಳಿಕ ನಾನು ವ್ಯಾಪಾರದ ಚಪ್ಪರಹಾ ಗೆಂದು ಹೊರಬೀಳುತ್ತಿದ್ದೆ. ಸಂಜೆ ನನಗೆ ಬಣ್ಣಗಳನ್ನು ಮಿಶ್ರಗೊಳಿಸುವ ಹಾಗೂ ಹಿರಿ ಕಲಾಕಾರರ ದುಡಿಮೆಯನ್ನು 'ಈಕ್ಷಿಸುವ' ಕೆಲಸವಿತ್ತು. ಮೊದಮೊದಲು ಅತ್ಯಂತ ಆಸಕ್ತಿಯಿ ನಾನು 'ಈಕ್ಷಿಸು'ತ್ತಿದ್ದೆ. ಆದರೆ ಬೇಗನೆ, ಈ ಜನರಲ್ಲಿ ಹೆಚ್ಚಿನವರು ತಮ್ಮ ಚೂರುಪಾರು ಕೆಲ ಗಳನ್ನು ಇಷ್ಟಪಡುತ್ತಿರಲಿಲ್ಲವೆಂಬುದನ್ನೂ ಅಸಹನೀಯ ಬೇಸರದ ಚಿತ್ರಹಿಂಸೆಯನ್ನು ಅವ ಅನುಭವಿಸುತ್ತಿದ್ದರೆಂಬುದನ್ನೂ ನಾನು ಮನಗಂಡೆ.

ಮಾಡಲು ಹೆಚ್ಚಿನ ಕೆಲಸವಿಲ್ಲದಿದ್ದುದರಿಂದ, ಸಂಜೆಯವೇಳೆಯನ್ನು ನಾನು, ಆ ಕಲ ಕಾರರಿಗೆ, ಹಡಗಿನ ಮೇಲಣ ಜೀವನದ ಬಗೆಗೋ ಅಥವಾ ಪುಸ್ತಕಗಳಲ್ಲಿನ ಕಥೆಗಳನ್ನೊ ಹೇಳುತ್ತ ಕಳೆಯುತ್ತಿದ್ದೆ. ಹೀಗಾಗಿ, ನನಗೆ ಅರಿವಿಲ್ಲದಂತೆಯೇ, ಓದುವವನ ಹಾಗೂ ಕ ಹೇಳುವವನ ವಿಶಿಷ್ಟ ಸ್ಥಾನ ಕರ್ಮಾಗಾರದಲ್ಲಿ ನನಗೆ ದೊರೆಯಿತು.

ನಾನು ನೋಡಿದ್ದಷ್ಟು ಅಥವಾ ತಿಳಿದಿದ್ದಷ್ಟು ಈ ಜನರಲ್ಲಿ ಯಾರಿಗೂ ಗೊತ್ತಿರಲಿ ವೆಂಬುದು ನನಗೆ ಬೇಗನೆ ಮನವರಿಕೆಯಾಯಿತು. ಬಾಲ್ಯದ ಅತ್ಯಂತ ಆರಂಭದ ದಿನಗಳಿಂದ ಅವರಲ್ಲಿ ಹೆಚ್ಚಿನವರು, ತಮ್ಮ ವೃತ್ತಿಯ ಪುಟ್ಟ ಪಂಜರದಲ್ಲಿ ಬಂಧಿತರಾಗಿದ್ದವರು. ಅಲ್ಲಿಂ ಈವರೆಗೂ ಅದೇ ಸ್ಥಳದಲ್ಲಿ ಇದ್ದವರು. ಕರ್ಮಾಗಾರದಲ್ಲಿ ಇದ್ದವರೆಲ್ಲರ ಪೈಕಿ ಜಿಖರೇ ಒಬ್ಬನೇ ಮಾಸ್ಕೋಗೆ ಹೋಗಿದ್ದ. ಆತ ಅದನ್ನು ಕುರಿತು ಯಾವಾಗಲೂ ಹಿರಿತನದಿ ಹುಬ್ಬೇರಿಸಿ ಮಾತನಾಡುತ್ತಿದ್ದ:

"ನೋಡಿ ಕಂಬನಿ ಮಿಡಿದು ತಲೆದೂಗುವಂಥಾದ್ದಲ್ಲ ಮಾಸ್ಕೋನಗರ. ಅಲ್ಲಿ ಕಣ್ಣುಗಳನ್ನು ರೆದೇ ಇರಬೇಕು!"

ಉಳಿದವರಲ್ಲಿ ಯಾರೂ ಶುಯಾವಾಚೆಗೆ ಅಥವಾ ವ್ಲಾದಿಮಿರ್‌ನಾಚೆಗೆ ಹೋದವರಲ್ಲ. ನು ಕಜಾನಿನ ಪ್ರಸ್ತಾಪ ಮಾಡಿದೆನೆಂದರೆ, ಅವರು ಕೇಳುತ್ತಿದ್ದರು:

"ಅಲ್ಲಿ ಬಹಳ ಜನ ರಷ್ಯನರು ಇದಾರೇನು? ಅಲ್ಲಿ ಇಗರ್ಜಿಗಳೂ ಇವೆಯೇನು?"

ಅವರ ಪ್ರಕಾರ, ಪರ್ಮ್ ಅಂದರೆ ಸೈಬೀರಿಯಾ. ಸೈಬೀರಿಯಾ ಉರಾಲ್ ಪರ್ವತಗಳಾಚೆಗೆ ದೆ ಎಂಬುದನ್ನು ನಂಬುವುದು ಅವರಿಂದಾಗುತ್ತಿರಲಿಲ್ಲ.

"ಓ ಅಲ್ಲಿಂದ—ಕ್ಯಾಸ್ಪಿಯನ್ ಸಮುದ್ರದಿಂದ ಬಗೆ ಬಗೆಯ ಉರಾಲ್ ಮೀನುಗಳನ್ನು ವರು ತರೋದಿಲ್ವೇನು? ಅಂದರೆ, ಉರಾಲ್ ಆ ಸಮುದ್ರದ ಮೇಲೆಯೇ ಇದೇಂತಾಯ್ತು!"

ಇಂಗ್ಲೆಂಡು ಸಾಗರದಾಚೆಗೆ ಇದೆಯೆಂದು, ಬೊನಾಪಾರ್ಟನು ಕಾಲುಗಾದ ಜಮಾನ್ದಾರ ುಟುಂಬದಿಂದ ಬಂದವನೆಂದು, ಅವರು ಹೇಳಿದಾಗ ಕೆಲವೇಳೆ, ನನ್ನನ್ನು ಪರಿಹಾಸ್ಯಕ್ಕೆ ಗುರಿಮಾ ಲು ಈ ಜನ ಯತ್ನಿಸುತ್ತಿರಬೇಕೆಂದು ನಾನು ಭಾವಿಸಿದೆ. ಸ್ವತಃ ನನ್ನ ಕಣ್ಣುಗಳಿಂದಲೇ ನಾನು ೋಡಿದ ವಿಷಯಗಳ ಬಗೆಗೆ ಅವರಿಗೆ ಹೇಳಿದಾಗ, ಅದನ್ನವರು ಸಾಧಾರಣವಾಗಿ ನಂಬುತ್ತಲೇ ರಲಿ. ಆದರೆ ಸಿಕ್ಕುಸಿಕ್ಕಾದ ವಸ್ತುವಿನ್ಯಾಸವಿದ್ದ, ರೋಮಾಂಚನ ಉಂಟುಮಾಡುವಂತಹ, ಥೆಗಳನ್ನು ಕೇಳಲು ಅವರು ಇಷ್ಟಪಡುತ್ತಿದ್ದರು. ವಯಸ್ಕರಾದವರಿಗೆ ಕೂಡಾ ಸತ್ಯಕ್ಕಿಂತ ಟ್ಟುಕಥೆಯೇ ಮೆಚ್ಚುಗೆಯಾಗುತ್ತಿತ್ತು. ಕಥೆ ಸತ್ಯಕ್ಕಿಂತ ದೂರವಿದ್ದಷ್ಟೂ, ಸನ್ನಿವೇಶಗಳು ಂಬಲಸಾಧ್ಯವಾದಷ್ಟೂ, ಹೆಚ್ಚು ಆಸಕ್ತಿಯಿಂದ ಅವರು ಆಲಿಸುತ್ತಿದ್ದರು. ಒಟ್ಟಿನಲ್ಲಿ, ವಾಸ್ತವತೆ ಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಅವರೆಲ್ಲರೂ, ವಸ್ತುಸ್ಥಿತಿಯ ಕುರೂಪತೆಯನ್ನೂ ಬಡತನ ನ್ನೂ ತೊಡೆದುಹಾಕಲು ಹಾತೊರೆಯುತ್ತ, ಭವಿಷ್ಯತ್ತಿನೆಡೆಗೆ ಅರಿತುಕೊಳ್ಳುವ ಆಸೆಯ ನೋಟ ಳನ್ನು ಬೀರುತ್ತಿದ್ದರು.

ಇದು ಸತ್ಯ ಹಾಗೂ ಸೃಷ್ಟನೆಯ ನಡುವಣ ವಿರೋಧಾಭಾಸಗಳ ತೀಕ್ಷ್ಣ ಅರಿವು ಆಗಲೇ ದ್ದ ನನ್ನಲ್ಲಿ, ಮತ್ತಷ್ಟು ಹೆಚ್ಚು ಆಶ್ಚರ್ಯವನ್ನುಂಟುಮಾಡಿತು. ಈ ನಿಜವ್ಯಕ್ತಿಗಳೆಲ್ಲ ನನ್ನೆದುರು ದ್ದರು; ಆದರೆ ಪುಸ್ತಕಗಳಲ್ಲಿ, ಅವರಂಥವರು ಯಾರನ್ನೂ ನಾನು ಕಾಣಲಿಲ್ಲ. ಸ್ಮುರೀಗಳು, ಗಿಕೆಲಸಗಾರ ಯಾಕೋವರು, ಅಲೆಕ್ಸಾಂದರರು, ಜಿಖರೇವರು, ನಟಾಲ್ಯಾಳಂತಹ ಸ್ತ್ರೀಯರು ಯಾರೂ ಪುಸ್ತಕಗಳಲ್ಲಿರಲಿಲ್ಲ.

ಡಾವಿಡೋವನ ಟ್ರಂಕಿನಲ್ಲಿ, ಗೊಲಿಟ್ಸಿನ್ಸ್ಕಿಯ ಹಳೆಯದಾಗಿ ಹರಿದಿದ್ದ ಕಥಾಸಂಕಲನ ಂದು, ಬುಲ್ಗಾರಿನನ 'ಐವಾನ್ ವಿಜಿಗಿನ್' ಮತ್ತು ಬ್ಯಾರನ್ ಬ್ರಾಂಬ್ಯೂಸನ ಒಂದು ಸಂಪುಟ ಇವು ಬಿದ್ದುಕೊಂಡಿದ್ದುವು. ಈ ಎಲ್ಲ ಪುಸ್ತಕಗಳನ್ನು ನಾನು ಆ ಕಲಾಕಾರರಿಗೆ ಓದಿ ಹೇಳಿದೆ. ವನ್ನು ಕೇಳಿ ಅವರು ಬಹುವಾಗಿ ಸಂತೋಷಪಟ್ಟರು.

"ಗದ್ದಲ ಜಗಳಗಳನ್ನೆಲ್ಲ ವಾಚನ ಗುಡಿಸಿಬಿಡ್ತದೆ; ಅದು ಒಳ್ಳೆಯದೇ," ಎಂದು ಲಾರಿಯೊ ನ್ ಅಭಿಪ್ರಾಯ ವ್ಯಕ್ತಪಡಿಸಿದ.

ನಾನು ಪುಸ್ತಕಗಳಿಗಾಗಿ ಹುಡುಕತೊಡಗಿದೆ. ಯಾವುದು ದೊರೆತರೂ, ಅದನ್ನು ಆ ನರಿಗೆ ಓದಿ ಹೇಳುತ್ತಿದ್ದೆ. ಅವೆಲ್ಲಾ ಸ್ಮರಣೀಯ ಸಂಜೆಗಳು. ನಡುವಿರುಳಿನ ನೀರವತೆಯಿಂದ

ಕರ್ಮಾಗಾರ ತುಂಬಿರುತ್ತಿತ್ತು. ಗಾಜಿನ ಚೆಂಡುಗಳು ಶೀತಲವಾದ ಬಿಳಿಯ ನಕ್ಷತ್ರಗಳ ತಲೆಯ ಮೇಲ್ಗಡೆ ತೂಗಾಡುತ್ತಿದ್ದುವು. ಅವುಗಳ ಕಿರಣಗಳು, ಮೇಜಿನ ಮೇಲೆ ಬಾಗಿ ಬೋಳಾದ ಅಥವಾ ಕೆದರಿದ ಕೂದಲ ತಲೆಗಳನ್ನು ಬೆಳಗುತ್ತಿದ್ದುವು. ಶಾಂತವಾದ, ವಿಚ ಮಗ್ನವಾದ, ಮುಖಗಳನ್ನು ನಾನು ಕಾಣುತ್ತಿದ್ದೆ. ಕೆಲವೇಳೆ, ಗ್ರಂಥಕರ್ತನನ್ನು ಅಥ ಕಥಾನಾಯಕನನ್ನು ಹೊಗಳಿ ಯಾರಾದರೂ ಒಂದು ಮಾತು ಹೇಳುತ್ತಿದ್ದರು. ಭೀರುಗಳ ಶ್ರದ್ಧೆಯಿಂದ ಆಲಿಸುವ ಈ ಜನರಿಗೂ ಹಗಲು ಹೊತ್ತು ದುಡಿಯುವ ಇದೇ ವ್ಯಕ್ತಿಗಳಿಗೂ ಯಾ ಹೋಲಿಕೆಯೂ ಇರಲಿಲ್ಲ. ಅಂತಹ ಕ್ಷಣಗಳಲ್ಲಿ ಅವರನ್ನು ನಾನು ಬಹಳವಾಗಿ ಪ್ರೀತಿಸುತ್ತಿ ಅವರೂ ನನ್ನೆಡೆಗೆ ಸೆಳೆಯಲ್ಪಡುತ್ತಿದ್ದರು. ನನ್ನದೇ ಆದ ಸ್ಥಾನ ನನಗೆ ದೊರೆತಂತೆ ಅನಿಸಿ

ಒಂದು ದಿನ ಸಿತಾನೋವ್ ಅಂದ:

"ಈ ಪುಸ್ತಕಗಳಿರೋದರಿಂದ ಇದು ವಸಂತ ಕಾಲದ ಹಾಗಿದೆ. ಕಿಟಿಕಿಗಳನ್ನು ತೆರೆ ಮೊದಲನೇ ಸಲ ಹೊಸ ಗಾಳಿಯನ್ನು ಒಳಕ್ಕೆ ಬಿಟ್ಟಾಗ ಅನಿಸೋದಿಲ್ವೆ, ಹಾಗೆ."

ಯಾವುದಾದರೂ ಪುಸ್ತಕ ಭಂಡಾರಕ್ಕೆ ಸದಸ್ಯರಾಗಬೇಕೆಂಬ ವಿಷಯ ನಮಗೆ ಹೊ ಯಲೇ ಇಲ್ಲ. ಅಂತಹ ಸದಸ್ಯತ್ವವಿಲ್ಲದೆ ಪುಸ್ತಕ ದೊರೆಯುವುದು ಕಷ್ಟವಾಗಿತ್ತು. ಭಿಕ್ಷು ಹಾಗೆ ಸಿಕ್ಕಸಿಕ್ಕವರನ್ನೆಲ್ಲ ಕೇಳುವುದರಿಂದಷ್ಟೇ ಪುಸ್ತಕಗಳು ಸಿಗುತ್ತಿದ್ದುವು. ಒಂದುದಿನ ಅ ದಳದ ಮುಖ್ಯಸ್ಥ, ಲೆರ್ಮೊಂಟೋವನ ಒಂದು ಸಂಪುಟವನ್ನು ನನಗೆ ಕೊಟ್ಟ. ನನ್ನ ಪಾ ಈ ಗ್ರಂಥದ ವಾಚನ, ಕಾವ್ಯದ ಸಾಮರ್ಥ್ಯದ ಹಾಗೂ ಮಾನವ ಜೀವಿಗಳ ಮೇಲೆ ಅದು ಬೀರ ಅದ್ಭುತ ಪ್ರಭಾವದ ಸುಸ್ಪಷ್ಟ ಪ್ರದರ್ಶನವಾಗಿತ್ತು.

'ದೈತ್ಯ'ನನ್ನು ಓದತೊಡಗಿದೊಡನೆ ಸಿತಾನೋವ್ ನಡೆದುಕೊಂಡ ರೀತಿ ನನಗೆ ನೆನಪಿ ಮೊದಲು ಪುಸ್ತಕದೊಳಕ್ಕೂ ಬಳಿಕ ನನ್ನ ಮುಖವನ್ನೂ ಅವನು ಇಣಿಕಿ ನೋಡಿದ. ಅನಂತ ಬ್ರಷ್ಶನ್ನು ಕೆಳಗಿರಿಸಿ, ತನ್ನ ನೀಳ ತೋಳುಗಳನ್ನು ಮೊಣಕಾಲುಗಳ ನಡುವೆ ತುರುಕಿ, ಮು ಮೇಲಿನ ಮಂದಹಾಸದೊಡನೆ ಹಿಂದಕ್ಕೂ ಮುಂದಕ್ಕೂ ಓಲಾಡತೊಡಗಿದ. ಅವನ ಆ ಚಲ ಕುರ್ಚಿಯಿಂದ ಕೀರಲು ಧ್ವನಿ ಹೊರಡುತ್ತಿತ್ತು.

ಲಾರಿಯೊನಿಚ್ ತಾನೂ ಕೆಲಸನಿಲ್ಲಿಸಿ, ನಾನು ಓದುತ್ತ ಕುಳಿತಿದ್ದ ಸಿತಾನೋವನ ಮೇ ಬಳಿಗೆ ಬಂದು, ಅಂದ:

"ಸೋದರರೇ, ಶ್!"

ಆ ಕವಿತೆ, ತೀಕ್ಷ್ಣವಾದ ಅಮಿತಾನಂದವನ್ನು ನನ್ನಲ್ಲಿ ತುಂಬಿತು: ನನ್ನ ಧ್ವನಿ ಕಡಿಯಿ ನನ್ನ ಕಣ್ಣುಗಳಲ್ಲಿ ಒಸರಿದ ಕಂಬನಿಯಿಂದಾಗಿ ಸಾಲುಗಳನ್ನು ಕಾಣುವುದೇ ಕಷ್ಟವಾಯಿ ಆದರೆ ಅದಕ್ಕಿಂತಲೂ ಹೆಚ್ಚಾಗಿ, ಕೊಠಡಿಯೊಳಗೆ ಪ್ರಯತ್ನಪೂರ್ವಕವಾಗಿ ಸ್ಥಾಪಿಸಲಾಗಿ ನೀರವತೆಯಿಂದ, ಎಚ್ಚರಿಕೆಯ ಚಲನವಲನದಿಂದ, ಹೆಚ್ಚಿನ ಆನಂದೋದ್ವೇಗ ನನಗುಂಟಾಯಿ ಪ್ರಬಲ ಲೋಹಚುಂಬಕ ಶಕ್ತಿಯೊಂದು ಈ ಜನರನ್ನು ನನ್ನೆಡೆಗೆ ಎಳೆಯುತ್ತಿದ್ದಂತೆ, ಸುತ್ತಲಿನ ಎಲ್ಲವೂ ಏರಿಳಿಯುತ್ತ ತುಂಬುತ್ತಿದ್ದ ಹಾಗೆ ನನಗೆ ಭಾಸವಾಯಿತು. ಮೊದಲನೆ ಭಾಗವನ್ನು ನಾನು ಮುಗಿಸಿದಾಗ, ಹೆಚ್ಚುಕಡಮೆ ಎಲ್ಲಾ ಕಲಾಕಾರರೂ ಆ ಮೇಜಿಗೆ ಸಮಿ ವಾಗಿ, ಮುಗುಳುನಗುತ್ತ ಹುಬ್ಬುಗಂಟಿಕ್ಕುತ್ತ, ಒಬ್ಬರು ಇನ್ನೊಬ್ಬರ ಭುಜಗಳ ಮೇಲೆ ತೊ

ಗಳನ್ನು ಚಾಚಿ, ಒತ್ತಿಕೊಂಡು ನಿಂತಿದ್ದರು.

ನನ್ನ ತಲೆಯನ್ನು ಪುಸ್ತಕದೊಳಕ್ಕೆ ತಳ್ಳಿ ಜಿಖರೇವನೆಂದ :

"ಮುಂದಕ್ಕೆ ಓದು, ಮುಂದಕ್ಕೆ ಓದು."

ನಾನು ಮುಗಿಸಿದಾಗ ಆ ಪುಸ್ತಕವನ್ನು ಆತ ಎತ್ತಿಕೊಂಡ; ಅದರ ಶೀರ್ಷಿಕೆಯನ್ನೋದಿದ: ಅದನ್ನು ಕಂಕುಳಡಿಗೆ ತಳ್ಳಿ ಅಂದ:

"ನೀನಿದನ್ನು ಇನ್ನೊಮ್ಮೆ ಓದ್ಬೇಕಾಗುತ್ತೆ. ನಾಳೆ ದಿವಸ. ಈ ಪುಸ್ತಕವನ್ನು ನಾನು ಜೋಪಾನವಾಗಿಟ್ಟಿರ್ತೀನಿ."

ಆತ ನಡೆದುಹೋದ; ತನ್ನ ಮೇಜಿನ ಡ್ರಾಯರಿನಲ್ಲಿ ಲೆರ್ಮೊಂಟೋವನನ್ನಿರಿಸಿ ಕೀಲಿ ಹಾಕಿದ; ಪುನಃ ತನ್ನ ಕೆಲಸದಲ್ಲಿ ತೊಡಗಿದ. ಕರ್ಮಾಗಾರದಲ್ಲಿ ನೀರವತೆ ನೆಲೆಸಿತು. ಜನರು ಮೌನವಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೋದರು. ಸಿತಾನೋವ್ ಕಿಟಕಿಯಬಳಿ ಸಾರಿ, ಗಾಜಿಗೆ ತನ್ನ ತಲೆಯನ್ನು ಒತ್ತಿಕೊಂಡು, ನಿಶ್ಚಲನಾಗಿ ಅಲ್ಲಿ ನಿಂತ. ಜಿಖರೇವ್ ತನ್ನ ಬ್ರಷ್ಷನ್ನು ಮತ್ತೊಮ್ಮೆ ಕೆಳಗಿರಿಸಿ, ಕಟುವಾದ ದನಿಯಲ್ಲಿ ಅಂದ :

"ದೇವರ ಗುಲಾಮರೇ, ಇದನ್ನೀಗ ನಾನು ಬದುಕೊಂತ ಕರೆಯೋದು—ಖಂಡಿತವಾಗಿಯೂ ಇದನ್ನೇ !"

ಅವನು ತನ್ನ ಭುಜಗಳನ್ನು ಕುಪ್ಪಳಿಸಿ, ತಲೆಯನ್ನು ಬಾಗಿಸಿ, ಮುಂದುವರಿದ:

"ಆ ದೈತ್ಯನ ಚಿತ್ರವನ್ನೇ ನಾನು ಬಿಡಿಸಬಲ್ಲೆ : ಕರಿದಾದ, ರೋಮ ತುಂಬಿದ ಶರೀರ; ಜ್ವಾಲೆಯ ಬಣ್ಣದ ರೆಕ್ಕೆಗಳು—ಕೆಂಪು ತಲೆ—ಬೆಳುದಿಂಗಳ ರಾತ್ರಿಯಲ್ಲಿ ಹಿಮಕಂಡ ಹಾಗೆ ಮಾಸಿದ ನೀಲಿ ಬಣ್ಣದ ಮುಖ, ಪಾದಗಳು ಹಾಗೂ ಕೈಗಳು."

ಸಂಜೆಯ ಊಟದ ವೇಳೆಯವರೆಗೂ ನಿತ್ಯದ್ದಲ್ಲದ ಅವಿಶ್ರಾಂತ ಭಾವದಿಂದ ಸ್ಟೂಲಿನ ಮೇಲೆ ಕುಳಿತು ತನ್ನ ಶರೀರವನ್ನು ಆತ ತಿರುವುತ್ತಲೇ ಇದ್ದ. ದೈತ್ಯನ ಬಗೆಗೆ, ಈವಳು—ಹೆಂಗಸರು—ಸ್ವರ್ಗಗಳ ಬಗೆಗೆ, ಸಂತರು ಪಾಪಮಾಡಿದ ರೀತಿಯ ಬಗೆಗೆ, ಅಸ್ಪಷ್ಟವಾಗಿ ಗೊಣಗುತ್ತಲೇ ಇದ್ದ.

ಅವನು ಒತ್ತಿಯೊತ್ತಿ ಹೇಳಿದ :

"ಅದೆಲ್ಲಾ ನಿಜ! ಸಂತರು ಪಾಪಿ ಹೆಂಗಸರ ಜತೆ ಪಾಪ ಮಾಡಿದರೆ, ಪರಿಶುದ್ಧ ಆತ್ಮವನ್ನು ಮರುಳುಗೊಳಿಸಿದ್ದಕ್ಕಾಗಿ ಒಬ್ಬ ದೈತ್ಯ ಖಂಡಿತವಾಗಿಯೂ ಹೆಮ್ಮೆ ಪಟ್ಟೇಪಡ್ತಾನೆ !"

ಯಾರೂ ಉತ್ತರವೀಯಲಿಲ್ಲ. ನನ್ನ ಹಾಗೆಯೇ ಪ್ರಾಯಶಃ ಅವರೆಲ್ಲರೂ ಕೂಡಾ ಮಾತನಾಡಲು ಇಷ್ಟಪಟ್ಟಂತೆ ಕಾಣಲಿಲ್ಲ. ಒಂದು ಕಣ್ಣನ್ನು ಗಡಿಯಾರದ ಮೇಲೆಯೇ ನೆಟ್ಟು, ಮನಸಿಲ್ಲದ ಮನಸ್ಸಿನಿಂದ ಅವರು ದುಡಿದರು. ಘಂಟೆ ಒಂಭತ್ತು ಹೊಡೆದಾಗ ಪ್ರತಿಯೊಬ್ಬರೂ ಏಕಕಾಲದಲ್ಲೇ ಕೆಲಸ ನಿಲ್ಲಿಸಿದರು.

ಸಿತಾನೋವ್ ಮತ್ತು ಜಿಖರೇವ್ ಅಂಗಳಕ್ಕಿಳಿದರು. ನಾನೂ ಅವರನ್ನು ಕೂಡಿಕೊಂಡೆ. ಅಲ್ಲಿ, ಮೇಲೆ ನಕ್ಷತ್ರಗಳತ್ತ ದಿಟ್ಟಿಸುತ್ತ, ಸಿತಾನೋವ್ ಅಂದ:

ತಾರೆಗಳಿರುವ ವ್ಯೋಮದ ಹಾದು
ಅಲೆಯುತ್ತಲಿದೆ ಕಾರವಾನ್

"ಎಂಥ ಪದಗಳನ್ನು ಜೋಡಿಸಿ ಬರೆದಿದಾನೆ !"

ತೀವ್ರವಾಗಿದ್ದ ಚಳಿಯಲ್ಲಿ ನಡುಗುತ್ತ ಜಿಖರೇವ್ ಅಂದ:

"ಯಾವ ಪದಗಳೂ ನನಗೆ ನೆನಪಿಲ್ಲ. ಯಾವುದೂ ನನಗೆ ನೆನಪಿಲ್ಲ. ಆದರೆ ಅದೆಲ್ಲ ವನ್ನೂ ನಾನು ಕಾಣ್ತಿದೇನೆ. ದೈತ್ಯನ ವಿಷಯದಲ್ಲಿ ಕನಿಕರ ಹುಟ್ಟೋ ಹಾಗೆ ಒಬ್ಬ ಮನುಷ್ಯ ಮಾಡ್ತಿದ್ದಾನೆ ಅನ್ನೋದು ವಿಸ್ಮಯದ ಸಂಗತಿಯೇ ಸರಿ! ಕನಿಕರ ಅನಿಸಿಯೇ ಅನಿಸುತ್ತೆ ಅಲ್ಲವೆ ?"

"ಹೌದು," ಎಂದು ಸಿತಾನೋವ್ ಒಪ್ಪಿದ.

ಮರೆಯಲಾಗದ ರೀತಿಯಲ್ಲಿ ಜಿಖರೇವ್ ಉದ್ಗರಿಸಿದ:

"ಮನುಷ್ಯನಾಗಿರೋದು ಅಂದರೆ ಏನೂಂತ ಸ್ವಲ್ಪ ನೋಡು !"

ಹೆಬ್ಬಾಗಿಲ ಬಳಿಗೆ ಹಿಂತಿರುಗಿದಾಗ, ನನ್ನೊಡನೆ ಅವನು ಎಚ್ಚರಿಕೆಯ ಮಾತನ್ನಾಡಿದ:

"ಮಾಕ್ಸಿಮಿಶ್, ಅಂಗಡಿಯಲ್ಲಿ ಆ ಪುಸ್ತಕದ ವಿಷಯ ಯಾರ ಸಂಗಡಲೂ ಮಾತಾಡ್ಬೇಡ. ಅದು ಖಂಡಿತವಾಗಿಯೂ ನಿಷಿದ್ಧ ಗ್ರಂಥವಿರಲೇಬೇಕು."

ನನಗೆ ಅಪರಿಮಿತ ಸಂತೋಷವಾಯಿತು. ಹಾಗಾದರೆ, ಅಪರಾಧ ಕಥನದ ವೇಳೆ ಧರ್ಮ ಗುರು ಕೇಳಿದ್ದುದು, ಈ ಬಗೆಯ ಪುಸ್ತಕವನ್ನು ಕುರಿತೇ !

ರಾತ್ರೆಯ ಊಟ, ಪ್ರತಿಯೊಬ್ಬರೂ ಯೋಚಿಸಬಯಸಿದ ಅದ್ಭುತವಾದುದೇನೋ ಸಂಭವಿಸಿ ದಂತೆ, ನಿತ್ಯದ ಸದ್ದು ಸಂಭಾಷಣೆ ಇಲ್ಲದೆ, ನಿರಾಸಕ್ತಿಯ ಭಾವದಿಂದ ನಡೆಯಿತು. ಊಟದ ಬಳಿಕ ಎಲ್ಲರೂ ವಿಶ್ರಾಂತಿಗೆಂದು ತೆರಳಿದಾಗ, ಜಿಖರೇವ್ ಆ ಪುಸ್ತಕವನ್ನು ಹೊರತೆಗೆದು ನನ್ನೊಡನೆ ಅಂದ:

"ಎಲ್ಲಿ, ಇನ್ನೊಮ್ಮೆ ಓದು. ಯಾವ ಅವಸರವೂ ಇಲ್ಲದೆ—ನಿಧಾನವಾಗಿ."

ಆ ಜನರಲ್ಲಿ ಹಲವರು ತಮ್ಮ ಹಾಸಿಗೆಗಳಿಂದ ಮೌನವಾಗಿ ಎದ್ದು, ರಾತ್ರೆಯ ಉಡುಪಿ ನಲ್ಲೇ ಮೇಜಿನ ಬಳಿಗೆ ಬಂದು, ಕಾಲುಗಳನ್ನು ಮಡಚಿ ತಮ್ಮ ಕೆಳಗಿರಿಸಿಕೊಂಡು ಸುತ್ತಲೂ ಕುಳಿತರು.

ನಾನು ಓದಿಮುಗಿಸಿದಾಗ, ಬೆರಳುಗಳಿಂದ ಮೇಜನ್ನು ತಟ್ಟುತ್ತ ಜಿಖರೇವ್ ಪುನಃ ಅಂದ

"ಇದೀಗ ಬದುಕು! ಹ್ಞ! ದೈತ್ಯ, ದೈತ್ಯ.....ಅಂಥಾದ್ದು ನಿನಗೆ ಹೇಗೆ ಸಂಭವಿಸ್ತು, ತಮ್ಮ ?"

ಸಿತಾನೋವ್, ಹರ್ಷದಿಂದ ಆತ ನಗುವಂತೆ ಮಾಡಿದ್ದ ಕೆಲಸಾಲುಗಳನ್ನು ಓದಲೆಂದು ನನ್ನ ಭುಜದಮೇಲಿಂದ ಬಾಗಿ, ನುಡಿದ.

"ಇವನ್ನು ನನ್ನ ಟಿಪ್ಪಣಿ ಪುಸ್ತಕದಲ್ಲಿ ಪ್ರತಿಮಾಡ್ಕೊಳ್ತೀನಿ."

ಜಿಖರೇವ್ ಎದ್ದು, ಆ ಪುಸ್ತಕವನ್ನು ತನ್ನ ಮೇಜಿನ ಬಳಿಗೆ ಒಯ್ದ. ಆದರೆ, ಇದ್ದಕ್ಕಿದ್ದಂತೆ ತಡೆದು ನಿಂತು, ನೊಂದ ಉದ್ವಿಗ್ನಗೊಂಡ ಧ್ವನಿಯಲ್ಲಿ ಅಂದ:

"ಕುರುಡ ನಾಯಿಮರಿಗಳ ಹಾಗೆ ನಾವು ಜೀವಿಸ್ತಿದೇವೆ. ಯಾತಕ್ಕಾಗಿ? ಯಾರಿಗೂ ಗೊತ್ತಿಲ್ಲ. ದೇವರು ಇಲ್ಲವೆ ದೈತ್ಯ—ಯಾರಿಗೂ ನಾವು ಬೇಕಾಗಿಲ್ಲ. ಯಾವರೀತಿ ನಾವು ದೇವರ ಗುಲಾಮರು? ಜಾಬ್ ಗುಲಾಮನಾಗಿದ್ದ. ಆದರೆ ದೇವರು ಸ್ವತಃ ಅವನ ಜೊತೆ ಮಾತಾ ಡ್ತಿದ್ದ. ಮೋಸೆಸ್‌ನ ಜತೆ ಕೂಡಾ. ಆದರೆ ನಾವು ಸೇರಿರೋದು ಯಾರಿಗೆ?"

ಪುಸ್ತಕವನ್ನು ಡ್ರಾಯರಿನೊಳಿಗಿಟ್ಟು ಕೀಲಿಹಾಕಿ, ಉಡುಪು ಧರಿಸುತ್ತ, ಸಿತಾನೋವನಿಗೆ ಆತ ಕರೆದು ಹೇಳಿದ:

"ಪಾನಮಂದಿರಕ್ಕೆ ಬರ್‍ತೀಯೇನು ?"

"ನನ್ನ ಹುಡುಗೀನ ನೋಡೋಕೆ ನಾನು ಹೋಗ್ತಿದೀನಿ," ಎಂದು ಶಾಂತವಾಗಿ ಸಿತಾನೋವ್ ಉತ್ತರವಿತ್ತ.

ಅವರಿಬ್ಬರೂ ಹೋದ ಬಳಿಕ, ಬಾಗಿಲಬಳಿ ನೆಲದಮೇಲೆ, ಪಾವೆಲ್ ಒದಿನ್‌ತ್ಸೋವನ ಮಗ್ಗುಲಲ್ಲಿ, ನಾನು ಮಲಗಿಕೊಂಡೆ. ಸ್ವಲ್ಪ ಹೊತ್ತಿನವರೆಗೆ ಆತ ನೀಳವಾಗಿ ಗಟ್ಟಿಯಾಗಿ ಉಸಿರುಬಿಡುತ್ತ ಹೊರಳಾಡುತ್ತ ಇದ್ದ. ಬಳಿಕ ಒಮ್ಮೆಲೆ, ಮೆಲ್ಲನೆ ಅಳತೊಡಗಿದ.

"ಏನಾಗಿದೆ ನಿನಗೆ ?"

ಅವನೆಂದ:

"ಅವರ ಬಗ್ಗೆ ನನಗೆ ಬಹಳ ಕೆಡುಕೆನಿಸ್ತದೆ. ಈಗ ಸುಮಾರು ನಾಲ್ಕು ವರ್ಷಗಳಿಂದ ಅವರ ಜತೆ ನಾನು ವಾಸವಾಗಿದೀನಿ. ಅವರೆಲ್ಲರ ಪರಿಚಯವೂ ನನಗಿದೆ."

ಈ ಜನರ ಬಗೆಗೆ ನನಗೂ ಕನಿಕರವೆನಿಸುತ್ತಿತ್ತು. ಪಿಸುಧ್ವನಿಯಲ್ಲಿ ಅವರನ್ನು ಕುರಿತು ಚರ್ಚಿಸುತ್ತ, ಅವರಲ್ಲಿ ಪ್ರತಿಯೊಬ್ಬರಲ್ಲೂ ನೆಲೆಸಿದ್ದ ಒಳ್ಳೆತನವನ್ನೂ ಕರುಣೆಯನ್ನೂ ಸ್ಮರಿಸುತ್ತ, ನಮ್ಮ ಬಾಲಿಶ ಕನಿಕರವನ್ನು ಅಗಾಧಗೊಳಿಸುವಂತಹ ಗುಣಗಳನ್ನು ಅವರಲ್ಲಿ ಹೊಸ ಹೊಸದಾಗಿ ಕಾಣುತ್ತ, ಬಹಳ ಹೊತ್ತು ನಾವು ಎಚ್ಚರವಾಗಿಯೇ ಇದ್ದೆವು.

ಪಾವೆಲ್ ಒದಿನ್‌ತ್ಸೋವ್ ಮತ್ತು ನನ್ನ ನಡುವೆ ಗಾಢ ಮೈತ್ರಿ ಬೆಳೆಯಿತು. ಮುಂದೆ ಆತ ಪ್ರಥಮ ಶ್ರೇಣಿಯ ಕಲಾವೇತ್ತನಾದ. ಆದರೆ ತನ್ನ ವೃತ್ತಿಯನ್ನು ಬಹಳದಿನ ಪಾಲಿಸಿಕೊಂಡು ಹೋಗಲಿಲ್ಲ. ಸುಮಾರು ಮೂವತ್ತು ವರ್ಷಗಳಾಗುವ ಹೊತ್ತಿಗೆ, ಕುಡಿಯುವ ಚಟಕ್ಕೆ ಅವನು ಬಲಿಯಾಗಿದ್ದ. ಸ್ವಲ್ಪ ಸಮಯದ ಅನಂತರ, ಮಾಸ್ಕೋವಿನ ಖಿತ್ರೋವ್ ಮಾರ್ಕೆಟಿನಲ್ಲಿ ದಟ್ಟದರಿದ್ರನಾಗಿ ಆತನು ಅಲೆಯುತ್ತಿದ್ದುದನ್ನು ಕಂಡೆ. ಈಚೆಗೆ ಟೈಫಸ್ ಜ್ವರಕ್ಕೆ ತುತ್ತಾಗಿ ಅವನು ತೀರಿಕೊಂಡ ಸುದ್ದಿಯನ್ನು ಕೇಳಿದೆ. ನನ್ನ ಜೀವಮಾನದ ಅವಧಿಯಲ್ಲಿ ಒಳ್ಳೆಯವರಾದ ಅದೆಷ್ಟೊಂದು ಜನ ಯಾವ ಪ್ರಯೋಜನವೂ ಇಲ್ಲದೆ ನಾಶ ಹೊಂದಿದರೆಂಬುದನ್ನು ಸ್ಮರಿಸಲು ಭಯವೆನಿಸುತ್ತದೆ. ಜನರು ಎಲ್ಲೆಡೆಗಳಲ್ಲೂ ದುಡಿದು ಸೊರಗಿ ಸಾಯುತ್ತಾರೆ; ಇದು ಸ್ವಾಭಾವಿಕವೇ. ಆದರೆ, ರಷ್ಯದಲ್ಲಾಗುವಷ್ಟು ಬೇಗನೆ, ಮತ್ತು ಅಷ್ಟೊಂದು ಅರ್ಥಹೀನವಾಗಿ, ಜನರೆಲ್ಲೂ ಸೊರಗಿ ಒಣಗುವುದಿಲ್ಲ.....

ಆ ಕಾಲದಲ್ಲಿ ಪಾವೆಲ್, ನನಗಿಂತ ಒಂದೆರಡು ವರ್ಷ ಹೆಚ್ಚು ಪ್ರಾಯದ, ದುಂಡುತಲೆಯ, ಹುಡುಗನಾಗಿದ್ದ. ಶೀಘ್ರಚಲನೆ, ಚಾತುರ್ಯ, ಪ್ರಾಮಾಣಿಕತೆಗಳ ಜತೆಗೆ ಕಲಾತ್ಮಕ ಪ್ರತಿಭೆಯೂ ಅವನಲ್ಲಿತ್ತು. ಬೆಕ್ಕು-ನಾಯಿ-ಹಕ್ಕಿಗಳ ಚಿತ್ರ ಬರೆಯುವ ವಿಶೇಷ ಜಾಣ್ಮೆ ಅವನಿಗಿತ್ತು. ನಮ್ಮ ಕಲಾಕಾರರ ತಮಾಷೆಯ ವ್ಯಂಗ್ಯ ಚಿತ್ರಗಳನ್ನು ಅವನು ಬರೆಯುತ್ತಿದ್ದ. ಅವರನ್ನು ಆತ ಯಾವಾಗಲೂ ತೋರಿಸಿಕೊಡುತ್ತಿದ್ದುದು ಪುಕ್ಕಗಳಿರುವ ಪ್ರಾಣಿಗಳಾಗಿಯೇ: ಸಿತಾನೋವ್ ಯಾವಾಗಲೂ ರೆಂಬೆಯ ಮೇಲೆ ಒಂಟಿಗಾಲಲ್ಲಿ ಕುಳಿತ ಮರಕೋಳಿ; ಜಖರೇವ್ ಹರಕು ಜುಟ್ಟಿನ, ಕೊದಲಿಲ್ಲದ ಹುಬ್ಬಿನ, ಗಂಡುಕೋಳಿ; ಕಾಹಿಲೆಯಿಂದ ನರಳುತ್ತಿದ್ದ ಡಾವಿಡೋವ್,

ವ್ಯಥಿತವಾದ ಪುಟ್ಟ ಹಕ್ಕಿ. ಅವನ ಅತ್ಯುತ್ತಮ ವ್ಯಂಗ್ಯ ಚಿತ್ರ, ಹಿರಿಯ ಅಚ್ಚೊತ್ತುವ ಕಲಾಕಾ ಗೊಗೊಲೀವಸದು. ಅವನನ್ನು ದೊಡ್ಡ ಕಿವಿಗಳ, ದೈತ್ಯಮೂಗಿನ ಪ್ರತಿಯೊಂದರಲ್ಲೂ ಅ ಉಗುರುಗಳಿದ್ದ ಪುಟ್ಟ ಪಾದಗಳ ಬಾವಲಿಯಾಗಿ ಪಾವೆಲ್ ಚಿತ್ರಿಸಿದ್ದ. ಈ ಚಿತ್ರದ ಗೊಗೊಲೀವನ ದುಂಡಗಿನ ಕಪ್ಪು ಮುಖದಿಂದ, ಕಣ್ಣುಗಳ ಬಿಳಿಯ ವೃತ್ತಗಳು ಹೊರಗಿ ಕುತ್ತಿದ್ದುವು. ಕಣ್ಣ ಬೊಂಬೆಗಳು ತಲೆ ಕೆಳಗಾಗಿದ್ದ ಗೆಡ್ಡೆಗಳಂತಿದ್ದು. ಸದಾ ಜಾಗೃತವಾ ದುಷ್ಟ ಸ್ವರೂಪವನ್ನು ಅವನಿಗೆ ಕೊಟ್ಟಿದ್ದುವು.

ಈ ವ್ಯಂಗ್ಯ ಚಿತ್ರಗಳನ್ನು ತೋರಿಸಿದಾಗ ಆ ಕಲಾಕಾರರು ಯಾರೂ ಸಿಟ್ಟಾಗುತ್ತಿರಲ್ಲಿ ಆದರೆ ಎಲ್ಲರಿಗೂ, ಗೊಗೊಲೀವನ ಚಿತ್ರ ಅಸಹ್ಯವಾಗಿ ಕಾಣಿಸುತ್ತಿತ್ತು. ಚಿತ್ರಕಾರನಿಗೆ ಅವ ಕಳಕಳಿಯಿಂದ ಹೇಳಿದರು :

"ನೀನಿದನ್ನು ಹರಿದೆಸೆಯೋದು ಮೇಲು. ಇಲ್ಲದೇ ಹೋದರೆ ಆ ಮುದುಕ ಇದನ ನೋಡಬಹುದು ; ನಿನಗೆ ಕಷ್ಟ ಕೊಡಬಹುದು."

ಕೊಳಕನಾದ ದುರ್ಗಂಧದ, ಸದಾ ಅಮಲೇರಿರುತ್ತಿದ್ದ ಆ ಮುದುಕ, ಆಗ್ರಹಪೂರ್ವ ವಾಗಿ ಧರ್ಮಿಷ್ಟನಾಗಿರುತ್ತಿದ್ದ. ದುಷ್ಟತನ ತೋರುವುದರಲ್ಲಿ ಬಳಲಿಕೆಯೆಂಬುದೇ ಅವನಿಗಿ ಲಿಲ್ಲ. ಅಂಗಡಿ ಸಹಾಯಕನ ಸೇವೆಯಲ್ಲಿ ನಿರತನಾದ ಚಾಡಿಕೋರನಾಗಿದ್ದ. ಯಜಮಾನಿ ತನ್ನ ಸೋದರ ಸೊಸೆಯನ್ನು ಅಂಗಡಿ ಸಹಾಯಕನಿಗೆ ಮದುವೆ ಮಾಡಿಕೊಡಲು ನಿರ್ಧರಿಸಿದ್ದು ರಿಂದ, ಆತ ಈಗಾಗಲೇ ಸಂಸ್ಥೆಯ ಹಾಗೂ ಅದರಲ್ಲಿನ ಜನರ ಒಡೆಯನಾಗಿ ತನ್ನನ್ನು ಪರಿಗಣಿ ತೊಡಗಿದ್ದ. ಪ್ರತಿಯೊಬ್ಬರೂ ಅವನಿಗೆ ಹೆದರುತ್ತಿದ್ದರು ಹಾಗೂ ಅವನನ್ನು ದ್ವೇಷಿಸುತ್ತಿದ್ದರ 'ಆ ಕಾರಣದಿಂದ, ಗೊಗೊಲೀವನಿಗೂ ಅವರು ಅಂಜುತ್ತಿದ್ದರು.

ಪಾವೆಲ್ ಆ ಮುದುಕನಿಗೆ ಎಡೆಬಿಡದೆ ಕಿರುಕುಳ ಕೊಡುತ್ತಿದ್ದ. ಗೊಗೊಲೀವನಿಗೆ ಕ್ಷ ಮಾತ್ರ ವಿಶ್ರಾಂತಿಯೂ ಸಿಗದಂತೆ ಮಾಡುವುದೇ ತನ್ನ ಏಕೈಕ ಗುರಿ ಎನ್ನುವಂತೆ ವರ್ತಿಸುತ್ತಿದ್ ಈ ಕೆಲಸದಲ್ಲಿ ಯೋಗ್ಯ ಸಹಾಯಕನಾಗಿ ನಾನು ಅವನಿಗೆ ದೊರೆತಿದ್ದೆ. ಹೆಚ್ಚು ಕಡಮೆ ಯಾವ ಗಲೂ ಕ್ರೂರವೂ ಒರಟೂ ಆಗಿರುತ್ತಿದ್ದ ನಮ್ಮ ಯತ್ನಗಳಿಂದ ಎಲ್ಲರಿಗೂ ಮನೋರಂಜನೆ ಒ ಗುತ್ತಿತ್ತು. ಆದರೂ ಆ ಕಲಾಕಾರರೆಂದರು:

"ಹುಷಾರಾಗಿರೀಪ್ಪ! ಮಿಡತೆ-ಕುಜ್ಮಾನ ಕೈಗೆ ನೀವು ಬಿದ್ದೇ ಬೀಳ್ತೀರಾ!"

'ಮಿಡತೆ-ಕುಜ್ಮಾ' ಎನ್ನುವುದು, ಅಂಗಡಿಸಹಾಯಕನಿಗೆ ಕರ್ಮಾಗಾರದಲ್ಲಿ ದೊರೆತಿ ಅಡ್ಡ ಹೆಸರು.

ಆದರೆ ಈ ಎಚ್ಚರಿಕೆಗಳನ್ನೆಲ್ಲಾ ನಾವು ಲಕ್ಷಿಸಲೇ ಇಲ್ಲ. ಎಷ್ಟೋ ವೇಳೆ, ಆ ಮುದು ನಿದ್ರಿಸಿದ್ದಾಗ, ಅವನ ಮುಖದ ಮೇಲೆ ನಾವು ಬಣ್ಣ ಸುರಿಯುತ್ತಿದ್ದೆವು. ಒಮ್ಮೆ, ಕುಡಿತ ವಿಸ್ಮೃತಿಯಲ್ಲಿ ಅವನು ಮಲಗಿದ್ದಾಗ, ಸ್ಪಂಜಿನಂತಹ ಅವನ ಮೂಗಿಗೆ ಹಳದಿ ಗಿಲೀ ಬಳಿದೆವು. ಮುಂದೆ ಮೂರು ದಿನಗಳವರೆಗೂ ತೂತುಗಳಲ್ಲಿದ್ದ ಬಂಗಾರವನ್ನು ಹೊರ ತ ಯಲು ಆತ ಅಶಕ್ತನಾದ. ಅವನು ಕೋಪಾವಿಷ್ಟನಾಗುವಂತೆ ಮಾಡಿದಾಗಲೆಲ್ಲ, ಹಡಗಿ ಹಾಗೂ ವಿಯಟ್ಕಾ ಪ್ರದೇಶದ ಪುಟ್ಟ ಸೈನಿಕನ ನೆನಪು ನನಗಾಗುತ್ತಿತ್ತು. ನನ್ನ ಮನಸ್ಸಾ ನನ್ನನ್ನು ಕುಟುಕುತ್ತಿತ್ತು. ಅಷ್ಟೊಂದು ವಯಸ್ಸಾಗಿದ್ದರೂ ಕೂಡಾ, ಗೊಗೊಲೀವನಿಗೆ ನಾ

ರಿಸಾಟಿ ಎನಿಸುವಂತಿರಲಿಲ್ಲ: ಎಷ್ಟೋ ವೇಳೆ ಅವನ ಕೈಗೆ ನಾವು ಸಿಕ್ಕಿಬೀಳುತ್ತಿದ್ದೆವು. ಅವನು ಮಗೆ ಸರಿಯಾಗಿ ಬಾರಿಸುತ್ತಿದ್ದ. ಪ್ರತಿಯೊಂದು ಸಲ ಶಿಕ್ಷೆ ವಿಧಿಸಿದ ಅನಂತರವೂ ಯಜ ಮಾನಿಗೆ ಆತ ದೂರುಕೊಡುತ್ತಿದ್ದ.

ಕುಡಿದು ನಿರಂತರವಾಗಿ ಮತ್ತೇರಿಕೊಂಡೇ ಇರುವವಳು ಆಕೆ. ಆ ಕಾರಣಕ್ಕಾಗಿ, ಯಾವಾಗಲೂ ಸರಸಪ್ರವೃತ್ತಿಯವಳೂ ಸುಸ್ವಭಾವದವಳೂ ಆಗಿರುತ್ತಿದ್ದಳು. ಉಬ್ಬಿಕೊಂಡ ಕೈಗಳಿಂದ ಮೇಜನ್ನು ಗುದ್ದಿ, ನಮ್ಮನ್ನು ಹೆದರಿಸಲೆತ್ನಿಸುತ್ತ, ಕೂಗಿ ನುಡಿಯುತ್ತಿದ್ದಳು:

"ಪಿಶಾಚಿಗಳೇ! ಪುನಃ ತುಂಟಾಟ ನಡೆಸಿದಿರೇನು? ಅವನು ಮುದುಕ. ನಿಜವಾಗಿ ನೋಡಿ ರೆ ಅವನಿಗೆ ನೀವು ಗೌರವ ತೋರಿಸ್ಬೇಕು! ಅವನ ವೈನಿನ ಗ್ಲಾಸಿಗೆ ಯಾರು ಮಸಿ ಸುರಿದವರು?"

"ನಾವು."

ಒಡತಿ ಪಿಳಿಪಿಳಿ ಕಣ್ಣುಬಿಟ್ಟಳು.

"ಓ ನನ್ನ ದೇವರೇ!—ನಾವೂಂತ ಒಪ್ಕೊಳ್ತಾರೆ ಬೇರೆ! ಪುಟ್ಟ ಪಾಪಿಷ್ಟರು! ವಯಸ್ಸಾದವ ನ್ನು ಗೌರವಿಸಬೇಕೂಂತ ನಿಮಗೆ ಗೊತ್ತಿಲ್ವೇನು?"

ನಮ್ಮನ್ನವಳು 'ಶೂ' ಎಂದು ದೂರಕ್ಕೆ ಅಟ್ಟಿದಳು; ಮತ್ತು ಆ ಸಂಜೆ ಅಂಗಡಿ ಸಹಾಯಕ ಗೆ ದೂರಿತ್ತಳು.

ಆತ ನಿಷ್ಠುರವಾಗಿ ನನ್ನೊಡನೆ ಅಂದ:

"ಯಾಕೆ ಹೀಗೆ? ನೀನು ಪುಸ್ತಕಗಳನ್ನು ಓದ್ತೀಯಾ, ಬೈಬಲನ್ನು ಕೂಡಾ ಓದ್ತೀಯಾ—ದರೂ ಯಾವಾಗಲೂ ಏನಾದರೂ ತುಂಟತನ ಮಾಡ್ತಾನೇ ಇರ್ತೀಯಾ. ಹುಷಾರಾಗಿರು ತಮ್ಮ!"

ಒಡತಿ ಒಂಟಿಜೀವವಾಗಿದ್ದಳು. ಅವಳ ಸ್ಥಿತಿ ಶೋಚನೀಯವಾಗಿತ್ತು. ಕೆಲವೇಳೆ, ತಿವಿಾರಿ ಮಾದಕಪಾನೀಯವನ್ನು ಸೇವಿಸಿದ ಬಳಿಕ, ಕಿಟಕಿಯ ಬಳಿ ಕುಳಿತು ಅವಳು ಹಾಡು ದ್ದಳು:

> ಯಾರೂ ಗಮನಿಸರೆನ್ನೆಯ ಶೋಕ
> ಯಾರೂ ಅರಿಯರು ಮಮ ದುಃಖ
> ಯಾರೂ ಎನ್ನನು ಪ್ರೀತಿಸರು, ಯಾರೂ ಕರುಣೆಯ ತೋರಿಸರು
> ಯಾರೂ ನೀಡರು ನೆರವು

ಸುರುಸುರು ಉಸಿರುಬಿಡುತ್ತ, ವಯಸ್ಸಿನಿಂದ ಓಲಾಡುವ ಧ್ವನಿಯಲ್ಲಿ, "ಊ—ಊ—ಊ" ದು ಅವಳು ಪ್ರಲಾಪಿಸುತ್ತಿದ್ದಳು.

ಒಂದು ದಿನ, ಹಾಲಿನ ಕೂಜೆಯೊಡನೆ, ಅವಳು ಮಹಡಿಯಿಂದ ಕೆಳಕ್ಕಿಳಿಯ ತೊಡಗಿದು ನ್ನು ನಾನು ಕಂಡೆ. ಇದ್ದಕ್ಕಿದ್ದಂತೆ ಮೊಣಕಾಲುಗಳು ತತ್ತರಿಸಿ ಅವಳು ಕುಸಿದುಬಿದ್ದಳು. ಟ್ಟಿಲಿಂದ ಮೆಟ್ಟಲಿಗೆ ಧುಮುಕುತ್ತ ಉರುಳತೊಡಗಿದಳು. ಚಾಚಿದ ಕೈಗಳು ಕೂಜೆಯನ್ನು ದ್ರವಾಗಿ ಹಿಡಿದಿದ್ದುವು. ಹಾಲು ಅವಳ ಪೋಷಾಕಿನ ಮೇಲೆ ಸುರಿಯುತ್ತಿತ್ತು. ಆವಳಾ ದರೋ ಕೂಜೆಯನ್ನು ಛೇಡಿಸುತ್ತಿದ್ದಳು:

"ಥೂ ಪಿಶಾಚಿಯೇ! ಹೇಗೆ ಚೆಲ್ತಿದ್ದೀಯಾ ನೋಡು!"

ಅವಳದೇನೂ ಕೊಬ್ಬಿದ ದೇಹವಾಗಿರಲಿಲ್ಲ. ಇಲಿ ಹಿಡಿಯುವುದೆಲ್ಲ ಹಳೆಯ ಕಥೆಯಾ
ಮುದಿಬೆಕ್ಕು, ಮೈಭಾರವಾಗಿ, ಮಲಗಿಕೊಂಡೇ ಇದ್ದು, ಔತಣ ಹಾಗೂ ವಿಜಯಗಳ ಮಧು
ನೆನಪುಗಳಿಂದ ಸಂತೃಪ್ತವಾಗುವುದಿಲ್ಲವೆ? ಹಾಗೆ, ಮೃದುವಾಗಿ ಮೈದಪ್ಪನಾಗಿ ಇದ್ದಳು ಆಕೆ.

ಹುಬ್ಬುಗಂಟಿಕ್ಕಿ, ಯೋಚನಾಮಗ್ನನಾಗಿ, ಸಿತಾನೋವ್ ಅನ್ನುತ್ತಿದ್ದ:

"ಹ-ಂ-..... ಒಂದು ಕಾಲದಲ್ಲಿದು ಬಹಳ ದೊಡ್ಡ ಸಂಸ್ಥೆಯಾಗಿತ್ತು, ಸೊಗಸಾದ ಕಮಾ
ಗಾರವಾಗಿತ್ತು. ಜಾಣನಾದೊಬ್ಬ ಮನುಷ್ಯ ಇದಕ್ಕೆ ಹಿರಿಯನಾಗಿದ್ದ. ಆದರೆ ಈಗೆಲ
ಹಾಳಾಗಿ ಹೋಗಿದೆ. ಆಶ್ರಮದ ಲಾಭವೆಲ್ಲಾ ಮಿಡತೆ-ಕುಜ್ಮಾನ ಮಡಿಲಿಗೆ ಈಗ ಬೀಳ್ತಿ
ಹೇಗೆ ದುಡಿದೆವು ನಾವು! ನೋಡಿದರೆ, ಅದರ ಪ್ರಯೋಜನವನ್ನೆಲ್ಲಾ ಪಡೀತಿರೋನು ಇವನ
ಒಳಗಿನದೇನೋ ಕಡಿದು ಹೋಗೋಕ್ಕೆ ಬರೇ ಈ ಯೋಚನೆಯೇ ಸಾಕು; ಕೆಲಸವನ್ನು ಅಲ್ಲಿ
ಬಿಟ್ಟು, ಭಾವಣಿ ಹತ್ತಿ, ಆಕಾಶ ನೋಡ್ತಾ ಇಡೀ ಬೇಸಿಗೆಯೆಲ್ಲಾ ಮಲಗಿರೋಣ ಅನಿಸ್ತದೆ."

ಸಿತಾನೋವನ ವಿಚಾರಗಳು ಅಂಟು ಜಾಡ್ಯದಂತೆ ಪಾವೆಲ್ ಒದಿನ್‌ತ್ಸೋವನಿಗೂ ತಗ
ದುವು. ಪ್ರಾಯಸ್ಥರು ಮಾಡುವಂತೆ, ಉಫ್ ಉಫ್ ಎಂದು ಸಿಗರೇಟಿನ ಹೊಗೆ ಬಿಡುತ್ತ
ದೇವರು ಕುಡುಕತನ, ಸ್ತ್ರೀಯರು, ದುಡಿಮೆಯ ನಿಷ್ಪ್ರಯೋಜಕತೆ ಇವುಗಳ ಬಗೆಗೆ ತತ್ವ ವಿ
ಚನೆ ಮಾಡುತ್ತಿದ್ದ. ಕೆಲವರು ತಮ್ಮ ಕಾಲವನ್ನೆಲ್ಲಾ ವಸ್ತುಗಳ ನಿರ್ಮಾಣಕ್ಕಾಗಿ ಕ
ತಾರೆ; ಇತರರು ಅವುಗಳ ಮೌಲ್ಯದ ಕಲ್ಪನೆಯಿಲ್ಲದೆ ಅವುಗಳನ್ನೆಲ್ಲ ನಾಶಮಾಡ್ತಾರೆ—
ಎನ್ನುತ್ತಿದ್ದ.

ಅಂತಹ ಘಳಿಗೆಗಳಲ್ಲಿ, ಅವನ ತೀಕ್ಷ್ಣವಾದ ಆಕರ್ಷಕವಾದ ಪುಟ್ಟ ಮುಖ, ವಯಸ್ಸಾ
ಸುಕ್ಕುಗಟ್ಟಿದ ಮುಖದಂತೆ ಕಾಣಿಸುತ್ತಿತ್ತು. ನೆಲದ ಮೇಲೆ ಹಾಸಿದ ಹಾಸಿಗೆಯ ಮೇ
ಮೊಣಕಾಲುಗಳ ಸುತ್ತಲೂ ತನ್ನ ತೋಳುಗಳನ್ನು ಬಿಗಿದುಕೊಂಡು, ಅವನು ಕುಳಿತಿರುತ್ತಿ
ಕಿಟಿಕಿಗಳ ನೀಲಿ ಚೌಕಟ್ಟುಗಳೆಡೆಯಿಂದ ಚಳಿಗಾಲದ ಆಕಾಶದಲ್ಲಿನ ನಕ್ಷತ್ರಗಳನ್ನು ಹಿವ
ಭಾರದಿಂದ ತೂಗಾಡುತ್ತಿದ್ದ ಶೆಡ್ಡಿನ ಭಾವಣಿಯನ್ನೂ ಅವನ ಕಣ್ಣುಗಳು ದಿಟ್ಟಿಸುತ್ತಿದ್ದು
ಹೆಚ್ಚಾಗಿ ಅಂತಹ ಸನ್ನಿವೇಶಗಳಲ್ಲೇ ವಿಚಾರಗಳು ಅವನಿಗೆ ಹೊಳೆಯುತ್ತಿದ್ದುವು.

ನಿದ್ದೆ ಹೋಗಿದ್ದ ಕಲಾಕಾರರು ಗೊರಕೆ ಹೊಡೆಯುತ್ತಿದ್ದರು; ನಿದ್ದೆಯಲ್ಲಿ ಅಸ್ಪಷ್ಟವ
ತೊದಲುತ್ತಿದ್ದರು. ಯಾವನೋ ಒಬ್ಬ ದುಃಸ್ವಪ್ನ ಕಾಣುತ್ತ ಹರುಕು ಮುರಕಾಗಿ ಗೊಣಗಿ
ಎತ್ತರದಲ್ಲಿ ತುತ್ತತುದಿಯಲ್ಲಿದ್ದ ಹಾಸಿಗೆಯ ಮೇಲೆ ಮಲಗಿದ್ದ ಡಾವಿಡೋವ್, ತನ್ನ ಅಳುದುಳಿ
ಬದುಕನ್ನು ಕೆಮ್ಮಿ ಕೆಮ್ಮಿ ಕಳೆದುಕೊಳ್ಳುತ್ತಿದ್ದ. ಆಚೆಗೆ ಒಂದು ಮೂಲೆಯಲ್ಲಿ, 'ದೇ
ಗುಲಾಮ'ರಾದ ಕಾಪೆಂಡಿಯೂಖಿನ್, ಸೊರೋಕಿನ್ ಮತ್ತು ಪೆರ್ಶಿನ್, ನಿದ್ದೆಯಿಂದಲೂ ಕುಡಿ
ಅಮಲಿನಿಂದಲೂ ಬಂಧಿತರಾಗಿ, ಒಬ್ಬರ ಮಗ್ಗುಲಲ್ಲಿ ಇನ್ನೊಬ್ಬರು ಅಂಕುಡೊಂಕಾಗಿ ಬಿದ್ದಿದ್ದ
ಮುಖಗಳಿಲ್ಲದ, ಹಸ್ತಗಳಿಲ್ಲದ, ಪಾದಗಳಿಲ್ಲದ ಪ್ರತಿಮೆಗಳು ಗೋಡೆಗಳಿಂದ ಕೆಳಕ್ಕೆ ನೆಟ್ಟನೊ
ದಿಂದ ದಿಟ್ಟಿಸುತ್ತಿದ್ದುವು. ಎಣ್ಣೆಯ, ಕೊಳೆತ ತತ್ತಿಗಳ, ನೆಲದ ಸಂದಿಗಳಲ್ಲಿ ನಾರುತ್ತಿ
ಹೊಲಸಿನ ದುರ್ಗಂಧ, ಉಸಿರಾಟ ಸಾಧ್ಯವೇ ಇಲ್ಲ ಎನಿಸುವಂತೆ ಮಾಡಿತ್ತು.

"ಇವರೆಲ್ಲರ ಬಗ್ಗೆ ನನಗೆ ಎಷ್ಟೊಂದು ಕನಿಕರವೆನಿಸ್ತಿದೆ, ಓ ದೇವರೇ!" ಎಂದು ಪಾವೆ
ಪಿಸುನುಡಿದ,

ಈ ಕನಿಕರದ ಭಾವನೆ, ನನ್ನನ್ನೂ ಹೆಚ್ಚುಹೆಚ್ಚಾಗಿ ಹಿಂಡತೊಡಗಿತ್ತು. ಈಗಾಗಲೇ
ಾನು ಹೇಳಿರುವಂತೆ, ನಮಗಿಬ್ಬರಿಗೂ ಈ ಜನರು ಒಳ್ಳೆಯವರಾಗಿ ಕಂಡರು; ಆದರೆ ಅವರು ಜೀವಿ
ತ್ತಿದ್ದ ಬದುಕು ಕೆಟ್ಟದಾಗಿತ್ತು, ಅವರಿಗೆ ತಕ್ಕುದಾಗಿರಲಿಲ್ಲ, ಅಸಹನೀಯವೆನಿಸುವಷ್ಟು ನೀರಸ
ಾಗಿತ್ತು. ಲೆಂಟ್ ಹಬ್ಬದ ಗಂಟೆಗಳು ಬೇಸರಪಡಿಸುವ ರೀತಿಯಲ್ಲಿ ಬಾರಿಸತೊಡಗಿದಾಗ,
ನೆಗಳು—ಮರಗಳು—ಭೂಮಿಯ ಮೇಲಿನ ಎಲ್ಲವೂ ಕಂಪಿಸುವಂತೆ ಗೋಳಾಡುವಂತೆ ಅಳು
ಂತೆ ಮಾಡುತ್ತ ಹಿಮಗಾಳಿ ಬೀಸಿದಾಗ, ಬೇಸರ ಸೀಸದ ಪರದೆಯ ಹಾಗೆ ಕರ್ಮಾಗಾರದ
ೇಲೆ ತಂಗುತ್ತಿತ್ತು; ಕಲಾಕಾರರನ್ನು ಉಸಿರು ಕಟ್ಟಿಸುತ್ತಿತ್ತು; ಅವರೊಳಗಿನ ಜೀವವನ್ನು ಹಿಚುಕಿ
ಾಕುತ್ತಿತ್ತು; ಪಾನಮಂದಿರಗಳಿಗೋ ಅಥವಾ ವೋಡ್ಕಾದಂತೆ ಮರೆಯಲು ನೆರವಾಗುತ್ತಿದ್ದ
ೀಯರ ತೋಳುಗಳಿಗೋ ಅವರನ್ನು ಓಡಿಸುತ್ತಿತ್ತು.

ಅಂತಹ ಸಂಜೆಗಳಲ್ಲಿ, ವಾಚನದಿಂದೇನೂ ಪ್ರಯೋಜನ ದೊರೆಯುತ್ತಿರಲಿಲ್ಲ. ಪಾವೆಲ್
ುತ್ತು ನಾನು, ಮನೋರಂಜನೆಯುಂಟುಮಾಡಲು ಬೇರೆ ವಿಧಾನಗಳನ್ನು ಅನುಸರಿಸಿದೆವು. ಬಣ್ಣ
ಂದಲೂ ಚಿಮಿಣಿಯ ಕರಿಯಿಂದಲೂ ಮುಖಗಳನ್ನು ಮೆತ್ತಿಕೊಂಡು, ಸೆಣಬಿನ ಕೇಶರಾಶಿ
ನ್ನೂ ಮೀಸೆಗಳನ್ನೂ ಧರಿಸಿ, ನಮ್ಮದೇ ಸೃಷ್ಟನೆಯ ವಿವಿಧ ಪ್ರಹಸನಗಳನ್ನು ನಾವು ಅಭಿನಯಿಸಿ
ವು. ಈ ರೀತಿ, ವೀರರಂತೆ ಬೇಸರವನ್ನು ಇದಿರಿಸಿದೆವು; ಜನರು ಒತ್ತಾಯಪೂರ್ವಕವಾಗಿ
ಗುವಂತೆ ಮಾಡಿದೆವು. ಮಹಾಪೀಟರನನ್ನು ಒಬ್ಬ ಸೈನಿಕನು ಪಾರುಮಾಡಿದಂತ ಕಥೆ ನನಗೆ
ನಪಿತ್ತು. ಆ ಕಥೆಯನ್ನು ನಾನು, ಸಂಭಾಷಣಾರೂಪಕ್ಕೆ ಭಟ್ಟಿ ಇಳಿಸಿದೆ. ಎತ್ತರವಲ್ಲಿದ್ದ
ಾವಿಡೋವನ ಹಾಸಿಗೆಯನ್ನೇರಿ, ಕಾಲ್ಪನಿಕ ಸ್ವೀಡರ ತಲೆಗಳನ್ನು ಸಂತಸದಿಂದ ಉರುಳಿಸುತ್ತ,
ದನ್ನು ನಾವು ಅಭಿನಯಿಸಿದೆವು. ನಮ್ಮ ಪ್ರೇಕ್ಷಕರು ಹೊಟ್ಟೆ ಹುಣ್ಣಾಗುವಂತೆ ನಕ್ಕರು.

ಚೀನೀ ಪಿಶಾಚಿ ಟ್ಸಿಂಗಿ ಯು-ಟೊಂಗನ ದಂತಕಥೆ ಕಲಾಕಾರರಿಗೆ ವಿಶೇಷವಾಗಿ ರುಚಿ
ತು. ಒಳಿತನ್ನು ಮಾಡಬೇಕೆಂಬ ವಿಚಾರದಿಂದ ತುಂಬಿದ್ದ ನತದೃಷ್ಟ ಪಿಶಾಚಿಯ ಪಾತ್ರವನ್ನು
ಶ್ಕಾ ವಹಿಸಿದ. ಉಳಿದುದೆಲ್ಲವನ್ನೂ,—ಹೆಣ್ಣುಗಂಡು ಪಾತ್ರಗಳು, ರಂಗಭೂಮಿಯ
ಾಮಗ್ರಿಗಳು ದೇವಚೇತನ, ಒಳಿತನ್ನು ಮಾಡುವ ಪ್ರತಿಯೊಂದು ವಿಫಲಯತ್ನದ ಅನಂತರವೂ
ನಸ್ಸು ತಲ್ಲಣಗೊಂಡು ಚೀನೀ ಪಿಶಾಚಿ ವಿರಮಿಸುತ್ತಿದ್ದ ಕಲ್ಲು—ಇವೆಲ್ಲ ಪಾತ್ರಗಳನ್ನೂ
ಾನು ನಿರ್ವಹಿಸಿದೆ.

ಪ್ರೇಕ್ಷಕರು ನಕ್ಕರು. ಯಾತನೆ ತುಂಬಿದ ಅಚ್ಚರಿಯಿಂದ, ಜನರ ಮನಸ್ಸನ್ನು ರಂಜಿಸು
ುದು ಎಷ್ಟು ಸುಲಭ-ಎಂಬುದನ್ನು ನಾನು ಅರಿತೆ.

ನಮ್ಮೆಡೆಗೆ ಅವರು ಕೂಗಿ ನುಡಿಯುತ್ತಿದ್ದರು :

"ಹೇ ವಿದೂಷಕರೇ ! ಹೇ ನೊಣಗಳೇ !"

ಆದರೆ, ನಾವು ಹೆಚ್ಚು ಹೆಚ್ಚಾಗಿ ಅಭಿನಯಿಸಿದಷ್ಟೂ, ಈ ಜನರಿಗೆ ಹರ್ಷಕ್ಕಿಂತಲೂ
ುಃಖವೇ ಹೆಚ್ಚು ಸಮೀಪವಾಗಿದೆಯೆಂಬ ಯೋಚನೆ ಹೆಚ್ಚು ದೃಢವಾಗಿ ನನ್ನನ್ನು ಕಾಡಿತು.

ವಿನೋದ ನಮ್ಮಲ್ಲೆಂದೂ ಬಹಳ ಕಾಲ ಬಾಳುವುದಿಲ್ಲ. ವಿನೋದಕ್ಕೂ ಬೆಲೆ ಇದೆ
ಂದು ಭಾವಿಸುವವರೇ ಇಲ್ಲ. ವಿನೋದವನ್ನುಂಟುಮಾಡುವುದು ಅತ್ಯಂತ ಪ್ರಯತ್ನಪೂರ್ವಕ
ಾಗಿ,—ಧ್ಯಾನಮಗ್ನವಾದ ರಷ್ಯನ್ ಹೃದಯವೇದನೆಗೆ ಪ್ರತ್ಯೌಷಧವಾಗಿ. ತನ್ನದೇ ಆದ

ಬದುಕಿಲ್ಲದ! ಬಾಳಬೇಕೆಂಬ ಇಚ್ಛೆಯಿಲ್ಲದ ಬೇಸರದ ದಿನಗಳನ್ನು ಹಗುರುಗೊಳಿಸುವುದಕ್ಕಷ್ಟೆ ಬರುವ ವಿನೋದದ ಬಗೆಗೆ ನಂಬಲರ್ಹವಾದುದೇನೂ ಇಲ್ಲ.

ರಷ್ಯನ್ ವಿನೋದವು ಅನಿರೀಕ್ಷಿತವಾಗಿ, ಕಂಡೂ ಕಾಣದಂತೆ, ಕ್ರೂರನಾಟಕವಾ ಮಾರ್ಪಡುವುದೇ ಬಹಳ ಹೆಚ್ಚು. ನರ್ತಕನು ತನ್ನ ಸಂಕೋಲೆಗಳನ್ನು ಕಳಚಿಕೊಳ್ಳುತ್ತ ನರ್ತಿಸುವಂತೆ ಕಂಡ ಒಂದು ನೃತ್ಯದ ನಡುವೆ, ಇದ್ದಕ್ಕಿದ್ದಂತೆ, ಅವನೊಳಗಿನ ಮೃಗ ಹುಚ್ಚೆದ್ದು ಕುಣಿಯುತ್ತದೆ; ಮೃಗೀಯ ಉದ್ವಿಗ್ನತೆಯಿಂದ ಗರ್ಜಿಸುತ್ತ, ಕಿಡಿಕಿಡಿಯಾಗುತ್ತ, ಪುಡಿಗೂ ಸುತ್ತ, ಪ್ರತಿಯೊಬ್ಬನ ಮೇಲೂ ಪ್ರತಿಯೊಂದರ ಮೇಲೂ ಎರಗುತ್ತದೆ....

ಬಾಹ್ಯ ಪ್ರೇರಣೆಗಳಿಂದ ಉತ್ಪನ್ನವಾಗುವ ಈ ಒತ್ತಾಯದ ವಿನೋದದಿಂದ ನಾನೆಷ್ಟು ಉರಿದುಬೀಳುತ್ತಿದ್ದೆನೆಂದರೆ, ಆತ್ಮವಿಸ್ಮರಣೆಯ ಉತ್ಕಟಾವಸ್ಥೆಯಲ್ಲಿ ನನ್ನ ಕಲ್ಪನೆಗೆ ತೋಚಿದ ನ್ನೆಲ್ಲ ಸೃಷ್ಟಿಸಿಕೊಂಡು ನಾನು ಅಭಿನಯಿಸತೊಡಗುತ್ತಿದ್ದೆ. ಈ ಜನರಲ್ಲಿ ಸ್ವಚ್ಛಂದವಾದ ಸ್ವಯಂ ಸ್ಫುರಿತವಾದ ಹರ್ಷವನ್ನುಂಟುಮಾಡಬೇಕೆಂಬ ನನ್ನ ಬಯಕೆ ಎಷ್ಟೊಂದು ಅತೀವವಾಗಿತ್ತು ಅಲ್ಲದೆ ನನ್ನ ಪ್ರಯತ್ನಗಳು ಸಂಪೂರ್ಣವಾಗಿ ವಿಫಲವೂ ಆಗುತ್ತಿರಲಿಲ್ಲ. ಆ ಕಲಾಕಾರರು ಮನಸಾರೆ ಮೆಚ್ಚುತ್ತಿದ್ದರು, ಅಚ್ಚರಿಪಡುತ್ತಿದ್ದರು. ಆದರೆ, ನಾನು ಬೆದರಿಸಿದಂತೆ ಕಂಡ ಬೇಸರ ಪುನಃ ಕವಿದೇ ಕವಿಯುತ್ತಿತ್ತು, ದಟ್ಟವಾಗುತ್ತಿತ್ತು. ಮೊದಲಿನಷ್ಟೇ ಭಾರವಾಗಿ ಕೆಳಕ್ಕೆ ಒತ್ತುತ್ತಿತ್ತು.

ಇಲಿಯಂತಿರುತ್ತಿದ್ದ ಲಾರಿಯೊನಿಶ್ ಮೃದುವಾಗಿ ಹೇಳುತ್ತಿದ್ದ :

"ಎಂಥ ಪುಟ್ಟ ಖಿಲಾಡಿ ನೀನು ! ದೇವರು ನಿನ್ನನ್ನು ರಕ್ಷಿಸಲಿ !"

ಅದನ್ನು ಜಿಖರೇವ್ ಪುಷ್ಟೀಕರಿಸುತ್ತಿದ್ದ :

"ನಿಜವಾದ ಸೌಖ್ಯ ! ನೀನು ಹೋಗಿ ಒಂದು ಸರ್ಕಸನ್ನೋ ಅಥವ ಥಿಯೇಟರನ್ನೋ ಯಾಕೆ ಸೇರ್ಕೊಬಾರದು ? ನೀನೊಬ್ಬ ಸೊಗಸಾದ ವಿದೂಷಕನಾಗೋದು ಖಂಡಿತ."

ಕರ್ಮಾಗಾರದ ಜನರೆಲ್ಲರ ಪೈಕಿ ನಾಟಕ ನೋಡಲೆಂದು ಥಿಯೇಟರಿಗೆ ಹೊಗುತ್ತಿದ್ದವರು ಕಾಪೆಂಡಿಯೂಖಿನ್ ಮತ್ತು ಸಿತಾನೋವ್ ಮಾತ್ರ; ಅದೂ ಕ್ರಿಸ್‌ಮಸ್ ಹಾಗೂ ಬೂದಿಬು ವಾರಕ್ಕೆ ಹಿಂದಿನ ದಿನಗಳಲ್ಲಿ. ಈ ಪಾಪಕ್ಕೆ ಪ್ರಾಯಶ್ಚಿತ್ತವೆಂದು, ಮಂಜುಗಡ್ಡೆಯಲ್ಲಿರುವ ದೀಕ್ಷಾ ವಿಧಿಯ ತೂತಿನ ಮೂಲಕ ಜೋರ್ಡಾನಿನಲ್ಲಿ ಮುಳುಗಿ ಏಳಬೇಕೆಂದು, ಹಿರಿಯ ಕಲಾಕಾರರು ಹಿತೋಕ್ತಿಯನ್ನಾಡುತ್ತಿದ್ದರು. ಸಿತಾನೋವ್ ನನಗೆ ಪದೇಪದೇ ಹೇಳುತ್ತಿದ್ದ :

"ಇದನ್ನೆಲ್ಲಾ ಬಿಟ್ಟುಬಿಟ್ಟು ನಟನಾಗು."

ಶೋಕಪೂರ್ಣವಾದ 'ನಟ ಯಾಕೊವ್‌ಲೀವನ ಜೀವನ'ದ ಬಗೆಗೆ ಮನಕರಗಿಸು ವಿವರವನ್ನು ಆತ ನನಗೆ ಕೊಡುತ್ತಿದ್ದ.

"ನೀನೂ ಆ ರೀತಿ ಜೀವಿಸಬಹುದು," ಎನ್ನುತ್ತಿದ್ದ.

ಮೇರಿ ಸ್ಟ್ಯುವಾರ್ಟಳ ಬಗೆಗೆ ನನಗೆ ಹೇಳಲು ಅವನು ಇಷ್ಟಪಡುತ್ತಿದ್ದ. 'ಹೆಣ್ಣು ನ ಎಂದು ಅವಳನ್ನು ಕರೆಯುತ್ತಿದ್ದ. 'ಸ್ಪೇನಿನ ದೊಡ್ಡ ಮನುಷ್ಯ'ನ ವಿಷಯವಾಗಿ ಅವನಿಗೆ ವಿಶೇ ಉತ್ಸಾಹವಿರುತ್ತಿತ್ತು.

"ದಾನ್ ಸೀಸರ್ ದ—ಬಜಾನ್ ದೊಡ್ಡ ಮನುಷ್ಯರಲ್ಲೂ ಉತ್ತಮನು. ಮಾಕ್ಸಿಮಿಚ

ನಿಜವಾಗಿಯೂ ಅಪ್ರತಿಮ !"

'ಸ್ಪೇನಿನ ದೊಡ್ಡ ಮನುಷ್ಯ'ನ ಸ್ವಲ್ಪ ಗುಣಗಳು ಸ್ವತಃ ಅವನಲ್ಲೇ ಇದ್ದುವು. ಒಂದು ದಿನ ಕಾವಲುಗೋಪುರದ ಎದುರಿನ ಚೌಕದಲ್ಲಿ, ಅಗ್ನಿಶಾಮಕದಳದ ಮೂವರು ಒಬ್ಬ ರೈತನನ್ನು ಚೆನ್ನಾಗಿ ಥಳಿಸಿದರು. ಸುಮಾರು ನಾಲ್ವತ್ತು ಜನರ ಒಂದು ಗುಂಪು ಅಗ್ನಿಶಾಮಕದಳದ ಆ ಜನರನ್ನು ಹುರಿದುಂಬಿಸುತ್ತ ಆ ದೃಶ್ಯವನ್ನು ನೋಡಿತು. ಸಿತಾನೋವ್ ಆ ಗದ್ದಲದ ಸ್ಥಳಕ್ಕೆ ಧಾವಿಸಿದ. ಥಳಿಸುತ್ತಿದ್ದವರನ್ನು ತನ್ನ ನೀಳತೋಳುಗಳಿಂದ ಹೊಡೆದು ಓಡಿಸಿದ. ರೈತನನ್ನು ಮೇಲಕ್ಕೆತ್ತಿ ಜನರ ಗುಂಪಿನೆಡೆಗೆ ಅವನನ್ನು ತಳ್ಳುತ್ತ, ಕೂಗಿನುಡಿದ:

"ತಗೊಂಡು ಹೋಗಿ ಇವನನ್ನು !"

ತಾನು ಮಾತ್ರ, ಮೂವರಿಗಿದಿರು ಒಬ್ಬನಾಗಿ, ಆ ಕಲಹವನ್ನು ಮುಕ್ತಾಯಗೊಳಿಸಲೆಂದು ಅಲ್ಲೇ ನಿಂತ.

ಅಗ್ನಿಶಾಮಕಗೃಹ ಕೆಲವೇ ಹೆಜ್ಜೆಗಳ ಆಚೆಗಿತ್ತು. ಆ ಜನರು ಸಹಾಯಕ್ಕಾಗಿ ತಮ್ಮವರನ್ನು ಕೂಗುವುದೂ ಸಿತಾನೋವ್‌ಗೆ ಸರಿಯಾಗಿ ಬಾರಿಸುವುದೂ ಸುಲಭವಾಗಿತ್ತು. ಆದರೆ, ಅವನ ಅದೃಷ್ಟದಿಂದ ಅವರು ಓಡಿಯೇ ಹೋದರು.

"ನಾಯಿಮಕ್ಕಳು!" ಎಂದು, ಓಡುತ್ತಿದ್ದವರನ್ನು ಉದ್ದೇಶಿಸಿ ಅವನು ಕೂಗಾಡಿದ.

ಭಾನುವಾರದ ದಿನಗಳಲ್ಲಿ, ಪೀಟರ್ ಮತ್ತು ಪಾಲ್ ಸ್ಮಶಾನಭೂಮಿಯ ಆಚೆಗಿದ್ದ ಕಟ್ಟಿಗೆ ಕೊಟ್ಟುವ ಅಂಗಳಗಳಿಗೆ ಯುವಕರು ತೆರಳುತ್ತಿದ್ದರು—ಅಲ್ಲಿ, ನಿರ್ಮಲೀಕರಣ ದಳದ ಸದಸ್ಯರೊಡನೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ರೈತರೊಡನೆ ಕುಸ್ತಿ ನಡೆಸುತ್ತಿದ್ದರು. ದಳದ ಕಡೆ ಪ್ರಖ್ಯಾತನಾದೊಬ್ಬ ಕುಸ್ತಿಗಾರನಿದ್ದ. ಅವನು ಮೊರ್ಡೋವಿಯಾದ ಒಬ್ಬ ದೈತ್ಯ. ಅವನಿಗೆ ಸಣ್ಣದು, ಪುಟ್ಟತಲೆ ಹಾಗೂ ನೀರು ಸೋರುವ ಕಣ್ಣುಗಳು. ತನ್ನ ಬೆಂಬಲಿಗರ ಮುಂದೆ ಪಾದಗಳನ್ನು ಅಗಲಿಸಿ ಊರಿ ನಿಂತು, ಸೋರುತ್ತಿದ್ದ ಕಣ್ಣುಗಳನ್ನು ಕೊಳಕಾದ ಅಂಗಿಯ ತುಂಗೈ ಅರಿವೆಯಿಂದ ಒರಸುತ್ತ, ಸ್ನೇಹಪರ ಧ್ವನಿಯಲ್ಲಿ ಶಹರವಾಸಿಗಳಿಗೆ ಕೂಗಿ ಹೇಳುತ್ತಿದ್ದ:

"ನನಗೆ ಶೀತವಾಗೋದಕ್ಮುಂಚೆ ಬರೋ ಹಾಗಿದ್ದರೆ ಬನ್ನಿ !"

ಕಾಪೆಂಡಿಯೂಖಿನ್ ನಮ್ಮ ಪರವಾಗಿ ಅವನನ್ನು ಯಾವಾಗಲೂ ಇದಿರಿಸುತ್ತಿದ್ದ. ಆದರೆ ಮೊರ್ಡೋವಿಯನ್ ತಪ್ಪದೆ ಗೆದ್ದೇ ಗೆಲ್ಲುತ್ತಿದ್ದ.

ಏದುಸಿರು ಬಿಡುತ್ತ, ರಕ್ತ ಸೋರುತ್ತಿದ್ದಂತೆ, ಕಾಪೆಂಡಿಯೂಖಿನ್ ಕೂಗಿ ಹೇಳುತ್ತಿದ್ದ:

"ಇವನನ್ನು ಸೋಲಿಸೋದು ನನ್ನಿಂದಾಗದೇ ಹೋದರೆ, ನಾನಿದ್ದೇನು ಪ್ರಯೋಜನ ?"

ಅದು ಕೊನೆಯಲ್ಲಿ ಅವನ ಬದುಕಿನ ಏಕಮಾತ್ರ ಗುರಿಯಾಯಿತು. ಕಟ್ಟುನಿಟ್ಟಾದ ಶಿಕ್ಷಣವನ್ನು ಅವನು ಪಡೆಯತೊಡಗಿದ. ಕುಡಿಯುವುದನ್ನು ಬಿಟ್ಟುಬಿಟ್ಟ. ಹೆಚ್ಚಾಗಿ ಮಾಂಸವನ್ನೇ ತಿಂದ. ಪ್ರತಿದಿನವೂ ನಿದ್ದೆಹೋಗುವುದಕ್ಕೆ ಮುನ್ನ ಮಂಜಿನಿಂದ ತನ್ನ ಮೈಯನ್ನು ತಿಕ್ಕಿಕೊಳ್ಳುತ್ತಿದ್ದ. ಸ್ನಾಯುಗಳ ಬೆಳವಣಿಗೆಗಾಗಿ ಭಾರವನ್ನು ಅತ್ತಿತ್ತ ಎತ್ತಿ ಚಲಿಸಿದ. ಆದರೆ, ಇದು ಮಾಡುವುದರಿಂದಲೂ ಪ್ರಯೋಜನವಾಗಲಿಲ್ಲ. ಕೊನೆಯಲ್ಲಿ, ಸೀಸದ ಚೂರುಗಳನ್ನು ತನ್ನ ಕೈ ಗೊದಿಕೆಗಳ ಒಳಕ್ಕೆ ಹೆಣೆದ. ಬಳಿಕ ಸಿತಾನೋವನೊಡನೆ ಕೊಚ್ಚಿಕೊಂಡ:

"ಈ ಸಲ ಮೊರ್ಡೋವಿಯನ್ನನ ಕೊನೆಯಾಗೋದೇ ಸರಿ !"

"ಅವನನ್ನು ತೆಗೆದು ಬಿಡು. ಇಲ್ಲದೇ ಹೋದರೆ ಕುಸ್ತಿಗ್ಮುಂಚೆ ವಿಷಯ ರಟ್ಟು ಮಾಡ್ತೀನಿ," ಎಂದು ಸಿತಾನೋವ್ ನಿಷ್ಠುರವಾಗಿ ಎಚ್ಚರಿಸಿದ.

ಅವನು ಹಾಗೆ ಮಾಡಬಹುದೆಂದು ಕಾಪೆಂಡಿಯೂಖಿನ್ ಮಾತ್ರ ನಂಬಲಿಲ್ಲ. ಆದರೆ, ಕುಸ್ತಿ ಶುರುವಾಗೋದಕ್ಕೆ ತುಸು ಮುನ್ನ, ಇದ್ದಕ್ಕಿದ್ದಂತೆ ಮೊರ್ಡೋವಿಯನ್ನಿಗೆ ಸಿತಾನೋವ್ ಕೂ ಹೇಳಿದ :

"ಸ್ವಲ್ಪ ತಾಳು, ವಾಸಿಲಿ ಇವಾನೋವಿಚ್ ! ಕಾಪೆಂಡಿಯೂಖಿನನ ಜತೆ ಮೊದಲು ನಾನ ಕುಸ್ತಿ ಮಾಡ್ತೀನಿ !"

ಕೊಸ್ಸಾಕನ ಮುಖ ಕೆಂಪೇರಿತು. ಅವನು ರೇಗಾಡಿದ:

"ನಿನ್ನ ಜತೆ ನಾನು ಕುಸ್ತಿ ಹಿಡಿಯೋದಿಲ್ಲ ! ಹೊರಬೀಳು ಇಲ್ಲಿಂದ !"

"ಓಹೋ, ಕುಸ್ತಿ ಹಿಡಿದೇ ಹಿಡೀತೀಯಾ," ಎಂದು, ಮುಂದುವರಿಯುತ್ತ, ಆಗ್ರಹದ ನೋ ದಿಂದ ಇರಿಯುವಂತೆ ನೋಡುತ್ತ, ಸಿತಾನೋವ್ ನುಡಿದ. ಕಾಪೆಂಡಿಯೂಖಿನ್ ಒಂದ ನಿಮಿಷ ಹಿಂದುಮುಂದು ನೋಡಿದ. ಬಳಿಕ, ತನ್ನ ಕೈ ಹೊದಿಕೆಗಳನ್ನು ಕಿತ್ತು ತೆಗೆದು, ತನ ಕೋಟಿನ ಎದೆಯ ಜೇಬಿನೊಳಕ್ಕೆ ತುರುಕಿ, ಬೇಗಬೇಗನೆ ಅಲ್ಲಿಂದ ನಡೆದುಹೋದ.

ಎರಡು ಗುಂಪುಗಳ ಪಾಲಿಗೂ ಇದು ಅಪ್ರಿಯವಾದ ಆಶ್ಚರ್ಯವಾಗಿತ್ತು. ಗೌರವಸ್ಥನಂ ಕಂಡ ಮನುಷ್ಯನೊಬ್ಬ ಸಿತಾನೋವನೊಡನೆ ಸಿಟ್ಟಿನಿಂದ ಅಂದ :

"ಖಾಸಗೀ ಬಾಕಿಯನ್ನೆಲ್ಲ ಸಾರ್ವಜನಿಕವಾಗಿ ಸಂದಾಯಮಾಡೋಕೆ ನೋಡೋದ ನಿಯಮಗಳಿಗೆ ವಿರುದ್ಧ ಕಣ್ಣಪ್ಪ."

ಎಲ್ಲ ದಿಕ್ಕುಗಳಿಂದಲೂ ಜನರು ಸಿತಾನೋವನ ಮೇಲೆ ಬೈಗಳ ಮಳೆಗರೆದರು. ಬಹ ಹೊತ್ತು ಆತ ಮೌನವಾಗಿದ್ದ. ಬಳಿಕ, ಗೌರವಸ್ಥನಂತೆ ಕಂಡ ಮನುಷ್ಯನಿಗೆ ಹೇಳಿದ :

"ಒಂದು ಕೊಲೆಯಾಗೋದನ್ನು ನಾನು ತಪ್ಪಿಸಿದೀನಿ ಅಂದರೆ ಏನಂತಿಯಾ ?"

ಗೌರವಸ್ಥನಂತೆ ಕಂಡ ಮನುಷ್ಯನಿಗೆ ತಕ್ಷಣವೆ ಅರ್ಥವಾಯಿತು. ಆತ ತನ್ನ ಟೋ ಯನ್ನು ಕೂಡಾ ತುಸು ಎತ್ತುತ್ತ ಹೇಳಿದ :

"ಹಾಗಾದರೆ, ನಮ್ಮ ಕಡೆಯಿಂದ ಇಗೋ ಕೃತಜ್ಞತಾರ್ಪಣೆ."

"ದಯವಿಟ್ಟು ವಿಷಯ ಬೇರೆಯವರ ಜತೆ ಮಾತಾಡ್ಬೇಡ, ಅಷ್ಟೆ."

"ನಾನು ಯಾಕೆ ಮಾತಾಡಲಿ ? ಕಾಪೆಂಡಿಯೂಖಿನ್ ಒಬ್ಬ ಅಪೂರ್ವ ಕುಸ್ತಿಗಾರ. ಪ್ರ ಸಲವೂ ಸೋಲದು ಅಂದರೆ ಯಾರಿಗಾದರೂ ಸಿಟ್ಟು ಕೆರಳೀತು. ನಮಗದು ಅರ್ಥವಾಗ್ತ ಆದರೆ ಇವತ್ತಿನಿಂದ, ಕುಸ್ತಿಗೆ ಮುಂಚೆ ಅವನ ಕೈಹೊದಿಕೆಗಳನ್ನಷ್ಟು ಪರೀಕ್ಷಿಸ್ತೇವೆ."

"ಅದು ನಿಮಗೆ ಸಂಬಂಧಿಸಿದ್ದು."

ಗೌರವಸ್ಥನಂತೆ ಕಾಣುತ್ತಿದ್ದ ಆ ಮನುಷ್ಯ ಹೊರಟುಹೋದ ಬಳಿಕ, ನಮ್ಮವರು ಸಿತಾನೋ ವನನ್ನು ಸಲಿಗೆಯ ಸಿಟ್ಟಿನಿಂದ ಜರೆದರು.

"ಯಾಕೆ ಹಾಗೆ ಮಾಡಿದೆ, ಪೆದ್ದೆ ? ಕೊಸ್ಸಾಕ್ ಅವನನ್ನು ಮಣ್ಣು ಮುಕ್ಕಿಸ್ತಿದ್ದ. ಈ ನಾವೇ ಮಣ್ಣು ಮುಕ್ಕಿದೆವು."

ಬಹಳ ಹೊತ್ತು, ಪುನಃ ಪುನಃ,—ಸಂತೋಷಪಡುತ್ತ—ನಾವು ಅವನನ್ನು ಛೀಗಳೆದೆವು.

ಸಿತಾನೋವ್ ಬರೇ ನಿಟ್ಟುಸಿರುಬಿಟ್ಟು, ಅಂದ:

"ಥ್ಥೂ, ನರಾಧಮ...."

ಬಳಿಕ ಆತ, ಮೊರ್ಡೋವಿಯನ್ನನನ್ನು ತಾನೇ ಕುಸ್ತಿಗೆ ಕರೆದು, ಎಲ್ಲರನ್ನೂ ಆಶ್ಚರ್ಯಕ್ಕೀಡು ಮಾಡಿದ. ಮೊರ್ಡೋವಿಯನ್ ತನ್ನ ಸ್ಥಳದಲ್ಲಿ ಸರಿಯಾಗಿ ನಿಂತು, ಕೀವಿಯಿಂದ ಮುಷ್ಟಿಗಳನ್ನು ಅಲುಗಿಸುತ್ತ, ಪರಿಹಾಸ್ಯದ ಧ್ವನಿಯಲ್ಲಿ ಕೂಗಿ ನುಡಿದ:

"ಮೈ ಬಿಸಿ ಮಾಡಿಕೊಳ್ಳೋದಕ್ಕೆ—ಪುಟ್ಟದೊಂದು ತಿಕ್ಕಾಟ!"

ಪ್ರೇಕ್ಷಕರಲ್ಲಿ ಅನೇಕರು ಹತ್ತಿರವಿದ್ದವರ ಕೈಗಳನ್ನು ಅಮುಕಿ ಹಿಡಿದು, ಹಿಂದಿದ್ದವರನ್ನು ಹಿಂದಕ್ಕೆ ತಳ್ಳುತ್ತ ಒಂದು ವೃತ್ತವನ್ನು ರಚಿಸಿದರು.

ಇಬ್ಬರು ಕುಸ್ತಿಗಾರರೂ ಹೊಡೆದಾಡದೆಯೇ ಸುತ್ತು ಸುತ್ತು ಬಂದರು. ಕಣ್ಣುಗಳು ಪರಸ್ಪರರ ಮುಖಗಳಿಗೆ ಅಂಟಿಕೊಂಡಂತೆ ನೆಟ್ಟಿದ್ದುವು. ಬಲಮುಷ್ಟಿಗಳು ಮುಂದಕ್ಕೆ ಚಾಚಿದ್ದುವು; ಎಡಮುಷ್ಟಿಗಳು ಅವರ ಎದೆಗಳಿಗೆ ಬಿಗಿದು ಒತ್ತಿಕೊಂಡಿದ್ದುವು. ಸಿತಾನೋವನ ತೋಳುಗಳು ಮೊರ್ಡೋವಿಯನ್ನನ ತೋಳುಗಳಿಗಿಂತ ಹೆಚ್ಚು ನೀಳವಾಗಿದ್ದುವೆಂಬುದನ್ನು ಅನುಭವಿಕ ಪ್ರೇಕ್ಷಕರು ತಕ್ಷಣವೇ ಗಮನಿಸಿದರು. ಕುಸ್ತಿಗಾರರ ಪದಹತಿಗೆ ಸಿಲುಕಿ ಹಿಮ ಪುಡಿಗೂಡುತ್ತಿದ್ದುದರ ಹೊರತಾಗಿ ಉಳಿದುದೆಲ್ಲವೂ ನೀರವವಾಯಿತು. ಈ ಮೌನ ಪರಿಸ್ಥಿತಿ ಅಸಹನೀಯವಾಗಿ ಕಂಡು, ದುರಾಶೆಯಿಂದ ದೂರಿಕೊಳ್ಳುತ್ತ ಯಾರೋ ಗೊಣಗಿದರು:

"ಇನ್ನಾದರೂ ಒಬ್ಬರಿಗೊಬ್ಬರು ಇವರು ಕಿಚ್ಚಿಡಬೇಕು."

ಸಿತಾನೋವ್ ತನ್ನ ಬಲಮುಷ್ಟಿಯನ್ನು ಬೀಸಿದ. ಮೊರ್ಡೋವಿಯನ್ ಆತ್ಮರಕ್ಷಣೆಗಾಗಿ ಎಡಮುಷ್ಟಿಯನ್ನೆತ್ತಿದ. ಹೊಟ್ಟೆಯ ತಳಕ್ಕೆ ಸಿತಾನೋವನ ಎಡಮುಷ್ಟಿಯಿಂದ ನೇರವಾದ ಒಂದು ಹೊಡೆತವನ್ನು ಸ್ವೀಕರಿಸಿದ. ಹೂಂಕರಿಸಿ ಹಿಂದಕ್ಕೆ ಸರಿಯುತ್ತ, ತಲೆದೂಗುತ್ತ, ಆತನೆಂದ.

"ಯುವಕನಾಗಿರೋ ನೀನು ಮೂರ್ಖನೇನೂ ಅಲ್ಲ."

ಬಳಿಕ ಅವರು, ಪರಸ್ಪರರ ಎದೆಗಳಿಗೆ ಮುಷ್ಟಿ ಪ್ರಹಾರ ನಡೆಸುತ್ತ ಕಾದಾಡಿದರು. ಕೆಲವೇ ನಿಮಿಷಗಳಲ್ಲಿ ಎರಡೂ ಪಕ್ಷಗಳಿಂದ ಉದ್ವೇಗದ ಕೂಗಾಟಗಳು ಕೇಳಿಸಿದುವು:

"ಹೊಂ, ಲಗಾಯಿಸು, ದೇವಕಲಾಕಾರನೇ! ಅವನ ಮುಸುಡನ್ನು ಅಲಂಕರಿಸು!"

ಮೊರ್ಡೋವಿಯನ್, ಸಿತಾನೋವನಿಗಿಂತ ಎಷ್ಟೋ ಹೆಚ್ಚು ಬಲಿಷ್ಠನಾಗಿದ್ದ; ಆದರೆ ಅವನಷ್ಟು ಚುರುಕಾಗಿರಲಿಲ್ಲ, ಸಿತಾನೋವನಷ್ಟು ವೇಗವಾಗಿ ಮುಷ್ಟಿ ಪ್ರಹಾರ ಮಾಡಲಾಗದೆ, ತಾನು ಕೊಟ್ಟ ಒಂದು ಪೆಟ್ಟಿಗೆ ಪ್ರತಿಯಾಗಿ ಎರಡು ಅಥವಾ ಮೂರು ಪೆಟ್ಟುಗಳನ್ನು ಪಡೆಯುತ್ತಿದ್ದ.

ಆದರೆ, ಈ ಗುದ್ದಾಟದಿಂದ ಅವನ ಮೇಲೆ ಯಾವ ಪರಿಣಾಮವೂ ಆದಂತೆ ತೋರಲಿಲ್ಲ. ಯಾಕೆಂದರೆ, ಅವನು ಗರ್ಜಿಸುತ್ತ, ಎದುರಾಳಿಯನ್ನು ತುಚ್ಛೀಕರಿಸುತ್ತಲೇ ಇರುತ್ತಿದ್ದ. ಬಳಿಕ ಒಮ್ಮಿಂದೊಮ್ಮೆಲೆ, ಮೇಲ್ಮುಖವಾದ ಬಲಿಷ್ಠ ಹೊಡೆತದಿಂದ, ಸಿತಾನೋವನ ಬಲತೋಳನ್ನು ಅದರ ಸ್ಥಾನದಿಂದ ಆತ ಕದಲಿಸಿಬಿಟ್ಟ.

"ಇಬ್ಬರನ್ನೂ ಬೇರ್ಪಡಿಸಿ! ಪಂದ್ಯ ಸಮನಾಯ್ತು!" ಎಂದು ಅನೇಕ ಸ್ವರಗಳು ಏಕಕಾಲದಲ್ಲೇ ಕೂಗಿ ಹೇಳಿದುವು. ಪ್ರೇಕ್ಷಕರು ಮುಂದಕ್ಕೆ ಧಾವಿಸಿ ಆ ಇಬ್ಬರನ್ನೂ ಬೇರ್ಪಡಿಸಿದರು.

ಮೊರ್ಡೋವಿಯನ್ ಸದ್ಭಾವನೆಯಿಂದ ಅಂದ:

"ದೇವಕಲಾಕಾರ ಅಷ್ಟೇನೂ ಬಲಿಷ್ಠನಲ್ಲ. ಆದರೆ, ಅವನ ಚಲನೆ ತೀವ್ರವಾಗಿದೆ. ಇನ್ನು ಕೂಡಾ ಅವನೊಳ್ಳೇ ಕುಸ್ತಿಗಾರನಾಗಬಲ್ಲ. ಹಾಗೆ ಹೇಳೋದಕ್ಕೆ ನನಗೆ ನಾಚಿಕೆ ಎನಿಸೋದಿಲ್ಲ."

ಪ್ರೇಕ್ಷಕರಾಗಿದ್ದ ಎಳೆಯರು ಸಾರ್ವತ್ರಿಕ ಹೊಡೆದಾಟ ಆರಂಭಿಸಿದರು. ನಾನು ಸಿತಾನೋವನನ್ನು ಮೂಳೆ ಜೋಡಿಸುವವನಲ್ಲಿಗೆ ಕರೆದೊಯ್ದೆ. ಅವನು ಮಾಡಿದ್ದುದನ್ನು ಕಂಡು, ಅವನ ಬಗೆಗೆ ನನ್ನ ಆದರ ಮತ್ತಷ್ಟು ಹೆಚ್ಚಿತು. ಅವನ ಬಗೆಗೆ ನನ್ನ ಒಲವನ್ನೂ ಗೌರವವನ್ನೂ ಮತ್ತೂ ಹೆಚ್ಚಿಸಿತು.

ಆತ ಬಲು ನ್ಯಾಯವಂತನಾಗಿ ಪ್ರಾಮಾಣಿಕನಾಗಿ ವರ್ತಿಸಿದ್ದ. ಇದು ಬರೇ ತನ್ನ ಕರ್ತವ್ಯ ಎಂಬಂತೆ ನಡೆದುಕೊಂಡಿದ್ದ. ಆದರೆ, ಕಲಹಪ್ರಿಯ ಕಾಪೆಂಡಿಯೂಖಿನ್ ಅವನ ಬಗೆಗೆ ಪರಿಹಾಸ್ಯದ ಮಾತನ್ನಾಡಿದ.

"ಸಿತಾನೋವ್, ಯಾವಾಗಲೂ ಉಫ್ ಉಫ್ ಅಂತ ಊದಿ ಉಬ್ಬಿಕೊಂಡಿರ್ತೀಯಲ್ಲೋ! ಹ್ಞ? ಚಹಾದಾನೀನ ಬೆಳಗೋ ಹಾಗೆ ನಿನ್ನ ಆತ್ಮವನ್ನು ಬೆಳಗಿ, ಬಡಾಯಿ ಕೊಚ್ಕೊಳ್ತಾ ಅಲೀತೀಯಾ—ನೋಡಿ ಎಂಥ ಜಾಜ್ವಲ್ಯಪ್ರಭೆ ನಾನು, ಅಂತ! ಆದರೆ, ನಿನ್ನಲ್ಲಿರೋದು ಹಿತ್ತಾಳೆಯ ಆತ್ಮ; ಸಾಲದ್ದಕ್ಕೆ ನೀನೊಬ್ಬ 'ಬೈರಿಗೆ' ಬೇರೆ!"

ಸಿತಾನೋವ್ ಒಂದೇ ಸಮನೆ ದುಡಿಯುತ್ತ ಹೋಗುತ್ತಿದ್ದ; ಅಥವಾ, ಲೆರ್ಮೊಂಟೋವನ ಕವಿತೆಯನ್ನು ತನ್ನ ಟಿಪ್ಪಣಿ ಪುಸ್ತಕದಲ್ಲಿ ಪ್ರತಿಮಾಡುತ್ತಿದ್ದ. ಆತನ ಬಿಡುವಿನ ವೇಳೆಯಲ್ಲ ಹೀಗೆ ಪ್ರತಿಮಾಡುವುದರಲ್ಲೇ ಕಳೆಯುತ್ತಿತ್ತು. ಒಮ್ಮೆ ಅವನಿಗೆ ನಾನೆಂದೆ:

"ನಿನ್ನಲ್ಲಿ ಹಣವಿದೆಯಲ್ಲ. ಹೋಗಿ ಒಂದು ಪುಸ್ತಕವನ್ನೇ ನೀನು ನಿನಗಾಗಿ ಯಾಕೆ ಕೊಂಡ್ಕೋಬಾರದು?"

"ಇಲ್ಲ, ಸ್ವಂತ ಹಸ್ತಾಕ್ಷರದಲ್ಲೇ ಪ್ರತಿಮಾಡೋದು ಚೆನ್ನಾಗಿರ್ತದೆ," ಎಂದು ಅವನು ಉತ್ತರವಿತ್ತ.

ವಿಸ್ತಾರವಾಗಿ ಒಂದು ಪುಟವನ್ನು ಬರೆದಾದ ಬಳಿಕ, ಮಸಿ ಆರುವುದನ್ನೆ ಕಾಯುತ್ತ ಮೆಲುದನಿಯಲ್ಲಿ ಆತ ಓದುತ್ತಿದ್ದ:

ವಿಷಾದವಿಲ್ಲದೆ, ಏನೂ ಅನಿಸದೆ
ಈ ಬುವಿಯಿಂದ ಮೊಗತಿರುಹುವೆ ನೀ;
ಇಲ್ಲಾದರೋ ಸಂತಸವೆಲ್ಲಾ ಕ್ಷಣಿಕ
ಸೊಬಗೆಲ್ಲಾ ದಿನ ಒಂದರ ಬದುಕು

ತನ್ನ ಕಣ್ಣುಗಳನ್ನು ಕಿರಿದುಗೊಳಿಸಿ ನೆಟ್ಟನೋಟದಿಂದ ನೋಡುತ್ತ ಅವನೆನ್ನುತ್ತಿದ್ದ:

"ಇದೀಗ ಸತ್ಯ. ಹ್ಹಾ, ಆ ಕವಿ ಸತ್ಯವನ್ನ ಎಷ್ಟು ಚೆನ್ನಾಗಿ ನೋಡೋಕೆ ಶಕ್ತನಾದ!"

ಕಾಪೆಂಡಿಯೂಖಿನನೊಡನೆ ಸಿತಾನೋವ್ ನಡೆದುಕೊಳ್ಳುತ್ತಿದ್ದ ರೀತಿ ಕಂಡು ನಾನು ಅಪ್ರತಿಭನಾದೆ. ಕುಡಿದು ಮತ್ತೇರಿದಾಗಲೆಲ್ಲ ಕಾಪೆಂಡಿಯೂಖಿನ್ ಸಿತಾನೋವನೊಡನೆ ಜಗಳ ಆರಂಭಿಸುತ್ತಿದ್ದ. ಆತ ಜಗಳವಾಡದಂತೆ ಮಾಡಲು ಸಿತಾನೋವ್ ಸಹನೆಯಿಂದ ಯತ್ನಿಸುತ್ತಿದ್ದ.

"ದೂರ ಹೋಗು! ನನ್ನನ್ನು ಮುಟ್ಟಬೇಡ."

ಕೊನೆಯಲ್ಲಿ ಸಿತಾನೋವ್, ಆ ಕುಡುಕನನ್ನು ನಿರ್ದಯವಾಗಿ ಹೊಡೆಯತೊಡಗುತ್ತಿದ್ದ. ಹೊಡೆತ ಎಷ್ಟು ನಿರ್ದಯವಾಗಿರುತ್ತಿತ್ತೆಂದರೆ, ಸಾಧಾರಣವಾಗಿ ಜಗಳವನ್ನು ನೋಡಲು ಇಷ್ಟ ಪಡುತ್ತಿದ್ದ ಇತರ ಕಲಾಕಾರರು, ನಡುವೆ ಪ್ರವೇಶಿಸಿ, ಸ್ನೇಹಿತರನ್ನೆಳೆದು ಬೇರ್ಪಡಿಸುತ್ತಿದ್ದರು.

"ಸಕಾಲದಲ್ಲಿ ಸಿತಾನೋವನನ್ನು ನಾವು ತಡೆಯದೇ ಇದ್ದರೆ, ತನ್ನ ಗತಿ ಏನಾದೀತೆಂಬ ಯೋಚನೆಯನ್ನೂ ಮಾಡದೆ ಈತ ಅವನನ್ನು ಸಾಯಬಡಿಯೋದೇ ಖಂಡಿತ," ಎಂದು ಅವರೆನ್ನು ತ್ತಿದ್ದರು.

ಅಮಲು ಇಳಿದಿದ್ದಾಗಲೂ ಕಾಪೆಂಡಿಯೂಖಿನ್ ಸದಾ ಸಿತಾನೋವನಿಗೆ ಕೀಟಲೆ ಕೊಡುತ್ತಿದ್ದ. ಅವನ ಕಾವ್ಯಪ್ರೇಮವನ್ನೂ ದುರದೃಷ್ಟಕರ ಪ್ರಣಯ ಪ್ರಸಂಗವನ್ನೂ ಛೀಗಳೆ ಯುತ್ತಿದ್ದ. ಅವನ ಅಸೂಯೆಯನ್ನು ಕೆಣಿಸಲು, ತುಚ್ಛವಾದ ಆದರೆ ವ್ಯರ್ಥವಾದ—ಪ್ರಯತ್ನ ಗಳನ್ನು ಮಾಡುತ್ತಿದ್ದ. ಕೊಸ್ಸಾಕನ ಚಾಟೂಕ್ತಿಗಳನ್ನೆಲ್ಲ—ಯಾವ ಉತ್ತರವನ್ನೂ ಕೊಡದೆ, ಸಿಟ್ಟನ್ನೂ ತಳೆಯದೆ, ಸಿತಾನೋವ್ ಆಲಿಸುತ್ತಿದ್ದ. ಕೆಲವೊಮ್ಮೆ ಕಾಪೆಂಡಿಯೂಖಿನನ ಜತೆ ತಾನೂ ನಗುತ್ತಿದ್ದ ಕೂಡಾ.

ಅವರು ಒಬ್ಬರ ಮಗ್ಗುಲಲ್ಲೊಬ್ಬರು ಮಲಗುತ್ತಿದ್ದರು. ರಾತ್ರೆ ಬಹಳ ಹೊತ್ತಿನವರೆಗೂ ಪಿಸುನುಡಿಯುತ್ತ ಎಚ್ಚರವಿರುತ್ತಿದ್ದರು.

ಈ ನಿಶಾಸಂವಾದದಿಂದ ನನ್ನ ಕುತೂಹಲ ಕೆರಳುತ್ತಿತ್ತು. ಇಷ್ಟೊಂದು ತೀರಾ ಭಿನ್ನರಾದ ಈ ಇಬ್ಬರಿಗೆ, ಈ ರೀತಿ ಸೌಹಾರ್ದದಿಂದ ಮಾತನಾಡುವಂತಹ ವಿಷಯವಾದರೂ ಏನಿದ್ದೀತೆಂದು ನಾನು ಅಚ್ಚರಿಪಟ್ಟೆ. ಆದರೆ, ನಾನು ಅವರ ಬಳಿ ಸಾರಿದಾಗಲೆಲ್ಲ, ಕೊಸ್ಸಾಕನೆನ್ನುತ್ತಿದ್ದ :

"ಇಲ್ಲೇನು ಮಾಡ್ತಿದೀಯಾ ನೀನು ?"

ಸಿತಾನೋವ್ ನನ್ನನ್ನು ಲಕ್ಷಿಸುತ್ತಲೇ ಇರಲಿಲ್ಲ.

ಆದರೆ ಒಮ್ಮೆ ಅವರು ನನ್ನನ್ನು ತಮ್ಮೆಡೆಗೆ ಕರೆದರು.

ಕೊಸ್ಸಾಕನೆಂದ :

"ಮಾಕ್ಸಿಮಿಶ್, ನಿನ್ನ ಹತ್ತಿರ ಹೇರಳ ಹಣ ಇತ್ತೂಂತಿಟ್ಕೊ; ಅದನ್ನೇನು ಮಾಡ್ತೀಯಾ ನೀನು ?"

"ಪುಸ್ತಕ ಕೊಳ್ತೀನಿ."

"ಬೇರೇನು ?"

"ಗೊತ್ತಿಲ್ಲ."

"ಛೆ !" ಎಂದು ಕಾಪೆಂಡಿಯೂಖಿನ್, ಆ ಕಡೆಗೆ ಹೊರಳುತ್ತ, ನಿರಾಸೆಯಿಂದ ನಿಟ್ಟುಸಿರು ಬಿಟ್ಟ."

ಶಾಂತವಾಗಿ ಸಿತಾನೋವನೆಂದ :

"ನೋಡಿದೆಯಾ ? ಮುದುಕರಿರಲಿ, ಯುವಕರಿರಲಿ, ಇದನ್ನು ಹೇಳೋದು ಯಾರಿಂದಲೂ ಸಾಧ್ಯವಿಲ್ಲ. ಬರೇ ಶ್ರೀಮಂತಿಕೆಯಿಂದ ಏನೂ ಮಾಡೋಹಾಗಿಲ್ಲ ಅಂತ ನಾನು ಹೇಳ್ತಿದೀನಿ. ಶ್ರೀಮಂತಿಕೆಯ ಜತೆಯಲ್ಲಿರುತ್ತಲ್ಲಾ ಅದು ಮುಖ್ಯವಾದದ್ದು."

"ನೀವು ಯಾತರ ಬಗ್ಗೆ ಮಾತಾಡ್ತಿದೀರಿ ? ಎಂದು ನಾನು ಕೇಳಿದೆ.

"ವಿಶೇಷವೇನೂ ಇಲ್ಲ. ಸುಮ್ಮನೆ ವೇಳೆ ಕೊಲ್ತಿದೀವಿ—ನಿದ್ದೆ ಬರ್‍ಲಿಲ್ಲಾಂತ," ಎಂದು ಕೊಸ್ಸಾಕ್ ಉತ್ತರವಿತ್ತ.

ಆದರೆ ಮುಂದೆ, ತಮ್ಮ ಮಾತುಕತೆಗೆ ಕಿವಿಗೊಡಲು ಅವರು ನನಗೆ ಸಮ್ಮತಿ ಇತ್ತರು. ಹಗಲು ಹೊತ್ತು ಜನರು ಚರ್ಚಿಸುವ ವಿಷಯಗಳನ್ನೆ ಎತ್ತಿಕೊಂಡು ಚರ್ಚಿಸುತ್ತ ಇರುಳುಗಳನ್ನು ಅವರು ಕಳೆಯುತ್ತಿದ್ದರೆಂಬುದನ್ನು ನಾನು ಕಂಡುಹಿಡಿದೆ. ದೇವರು, ನ್ಯಾಯ, ಸುಖ, ಸ್ತ್ರೀಯರ ಕುತಂತ್ರ ಬುದ್ಧಿ ಮತ್ತು ಮೂರ್ಖತನ, ಶ್ರೀಮಂತರ ದುರಾಶೆ, ಸಾಮಾನ್ಯವಾಗಿ ಬದುಕು ಅರ್ಥವಾಗದಂತಹ ಗೊಂದಲವೆಂಬ ಸಂಗತಿ—ಇವೆಲ್ಲಾ ಅವರ ಚರ್ಚೆಯ ವಿಷಯವಾಗಿದ್ದುವು.

ನಾನು ಯಾವಾಗಲೂ ಆತುರದಿಂದ ಕಿವಿಗೊಟ್ಟು ಕೇಳುವ ಶ್ರೋತೃವಾಗಿದ್ದೆ. ಅವರ ಸಂಭಾಷಣೆಗಳಿಂದ ನನ್ನಲ್ಲಿ ತೀವ್ರ ಪ್ರತಿಕ್ರಿಯೆಗಳುಂಟಾಗುತ್ತಿದ್ದುವು. ಬದುಕು ಕೆಟ್ಟುದೆಂದೂ ಅದನ್ನು ಉತ್ತಮಗೊಳಿಸಬೇಕೆಂದೂ ಅವರು ಒಪ್ಪಿದುದನ್ನು ಕಂಡು ನನಗೆ ಸಂತೋಷವಾಯಿತು. ಆದರೆ ಉತ್ತಮಗೊಳಿಸಬೇಕೆಂಬ ಬರಿಯ ಬಯಕೆ ಯಾರಮೇಲೆಯೂ ಯಾವ ಹೊಣೆಯನ್ನು ಹೊರಿಸುತ್ತಿರಲಿಲ್ಲ; ಕರ್ಮಾಗಾರದೊಳಗಿನ ಜೀವನವನ್ನಾಗಲೀ ಕಲಾಕಾರರೊಳಗಿನ ಪರಸ್ಪರ ಸಂಬಂಧವನ್ನಾಗಲೀ ಅದು ಬದಲಾಯಿಸಲಿಲ್ಲ. ಈ ವಿಷಯವನ್ನೂ ಆಗಲೇ ನಾನು ಮನಗಂಡೆ. ಈ ಮಾತುಕತೆಯೆಲ್ಲ ಬದುಕಿನ ಬಗೆಗೆ ಒಂದು ಒಳನೋಟವನ್ನು ಕೊಡುತ್ತ, ಅದನ್ನೊಂದು ರೀತಿಯ ನೀರಸ ಶೂನ್ಯವಾಗಿ ನನಗೆ ತೋರಿಸಿಕೊಟ್ಟಿತು. ಆ ಶೂನ್ಯದಲ್ಲಿ ಜನರು, ಬೀಸುವಗಾಳಿಗೆ ತುತ್ತಾದ ಕೆರೆಯ ಮೇಲಣ ಒಣ ಎಲೆಗಳ ಹಾಗೆ, ಗೊತ್ತುಗುರಿ ಇಲ್ಲದೆ ಅತ್ತಿತ್ತ ಸರಿಯುತ್ತಿದ್ದರು; ಆ ಬಗೆಗೆ ಗುರಿಯಿಲ್ಲದ ಸರಿದಾಟವನ್ನು ತಾವೇ ಇಷ್ಟಪಡದೆ, ತಾವೇ ಅದನ್ನು ಹೀಗೆಳೆಯುತ್ತಿದ್ದರು.

ಯಾವಾಗಲೂ ಆ ಕಲಾಕಾರರು ಜಂಭಕೊಚ್ಚುತ್ತಿದ್ದರು, ಇಲ್ಲವೆ ಪಶ್ಚಾತ್ತಾಪಪಡುತ್ತಿದ್ದರು, ಅಥವಾ ಬೇರೆ ಯಾರಮೇಲೋ ತಪ್ಪು ಹೊರಿಸುತ್ತಿದ್ದರು; ಕ್ಷುಲ್ಲಕ ಕಾರಣಗಳಿಗಾಗಿ ಘೋರ ಕಲಹಗಳನ್ನು ಆರಂಭಿಸುತ್ತಿದ್ದರು; ಪರಸ್ಪರರನ್ನು ಬಹಳ ತೀಕ್ಷ್ಣವಾಗಿ ನೋಯಿಸುತ್ತಿದ್ದರು; ಪರಲೋಕದಲ್ಲಿ ತಮಗೇನಾಗುವುದೆಂಬುದನ್ನು ಊಹಿಸುತ್ತ ಅವರು ಕಾಲಕಳೆಯುತ್ತಿದ್ದರು. ಆದರೆ ಇಲ್ಲಿ, ಬಾಗಿಲ ಹತ್ತಿರವಿದ್ದ ಕೊಳೆನೀರಿನ ಬಕೀಟಿನ ಬಳಿ, ನೆಲಹಲಿಗೆಯೊಂದು ಕೊಳೆತು ಹೋಗಿತ್ತು; ಅದರಲ್ಲೊಂದು ತೂತಾಗಿತ್ತು; ಆ ತೂತಿನ ಮೂಲಕ ಒದ್ದೆ ಮಣ್ಣನ್ನು ಒರಸುತ್ತಿದ್ದ ತೇವ ತುಂಬಿದ ಚಳಿಗಾಳಿ ಮೇಲೆದ್ದು ನಮ್ಮ ಪಾದಗಳನ್ನು ಹೆಪ್ಪುಗಟ್ಟಿಸಿತು. ಪಾವೆಲ್ ಮತ್ತು ನಾನು, ಹುಲ್ಲಿನಿಂದಲೂ ಇತರ ಚಿಂದಿಗಳಿಂದಲೂ ಆ ತೂತನ್ನು ಮುಚ್ಚಿದೆವು. ಹೊಸತೊಂದು ನೆಲಹಲಗೆಯನ್ನು ಹಾಕಬೇಕೆಂದು ಅವರೆಲ್ಲ ಆಗಾಗ್ಗೆ ಮಾತನಾಡುತ್ತಿದ್ದರು. ಆದರೆ ಆ ತೂತು ಮಾತ್ರ ದಿನಕಳೆದಂತೆ ಹೆಚ್ಚು ಹೆಚ್ಚು ದೊಡ್ಡದಾಗುತ್ತಲೇ ಇತ್ತು. ಹಿಮಗಾಳಿ ಬೀಸುತ್ತಿದ್ದ ದಿನಗಳಲ್ಲಿ ಗಾಳಿ ತುತೂರಿಯಂತೆ ಭೋರ್ಗರೆಯುತ್ತಿತ್ತು; ಕೆಮ್ಮು ನೆಗಡಿಗಳಿಗೆ ಕಾರಣವಾಗುತ್ತಿತ್ತು. ಗಾಳಿ ಕಿಂಡಿಯ ಮೇಲಣದ ತಗಡಿನ ಮುಚ್ಚಳದ ಕರಕಟ ಸಪ್ಪಳವಂತೂ ಭೀಕರವಾಗಿತ್ತು. ಜನರು ಅತ್ಯಂತ ತುಚ್ಛ ಭಾಷೆಯಲ್ಲಿ ತನ್ನನ್ನು ಶಪಿಸುವಂತೆ ಅದು ಮಾಡುತ್ತಿತ್ತು. ಆದರೆ, ತಗಡಿನ ಕೀಲಿಗಳಿಗೆ ಎಣ್ಣೆ ಸವರಿ ಸಪ್ಪಳವಾಗದಂತೆ ನಾನು ಮಾಡಿದಾಗ, ಜಿಖರೇವ್ ಕಿವಿನಿಗುರಿಸಿ ಅಂದ:

"ಕರಕಟ ಸಪ್ಪಳವಿಲ್ಲದೆ ಮತ್ತಷ್ಟು ಬೇಸರ ಅನಿಸ್ತಿದೆ."

ಸ್ನಾನಗೃಹದಿಂದ ಹಿಂತಿರುಗಿದ ಅವರು, ತಮ್ಮ ಹೊಲಸು ಹಾಸಿಗೆಗಳ ಮೇಲೆ ಉರುಳಿಕೊಳ್ಳುತ್ತಿದ್ದರು. ಕಶ್ಮಲವನ್ನೂ ದುರ್ಗಂಧವನ್ನೂ ಇಲ್ಲಿ ಯಾರೂ ಗಮನಿಸುತ್ತಿರಲಿಲ್ಲ. ಬದುಕನ್ನು ಯಾತನಾಮಯವಾಗಿ ಮಾಡಿದಂತಹ ಇಂತಹ ಸಣ್ಣ ಪುಟ್ಟ ವಿಷಯಗಳು ಅಸಂಖ್ಯವಾಗಿದ್ದುವು. ಅವುಗಳನ್ನೆಲ್ಲ ನಿವಾರಿಸುವುದು ಸಾಧ್ಯವಿತ್ತು. ಆದರೆ, ಆ ಪ್ರಯತ್ನವನ್ನು ಮಾತ್ರ ಯಾರೂ ಮಾಡುತ್ತಿರಲಿಲ್ಲ.

ಆಗಾಗ್ಗೆ ಅವರೆನ್ನುತ್ತಿದ್ದರು:

"ಜನರಿಗಾಗಿ ಯಾರು ತಾನೆ ಒಂದಿಷ್ಟು ಕರುಣೆ ತೋರಿಸ್ತಾರೆ? ಯಾರೂ ಇಲ್ಲ, ದೇವರು ಕೂಡಾ ತೋರಿಸೋದಿಲ್ಲ."

ಆದರೆ, ಕಲ್ಮಷದಿಂದಲೂ ಕ್ರಿಮಿಕೀಟಗಳಿಂದಲೂ ಚಿತ್ರಹಿಂಸೆ ಅನುಭವಿಸುತ್ತ ಸಾಯುತ್ತಲಿದ್ದ ಡಾವಿಡೋವನ ಮೈಯನ್ನು ಪಾವೆಲ್ ಮತ್ತು ನಾನು ತೊಳೆದಾಗ, ಅವರೆಲ್ಲರೂ ನಮ್ಮನ್ನು ಪರಿಹಾಸ್ಯಕ್ಕೆ ಗುರಿಮಾಡಿದರು; ಸ್ನಾನಗೃಹದ ಚಾಕರರೆಂದು ನಮ್ಮನ್ನು ಕರೆದರು; ಹೇನು ತೆಗೆಯಲೆಂದು ತಮ್ಮ ಅಂಗಿಗಳನ್ನೂ ನಮಗೆ ಕೊಡಬಂದರು ಲಜ್ಜಾಸ್ಪದವಾದುದನ್ನು, ಅತಿ ತಮಾಷೆಯಾದುದನ್ನು, ನಾವೇನೋ ಮಾಡುತ್ತಿರುವೆವೆಂಬಂತೆ, ಒಟ್ಟಿನಲ್ಲಿ ನಮ್ಮನ್ನು ತುಚ್ಛೀಕರಿಸುತ್ತಿದ್ದರು.

ಕ್ರಿಸ್‌ಮಸಿನಿಂದ ಲೆಂಟ್ ಹಬ್ಬದವರೆಗೂ, ಡಾವಿಡೋವ್ ತನ್ನ ಅಟ್ಟಣಿಗೆಯ ಮೇಲೆ ಮಲಗಿಯೇ ಇದ್ದ. ಒಂದೇ ಸಮನೆ ಆತ ಕೆಮ್ಮುತ್ತಿದ್ದ. ರಕ್ತದ ದೊಡ್ಡ ದೊಡ್ಡ ತುಣುಕುಗಳನ್ನೂ ಕಫವನ್ನೂ ಆತ ಉಗುಳುತ್ತಲೇ ಇದ್ದ. ಅವು ಕೊಚ್ಚೆ ನೀರಿನ ಬಕೀಟಿಗೆ ಬೀಳದೆ ತಪ್ಪಿಹೋಗಿ, ನೆಲಕ್ಕೆ ಬೀಳುತ್ತಿದ್ದುವು. ರಾತ್ರೆ ಹೊತ್ತು, ಅರ್ಧ ಪ್ರಜ್ಞೆಯಲ್ಲಿ ತಾನು ಮಾಡುತ್ತಿದ್ದ ಚೀತ್ಕಾರಗಳಿಂದ ನಮ್ಮನ್ನೆಲ್ಲ ಅವನು ಎಚ್ಚರಿಸುತ್ತಿದ್ದ.

ಹೆಚ್ಚುಕಡಮೆ ಪ್ರತಿದಿನವೂ ಅವರೆಂದರು:

"ಇವನನ್ನು ನಾವು ಆಸ್ಪತ್ರೆಗೆ ತಗೊಂಡು ಹೋಗ್ಬೇಕಾಗ್ತದೆ.

ಆದರೆ ಡಾವಿಡೋವನ ರಹದಾರಿ ಹಳೆಯದಾಗಿದ್ದು, ಅದನ್ನು ಪುನಃ ಹೊಸದಾಗಿ ದಾಖಲೆ ಮಾಡಿರಲಿಲ್ಲವೆಂಬುದು, ಮೊದಲು ಕಂಡುಬಂತು. ಆ ಕಾರಣದಿಂದ, ಆಸ್ಪತ್ರೆಯಲ್ಲಿ ಅವನಿಗೆ ಸ್ಥಳಸಿಗುವಂತಿರಲಿಲ್ಲ. ಬಳಿಕ ಆತ, ತುಸು ಉತ್ತಮಗೊಳ್ಳುತ್ತಿದ್ದಂತೆಯೂ ಕಂಡಿತು. ಕೊನೆಯಲ್ಲಿ ಅವರೆಂದರು:

"ಆಸ್ಪತ್ರೆಗೆ ಒಯ್ದರೂ ಒಂದೇ, ಬಿಟ್ಟರೂ ಒಂದೇ. ಹೇಗೂ ಬೇಗನೆ ಸತ್ತೇಸಾಯ್ತಾನೆ."

"ಹೌದು, ಅದಿನ್ನು ಹೆಚ್ಚು ತಡವಾಗೋದಿಲ್ಲ," ಎಂದು ಸ್ವತಃ ಅಸ್ವಸ್ಥ ಮನುಷ್ಯನೇ ಮಾತು ಕೊಟ್ಟ.

ಶಾಂತವಾಗಿರುತ್ತಿದ್ದ ಆತನೂ ಹಾಸ್ಯಪ್ರವೃತ್ತಿಯವನೇ. ಕರ್ಮಾಗಾರದ ಬೇಸರವನ್ನು ಚೆದರಿಸಲು ತನ್ನಿಂದೇನು ಸಾಧ್ಯವೋ ಅದನ್ನೆಲ್ಲ ಆತನೂ ಮಾಡುತ್ತಿದ್ದ. ಕರಿದಾದ, ಶವದ ಕಳೆಯಿದ್ದ, ತನ್ನ ಮುಖವನ್ನು ಅಟ್ಟಣಿಗೆಯ ಅಂಚಿನಿಂದ ಜೋತಾಡಿಸುತ್ತ, ಸುಂಯ್‌ಗುಡುವ ಸ್ವರದಲ್ಲಿ ಅವನು ಘೋಷಿಸುತ್ತಿದ್ದ:

"ಒಳ್ಳೆಯ ಜನರೇ ! ಮೇಲಣ ಅಟ್ಟಣಿಗೆಯನ್ನು ಏರಿರುವಾತನ ವಾಣಿಗೆ ಕಿವಿಗೊಡಿ !"

ಬಳಿಕ ಗಂಭೀರವಾಗಿ, ದುರ್ಭರವಾದ ಹುಚ್ಚುಚ್ಚಾರವೇನನ್ನಾದರೂ ಅನ್ನುತ್ತಿದ್ದ :

ಈ ಮೇಲಣ ಜಾಗದಿ ಮುದುರಿಹ ನಾನು,
ನಿದ್ದೆ ಹೋದರೂ ಸರಿಯೆ, ಕಣ್ಣು ತೆರೆದರೂ ಸರಿಯೆ
ಜಿರಳೆ ನನ್ನ ಮಾಂಸವನ್ನು ಜಿಗಿಯುತ್ತಲಿದ್ದರೂ
ಯಾವ ಸದ್ದನೂ ಎಂದೂ ಮಾಡೆನು.

ಕೇಳುತ್ತಿದ್ದವರು ಮೆಚ್ಚುಗೆ ಸೂಚಿಸುತ್ತ ಎನ್ನುತ್ತಿದ್ದರು :

"ಇವನು ಅಧೀರನಾಗೋದೇ ಇಲ್ಲ !"

ಕೆಲವೊಮ್ಮೆ ಪಾವೆಲ್ ಮತ್ತು ನಾನು, ಅವನು ಮಲಗಿದ್ದೆಡೆಗೆ ಹತ್ತಿಹೋಗುತ್ತಿದ್ದೆವು. ಪ್ರಯತ್ನಪೂರ್ವಕವಾಗಿ ವಿನೋದಪರನಾಗಿರಲು ಯತ್ನಿಸುತ್ತ ನಮ್ಮನ್ನು ಅವನು ಸ್ವಾಗತಿಸುತ್ತಿದ್ದ:

"ಒಳ್ಳೆಯ ಸ್ನೇಹಿತರೇ, ಉಪಾಹಾರಕ್ಕೆ ಏನು ಕೊಟ್ಟು ನಿಮ್ಮನ್ನು ನಾನು ಸತ್ಕರಿಸಲಿ ? ಸೊಗಸಾದ ಹೊಸದಾದ ಒಂದು ಜೇಡ ನಿಮಗೆ ಇಷ್ಟವಾಗುತ್ತೋ ಹ್ಯಾಗೆ ?"

ಸಾವು ಬಹಳ ನಿಧಾನವಾಗಿ ಬಂತು. ಇದರಿಂದಾಗಿ ಅವನು ಹೈರಾಣಾಗೆ ಹೋದ.

ಮರೆಮಾಚದ ಕೊರಗಿನಿಂದ ಅವನೆನ್ನುತಿದ್ದ :

"ಸಾಯೋ ಹಾಗೆ ನಾನು ಕಾಣೋದೇ ಇಲ್ಲ !"

ಸಾವಿನ ಎದುರಲ್ಲಿ ಅವನು ತೋರುತ್ತಿದ್ದ ನಿರ್ಭಯತೆಯನ್ನು ಕಂಡು ಪಾವೆಲ್ ಹೆದರಿದ. ರಾತ್ರೆ ಹೊತ್ತು ನನ್ನನ್ನೆಬ್ಬಿಸಿ ಅವನು ಪಿಸುನುಡಿಯುತ್ತಿದ್ದ :

"ಮಾಕ್ಸಿಮಿಶ್ ! ಪ್ರಾಯಶಃ ಅವನು ಸತ್ತಿರಬೇಕು.... ಇಂಥದೇ ಒಂದು ರಾತ್ರೆ, ನಾವೆಲ್ಲಾ ಇಲ್ಲಿ ಮಲಗಿರುವಾಗಲೇ, ಅವನು ಹೋಗಿ ಸತ್ತುಬಿಡ್ತಾನೆ, ನೋಡ್ಕೊ. ಓ ದೇವರೇ, ಸತ್ತವರಿಗೆ ಎಷ್ಟೊಂದು ಹೆದರ್‍ತೀನಿ ನಾನು !"

ಅಥವಾ ಅವನೆನ್ನುತ್ತಿದ್ದ :

"ಅವನು ಬದುಕಿದ್ದುದರ ಅಗತ್ಯವಾದರೂ ಕೂಡಾ ಏನಿತ್ತು ? ಇಪ್ಪತ್ತು ವರ್ಷವಾಗೋದು ಕ್ಕ್ಮಂಚೆಯೇ ಸಾಯ್ತಿದಾನಲ್ಲಾ !"

ಬೆಳುದಿಂಗಳಿದ್ದ ಒಂದು ರಾತ್ರೆ ಅವನು ನನ್ನನ್ನು ಎಬ್ಬಿಸಿದ. ಮಹಾಭೀತಿಯಿಂದ ಅವನ ಕಣ್ಣುಗಳು ಹೊರಕ್ಕೆ ಉಬ್ಬಿದ್ದುವು. ಅವನೆಂದ :

"ಆಲಿಸು!"

ತನ್ನ ಅಟ್ಟಣಿಗೆಯ ಮೇಲೆ ಮಲಗಿದ್ದ ಡಾವಿಡೋವ್ ಕರ್ಕಶವಾಗಿ ಉಸಿರಾಡುತ್ತಿದ್ದುದು, ವೇಗವಾಗಿ—ಆದರೆ ಸ್ಪಷ್ಟವಾಗಿ—ಗೊಣಗುತ್ತಿದ್ದುದು ಕೇಳಿಬರುತ್ತಿತ್ತು :

"ಎಲ್ಲಿ, ತಾ ನೋಡೋಣ, ಎಲ್ಲಿ...."

ಬಳಿಕ ಬಿಕ್ಕಳಿಕೆ ಆರಂಭವಾಯಿತು.

"ದೇವರಾಣೆಯಾಗಿ ಅವನು ಸಾಯ್ತಿದಾನೆ, ನೋಡುವಿಯಂತೆ !" ಎಂದು ಪಾವೆಲ್ ಜ್ವರಗ್ರಸ್ತನಂತೆ ಪಿಸುನುಡಿದ.

ಆ ಹಗಲಲ್ಲೆ ನಾನು, ನಮ್ಮ ಅಂಗಳದಲ್ಲಿ ಬಿದ್ದಿದ್ದ ಹಿಮವನ್ನೆಲ್ಲ ಬಾಚಿ ತೆಗೆದು, ಗಾಡಿಯಲ್ಲಿ

ತುಂಬಿ, ಹೊರಕ್ಕೆ ಹೊಲಗಳಿಗೆ ಒಯ್ದಿದ್ದೆ. ಹೀಗಾಗಿ ಬಹಳ ಬಳಲಿದ್ದೆ. ನಿದ್ದೆ ಹೋಗುವುದರ ಹೊರತಾಗಿ ಬೇರೇನೇನೂ ನನಗೆ ಬೇಕಾಗಿರಲಿಲ್ಲ.

ಪಾವೆಲ್ ಯಾಚಿಸಿದ :

"ಕ್ರಿಸ್ತ ಮೆಚ್ಕೋತಾನೆ; ನಿದ್ದೆ ಮಾಡ್ಬೇಡ. ದಯವಿಟ್ಟು ನಿದ್ದೆ ಮಾಡ್ಬೇಡ."

ಇದ್ದಕ್ಕಿದ್ದಂತೆ, ಹಾರಿ ಮೊಣಕಾಲುಗಳನ್ನೂರಿ ನಿಂತ; ಆರ್ತಧ್ವನಿಯಲ್ಲಿ ಅವನು ಬೊಬ್ಬಿಟ್ಟ :

"ಏಳಿ ! ಡಾವಿಡೋವ್ ಸತ್ತುಹೋದ !"

ಜನರಲ್ಲಿ ಕೆಲವರಿಗೆ ಎಚ್ಚರವಾಯಿತು. ಅವರಲ್ಲಿ ಕೆಲವರು, ಏನಾಯಿತೆಂದು ಸಿಡುಕಿನಿಂದ ಕೇಳುತ್ತಾ, ಹಾಸಿಗೆಗಳಿಂದ ಎದ್ದರು ಕೂಡಾ.

ಕಾಪೆಂಡಿಯೂಖಿನ್ ಅಟ್ಟಣಿಗೆಯನ್ನೇರಿ, ಅಚ್ಚರಿಯಿಂದ ನುಡಿದ:

"ಖಂಡಿತವಾಗಿಯೂ,....ಸತ್ತೇಹೋಗಿದಾನೇಂತ ಕಾಣ್ತಿದೆ—ಶಾಖವೇನೋ ಒಂದಿಷ್ಟು ಇನ್ನೂ ಇದೆಯೆನ್ನಿ...."

ಎಲ್ಲರೂ ಮೌನ ತಳೆದರು. ಜಿಖರೇವ್ ಶಿಲುಬೆಯ ವಂದನೆ ಮಾಡಿದ; ಮೈಮೇಲಿನ ಕಂಬಳಿಯನ್ನು ಮತ್ತಷ್ಟು ಬಲವಾಗಿ ಎಳೆದುಕೊಂಡ; ಬಳಿಕ ನುಡಿದ :

"ಒಳ್ಳೇದು, ಅವನ ಆತ್ಮಕ್ಕೆ ಶಾಂತಿ ದೊರೀಲಿ !"

ಯಾವನೋ ಒಬ್ಬ ಸಲಹೆ ಮಾಡಿದ :

"ಬಾಗಿಲ ಹಾದಿಗೆ ಅವನನ್ನು ಎತ್ತಿಕೊಂಡು ಹೋಗೋದು ಮೇಲು."

ಕೆಳಕ್ಕಿಳಿದು, ಕಿಟಿಕಿಯ ಮೂಲಕ ಹೊರಕ್ಕಿಣಿಕಿ ನೋಡುತ್ತ, ಕಾಪೆಂಡಿಯೂಖಿನ್ ಅಂದ:

"ಬೆಳಗಿನವರೆಗೂ ಅವನು ಇಲ್ಲೇ ಮಲಗಿರಲಿ-ಬದುಕಿದ್ದಾಗಲೂ ಆತ ಎಂದೂ ಒಬ್ಬರ ಹಾದಿಗೆ ಅಡ್ಡಬಂದವನಲ್ಲ."

ಪಾವೆಲ್ ತಲೆದಿಂಬಿನಲ್ಲಿ ತನ್ನ ತಲೆಯನ್ನು ಹುದುಗಿಕೊಂಡು ಬಿಕ್ಕಿ ಬಿಕ್ಕಿ ಅತ್ತ.

ಸಿತಾನೋವನಿಗೆ ಎಚ್ಚರ ಕೂಡಾ ಆಗಲಿಲ್ಲ.

೧೫

ಹೊಲಗಳಲ್ಲಿ ಹಿಮ ಕರಗಿತು. ಆಕಾಶದಲ್ಲಿ ಚಳಿಗಾಲದ ಮೋಡಗಳು, ಕರಗಿದುವು; ಒದ್ದೆ ಹಿಮವಾಗಿಯೂ ಮಳೆಯಾಗಿಯೂ ನೆಲಕ್ಕೆ ಬಿದ್ದುವು. ದಿನದ ತನಿಖೆಗೆ ಸೂರ್ಯನಿಗೀಗ ಹೆಚ್ಚು ಸಮಯ ಬೇಕಾಯಿತು. ಹವೆ ಹೆಚ್ಚು ಬೆಚ್ಚಗಾಯಿತು. ವಸಂತವಾಗಲೇ ಆಗಮಿಸಿದ್ದು, ಧುಮುಧುಮಿಸಿ ಬರುವುದಕ್ಕೆ ಮುನ್ನ ಶಹರದ ಹೊರಗೆ ಹೊಲಗಳಲ್ಲೆಲ್ಲೋ ಅವಿತು ಕಣ್ಣುಮುಚ್ಚಾಲೆಯಾಡುತ್ತಿದ್ದಂತೆ ಅನಿಸಿತು. ರಸ್ತೆಗಳು, ಕೆಂಪು-ಬಾದಾಮಿ ಬಣ್ಣದ ತೋಯ್ದ ಮಣ್ಣಿನಿಂದ ಆವೃತವಾಗಿದ್ದುವು. ಕಾಲುಹಾದಿಗಳುದ್ದಕ್ಕೂ ಪುಟ್ಟ ತೊರೆಗಳು ಜುಳುಜುಳು ಸದ್ದುಮಾಡುತ್ತ ಹರಿದುವು. ಅರೆಸ್ತಾನ್ಸ್‌ಕಾಯಾ ಚೌಕದಲ್ಲಿ, ಹಿಮಕರಗಿದ

ನೆಲದ ತುಣುಕುಗಳ ಮೇಲೆ, ಗುಬ್ಬಚ್ಚಿಗಳು ಸಂತಸದಿಂದ ಅತ್ತಿತ್ತ ಕುಪ್ಪಳಿಸಿದುವು. ಗುಬ್ಬಚ್ಚಿಗಳಂತೆ ಜನರೂ ಅವಿಶ್ರಾಂತರಾದರು. ವಸಂತದ ಪಿಸುದನಿಯಾಚೆಗೆ, ಅದನ್ನು ಮೀರಿಸಿ, ಲೆಂಟ್ ಹಬ್ಬದ ಘಂಟೆಗಳ ಸದ್ದು ಕೇಳಿಸಿತು. ಈ ಘಂಟಾರವ, ಹೆಚ್ಚುಕಡಮೆ ಬೆಳಗಿನಿಂದ ರಾತ್ರಿಯ ವರೆಗೂ ಎಡೆಬಿಡದೆ ಇರುತ್ತಿತ್ತು. ಮೃದುವಾದ ಸಣ್ಣಪುಟ್ಟ ಕುಲುಕಾಟಗಳೊಡನೆ ಹೃದಯವನ್ನು ಅದು ತೂಗುತ್ತಿತ್ತು. ಆ ಘಂಟೆಗಳ ಢಣಾ ಢಣ್ ಸದ್ದಿನಲ್ಲಿ, ಮುದುಕರ ಮಾತಿನಲ್ಲಿದ್ದಂತೆ ಯಾವುದೋ ನೋವು ಅಡಗಿತ್ತು. "ಹೀಂದೆ, ಬಹಳ ಹಿಂದೆ; ಹೀಂದೆ...." ಎಂದು ತಣುಪಾದ ವ್ಯಥೆಯಿಂದ ಆ ಘಂಟೆಗಳು ಹೇಳುತ್ತಲೇ ಇದ್ದುವೇನೋ ಎನ್ನುವಂತಿತ್ತು.

ನನ್ನ ನಾಮ್ಕರಣದಿನದಂದು, ಸುಂದರವಾಗಿ ಬಣ್ಣಬಳೆದಿದ್ದ ದೇವರ ಮನುಷ್ಯ ಅಲೆಕ್ಸಿಂ ಒಂದು ಪ್ರತಿಮೆಯನ್ನು ಕರ್ಮಾಗಾರದವರು ನನಗೆ ಉಡುಗೊರೆ ಇತ್ತರು. ಜಿಖರೇವ ನಾನೆಂದೂ ಮರೆಯದಂತಹ ದೀರ್ಘವಾದ ಗಂಭೀರವಾದ ಭಾಷಣವೊಂದನ್ನು ಮಾಡಿದ.

ತನ್ನ ಹುಬ್ಬುಗಳನ್ನೇರಿಸಿ, ಬೆರಳುಗಳಿಂದ ಮೇಜನ್ನು ತಟ್ಟುತ್ತ, ಅವನೆಂದ:

"ನೀನಾದರೂ ಯಾರು? ಒಬ್ಬ ಪುಟ್ಟ ಹುಡುಗ, ಹದಿಮೂರು ವರ್ಷಗಳ ತಬ್ಬಲಿ, ಅಷ್ಟೆ. ಆದರೂ ನಾನು, ನಿನಗಿಂತ ಸುಮಾರು ನಾಲ್ಕುಪಟ್ಟು ವಯಸ್ಸಾದವನು, ಬದುಕಿನಿಂದ ವಿಮುಖ ನಾಗದ್ದಕ್ಕಾಗಿ, ಬದಲು ದಿಟ್ಟತನದಿಂದ ಅದನ್ನು ಇದಿರಿಸುತ್ತಿರೋದಕ್ಕಾಗಿ, ನಿನ್ನ ಪ್ರಶಂಸೆ ಮಾಡ್ತಿದೇನೆ,—ನಿನ್ನನ್ನು ಹೊಗಳ್ತಿದೇನೆ. ಇದೀಗ ಸರಿಯಾದ್ದು: ಏನಿದ್ದರೂ ಯಾವಾಗಲೂ ದಿಟ್ಟತನದಿಂದ ಇದಿರಿಸಬೇಕು."

ದೇವರ ಗುಲಾಮರನ್ನು ಕುರಿತು, ಹಾಗೂ ದೇವರ ಸೇವಕರನ್ನು ಕುರಿತು, ಅವನು ಮಾ ನಾಡಿದ. ಆದರೆ, ಗುಲಾಮರು ಮತ್ತು ಸೇವಕರ ನಡುವೆ ಇರುವ ವ್ಯತ್ಯಾಸವೇನೆಂಬುದು ನನಗೆಂದೂ ಗೊತ್ತಾಗಲಿಲ್ಲ. ಸ್ವತಃ ಅವನಿಗೇ ಈ ವ್ಯತ್ಯಾಸದ ಅರಿವಿತ್ತೆಂದೂ ನನಗೆ ಅನಿಸು ದಿಲ್ಲ. ಅವನ ಭಾಷಣ ನೀರಸವಾಗಿತ್ತು. ಕೇಳುತ್ತಿದ್ದವರೆಲ್ಲ ಅವನನ್ನು ಪರಿಹಾಸ್ಯಮಾಡಿದರು. ನಾನಾದರೋ, ಹೃದಯ ತುಂಬಿಬಂದು ಸಂಕೋಚಪಡುತ್ತ, ಏನುಮಾಡಬೇಕೆಂದು ತಿಳಿಯದೆ ಪ್ರತಿಮೆಯನ್ನು ನನ್ನ ಕೈಗಳಲ್ಲಿ ಹಿಡಿದು, ನಿಂತೇ ಇದ್ದೆ. ಕೊನೆಗೊಮ್ಮೆ ಕಾಪೆಂಡಿಯೂಖಿನ್ ಸೈರಣೆತಪ್ಪಿ, ವಾಗ್ಮಿಯನ್ನು ಉದ್ದೇಶಿಸಿ, ಕೂಗಿ ನುಡಿದ:

"ಸತ್ತವರಿಗೋಸ್ಕರ ಪ್ರಾರ್ಥನೆ ಸಲ್ಲಿಸ್ತಿರೋ ಹಾಗಿದೆಯಲ್ಲ. ನಿಲ್ಲಿಸೋದು ಮೇಲು— ಅವನ ಕಿವಿಗಳು ನೀಲಿಬಣ್ಣಕ್ಕೆ ತಿರುಗ್ತಿವೆ."

ಆದರೆ ಮುಂದೆ ಸ್ವತಃ ಅವನೇ, ನನ್ನ ಭುಜವನ್ನು ತಟ್ಟಿ, ನನ್ನನ್ನು ಹೊಗಳಿದ:

"ನಿನ್ನಲ್ಲಿರೋ ಅತ್ಯುತ್ತಮ ಗುಣವೆಂದರೆ ಪ್ರತಿಯೊಬ್ಬರಲ್ಲೂ ನೀನು ಆತ್ಮೀಯನಾಗಿರೋದು. ಅದನ್ನು ನಾನು ಮೆಚ್ತೀನಿ. ಆದರೆ ಇದರಿಂದಾಗಿ, ನಿನಗೆ ಹೊಡೆಯೋದು ನಿನ್ನನ್ನು ಬೈಯೋದು ನಿನಗದು ಸಲ್ಲಬೇಕಾದ ಸಂದರ್ಭದಲ್ಲಿ ಕೂಡಾ—ಕಠಿನವಾಗ್ತದೆ."

ಎಲ್ಲರೂ ಹೊಳೆಯುವ ಕಣ್ಣುಗಳಿಂದ ನನ್ನನ್ನು ನೋಡಿದರು. ನಾನು ಪಡುತ್ತಿದ್ದ ಸಂಕೋಚ ನಾಚಿಕೆಗಳಿಗಾಗಿ ದಯೆತುಂಬಿದ ಪರಿಹಾಸ್ಯವನ್ನು ಮಾಡಿದರು. ಆ ಸಮಾರಂಭ ಮತ್ತೂ ಒಂದಷ್ಟು ಹೊತ್ತು ನಡೆದಿದ್ದರೆ, ನನ್ನ ಬಗೆಗೆ ಈ ಜನರು ತೋರುತ್ತಿದ್ದ ಆತ್ಮೀಯತೆ ಯಿಂದಾದ ಆನಂದಾನುಭವವನ್ನು ತಡೆಯಲಾಗದೆ, ಪ್ರಾಯಶಃ ನಾನು ಅತ್ತೇ ಬಿಡುತ್ತಿದ್ದೆ.

ಹೀಗಿದ್ದೂ ಅದೇ ಬೆಳಗ್ಗೆ ಅಂಗಡಿಯಲ್ಲಿ ಸಹಾಯಕ, ನನ್ನ ಕಡೆಗೆ ತಲೆಯಾಡಿಸುತ್ತ ಪಿಯೋತರ್ ವಾಸಿಲ್ಯೇವಿಚನೊಡನೆ ಅಂದಿದ್ದ:

"ಲಫಂಗ ಹುಡುಗ—ಒಂದು ಕೆಲಸ ಮಾಡೋದಕ್ಕೂ ಬರದು."

ಎಂದಿನಂತೆ ಆ ಬೆಳಗ್ಗೆ ಅಂಗಡಿಗಳಿದ್ದ ಚಪ್ಪರಹಾದಿಗೆ ನಾನು ಹೋಗಿದ್ದೆ. ಆದರೆ, ಅಪರಾಹ್ನ ಬೇಗನೆ, ಸಹಾಯಕ ನನಗೆ ಅಂದಿದ್ದ:

"ಮನೆಗೆ ಹೋಗಿ, ಕಣಜದ ಛಾವಣಿಯ ಮೇಲಿರೋ ಹಿಮವನ್ನು ಅಗೆದುಹಾಕಿ, ತಂಪು ಸಾಮಾನುಗಳನ್ನಿಡುವ ನೆಲಮಾಳಿಗೆಯ ಕೊಠಡೀಲಿ ಬಿಟ್ಟು."

ಅಂದು ನನ್ನ ನಾಮದಿನವೆಂಬುದು ಅವನಿಗೆ ಗೊತ್ತಿರಲಿಲ್ಲ. ಯಾರಿಗೂ ಗೊತ್ತಿರಲಿಲ್ಲ ಎಂದೇ ನಾನು ತಿಳಿದಿದ್ದೆ.

ಕರ್ಮಾಗಾರದಲ್ಲಿ ಅಭಿನಂದನಾರ್ಪಣೆಗಳೆಲ್ಲ ಆದೊಡನೆ, ನಾನು ಉಡುಪು ಬದಲಾಯಿಸಿದೆ; ಅಂಗಳಕ್ಕೆ ಧಾವಿಸಿದೆ; ಆ ಚಳಿಗಾಲದಲ್ಲಿ ಹೇರಳವಾಗಿ ಬಿದ್ದಿದ್ದ ಹಿಮವನ್ನೆಲ್ಲ ಅಗೆದು ಹಾಕಲೆಂದು ಕಣಜದ ಛಾವಣಿಯ ಮೇಲಕ್ಕೆ ಹತ್ತಿದೆ. ಆದರೆ ನನ್ನ ಉದ್ವೇಗದಲ್ಲಿ, ನೆಲಮಾಳಿಗೆಯ ಕೊಠಡಿಯ ಬಾಗಿಲನ್ನು ತೆರೆಯಲು ಮರೆತೆ. ಹೀಗಾಗಿ ಅದು, ನಾನು ಅಗೆದು ಹಾಕಿದ ಹಿಮದ ಒಳಗೆ ಹೂತುಹೋಯಿತು. ಈ ತಪ್ಪು ಮನವರಿಕೆಯಾದ ತಕ್ಷಣವೇ, ಬಾಗಿಲು ಕಾಣಿಸುವಂತೆ ಒಳಗೆ ಅಗೆಯತೊಡಗಿದೆ. ಆದರೆ ಹಿಮ ಒದ್ದೆಯಾಗಿ ಗಟ್ಟಿಯಾಗಿಬಿಟ್ಟಿತ್ತು. ನಾನು ಬಳಸುತ್ತಿದ್ದ ಮರದ ಹಾರೆ—ಲೋಹದ್ದಂತೂ ಅಲ್ಲಿರಲಿಲ್ಲ—ಹಿಮದ ಭಾರದ ಕೆಳಗೆ ಮುರಿಯಿತು. ಘಳಿಗೆಯಲ್ಲೇ ಅಂಗಡಿ ಸಹಾಯಕ ಹೊರಬಾಗಿಲ ಬಳಿ ಕಾಣಿಸಿಕೊಂಡು, 'ಸುಖವನ್ನು ಯಾವಾಗಲೂ ದುಃಖ ಬೆನ್ನಟ್ಟಿಯೇ ಇರುತ್ತದೆ' ಎಂಬ ರಷ್ಯನ್ ನಾಣ್ಣುಡಿಯನ್ನು ದೃಢೀಕರಿಸಿದ.

ನನ್ನೆಡೆಗೆ ಬರುತ್ತ, ಸಹಾಯಕ ಸಿಟ್ಟಿನಿಂದ ಅಂದ:

"ಹಂ! ಒಳ್ಳೇ ಕೆಲಸಗಾರ ನೀನು, ಪಿಶಾಚಿ ಬಯ್ಯಲಿ ನಿನ್ನ! ಆ ನಿನ್ನ ಹುಚ್ಚು ತಲೆ ಬುರುಡೆಗೆ ಒಂದು ಕೊಡ್ತೀನಿ....."

ಅವನು, ಹಾರೆಯ ಮುರಿದ ಹಿಡಿಯನ್ನೆತ್ತಿ, ನನ್ನೆಡೆಗೆ ಒಗೆದ. ನಾನು ತಪ್ಪಿಸಿಕೊಂಡು ಸಿಟ್ಟಾಗಿ ಅಂದೆ:

"ನಿನ್ನ ಅಂಗಳ ಸ್ವಚ್ಛ ಮಾಡೋದಕ್ಕಾಗಿ ನಿನ್ನಲ್ಲಿ ನಾನು ಚಾಕರಿ ಹಿಡಿದಿಲ್ಲ."

ಬಡಿಗೆಯನ್ನಾತ ನನ್ನ ಪಾದಗಳತ್ತ ಬೀಸಿದ. ಒಂದು ಹಿಡಿ ಹಿಮವನ್ನು ನಾನು ಅಮುಕಿ ತೆಗೆದು, ನೇರವಾಗಿ ಅವನ ಮುಖಕ್ಕೆ ಹೊಡೆದೆ. ಚೆಲ್ಲಾಡಿಕೊಂಡು ಅವನು ಓಡಿಹೋದ. ನಾನು, ಕೆಲಸವನ್ನು ಅಲ್ಲಿಗೇ ಬಿಟ್ಟುಕೊಟ್ಟು, ಕರ್ಮಾಗಾರಕ್ಕೆ ಹಿಂತಿರುಗಿದೆ. ಕೆಲ ನಿಮಿಷಗಳ ಬಳಿಕ, ಅಂಗಡಿ ಸಹಾಯಕನ ವಧುವೆಂದು ಗೊತ್ತಾಗಿದ್ದಾಕೆ—ಪಿಟಿಕೆಗಳು ತುಂಬಿದ್ದ ನಿಸ್ತೇಜ ಮುಖದ ಬೇಗುದಿಯ ಯುವತಿ—ಕೆಳಕ್ಕೆ ಓಡಿಬಂದಳು.

"ಮಾಕ್ಸಿಮಿಚ್! ಮಹಡಿಗೆ ನಿನ್ನನ್ನು ಕರೀತಿದಾರೆ!"

"ಬರೋದಿಲ್ಲ," ಎಂದು ನಾನೆಂದೆ.

"ಬರೋದಿಲ್ಲ!—ಏನದು ?" ಎಂದು ಶಾಂತವಾದ ಅಚ್ಚರಿಯಿಂದ ಲಾರಿಯೊನಿಚ್ ಕೇಳಿದ.

ನಡೆದುದನ್ನು ಅವನಿಗೆ ನಾನು ತಿಳಿಸಿದೆ. ಚಿಂತೆಯಿಂದ ಅವನ ಮುಖ ಗಂಟಿಕ್ಕಿತು.

"ಎದೆಗಾರಿಕೆ ತೋರಿದ್ದು ಸ್ವಲ್ಪ ಹೆಚ್ಚಾಯ್ತು, ಮಗೂ," ಎಂದು ಇಳಿದನಿಯಲ್ಲಿ ನನ ಹೇಳುತ್ತಾ, ಸ್ವತಃ ಆತನೇ ಮಹಡಿಯ ಮೇಲಕ್ಕೆ ಹತ್ತಿಹೋದ.

ಅಂಗಡಿ ಸಹಾಯಕನನ್ನು ಕುರಿತಾದ ಶಾಪದ ಬೈಗಳಿಂದ ಕರ್ಮಾಗಾರ ಗುಂಯ್‌ಗುಟ್ಟಿತ ಕಾಪೆಂಡಿಯೂಖಿನನೆಂದ:

"ಈಗ ಅವರು ನಿನ್ನನ್ನು ಹೊರಹಾಕೋದು ಖಂಡಿತ."

ಅದರಿಂದೇನೂ ನಾನು ಬೆದರಲಿಲ್ಲ. ಆ ಸಹಾಯಕನೊಡನೆ ನನ್ನ ಸಂಬಂಧ ಕೆಡುತ ಸಾಗಿ, ಸಂದಿಗ್ಧ ಸ್ಥಿತಿಯನ್ನು ಮುಟ್ಟಿತ್ತು. ಹಟಮಾರಿತನದ, ಹೆಚ್ಚುತ್ತಲಿದ್ದ, ದ್ವೇಷಭಾ ದಿಂದ ನನ್ನನ್ನು ಆತ ದ್ವೇಷಿಸುತ್ತಿದ್ದ. ಪ್ರತಿಯಾಗಿ ನಾನೂ ಅದೇ ರೀತಿ ದ್ವೇಷಿಸುತ್ತಿದ್ದೆ ಆದರೆ, ನನ್ನೊಡನೆ ಅವನು ನಡೆದುಕೊಳ್ಳುತ್ತಿದ್ದ ವಿಚಿತ್ರರೀತಿಯಿಂದ ನಾನು ಕಕ್ಕಾವಿ ಯಾಗುತ್ತಿದ್ದೆ.

ಬೇಕುಬೇಕೆಂದೇ ಅವನು, ಗುಡಿಸುವಾಗ ನನ್ನ ಕೈಗೆ ಸಿಗಲೆಂದು, ಅಂಗಡಿಯ ನೆಲ ಮೇಲೆ ನಾಣ್ಯಗಳನ್ನು ಚೆಲ್ಲುತ್ತಿದ್ದ. ನಾನು ಯಾವಾಗಲೂ ಆ ನಾಣ್ಯಗಳನ್ನು, ಭಿಕ್ಷುಕರಿಗೆಂ ಗಲ್ಲದಮೇಲೆ ಇಟ್ಟಿರುತ್ತಿದ್ದ ಕಪ್‌ನಲ್ಲಿ ಹಾಕುತ್ತಿದ್ದೆ. ಅಂತೂ ಕೊನೆಯಲ್ಲಿ, ಆ ನಾಣ್ಯಗಳನ ಆತ ಯಾಕೆ ಚೆಲ್ಲುತ್ತಿದ್ದನೆಂಬುದನ್ನು ಊಹಿಸಿಕೊಂಡಾಗ, ಅವನೊಡನೆ ನಾನೆಂದೆ:

ಈ ನಾಣ್ಯಗಳನ್ನು ನನ್ನೆಡೆಗೆ ಎಸೆಯೋದರಿಂದ ಏನೂ ಪ್ರಯೋಜನವಾಗದು."

ನನ್ನ ಆ ಮಾತು ಅವನ ಪಾಲಿಗೆ ತೀರಾ ಅನಿರೀಕ್ಷಿತವಾಗಿತ್ತು. ಕೆಂಪಗಾಯಿತು ಮು ಹಿಂದು ಮುಂದು ಯೋಚಿಸದೆ ಕೂಗಾಡುತ್ತ ಅವನು ನುಡಿದ:

ನನಗೆ ಹೇಳಿಕೊಡುವಷ್ಟು ಧೈರ್ಯಬಂತೆ ನಿನಗೆ! ನಾನು ಏನು ಮಾಡ್ತಿದೀನಿ ಅನ್ನೋ ನನಗೆ ಗೊತ್ತಿದೆ!"

ಆದರೆ ಮರುಕ್ಷಣವೆ ಅವನು ಮುಂದುವರಿದ:

ಉದ್ದೇಶಪೂರ್ವಕವಾಗಿ ನಾನು ಹೀಗೆ ಮಾಡ್ತಿದೀನೀಂತ ನೀನು ತಿಳಕೊಳ್ಳೋದಕ ಏನು ಕಾರಣ? ಅವು ಅಕಸ್ಮಾತ್ತಾಗಿ ನೆಲಕ್ಕೆ ಬೀಳ್ತವೆ, ಅಷ್ಟೆ."

ಅಂಗಡಿಯಲ್ಲಿ ನಾನು ಪುಸ್ತಕಗಳನ್ನು ಓದಬಾರದೆಂದು ನಿಷೇಧಿಸುತ್ತ, ಅವನೆಂದ:

"ಪುಸ್ತಕ ಓದೋದೆಲ್ಲ ನಿನ್ನಂಥವರಿಗೆ ಹೇಳಿದ್ದಲ್ಲ. ಅಥವಾ ಪ್ರಾಯಶಃ, ಧರ್ಮಶಾಸ್ತ್ರ ಸಾಗಬೇಕೂಂತೇನಾದರೂ ಯೋಚಿಸ್ತಿದೀಯೋ? ಪರೋಪಜೀವಿ !"

ನಾನೊಂದು ನಾಣ್ಯ ಕದಿಯುವಂತೆ ಮಾಡುವ ಯತ್ನಗಳನ್ನು ಆತ ಮತ್ತೂ ಮುನ್ನಡೆಸಿ ನೆಲಗುಡಿಸುವಾಗ ಇಪ್ಪತ್ತು ಕೊಪೆಕ್ ನಾಣ್ಯವೇನಾದರೂ ಬಿರುಕಿನೊಳಕ್ಕೆ ಉರುಳಿತೆಂದ ಅದನ್ನು ನಾನು ಕದ್ದೆನೆಂದು ಅವನು ಆರೋಪಿಸಿಯೇ ತೀರುವನೆಂಬುದು ನನಗೆ ಮನವರಿ ಯಾಯಿತು. ನನ್ನೊಡನೆ ಆತ ಆಡುತ್ತಿದ್ದ ಈ ಆಟವನ್ನು ಬಿಟ್ಟುಬಿಡಬೇಕೆಂದು ಮತ್ತೊಮ್ಮೆ ಅವನಿಗೆ ನಾನು ಸಲಹೆಮಾಡಿದೆ. ಆದರೆ ಅದೇ ದಿನ ಮರಳುತ್ತಿದ್ದ ನೀರುತುಂಬಿದ ಚಹಾದಾ ಯೊಡನೆ ಪಾನಮಂದಿರದಿಂದ ನಾನು ಮರಳಿ ಬರುತ್ತಿದ್ದಾಗ, ನಮ್ಮ ಮಗ್ಗುಲ ಅಂಗಡಿ ಸಹಾಯಕನಿಗೆ ಆತ ಹೇಳುತ್ತಿದ್ದುದು ನನ್ನ ಕಿವಿಗೆ ಬಿತ್ತು:

ಒಂದು ಗೀತಸ್ತೋತ್ರದ ಗ್ರಂಥವನ್ನು ಅವನು ಕದಿಯೋ ಹಾಗೆ ಮಾಡು. ಬೇಗ

ಒಂದಷ್ಟು ಹೊಸ ಪ್ರತಿಗಳು—ಮೂರುಪೆಟ್ಟಿಗೆ ತುಂಬಾ-ಬರಲಿವೆ.

ನನ್ನ ವಿಷಯವಾಗಿ ಅವರು ಮಾತನಾಡುತ್ತಿದ್ದರೆಂಬುದನ್ನು ನಾನು ಮನಗಂಡೆ. ಯಾಕೆಂದರೆ, ನಾನು ಒಳಪ್ರವೇಶಿಸಿದಾಗ, ಅವರಿಬ್ಬರೂ ಕಕ್ಕಾವಿಕ್ಕಿಯಾದ ಲಕ್ಷಣಗಳು ಕಾಣಿಸಿದುವು.

ಮಗ್ಗುಲಿನವನ ಸಹಾಯಕ, ಬಡಕಲು ಪ್ರಕೃತಿಯ ಸೊರಗಿದ ಪ್ರಾಣಿ. ಅವನಿಗೆ ಕುತಂತ್ರನೋಟದ ಕಣ್ಣುಗಳಿದ್ದುವು. ಅವನನ್ನು, ಆಗ ಸ್ವಲ್ಪಕಾಲ ಈಗ ಸ್ವಲ್ಪಕಾಲ ಉದ್ಯೋಗಕ್ಕೆ ಇರಿಸಿಕೊಳ್ಳಲಾಗುತ್ತಿತ್ತು. ಒಳ್ಳೆಯ ಸಹಾಯಕನೆಂದೇನೋ ಅವನು ಪರಿಗಣಿಸಲ್ಪಟ್ಟಿದ್ದ. ಆದರೆ ಅವನು ಕುಡುಕನಾಗಿದ್ದ. ಆ ಕಾರಣದಿಂದಲೇ ಸ್ಥಿರ ಉದ್ಯೋಗವಿರಲಿಲ್ಲ. ಕುಡಿತದ ವೇಳೆಗೆ ಆತ ಹೊರಟು ಹೋದಾಗ, ಅವನ ಯಜಮಾನ ಆತನನ್ನು ಕೆಲಸದಿಂದ ವಜಾಮಾಡುತ್ತಿದ್ದ. ಆದರೆ ಸ್ವಲ್ಪ ಸಮಯದ ಅನಂತರ, ಪುನಃ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದ. ಬಾಹ್ಯನೋಟಕ್ಕೆ ಬಹಳ ವಿನಯಶೀಲ. ತನ್ನ ಒಡೆಯನ ಕಿರುಬೆರಳು ಚಲಿಸಿದರೂ ಸಾಕು, ಆ ಆಶಯವನ್ನು ಪರಿಪಾಲಿಸುತ್ತಿದ್ದ. ಆದರೆ ಅವನ ಬಾಯಿಯ ಮೂಲೆಯಲ್ಲಿ ತುಚ್ಛೀಕಾರದ ಮುಗುಳುನಗೆಯೊಂದು ಯಾವಾಗಲೂ ಇದ್ದೇ ಇರುತ್ತಿತ್ತು. ಕಟುಟೀಕೆಗಳನ್ನು ಮಾಡಲು ಅವನು ಸದಾ ಇಷ್ಟಪಡುತ್ತಿದ್ದ. ಅವನ ಹಲ್ಲುಗಳು ಬೆಳ್ಳಗಿದ್ದು ಗಟ್ಟಿಮುಟ್ಟಾಗಿದ್ದರೂ, ಕೊಳೆತ ಹಲ್ಲುಗಳಿರುವ ಜನರ ಉಸಿರಿನಂತೆ ಅವನ ಉಸಿರು ದುರ್ಗಂಧಯುಕ್ತವಾಗಿರುತ್ತಿತ್ತು.

ಸ್ವಲ್ಪ ಸಮಯದ ಹಿಂದೆ ಅವನೊಡನೆ ನನಗಾಗಿದ್ದ ಒಂದು ಅನುಭವ, ನನ್ನ ವಿರುದ್ಧವಾಗಿ ನಮ್ಮ ಸಹಾಯಕನೊಡನೆ ಆತ ಏನೋ ಫಿತೂರಿ ನಡೆಸಿರಬೇಕೆಂಬ ನನ್ನ ಶಂಕೆಯನ್ನು ಬಲಪಡಿಸಲು ಹೆಚ್ಚಿನ ಕಾರಣವಾಯಿತು. ಒಂದುದಿನ ಆತ್ಮೀಯತೆಯ ಮುಗುಳುನಗೆಯೊಡನೆ ಆತ ನನ್ನ ಬಳಿಸಾರಿದ, ಬಳಿಕ ಇದ್ದಕ್ಕಿದ್ದಂತೆ, ನನ್ನ ಟೊಪ್ಪಿಗೆಯನ್ನು ಹೊಡೆದು ಉರುಳಿಸಿ, ನನ್ನ ತಲೆಗೂದಲನ್ನು ಅಮುಕಿ ಹಿಡಿದಿದ್ದ. ನಾವು ಪರಸ್ಪರ ಕಾದತೊಡಗಿದೆವು ಮುಖಮಂಟಪದಿಂದ ಅಂಗಡಿಯೊಳಕ್ಕೆ ನನ್ನನ್ನು ಅವನು ತಳ್ಳಿದ. ನೆಲದ ಮೇಲಿದ್ದ ದೊಡ್ಡದಾದ ಕೆಲ ಪ್ರತಿಮೆಗಳತ್ತ ನನ್ನನ್ನು ನೂಕಲು ಯತ್ನಿಸಿದ. ಆತ ಯಶಸ್ವಿಯಾಗಿದ್ದರೆ, ನನ್ನಿಂದಾಗಿ ಖಂಡಿತವಾಗಿಯೂ, ಗಾಜು ಒಡೆಯುತ್ತಿತ್ತು ; ಕೊರೆದ ಚೌಕಟ್ಟುಗಳು ಮುರಿಯುತ್ತಿದ್ದುವು ; ಬೆಲೆಬಾಳುವ ಚಿತ್ರಗಳಿಗೆ ಧಕ್ಕೆ ತಗಲುತ್ತಿತ್ತು. ಆದರೆ, ಅವನಲ್ಲಿ ಶಕ್ತಿಯೇನೂ ಇರಲಿಲ್ಲವಾದುದರಿಂದ, ನಾನು ಅವನನ್ನು ಸುಲಭವಾಗಿ ಸೋಲಿಸಿದೆ. ಗಡ್ಡ ಬೆಳೆದಿದ್ದ ಈ ಮನುಷ್ಯ ನೆಲದ ಮೇಲೆ ಕುಳಿತು, ಗಾಯಗೊಂಡ ಮೂಗಿನ ಆರೈಕೆ ಮಾಡುತ್ತ, ಒಂದೇ ಸಮನೆ ಅಳತೊಡಗಿದ. ಇದನ್ನು ಕಂಡು ನನಗೆ ಬಹಳ ಆಶ್ಚರ್ಯವಾಯಿತು.

ಮಾರನೆಯ ಬೆಳಗ್ಗೆ, ನಮ್ಮ ಯಜಮಾನರಿಬ್ಬರೂ ಹೊರಹೋಗಿದ್ದು ನಾವಿಬ್ಬರೇ ಇದ್ದಾಗ, ನಡುಮೂಗಿನ ಮೇಲಣ ಹಾಗೂ ಒಂದು ಕಣ್ಣಿನ ಕೆಳಗಿನ ಊತವನ್ನು ಉಜ್ಜುತ್ತ, ರಾಜಿಯ ಭಾವದಿಂದ ನನ್ನೊಡನೆ ಅವನೆಂದ :

"ಸ್ವತಃ ನನ್ನ ಇಚ್ಛೆಯಿಂದಲೇ ನಿನ್ನಮೇಲೆ ಹರಿಹಾಯ್ದೆ ಅಂದ್ಕೊಂಡಿಯೇನು ? ನಾನೇನೂ ಮೂರ್ಖನಲ್ಲ. ನನ್ನನ್ನು ನೀನು ಸೋಲಿಸ್ತೀ ಅನ್ನೋದು ನನಗೆ ಗೊತ್ತಿತ್ತು. ನಾನು ದುರ್ಬಲ, ಕುಡುಕ ಬೇರೆ. ಹಾಗೆ ಮಾಡೋದಕ್ಕೆ ಆಜ್ಞಾಪಿಸಿದವನು ನನ್ನ ಯಜಮಾನ. "ಚೆನ್ನಾಗಿ

ಬಾರಿಸು. ಅವನ ಅಂಗಡಿಯಲ್ಲಿ ಸಾಮಾನುಗಳಿಗೆ ಸಾಧ್ಯವಿದ್ದಷ್ಟು ಹೆಚ್ಚು ಧಕ್ಕೆ ತಗಲೋ ಹಾಗೆ ಮಾಡು. ಅದರಿಂದ ಅವರಿಗೆ ಒಳ್ಳೇ ನಷ್ಟವಾಗ್ತದೆ," ಅಂದ. ನನ್ನ ಮಟ್ಟಿಗಾದರೆ, ಸ್ವತಃ ನಾನಾಗಿಯೇ ಯಾವತ್ತೂ ಹಾಗೆ ಮಾಡ್ತಿರಲಿಲ್ಲ. ನನ್ನ ಮುಸುಡನ್ನು ಎಂಥ ದುರ್ಗತಿಗೆ ತಂದೊಡ್ಡಿದೀಯಾ, ಸ್ವಲ್ಪ ನೋಡು !"

ಅವನ ಮಾತನ್ನು ನಾನು ನಂಬಿದೆ. ಅವನ ವಿಷಯದಲ್ಲಿ ನನಗೆ ಕನಿಕರವೆನಿಸತೊಡಗಿತು. ಅವನು ಅರೆಹೊಟ್ಟೆಯಲ್ಲೆ ಇರುತ್ತಿದ್ದನೆಂಬುದೂ ಅವನು ಜತೆಯಲ್ಲಿ ವಾಸಿಸುತ್ತಿದ್ದ ಹೆಂಗಸು ಅವನಿಗೆ ಯಾವಾಗಲೂ ಹೊಡೆಯುತ್ತಿದ್ದಳೆಂಬುದೂ ನನಗೆ ಗೊತ್ತಿತ್ತು. ಆದರೂ ಅವನನ್ನು ನಾನು ಕೇಳಿದೆ:

"ಯಾರಿಗಾದರೂ ವಿಷ ಹಾಕ್ಬೇಕೊಂತ ಅವರು ಹೇಳಿದರೆ, ಹಾಕ್ತೀಯೇನು ?"

ಕನಿಕರ ಉಂಟುಮಾಡುವ ಮುಗುಳುನಗೆಯೊಡನೆ ಆ ಮನುಷ್ಯ ಮೆಲ್ಲನೆ ಉತ್ತರವಿತ್ತ :

"ಹಾಗೆ ಮಾಡಿಸಿದರೂ ಮಾಡಿಸಿದನೇ. ಆ ಸಾಮರ್ಥ್ಯ—ಅವನಿಗಿದೆ."

ಮತ್ತೊಂದು ಸಾರಿ ನನ್ನೊಡನೆ ಅವನೆಂದಿದ್ದ :

"ಒಂದು ಕೊಪೆಕ್ ಕೂಡಾ ನನ್ನ ಕೈಲಿಲ್ಲ. ಮನೆಯಲ್ಲಿ ತಿನ್ನೋದಕ್ಕೆ ಏನೂ ಇಲ್ಲ. ನನ್ನ ಮುದಿ ಗೂಬೆಯೋ ನನ್ನನ್ನು ಹಿಂಸಿಸ್ತಾನೇ ಇದಾಳೆ. ನಿಮ್ಮ ದಾಸ್ತಾನು ಕೊಠಡಿಯಿಂದ ಒಂದು ಪ್ರತಿಮೆನ ಕದ್ದು ಕೊಟ್ಟೆ ಎಂದರೆ, ಹೊರಹೋಗಿ ಅದನ್ನು ಮಾರ್ಕೊಳ್ತೀನಿ. ನನಗಾಗಿ ಇಷ್ಟನ್ನು ಮಾಡ್ತೀಯಾ? ಅಥವಾ ಗೀತಸ್ತೋತ್ರದ ಗ್ರಂಥವಾದರೂ ಆಗಬಹುದು...."

ಪಾದ ರಕ್ಷೆಗಳ ಅಂಗಡಿಯನ್ನೂ ಇಗರ್ಜಿಯ ಕಾವಲುಗಾರನನ್ನೂ ನೆನೆಸಿಕೊಳ್ಳುತ್ತ, ನನ್ನಷ್ಟಕ್ಕೆ ನಾನು ಯೋಚಿಸಿದೆ: ಈ 'ಮನುಷ್ಯ ನನ್ನ ಬಗ್ಗೆ ಚಾಡಿ ಹೇಳೋದು ಖಂಡಿತ.' ಆದರೆ, ನಿರಾಕರಿಸಲು ಮನಸ್ಸು ಒಪ್ಪಲಿಲ್ಲ. ಅವನಿಗೊಂದು ಪ್ರತಿಮೆಯನ್ನು ನಾನು ಕೊಟ್ಟೆ. ಯಾಕೋ ಏನೋ, ಏಳು ರೂಬಲು ಬೆಲೆಯ ಗೀತಸ್ತೋತ್ರವನ್ನು ಕದಿಯುವುದು ಬಹು ದೊಡ್ಡ ಪಾತಕವಾಗಿ ನನಗೆ ಅನಿಸಿತು. ಹೌದು; ವಿಚಿತ್ರವಾಗಿ ಕಂಡರೂ ಕೂಡ, ನಮ್ಮ ನೈತಿಕ ವಿಚಾರಗಳೆಲ್ಲ ದುಡ್ಡು ದುಗ್ಗಾಣಿಯ ಲೆಕ್ಕಾಚಾರದಿಂದಲೇ ಕಲುಷಿತವಾಗಿರುತ್ತವೆ. ನಮ್ಮ ಕ್ರಿಮಿನಲ್ ಕೋಡಿನಲ್ಲಿ ನಿಷ್ಕಪಟ ಪಾವಿತ್ರ್ಯವೆಷ್ಟೇ ಇದ್ದರೂ, ಖಾಸಗಿ ಸೊತ್ತಿನ ಮಹದನ್ಯಾಯ ಅಡಗಿರುವ ಈ ಪುಟ್ಟ ರಹಸ್ಯವನ್ನು ಅದು ಹೊರಗೆಡವುತ್ತದೆ.

ನಮ್ಮ ಅಂಗಡಿ ಸಹಾಯಕ, ಗೀತಸ್ತೋತ್ರವನ್ನು ನನ್ನಿಂದ ಕದಿಸಬೇಕೆಂದು ಆ ಕ್ಷುಲ್ಲಕ ಮನುಷ್ಯನಿಗೆ ಆಗ್ರಹಪಡಿಸುತ್ತಿದ್ದುದನ್ನು ಕಂಡಾಗ, ಹಿಂದೆ ಅವನಿಗಾಗಿ ನಾನು ಮಾಡಿದ ಪ್ರತಿಮೆಯ ಕಳುವು ನೆನಪಾಯಿತು. ಆದರಿಂದ ನನಗೆ ಭಯವಾಯಿತು. ಅವನಿಗೆ ನಷ್ಟಮಾಡಿ ನಾನು ತೋರಿದ್ದ ಔದಾರ್ಯದ ವಿಷಯ ನಮ್ಮ ಅಂಗಡಿ ಸಹಾಯಕನಿಗೆ ಗೊತ್ತಿತ್ತೆಂಬುದು ಸ್ಪಷ್ಟವಾಗಿತ್ತು. ಬೇರೆ ಮಾತಿನಲ್ಲಿ ಹೇಳುವುದಾದರೆ, ನೆರೆಯವನ ಮನುಷ್ಯ ನನ್ನ ಮೇಲೆ ಚಾಡಿ ಹೇಳಿಯೇ ಬಿಟ್ಟಿದ್ದ.

ಇನ್ನೊಬ್ಬರಿಗೆ ನಷ್ಟವನ್ನುಂಟುಮಾಡಿ ಹಿರಿತನವನ್ನು ತೋರುವುದರ ಅಗ್ಗತನ, ಹಾಗೂ ಅವರ ಫಿತೂರಿಯ ಕ್ಷುದ್ರತೆ, ನನ್ನ ದ್ವೇಷವನ್ನು ಕೆರಳಿಸಿದುವು. ಸ್ವತಃ ನನ್ನ ಬಗೆಗೂ ಇತರರ ಬಗೆಗೂ ಅಸಹ್ಯವೆನಿಸುವ ಭಾವವನ್ನು ಉಂಟುಮಾಡಿದುವು. ಹೊಸ ಗ್ರಂಥಗಳು ಬರುವ

ವರೆಗೂ ಈ ಒಳ ಯಾತನೆಯನ್ನು ನಾನು ಅನುಭವಿಸುತ್ತಲೇ ಇದ್ದೆ. ಕೊನೆಗೊಮ್ಮೆ ಅವು ಬಂದುವು. ದಾಸ್ತಾನು ಕೊಠಡಿಯಲ್ಲಿ ಕಟ್ಟುಗಳನ್ನು ನಾನು ಬಿಚ್ಚುತ್ತಿದ್ದಾಗ, ಸೆರೆಯುವನು ನನ್ನ ಜತೆ ಸೇರಿ, ಒಂದು ಗೀತಸ್ತೋತ್ರವನ್ನು ಕೊಡೆಂದು ಕೇಳಿದ.

ಆ ಪ್ರತಿಮೆಯ ವಿಷಯ ನನ್ನ ಯಜಮಾನನಿಗೆ ನೀನು ಹೇಳಿದೆಯೇನು?" ಎಂದು ಅವನನ್ನು ನಾನು ಪ್ರಶ್ನಿಸಿದೆ.

ಸರ್ವಜ್ಞನಾಗಿ ಅವನು ಒಪ್ಪಿದ:

"ಹೌದು. ಗುಟ್ಟುಗಳನ್ನು ಕಾದಿಡೋದು ನನ್ನಿಂಥಾಗೋದಿಲ್ಲ, ತಮ್ಮ."

ನಾನು ದಂಗಾದೆ. ನೆಲದಮೇಲೆ ಕುಳಿತು, ಅವನನ್ನೆ ನೆಟ್ಟ ನೋಟದಿಂದ ನೋಡಿದೆ. ಆತ, ವ್ಯಾಕುಲಗೊಂಡವನಂತೆ ಅಸಹಾಯನಂತೆ ಕಾಣುತ್ತ, ಅವಸರವಾಗಿ ಗೊಣಗಿದ:

"ನಿನ್ನ ಯಜಮಾನ ಊಹಿಸಿಕೊಂಡಿರಬಹುದು. ಅಥವಾ, ಹೀಗೂ ಇದ್ದೀತು; ನನ್ನ ಯಜಮಾನ ಊಹಿಸುಕೊಂಡು ನಿನ್ನವನಿಗೆ ಹೇಳಿರಲೂಬಹುದು..."

ನನ್ನ ಕಥೆ ಮುಗಿಯಿತೆಂದೇ ನನಗನಿಸಿತು. ಈ ಜನರಿಟ್ಟಿದ್ದ ಬೋನಿನೊಳಕ್ಕೆ ನಾನು ಬಿದ್ದಿದ್ದೆ. ಬಾಲ ಅಪರಾಧಿಗಳ ವಸಾಹತಿಗೆ ನನ್ನನ್ನು ಖಂಡಿತವಾಗಿಯೂ ಕಳುಹಿಸು ತ್ತಾರೆ.... ಹೀಗೆಂದಾದರೆ, ಇನ್ನು ಯೋಚಿಸಬೇಕಾದ್ದಿಲ್ಲ. ಮುಳುಗೋದೇ ಹೌದೆಂದಾದರೆ, ಆಳವಾದ ನೀರಲ್ಲಿ ಮುಳುಗೋಣ! ಒಂದು ಗೀತಸ್ತೋತ್ರವನ್ನು ಆ ಅಂಗಡಿಸಹಾಯಕನ ಕೈಗೆ ನಾನು ತುರುಕಿದೆ. ಅದನ್ನವನು ತನ್ನ ಕೋಟಿನೊಳಗೆ ಬಚ್ಚಿಟ್ಟುಕೊಂಡು ಹೊರಟುಹೋದ. ಆದರೆ ಕೆಲವೇ ನಿಮಿಷಗಳಲ್ಲಿ ಹಿಂತಿರುಗಿದ. ಗೀತಸ್ತೋತ್ರ ನನ್ನ ಪಾದಗಳ ಬಳಿ ಬಿತ್ತು.

"ನಾನಿದನ್ನು ತಗೊಳ್ಳಲಾರೆ, ನನ್ನ ಸರ್ವನಾಶಕ್ಕೆ ನೀನು ಕಾರಣನಾಗೋದೇ ಸರಿ," ಎನ್ನುತ್ತ ಅವನು ನಡೆದುಹೋದ.

ಆ ಮಾತುಗಳ ಅರ್ಥ ನನಗೆ ಗ್ರಹಿಕೆಯಾಗಲಿಲ್ಲ. ಅವನ ಸರ್ವನಾಶಕ್ಕೆ ನಾನು ಯಾತಕ್ಕೆ ಕಾರಣನಾಗಬೇಕು? ಆದರೆ, ಆ ಪುಸ್ತಕವನ್ನು ಆತ ಕೊಂಡೊಯ್ಯಲಿಲ್ಲವೆಂದು, ನಾನೆಷ್ಟೋ ಸಂತುಷ್ಟನಾದೆ. ಆ ಘಟನೆಯ ಅನಂತರ, ನಮ್ಮ ಪುಟ್ಟ ಅಂಗಡಿಸಹಾಯಕ ನನ್ನನ್ನು ಮತ್ತಷ್ಟು ಹೆಚ್ಚು ದ್ವೇಷಭಾವದಿಂದಲೂ ಸಂಶಯದ ನೋಟದಿಂದಲೂ ನೋಡತೊಡಗಿದ.

ಲಾರಿಯೊನಿಶ್ ಮಹಡಿಯನ್ನು ಹತ್ತಿಹೋದಂತೆ ಇವೆಲ್ಲವೂ ನನ್ನ ಮನಸ್ಸಿನಲ್ಲಿ ಸುಳಿದುವು. ತುಸು ಹೊತ್ತಿನಲ್ಲಿ ಅವನು ಹಿಂತಿರುಗಿದ. ಮುಖ ಎಂದಿಗಿಂತ ಹೆಚ್ಚು ಸಪ್ಪಗಿತ್ತು; ನಿತ್ಯಕ್ಕಿಂತ ಹೆಚ್ಚು ನೀರವವಾಗಿದ್ದ. ರಾತ್ರಿಯ ಊಟಕ್ಕೆ ಸ್ವಲ್ಪ ಮುಂಚೆ, ನಾವಿಬ್ಬರೇ ಇದ್ದಾಗ, ನನ್ನೊಡನೆ ಅವನೆಂದ:

"ಅಂಗಡಿ ಕೆಲಸದಿಂದ ನಿನ್ನನ್ನು ಬಿಡುಗಡೆಮಾಡಿ ಕರ್ಮಾಗಾರದಲ್ಲೇ ನೀನು ಇರೋಹಾಗೆ, ಅವರನ್ನು ಒಪ್ಪಿಸೋದಕ್ಕೆ ಪ್ರಯತ್ನಿಸಿದೆ. ಯತ್ನ ವಿಫಲವಾಯ್ತು. ಕುಜ್ಮಾ ಎಷ್ಟುಮಾತ್ರಕ್ಕೂ ಸಿದ್ಧನಿಲ್ಲ. ನಿನ್ನ ವಿಷಯದಲ್ಲಿ ಅವನು ಬದ್ಧವೈರ ತಾಳಿದಾನೆ....."

ನನ್ನ ವೈರಿಯಾದ ಇನ್ನೊಂದು ವ್ಯಕ್ತಿಯೂ ಈ ಮನೆಯಲ್ಲೇ ವಾಸವಾಗಿತ್ತು. ಆಕೆ ಆ ಅಂಗಡಿಸಹಾಯಕನಿಗೆ ನಿಶ್ಚಯವಾಗಿದ್ದ ವಧು, ಒನಪು ವಯ್ಯಾರಗಳ ಹೆಣ್ಣು. ಕರ್ಮಾಗಾರದ ಎಲ್ಲ ಯುವಕರೂ ಅವಳೊಡನೆ ಚಕ್ಕಂದವಾಡುತ್ತಿದ್ದರು. ಬಾಗಿಲ ಹಾದಿಯಲ್ಲಿ ಅವಳಿಗಾಗಿ

ಕಾದುನಿಂತು, ಅವಳನ್ನು ಹಿಂಡಿ ಹಿಸುಕುತ್ತಿದ್ದರು. ಅವಳೇನೂ ಸಿಟ್ಟುಗೊಳ್ಳುತ್ತಿರಲಿಲ್ಲ. ಕುನ್ನಿಮರಿಯಂತೆ ಮೃದುವಾಗಿ ಕೀಚಲುದನಿ ಹೊರಡಿಸುತ್ತಿದ್ದಳು, ಅಷ್ಟೆ. ಬೆಳಗಿನಿಂದ ರಾತ್ರಿಯ ವರೆಗೂ ಮಿಠಾಯಿಗಳನ್ನೂ ಪೆಪ್ಪರಮೆಂಟುಗಳನ್ನೂ ಅವಳು ಜಗಿಯುತ್ತಿದ್ದಳು. ಆಕೆಯ ಜೇಬು ಗಳು ಯಾವಾಗಲೂ ಅವುಗಳಿಂದ ತುಂಬಿರುತ್ತಿದ್ದುವು. ಅತ್ತಿತ್ತ ಅಲೆಯುವ ಬೂದುಕಣ್ಣು ಗಳಿದ್ದ ಅವಳ ನಿಸ್ತೇಜಮುಖ, ನೋಡಲು ಹಿತಕರವಾಗಿರಲಿಲ್ಲ. ಅವಳು ಯಾವಾಗಲೂ ಪಾವೆಲನಿಗೂ ನನಗೂ ಲಜ್ಜೆಹುಟ್ಟಿಸುವಂತಹ ಸೂಚ್ಯ ಉತ್ತರಗಳ ಒಗಟೆಗಳನ್ನು ಹಾಕು ತ್ತಿದ್ದಳು; ಅಥವಾ, ಅಶ್ಲೀಲಪದಗಳನ್ನು ರೂಪಿಸುತ್ತಿದ್ದ ಬಂಡಿಮಾತುಗಳನ್ನು ಹೇಳುತ್ತಿದ್ದಳು.

ವಯಸ್ಕ ಕಲಾಕಾರರಲ್ಲೊಬ್ಬ ಅವಳಿಗೆ ಒಮ್ಮೆ ಅಂದ:

“ನೀನೊಬ್ಬಳು ನಿರ್ಲಜ್ಜ ಹುಡುಗಿಯೇ ಸರಿ!”

ಅದಕ್ಕೆ ಅವಳು, ಅಶ್ಲೀಲ ಹಾಡೊಂದರ ಎರಡು ಸಾಲುಗಳನ್ನು ಉಲ್ಲೇಖಿಸುತ್ತ ಸಂತಸ ದಿಂದ ಉತ್ತರವಿತ್ತಳು:

ಕನ್ನೆ ಬಹಳ ಲಜ್ಜಾವತಿ ಆಗಿದ್ದರೆ
ಹುಡುಗರೆಲ್ಲ ಅವಳ ದಾಟ್ಹೋಗೇ ಬಿಡುವರು

ಅಂತಹ ಹುಡುಗಿಯನ್ನು ಹಿಂದೆಂದೂ ನಾನು ನೋಡಿರಲಿಲ್ಲ. ಅವಳು ನನಗೆ ಅಸಹ ನೀಯಳಾಗಿ ಕಂಡಳು. ಒರಟಾಗಿ ಅವಳು ಬಳಿ ಹಾಯುತ್ತಿದ್ದ ರೀತಿ ಕಂಡು ನಾನು ಭೀತನಾಗು ತ್ತಿದ್ದೆ. ತಿರಸ್ಕಾರದ ಪ್ರತ್ಯುತ್ತರ ನನ್ನಿಂದ ದೊರೆಯುತ್ತಿದ್ದುದನ್ನೂ ನೋಡಿ, ಅವಳು ಮತ್ತಷ್ಟು ಆಗ್ರಹತೊಟ್ಟಳು.

ಒಂದು ದಿನ ಪಾವೆಲನೂ ನಾನೂ, ನೆಲಮಾಳಿಗೆಯ ಕೊಠಡಿಯಲ್ಲಿ ಉಪ್ಪಿನಕಾಯಿಯ ಭರಣಿಗಳಿಗೆ ಆವಿಹಾಕಲು ಅವಳಿಗೆ ನೆರವಾಗುತ್ತಿದ್ದಾಗ, ಆಕೆ ನಮಗೆಂದಳು:

“ಹುಡುಗರೇ, ಹೇಗೆ ಚುಂಬಿಸಬೇಕೂಂತ ನಿಮಗೆ ಕಲಿಸಿಕೊಡಲೇನು?”

ಪಾವೆಲ್ ಸಣ್ಣನೆ ನಕ್ಕು, “ನಿನಗಿಂತ ಚೆನ್ನಾಗಿ ಗೊತ್ತಿದೆ ನನಗೆ,” ಎಂದು ಉತ್ತರವಿತ್ತ. ನಾನು ಅಷ್ಟೊಂದು ವಿನಯಪರವಲ್ಲದ ರೀತಿಯಲ್ಲಿ, ಅವಳು ಹೋಗಿ ತನ್ನ ಸ್ವಂತದ ಯುವಕನನ್ನೇ ಚುಂಬಿಸಬೇಕೆಂದು ಸಲಹೆ ಇತ್ತೆ. ಇದರಿಂದ ಅವಳು ಸಿಟ್ಟಾದಳು.

“ಅನಾಗರಿಕ ಪ್ರಾಣಿ! ನಿಮ್ಮ ಜತೆ ಒಳ್ಳೆಯವಳಾಗಿರೋದಕ್ಕೆ ಯತ್ನಿಸಿದ್ದಕ್ಕೆ ಇದೀಗ ಒಬ್ಬಳು ಹುಡಿಗಿಗೆ ಸಿಗೋ ಪ್ರತಿಫಲ! ನೀವು ಅವಳನ್ನು ಲೇವಡಿ ಮಾಡ್ತೀರಾ!”

ಅಷ್ಟು ಹೇಳಿ ನನ್ನೊಡನೆ ತನ್ನ ಬೆರಳಲುಗಿಸುತ್ತ, ಅವಳು ಮತ್ತೂ ಅಂದಳು:

“ಕಾದಿರು! ಇದನ್ನು ನಾನು ಮರೆಯುವವಳಲ್ಲ!”

ನನಗೆ ಬೆಂಬಲವಾಗಿ ಪಾವೆಲ್ ಮಾತು ಸೇರಿಸಿದ:

“ಈ ನಿನ್ನ ತುಂಟಾಟಗಳ ವಿಷಯವೆಲ್ಲ ಕಿವಿಗೆ ಬಿದ್ದರೆ, ಆ ಯುವಕ ನಿನಗೆ ಸರಿಯಾಗಿ ಕೊಟ್ಟೇ ಕೊಡ್ತಾನೆ!”

ಪಿಟಿಕೆಗಳು ತುಂಬಿದ್ದ ಮುಖವನ್ನು ತುಚ್ಛೀಕಾರ ಭಾವದಿಂದ ಸುಕ್ಕುಗಟ್ಟಿಸುತ್ತ ಅವಳೆಂದಳು:

“ನಾನೇನೂ ಅವನಿಗೆ ಹೆದರೋದಿಲ್ಲ! ನನ್ನ ಜತೆ ಸಿಗೋ ವರದಕ್ಷಿಣೆಗೆ ಅವನಿಗಿಂತ ಎಷ್ಟೋ

ಪಾಲು ಉತ್ತಮರಾದ ಗಂಡಂದಿರು ಡಜನುಗಟ್ಟಲೆ ನನಗೆ ಸಿಗ್ತಾರೆ! ಆಮೋದದಿಂದ ಇರೋದಕ್ಕೆ ಒಬ್ಬಳು ಹುಡುಗಿಗೆ ಅವಕಾಶವಿರೋದು ಅವಳ ಮದುವೆಯ ದಿನದವರೆಗೆ ಮಾತ್ರ."

ಮುಂದೆ ಅವಳು ಪಾವೆಲನೊಡನೆ ಲಲ್ಲೆಯಾಟವಾಡತೊಡಗಿದಳು. ಅಂದಿನಿಂದ ನನ್ನ ಮೇಲೆ ಚಾಡಿಗಳನ್ನೂ ಹೇಳಿದಳು.

ಅಂಗಡಿ ಸಾಲಿನಲ್ಲಿ ದುಡಿಯುವುದು ನನಗೆ ಮತ್ತಷ್ಟು ತ್ರಾಸದಾಯಕವಾಯಿತು. ಎಲ್ಲ ಧಾರ್ಮಿಕ ಗ್ರಂಥಗಳನ್ನೂ ನಾನು ಓದಿಮುಗಿಸಿದ್ದೆ. ಹೇಳಿದ್ದನ್ನೇ ಹೇಳುತ್ತಿದ್ದ ಪುರಾತನವಾದಿಗಳ ವಾದಗಳನ್ನು ಕೇಳಿ ಬೇಸತ್ತಿದ್ದೆ. ಪಿಯೋತರ್ ವಾಸಿಲ್ಯೇವಿಚನೇ ನನಗುಳಿದಿದ್ದ ಏಕಮಾತ್ರ ಆಕರ್ಷಣೆ. ಮಾನವ ಜೀವನದ ಕರಿಯ ಪ್ರವಾಹದ ಬಗೆಗೆ ಅವನಿಗಿದ್ದ ಜ್ಞಾನ ಅಪಾರ. ಸ್ವಾರಸ್ಯಕರವಾದ ಹೃದಯ ತುಂಬಿದ ರೀತಿಯಲ್ಲಿ ತನ್ನ ಮನಸ್ಸಿನೊಳಗಿದ್ದುದನ್ನು ಹೊರಗೆಡಹುವ ಸಾಮರ್ಥ್ಯವಿತ್ತು ಅವನಿಗೆ. ಕೆಲವೇಳೆ, ಪ್ರವಾದಿ ಯೆಲಿಸಿಯು ಇದೇ ರೀತಿ ಏಕಾಂಗಿಯಾಗಿ ಪ್ರತೀಕಾರಭಾವದಿಂದ ಕೂಡಿ ಭೂಮಿಯ ಮೇಲೆ ಅಲೆದಿರಬೇಕೆಂದು ನಾನು ಕಲ್ಪಿಸಿಕೊಂಡೆ.

ಆದರೆ, ನನ್ನ ಯೋಚನೆಗಳನ್ನಾಗಲೀ ಜನರ ಬಗೆಗೆ ನನ್ನ ನಿರೀಕ್ಷಣೆಗಳನ್ನಾಗಲೀ ಆ ಮುದುಕನಿಗೆ ನಾನು ಹೇಳಿದಾಗಲೆಲ್ಲ, ಆತ ಕೇಳಲು ಸಿದ್ಧನಾಗಿರುತ್ತಿದ್ದ. ಬಳಿಕ, ಅದೆಲ್ಲವನ್ನೂ ಅಂಗಡಿ ಸಹಾಯಕನಿಗೆ ತಿಳಿಸುತ್ತಿದ್ದ. ಅದೆಲ್ಲವನ್ನೂ ಕೇಳಿ ಆತ ನನ್ನನ್ನು ಬಯ್ಯುತ್ತಿದ್ದ, ಇಲ್ಲವೆ ಪರಿಹಾಸ್ಯಕ್ಕೀಡುಮಾಡುತ್ತಿದ್ದ.

ಕವಿತೆಗಳನ್ನೂ ಪುಸ್ತಕಗಳಿಂದ ಉಲ್ಲೇಖಗಳನ್ನೂ ನಾನು ಪ್ರತಿಮಾಡಿಡುತ್ತಿದ್ದ ಟಿಪ್ಪಣಿ ಪುಸ್ತಕದಲ್ಲಿ, ಕೆಲವೇಳೆ ಆತ ಹೇಳಿದುದನ್ನೂ ನಾನು ಬರೆದಿಟ್ಟಿರುವುದಾಗಿ, ಒಂದು ದಿನ ಆ ಮುದುಕನಿಗೆ ತಿಳಿಸಿದೆ. ಇದನ್ನು ಕೇಳಿ ಆತ ಹೆದರಿದ. ತೀವ್ರವೇ ನನ್ನೆಡೆಗೆ ಬಾಗಿ, ಗಾಬರಿಯಿಂದ ಪ್ರಶ್ನಿಸತೊಡಗಿದ:

"ಅಂಥ ಕೆಲಸವನ್ನು ಯಾಕೆ ಮಾಡ್ಬೇಕು ನೀನು? ಅದು ಸರಿಯಲ್ಲ, ಮಗೂ. ನೆನಪಿಟ್ಟುಕೊಳ್ಳೋದಕ್ಕೆಂದೆ? ಇಲ್ಲವಪ್ಪ, ನೀನು ಹಾಗೆ ಮಾಡಬಾರದು! ಎಂಥ ಪುಟ್ಟ ಪಿಶಾಚಿ ನೀನು! ಆದರೆ ಆ ಟಿಪ್ಪಣಿಗಳನ್ನು ನೀನು ನನಗೆ ಕೊಡ್ತಿ, ಅಲ್ವೆ? ಹ್ಞಾ?"

ಆ ಪುಸ್ತಕವನ್ನು ತನಗೆ ಕೊಡುವಂತೆ, ಅಥವಾ ಸುಟ್ಟುಬಿಡುವಂತೆ, ಬಹಳ ಹೊತ್ತಿನವರೆಗೂ ಎಡೆಬಿಡದೆ ಆತ ನನ್ನನ್ನು ಒತ್ತಾಯಿಸಿದ. ಬಳಿಕ ಉದ್ವಿಗ್ನಗೊಂಡು, ಅಂಗಡಿ ಸಹಾಯಕನೊಡನೆ ಅವನು ಪಿಸುನುಡಿಯತೊಡಗಿದ.

ನಾವು ಮನೆಗೆ ಮರಳುತ್ತಿದ್ದಾಗ ಅಂಗಡಿಸಹಾಯಕ ನನ್ನೊಡನೆ ಅಂದ.

"ಅದೇನೋ ಒಂದು ರೀತಿಯ ಟಿಪ್ಪಣಿ ಬರಕೋತಿದೀಯಂತಲ್ಲ. ಅದನ್ನು ಸಾಕುಮಾಡು, ಕೇಳಿಸ್ತೆ? ಗೂಢಚಾರರಷ್ಟೇ ಅಂಥ ಕೆಲಸಮಾಡ್ತಾರೆ."

ಎಚ್ಚರತಪ್ಪಿ ನಾನೆಂದೆ:

"ಸಿತಾನೋವ್ ವಿಷಯವೇನು? ಅವನೂ ಟಿಪ್ಪಣಿ ಬರೆದಿಟ್ಕೋತಾನಲ್ಲ?"

"ಅವನೂ ಕೂಡಾ? ನೀಳಕಾಲಿನ ಮೂರ್ಖ!"

ತುಸುದೀರ್ಘವಾದ ಮೌನದ ಬಳಿಕ, ಅಸಾಧಾರಣವಾದ ಮೃದುತನದಿಂದ, ಅವನು ಸೂಚಿಸಿದ:

"ನೋಡು, ನಿನ್ನ ಟಿಪ್ಪಣಿ ಪುಸ್ತಕವನ್ನ ನನಗೆ ತೋರಿಸು, ಸಿತಾನೋವನದನೂ ನನಗೆ ತೋರಿಸು. ನಾನು ನಿನಗೆ ಅರ್ಧರೂಬಲು ಕೊಡ್ತೀನಿ. ಸಿತಾನೋವನಿಗೆ ತಿಳಿಯದ ಹಾಗೆ ಸದ್ದಿಲ್ಲದೆ ಮಾಡು, ಅಷ್ಟೆ."

ತನ್ನ ವಿನಂತಿಯನ್ನು ನಾನು ನೆರವೇರಿಸುವ ವಿಷಯದಲ್ಲಿ ಯಾವ ಸಂದೇಹವೂ ಅವನಿಗೆ ಇದ್ದಂತೆ ತೋರಲಿಲ್ಲ. ಯಾಕೆಂದರೆ, ಮುಂದೆ ಒಂದು ಮಾತನ್ನೂ ಆಡದೆ, ತನ್ನ ಪುಟ್ಟ ಕಾಲುಗಳ ಮೇಲೆ ಕುಟುಕುಟು ನಡೆಯುತ್ತ ಅವನು ಹೊರಟೇ ಹೋಗಿದ್ದ.

ಮನೆ ಸೇರಿದ ಬಳಿಕ, ಅಂಗಡಿ ಸಹಾಯಕ ಮಾಡಿದ್ದ ಸೂಚನೆಯನ್ನು ಸಿತಾನೋವನಿಗೆ ನಾನು ತಿಳಿಸಿದೆ. ಅವನು ಹುಬ್ಬುಗಂಟಿಕ್ಕಿದ.

"ಅವನಿಗೆ ಯಾಕೆ ನೀನು ಹೇಳಿದೆ? ಈಗ ನನ್ನ ನಿನ್ನ—ಇಬ್ಬರ—ಟಿಪ್ಪಣಿ ಪುಸ್ತಕಗಳನ್ನೂ ಕದಿಯೋಕೆ ಯಾರನ್ನಾದರೂ ಆತ ಹಚ್ತಾನೆ. ಎಲ್ಲಿ, ನಿನ್ನದನ್ನು ನನ್ನ ವಶಕೊಡು; ಬಚ್ಚಿಡ್ತೀನಿ. ನಿನ್ನನ್ನು ಅವನು ಬೇಗನೆ ಹೊರಹಾಕ್ತಾನೆ, ನೋಡುವಿಯಂತೆ!"

ಆ ವಿಷಯದಲ್ಲಿ ನನಗೆ ಸಂದೇಹವಿರಲಿಲ್ಲ. ಅಜ್ಜ ಶಹರಕ್ಕೆ ಹಿಂತಿರುಗಿದೊಡನೆಯೇ ಹೊರಟುಬಿಡಬೇಕೆಂಬ ನಿರ್ಧಾರವನ್ನೂ ನಾನು ಮಾಡಿದೆ. ಯಾವುದೋ ಕುಟುಂಬದ ಹುಡುಗಿಯರಿಗೆ ಲೇಸ್‌ಹಚ್ಚುವುದನ್ನು ಕಲಿಸಲೆಂದು ಬಾಲಖ್ನಾಗೆ ಆಹ್ವಾನಿತಳಾಗಿದ್ದ ಅಜ್ಜಿ, ಚಳಿಗಾಲವನ್ನೆಲ್ಲಾ ಅಲ್ಲಿಯೇ ಕಳೆದಿದ್ದಳು. ಅಜ್ಜ ಪುನಃ ಕುನಾವಿನೋದದಲ್ಲಿ ವಾಸಿಸುತ್ತಿದ್ದ. ಅವನನ್ನು ನೋಡಲೆಂದು ನಾನೆಂದೂ ಹೋಗುತ್ತಿರಲಿಲ್ಲ. ಎಂದಾದರೊಮ್ಮೊಮ್ಮೆ ಶಹರಕ್ಕೆ ಬಂದ ಸಂದರ್ಭಗಳಲ್ಲಿ ನನ್ನನ್ನು ಆತ ಕಾಣುತ್ತಲೂ ಇರಲಿಲ್ಲ. ಒಂದು ದಿನ ನಾನು ಅವನನ್ನು ಬೀದಿಯಲ್ಲಿ ಸಂಧಿಸಿದೆ. ತನ್ನ ಬೂದುಬಣ್ಣದ ತುಪ್ಪಳದ ಬಲು ದೊಡ್ಡ ಕೋಟನ್ನು ತೊಟ್ಟುಕೊಂಡು, ಧರ್ಮಗುರುವಿನಂತೆ ಘನಗಾಂಭೀರ್ಯದಿಂದ ದೃಢಹೆಜ್ಜೆಗಳನ್ನಿಡುತ್ತಾ, ಆತ ನಡೆದು ಹೋಗುತ್ತಿದ್ದ. ನಾನು ವಂದಿಸಿದಾಗ ಆತ, ತನ್ನ ಕಣ್ಣುಗಳನ್ನು ರಕ್ಷಿಸಲೆಂಬಂತೆ ಒಂದು ಕೈಯನ್ನೆತ್ತಿ, ವಿಮನಸ್ಕನಾಗಿ ಅಂದ:

ಓ, ನೀನೇನೊ? ಹೌದು, ಹೌದು, ನೀನೊಬ್ಬ ದೇವಕಲಾಕಾರ ಆಗಿದೀಯಂತೆ. ಹೂಂ ಸರಿ, ಹಾದಿಹಿಡಿ, ನಿನ್ನ ಹಾದಿಹಿಡಿ."

ಹೀಗೆ ನನ್ನನ್ನು ಬದಿಗೆ ತಳ್ಳಿ, ಅದೇ ದೃಢನಡಿಗೆಯಿಂದಲೂ ಘನಗಾಂಭೀರ್ಯದಿಂದಲೂ ತನ್ನ ಹಾದಿಯಲ್ಲಿ ಅವನು ಮುಂದುವರಿದ.

ಈ ದಿನಗಳಲ್ಲಿ ಅಜ್ಜಿಯನ್ನು ನಾನು ಕಾಣುತ್ತಿದ್ದುದೇ ಕಡಮೆ. ಅವಳು ಅವ್ಯಾಹತವಾಗಿ ದುಡಿಯುತ್ತಿದ್ದಳು. ವೃದ್ಧಾಪ್ಯದಿಂದಾಗಿ ಮನಸ್ಸು ಮೆತ್ತಗಾಗುತ್ತ ನಡೆದಿದ್ದ ಅಜ್ಜನನ್ನು ಅವಳು ಪೋಷಿಸುತ್ತಿದ್ದಳು; ತನ್ನ ಮಗನ ಮಕ್ಕಳಿಗೆ ನೆರವಾಗುತ್ತಿದ್ದಳು. ಮೈಖೇಲನ ಸಾಶಾ ಸ್ಫುರದ್ರೂಪಿಯಾದ ಯುವಕನಾಗಿದ್ದ. ಕನಸುಗಾರ, ಪುಸ್ತಕಪ್ರೇಮಿ. ಅಜ್ಜಿಯ ವಿಶೇಷ ಕಾತರಕ್ಕೆ ಇವನು ಕಾರಣನಾಗಿದ್ದ. ಅರಿವೆಗೆ ಬಣ್ಣ ಬಳಿಯುವ ಕರ್ಮಾಗಾರಗಳಲ್ಲಿ ಅವನು ದುಡಿಯುತ್ತಿದ್ದ. ದುಡಿತದ ಸ್ಥಳವನ್ನು ಆಗಾಗ್ಗೆ ಬದಲಾಯಿಸುತ್ತಿದ್ದ. ಆ ಬದಲಾವಣೆಯ ಮಧ್ಯೆ ಅವನು ಅಜ್ಜಿಗೆ ಹೊರೆಯಾಗುತ್ತಿದ್ದ. ಅಜ್ಜಿ ಹೊಸ ಉದ್ಯೋಗವನ್ನು ದೊರಕಿಸಿಕೊಡು ವುದನ್ನೇ ಶಾಂತವಾಗಿ ಕಾಯುತ್ತಿದ್ದ. ಸಾಶಾನ ತಂಗಿಯೇನೂ ಕಡಮೆಭಾರದ ಹೊರೆಯಾಗಿ

ಲಿಲ್ಲ. ಅವಳ ದೌರ್ಭಾಗ್ಯದಿಂದ, ಕುಡುಕನಾದೊಬ್ಬ ಕೆಲಸಗಾರನೊಡನೆ ಆಕೆಯ ವಿವಾಹ ವಾಗಿತ್ತು. ಆತ ಅವಳನ್ನು ಮನೆಯಿಂದ ಹೊರಕ್ಕೆ ಓಡಿಸಿಬಿಟ್ಟಿದ್ದ.

ಅಜ್ಜಿಯನ್ನು ನಾನು ಸಂಧಿಸಿದಾಗಲೆಲ್ಲ, ಅವಳ ಚೇತನದ ಸೌಂದರ್ಯದ ಬಗೆಗೆ ನನ್ನ ಮೆಚ್ಚುಗೆ ಮತ್ತಷ್ಟು ಹೆಚ್ಚುತ್ತಿತ್ತು. ಆದರೆ, ಈ ಅದ್ಭುತ ಚೇತನ ಕಟ್ಟುಕಥೆಗಳ ಲೋಕದಲ್ಲೇ ವಾಸಿಸುತ್ತಿತ್ತೆಂಬುದನ್ನೂ ಇದರಿಂದಾಗಿ ತನ್ನ ಸುತ್ತುಮುತ್ತಣ ಕಟುವಾಸ್ತವತೆಯ ವಿಷಯ ದಲ್ಲಿ ಅವಳು ಕುರುಡಳಾಗಿದ್ದಳೆಂಬುದನ್ನೂ ಆಗಲೇ ನಾನು ಅರಿತಿದ್ದೆ. ನನ್ನನ್ನು ಬಾಧಿಸುತ್ತಿದ್ದ ಭೀತಿಗಳೂ ಗಾಬರಿಗಳೂ ಅವಳನ್ನು ಸೋಂಕುವುದು ಕೂಡಾ ಸಾಧ್ಯವಿರಲಿಲ್ಲ.

ಬದುಕೆಷ್ಟು ಕುರೂಪವೆಂಬುದನ್ನು, ಎಷ್ಟು ನಿಸ್ಸಾರವೆಂಬುದನ್ನು, ಜನರ ಯಾತನೆ ಗಳನ್ನು,—ನಾನು ಅಷ್ಟೊಂದು ಉದ್ವೇಗದಿಂದ ಪ್ರತಿಭಟಿಸುತ್ತಿದ್ದ ಎಲ್ಲ ವಿಷಯಗಳನ್ನು, ಅಜ್ಜಿಗೆ ನಾನು ವಿವರಿಸಿ ಹೇಳುತ್ತಿದ್ದೆ. ಅದಕ್ಕೆಲ್ಲ ಉತ್ತರವಾಗಿ ಅವಳು ಹೇಳುತ್ತಿದ್ದ ಮಾತು ಒಂದೇ:

"ನಾವು ಸಹಿಸ್ಕೋಬೇಕು, ಅಲ್ಯೋಶಾ."

ಸಹಿಸಿಕೊಳ್ಳುವ ಗುಣ ನನ್ನಲ್ಲಿರಲಿಲ್ಲ. ಪಶುಗಳ, ಮರದ, ಕಲ್ಲಿನ ಈ ಗುಣವನ್ನು ಆಗೊಮ್ಮೆ ಈಗೊಮ್ಮೆ ನಾನು ಪ್ರದರ್ಶಿಸುತ್ತಿದ್ದೆನಾದರೂ, ಹಾಗೆ ಮಾಡುತ್ತಿದ್ದುದು ನನ್ನನ್ನು ನಾನೇ ಪರೀಕ್ಷಿಸುವುದಕ್ಕಾಗಿ; ನನ್ನ ಬಲವನ್ನೂ ಭೂಮಿಯಲ್ಲಿ ನಾನು ಬೇರೂರಿದ ದೃಢತೆ ಯನ್ನೂ ಪರೀಕ್ಷಿಸಿ ನೋಡುವುದಕ್ಕಾಗಿ. ಕೆಲವೇಳೆ ಯುವಕರು, ಅಪ್ರಬುದ್ಧತೆಯ ಮೂರ್ಖತನ ದಿಂದ, ಅಥವಾ ತಮ್ಮ ಹಿರಿಯರ ಸಾಮರ್ಥ್ಯವನ್ನು ಕುರಿತ ಅಸೂಯೆಯಿಂದ, ತಮ್ಮ ಎಲುಬು ಗಳಿಗೂ ಸ್ನಾಯುಗಳಿಗೂ ಮೀರಿದ ಭಾರವನ್ನು ಎತ್ತಲು ಯತ್ನಿಸುತ್ತಾರೆ; ಕೆಲವೊಮ್ಮೆ ಯಶಸ್ಸನ್ನೂ ಗಳಿಸುತ್ತಾರೆ. ಜಂಭದಿಂದಿದ್ದು, ಪ್ರಬುದ್ಧ ಪಟುಗಳಂತೆ ಬಹುಭಾರವನ್ನು ಎತ್ತಿ ಶಿಲುಬೆಯ ವಂದನೆಮಾಡಲು ಪ್ರಯತ್ನಿಸುತ್ತಾರೆ.

ಶಾರೀರಕವಾಗಿಯೂ ಮಾನಸಿಕವಾಗಿಯೂ ಇಂತಹ ಹುಚ್ಚು ಯತ್ನವನ್ನು ನಾನೂ ಮಾಡಿ ದ್ದುಂಟು. ಆ ಯತ್ನದಲ್ಲಿ ಪ್ರಾಣಾಂತಿಕ ಅಪಾಯ ನನಗೆ ಆಗದಿದ್ದುದು, ಜೀವನದುದ್ದಕ್ಕೂ ಅಂಗವಿಕಲನಾಗಿ ನಾನು ಬೀಳದಿದ್ದುದು, ನನ್ನ ಅದೃಷ್ಟದಿಂದಲೇ ಎನ್ನಬೇಕು. ಯಾಕೆಂದರೆ, ಸಹನೆಯಷ್ಟು ಬೀಕರವಾಗಿ, ಪರಿಸ್ಥಿತಿಯ ಶಕ್ತಿಗಳೆದುರು ವಿನಮ್ರವಾಗಿ ಮಣಿಯುವಷ್ಟು ಬೀಕರ ವಾಗಿ, ಬೇರಾವುದೂ ಮನುಷ್ಯನನ್ನು ಅಂಗವಿಕಲನನ್ನಾಗಿ ಮಾಡುವುದಿಲ್ಲ.

ಇಷ್ಟಾದ ಮೇಲೂ ಕೊನೆಯಲ್ಲಿ ನಾನು ಅಂಗವಿಕಲನಾಗಿಯೇ ಭೂಮಿತಾಯಿಯ ಬಳಿಗೆ ಮರಳುವೆನೆಂದಾದರೆ, ಸುಮಾರು ನಾಲ್ವತ್ತು ವರ್ಷಗಳ ಕಾಲ, ನನ್ನ ಆತ್ಮವನ್ನು ವಿರೂಪಗೊಳಿಸ ಬೇಕೆಂದು ಸಜ್ಜನರು ಮಾಡಿದ ದುರಾಗ್ರಹದ ಯತ್ನಗಳಿಗಿದಿರು ನಾನು ಮಣಿಯದೆ ನಿಂತೆನೆಂದು, ಸ್ವಲ್ಪಮಟ್ಟಿನ ಹೆಮ್ಮೆಯಿಂದಲೇ ನಾನು ಹೇಳುವುದಾದರೂ ಸಾಧ್ಯವಾದೀತು.

ಮಜವಾಗಿರಬೇಕೆಂಬ, ಜನರನ್ನು ರಂಜಿಸಬೇಕೆಂಬ, ಅವರ ನಗುವನ್ನು ಕೆರಳಿಸಬೇಕೆಂಬ ಅದಮ್ಯವಾದ ಬಯಕೆ ಹೆಚ್ಚುಹೆಚ್ಚು ಸಾರೆ ನನ್ನನ್ನು ಆವರಿಸತೊಡಗಿತು. ಇದರಲ್ಲಿ ನನಗೆ ಯಶಸ್ಸೂ ದೊರೆಯಿತು. ಕೆಳಮಾರ್ಕೆಟಿನ ವ್ಯಾಪಾರಿಗಳನ್ನು ಬಣ್ಣಿಸುವ, ಅವರ ಅನುಕರಣ ಮಾಡುವ, ವಿಶೇಷ ಜಾಣ್ಮೆ ನನ್ನಲ್ಲಿತ್ತು. ರೈತರೂ ಅವರ ಸ್ತ್ರೀಯರೂ ಪ್ರತಿಮೆಗಳನ್ನು ಹೇಗೆ

ಕೊಳ್ಳುತ್ತಿದ್ದರು ಮತ್ತು ಮಾರುತ್ತಿದ್ದರೆಂಬುದನ್ನು, ಅಂಗಡಿ ಸಹಾಯಕರು ಎಷ್ಟೊಂದು ಚತುರತೆಯಿಂದ ಅವರಿಗೆ ಮೋಸಮಾಡುತ್ತಿದ್ದರೆಂಬುದನ್ನು, ಪುರಾತನವಾದಿಗಳು ತಮ್ಮ ಕೊನೆಯಿಲ್ಲದ ವಾದವಿವಾದಗಳನ್ನು ಹೇಗೆ ನಡಸುತ್ತಿದ್ದರೆಂಬುದನ್ನು ನಾನು ಅಭಿನಯಿಸಿ ತೋರಿಸುತ್ತಿದ್ದೆ.

ಕರ್ಮಾಗಾರದ ಜನರು ಖೋಖೋ ಎಂದು ಬಿದ್ದುಬಿದ್ದು ನಗುತ್ತಿದ್ದರು. ಎಷ್ಟೋವೇಳೆ ಬ್ರಷ್ಷುಗಳನ್ನು ಕೆಳಗಿರಿಸಿ ನನ್ನ ಅಭಿನಯವನ್ನು ನೋಡುತ್ತಿದ್ದರು. ಆದರೆ, ಅಭಿನಯ ಮುಗಿದಾಗ ಲಾರಿಯೊನಿಶ್ ಅನ್ನುತ್ತಿದ್ದ:

"ನಿನ್ನ ಈ ತಂತ್ರಗಳನ್ನೆಲ್ಲಾ, ಕೆಲಸಕ್ಕೆ ಅಡ್ಡಿಯಾಗದ ಹಾಗೆ ರಾತ್ರೆಯ ಊಟವಾದ ಬಳಿಕ ಮಾಡೋದು ಮೇಲು."

ಅಂತಹ 'ಅಭಿನಯ'ದ ಬಳಿಕ ಯಾವಾಗಲೂ, ದೊಡ್ಡದೊಂದು ಹೊರೆಯನ್ನು ಕೆಳಗಿಳಿಸಿದೆನೇನೋ ಎನ್ನುವಂತೆ ಸಮಾಧಾನವೆನಿಸುತ್ತಿತ್ತು. ಸುಮಾರು ಒಂದು ಘಂಟೆಯವರೆಗೇನೋ ನನ್ನ ತಲೆಬರಿದಾಗಿದ್ದು, ಹಾಯೆನಿಸುತ್ತಿತ್ತು. ಆದರೆ ಪುನಃ ಚೂಪಾದ ಮೊಳೆಗಳಿಂದ ಅದು ತುಂಬಿಕೊಳ್ಳುತ್ತಿತ್ತು; ಅಪ್ರಿಯವಾದ ರೀತಿಯಲ್ಲಿ ಆ ಮೊಳೆಗಳು ಚುಚ್ಚುತ್ತಿದ್ದುವು.

ನನ್ನ ಸುತ್ತುಮುತ್ತೆಲ್ಲ ಕಲುಷಿತವಾದ ತೆಳುಗಂಜಿ ಕುದಿಯುತ್ತಿತ್ತು. ಅದರೊಳಗೆ ನಾನು ನಿಧಾನವಾಗಿ ಬೇಯುತ್ತಿದ್ದಂತೆ ಅನಿಸುತ್ತಿತ್ತು.

"ನನ್ನ ಇಡೀ ಬದುಕು ಹೀಗೆಯೇ ಇರುವುದು ಸಾಧ್ಯವೇ? ಈ ಜನರ ಹಾಗೆಯೇ, ಈಗಿನದಕ್ಕಿಂತ ಉತ್ತಮವಾದುದೇನನ್ನೂ ತಿಳಿಯದೇ, ಏನನ್ನೂ ಕಾಣದೆ, ಜೀವಿಸುತ್ತ ಹೋಗುವೆನೆ?" ಎಂದು ನಾನು ಯೋಚಿಸಿದೆ.

ಜಿಖರೇವ್, ನೆಟ್ಟ ನೋಟದಿಂದ ನನ್ನನ್ನೆ ದಿಟ್ಟಿಸಿ ಅಂದ:

"ಈಚೀಚೆಗೆ ನೀನು ಸಿನಿಕನಾಗ್ತಿದೀಯಾ, ಮಾಕ್ಸಿಮಿಶ್."

ಆಗಾಗ್ಗೆ ಸಿತಾನೋವನೂ ಕೇಳುತ್ತಿದ್ದ:

"ಏನಾಗಿದೆ ನಿನಗೆ?"

ಏನು ಉತ್ತರ ಕೊಡಬೇಕೆಂಬುದೇ ನನಗೆ ತಿಳಿಯಲಿಲ್ಲ.

ಬದುಕು ನನ್ನ ಆತ್ಮದಿಂದ, ತನ್ನದೇ ಆದ ಅತ್ಯುತ್ತಮ ಅಂಕಿತಗಳನ್ನೆಲ್ಲ, ಒರಟು ದುರಾಗ್ರಹದಿಂದ ತೊಡೆದುಹಾಕಿತು. ಅದರ ಬದಲು, ಪ್ರತೀಕಾರಭಾವದಿಂದ, ಬೆಲೆಯಿಲ್ಲದ ಗೀಚುಗೆರೆಗಳನ್ನೆಲ್ಲ ತುಂಬಿತು. ಅದರ ಹಿಂಸೆಯನ್ನು, ಸಿಟ್ಟಿನಿಂದಲೂ ಪಟ್ಟುಹಿಡಿದೂ ನಾನು ಇದಿರಿಸಿದೆ. ಇತರರೆಲ್ಲರಂತೆ ಒಂದೇ ನದಿಯಲ್ಲಿ ನಾನು ಕೆಳಕ್ಕೆ ತೇಲಿಹೋಗುತ್ತಿದ್ದೆ. ಆದರೆ, ನನ್ನ ಪಾಲಿಗೆ ನೀರು ಹೆಚ್ಚು ತಣ್ಣಗಿತ್ತು; ಅದರ ತೇಲುವ ಶಕ್ತಿ ಕಡಮೆಯಾಗಿತ್ತು. ಆಳಕ್ಕೆ ನಾನು ಮುಳುಗಿಹೋಗುತ್ತಿರುವೆನೇನೋ ಎಂದು ಕೆಲವೇಳೆ ಅನಿಸುತ್ತಿತ್ತು.

ಹೀಗಿದ್ದರೂ ಜನರು ನನ್ನ ಬಗೆಗೆ ಹೆಚ್ಚು ಹೆಚ್ಚಾಗಿ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳ ತೊಡಗಿದರು. ಪಾವೆಲನ ಮೇಲೆ ಕೂಗಾಡುವಂತೆ ನನ್ನೊಡನೆ ಅವರು ಮಾಡುತ್ತಿರಲಿಲ್ಲ; ಆ ಕೆಲಸ ಈ ಕೆಲಸ ಮಾಡುವಂತೆ ನನ್ನನ್ನು ಆಜ್ಞಾಪಿಸುತ್ತಲೂ ಇರಲಿಲ್ಲ. ನನ್ನ ಬಗೆಗೆ ತಮಗಿದ್ದ ಗೌರವವನ್ನು ಸ್ಪಷ್ಟಪಡಿಸುವುದಕ್ಕಾಗಿ, ನನ್ನ ಪಿತೃನಾಮದಿಂದ ಅವರು ನನ್ನನ್ನು ಸಂಬೋಧಿಸುತ್ತಿದ್ದರು. ಇದೆಲ್ಲಾ ಬಹಳ ಹಿತಕರವಾಗಿತ್ತು. ಆದರೂ ನನ್ನನ್ನು ನೋಯಿಸಿದ ಬೇರೆ ವಿಷಯ

ಗಳೆಷ್ಟೋ ಇದ್ದುವು. ಬದುಕಿನಲ್ಲಿ ಅವರಿಗಿದ್ದ ರಂಜನೆ, ಮಾದಕಪಾನೀಯ ಮತ್ತು ಸ್ತ್ರೀಯರು ಮಾತ್ರ ಎಂಬುದನ್ನು ನಾನು ಮನಗಂಡಿದ್ದೆ. ಆದರೂ, ಎಷ್ಟೊಂದು ಜನರು ವೋಡ್ಕಾ ಕುಡಿಯು ತ್ತಿದ್ದರೆಂಬುದನ್ನು, ಕುಡಿದಾಗ ಅವರೆಷ್ಟು ಅಸಹ್ಯವಾಗಿರುತ್ತಿದ್ದರೆಂಬುದನ್ನು, ಸ್ತ್ರೀಯರೊಡನೆ ಅವರ ಸಂಬಂಧ ಎಷ್ಟು ಅಂದಗೇಡಿನದಾಗಿತ್ತೆಂಬುದನ್ನು, ಕಂಡಾಗಲೆಲ್ಲ ನನಗೆ ಯಾತನೆ ಯಾಗುತ್ತಿತ್ತು.

ಸ್ವತಃ ಬುದ್ಧಿವಂತಳೂ ಧೈರ್ಯವಂತಳೂ ಆದ ನಟಾಲ್ಯಾ ಕೊಜ್ಲೋವ್‌ಸ್ಕಯಾಳೇ, ಸ್ತ್ರೀಯರು ಬರೀ ರಂಜನೆಯ ಸಾಧನಗಳೆಂದು ಭಾವಿಸಿದ್ದನ್ನು, ವ್ಯಸನದಿಂದ ನಾನು ನೆನೆಸಿಕೊಂಡೆ.

ಹಾಗಾದರೆ ಅಜ್ಜಿಯ ವಿಷಯವೇನು? ಮಾರ್ಗೊಟ್‌ರಾಣಿಯೊ?

ಭೀತಿಯಭಾವದಿಂದ ಮಾರ್ಗೊಟ್‌ರಾಣಿಯನ್ನು ನಾನು ನೆನೆಸಿಕೊಂಡೆ. ಉಳಿದೆಲ್ಲದ ಕ್ಕಿಂತ ಆಕೆ ಅದೆಷ್ಟೊಂದು ಭಿನ್ನಳಾಗಿದ್ದಳೆಂದರೆ, ಅವಳನ್ನು ಕನಸಿನಲ್ಲಿ ಕಂಡೆನೇನೋ ಎನ್ನು ವಂತಿತ್ತು.

ಹೆಂಗಸರ ಬಗೆಗೆ ತುಸು ಹೆಚ್ಚಾಗಿಯೇ ನಾನು ಯೋಚಿಸತೊಡಗಿದೆ. ನನ್ನ ಮುಂದಿನ ಬಿಡುವಿನ ದಿನವನ್ನು, ಇತರರು ವಿಲಾಸಮಗ್ನರಾಗುತ್ತಿದ್ದ ಕಡೆಯಲ್ಲೇ ಕಳೆಯುವ ಸಾಧ್ಯತೆ ಯನ್ನೂ ಆಗಲೇ ಪರಿಗಣಿಸಿದೆ. ಶಾರೀರಿಕ ಬಯಕೆಯೇನೂ ಇದಕ್ಕೆ ಪ್ರೇರಣೆಯಾಗಿರಲಿಲ್ಲ. ನಾನು ಆರೋಗ್ಯವಂತನಾಗಿದ್ದೆ; ಅಲ್ಪಸಂತೋಷಿಯಾಗಿರಲಿಲ್ಲ. ಆದರೆ ಕೆಲವೇಳೆ, ನನ್ನನ್ನು ತಿಳಿದುಕೊಳ್ಳಬಲ್ಲಂತಹ ಕೋಮಲಸ್ವಭಾವದ ಯಾರನ್ನಾದರೂ, ತಾಯಿಯ ಎದುರು ತೋಡಿ ಕೊಳ್ಳುವಂತೆ ಹೃದಯದ ಬೇಗುದಿಯನ್ನೆಲ್ಲ ತೋಡಿಕೊಳ್ಳುವುದು ಸಾಧ್ಯವಿರುವ ಯಾರನ್ನಾ ದರೂ, ಅಪ್ಪಿಕೊಳ್ಳಬೇಕೆಂಬ ಅತೀವವಾದ ಬಯಕೆಯಾಗುತ್ತಿತ್ತು.

ಪಾವೆಲನ ಬಗೆಗೆ ನಾನು ಅಸೂಯೆಪಟ್ಟೆ. ಬೀದಿಯಾಚೆಗಿನ ಮನೆಗೆಲಸದ ಹುಡುಗಿ ಯೊಬ್ಬಳೊಡನೆ ತಾನು ನಡೆಸಿದ್ದ ಪ್ರಣಯ ಪ್ರಕರಣದ ವಿಷಯವನ್ನು, ಒಂದು ರಾತ್ರೆ ಅಕ್ಕಪಕ್ಕ ದಲ್ಲಿ ನಾವು ಮಲಗಿದ್ದಂತೆ, ಪಾವೆಲ್ ನನ್ನಲ್ಲಿ ವಿಶ್ವಾಸವಿಟ್ಟು ಪಿಸುದನಿಯಲ್ಲಿ ನುಡಿದ:

"ಸ್ವಲ್ಪ ಯೋಚಿಸಿ ನೋಡು, ಸೋದರ. ಒಂದು ತಿಂಗಳ ಹಿಂದೆ ಅವಳತ್ತ ನಾನು ಹಿಮದ ಉಂಡೆಗಳನ್ನು ಎಸೀತಿದ್ದೆ. ಅವಳನ್ನು ನಾನು ಲೆಕ್ಕಕ್ಕೇ ಹಿಡಿದಿರಲಿಲ್ಲ. ಆದರೆ ಈಗ ಹೊರಗೆ ಬೆಂಚಿನ ಮೇಲೆ ಒಬ್ಬರಿಗೊಬ್ಬರು ಒತ್ತಿಕೊಂಡು ಕುಳಿತಾಗ—ಹುಂ, ಅವಳಂಥ ವ್ಯಕ್ತಿಯೇ ಬೇರೆ ಇಲ್ಲ ಅನಿಸ್ತದೆ."

"ಅವಳೊಡನೆ ಯಾವ ವಿಷಯ ಮಾತಾಡ್ತೀಯಾ ನೀನು?"

"ಎಲ್ಲಾ ವಿಷಯ. ಅವಳು ತನ್ನ ವಿಷಯ ನನಗೆ ಹೇಳ್ತಾಳೆ; ನಾನು ನನ್ನ ವಿಷಯ ಅವಳಿಗೆ ಹೇಳ್ತೀನೆ. ಆ ಮೇಲೆ ಇಬ್ಬರೂ ಪರಸ್ಪರ ಚುಂಬಿಸ್ತೇವೆ....ಒಂದೇ ಸಂಗತಿ ಅಂದರೆ, ಅವಳು ಚಿನ್ನದಂತಹ ನಡತೆಯ ಹೆಣ್ಣು....ಅವಳೆಷ್ಟು ಒಳ್ಳೆಯವಳೂಂತ ನೀನು ಕಲ್ಪಿಸಿಕೊಳ್ಳೋದು ಸಾಧ್ಯವಿಲ್ಲ!....ಲೋ, ಇದೇನೋ, ಕುದುರೆ ಸವಾರನ ಹಾಗೆ ತಂಬಾಕ ಸೇದ್ತಿದೀಯಲ್ಲ!"

ನಾನು ಅತಿಯಾಗಿ ಸೇದುತ್ತಿದ್ದೆ. ತಂಬಾಕ ನನ್ನ ತಲೆಗೆ ಅಡರುತ್ತಿತ್ತು. ನನ್ನ ಕಾತರದ ವಿಚಾರಗಳನ್ನೆಲ್ಲ ಮಂದಗೊಳಿಸುತ್ತಿತ್ತು. ನನ್ನ ಸುದೈವದಿಂದ, ವೋಡ್ಕಾದ ರುಚಿಯೂ ವಾಸ ನೆಯೂ ನನಗೆ ಅಸಹ್ಯವಾಗಿದ್ದುವು. ಆದರೆ ಪಾವೆಲ್ ವಿಪರೀತವಾಗಿ ಕುಡಿಯುತ್ತಿದ್ದ. ಕುಡಿದು

ಅಮಲೇರಿದಾಗ ಯಾಚಿಸುವ ಧ್ವನಿಯಲ್ಲಿ ಪ್ರಲಾಪಿಸುತ್ತಿದ್ದ :

"ನಾನು ನನ್ನ ಮನೆಗೆ ಹೋಗ್ಬೇಕು! ನನ್ನ ಮನೆಗೆ ಹೋಗೋದಕ್ಕೆ ನನಗೆ ಬಿಡಿ!"

ಅವನೊಬ್ಬ ತಬ್ಬಲಿ. ಅವನ ತಂದೆಯೂ ತಾಯಿಯೂ ಬಹಳಕಾಲದ ಹಿಂದೆಯೇ ತೀ ಕೊಂಡಿದ್ದರು. ಅವನಿಗೆ ಅಕ್ಕತಂಗಿಯರಾಗಲೀ ಅಣ್ಣತಮ್ಮಂದಿರಾಗಲೀ ಯಾರೂ ಇರಲಿಲ್ಲ ತನ್ನ ಎಂಟನೆಯ ವರ್ಷದಿಂದಲೇ ಆತ, ಅಪರಿಚಿತರ ಜತೆ ವಾಸವಾಗಿದ್ದ.

ಮೋಹಕ ವಸಂತದಿಂದಾಗಿ ಮತ್ತಷ್ಟು ತೀವ್ರಗೊಂಡ ಅಸಹನೆಯ ಅವಿಶ್ರಾಂತ ಮನ ಸ್ಥಿತಿಯಲ್ಲಿ, ಉಗಿಹಡಗದ ಮೇಲೆ ಕೆಲಸ ದೊರಕಿಸಿಕೊಳ್ಳಲು ನಾನು ಮತ್ತೊಮ್ಮೆ ನಿರ್ಧರಿಸಿದೆ ಹಡಗದ ಮೇಲಿದ್ದು ಅಸ್ಟ್ರಾಖಾನ್ ತಲಪಿದೊಡನೆ, ಪರ್ಶಿಯಾಕ್ಕೆ ಓಡಿಹೋಗಬಹುದೆಂದ ಲೆಕ್ಕಹಾಕಿದೆ.

ಪರ್ಶಿಯಾವನ್ನೇಕೆ ನಾನು ಆರಿಸಿಕೊಂಡೆನೆಂಬುದು ನನಗೆ ನೆನಪಿಲ್ಲ. ಪ್ರಾಯಶಃ ನಿಜ ನೊವೊಗೊರೊಡ್ ಜಾತ್ರೆಗೆ ಬರುತ್ತಿದ್ದ ಪರ್ಶಿಯನ್ ವರ್ತಕರಿಂದ ನಾನು ಬಹಳವಾ ಆಕರ್ಷಿತನಾಗಿದ್ದುದೇ ಕಾರಣವಿರಬಹುದು. ಬಿಸಿಲಲ್ಲಿ ಮೈ ಕಾಯಿಸುತ್ತ, ಶಾಂತವಾಗಿ ಹುಕ್ಕಾ ಸೇದುತ್ತ, ಬಣ್ಣಹಾಕಿದ ಗಡ್ಡಗಳಿದ್ದ, ವಿಶಾಲವಾದ ಕರಿದಾದ ಎಲ್ಲವನ್ನೂ ಬಲ್ಲ ಕಣ್ಣುಗಳಿದ್ದ ಶಿಲಾಪ್ರತಿಮೆಗಳ ಹಾಗೆ ಅವರು ಕುಳಿತಿರುತ್ತಿದ್ದ ದೃಶ್ಯ ನನಗೆ ಯಾವಾಗಲೂ ಮೋಹಕವಾ ಕಂಡಿತ್ತು.

ಬಹುಶಃ ಖಂಡಿತವಾಗಿಯೂ ನಾನು ಓಡಿ ಹೋಗಿಯೇ ಬಿಡುತ್ತಿದ್ದೆ. ಆದರೆ, ಪುನ ತ್ಥಾನ ವಾರದಲ್ಲಿ ನಡೆದೊಂದು ಘಟನೆ ಅದನ್ನು ತಪ್ಪಿಸಿತು. ಆ ಸಂದರ್ಭದಲ್ಲಿ ಕೆಲಕಲಾಕಾರ ತಮ್ಮ ಸ್ವಗ್ರಾಮಗಳಿಗೆ ತೆರಳಿದ್ದರು; ಉಳಿದವರು ಕುಡಿತದ ಕೇಳಿಗಳಲ್ಲಿ ಮೈಮರೆತಿದ್ದರು ಆಗ ನಾನು ಅಕಸ್ಮಾತ್ತಾಗಿ ನನ್ನ ಹಿಂದಿನ ಯಜಮಾನನನ್ನು—ಅಜ್ಜಿಯ ಅಳಿಯನನ್ನು-ಕಂಡ ಓಕಾನದಿಯ ಮೇಲುದಂಡೆಯಲ್ಲಿ, ಬಿಸಿಲು ಬಿದ್ದಿದ್ದ ಬಯಲಲ್ಲಿ, ಆತ ವಾಯುಸೇವನೆಗೆ ಹೊ ಟಿದ್ದ. ಬೂದು ಬಣ್ಣದ ಹಗುರವಾದ ಕೋಟುತೊಟ್ಟು, ಕೈಗಳನ್ನು ತನ್ನ ಷರಾಯಿಯ ಜೇಬ ಗಳಲ್ಲಿರಿಸಿ, ಹಲ್ಲುಗಳ ನಡುವೆ ಸಿಗರೇಟು ಕಚ್ಚಿಕೊಂಡು, ಹ್ಯಾಟನ್ನು ಮನಸ್ವಿಯಾಗಿ ತಲೆ ಹಿಂಭಾಗಕ್ಕೆ ತಳ್ಳಿ, ಆತ ನಡೆದು ಹೋಗುತ್ತಿದ್ದ. ನಾನು ಸಮೀಪಿಸಿದಂತೆ, ಸ್ನೇಹಪರವಾ ಮುಗುಳುನಕ್ಕ. ಹರ್ಷಚಿತ್ತ—ಸ್ವಾತಂತ್ರ್ಯಪ್ರಿಯ—ವ್ಯಕ್ತಿಗಿರುವಂತಹ ಮನವೊಲಿಸು ವೈಖರಿ ಅವನದಾಗಿತ್ತು. ಆ ಬಯಲಿನಲ್ಲಂತೂ ನಾವಿಬ್ಬರೇ ಇದ್ದೆವು.

"ಆ್ಹ, ಪೆಶ್ಕೋವ್! ಕ್ರಿಸ್ತನ ಉದಯವಾಗಿದೆ!"

ಪುನರುತ್ಥಾನದ ಚುಂಬನದ ವಿನಿಮಯವಾದ ಬಳಿಕ, ನಾನು ಹೇಗಿದ್ದೇನೆ ಎಂದು ಆ ಕೇಳಿದ. ಅದಕ್ಕೆ ಉತ್ತರವಾಗಿ ನಾನು, ಕರ್ಮಾಗಾರ, ಶಹರ, ಸಾರ್ವತ್ರಿಕವಾಗಿ ಉ ದೆಲ್ಲವೂ ನನಗೆ ಸಾಕಾಗಿ ಹೋಗಿವೆಯೆಂದೂ ಪರ್ಶಿಯಾಕ್ಕೆ ಹೋಗಲು ನಾನು ನಿರ್ಧರಿಸಿ ವುದಾಗಿಯೂ ಬಲು ಸ್ಪಷ್ಟವಾಗಿ ಉತ್ತರವಿತ್ತೆ.

ಗಭೀರನಾಗಿ ಅವನೆಂದ :

"ಆ ವಿಚಾರವನ್ನು ಬಿಟ್ಟುಕೊಡು. ಪರ್ಶಿಯಾವನ್ನು ಸುಟ್ಟಿತು! ನಾನು ಬಲ್ಲೆ ತಮ ನಿನ್ನ ವಯಸ್ಸಿನಲ್ಲಿ ನಾನು ಕೂಡಾ ಓಡಿ ಹೋಗೋಕೆ ಅಪೇಕ್ಷೆಪಟ್ಟಿದ್ದೆ—ಎಲ್ಲಿಗೆ ಅನ್ನೋ

ಆ ಪಿಶಾಚಿಯೊಂದಕ್ಕೇ ಗೊತ್ತು !"

ಪಿಶಾಚಿಯನ್ನು ಆತ ಅತ್ತಿತ್ತ ಎಸೆದ ಧಿಮಾಕಿನ ರೀತಿ ನನಗೆ ಇಷ್ಟವಾಯಿತು. ಅವನ ನಡವಳಿಕೆಯಲ್ಲಿ ಒಳಿತಾದುದೇನೋ ಚಮ್ಮುವಂಥದೇನೋ ಇತ್ತು. ಅವನನ್ನು ಕುರಿತ ಎಲ್ಲದರಲ್ಲೂ ಒಂದು ಬಗೆಯ ಆಟಾಟೋಪವಿದ್ದಂತೆ ಆನಿಸುತ್ತಿತ್ತು.

ದಪ್ಪನೆಯ ಸಿಗರೇಟುಗಳಿದ್ದ ಬೆಳ್ಳಿಯ ಕೇಸನ್ನು ಮುಂದಕ್ಕೆ ಚಾಚುತ್ತ, ಅವನು ಕೇಳಿದ:

"ಸೇದ್ತೀಯೇನು ?"

ಇದರಿಂದಂತೂ ನಾನು ಸಂಪೂರ್ಣ ಮಾರುಹೋದೆ.

"ಇಲ್ಲಿ ಕೇಳು, ಪೆಶ್ಕೋವ್. ನನ್ನ ಬಳಿ ದುಡಿಯೋದಕ್ಕೆ ಯಾಕೆ ನೀನು ವಾಪಸು ಬರಬಾರದು ? ಈ ವರ್ಷ ಜಾತ್ರೆಯ ಸ್ಥಳದಲ್ಲಿ ಸುಮಾರು ನಾಲ್ವತ್ತು ಸಾವಿರದಷ್ಟು ಕಂಟ್ರಾಕ್ಟು ವಹಿಸಿಕೊಂಡಿದೇನೆ. ಜಾತ್ರೆಯ ಬಯಲಲ್ಲಿ ನಿನ್ನನ್ನು ಇಟ್ಟಿರ್ತೀನೆ. ನೀನೊಂದು ಬಗೆಯ ಓವರ್‌ಸೀಯರ್ : ಕಟ್ಟಡದ ಸಾಮಾನುಗಳನ್ನು ಸ್ವೀಕರಿಸುವುದು, ಸರಿಯಾದ ಜಾಗಕ್ಕೆ ಸಕಾಲದಲ್ಲಿ ಪ್ರತಿಯೊಂದೂ ತಲಪೋ ಹಾಗೆ ಕೆಲಸಗಾರರು ಕದಿಯದ ಹಾಗೆ ನೋಡ್ಕೊಳ್ಳೋದು, ಇದು ನಿನ್ನ ಕೆಲಸ. ಸರಿಹೋಗುತ್ತೊ ? ವೇತನ—ತಿಂಗಳಿಗೆ ಐದು ರೂಬಲು, ಊಟಗಳಿಗಾಗಿ ಐದು ಕೊಪೆಕ್. ನನ್ನ ಮನೆಹೆಂಗಸರ ಜತೆ ನಿನಗೇನೂ ಸಂಪರ್ಕವಿರೋದಿಲ್ಲ: ಬೆಳಗ್ಗೆ ಹೊರಬೀಳೋದು, ಸಂಜೆ ವಾಪಸಾಗೋದು—ಹೆಂಗಸರ ಸಂಬಂಧವೇ ಬೆಳೆಯೋದಿಲ್ಲ. ನಾವು ಸಂಧಿಸಿರುವ ವಿಷಯಮಾತ್ರ ಅವರಿಗೆ ಹೇಳಬೇಡ, ಅಷ್ಟೆ. ಸಂತ ಥಾಮಸನ ಭಾನುವಾರ ಸುಮ್ಮನೆ ಮನೆಗೆ ಬಾ, ಆ ಮೇಲೆ—ಸರಿಮತ್ತೆ !"

ಅತ್ಯಂತ ಮೈತ್ರಿಭಾವದಿಂದ ನಾವು ಅಗಲಿದೆವು. ಹೊರಟಾಗ ಆತ ಹಸ್ತಲಾಘವವಿತ್ತ; ದೂರದಿಂದ ನನ್ನ ಕಡೆಗೆ ತನ್ನ ಕೈಯನ್ನು ಕೂಡಾ ಅವನು ಬೀಸಿದ.

ನಾನು ಹೊರಟುಹೋಗುವೆನೆಂದು ಕಲಾಕಾರರೆದುರು ಜಾಹೀರು ಮಾಡಿದಾಗ ಅವರಲ್ಲಿ ಹೆಚ್ಚಿನವರು ವ್ಯಕ್ತಪಡಿಸಿದ ವಿಷಾದದಿಂದ, ನನಗೆ ಬಹಳ ಹೆಮ್ಮೆಯೇ ಅನಿಸಿತು. ಪಾವೆಲನಂತೂ ವಿಶೇಷವಾಗಿ ಕಸಿವಿಸಿಕೊಂಡ.

ಜರೆದಾಡುವ ಧ್ವನಿಯಲ್ಲಿ ಅವನೆಂದ:

ಆ ರೈತರ ಜತೆ ವಾಸಮಾಡೋದಕ್ಕಾಗಿ ನಮ್ಮನ್ನು ಬಿಟ್ಟು ಹೋಗ್ತೀ ಅಂದರೆ! ಬಡಗಿಗಳು, ಗೋಡೆಗಳಿಗೆ ಕಾಗದ ಅಂಟಿಸುವವರು,.... ಥೂ! ಬಿಶಪನ ಪದವಿಯಿಂದ ಪಾದ್ರಿಯಸ್ಥಾನಕ್ಕೆ ಇಳಿಯೋದೂಂತ ಹೇಳೋದು ಇದಕ್ಕೇ."

ಜಿಖರೇವ್ ಗೊಣಗಿದ:

"ಮೀನುಗಳು ಆಳವನ್ನು ಅರಸೋಹಾಗೆ ಯೌವನ ತೊಂದರೇನ ಅರಸ್ತದೆ."

ಕಲಾಕಾರರು ನನಗೆ ನೀಡಿದ ಬೀಳ್ಕೊಡುಗೆ, ನೀರಸವೂ ಬೇಸರಪಡಿಸುವಂಥದೂ ಆಗಿತ್ತು.

ಕುಡಿದು ಅಮಲೇರಿ ಹಸುರು ವರ್ಣಕ್ಕೆ ತಿರುಗಿದ್ದ ಜಿಖರೇವ್ ಅಂದ:

"ಇದು ಅದು ಎಲ್ಲವನ್ನೂ ಪ್ರಯೋಗಿಸಿ ನೋಡಬೇಕಾದ್ದೇನೋ ಸಹಜವೇ. ಆದರೆ,

ಮೊದಲಿನಿಂದಲೂ ಯಾವುದಾದರೊಂದನ್ನು ಅಮುಕಿ ಹಿಡಿದು ಅದಕ್ಕೆ ಜೋತಾಡ್ಕೊಂಡಿರೋದು ಮೇಲು."

"ಹಾಗೆ ಮಾಡೋದರಿಂದ ಮುಂದೆ ಯಾವಾಗಲೂ ಒಳ್ಳೇದಾಗ್ತದೆ," ಎಂದು ಲಾರಿಯೊನಿಶ್ ಮೆಲುದನಿಯಲ್ಲಿ ಮಾತು ಸೇರಿಸಿದ.

ಆದರೆ, ಇದನ್ನೆಲ್ಲ ಅವರು ತಮ್ಮ ಕರ್ತವ್ಯವೆಂದು ಪ್ರಯತ್ನಪೂರ್ವಕವಾಗಿ ಹೇಳುತ್ತಿರುವ ರೆಂದು ನನಗೆ ಅನಿಸಿತು. ನಮ್ಮನ್ನು ಒಂದಾಗಿ ಬಿಗಿದಿದ್ದ ದಾರ ಹೇಗೋ ಕೊಳೆತು, ಇದ್ದಕ್ಕಿದ್ದಂತೆ ಕಡಿದು ಬಿದ್ದಿತ್ತು.

ಕುಡಿದು ಮತ್ತೇರಿದ್ದ ಗೊಗೊಲೀವ್, ಮೇಲಣ ಅಟ್ಟಣಿಗೆಯಿಂದ ಅತ್ತಿತ್ತ ಮೈ ಹೊರಳಿಸಿ ಕರ್ಕಶವಾಗಿ ಗೊಣಗಿದ:

"ನಾನು ಇಷ್ಟಪಟ್ಟರೆ, ನಿಮ್ಮನ್ನೆಲ್ಲಾ ಸೆರೆಮನೆಗೆ ಹಾಕಿಸಬಲ್ಲೆ. ನನಗೊಂದು ರಹಸ್ಯ ಗೊತ್ತಿದೆ: ದೇವರಲ್ಲಿ ನಿಮಗೆ ನಂಬಿಕೆ ಇಲ್ಲ. ಆಹಾಹಾ!"

ಮುಖಗಳಿರದ ಅಪೂರ್ಣವಾಗಿದ್ದ ಪ್ರತಿಮೆಗಳು ಗೋಡೆಗೆ ಒರಗಿಕೊಂಡು ಈಗಲೂ ನಿಂತೇ ಇದ್ದುವು; ಗಾಜಿನ ಉಂಡೆಗಳು ಛಾವಣಿಗೆ ಆತುಕೊಂಡಿದ್ದುವು. ಕಳೆದ ಸ್ವಲ್ಪ ಸಮಯದಿಂದ ಕೃತಕ ಬೆಳಕಿಲ್ಲದೆ ನಾವು ದುಡಿಯುತ್ತಿದ್ದೆವು. ಇದರಿಂದಾಗಿ ಆ ಗಾಜಿನ ಉಂಡೆಗಳ ಅಗತ್ಯ ವಿರಲಿಲ್ಲ. ಅವುಗಳನ್ನು ಧೂಳಿನ ಹಾಗೂ ಕರಿಯ ಬೂದು ಪದರು ಆವರಿಸಿತ್ತು. ಅವೆಲ್ಲ ನನ್ನ ನೆನಪಿನಲ್ಲಿ ಎಷ್ಟೊಂದು ಆಳವಾಗಿ ಅಚ್ಚೊತ್ತಿದ್ದುವೆಂದರೆ, ಈಗಲೂ ಕೂಡಾ, ನನ್ನ ಕಣ್ಣುಗಳನ್ನು ಮುಚ್ಚುವುದಷ್ಟೇ ಸಾಕು—ಮೇಜುಗಳು, ಕಿಟಿಕಿಗಳ ದಂಡೆಗಳ ಮೇಲಿನ ಬಣ್ಣದ ಡಬ್ಬಗಳು ಬ್ರಷ್ಶುಗಳ ರಾಶಿಗಳು, ದೇವಪ್ರತಿಮೆಗಳು ಮೂಲೆಯಲ್ಲಿ ಅಗ್ನಿನಿರೋಧಕ ದಳದವನ ಶಿರಸ್ತ್ರಾಣ ದಂತಹ ತಾಮ್ರದ ಕೈತೊಳೆಯುವ ಬೇಸಿನಿನ ಕೆಳಗಿದ್ದ ಕೊಚ್ಚೆನೀರಿನ ಬಕೀಟು, ಅಟ್ಟಣಿಗೆಯ ಮಂಚದ ಅಂಚಿನ ಮೇಲಿಂದ ತೂಗಾಡುತ್ತಿದ್ದ—ಶವದ ಕಾಲಿನಂತೆ ನೀಲಿ ವರ್ಣಕ್ಕೆ ತಿರುಗಿದ್ದ ಗೊಗೊಲೀವನ ಬರಿಗಾಲು, ಇವೆಲ್ಲವನ್ನೂ ತುಂಬಿಕೊಂಡಿದ್ದ ಕೊಠಡಿ ಕಣ್ಣೆದುರು ಕಟ್ಟುತ್ತದೆ.

ಅಲ್ಲಿಂದ ಹೊರಟು ಹೋಗಲು ನಾನು ಆತುರನಾಗಿದ್ದೆ. ಆದರೆ, ವ್ಯಥೆಯ ನಿಮಿಷಗಳನ್ನು ದೀರ್ಘಗೊಳಿಸುವುದು ರಷ್ಯನರಿಗೆ ಇಷ್ಟ. ವಿದಾಯಕ್ಕಾಗಿ ನೆರೆದಕೂಟ, ಶವಸಂಸ್ಕಾರದ ವಿಧಿಯನ್ನೇ ಆಚರಿಸುವಂತಾಗುತ್ತದೆ.

ಜಿಖರೇವ್, ಹುಬ್ಬುಗಂಟಿಕ್ಕಿ, ನನ್ನೊಡನೆ ಅಂದ.

"ಆ 'ದೈತ್ಯ' ಪುಸ್ತಕವನ್ನು ನಿನಗೆ ನಾನು ಮರಳಿ ಕೊಡಲಾರೆ. ಬೇಕೆಂದಿದ್ದರೆ, ಅದಕ್ಕಾಗಿ ಇಪ್ಪತ್ತು ಕೊಪೆಕ್‌ಗಳನ್ನು ನೀನು ತಗೋಬಹುದು."

ಲೆಮೊಂಟೋವನಿಂದ ಅಗಲುವುದು—ಅದೂ ಅಗ್ನಿನಿರೋಧಕ ದಳದ ಮುದುಕ ಮುಖ್ಯಸ್ಥ ಆ ಪುಸ್ತಕವನ್ನು ಉಡುಗೊರೆಯಾಗಿ ನನಗೆ ಕೊಟ್ಟಿದ್ದುದರಿಂದ—ಬಹಳ ಕಷ್ಟವಾಗಿತ್ತು. ಆದರೆ, ಅಸಹನೆಯ ಮುನಿಸಿನಿಂದ ಹಣವನ್ನು ನಾನು ತಿರಸ್ಕರಿಸಿದಾಗ ಜಿಖರೇವ್ ಶಾಂತವಾಗಿ ಹಣವನ್ನು ತನ್ನ ಪಾಕೀಟಿಗೆ ಮರಳಿ ಸೇರಿಸಿ, ಅವಿಚಲ ಮನಸ್ಕನಾಗಿ, ಧ್ವನಿ ಏರಿಸಿ ಅಂದ:

"ನಿನ್ನಿಷ್ಟ. ನಾನೇನೂ ಪುಸ್ತಕವನ್ನು ಕೊಡೋದಿಲ್ಲ. ಆ ಪುಸ್ತಕ ನಿನಗೆ ಹೇಳಿದ್ದಲ್ಲ. ಅಂಥ ಪುಸ್ತಕ ನಿನ್ನಲ್ಲಿದ್ದರೆ ಒಂದು ಕ್ಷಣದಲ್ಲೇ ನೀನು ವಿಪತ್ತಿಗೊಳಗಾಗ್ತಿಯಾ."

"ಆದರೆ ಅಂಗಡಿಗಳಲ್ಲಿ ಇದನ್ನು ಮಾರ್ತಾರೆ. ಸ್ವತಃ ನಾನೇ ನೋಡಿದೇನೆ."

"ಅದರಿಂದೇನೀಗ? ಅಂಗಡಿಗಳಲ್ಲಿ ಪಿಸ್ತೂಲುಗಳನ್ನೂ ಅವರು ಮಾರ್ತಾರೆ," ಎಂದು, ಮನ ಗಾಣಿಸಿಕೊಡುವ ರೀತಿಯಲ್ಲಿ ಅವನು ಉತ್ತರವಿತ್ತ.

ಪುಸ್ತಕವನ್ನು ಆತ ಹಿಂದಿರುಗಿ ಕೊಡಲೇ ಇಲ್ಲ.

ಯಜಮಾನನ ವಿಧವೆಗೆ ವಿದಾಯ ಹೇಳಲೆಂದು ಮಹಡಿಯ ಮೇಲಕ್ಕೆ ನಾನು ಹೋದಾಗ, ಬಾಗಿಲ ಹಾದಿಯಲ್ಲಿ ಅವಳ ಸೋದರ ಸೊಸೆಯನ್ನು ನಾನು ಸಂಧಿಸಿದೆ.

"ನೀನು ನಮ್ಮನ್ನು ಬಿಟ್ಟು ಹೋಗ್ತಿದೀಯಂತೆ," ಎಂದು ಅವಳೆಂದಳು.

"ಹೌದು, ಹೋಗ್ತಿದೀನಿ."

"ಒಳ್ಳೇದೆ ಆಯ್ತು ಇಲ್ಲದೇ ಹೋಗಿದ್ದರೇ ಅವರೇ ನಿನ್ನನ್ನು ಹೊರಹಾಕ್ತಿದ್ದರು," ಎಂದು, ಅಷ್ಟೊಂದು ವಿನಯದಿಂದ ಅಲ್ಲದೇ ಹೋದರೂ ಸಾಕಷ್ಟು ಪ್ರಾಮಾಣಿಕತೆಯಿಂದ ಅವಳೆಂದಳು.

ನನ್ನ ಕುಡುಕಳಾದ ಒಡತಿ ಅಂದಳು:

"ವಿದಾಯದ ನಮಸ್ಕಾರ, ದೇವರು ನಿನಗೆ ಒಳ್ಳೇದು ಮಾಡಲಿ! ನೀನೊಬ್ಬ ಕೆಟ್ಟ ಹುಡುಗ ಬಹಳ ಉದ್ಧಟ. ನಿನ್ನ ಕೆಟ್ಟತನವನ್ನು ನನ್ನೆದುರು ಯಾವತ್ತೂ ನೀನು ತೋರಿಸಿಲ್ಲ. ಆದರೆ, ಪ್ರತಿಯೊಬ್ಬರೂ ನೀನು ನಿಷ್ಪ್ರಯೋಜಕ ಅಂತ ಹೇಳ್ತಾರೆ."

ಒಮ್ಮಿಂದೊಮ್ಮೆಲೆ ಅವಳು ಅಳತೊಡಗಿದಳು; ಕಂಬನಿ ಸುರಿಸುತ್ತ ಅಸ್ಪಷ್ಟವಾಗಿ ಅಂದಳು:

"ನನ್ನ ಬಡಪಾಯಿ ಗಂಡ-ಆ ಧನ್ಯ ಆತ್ಮ-ಏನಾದರೂ ಬದುಕಿದ್ದಿದ್ದರೆ, ನಿನ್ನ ಕಿವಿಗಳನ್ನು ಅವನು ಹಿಂಡ್ತಿದ್ದ, ನಿನ್ನ ತಲೆಗೆ ಟೊಕ್ ಅಂತ ಕೊಡ್ತಿದ್ದ; ಆದರೆ, ನಿನ್ನನ್ನು ಇಲ್ಲೇ ಉಳಿಸಿ ಕೊಳ್ತಿದ್ದನೇ ಹೊರತು, ಹೊರಕ್ಕೆ ಓಡಿಸ್ತಿರಲಿಲ್ಲ. ಈಗಿನ ದಿನಗಳಲ್ಲಿ ಪ್ರತಿಯೊಂದೂ ಬದಲಾಗಿದೆ. ಏನಾದರೂ ತಪ್ಪಿದರೆ ಸಾಕು, ಹೊರಕ್ಕೇ ಹಾಕೋದು. ಓ ನಮ್ಮಪ್ಪ! ಮುಂದೆ ನಿನಗೆಂಥಾ ಗತಿ ಒದಗುತ್ತಪ್ಪ ಮಗೂ?"

೧೬

ವಸಂತದಲ್ಲಿ ನದಿಯ ನೀರು ಏರಿ ಬಂದು, ಸಂತೆಮಾಳದ ಕಲ್ಲಿನ ಕಟ್ಟಡಗಳ ನಡುವೆ ರಸ್ತೆಗಳಲ್ಲೆಲ್ಲ ಎರಡನೆಯ ಅಂತಸ್ತಿನವರೆಗೂ ತುಂಬಿಬಿಟ್ಟಿತ್ತು. ಆ ರಸ್ತೆಗಳಲ್ಲಿ, ನನ್ನ ಯಜಮಾನನೂ ನಾನೂ ಒಂದು ದೋಣಿಯಲ್ಲಿ ಕುಳಿತು ಸಾಗುತ್ತಿದ್ದೆವು. ನಾನು ಹುಟ್ಟುಹಾಕುತ್ತಿದ್ದೆ. ನನ್ನ ಯಜಮಾನ ಹಿಂಭಾಗದಲ್ಲಿ ಕುಳಿತು, ಉದ್ದನೆಯ ಒಂದು ಬಿದಿರನ್ನೇ ಚುಕ್ಕಾಣಿಯಾಗಿ ಮಾಡಿ, ದೋಣಿಯನ್ನು ಅಡ್ಡಾದಿಡ್ಡಿಯಾಗಿ ಮುಂದಕ್ಕೆ ಚಲಿಸುತ್ತಿದ್ದ. ದೋಣಿ, ಶಾಂತವಾದ ಮಲಿನವಾದ ಧ್ಯಾನಮಗ್ನವಾದ ನೀರಿನಲ್ಲಿ, ತನ್ನ ಮೂಗನ್ನು ಮುಂಚಾಚುತ್ತ, ಒಂದು ಬೀದಿಯಲ್ಲಿ ಮುಂದಕ್ಕೆ ಸಾಗುತ್ತಿತ್ತು; ಮತ್ತೊಂದು ರಸ್ತೆಯಲ್ಲಿ ಕೆಳಕ್ಕೆ ಬರುತ್ತಿತ್ತು.

ಈ ಸಾರೆ ವಸಂತದಲ್ಲಿ ಎಷ್ಟೊಂದು ನೆರೆ ಬಂದ್ಬಿಟ್ಟಿದೆ! ಪಿಶಾಚಿ ತಿನ್ನ ಇದನ್ನು! ಇದರಿಂದ

ನಮ್ಮ ಕೆಲಸ ತಡವಾಗ್ತದೆ!" ಎಂದು ನನ್ನ ಯಜಮಾನ ತನ್ನ ಸಿಗಾರ್ ಹಚ್ಚುತ್ತ ಗೊಣಗಿದ ಸಿಗಾರಿನ ಹೊಗೆಗೆ, ಅರಿವೆ ಚಿಂದಿಗಳನ್ನು ಸುಟ್ಟವಾಸನೆ ಇತ್ತು.

ಭಯಗೊಂಡು ಆತ ಕೂಗಾಡಿದ:

"ಹುಷಾರ್! ದೀಪಕಂಬದ ಕಡೆಗೇ ನೇರವಾಗಿ ನಾವು ನುಗ್ತಿದೀವಿ!"

ದೋಣಿಯ ಚಲನೆಯನ್ನು ಸರಿಪಡಿಸಿದ ಬಳಿಕ ಅವನೆಂದ:

"ಎಂಥಾ ದೋಣೀನ ಕೊಟ್ಟಿದಾರೆ ನಮಗೆ, ಹಾದರಕ್ಕೆ ಹುಟ್ಟಿದೋರು!"

ನೀರು ಇಳಿದ ಬಳಿಕ ಅಂಗಡಿ ಸಾಲುಗಳನ್ನು ದುರಸ್ತಿಪಡಿಸಬೇಕಾದ ಜಾಗ ಯಾವುದೆಂಬ ದನ್ನು ಅವನು ನನಗೆ ತೋರಿಸಿದ. ನುಣ್ಣಗೆ ಮುಖಕ್ಷೌರ ಮಾಡಿಕೊಂಡಿದ್ದ, ಚುಟುಕಾಗಿ ಕತ್ತರಿಸಿದ ಮೀಸೆಗಳ, ಹಲ್ಲುಗಳ ನಡುವೆ ಸಿಗಾರಿದ್ದ ಈ ಮನುಷ್ಯ, ಕಂಟ್ರಾಕ್ಟರನಂತೆ ಕಾಣ ತ್ತಿರಲಿಲ್ಲ. ತೊಗಲಿನ ಜಾಕೀಟನ್ನೂ ಮೊಣಕಾಲವರೆಗಿನ ಬೂಟುಗಳನ್ನೂ ಅವನು ತೊಟ್ಟಿದ್ದ ಭುಜದ ಮೇಲೊಂದು ಬೇಟೆಯ ಚೀಲವಿತ್ತು. ಪಾದಗಳ ಬಳಿ, ಬೆಲೆಬಾಳುವಂತಹ ಜೋಡ ನಳಿಗೆಯ ಲೇಬೆಲ್ ಮಾದರಿಯ ಬಂದೂಕಿತ್ತು. ತೊಗಲ ಟೊಪ್ಪಿಗೆಯನ್ನು ಆತ ಅಸಹನೆಯಿಂದ ಅತ್ತಿತ್ತ ಜಗ್ಗುತ್ತಲೇ ಇದ್ದ. ಒಮ್ಮೆ ತನ್ನ ಕಣ್ಣುಗಳವರೆಗೂ ಕೆಳಕ್ಕೆಳೆದು, ತುಟಿಗಳನ್ನು ಬಿಮ್ಮನೆ ಬಿಗಿದು, ತನ್ನ ಸುತ್ತಲೂ ಕಾತರದಿಂದ ನೋಡುತ್ತಿದ್ದ. ಮತ್ತೊಮ್ಮೆ ಟೊಪ್ಪಿಗೆಯನ್ನು ತಲೆಯ ಹಿಂಭಾಗಕ್ಕೆ ಸರಿಸಿ, ಇದ್ದಕ್ಕಿದ್ದಂತೆ ಯುವಕನಾಗುತ್ತ, ಹಿತಕರವಾದುದೇನನ್ನೊ ಕಲ್ಪಿಸಿಕೊಳ್ಳುತ್ತ, ತನ್ನ ಮೀಸೆಯ ಎಡೆಯಿಂದ ಮುಗುಳುನಗುತ್ತಿದ್ದ. ಈ ರೀತಿ, ವ್ಯವಹಾರಕ್ಕೆ ಸಂಬಂಧಿಸಿರದ ಯಾವುದೋ ಯೋಚನೆಯ ತೆರೆಯ ಮೇಲೆ ತೇಲುತ್ತ ಹೋಗಿ, ಯಾವ ವಿಧದಲ್ಲೂ ಕೈತುಂಬ ಕೆಲಸವಿದ್ದವನಂತೆ, ನೀರು ನಿಧಾನವಾಗಿ ಇಳಿಯುತ್ತಿದ್ದುದರಿಂದ ಚಿಂತೆಗೊಳಗಾದವ ನಂತೆ ಕಾಣಿಸುತ್ತಿರಲಿಲ್ಲ.

ನನ್ನ ಪಾಲಿಗೆ ನಾನು, ಶಾಂತವಾದ ಅಚ್ಚರಿಯ ಭಾವನೆಯಿಂದ ಮ್ಲಾನನಾಗಿದ್ದೆ. ಬರಿದ ಕಿಟಿಕಿಯ ಕಟ್ಟಡಗಳ ಸಾಲುಗಳೇ ಇದ್ದ ನಿರ್ಜನವಾದ, ನೀರು ತುಂಬಿದ, ಆ ಶಹರ ನಮ್ಮ ದೋಣಿಯನ್ನು ಹಾದು ಸದ್ದಿಲ್ಲದೆ ತೇಲುವ ಚಿತ್ರ ನೋಟಕ್ಕೆ ಎಷ್ಟೊಂದು ವಿಚಿತ್ರವಾಗಿತ್ತು

ಆಗಸ ಬೂದು ಬಣ್ಣಕ್ಕೆ ತಿರುಗಿತ್ತು. ಮೋಡಗಳ ಬಲೆಯಲ್ಲಿ ಸೂರ್ಯ ಸಿಲುಕಿ ಕೊಂಡಿದ್ದ. ಅವುಗಳೆಡೆಯಿಂದ ಆಗೊಮ್ಮೆ ಈಗೊಮ್ಮೆ, ವಿಶಾಲವಾದ ಬೆಳ್ಳಿಯ ಶೀತಲಬಿಂಬ ಇಣಿಕಿನೋಡುತ್ತಿತ್ತು.

ನೀರೂ ಬೂದು ಬಣ್ಣದ್ದಾಗಿ ತಣ್ಣಗಾಗಿತ್ತು. ಕಂಡೂ ಕಾಣಿಸದಂತಿತ್ತು ನದಿಯ ಪ್ರವಾಹ. ಅದು ಬರಿದಾದ ಕಟ್ಟಡಗಳ ಹಾಗೂ ಮಲಿನವಾಗಿದ್ದ ಹಳದಿ ವರ್ಣದ ಅಂಗಡಿ ಸಾಲುಗಳ ಉದ್ದಕ್ಕೂ ಹೆಪ್ಪುಗಟ್ಟಿ ನಿದ್ದೆಹೋದಂತಿತ್ತು. ಬಿಳಿ ಬಣ್ಣದ ಸೂರ್ಯ ಮೋಡಗಳೆಡೆ ಯಿಂದ ಇಣಿಕಿ ನೋಡಿದಾಗ, ಪ್ರತಿಯೊಂದೂ ಕ್ಷೀಣವಾಗಿ ಬೆಳಗುತ್ತಿತ್ತು. ನೀರಲ್ಲಿ ಆಕಾಶದ ಬೂದು ಹೆಣಿಗೆಯ ಪ್ರತಿಬಿಂಬ ಕಾಣಿಸುತ್ತಿತ್ತು. ಎರಡು ಆಗಸಗಳ ಮಧ್ಯೆ ನಡುಗಾಳಿಯಲ್ಲಿ ನಮ್ಮ ದೋಣಿ ತೂಗಾಡುತ್ತಿದ್ದಂತೆ ತೋರುತ್ತಿತ್ತು. ಆ ಕಲ್ಲಿನ ಕಟ್ಟಡಗಳೂ ಮೇಲಕ್ಕೆದ್ದುವು ಕಂಡೂ ಕಾಣದಂತೆ ವೋಲ್ಗಾ ಹಾಗೂ ಓಕಾ ನದಿಗಳೆಡೆಗೆ ತೇಲಿದುವು. ಒಡಕು ಪೀಪಾಯಿ ಗಳು, ಪೆಟ್ಟಿಗೆಗಳು, ಬುಟ್ಟಿಗಳು ಕೋಲುಗಳ ಹಾಗೂ ಒಣಹುಲ್ಲಿನ ತುಣುಕುಗಳ

ನೀರಿನಮೇಲೆ ಓಲಾಡಿದುವು; ಮರದ ದಿಮ್ಮಿಗಳೂ ಬಿದಿರ ಗಳುಗಳೂ ಸತ್ತ ನಾಗರಗಳಂತೆ ವೇಗವಾಗಿ ತೇಲಿಹೋದುವು.

ಅಲ್ಲೊಂದು ಕಡೆ ಇಲ್ಲೊಂದು ಕಡೆ ಕಿಟಿಕಿ ತೆರೆದಿತ್ತು. ಅಂಗಡಿ ಸಾಲಿನುದ್ದಕ್ಕೂ ಇದ್ದ ಮುಖಮಂಟಪದ ಛಾವಣಿಯ ಮೇಲೆ ಅರಿವೆಗಳು ಒಣಗುತ್ತಿದ್ದುವು. ಕಂಬಿಯ ಎಡೆಯಿಂದ ಕೆಲ ಅರಿವೆ ಬೂಟುಗಳು ಹೊರಕ್ಕೆ ಹಣಿಕಿ ಹಾಕಿದ್ದುವು. ಕಿಟಿಕಿಯೊಂದರ ಬಳಿ ಒಬ್ಬಳು ಹೆಂಗಸು ಕುಳಿತು, ಬೂದು ನೀರಿನತ್ತ ದಿಟ್ಟಿಸಿನೋಡುತ್ತಿದ್ದಳು. ಕಬ್ಬಿಣದೊಂದು ಕಂಬದ ತುದಿಗೆ ಒಂದು ದೋಣಿಯನ್ನು ಕಟ್ಟಿದ್ದರು; ಅದರ ಕೆಂಪುಪಾರ್ಶ್ವಗಳು ನೀರಿನ ಮೇಲೆ ಜಿಗುಟಾದ ತುಂಬು ಮೈಯ ಪ್ರತಿಬಿಂಬವನ್ನು ಬೀರುತ್ತಿದ್ದುವು.

ಬದುಕಿನ ಈ ಚಿಹ್ನೆಗಳತ್ತ ತಲೆದೂಗುತ್ತ ನನ್ನ ಒಡೆಯ ವಿವರಿಸಿದ:

"ಅದು, ಸಂತೆಮಾಳದ ಕಾವಲುಗಾರ ವಾಸವಾಗಿರುವ ಸ್ಥಳ. ಆತ ಕಿಟಿಕಿಯನ್ನೇರಿ ಹೊರ ಬಿದ್ದು ಛಾವಣಿ ಮೇಲಕ್ಕೆ ಹತ್ತುತ್ತಾನೆ. ತನ್ನ ದೋಣಿಯೊಳಕ್ಕೆ ಇಳಿಯುತ್ತಾನೆ. ಹುಟ್ಟು ಹಾಕುತ್ತ ಅತ್ತಿತ್ತ ಹೋಗಿ, ಕಳ್ಳರಿರುವರೇ ಏನೆಂದು ನೋಡುತ್ತಾನೆ. ಯಾರೂ ಸಿಗದೇ ಇದ್ದರೆ ಸ್ವತಃ ತಾನೇ ಕದಿಯುತ್ತಾನೆ."

ಸೋಮಾರಿತನದ ನಿರ್ಲಿಪ್ತತೆಯಿಂದ, ಮನಸ್ಸನ್ನು ಬೇರಾವುದರ ಮೇಲೋ ನೆಟ್ಟು, ಅವನು ಮಾತನಾಡಿದ. ಪ್ರತಿಯೊಂದೂ ಶಾಂತವಾಗಿತ್ತು, ಶೂನ್ಯವಾಗಿತ್ತು. ಕನಸಿನಷ್ಟೇ ನಂಬಲಸಾಧ್ಯ ವಾದುದಾಗಿತ್ತು. ವೋಲ್ಗಾ ಮತ್ತು ಓಕಾ ಎರಡೂ ಒಂದಾಗಿ ಬಲು ವಿಶಾಲವಾದೊಂದು ಸರೋ ವರವನ್ನು ರೂಪಿಸಿದ್ದುವು. ದೂರದಲ್ಲೊಂದು ಕೊರಕಲು ಗುಡ್ಡದ ಮೇಲೆ, ಚೆದರಿದ ಶಹರ ವಿದ್ದು ಕಾಣಿಸುತ್ತಿತ್ತು. ಆ ಶಹರ ತುಂಬ ಹಣ್ಣಿನ ತೋಟಗಳಿದ್ದುವು. ಆದರೆ ಈಗಿನ್ನೂ ಕರಿದಾಗಿ ಎಲೆಗಳಿಲ್ಲದೆಯೇ ಇದ್ದ ತೋಟಗಳು. ಮೊಗ್ಗುಗಳು ಮಾತ್ರ ಹೇರಳ....ಹೀಗಾಗಿ ಮರಗಳು, ಮನೆಗಳನ್ನೂ ಇಗರ್ಜಿಗಳನ್ನೂ ಹಸಿರು ಮೇಲುಡುಪಿನಿಂದ ಸುತ್ತಿದ್ದವು. ನೀರ ಮೇಲಿನಿಂದ ಪುನರುತ್ಥಾನ ಹಬ್ಬದ ಘಂಟಾರವ ಕೇಳಿಬಂತು. ಶಹರದ ಗುಂಯಾರವವನ್ನೂ ಅಸ್ಪಷ್ಟ ವಾಗಿ ಕೇಳಲು ನಾವು ಶಕ್ತರಾದೆವು. ಆದರೆ ಇಲ್ಲಿ ಪ್ರತಿಯೊಂದೂ, ಪರಿತ್ಯಕ್ತ ಇಗರ್ಜಿಯಂಗಳ ದಷ್ಟೇ ನೀರವವಾಗಿತ್ತು.

ಪುರಾತನ ದೇವಾಲಯದ ಮುಖ್ಯಬೀದಿಯಲ್ಲಿ ನಾವು ಮುಂದಕ್ಕೆ ಸಾಗಿದಂತೆ, ಕರಿದು ಮರಗಳ ಎರಡು ಸಾಲುಗಳ ನಡುವೆ ನಮ್ಮ ದೋಣಿ ಮುಂದುವರಿಯಿತು. ನನ್ನ ಒಡೆಯನ ಸಿಗಾರಿನಿಂದ ಹೊರಟ ಹೊಗೆ ಅವನ ಕಣ್ಣುಗಳನ್ನು ತುಂಬುತ್ತಲೇ ಇತ್ತು. ದೋಣಿ ಮರಗಳ ಕಾಂಡಗಳಿಗೆ ಢಿಕ್ಕಿ ಹೊಡೆಯುತ್ತಲೇ ಇತ್ತು. ಕೊನೆಯಲ್ಲೊಮ್ಮೆ ಹೈರಾಣಾಗಿ ಅವನು ಕೂಗಿ ನುಡಿದ:

"ಈ ದೋಣಿ ಹಾಳಾಗ!"

"ಚುಕ್ಕಾಣಿ ತಿರುವೋದನ್ನು ನಿಲ್ಲಿಸು."

ಅವನು ಗೊಣಗಿದ:

"ಹೇಗೆ ಸಾಧ್ಯ? ದೋಣಿಯಲ್ಲಿ ಇಬ್ಬರಿರುವಾಗ ಒಬ್ಬ ಹುಟ್ಟು ಹಾಕಬೇಕು; ಇನ್ನೊಬ್ಬ ಚುಕ್ಕಾಣಿ ತಿರುವಬೇಕು. ಅಗೋ—ನೋಡು, ಚೀನೀಸಾಲು."

ಆ ಸಂತೆಮಾಳದ ಒಳಹೊರಗೆಲ್ಲ ನನಗೆ ಗೊತ್ತಿತ್ತು. ಅದ್ಭುತ ಛಾವಣಿಗಳಿದ್ದ ಹಾಸ್ಯಾಸ್ಪದ ಸಾಲಿನ ಪರಿಚಯು ಸಾಕಷ್ಟು ಚೆನ್ನಾಗಿಯೇ ನನಗಿತ್ತು. ಆ ಛಾವಣಿಯ ಮೂ ಗಳಲ್ಲಿ ಚೀನೀ ಮನುಷ್ಯರ ಪ್ಲಾಸ್ಟರ್ ಆಕೃತಿಗಳು ಕುಳಿತಿರುತ್ತಿದ್ದುವು. ಹಿಂದೆ ನನ್ನ ಜತೆ ಗಾರರೂ ನಾನೂ ಅವುಗಳೆಡೆಗೆ ಕಲ್ಲು ಎಸೆದಿದ್ದೆವು. ಈ ಚೀನೀ ಮನುಷ್ಯರಲ್ಲಿ ಕೆಲವರ ಶಿರಚ್ಛೇ ವನ್ನೋ ಹಸ್ತ ಛೇದನವನ್ನೋ ಸ್ವತಃ ನಾನೇ ಮಾಡಿದ್ದೆ. ಆದರೆ ಆ ಬಗೆಗೆ ಈಗೇನೂ ಹೆ ನನ್ನಲ್ಲಿ ಉಳಿದಿರಲಿಲ್ಲ.

ಕಟ್ಟಡಗಳತ್ತ ಬೊಟ್ಟುಮಾಡುತ್ತ ನನ್ನ ಯಜಮಾನನೆಂದ:

"ಹರಕು ಗುಡಿಸಲುಗಳು. ಅವುಗಳನ್ನ ಕಟ್ಟೋ ಕೆಲಸವನ್ನು ನನಗೇನಾದರೂ ವ ಕೊಟ್ಟಿದ್ದರೂಂದರೆ—"

ಶಿಳ್ಳು ಹಾಕಿ ಟೋಪಿಯನ್ನಾತ ತಲೆಯ ಹಿಂಭಾಗಕ್ಕೆ ತಳ್ಳಿದ.

ಆದರೆ ಅವನಾದರೂ ವಸಂತದಲ್ಲಿ ಎರಡೂ ನದಿಗಳ ನೀರು ತುಂಬುತ್ತಿದ್ದ ಆ ತಗ್ಗು ಜ ದಲ್ಲೇ, ಅಷ್ಟೇ ನಿಸ್ಸಾರವಾಗಿ, ಆ ಅಂಗಡಿಗಳನ್ನು ಕಟ್ಟುತ್ತಿದ್ದನೆಂದು, ಯಾಕೋ ನನಗನಿಸಿ ಅವನಾದರೂ, ಚೀನೀ ಸಾಲಿನಷ್ಟೇ ವಿಕಾರವಾದುದನ್ನೇ ಸೃಷ್ಟಿಸುತ್ತಿದ್ದ.

ತನ್ನ ಸಿಗಾರನ್ನು ದೋಣಿಯ ಹಿಂಭಾಗದ ಮೇಲಿನಿಂದ ಹಾರಿಸಿ, ಅಸಹ್ಯಭಾವದಿ ಅದರ ಹಿಂದೆ ಉಗಿದು, ಅವನೆಂದ:

"ಬದುಕು ಎಂಥ ಬೇಸರದ್ದು, ಪೆಶ್ಕೋವ್. ಎಷ್ಟೊಂದು ಬೇಸರದ್ದು! ಸುಶಿಕ್ಷಿತ ಜ ಇಲ್ಲ; ಮಾತನಾಡೋದಕ್ಕೆ ಯಾರೂ ಇಲ್ಲ. ಕೆಲವೇಳೆ ಒಂದಿಷ್ಟು ಜಂಭ ಕೊಚ್ಚೋಣ ಅ ಅನಿಸಬಹುದು. ಆದರೆ ಕೊಚ್ಚಿಕೊಳ್ಳೋದು ಯಾರ ಮುಂದೆ ಹೇಳು? ಯಾರೂ ಇ ಬಡಗಿಗಳು, ಕಲ್ಲುಕುಟಿಗರು, ರೈತರು, ಕಳ್ಳರು...."

ನೀರು ತುಂಬಿದ್ದ ಗುಡ್ಡದ ತಪ್ಪಲಿನಿಂದ ಬಿಳಿಯ ಮಸೀದಿಯೊಂದು ಸೂಕ್ಷ್ಮವಾಗಿ ಕಾಣಿಸುತ್ತಿದ್ದ ಬಲದಿಕ್ಕಿನೆಡೆಗೊಮ್ಮೆ ದೃಷ್ಟಿಹಾಯಿಸಿ, ಮರೆತುಹೋದುದನ್ನೇನೋ ಜ್ಞಾ ಕೊಳ್ಳುವವನಂತೆ ಅವನು ಮಾತನಾಡುತ್ತ ಹೋದ:

ಜರ್ಮನರ ಹಾಗೆ ಬೀರ್ ಕುಡಿಯುವುದಕ್ಕೂ ಸಿಗಾರ್ ಸೇದುವುದಕ್ಕೂ ನಾನು ಮಾಡಿದ್ದೇನೆ. ಜರ್ಮನರು ಒಳ್ಳೆ ವ್ಯವಹಾರಜ್ಞರು, ತಮ್ಮ-ಕೂಗಾಡೋ ಕೋಳಿ ಮರಿಗ ಬೀರ್ ಕುಡಿಯೋದು ಒಳ್ಳೇ ಸೊಗಸಾದ ಹವ್ಯಾಸ. ಆದರೆ ಸಿಗಾರುಗಳು ನನಗೆ ಒಗ್ಗಿ ಇಲ್ಲ. ಸೇದಿದಾಗಲೆಲ್ಲ, ಹೆಂಡತಿ ಗೊಣಗೋಕೆ ಶುರು ಮಾಡ್ತಾಳೆ. 'ಜೀನು ಹದಗೊ ವವನ ಹಾಗೆ ನಿನ್ನ ಮೈ ನಾರುತ್ತಿದೆಯಲ್ಲ, ಯಾಕೆ?' ಅಂತ ಕೇಳ್ತಾಳೆ. ಅ್ಹ ಹೌದು, ಬದ ಸ್ವಾರಸ್ಯಕರವಾಗಲೀಂತ ಏನೇನು ಮಾಡ್ತೀವಿ ನಾವು!..... ಎಲ್ಲಿ, ಚುಕ್ಕಾಣಿ ತಿರು ದನ್ನೂ ನೀನೇ ಮಾಡಪ್ಪ.

ಆತ, ತನ್ನ ಹುಟ್ಟನ್ನು ದೋಣಿಯ ಬದಿಗೆ ಒರಗಿಸಿದ. ಬಂದೂಕನ್ನೆತ್ತಿಕೊ ಛಾವಣಿಯ ಮೇಲಿನ ಒಂದು ಆಕೃತಿಯ ಕಡೆಗೆ ಗುಂಡುಹಾರಿಸಿದ. ಚೀನೀಮನುಷ್ಯನಿಗೆ ಗಾಯವೂ ಆಗಲಿಲ್ಲ. ಛಾವಣಿ ಹಾಗೂ ಗೋಡೆಯ ಮೇಲಿನಿಂದ ಧೂಳಿನ ಮೋಡವನ್ನೆಬ್ಬಿ ಗುಂಡು ಚೆದರಿಹೋಯಿತು, ಅಷ್ಟೆ.

ಪುನಃ ಬಂದೂಕಿಗೆ ಮದ್ದು ತುಂಬಿಸುತ್ತ, ಅಲಕ್ಷ್ಯಭಾವದಿಂದ ಅವನು ಒಪ್ಪಿಕೊಂಡ:

"ಗುರಿ ತಪ್ಪಿತು."

ಮುಂದುವರಿಯುತ್ತ ಅಂದ:

"ಹುಡುಗಿಯರ ವಿಷಯದಲ್ಲಿ ಎಲ್ಲಿಯವರೆಗೆ ಬಂದು ಮುಟ್ಟಿದೀಯಪ್ಪ? ಇನ್ನೂ ಉಪವಾಸ ಮುರಿದಿದೀಯೋ ಇಲ್ಲವೊ? ಇಲ್ಲ? ನಾನು ಹದಿಮೂರನೇ ವಯಸ್ಸಿನಲ್ಲೇ ಅನುರಕ್ತನಾಗೋದಕ್ಕೆ ಶುರುಮಾಡ್ದೆ."

ಯಾವುದೋ ಕನಸಿನ ಪುನಸ್ಮರಣೆ ಎನ್ನುವಂತೆ, ತನ್ನ ಮೊದಲ ಪ್ರಿಯತಮೆಯ ವಿಷಯವಾಗಿ ಅವನು ನನಗೆ ಹೇಳಿದ. ಆತ ವೃತ್ತಿಶಿಷ್ಯನಾಗಿದ್ದ ಗೃಹಶಿಲ್ಪಿಯ ಬಳಿ ಆಕೆ ಪರಿಚಾರಿಕೆಯಾಗಿದ್ದಳು. ಕಟ್ಟಡಗಳ ಮೂಲೆಗಳಿಗೆ ಮೃದುವಾಗಿ ಅಪ್ಪಳಿಸುತ್ತಿದ್ದ ನೀರ ಸಪ್ಪಳ, ಅವನ ಕಥೆಗೆ ಹಿಮ್ಮೇಳವಾಗಿತ್ತು. ಪುರಾತನ ದೇವಾಲಯದಾಚೆಗೆ ದೊಡ್ಡದಾದೊಂದು ಜಲವಿಸ್ತಾರ ಹೊಳೆಯುತ್ತಿತ್ತು. ಆ ನೀರಿನಲ್ಲಿ ಅಲ್ಲೊಂದು ಕಡೆ ಇಲ್ಲೊಂದು ಕಡೆ, ಕರಿದಾದ ವಿಲ್ಲೋ ಮರದ ರೆಂಬೆಗಳು ಎದ್ದು ಕಾಣಿಸುತ್ತಿದ್ದುವು.

ದೇವಪ್ರತಿಮೆಗಳ ಕರ್ಮಾಗಾರದಲ್ಲಿ ಕಲಾಕಾರರು ಆಗಾಗ್ಗೆ ಹಾಡುತ್ತಿದ್ದ ವಿಧ್ಯಾರ್ಥಿ ಗೀತವೊಂದಿತ್ತು ;

ನೀಲಿ, ನೀಲಿ ಸಾಗರ
ಚಂಡ ರುದ್ರ ಸಾಗರ........

ಆ ನೀಲಿ—ನೀಲಿ ಸಾಗರ ಎಷ್ಟೊಂದು ನೀರಸವಾದುದಿರಬೇಡ!

ನನ್ನ ಯಜಮಾನನೆಂದ:

"ಆ ರಾತ್ರೆಗಳಲ್ಲಿ ನನಗೆ ನಿದ್ದೆಯೇ ಬರುತ್ತಿರಲಿಲ್ಲ. ನಾನು ಹಾಸಿಗೆಯಿಂದ ಹೊರಬಿದ್ದು, ಅವಳ ಬಾಗಿಲಬಳಿ, ನಾಯಿಕುನ್ನಿಯ ಹಾಗೆ ನಡುಗುತ್ತ ನಿಲ್ಲುತ್ತಿದ್ದೆ. ಮನೆಯೊಳಗೆಲ್ಲ ಚಳಿ ಗಾಳಿ ಬಲವಾಗಿ ಬೀಸುತ್ತಿದ್ದುದೇ ನಡುಕಕ್ಕೆ ಕಾರಣ. ಅವಳ ಒಡೆಯ ಆಗಾಗ್ಗೆ ರಾತ್ರೆ ಹೊತ್ತು ಅವಳ ಭೇಟಿಗೆ ಬರುವುದಿತ್ತು. ಅಲ್ಲಿ ಅವನ ಕೈಗೆ ನಾನು ಸುಲಭವಾಗಿ ಸಿಕ್ಕಿಬೀಳುವುದು ಸಾಧ್ಯವಿತ್ತು. ಆದರೆ ನನಗೆ ಭಯವೆನಿಸುತ್ತಿರಲಿಲ್ಲ, ಎಳ್ಳಷ್ಟೂ ಇಲ್ಲ."

ಯೋಚನಾಮಗ್ನನಂತೆ, ಪುನಃ ಉಡುವುದು ಸಾಧ್ಯವೇನೋ ಎಂದು ಹಳೆಯ ಕೆಲ ಅರಿವೆಗಳನ್ನು ಪರೀಕ್ಷಿಸುವವನ ಹಾಗೆ, ಅವನು ಮಾತನಾಡಿದ.

"ನನ್ನನ್ನು ಆಕೆ ಗಮನಿಸಿದಳು, ನನ್ನ ಮೇಲೆ ಕರುಣೆ ತೋರಿದಳು. ಬಾಗಿಲನ್ನು ಕೂಡಾ ತೆರೆದು, 'ಬಾ ಒಳಗೆ, ಹುಡುಗ ಹುಚ್ಚಪ್ಪ!' ಅಂತ ಕರೆದಳು."

ಇಂತಹ ಅದೆಷ್ಟೋ ಕಥೆಗಳನ್ನು ನಾನು ಕೇಳಿದ್ದೆ. ಕೇಳಿ ಕೇಳಿ ಸಾಕಾಗಿ ಹೋಗಿತ್ತು. ಆದರೂ ಆ ಕಥೆಗಳಲ್ಲೆಲ್ಲ ಸಮಾನವಾದ ಒಳ್ಳೆಯದೊಂದು ಅಂಶವಿತ್ತು: ಜನರು ಪ್ರೇಮವನ್ನು ಕುರಿತಾದ ತಮ್ಮ ಪ್ರಥಮಾನುಭವದ ಬಗೆಗೆ, ಬಡಿವಾರವಿಲ್ಲದೆ, ಅಶ್ಲೀಲತೆಯ ಸೋಂಕಿಲ್ಲದೆ, ಎಷ್ಟೋ ವೇಳೆ ನಲ್ಮೆಯಿಂದ ಕೂಡಿದ ವಿಷಾದದಿಂದಲೇ, ಮಾತನಾಡುತ್ತಿದ್ದರು. ಅವರ ಜೀವನದಲ್ಲಿ ಅದೇ ಅತ್ಯಂತ ಸೊಗಸಾದ ಘಳಿಗೆ ಎಂಬದು ನನಗೆ ಮನವರಿಕೆಯಾಗುತ್ತಿತ್ತು. ಹಲವರಿ

ಗಂತೂ ವಾಸ್ತವವಾಗಿ, ತಮಗೆ ಎಂದಾದರೂ ತಿಳಿದಿದ್ದ ಒಳ್ಳೆಯ ಸಂಗತಿ ಅದೊಂದೇ ಎನಿಸುತ್ತಿತ್ತು.

ನಗುತ್ತ, ತಲೆಯಲುಗಿಸುತ್ತ, ನನ್ನ ಯಜಮಾನ ಅಚ್ಚರಿಯಿಂದ ಉದ್ಗರಿಸಿದ:

"ಆದರೆ ನನ್ನ ಹೆಂಡತಿಗೆ ಈ ಕಥೇನ ಹೇಳೋ ಧೈರ್ಯ ನಾನೆಂದೂ ತೋರಲಾರೆ! ಇಲ್ಲಪ್ಪ! ಅದರಲ್ಲೇನೋ ತಪ್ಪಾದುದಿದೆ ಅಂತಲ್ಲ. ಆದರೂ ಅವಳಿಗೆ ಹೇಳೋ ಸಾಹಸ ನಾನು ಮಾಡಲಾರೆ. ಸರಿ...."

ಆ ಕಥೆಯನ್ನು ಆತ ಹೇಳುತ್ತಿದ್ದುದು ನನಗಲ್ಲ, ಸ್ವತಃ ತನ್ನಷ್ಟಕ್ಕೇ. ಅವನು ಮೌನವಾಗಿದ್ದಿದ್ದರೆ, ನಾನು ಮಾತನಾಡುತ್ತಿದ್ದೆ. ಆ ನೀರವತೆಯಲ್ಲಿ, ಶೂನ್ಯದಲ್ಲಿ, ಶೀತಲವಾದ ಬೂದು ನೀರಿನಲ್ಲಿ ಮುಳುಗಿದ ಆ ನಿರ್ಜೀವ ಶಹರದಲ್ಲಿ ಚಿರಂತನ ನಿದ್ರೆಗೆ ಯಾರೂ ವಶರಾಗದೇ ಇರುವುದಕ್ಕೋಸ್ಕರ, ಮಾತನಾಡುವುದು, ಹಾಡುವುದು, ಸ್ವರಪೆಟ್ಟಿಗೆಯನ್ನು ನುಡಿಸುವುದು ಅಗತ್ಯವಾಗಿತ್ತು.

ನನ್ನನ್ನು ಕುರಿತು ಆತ ಉದ್ಬೋಧನೆ ಇತ್ತ.

"ಮೊದಲನೇದಾಗಿ—ಚಿಕ್ಕ ವಯಸ್ಸಿನಲ್ಲೇ ಮದುವೆಯಾಗ್ಬೇಡ! ತಮ್ಮಾ, ಮದುವೆ ಅನ್ನೋದು ಅತ್ಯಂತ ಮಹತ್ವದ್ದು! ಪರ್ಶಿಯಾದಲ್ಲಿ ಮಹಮ್ಮದೀಯನಾಗಿಯೋ, ಮಾಸ್ಕೋದಲ್ಲಿ ಪೋಲೀಸರವನಾಗಿಯೋ, ನೇಯುತ್ತಲೋ ಕದಿಯುತ್ತಲೋ, ಎಲ್ಲೇ ನೀನು ವಾಸಿಸುತ್ತಿರು, ಹೇಗೆಯೋ ನೀನು ವಾಸಿಸುತ್ತಿರು, ನಿನಗೆ ರುಚಿಸಲಿಲ್ಲವೆಂದಾದರೆ ಯಾವಾಗ ಬೇಕಾದರೂ ನೀನು ಬದಲಿಸಬಹುದು. ಆದರೆ ಹೆಂಡತೀನ ಬದಲಿಸೋದು ಸಾಧ್ಯವಿಲ್ಲ! ಹೆಂಡತಿ ಅನ್ನೋದು ಹವಾಮಾನವಿದ್ದ ಹಾಗೆ ತಮ್ಮ. ಅದನ್ನೇನು ಮಾಡೋದಕ್ಕೂ ಆಗೋದಿಲ್ಲ! ಇಷ್ಟಬಂದಾಗ ಕಳಚಿ ಬದಿಗೆಸೆಯೋದಕ್ಕೆ ಹೆಂಡತಿ ಪಾದರಕ್ಷೆಯಲ್ಲ!"

ನೆರಳೊಂದು ಅವನ ಮುಖದ ಮೇಲೆ ನರ್ತಿಸಿ ಮಾಯವಾಯಿತು.

ಹುಬ್ಬುಗಳನ್ನು ಗಂಟಿಕ್ಕಿ ಬೂದು ನೀರನ್ನೆ ದಿಟ್ಟಿಸುತ್ತ, ಒಂದು ಬೆರಳಿನಿಂದ ತನ್ನ ಡೊಂಕು ಮೂಗನ್ನು ತೀಡುತ್ತ, ಗೊಣಗುತ್ತ, ಅವನು ಕುಳಿತ:

"ಹೌದು, ತಮ್ಮ....ಹುಷಾರಾಗಿರಬೇಕು! ಪ್ರಾಯಶಃ ನೀನು, ಗಾಳಿಗೆ ಬಾಗಿಯೂ ಬೇರು ಕಳಚದೇ ಇರುವ ಜಾತಿಯವನಿರಬಹುದು. ಹೀಗಿದ್ದರೂ ಕೂಡಾ, ಪ್ರತಿಯೊಬ್ಬನಿಗೂ ಅವನದೇ ಆದ ಬೋನು ಕಾದಿರ್ತದೆ...."

ಈಗ ವೋಲ್ಗಾ ನದಿಯೊಡನೆ ಲೀನವಾಗಿದ್ದ ಮೆಶ್‌ಚೆರ್‌ಸ್ಕೋ ಸರೋವರದ ಪೊದರುಗಳತ್ತ ನಾವು ಸಾಗಿದೆವು.

ಪೊದೆಗಳತ್ತ ತನ್ನ ಬಂದೂಕನ್ನು ಗುರಿ ಇಡುತ್ತ ನನ್ನ ಯಜಮಾನ ಪಿಸುನುಡಿದ:

"ನಿಧಾನವಾಗಿ ದೋಣಿ ನಡೆಸು."

ಬಡಕಲಾಗಿದ್ದ ಕೆಲ ಕಾಡುಕೋಳಿಗಳನ್ನು ಬಂದೂಕಿನಿಂದ ಹೊಡೆದ ಬಳಿಕ ಅವನೆಂದ:

"ದೋಣಿ ಕುನಾವಿನೋದ ಕಡೆಗೆ ಸಾಗಲಿ! ಸಾಯಂಕಾಲದವರೆಗೂ ನಾನಲ್ಲಿ ತಂಗಿರ್ತೇನೆ. ಒಬ್ಬ ಕಂಟ್ರಾಕ್ಟರನ ಜತೆ ನನಗೆ ಕೆಲಸವಿತ್ತೂಂತ ಮನೇಲಿ ತಿಳಿಸು."

ವಸತಿ ಪ್ರದೇಶದ ರಸ್ತೆಗಳಲ್ಲೊಂದರಲ್ಲಿ ಅವನನ್ನು ನಾನು ಇಳಿಸಿದೆ. ಆ ರಸ್ತೆಯಲ್ಲೂ

ನೀರು ನಿಂತಿತ್ತು. ಅಲ್ಲಿಂದ ನಾನು, ಸಂತೆಮಾಳದ ಹಾದಿಯಾಗಿ ಸಂಗಮ ಪ್ರದೇಶಕ್ಕೆ ಹಿಂತಿರುಗಿದೆ. ದೋಣಿಯನ್ನು ಅಲ್ಲಿ ಕಟ್ಟಿ, ಎರಡು ನದಿಗಳ ಸಂಗಮವನ್ನು, ಶಹರವನ್ನು, ಹಡಗುಗಳನ್ನು, ಆಕಾಶವನ್ನು ದಿಟ್ಟಿಸುತ್ತ ಕುಳಿತೆ. ಆಗಸದಲ್ಲೀಗ ಬಿಳಿಯ ಮೋಡಗಳು, ಬಲು ದೊಡ್ಡದೊಂದು ಹಕ್ಕಿಯ ರೆಕ್ಕೆಯ ಹಾಗೆ ಗರಿಗೆದರಿದ್ದುವು. ನೀಲಿ ಸಂದಿಗಳಿಂದ ಬಂಗಾರಬಣ್ಣದ ಸೂರ್ಯ ಇಣಿಕಿ ನೋಡುತ್ತಿದ್ದ. ಇಡೀ ಜಗತ್ತನ್ನೇ ಪರಿವರ್ತಿಸಲು ಅವನ ಒಂದೇ ಒಂದು ರಶ್ಮಿ ಸಾಕಾಗಿತ್ತು. ನನ್ನ ಸುತ್ತುಮುತ್ತಲಿದ್ದುದೆಲ್ಲವೂ ಚುರುಕಾಗಿ ಈಗ ಚಲಿಸತೊಡಗಿದ್ದುವು. ತೆಪ್ಪಗಳ ಕೊನೆಯಿಲ್ಲದ ಸರಪಣಿ, ಪ್ರವಾಹದ ಕೆಳಕ್ಕೆ ವೇಗವಾಗಿ ತೇಲಿ ಹೋಗುತ್ತಿತ್ತು. ತೆಪ್ಪಗಳ ಮೇಲೆ, ನೀಳವಾದ ಹುಟ್ಟುಗಳನ್ನು ಅತ್ತಿತ್ತ ತಿರುವುತ್ತ, ಪರಸ್ಪರ ತಮ್ಮೆಡೆಗೆ ಹಾಗೂ ಹಾದು ಹೋಗುತ್ತಿದ್ದ ಹಡಗಿನೆಡೆಗೆ ಕೂಗಾಡುತ್ತ, ಬಲಿಷ್ಠರಾದ ರೈತರು ನಿಂತಿದ್ದರು. ಪುಟ್ಟ ಹಡಗೊಂದು ಬರಿದಾಗಿದ್ದ ಹೇರುದೋಣಿಯನ್ನು ಪ್ರವಾಹಕ್ಕಿದಿರಾಗಿ ಎಳೆಯುತ್ತಿತ್ತು. ನದಿ ತನ್ನನ್ನು ಅತ್ತಿತ್ತ ಎಸೆದಾಡಿದಂತೆ, ತನ್ನ ಮೂತಿಯನ್ನದು ಈತಿಯ ಹಾಗೆ ಬದಿಯಿಂದ ಬದಿಗೆ ಮುಗುಚುತ್ತಿತ್ತು. ನಿರ್ದಯವಾಗಿ ತನಗಿದುರು ಬರುತ್ತಿದ್ದ ನೀರಿನ ಮೂಲಕ ತನ್ನ ಚಕ್ರಗಳನ್ನು ಹಟಮಾರಿತನದಿಂದ ಮುಂದಕ್ಕೆ ತಳ್ಳಿದಂತೆ, ಅದು ಏದುಸಿರು ಬಿಡುತ್ತಿತ್ತು, ಉಗಿಯುಗುಳುತ್ತಿತ್ತು. ಹೇರು ದೋಣಿಯ ಮೇಲೆ ನಾಲ್ವರು ರೈತರು, ಭುಜಕ್ಕೆ ಭುಜ ತಗಲಿಸಿ ಕುಳಿತಿದ್ದರು ; ಅವರ ಕಾಲುಗಳು ಅಂಚಿನ ಹೊರಕ್ಕೆ ತೂಗಾಡುತ್ತಿದ್ದುವು. ಅವರಲ್ಲೊಬ್ಬ ಕೆಂಪು ಅಂಗಿ ತೊಟ್ಟಿದ್ದ. ಅವರೆಲ್ಲರೂ ಹಾಡುತ್ತಲಿದ್ದರು. ಹಾಡಿನ ಪದಗಳು ಸ್ಪಷ್ಟವಾಗಿರಲಿಲ್ಲ. ಆದರೂ ಅದು ಯಾವ ಹಾಡೆಂಬುದು ನನಗೆ ತಿಳಿದಿತ್ತು.

ಇಲ್ಲಿ, ನದಿಯ ಮೇಲೆ, ಪ್ರತಿಯೊಂದೂ ನನಗೆ ಪರಿಚಿತವಾಗಿದ್ದಂತೆ ಅನಿಸಿತು. ಪ್ರತಿಯೊಂದೂ ಆತ್ಮೀಯವಾಗಿತ್ತು. ಪ್ರತಿಯೊಂದರ ಅರ್ಥವೂ ನನಗೆ ತಿಳಿದಿತ್ತು. ಆದರೆ, ನನ್ನ ಬೆನ್ನ ಹಿಂದಿದ್ದ ಮಹಾಪೂರಕ್ಕೊಳಗಾದ ಶಹರ, ಒಂದು ಕೆಟ್ಟ ಕನಸಾಗಿದ್ದಿತು. ಅದು ನನ್ನ ಯಜಮಾನನ ಸೃಷ್ಟಿಯಾಗಿತ್ತು—ಅವನಷ್ಟೇ ನಿಗೂಢವಾದ ಸೃಷ್ಟಿಯಾಗಿತ್ತು.

ನದೀ ದೃಶ್ಯವನ್ನು ಕಣ್ತುಂಬ ಸೇವಿಸಿದಮೇಲೆ, ನಾನು ಪೂರ್ಣ ಬೆಳೆದ ಮನುಷ್ಯನೆಂಬ ಎಂತಹ ಕೆಲಸವನ್ನು ಮಾಡುವುದಕ್ಕೂ ಸಮರ್ಥನೆಂಬ—ಭಾವನೆಯೊಂದಿಗೆ ಮನೆಗೆ ಮರಳಿದೆ. ಹಿಂತಿರುಗುತ್ತ ಹಾದಿಯಲ್ಲಿ, ವೋಲ್ಗಾದ ಕಡೆಗೆ ಕೊನೆಯ ನೋಟವನ್ನೊಮ್ಮೆ ಬೀರುವುದಕ್ಕೋಸ್ಕರ, ಕ್ರೆಮ್ಲಿನ್ ಗುಡ್ಡದ ಮೇಲೆ ತಡೆದು ನಿಂತೆ. ಆ ಎತ್ತರದಿಂದ ಭೂಮಿ, ಸೀಮಾತೀತವಾಗಿಯೂ ಭಾರೀ ಸಾಧ್ಯತೆಗಳಿಂದ ಕೂಡಿದ್ದಂತೆಯೂ ಅನಿಸಿತು.

ಮನೆಗೆ ಮರಳಿದ ಬಳಿಕ ನಾನು ಓದುತ್ತಲಿದ್ದೆ. ಮಾರ್ಗೊಟ್‌ರಾಣಿಯಿದ್ದ ಮಹಡಿಯಲ್ಲೀಗ ಐವರು ಬಾಲಿಕೆಯರಿದ್ದ ದೊಡ್ಡದೊಂದು ಸಂಸಾರವಿತ್ತು. ಅವರೆಲ್ಲ. ಹೆತ್ತವರು ಹೆಮ್ಮೆಪಡುವಂತಿದ್ದ ಹುಡುಗಿಯರು : ಚೆಲುವಿನಲ್ಲಿ ಒಬ್ಬರನ್ನೊಬ್ಬರು ಮೀರಿಸುವಂತಿದ್ದರು. ಅವರಲ್ಲದೆ, ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರನ್ನೂ ಆ ಸಂಸಾರ ಒಳಗೊಂಡಿತ್ತು. ಈ ಎಳೆಯರು ನನಗೆ ಪುಸ್ತಕಗಳನ್ನು ಒದಗಿಸಿಕೊಟ್ಟರು. ಅತ್ಯಾಶೆಯಿಂದ ನಾನು ಟೂರ್ಗೆನೀವನನ್ನು ಸ್ವಾಹಾ ಮಾಡಿದೆ. ಶರತ್ಕಾಲದ ಗಾಳಿಯ ಹಾಗೆ ಸ್ವಚ್ಛವಾಗಿದ್ದ ಸರಳವಾದ ಹಾಗೂ ಸುಸ್ಪಷ್ಟವಾದ ಅವನ ಶೈಲಿ, ಅವನ ಪಾತ್ರಗಳ ಪರಿಶುದ್ಧತೆ, ಅಷ್ಟೊಂದು ವಿನಯದಿಂದ ಆತ ಪ್ರತಿಪಾದಿಸು

ತ್ತಿದ್ದ ಪ್ರತಿಯೊಂದರ ಸೊಬಗು—ಇವೆಲ್ಲದರಿಂದ ಬಹುವಾಗಿ ಅಚ್ಚರಿಪಡುತ್ತ ಅವನ ಕೃತಿಗಳನ್ನು ನಾನು ಓದಿದೆ.

ಪೊಮ್ಯಲೊವ್‌ಸ್ಕಿಯ 'ವಿದ್ಯಾಲಯ'ವನ್ನು ನಾನು ಓದಿದೆ. ಅದು, ದೇವಪ್ರತಿಮೆಗಳ ಕರ್ಮಾಗಾರದ ಬದುಕನ್ನೆ ಬಹಳ ವಿಚಿತ್ರ ರೀತಿಯಲ್ಲಿ ಹೋಲುತ್ತಿದ್ದುದನ್ನು ಕಂಡು, ಪುನಃ ಅಚ್ಚರಿಪಟ್ಟೆ. ಕ್ರೂರ ತುಂಟತನಗಳ ಮೂಲಕ ಪರಿಹಾರವನ್ನು ಬಯಸುತ್ತಿದ್ದ ಸಹಿಸಲಸಾಧ್ಯವಾದ ಆ ಬೇಸರವನ್ನು ಬಹಳ ಚೆನ್ನಾಗಿಯೇ ನಾನು ಅರಿತಿದ್ದೆ.

ರಷ್ಯನ್ ಪುಸ್ತಕಗಳನ್ನೋದುವಾಗ ಒಳಿತೆನಿಸುತ್ತಿತ್ತು. ಅವುಗಳಲ್ಲಿ ನಾನು ಯಾವಾಗಲೂ, ವ್ಯಥೆಯಿಂದ ತುಂಬಿದುದೇನನ್ನೋ ಪರಿಚಿತವಾದುದೇನನ್ನೋ ಗ್ರಹಿಸುತ್ತಿದ್ದೆ. ಆ ಪುಟಗಳ ನಡುವೆ ಲೆಂಟ್ ಹಬ್ಬದ ಘಂಟಾರವ ಬಂಧಿತವಾಗಿದ್ದಂತೆ, ಹೊದಿಕೆಗಳನ್ನು ತೆರೆವುದಷ್ಟೇ ಸಾಕು —ಕ್ಷೀಣಸಂಗೀತ ಹೊರಬೀಳುವುದೆಂಬಂತೆ, ನನಗೆ ಭಾಸವಾಗುತ್ತಿತ್ತು.

ಮನಸ್ಸಿಲ್ಲದ ಮನಸ್ಸಿನಿಂದ 'ಸತ್ತ ಆತ್ಮಗಳು' ಪುಸ್ತಕವನ್ನು ನಾನು ಓದಿದೆ. 'ಶವದ ಮನೆಯ ಟಿಪ್ಪಣಿಗಳು' ಪುಸ್ತಕವನ್ನು ನಾನು ಓದಿದ್ದೂ ಇದೇ ರೀತಿ. ಸತ್ತ ಆತ್ಮಗಳು, ಶವದ ಮನೆ, ಸಾವು, ಮೂರು ಮರಣಗಳು, ಜೀವಂತ ಶವ—ಈ ಎಲ್ಲ ಶೀರ್ಷಿಕೆಗಳಲ್ಲೂ ಇರುವ ಹೋಲಿಕೆಯನ್ನು ಗಮನಿಸದಿರುವುದು ಸಾಧ್ಯವಿರಲಿಲ್ಲ. ಇದರಿಂದಾಗಿ, ಆ ಪುಸ್ತಗಳ ಬಗೆಗೆ ಅಸ್ಪಷ್ಟವಾದ ವಿರೋಧವೇ ನನ್ನಲ್ಲಿ ಕೆರಳಿತು. ಅಲ್ಲದೆ, 'ಕಾಲದ ಚಿಹ್ನೆಗಳು,' 'ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು,' 'ಮಾಡಬೇಕಾದ್ದೇನು ?' 'ಸ್ಮುರಿನ್ ಗ್ರಾಮದ ಚರಿತ್ರೆ'—ಈ ಪುಸ್ತಕಗಳನ್ನು ಈ ಬಗೆಯ ಬೇರೆ ಪುಸ್ತಕಗಳನ್ನು ನಾನು ಇಷ್ಟಪಡಲಿಲ್ಲ.

ಆದರೆ, ಡಿಕೆನ್ಸ್ ಮತ್ತು ವಾಲ್ಟರ್ ಸ್ಕಾಟ್ ನನಗೆ ಬಹಳ ಪ್ರಿಯವಾಗಿದ್ದರು. ಅವರ ಕೃತಿಗಳನ್ನು ಅತ್ಯಂತ ಹರ್ಷದಿಂದ ಎರಡು ಮೂರು ಸಾರೆ ನಾನು ಓದುತ್ತಿದ್ದೆ. ವಾಲ್ಟರ್ ಸ್ಕಾಟನ ಪುಸ್ತಕಗಳನ್ನು ಓದಿದಾಗ, ಭವ್ಯವಾದೊಂದು ದೇವಾಲಯದಲ್ಲಿ ರಜಾದಿನಗಳಲ್ಲಿ ನಡೆಯುವ ಸಮೂಹಪ್ರಾರ್ಥನೆಯ ನೆನಪು ನನಗಾಗುತ್ತಿತ್ತು : ತುಸು ದೀರ್ಘವಾಗಿ ಬಳಲಿಕೆ ಹುಟ್ಟಿಸುವಂತಿದ್ದರೂ ಯಾವಾಗಲೂ ಉತ್ಸವದ ವಾತಾವರಣವಿರುತ್ತಿತ್ತು. ಡಿಕೆನ್ಸ್ ಈ ದಿನಕ್ಕೂ ನನ್ನ ಪಾಲಿಗೆ, ನಾನು ಬಹಳವಾಗಿ ಮೆಚ್ಚಿಕೊಳ್ಳುವ ಲೇಖಕನಾಗಿ—ಎಲ್ಲ ಕಲೆಗಳಲ್ಲೂ ಅತ್ಯಂತ ಕಷ್ಟದ್ದಾದ ಜನರನ್ನು ಪ್ರೀತಿಸುವ ಕಲೆಯಲ್ಲಿ ಮಹಾಸಿದ್ಧಿಯನ್ನು ಗಳಿಸಿದ ಗ್ರಂಥಕರ್ತನಾಗಿ—ಉಳಿದಿದ್ದಾನೆ.

ಸಂಜೆಗಳಲ್ಲಿ ನಮ್ಮದೊಂದು ದೊಡ್ಡಗುಂಪು ಮುಖಮಂಟಪದಲ್ಲಿ ನೆರೆಯುತ್ತಿತ್ತು: ಮಾರ್ಗೊಟ್‌ರಾಣಿಯ ಮಹಡಿಯ ಸೋದರ—ಸೋದರಿಯರು, ವ್ಯಾಚೆಸ್ಲಾವ್ ಸೆಮಾಶ್ಕೊ ಎಂಬ ಹೆಸರಿನ ಮೊಂಡು ಮೂಗಿನ ವಿದ್ಯಾರ್ಥಿಯೊಬ್ಬ, ಮತ್ತು ಬೇರೆ ಕೆಲವರು. ಕೆಲ ವೊಮ್ಮೆ, ಹಿರಿಯ ಅಧಿಕಾರಿಯೊಬ್ಬನ ಮಗಳು—ಪ್ಟಿಟ್ಸಿನ ಎಂಬ ಹೆಸರಿನಾಕೆ—ನಮ್ಮನ್ನು ಕೂಡಿಕೊಳ್ಳುತ್ತಿದ್ದಳು. ಪುಸ್ತಕಗಳು ಮತ್ತು ಕಾವ್ಯದ ವಿಷಯವಾಗಿ ನಾವು ಮಾತನಾಡುತ್ತಿದ್ದೆವು. ನನಗಂತೂ ಇವು ಬಹಳ ಪ್ರಿಯವಾದ, ಅರ್ಥವಾಗುತ್ತಿದ್ದ, ವಿಷಯಗಳು. ನಾನು ಆ ಹುಡುಗರೆಲ್ಲರಿಗಿಂತ ಹೆಚ್ಚು ಓದಿದ್ದೆ. ಆದರೆ, ಹೆಚ್ಚಾಗಿ ಆಗಾಗ್ಗೆ ನನ್ನ ಸಂಗಡಿಗರು, ತಮ್ಮ ಶಾಲೆಯ ವಿಷಯ ಮಾತನಾಡುತ್ತಿದ್ದರು; ತಮ್ಮ ಅಧ್ಯಾಪಕರನ್ನು ದೂರುತ್ತಿದ್ದರು.

ಅವುಗಳಿಗೆ ಕಿವಿಕೊಟ್ಟಾಗ, ಇವರೆಲ್ಲರಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ನಾನು ಅನುಭವಿಸುತ್ತಿದ್ದಂತೆ ಅನಿಸಿತು. ಅವರ ಸಹನ ಶಕ್ತಿಯನ್ನು ಕಂಡು ನನಗೆ ಆಶ್ಚರ್ಯವೆನಿಸಿತು. ಆದರೂ ಕೂಡಾ, ಅವರ ಬಗ್ಗೆ ನಾನು ಅಸೂಯೆಪಟ್ಟೆ: ಅವರು ವಿದ್ಯಾಭ್ಯಾಸ ಮಾಡುತ್ತಿದ್ದರು.

ನನ್ನ ಸ್ನೇಹಿತರು ನನಗಿಂತ ದೊಡ್ಡವರಾಗಿದ್ದರು. ಆದರೆ, ಅವರಿಗಿಂತ ನಾನೇ ಹೆಚ್ಚು ಪ್ರಬುದ್ಧನೂ ಅನುಭವಿಯೂ ಆಗಿದ್ದಂತೆ ನನಗೆ ಅನಿಸಿತು. ಇದರಿಂದ ಸ್ವಲ್ಪಮಟ್ಟಿಗೆ ನನಗೆ ಕಸಿವಿಸಿ ಎನಿಸಿತು. ಅವರಿಗೆ ಹೆಚ್ಚು ಸಮೀಪವಾಗಿರಬೇಕೆಂಬುದು ನನ್ನ ಅಪೇಕ್ಷೆಯಾಗಿತ್ತು. ರಾತ್ರೆ, ತಡವಾಗಿ ನಾನು ಮನೆಗೆ ಮರಳುತ್ತಿದ್ದೆ. ಕೊಳೆಯೂ ಧೂಳೂ ನನ್ನನ್ನು ಆವರಿಸಿರುತ್ತಿದ್ದುವು. ಅವರದಕ್ಕಿಂತ ಭಿನ್ನವಾದೊಂದು ವ್ಯವಸ್ಥೆಯ ಭಾವನೆಗಳಲ್ಲಿ ಮುಳುಗಿರುತ್ತಿದ್ದೆ. ತಿರುಳಿನಲ್ಲಿ, ಅವರೆಲ್ಲರ ಅನುಭವಗಳೂ ಹೆಚ್ಚು ಕಡಮೆ ಒಂದೇ ಆಗಿದ್ದುವು. ಅವರು ಹುಡುಗಿಯರ ಬಗೆಗೆ ಬಹಳವಾಗಿ ಮಾತನಾಡುತ್ತಿದ್ದರು. ಒಮ್ಮೆ ಒಬ್ಬಳಲ್ಲಿ, ಬಳಿಕ ಇನ್ನೊಬ್ಬಳಲ್ಲಿ, ಅವರು ಅನುರಕ್ತರಾಗುತ್ತಿದ್ದರು ; ಮತ್ತು, ಕವಿತೆಯನ್ನು ಬರೆಯಲು ಅವರು ಯತ್ನಿಸುತ್ತಿದ್ದರು. ಎಷ್ಟೋ ಸಾರೆ ನನ್ನ ನೆರವನ್ನು ಕೋರಲಾಗುತ್ತಿತ್ತು. ನಾನು ಸಂತೋಷದಿಂದಲೇ ಕವಿತೆಕಟ್ಟಿ ನೋಡಿದೆ. ಪ್ರಾಸಗಳು ನನಗೆ ಬಹಳ ಸುಲಭವಾಗಿ ಬಂದವು. ಆದರೆ ಯಾಕೋ, ಏನೋ, ನನ್ನ ಕವಿತೆಗಳು ಯಾವಾಗಲೂ ಹಾಸ್ಯರಸಭರಿತವಾಗಿ ಬಿಡುತ್ತಿದ್ದುವು. ಹೆಚ್ಚಾಗಿ ಕವಿತೆ ಸಮರ್ಪಿತವಾಗುತಿದ್ದುದು ಪ್ಟಟ್ಸಿನ್ ಹುಡುಗಿಗೆ. ಅವಳನ್ನು ಸರ್ವಸಾಧಾರಣವಾಗಿ ಯಾವಾಗಲೂ ನಾನು, ಯಾವುದಾದರೂ ತರಕಾರಿಗೆ—ಸಾಮಾನ್ಯವಾಗಿ ಈರುಳ್ಳಿಗೆ—ಹೋಲಿಸುತ್ತಿದ್ದೆ.

ಸೆಮಾಶ್ಕೋ ನನ್ನೊಡನೆ ಅಂದ:

"ಈ ಸಾಲುಗಳನ್ನು ಕವಿತೆ ಅಂತ ಕರೀತಿಯೇನು? ಇವು ಮೋಚಿಯ ಮೊಳೆಗಳು !"

ಬೇರೆಯವರಿಗೆ ಸರಿಸಮವಾಗಿರಬೇಕೆಂಬ ಆತುರದಿಂದ ಪ್ಟಟ್ಸಿನ್ ಹುಡುಗಿಯಲ್ಲಿ ನಾನು ಅನುರಕ್ತನಾದೆ. ನನ್ನ ಭಾವನೆಗಳನ್ನು ಯಾವ ರೀತಿ ನಾನು ವ್ಯಕ್ತಪಡಿಸಿದೆನೋ ಈಗ ಅದು ನನಗೆ ನೆನಪಿಲ್ಲ. ಆದರೆ ಆ ಪ್ರಕರಣಕ್ಕೆ ದೊರೆತುದು ಮಾತ್ರ ವಿಷಾದಕರ ಅಂತ್ಯ. ಒಂದು ದಿನ, ಜ್ವೆಜ್‌ದಿನ್ ಹೊಂಡದ ಸ್ಥಗಿತ ನೀರಿನಲ್ಲಿ ತೇಲುವ ಹಲಗೆಯ ಮೇಲೆ ವಿಹಾರಕ್ಕೆ ಕರೆದೊಯ್ಯುವೆನೆಂದು ಅವಳಿಗೆ ನಾನು ಹೇಳಿದೆ. ಅವಳು ಒಪ್ಪಿದಳು. ಹಲಗೆಯನ್ನು ದಂಡೆಗೆ ತಗಲಿಸಿ ಅದರ ಮೇಲೆ ನಾನು ನಿಂತೆ. ಅದು ನನ್ನ ಭಾರವನ್ನು ತಡೆಯುವಷ್ಟು ಭದ್ರವಾಗಿಯೇ ಇತ್ತು. ಆದರೆ, ಲೇಸು ರಿಬ್ಬನುಗಳಿಂದೆಲ್ಲ ಅಲಂಕೃತಳಾಗಿದ್ದ ಆ ಹುಡುಗಿ, ಬಹಳ ಮಾಟವಾಗಿ ಹಲಗೆಯ ಇನ್ನೊಂದು ತುದಿಗೆ ಹತ್ತಿದಾಗ, ಆ ಹಾಳಾದ ಹಲಗೆ ನೀರಲ್ಲಿ ಮುಳುಗುವಂತಾಯಿತು. ಅವಳು ಹೊಂಡಕ್ಕೆ ಬಿದ್ದಳು. ಸ್ತ್ರೀಯರಿಗೆ ನೆರವಾಗುವ ನೈಜ ಹಿರಿತನದಿಂದ, ಅವಳ ಹಿಂದೆಯೇ ನಾನೂ ನೀರಿಗೆ ಧುಮುಕಿದೆ; ಬೇಗನೆ ಅವಳನ್ನು ದಡದ ಮೇಲಕ್ಕೆಳೆದೆ. ಆದರೆ ಭೀತಿಯೂ ಹಸುರು ಕೊಚ್ಚೆಯೂ ಆ ಕನ್ನಿಕೆಯ ಸೌಂದರ್ಯವನ್ನು ಬಣ್ಣಿಸಲಾಗದ ರೀತಿಯಲ್ಲಿ ಹಾಳುಗೆಡವಿ ಬಿಟ್ಟಿದ್ದುವು.

ಒದ್ದೆ ಮುಷ್ಟಿಯನ್ನು ನನ್ನೆಡೆಗೆ ಅಲುಗಿಸುತ್ತ ಅವಳು ಕೂಗಾಡಿದಳು:

"ಬೇಕುಬೇಕೆಂದೇ ನನ್ನನ್ನು ನೀನು ನೀರಲ್ಲಿ ಮುಳುಗಿಸ್ದೆ !"

ಕ್ಷಮಾಭಿಕ್ಷೆಯನ್ನು ನೀಡಲು ಆಕೆ ನಿರಾಕರಿಸಿದಳು ; ಅಂದಿನಿಂದ ಅವಳು ನನ್ನ ಕಡುವೈರಿಯಾದಳು. ಶಹರದಲ್ಲಿ ಬದುಕು ಅಷ್ಟೇನೂ ಸ್ವಾರಸ್ಯಕರವಾಗಿರಲಿಲ್ಲ. ಮುದುಕಿ ಯಜಮಾನಿತಿ

ಈಗಲೂ ನನ್ನನ್ನು ಇಷ್ಟಪಡಲಿಲ್ಲ. ಕಿರಿಯವಳು ಸಂಶಯಗ್ರಸ್ತಳಾಗಿಯೇ ನನ್ನನ್ನು ನೋಡಿದಳು. ಮುಖದ ಮೇಲಿನ ಬಿಳಿಯ ಮಚ್ಚೆಗಳು ಹಿಂದಿಗಿಂತ ಹೆಚ್ಚಾಗಿದ್ದ ವಿಕ್ಟರ್, ಆಳವಾದ ದ್ವೇಷವೇ ನನ್ನೋ ಹೃದಯದಲ್ಲಿರಿಸಿಕೊಂಡು, ಎಲ್ಲರೆಡೆಗೂ ಹೂಂಕರಿಸುತ್ತಿದ್ದ.

ನನ್ನ ಯಜಮಾನನಿಗೀಗ, ತಾನು ಮತ್ತು ತನ್ನ ತಮ್ಮ ಇಬ್ಬರೇ ತಯಾರಿಸುವುದು ಸಾಧ್ಯವಿರದಷ್ಟು ಹೆಚ್ಚು ನಕಾಶೆಗಳಿದ್ದುವು. ಹೀಗಾಗಿ, ಸಹಾಯಕ್ಕೆಂದು ನನ್ನ ಮಲತಂದೆಯನ್ನು ಆತ ಕರೆಸಿಕೊಂಡ.

ಒಂದು ದಿನ ಸಂತೆಮಾಳದಿಂದ ನಾನು ನಿತ್ಯಕ್ಕಿಂತ ಬೇಗನೆ ಹಿಂತಿರುಗಿದೆ. ಭೋಜನದ ಕೊಠಡಿಯನ್ನು ಪ್ರವೇಶಿಸಿದಾಗ, ಮರೆತುಹೋಗಿ ಬಹಳ ಕಾಲವಾಗಿದ್ದ ಈ ಮನುಷ್ಯ, ಚಹಾದ ಮೇಜಿನ ಬಳಿ ನನ್ನ ಯಜಮಾನನ ಪಕ್ಕದಲ್ಲಿ ಕುಳಿತಿದ್ದುದನ್ನು ಕಂಡೆ. ಆತ ಲಾಘವಕ್ಕೆಂದು ನನ್ನ ಕೈಯನ್ನು ಮುಂದಕ್ಕೆ ಚಾಚಿದ.

"ಕುಶಲವೇನಯ್ಯ ?" ಎಂದು ಅವನೆಂದ.

ಭೇಟಿಯ ಅನಿರೀಕ್ಷಿತ ಸ್ವರೂಪದಿಂದ ನಾನು ದಂಗು ಬಡೆದವನಂತಾಗಿದ್ದೆ. ತಕ್ಷಣವೆ ಗತಕಾಲವೆಲ್ಲ ಜ್ವಾಲೆಯಂತೆ ಭುಗಿಲೆಂದಿತು ; ನನ್ನ ಹೃದಯವನ್ನು ದಹಿಸಿತು.

ಸೊರಗಿದ ಮುಖದ ಮೇಲೊಂದು ಮುಗುಳುನಗೆ ಮೂಡಿಸಿ ನನ್ನ ತಂದೆ ನನ್ನನ್ನೆ ದಿಟ್ಟಿಸಿದ. ಅವನ ಕರಿದು ಕಣ್ಣುಗಳು ಹಿಂದಿಗಿಂತ ಹೆಚ್ಚಾಗಿ ವಿಸ್ತಾರಗೊಂಡಿದ್ದುವು. ಬಹಳಷ್ಟು ಬಳಲಿದವನಂತೆ, ಆಘಾತಕ್ಕೆ ಸಿಲುಕಿ ನುಚ್ಚಾದವನಂತೆ, ಆತ ಕಂಡ. ಅವನ ಸುಡುತ್ತಲಿದ್ದ ತೆಳ್ಳಗಿನ ಬೆರಳುಗಳೊಳಕ್ಕೆ ನನ್ನ ಕೈಯನ್ನು ನಾನು ನೂಕಿದೆ.

"ಹೂಂ. ಪುನಃ ನಾವು ಸಂಧಿಸಿದೆವೂಂತಾಯ್ತು," ಎಂದು ಕೆಮ್ಮಿನೊಡನೆ ಅವನೆಂದ.

ಛಡಿ ಏಟು ಬಿತ್ತೇನೋ ಎನ್ನುವಂತೆ ದುರ್ಬಲನಾಗಿ ನಾನು ಹೊರಹೋದೆ.

ನಮ್ಮೊಳಗಿನ ಸಂಬಂಧ ಸೂಕ್ಷ್ಮವಾಯಿತು. ಬಿಚ್ಚುಮನಸ್ಸಿನಿಂದ ನಾವು ವರ್ತಿಸುತ್ತಿರಲಿಲ್ಲ. ಏನನ್ನೋ ಹತ್ತಿಕ್ಕಿದಂತೆ ಇರುತ್ತಿದ್ದೆವು. ಅವನು ನನ್ನನ್ನು ನನ್ನ ಮೊದಲ ಹೆಸರಿನಿಂದಲೂ ಪಿತೃನಾಮದಿಂದಲೂ ಕರೆಯುತ್ತಿದ್ದ; ಸಮಾನನಂತೆ ನನ್ನನ್ನು ಸಂಬೋಧಿಸುತ್ತಿದ್ದ:

"ನೀನು ಅಂಗಡಿಗೆ ಹೋದಾಗ, ನನಗಾಗಿ ಕಾಲು ಪೌಂಡು ಲಾಫೆರ್ಮ್ ತಂಬಾಕನ್ನೂ ನೂರು ವಿಕ್ಟರ್ಸನ್ ಸಿಗರೇಟು ಹೊದಿಕೆಗಳನ್ನೂ ಒಂದು ಪೌಂಡು ಬೇಯಿಸಿದ ಹಂದಿಮಾಂಸವನ್ನೂ ದಯವಿಟ್ಟು ಕೊಂಡು ತಾ."

ಅದಕ್ಕೆಂದು ಆತ ನನಗೆ ಕೊಡುತ್ತಿದ್ದ ನಾಣ್ಯಗಳು ಯಾವಾಗಲೂ, ಅಪ್ರಿಯವೆನಿಸುವಷ್ಟು ಬೆಚ್ಚಗಿರುತ್ತಿದ್ದುವು. ಅವನು ಕ್ಷಯಪೀಡಿತನೆಂಬುದೂ ಮುಂದೆ ಬಹಳಕಾಲ ಬದುಕಲಾರನೆಂಬುದೂ ಸ್ಪಷ್ಟವಾಗಿತ್ತು. ಇದನ್ನು ಅವನು ತಿಳಿದಿದ್ದ. ತನ್ನ ಕರಿದಾದ ಚೂಪುಗಡ್ಡದ ತುದಿಯನ್ನು ತಿರುವುತ್ತಿದ್ದಂತೆ, ಶಾಂತವಾದ ಆಳವಾದ ಧ್ವನಿಯಲ್ಲಿ ಅವನೆನ್ನುತ್ತಿದ್ದ:

"ನನ್ನ ಕಾಹಿಲೆ ಗುಣವಾಗುವುದು ಸಾಧ್ಯವೇ ಇಲ್ಲ ಎನ್ನಬಹುದು ಬಹಳಷ್ಟು ಮಾಂಸ ತಿಂದರೆ ಗುಣವಾಗುವುದೂ ಉಂಟು. ಯಾರಿಗೆ ಗೊತ್ತು ನನಗೆ ಕೂಡಾ ಪ್ರಾಯಶಃ ಗುಣವಾಗಲೂಬಹುದು."

ನಂಬಲಾಗದಷ್ಟು ದೊಡ್ಡ ಪ್ರಮಾಣದಲ್ಲಿ ಅವನು ಆಹಾರವನ್ನು ಸೇವಿಸುತ್ತಿದ್ದ. ಅವನ

ತಿನ್ನುತ್ತಿದ್ದ, ಸಿಗರೇಟು ಸೇದುತ್ತಿದ್ದ; ಆಹಾರವನ್ನು ತುರುಕುವುದಕ್ಕೋಸ್ಕರವಷ್ಟೇ ಬಾಯಿಯಿಂದ ಸಿಗರೇಟನ್ನು ತೆಗೆಯುತ್ತಿದ್ದ. ಪ್ರತಿದಿನವೂ ಹಂದಿಮಾಂಸವನ್ನೂ ಉಪ್ಪುಹಾಕಿದ ಹಂದಿಯ ತೊಡೆಯನ್ನೂ ಪುಟ್ಟ ಮಿಾನುಗಳನ್ನು ಅವನಿಗಾಗಿ ಕೊಂಡು ತರುತ್ತಿದ್ದೆ. ಆದರೆ ಅಜ್ಜಿಯ ತಂಗಿ, ನಿಷ್ಕಾರಣವಾದ ಸಂತೃಪ್ತಿಯಿಂದಲೂ ನಿರ್ಧಾರದ ಧ್ವನಿಯಿಂದಲೂ ಅಂದಳು:

"ಸಾವಿಗೆ ಸವಿತಿನಿಸು ಕೊಟ್ಟು ಪ್ರಯೋಜನವಿಲ್ಲ! ಸಾವನ್ನು ಮೋಸಪಡಿಸೋಕಾಗೋದಿಲ್ಲ! ಖಂಡಿತವಾಗಿಯೂ ಇಲ್ಲ!"

ನನ್ನ ಮಲತಂದೆಯ ವಿಷಯದಲ್ಲಿ ಆ ಹೆಂಗಸರು ಬೇಸರಪಡಿಸುವಷ್ಟು ಕಾಳಜಿ ತೋರಿಸುತ್ತಿದ್ದರು. ಹೊಸತಾದ ಯಾವುದೋ ಔಷಧವನ್ನು ಸೇವಿಸಿ ನೋಡಬೇಕೆಂದು ಸದಾಕಾಲವೂ ಆಗ್ರಹಪಡುತ್ತಿದ್ದರು. ಅವನ ಬೆನ್ನ ಹಿಂದೆ ಮಾತ್ರ ಅವರು ಅವನನ್ನು ಲೇವಡಿ ಮಾಡುತ್ತಿದ್ದರು.

ಕಿರಿಯ ಯಜಮಾನಿತಿಯೆಂದಳು:

"ಶ್ರೀಮಂತ ಪ್ರಭು! ಅದಕ್ಕಿಂತ ಏನೇನೂ ಕಡಿಮೆಯಲ್ಲ! 'ಮೇಜಿನ ಮೇಲಿನ ಚೂರುಗಳನ್ನು ಹೆಚ್ಚುಹೆಚ್ಚು ಸಾರೆ ನೀವು ಒರೆಸಬೇಕು'—ಅಂತಾನೆ. 'ಚೂರುಗಳಿಂದಾಗಿ ನೊಣಗಳು ಬರ್ತವೆ!'—ಅಂತ ಹೇಳ್ತಾನೆ."

ತುಚ್ಛೀಕರಿಸುವ ಸ್ವರದಲ್ಲಿ ಹಿರಿಯವಳೆಂದಳು:

"ಶ್ರೀಮಂತ ಪ್ರಭುವೇ ಸರಿ! ಅವನ ಕೋಟು ಎಷ್ಟೊಂದು ತೆಳ್ಳಗಾಗಿ ಜೀರ್ಣವಾಗಿದೆ. ಸುಮ್ಮೆ ನೋಡು, ಆದರೆ ಅವನೋ—ಬ್ರಷ್ಷಿನಿಂದ ಅದನ್ನು ಒರೆಸ್ತಾಲೇ ಇರ್ತಾನೆ. ಭಾರೀ ದೊಡ್ಡಸ್ತಿಕೆಯ ಪ್ರಾಣಿ—ಧೂಳಿನ ಒಂದು ಕಣವೂ ಇರಕೂಡದು!"

"ಸ್ವಲ್ಪ ತಾಳಿ, ಕೂಗಾಡೋ ಕೋಳಿಮರಿಗಳೇ, ಅವನು ಬೇಗನೆ ಸತ್ತೇಸಾಯ್ತಾನೆ," ಎಂದು ನನ್ನ ಯಜಮಾನ ಸಂತೈಸುವ ಧ್ವನಿಯಲ್ಲಿ ನುಡಿದ.

ಅದು, ಅಜ್ಞಾನಿಗಳಾದ ಶಹರವಾಸಿಗಳು ಬುದ್ಧಿಜೀವಿಗಳ ಬಗೆಗೆ ತೋರುತ್ತಿದ್ದ ಅರ್ಥವಿಲ್ಲದ ದ್ವೇಷ. ಇದರಿಂದಾಗಿ ನಾನು, ಮಲತಂದೆಯ ಪಕ್ಷವಹಿಸಿದೆ. ನಾಯಿಕೊಡೆಗಳಲ್ಲಿ ವಿಷವಿರಬಹುದು. ಆದರೆ ಅವು ನೋಡುವುದಕ್ಕಾದರೂ ಸುಂದರವಾಗಿರುತ್ತವೆ.

ಈ ಜನರ ಉಸಿರು ಕಟ್ಟಿಸುವ ಸಾನ್ನಿಧ್ಯದಲ್ಲಿ ನನ್ನ ಮಲತಂದೆ, ಕೋಳಿಪಂಜರದಲ್ಲಿ ಮಿಾನಿದ್ದರೆ ಹೇಗೋ ಹಾಗಿದ್ದ. ನಾವು ಜೀವಿಸುತ್ತಿದ್ದ ಬದುಕಿನಷ್ಟೇ ಏರುಪೇರಾದದ್ದು ಈ ಹೋಲಿಕೆ.

'ಭೇಷ್' ನಲ್ಲಿದ್ದಂತಹವೇ ಗುಣಗಳು ಇವನಲ್ಲಿಯೂ ನನಗೆ ಕಂಡು ಬರತೊಡಗಿದುವು. ನಾನೆಂದೂ ಮರೆಯಲಾಗದಂತಹ ಮನುಷ್ಯ 'ಭೇಷ್.' ಪುಸ್ತಕಗಳಿಂದ ಎತ್ತಿದ ಎಲ್ಲ ಸೌಂದರ್ಯದಿಂದ, 'ಭೇಷ್' ಹಾಗೂ ಮಾರ್ಗೊಟ್‌ರಾಣಿಯ ಸ್ಮರಣೆಗಳನ್ನು ನಾನು ಅಲಂಕರಿಸುತ್ತಿದ್ದೆ. ನನ್ನೊಳಗಿದ್ದುದರಲ್ಲಿ ಅತ್ಯುತ್ತಮವಾದುದನ್ನೆಲ್ಲ, ನನ್ನ ವಾಚನದಿಂದ ಹುಟ್ಟಿದ ಸುಂದರವಾದ ರಮ್ಯಕಲ್ಪನೆಗಳನ್ನೆಲ್ಲ, ಅವರಿಗೆ ನಾನು ನೀಡಿದೆ. 'ಭೇಷ್'ನಷ್ಟೇ ನನ್ನ ಮಲತಂದೆಯೂ ಏಕಾಂಗಿಯಾಗಿರುತ್ತಿದ್ದ; ಅವನ ಹಾಗೆಯೇ ಇವನೂ ಪ್ರೀತಿಸಲ್ಪಡುತ್ತಿರಲಿಲ್ಲ. ನಮ್ಮ ಮನೆಯೊಳಗಿನ ಎಲ್ಲರನ್ನೂ ಸಮಾನದೃಷ್ಟಿಯಿಂದ ಅವನು ಕಾಣುತ್ತಿದ್ದ. ತಾನಾಗಿಯೇ ಎಂದೂ ಮಾತಿಗೆ ಮೊದಲು ಮಾಡುತ್ತಿರಲಿಲ್ಲ. ಎಲ್ಲ ಪ್ರಶ್ನೆಗಳನ್ನೂ ಚುಟುಕಾಗಿಯೂ ಸುವ್ಯಕ್ತ ವಿನಯದಿಂದಲೂ

ಉತ್ತರಿಸುತ್ತಿದ್ದ. ನನ್ನ ಯಜಮಾನನಿಗೆ ಆತ ಕಲಿಸಿಕೊಡುವುದನ್ನು ಕೇಳಲು ನನಗೆ ವಿಶೇ ಸಂತೋಷವೆನಿಸುತ್ತಿತ್ತು. ಮೇಜಿನ ಬಳಿನಿಂತು ಇಮ್ಮಡಿಬಾಗಿ, ಭಾರವಾದ ಕಾಗದವನ್ನು ಬೆ ಳಿನ ನೀಳವಾದ ಉಗುರಿನಿಂದ ತಟ್ಟುತ್ತ, ಶಾಂತವಾಗಿ ಆತ ವಿವರಿಸುತ್ತಿದ್ದ:

"ಈ ಜಾಗದಲ್ಲಿ ಒತ್ತಡವನ್ನು ಹಂಚಿಬಿಡೋದಕ್ಕೋಸ್ಕರ ಮರದ ಪಟ್ಟಿಗೆ ಜಾಯಿಂಟ ಬಿಗಿಯೋದು ಅಗತ್ಯ. ಇಲ್ಲದೇ ಹೋದರೆ, ಪಟ್ಟಿ ಗೋಡೆಯ ಮೇಲೆ ಬಿದ್ದು ಮುರೀತದೆ."

"ನಿಜವೇ ಅನ್ನು,—ಇದರ ಮನೆ ಹಾಳಾಗ!" ಎಂದು ನನ್ನ ಯಜಮಾನ ಗೊಣಗುತ್ತಿದ್

ನನ್ನ ಮಲತಂದೆ ಹೊರಹೋದೊಡನೆ, ನನ್ನ ಯಜಮಾನನ ಹೆಂಡತಿ ಅನ್ನುತ್ತಿದ್ದಳು:

"ಹೀಗೆ ನಿನಗೆ ಕಲಿಸಿಕೊಡೋದಕ್ಕೆ ಅವನಿಗೆ ಯಾಕೆ ನೀನು ಆಸ್ಪದಕೊಡ್ತೀಯಾ?"

ರಾತ್ರಿಯ ಊಟದ ಅನಂತರ ಯಾವಾಗಲೂ ನನ್ನ ಮಲತಂದೆ, ತನ್ನ ಹಲ್ಲುಗಳನ್ನು ಶು ಗೊಳಿಸುತ್ತಿದ್ದ, ಬಾಯಿ ಮುಕ್ಕಳಿಸುತ್ತಿದ್ದ; ತಲೆಯನ್ನು ಹಿಂದಕ್ಕೆ ಹಾಕಿ ಹಾಗೆ ಮಾಡುವಾ ಅವನ ಗಂಟಲ ಮೊನೆ ಯಾವಾಗಲೂ ಎದ್ದು ಕಾಣಿಸುತ್ತಿತ್ತು. ಇದರಿಂದ ನನ್ನ ಕಿರಿ ಯಜಮಾನಿತಿ—ಯಾವ ಕಾರಣಕ್ಕೋ ಏನೋ—ವಿಶೇಷವಾಗಿ ಸಿಡಿಮಿಡಿಗೊಳ್ಳುತ್ತಿದ್ದಳು.

ಒಮ್ಮೆ, ಇಂಪಾಗಿರದ ಧ್ವನಿಯಲ್ಲಿ ಅವಳೆಂದಳು:

"ಯೆವ್‌ಜೆನಿ ವಾಸಿಲ್ಯೇವಿಶ್. ಆ ರೀತಿ ಹಿಂದಕ್ಕೆ ಬಾಗೋದು ನಿನಗೆ ಅಪಾಯಕರ ಅಂ ನನಗನಿಸುತ್ತೆ."

ಅವನು ಸುಮ್ಮನೆ ಮುಗುಳುನಕ್ಕ; ವಿನಯದಿಂದ ಕೇಳಿದ:

"ಅಂಥಾದ್ದನ್ನು ನೀನು ಯೋಚಿಸೋದಕ್ಕೆ ಏನು ಕಾರಣ?"

"ಏನು ಅಂದರೆ—ಹೀಗೇ ಸುಮ್ಮನೆ."

ಸಣ್ಣದೊಂದು ಮೂಳೆಯ ಕಡ್ಡಿಯನ್ನು ಹೊರತೆಗೆದು, ನೀಲಿ ವರ್ಣಕ್ಕೆ ತಿರುಗಿದ್ದ ಬೆ ಉಗುರುಗಳನ್ನು ಆತ ಸ್ವಚ್ಛಪಡಿಸತೊಡಗಿದ.

ಅವನು ಹೊರಹೋದಾಗ ಒಡತಿ ಉದ್ಗರಿಸಿದಳು:

"ಏನಂತೀಯಾ ನೀನು? ಅವನು ತನ್ನ ಉಗುರುಗಳನ್ನು ಕೂಡಾ ಸ್ವಚ್ಛಪಡಿಸ್ತಾನೆ! ಒಂ ಪಾದ ಗೋರಿಯೊಳಗಿದೆ, ಆದರೂ...."

ನನ್ನ ಯಜಮಾನ ನಿಟ್ಟುಸಿರುಬಿಟ್ಟ:

"ತ್ಸ-ತ್ಸ! ಕೂಗಾಡೋ ಕೋಳಿಮರಿಗಳೇ, ಎಂಥ ಬೆಪ್ಪುಗಳು ನೀವು."

"ಯಾಕಪ್ಪ ಹಾಗೆ ನೀನು ಹೇಳ್ಬೇಕು?" ಎಂದು ಅವನ ಹೆಂಡತಿ ಆಕ್ಷೇಪಿಸಿದಳು.

ರಾತ್ರೆ ಮುದುಕಿ ದೇವರೊಡನೆ ಕಹಿಯಾದ ಮನಸ್ಸಿನಿಂದ ದೂರಿಕೊಳ್ಳುತ್ತಿದ್ದಳು:

"ಆ ಕೊಳೀತಿರೋ ಪ್ರಾಣೀನ ಒತ್ತಾಯಪೂರ್ವಕವಾಗಿ ನನ್ನ ಮೇಲೆ ಹೇರಿದಾರೆ. ಪುನಃ ವಿಕ್ಟರನನ್ನು ಹಿನ್ನೆಲೆಗೆ ತಳ್ಳಿದ್ದಾಗಿದೆ."

ನನ್ನ ಮಲತಂದೆಯ ರೀತಿಗಳನ್ನು,—ನಿಧಾನವಾದ ನಡಿಗೆ, ಶ್ರೀಮಂತ ಕೈಗಳ ದೃಢವ ಚಲನವಲನಗಳು, ಟೈಯನ್ನು ಕಟ್ಟಿಕೊಳ್ಳುತ್ತಿದ್ದ ಜಾಣ್ಮೆ, ತುಟಿಗಳನ್ನು ಚಪ್ಪರಿಸದೆಯೇ ತಿನು ಸಾಮರ್ಥ್ಯ—ಇವನ್ನೆಲ್ಲಾ ವಿಕ್ಟರ್ ಅನುಕರಿಸತೊಡಗಿದ. ಅವನು ಯಾವಾಗಲೂ ಒರಟ ಕೇಳುತ್ತಿದ್ದ:

"ಮಾಕ್ಸಿಮೋವ್, ಫ್ರೆಂಚ್ ಭಾಷೇಲಿ 'ಮೊಣಕಾಲ ಗಂಟಿ'ಗೆ ಏನೂಂತ ಹೇಳ್ತಾರೆ?"
ನನ್ನ ಹೆಸರು ಯೆವ್‌ಜೆನಿ ವಾಸಿಲ್ಯೇವಿಶ್ ಅಂತ," ಎಂದು ನನ್ನ ಮಲತಂದೆ ತಿದ್ದುತ್ತಿದ್ದ:
ಆಗಲಿ, ಆಗಲಿ. 'ಎದೆ' ಗೆ ಏನೂಂತ ಹೇಳೋದು?"
ರಾತ್ರಿಯೂಟದ ಮೇಜಿನಬಳಿ, ತಾಯಿಗೆ ವಿಕ್ಟರ್ ಆಜ್ಞಾಪಿಸುತ್ತಿದ್ದ:
"ಮಾ ಮೇರ್, ದೊನ್ನೆಜ್-ಮೋಯ್ ಎನ್ಕೋರ್‌ದು ಜೋಳ ಬೆರೆಸಿದ ಮಾಂಸ."
ಅತಿಯಾಗಿ ಕಚಗುಳಿ ಇಟ್ಟಂತಾಗಿ, ಮುದುಕಿ ಉದ್ಗರಿಸುತ್ತಿದ್ದಳು:
"ಓ ಫ್ರೆಂಚ್ ಮನುಷ್ಯ! ನಿನ್ನ-ನಿನ್ನ-!"
ನನ್ನ ಮಲತಂದೆ ನಿಶ್ಚಲನಾಗಿ ಕುಳಿತು, ತಾನು ಕಿವುಡ ಮೂಗನೇನೋ ಎನ್ನುವಂತೆ ಯಾರೆಡೆಗೂ ದೃಷ್ಟಿಹಾಯಿಸದೆ, ತನ್ನ ಮಾಂಸವನ್ನು ಜಗಿಯುತ್ತ ಇರುತ್ತಿದ್ದ.
ಒಂದು ದಿನ ಹಿರಿಯವನು ಕಿರಿಯವನಿಗೆ ಅಂದ:
"ವಿಕ್ಟರ್, ಈಗ ನೀನು ಫ್ರೆಂಚ್ ಮಾತನಾಡೋದಕ್ಕೆ ಕಲಿತಿರೋದರಿಂದ, ಯಾರಾದರೂ ...ಳನ್ನು ಇನ್ನು ಇಟ್ಟುಕೊಳ್ಳೋದು ಮೇಲು."
ಆಗೊಮ್ಮೆ ಮಾತ್ರ ನನ್ನ ಮಲತಂದೆ ಶಾಂತವಾಗಿ ಮುಗುಳುನಕ್ಕುದನ್ನು ನಾನು ಕಂಡಂತೆ ...ಪು.
ಆದರೆ ನನ್ನ ಯಜಮಾನನ ಹೆಂಡತಿ, ಕೋಪಾವಿಷ್ಟಳಾಗಿ ಚಮಚವನ್ನು ಕೆಳಕ್ಕೆಸೆದು, ...ನ್ನ ಗಂಡನಮೇಲೆ ರೇಗಾಡಿದಳು:
"ನನ್ನೆದುರು ಅಂಥ ನಿರ್ಲಜ್ಜ ಸಂಗತಿಗಳನ್ನು ಹೇಳೋಕೆ ಎಷ್ಟು ಧೈರ್ಯ ನಿನಗೆ!"
ನಾನು ಮಲಗುತ್ತಿದ್ದುದು ಹಿತ್ತಿಲಬಾಗಿಲ ಹಾದಿಯಲ್ಲಿ, ಮಹಡಿ ಮೆಟ್ಟಲುಗಳ ಕೆಳಗೆ. ...ವೇಳೆ ನನ್ನ ಮಲತಂದೆ ಅಲ್ಲಿಗೆ ಬಂದು, ನನ್ನ ಜತೆ ಸ್ವಲ್ಪ ಹೊತ್ತು ಕಳೆಯುತ್ತಿದ್ದ. ಇಲ್ಲಿ ...ಹಡಿಹಾದಿಯ ಕಿಟಕಿಬಳಿ ನಾನು ಪುಸ್ತಕಗಳನ್ನೋದುತ್ತಿದ್ದೆ.
"ಓದ್ತಿದೀಯಾ?" ಎಂದು ಆತ ಒಮ್ಮೆ ನನ್ನನ್ನು ಕೇಳಿದ. ಆತ ಮಾತನಾಡಿದುದು, ...ಗರೇಟಿನ ಬಹಳಷ್ಟು ಹೊಗೆಯನ್ನು ಒಳಕ್ಕೆಳೆದುಕೊಂಡು. ಆಗ ಅವನ ಎದೆಗೂಡಿನೊಳ ...ನೋ ಉರಿಯುವ ಕೊಳ್ಳಿಗಳಂತೆ ಚುರು ಚುರು ಸದ್ದಾಯಿತು. ಅವನು ಮತ್ತೂ ಕೇಳಿದ:
"ಯಾವ ಪುಸ್ತಕ?"
ಅದನ್ನು ಅವನಿಗೆ ನಾನು ತೋರಿಸಿದೆ.
ಶೀರ್ಷಿಕೆಯ ಕಡೆಗೆ ದೃಷ್ಟಿಹಾಯಿಸಿ ಅವನೆಂದ:
"ಓ, ಇದನ್ನು ನಾನು ಓದಿದೇನೇಂತ ಕಾಣುತ್ತೆ. ಸಿಗರೇಟು ಕೊಡಲಾ?"
ಕಿಟಕಿಯ ಹೊರಗೆ ಕೊಳಕು ಅಂಗಳದ ಕಡೆ ದಿಟ್ಟಿಸುತ್ತಾ, ನಾವಿಬ್ಬರೂ ಸಿಗರೇಟು ...ದಿದೆವು. ಅವನೆಂದ:
"ನೀನು ಕಲಿಯೋಕಾಗೋದಿಲ್ಲ ಅಂತ ಬಹಳ ಕೆಡುಕೆನಿಸುತ್ತೆ. ನಿನ್ನಲ್ಲಿ ಸಾಮರ್ಥ್ಯ ...ದೇಂತ ಅನಿಸ್ತದೆ."
"ನಾನು ಕಲೀತಿದೀನಲ್ಲ—ಬಹಳ ಓದ್ತಿದೀನಿ—"
"ಅದು ಸಾಲದು. ನಿನಗೆ ಶಾಲಾ ವಿದ್ಯಾಭ್ಯಾಸಬೇಕು, ವ್ಯವಸ್ಥಿತ ಶಿಕ್ಷಣ ಬೇಕು."

'ನನ್ನ ಸೊಗಸಾದ ಸದ್ಗೃಹಸ್ಥ, ಶಾಲಾವಿದ್ಯಾಭ್ಯಾಸ—ವ್ಯವಸ್ಥಿತ ಶಿಕ್ಷಣವೆಲ್ಲ ನಿ
ಆಗಿದೆಯಲ್ಲ. ಅದರಿಂದ ನಿನಗಾಗಿರೋ ಒಳಿತೇನು?' ಎಂದು ಅವನಿಗೆ ಕೇಳಬೇಕೆನಿಸಿತು.

ನನ್ನ ಯೋಚನೆಗಳನ್ನು ಊಹಿಸಿಕೊಳ್ಳುತ್ತಿರುವನೇನೋ ಎನ್ನುವಂತೆ, ಅವನು ಮ
ಸೇರಿಸಿದ:

"ಒಬ್ಬನಲ್ಲಿ ಉದ್ದೇಶಸಾಧನೆಯ ಬಲವಿದ್ದರೆ, ಶಾಲೆ ಒಳ್ಳೆಯ ತರಬೇತನ್ನು ಕೊಡ
ಈ ಬದುಕನ್ನು ಹಿಡಿದು ಜಗ್ಗೋ ಸಾಮರ್ಥ್ಯವಿರೋದು ಸುಶಿಕ್ಷಿತರಿಗೆ ಮಾತ್ರ."

ಆತ ಎಷ್ಟೋ ಸಾರೆ ನನಗೆ ಅಂದ:

"ಇಲ್ಲಿಂದ ನೀನು ಹೊರಟುಹೋಗೋದು ಒಳ್ಳೇದು. ಇಲ್ಲಿರೋದರಿಂದ ಯಾವ ಪ್ರಯೋ
ವಾಗಲೀ ಅನುಕೂಲವಾಗಲೀ ನಿನಗೆ ಆಗೋ ಮಟ್ಟಿಗೆ ಕಾಣೆ."

"ಆದರೆ ನಾನು ಕೆಲಸಗಾರರನ್ನು ಇಷ್ಟಪಡ್ತೇನೆ."

"ಇಷ್ಟಪಡುವಂಥಾದ್ದನ್ನು ಅವರಲ್ಲಿ ಏನು ಕಾಣ್ತೀಯಾ?"

"ಅವರ ಜತೆ ಬೇಸರವೆನಿಸೋದಿಲ್ಲ."

"ಇದ್ದರೂ ಇದ್ದೀತು...."

ಒಮ್ಮೆ ಅವನೆಂದ:

"ವಾಸ್ತವವಾಗಿ ಹೇಳೋದಾದರೆ, ಎಂಥಾ ಮೃಗಗಳಪ್ಪ ನಮ್ಮ ಮಾಲಿಕರು ಎ
ಮೃಗಗಳು!"

ಎಲ್ಲಿ, ಯಾವ ಪರಿಸ್ಥಿತಿಯಲ್ಲಿ, ಅದೇ ಪದವನ್ನು ನನ್ನ ತಾಯಿ ಬಳಸಿದ್ದಳೆಂಬುದು ನೆ
ದಾಗ, ನನಗರಿಯದಂತೆಯೇ ನನ್ನ ಮನಸ್ಸು ಮುದುಡಿತು.

"ಹೌದಲ್ಲವೇ?" ಎಂದು ಮುಗುಳುನಗೆಯೊಡನೆ ಅವನು ಕೇಳಿದ.

"ಹೌದು—ಹೌದು."

"ನಿನ್ನ ಅಭಿಪ್ರಾಯ ಏನು ಅನ್ನೋದು ನನಗೆ ಕಾಣ್ತಲೇ ಇದೆ."

"ಆದರೂ ನನ್ನ ಯಜಮಾನನನ್ನು ನಾನು ಇಷ್ಟಪಡ್ತೀನಿ."

"ಅವನು ಒಳ್ಳೇ ಸ್ವಭಾವದ ರೈತನ ಹಾಗೆ ತೋರುತ್ತಿರೋದು ನಿಜವೇ. ಆದರೆ ಅವನ
ಹಾಸ್ಯಾಸ್ಪದವಾಗಿರ್ತದೆ."

ಅವನ ಜತೆ ಪುಸ್ತಕಗಳನ್ನು ಕುರಿತು ಚರ್ಚಿಸಬೇಕೆಂದು ನಾನು ಇಷ್ಟಪಟ್ಟೆ.
ಪುಸ್ತಕಗಳ ಬಗೆಗೆ ಅವನಿಗೇನೂ ಆಸಕ್ತಿ ಉಳಿದಿರಲಿಲ್ಲವೆಂಬುದು ಸ್ವಯಂ ವ್ಯಕ್ತವಾಗಿತ್ತು

ಆಗಾಗ್ಗೆ ಅವನೆನ್ನುತ್ತಿದ್ದ:

"ಪುಸ್ತಕಗಳ ಜತೆ ಬಹಳ ಹೆಚ್ಚುಹೊತ್ತು ಕಳೆಯಬೇಡ. ಪುಸ್ತಕಗಳಲ್ಲಿರೋದೆಲ್ಲಾ
ಶಯೋಕ್ತಿಯೇ. ಈ ದಿಕ್ಕಿಗೋ ಆ ದಿಕ್ಕಿಗೋ ವಿರೂಪವಾಗಿರ್ತದೆ. ಹೆಚ್ಚಿನ ಗ್ರಂಥಕ
ಇಲ್ಲಿರೋ ನಮ್ಮ ಯಜಮಾನನ ಹಾಗೆ—ಸಣ್ಣ ಮನಸ್ಸಿನ ಜನರು."

ಅಂತಹ ಅಭಿಪ್ರಾಯಗಳು ಬಹಳ ಎದೆಗಾರಿಕೆಯವಾಗಿ ನನಗೆ ಕಂಡುವು. ಅ
ಗೋಸ್ಕರ ಆತನನ್ನು ನಾನು ಮೆಚ್ಚಿದೆ.

"ಗೊಂಚರೋವನ ಕೃತಿಗಳನ್ನು ನೀನು ಓದಿರುವೆಯೇನೋ?" ಎಂದು ಒಂದು

ವನು ನನ್ನನ್ನು ಕೇಳಿದ.

"ಸಮರನೌಕೆ ಪಲ್ಲಾಡ," ಎಂದು ನಾನು ಉತ್ತರವಿತ್ತೆ.

"ಪಲ್ಲಾಡ ಸಪ್ಪೆ ಪುಸ್ತಕ. ಆದರೆ ಒಟ್ಟಿನಲ್ಲಿ ಗೊಂಚರೋವ್, ರಷ್ಯಾದಲ್ಲಿ ಅತ್ಯಂತ ಬುದ್ಧಿವಂತನಾದ ಲೇಖಕ. ಅವನ 'ಒಬ್ಲೊಮೋವ್' ನೀನು ಓದಬೇಕೂಂತ ಸಲಹೆ. ಅದು ಅವನ ಪುಸ್ತಗಳಲ್ಲೆಲ್ಲಾ ಅತ್ಯಂತ ಧೀರ ಹಾಗೂ ಸತ್ವಪೂರ್ಣವಾದದ್ದು. ಅಲ್ಲದೆ, ಒಟ್ಟಿನಲ್ಲಿ ರಷ್ಯನ್ ಸಾಹಿತ್ಯದಲ್ಲೇ ಅದು ಅತ್ಯುತ್ತಮ ಕೃತಿ."

ಡಿಕೆನ್ಸ್‌ನನ್ನು ಕುರಿತು ಅವನೆಂದ:

"ಕಚಡಾ—ನನ್ನ ಮಾತನ್ನು ನೀನು ನಂಬಬಹುದು. ಆದರೆ ನ್ಯೂ ಟೈಮ್ಸ್‌ನ ಪುರವಣಿಯಲ್ಲಿ ಸ್ವಾರಸ್ಯವಾದ್ದೊಂದು ಈಗ ಅಚ್ಚಾಗ್ತಿದೆ—ಸಂತ ಅಂಥಣಿಯ ಮೋಹದ ಸುಳಿ," ಅಂತ. ಅದನ್ನು ನೀನು ಓದಬೇಕು. ಇಗರ್ಜಿ, ಮತಸಂಬಂಧದ ವಿಷಯಗಳೆಲ್ಲಾ ನಿನಗೆ ಇಷ್ಟವಂತಲ್ಲ? 'ಮೋಹದ ಸುಳಿ' ಓದೋದರಿಂದ ನಿನಗೆ ಒಳಿತಾಗ್ತದೆ."

ಸ್ವತಃ ಆತನೇ ಆ ಪುರವಣಿಗಳ ಒಂದು ಹೊರೆಯನ್ನು ನನಗೋಸ್ಕರ ತಂದ. ಫ್ಲಾಬೇರನ ಈ ವಿಚಾರ ಪ್ರಚೋದಕ ಕೃತಿಯನ್ನು ನಾನು ಓದಿದೆ. ನಾನಾಗಲೇ ಓದಿದ್ದ ಅಸಂಖ್ಯಾತ ಸಂತರ ಜೀವನಗಳ ಹಾಗೂ ಪುರಾತನ ವಾದಿಗಳು ಹೇಳಿದ್ದ ಕೆಲ ಕಥೆಗಳ ನೆನಪನ್ನು ಅದು ಹುಟ್ಟಿಸಿತು. ಆದರೆ, ಬಹಳ ಆಳವಾದ ಪರಿಣಾಮವನ್ನೇನೂ ನನ್ನ ಮೇಲೆ ಅದು ಉಂಟುಮಾಡಲಿಲ್ಲ: ಅದೇ ಪುರವಣಿಯಲ್ಲಿ 'ಪ್ರಾಣಿಗಳ ತರಬೇತುಗಾರ ಉಪಿಲಿಯೊ ಮಾಲಿಯ ಸಂಸ್ಮರಣೆಗಳು' ಎಂಬ ಧಾರಾವಾಹಿ ಕಥೆ ಇತ್ತು. ಫ್ಲಾಬೇರನ ಕೃತಿಗಿಂತಲೂ ಅದರ ವಾಚನದಿಂದ ನಮಗೆ ಹೆಚ್ಚು ಸಂತೋಷ ದೊರೆಯಿತು.

ಹೀಗೆಂದು ನನ್ನ ಮಲತಂದೆಯ ಎದುರು ನಾನು ಹೇಳಿದಾಗ, ಶಾಂತವಾಗಿ ಅವನೆಂದ:

"ಅಂಥಾದ್ದನ್ನೆಲ್ಲ ಓದೋಕೆ ನಿನಗಿನ್ನೂ ಚಿಕ್ಕ ವಯಸ್ಸೂಂತ ಇದರ ಅರ್ಥ. ಆದರೆ, ಆ ಪುಸ್ತಕದ ವಿಷಯ ಮರೀಬೇಡ.

ಕೆಲವುಸಾರೆ, ಬಹಳ ಹೊತ್ತಿನವರೆಗೂ, ಒಂದು ಮಾತನ್ನೂ ಆಡದೆ ಬರೀ ಕೆಮ್ಮುತ್ತ ಹೊಗೆಯ ಮೋಡಗಳನ್ನು ಹೊರಬಿಡುತ್ತ ನನ್ನ ಜತೆ ಆತ ಕುಳಿತುಕೊಳ್ಳುತ್ತಿದ್ದ. ಅವನ ಸುಂದರ ಕಣ್ಣುಗಳಲ್ಲಿ, ಭಯ ಹುಟ್ಟಿಸುವಂತಹ ಹೊಳಪಿತ್ತು. ಮೌನವಾಗಿ ಅವನೆಡೆಗೆ ನೋಡುತ್ತ ಅಲ್ಲಿ ಕುಳಿತಾಗ, ಯಾವ ಗೊಣಗಾಟವೂ ಇಲ್ಲದೆ ಸರಳ ರೀತಿಯಲ್ಲಿ ಸಾಯುತ್ತಲಿದ್ದ ಈ ಮನುಷ್ಯ ಒಮ್ಮೆ ನನ್ನ ತಾಯಿಯೊಡನೆ ಆತ್ಮೀಯವಾಗಿದ್ದನೆಂಬುದನ್ನು, ಅವಳೊಡನೆ ಕ್ರೂರ ರೀತಿಯಲ್ಲಿ ನಡೆದುಕೊಂಡಿದ್ದನೆಂಬುದನ್ನು, ನಾನು ಮರೆತೆ. ಈಗ ಯಾವಳೋ ಸಿಂಪಿಗ ಹೆಣ್ಣಿನ ಜತೆ ಅವನು ಇರುತ್ತಿದ್ದುದು ನನಗೆ ಗೊತ್ತಿತ್ತು. ಅವಳ ಬಗೆಗೆ ಅಚ್ಚರಿಯಿಂದಲೂ ಕರುಣೆಯಿಂದಲೂ ನಾನು ಯೋಚಿಸಿದೆ. ಆ ನೀಳ ಎಲುಬುಗಳನ್ನು ಅಪ್ಪಿಕೊಳ್ಳುವುದು, ದುರ್ಗಂಧದ ಉಸಿರು ಬರುತ್ತಿದ್ದ ಆ ಬಾಯನ್ನು ಚುಂಬಿಸುವುದು, ಅವಳಿಗೆ ಹೇಗೆ ಸಹ್ಯವಾಗುತ್ತಿತ್ತು ?

'ಭೇಷ್'ನಂತೆ ನನ್ನ ಮಲತಂದೆಯೂ ಅತ್ಯಂತ ನವೀನವಾದ ಅಭಿಪ್ರಾಯಗಳನ್ನು ಹೆದ್ದಕ್ಕಿದ್ದಂತೆ ವ್ಯಕ್ತಪಡಿಸುತ್ತಿದ್ದ.

"ಬೇಟೆನಾಯಿಗಳು ನನಗೆ ಇಷ್ಟ. ಅವು ಮೂರ್ಖವಾಗಿರುತ್ತವೆ—ಆದರೂ ಅವುಗಳನ್ನು

ನಾನು ಇಷ್ಟಪಡ್ತೀನಿ. ಅವು ಬಹಳ ಸುಂದರವಾಗಿರ್ತವೆ. ಸುಂದರಿಯರಾದ ಹೆಂಗಸ ಸಾಮಾನ್ಯವಾಗಿ ಬಹಳ ಮೂರ್ಖರಾಗಿರ್ತಾರೆ."

ನನ್ನಷ್ಟಕ್ಕೆ ನಾನು, ತುಸು ಹೆಮ್ಮೆಯಿಂದಲೇ, ಅಂದುಕೊಂಡೆ:

"ಮಾರ್ಗೊಟ್‌ರಾಣಿಯ ಪರಿಚಯವಿರಬೇಕಿತ್ತು ನಿನಗೆ!"

ಬಹಳಕಾಲ ಜತೆಯಾಗಿ ವಾಸಿಸುವ ಜನರು, ಕ್ರಮೇಣ ಒಂದೇ ರೀತಿಯಾಗಿ ಕಾಣಿ ರೂಪುಗೊಳ್ತಾರೆ," ಎಂದು ಒಂದು ದಿನ ಅವನೆಂದ. ಇದನ್ನು ನಾನು ಟಿಪ್ಪಣಿ ಪುಸ್ತಕ ಬರೆದುಕೊಂಡೆ.

ಅವನ ನಿರ್ಧಾರದ ನುಡಿಗಳನ್ನು ನಾನು ಪರಮಾಶೀರ್ವಾದವೆಂದು ಇದಿರುನೋಡುತ್ತಿ ಹಳೆಯದಾದ ಬೇಸರ ಬರಿಸುವಂತಹ ಪ್ರಕಾರಗಳಲ್ಲಿ ಹೆಪ್ಪುಗಟ್ಟಿದ ಸಪ್ಪಗಿನ ಭಾಷೆಯ ಪ್ರತಿಯೊಬ್ಬರೂ ಮಾತನಾಡುತ್ತಿದ್ದ ಆ ಮನೆಯಲ್ಲಿ, ನವೀನ ಪದಪ್ರಯೋಗಗಳನ್ನು ಕೇಳ ದೊಂದು ಹರ್ಷವಾಗಿತ್ತು.

ನನ್ನ ಮಲತಂದೆ, ನನ್ನ ತಾಯಿಯ ವಿಷಯವಾಗಿ ನನ್ನೊಡನೆ ಎಂದೂ ಮಾತನಾಡಲಿ ಅವಳ ಹೆಸರನ್ನೂ ಕೂಡಾ ಎಂದೂ ಆತ ಉಚ್ಚರಿಸಿದ ಹಾಗಿಲ್ಲ. ಇದರಿಂದ ನಾನು ಸಂತ ನಾದೆ; ಅವನ ವಿಷಯದಲ್ಲಿ ಒಂದು ಬಗೆಯ ಗೌರವ ನನ್ನಲ್ಲಿ ಹುಟ್ಟಿತು.

ಒಂದು ದಿನ ದೇವರ ವಿಚಾರವಾಗಿ ಅವನನ್ನು ನಾನು ಕೇಳಿದೆ. ಯಾವ ಸಂದರ್ಭ ಎಂಬುದು ನೆನಪಿಲ್ಲ. ನನ್ನಕಡೆ ದಿಟ್ಟಿಸಿ, ಬಹಳ ಶಾಂತವಾಗಿ, ಅವನು ಉತ್ತರವಿತ್ತ:

"ನನಗೆ ಗೊತ್ತಿಲ್ಲ. ದೇವರಲ್ಲಿ ನನಗೆ ನಂಬಿಕೆ ಇಲ್ಲ."

ನನಗೆ ಸಿತಾನೋವನ ನೆನಪಾಯಿತು ಅವನ ವಿಷಯವಾಗಿ ನಾನು ಮಲತಂದೆಗೆ ಹೇ ನಾನು ಹೇಳಿ ಮುಗಿಸಿದಾಗ, ಮೊದಲಿನಷ್ಟೇ ಶಾಂತವಾಗಿ ಅವನೆಂದ:

"ಆತ ವಿವೇಚನೆಯಿಂದ ಮಾತಾಡ್ತಾನೆ. ವಿವೇಚನೆಯಿಂದ ಮಾತನಾಡುವವ ಯಾವಾಗಲೂ ಒಂದಲ್ಲ ಒಂದರಲ್ಲಿ ನಂಬಿಕೆ ಇರ್ತದೆ. ನನಗೆ ನಂಬಿಕೆ ಅನ್ನೋದೇ ಇಲ್ಲ."

"ಆದರೆ ಅದು ಅಶಕ್ಯಕೋಟಿಯ ಮಾತು!"

"ಯಾಕೆ? "ನೀನೇ ನೋಡ್ತೀಯಲ್ಲ-ಯಾವುದರಲ್ಲೂ ನನಗೆ ನಂಬಿಕೆ ಇಲ್ಲ."

ನಾನು ನೋಡುತ್ತಿದ್ದುದು ಒಂದೇ ಒಂದನ್ನು-ಆತ ಸಾಯುತ್ತಿದ್ದನೆಂಬುದನ್ನು. ಅ ಬಗೆಗೆ ನನಗೆ ಕರುಣೆ ಇತ್ತೆಂದೇನೂ ಹೇಳುವಂತಿಲ್ಲ. ಆದರೆ, ಸಹಬಾಂಧವನೊಬ್ಬನ ಮ ಸ್ವತಃ ಸಾವಿನ ರಹಸ್ಯ-ನನ್ನ ಮೇಲೆ ಆಳವಾದ ಪರಿಣಾಮವನ್ನುಂಟುಮಾಡಿದುದು ಅದೇ ಮೊ ಬಾರಿ.

ಇಲ್ಲೊಬ್ಬ ಮನುಷ್ಯ, ತನ್ನ ಮೊಣಕಾಲನ್ನು ನನಗೆ ತಾಗಿಸಿ ಸಮೀಪವಾಗಿ ಕುಳಿ ಸಂವೇದನಾಜೀವಿ; ಬುದ್ಧಿವಂತ; ತನ್ನೊಡನೆ ಅವರಿಗಿದ್ದ ಸಂಬಂಧಕ್ಕನುಗುಣವಾಗಿ ಜನ ಕಾಣುತ್ತಿದ್ದವನು, ತೀರ್ಪುಕೊಡಲು, ಸಿದ್ಧಾಂತಗಳಿಗೆ ಬರಲು, ಹಕ್ಕು ಇದ್ದವನ ಎಲ್ಲದರ ಬಗೆಗೂ ಮಾತನಾಡುತ್ತಿದ್ದವನು; ನನಗೆ ಅತ್ಯವಶ್ಯವಾದುದೇನನ್ನೋ ಉಳ್ಳವ ಅಥವಾ ಅನವಶ್ಯವಾದುದನ್ನು ಅಲಕ್ಷ್ಯದಿಂದ ಕಾಣುವವನು; ಇಷ್ಟೇ ಎಂದು ಹೇಳಲಾಗ ಜಟಿಲನಾದಪ್ರಾಣಿ; ವಿಚಾರದ ಜ್ವಾಲಾಮುಖಿಯೋ ಎನ್ನುವಂತಹ ವ್ಯಕ್ತಿ. ಅವನ ಬಗೆಗೆ

ಾವನೆ ಏನೇ ಇರಲಿ, ನನ್ನೊಂದು ಅಂಶವನ್ನೇ ಅವನು ಪ್ರತಿನಿಧಿಸುತ್ತಿದ್ದ; ನನ್ನೊಳಗೆಲ್ಲೋ ಾಸಿಸುತ್ತಿದ್ದ ಜೀವಿಯಾಗಿದ್ದ. ಅವನ ಬಗೆಗೆ ನಾನು ಯೋಚಿಸುತ್ತಿದ್ದೆ. ಅವನ ಆತ್ಮದ ನೆರಳು ನ್ನದಕ್ಕೆ ಅಡ್ಡವಾಗಿರುತ್ತಿತ್ತು. ಅವನ ತಲೆಯಲ್ಲೂ ಹೃದಯದಲ್ಲೂ ಸುಳಿಯುತ್ತಿದ್ದ ಎಲ್ಲದ ೂಡನೆ, ಅವನ ಸುಂದರ ಕಣ್ಣುಗಳಲ್ಲಿ ನಾನು ಓದುತ್ತಿದ್ದಂತೆ ಕಂಡ ಎಲ್ಲದರೊಡನೆ, ನಾಳೆ ಅವನು ಅದೃಶ್ಯನಾಗುವ-ಸಂಪೂರ್ಣವಾಗಿ ಅದೃಶ್ಯನಾಗುವ. ಅವನು ಅದೃಶ್ಯನಾದಾಗ, ಈ ಜಗತ್ತಿಗೆ ನನ್ನನ್ನು ಬಂಧಿಸಿರುವ ದಾರಗಳಲ್ಲೊಂದು ಕಡಿದುಹೋಗುವುದು. ನೆನಪೊಂದೇ ುಳಿಯುವುದು. ಜೀವಂತನಾದ, ಬದಲಾಗುತ್ತಿರುವ, ಮನುಷ್ಯ ಹೊರಟುಹೋದರೂ ಈ ನಪು ಬದಲಾವಣೆಯಿಲ್ಲದೆ, ಸಂಪೂರ್ಣವಾಗಿ, ನನ್ನೊಳಗೇ ಅಖಂಡವಾಗಿ ವಾಸಿಸುವುದು.....

ಆದರೆ ಇವು ಬರೇ ಯೋಚನೆಗಳು ಮಾತ್ರ. ಇವುಗಳಾಚೆಗೆ ಯೋಚನೆಗೆ ಜನ್ಮವಿತ್ತು ಪೋಷಿಸು ಂತಹ ಇಂತಹದೇ ಎಂದು ಹೇಳಲಾಗದ ಏನೋ ಒಂದಿದೆ. ಜೀವವೈಚಿತ್ರ್ಯದ ಬಗೆಗೆ ಚಿಂತಿಸು ಂತೆ ಅಧಿಕಾರವಾಣಿಯಿಂದ ಒತ್ತಾಯಿಸುವಂತಹ, 'ಯಾಕೆ?' ಎನ್ನುವ ಪ್ರಶ್ನೆಗೆ ಉತ್ತರ ೀಡುವಂತೆ ಆಗ್ರಹಿಸುವಂತಹ, ಎಂಥದೋ ಒಂದಿದೆ.

ಮಳೆ ಸುರಿಯುತ್ತಿದ್ದ ಒಂದು ದಿನ ನನ್ನ ಮಲತಂದೆ ಅಂದ:

"ನಾನಿನ್ನು ಬೇಗನೆ ಹಾಸಿಗೆ ಹಿಡೀತೀನೀಂತ ಕಾಣುತ್ತಪ್ಪ. ಎಂಥ ಮೂರ್ಖ ದೌರ್ಬಲ್ಯ! ಂದು ಕೆಲಸ ಮಾಡೋದಕ್ಕೂ ಮನಸ್ಸಾಗೋದಿಲ್ಲ!"

ಮೂರನೆಯ ಅಪರಾಹ್ನ ಚಹಾದ ವೇಳೆಗೆ, ಮೇಜು ಹಾಗೂ ಮೊಣಕಾಲುಗಳ ಮೇಲಿನಿಂದ ್ರೆಡ್ಡಿನ ಚೂರುಗಳನ್ನು ವಿಶೇಷ ಅಸಹನೆಯಿಂದ ಆತ ಝಾಡಿಸಿದ; ಅಗೋಚರವಾದುದೇನನ್ನೋ ೂಲಗಿಸುವವನಂತೆ ಕೈಬೀಸಿದ. ತನ್ನ ಹುಬ್ಬುಗಳೆಡೆಯಿಂದ ಅವನೆಡೆಗೆ ನೋಡುತ್ತ, ಸೊಸೆ ೊಡನೆ ಮುದುಕಿ ಪಿಸುನುಡಿದಳು-

"ಅಗೋ, ರೆಕ್ಕೆಪುಕ್ಕ ಸರಿಪಡಿಸಿಕೊಂಡು ಸಿದ್ಧವಾಗ್ತಿದಾನೆ."

ಎರಡು ದಿನಗಳ ಅನಂತರ ಆತ ಕೆಲಸಕ್ಕೆ ಬರಲಿಲ್ಲ. ಆ ಬಳಿಕ ಹಿರಿಯಯಜಮಾನಿತಿ ೊಡ್ಡದಾದೊಂದು ಬಿಳಿಯ ಲಕೋಟೆಯನ್ನು ನನ್ನ ಕೈಗೆ ಕೊಡುತ್ತ ಅಂದಳು:

"ಇಕೋ, ನಿನ್ನೆ ಮಧ್ಯಾಹ್ನದ ಹೊತ್ತಿಗೆ ಒಬ್ಬಳು ಹುಡುಗಿ ಇದನ್ನು ತಂದುಕೊಟ್ಟಳು; ನಗೆ ಕೊಡೋದಕ್ಕೆ ಮರೆತೆ. ಅವಳೊಂದು ಪುಟ್ಟಪ್ರಾಣಿ. ಆಕೆ ಯಾತಕ್ಕೆ ನಿನಗೆ ಚೀಟಿಗಳನ್ನ ್ತಿರಬೇಕೋ ಖಂಡಿತ ತಿಳೀದಪ್ಪ."

ಲಕೋಟೆಯೊಳಗೆ, ಆಸ್ಪತ್ರೆಯ ಒಂದು ಹಾಳೆಯಲ್ಲಿ, ದೊಡ್ಡ ಅಕ್ಷರಗಳಲ್ಲಿ ಬರೆದಿದ್ದ ಂದೇಶವಿತ್ತು:

"ಒಂದು ತಾಸಿನಷ್ಟು ವೇಳೆ ನಿನಗೆ ಬಿಡುವಿದೆಯೆಂದಾದರೆ ಬಂದುನೋಡು. ನಾನು ಾರ್ಟಿನೊವ್ಸ್ಕಾಯಾ ಆಸ್ಪತ್ರೇಲಿದ್ದೇನೆ. ವೈ. ಎಂ."

ಮಾರನೆಯ ಬೆಳಗ್ಗೆ ಆಸ್ಪತ್ರೆಯ ಒಂದು ವಾರ್ಡಿನಲ್ಲಿ, ನನ್ನ ಮಲತಂದೆಯ ಮಂಚದ ಾದದ ಬಳಿ, ನಾನು ಕುಳಿತಿದ್ದೆ. ಆತ ಮಂಚಕ್ಕಿಂತಲೂ ಹೆಚ್ಚು ಉದ್ದವಾಗಿದ್ದ. ಬೂದು ಾಲುಚೀಲಗಳಲ್ಲಿ ತೂಗಾಡುತ್ತಿದ್ದ ಅವನ ಪಾದಗಳು, ಮಂಚದ ಕಂಬಿಗಳೆಡೆಯಿಂದ ಹೊರಕ್ಕೆ ಣಿಕಿದ್ದುವು. ಅವನ ಸುಂದರ ಕಣ್ಣುಗಳು ಒಂದೇಸಮನೆ ಹಳದಿ ಗೋಡೆಗಳಮೇಲೆ ಅಲೆ

ಚಾಡುತ್ತ ನನ್ನ ಮುಖದಮೇಲೂ ಮಂಚದ ಶಿರೋಭಾಗದಲ್ಲಿ ಒಂದು ಸ್ಟೂಲಿನಮೇಲೆ ಕುಳಿತಿದ್ದ ಆ ಹುಡುಗಿಯ ಪುಟ್ಟ ಕೈಗಳ ಮೇಲೂ ವಿರಮಿಸುತ್ತ ಇದ್ದುವು. ಅವನ ದಿಂಬಿನಮೇಲೆ ತನ್ನ ಕೈಗಳನ್ನು ಆಕೆ ಇರಿಸಿದಾಗಲೆಲ್ಲ, ನನ್ನ ಮಲತಂದೆ ಅವುಗಳಿಗೆ ತನ್ನ ಗಲ್ಲವನ್ನೊತ್ತಿ, ತೆರೆದ ಬಾಯಿಯಿಂದ, ತೀಡುತ್ತಿದ್ದ. ಹುಡುಗಿ ದಪ್ಪಗಿದ್ದಳು; ಸರಳವಾದ ಕರಿದು ಪೋಷಾಕನ್ನು ತೊಟ್ಟಿದ್ದಳು. ಕೋಳಿ ತತ್ತಿಯಾಕಾರದ ಅವಳ ಮುಖದಮೇಲಿನಿಂದ ಕಂಬನಿಗಳು ನಿಧಾನವಾಗಿ ಕೆಳಕ್ಕೆ ಉರುಳುತ್ತಿದ್ದುವು. ನನ್ನ ಮಲತಂದೆಯ ಎದ್ದುಕಾಣಿಸುತ್ತಿದ್ದ ಮೂಳೆಗಳ ಮುರುಟಿ ಕೊಂಡ ಮೂಗಿನ, ನಿಸ್ತೇಜ ಬಾಯಿಯ ಮುಖದ ಮೇಲೆ ತನ್ನ ನೀಲಿ ಕಣ್ಣುಗಳನ್ನು ಆಕೆ ನೆಟ್ಟೇ ಇದ್ದಳು.

"ಧರ್ಮಗುರುವಿನ ಸಾನ್ನಿಧ್ಯಕ್ಕೆ ಇವನು ಒಪ್ಪಿದ್ದಿದ್ದರೆ.... ಆದರೆ ಇವನು ಒಪ್ಪೋದಿಲ್ಲ. ಇವನಿಗೆ ಅರ್ಥವಾಗೋದಿಲ್ಲ...."

ತನ್ನ ಕೈಗಳನ್ನು ದಿಂಬಿನಿಂದ ತೆಗೆದು, ಪ್ರಾರ್ಥಿಸುತ್ತಿರುವಳೇನೋ ಎಂಬಂತೆ ಎದೆಗೆ ಅವುಗಳನ್ನು ಆಕೆ ಒತ್ತಿಕೊಂಡಳು.

ಒಂದು ಕ್ಷಣದವರೆಗೆ ನನ್ನ ಮಲತಂದೆಯ ಮನಸ್ಸು ತಿಳಿಯಾಯಿತು. ಏನನ್ನೋ ನೆನೆಸಿಕೊಳ್ಳಲು ಯತ್ನಿಸುವವನಂತೆ ಹುಬ್ಬುಗಂಟಿಕ್ಕಿ ಛಾವಣಿಯಕಡೆಗೆ ಆತ ದಿಟ್ಟಿಸಿದ; ಬಳಿಕ ಜೀರ್ಣವಾಗಿದ್ದ ಕೈಯನ್ನು ನನ್ನೆಡೆಗೆ ಚಾಚಿದ.

ನೀನು? ಉಪಕೃತ. ಏನಾಯ್ತೂಂದ್ರೆ.... ತೀರಾ ಮೂರ್ಖನಹಾಗೆ ನನಗೆ ಅನಿಸ್ತಿದೆ...

ಇಷ್ಟು ಮಾತನಾಡಿದ್ದರಿಂದಲೇ ಅವನು ಬಳಲಿದ; ತನ್ನ ಕಣ್ಣುಗಳನ್ನು ಮುಚ್ಚಿಕೊಂಡ. ಅವನ ನೀಳವಾದ, ನೀಲಿವರ್ಣಕ್ಕೆ ತಿರುಗಿದ ಉಗುರುಗಳಿದ್ದ ತಣುಪಾದ ಬೆರಳುಗಳನ್ನು ನಾನು ಮೃದುವಾಗಿ ತಟ್ಟಿದೆ. ಹುಡುಗಿ ಮೆಲುದನಿಯಲ್ಲಿ ಯಾಚಿಸಿದಳು:

"ಯೆವ್‌ಜೆನಿ ವಾಸಿಲ್ಯೇವಿಶ್, ದಯವಿಟ್ಟು ನಿನ್ನ ಒಪ್ಪಿಗೆ ಕೊಡು!"

ತನ್ನ ಕಣ್ಣುಗಳಿಂದ ಆ ಹುಡುಗಿಯ ಕಡೆಗೆ ತೋರಿಸುತ್ತ ಅವನೆಂದ:

"ನೀನು ಅವಳ ಪರಿಚಯ ಮಾಡ್ಕೋಬೇಕೂಂತ ನನ್ನ ಅಪೇಕ್ಷೆ.....ಮುತ್ತಿನಂತಹ ಹುಡುಗಿ....."

ತನ್ನ ಬಾಯನ್ನು ಅತ್ಯಂತ ಅಗಲವಾಗಿ ತೆರೆದು ಅವನು ಮೌನವಾದ. ಇದಕ್ಕಿಂದ್ದಂತೆ ಕಾಗೆಯಹಾಗೆ, ಕರ್ಕಶಧ್ವನಿ ಹೊರಡಿಸಿದ. ಹಾಸಿಗೆಯ ಮೇಲೆ ಹೊರಳಾಡಿದ. ಕಂಬಳಿ ಸರಿದು ಕೆಳಕ್ಕೆ ಬಿತ್ತು. ಹಾಸಿಗೆಯ ಕೆಳಗಿನ ತಟ್ಟನ್ನು ಆತ ಬಲವಾಗಿ ಹಿಡಿದುಕೊಂಡ. ಹುಡುಗಿಯೂ ಚೀರಿಕೊಂಡಳು; ಹಿಂಸೆಗೊಳಗಾಗಿದ್ದ ದಿಂಬಿನಲ್ಲಿ ತನ್ನ ಮುಖವನ್ನು ಅವಳು ಹೂತಳು.

ನನ್ನ ಮಲತಂದೆ ಬೇಗನೆ ತೀರಿಕೊಂಡ. ತಕ್ಷಣವೇ ಅವನ ರೂಪರೇಖೆಗಳನ್ನು ಶಾಂತ ವಾದ ಸೌಂದರ್ಯ ಆವರಿಸಿತು.

ಹುಡುಗಿಯನ್ನು ನನ್ನ ತೋಳಿಗೆ ಆನಿಸಿಕೊಂಡು ಆಸ್ಪತ್ರೆಯಿಂದ ನಾನು ಹೊರಬಿದ್ದೆ. ಅವಳು ಅಳುತ್ತಿದ್ದಳು; ಅಸ್ವಸ್ಥಳಾಗಿರುವಳೇನೋ ಎಂಬಂತೆ ಎಡವುತ್ತ ನಡೆಯುತ್ತಿದ್ದಳು. ಉಂಡೆಯಾಗಿ ಹಿಂಡಿದ್ದ ಕರವಸ್ತ್ರವನ್ನು ಕೈಯಲ್ಲಿ ಬಿಗಿಯಾಗಿ ಹಿಡಿದುಕೊಂಡು, ಒಮ್ಮೆ ಒಂ

ಕಣ್ಣಿಗೂ ಬಳಿಕ ಇನ್ನೊಂದಕ್ಕೂ ಅದನ್ನು ಒತ್ತುತ್ತಿದ್ದಳು. ಕರವಸ್ತ್ರವನ್ನು ಅವಳು ಹೆಚ್ಚು ಹೆಚ್ಚು ಬಲವಾಗಿ ಹಿಂಡುತ್ತಲೇ ನಡೆದಳು. ಅದು ತನಗೆ ಅತ್ಯಂತ ಪ್ರಿಯವಾದ ಏಕಮಾತ್ರ ಆಸ್ತಿ ಎಂಬಂತೆ, ಅದರೆಡೆಗೆ ನೋಡುತ್ತಲೇ ಇದ್ದಳು.

ಒಮ್ಮಿಂದೊಮ್ಮೆಲೆ ಅವಳು ನಿಂತು, ನನಗೆ ಸಮೀಪವಾಗಿ ಒತ್ತಿಕೊಂಡು, ಟೀಕೆಯ ಧ್ವನಿ ಬೆರೆತ ಗಂಟಲಲ್ಲಿ ಅಂದಳು:

"ಚಳಿಗಾಲದವರೆಗೂ ಅವನು ಬದುಕಲಿಲ್ಲ....ಓ ಪ್ರಿಯಪ್ರಭು, ಪ್ರಿಯಪ್ರಭು, ಯಾಕಾಗ ಬೇಕಾಯಿತು ಹೀಗೆ?"

ಬಳಿಕ ಕಂಬನಿಯಿಂದ ತೋಯ್ದಿದ್ದ ತನ್ನ ಕೈಯನ್ನು ಅವಳು ಮುಂದಕ್ಕೆ ಚಾಚಿದಳು.

"ನಮಸ್ಕಾರವಪ್ಪ. ಅವನು ಯಾವಾಗಲೂ ನಿನ್ನನ್ನು ಹೊಗಳ್ತಿದ್ದ. ಸ್ಮಶಾನಯಾತ್ರೆ.... ನಾಳೆ."

"ನಿನ್ನ ಮನೆವರೆಗೂ ಅಷ್ಟುದೂರ ಜತೆಯಾಗಿ ಬರಲೆ?"

ಅವಳು ಸುತ್ತುಮುತ್ತ ನೋಡಿದಳು.

"ಯಾಕೆ? ಇದು ಹಗಲುಹೊತ್ತು."

ಮೂಲೆಯಲ್ಲಿ ನಿಂತು, ಬೀದಿಯುದ್ದಕ್ಕೆ ಆಕೆ ಹೋದುದನ್ನ ನಾನು ದಿಟ್ಟಿಸಿದೆ. ಬದುಕಿನಲ್ಲಿ ಎಲ್ಲ ಆಸಕ್ತಿಯೂ ನಷ್ಟವಾದವಳಂತೆ, ಯಾವ ಅವಸರವೂ ಇಲ್ಲದೆ, ಅವಳು ನಡೆಯುತ್ತಿದ್ದಳು.

ಅದು ಆಗಸ್ಟ್ ತಿಂಗಳು. ಎಲೆಗಳು ಮರಗಳಿಂದ ಬೀಳುತ್ತಲಿದ್ದವು.

ಮಲತಂದೆಯ ಸ್ಮಶಾನ ಯಾತ್ರೆಯಲ್ಲಿ ಭಾಗಿಯಾಗಲು ನನಗೆ ವೇಳೆ ಇರಲಿಲ್ಲ. ಆ ಹುಡುಗಿಯನ್ನು ಮುಂದೆಂದೂ ನಾನು ಕಾಣಲಿಲ್ಲ......

೧೭

ಪ್ರತಿದಿನವೂ ಬೆಳಗ್ಗೆ ಆರುಘಂಟೆಗೆ ಸಂತೆಮಾಳದ ದುಡಿಮೆಗೆಂದು ನಾನು ಹೊರಡುತ್ತಿದ್ದೆ. ಅಲ್ಲಿ ಸ್ವಾರಸ್ಯಕರ ವ್ಯಕ್ತಿಗಳ ಭೇಟಿಯಾಗುತ್ತಿತ್ತು: ಸಂತ ನಿಕೋಲಾಯಿಯಂತೆ ಕಾಣುತ್ತಿದ್ದ ಕುಶಲ ಕಾರ್ಮಿಕನಾದ ನರೆಗೂದಲ ಚುರುಕು ನಾಲಗೆಯ ಬಡಗಿ ಒಸಿಪ್. ಗೂನುಬೆನ್ನಿನ ಛಾವಣಿ ಕೆಲಸಗಾರ ಯೆಫಿಮುಷ್ಕಾ; ಸಾತ್ವಿಕನಾದ ಸಂತನ ಹೋಲಿಕೆಯೇ ಇದ್ದ, ಧ್ಯಾನ ಪ್ರವೃತ್ತಿಯ ಕಲ್ಲುಕೆಲಸಗಾರ ಪಿಯೋತರ್; ಕೆಂಚುಗಡ್ಡದ, ನೀಲಿ ಕಣ್ಣುಗಳ, ಶಾಂತ ಸದ್ಭಾವನೆಯನ್ನು ಸದಾ ಹೊರಸೂಸುತ್ತಿದ್ದ, ಸ್ಫುರದ್ರೂಪಿಯಾದ ಗಾರೆಕೆಲಸಗಾರ ಗ್ರಿಗೊರಿ ಶಿಶ್ಲಿನ್....

ನಕಾಶೆ ಬಿಡಿಸುವವನ ಮನೆಯಲ್ಲಿ ನಾನು ದುಡಿದ ಎರಡನೆಯ ಅವಧಿಯಲ್ಲಿ ನನಗೆ ಈ ಜನರ ಪರಿಚಯವಾಗಿತ್ತು. ಪ್ರತಿ ರವಿವಾರವೂ ಇವರು, ಶಾಂತವಾಗಿ ಗಂಭೀರವಾಗಿ ಅಡುಗೆ ಮನೆಯಲ್ಲಿ ಕಾಣಿಸಿಕೊಳ್ಳುತ್ತಿದ್ದರು. ನನಗೆ ಹೊಸತಾಗಿದ್ದ ಮಧುರ ಪದಗಳಿಂದ ತುಂಬಿದ ಅವರ ಮಾತಿನ ರೀತಿ ಹಿತಕರವಾಗಿರುತ್ತಿತ್ತು. ಗಾತ್ರದೇಹಿಗಳಾದ ಈ ರೈತರು ಬಹಳ ಒಳ್ಳೆಯವರಾಗಿ ನನಗೆ ಕಂಡಿದ್ದರು. ಅವರಲ್ಲಿ ಪ್ರತಿಯೊಬ್ಬನೂ ತನ್ನದೇ ಆದ ರೀತಿಯಲ್ಲಿ ಸ್ವಾರಸ್ಯವುಳ್ಳ

ವ್ಯಕ್ತಿಯಾಗಿದ್ದ. ಇವರೆಲ್ಲರೂ ಕುನಾವಿನೋದ ನೀಚರಾದ ಕುಡುಕರಾದ ತುಡುಗರಾದ ವ್ಯಾಪ
ಗಳೊಡನೆ ಹೋಲಿಸಿದಾಗ ಉತ್ತಮರಾಗಿ ಕಂಡು ಬಂದಿದ್ದರು.

ಆಗ ಗಾರೆ ಕೆಲಸದ ಶಿಲ್ಪಿನನನ್ನೇ ನನ್ನ ಅಚ್ಚುಮೆಚ್ಚಿನವನಾಗಿ ನಾನು ಆರಿಸಿಕೊಂಡಿದ
ನನ್ನನ್ನು ವೃತ್ತಿಶಿಷ್ಯನನ್ನಾಗಿ ಮಾಡಿಕೊಳ್ಳಬೇಕೆಂದೂ ಅವನನ್ನು ಕೇಳಿದ್ದೆ. ಆದರೆ, ವ್ಯ
ಮಾತಿನಲ್ಲೇ ಆತ ನಿರಾಕರಿಸಿದ್ದ. ತನ್ನ ಬಿಳಿ ಬೆರಳುಗಳಿಂದ ಬಂಗಾರದ ಹುಬ್ಬುಗಳನ್ನು ಕ
ಯುತ್ತ ಅವನೆಂದಿದ್ದ:

"ನೀನಿನ್ನೂ ತೀರಾ ಚಿಕ್ಕವನು. ನಮ್ಮ ಕೆಲಸ ಹಗುರವಾದ್ದಲ್ಲ. ಇನ್ನೂ ಒಂದು ವರ್ಷವೋ
ಎರಡು ವರ್ಷವೋ ಕಾದಿರು."

ಬಳಿಕ ತನ್ನ ಸುಂದರ ತಲೆಯನ್ನು, ಹಿಂದಕ್ಕೆ ಝಾಡಿಸಿ ಅವನು ಮಾತು ಸೇರಿಸಿದ್ದ:

"ಬದುಕು ಕಠಿನವಾಗಿ ನಿನಗೆ ಕಾಣ್ತಿದೆಯೋ ಏನೋ. ಏನೂ ಮಾಡೋಹಾಗಿಲ್ಲ, ಸಹಿ
ಕೊಳ್ಳೋದಕ್ಕೆ ಯತ್ನಿಸು. ನಿನ್ನ ಮೇಲಿನ ನಿನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸು. ಸ
ಸೋದು ನಿನ್ನಿಂದ ಸಾಧ್ಯವಾಗ್ತದೆ."

ಈ ರೀತಿಯ ಹಿತಬೋಧೆಯಿಂದ ಲಾಭವಾದುದೇನೂ ನನಗೆ ತಿಳಿಯದು. ಆದ
ಕೃತಜ್ಞತಾಭಾವದಿಂದ ಅದನ್ನು ನಾನು ನೆನಪಿಟ್ಟುಕೊಂಡೆ.

ಈಗಲೂ ಪ್ರತಿ ರವಿವಾರ ಬೆಳಗ್ಗೆ ನನ್ನ ಯಜಮಾನನನ್ನು ಕಾಣಲು ಅವರು ಬರುತ್ತಿದ್ದ
ಅಡುಗೆ ಮನೆಯ ಮೇಜಿನ ಸುತ್ತಲೂ ಇರುತ್ತಿದ್ದ ಬೆಂಚುಗಳ ಮೇಲೆ ಕುಳಿತು, ಯಜಮಾ
ಬರವನ್ನು ಇದಿರು ನೋಡುತ್ತ, ತಮ್ಮ ತಮ್ಮೊಳಗೆ ಸ್ವಾರಸ್ಯಕರವಾದ ಸಂಭಾಷಣೆಯನ್ನು ನಡ
ತ್ತಿದ್ದರು. ಗದ್ದಲದ ಸಲಿಗೆಯಿಂದ ನನ್ನ ಯಜಮಾನ ಅವರನ್ನು ಸ್ವಾಗತಿಸುತ್ತಿದ್ದ; ಅವರ ಬಲಿ
ಕೈಗಳನ್ನು ಕುಲುಕಿ, ದೇವಪ್ರತಿಮೆಗಳಿರುತ್ತಿದ್ದ ಮೂಲೆಯಲ್ಲಿ ಆಸೀನನಾಗುತ್ತಿದ್ದ. ಹಣ
ಪಾವತಿಗಳೂ ಹೊರಬರುತ್ತಿದ್ದುವು. ಆ ರೈತರು ತಮ್ಮ ಬಿಲ್ಲುಗಳನ್ನೂ ಜೀರ್ಣವಾಗಿದ್ದ ಲೆ
ಪುಸ್ತಕಗಳನ್ನೂ ಮೇಜಿನ ಮೇಲಿಡುತ್ತಿದ್ದರು. ವಾರದ ವ್ಯವಹಾರವನ್ನು ಸಂದಾಯ ಮಾ
ಲಾಗುತ್ತಿತ್ತು.

ನಗೆಯಾಡುತ್ತ ಪರಿಹಾಸ್ಯ ಮಾಡುತ್ತ ಅವರನ್ನು ಮೋಸಗೊಳಿಸಲು ನನ್ನ ಒಡೆಯ ಯ
ಸಿದ; ಅವನನ್ನು ಮೋಸಗೊಳಿಸಲು ಅವರು ಯತ್ನಿಸಿದರು. ಕೆಲವೇಳೆ ಬಿರುಸಾದ ವಾಗ್ವಾದ
ನಡೆಯುತ್ತಿತ್ತು. ಆದರೆ ಸಾಧಾರಣವಾಗಿ, ಪರಸ್ಪರ ಮೈತ್ರಿಭಾವದಿಂದ ಒಟ್ಟಾಗಿಯೇ ಅವ
ನಗುತ್ತಿದ್ದರು.

"ಆ್ಹ ಸ್ನೇಹಿತ, ನೀನು ಕಪಟಿಯಾಗಿಯೇ ಹುಟ್ಟಿದೆ," ಎಂದು ರೈತರು ನನ್ನ ಯಜಮಾನ
ಅನ್ನುತ್ತಿದ್ದರು.

ಆತ ಮುಖ ರಂಗೇರಿಸುತ್ತ ನಕ್ಕು, ಉತ್ತರವೀಯುತ್ತಿದ್ದ:

"ಹೂಂ ಕೂಗಾಡೋ ಕೋಳಿಮರಿಗಳೇ, ಕದಿಯೋ ವಿಷಯದಲ್ಲಿ ಸ್ವತಃ ನೀವೂ ಅಷ್ಟೊಂ
ಅಸಮರ್ಥರೇನೂ ಅಲ್ಲ!"

"ಸಹಜ," ಎಂದು ಯೆಫಿಮುಷ್ಕಾ ಒಪ್ಪಿಕೊಂಡ.

ಆದರೆ, ಗಭೀರ ಪ್ರವೃತ್ತಿಯ ಪಿಯೋತರ್ ನುಡಿದ:

"ಒಬ್ಬ ಮನುಷ್ಯ ಜೀವಿಸೋದು ಕದ್ದುದರ ಸಹಾಯದಿಂದ; ಅವನ ಪ್ರಾಮಾಣಿಕ ಸಂಪಾ
ದನೆಯೆಲ್ಲ ದೇವರಿಗೂ ಜಾರ್ ಚಕ್ರವರ್ತಿಗೂ ಹೋಗ್ತವೆ."

"ಆದ್ದರಿಂದಲೇ ನಿಮ್ಮನ್ನು ಒಂದಿಷ್ಟು ಕ್ಷೌರ ಮಾಡೋಕೆ ನನ್ನ ಆಕ್ಷೇಪವಿಲ್ಲ," ಎಂದು ನನ್ನ
ಯಜಮಾನ ನಕ್ಕ.

ಸಲಿಗೆಯ ಸ್ನೇಹಭಾವದಿಂದಲೇ ಅವರು ಮುಂದುವರಿದರು.

"ಬೇರೆ ಮಾತಿನಲ್ಲಿ ಹೇಳೋದಾದರೆ, ನಮ್ಮನ್ನು ಸುಲಿಯೋದಕ್ಕೆ ಅಂತಲೊ?"

"ನಮಗೆ ಮೋಸ ಮಾಡೋದಕ್ಕೆ ಅಂತಲೊ?"

ಗ್ರಿಗೊರಿ ಶಿಶ್ಲಿನ್, ತನ್ನ ಎದೆಯನ್ನಾವರಿಸಿದ್ದ ಪೊದೆಗಡ್ಡದ ಮೇಲೆ ತನ್ನ ಕೈಗಳನ್ನು ಇರಿ
ಸುತ್ತ, ರಾಗದ ಧ್ವನಿಯಲ್ಲಿ ಅಂದ:

"ಮೋಸವೇನೂ ಇಲ್ಲದೆಯೇ ನಮ್ಮ ವ್ಯವಹಾರವನ್ನು ಮಾಡಿದರೆ ಹೇಗೆ ಸೋದರರೆ?
ಸುಮ್ಮನೆ ಪ್ರಾಮಾಣಿಕರಾಗಿ ನಾವು ಜೀವಿಸಿದರೆ ಆಗದೆ? ಅದೆಷ್ಟು ಸೊಗಸಾಗಿರ್ತದೆ, ಸುಲಭವಾಗಿ
ರ್ತದೆ, ಅನ್ನೋದು ನಿಮಗೆ ಕಾಣಿಸೋದಿಲ್ವೆ? ಹ್ಞ? ಸಜ್ಜನರೇ, ಏನಂತೀರಿ ನೀವು?"

ಅವನ ನೀಲಿಕಣ್ಣುಗಳು ತೇವಗೊಂಡುವು, ಕರಿದಾದುವು. ಆ ಘಳಿಗೆಯಲ್ಲಿ ಆತ ಅದ್ಭುತ
ರೀತಿಯಲ್ಲಿ ಸುಂದರನಾಗಿ ಕಂಡ. ಅವನ ಸಲಹೆಯಿಂದ ಎಲ್ಲರೂ ಒಂದಿಷ್ಟು ಸಂಕೋಚಕ್ಕೊಳ
ಗಾದಂತೆ ಕಂಡಿತು. ಅಸಮಾಧಾನದಿಂದ ಮುಖಗಳು ಬೇರೆ ಬೇರೆ ಕಡೆಗಳಿಗೆ ಹೊರಳಿದುವು.

"ರೈತ ಒಬ್ಬನನ್ನು ಬಹಳವಾಗಿ ಮೋಸಪಡಿಸುವುದು ಶಕ್ಯವಲ್ಲ," ಎಂದು, ನೋಡಲು ಹಿತ
ಕರ ವ್ಯಕ್ತಿಯಾದ ಒಸಿಪ್, ರೈತನ ಬಗೆಗೆ ಕರುಣೆ ತೋರಿಸುತ್ತಿರುವನೇನೋ ಎಂಬಂತೆ, ನುಡಿದ.

ಕರಿದುಬಣ್ಣದ ದುಂಡುಭುಜಗಳ ಕಲ್ಲುಕೆಲಸಗಾರ, ಮೇಜಿನ ಮೇಲಕ್ಕೆ ಬಹಳ ಬಾಗುತ್ತ,
ಅಸ್ಪಷ್ಟ ಧ್ವನಿಯಲ್ಲಿ ಅಂದ:

"ಪಾಪ ಮಾಡೋದು ಜವುಗು ಇದ್ದ ಹಾಗೆ. ಮುಂದೆ ಹೋದಷ್ಟೂ ಹೆಚ್ಚು ಆಳಕ್ಕೆ ಮುಳು
ಗ್ತೀವೆ."

ಉತ್ತರವೀಯಲು ಅವರ ವೈಖರಿಯನ್ನೇ ನನ್ನ ಯಜಮಾನ ಅನುಸರಿಸಿದ:

"ನನ್ನ ಪ್ರತಿಧ್ವನಿಯನ್ನು ನಾನು ನಿಮ್ಮ ಬೊಬ್ಬಾಟಕ್ಕೆ ಸರಿಹೊಂದಿಸ್ತೇನೆ."

ಈ ರೀತಿಯಾಗಿ ಅವರು ಸ್ವಲ್ಪ ಹೊತ್ತಿನವರೆಗೆ ತಾತ್ವಿಕವಾದ ಮಾಡುತ್ತ ಹೋದರು.
ಬಳಿಕ ಪುನಃ ಒಬ್ಬರನ್ನೊಬ್ಬರು ಸೋಲಿಸಲು ಯತ್ನಿಸಿದರು. ಲೆಕ್ಕಾಚಾರ ಮುಗಿದಾಗ ಶ್ರಮ
ದಿಂದ ಬಳಲಿ ಬೆವರುತ್ತ, ಅವರಿದ್ದರು. ನಮ್ಮ ಯಜಮಾನನನ್ನೂ ಕರೆಯುತ್ತ ಚಹಾ ಕುಡಿಯ
ಲೆಂದು ಪಾನಮಂದಿರಕ್ಕೆ ನಡೆದರು.

ಸಂತೆಮಾಳದಲ್ಲಿ ಮೊಳೆ-ಇಟ್ಟಿಗೆ-ಕಟ್ಟಿಗೆಗಳನ್ನು ಈ ಜನ ಕದಿಯದಂತೆ ನೋಡುವುದು ನನ್ನ
ಕೆಲಸವಾಗಿತ್ತು. ಇವರಲ್ಲಿ ಪ್ರತಿಯೊಬ್ಬನೂ ನನ್ನ ಯಜಮಾನನಿಗೋಸ್ಕರ ದುಡಿಯುವುದರ
ಜೊತೆಗೆ, ಸ್ವಂತವಾಗಿಯೂ ಕಂಟ್ರಾಕ್ಟು ವಹಿಸಿಕೊಳ್ಳುತ್ತಿದ್ದ; ತನ್ನ ಸ್ವಂತದ ಉಪಯೋಗಕ್ಕಾಗಿ
ಸಾಮಾನುಗಳನ್ನು ಕದ್ದೊಯ್ಯಲು ಯತ್ನಿಸುತ್ತಿದ್ದ.

ಸ್ನೇಹಭಾವದಿಂದ ಅವರು ನನ್ನನ್ನು ಸ್ವಾಗತಿಸಿದರು. ಆದರೆ ಶಿಶ್ಲಿನ್ ಅಂದ:

"ವೃತ್ತಿಶಿಷ್ಯನಾಗಿ ಮಾಡಿಕೋ ಅಂತ, ನೀನು ನನ್ನನ್ನು ಕೇಳಿದ್ದು ನೆನಪಿದೆಯೆ? ಈಗ ನಿನಗೆ

ಹ್ಯಾಗೆ ಭಡ್ತಿ ಸಿಕ್ಕಿದೇಂತ ನೋಡು. ನನ್ನ ಮೇಲ್ವಿಚಾರಕನಾಗಿಬಿಟ್ಟಿದೀಯೊ, ಹ್ಞೆ ?"

"ಇರಲಿ ಬಿಡಪ್ಪ! ನಿನ್ನ ಮನಃತೃಪ್ತಿಯಾಗುವಷ್ಟು ಹೊಂಚಿನೋಡು, ಕದ್ದು ಕೇಳು."

ಸ್ವಲ್ಪಮಟ್ಟಿನ ವೈರಭಾವದಿಂದ ಪಿಯೋತರ್ ಅಂದ :

"ಹಳೇ ಮೂಷಿಕಗಳನ್ನ ಹಿಡಿಯೋಕೆ ಎಳೇ ಬೆಕ್ಕನ್ನ ಅವರು ಯಾಕೆ ಛೂ ಬಿಡಬೇಕು ?"

ನನ್ನ ಕರ್ತವ್ಯಗಳು ನನ್ನ ಪಾಲಿಗೆ ಕ್ರೂರ ಹೊರೆಯಾಗಿದ್ದುವು. ಈ ಜನರ ಸಾನ್ನಿಧ್ಯದಲ್ಲಿ ನನಗೆ ಲಜ್ಜೆ ಎನಿಸಿತು. ಅವರೆಲ್ಲರಲ್ಲೂ ಅವರಿಗೆ ಮಾತ್ರವೇ ತಿಳಿದಿದ್ದ ಯಾವುದೋ ಒಳ್ಳೆಯ ಜ್ಞಾನ ಅಡಕವಾಗಿದ್ದಿತೆಂದು ನನಗೆ ಅನಿಸಿತು. ನಾನಾದರೋ, ಅವರು ಕಳ್ಳರೇನೋ ವಂಚಕರೇನೋ ಎನ್ನುವಹಾಗೆ ಅವರಿಗೆ ಇಲ್ಲಿ ಕಾವಲು ಕುಳಿತಿದ್ದೆ. ಮೊದಲ ಕೆಲದಿನಗಳು ಬಹಳ ಕಷ್ಟಕರವಾಗಿದ್ದುವು. ಇದನ್ನು ಗಮನಿಸಿದ ಒಸಿಪ್, ನನ್ನ ಕಣ್ಣುಗಳೊಳಕ್ಕೆ ನೇರವಾಗಿ ನೋಡುತ್ತ, ನನ್ನೊಡನೆ ಅಂದ:

"ಯುವಕನೇ, ಇಲ್ಲಿ ಕೇಳು. ಈ ಮುನಿಸು ಬಿಟ್ಟುಬಿಡು. ಅದರಲ್ಲಿ ಅರ್ಥವಿಲ್ಲ. ತಿಳಿಯಿತೆ ?"

ನನಗೇನೋ ತಿಳಿಯಲಿಲ್ಲ. ಆದರೆ, ನನ್ನ ಪರಿಸ್ಥಿತಿಯ ವಿರೋಧಾಭಾಸ ಮುದುಕನಿಗೆ ಮನವರಿಕೆಯಾಗಿದೆ ಎಂಬುದನ್ನು ಮಾತ್ರ ನಾನು ಗ್ರಹಿಸಿದೆ. ಆಕ್ಷಣದಿಂದಲೇ ನಾವು ಏನೂ ಮುಚ್ಚುಮರೆ ಇಲ್ಲದೆ ಪರಸ್ಪರರೊಡನೆ ವರ್ತಿಸತೊಡಗಿದೆವು.

ಒಂದು ಮೂಲೆಗೆ ನನ್ನನ್ನೊಯ್ದು ಆತ ನಿರ್ದೇಶಗಳನ್ನು ಕೊಡುತ್ತಿದ್ದ :

"ನಿನಗೆ ತಿಳಿಯಲೇ ಬೇಕೂಂತಿದ್ದರೆ, ನಮ್ಮಲ್ಲಿನ ಮುಖ್ಯ ಚೋರ ಕಲ್ಲುಕೆಲಸದ ಪಿಯೊತರ್. ಅವನಿಗೆ ದೊಡ್ಡ ಸಂಸಾರವಿದೆ. ದುರಾಶೆಯ ಮನುಷ್ಯ. ಅವನ ಮೇಲೆ ತೀಕ್ಷ್ಣ ಕಣ್ಣಿಡು. ಕೈಗೆ ಸಿಕ್ಕಿದ್ದನ್ನು ಎತ್ತಿಕೊಂಡು ಹೋಗ್ತಾನೆ. ಒಂದು ಪೌಂಡ್ ಮೊಳೆಗಳು, ಒಂದು ಡಜನ್ ಇಟ್ಟಿಗೆಗಳು, ಒಂದು ಚೀಲ ಬೆಣಚುಕಲ್ಲು—ಏನಾದರೂ ಸರಿಯೆ! ಅವನು ಒಳ್ಳೆಯವನು. ಧರ್ಮಭೀರು ವಿಚಾರಗಳಲ್ಲಿ ಕಟ್ಟುನಿಟ್ಟಾಗಿರ್‍ತಾನೆ. ಅವನು ಓದುಬರಹ ಬಲ್ಲ. ಆದರೆ, ಕಳ್ಳತನ ಯೋದು ಅವನಿಗಿರೋ ಒಂದು ದೌರ್ಬಲ್ಯ. ಯೆಫಿಮುಷ್ಕಾ—ಇವನಾದರೆ, ಜೀವಿಸೋದು ಹೆಂಗಸರಿಗಾಗಿಯೇ. ನಿನಗೆ ಸಂಬಂಧಿಸಿ, ಈತ ದುರ್ಬಲ ಮತ್ತು ನಿರುಪದ್ರವಿ. ಇವನ ಭುಜಗಳ ಮೇಲಿರೋದು ಒಳ್ಳೆಯ ತಲೆ. ಎಲ್ಲ ಗೂನರೂ ಚುರುಕಾಗಿರ್‍ತಾರೆ. ಗ್ರಿಗೊರಿ ಶಿಶ್ಲಿನ್—ಇವನು ಸ್ವಲ್ಪ ಮಟ್ಟಿಗೆ ತಲೆತಿರುಕ. ಇನ್ನೊಬ್ಬರದನ್ನು ತೆಗೆದುಕೊಳ್ಳುವುದು ಹೋಗಲಿ, ಸ್ವತಃ ತನ್ನದಕ್ಕೆ ಅಂಟಿಕೊಳ್ಳುವುದಕ್ಕೂ ಕೂಡಾ ಇವನು ಅಸಮರ್ಥ. ಇವನನ್ನು ಯಾರು ಬೇಕಾದರೂ ಮೋಸಗೊಳಿಸಬಹುದು. ಆದರೆ, ಒಂದೇ ಒಂದು ಜೀವವನ್ನು ಮೋಸಪಡಿಸೋದು ಇವನಿಂದಾಗದು. ಇವನು ಮಾಡೋದಕ್ಕೆ ಯಾವ ಅರ್ಥವೂ ಇಲ್ಲ."

"ಅವನು ಒಳ್ಳೆ ಮನುಷ್ಯನೆ ?"

ದೂರದಿಂದ ನೋಡುವವನಂತೆ ಒಸಿಪ್ ನನ್ನನ್ನೇ ಅಭ್ಯಸಿಸುವ ನೋಟದಿಂದ ದಿಟ್ಟಿಸಿದ ಬಳಿಕ, ಸ್ಮರಣೀಯ ಮಾತುಗಳನ್ನು ಆಡಿದ:

"ಹೌದು. ಒಳ್ಳೆಯವನು. ಸೋಮಾರಿಗೆ ಒಳ್ಳೆಯವನಾಗಿರೋದಕ್ಕಿಂತ ಹೆಚ್ಚು ಸುಲಭದ್ದು ಯಾವುದೂ ಇಲ್ಲ. ಒಳ್ಳೇತನಕ್ಕೆ ಮಿದುಳು ಬೇಕಾಗಿಲ್ಲವಪ್ಪ, ಯುವಕನೇ."

"ಸರಿ. ನಿನ್ನ ವಿಷಯವೇನು?" ಎಂದು ಒಸಿಪನನ್ನು ನಾನು ಕೇಳಿದೆ.

ಸಣ್ಣನೆ ನಕ್ಕು ಅವನು ಉತ್ತರವಿತ್ತ:

"ನಾನು ಒಬ್ಬಳು ಹುಡುಗಿಯ ಹಾಗೆ. ಮುದುಕಿಯಾದಮೇಲೆ, ನಾನು ಎಂಥವಳೂಂತ ನಿನಗೆ ಹೇಳ್ತೀನಿ. ಆದರೆ ಆವರೆಗೂ ನೀನು ಕಾದಿರಬೇಕು. ಇಲ್ಲವಾದರೆ, ನಾನು ಎಂಥವನೂಂತ ಕಂಡು ಹಿಡಿಯೋದಕ್ಕೆ ನಿನ್ನ ಮಿದುಳನ್ನು ಉಪಯೋಗಿಸು. ಹೂಂ, ಪ್ರಯತ್ನಿಸಿ ನೋಡು!"

ಅವನ ಬಗೆಗೂ ಅವನ ಸ್ನೇಹಿತರ ಬಗೆಗೂ ನನಗಿದ್ದ ಅಭಿಪ್ರಾಯಗಳನ್ನೆಲ್ಲ ಅವನು ಬುಡಮೇಲು ಮಾಡಿದ. ಅವನು ಹೇಳಿದುದರ ಸತ್ಯತೆಯ ವಿಷಯದಲ್ಲಿ ನನಗೆ ಶಂಕೆ ಇರಲಿಲ್ಲ. ಈ ಹಿತಕರ ಮುದುಕ ತಮಗಿಂತ ಹೆಚ್ಚು ಚತುರನೆಂದೂ ಪ್ರಾಯೋಗಿಕ ವಿಷಯಗಳಲ್ಲಿ ಪರಿಜ್ಞಾನ ಉಳ್ಳವನೆಂದೂ ಯೆಫಿಮುಷ್ಕಾ, ಪಿಯೋತರ್ ಮತ್ತು ಗ್ರಿಗೊರಿ ಪರಿಗಣಿಸುತ್ತಿದ್ದರೆಂಬುದು ಸ್ಪಷ್ಟವಾಗಿತ್ತು. ಪ್ರತಿಯೊಂದು ವಿಷಯದಲ್ಲೂ ಅವನ ಸಲಹೆಯನ್ನು ಅವರು ಕೇಳುತ್ತಿದ್ದರು; ಅವನ ಮಾತನ್ನು ಶ್ರದ್ಧೆಯಿಂದ ಆಲಿಸುತ್ತಿದ್ದರು; ಪ್ರತಿಯೊಂದು ರೀತಿಯ ಗೌರವವನ್ನೂ ಅವನಿಗೆ ಸಲ್ಲಿಸುತ್ತಿದ್ದರು.

"ನಮಗೆ ನಿನ್ನ ಸಲಹೆ ನೀಡುವಷ್ಟು ದಯೆತೋರು," ಎಂದು ಅವನಿಗೆ ಅವರು ಹೇಳುವುದಿತ್ತು.

ಆದರೆ, ಒಮ್ಮೆ ಅಂತಹ ಒಂದು ವಿನಂತಿಯ ಅನಂತರ, ಒಸಿಪ್ ಹೊರಟುಹೋದ ಬಳಿಕ, ಕಲ್ಲುಕೆಲಸದವನು ಮೆಲುದನಿಯಲ್ಲಿ ಗ್ರಿಗೊರಿಗೆ ಹೇಳಿದುದು ನನಗೆ ಕೇಳಿಸಿತು:

"ಧೂರ್ತಲಂಡ!"

"ವಿದೂಷಕ!" ಎಂದು ಹೂಂಕರಿಸುತ್ತ ಗ್ರಿಗೊರಿ ಮಾತುಸೇರಿಸಿದ.

ಗಾರೆಕೆಲಸದವನು ಸ್ನೇಹಿತನಂತೆ ನನಗೆ ಎಚ್ಚರಿಕೆ ಇತ್ತ:

"ಮಾಕ್ಸಿಮಿಶ್, ಆ ಮುದುಕನ ವಿಷಯದಲ್ಲಿ ಹುಷಾರಾಗಿರು. ಅವನ ಜತೆ ನೀನು ಬಹಳ ಜಾಗರೂಕನಾಗಿರಬೇಕು. ಎವೆ ಮುಚ್ಚಿ ತೆರೆಯೋದರೊಳಗೆ ನಿನ್ನನ್ನು ಆತ ತನ್ನ ಕಿರುಬೆರಳಿಗೆ ಸುತ್ತಿಬಿಡಬಲ್ಲ! ಸದಾಕಾಲ ಮಿಸುಕಾಡೋ ದವಡೆಗಳ ಆ ಮುದುಕರು-ಅವರೆಂಥ ಹಾನಿ ಉಂಟುಮಾಡಬಲ್ಲರು ಅನ್ನೋದು ಪರಮಾತ್ಮನೊಬ್ಬನಿಗೇ ಗೊತ್ತು!"

ಆ ಮಾತಿನ ಹಿಂದುಮುಂದು ಒಂದೂ ನನಗೆ ತಿಳಿಯಲಿಲ್ಲ.

ಕಲ್ಲುಕೆಲಸಗಾರ ಪಿಯೋತರನೇ ಅವರಲ್ಲಿ ಅತ್ಯಂತ ಪ್ರಾಮಾಣಿಕನೂ ಗುಣವಂತನೂ ಎಂದು ನನಗೆ ಅನಿಸಿತು. ಅವನ ಮಾತುಗಳೆಲ್ಲ ಚುಟುಕಾಗಿ ಪರಿಣಾಮಕಾರಿಯಾಗಿರುತ್ತಿದ್ದುವು. ಹೆಚ್ಚಾಗಿ ಅವನ ವಿಚಾರಗಳು, ದೇವರು-ಸಾವು-ಮಹಾ ಶಾಪಗಳ ಕಡೆಗೇ ಹೊರಳುತ್ತಿದ್ದುವು.

"ಆ ಸೋದರರೇ, ಒಬ್ಬ ಮನುಷ್ಯ ಎಷ್ಟೇ ಯತ್ನಿಸಲಿ, ಎಷ್ಟೇ ಆಸೆ ಇಟ್ಟುಕೊಳ್ಳಲಿ, ಕೊನೆಗೂ ಅವನು ಸೇರೋದು ಗೋರಿ-ಶವದಾನಿಗಳನ್ನೇ."

ಯಾವುದೋ ಹೊಟ್ಟೆಯ ಕಾಹಿಲೆಯಿಂದ ಅವನು ನರಳುತ್ತಿದ್ದ. ಅವನು ಏನನ್ನು ತಿನ್ನುವುದೂ ಸಾಧ್ಯವಿರದಂತಹ ದಿನಗಳಿರುತ್ತಿದ್ದುವು. ಆಗ ಅತ್ಯಂತ ಚಿಕ್ಕ ಬ್ರೆಡ್ಡಿನ ಚೂರು ತಿಂದರೂ ಅವನಿಗೆ ನೋವಿನ ಕಿವುಚಾಟವೂ ವಾಕರಿಕೆಯ ಭಾವನೆಯೂ ಉಂಟಾಗುತ್ತಿದ್ದುವು.

ಗೂನುಬೆನ್ನಿನ ಯೆಫಿಮುಷ್ಕಾನೂ ದಯಾವಂತನಾಗಿಯೂ ಪ್ರಾಮಾಣಿಕನಾಗಿಯೂ ಕಂಡ.

ತುಸು ನಗೆಗೀಡಾಗುವಂತಹ ನಡವಳಿಕೆ, ಅಷ್ಟೆ. ಕೆಲವೇಳೆ ಮಹದಾನಂದದ ರೀತಿಯಿಂದಿರು ತ್ತಿದ್ದ. ಅದನ್ನು ಕಂಡಾಗ, ಇವನು ಬೆಪ್ಪನೇನೋ ಎನಿಸುತ್ತಿತ್ತು. ಅವನು ಯಾವಾಗಲೂ ಸ್ತ್ರೀಯರಲ್ಲಿ ಅನುರಕ್ತನಾಗುತ್ತಲೇ ಇರುತ್ತಿದ್ದ. ತನ್ನ ಪ್ರತಿಯೊಂದು ಹೆಣ್ಣನ್ನೂ ಒಂದೇ ಬಗೆಯ ಪದಗಳಿಂದಲೇ ಬಣ್ಣಿಸುತ್ತಿದ್ದ:

"ನಾನು ಸ್ಪಷ್ಟವಾಗಿ ಹೇಳಿಬಿಡ್ತೀನಿ. ಅವಳು ಹೆಂಗಸಲ್ಲ—ಅವಳು ಕೆನೆಯ ಮಡಿಕೆಯಲ್ಲಿ ಅರಳಿರೋ ಹೂವು. ಇದೀಗ ಅವಳು!"

ಕುನಾವಿನೋದ ಪಾತರಗಿತ್ತಿ ಹೆಂಗಸರು ಅಂಗಡಿ ಸಾಲುಗಳ ನೆಲಗಳನ್ನು ತೊಳೆಯ ಲೆಂದು ಬಂದಾಗ, ಯೆಫಿಮುಷ್ಕಾ ಮಾಡದಿಂದ ಕೆಳಕ್ಕಿಳಿದು ಯಾವುದಾದರೂ ಮೂಲೆಯನ್ನು ಸೇರುತ್ತಿದ್ದ. ಅಲ್ಲಿ ಪುಕ್ಕಬಿಚ್ಚಿ ಸಂತಸವನ್ನು ಹೊರಸೂಸುತ್ತಾ, ಶುಭ್ರವಾದ ಬೂದು ಕಣ್ಣುಗಳ ನೋಟವನ್ನು ಬಹಳವಾಗಿ ಬಿಗಿಗೊಳಿಸುತ್ತ, ಕಿವಿಯಿಂದ ಕಿವಿಯವರೆಗೂ ತನ್ನ ಬಾಯನು ಅಗಲಿಸುತ್ತ, ನಿಲ್ಲುತ್ತಿದ್ದ.

"ಓ್ಹೊ, ಎಂಥ ರುಚಿಕರವಾದ ತುತ್ತನ್ನು ದೇವರು ಇವತ್ತು ನನಗೆ ಒದಗಿಸಿದ್ದಾನೆ! ಓ್ಹೊ, ಕುಪ್ಪಳಿಸಿಕೊಂಡು ಅದೆಂಥ ಸಂತಸ ನನ್ನ ಕೈಗೇ ಬಂದು ಬಿದ್ದಿದೆ! ಇವಳೆಂಥ ಅರಳು ಹೂ ಅಂತ ಒಮ್ಮೆ ನೋಡಿ. ಇಂಥ ಉಡುಗೊರೆಗಾಗಿ ನನ್ನ ವಿಧಿಗೆ ಯಾವ ರೀತಿಯಲ್ಲಪ್ಪ ನಾನು ಧನ್ಯವಾದವರ್ಪಿಸಬೇಕು? ಹ್ಞ? ಇಂಥ ಸೌಂದರ್ಯದಿಂದಾಗಿ ಬೇಗನೆ ನಾನು ಉರಿದು ಹೋಗದೆ ಇರೋದುಂಟೆ?"

ಮೊದಮೊದಲು ಹೆಂಗಸರು ಅವನನ್ನು ಬರೀ ಪರಿಹಾಸ್ಯ ಮಾಡುತ್ತಿದ್ದರು; ಒಬ್ಬರಿ ಗೊಬ್ಬರು ಕರೆದು ಹೇಳುತ್ತಿದ್ದರು:

"ಗೂನ ಹೇಗೆ ಕರಗ್ತಿದಾನೆ ನೋಡು! ಓ ಸರ್ವಶಕ್ತ ದೇವರೇ?"

ಆ ಹಾಸ್ಯೋಕ್ತಿಗಳಿಂದ ಭಾವಣಿ ಕೆಲಸಗಾರನ ಮೇಲೆ ಯಾವ ಪರಿಣಾಮವೂ ಆಗು ತ್ತಿರಲಿಲ್ಲ. ಕ್ರಮೇಣವಾಗಿ ಎತ್ತರದ ಕೆನ್ನೆಮೂಳೆಗಳ ಅವನ ಮುಖ ತೂಕಡಿಸತೊಡಗಿತು. ಅರ್ಧ ಪ್ರಜ್ಞೆಯಲ್ಲಿದ್ದವನಂತೆ ಅವನು ಮಾತನಾಡಿದ. ಮತ್ತೇರಿ ಹರಿದ ಪ್ರವಾಹವಾಗಿ ಮಧುರ ಪದಗಳು ಚೆಲ್ಲಾಡಿದುವು. ಸ್ತ್ರೀಯರಪಾಲಿಗೂ ಇವು ಮಾದಕವಾಗಿ ಪರಿಣಮಿಸಿದುವೆಂಬುದು ಸ್ಪಷ್ಟವಾಗಿತ್ತು. ಅಂತೂ ಕೊನೆಯಲ್ಲಿ, ಅವರಲ್ಲಿ ಹಿರಿಯವಳೊಬ್ಬಳು, ತುಸು ಅಚ್ಚರಿಯಿಂದ ಅಂದಳು:

"ಈ ರೈತ ಮಾಡೋದನ್ನು ನೋಡಿದರೆ, ಇವನು ಹುಡುಗನೇ ಇದ್ದರೂ ಇರಬಹುದು ಅನಿಸುತ್ತೆ!"

"ಹಕ್ಕಿಯ ಹಾಗೆ ಹಾಡ್ತಿದಾನೆ."

"ಅಥವಾ ಇಗರ್ಜಿ ಬಾಗಿಲಲ್ಲಿರೋ ಭಿಕ್ಷುಕನ ಹಾಗೆ," ಎಂದು, ವಯಸ್ಸಾದವಳು ಸ್ವಲ್ಪ ಕಟುವಾಗಿ ಒತ್ತಿ ಹೇಳಿದಳು.

ಆದರೆ, ಭಿಕ್ಷುಕನೊಡನೆ ಯೆಫಿಮುಷ್ಕಾನಿಗೆ ಯಾವ ಹೋಲಿಕೆಯೂ ಇರಲಿಲ್ಲ. ಒರಟು ಕಾಂಡದ ಹಾಗೆ ಭೂಮಿಯ ಮೇಲೆ ಆತ ಗಟ್ಟಿಯಾಗಿ ನೆಟ್ಟು ನಿಂತಿದ್ದ. ಅವನ ಧ್ವನಿ ಹೆಚ್ಚು ಹೆಚ್ಚು ಮೋಹಕವಾಗತೊಡಗಿತು. ಅವನ ಪದಗಳು ಹೆಚ್ಚುಹೆಚ್ಚಾಗಿ ಕೇಳುಗರನ್ನು ಬಲೆಯಲ್ಲಿ

ಕೆಡವಿದುವು. ಹೆಂಗಸರು ಮಾತು ನಿಲ್ಲಿಸಿ ಕಿವಿಗೊಟ್ಟು ಕೇಳುವಂತೆ ಮಾಡಿದುವು. ಜೇನಿನಂತಹ ವಾಕ್‌ಸರಣಿಯಿಂದ ಅವರನ್ನೆಲ್ಲ ಆತ ಮಂತ್ರಮುಗ್ಧಗೊಳಿಸುತ್ತಿರುವನೇನೋ ಎನಿಸುವಂತಾಯಿತು.

ಇದೆಲ್ಲ ಪರ್ಯವಸಾನಗೊಳ್ಳುತ್ತಿದ್ದುದು, ರಾತ್ರೆಯ ಊಟದ ಹೊತ್ತಿಗೆ ಇಲ್ಲವೆ ಸೋಮವಾರ ಬೆಳಗ್ಗೆ ಆತ ಹಿಂದಿರುಗಿದಾಗ. ಆಗ ಅವನು, ಅಗಲವಾದ ಚಚ್ಚೌಕವಾದ ತನ್ನ ತಲೆಯನ್ನಲುಗಿಸುತ್ತ, ಸಹೋದ್ಯೋಗಿಗಳೆದುರು ಅಚ್ಚರಿಯಿಂದ ಉದ್ಗರಿಸುತ್ತಿದ್ದ:

"ಆ, ಎಂಥ ಸೊಗಸಾದ ಹೆಣ್ಣು, ಎಂಥ ಪ್ರಿಯವಾದ ಜೀವ—ಇಂಥದ್ದು ನನಗೆ ದೊರಕಿರೋದು ನನ್ನ ಜೀವಮಾನದಲ್ಲೇ ಇದು ಮೊದಲನೇ ಸಲ!"

ತನ್ನ ವಿಜಯಗಳ ಬಗೆಗೆ ಹೇಳುವಾಗ ಯೆಫಿಮುಷ್ಕಾ, ಇತರರ ಹಾಗೆ ಜಂಭಕೊಚ್ಚುತ್ತಿರಲಿಲ್ಲ ಅಥವಾ ಹೆಂಗಸರನ್ನು ಕುರಿತು ಪರಿಹಾಸ್ಯ ಮಾಡುತ್ತಿರಲಿಲ್ಲ. ತೆರೆದ ಕಣ್ಣುಗಳಿಂದ, ಆನಂದದ ಕೃತಜ್ಞತೆಯ ಅಚ್ಚರಿಯಿಂದ, ಆತ ಮುಗುಳುನಗುತ್ತಿದ್ದ—ಅಷ್ಟೆ.

ಒಸಿಪ್ ತನ್ನ ತಲೆಯಲುಗಿಸಿ ಉದ್ಗರಿಸಿದ:

"ಸುಧಾರಿಸೋದು ದುಸ್ಸಾಧ್ಯವಾದ ಗಂಡೇ! ನಿನಗೆ ವಯಸ್ಸೆಷ್ಟೂಂತ ಹೇಳಿದೆ?"

"ನಾಲ್ವತ್ತು ಮತ್ತು ನಾಲ್ಕು. ಆದರೆ ದೊಡ್ಡ ವಿಷಯವಲ್ಲ. ಇವತ್ತು ನಾನು ಐದು ವರ್ಷ ಚಿಕ್ಕವನಾಗಿದೇನೆ. ಜೀವಂತ ಜಲದಲ್ಲಿ ಮುಳುಗಿ, ಹೃದಯ ಹಗುರಮಾಡಿಕೊಂಡು ಅಖಂಡವಾಗಿಯೇ ಹೊರಬಂದಿದೇನೆ. ಆ ನಮ್ಮಪ್ಪ, ಎಂಥೆಂಥ ಹೆಂಗಸರೂ ಇದಾರೆ!"

ಕಲ್ಲುಕೆಲಸಗಾರ ನಿಷ್ಠುರ ಧ್ವನಿಯಲ್ಲಿ ಅವನಿಗೆ ಅಂದ:

"ಹುಷಾರಾಗಿರು. ನೀನು ಐವತ್ತರ ಹೊಸ್ತಿಲು ದಾಟೋ ಹೊತ್ತಿಗೆ ಈ ಲಂಗುಲಗಾಮಿಲ್ಲದ ಜೀವನ ನಿನಗೆ ಚಳ್ಳೇಕಾಯಿ ತಿನಿಸ್ತದೆ."

"ನೀನೊಂದು ನಿರ್ಲಜ್ಜಪ್ರಾಣಿ, ಯೆಫಿಮುಷ್ಕಾ," ಎಂದು ಗ್ರಿಗೊರಿ ಶಿಶ್ಲಿನ್ ನಿಟ್ಟುಸಿರುಬಿಟ್ಟ.

ಆದರೆ, ಗೂನನ ವಿಜಯಗಳಿಗಾಗಿ ಅವನ ಬಗೆಗೆ ಆ ಸ್ಫುರದ್ರೂಪಿ ಯುವಕ ಅಸೂಯೆಪಟ್ಟನೆಂದೇ ನನಗನಿಸಿತು.

ಒಸಿಪ್, ತಿರುವಿದ ಬೆಳ್ಳಿ ಹುಬ್ಬುಗಳಡಿಯಿಂದ ಎಲ್ಲೆಡೆಗೂ ದಿಟ್ಟಿಸಿ ನೋಡಿ, ಹರ್ಷಭಾವದಿಂದ, ಪ್ರತಿಧ್ವನಿಸುವ ಸ್ವರದಲ್ಲಿ ನುಡಿದ:

"ನಿನ್ನ ಬಾಲೆಯರೆಲ್ಲ ಪೋಲಿಗಳ ಬಲೆಯಲ್ಲಿ; ಕೆಲವರ ಸಿಹಿಗೊಲಿದು, ಬೇರೆ ಕೆಲವರು ಹವಳಕ್ಕೆ. ಆದರೂ ಆಗುವರು ನಿನ್ನ ಬಾಲೆಯರೆಲ್ಲ ವೃದ್ಧೆಯರು ಬಲುಬೇಗ."

ಶಿಶ್ಲಿನನಿಗೆ ವಿವಾಹವಾಗಿತ್ತು. ಆದರೆ ಅವನ ಹೆಂಡತಿ, ಹಳ್ಳಿಯಲ್ಲೇ ಉಳಿದಿದ್ದಳು. ನೆಲಸಾರಿಸುವ ಹೆಂಗಸರೆಡೆಗೆ ಅವನೂ ಆಸೆಯ ನೋಟಗಳನ್ನು ಬೀರುತ್ತಿದ್ದ. ಅವರೆಲ್ಲರೂ ಸುಲಭಸಾಧ್ಯರಾಗಿದ್ದರು. 'ಹೆಚ್ಚಿಗೆ' ಒಂದಿಷ್ಟು ಸಂಪಾದಿಸಲು ಪ್ರತಿಯೊಬ್ಬರೂ ಆತುರರಾಗಿದ್ದರು. ಈ ದಾರಿದ್ರ್ಯಪೀಡಿತ ಸಮಾಜದಲ್ಲಿ, ಆ ಬಗೆಯ ಸಂಪಾದನೆಯ ಮಾರ್ಗ ಇತರ ಮಾರ್ಗಗಳಷ್ಟೇ ಒಳಿತಾದುದೆಂದು ಪರಿಗಣಿಸಲ್ಪಡುತ್ತಿತ್ತು. ಆದರೆ ಈ ಸ್ಫುರದ್ರೂಪಿ, ರೈತ ಸ್ತ್ರೀಯರನ್ನು ಸ್ಪರ್ಶಿಸುತ್ತಿರಲಿಲ್ಲ. ಅವನು ದೂರದಿಂದ, ವಿಚಿತ್ರ ಭಾವದಿಂದ, ಅವರ ಬಗೆಗೆ ಅಥವಾ ತನ್ನ ಬಗೆಗೆ

ಕನಿಕರ ಸೂಸುತ್ತಿರುವನೇನೋ ಎನ್ನುವಂತೆ, ಬರೇ ದಿಟ್ಟಿಸಿನೋಡುತ್ತಿದ್ದ. ಅವರು ತಾವಾಗಿಯೇ ಅವನೊಡನೆ ಚೆಲ್ಲಾಟವಾಡುತ್ತ ಮರುಳುಗೊಳಿಸತೊಡಗಿದಾಗ, ಸಂಕೋಚದಿಂದಲೂ ನಾಚಿಕೆ ಯಿಂದಲೂ "ಛೆ, ಛೆ, ಛೆ...." ಎನ್ನುತ್ತ ಅವನು ದೂರಹೋಗುತ್ತಿದ್ದ.

ಇದನ್ನು ನಂಬಲಾರದೆ ಯೆಫಿಮುಷ್ಕಾನೆನ್ನುತ್ತಿದ್ದ:

"ನಿನಗೆ ಹುಚ್ಚು ಹಿಡಿದಿದೆಯೆ? ಇಂಥ ಅವಕಾಶವನ್ನು ನೀನು ಬಿಟ್ಟುಬಿಡೋದು ಅಂದರೇನು?"

"ನಾನು ವಿವಾಹಿತ," ಎಂದು ಗ್ರಿಗೊರಿ ಅವನಿಗೆ ನೆನಪು ಮಾಡಿಕೊಟ್ಟ.

"ನಿನ್ನ ಹೆಂಡತಿಗೆ ಎಂದೂ ಗೊತ್ತಾಗಲಾರದು."

"ಗಂಡ ಅಪ್ರಾಮಾಣಿಕನಾಗಿ ಜೀವಿಸಿದರೆ ಹೆಂಡತಿಗೆ ಯಾವಾಗಲೂ ಗೊತ್ತಾಗ್ತದೆ, ಹೆಂಡತಿಗೆ ಮೋಸಮಾಡೋದು ಸಾಧ್ಯವಿಲ್ಲದ ಮಾತು, ಅಣ್ಣ!"

"ಅವಳಿಗೆ ಹ್ಯಾಗೆ ಗೊತ್ತಾಗ್ತದೆ?"

"ಹ್ಯಾಗೋ ನನಗೆ ತಿಳೀದು. ಆದರೆ, ಸ್ವತಃ ಅವಳು ಪ್ರಾಮಾಣಿಕಳಾಗಿದ್ದರೆ, ಗೊತ್ತಾಗದಿರೋದು ಸಾಧ್ಯವೇ ಇಲ್ಲ. ನಾನು ಪ್ರಾಮಾಣಿಕನಾಗಿದ್ದು ಅವಳು ಪಾಪಜೀವನ ನಡಸಿದರೆ, ನನಗೆ ಅದು ಗೊತ್ತಾಗ್ತದೆ."

"ಹ್ಯಾಗೆ?" ಎಂದು ಯೆಫಿಮುಷ್ಕಾ ಕೂಗಿ ಕೇಳಿದ.

ಗ್ರಿಗೊರಿ ಶಾಂತವಾಗಿ ಪುನರುಚ್ಚರಿಸಿದ:

"ಅದು ನನಗೆ ಗೊತ್ತಿಲ್ಲ."

ಛಾವಣಿ ಕೆಲಸಗಾರ ಬೇಸತ್ತು ಕೈಬೀಸಿದ:

"ನೋಡಂತೆ ಸ್ವಲ್ಪ! 'ಪ್ರಾಮಾಣಿಕವಾಗಿ ಜೀವಿಸೋದು,' 'ನನಗೆ ಗೊತ್ತಿಲ್ಲ!' ಎಂಥ ತಲೆಯಪ್ಪ ನಿನ್ನದು!"

ಶಿಶ್ಲಿನನ ಕೆಲಸಗಾರರು ಒಟ್ಟು ಏಳು ಜನ. ಅವರೆಲ್ಲ ಅವನ ಜತೆ, ಆತ ತಮ್ಮ ಯಜಮಾನನಲ್ಲವೇನೋ ಎನ್ನುವ ಹಾಗೆ ಅನ್ಯೋನ್ಯವಾಗಿರುತ್ತಿದ್ದರು. ಆದರೆ ಆತನ ಬೆನ್ನ ಹಿಂದೆ, ಎಳೆಗರು ಎಂದು ಅವನನ್ನು ಅವರು ಕರೆಯುತ್ತಿದ್ದರು. ಆತ ಕೆಲಸದ ಜಾಗಕ್ಕೆ ಬಂದು, ಸೋಮಾರಿಗಳಂತೆ ಅವರು ಕಾಲಕಳೆಯುತ್ತಿದ್ದುದನ್ನು ಕಂಡರೆ, ಸ್ವತಃ ತಾನೇ ಗಾರೆಕಲಸುವ ಸಲಕರಣೆಯನ್ನೆತ್ತಿಕೊಂಡು ಕೆಣಕುವ ಉದ್ವೇಗದಿಂದ ದುಡಿಯತೊಡಗುತ್ತ, ಸ್ನೇಹಪರ ಧ್ವನಿಯಲ್ಲಿ ಕರೆದು ಹೇಳುತ್ತಿದ್ದ:

"ಬನ್ನಿ ಸಹೋದ್ಯೋಗಿಗಳೇ, ಹೂಂ, ಬನ್ನಿ!"

ಕೆಲಸದ ಪ್ರಗತಿಯ ಬಗೆಗೆ ಕಾತರ ತಳೆದಿದ್ದ ನನ್ನ ಯಜಮಾನನ ಆಜ್ಞೆಯಂತೆ ಒಂದು ದಿನ, ಗ್ರಿಗೊರಿಯೊಡನೆ ನಾನೆಂದೆ:

"ಈ ನಿನ್ನ ಕೆಲಸಗಾರರು ಏನೂ ಪ್ರಯೋಜನವಿಲ್ಲ."

ಈ ವಿಚಾರ ತನಗೆಂದೂ ಹೊಳೆದೇ ಇರಲಿಲ್ಲವೆನ್ನುವಂತೆ ಅವನು ಉದ್ಗರಿಸಿದ:

"ನಿಜವಾಗಿಯೂ?"

"ಈ ಕೆಲಸ ನಿನ್ನೆ ಮಧ್ಯಾಹ್ನ ಮುಗಿಯಬೇಕಾಗಿತ್ತು. ಈಗ ನೋಡಿದರೆ, ಇವತ್ತು

ಕೂಡಾ ಮುಗಿಯುವಂತಿಲ್ಲ."

"ಅದು ನಿಜ. ಅವರಿಂದ ಅದು ಸಾಧ್ಯವಾಗದು," ಎಂದು ಅವನು ಒಪ್ಪಿದ. ಆದರೆ, ತುಸು ತಡೆದು, ಅಳುಕುತ್ತ ಮಾತು ಸೇರಿಸಿದ:

"ಏನು ನಡೀತಾ ಇದೆ ಅನ್ನೋದನ್ನು ನಾನು ಕಾಣ್ತಾ ಇದೇನೆ. ಆದರೆ ಅವರನ್ನು ಓಡಿಸಿ ಬಿಡೋದಕ್ಕೆ ನನಗೆ ನಾಚಿಕೆಯಾಗ್ತದೆ. ಇವರೆಲ್ಲ ನಮ್ಮ ಜನ—ಸ್ವಂತ ನನ್ನ ಗ್ರಾಮದವರೇ. ಮನುಷ್ಯ ಸ್ವತಃ ಬೆವರು ಸುರಿಸಿಯೆ ತನ್ನ ಜೀವನ ನಡೆಸಬೇಕೂಂತ ದೇವರು ವಿಧಿಸಿದ. ಅದು ನಿನ್ನನ್ನೂ ನನ್ನನ್ನೂ ಒಳಗೊಂಡು ಎಲ್ಲರಿಗೂ ಅನ್ವಯಿಸುವಂಥಾದ್ದು. ಅಲ್ಲವೇನಪ್ಪ? ಆದರೆ ನೀನು ಮತ್ತು ನಾನು ಅವರು ಮಾಡೋದಕ್ಕಿಂತ ಕಡಮೆ ದುಡೀತೇವೆ. ಅದಕ್ಕೇ, ಅವರನ್ನು ಅಟ್ಟೋದಕ್ಕೆ ನನಗೆ ನಾಚಿಕೆಯಾಗ್ತದೆ."

ಅವನಿಗೆ ಧ್ಯಾನಮಗ್ನನಾಗುವ ಅಭ್ಯಾಸವಿತ್ತು. ಕೆಲವೇಳೆ, ಸಂತೆಮಾಳದ ಬರಿದು ರಸ್ತೆಗಳಲ್ಲಿ, ಒಬ್‌ವೋದ್ನಿ ಕಾಲುವೆಯ ಮೇಲಣ ಸೇತುವೆಯನ್ನು ತಲಪುವವರೆಗೂ ಅವನು ನಡೆದುಹೋಗುತ್ತಿದ್ದ. ಅಲ್ಲಿ ಕಂಬಿಗಳ ಮೇಲೆ ಬಾಗಿಕೊಂಡು ಗಂಟೆಗಟ್ಟಲೆ ನಿಂತು, ನೀರು-ಆಕಾಶ-ಓಕಾ ನದಿಯಾಚೆಗಿನ ವಿಸ್ತಾರದತ್ತ ದಿಟ್ಟಿಸುತ್ತಿದ್ದ. ಯಾರಾದರೂ ಅವನ ಹಿಂದಿನಿಂದ ಬಂದು, "ಏನು ಮಾಡ್ತಿದೀಯಾ?" ಎಂದು ಕೇಳಿದರೆ, ಅವನು ಬೆಚ್ಚಿಬಿದ್ದು, ಸಂಕೋಚದ ಮುಗುಳುನಗೆಯೊಡನೆ ಅನ್ನುತ್ತಿದ್ದ: "ಓ, ವಿಶೇಷವೇನೂ ಇಲ್ಲ. ತುಸು ವಿಶ್ರಾಂತಿಗೇಂತ ಆಚೆ ಈಚೆ ನೋಡೋದಕ್ಕೆಂತ ಸುಮ್ಮನೆ ನಿಂತೆ."

ಅವನು ಆಗಾಗ್ಗೆ ಹೇಳುತ್ತಿದ್ದ:

"ದೇವರು ಪ್ರತಿಯೊಂದನ್ನೂ ಹೇಗಿರಬೇಕೋ ಹಾಗೆ ನಿರ್ಮಿಸಿದಾನೆ. ಆಕಾಶ, ಭೂಮಿ, ಅದರಲ್ಲಿ ಹರೀತಿರೋ ನದಿಗಳು, ದೋಣಿಗಳು. ಒಂದು ದೋಣಿ ಹತ್ತಿ, ರಿಯಜಾನ್‌ಗೆ. ಅಥವಾ ರೈಬಿನ್‌ಸ್ಕ್‌ಗೆ, ಪರ್ಮ್‌ಗೆ ಇಲ್ಲವೆ ಅಸ್ಟ್ರಾಖಾನ್‌ಗೆ—ಎಲ್ಲಿ ಬೇಕಾದರಲ್ಲಿಗೆ ಹೋಗಬಹುದು. ಒಮ್ಮೆ ನಾನು ರಿಯಾಜಾನ್‌ನಲ್ಲಿದ್ದೆ—ತಕ್ಕಮಟ್ಟಿಗೆ ಒಳ್ಳೆಯ ಶಹರವೇ. ಆದರೆ ಬರಡು, ನಿಜ್ನಿನೊವೊಗೊರೊಡ್‌ಗಿಂತಲೂ ಬರಡು. ನಮ್ಮ ನಿಜ್ನಿ ಲವಲವಿಕೆಯ ಜಾಗ, ಅಸ್ಟ್ರಾಖಾನ್ ಕೂಡಾ ಬರಡೇ. ಮುಖ್ಯ ವಿಷಯವೆಂದರೆ, ಅಸ್ಟ್ರಾಖಾನ್‌ನಲ್ಲಿ ಕಾಲ್ಮಿಕ್ ಜನರು ತುಂಬಿದ್ದಾರೆ; ಅವರನ್ನು ನಾನು ಇಷ್ಟಪಡೋದಿಲ್ಲ. ನಿನ್ನ ಮೊರ್ಡೋವಿಯನ್ನರು, ಕಾಲ್ಮಿಕರು, ಪರ್ಶಿಯನ್ನರು, ಜರ್ಮನರು ಮತ್ತು ಎಲ್ಲಾ ವಿದೇಶೀ ಸಂತಾನ—ಇವರು ಯಾರೂ ನನಗೆ ಹಿಡಿಸೋದಿಲ್ಲ."

ಅವನು ಸಾವಧಾನವಾಗಿ ಮಾತನಾಡುತ್ತಿದ್ದ. ಪದಗಳು ಬಲು ಎಚ್ಚರಿಕೆಯಿಂದ ಆತನೊಡನೆ ಒಪ್ಪುವಂಥವನನ್ನು ಹುಡುಕುತ್ತಿದ್ದುವು. ಸಾಧಾರಣವಾಗಿ ಕಲ್ಲಕೆಲಸಗಾರಪಿಯೋತರ್ ಅವನೊಡನೆ ಒಪ್ಪಿಗೆ ವ್ಯಕ್ತಪಡಿಸುತ್ತಿದ್ದ.

ಪಿಯೋತರ್ ಕಹಿಯಾಗಿ ಒತ್ತಿ ಹೇಳಿದ:

"ಅವರು ವಿದೇಶೀ ಸಂತಾನವಲ್ಲ, ಕೆಟ್ಟ ಸಂತಾನ. ಅವರು ಬೇಲಿಯಾಚೆಗೆ, ಕ್ರಿಸ್ತನಿಗೂ ಹೊರಗೆ, ಹುಟ್ಟಿದವರು. ಅವನಿಲ್ಲದೆಯೇ ಜೀವಿಸುತ್ತಿರುವರು."

ಗ್ರಿಗೊರಿಯ ಕಣ್ಣುಗಳು ಮಂದಹಾಸ ಸೂಸಿದುವು.

"ನೀನು ಏನೇ ಹೇಳು ತಮ್ಮ. ನನ್ನ ಮಟ್ಟಿಗೆ ನೇರದೃಷ್ಟಿಯ ರಷ್ಯನರೇ ಪರಿಶುದ್ಧ ಸಂತಾನ. ಯೆಹೂದಿಯರೂ ನನಗೆ ಹಿಡಿಸೋದಿಲ್ಲ. ಪರಕೀಯರನ್ನು ದೇವರು ಸೃಷ್ಟಿಮಾಡೋದರ ಅಗತ್ಯ ಪಾದರೂ ಏನಿತ್ತೂಂತ ಸುತರಾಂ ನನಗೆ ಅರ್ಥವಾಗೋದಿಲ್ಲ. ಅದು ಬಹಳ ಆಳವಾದ ಜ್ಞಾನ."

ಕಲ್ಲುಕೆಲಸಗಾರ ಸಿಡುಕಿನಿಂದ ಮಾತು ಸೇರಿಸಿದ:

"ಅದು ಆಳವಾಗೇನೋ ಇರಬಹುದು. ಆದರೆ ಭೂಮಿಯ ಮೇಲೆ, ನಮಗೆ ಅನಗತ್ಯ ವಾದ ಸಂಗತಿಗಳು ಹೇರಳವಾಗಿಯೇ ಇವೆ."

ಈ ಮಾತುಗಳಿಗೆ ಕಿವಿಗೊಟ್ಟ ಬಳಿಕ, ಒಸಿಪ್ ಬಾಯಿಹಾಕಿ, ಛೇಡಿಸುವ ಚುಚ್ಚುವ ಧ್ವನಿ ಯಲ್ಲಿ ಅನ್ನುತ್ತಿದ್ದ:

"ಹೌದು. ನಮಗೆ ಅನಗತ್ಯವಾದ ವಿಷಯಗಳು ಅನೇಕವಿವೆ. ಉದಾಹರಣೆಗೆ ಈ ನಿನ್ನ ಅಭಿಪ್ರಾಯಗಳು. ಯಾವಾಗಲೂ ತಿಕ್ಕಾಟ. ನಿನಗೆ ಬೇಕಾಗಿರೋದು ಛಡಿ ಏಟು?"

ತಾನು ಒಪ್ಪುವುದು ಯಾರೊಡನೆ, ಒಪ್ಪದಿರುವುದು ಯಾರೊಡನೆ, ಎಂಬುದನ್ನು ಎಂದೂ ಸೂಚಿಸದೆ, ಒಸಿಪ್ ತಾನು ಪ್ರತ್ಯೇಕವಾಗಿಯೇ ಇರುತ್ತಿದ್ದ. ಕೆಲವೇಳೆ ಪ್ರತಿಯೊಬ್ಬರೊಡನೆಯೂ ಪ್ರತಿಯೊಂದರೊಡನೆಯೂ ಆತ ಒಪ್ಪುವಂತೆ ಕಾಣುತ್ತಿತ್ತು. ಆದರೆ ಹೆಚ್ಚಿನಬಾರಿ, ಎಲ್ಲವೂ ಈತನಿಗೆ ಸಾಕಾಗಿ ಹೋಗಿದೆ, ಎಲ್ಲ ಜನರನ್ನೂ ಈತ ಮೂರ್ಖರೆಂದು ಪರಿಗಣಿಸುತ್ತಾನೆ—ಎಂದು, ನೋಡುವವರಿಗೆ ಕಾಣುತ್ತಿತ್ತು.

ಪಿಯೋತರ್-ಗ್ರಿಗೊರಿ-ಯೆಫಿಮುಷ್ಕಾರಿಗೆ, ಅವನೆನ್ನುತ್ತಿದ್ದ:

"ಥತ್, ಹಂದಿಕುನ್ನಿಗಳೇ—ನಿಮ್ಮ—ನಿಮ್ಮ!"

ಅವರು ಸಣ್ಣನೆ ನಗುತ್ತಿದ್ದರು. ಅಷ್ಟೇನೂ ಹರ್ಷಕರವಲ್ಲ, ಉತ್ಸಾಹಕರವೂ ಅಲ್ಲ—ಆದರೂ ಅವರು ನಗುತ್ತಿದ್ದರು.

ನನ್ನ ಯಜಮಾನ ನನಗೆ ಆಹಾರಕ್ಕೆಂದು ದಿನಕ್ಕೆ ಐದು ಕೊಪೆಕ್ ಕೊಡುತ್ತಿದ್ದ. ಇದು ಸಾಲುತ್ತಿರಲಿಲ್ಲ. ಹೀಗಾಗಿ, ಅನೇಕ ವೇಳೆ ನಾನು ಹಸಿದೇ ಇರುತ್ತಿದ್ದೆ. ಇದನ್ನು ಕಂಡು ಕೆಲಸಗಾರರು, ತಮ್ಮ ಜತೆ ಉಪಾಹಾರ ಸ್ವೀಕರಿಸುವುದಕ್ಕೂ ಊಟಕ್ಕೂ ಕರೆಯುತ್ತಿದ್ದರು. ಕೆಲವೇಳೆ ಕಂಟ್ರಾಕ್ಟುದಾರರು, ಚಹಾಸೇವನೆಗೆಂದು ಪಾನಮಂದಿರಕ್ಕೆ ನನ್ನನ್ನು ಕರೆದೊಯ್ಯು ತ್ತಿದ್ದರು. ಅವರ ಆಮಂತ್ರಣಗಳನ್ನು ಸಂತೋಷದಿಂದ ನಾನು ಸ್ವೀಕರಿಸುತ್ತಿದ್ದೆ. ಅವರ ಜತೆ ಕುಳಿತು, ಅವರ ನಿಧಾನವಾದ ಮಾತಿಗೂ ವಿಚಿತ್ರಕಥೆಗಳಿಗೂ ಕಿವಿಗೊಡಲು ನನಗೆ ಸಂತೋಷ ವೆನಿಸುತ್ತಿತ್ತು. ಧಾರ್ಮಿಕ ಗ್ರಂಥಗಳ ಬಗೆಗೆ ನನಗಿದ್ದ ಪರಿಜ್ಞಾನ ಅವರಿಗೆ ಇಷ್ಟವಾಯಿತು.

"ಗ್ರಂಥ ಭಕ್ಷಣ ನಿನಗೆ ಬೇಕಷ್ಟಾಗಿದೆ; ಗಂಟಲು ಬಿರಿಯೋವರೆಗೂ ತುಂಬಿಸಿಕೊಂಡಿ ದೀಯಾ," ಎಂದು ನೀಲಿಕಣ್ಣುಗಳ ನೆಟ್ಟನೋಟದಿಂದ ನನ್ನನ್ನೇ ನೋಡುತ್ತ, ಒಸಿಪ್ ಅಂದ. ಆ ಕಣ್ಣುಗಳಲ್ಲಿ ಇಂತಹದೇ ಭಾವವಿತ್ತೆಂದು ಹೇಳುವುದು ಕಷ್ಟವಾಗಿತ್ತು. ಕಣ್ಣಬೊಂಬೆಗಳು ಕರಗಿ ಬಿಳಿಯೊಡನೆ ಲೀನವಾಗುತ್ತಿದ್ದಂತೆ ಅನಿಸುತ್ತಿತ್ತು.

"ನಿನ್ನ ಜ್ಞಾನವನ್ನು ಅಮೂಲ್ಯವಾಗಿ ತಿಳಿ; ಅದನ್ನು ಶೇಖರಿಸಿಡು. ಯಾವತ್ತಾದರೂ ಅದು ಉಪಯೋಗಕ್ಕೆ ಬೀಳ್ತದೆ. ದೊಡ್ಡವನಾದಾಗ, ಒಳ್ಳೆಯ ಮಾತುಗಳಿಂದ ಜನರನ್ನು ಸಂತೈಸು ವುದಕ್ಕೋಸ್ಕರ, ನೀನು ಸನ್ಯಾಸಿಯಾಗಬಹುದು. ಅಥವಾ ಧನಪ್ರಸಾರಕನಾಗಬಹುದು."

ಯಾವುದೋ ಕಾರಣಕ್ಕಾಗಿ ನೊಂದುಕೊಂಡಂತೆ ಕೇಳಿಸಿದ ಧ್ವನಿಯಲ್ಲಿ, ಕಲ್ಲುಕೆಲಸಗಾರ ತಿದ್ದಿದ:

"ಮತಪ್ರಸಾರಕ."

"ಹ್ಞ ?" ಎಂದು ಒಸಿಪ್ ಕೇಳಿದ.

"ಅವರನ್ನು ಮತಪ್ರಸಾರಕರು ಅಂತಾರೆ. ನೀನೇನೂ ಕಿವುಡನಲ್ಲ."

"ಆಗಲಿ ಆಗಲಿ. ಮತಪ್ರಸಾರಕರು. ಧರ್ಮಲಂಡರ ಜತೆ ವಾದಿಸೋದಕ್ಕೋಸ್ಕರ. ಅಥವಾ, ಸ್ವತಃ ಧರ್ಮಲಂಡರನ್ನೇ. ನೀನು ಸೇರಬಹುದು. ಅವರು ಕೊಡೋ ವೇತನವೂ ಅಷ್ಟೇನೂ ಕಡಮೆಯಲ್ಲ. ನಿನ್ನ ತಲೇನ ನೀನು ಉಪಯೋಗಿಸಿದರೆ, ಧರ್ಮದ್ರೋಹದಿಂದಲೂ ಚೆನ್ನಾಗಿ ನೀನು ಸಂಪಾದಿಸಬಹುದು."

ಗ್ರಿಗೊರಿ ಅಸಮಾಧಾನದಿಂದ ನಕ್ಕ. ಪಿಯೋತರ್ ತನ್ನ ಗಡ್ಡದೊಳಕ್ಕೆ ಗೊಣಗಿದ:

"ಮಾಟಗಾರರ ಸಂಪಾದನೆಯೂ ಕಡಮೆ ಇರೋದಿಲ್ಲ. ಇತರ ಎಲ್ಲಾ ಬಗೆಯ ನಾಸ್ತಿಕ ಪ್ರಾಣಿಗಳೂ ಅಷ್ಟೇ."

"ಮಾಟಗಾರರಿಗೆ ಪಾಂಡಿತ್ಯವಿಲ್ಲ. ಗ್ರಂಥಪಠನದ ಅವಶ್ಯತೆ ಮಾಟಗಾರರಿಗಿಲ್ಲ," ಎಂದು ಒಸಿಪ್ ಆಕ್ಷೇಪಿಸಿದ. ಬಳಿಕ ನನ್ನೆಡೆಗೆ ತಿರುಗಿ ಅಂದ: "ಎಲ್ಲಿ ಇದಕ್ಕೆ ಕಿವಿಗೊಡು: ಒಮ್ಮೆ ನಮ್ಮ ಗ್ರಾಮದಲ್ಲಿ ಏಕಾಕಿಯಾದ ಒಬ್ಬ ಮನುಷ್ಯ ವಾಸಿಸ್ತಿದ್ದ. ತುಷ್ಕಿಕೋವ್ ಅಂತ ಅವನ ಹೆಸರು. ಒಬ್ಬ ನಿಷ್ಪ್ರಯೋಜಕ ಬಡಪಾಯಿ. ಇಲ್ಲಿ, ಅಲ್ಲಿ, ಗಾಳಿ ಬೀಸಿದತ್ತ ಹಾರಾಡ್ಕೊಂಡು ಪುಕ್ಕದ ಹಾಗೆ ಜೀವಿಸ್ತಿದ್ದ. ಕೆಲಸಗಾರನೂ ಅಲ್ಲ, ಅಪಾಪೋಲಿಯೂ ಅಲ್ಲ. ಆ ಮೇಲೆ ಒಂದು ದಿವಸ, ಮಾಡೋದಕ್ಕೆ ಬೇರೋನೂ ಇಲ್ಲದೆ, ಅವನು ತೀರ್ಥಯಾತ್ರೆಗೆ ಹೋದ. ಎರಡು ವರ್ಷ ಪತ್ತೆಯೇ ಇಲ್ಲ. ಮುಂದೆ ಇದ್ದಕ್ಕಿದ್ದಂತೆ ಕಾಣಿಸಿಕೊಂಡ. ಬೇರೆಯೇ ರೀತಿಯ ಉಡುಪು—ಭುಜಗಳವರೆಗೂ ತಲೆಗೂದಲು, ತಲೆಗೆ ಪಾದ್ರಿ ಟೋಪಿ. ಮೈಗೆ ದೊರಗುಹತ್ತಿಯಿಂದ ಮಾಡಿದ ಹಳೇ ರೀತಿಯ ನಿಲುವಂಗಿ. ಭೀಕರ ಕಣ್ಣೋಟದಿಂದ ಜನರನ್ನು ಇರಿಯುತ್ತ, 'ಪಶ್ಚಾತ್ತಾಪಪಡಿ, ಮಹಾಪಾಪಿಗಳೇ !" ಎಂದು ಕೂಗಾಡ್ತಾ, ಅವನು ತಿರುಗಾಡಿದ. ಜನರು—ಅದರಲ್ಲೂ ಹೆಂಗಸರು—ಪಶ್ಚಾತ್ತಾಪಪಡದಂತೆ ತಡೆಯೋದು ಹೇಗೆ ಸಾಧ್ಯ? ಅವನು ಸೊಗಸಾದ ವ್ಯವಹಾರ ನಡಸಿದ. ತುಷ್ಕಿಕೋವ್‌ಗೆ ಆಹಾರ ಸಿಗ್ತು. ತುಷ್ಕಿಕೋವ್‌ಗೆ ಪಾನೀಯ ಸಿಗ್ತು. ಇಷ್ಟಪಟ್ಟ ಹೆಂಗಸರೆಲ್ಲ ತುಷ್ಕಿಕೋವನಿಗೆ ದೊರೆತರು...."

ಕಲ್ಲುಕೆಲಸಗಾರ ಸಿಟ್ಟಿನಿಂದ ನಡುವೆ ಬಾಯಿಹಾಕಿದ:

"ಆಹಾರ ಪಾನೀಯಕ್ಕೆಲ್ಲ ಮಹತ್ವವಿಲ್ಲ."

"ಹಾಗಾದರೆ ಯಾವುದು ಮಹತ್ವದ್ದು ?"

"ಮಾತು—ಮಹತ್ವವಿರೋದು ಅದಕ್ಕೆ !"

"ಹೂಂ. ಅವನು ಆಡ್ತಿದ್ದ ಮಾತು ಎಂಥದೂಂತ ನಾನು ಗಮನಿಸಲಿಲ್ಲ. ಸ್ವರ್ತ ನನ್ನಲ್ಲೇ ಏನು ಮಾಡಬೇಕೂಂತ ತೋಚದಷ್ಟು ಹೆಚ್ಚು ಮಾತುಗಳಿವೆ."

"ಆ ತುಷ್ಕಿಕೋವ್ ನಮಗೆ ಗೊತ್ತು. ಅವನ ನಾಮಧೇಯ ಮತ್ತು ಪಿತೃನಾಮ ದ್ಮಿತ್ರಿ ವಾಸಿಲ್ಯೇವಿಚ್ ಅಂತ," ಎಂದು ನೊಂದ ಧ್ವನಿಯಲ್ಲಿ ಪಿಯೋತರ್ ಅಂದ. ಗ್ರಿಗೊರಿ ಮೌನವಾಗಿ

ಕಣ್ಣುಗಳನ್ನು ಕೆಳಕ್ಕೆ ತಗ್ಗಿಸಿ, ತನ್ನೆದುರಿಗಿದ್ದ ಲೋಟವನ್ನೇ ದಿಟ್ಟಿಸಿದ.

ರಾಜಿಯಾಗುವವನಂತೆ ಒಸಿಪ್ ಘೋಷಿಸಿದ:

"ವಾದಿಸೋಕೆ ನಾನು ಹೊರಟಿಲ್ಲ. ನಿತ್ಯದ ಆಹಾರ ಸಂಪಾದಿಸೋಕೆ ಇರೋ ನಾನಾ ದಾರಿಗಳ ವಿಷಯ ಮಾಕ್ಸಿಮಿಶ್‌ಗೆ ಹೇಳಬೇಕೂಂತಷ್ಟೆ ನನಗಿದ್ದದ್ದು."

"ಆ ದಾರಿಗಳಲ್ಲಿ ಕೆಲವು ಸೆರೆಮನೆಗೆ ಕರೆದೊಯ್ತವೆ."

ಒಸಿಪ್ ಒಪ್ಪಿದ.

"ಅವುಗಳಲ್ಲಿ ಹಲವು ಕರೆದೊಯ್ತವೆ. ತೀರಾ ಕೆಲವು ಮಾತ್ರ ಧರ್ಮಗುರುವಿನ ಪದವಿಗೆ ಮುಟ್ಟಿಸ್ತವೆ. ಎಲ್ಲಿ ಹೊರಳಬೇಕು ಅನ್ನೋದು ಗೊತ್ತಿರಬೇಕು ಅಷ್ಟೆ."

ಗಾರೆ ಕೆಲಸಗಾರ ಹಾಗೂ ಕಲ್ಲುಕೆಲಸಗಾರರಂತಹ ಧರ್ಮಬೀರು ಜನರ ವಿಷಯವಾಗಿ, ಅವನು ಯಾವಾಗಲೂ ತುಸು ವ್ಯಂಗ್ಯವಾಗಿರುತ್ತಿದ್ದ. ಬಹುಶಃ ಅಂಥವರನ್ನು ಆತ ಇಷ್ಟಪಡುತ್ತಿರಲಿಲ್ಲ ಆದರೆ ತನ್ನ ಭಾವನೆಗಳನ್ನು ಅವನು ಜಾಗರೂಕತೆಯಿಂದ ಬಚ್ಚಿಡುತ್ತಿದ್ದ. ಜನರ ಬಗೆಗೆ ಅವನ ಧೋರಣೆ ಏನೆಂಬುದನ್ನು ಕಂಡುಹಿಡಿಯುವುದು ಒಟ್ಟಿನಲ್ಲಿ ಕಷ್ಟವಾಗಿತ್ತು.

ಯೆಫಿಮುಷ್ಕಾನೊಡನೆ ಆತ ಹೆಚ್ಚು ದಯೆಯಿಂದಲೂ ಮೃದುವಾಗಿಯೂ ವರ್ತಿಸುತ್ತಿದ್ದ. ತನ್ನ ಸಹೋದ್ಯೋಗಿಗಳ ಅಚ್ಚುಮೆಚ್ಚಿನ ವಿಷಯಗಳಾಗಿದ್ದ ದೇವರು, ನ್ಯಾಯ, ಪಂಥಗಳು, ಮಾನವ ಜೀವನದ ಕಷ್ಟ ಕೋಟಲೆಗಳು—ಇವುಗಳನ್ನು ಕುರಿತ ಚರ್ಚೆಗಳಲ್ಲಿ ಛಾವಣಿ ಕೆಲಸಗಾರ ಭಾಗಿಯಾಗುತ್ತಿರಲಿಲ್ಲ. ಕುರ್ಚಿಯ ಬೆನ್ನು ತನ್ನ ಡುಬ್ಬಕ್ಕೆ ತಾಗದಂತೆ ಕುರ್ಚಿಯನ್ನು ಅಡ್ಡವಾಗಿರಿಸಿ, ಅದರ ಮೇಲೆ ಕುಳಿತು, ಯೆಫಿಮುಷ್ಕಾ, ಒಂದು ಗ್ಲಾಸಿನ ಅನಂತರ ಇನ್ನೊಂದು ಗ್ಲಾಸು ಚಹಾವನ್ನು, ಶಾಂತವಾಗಿ ಕುಡಿಯುತ್ತಿದ್ದ. ಆದರೆ ಒಮ್ಮೊಮ್ಮೆ, ಇದ್ದಕ್ಕಿದ್ದಂತೆ ಅವನು ಲವಲವಿಕೆ ತೋರುವುದಿತ್ತು. ಹೊಗೆ ತುಂಬಿದ ಕೊಠಡಿಯಲ್ಲಿ ಅತ್ತಿತ್ತ ನೋಡುತ್ತ, ಮಾತಿನ ಕಲರವಕ್ಕೆ ಅವನು ಕಿವಿಗೊಡುತ್ತಿದ್ದ. ಕೊನೆಯಲ್ಲಿ ಹಾರಿ ಎದ್ದು ಮಾಯವಾಗುತ್ತಿದ್ದ. ಅವನಿಗಿದ್ದ ಡಜನುಗಟ್ಟಲೆ ಸಾಲಗಾರರಲ್ಲೊಬ್ಬ ಪಾನಮಂದಿರವನ್ನು ಹೊಕ್ಕ—ಎಂದು ಅದರ ಅರ್ಥ. ಸಾಲಗಾರರಲ್ಲಿ ಕೆಲವರು ಹೊಡೆತ ಕೊಟ್ಟು ವಸೂಲಿ ಮಾಡುವ ಪ್ರವೃತ್ತಿಯವರಾಗಿದ್ದುದರಿಂದ, ಛಾವಣಿ ಕೆಲಸಗಾರ ಯಾವಾಗಲೂ ಕಂಬಿ ಕೀಳುತ್ತಿದ್ದ.

ಅಚ್ಚರಿಪಡುತ್ತ ಅವನೆನ್ನುತ್ತಿದ್ದ:

"ಅವರು ಎಗರಿಬರೋ ರೀತಿ ನೋಡಿದರೆ ತಮಾಷೆ ಅನಿಸ್ತದೆ." ನನ್ನಲ್ಲಿ ದುಡ್ಡಿದ್ದೊಂದರೆ ಪರಮಸಂತೋಷದಿಂದಲೇ ನಾನು ಸಂದಾಯ ಮಾಡುವಾತ."

"ಥೂ, ಗೂನ!" ಎಂದು, ಓಡಿಹೋದವನ ಬೆನ್ನಹಿಂದೆ ಒಸಿಪ್ ಮಾತೆಸೆಯುತ್ತಿದ್ದ.

ಕೆಲವೇಳೆ ಯೆಫಿಮುಷ್ಕಾ, ಯೋಚನಾಮಗ್ನನಾಗಿ ಮೈಮರೆತು ಕುಳಿತುಬಿಡುತಿದ್ದ. ಆಗ ಆತ ಏನನ್ನೂ ಕಾಣುತ್ತಿರಲಿಲ್ಲ, ಏನನ್ನೂ ಕೇಳಿಸಿಕೊಳ್ಳುತ್ತಿರಲಿಲ್ಲ. ಮೂಳೆಗಳು ಕಾಣಿಸುತ್ತಿದ್ದ ಮುಖ ಸಡಿಲಗೊಂಡಿರುತ್ತಿತ್ತು. ದಯೆ ತುಂಬಿದ ಕಣ್ಣುಗಳು ಮತ್ತಷ್ಟು ದಯಾಪೂರ್ಣವಾಗಿ ಕಾಣಿಸುತ್ತಿದ್ದುವು.

"ಯಾವ ವಿಷಯ ಯೋಚಿಸ್ತಿದೀಯಾ, ಸ್ನೇಹಿತ?" ಎಂದು, ಅವರು ಅವನನ್ನು ಕೇಳುತ್ತಿದ್ದರು.

"ನಾನೇನಾದರೂ ಶ್ರೀಮಂತನಾಗಿದ್ದೆ ಅಂಪರೆ, ಈಗ ನಾನು ಜೀವಿಸಿರುವಷ್ಟೇ ವಾಸ್ತವವಾಗಿ, ನಿಜವಾದ ಅಪ್ಪಟ ಮಹಿಳೆಯನ್ನೇ-ಸುಶಿಕ್ಷಿತ ಧನಿಕ ಮಹಿಳೆಯನ್ನೇ-ಉದಾಹರಣೆಗೆ ಒಬ್ಬ ದಳವಾಯಿಯ ಮಗಳು-ಮದುವೆಯಾಗ್ತಿದ್ದೇಂತ, ಯೋಚಿಸ್ತಿದೀನಿ. ಅಂಥವಳನ್ನು ನಾನು ಪ್ರೀತಿಸದೆ ಇರ್ತಿದ್ದೆನೆ? ದೇವರೇ, ಅವಳ ಮಗ್ಗುಲಲ್ಲಿ ಎಷ್ಟು ಬೇಗನೆ ನಾನು ಉರಿದು ಹೋಗ್ತಿದ್ದೆ! ಅದನ್ನು ಹೀಗೆ, ಸೋದರರೇ: ಒಮ್ಮೆ ನಾನು, ಒಬ್ಬ ಕರ್ನಲ್‌ಗೆ ಸೇರಿದ ಒಂದು ಹಳ್ಳಿಗಾಡಿನ ಮನೆಗೆ ಹೊಸ ಛಾವಣಿ ಹಾಕ್ತಿದ್ದೆ...."

"ಅವನಿಗೆ ವಿಧವೆಯಾದೊಬ್ಬಳು ಮಗಳಿದ್ದಳು. ಅದನ್ನೆಲ್ಲಾ ನಾವು ಕೇಳಿದೀವಿ!" ಎಂದು ಪಿಯೋತರ್, ನಡುವೆ ತಡೆದು ಕಟುವಾಗಿ ಅಂದ.

ಆದರೆ ಯುಥಿಮುಷ್ಕಾ, ಅದನ್ನು ಮನಸ್ಸಿಗೇ ಹಚ್ಚಿಕೊಳ್ಳದೆ, ಮೊಣಕಾಲುಗಳನ್ನು ತನ್ನ ಅಂಗೈಗಳಿಂದ ತೀಡುತ್ತ, ಹಿಂದಕ್ಕೂ ಮುಂದಕ್ಕೂ ಓಲಾಡಿದಂತೆ ತನ್ನ ಡುಬ್ಬದಿಂದ ಗಾಳಿಯನ್ನು ಸೀಳುತ್ತ, ಮುಂದುವರಿದ:

"ಅವಳು ಆಗಾಗ್ಗೆ ಉದ್ಯಾನಕ್ಕೆ ಬರ್ತಿದ್ದಳು. ಬೆಳ್ಳಗೆ, ಮೃದುತುಪ್ಪಳದ ಹಾಗೆ ಇದ್ದಳು. ನಾನು ಛಾವಣಿಯಿಂದ ಅವಳ ಕಡೆ ಕೆಳಕ್ಕೆ ನೋಡಿ ನನ್ನಷ್ಟಕ್ಕೆ ಯೋಚಿಸ್ತಿದ್ದೆ: ಇವಳಿಲ್ಲದೆ ಸೂರ್ಯನಿದ್ದೇನು? ಇಡೀ ಪ್ರಪಂಚವಿದ್ದೇನು? ಅವಳ ಪಾದಗಳ ಬಳಿ ವಿರಮಿಸೋದಕ್ಕೆ ಪಾರಿವಾಳದಹಾಗೆ ಕೆಳಕ್ಕೆ ಹಾರಿಹೋಗೋದು ಸಾಧ್ಯವಿದ್ದಿದ್ದರೆ! ಅವಳೊಂದು ಅರಳಿದ ಹೂಕೆನೆಯ ಮಡಕೆಯಲ್ಲಿ ಅರಳಿದ ಸೊಗಸಾದ ನೀಲಿ ಹೂ. ಆ ಹುಡುಗರೇ, ಅವಳಂಥ ಮಹಿಳೆಯ ಜತೆ ಬದುಕೊಂದು ದೀರ್ಘರಾತ್ರಿಯೇ ಆಗಬೇಕು!"

"ಊಟಕ್ಕೇನು ಮಾಡ್ತೀಯಾ?" ಎಂದು ಪಿಯೋತರ್, ಕಟುವಾಗಿ ಆಗ್ರಹಿಸಿ ಕೇಳಿದ.

ಆದರೆ ಇದರಿಂದಲೂ ಯೆಫಿಮುಷ್ಕಾನ ಏಕಮನಸ್ಕತೆಗೆ ಭಂಗ ಬರಲಿಲ್ಲ. ಅವನು ಉದ್ಗರಿಸಿದ:

"ನಮ್ಮಪ್ಪ ದೇವರೇ! ಹೆಚ್ಚು ಆಹಾರ ನಮಗೆ ಬೇಕಾಗುತ್ತೇನು? ಅದೂ ಆಕೆ ಅಷ್ಟೊಂದು ಶ್ರೀಮಂತಳಿರುವಾಗ!"

ಒಸಿಪ್ ನಕ್ಕ.

"ಏ ಯುಥಿಮುಷ್ಕಾ, ಏಪ್ರೋಲಿಯೇ, ನಿನ್ನ-ನಿನ್ನ-! ಈ ವ್ಯಾಪಾರದಲ್ಲಿ ಬೇಗನೆ ನಿನ್ನ ಸರ್ವನಾಶವಾಗೋದೇ ಖಂಡಿತ."

ಯುಥಿಮುಷ್ಕಾ ಎಂದೂ, ಹೆಂಗಸರ ಹೊರತಾಗಿ ಬೇರೆ ಯಾವ ವಿಷಯದ ಬಗೆಗೂ ಮಾತನಾಡುತ್ತಿರಲಿಲ್ಲ. ಅವನು ಶಿಸ್ತುಳ್ಳ ಒಂದೇರೀತಿಯ ಕೆಲಸಗಾರನಾಗಿರಲಿಲ್ಲ. ಕೆಲವೇಳೆ ಬೇಗಬೇಗನೆ ಚೆನ್ನಾಗಿ ದುಡಿಯುತ್ತಿದ್ದ. ಬೇರೆ ಕೆಲವೇಳೆ ಏನೇನೂ ಚೆನ್ನಾಗಿ ದುಡಿಯುತ್ತಿರಲಿಲ್ಲ. ಮರದ ಸುತ್ತಿಗೆಯನ್ನು ಅಸಹನೆಯಿಂದ ಎಚ್ಚರವಿಲ್ಲದೆ ಪ್ರಯೋಗಿಸುತ್ತ, ಎರಡು ಅಂಚುಗಳು ಕೂಡುವಲ್ಲಿ ಬಿರುಕುಗಳನ್ನು ಬಿಡುತ್ತಿದ್ದ. ಅವನ ದೇಹದಿಂದ ಯಾವಾಗಲೂ ಮಿಾನೆಣ್ಣೆಯ ವಾಸನೆ ಹೊರಡುತ್ತಿತ್ತು. ಆದರೆ ಅವನಿಗೆ ತನ್ನದೇ ಆದ, ಹೊಸದಾಗಿ ಕೊಯ್ದ ಮರದ ದಿಮ್ಮಿಗಳಿಂದ ಬರುವಂತಹ, ಸೊಗಸಾದ ಆರೋಗ್ಯಕರವಾದ ವಾಸನೆಯೂ ಇತ್ತು.

ಬಡಗಿಯೊಡನೆ ಎಲ್ಲ ವಿಷಯಗಳ ಬಗೆಗೂ ಮಾತುಕತೆ ಸ್ವಾರಸ್ಯವೆನಿಸುತ್ತಿತ್ತಾದರೂ

ಅಷ್ಟೇನೂ ಹಿತಕರವಾಗುತ್ತಿರಲಿಲ್ಲ. ಅವನ ಮಾತುಗಳು ಯಾವಾಗಲೂ ಮನಸ್ಸಿನ ನೆಮ್ಮದಿಯನ್ನು ಅಸ್ತವ್ಯಸ್ತಗೊಳಿಸುತ್ತಿದ್ದುವು. ಅವನು ಪರಿಹಾಸ್ಯಮಾಡುತ್ತಿದ್ದುದೆಂದು, ಗಭೀರನಾಗಿರುತ್ತಿದ್ದುದೆಂದು—ಎಂದು ಹೇಳುವುದು ಕಷ್ಟವಾಗಿತ್ತು.

ಸಂಭಾಷಿಸಿಲು ಗ್ರಿಗೊರಿಯ ಅಚ್ಚುಮೆಚ್ಚಿನ ವಿಷಯ—ಆತ ಪ್ರೀತಿಸುತ್ತಿದ್ದ ಹಾಗೂ ದೃಢವಾಗಿ ನಂಬುತ್ತಿದ್ದ ದೇವರು.

ಒಮ್ಮೆ ನಾನೆಂದೆ:

"ಗ್ರಿಗೊರಿ, ದೇವರಲ್ಲಿ ವಿಶ್ವಾಸವಿಲ್ಲದಿರೋ ಜನರಿದಾರೇಂತ ನಿನಗೆ ಗೊತ್ತೆ ?"

ಅವನು ಸಣ್ಣನೆ ನಕ್ಕು ಅಂದ:

"ಏನದು ?"

"ದೇವರಿಲ್ಲಾಂತ ಅವರು ಹೇಳ್ತಾರೆ."

"ಹ್ಞಾ, ಹೌದು, ನನಗೆ ಗೊತ್ತಿದೆ."

ಅಗೋಚರ ನೊಣವೊಂದರ ಕಡೆಗೆ ಕಣ್ಣುಮಿಟಿಕಿಸಿ, ಅವನು ಮುಂದುವರಿದ:

"ಮೂರ್ಖನಾದವನು ದೇವರಿಲ್ಲವೆಂದು ತನ್ನ ಹೃದಯದೊಳಗೆ ಅನ್ನುತ್ತಾನೆ—ಅಂತ ಡೇವಿಡ್ ಅರಸು ಹೇಳಿದ್ದು ನೆನಪಿದೆಯೆ? ಅಂಥ ಅಜ್ಞಾನಿಗಳ ವಿಷಯದಲ್ಲಿ ಎಷ್ಟೊಂದು ಹಿಂದೆಯೇ ತೀರ್ಪುಕೊಡಲಾಯ್ತು ಅನ್ನೋದನ್ನು ಸ್ವಲ್ಪ ನೋಡು. ದೇವರಿಲ್ಲದೆ ಜೀವಿಸೋದು ಸಾಧ್ಯವಿಲ್ಲ."

ಆ ಮಾತಿಗೆ ಒಪ್ಪಿದನೇನೋ ಎನ್ನುವಂತೆ ಒಸಿಪ್ ಅಂದ:

"ದೇವರಲ್ಲಿ ಪಿಯೋತರ್‌ಗಿರೋ ನಂಬುಗೇನ ತಪ್ಪಿಸೋಕೆ ನೋಡು-ಆಗ ಗೊತ್ತಾಗ್ತದೆ!"

ಶಿಲ್ಪಿನನ ಸುಂದರ ಮುಖ ಗಂಭೀರವಾಯಿತು. ಗಾರೆಯ ಪದರುಗಳು ಅಂಟಿಕೊಂಡ ಉಗುರುಗಳಿದ್ದ ಬೆರಳುಗಳಿಂದ ತನ್ನ ಗಡ್ಡವನ್ನು ಮುಟ್ಟಿ, ರಹಸ್ಯಮಯ ರೀತಿಯಲ್ಲಿ ಅವನೆಂದ:

"ದೇವರು ಎಲ್ಲ ಶರೀರಗಳಲ್ಲೂ ವಾಸವಾಗಿರ್ತಾನೆ. ಮನಸ್ಸಾಕ್ಷಿಯೂ ಅಂತರ್ಯದ ಸಾರವೂ ದೇವರ ಉಡುಗೊರೆಗಳು."

"ಪಾಪ ?"

"ಪಾಪ ಶರೀರಜನ್ಯ—ಸೈತಾನನಿಗೆ ಹುಟ್ಟಿದ್ದು. ಪಾಪ ಬಾಹ್ಯವಾದದ್ದು—ಸಿಡುಬಿನ ಕಲೆಗಳ ಹಾಗೆ. ಅದಕ್ಕಿಂತ ಹೆಚ್ಚಿನದೇನೂ ಅಲ್ಲ. ಪಾಪದ ವಿಷಯ ಯಾರು ಹೆಚ್ಚಾಗಿ ಯೋಚಿಸ್ತಾನೋ ಅವನೇ ಹೆಚ್ಚು ಪಾಪ ಮಾಡ್ತಾನೆ. ಪಾಪದ ಯೋಚನೆಗಳನ್ನು ಮನಸ್ಸಿನಿಂದ ದೂರವಿಟ್ಟೆಯೆಂದರೆ ನೀನು ಪಾಪಮಾಡೋದಿಲ್ಲ. ಪಾಪದ ಯೋಚನೆಗಳನ್ನು ಬಿತ್ತೋದು, ಶರೀರದ ಒಡೆಯನಾದ ಪಿಶಾಚಿ."

ಶಂಕೆ ವ್ಯಕ್ತಪಡಿಸುತ್ತ ಕಲ್ಲುಕೆಲಸಗಾರನೆಂದ:

"ಯಾಕೋ ನನಗೆ ಹಾಗನಿಸೋದಿಲ್ಲ—ನೀನು ಹೇಳೋ ರೀತಿಯಲ್ಲೋ ಸಂಪೂರ್ಣವಾಗಿ ಅದಿಲ್ಲಾಂತ...."

"ಸಂಪೂರ್ಣವಾಗಿ ನಾನು ಹೇಳೋ ರೀತಿಯಲ್ಲೇ ಅದಿದೆ. ದೇವರು ಪಾಪವಿಲ್ಲದವನು. ಮನುಷ್ಯ, ದೇವರ ಪ್ರತಿಬಿಂಬ ಹಾಗೂ ಪ್ರತಿರೂಪ. ಪಾಪ ಮಾಡೋದು ಪ್ರತಿಬಿಂಬ—ಶರೀರ.

ಪ್ರತಿರೂಪಕ್ಕೆ ಪಾಪಮಾಡೋ ಸಾಮರ್ಥ್ಯವಿಲ್ಲ. ಪ್ರತಿರೂಪವೆಂದರೆ ಚೇತನ."

ಜಯಶೀಲನಾದವನಂತೆ ಅವನು ಮುಗುಳುನಕ್ಕ. ಆದರೆ ಪಿಯೋತರ್ ಗೊಣಗಿದ:

"ಅದು ಸಂಪೂರ್ಣವಾಗಿ ನೀನು ಹೇಳೋ ರೀತಿಯಲ್ಲೇ ಇಲ್ಲಾಂತ ನನಗೆ...."

ಒಸಿಪ್ ಕಲ್ಲುಕೆಲಸಗಾರನಿಗೆ ಅಂದ:

"ನಿನ್ನ ಪ್ರಕಾರ, ಪಾಪವಿಲ್ಲವೆಂದಾದರೆ ಪಶ್ಚಾತ್ತಾಪವಿಲ್ಲ. ಪಶ್ಚಾತ್ತಾಪವಿಲ್ಲವೆಂದಾದರೆ ಮುಕ್ತಿಯಿಲ್ಲ."

"ಅದು ನಿಜ. ಹಿಂದಿನಕಾಲದವರು ಹೇಳ್ತಿದ್ದ ಹಾಗೆ—ಪಿಶಾಚಿ ಕಣ್ಣೆದುರಿಂದ ಮಾಯವಾದರೆ, ದೇವರು ಮನಸಿನಿಂದ ಮಾಯ."

ಶಿಶ್ಲಿನ್ ಕುಡುಕನಾಗಿರಲಿಲ್ಲವಾದ್ದರಿಂದ, ಎರಡು ಗ್ಲಾಸು ವೈನ್ ಸೇವಿಸಿದರೆ ಸಾಕು, ಅವನಿಗೆ ಮತ್ತೇರುತ್ತಿತ್ತು. ಮುಖ ಕೆಂಪಾಗುತ್ತಿತ್ತು; ಕಣ್ಣುಗಳು ಮಗುವಿನ ಕಣ್ಣುಗಳಂತಾಗುತ್ತಿದ್ದುವು; ಧ್ವನಿಮೋಹಕವಾಗುತ್ತಿತ್ತು.

"ಆಹ, ಸೋದರರೇ, ಎಂಥ ಅದ್ಭುತ ಬದುಕನ್ನು ನಾವು ಬಾಳ್ತಿದೇವೆ-ಒಂದಿಷ್ಟು ದುಡಿತ—ಉಪವಾಸ ಅನ್ನೋದಿಲ್ಲ. ದೇವರು ದೊಡ್ಡವನು! ಇದು ಅದ್ಭುತಬದುಕು!"

ಅವನು ಅಳುತ್ತಿದ್ದ. ಕಂಬನಿ ಅವನ ಕೆನ್ನೆಗಳ ಮೇಲಿಂದ ಇಳಿಯುತ್ತಿತ್ತು; ಅವನ ರೇಶಿಮೆಯಂಥ ಗಡ್ಡದ ಮೇಲೆ ಜಪಸರದ ಮಣಿಗಳಂತೆ ಹೊಳೆಯುತ್ತಿತ್ತು.

ಈ ಹೊಳಪಿನ ಕಂಬನಿಯೂ ಸದಾಕಾಲವೂ ಆತ ಬದುಕಿನ ಗುಣಗಾನ ಮಾಡುತ್ತಿದ್ದುದೂ ನನಗೆ ಅಸಹ್ಯವೆನಿಸಿದುವು. ಅಜ್ಜ ಮಾಡುತ್ತಿದ್ದ ಗುಣಗಾನಗಳು ಹೆಚ್ಚು ಸಮಂಜಸವಾಗಿರುತ್ತಿದ್ದುವು—ಹೆಚ್ಚು ಸರಳವಾಗಿರುತ್ತಿದ್ದುವು; ಆಗುತ್ತಿದ್ದ ಬೇಸರವೂ ಕಡಮೆ.

ಈ ಮಾತುಕತೆಗಳಿಂದ ನನ್ನ ಮನಃಸ್ಥಿತಿ ನಿರಂತರವಾಗಿ ಉಲ್ಬಣವಾಗಿರುತ್ತಿತ್ತು. ಅಸ್ಪಷ್ಟ ಭೀತಿಗಳನ್ನು ಅವು ನನ್ನಲ್ಲಿ ಹುಟ್ಟಿಸಿದುವು. ರೈತರ ಬಗೆಗೆ ಅನೇಕ ಕಥೆಗಳನ್ನು ನಾನು ಓದಿದ್ದೆ. ಪುಸ್ತಕಗಳ ರೈತರಿಗೂ ವಾಸ್ತವ ಬದುಕಿನ ರೈತರಿಗೂ ನಡುವಣ ತೀಕ್ಷ್ಣ ವ್ಯತ್ಯಾಸವನ್ನು ನಾನು ಅರಿತಿದ್ದೆ. ಪುಸ್ತಕಗಳಲ್ಲಿದ್ದ ಎಲ್ಲ ರೈತರೂ ನತದೃಷ್ಟ ಪ್ರಾಣಿಗಳಾಗಿದ್ದರು. ಜೀವಂತ ರೈತರಲ್ಲಿ ವಿಚಾರದ ಹಾಗೂ ಮಾತಿನ ಸಿರಿವಂತಿಕೆ ಇದ್ದೇ ಇರುತ್ತಿತ್ತು. ಆದರೆ ಪುಸ್ತಕಗಳ ರೈತರಲ್ಲಿ—ಒಳ್ಳೆಯವರು ಕೆಟ್ಟವರು ಎಲ್ಲರಲ್ಲೂ—ಅದರ ಅಭಾವವನ್ನು ಕಂಡಿದ್ದೆ. ಪುಸ್ತಕ ರೈತ, ದೇವರು ಪಂಥಗಳು ಹಾಗೂ ಇಗರ್ಜಿಯ ಬಗೆಗೆ ಕಡಮೆ ಮಾತನಾಡುತ್ತಿದ್ದ. ತನಗಿಂತ ಉತ್ತಮರು, ಹೊಲ, ಬದುಕಿನ ಅನ್ಯಾಯಗಳು, ಕಾರ್ಪಣ್ಯಗಳು—ಈ ಬಗೆಗೇ ಹೆಚ್ಚಾಗಿ ಮಾತನಾಡುತ್ತಿದ್ದ. ಹೆಂಗಸರನ್ನು ಕುರಿತು ಅವನು ಮಾತನಾಡುತ್ತಿದ್ದುದೂ ಕಡಮೆ. ಅವರ ವಿಷಯದಲ್ಲಿ ಅವನು ತೋರುತ್ತಿದ್ದ ನಡವಳಿಕೆಯಲ್ಲಿ, ಒರಟುತನ ಕಡಮೆಯಾಗಿರುತ್ತಿತ್ತು; ಅದರಲ್ಲಿ ಸದ್ಭಾವನೆ ಹೆಚ್ಚಾಗಿರುತ್ತಿತ್ತು, ನಿಜವಾದ ರೈತನಿಗೆ, ಹೆಂಗಸು ವಿಶೇಷ ಆಕರ್ಷಣೆ; ಆದರೆ ಅಪಾಯಕಾರಿಯಾದ ಆಕರ್ಷಣೆ. ಅವಳು ತನ್ನ ಮೇಲೆ ಪ್ರಭುತ್ವ ನಡಸಿ ತನ್ನ ಜೀವನವನ್ನು ಹಾಳುಗೆಡವದಂತೆ ಮಾಡಲು, ಅವಳ ಜತೆ ಆತ ವಂಚನೆಯಿಂದ ವರ್ತಿಸಬೇಕಾಗುತ್ತಿತ್ತು. ಪುಸ್ತಕ ರೈತ ಎಂದೋ ಒಳ್ಳೆಯವನಾಗಿರುತ್ತಿದ್ದ, ಇಲ್ಲವೆ ಕೆಟ್ಟವನಾಗಿರುತ್ತಿದ್ದ. ಅವನ ಪೂರ್ಣ ಚಿತ್ರ ಆ ಪುಸ್ತಕದಲ್ಲಿರುತ್ತಿತ್ತು. ಆದರೆ ನಿಜವಾದ ರೈತ ತೀರಾ ಒಳ್ಳೆಯವನೂ

ಆಗಿರಲಿಲ್ಲ, ತೀರಾ ಕೆಟ್ಟವನೂ ಆಗಿರಲಿಲ್ಲ. ಬಹಳವಾಗಿ ಒಗಟಾಗಿಯೇ ಇರುತ್ತಿದ್ದ. ನಿಜ ಜೀವನದ ರೈತ ಎಷ್ಟೇ ವಾಚಾಳಿ ಇರಲಿ, ತನ್ನ ವಿಷಯದಲ್ಲಿ ಆತ ಹೇಳದೆ ಉಳಿದುದೇನೋ ಇದೆಯೆಂದು, ಈ ಅಂಶವನ್ನು ತನಗೊಬ್ಬನಿಗೋಸ್ಕರವಾಗಿಯೇ ಆತ ಇರಿಸಿಕೊಂಡಿರುವನೆಂದು, ಪ್ರಾಯಶಃ ಹೇಳದೆ ಉಳಿದ ಈ ಅಂಶವನ್ನು ಅವನ ಸಾರಸರ್ವಸ್ವವನ್ನು ಪ್ರತಿನಿಧಿಸುತ್ತದೆಂದು ಅನಿಸುತ್ತಿತ್ತು.

ಪುಸ್ತಕ ರೈತರಲ್ಲೆಲ್ಲಾ 'ಬಡಗಿಗಳ ವಸತಿ'ಯಲ್ಲಿನ ಪಿಯೋತರ್ ಪಾತ್ರ ಅತ್ಯಂತ ಮೆಚ್ಚುಗೆಯಾಗಿತ್ತು. ನನ್ನ ಸ್ನೇಹಿತರಿಗೆ ಈ ಕಥೆಯನ್ನು ಓದಿ ಹೇಳಲು ನಾನು ಬಯಸಿದೆ. ಆ ಪುಸ್ತಕವನ್ನು ನನ್ನ ಜತೆ ಸಂತೆಮಾಳಕ್ಕೆ ನಾನು ಒಯ್ದೆ. ಆಗಾಗ್ಗೆ ಯಾವನಾದರೊಬ್ಬ ಕೆಲಸಗಾರನ ವಸತಿಯಲ್ಲೇ ರಾತ್ರೆ ನಾನು ಉಳಿಯುವುದಿತ್ತು. ಹೆಚ್ಚಾಗಿ ಹೀಗೆ ಉಳಿಯಲು, ದಿನದ ದುಡಿತದ ಬಳಿಕ ಯಜಮಾನನ ಮನೆಗೆ ನಡೆದುಹೋಗಲಾಗದಷ್ಟು ನಾನು ಬಳಲಿರುತ್ತಿದ್ದುದೇ ಕಾರಣ.

ಬಡಗಿಗಳನ್ನು ಕುರಿತ ಒಂದು ಪುಸ್ತಕ ನನ್ನಲ್ಲಿದೆಯೆಂದು ನಾನು ಹೇಳಿದಾಗ, ಅವರೆಲ್ಲರೂ —ವಿಶೇಷವಾಗಿ ಒಸಿಪ್—ಬಹಳವಾಗಿ ಆಸಕ್ತಿ ತೋರಿದರು. ಆತ ನನ್ನ ಕೈಯಿಂದ ಆ ಪುಸ್ತಕವನ್ನು ತೆಗೆದುಕೊಂಡು ಸಂತನ ತಲೆಯಂತಿದ್ದ ತನ್ನ ತಲೆಯನ್ನು ಸಂದೇಹ ಸೂಚಕವಾಗಿ ಅಲುಗಿಸುತ್ತ, ಅದರ ಹಾಳೆಗಳನ್ನು ಮಗುಚಿದ.

"ನಮ್ಮ ಬಗ್ಗೆಯೇ ಬರೆದಿದಾರೇನೋ ಅನ್ನೋ ಹಾಗೆ! ಏನಂತೀಯಾ ಇದಕ್ಕೆ! ಯಾರು ಬರೆದರು ಇದನ್ನು ?—ಮೇಲಣ ವರ್ಗದವನೇನು ? ಹಂ—ನನಗೂ ಹಾಗೇ ಅನಿಸಿತ್ತು ! ಈ ಮೇಲಣವರ್ಗದವರೂ ಅಧಿಕಾರಿಗಳೂ ಎಂಥ ಕೆಲಸ ಬೇಕಾದರೂ ಮಾಡುವವರೇ ! ದೇವರು ಬಿಟ್ಟಿರೋದನ್ನು ಅಧಿಕಾರಿ ಭರ್ತಿ ಮಾಡ್ತಾನೆ. ಅವರು ಇಲ್ಲಿರೋದೇ ಅದಕ್ಕೆ."

"ದೇವರ ವಿಷಯವಾಗಿ ಅಷ್ಟೊಂದು ಗೌರವದಿಂದ ನೀನು ಮಾತಾಡ್ತಾ ಇಲ್ಲ," ಎಂದು ಪಿಯೋತರ್ ಅಭಿಪ್ರಾಯ ವ್ಯಕ್ತಪಡಿಸಿದ.

"ಇರಲಿ ಬಿಡು. ನನ್ನ ಬೋಳುತಲೆಯಮೇಲೆ ಹಿಮದ ಪದರ ಇಟ್ಟರೆ ಹ್ಯಾಗೋ, ಅಷ್ಟೇ ಬೆಲೇನ ಪ್ರಭು ನನ್ನ ಮಾತುಗಳಿಗೆ ಕೊಡ್ತಾನೆ. ನೀನೇನೂ ಚಿಂತಿಸ್ಬೇಡ—ನೀನು ನಾನೆಲ್ಲ ದೇವರವರೆಗೂ ತಲಪೋದೇ ಇಲ್ಲ."

ಇದ್ದಕ್ಕಿದಂತೆ ಅವನು ಉರಿದುಬಿದ್ದು, ಚಕಮುಕಿ ಕಲ್ಲಿನಿಂದ ಹೊರಡೋ ಕಿಡಿಗಳ ಹಾಗೆ ತೀಕ್ಷ್ಣ ಪದಗಳನ್ನು ಎಸೆಯತೊಡಗಿದ. ತಾನು ದ್ವೇಷಿಸಿದ ವಸ್ತುಗಳೆಡೆಗೆ ಆ ಕಿಡಿಗಳನ್ನು ಗುರಿ ಇಟ್ಟ. ಹಗಲು ಹೊತ್ತು ಅನೇಕವೇಳೆ ಆತ ಕೇಳಿದ:

"ಮಾಕ್ಸಿಮಿಶ್, ನೀನು ನಮಗೇನನ್ನಾದರೂ ಓದಿ ಹೇಳ್ತಿ, ಅಲ್ವೇನಪ್ಪ ? ಒಳ್ಳೇದು, ಬಹಳ ಒಳ್ಳೇದು. ನೀನು ಮಾಡಿರೋದು ಸೊಗಸಾದ ಯೋಚನೆ."

ದುಡಿಮೆ ಮುಗಿದ ಬಳಿಕ, ರಾತ್ರೆಯ ಊಟಕ್ಕೆಂದು ಅವನ ಜತೆ ಅವನ ವಸತಿಗೆ ನಾನು ಹೋದೆ. ಊಟದ ಅನಂತರ, ತನ್ನ ಕೆಲಸಗಾರ ಆರ್ದಾಲಿಯನ್ನನ ಜತೆ ಪಿಯೋತರ್ ಅಲ್ಲಿಗೆ ಬಂದ. ಫೋಮಾ ಎಂಬ ಎಳೇ ಯುವಕನೊಬ್ಬನ ಜತೆ ಶಿಶ್ಲಿನ್ ಆಗಮಿಸಿದ. ಕೆಲಸಗಾರರು ನಿದ್ರಿಸುತ್ತಿದ್ದ ಶೆಡ್ಡಿನಲ್ಲಿ ಒಂದು ದೀಪವನ್ನು ಬೆಳಗಲಾಯಿತು. ನಾನು ಓದತೊಡಗಿದೆ. ಮಿಸುಕದೆ, ಒಂದು ಮಾತನ್ನು ಆಡದೆ, ಅವರು ಕಿವಿಗೊಡುತ್ತಾ ಹೋದರು. ಬಹಳ ಹೊತ್ತು ಕೇಳಿದ

ಬಳಿಕ ಆರ್ದಾಲಿಯನಿನ್,ಮುನಿಯುತ್ತ ಉದ್ಗರಿಸಿದ:

"ಸಾಕಾಯ್ತು ನನಗೆ!"

ಅವನು ಹೊರ ಹೋದ. ಮೊದಲು ನಿದ್ದೆ ಹೋದವನು ಗ್ರಿಗೊರಿ. ಅವನ ಬಾಯಿ ಅಚ್ಚರಿಯ ಭಾವದಿಂದ ತೆರೆದು ಜೋತಾಡುತ್ತಿತ್ತು. ಬಡಗಿಗಳೂ ಬೇಗನೆ ನಿದ್ದೆ ಹೋದರು. ಪಿಯೋತರ್, ಒಸಿಪ್ ಮತ್ತು ಫೋಮಾ ಮಾತ್ರ, ನನ್ನ ಸುತ್ತಲೂ ಗುಂಪಾಗಿ ಒತ್ತಿಕೊಂಡು, ಪ್ರಯತ್ನಪೂರ್ವಕವಾಗಿ ಲಕ್ಷ್ಯಗೊಟ್ಟು ಆಲಿಸಿದರು.

ಓದು ಮುಗಿದಾಗ, ಒಸಿಪ್ ತಕ್ಷಣವೇ ದೀಪವನ್ನಾರಿಸಿದ. ಹೊತ್ತು ಹೆಚ್ಚು ಕಡಮೆ ಮಧ್ಯ ರಾತ್ರಿಯೇ ಆಗಿತ್ತೆಂದು ನಕ್ಷತ್ರಗಳು ತೋರಿಸಿದುವು.

ಕತ್ತಲಲ್ಲಿ ಪಿಯೋತರ್ ಕೇಳಿದ:

"ಇಂಥ ಪುಸ್ತಕಗಳ ಉದ್ದೇಶವೇನು? ಯಾರ ವಿರುದ್ಧವಾಗಿ ಇದನ್ನು ಬರೆದಿರೋದು?"

"ನಿದ್ದೆ ಮಾಡೋ ಹೊತ್ತಾಯ್ತು," ಎಂದು ಒಸಿಪ್, ತನ್ನ ಬೂಟುಗಳನ್ನು ಕಳಚುತ್ತ ಅಂದ.

ಫೋಮಾ ಮೌನವಾಗಿ ಒಂದು ಬದಿಗೆ ಹೊರಟುಹೋದ.

"ಇದನ್ನು ಬರೆದಿರೋದು ಯಾರ ವಿರುದ್ಧ ಅಂತ ನಾನು ಕೇಳ್ತಿದೀನಿ," ಎಂದು ಪಿಯೋತರ್ ಪಟ್ಟುಹಿಡಿದು ಪುನಃ ಕೇಳಿದ.

ಯಾವುದೋ ಅಟ್ಟಣಿಗೆಯ ಮೇಲೆ ಹಾಸಿಗೆ ಸಿದ್ಧಪಡಿಸುತ್ತ ಒಸಿಪ್ ಉತ್ತರವಿತ್ತ:

"ಅವರೇ ಬಲ್ಲರು."

ಕಲ್ಲುಕೆಲಸಗಾರ ಒತ್ತಿ ಹೇಳುತ್ತ ಹೋದ:

"ಮಲತಾಯಂದಿರ ವಿರುದ್ಧ ಅದನ್ನು ಬರೆದಿದಾರೇಂತಾದರೆ, ಅದರಲ್ಲಿ ಹುರುಳೇ ಇಲ್ಲ. ಇಂಥ ಪುಸ್ತಕದಿಂದ ಮಲತಾಯಂದಿರು ಸುಧಾರಣೆಯಾಗೋದಿಲ್ಲ. ಪಿಯೋತರನ ವಿರುದ್ಧ ಬರೆದಿದಾರೇಂತಾದರೆ, ಅದರಲ್ಲೂ ಅರ್ಥವಿಲ್ಲ. ಬಂದದ್ದನ್ನು ಆತ ಅನುಭವಿಸಲೇಬೇಕಾಗಿತ್ತು. ಕೊಲೆ ಮಾಡಿದ ಅಂದಮೇಲೆ ಸೈಬೀರಿಯಾ ಸಿಕ್ಕಿತು. ತಪ್ಪೇನೂ ಇಲ್ಲ. ಅಂಥ ಪ್ರಸಂಗದಲ್ಲಿ ನೆರವುನೀಡೋದು ಪುಸ್ತಕದಿಂದ ಸಾಧ್ಯವಿಲ್ಲ....ಸಾಧ್ಯವೇ ಇಲ್ಲ—ಇದೆಯೇನಪ್ಪ?"

ಒಸಿಪ್ ಉತ್ತರವೀಯಲಿಲ್ಲ. ಹೀಗಾಗಿ, ಕಲ್ಲುಕೆಲಸಗಾರನೇ ಮುಕ್ತಾಯಗೊಳಿಸಿದ:

"ಈ ಲೇಖಕರಿಗೆಲ್ಲಾ ಮಾಡೋದಕ್ಕೆ ಬೇರೆ ಕೆಲಸವಿಲ್ಲ. ಹೀಗಾಗಿ, ಇತರರ ವ್ಯವಹಾರದಲ್ಲಿ ತಲೆ ಹಾಕ್ಕೊಂಡು ಹೋಗ್ತಾರೆ. ಹೆಂಗಸರದೊಂದು ಗುಂಪು ಒಟ್ಟು ಸೇರಿದಾಗ ಆಗುತ್ತಲ್ಲ— ಹಾಗೇ ಸರಿ. ವಂದನೆ. ನಿದ್ದೆ ಮಾಡೋ ಹೊತ್ತಾಯ್ತು"

ಒಂದು ಕ್ಷಣ ಆತ, ಬೆಳುದಿಂಗಳಲ್ಲಿ ನೀಲಿಯಾಗಿ ಕಂಡ ಬಾಗಿಲ ಹಾದಿಯ ಚೌಕದಲ್ಲಿ ನಿಂತು ಕೇಳಿದ:

"ನಿನ್ನದೇನು ಅಭಿಪ್ರಾಯ, ಒಸಿಪ್?"

ನಿದ್ದೆಗಣ್ಣಿನಲ್ಲಿ ಒಸಿಪ್ ಉತ್ತರವಿತ್ತ:

"ಹ್ಞ?"

"ಓ, ಇರಲಿಬಿಡು, ನಿದ್ದೆಮಾಡು."

ಶಿಶ್ಲಿನ್, ನೆಲದಮೇಲೆ ತಾನು ಕುಳಿತಿದ್ದಲ್ಲೇ ಮೈಚಾಚಿದ. ನನ್ನ ಮಗ್ಗುಲಲ್ಲಿ, ಪುಡಿಗೂಡಿಸಿದ್ದ ಹುಲ್ಲಿನಮೇಲೆ, ಫೋಮಾ ಮಲಗಿಕೊಂಡ. ಇಡೀ ವಸತಿ ಪ್ರದೇಶವೇ ನಿದ್ದೆ ಹೋಗಿತ್ತು. ದೂರದಿಂದ ರೈಲುಗಾಡಿಗಳ ಶಿಳ್ಳು, ಚಲಿಸುತ್ತಿದ್ದ ಕಬ್ಬಿಣದ ಗಾಲಿಗಳ ಭಾರೀ ಗುಡುಗು, ಕೊಂಡಿಗಳ ಖಣಖಣನಾದ ಕೇಳಿಸಿದುವು. ಶೆಡ್ಡು, ಗೊರಕೆಯ ಸದ್ದುಗಳ ವಿವಿಧ ಶ್ರುತಿಗಳಿಂದ ತುಂಬಿತ್ತು. ನನಗೆ ನಿರಾಸೆಯಾಯಿತು. ಓದಿದ ಬಳಿಕ ಏನಾದರೂ ಚರ್ಚೆ ಇರಬಹುದು ಎಂದಿದ್ದೆ. ಆದರೆ ಏನೂ ಇರಲಿಲ್ಲ.

ಒಮ್ಮಿಂದೊಮ್ಮೆಲೆ ಒಸಿಪ್, ಶಾಂತವಾಗಿ, ಸುಸ್ಪಷ್ಟವಾಗಿ ಅಂದ:

"ಅದು ಯಾವುದನ್ನೂ ಮನಸ್ಸಿಗೆ ಹಚ್ಕೋಬೇಡಿ ಬಂಧುಗಳೇ. ನೀವಿನ್ನೂ ಯುವಕರು. ದೀರ್ಘವಾದ ಬದುಕು ನಿಮ್ಮ ಮುಂದಿದೆ. ನಿಮ್ಮ ಸ್ವಂತ ವಿಚಾರಗಳನ್ನೇ ಶೇಖರಿಸಿ ಇಡಿ. ನಿಮ್ಮದೇ ಆದ ಒಂದು ವಿಚಾರ, ಎರವಲು ಪಡೆದ ಎರಡು ವಿಚಾರಗಳಿಗೆ ಸಮ. ನಿದ್ದೆ ಬಂತೆ, ಫೋಮಾ?"

"ಇಲ್ಲ," ಎಂದು ಆತುರದಿಂದ ಫೋಮಾ ಉತ್ತರಿಸಿದ.

"ನಿಮಗಿಬ್ಬರಿಗೂ ಓದೋಕೆ ಬರ್‍ತದೆ. ಆದ್ದರಿಂದ, ಓದ್ತಾಹೋಗಿ. ಅದನ್ನೇ ಬಹಳ ಅವಲಂಬಿಸಬೇಡಿ, ಅಷ್ಟೆ. ತಮಗೆ ಇಷ್ಟಬಂದದ್ದನ್ನೆಲ್ಲಾ ಅವರು ಅಚ್ಚುಹಾಕ್ತಾರೆ—ಅಧಿಕಾರ ಅವರದ್ದು."

ಅಟ್ಟಣಿಗೆಯ ಅಂಚಿನಮೇಲಿಂದ ತನ್ನ ಕಾಲುಗಳನ್ನು ಹೊರಕ್ಕಿಳಿಸಿ, ಅಂಚನ್ನು ತನ್ನ ಕೈಗಳಿಂದ ಅಮುಕಿ ಹಿಡಿಯುತ್ತ, ನಮ್ಮೆಡೆಗೆ ಬಾಗಿ ಅವನು ಮುಂದುವರಿದ:

"ಪುಸ್ತಕ-ಏನಿದೆ ಪುಸ್ತಕದಲ್ಲಿ? ಒಬ್ಬ ಮಾಹಿತಿಗಾರ-ಅಷ್ಟೇ ಪುಸ್ತಕ ಅಂದರೆ. ನೋಡು, ಒಬ್ಬ ಸಾಮಾನ್ಯ ಮನುಷ್ಯ ಇರೋದು ಹೀಗೆ; ಒಬ್ಬ ಬಡಗಿ, ಅಥವಾ ಬೇರಾವನಾದರೂ ಅಂಥ ಮನುಷ್ಯ. ಆಮೇಲೆ, ನೋಡು, ಮೇಲಣ ವರ್ಗದವರು ಇರೋದು ಹೀಗೆ, ಇತರ ಜನರಿಂದ ಇವರು ಭಿನ್ನರೇನೋ ಅನ್ನೋ ಹಾಗೆ. ಪುಸ್ತಕ ಹೇಳೋದು ಇಷ್ಟೇಂತಿಟ್ಕೋ. ಉದ್ದೇಶ ವಿಲ್ಲದೆ ಪುಸ್ತಕವನ್ನ ಬರೆಯೋದಿಲ್ಲ. ಯಾರಾದರೊಬ್ಬರನ್ನು ರಕ್ಷಿಸೋದಕ್ಕೇ ಅದನ್ನು ಬರೆದಿರ್‍ತಾರೆ."

"ಆ ಕಂಟ್ರಾಕ್ಟರನನ್ನು ಕೊಂದು ಪಿಯೋತರ್ ಸರಿಯಾದ್ದನ್ನೇ ಮಾಡಿದ," ಎಂದು ಫೋಮಾ, ದಪ್ಪಗಂಟಲಲ್ಲಿ ಅಂದ.

"ಯಾಕೆ ನೀನು ಇಂಥ ಮಾತು ಹೇಳ್ಬೇಕು? ಮನುಷ್ಯನನ್ನು ಕೊಲ್ಲೋದು ಎಂದೂ ಸರಿಯಲ್ಲ. ಗ್ರಿಗೊರಿಯನ್ನು ನೀನು ಇಷ್ಟಪಡೋದಿಲ್ಲಾಂತ ನನಗೆ ಗೊತ್ತು. ಆದರೆ ಆ ವಿಚಾರವನ್ನು ನಿನ್ನ ತಲೆಯಿಂದ ಹೊರಹಾಕು. ನಾವು ಯಾರೂ ಶ್ರೀಮಂತರಲ್ಲ. ಇವತ್ತು ನಾನು ಯಜಮಾನ. ನಾಳೆ ಪುನಃ ನಾನೊಬ್ಬ ಸಾದಾ ಕೆಲಸಗಾರ."

"ನಿನ್ನ ವಿಷಯ ನಾನು ಮಾತಾಡ್ತಿಲ್ಲ ಒಸಿಪ್‌ಮಾವ."

"ಎಲ್ಲಾ ಒಂದೇ."

"ನೀನು ನ್ಯಾಯವಂತ."

ಫೋಮಾನ ದ್ವೇಷದ ಮಾತುಗಳನ್ನು ನಡುವೆ ತಡೆಯುತ್ತ ಒಸಿಪ್ ಅಂದ:

"ತಾಳು, ಆ ಪುಸ್ತಕದಲ್ಲಿರೋದೇನೂಂತ ನಾನು ನಿನಗೆ ಹೇಳ್ತೀನಿ. ಅದೊಂದು ವಂಚನೆಯ ಪುಸ್ತಕ. ಇಲ್ಲೊಬ್ಬ, ರೈತನಿಲ್ಲದ ಜಮಿನ್ದಾರ ಇದಾನೆ; ಇಲ್ಲೊಬ್ಬ, ಜಮಿನ್ದಾರನಿಲ್ಲದ ರೈತ ಇದಾನೆ. ಏನಾಗ್ತದೆ ಅದರಿಂದ? ಜಮಿನ್ದಾರ ಬಡವನಾಗ್ತಾನೆ, ರೈತ ಅವನಿಗಿಂತ ಹೆಚ್ಚು ಉತ್ತಮವಾಗಿರೋದಿಲ್ಲ. ಜಮಿನ್ದಾರ ದಡ್ಡನಾಗಿ ದುರ್ಬಲನಾಗ್ತಾನೆ. ರೈತ ಕುಡುಕನಾಗ್ತಾನೆ; ಹೃದಯದಲ್ಲೊಂದು ಪ್ರತೀಕಾರದ ಕೆಂಡ ಕಟ್ಕೊಂಡು ಬಾಯಿಬಡಕನಾಗ್ತಾನೆ. ಹಾಗೇಂತ ಕಥೆ ಹೇಳ್ತದೆ. ಜಮಿನ್ದಾರನ ಕೆಳಗೆ ಗುಲಾಮನಾಗಿರೋದೇ ಉತ್ತಮ—ಅಂತ ತೋರಿಸೋಕೆ ಅದು ಪ್ರಯತ್ನಮಾಡ್ತದೆ. ಜಮಿನ್ದಾರ ರೈತನ ಹಿಂದೆ ಅವಿತುಕೊಳ್ತಿದ್ದ; ರೈತ ಜಮಿನ್ದಾರನ ಹಿಂದೆ ಅವಿತುಕೊಳ್ತಿದ್ದ. ಅವರಿಬ್ಬರೂ ಹೊಟ್ಟೆ ತುಂಬಿಕೊಂಡು, ಸಂತೃಪ್ತರಾಗಿ, ಸುತ್ತುಸುತ್ತು ಹೋಗ್ತಿದ್ದರು. ಓ—ಗುಲಾಮ ಪದ್ಧತೀಲಿ ಬದುಕು ಹೆಚ್ಚು ಶಾಂತವಾಗಿತ್ತು ಅನ್ನೋದನ್ನ ನಾನು ಅಲ್ಲಗಳೆಯೋದಿಲ್ಲ. ಬಡರೈತರನ್ನು ಕಟ್ಟಿಕೊಂಡರೆ ಏನೂ ಲಾಭವಿಲ್ಲಾಂತ ಭೂಮಾಲಿಕರಿಗೆ ಕಂಡಿತು. ರೈತರು ಹೊಟ್ಟೆತುಂಬಿಕೊಂಡು ಬರಿತಲೆಯವರಾಗಿರೋದೇ ಅವರಿಗೆ ಬೇಕಾಗಿತ್ತು. ನನಗೆ ಗೊತ್ತಿರೋದನ್ನು ನಾನು ಹೇಳ್ತಿದೀನಿ. ನಾಲ್ವತ್ತುವರ್ಷಗಳ ಕಾಲ ಜಮಿನ್ದಾರರ ಕೆಳಗೆ ಗುಲಾಮನಾಗಿರಲಿಲ್ಲವೆ ನಾನು? ನನ್ನ ಚಕ್ಕಳಸುಲಿದು, ಸಾಕಷ್ಟು ಜ್ಞಾನವನ್ನು ತುಂಬಿಸಿದಾರೆ."

ಮಾದಕಪಾನೀಯಗಳ ಗಾಡಿ ಹೊಡೆಯುತ್ತಿದ್ದ ಪಿಯೋತರ್—ತನ್ನ ಗಂಟಲನ್ನು ತಾನೇ ಕುಯ್ದುಕೊಂಡಿದ್ದಾತ—ಭೂಮಾಲಿಕರ ವಿಷಯವಾಗಿ ಅದೇ ರೀತಿ ಮಾತನಾಡಿದ್ದನೆಂಬುದು ನನಗೆ ನೆನಪಾಯಿತು. ಆ ದುಷ್ಟ ಮುದುಕನ ವಿಚಾರಗಳೂ ಒಸಿಪನ ವಿಚಾರಗಳೂ ಒಂದೇ ಆಗಿವೆಯೆಂಬ ಸಂಗತಿ ನನಗೆ ರುಚಿಸಲಿಲ್ಲ.

ಒಸಿಪ್ ನನ್ನ ಕಾಲಿನ ಮೇಲೆ ತನ್ನ ಕೈಯನ್ನಿರಿಸುತ್ತ ಮುಂದುವರಿದ:

"ಪುಸ್ತಕಗಳಲ್ಲೂ ಇತರ ಬರೆವಣಿಗೆಯಲ್ಲೂ ಇರೋ ಅರ್ಥವನ್ನೇ ನೇರವಾಗಿ ಕಾಣೋದಕ್ಕೆ ನೀನು ಸಮರ್ಥನಾಗಬೇಕು. ಮುಚ್ಚುಮರೆ ಮಾಡೋದಕ್ಕೆ ಅವರು ಪ್ರಯತ್ನಪಟ್ಟರೂ ಕೂಡಾ, ಏನಾದರೂ ಉದ್ದೇಶವಿಲ್ಲದೆ ಯಾರೂ ಯಾವ ಕೆಲಸವನ್ನೂ ಮಾಡೋದಿಲ್ಲ. ಪುಸ್ತಕಗಳನ್ನು ಬರೆಯೋದರಲ್ಲಿ ಒಂದು ಉದ್ದೇಶವಿದೆ: ಅದು ತಲೆ ಕೆಡಿಸೋದು. ಕಟ್ಟಿಗೆ ಕಡಿಯೋದು—ಪಾದರಕ್ಷೆಗಳಿಗೆ ಮೊಳೆ ಹೊಡೆಯೋದರವರೆಗೆ, ಪ್ರತಿಯೊಂದರಲ್ಲೂ ಮಿದುಳು ಆಸಕ್ತವಾಗ್ತದೆ...."

ಒಮ್ಮೆ ಹಾಸಿಗೆಯ ಮೇಲೆ ಮಲಗುತ್ತ, ಮತ್ತೊಮ್ಮೆ ನೀರವತೆಯೊಳಕ್ಕೂ ಕತ್ತಲಿನೊಳಕ್ಕೂ ತನ್ನ ಸ್ವಚ್ಛವಾದ ಮಾತುಗಳನ್ನು ಮೃದುವಾಗಿ ಚೆಲ್ಲುವುದಕ್ಕೋಸ್ಕರ ಹಾರಿ ಕುಳಿತುಕೊಳ್ಳುತ್ತ, ಬಹಳ ಹೊತ್ತಿನವರೆಗೂ ಆತ ಮಾತನಾಡುತ್ತ ಹೋದ:

"ಭೂಮಾಲಿಕ ಮತ್ತು ರೈತ—ಇವರ ನಡುವೆ ಬಹಳ ವ್ಯತ್ಯಾಸವಿದೆ, ಅಂತ ಹೇಳ್ತಾರೆ. ಅದು ನಿಜವಲ್ಲ. ನಾವಿಬ್ಬರೂ ಒಂದೇ. ಅವನು ಮೇಲಿದಾನೆ, ಅಷ್ಟೆ. ಸ್ಪಷ್ಟವಾಗಿ ಹೇಳೋದಾದರೆ, ಜಮಿನ್ದಾರ ತನ್ನ ಪುಸ್ತಕಗಳಿಂದ ಕಲಿತ್ಕೋತಾನೆ. ನಾನು ನನ್ನ ಗಾಯಗಳಿಂದ ಕಲಿತ್ಕೋತೇನೆ. ಅವನ ಹಿಂಭಾಗ ಹೆಚ್ಚು ಬಿಳಿಯಾಗಿರೋದರ ಹೊರತು, ಬುದ್ಧಿವಂತಿಕೆಯಲ್ಲೇನೂ ಅವನು ಉತ್ತಮನಲ್ಲ. ಇಲ್ಲವಪ್ಪ ಯುವಕ,—ಈ ಪ್ರಪಂಚದಲ್ಲಿ ಹೊಸ ವ್ಯವಸ್ಥೆನ

ಉಂಟುಮಾಡೋದಕ್ಕೆ ಈಗಾಗಲೇ ವೇಳೆ ಸಮೀಪಿಸಿದೆ. ಈ ಪುಸ್ತಕಗಳನ್ನು ಬಿಟ್ಟುಬಿಡು; ಅವುಗಳನ್ನು ದೂರ ಎಸೆ. ಪ್ರತಿಯೊಬ್ಬನೂ ತನ್ನನ್ನು ತಾನೇ ಕೇಳಿಕೊಳ್ಳಲಿ: ನಾನು ಯಾರು ಅಂತ? ಒಬ್ಬ ಮನುಷ್ಯ. ಜಮೀನ್ದಾರ ಯಾರು? ಅವನೂ ಮನುಷ್ಯ. ಹಾಗಾದರೆ ವ್ಯತ್ಯಾಸ ವೇನು? ಅಥವಾ ಬಹುಶಃ, ದೇವರು ಅವನಿಂದ ಐದು ಕೊಪೆಕ್ ಹೆಚ್ಚು ಕೇಳ್ತಾನೊ? ಇಲ್ಲವಪ್ಪ, ಸಂದಾಯಮಾಡೋ ವಿಷಯ ಬಂದಾಗ, ದೇವರ ದೃಷ್ಟಿಯಲ್ಲಿ ನಾವೆಲ್ಲಾ ಒಂದೇ...."

ಕೊನೆಯಲ್ಲಿ ನಸುಕುಹರಿಯುವ ಹೊತ್ತಿಗೆ, ಉಷಃಕಾಲವಾಗಲೇ ನಕ್ಷತ್ರಗಳನ್ನು ಆರಿಸಿ ಬಿಟ್ಟಿದ್ದಾಗ, ಒಸಿಪ್ ನನ್ನೊಡನೆ ಅಂದ:

"ಹೇಗೆ ಮಾತಾಡ್ತೀನಪ್ಪ ನಾನು! ನನ್ನ ಜೀವಮಾನದಲ್ಲಿ-ಹಿಂದೆಂದೂ ಯೋಚಿಸಿರದೇ ಇದ್ದ ಎಷ್ಟೋ ವಿಷಯಗಳನ್ನು ಈ ರಾತ್ರೆ ನಾನು ಹೇಳ್ದೆ. ನಾನು ಹೇಳಿದ್ದನ್ನೆಲ್ಲ ಮನಸ್ಸಿಗೆ ಹಚ್ಕೋಬೇಡಿ, ಬಾಂಧವರೇ. ನನಗೆ ನಿದ್ದೆ ಬರಲಿಲ್ಲಾಂತ ಇದನ್ನೆಲ್ಲಾ ನಾನು ಹುಟ್ಟಿಸಿ ಹೇಳ್ದೆ-ನಾನು ನಂಬ್ತೀನಿ ಅಂತಲ್ಲ. ಕಣ್ಣು ತೆರಕೊಂಡು ಇಲ್ಲಿ ಮಲಗಿದಾಗ, ಬರೀ ತಮಾಷೆಗಾಗಿ ಏನನ್ನಾದರೂ ಸೃಷ್ಟಿಸೋಣ ಅನಿಸ್ತದೆ: ಒಂದಾನೊಂದು ಕಾಲದಲ್ಲಿ ಒಂದು ಕಾಗೆ ಇತ್ತು; ಹೊಲಗಳಿಂದ ಗುಡ್ಡಗಳಿಗೆ, ತೋಟದಿಂದ ತೋಟಕ್ಕೆ, ಅದು ಹಾರಾಡಿತು; ತನ್ನ ಆಯುಸ್ಸನ್ನು ಹೀಗೆ ಕಳೀತು; ಕಾಹಿಲೆ ಬಿದ್ದು ಸತ್ತಿತು; ಕೊಳೆತು ಒಣಗಿತು. ಇಂಥ ಕಥೆಗೆ ಏನರ್ಥ? ಏನು ಅರ್ಥವೂ ಇಲ್ಲ. ಸರಿ, ನಿದ್ದೆಮಾಡೋಣ. ಬೇಗನೆ ಏಳಬೇಕಲ್ಲ...."

೧೮

ಹಿಂದೆ ನನ್ನ ಬದುಕಿನಲ್ಲಿ ಉಗಿಕೆಲಸಗಾರ ಯಾಕೋವನಿಗಿದ್ದಂತಹದೇ ಸ್ಥಾನವನ್ನು ಈಗ ಒಸಿಪ್ ಆಕ್ರಮಿಸಿದ. ಅವನಂತೆ ಈತನೂ ನನ್ನ ದೃಷ್ಟಿಯಲ್ಲಿ ಹಿರಿದಾಗುತ್ತ ಹೋಗಿ, ಉಳಿದೆಲ್ಲರನ್ನೂ ನೋಟದಿಂದ ಮರೆಮಾಡಿದ. ಉಗಿಕೆಲಸಗಾರನಿಗೂ ಅವನಿಗೂ ಸಮಾನವಾದ ಎಷ್ಟೋ ಅಂಶಗಳಿದ್ದುವು. ಇದರ ಜೊತೆಯಲ್ಲಿ ನನ್ನ ಅಜ್ಜ, ಪುರಾತನ ತತ್ವವಾದಿ ಪಿಯೋತರ್ ವಾಸಿಲ್ಯೇವಿಚ್ ಮತ್ತು ಅಡುಗೆಯ ಸ್ಮೂರಿ—ಇವರ ನೆನಪನ್ನೂ ಇವನು ಹುಟ್ಟಿಸುತ್ತಿದ್ದ. ನನ್ನ ಸ್ಮರಣೆಯಲ್ಲಿ ಆಳವಾಗಿ ಅಚ್ಚೊತ್ತಿದ್ದ ಈ ಎಲ್ಲ ಜನರ ನೆನಪನ್ನು ಮಾಡಿಕೊಡುವುದರ ಜತೆಗೆ ತನ್ನ ಸ್ವಂತದ ಮಾದರಿಯನ್ನೂ ಇವನು ಉಳಿಸಿದ: ಇದು, ಕಂಚಿನೊಳಕ್ಕೆ ಕೊರೆಯುತ್ತ ಇಳಿಯುವ ಸುಡುದ್ರಾವಕದಂತೆ ಆಳವಾಗಿ ಬಿಂಬಿಸಿತು. ಅವನಲ್ಲಿ ಇಬ್ಬಗೆಯ ಯೋಚನಾಕ್ರಮವಿತ್ತೆಂಬುದು ಸ್ಪಷ್ಟವಾಗಿತ್ತು. ದುಡಿಮೆಯ ವೇಳೆಯಲ್ಲಿ ಸರಳವೂ ತೀವ್ರವೂ ಆದ ಅವನ ಆಲೋಚನಾ ವೈಖರಿ, ನಿದ್ದೆ ಬಾರದ ಇರುಳಿನ ಹೊತ್ತಿಗಿಂತ, ಅಥವಾ ಅವನ ಉಪಪತ್ನಿಯಾದ ಸಿಹಿರೊಟ್ಟಿ ಮಾರಾಟಗಾತಿಯನ್ನು ನೋಡಲೆಂದು ಅವನೂ ನಾನೂ ಶಹರಕ್ಕೆ ಹೋಗುತ್ತಿದ್ದ ಸಂಜೆಯ ಸಮಯಕ್ಕಿಂತ ಹೆಚ್ಚು ಪ್ರಾಯೋಗಿಕವೂ ಸುಲಭಗ್ರಾಹ್ಯವೂ ಆಗಿರುತ್ತಿತ್ತು. ರಾತ್ರೆ ಅವನಲ್ಲಿ ವಿಶೇಷ ಯೋಚನೆಗಳಿರುತ್ತಿದ್ದುವು. ಕಂದೀಲಿನ ಬೆಳಕಿನಂತೆ ಶುಭ್ರವಾಗಿಯೂ ಎಲ್ಲೆಡೆಗಳಿಂದಲೂ ಅವು ಹೊಳೆಯುತ್ತಿದ್ದುವು. ಆದರೆ, ಯಾವ ಪಾರ್ಶ್ವ ಸರಿಯಾದುದು, ಅಥವಾ ಅವನ ಆಯ್ಕೆ ಯಾವುದು

ಎಂಬುದನ್ನು ಕಂಡುಹಿಡಿಯಲು ನಾನು ಶಕ್ತನಾಗಿರಲಿಲ್ಲ.

ಆವರೆಗೆ ನಾನು ಸಂಧಿಸಿದ್ದ ಎಲ್ಲರಿಗಿಂತ ಆತ ಅದೆಷ್ಟೋ ಹೆಚ್ಚು ಜಾಣನೆಂದು ನನಗನಿಸಿತು. ಉಗಿಕೆಲಸಗಾರ ಯಾಕೋವನ ಸುತ್ತಲೂ ಹೊಂಚು ಹಾಕುತ್ತಿದ್ದಂತೆ, ಈ ಮನುಷ್ಯನನ್ನು ತಿಳಿದುಕೊಳ್ಳುವ ಹಾಗೂ ಅರ್ಥಮಾಡಿಕೊಳ್ಳುವ ಆತುರದಿಂದ, ಅಷ್ಟೇ ಅವಿಶ್ರಾಂತವಾಗಿ ಇವನ ಸುತ್ತಲೂ ಅಲೆದೆ. ಆದರೆ ಈತ ನುಸುಳಿಕೊಂಡು ಜಾರಿಬಿಡುತ್ತಿದ್ದ, ತಪ್ಪಿಸಿಕೊಳ್ಳುತ್ತಿದ್ದ. ಇವನನ್ನು ಕುರಿತ ಸತ್ಯತೆ ಯಾವುದರಲ್ಲಿ ಅಡಕವಾಗಿತ್ತು ? ಇವನ ಪ್ರವೃತ್ತಿಗಳಲ್ಲಿ ಯಾವ ಅಂಶವನ್ನು ನಿಜವಾದುದೆಂದು ನಾನು ಪರಿಗ್ರಹಿಸಬೇಕು ?

ಆತ ನನಗೆ ಹೇಳಿದ್ದುದು ನೆನಪಿತ್ತು :

"ನನ್ನನ್ನು ಕಂಡುಹಿಡಿಯೋದಕ್ಕೆ ನಿನ್ನ ಮೆದುಳನ್ನು ಉಪಯೋಗಿಸು; ಹೂಂ, ಮುಂದುವರಿದು ಪ್ರಯತ್ನಿಸು."

ನನ್ನ ಸ್ವಾಭಿಮಾನ ಘಾಸಿಗೊಂಡಿತ್ತು. ಆದರೆ, ಅದಕ್ಕಿಂತಲೂ ಹೆಚ್ಚಿನದು ಯಾವುದಕ್ಕೋ ಘಾಸಿಯಾಗಿತ್ತು. ಈ ಮುದುಕನನ್ನು ಅರ್ಥಮಾಡಿಕೊಳ್ಳುವುದು ನನಗೆ ಅತ್ಯಂತ ಮಹತ್ವದ್ದಾಗಿ ಪರಿಣಮಿಸಿತು.

ಕೈಗೆ ಸಿಗದ ಈಯೆಲ್ಲ ಪ್ರವೃತ್ತಿಗಳಿದ್ದರೂ, ಆತ ಭದ್ರ ತಳಹದಿಯ ಮನುಷ್ಯನಾಗಿದ್ದ. ಇನ್ನೊಂದು ನೂರುವರ್ಷವೇನಾದರೂ ಇವನು ಬದುಕಿದನೆಂದರೆ, ಆಗಲೂ ಇದೇ ರೀತಿ ಈತ ಇರುವನೆಂದೂ, ಅಚ್ಚರಿಯುಂಟುಮಾಡುವಷ್ಟು ಬದಲಾಗುತ್ತಿರುವ ಜನರ ಮಧ್ಯೆ ತನ್ನನ್ನು ಮಾತ್ರ ಬದಲಾಗದಂತೆ ಉಳಿಸಿಕೊಳ್ಳುವನೆಂದೂ ಅನಿಸುತ್ತಿತ್ತು. ಪುರಾತನ ತತ್ವವಾದಿಯೂ ಇದೇ ರೀತಿಯ ಭದ್ರತೆಯ ಭಾವನೆಯನ್ನು ನನ್ನಲ್ಲಿ ಉಂಟುಮಾಡಿದ್ದ. ಆದರೆ, ಅವನಲ್ಲಿದು ಹಿತಕರವಾಗಿ ನನಗೆ ಕಂಡಿರಲಿಲ್ಲ. ಒಸಿಪನ ಭದ್ರತೆ ಬೇರೆಯೇ ರೀತಿಯದಾಗಿತ್ತು, ಹೆಚ್ಚು ಅಪೇಕ್ಷಣೀಯವಾಗಿತ್ತು.

ಮಾನವನ ಅಸ್ಥಿರತೆಯ ಅರಿವು ಪದೇ ಪದೇ ನನಗೆ ಆಗುತ್ತಿತ್ತು. ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಅನಿರೀಕ್ಷಿತವಾಗಿ ಜನರು ಧುಮುಕುತ್ತಿದ್ದ ರೀತಿ ಕಂಡು ನಾನು ತಲ್ಲಣಗೊಂಡೆ. ಒಗಟಿನಂತಹ ಈ ಧುಮುಕಾಟಗಳ ಬಗೆಗೆ ಅಚ್ಚರಿಪಟ್ಟು ಪಟ್ಟು ನನಗಾಗಲೇ ಬೇಸರ ಬಂದಿತ್ತು. ಕ್ರಮೇಣವಾಗಿ ಅದು, ಜನರ ಬಗೆಗೆ ನಾನು ತೋರುತ್ತಿದ್ದ ಆಸಕ್ತಿಯನ್ನು ಕ್ಷೀಣಗೊಳಿಸಿತು; ಅವರ ಬಗೆಗೆ ನನಗಿದ್ದ ಒಲವು ಅಸ್ತವ್ಯಸ್ತವಾಯಿತು.

ಜುಲೈ ತಿಂಗಳ ಆರಂಭದಲ್ಲೊಂದು ದಿನ, ನಾವು ದುಡಿಯುತ್ತಿದ್ದ ತಾಣಕ್ಕೆ ಮುರುಕಲು ಗಾಡಿಯೊಂದು ಧಾವಿಸುತ್ತ ಬಂತು. ಕುಡಿದು ಅಮಲೇರಿದ್ದ ಗಾಡಿ ಹೊಡೆಯುವಾತನೊಬ್ಬ ಚಾಲಕನ ಸ್ಥಾನದಲ್ಲಿ ಕುಳಿತಿದ್ದ. ಅವನ ತಲೆಯ ಮೇಲೆ ಹ್ಯಾಟ್ ಇರಲಿಲ್ಲ. ತುಟಿಯಿಂದ ರಕ್ತಸುರಿಯುತ್ತಿತ್ತು. ಸಿಡುಕಿನಿಂದ ಆತ ತನ್ನ ಬಾಯಿಯನ್ನು ಗಡ್ಡದೊಳಕ್ಕೆ ಹುದುಗಿಸಿದ್ದ. ಒಂದೇ ಸಮನೆ ಬಿಕ್ಕಳಿಕೆ ಬರುತ್ತಿತ್ತು. ಹಿಂದಿನ ಸೀಟಿನಲ್ಲಿ, ಕುಡಿದು ಮತ್ತೇರಿದ ಗ್ರಿಗೊರಿ ಶಿಶ್ಲಿನ್ ಹೊರಳಾಡುತ್ತಿದ್ದ. ಕೊಬ್ಬಿದ ದೇಹದ ಕೆಂಪು ಕೆನ್ನೆಗಳ ಹುಡುಗಿಯೊಬ್ಬಳು ಅವನ ತೋಳುಗಳನ್ನು ಹಿಡಿದುಕೊಂಡಿದ್ದಳು. ಅವಳ ತಲೆಯ ಮೇಲೆ ಹುಲ್ಲಿನ ಹ್ಯಾಟಿತ್ತು. ಅದರ ಸುತ್ತಲೂ, ಬಿಗಿದ ಕಡುಗೆಂಪು ರಿಬ್ಬನುಗಳೂ ಗಾಜಿನ ಮಣಿಗಳೂ ಇದ್ದುವು. ಬರಿಯ ಪಾದಗಳ

ಮೇಲೆ ರಬ್ಬರಿನ ರಕ್ಷೆ ಇತ್ತು. ಗಾಡಿಯ ಚಲನೆಗೆ ಅನುಗುಣವಾಗಿ ಆಕೆ ಮೈಮುದುಡಿಕೊಳ್ಳುತ್ತ, ತೆರವಾಗಿದ್ದ ಕೈಯಿಂದ ಬಿಸಿಲುಕೊಡೆಯೊಂದನ್ನು ಬೀಸುತ್ತ, ನಗುತ್ತ, ಕೂಗಾಡಿದಳು:

"ಹೇ ಪಿಶಾಚಿಗಳೇ! ಜಾತ್ರೆ ಮುಗಿದಿದೆ. ಸಂತೆಯಿಲ್ಲ. ಆದರೂ ಇಲ್ಲಿ ನನ್ನನ್ನು ಜಾತ್ರೆಗೇಂತ ಎಳಕೊಂಡು ಹೋಗ್ತಿದಾರೆ!"

ಮುದುರಿಕೊಂಡು ನಜ್ಜುಗುಜ್ಜಾಗಿ ಹರಿದಾಡುತ್ತ ಗ್ರಿಗೊರಿ ಗಾಡಿಯಿಂದ ಹೊರಕ್ಕೆ ಇಳಿದ; ನೆಲದ ಮೇಲೆ ಕುಳಿತ. ಕಣ್ಣುಗಳಲ್ಲಿ ಕಂಬನಿ ತುಂಬಿಕೊಂಡು ನಮ್ಮೆದುರು ಜಾಹೀರು ಮಾಡಿದ:

"ಇಗೋ, ಮಂಡಿಯೂರಿ ಬೇಡ್ತಿದೀನಿ; ಅಪಾರ ಪಾಪಮಾಡಿದೀನಿ ನಾನು! ಎಲ್ಲಾ ಯೋಚಿಸಿ ತೀರ್ಮಾನಕ್ಕೆ ಬಂದೇ ಪಾಪ ಮಾಡಿದೀನಿ—ಏನಂತೀರಾ! ಯೆಫಿಮುಷ್ಕಾ ಹೇಳ್ತಾನೆ ಗ್ರಿಗೊರಿ, ಗ್ರಿಗೊರಿ,—ಅಂತಾನೆ....ಅವನು ಹೇಳೋದು ನ್ಯಾಯವಾದದ್ದೇ—ಆದರೆ, ನನ್ನನ್ನು ಕ್ಷಮಿಸಿ! ನಿಮಗೆಲ್ಲರಿಗೂ ಔತಣ ಏರ್ಪಡಿಸಬೇಕೂಂತ ನನಗೆ ಅಪೇಕ್ಷೆಯಿದೆ. ಅವನು ಹೇಳೋದು ನಿಜ: ನಾವು ಬದುಕೋದು ಒಂದೇ ಸಲ....ಒಂದಕ್ಕಿಂತ ಹೆಚ್ಚುಸಲ ಬದುಕೋದು ಸಾಧ್ಯವಿಲ್ಲ...."

ಹುಡುಗಿ ಬಿದ್ದು ಬಿದ್ದು ನಕ್ಕಳು. ಅತ್ತಿತ್ತ ಕುಪ್ಪಳಿಸಿದಳು. ಅವಳ ಪಾದಗಳ ಮೇಲಿನ ರಬ್ಬರಿನ ರಕ್ಷೆಗಳು ಕಳಚಿಹೋದುವು. ಗಾಡಿ ಹೊಡೆಯುವಾತ ಕೂಗಾಡಿದ:

"ಬನ್ನಿ, ಹೋಗೋಣ! ಬನ್ನಿ ಅಂದೆ—ಕುದುರೇನ ತಡೆಹಿಡಿಯೋದು ನನ್ನಿಂದ ಶಕ್ಯವಿಲ್ಲ!"

ಮುದಿಯಾದ, ಸೊರಗಿದ, ಬಾಯಲ್ಲಿ ನೊರೆಕಾರುತ್ತಿದ್ದ ಆ ಪುಟ್ಟ ಕುದುರೆ ನೆಲದಲ್ಲಿ ಬೇರುಬಿಟ್ಟಿತೇನೊ ಎನ್ನುವಂತೆ ನಿಂತುಬಿಟ್ಟಿತ್ತು. ಆ ಇಡೀ ದೃಶ್ಯವೇ ಅವರ್ಣನೀಯವೆನಿಸು ವಷ್ಟು ತಮಾಷೆಯದಾಗಿತ್ತು. ತಮ್ಮ ಒಡೆಯನನ್ನೂ ಆ ಭವ್ಯಸ್ತ್ರೀಯನ್ನೂ ಮಂಕುಕವಿದ ಗಾಡಿ ಚಾಲಕನನ್ನೂ ನೋಡುತ್ತ ಗ್ರಿಗೊರಿಯ ಕೆಲಸಗಾರರು, ಒಂದೇ ಸಮನೆ ಗಟ್ಟಿಯಾಗಿ ನಕ್ಕರು.

ನಗದೇ ಇದ್ದ ಒಬ್ಬನೇ ಒಬ್ಬ ವ್ಯಕ್ತಿ, ಫೋಮಾ. ಅಂಗಡಿಯ ಬಾಗಿಲ ಹಾದಿಯಲ್ಲಿ ನನ್ನ ಮಗ್ಗುಲಲ್ಲಿ, ಆತ ಗೊಣಗುತ್ತ ನಿಂತ:

"ಹಗ್ಗ ಹರಿದುಕೊಂಡೇ ಬಿಟ್ಟ, ಹಂದಿ! ಊರಲ್ಲಿ ಅವನಿಗೆ ಹೆಂಡತಿ ಇದಾಳೆ—ಬಹಳ ಸುಂದರಿ ಬೇರೆ!"

ಗಾಡಿಯವನು ಹೊರಡಿರೆಂದು ಅವರನ್ನು ಆಗ್ರಹಿಸುತ್ತಲೇ ಇದ್ದ. ಹೀಗಾಗಿ ಹುಡುಗಿ ಕೆಳಕ್ಕಿಳಿದು, ಗ್ರಿಗೊರಿಯನ್ನು ಪುನಃ ಗಾಡಿಯೊಳಕ್ಕೆ ಎಳೆದುಕೊಂಡಳು. ಅಲ್ಲಿ ಅವಳ ಪಾದಗಳ ಬಳಿ ಆತ ಬಿದ್ದುಕೊಂಡ. ಬಳಿಕ ಆಕೆ ತನ್ನ ಬಿಸಿಲುಕೊಡೆಯನ್ನು ಝಳಪಿಸಿ ಕೂಗಿ ನುಡಿದಳು:

"ನಾವು ಹೊರಟೆವು!"

ಗ್ರಿಗೊರಿ ಈ ರೀತಿ ನಗೆಗೀಡಾದುದರಿಂದ ನೊಂದವನಂತೆ ಕಂಡ ಫೋಮಾ, ಗಟ್ಟಿಯಾಗಿ ಗದರಿದೊಡನೆ, ಆ ಜನರು ಪುನಃ ದುಡಿಯತೊಡಗಿದರು. ತಮ್ಮ ಯಜಮಾನನನ್ನು ಕುರಿತು ತಮ್ಮಲ್ಲೇ ಸಲಿಗೆಯ ಕೆಲಟೀಕೆಗಳನ್ನು ಅವರು ಮಾಡಿದರು. ಆದರೆ ಅವನ ಬಗೆಗೆ ಅವರಿಗೆ ಅಸೂಯೆ ಎನಿಸಿತ್ತೆಂಬುದು ಒಡೆದು ತೋರುತ್ತಿತ್ತು.

ಫೋಮಾ ತನ್ನಷ್ಟಕ್ಕೆ ಗೊಣಗಿದ:

"ನಮಗೆಲ್ಲ ಯಜಮಾನ ಅಂತ ಬೇರೆ ಕರಕೋತಾನೆ....ಇಲ್ಲಿ ನಮ್ಮ ಕೆಲಸ ಮುಗಿಸಿ

ಹಳ್ಳಿಗೆ ವಾಪಸಾಗೋದಕ್ಕೆ ಇನ್ನು ಒಂದು ತಿಂಗಳು ಕೂಡಾ ಇಲ್ಲ. ಆದರೆ ಇವನಿಗೆ ಅಷ್ಟರ ವರೆಗೆ ಕಾಯೋದಕ್ಕಾಗದೇ ಹೋಯ್ತು...."

ಗ್ರಿಗೊರಿಯ ವಿಷಯದಲ್ಲಿ ನನಗೂ ಕೂಡಾ ಅಸಮಾಧಾನವೆನಿಸಿತು. ಅವನ ಮಗ್ಗುಲಲ್ಲಿ ಗಾಜಿನ ಮಣಿಗಳ ಆ ಹುಡುಗಿ ಇದ್ದುದು ಎಷ್ಟೊಂದು ಅಸಮರ್ಪಕವಾಗಿ ಕಂಡಿತ್ತು!

ಗ್ರಿಗೊರಿ ಶಿಶ್ಲಿನ್ ಮುಖ್ಯಸ್ಥನಾಗಿದ್ದು, ಫೋಮಾ ತುಶ್ಕೋವ್ ಯಾಕೆ ಬರೇ ಕೆಲಸಗಾರ ನಾಗಿರುವನೆಂದು ಅನೇಕಸಾರೆ ನಾನು ಅಚ್ಚರಿಪಟ್ಟಿದ್ದೆ.

ಫೋಮಾ ಕೆಂಚುಬಣ್ಣದ ಗುಂಗುರುಕೂದಲ ಗಟ್ಟಿಮುಟ್ಟಾದ ಯುವಕ. ಗಿಡುಗಮೂಗು, ಬುದ್ಧಿವಂತಿಕೆಯನ್ನು ಸೂಸುತ್ತಿದ್ದ ಬೂದುಕಣ್ಣುಗಳು, ದುಂಡಗಿನ ಮುಖ. ಅವನು ರೈತರನ್ನು ಹೋಲುತ್ತಿರಲಿಲ್ಲ. ಯೋಗ್ಯ ಪೋಷಾಕನ್ನು ಧರಿಸಿರುತ್ತಿದ್ದರೆ, ಒಳ್ಳೆಯ ಕುಟುಂಬದ ವರ್ತಕ ಪುತ್ರ ಈತ ಎಂದು ಸುಲಭವಾಗಿ ಬೇರೆಯವರನ್ನು ನಂಬಿಸುವುದು ಸಾಧ್ಯವಿತ್ತು. ಇವನು ಮ್ಲಾನ ಮುಖದ, ಗಂಭೀರಪ್ರವೃತ್ತಿಯ, ಕಡಮೆ ಮಾತಿನ ಮನುಷ್ಯ. ಓದಲು ಬರೆಯಲು ಬರುತ್ತಿದ್ದು ದರಿಂದ ಇವನೇ ಕಂಟ್ರಾಕ್ಟರನ ಲೆಕ್ಕಗಳನ್ನು ಇಡುತ್ತಿದ್ದ; ಅಂದಾಜುಪಟ್ಟಿಗಳನ್ನು ತಯಾರಿಸು ತ್ತಿದ್ದ. ಸ್ವತಃ ತಾನು ಕೆಲಸದ ಬಗೆಗೆ ಅಂತಹ ಒಲವನ್ನೇನೂ ತೋರಿಸದೇ ಇದ್ದರೂ ತನ್ನ ಸಹ ಬಾಂಧವರು ದುಡಿಯುವಂತೆ ಮಾಡಲು ಅವನು ಶಕ್ತನಾಗಿದ್ದ.

"ಎಲ್ಲವನ್ನೂ ಒಂದೇ ಜೀವಮಾನದಲ್ಲಿ ಮಾಡೋದು ಸಾಧ್ಯವಿಲ್ಲ," ಎಂದು ಅವನು ಶಾಂತವಾಗಿ ಹೇಳುತ್ತಿದ್ದ. ಪುಸ್ತಕಗಳ ಬಗೆಗೆ ಅವನಿಗೆ ತಾತ್ಸಾರವಿತ್ತು: "ಸಿಕ್ಕಿಸಿಕ್ಕಿದ್ದ ನ್ನೆಲ್ಲಾ ಅಚ್ಚು ಹಾಕ್ತಾರೆ. ಇಲ್ನೋಡು, ನೀನು ಇಷ್ಟಪಡೋದಾದರೆ ನಿನಗೋಸ್ಕರ ಒಂದು ಕಥೆ ಕಟ್ತೀನಿ—ಆ ಕೆಲಸ ಮಹಾ ಕಷ್ಟದ್ದೇನೂ ಅಲ್ಲ."

ಆದರೆ, ಇತರರು ಹೇಳುವುದನ್ನೆಲ್ಲ ಆತ ಶ್ರದ್ಧೆಯಿಂದ ಆಲಿಸುತ್ತಿದ್ದ. ಯಾವುದಾದರೂ ಸ್ವಾರಸ್ಯವಾಗಿ ತನಗೆ ಕಂಡರೆ, ಪಟ್ಟು ಹಿಡಿದು ಎಲ್ಲ ವಿವರಗಳನ್ನೂ ಆತ ಕಂಡುಹಿಡಿಯುತ್ತಿದ್ದ; ತನ್ನದೇ ಆದ ತೀರ್ಮಾನಗಳಿಗೆ ಬರುತ್ತಿದ್ದ; ತನ್ನ ಸ್ವಂತದ ಮಾನದಂಡದಿಂದಲೇ ಎಲ್ಲವನ್ನೂ ಅಳೆಯುತ್ತಿದ್ದ.

ಫೋಮಾನಿಗೆ ಅವನೊಬ್ಬ ಕಂಟ್ರಾಕ್ಟರನಾದರೆ ಚೆನ್ನಾಗಿರುತ್ತದೆಂದು ಒಮ್ಮೆ ನಾನು ಹೇಳಿದೆ. ಅದಕ್ಕೆ, ಸೋಮಾರಿಯಂತೆ ರಾಗವೆಳೆಯುತ್ತ ಅವನು ಉತ್ತರವಿತ್ತ:

"ಆರಂಭದಿಂದಲೇ ಸಾವಿರಾರು ರೂಬಲು ಬರೋ ಹಾಗಿದ್ದರೆ, ಅದು ಅಷ್ಟೇನೂ ಕೆಟ್ಟ ದಾಗಲಾರದು. ಆದರೆ, ಚಿಲ್ಲರೆ ಸಂಪಾದನೆಗಾಗಿ ಒಂದಷ್ಟು ಜನರ ಮೇಲ್ವಿಚಾರಣೆ ವಹಿಸಿ ಇಲ್ಲದ ತೊಂದರೆ ಅನುಭವಿಸೋದರಲ್ಲಿ ಏನರ್ಥ ಇದೆ, ಹೇಳು? ಇಲ್ಲ, ಸರಿಯಾದ ಸಮಯ ಕ್ಕಾಗಿ ಕಾದಿರ್ತೀನಿ. ಆ ಸಮಯ ಒದಗಿ ಬಂದಾಗ, ಒರಾಂಕದಲ್ಲಿರೋ ಸನ್ಯಾಸಿಗಳ ಮಠಕ್ಕೆ ಹೊರಟುಬಿಡ್ತೀನಿ. ನಾನು ಎತ್ತರದ ಆಳು, ಸ್ಫುರದ್ರೂಪಿ. ಯಾವಳಾದರೂ ಶ್ರೀಮಂತ ವರ್ತಕನ ವಿಧವೆ ನನ್ನಲ್ಲಿ ಅನುರಕ್ತಳಾಗಲೂಬಹುದು. ಹಾಗಾಗೋದುಂಟು. ಸೆರ್ಗಾಚಿಯ ಒಬ್ಬ ಎರಡೇ ವರ್ಷಗಳಲ್ಲಿ ಒಂದು ಜೋಡೀನ ದೊರಕಿಸ್ಕೊಂಡ. ಅದೂ ಶಹರದಲ್ಲಿ ವಾಸ ವಾಗಿದ್ದ ಪರಿಚಾರಿಕೆ. ಆತ ದೇವಪ್ರತಿಮೆಯನ್ನು ಮನೆಯಿಂದ ಮನೆಗೆ ಹೊತ್ತುಕೊಂಡು ಹೋಗ್ತಿದ್ದಾಗ ಅವಳ ಕಣ್ಣಿಗೆ ಬಿದ್ದ...."

ಅದು ಅವನ ಯೋಜನೆಯಾಗಿತ್ತು. ಮೊದಲು ಮಠಗಳಲ್ಲಿ ಶಿಷ್ಯವೃತ್ತಿ ಸ್ವೀಕರಿಸಿ ಆಮೇಲೆ ಸುಲಭ ಜೀವನಕ್ಕೆ ಹಾದಿಮಾಡಿಕೊಂಡ ಹಲವರ ಕಥೆಗಳನ್ನು ಅವನು ಕೇಳಿದ್ದ. ಅಂತಹ ಕಥೆಗಳು ಹಾಗೂ ಫೋಮಾನ ವಿಚಾರಧಾರೆ, ನನ್ನ ಪಾಲಿಗೆ ಅಸಹ್ಯವಾಗಿದ್ದುವು. ಆದರೆ, ಸನ್ಯಾಸಿಮಠವನ್ನು ಆತ ಸೇರುವುದು ಖಂಡಿತವಾಗಿ ನನಗೆ ಕಂಡಿತು.

ಹೀಗಿದ್ದರೂ, ಜಾತ್ರೆ ಆರಂಭವಾದಾಗ, ಫೋಮಾ ಒಂದು ಪಾನಮಂದಿರದಲ್ಲಿ ಪರಿಚಾರಕನಾಗಿ ಎಲ್ಲರನ್ನೂ ಅಚ್ಚರಿಗೊಳಿಸಿದ. ಅವನ ಸಹೋದ್ಯೋಗಿಗಳಿಗೆ ಮಾತ್ರ ಇದರಿಂದ ಆಶ್ಚರ್ಯವಾಯಿತೆಂದು ನಾನು ಖಂಡಿತವಾಗಿ ಹೇಳಲಾರೆ. ಆದರೆ, ಅವನನ್ನು ಅವರು ಛೀಗಳೆಯತೊಡಗಿದರು. ರವಿವಾರಗಳಲ್ಲಿ ಅಥವಾ ರಜಾದಿನಗಳಲ್ಲಿ ಚಹಾಪಾನಕ್ಕೆಂದು ಹೊರಟಾಗ, ಅವರು ಒಬ್ಬರಿಗೊಬ್ಬರು ನಗುತ್ತ ಹೇಳುತ್ತಿದ್ದರು:

"ನಡೀರಿ, ಫೋಮಾನಿಗೆ ಒಂದಿಷ್ಟು ವ್ಯಾಪಾರ ಕುದುರಿಸಿಕೊಡೋಣ."

ಪಾನಮಂದಿರವನ್ನು ಸೇರಿದ ಬಳಿಕ, ದರ್ಪದಿಂದ ಅವರು ಕೂಗಿ ಕರೆಯುತ್ತಿದ್ದರು:

"ಏಯ್, ಪರಿಚಾರಕ—ಗುಂಗುರುಕೂದಲಿನವನೇ—ಬಾ ಇಲ್ಲಿ!"

ಗಲ್ಲವನ್ನು ಮೇಲಕ್ಕೆತ್ತಿ, ಬಂದು, ಆತ ಕೇಳುತ್ತಿದ್ದ:

"ಏನು ಕೊಡ್ಲಿ ?"

"ಹಳೇ ಸ್ನೇಹಿತರ ಗುರುತು ಹತ್ತಲಿಲ್ಲವೇನು ?"

"ನನಗೆ ಕೆಲಸ ಬಹಳ."

ತನ್ನ ಸಹಬಾಂಧವರು ತನ್ನನ್ನು ತಿರಸ್ಕಾರದಿಂದ ಕಾಣುತ್ತಿರುವರೆಂದೂ ತನ್ನನ್ನು ಛೇಡಿಸ ಬಯಸುತ್ತಿರುವರೆಂದೂ ಅವನು ಮನಗಂಡ. ಸವಿನಯ ಸೈರಣೆಯಿಂದ ಅವರನ್ನು ಆತ ದಿಟ್ಟಿಸಿದ. ಅವನ ಮುಖ ಹೆಪ್ಪುಗಟ್ಟುತ್ತ, "ಸರಿ, ಬೇಗನೆ ಚಹಾ ಕುಡಿದು ಮುಗಿಸಿ," ಎಂಬ ಭಾವವನ್ನು ಸೂಚಿಸುವಂತಿತ್ತು.

ತಮ್ಮ ಪಾಕೀಟುಗಳಲ್ಲಿ ಬಹಳವಾಗಿ ಕೈಯಾಡಿಸುತ್ತ ಅವರು, "ಭಕ್ಷಿಸು ಅಪೇಕ್ಷಿಸ್ತಿದ್ದೀಂತ ಕಾಣ್ತದೆ," ಎನ್ನುತ್ತಿದ್ದರು. ಆದರೆ, ಒಂದು ಕೊಪೆಕನ್ನೂ ಕೊಡದೆ ಹೊರಬೀಳುತ್ತಿದ್ದರು.

ಸನ್ಯಾಸಿಯಾಗಬೇಕೆಂದು ಯೋಜಿಸಿದ್ದವನು ಪರಿಚಾರಕನಾದುದೇಕೆಂದು ಫೋಮಾನನ್ನು ನಾನು ಕೇಳಿದೆ.

"ಸನ್ಯಾಸಿಯಾಗಬೇಕೆಂದು ನಾನೆಂದೂ ಯೋಜಿಸಿರಲಿಲ್ಲ. ಬಹಳ ಕಾಲ ಪರಿಚಾರಕನಾಗಿರೋ ಉದ್ದೇಶವೂ ನನಗಿಲ್ಲ," ಎಂದು ಅವನು ಉತ್ತರವಿತ್ತ.

ಆದರೆ, ನಾಲ್ಕು ವರ್ಷಗಳ ಅನಂತರ, ತ್ಸಾರಿಟ್ಸಿನ್‌ನಲ್ಲಿ ಅವನನ್ನು ಸಂಧಿಸಿದೆ. ಆಗಲೂ ಆತ ಒಂದು ಪಾನಮಂದಿರದಲ್ಲಿ ಪರಿಚಾರಕನಾಗಿಯೇ ಇದ್ದ. ಕಟ್ಟಕಡೆಯಲ್ಲಿ, ಮನೆಗೆ ಕನ್ನ ಹಾಕಲು ಯತ್ನಿಸಿದ್ದಕ್ಕಾಗಿ ಫೋಮಾ ತುಶ್ಕೋವನ ದಸ್ತಗಿರಿಯಾಯಿತೆಂದು ವೃತ್ತಪತ್ರಿಕೆಯಲ್ಲಿ ನಾನು ಓದಿದೆ.

ಒಯೋತರನ ತಂಡದ ಅತ್ಯಂತ ಹಳಬ ಹಾಗೂ ಅತುತ್ತಮ ದುಡಿಮೆಗಾರನಾದ ಕಲ್ಲು ಕೆಲಸಗಾರ ಆರ್ದಾಲಿಯನ್ನನ ಕಥೆ, ನನ್ನಮನಸ್ಸಿನಮೇಲೆ ವಿಶೇಷವಾಗಿ ಬಿಂಬಿಸಿತು. ಈ ಹರ್ಷಚಿತ್ತನಾದ ಕಪ್ಪುಗಡ್ಡದ ನಾಲ್ವತ್ತು ವರ್ಷ ವಯಸ್ಸಿನ ರೈತನನ್ನು ಕಂಡಾಗಲೂ ಈತನ ಬದಲು

ಪಿಯೋತರ್ ಯಾತಕ್ಕೆ ಯಜಮಾನನಾಗಿದಾನೆ—ಎಂದು ನಾನು ಅಚ್ಚರಿಪಡುತ್ತಿದ್ದೆ. ಆತ ಕುಡಿಯುತ್ತಿದ್ದುದು ಎಂದಾದರೊಮ್ಮೆ. ಅಮಲೇರುತ್ತಿದ್ದುದಂತೂ ಇಲ್ಲವೇ ಇಲ್ಲವೆನ್ನಬೇಕು. ತನ್ನ ಕೆಲಸದಲ್ಲಿ ಅವನು ನಿಷ್ಣಾತನಾಗಿದ್ದ. ಉತ್ಸಾಹದಿಂದ ದುಡಿಯುತ್ತಿದ್ದ. ಇಟ್ಟಿಗೆಗಳು ಕೆಂಪು ಪಾರಿವಾಳಗಳ ಹಾಗೆ ಹಾರಾಡುವಂತೆ ಮಾಡುತ್ತಿದ್ದ. ನಿಷ್ಠುರಿಯಾದ ಕಾಹಿಲೆಯವನಾದ ಪಿಯೋತರ್, ಇವನ ಮಗ್ಗುಲಲ್ಲಿ ಯಾವ ಲೆಕ್ಕಕ್ಕೂ ಇಲ್ಲದವನಂತೆ ತೋರುತ್ತಿದ್ದ.

"ನನಗೋಸ್ಕರ ಮರದ ಶವಪಾನಿ ನಿರ್ಮಿಸೋದಕ್ಕಾಗಿ, ಬೇರೆಯವರಿಗೋಸ್ಕರ ಇಟ್ಟಿಗೆ ಮನೆಗಳನ್ನು ನಾನು ಕಟ್ತಿದೀನಿ," ಎಂದು ಹೇಳುವುದು ಪಿಯೋತರನಿಗೆ ಪ್ರಿಯವಾಗಿತ್ತು.

ಆರ್ದಾಲಿಯನ್, ಸಂತಸದ ಉತ್ಸಾಹದಿಂದ ಇಟ್ಟಿಗೆಗಳನ್ನಿಡುತ್ತಿದ್ದಂತೆ, ಕೂಗಿನುಡಿಯುತ್ತಿದ್ದ:

"ಬನ್ನಿ ಗೆಳೆಯರೇ, ಒಂದು ಕೈಕೊಡಿ, ದೇವರು ಕೀರ್ತಿವಂತನಾಗಲಿ!"

ಟಾಮ್ಸ್ಕ್‌ನಲ್ಲಿ ತನ್ನ ಭಾವನೆಂಟನೊಬ್ಬನಿದ್ದಾನೆ; ಅಲ್ಲೊಂದು ಇಗರ್ಜಿ ಕಟ್ಟಿಕೊಡಲು ಕರಾರುಪತ್ರ ಮಾಡಿಕೊಂಡಿದಾನೆ; ಮೇಸ್ತ್ರಿಯ ಹುದ್ದೆಯನ್ನು ತನಗೆ ಕೊಡಬಯಸಿದ್ದಾನೆ; ಮುಂದಿನ ವಸಂತದಲ್ಲಿ ತಾನು ಅಲ್ಲಿಗೆ ಹೋಗಲು ಉದ್ದೇಶಿಸಿರುವೆ—ಎಂದು ಅವರಿಗೆ ಆತ ಹೇಳುತ್ತಿದ್ದ.

"ಎಲ್ಲವೂ ತೀರ್ಮಾನವಾಗಿದೆ. ಇಗರ್ಜಿಗಳನ್ನು ಕಟ್ಟೋದು—ಅದೀಗ ನಾನು ಪ್ರೀತಿಸೋ ಕೆಲಸ!" ಎಂದು ಅವನೆಂದ. ಬಳಿಕ ನನ್ನೆಡೆಗೆ ತಿರುಗಿ ನುಡಿದ: "ನೀನೂ ನನ್ನೊಟ್ಟಿಗೆ ಬಂದ್ಬಿಡು. ಓದುಬರಹ ಬಲ್ಲ ಯಾರಿಗೇ ಆದರೂ ಸೈಬೀರಿಯಾದಲ್ಲಿ ಜೀವನ ಸುಲಭ. ವಿದ್ವತ್ತಿಗೆ ಅಲ್ಲಿ ಬಹಳ ಬೆಲೆ ಕೊಡ್ತಾರೆ."

ನಾನು ಅವನ ಜತೆ ಹೋಗಲೊಪ್ಪಿದೆ. ಆರ್ದಾಲಿಯನ್ ವಿಜಯದ ಧ್ವನಿಯಲ್ಲಿ ಕೂಗಿ ಹೇಳಿದ:

"ಒಳ್ಳೇದು! ಖಡಾಖಂಡಿತವಾಗಿ ಹೊರಡೋದೇ, ತಮಾಷೆಗಲ್ಲ."

ಪಿಯೋತರ್ ಮತ್ತು ಗ್ರಿಗೊರಿಯರ ವಿಷಯದಲ್ಲಿ ಅವನು ತೋರುತ್ತಿದ್ದುದು, ಸ್ನೇಹಪರವಾದ ಹಿರಿತನದ ಧೋರಣೆ. ವಯಸ್ಕನಾದವನು ಮಕ್ಕಳ ಜತೆ ವರ್ತಿಸುವ ಹಾಗೆ. ಒಸಿಪ ನೊಡನೆ ಅವನೆಂದ:

"ಬಾಯಿಬಡುಕರು! ಇಸ್ಪೀಟೆಲೆಗಳನ್ನು ತೋರಿಸೋ ಹಾಗೆ ತಮ್ಮ ತಲೆಗಳಲ್ಲಿರೋದನ್ನೆಲ್ಲಾ ಅವರು ಪರಸ್ಪರರಿಗೆ ತೋರಿಸ್ತಾರೆ: ಇಲ್ಲಿ ನೋಡು, ಎಂಥ ಎಲೆ ನನ್ನಲ್ಲಿದೆ—ಅಂತ ಒಬ್ಬ. ನನ್ನ ಈ ಎಲೆಗಳ ಕಡೆಗೊಮ್ಮೆ ಇಣಿಕಿ ನೋಡಂತೆ—ಅಂತ ಇನ್ನೊಬ್ಬ!"

ಒಸಿಪ್ ಒಗಟಿನಂತೆ ಉತ್ತರವಿತ್ತ:

"ಯಾಕಾಗಬಾರದು? ಬಡಾಯಿಕೊಚ್ಕೋದು ಮಾನವ ಸಹಜ. ಎಲ್ಲಾ ಹುಡುಗಿಯರಿಗೂ ಸ್ತನಗಳು ಎದುರುಭಾಗದಲ್ಲೇ ಇರ್ತವೆ."

ಇದರಿಂದೇನೂ ಸಮಾಧಾನಗೊಳ್ಳದೆ ಆರ್ದಾಲಿಯನ್ ಅಂದ:

"ಮಾತೆತ್ತಿದರೆ ದೇವರ ಹೆಸರು ಜಪಿಸ್ತಾರೆ; ಆದರೆ ಹಣ ಕೊಡಿಸೋದನ್ನು ಮಾತ್ರ ತಪ್ಪದೆ ನಡಸ್ತಾರೆ."

"ಗ್ರಿಗೊರಿ ಹಣ ಉಳಿಸ್ತಿದಾನೇಂತ ನನಗೆ ಹೇಳ್ತಿದೀಯೇನು ನೀನು?"

"ನಾನು ಆ ಇನ್ನೊಬ್ಬನ ವಿಷಯ ಹೇಳ್ತಿರೋದು. ದೇವರನ್ನಷ್ಟೇ ಕರಕೊಂಡು ನಿರ್ಜನ ಕಗ್ಗಾಡಿಗೆ ಯಾಕೆ ಹೊರಟು ಹೋಗಬಾರದು ಆತ? ದೇವರೇ ನನಗೇನೋ ಇಲ್ಲದ್ದೆಲ್ಲ ಸಾಕಾಗಿ ಬಿಟ್ಟಿದೆ. ವಸಂತದಲ್ಲಿ ನಾನು ಸೈಬೀರಿಯಾಕ್ಕೆ ಹೊರಟು ಹೋಗ್ತೇನೆ."

ಇತರ ಕೆಲಸಗಾರರು ಆರ್ದಾಲಿಯನ್ನನ ಬಗೆಗೆ ಅಸೂಯೆ ತಳೆಯುತ್ತ ಹೇಳುತ್ತಿದ್ದರು:

"ನೇತುಬೀಳೋದಕ್ಕೆ ಅವನ ಆ ಭಾವನ ಹಾಗೆ ನಮಗೂ ಯಾರಾದರೂ ಇದ್ದಿದ್ದರೆ, ನಾವು ಕೂಡಾ ಸೈಬೀರಿಯಾಕ್ಕೇನೂ ಹೆದರ್ತಿರಲಿಲ್ಲ."

ಮುಂದೆ ಇದ್ದಕ್ಕಿದ್ದಂತೆ ಆರ್ದಾಲಿಯನ್ ಒಮ್ಮೆ ಅದೃಶ್ಯನಾದ. ಒಂದು ಭಾನುವಾರ ಆತ ಕರ್ಮಾಗಾರದಿಂದ ಹೊರಬಿದ್ದ. ಅವನಿಗೆ ಏನಾಯಿತೆಂಬುದು ಮುಂದೆ ಮೂರು ದಿನಗಳ ವರೆಗೂ ಯಾರಿಗೂ ಗೊತ್ತಿರಲಿಲ್ಲ.

ಅವರು ಭಯವಿಹ್ವಲರಾಗಿ ಊಹಾಪೋಹಗಳನ್ನು ಮಾಡಿದರು:

"ಯಾರಾದರೂ ಕೊಲೆಮಾಡಿದರೋ ಏನೋ."

"ಈಸಾಡೋದಕ್ಕೆ ಹೋಗಿ ಮುಳುಗಿ ಸತ್ತನೋ ಏನೋ."

ಕೊನೆಯಲ್ಲಿ ಯೆಫಿಮುಷ್ಕಾ ಬಂದು, ಸ್ವಲ್ಪಮಟ್ಟಿಗೆ ಕಕ್ಕಾವಿಕ್ಕಿಯಾದವನಂತೆ ಕಾಣಿಸಿ ಕೊಳ್ಳುತ್ತ, ಪ್ರಕಟವಾಗಿ ಅಂದ:

"ಆರ್ದಾಲಿಯನ್ ವಿನೋದಕೇಳಿಯಲ್ಲಿದಾನೆ."

ಪಿಯೋತರ್ ನಂಬಲಾಗದೆ ಕೂಗಿನುಡಿದ:

"ಅದು ಸುಳ್ಳು."

"ವಿನೋದಕೇಳಿಲಿದಾನೆ ಅಂದೆ—ಕುಡಿದು ಮತ್ತೇರಿ ಬಿದ್ದಿದಾನೆ. ಹುಲ್ಲು ಬಣವೆಗೆ ಬೆಂಕಿ ಬಿದ್ದಹಾಗೆ ನಟ್ಟನಡುವಿನಿಂದಲೇ ಸುಟ್ಟೇಹೋದ. ಅವನ ಹೆಂಡತಿಯೇ ಸತ್ತು ಹೋಗಿ ರುವಳೇನೋ ಅನ್ನೋ ಹಾಗೆ...."

"ಅವನು ಬಹಳ ಕಾಲದಿಂದ ವಿಧುರ. ಎಲ್ಲಿದಾನೆ ಈಗ?"

ಪಿಯೋತರ್ ಖತಿಗೊಂಡು, ಆರ್ದಾಲಿಯನ್ನನನ್ನು ಉಳಿಸಿಕೊಳ್ಳಲೆಂದು ಹೊರಟ. ಆದರೆ ಅವನ ಕೈಯಲ್ಲಿ ಹೊಡೆತತಿಂದ.

ಬಳಿಕ ಒಸಿಪ್ ತನ್ನ ತುಟಿಗಳನ್ನು ಬಿಗಿಗೊಳಿಸಿ, ಕೈಗಳನ್ನು ಜೇಬುಗಳೊಳಕ್ಕೆ ಆಳಕ್ಕೆ ತುರುಕಿ, ಘೋಷಿಸಿದ:

"ನಾನು ಹೋಗಿ ಕಣ್ಣಾರೆ ಕಾಣ್ತೇನಿ—ಕಾರಣ ಏನೂಂತ ನೋಡ್ತೀನಿ. ಒಳ್ಳೆಯವನು ಆತ."

ನಾನು ಕೂಡಾಹೋದೆ.

ಹಾದಿಯಲ್ಲಿ ಒಸಿಪನೆಂದ:

"ನೋಡಂತೆ ಸ್ವಲ್ಪ. ಒಬ್ಬ ಮನುಷ್ಯ ಬಹಳ ಗೌರವಸ್ಥನಾಗಿ ಜೀವಿಸ್ತಾ ಇರ್‍ತಾನೆ. ಆಮೇಲೆ ಇದ್ದಕ್ಕಿದ್ದ ಹಾಗೆ ಅವನ ಬಾಲ ನೆಟ್ಟಗಾಗ್ತದೆ; ಕಸದರಾಶಿಗೆ ಓಡಿಹೋಗ್ತಾನೆ. ಮಾಕ್ಸಿಮಿಶ್, ನಿನ್ನ ಕಣ್ಣುಗಳನ್ನು ತೆರಕೊಂಡಿರು; ಒಂದು ಪಾಠ ಕಲಿತ್ಕೊ!"

'ಕುನಾವಿನೋದ ಹರ್ಷನಗರ'ದಲ್ಲಿ ಅತ್ಯಂತ ನಿಕೃಷ್ಟವಾದ ಒಂದು ವೇಶ್ಯಾವಾಟಕ್ಕೆ ನಾವು ಬಂದೆವು. ಅಲ್ಲಿ ಚೋರಳಂತೆ ಕಾಣುತ್ತಿದ್ದ ವೃದ್ಧೆಯೊಬ್ಬಳು ನಮ್ಮನ್ನು ಇದಿರುಗೊಂಡಳು. ಒಸಿಪ್ ಅವಳ ಕಿವಿಯೊಳಕ್ಕೇನನ್ನೋ ಪಿಸುನುಡಿದ ಅವಳು ಪುಟ್ಟದಾದ ಬರಿದಾಗಿದ್ದ ಒಂದು ಕೊಠಡಿಗೆ ನಮ್ಮನ್ನು ಒಯ್ದಳು. ಅದು ಕತ್ತಲು ತುಂಬಿ, ಕುದುರೆ ಲಾಯದ ಹಾಗೆ ಹೊಲಸಾಗಿತ್ತು. ಗಾತ್ರವೇಹವ ಹೆಂಗಸೊಬ್ಬಳು ಒಂದು ಮಂಚದ ಮೇಲೆ, ನಿದ್ದೆಯಲ್ಲಿ ಅತ್ತಿತ್ತ ಎಗರಾಡುತ್ತಿದ್ದಳು. ಮುದುಕಿ ಅವಳ ಪಕ್ಕೆಗೊಂದು ಗುದ್ದಿ ಅಂದಳು:

"ಹೊರಗೆ ಹೋಗು, ಕೇಳಿಸ್ತೆ? ಏಷಮಿಾನೆ, ಹೊರಗೆಹೋಗು!"

ಆ ಹೆಂಗಸು ಭೀತಿಯಿಂದ ಹಾರಿ ಬಿದ್ದು, ಮುಖವನ್ನುಜ್ಜಿಕೊಳ್ಳುತ್ತ ಕೂಗಾಡಿದಳು:

"ಓ ದೇವರೇ, ಏನದು? ಏನದು?"

"ಗೂಢಚಾರರು ಬಂದಿದಾರೆ," ಎಂದು ಒಸಿಪ್ ಗಂಭೀರವಾಗಿ ಅಂದ. ಓ ಎಂದು ಉಸಿರನ್ನು ಅರ್ಧಕ್ಕೇ ತಡೆದು ಹೆಂಗಸು ಮಾಯವಾದಳು. ಆತ ಅವಳು ಹೋದ ಕಡೆಗೆ ಉಗುಳಿದ.

"ಇವರಿಗೆ ಪಿಶಾಚಿಗಿಂತಲೂ ಗೂಢಚಾರರ ಭಯವೇ ಹೆಚ್ಚು," ಎಂದು ಅವನು ನನಗೆ ವಿವರಿಸಿದ.

ಮುದುಕಿ ಒಂದು ಪುಟ್ಟ ಕನ್ನಡಿಯನ್ನು ಗೋಡೆಯಿಂದ ಕೆಳಕ್ಕೆ ತೆಗೆದು, ಗೋಡೆಕಾಗದದ ಒಂದು ಮಡಿಕೆಯನ್ನೆತ್ತಿದಳು.

"ಬಂದು ನೋಡಿ. ಆತನೆ?"

ಒಸಿಪ್ ಆ ಸಂದಿಯೊಳಗಿಂದ ಇಣಿಕಿನೋಡಿದ.

"ಅವನೇ. ಆ ಹುಡುಗೀನ ಅಲ್ಲಿಂದ ದಾಟಿಸು."

ನಾನು ಕೂಡಾ ಇಣಿಕಿನೋಡಿದೆ. ನಾವಿದ್ದ ಕೊಠಡಿಯಷ್ಟೇ ಹೊಲಸಾಗಿದ್ದ ಒಂದು ಕೊಠಡಿಯಲ್ಲಿ, ಬಲವಾಗಿ ಮುಚ್ಚಿದ್ದ ಕಿಟಿಕಿಯ ದಂಡೆಯಮೇಲೆ ಒಂದು ದೀಪ ಉರಿಯುತ್ತಿತ್ತು. ಆ ದೀಪದ ಬಳಿ, ಮೆಳ್ಳೆಗಣ್ಣಿನ ನಗ್ನಳಾದ ತಾತರ್ ಹುಡುಗಿಯೊಬ್ಬಳು, ತನ್ನ ಒಳ ಅಂಗಿಯನ್ನು ಹೊಲಿಯುತ್ತ ನಿಂತಿದ್ದಳು. ಅವಳ ಬೆನ್ನ ಹಿಂದೆ, ಆರ್ದಾಲಿಯನ್ನನ ಉಬ್ಬಿದ ಮುಖ ಎರಡು ದಿಂಬುಗಳ ಮೇಲೆ ಎತ್ತಿಕೊಂಡಿದ್ದುದು ಕಾಣಿಸುತ್ತಿತ್ತು; ಅವನ ಕರಿದಾದ ಬಿರುಸಾದ ಗಡ್ಡ ಎಲ್ಲಾ ದಿಕ್ಕುಗಳಿಗೂ ಸಿಡಿದು ಚಾಚಿಕೊಂಡಿತ್ತು. ತಾತರ್ ಹುಡುಗಿ ಬೆಚ್ಚಿಬಿದ್ದಳು. ಮೈಮೇಲೆ ತನ್ನ ಅಂಗಿಯನ್ನೆಳೆದುಕೊಂಡಳು. ಹಾಸಿಗೆಯನ್ನು ದಾಟಿ ನಡೆದು ಹೋದಳು. ಇದ್ದಕ್ಕಿದ್ದಂತೆ ನಮ್ಮ ಕೊಠಡಿಯಲ್ಲಿ ಕಾಣಿಸಿಕೊಂಡಳು.

ಒಸಿಪ್ ಅವಳ ಕಡೆಗೆ ದೃಷ್ಟಿಬೀರಿ, ಪುನಃ ಉಗುಳಿದ:

"ಥೂ, ನಿರ್ಲಜ್ಜ ಹೆಣ್ಣೆ!"

ಆಕೆ ನಕ್ಕು ಪ್ರತಿಯಾಡಿದಳು:

"ಮುದಿ ಮೂರ್ಖನೆ!"

ಒಸಿಪನೂ ನಕ್ಕ; ಅವಳತ್ತ ತನ್ನ ಬೆರಳನ್ನು ಅಲುಗಿಸಿದ.

ತಾತರ್ ಹುಡುಗಿ ಹೊರಟು ಬಂದಿದ್ದ ಗವಿಯೊಳಕ್ಕೆ ನಾವು ಹೋದೆವು. ಆರ್ದಾಲಿಯನ್ನನ ಪಾದಗಳ ಬಳಿ ಮುದುಕ ಕುಳಿತ. ಬಹಳ ಹೊತ್ತಿನವರೆಗೆ ಅವನನ್ನು ಎಚ್ಚರಿಸಲು

ಈತ ಯತ್ನಿಸಿದ. ಆದರೆ ಆರ್ದಾಲಿಯನ್, ಗೊಣಗುತ್ತ ಹೋದ, ಅಷ್ಟೆ.

ಓ್ಹ, ಆಗಲಪ್ಪ.... ಒಂದು ನಿಮಿಷ ತಾಳು, ನಾವು ಹೋಗೋಣ...."

ಅಂತೂ ಕೊನೆಗೆ ಆತ ಎದ್ದು ಕುಳಿತ. ಒಸಿಪ್ ಮತ್ತು ನನ್ನೆಡೆಗೆ ವ್ಯಗ್ರನೋಟದಿಂದ ದುರದುರನೆ ನೋಡಿದ. ಬಳಿಕ, ಉರಿಯುತ್ತಿದ್ದ ಕಣ್ಣುಗಳನ್ನು ಮುಚ್ಚಿ ಗೊಣಗಿದ:

"ಏನೀಗ?"

"ಏನಾಗಿದೆ ನಿನಗೆ?" ಎಂದು ಒಸಿಪ್, ಶಾಂತವಾದ ನಿರುತ್ಸಾಹದ ಧ್ವನಿಯಲ್ಲಿ ಕೇಳಿದ. ಜರೆಯುವ ಛಾಯೆ ಮಾತ್ರ ಆ ಮಾತಿನಲ್ಲಿ ಇರಲಿಲ್ಲ.

ಆರ್ದಾಲಿಯನ್ ಕರ್ಕಶವಾಗಿ ಕೆಮ್ಮಿ ವಿವರಿಸಿದ:

"ನನ್ನ ತಲೆ ಕೆಟ್ಟುಹೋಯ್ತು."

"ಹೇಗೆ?"

"ಕಾರಣ ತೀರಾ ಸಾಮಾನ್ಯವಾದ್ದೇ."

"ಬಹಳ ಕೆಡುಕಾಗಿ ಕಾಣಿಸುತ್ತಪ್ಪ."

"ನನಗೆ ಗೊತ್ತು...."

ಆರ್ದಾಲಿಯನ್ ಮುಚ್ಚಳ ತೆರೆದಿದ್ದ ವೋಡ್ಕಾ-ಶೀಷೆಯೊಂದನ್ನು ಮೇಜಿನ ಮೇಲಿಂದ ತೆಗೆದು, ತನ್ನ ಗಂಟಲಿನೊಳಕ್ಕೆ ಅದನ್ನು ಸುರಿಯತೊಡಗಿದ. ಬಳಿಕ ಶೀಷೆಯನ್ನು ಒಸಿಪನತ್ತ ನೀಡಿದ.

"ಬೇಕೇನು ಸ್ವಲ್ಪ? ತಿನ್ನೋದಕ್ಕೂ ಇಲ್ಲಿ ಏನೋ ಇದ್ದೇ ಇರಬೇಕು."

ಮುದುಕ ಒಂದು ಗುಟುಕು ಕುಡಿದು ಮುಖ ಹುಳ್ಳಗೆ ಮಾಡಿದ. ಒಂದು ತುಣುಕು ಬ್ರೆಡ್ಡನ್ನು ಬಹಳ ಶ್ರದ್ಧೆಯಿಂದ ಜಗಿಯತೊಡಗಿದ. ಆರ್ದಾಲಿಯನ್ ರಾಗವೆಳೆಯುತ್ತ ಹೇಳಿದ:

"ನೋಡು—ಆ ತಾತರ್ ಹುಡುಗೀನ ಗಂಟುಹಾಕ್ಕೊಂಡಿದೀನಿ. ಇದಕ್ಕೆಲ್ಲಾ ಯೆಫಿ ಮುಷ್ಕನೇ ಕಾರಣ. ಅವಳು ಜವ್ವನೆ—ಕಾಸಿಮೋವಿಂದ ಬಂದಿರೋ ಅನಾಥೆ—ಜಾತ್ರೆಗೆ ಹೋಗೋ ಯೋಜನೆಯಿಂದ ಬಂದಿದಾಳೆ, ಅಂತ ಹೇಳ್ತಾನೆ."

ಗೋಡೆಯನ್ನು ಭೇದಿಸಿ ಹರಕುಭಾಷೆಯಲ್ಲಿ ಉದ್ಧಟಪದಗಳು ಬಂದುವು:

"ತಾತರ್ ಅತ್ಯುತ್ತಮ. ಎಳೇ ಕೋಳಿಮರಿ ಹಾಗೆ. ಮುದುಕನನ್ನು ಓಡಿಸು. ಅವನು ಅಲ್ಲ ನಿನ್ನ ತಂದೆ."

ಜಡನೋಟದಿಂದ ಗೋಡೆಯನ್ನೆ ದಿಟ್ಟಿಸುತ್ತ, ಆರ್ದಾಲಿಯನ್ ಗೊಣಗಿದ:

"ಆಕೆಯೇ."

"ಅವಳನ್ನು ನಾನು ನೋಡ್ಡೆ," ಎಂದ ಒಸಿಪ್.

ಆರ್ದಾಲಿಯನ್ ನನ್ನೆಡೆಗೆ ಹೊರಳಿದ:

"ನಾನು ಏನ್ಮಾಡ್ಬಿಟ್ಟೇಂತ ನೋಡು ತಮ್ಮ...."

ಆರ್ದಾಲಿಯನನ್ನು ಒಸಿಪ್ ಬಯ್ಯಲು ತೊಡಗಬಹುದು, ಹಿತೋಪದೇಶ ಮಾಡಬಹುದು, ಪಾಪಿ ಲಜ್ಜಾನ್ವಿತವಾಗಿ ಪಶ್ಚಾತ್ತಾಪ ಪಡಬಹುದು—ಎಂದು ನಾನು ನಿರೀಕ್ಷಿಸಿದೆ. ಆದರೆ ಅಂತಹುದೇನೂ ಆಗಲಿಲ್ಲ. ಅವರು ಭುಜಕ್ಕೆ ಭುಜ ತಗಲಿಸಿ, ಶಾಂತವಾಗಿ ಚುಟುಕುಮಾತುಗಳನ್ನಾ

ಡುತ್ತ, ಅಲ್ಲಿ ಕುಳಿತರು. ಆ ಬೆಳಕಿಲ್ಲದ ಹೊಲಸು ಬಿಲದಲ್ಲಿ ಅವರನ್ನು ಆ ರೀತಿ ಕಾಣುವುದು ಅತ್ಯಂತ ಖೇದಕರವಾಗಿತ್ತು. ತಾತರ್ ಹುಡುಗಿ ಗೋಡೆಯೊಳಗಿನ ತೂತಿನ ಮೂಲಕ ಹರಕು ಮುರುಕು ರಷ್ಯನ್ ಭಾಷೆಯಲ್ಲಿ ಮಾತನಾಡುತ್ತಲೇ ಇದ್ದಳು. ಆದರೆ ಅವರು ಆಕೆಯನ್ನು ಅಲಕ್ಷ್ಯಮಾಡಿದರು. ಒಸಿಪ್ ಒಣಗಿದೊಂದು ಮೀನನ್ನು ಮೇಜಿನ ಮೇಲಿನಿಂದ ತೆಗೆದು, ತನ್ನ ಬೂಟಿಗೆ ಬಡೆದು, ಅದನ್ನು ಸುಲಿಯತೊಡಗಿದ.

"ಹಣವನ್ನೆಲ್ಲಾ ಕಳಕೊಂಡೆಯೇನು ?" ಎಂದು ಆತ ಕೇಳಿದ.

"ಪಿಯೋತರ್ ನನಗೆ ಸ್ವಲ್ಪ ಕೊಡುವುದಿದೆ."

"ನೀನು ಟಾಮ್ಸ್ಕ್‌ಗೆ ಹೋಗಬೇಕಾದ ಸಮಯ ಹತ್ತಿರ ಬರ್‍ತಿದೆ. ಈಗ ಹೊರಡೋದು ಸಾಧ್ಯವಾಗುತ್ತೇನು?"

"ಟಾಮ್ಸ್ಕ್ ವಿಷಯ ಈಗ ಅಷ್ಟು ಖಚಿತವಿಲ್ಲ."

"ಯಾಕೆ, ನಿನ್ನ ಮನಸ್ಸು ಬದಲಾಯಿಸಿದೀಯೇನು ?"

"ಆಹ್ವಾನಿಸುತ್ತಿರೋರು ನನ್ನ ಸಂಬಂಧಿಕರಲ್ಲದೇ ಹೋಗಿದ್ದಿದ್ದರೆ...."

"ಏನಂದೆ ?"

"ನನ್ನ ತಂಗಿ ಮತ್ತು ಅವಳ ಗಂಡ...."

"ಏನು ?"

"ಸಂಬಂಧಿಕರಿಗೋಸ್ಕರ ದುಡಿಯೋದರಲ್ಲಿ ಹೆಚ್ಚು ಮಜ ಇಲ್ಲ."

"ಸಂಬಂಧಿಕರಾಗಲಿ, ಅಲ್ಲದೇ ಇರಲಿ, ಮಾಲಕರೆಲ್ಲಾ ಒಂದೇ."

"ಆದರೂ ಕೂಡಾ...."

ಅಂತಹ ಗಭೀರವಾದ ಸ್ನೇಹಪರವಾದ ರೀತಿಯಲ್ಲಿ ಅವರು ಅಲ್ಲಿ ಮಾತನಾಡುತ್ತ ಕುಳಿತರು. ಅದನ್ನು ಕಂಡು ತಾತರ್ ಹುಡುಗಿ, ಛೇಡಿಸುವುದನ್ನು ನಿಲ್ಲಿಸಿದಳು. ಅವಳು ಕೊಠಡಿಯೊಳಕ್ಕೆ ಮರಳಿ ನುಸುಳಿ, ಸದ್ದಿಲ್ಲದೆ ತನ್ನ ಪೋಷಾಕನ್ನು ಮೊಳೆಯಿಂದ ತೆಗೆದು, ಮಾಯವಾದಳು.

"ಇವಳು ಎಳೇ ವಯಸ್ಸಿನಾಕೆ," ಎಂದ ಒಸಿಪ್.

ಆರ್ದಾಲಿಯನ್ ಅವನೆಡೆಗೆ ನೋಡಿ, ಸದ್ಭಾವನೆಯಿಂದಲೇ ಅಂದ:

"ಇದೆಲ್ಲಾ ಯೆಫಿಮುಷ್ಕಾನ ಕೆಲಸ. ಅವನು ಯೋಚಿಸೋದೆಲ್ಲಾ ಹೆಂಗಸರ ವಿಷಯವೇ ....ತಾತರ್ ಹುಡುಗಿ ಸಾಕಷ್ಟು ಹರ್ಷಚಿತ್ತಳೇ, ಯಾವಾಗಲೂ ಹುಚ್ಚುಚ್ಚಾರ ಮಾತಾಡ್ತಿರ್‍ತಾಳೆ."

"ಹುಷಾರಾಗಿರು. ಇಲ್ಲದೇ ಹೋದರೆ ಇಲ್ಲೇ ಹೂತುಹೋಗ್ತೀಯಾ ನೀನು," ಎಂದು ಒಸಿಪ್ ಎಚ್ಚರಿಸಿದ. ಮೀನನ್ನು ಕೊನೆಯಬಾರಿಗೆ ಜಗಿದು ಆತ ಅಲ್ಲಿಂದ ಹೊರಟ.

ಮರುಳತ್ತ ಹಾದಿಯಲ್ಲಿ ಅವನೊಡನೆ ನಾನೆಂದೆ:

"ನೀನು ಬಂದುದೇಕೆ ?"

"ಏನಾಗ್ತಿದೇಂತ ಒಂದಿಷ್ಟು ನೋಡೋದಕ್ಕೆ. ಅವನು ನನ್ನ ಸ್ನೇಹಿತ. ಇಂತಹ ಎಷ್ಟೋ ಪ್ರಕರಣಗಳನ್ನು ನಾನು ಬಲ್ಲೆ. ಒಬ್ಬ ಮನುಷ್ಯ ಜೀವಿಸ್ತಾ ಹೋಗ್ತಾನೆ. ಆ ಮೇಲೆ, ಇದ್ದಕ್ಕಿದ್ದಂತೆ, ಸೆರೆಮನೆಯಿಂದ ತಪ್ಪಿಸಿಕೊಳ್ತಿದಾನೇನೋ ಅನ್ನೋಹಾಗೆ ವರ್ತಿಸ್ತಾನೆ," ಎಂದು ಹೇಳಿ, ತನ್ನಷ್ಟಕ್ಕೇ ಅವನು ಪುನರುಚ್ಚರಿಸಿದ: ವೋಡ್ಕಾದಿಂದ ದೂರವಿರು!"

ಒಂದು ನಿಮಿಷ ತಡೆದು ಅವನು ಮಾತು ಸೇರಿಸಿದ:

"ಆದರೆ ಅದಿಲ್ಲದೆ ಎಲ್ಲಾ ನೀರಸ."

"ವೋಡ್ಕಾವಿಲ್ಲದೆ?"

"ಹೌದು. ಒಂದು ಗುಟುಕು ಕುಡಿದೆ ಎಂದರೆ, ಬೇರೆ ಲೋಕದಲ್ಲೇ ಇದೀಯೇನೋ ಅನಿಸ್ತದೆ."

ಆರ್ದಾಲಿಯನ್ ಅಲ್ಲಿ ಹತೇ ಹೋದ. ಕೆಲದಿನಗಳ ಅನಂತರ ಅವನು ಕೆಲಸಕ್ಕೆ ಹಿಂತಿರುಗಿದ. ಆದರೆ ಬೇಗನೆ ಪುನಃ ಮಾಯವಾದ. ಮುಂದೆ ವಸಂತದಲ್ಲಿ ಕೆಲ ಬಡಪಾಯಿಗಳ ಜತೆ ಅವನನ್ನು ಕಂಡೆ. ಅವರೆಲ್ಲ ನದೀ ಹೇರುದೋಣಿಯ ಸುತ್ತಲೂ ಮಂಜುಗಡ್ಡೆಯನ್ನು ಕಡಿಯುತ್ತಿದ್ದರು. ಪರಸ್ಪರರನ್ನು ಕಾಣಲು ನಮಗೆ ಸಂತೋಷವೆನಿಸಿತು. ಚಹಾ ಕುಡಿಯಲೆಂದು ನಾವು ಪಾನಮಂದಿರದೊಳಕ್ಕೆ ಹೋದೆವು.

ಚಹಾ ಕುಡಿಯುತ್ತ ಅವನು ಜಂಭ ಕೊಚ್ಚಿಕೊಂಡ.

"ನಾನೆಂಥ ಕೆಲಸಗಾರನಾಗಿದ್ದೆ ಅಂತ ನೆನಪೆ? ಅದನ್ನು ಅಲ್ಲಗಳೆಯುವಂತೆಯೇ ಇಲ್ಲ. ನನ್ನ ಕೆಲಸಕ್ಕೆ ಸಂಬಂಧಿಸಿ ನಾನೊಬ್ಬ ಜಾದುಗಾರನಾಗಿದ್ದೆ. ನೂರಾರು ರೂಬಲುಗಳನ್ನು ನಾನು ಸಂಪಾದಿಸೋದು ಸಾಧ್ಯವಿತ್ತು."

"ಆದರೆ ನೀನು ಸಂಪಾದಿಸಲಿಲ್ಲ."

ಆತ ಹೆಮ್ಮೆಯಿಂದ ಕೂಗಿ ನುಡಿದ:

"ಇಲ್ಲ ನಿಜ. ಕೆಲಸವನ್ನು ಸುಟ್ಟಿತು!"

ಅವನಲ್ಲೀಗ ಒಣ ಡಂಭಾಚಾರದ ವಾಚಾಳಿತನದ ಠೀವಿಯಿತ್ತು. ಅದು ಪಾನಮಂದಿರದಲ್ಲಿದ್ದ ಜನರ ಗಮನವನ್ನು ಸೆಳೆಯಿತು.

"ಆ ಸದ್ದಿಲ್ಲದ ಕಳ್ಳ ಪಿಯೋತರ್, ಕೆಲಸದ ಬಗ್ಗೆ ಏನು ಹೇಳ್ತಿದ್ದ ನೆನಪಿದೆಯೆ? 'ಇಟ್ಟಿಗೆ ಮನೆಗಳು ಪರರಿಗೆ, ಮರದ ಶವದಾನಿ ನಿನಗೆ,. ಆಂ—ಗೊತಾಯ್ತೆ? ಇಲ್ಲಿದೆ ಕೆಲಸದಿಂದ ಸಿಗೋ ಪ್ರತಿಫಲ!"

ನಾನೆಂದೆ:

"ಪಿಯೋತರ್ ಕಾಹಿಲೆ ಮನುಷ್ಯ. ಸಾಯುವ ಭಯ ಅವನಿಗೆ."

ಆರ್ದಾಲಿಯನ್ ಕೂಗಾಡಿದ:

"ನಾನೂ ಕಾಹಿಲೆ ಮನುಷ್ಯ. ನನ್ನ ಆತ್ಮಕ್ಕೆ ಕಾಹಿಲೆಯಾಗಿದೆ!"

ಆದಿತ್ಯವಾರಗಳಲ್ಲಿ ನಾನು ಅನೇಕ ಸಾರಿ ಶಹರದ ಮಧ್ಯಭಾಗವನ್ನು ಬಿಟ್ಟು 'ಲಕ್ಷಾಧಿಪರ ರಸ್ತೆ'ಗೆ ಇಳಿಯುತ್ತಿದ್ದೆ. ದಿಕ್ಕಿಲ್ಲದ ಬಡಪಾಯಿಗಳೆಲ್ಲ ಅಲ್ಲಿ ವಾಸಿಸುತ್ತಿದ್ದರು. ಆರ್ದಾಲಿಯನ್ ಎಷ್ಟೊಂದು ಬೇಗ ಬೇಗನೆ ಈ ಬಹಿಷ್ಕೃತರಲ್ಲೊಬ್ಬನಾಗುತ್ತಿರುವನೆಂಬುದನ್ನು ನಾನು ಕಂಡೆ. ಒಂದೇ ಒಂದು ವರ್ಷದ ಹಿಂದೆ ಅವನು ಉತ್ಸಾಹಶಾಲಿಯಾದ ಮನಸ್ಸು ಸ್ತಿಮಿತದಲ್ಲಿದ್ದ ಕೆಲಸಗಾರನಾಗಿದ್ದ. ಈಗ ಪ್ರತಿಯೊಬ್ಬನನ್ನೂ ಜಗಳಕ್ಕೂ ಹೊಡೆದಾಟಕ್ಕೂ ಆಹ್ವಾನಿಸುವವನಂತೆ, ಒರಟೊರಟಾದ ನಡವಳಿಕೆ, ಠೀವಿಯಿಂದ ತೊನೆದಾಡುವ ನಡಿಗೆ, ಪ್ರತಿಭಟಿಸುವ ನೋಟ ಅವನಿಗಿದ್ದುವು.

"ಜನರು ನನ್ನ ಮಾತನ್ನು ಹೇಗೆ ಕಿವಿಗೊಟ್ಟು ಕೇಳ್ತಾರೇಂತ ನೋಡು. ಇಲ್ಲಿ ನಾನೊಬ್ಬ ಮುಖಂಡ," ಎಂದು ಆತ ಜಂಭಕೊಚ್ಚುತ್ತಿದ್ದ. ಸಂಪಾದಿಸಿದ ಹಣ ಏನೇನೂ ಉಳಿಯದಂತೆ ಆ ಭಿಕಾರಿಗಳಿಗೆಲ್ಲ ಆತ ತಿನಿಸುತ್ತಿದ್ದ, ಉಣಿಸುತ್ತಿದ್ದ. ಯಾವಾಗಲೂ ಸೋತವನ ರಕ್ಷಣೆಗಾಗಿ ಹೊಡೆದಾಟಗಳಲ್ಲಿ ಭಾಗವಹಿಸುತ್ತಿದ್ದ.

"ಅದು ಅನ್ಯಾಯ, ಬಾಂಧವರೇ! ನೀವು ನ್ಯಾಯಮಾರ್ಗದಿಂದ ವರ್ತಿಸ್ಬೇಕು!" ಎಂದು ಅವನು ಕೂಗಾಡುವುದನ್ನು ಎಷ್ಟೋ ಸಾರೆ ಕೇಳಬಹುದಿತ್ತು.

ಹೀಗಾಗಿ ಅವರೆಲ್ಲ, 'ನ್ಯಾಯವಂತ' ಎಂದು ಅವನಿಗೆ ಅಡ್ಡಹೆಸರಿಟ್ಟರು. ಇದರಿಂದ ಅವನು ಪರಮಸಂತುಷ್ಟನಾದ.

ಆ ಹಳೆಯ ಹೊಲಸು ರಸ್ತೆಯ ಕಲ್ಲಿನ ಚೀಲಪೊಳಕ್ಕೆ ಒಟ್ಟಿಕೊಂಡಿದ್ದ ಜನರನ್ನು ಅರ್ಥ ಮಾಡಿಕೊಳ್ಳಲು ನಾನು ಯತ್ನಿಸಿದೆ. ಅವರೆಲ್ಲ ಜೀವನದ ಮುಖ್ಯಪ್ರವಾಹದಿಂದ ಸಿಡಿದು ಬಂದಿದ್ದ ಜನರು. ಆದರೆ ಇಲ್ಲಿ ತಮ್ಮದೇ ಆದ ಬದುಕನ್ನು ಅವರು ಸೃಷ್ಟಿಸಿಕೊಂಡಿದ್ದಂತೆ ಕಂಡಿತು. ಇದು ಇತರರಿಗಿಂತ ಸ್ವತಂತ್ರವಾಗಿ ಹರ್ಷಕರವಾಗಿತ್ತು. ಹಿಂದು ಮುಂದು ಯೋಚನೆ ಮಾಡದೆ ದರೋಡೆಗಾರರಾಗಿಯೋ ಸನ್ಯಾಸಿಗಳಾಗಿಯೋ ಮಾರ್ಪಡುತ್ತಿದ್ದ ವೋಲ್ಗಾನದಿಯ ಅಂಬಿಗರ ಬಗೆಗೆ ನನ್ನ ಅಜ್ಜ ಹಿಂದೆ ಕಥೆಗಳನ್ನು ಹೇಳುತ್ತಿದ್ದ. ಧೀರ ನಿಶ್ಚಿಂತ ಬದುಕಿನ ಈ ಜನರನ್ನು ಕಂಡಾಗ ನನಗೆ ಆ ಕಥೆಗಳ ನೆನಪಾಯಿತು. ಕೆಲಸ ದೊರೆಯದೇ ಇದ್ದಾಗ, ಹೇರುದೋಣಿ ಗಳಿಂದಲೋ ಹಡಗುಗಳಿಂದಲೋ ಸಣ್ಣಪುಟ್ಟ ಕಳವುಗಳನ್ನು ಮಾಡಲು ಅವರು ಅಳುಕು ತ್ತಿರಲಿಲ್ಲ. ಆದರೆ ಇದರಿಂದ ನಾನೇನೂ ಒಂದಿಷ್ಟೂ ದಂಗಾಗಲಿಲ್ಲ. ಹಳೆಯ ಕೋಟಿನಲ್ಲಿ ನೂದು ದಾರಗಳಿದ್ದಂತೆ ಬದುಕಿನ ತುಂಬಾ ಕಳವಿನ ಹೆಣಿಗೆ ಇದ್ದುದನ್ನು ನಾನು ಕಂಡೆ. ಆದರೆ ಕೆಲವೇಳೆ, ಬೆಂಕಿಬಿದ್ದಾಗ ಆಗುವಂತೆ, ಅಥವಾ ನದಿಯ ಮೇಲಣ ಮಂಜುಗಡ್ಡೆ ಒಡೆಯುವಾಗ ಜರಗುವಂತೆ, ಇಲ್ಲವೆ ಅವಸರದಿಂದ ಹೇರು ತುಂಬುವಾಗಿನ ಪರಿಸ್ಥಿತಿಯಂತೆ, ತಮ್ಮ ದೇಹಶಕ್ತಿ ಯೆಲ್ಲವನ್ನೂ ವಿನಿಯೋಗಿಸಿ ಅದ್ಭುತವಾದ ಉತ್ಸಾಹದಿಂದಲೂ ಆತ್ಮತ್ಯಾಗದಿಂದಲೂ ಈ ಜನರು ದುಡಿಯುತ್ತಿದ್ದುದನ್ನೂ ನಾನು ಕಂಡೆ. ಒಟ್ಟಿನಲ್ಲಿ ಇವರು ಇತರ ಜನರಿಗಿಂತ ಹೆಚ್ಚು ಹರ್ಷಿತ ರಾಗಿರುತ್ತಿದ್ದರು.

ಆದರೆ ಒಸಿಪ್, ಆರ್ದಾಲಿಯನ್ನನ ಜತೆ ನಾನು ಸ್ನೇಹದಿಂದಿದ್ದುದನ್ನು ಗಮನಿಸಿದಾಗ, ಪಿತೃವಾತ್ಸಲ್ಯದಿಂದ ನನ್ನೊಡನೆ ಅಂದ:

"ಇಲ್ಲಿ ಕೇಳು, ನನ್ನ ಮಗೂ. ಆ ಕೆಳಗಿನ 'ಲಕ್ಷಾಧಿಪತಿಗಳ' ಜತೆ ನಿನ್ನ ಸ್ನೇಹ ಸ್ವಲ್ಪ ಅತಿಯಾಯ್ತು ಅನಿಸೋದಿಲ್ವೆ? ಅವರಿಂದಾಗಿ ನಿನಗೆ ಅಪಾಯ ತಟ್ಟದಂತೆ ನೋಡಿಕೋ."

ದುಡಿಮೆಯಿಲ್ಲದೆ ನಿಶ್ಚಿಂತೆಯಾಗಿರುತ್ತಿದ್ದ ಈ ಜನರನ್ನು ನಾನು ಇಷ್ಟಪಡುವೆನೆಂಬ ಸಂಗತಿ ಯನ್ನು, ನನ್ನಿಂದ ಶಕ್ಯವಿದ್ದಷ್ಟು ಸರಳವಾಗಿ ನಾನು ವಿವರಿಸಿದೆ.

ಆತ ನಕ್ಕು ನಡುವೆ ನನ್ನ ಮಾತನ್ನು ತಡೆದ:

"ಹಕ್ಕಿಗಳ ಹಾಗೆ ಸ್ವತಂತ್ರರು! ಅವರು ನಿಷ್ಪ್ರಯೋಜಕ ಮೈಗಳ್ಳರಾಗಿರೋದರಿಂದಲೇ ಹಾಗಿದ್ದಾರೆ. ಅವರ ದೃಷ್ಟೀಲಿ ದುಡಿಮೆ ಅನ್ನೋದು ಶಿಕ್ಷೆ."

"ದುಡಿಮೆ ಎಂದರೆ ಸಂತೋಷಪಡುವವರು ಯಾರಾದರೂ ಇದಾರೇನು? 'ಪ್ರಾಮಾಣಿಕ

ದುಡಿಮೆಯಿಂದ ತನಗೋಸ್ಕರ ಒಂದು ಸೌಧವನ್ನು ಯಾವತ್ತೂ ಯಾವನೂ ನಿರ್ಮಿಸಿದ್ದಿಲ್ಲ'— ಅಂತ ಗಾದೆಯೇ ಇಲ್ವೆ?"

ಆ ಗಾದೆಯನ್ನು ಎಷ್ಟೋಸಾರಿ ನಾನು ಕೇಳಿದ್ದೆ; ಅದೆಷ್ಟೋ ನಿಜವಾಗಿ ನನಗೆ ಅನಿಸಿತ್ತು. ಹೀಗಾಗಿ, ಸಲೀಸಾಗಿ ಅದನ್ನು ಉಲ್ಲೇಖಿಸಿದೆ. ಆದರೆ ಒಸಿಪ್ ಸಿಟ್ಟಿಗೆದ್ದು ಕೂಗಾಡಿದ:

"ಯಾರು ಹೇಳ್ತಾರೆ ಹಾಗೇಂತ? ಮೂರ್ಖರು ಮತ್ತು ಸೋಮಾರಿಗಳು, ಕುನ್ನಿಮರಿ! ಅಂಥ ಮಾತುಗಳಿಗೆ ನೀನು ಕಿವಿಗೊಡಬಾರದು! ಆ ರೀತಿಯ ಹುಚ್ಚುಚ್ಚಾರ ಮಾತನಾಡೋದು ಅಸೂಯಾಪರರು ಮತ್ತು ಬದುಕಿನಲ್ಲಿ ಸೋತವರು ಮಾತ್ರ. ಹಾರೋದಕ್ಕೆ ಪ್ರಯತ್ನಿಸುವ ಮೊದಲು ಕೆಲ ಪುಕ್ಕಗಳನ್ನು ನೀನು ಬೆಳೆಸಿಕೊಳ್ಳೋದು ಮೇಲು. ಈ ನಿನ್ನ ಸ್ನೇಹದ ವಿಷಯ-ಈ ವಿಚಾರವಾಗಿ ನಿನ್ನ ಯಜಮಾನನಿಗೆ ನಾನು ಹೇಳ್ತೀನಿ. ಇದಕ್ಕೆ ಹೊಣೆ ನೀನೊಬ್ಬನೇ ಹೊರತು ಬೇರೆ ಯಾರೂ ಅಲ್ಲ."

ಅವನಿಗೆ ಈತ ಹೇಳಿಯೂ ಬಿಟ್ಟ. ಒಸಿಪನ ಎದುರಲ್ಲೇ ನನ್ನ ಯಜಮಾನ ನನ್ನೊಡನೆ ಅಂದ:

'ಲಕ್ಷಾಧಿಪತಿಗಳ' ಸಹವಾಸ ಬಿಟ್ಟುಬಿಡು, ಪೆಶ್ಕೋವ್. ಆ ಬೀದೀಲಿ ಇರೋರೆಲ್ಲಾ ಚೋರರು ಮತ್ತು ವೇಶ್ಯೆಯರು. ಆ ರಸ್ತೆ ನೇರವಾಗಿ ಕೊಂಡೊಯ್ಯೋದು ಸೆರೆಮನೆಗೆ ಅಥವಾ ಆಸ್ಪತ್ರೆಗೆ. ಬಿಟ್ಟುಬಿಡು ಅವರ ಸಹವಾಸ!"

'ಲಕ್ಷಾಧಿಪತಿಗಳ' ರಸ್ತೆಗೆ ಭೇಟಿ ಕೊಡುತ್ತಿದ್ದ ಸಂಗತಿಯನ್ನು ನಾನು ಬಚ್ಚಿಡತೊಡಗಿದೆ. ಆದರೆ ಸ್ವಲ್ಪ ಸಮಯದಲ್ಲೆ, ಅಂತಹ ಭೇಟಿಯನ್ನೇ ನಾನು ನಿಲ್ಲಿಸಲೇ ಬೇಕಾಗಿಬಂತು.

ಒಂದು ದಿನ ಆರ್ದಾಲಿಯನ್, 'ಮಗು' ಮತ್ತು ನಾನು, ಒಂದು ವಸತಿಗೃಹದ ಅಂಗಳದಲ್ಲಿ ಶೆಡ್ಡಿನ ಛಾವಣಿಯ ಮೇಲೆ ಕುಳಿತಿದ್ದೆವು. ಡಾನ್ ನದೀತಟದ ರೊಸ್ಟೋವ್‌ನಿಂದ ಮಾಸ್ಕೋದವರೆಗೆ ಕಾಲ್ನಡಿಗೆಯಿಂದ ತಾನು ಹೋದ ಬಗೆಗೆ ಮನೋರಂಜಕ ವಿವರವನ್ನು 'ಮಗು' ಕೊಡುತ್ತಿದ್ದ. ಅವನೊಬ್ಬ, ಇಂಜನಿಯರಿಂಗ್ ವಿಭಾಗದಲ್ಲಿ ದುಡಿದಿದ್ದ ಮಾಜೀ ಸೈನಿಕ. ಅವನಿಗೆ ಸೇಯಿಂಟ್ ಜಾರ್ಜ್ ಕ್ರಾಸು ಪದಕವಾಗಿ ದೊರೆತಿತ್ತು. ಟರ್ಕಿ ಯುದ್ಧದಲ್ಲಿ ಅವನ ಮೊಣಕಾಲಿನಲ್ಲಿ ಒಂದು ಗಾಯವಾಯಿತು. ಇದು ಆಯುಷ್ಯವೆಲ್ಲ ಅವನು ಕುಂಟನಾಗಿರುವಂತೆ ಮಾಡಿತು ಕುಳ್ಳ, ಗಟ್ಟಿಮುಟ್ಟಾದ ವ್ಯಕ್ತಿ. ಅವನ ಕೈಗಳಲ್ಲಿ ಅದ್ಭುತ ಶಕ್ತಿಯಿತ್ತು. ಕುಂಟನಾದುದರಿಂದ ದುಡಿಯುವಹಾಗಿರಲಿಲ್ಲ. ಹೀಗಾಗಿ, ಅವನ ಕೈಗಳಲ್ಲಿನ ಶಕ್ತಿ ವಿನಿಯೋಗವಾಗುವಂತಿರಲಿಲ್ಲ. ಯಾವುದೋ ಕಾಹಿಲೆಯಿಂದಾಗಿ ಅವನ ತಲೆಗೂದಲೂ ಗಡ್ಡವೂ ಬಿದ್ದುಹೋಗಿದ್ದುವು. ಹೀಗಾಗಿ, ಅವನ ತಲೆ ಹಸುಗೂಸಿನ ತಲೆಯಂತೆ ಬೋಳಾಗಿತ್ತು.

ಜಡಗೊಂಡು ಹಳದಿಯಾಗಿದ್ದ ಕಣ್ಣುಗಳಿಂದ ಹೊಳಪನ್ನು ಸೂಸುತ್ತ ಅವನೆನ್ನುತ್ತಲಿದ್ದ:

"ಹೀಗೆ ನಾನು ಸೆರ್ಪುಖೋವಿಗೆ ಬಂದೆ. ಅಲ್ಲಿ ತನ್ನ ಮನೆ, ಹಿತ್ತಲಲ್ಲಿ ಒಬ್ಬ ಪಾದ್ರಿ ಕುಳಿತಿದ್ದುದನ್ನು ಕಂಡೆ. ಅವನ ಬಳಿಗೆ ಹೋಗಿ, 'ಟರ್ಕೀ ಯುದ್ಧದ ವೀರನಿಗೆ ಒಂದಿಷ್ಟು ಏನಾದರೂ ಕೊಡಬಲ್ಲಿರಾ?-' ಅಂತ ಕೇಳ್ದೆ..."

ಆರ್ದಾಲಿಯನ್ ತನ್ನ ತಲೆಯಲುಗಿಸಿ ಅಂದ:

"ಛೆ, ಎಂಥ ಸುಳ್ಳು, ಎಂಥ ಸುಳ್ಳುಗಾರ!"

ಸುಳ್ಳುಗಾರ ಯಾಕೆ?" ಎಂದು 'ಮಗು' ಸಿಟ್ಟಾಗದೆ ಕೇಳಿದ. ಆದರೆ ಅರ್ದಾಲಿಯನ್, ಛೇಡಿಸುವ ಮೃಗಳ್ಳದನಿಯಲ್ಲಿ ಹೇಳುತ್ತ ಹೋದ:

"ನೀನು ಸೀದಾ ಸಾದಾ ಬದುಕಬೇಕಪ್ಪ, ಎಲ್ಲ ಕುಂಟರೂ ಮಾಡೋಹಾಗೆ ರಾತ್ರಿ ಕಾವಲುಗಾರನಾಗಿ ನೀನು ದುಡಿಯಲೇಬೇಕಪ್ಪ. ಆದರೆ ನೀನು ಅದರಬದಲು, ಸುತ್ತುಮುತ್ತು ಹೊಂಚು ಹಾಕ್ಕೊಂಡು ಸುಳ್ಳಾಡ್ಕೊಂಡು ಹೋಗ್ತಿರ್ತೀಯಾ."

"ಹಾಗೆ ನಾನು ಮಾಡೋದು ಬರೇ ತಮಾಷೆಗೆ—ಜನರನ್ನು ನಗಿಸೋದಕ್ಕೆ."

"ಸ್ವತಃ ನೀನೇ ಯಾಕೆ ನಗೋದಿಲ್ಲ?"

ಅಂಗಳದೊಳಕ್ಕೆ, ಬಿಸಿಲು ಬಿದ್ದಿದ್ದರೂ ಕರಿದಾಗಿ ಹೊಲಸು ಮೆತ್ತಿಕೊಂಡಿದ್ದ, ಹೆಂಗಸೊಬ್ಬಳು ಬಂದಳು. ತನ್ನ ತಲೆಯ ಮೇಲ್ಗಡೆ ಏನನ್ನೋ ಬೀಸುತ್ತ ಅವಳು ಕೂಗಾಡ ತೊಡಗಿದಳು:

"ಹೇಯ್ ಹುಡುಗೀರೇ, ಯಾರಾದರೂ ಒಂದು ಲಂಗ ಕೊಂಡ್ಕೋತೀರೇನು?"

ಮನೆಗಳಲ್ಲಿನ ಸಂದಿಗಳಿಂದ ಹೆಂಗಸರು ಹೊರಕ್ಕೆ ತೆವಳಿಕೊಂಡು ಬಂದು, ಮಾರಾಟಗಾತಿಯ ಸುತ್ತಲೂ ಗುಂಪುಕೂಡಿದರು. ಆಕೆ ಅಗಸಗಿತ್ತಿ ನಟಾಲ್ಯಾ ಎಂಬುದನ್ನು ತಕ್ಷಣವೇ ನಾನು ಗುರುತುಹಿಡಿದೆ. ಛಾವಣಿಯಿಂದ ನಾನು ಕೆಳಕ್ಕೆ ಧುಮುಕುವುದರೊಳಗೆ, ಮೊದಲು ಕೇಳಿದಾಕೆಗೇ ಲಂಗವನ್ನು ಮಾರಿ, ಅಂಗಳವನ್ನಾಗಲೇ ಬಿಟ್ಟು ಹೊರಟಿದ್ದಳು.

ಹೆಬ್ಬಾಗಿಲ ಹೊರಗೆ ಬೆಂಬತ್ತಿ ಬಂದು ಅವಳನ್ನು ದಾಟಿ, ಹರ್ಷೋದ್ವೇಗದಿಂದ ನಾನು ಕೂಗಿಕರೆದೆ:

"ಹೆಲ್ಲೋ!"

ತನ್ನ ಕುಡಿಗಣ್ಣಿನಿಂದೊಂದು ನೋಟ ಬೀರಿ ಆಕೆ ಕೇಳಿದಳು:

"ಹೇಳೋದಕ್ಕಿರೋದು ಇಷ್ಟೇ ಏನು?"

ಇದ್ದಕ್ಕಿದ್ದಂತೆ ಅವಳು ನಿಂತು, ಸಿಟ್ಟಿನಿಂದ ಕೂಗಿದಳು:

"ಓ ದೇವರೇ! ನೀನೇನು ಮಾಡ್ತಿದೀಯಾ ಇಲ್ಲಿ?"

ಆಕೆ ಬೆಚ್ಚಿಬಿದ್ದು ಆಡಿದ ಮಾತು ಹೃದಯಸ್ಪರ್ಶಿಯಾಗಿತ್ತು. ನನ್ನನ್ನದು ಸಂಕೋಚಕ್ಕೆ ಗುರಿಮಾಡಿತು. ವಿವೇಕದ ಕಳೆಯಿದ್ದ ಆ ಮುಖದ ಮೇಲೆ ಭಯವೂ ಅಚ್ಚರಿಯೂ ಒಡೆದು ತೋರುತ್ತಿದ್ದುವು. ಆಕೆ ಭಯಗೊಂಡಿದ್ದುದು ನನ್ನ ಸಲುವಾಗಿ ಎಂಬುದನ್ನು ನಾನು ಮನಗಂಡೆ. ನಾನು ಆ ರಸ್ತೆಯಲ್ಲಿ ವಾಸವಾಗಿಲ್ಲವೆಂದೂ ಆಗೊಮ್ಮೆ ಈಗೊಮ್ಮೆ ನೋಡಲೆಂದು ಬರುತ್ತಿದ್ದೆನೆಂದೂ ಅವಸರವಾಗಿ ನಾನು ವಿವರಿಸಿದೆ.

ತುಚ್ಛೀಕರಿಸುವ ಒರಟುತನದಿಂದ ಅವಳು ಪುನರುಚ್ಚರಿಸಿದಳು:

"ನೋಡೋದಕ್ಕೆ? ಎಲ್ಲಿ ನೋಡೋದು? ಹಾದಿಹೋಕರ ಕಿಸೆಗಳೊಳಗೆ, ಹೆಂಗಸರ ಕುಪ್ಪಸಗಳೊಳಗೆ—ಹೌದೇನು?"

ಅವಳ ಮುಖ ಸೊರಗಿತ್ತು. ತುಟಿಗಳು ಜೋತುಬಿದ್ದಿದ್ದುವು. ಅವಳ ಕಣ್ಣುಗಳ ಕೆಳಗೆ ಕಪ್ಪುವೃತ್ತಗಳಿದ್ದುವು.

ಪಾನಮಂದಿರದ ಬಾಗಿಲಬಳಿ ಅವಳು ನಿಂತು ಅಂದಳು :

"ಒಂದು ಗ್ಲಾಸು ಚಹಾ ಕುಡಿಯೋದಕ್ಕೆ ಬಾ. ನಿನ್ನ ಉಡುಪು ಸಾಕಷ್ಟು ಚೊಕ್ಕಟ ವಾಗಿಯೇ ಇದೆ; ಈ ಜನರ ಹಾಗಲ್ಲ. ಆದರೆ ಯಾಕೋ ನಿನ್ನ ಮಾತಿನಲ್ಲಿ ನನಗೆ ನಂಬಿಕೆ ಹುಟ್ಟೋದಿಲ್ಲ."

ಆದರೆ, ಪಾನಮಂದಿರವನ್ನೊಮ್ಮೆ ಪ್ರವೇಶಿಸಿದ ಬಳಿಕ, ನನ್ನಲ್ಲಿ ಅವಳಿಗೆ ಪುನಃ ವಿಶ್ವಾಸ ಕುದುರಿದಂತೆ ಕಂಡಿತು. ಗ್ಲಾಸಿಗೆ ಚಹಾ ಸುರಿದಬಳಿಕ, ಅದೇ ಒಂದು ತಾಸಿಗೆ ಮುಂಚೆಯಷ್ಟೇ ತಾನು ಎದ್ದೆನೆಂದು, ತಿನ್ನುವುದಕ್ಕಾಗಲೀ ಕುಡಿಯುವುದಕ್ಕಾಗಲೀ ಆವರೆಗೂ ಏನೂ ದೊರೆತಿರ ಲಿಲ್ಲವೆಂದು, ಜಡವಾದ ಧ್ವನಿಯಲ್ಲಿ ಅವಳು ಮಾತನಾಡತೊಡಗಿದಳು.

"ಹೋದರಾತ್ರೆ ಗಾಡಿಹೊಡೆಯುವವರ ಹಾಗೆ ಕುಡಿದು ಮತ್ತೇರಿ ನಾನು ಮಲಗಿದೆ. ಆದರೆ, ನಾನು ಕುಡಿದುದೆಲ್ಲಿ ಅಥವಾ ಯಾರ ಜತೆ ಎಂಬುದು ನನಗೆ ನೆನಪಿಲ್ಲ."

ಅವಳ ವಿಷಯದಲ್ಲಿ ನನಗೆ ಕನಿಕರವೆನಿಸಿತು. ಅವಳ ಸಾನ್ನಿಧ್ಯದಲ್ಲಿರುವುದು ಕಸಿವಿಸಿ ಯನ್ನುಂಟುಮಾಡಿತು. ಅವಳ ಮಗಳ ಬಗೆಗೆ ಕೇಳಿ ತಿಳಿಯಲು ನಾನು ಕಾತರನಾಗಿದ್ದೆ. ಒಂದಿಷ್ಟು ಚಹಾವನ್ನೂ ವೋಡ್ಕಾವನ್ನೂ ಸೇವಿಸಿದ ಬಳಿಕ, ಆ ರಸ್ತೆಯ ಎಲ್ಲ ಹೆಂಗಸರಲ್ಲೂ ಸರ್ವಸಾಧಾರಣವಾದ ಒರಟುತನದಿಂದ, ತನ್ನ ನಿತ್ಯದ ಚುರುಕು ರೀತಿಯಲ್ಲಿ ಅವಳು ಮಾತನಾಡ ತೊಡಗಿದಳು. ಆದರೆ ಅವಳ ಮಗಳ ಬಗೆಗೆ ನಾನು ಕೇಳಿದೊಡನೆ, ಅವಳು ತಕ್ಷಣವೇ ಅಮಲಿ ಳಿದು ಶಾಂತವಾಗಿ ಅಂದಳು :

"ಯಾಕೆ ಕೇಳ್ತಿದೀಯಾ ? ಇಲ್ಲ ಮಗೂ, ನನ್ನ ಮಗಳವರೆಗೆಂದೂ ನೀನು ತಲಪಲಾರೆ. ನಿನ್ನ ಜೀವಮಾನದಲ್ಲಿ ಅದು ಸಾಧ್ಯವಾಗದು."

ಮತ್ತೊಂದು ಗ್ಲಾಸು ಪಾನೀಯವನ್ನು ಕುಡಿದು ಅವಳು ಮುಂದುವರಿದಳು :

"ನನ್ನ ಮಗಳಿಗೂ ನನ್ನಗೂ ಈಗ ಯಾವ ಸಂಬಂಧವೂ ಇಲ್ಲ. ನಾನು ಯಾರು ? ಒಬ್ಬ ಅಗಸರವಳು. ಅವಳಂಥವಳಿಗೆ ನಾನೆಂಥ ತಾಯಿ ? ಅವಳು ಪಂಡಿತೆ, ವಿದ್ಯಾವಂತೆ. ಅದೇನು ಚಿಲ್ಲರೆ ವಿಷಯವೆ, ತಮ್ಮ ! ಹೀಗಾಗಿ ಅವಳು ನನ್ನನ್ನು ಬಿಟ್ಟು ತನ್ನ ಗೆಳತಿಯಾದ ಒಬ್ಬಳು ಶ್ರೀಮಂತ ಹುಡುಗಿಯ ಜತೆ ಇರೋದಕ್ಕಾಗಿ ಹೊರಟುಹೋದಳು. ಅಲ್ಲಿ ಯಾವುದೋ ಮನೆ ಯಲ್ಲಿ ಶಿಕ್ಷಕಿಯಾಗಿರೋದಕ್ಕಂತೆ....."

ತುಸು ತಡೆದು ಅವಳು ಮೃದುವಾಗಿ ಅಂದಳು :

"ಅಗಸರವಳ ಅಗತ್ಯ ಯಾರಿಗೂ ಇಲ್ಲ. ಪ್ರಾಯಶಃ 'ಬೀದಿಗಿಳಿದವಳ' ಅಗತ್ಯ ಅವರಿ ಗಿರ್ತದೆ. ಹ್ಞ ?"

ಅವಳು ಬೀದಿಗಿಳಿದವಳೆಂಬುದನ್ನು ಆಕ್ಷಣವೇ ನಾನು ಊಹಿಸಿದ್ದೆ. ಈ ರಸ್ತೆಯಲ್ಲಿ ಎಲ್ಲ ಹೆಂಗಸರೂ ಬೀದಿಗಿಳಿದವರೇ ಆಗಿದ್ದರು. ಆದರೆ ಆ ಹೆಸರನ್ನು ಸ್ವತಃ ಆಕೆ ತನಗೇ ಅನ್ವಯಿಸಿದು ದನ್ನು ಕೇಳಿದಾಗ ನನಗೆ ದಂಗುಬಡೆದಂತಾಯಿತು; ನಾಚಿಕೆಯ ಹಾಗೂ ಕನಿಕರದ ಕಂಬನಿಗಳು ನನ್ನ ಕಣ್ಣಲ್ಲಿ ಚಿಮ್ಮಿದುವು. ಸ್ವಲ್ಪವೇ ಸಮಯದ ಹಿಂದೆಯಷ್ಟೇ ಧೀರಳೂ ಚತುರಳೂ ಸ್ವತಂತ್ರಳೂ ಆಗಿದ್ದ ಹೆಂಗಸು ನಟಾಲ್ಯಾ. ಸ್ವತಃ ಆಕೆಯಿಂದಲೇ ಬಂದ ಅಂತಹ ಮಾತು ವಿಶೇಷವಾಗಿ ಬೆಚ್ಚಿ ಬೀಳಿಸುವಂತಿತ್ತು.

ನಿಟ್ಟುಸಿರುಬಿಟ್ಟು ನನ್ನ ಕಡೆ ದೃಷ್ಟಿಹಾಯಿಸಿ ಅವಳೆಂದಳು:

"ಪುಟ್ಟ ಮೂರ್ಖನೇ, ಇಲ್ಲಿಂದ ದೂರ ಹೋಗು! ಎಂದೆಂದಿಗೂ ವಾಪಸು ಬರಬೇಡ ಅಂತ ನಿನಗೆ ನಾನು ಹಿತವಚನ ಹೇಳ್ತೀನಿ; ನಾನು ಬೇಡ್ಕೊಳ್ತೀನಿ. ಬಂದರೆ ನಿನ್ನ ಸರ್ವನಾಶವಾಗ್ತದೆ."

ಬಳಿಕ ಆಕೆ, ತಟ್ಟೆಯಲ್ಲಿ ಬೆರಳಿಂದೇನನ್ನೋ ಗುರುತಿಸುತ್ತ, ಮೇಜಿನ ಮೇಲೆ ಬಾಗಿದಳು. ಮೆಲುದನಿಯಲ್ಲಿ, ಕಡಿಕಡಿದು, ತನ್ನಷ್ಟಕ್ಕೇ ಆಡಿಕೊಳ್ಳುತ್ತಿರುವಳೇನೋ ಎನ್ನುವಂತೆ ಮಾತನಾಡ ತೊಡಗಿದಳು.

"ಆದರೆ ನನ್ನ ಹಿತವಚನಕ್ಕೆ ನೀನೆಲ್ಲಿ ಬೆಲೆ ಕೊಡ್ತೀಯಾ? ಸ್ವತಃ ನನ್ನ ಮಗಳೇ ನನ್ನ ಮಾತಿಗೆ ಕಿವಿಗೊಡದೆ ಹೋದಳು ಅಂದ್ಮೇಲೆ...ನಾನು ಅವಳಿಗೆ ಹೇಳ್ತಿದ್ದೆ: ನಿನ್ನ ಸ್ವಂತ ತಾಯಿಾನ ನೀನು ಬಿಟ್ಟುಬಿಡೋಕಾಗೋದಿಲ್ಲ! ಆಗೋದಿಲ್ಲ! ಆದರೆ ಅವಳಿಂದ ಉತ್ತರ ಬರ್ತಿತ್ತು: 'ಹಾಗಾದರೆ ನಾನು ಆತ್ಮಹತ್ಯೆ ಮಾಡ್ಕೊತೀನಿ.' ಹೀಗೆ ಅವಳು ಕಜಾನಿಗೆ ಹೊರಟುಹೋದ್ಲು—ನರ್ಸ್ ವೃತ್ತಿ ಕಲಿಯೋದಕ್ಕೆ ಅಂತ. ಎಲ್ಲಾ ಒಳ್ಳೇದೇ. ಆದರೆ ನನ್ನ ವಿಷಯವೇನು?....ನನ್ನ ಮಟ್ಟಿಗೆ ಹೇಳೋದಾದರೆ ಸರಿ, ನಾನಿಲ್ಲಿದೀನಿ. ಸಹಾಯಕ್ಕಾಗಿ ಯಾರಕಡೆ ನಾನು ಹೊರಳಲಿ? ಬೀದೀಲಿದಾರಲ್ಲ ಆ ಗಂಡಸರ ಕಡೆಗೊ?...."

ಯೋಚನೆಯಲ್ಲಿ ಮೈಮರೆತು ಅವಳು ಅಲ್ಲಿ ಕುಳಿತಳು. ಅವಳ ತುಟಿಗಳು ನೀರವವಾಗಿ ಚಲಿಸಿದುವು. ನಾನು ಅಲ್ಲಿ ಕುಳಿತಿದ್ದುದರ ಅರಿವೇ ಅವಳಿಗಿದ್ದಂತೆ ತೋರಲಿಲ್ಲ. ಅವಳ ತುಟಿಗಳ ಮೂಲೆಗಳು ಜೋತುಕೊಂಡುವು. ಬಾಯಿ ಅರ್ಧ ಚಂದ್ರಾಕೃತಿಗೆ ತಿರುಗಿತು. ಯಾವುದೋ ಮೌನಭಾಷೆಯನ್ನಾಡುತ್ತಿದ್ದ ಅವಳ ತುಟಿಗಳ ಕಿವುಚಾಟವನ್ನೂ ಸುಕ್ಕುಗಳ ಕಂಪನವನ್ನೂ ನೋಡುವುದು ಸಂಕಟಕರವಾಗಿತ್ತು. ಅವಳ ಮುಖ ನೊಂದುಕೊಂಡು ಮಗುವಿನ ಮುಖದಂತಿತ್ತು. ತಲೆಗೂದಲ ಗೊಂಚಲೊಂದು ಅವಳ ತಲೆಯ ಮೇಲಿದ್ದ ಶಾಲಿನ ಕೆಳಗಿನಿಂದ ನುಸುಳಿ, ಪುಟ್ಟ ಕಿವಿಯ ಬಳಿ ಹಿಂದಕ್ಕೆ ಸುತ್ತಿಕೊಂಡು, ಕೆನ್ನೆಯಮೇಲೆ ಒರಗಿತ್ತು. ತಣ್ಣಗಾಗಿದ್ದ ಚಹಾದ ಗ್ಲಾಸಿಗೆ ಒಂದು ಕಂಬನಿ ಉರುಳಿತು. ಇದನ್ನು ಕಂಡು, ಗ್ಲಾಸನ್ನು ಆಕೆ ದೂರಕ್ಕೆ ಸರಿಸಿದಳು; ತನ್ನ ಕಣ್ಣುಗಳನ್ನು ಬಲವಾಗಿ ಮುಚ್ಚಿಕೊಂಡಳು. ಮತ್ತೆರಡು ಕಂಬನಿಗಳು ಹಿಂಡಿ ಹೊರಬಿದ್ದುವು. ತನ್ನ ಶಾಲಿನ ಕೊನೆಯಿಂದ ಮುಖವನ್ನಾಕೆ ಒರೆಸಿಕೊಂಡಳು.

ಅವಳ ಜತೆ ಮತ್ತೂ ಕುಳಿತಿರುವುದು ನನ್ನಿಂದ ಸಹ್ಯವಾಗಲಿಲ್ಲ. ಸದ್ದಿಲ್ಲದೆ ನಾನು ಎದ್ದೆ.

"ಬರ್ತೀನಿ, ನಮಸ್ಕಾರ."

"ಹ್ಞ? ಹೊರಟುಹೋಗು, ಸೈತಾನನಲ್ಲಿಗೆ ಹೊರಟುಹೋಗು!" ಎಂದು ಮೇಲಕ್ಕೆ ನೋಡದೆಯೇ ತೋಳನ್ನು ಬೀಸುತ್ತ, ಅವಳೆಂದಳು. ಪ್ರಾಯಶಃ ನಾನು ಯಾರೆಂಬುದು ಅವಳಿಗೆ ಮರೆತುಹೋಗಿದ್ದರೂ ಇರಬಹುದು.

ಆರ್ದಾಲಿಯನ್ನನ ಜತೆ ಮಿಾನು ಹಿಡಿಯಲು ಹೋಗುವ ಕಾರ್ಯಕ್ರಮ ಗೊತ್ತಾಗಿತ್ತು. ಅವನನ್ನು ಹುಡುಕಿಕೊಂಡು ಆ ಹಿತ್ತಲಿಗೆ ನಾನು ಹಿಂತಿರುಗಿದೆ. ಆ ಹೆಂಗಸಿನ ಬಗೆಗೆ ಅವನಿಗೆ ಕೇಳಬೇಕೆಂದು ನಾನು ಇಚ್ಛಿಸಿದೆ. ಆದರೆ, ಆತನೂ ಮಗುವೂ ಛಾವಣಿಯ ಮೇಲೆ ಇರಲೇ ಇಲ್ಲ. ಅಸ್ತವ್ಯಸ್ತವಾಗಿದ್ದ ಆ ಹಿತ್ತಿಲಲ್ಲಿ ಅವರನ್ನು ನಾನು ಹುಡುಕುತ್ತಿದ್ದಾಗ, ನಿತ್ಯದ ಬೀದಿ ಜಗಳದ ಗದ್ದಲವೊಂದು ಕೇಳಿಸಿತು.

ಹೆಬ್ಬಾಗಿಲಿನಿಂದ ಹೊರಬಿದ್ದ ನಾನು, ನಟಾಲ್ಯಾಳಿಗೆ ಹೆಚ್ಚುಕಡಮೆ ಢಿಕ್ಕಿ ಹೊಡೆದೆನೆಂದೇ ಹೇಳಬೇಕು. ಬೀದಿಯ ಪಾರ್ಶ್ವದ ಕಲ್ಲುಹಾದಿಯುದ್ದಕ್ಕೂ ಸುಂಯ್‌ಗುಡುತ್ತಾ ಒಂದು ಕೈಯಿಂದ ಗಾಯಗೊಂಡ ಮುಖವನ್ನು ಶಾಲಿಗೊರೆಸುತ್ತಾ, ಇನ್ನೊಂದರಿಂದ ಸಿಕ್ಕುಗಟ್ಟಿದ ತಲೆ ಗೂದಲನ್ನು ಹಿಂದಕ್ಕೆ ತಳ್ಳುತ್ತಾ, ಒಂದೇ ಸಮನೆ ಎಡವುತ್ತಾ ಸಾಗಿದ್ದಳು. ಅವಳ ಹಿಂದಿನಿಂದ ಆರ್ದಾಲಿಯನ್ ಮತ್ತು 'ಮಗು' ನಡೆದಿದ್ದರು.

ಆರ್ದಾಲಿಯನ್ ಅವಳನ್ನು ಓಡಿಸಿ ಬೆನ್ನಟ್ಟಿ, ಅವಳೆಡೆಗೆ ಮುಷ್ಟಿಯಲುಗಿಸಿದ. ಅವಳು ಗಿರ್ರೆಂದು ತಿರುಗಿ ನಿಂತಳು. ಮುಖ ವಿಕಾರವಾಗಿತ್ತು. ದ್ವೇಷದಿಂದ ಕಣ್ಣುಗಳು ಜ್ವಲಿಸುತ್ತಿದ್ದುವು. "ಹೂಂ, ಹೊಡೆ ನನಗೆ," ಎಂದು ಅವಳು ಬೊಬ್ಬಿಟ್ಟಳು.

ನಾನು ಆರ್ದಾಲಿಯನ್ನನ ಕೈಯನ್ನು ಅಮುಕಿ ಹಿಡಿದೆ. ಆತ ಅಚ್ಚರಿಯಿಂದ ನನ್ನೆಡೆಗೆ ನೋಡಿದ.

"ಏನಾಗಿದೆ ನಿನಗೆ?"

"ಅವಳನ್ನು ಮುಟ್ಟಬೇಡ," ಎಂದು, ಕ್ಷೀಣಧ್ವನಿಯಲ್ಲಿ ಏದುಸಿರಿನಿಂದ ನಾನೆಂದೆ.

ಆತ ಖೋ ಖೋ ಎಂದು ನಕ್ಕ.

"ಯಾರವಳು, ನಿನ್ನ ಉಪಪತ್ನಿಯೇನು? ಓ್ಹ, ನಟಾಲ್ಯಾ, ಹೊಲಸು ಹೆಣ್ಣೇ, ಸನ್ಯಾಸಿಯನ್ನೂ ಸೆರೆಹಿಡಿದೆಯಲ್ಲಾ!"

ಮಗುವೂ ತನ್ನ ತೊಡೆಗಳನ್ನು ತಟ್ಟುತ್ತ ಗೊಳ್ಳನೆ ನಕ್ಕ. ಬಳಿಕ ಆ ಇಬ್ಬರೂ ನನ್ನನ್ನು ಹೀನಾಯವಾಗಿ ಕೆಣಕತೊಡಗಿದರು. ಇದರಿಂದ ನಟಾಲ್ಯಾಳಿಗೆ ತಪ್ಪಿಸಿಕೊಳ್ಳಲು ಅವಕಾಶ ದೊರೆಯಿತು. ಇನ್ನು ಸಹಿಸುವುದು ಸಾಧ್ಯವಿಲ್ಲವೆನಿಸಿದಾಗ, ಎದೆಗೆ ಗುದ್ದಿ ಮಗುವನ್ನು ನಾನು ಹೊಡೆದು ಕೆಳಕ್ಕುರುಳಿಸಿ, ಓಡಿ ಹೋದೆ.

ಅನಂತರ ಬಹಳಕಾಲ 'ಲಕ್ಷಾಧಿಪತಿಗಳ' ರಸ್ತೆಯಿಂದ ನಾನು ದೂರವಿದ್ದೆ. ಆದರೆ ಮತ್ತೊಮ್ಮೆ ಆರ್ದಾಲಿಯನ್ನನಿಗೂ ನನಗೂ ಭೇಟಿಯಾಯಿತು. ಈ ಸಾರೆ ನದಿ ದಾಟುವ ದೋಣಿಯಲ್ಲಿ.

ಸಂತಸದಿಂದ ಅವನೆಂದ:

"ಹೆಲ್ಲೋ, ಕಾಣೆಯಾಗಿದ್ದೆಯಲ್ಲ ಇಷ್ಟು ದಿವಸ—ಏನಾಗಿತ್ತು?"

ಆತ ನಟಾಲ್ಯಾಳಿಗೆ ಹೊಡೆದು ನನ್ನನ್ನು ಅವಮಾನಿಸಿದ ರೀತಿಯಿಂದ ನಾನು ಖತಿಗೊಂಡೆನೆಂದು ಅವನಿಗೆ ಹೇಳಿದೆ. ಅದನ್ನು ಕೇಳಿ ಅವನು ಮೈತ್ರಿಭಾವದಿಂದ ನಕ್ಕ:

"ನಾವು ಮನಃಪೂರ್ವಕ ಹಾಗೆ ಆಡಿದೆವು ಅಂದ್ಕೊಂಡೆಯೇನು? ತಮಾಷೆಗೋಸ್ಕರ ನಿನ್ನನ್ನು ಕೆಣಕಿದೆವು, ಅಷ್ಟೆ. ಅವಳ ವಿಷಯ ಹೇಳೋದಾದರೆ—ಯಾಕೆ ನಾವು ಆಕೆಗೆ ಹೊಡೀಬಾರದು? ಅವಳು ಬೀದಿಗಿಳಿದವಳು. ಗಂಡಸು ಹೆಂಡತಿಗೇ ಹೊಡೀಬಹುದೂಂತಾದರೆ, ಅಂಥ ಕೆಟ್ಟ ಹೆಂಗಸಿಗ್ಯಾಕೆ ಹೊಡೀಬಾರದು? ಆದರೆ, ನಾವು ಬರೀ ಆಟ ಆಡ್ತಿದ್ದೆವು. ಮುಷ್ಟಿಗಳು ಯಾವ ಪಾಠವನ್ನೂ ಕಲಿಸೋದಿಲ್ಲ. ಅದು ನನಗೆ ಚೆನ್ನಾಗಿ ಗೊತ್ತಿದೆ."

"ಅವಳಿಗೆ ಏನನ್ನು ಕಲಿಸುವವನಿದ್ದೆ ನೀನು? ಆಕೆಗಿಂತ ಯಾವ ರೀತಿಯಲ್ಲೂ ನೀನು ಉತ್ತಮನಲ್ಲ."

ಆತ ತನ್ನ ತೋಳನ್ನು ನನ್ನ ಭುಜದ ಮೇಲಕ್ಕೆ ಹಾಕಿ, ನನ್ನನ್ನು ಕುಲುಕಿದ. ಹುಂಕರಿಸಿ ಅವನೆಂದ:

"ಅದೇ ದುರ್ದೈವ. ಯಾರು ಯಾರಿಂದಲೂ ಉತ್ತಮರಲ್ಲ. ಇದೆಲ್ಲಾ ನನಗೆ ಕಾಣ್ತಿದೆ, ತಮ್ಮ—ಈ ಇಡೀ ವಿಷಯ, ಒಳಹೊರಗು ಎಲ್ಲಾ. ನಾನೇನೂ ನಿನ್ನ ಹಳ್ಳಿ ಗಮಾರರ ಪೈಕಿ ಅಲ್ಲ."

ಕುಡಿತದಿಂದ ಅವನಿಗೆ ಮತ್ತೇರಿತ್ತು. ಅವನು ಹರ್ಷಿತನಾಗಿದ್ದ. ಮಂದಬುದ್ಧಿಯ ಶಿಷ್ಯನಿಗೆ ಪಾಠ ಹೇಳುವ ದಯಾವಂತ ಅಧ್ಯಾಪಕ ತೋರುವಂತಹ ವಾತ್ಸಲ್ಯಪೂರ್ಣ ಸಹನೆಯಿಂದ ನನ್ನೆಡೆಗೆ ಅವನು ದಿಟ್ಟಿಸಿದ.

ಆಗೊಮ್ಮೆ ಈಗೊಮ್ಮೆ ಪಾವೆಲ್ ಒದಿನ್‌ತ್ಸೋವನ್ನೂ ನಾನು ಸಂಧಿಸುತ್ತಿದ್ದೆ. ಆತ ಎಂದಿಗಿಂತ ಹೆಚ್ಚು ಲವಲವಿಕೆಯಿಂದಿದ್ದು, ಶೋಕಿವಾಲನಂತೆ ಈಗ ಉಡುಪು ಧರಿಸುತ್ತಿದ್ದ; ಹಿರಿತನದ ಧೋರಣೆಯಿಂದ ನನ್ನೊಡನೆ ವರ್ತಿಸುತ್ತಿದ್ದ. ಒಮ್ಮೆ, ಛೇಡಿಸುವ ಧ್ವನಿಯಲ್ಲಿ ಅವನೆಂದ:

"ಯಾಕಾದರೂ ಅಂಥ ಉದ್ಯೋಗವನ್ನು ನೀನು ಸ್ವೀಕರಿಸಿದೆ? ಆ ರೈತರ ಜತೆ ಕೆಲಸ ಮಾಡ್ತಾ ನೀನು ಏನೇನೂ ಅಭಿವೃದ್ಧಿ ಹೊಂದಲಾರೆ."

ಬಳಿಕ ಆತ ವ್ಯಸನದಿಂದ ಕರ್ಮಾಗಾರದ ಸುದ್ದಿಯನ್ನು ಹೇಳಿದ:

"ಜಿಖರೇವ್ ಇನ್ನೂ ಆ ಕುದುರೆಯ ಸಹವಾಸವನ್ನು ಬಿಟ್ಟಿಲ್ಲ. ಯಾವುದೋ ಕಾರಣಕ್ಕಾಗಿ ಸಿತಾನೋವ್ ವ್ಯಥೆಯಿಂದ ಸೊರಗ್ತಿದಾನೆ ಅನಿಸ್ತದೆ—ತನಗೆ ತಕ್ಕುದಾದ್ದಕ್ಕಿಂತ ಹೆಚ್ಚು ಕುಡೀತಿದಾನೆ. ಗೊಗೊಲೀವ್ ತೋಳಗಳು ಬಾಯಿಗೆ ತುತ್ತಾದ—ಕ್ರಿಸ್‌ಮಸ್ ಹಬ್ಬಕ್ಕೇಂತ ಮನೆಗೆ ಹೋಗಿದ್ದಾಗ, ಅಮಲೇರುವ ಹಾಗೆ ಕುಡಿದ; ತೋಳಗಳು ಸುಲಭವಾಗಿ ಅವನನ್ನು ಜಗಿದು ಚೂರು ಚೂರು ಮಾಡಿಬಿಟ್ಟುವು."

ತನ್ನ ಕಲ್ಪನೆಯನ್ನು ಗರಿಗೆದರಲು ಬಿಟ್ಟು, ಬಿದ್ದು ಬಿದ್ದು ನಗುತ್ತ, ಪಾವೆಲ್ ಅಂದ:

"ಅವನನ್ನು ಜಗಿದು ತಿಂದ ತೋಳಗಳಿಗೇ ಸ್ವತಃ ಮತ್ತೇರಿಬಿಟ್ಟಿತು! ಸರ್ಕಸ್ ನಾಯಿಗಳ ಹಾಗೆ ತಮ್ಮ ಹಿಂಗಾಲುಗಳ ಮೇಲೆಯೇ, ಆಕಾಶ ಭೇದಿಸುವಂತೆ ಊಳಿಡುತ್ತ, ಕಾಡೆಲ್ಲ ಸುತ್ತಾಡಿದುವು. ಮಾರನೆಯ ದಿನ ಅವೆಲ್ಲವೂ ಸತ್ತುಬಿದ್ದುವು!"

ಅವನು ಹೇಳಿದುದಕ್ಕೆ ಕಿವಿಗೊಡುತ್ತ ನಾನೂ ನಕ್ಕೆ. ಆದರೆ ನನ್ನ ಹೃದಯದ ಅತ್ಯಂತ ಆಳದಲ್ಲಿ, ಕರ್ಮಾಗಾರವೂ ಅದರೊಡನೆ ನನಗಿದ್ದ ಆತ್ಮೀಯ ಬಾಂಧವ್ಯವೂ ಗತಕಾಲದ ಕಥೆ ಯಾಯಿತೆಂಬುದನ್ನು ನಾನು ಮನಗಂಡೆ. ಒಂದು ಬಗೆಯಲ್ಲಿ ಇದು ಖೇದಕರವಾಗಿತ್ತು.

೧೯

ಚಳಿಗಾಲದಲ್ಲಿ ಸಂತೆಮಾಳದಲ್ಲಿ ಕೆಲಸ ಇರಲೇ ಇಲ್ಲವೆನ್ನಬೇಕು. ಮನೆಯಲ್ಲಿ ನಾನು ಹಿಂದಿನ ದುಡಿಮೆಗಳನ್ನೇ ಮಾಡುತ್ತಿದ್ದೆ. ಹಗಲೆಲ್ಲ ಆ ಕೆಲಸವಿರುತ್ತಿತ್ತು; ಆದರೆ ಸಂಜೆಯ

ಹೊತ್ತು ನಾನು ಬಿಡುವಾಗಿರುತ್ತಿದ್ದೆ. ಒಂದೆಡೆ ನೆರೆದ ಮನೆಯವರೆದುರು ಪುನಃ ನಾನು, 'ನೀವಾ' ಹಾಗೂ 'ಮಾಸ್ಕೋ ಕರಪತ್ರ'ದಿಂದ ಕಾದಂಬರಿಗಳನ್ನೋದಿದೆ. ಇದು ನಾನು ಮನಃಪೂರ್ವಕ ವಾಗಿ ದ್ವೇಷಿಸುತ್ತಿದ್ದ ಕೆಲಸ. ರಾತ್ರಿಯ ಹೊತ್ತು ಒಳ್ಳೆಯ ಪುಸ್ತಕಗಳನ್ನು ನಾನು ಓದಿದೆ, ಹಾಗೂ ಕವಿತೆ ಬರೆಯಲು ಯತ್ನಿಸಿದೆ.

ಒಂದು ದಿನ, ನನ್ನ ಒಡತಿಯರು ಸಾಯಂಪ್ರಾರ್ಥನೆಗೆ ಹೋಗಿದ್ದಾಗ, ಮೈಯಲ್ಲಿ ಅಷ್ಟೇನೂ ಸ್ವಾಸ್ಥ್ಯವಿರದಿದ್ದ ಕಾರಣ ಮನೆಯಲ್ಲಿ ನನ್ನ ಜತೆ ಉಳಿದಿದ್ದ ನನ್ನ ಯಜಮಾನ ನುಡಿದ:

"ವಿಕ್ಟರ್ ಯಾವಾಗಲೂ ನೀನು ಕವಿತೆ ಬರೆಯೋ ವಿಷಯ ತಮಾಷೆ ಮಾಡ್ತಲೇ ಇರ್‍ತಾನೆ. ಅದು ನಿಜವೆ, ಪೆಶ್ಕೋವ್? ನೀನು ಬರೆದಿರೋದು ಯಾವುದನ್ನಾದರೂ ಅಂದು ತೋರಿಸು ನೋಡೋಣ."

ನಿರಾಕರಿಸುವುದು ಸರಿಕಾಣದೆ ನನ್ನ ಕವಿತೆಗಳಲ್ಲಿ ಕೆಲವನ್ನು ನಾನು ಅಂದು ತೋರಿಸಿದೆ. ಅವನಿಗೆ ಅದು ಹಿಡಿಸಲಿಲ್ಲವೆಂಬುದು ಸ್ವಯಂವ್ಯಕ್ತವಾಗಿತ್ತು. ಆದರೆ ಅವನೆಂದ:

"ಹೂಂ. ಬರೆಯುವುದನ್ನು ಬಿಟ್ಟುಬಿಡಬೇಡ, ಮುಂದುವರಿಸಿಕೊಂಡು ಹೋಗು. ಪ್ರಾಯಶಃ ನೀನು ಇನ್ನೊಬ್ಬ ಪುಷ್ಕಿನ್ನನಾಗಲೂಬಹುದು. ಪುಷ್ಕಿನ್ ಬರೆದದ್ದನ್ನು ಯಾವತ್ತಾದರೂ ಓದಿದೀಯೇನು?—

ಮಾಯಾವಿನಿಯರಿಗೆಂದಾದರೂ ಉಂಟೆ ಮದುವೆ,
ದೆವ್ವಗಳಿಗಿಹುದೆ ಸಾವು?

—ಅವನ ಕಾಲದಲ್ಲಿ ಜನರಿಗಿನ್ನೂ ದೆವ್ವಗಳಲ್ಲಿ ನಂಬಿಕೆ ಇತ್ತು." ಆದರೆ ಅವನಿಗೆ ನಂಬಿಕೆ ಇದ್ದಂತೆ ಕಾಣಲಿಲ್ಲ-ತಮಾಷೆಗೆ ಅದನ್ನು ಬರೆದಿರಬೇಕು.

ಯೋಚನಾಮಗ್ನನಾಗುತ್ತ ಅವನು ಮತ್ತೂ ಅಂದ:

"ಹೌದು, ತಮ್ಮ. ನಿನಗೆ ಶಿಕ್ಷಣ ಕೊಡಿಸಬೇಕಾಗಿತ್ತು ಆದರೆ ಈಗ ಕಾಲ ಮಾರಿ ಬಿಟ್ಟಿದೆ. ಈ ಪ್ರಪಂಚದಲ್ಲಿ ನೀನು ಹೇಗೆ ಜೀವನ ಸಾಗಿಸ್ತೀಯೋ ದೆವ್ವ ಒಂದಕ್ಕೇ ಗೊತ್ತು. ಆ ನಿನ್ನ ಟಿಪ್ಪಣಿ ಪುಸ್ತಕವನ್ನು ಹೆಂಗಸರ ಕಣ್ಣಿಗೆ ಬೀಳದಂತೆ ಬಚ್ಚಿಡು. ಇಲ್ಲದೇ ಹೋದರೆ ಅವರು ನಿನ್ನನ್ನು ಛೇಡಿಸೋದಕ್ಕೆ ಶುರು ಮಾಡ್ತಾರೆ. ಒಬ್ಬ ಮನುಷ್ಯನ ದುರ್ಬಲ ಅಂಶಕ್ಕೇ ಗುದ್ದೋದಕ್ಕೆ ಹೆಂಗಸರು ಇಷ್ಟಪಡ್ತಾರೆ, ತಮ್ಮ!"

ಕಳೆದ ಸ್ವಲ್ಪ ಸಮಯದಿಂದ ನನ್ನ ಯಜಮಾನ, ಶಾಂತವಾಗಿ ಚಿಂತಾಮಗ್ನನಾಗಿ ಇರತೊಡಗಿದ್ದ. ಆಗಾಗ್ಗೆ ತನ್ನ ಸುತ್ತಲೂ ಕದ್ದು ಕದ್ದು ನೋಡುತ್ತಿದ್ದ. ಬಾಗಿಲ ಗಂಟೆಯ ಪ್ರತಿಯೊಂದು ಸಪ್ಪಳಕ್ಕೂ ಬೆಚ್ಚಿ ಬೀಳುತ್ತಿದ್ದ. ಕೆಲವೇಳೆ ಆತ ಸಣ್ಣ ಪುಟ್ಟ ವಿಷಯಗಳಿಗೂ ಅನಾರೋಗ್ಯವಂತನಂತೆ ಸಿಡಿಮಿಡಿಗೊಳ್ಳುತ್ತಿದ್ದ. ಎಲ್ಲರ ಮೇಲೂ ರೇಗಾಡುತ್ತಿದ್ದ. ಮನೆಯಿಂದ ಹೊರಕ್ಕೆ ಧಾವಿಸಿ, ಕುಡಿದು ಮತ್ತೇರಿ ಬಹಳ ತಡವಾಗಿ ಮರಳುತ್ತಿದ್ದ. ಆತನಿಗೊಬ್ಬನಿಗೇ ತಿಳಿದಿದ್ದ ಯಾವುದೋ ಸಂಗತಿಯಿಂದ ಅವನ ಮನಸ್ಸು ಕುಗ್ಗಿದೆ; ಅವನ ಚೇತನವನ್ನೇ ಯಾವುದೋ ಮುರಿದುಬಿಟ್ಟಿದೆ; ಬದುಕಿನಲ್ಲಿ ವಿಶ್ವಾಸ ಆಸಕ್ತಿಯನ್ನೆಲ್ಲ ಆತ ಕಳೆದುಕೊಂಡಿದ್ದಾನೆ; ಅಭ್ಯಾಸಬಲದಿಂದಷ್ಟೇ ಬದುಕುತ್ತ ಹೋಗುತ್ತಿದ್ದಾನೆ—ಎಂಬುದು ಸ್ಪಷ್ಟವಾಗಿತ್ತು.

ಆದಿತ್ಯವಾರಗಳಲ್ಲಿ ಮಧ್ಯಾಹ್ನದ ಊಟದಬಳಿಕ ಹೊರಬಿದ್ದು, ಸಂಜೆ ಒಂಭತ್ತು ಘಂಟೆಯ

ವರೆಗೂ ಅಲೆಯುತ್ತಿದ್ದೆ; ಬಳಿಕ, ಯಮ್ಸ್ಕಾಯಾ ರಸ್ತೆಯಲ್ಲಿದ್ದ ಪಾನಮಂದಿರವನ್ನು ಸಂದರ್ಶಿಸುತ್ತಿದ್ದೆ. ಡೊಳ್ಳು ಹೊಟ್ಟೆಯ ಬೆವರುಮೈಯ ಒಂದು ಪ್ರಾಣಿಯೇ ಅದರ ಮಾಲಿಕ. ಹಾಡುಗಳೆಂದರೆ ಅವನಿಗೆ ಪ್ರಾಣ. ಇದನ್ನು ತಿಳಿದು, ಸುತ್ತುಮುತ್ತಲ ಇಗರ್ಜಿಗಳ ವಾದ್ಯವೃಂದದವರೆಲ್ಲ, ತಮ್ಮ ಹಾಡುಗಳಿಗೆ ಬದಲಾಗಿ ವೋಡ್ಕಾ, ಬೀರ್ ಅಥವಾ ಚಹಾವನ್ನು ಪಡೆಯುವುದಕ್ಕೋಸ್ಕರ ಇಲ್ಲಿ ನೆರೆಯುತ್ತಿದ್ದರು. ವಾದ್ಯವೃಂದದವರು ಸ್ವಾರಸ್ಯಹೀನರಾದ ನಿಸ್ಸಾರಜಾತಿ. ಅವರು ಹಾಡುವುದು ಮನಸ್ಸಿಲ್ಲದ ಮನಸ್ಸಿನಿಂದ, ಉಪಾಹಾರದ ಆಸೆಗಾಗಿ. ಇಗರ್ಜಿಯ ಸಂಗೀತದ ಹೊರತಾಗಿ ಬೇರೇನನ್ನೂ ಅವರು ಹಾಡುತ್ತಲೇ ಇರಲಿಲ್ಲವೆನ್ನಬೇಕು. ಅಂತಹ ಸಂಗೀತಕ್ಕೆ ಪಾನಮಂದಿರವು ತಕ್ಕ ಸ್ಥಳವಲ್ಲವೆಂದು ಧರ್ಮಭೀರುಗಳಾದ ಕುಡುಕರು ಕೆಲವರು ಪ್ರತಿಭಟಿಸಿದುದರಿಂದ, ಮಾಲಿಕ ಆ ಅತಿಥಿಗಳನ್ನು ತನ್ನ ಖಾಸಗಿ ಕೊಠಡಿಗೆ ಆಹ್ವಾನಿಸುತ್ತಿದ್ದ. ಬಾಗಿಲಿಗೆ ಕಿವಿಗೊಡುವುದರಿಂದಷ್ಟೆ ಹಾಡುಗಳು ನನಗೆ ಕೇಳಿಸುತ್ತಿದ್ದುವು.

ಆದರೆ ಆಗಾಗ್ಗೆ, ಹಳ್ಳಿಯ ಶಿಲ್ಪಿಗಳೂ ರೈತರೂ ಪಾನಮಂದಿರದಲ್ಲಿ ಹಾಡುತ್ತಿದ್ದರು. ಮಾಲಿಕ ಸುತ್ತುಮುತ್ತಲಿನ ಪ್ರದೇಶದಲ್ಲೆಲ್ಲ ಹಾಡುಗಾರರಿಗಾಗಿ ಶೋಧೆ ನಡಸುತ್ತಿದ್ದ. ಸಂತೆಯ ದಿನ ಶಹರಕ್ಕೆ ಬರುತ್ತಿದ್ದ ರೈತರಲ್ಲಿ ಅವರನ್ನು ಕಂಡುಹಿಡಿಯುತ್ತಿದ್ದ. ತನ್ನಲ್ಲಿಗೆ ಭೇಟಿ ಕೊಡಬೇಕೆಂದು ಅವರನ್ನು ಆಹ್ವಾನಿಸುತ್ತಿದ್ದ.

ಹಾಡುಗಾರನಿಗೆ ಯಾವಾಗಲೂ ಬಾರ್‌ನ ಬಳಿ ವೋಡ್ಕಾ ಪೀಪಾಯಿಯ ಎದುರು ಒಂದು ಪೀಠವನ್ನು ಕೊಡಲಾಗುತ್ತಿತ್ತು. ಪೀಪಾಯಿಯ ತಳ ಅವನ ತಲೆಗೊಂದು ವೃತ್ತಾಕಾರದ ಚೌಕಟ್ಟಾಗುತ್ತಿತ್ತು.

ಹಾಗೆ ಬಂದವರಲ್ಲಿ ಕ್ಲೆಶ್ಚ್ಯೋವನೇ ಅತ್ಯುತ್ತಮ ಹಾಡುಗಾರ. ಆತ, ಸೊರಗಿದ ಮೈಯ ಪುಟ್ಟ ಆಕೃತಿಯ ಜೀನುಗಾರ. ವಿಶೇಷವಾಗಿ ಸೊಗಸಾಗಿದ್ದ ಹಾಡುಗಳ ಒಂದು ಆಗರವೇ ಅವನಲ್ಲಿತ್ತು. ನೋಡಲು ಅವನು ಮಲಿನವಾಗಿರುತ್ತಿದ್ದ; ಪೋಷಾಕು ಮುದುರಿಕೊಂಡಿರುತ್ತಿತ್ತು. ಮೈತುಂಬ ಕೆಂಪು ರೋಮವಿತ್ತು. ಮೂಗು, ಶವದ ಮೂಗಿನಂತೆ ಮಿನುಗುತ್ತಿತ್ತು. ಕನಸು ಕಾಣುವಂತಿದ್ದ ಪುಟ್ಟ ಕಾಡುಬೆಕ್ಕಿನ ಕಣ್ಣುಗಳು ತಮ್ಮ ತಳದಲ್ಲಿ ನಿಶ್ಚಲವಾಗಿ ನಿಂತಂತೆ ಅನಿಸುತ್ತಿತ್ತು.

ಕೆಲವೇಳೆ ಅವುಗಳನ್ನು ಆತ ಮುಚ್ಚುತ್ತಿದ್ದ. ಪೀಪಾಯಿಯ ಬುಡಕ್ಕೆ ತಗಲಿಸಿ ತನ್ನ ತಲೆಯನ್ನು ವಿರಮಿಸುತ್ತಿದ್ದ. ತನ್ನ ಎದೆಯನ್ನು ಹಿಗ್ಗಿಸುತ್ತಿದ್ದ. ಮೃದುವಾದ, ಆದರೆ ಅತ್ಯಾಕರ್ಷಕವಾದ, ಧ್ವನಿಯಲ್ಲಿ ಹಾಡುತ್ತಿದ್ದ:

ಅ್ಹ, ಬಯಲಿನಗಲಕ್ಕೆ ಹರಡಿತೋ ಇಬ್ಬನಿ
ರಾಜಬೀದಿಯ ದೃಷ್ಟಿಯಿಂದ ಮರೆಮಾಡಿತೋ........

ಬಳಿಕ ಆತ ಎದ್ದು ಬಾರ್‌ನ ದಂಡೆಗೆ ಒರಗಿಕೊಂಡು, ಮುಖವನ್ನು ಛಾವಣಿಯತ್ತ ಮೇಲೆತ್ತಿ, ನಾಭಿಯಿಂದಲೆ ಹೊರಡುವ ಧ್ವನಿಯಲ್ಲಿ ಮುಂದುವರಿಯುತ್ತಿದ್ದ:

ಅ್ಹ, ಎಲ್ಲಿಗಪ್ಪ ಎಲ್ಲಿಗೆ ನಾನೆಲ್ಲಿಗ್ಹೋಗಲಿ ?
ಹಾದಿಯನ್ನು ಹೇಗಪ್ಪ ಹೇಗೆ ನಾ ತಿಳಿಯಲಿ ?

ಅವನ ಧ್ವನಿ ಕಿರಿದಾಗಿತ್ತು. ಆದರೆ ಅಕ್ಷಯವಾದುದಾಗಿತ್ತು ಅದು. ಪಾನಮಂದಿರದ ಜಡವಾದ ದುಷ್ಟವಾದ ಗೊಣಗಾಟವನ್ನೆಲ್ಲ ಬೆಳ್ಳಿಯ ದಾರದಿಂದ ಆತ ಹೊಲಿದ. ಆ ಸಂಗೀತದ ಶೋಕಪೂರ್ಣ ಪದಗಳಿಗೂ ಬಿಕ್ಕುವ ಉಚ್ಚಾರಗಳಿಗೂ ಬಲಿಯಾಗದ ಒಂದು ಜೀವವೂ ಅಲ್ಲಿರಲಿಲ್ಲ. ಅವರಲ್ಲಿ ಅತ್ಯಂತ ಕುಡುಕರಾದವರೂ ಕೂಡಾ ಅಚ್ಚರಿಪಡುತ್ತ ಗಭೀರರಾಗುತ್ತಿದ್ದರು; ತಮ್ಮೆದುರಿನ ಮೇಜನ್ನೆ ನೆಟ್ಟ ನೋಟದಿಂದ ನೋಡುತ್ತಿದ್ದರು. ಸ್ವತಃ ನನ್ನ ಹೃದಯ ಬಿರಿಯುವ ಹಾಗಾಗುತ್ತಿತ್ತು. ಸೊಗಸಾದ ಸಂಗೀತ ಆತ್ಮದ ಆಳವನ್ನು ಸ್ಪರ್ಶಿಸಿದಾಗಲೆಲ್ಲ ಸ್ಫುರಿಸುವಂತಹ ಶಕ್ತಿಯುತ ಭಾವೋದ್ವೇಗದಿಂದ ನನ್ನ ಹೃದಯ ತುಂಬಿ ತುಳುಕಿತು.

ಬರಬರುತ್ತ ಪಾನಮಂದಿರ, ಇಗರ್ಜಿಯಷ್ಟೇ ಶಾಂತವಾಯಿತು. ಹಾಡುಗಾರ ಸತ್ಪುರುಷ ಧರ್ಮಗುರುವಾದ. ಆತ ಯಾವ ಬೋಧನೆಯನ್ನೂ ಪ್ರಸಾರ ಮಾಡಲಿಲ್ಲ. ಆದರೆ, ಇಡಿಯ ಮಾನವ ಕುಲಕ್ಕಾಗಿ ಹೃತ್ಪೂರ್ವಕವಾಗಿ ಪ್ರಾರ್ಥಿಸಿದ; ಈ ಬಡ ಮಾನವ ಜೀವನದ ಎಲ್ಲ ಯಾತನೆಗಳಿಗೂ ಅಭಿವ್ಯಕ್ತಿಯನ್ನಿತ್ತ. ಗಡ್ಡ ಬೆಳೆದಿದ್ದ ಜನ ಇಕ್ಕಡೆಗಳಿಂದಲೂ ಅವನನ್ನೇ ದಿಟ್ಟಿಸಿದರು. ಅವರ ಮೃಗಮುಖಗಳಲ್ಲಿ ಮಗುವಿನಂತಹ ಕಣ್ಣುಗಳು ಧ್ಯಾನಮಗ್ನವಾಗಿ ಪಿಳಿಪಿಳಿ ನೋಡುತ್ತಿದ್ದುವು. ಆಗೊಮ್ಮೆ ಈಗೊಮ್ಮೆ ಅವರಲ್ಲೊಬ್ಬ ಆಳವಾಗಿ ನಿಟ್ಟುಸಿರುಬಿಡುತ್ತಿದ್ದ. ಅದು, ಹಾಡಿನ ಸಾಮರ್ಥ್ಯವನ್ನು ಮನಗಾಣಿಸಿ ಕೊಡುವಂತಹ ಪ್ರಮಾಣಪತ್ರವಾಗಿತ್ತು. ಎಲ್ಲ ಜನರೂ ಠಕ್ಕಿನ ಕೃತಕ ಜೀವನವನ್ನು ನಡೆಸುತ್ತಿರುವರೆಂದೂ ನಿಜವಾದ ಬದುಕು ಅದಲ್ಲವೆಂದೂ, ಅಂತಹ ಘಳಿಗೆಗಳಲ್ಲಿ ನನಗೆ ಅನಿಸುತ್ತಿತ್ತು. ನಿಜಜೀವನವೆನ್ನುವುದು. ಆ—ಅದಲ್ಲಿತ್ತು!

ಮೂಲೆಯಲ್ಲೊಂದೆಡೆ, ಮೊಂಡು ಮೂಗಿನ ಲೈಸುಖಾ ಕುಳಿತಿದ್ದಳು. ಲಂಗುಲಗಾಮಿಲ್ಲದ ಪ್ರಾಣಿ ಆಕೆ. ನಾಚಿಕೆಯಿಲ್ಲದ ಸ್ವೇಚ್ಛಾಚಾರಿಣಿ. ಮಾಂಸದ ಮುದ್ದೆಗಳಾಗಿದ್ದ ಭುಜಗಳೊಳಕ್ಕೆ ತನ್ನ ತಲೆಯನ್ನಾಕೆ ಹಿಂದಕ್ಕೆ ಸೆಳೆದುಕೊಂಡು ಅವಳು ಅಳುತ್ತಿದ್ದಳು. ಕಂಬನಿ ಸದ್ದಿಲ್ಲದೆ ಅವಳ ನಿರ್ಲಜ್ಜ ಕಣ್ಣುಗಳನ್ನು ತೊಳೆಯುತ್ತಿತ್ತು. ಅವಳಿಗಿಂತ ಸ್ವಲ್ಪ ದೂರದಲ್ಲೇ ವಾದ್ಯವೃಂದದ ಹಾಡುಗಾರ ಮಿತ್ರೊಪೊಲ್‌ಸ್ಕಿ ಮೇಜಿನಮೇಲೆ ಒರಗಿಕೊಂಡಿದ್ದ. ಅವನಿಗೆ ಮತ್ತೇರಿರಲಿಲ್ಲ. ಉದ್ದಕೂದಲ ದೈತ್ಯಾಕೃತಿಯ ಮನುಷ್ಯ. ತಳವಿಲ್ಲದಷ್ಟು ಆಳವಾದ ಧ್ವನಿ. ಪ್ರಕಾಶಹೀನವಾದ ಮುಖದಲ್ಲಿ ಅತಿ ಗಾತ್ರದ ಕಣ್ಣುಗಳು ಲಂಗ ಕಳಚಿದ ಪಾದ್ರಿಯನ್ನು ಹೋಲುತ್ತಿದ್ದ. ಮೇಜಿನಮೇಲೆ ತನ್ನೆದುರಿಗಿದ್ದ ವೋಡ್ಕಾದ ಗ್ಲಾಸನ್ನು ಅವನು ದಿಟ್ಟಿಸುತ್ತಿದ್ದ. ಅದನ್ನು ಎತ್ತಿಕೊಳ್ಳುತ್ತಿದ್ದ. ತುಟಿಗಳವರೆಗೂ ಮೇಲಕ್ಕೆ ಎತ್ತುತ್ತಿದ್ದ. ಬಳಿಕ, ಮುಟ್ಟದೆಯೇ-ಯಾವುದೋ ಕಾರಣಕ್ಕಾಗಿ ಕುಡಿಯುವುದು ಸಾಧ್ಯವಾಗದೆ—ಜಾಗರೂಕತೆಯಿಂದ ಸದ್ದಿಲ್ಲದೆ ಅದನ್ನು ಕೆಳಕ್ಕಿರಿಸುತ್ತಿದ್ದ.

ಪಾನಮಂದಿರದೊಳಗಿನ ಎಲ್ಲ ಜನರೂ, ಎಂದೋ ಮರೆತುಹೋಗಿದ್ದ ಯಾವುದಕ್ಕೋ—ತಮ್ಮ ಹೃದಯಗಳಿಗೆ ಬಹಳ ಪ್ರಿಯವೂ ಆಪ್ತವೂ ಆದ ಯಾವುದಕ್ಕೋ—ಕಿವಿಗೊಡುವವರಂತೆ ನಿಶ್ಚಲರಾಗಿ ಕುಳಿತಿರುತ್ತಿದ್ದರು.

ಆ ಹಾಡನ್ನು ಮುಗಿಸಿದ ಬಳಿಕ ಕ್ಲೆಶ್ಚೋವ್ ವಿನಮ್ರನಾಗಿ ಸ್ಟೂಲಿನ ಮೇಲೆ ಕುಸಿದು ಕುಳಿತುಕೊಳ್ಳುತ್ತಿದ್ದ. ಪಾನಮಂದಿರದ ಮಾಲಿಕ ಅವನಿಗೊಂದು ಗ್ಲಾಸು ವೋಡ್ಕಾ ಕೊಟ್ಟು,

ಸಂತೃಪ್ತಿಯ ಮುಗುಳುನಗೆಯೊಂದಿಗೆ ಅನ್ನುತ್ತಿದ್ದ:

"ಚೆನ್ನಾಗಿ ಹಾಡ್ದೆ-ನಿಜವಾಗಿಯೂ! ಹಾಡು ಅನ್ನೋದಕ್ಕಿಂತಲೂ ಅದನ್ನು ಕಥೆ ಎಂತಲೇ ಕರೀಬಹುದಾದರೂ ಕೂಡಾ, ಇದರ ವಿಷಯದಲ್ಲಿ ನೀನು ಅಪ್ರತಿಮ. ಈದೀಗ ಸತ್ಯ. ಇದನ್ನು ಯಾರೂ ಅಲ್ಲಗಳೆಯಲಾರರು!"

ನಿಧಾನವಾಗಿ ಕ್ಲೆಶ್ಕೋವ್ ತನ್ನ ವೋಡ್ಕಾವನ್ನು ಕುಡಿದು, ಗಂಟಲು ಸರಿಪಡಿಸಿಕೊಂಡು, ಅನ್ನುತ್ತಿದ್ದ:

"ಹಾಡುಗಾರಿಕೇನ ಶಾರೀರವಿರೋ ಯಾರು ಬೇಕಾದರೂ ಮಾಡಬಹುದು. ಆದರೆ, ಹಾಡಿನ ಆತ್ಮವನ್ನ ತೋರಿಸಿಕೊಡಬಲ್ಲವನು ನಾನೊಬ್ಬನೇ."

"ನಿನ್ನ ಬಡಿವಾರ ಈಗ ಬೇಡ!"

"ಬಡಿವಾರ ಕೊಚ್ಚಿಕೊಳ್ಳೋದಕ್ಕೆ ಏನೂ ಇಲ್ಲದಿರುವಾತ ಬಾಯಿ ಮುಚ್ಚಿರಲಿ," ಎಂದು ಹಾಡುಗಾರ, ನಿಶ್ಚಲತೆಯಿಂದ-ಆದರೆ ಉದ್ಧಟತನದ ಧ್ವನಿಯಲ್ಲಿ-ನುಡಿದ.

ಪಾನಮಂದಿರದ ಮಾಲಿಕ ಅಸಹನೆಯಿಂದ ಉದ್ಗರಿಸಿದ:

"ನಿನ್ನ ಸ್ವಂತದ ಬಗ್ಗೆ ನಿನಗೆ ಬಹಳ ದೊಡ್ಡ ಅಭಿಪ್ರಾಯವಿದೆ, ಕ್ಲೆಶ್ಕೋವ್!"

"ನನ್ನ ಆತ್ಮದಷ್ಟೇ ದೊಡ್ಡದಾದ ಅಭಿಪ್ರಾಯ. ಅದಕ್ಕಿಂತಲೂ ದೊಡ್ಡದಾಗೋದು ನನ್ನಿಂದಾಗದ ಮಾತು."

ತಾನು ಕುಳಿತಿದ್ದ ಮೂಲೆಯಿಂದ ಮಿತ್ರೊಪೊಲ್‌ಸ್ಕಿ ಗರ್ಜಿಸಿದ:

"ಏ ಹುಳಗಳೇ, ಹರಿದಾಡೋ ಪ್ರಾಣಿಗಳೇ, ಈ ವಿರೂಪ ದೇವತೆಯ ಹಾಡುಗಾರಿಕೆ ನಿಮಗೆ ಅರ್ಥವಾಗ್ತದೇಂತ ನಿರೀಕ್ಷಿಸೋದು ಹೇಗೆ ಸಾಧ್ಯ?"

ಈತ ಯಾವಾಗಲೂ ಎಲ್ಲರೊಡನೆಯೂ ವಿರೋಧ ಕಟ್ಟಿಕೊಂಡೇ ಇರುತ್ತಿದ್ದ. ಜಗಳ ವಾಡುತ್ತಿದ್ದ, ತಪ್ಪು ಹುಡುಕುತ್ತಿದ್ದ. ಇದಕ್ಕಾಗಿ ಹೆಚ್ಚು ಕಡಮೆ ಪ್ರತಿ ಭಾನುವಾರವೂ ಹಾಡು ಗಾರರು, ಅಥವ ಅವನ ಮೇಲೆ ಕೈಮಾಡಲು ಶಕ್ತರಿದ್ದವರು-ಕೈಮಾಡಲು ಮನಸ್ಸು ಮಾಡಿ ದವರು-ಅವನಿಗೆ ಹೊಡೆಯುತ್ತಿದ್ದರು.

ಪಾನಮಂದಿರದ ಮಾಲಿಕ ಕ್ಲೆಶ್ಕೋವನ ಹಾಡುಗಳನ್ನು ಪ್ರೀತಿಸುತ್ತಿದ್ದ; ಆದರೆ ಆ ಮನುಷ್ಯನನ್ನು ದ್ವೇಷಿಸುತ್ತಿದ್ದ. ಅವನ ಬಗೆಗೆ ಪ್ರತಿಯೊಬ್ಬರೊಡನೆಯೂ ದೂರುತ್ತಿದ್ದ. ಅವನನ್ನು ಅವಮಾನಿಸುವ ವಿಧಾನಗಳನ್ನು ಈತ ಹುಡುಕುತ್ತಿದ್ದನೆಂಬುದು ಅಥವಾ ಅವನನ್ನು ಪರಿಹಾಸ್ಯ ಮಾಡುತ್ತಿದ್ದನೆಂಬುದು ಸ್ಪಷ್ಟವಾಗಿತ್ತು. ಪಾನಮಂದಿರಕ್ಕೆ ನಿತ್ಯ ಬರುತ್ತಿದ್ದವರಿಗೂ ಸ್ವತಃ ಕ್ಲೆಶ್ಕೋವನಿಗೂ ಇದರ ಅರಿವಿತ್ತು.

"ಅವನು ಒಳ್ಳೆಯ ಹಾಡುಗಾರ, ಆದರೆ ಅಹಂಭಾವಿ. ಅವನ ಸೊಕ್ಕನ್ನು ಒಂದು ಗೇಣು ಇಳಿಸೋ ಅಗತ್ಯವಿದೆ," ಎಂಬುದು ಪಾನಮಂದಿರದ ಒಡೆಯನ ಅಭಿಪ್ರಾಯವಾಗಿತ್ತು. ಈ ವಿಷಯದಲ್ಲಿ ಅವನ ಪೋಷಕರಲ್ಲಿ ಕೆಲವರು ಅವನೊಡನೆ ಏಕಾಭಿಪ್ರಾಯ ಹೊಂದಿದ್ದರು.

"ಅದರಲ್ಲಿ ಸತ್ಯವಿದೆ; ಅವನು ಬಹಳ ಅಹಂಕಾರದ ಮನುಷ್ಯ!"

"ಅಹಂಕಾರಪಡೋದಕ್ಕೆ ಅವನಲ್ಲಿ ಇದೆಯಾದರೂ ಏನು! ದೇವರು ಅವನಿಗೆ ಕಂಠ ಕೊಟ್ಟ—ಸ್ವತಃ ತಾನೇ ಅದನ್ನು ಸೃಷ್ಟಿಸಲಿಲ್ಲ. ಅಲ್ಲದೆ ಹೇಳಿಕೊಳ್ಳುವಂಥ ಕಂಠವೂ

ಅದಲ್ಲ," ಎಂದು ಪಾನಮಂದಿರದ ಒಡೆಯ ಆಗ್ರಹತೊಟ್ಟು ಹೇಳಿದ.

"ನಿಜವೇ ಅನ್ನು. ಗಮನಾರ್ಹವಾಗಿರೋದು ಅದನ್ನಾತ ಬಳಸೋ ರೀತಿಯೇ ಹೊರತು ಸ್ವತಃ ಕಂಠವಲ್ಲ," ಎಂದು ಇತರರು ಮಾತು ಸೇರಿಸಿದರು.

ಒಂದು ದಿನ ಹಾಡುಗಾರ, ಹಾಡಿ ಹಾಡಿ ಬಳಲಿ, ಪಾನಮಂದಿರದಿಂದ ಹೊರಬಿದ್ದ ಬಳಿಕ, ಮಾಲಿಕ ಲೈಸುಖಾಳನ್ನು ಒತ್ತಾಯಿಸತೊಡಗಿದ.

"ಮಾರಿಯಾ ಯೆವ್‌ದೊಕಿಮೊವ್ನಾ, ಕ್ಲೆಶ್ಚ್ಯೋವನ ವಿಷಯದಲ್ಲಿ ಒಂದಿಷ್ಟು ಪ್ರಯತ್ನಿಸಿ ನೋಡಲ್ಲ—ಅವನನ್ನು ಸ್ವಲ್ಪ ಹದಗೊಳಿಸು, ಹ್ಞ? ನೀನದನ್ನು ಸುಲಭವಾಗಿ ಮಾಡಬಲ್ಲೆ."

ಆ ಹೆಂಗಸು ಸಣ್ಣನೆ ನಕ್ಕು ಅಂದಳು:

"ನಾನು ಚಿಕ್ಕವಳಾಗಿದ್ದಿದ್ದರೆ..."

ಆ ಮನುಷ್ಯ ಆಗ್ರಹಿಸುವ ಧ್ವನಿಯಲ್ಲಿ ಮತ್ತೂ ಅಂದ:

"ಚಿಕ್ಕವರು ಯಾತಕ್ಕಾದರು? ಈ ಕೆಲಸ ಮಾಡಬೇಕಾದವಳು ನೀನು! ನಿನ್ನ ಮೇಲೆ ಆತ ಜೊಲ್ಲು ಸುರಿಸೋದನ್ನು ನೋಡಿದರೆ ನನ್ನ ಹೃದಯಕ್ಕಿಷ್ಟು ಒಳಿತಾಗ್ತದೆ! ಅವನಿಗೆ ಹೃದಯ ವೇದನೆ ಆಗುವಂತೆ ಮಾಡು! ಆಗ ಎಂಥ ಹಾಡು ಆತ ಹಾಡಬಲ್ಲ! ದಯವಿಟ್ಟು ಪ್ರಯತ್ನಿಸು, ಯೆವ್‌ದೊಕಿಮೊವ್ನಾ, ಅದಕ್ಕಾಗಿ ನಿನಗೆ ನನ್ನ ಧನ್ಯವಾದಗಳಿರ್ತವೆ."

ಆದರೆ ಅವಳು ನಿರಾಕರಿಸಿದಳು. ಅತಿಯಾದ ಗಾತ್ರದ ದೇಹವಿದ್ದ ಆಕೆ, ಕಣ್ಣೆವೆಗಳನ್ನು ತಗ್ಗಿಸಿ, ತನ್ನ ಶಾಲಿನ ಅಂಚಿನೊಡನೆ ಆಟವಾಡುತ್ತ ಸುಮ್ಮನೇ ಕುಳಿತೇ ಇದ್ದು, ಅಸಹನೆಯ ಬೇಸರ ಬರಿಸುವ ಧ್ವನಿಯಲ್ಲಿ ಹೇಳುತ್ತ ಹೋದಳು:

"ಇಲ್ಲ ನಿನಗೆ ಬೇಕಾಗಿರೋದು ಒಬ್ಬಳು ಚಿಕ್ಕವಯಸ್ಸಿನಾಕೆ. ನಾನು ಚಿಕ್ಕವಳಾಗಿದ್ದಿದ್ದರೆ, ಇಲ್ಲಿ ಅನ್ನಿರಲಿಲ್ಲ."

ಕ್ಲೆಶ್ಚ್ಯೋವನಿಗೆ ಕುಡಿಸಿ ಮತ್ತೇರುವಂತೆ ಮಾಡುವುದಕ್ಕೂ ಪಾನಮಂದಿರದ ಒಡೆಯ ಯತ್ನಿಸುತ್ತಲೇ ಇದ್ದ. ಆದರೆ ಕ್ಲೆಶ್ಚ್ಯೋವ್, ಪ್ರತಿಯೊಂದು ಹಾಡಿನ ಅನಂತರವೂ ಒಂದು ಗ್ಲಾಸು ವೈನನ್ನಷ್ಟೇ ಕುಡಿಯುತ್ತಿದ್ದ. ಹೀಗೆ ಎರಡು ಮೂರು ಹಾಡುಗಳಾದ ಬಳಿಕ, ಕಸೂತಿ ಹಾಕಿದ ಒಂದು ಸ್ಕಾರ್ಫನ್ನು ಬಲುಶ್ರದ್ಧೆಯಿಂದ ತನ್ನ ಕೊರಳಿನ ಸುತ್ತಲೂ ಸುತ್ತಿ, ಕೂದಲು ಕೆದರಿದ್ದ ತಲೆಯನ್ನು ಒಂದು ಟೋಪಿಯಿಂದ ಮುಚ್ಚಿ, ಹೊರಟುಬಿಡುತ್ತಿದ್ದ.

ಆಗಾಗ್ಗೆ ಪಾನಮಂದಿರದ ಒಡೆಯ, ಕ್ಲೆಶ್ಚ್ಯೋವನಿಗೆ ಪ್ರತಿಸ್ಪರ್ಧಿಗಳನ್ನೂ ಹುಡುಕಿ ತರುವುದಿತ್ತು. ಅಂತಹ ಸಂದರ್ಭಗಳಲ್ಲಿ, ಜೀನುಗಾರ ಹಾಡಿ ಮುಗಿಸಿ ಯೋಗ್ಯ ಪ್ರಶಂಸೆಯನ್ನು ಗಳಿಸಿದ ಕೂಡಲೇ ಹತ್ತಿಕ್ಕಿದ ಉದ್ವೇಗದಿಂದ ಮಾಲಿಕ ಅನ್ನುತ್ತಿದ್ದ:

"ಅಂದಹಾಗೆ, ಇವತ್ತು ರಾತ್ರೆ ಇಲ್ಲಿ ಇನ್ನೊಬ್ಬ ಹಾಡುಗಾರನಿದಾನೆ. ನೇರವಾಗಿ ಬಾ, ಗೆಳೆಯ....ದಯವಿಟ್ಟು ಬಾ!"

ಕೆಲವೇಳೆ ಹೊಸಬನಿಗೆ ಒಳ್ಳೆಯ ಕಂಠವಿರುತ್ತಿತ್ತು. ಆದರೆ ಕ್ಲೆಶ್ಚ್ಯೋವನ ಸರಳತೆಯಿಂದಲೂ ಭಾವೋದ್ವೇಗದಿಂದಲೂ ಅವನ ಯಾವ ಪ್ರತಿಸ್ಪರ್ಧಿಯೂ ಹಾಡಿದುದನ್ನು ಒಮ್ಮೆಯೂ ನಾನು ಕೇಳಲಿಲ್ಲ.

"ಹ-ಂ....ಬಹಳ ಚೆನ್ನಾಗಿಯೇ ಇದೆ, ಅನ್ನಿ. ನಿನಗೆ ಒಳ್ಳೇ ಕಂಠವಿದೆ—ಆದರೆ ಆತ್ಮದ

ವಿಷಯವಾದರೆ....," ಎಂದು ತುಸು ವಿಷಾದದಿಂದಲೇ, ಪಾನಮಂದಿರದ ಒಡೆಯ ಒಪ್ಪಬೇಕಾಗುತ್ತಿತ್ತು.

ಉಳಿದವರೆಲ್ಲ ನಗುತ್ತಿದ್ದರು.

"ಜೀನುಗಾರನಿಗೆ ಸೋಲೇ ಇಲ್ಲಾಂತ ಕಾಣ್ತದೆ!"

ನಿಡಿದು ನಿಂತ ಕೆಂಪು ಹುಬ್ಬುಗಳಡಿಯಿಂದ ಎಲ್ಲರನ್ನೂ ದಿಟ್ಟಿಸುತ್ತ, ವಿನಯಪೂರ್ವಕವಾದ ನಿಶ್ಚಲತೆಯಿಂದ, ಪಾನಮಂದಿರದ ಒಡೆಯನಿಗೆ ಕ್ಲೆಶ್ಚೋವ್ ಅನ್ನುತ್ತಿದ್ದ:

"ನೀನು ಎಷ್ಟೇ ಪ್ರಯತ್ನಿಸು, ನನ್ನಂಥ ಬೇರೊಬ್ಬ ಹಾಡುಗಾರ ನಿನಗೆ ಸಿಗಲಾರ. ಯಾಕೆಂದರೆ, ನನ್ನ ಪ್ರತಿಭೆ ದೇವರ ವರ."

"ನಾವೆಲ್ಲರೂ ದೇವರಿಂದಲೇ ಬಂದಿದೇವೆ."

"ನಿನ್ನ ಅಂಗಡಿಯ ಎಲ್ಲಾ ವೈನನ್ನು ತೆತ್ತರೂ ಒಬ್ಬನೂ ನಿನಗೆ ಸಿಗಲಾರ."

ಮಾಲಿಕನ ಮುಖ ಥಟ್ಟನೆ ರಂಗೇರಿತು. ಆತ ಗೊಣಗಿದ!

"ನೋಡೋಣ ಆ ವಿಷಯ—ನೋಡೋಣ."

ಆದರೆ ಕ್ಲೆಶ್ಚೋವ್ ಹೇಳುತ್ತಲೇ ಇದ್ದ:

"ಹಾಡುಗಾರಿಕೆ ಅನ್ನೋದು ನಿನ್ನ ಕೋಳಿಜೂಜಿನ ಹಾಗಲ್ಲವಪ್ಪ."

"ಯಾರಿಗೆ ಕಲಿಸ್ತಿದೀಯಾ ನೀನು?"

"ನಾನು ಕಲಿಸ್ತಿಲ್ಲ. ಸುಮ್ಮನೆ ನಿನಗೆ ತೋರಿಸ್ತಿದೀನಿ: ಹಾಡು ಇರೋದು ಆತ್ಮಕ್ಕೋಸ್ಕರ."

"ವಿವಾದ ಸಾಕು. ಅದರ ಬದಲು ಒಂದು ಹಾಡೇ ಬರಲಿ."

"ಹಾಡೋದಕ್ಕೆ ಯಾವಾಗಲೂ—ನಿದ್ದೇಲೂ ಕೂಡಾ—ನಾನು ಸಿದ್ಧವಾಗಿರ್ತೀನಿ," ಎಂದು ಕ್ಲೆಶ್ಚೋವ್ ಒಪ್ಪಿದ. ಸಣ್ಣನೆ ಕೆಮ್ಮಿ ಅವನು ಆರಂಭಿಸಿದ.

ಹಾಡು ಕೇಳಿಸತೊಡಗಿದೊಡನೆ, ಅಲ್ಪತನವೆಲ್ಲ, ಮಾತುಗಳ ಹಾಗೂ ಉದ್ದೇಶಗಳ ಕಲ್ಮಶವೆಲ್ಲ, ಅಸಭ್ಯವೂ ಪಾನಮಂದಿರಕ್ಕೆ ಸಂಬಂಧಿಸಿದಂಥವೂ ಆದ ಎಲ್ಲ, ಸೋಜಿಗಪಡುವ ರೀತಿಯಲ್ಲಿ ಹೊಗೆಯಂತೆ ಮಾಯವಾದುವು. ಎಲ್ಲರಿಗೂ, ಬೇರೊಂದುಬಗೆಯ ಬದುಕಿನ, ಪ್ರೇಮದಿಂದಲೂ ದುಃಖದಿಂದಲೂ ತುಂಬಿದ—ಪರಿಶುದ್ಧವೂ ಧ್ಯಾನಮಗ್ನವೂ ಆದ—ಬದುಕಿನ ಹೊಸ ಉಸಿರಿನ ಅರಿವಾಯಿತು.

ಆ ಮನುಷ್ಯನ ವಿಷಯದಲ್ಲಿ ನಾನು ಅಸೂಯೆ ತಳೆದೆ. ಅವನ ಪ್ರತಿಭೆಗಾಗಿಯೂ ಜನರ ಮೇಲೆ ಅವನು ಬೀರುತ್ತಿದ್ದ ಅಧಿಕಾರಕ್ಕಾಗಿಯೂ ಅತ್ಯಂತ ಹೃತ್ಪೂರ್ವಕವಾಗಿ ನಾನು ಅಸೂಯೆಪಟ್ಟೆ. ಈ ಅಧಿಕಾರವನ್ನಾತ ಎಷ್ಟೊಂದು ಆಶ್ಚರ್ಯಕರವಾಗಿ ಬಳಸುತ್ತಿದ್ದ! ಜೀನುಗಾರನ ಪರಿಚಯ ಮಾಡಿಕೊಂಡು ಅವನೊಡನೆ ದೀರ್ಘವಾಗಿ ಮಾತನಾಡಲು ನಾನು ಬಹಳವಾಗಿ ಆಶಿಸಿದೆ. ಆದರೆ ಅವನ ಬಳಿಸಾರುವ ಧೈರ್ಯ ನನಗಿರಲಿಲ್ಲ. ಯಾರನ್ನೂ ಕಾಣುತ್ತಿರಲಿಲ್ಲವೇನೋ ಎಂಬಂತಿದ್ದ ತನ್ನ ನಿಸ್ತೇಜ ಕಣ್ಣುಗಳಿಂದ, ಅಷ್ಟೊಂದು ವಿಚಿತ್ರವಾಗಿ ಆತ ಸುತ್ತಮುತ್ತಲೂ ದಿಟ್ಟಿಸುತ್ತಿದ್ದ. ಹಾಡುವಾಗ ಮಾತ್ರವಲ್ಲದೆ ಬೇರೆ ಸಮಯದಲ್ಲೂ ಅವನನ್ನು ಮೆಚ್ಚಿಕೊಳ್ಳಬೇಕೆಂದು ನಾನು ಅಪೇಕ್ಷಿಸಿದೆನಾದರೂ, ಅವನ ವಿಷಯದಲ್ಲಿ ನಾನು ಹಿಮ್ಮೆಟ್ಟುವಂತೆ

ಮಾಡಿದ ಅಸಹ್ಯಕರವಾದುದೇನೋ ಇತ್ತು. ಆತನಲ್ಲಿ ಒಪ್ಪಿಗೆಯಾಗದಂತಹ ಕೆಲವು ರೀತಿನೀತಿಗಳಿದ್ದುವು. ಮುದುಕನ ಹಾಗೆ ತನ್ನ ಟೋಪಿಯನ್ನಾತ ಕೆಳಕ್ಕೆಳೆಯುತ್ತಿದ್ದ; ಕೆಂಪು ಕಸೂತಿಯ ಸ್ಕಾರ್ಫನ್ನು ಆಡಂಬರದಿಂದ ತನ್ನ ಕತ್ತಿನ ಸುತ್ತಲೂ ಸುತ್ತುತ್ತ ಅವನೆನ್ನುತ್ತಿದ್ದ:

"ನನಗಾಗಿ ಇದನ್ನು ಮಾಡ್ಕೊಟ್ಟವಳು ನನ್ನ ಪ್ರೇಯಸಿ,—ಒಬ್ಬಾನೊಬ್ಬಳು ಯುವತಿ ಮಹಿಳಾಮಣಿ...."

ಹಾಡದೇ ಇದ್ದ ವೇಳೆಯಲ್ಲಿ ಆತ, ಮಹತ್ವದ ವ್ಯಕ್ತಿಯಂತೆ ಮೈಯುಬ್ಬಿಸಿಕೊಂಡು, ಹಿಮ ಕಡಿದ ಮೂಗನ್ನು ತೀಡುತ್ತ, ಕೇಳಲಾದ ಪ್ರಶ್ನೆಗಳಿಗೆ ಮನಸಿಲ್ಲದ ಮನಸ್ಸಿನಿಂದ ಒಂದೊಂದೇ ಪದದ ಉತ್ತರವೀಯುತ್ತಿದ್ದ. ಒಮ್ಮೆ ಅವನ ಮಗ್ಗುಲಲ್ಲಿ ಕುಳಿತಾಗ ನಾನು, ಏನನ್ನೋ ಕೇಳಿದೆ. ಆತ ನನ್ನ ಕಡೆ ಕಣ್ಣೆತ್ತಿ ಕೂಡಾ ನೋಡದೆ ಉತ್ತರವಿತ್ತ:

"ಹೊರಟುಹೋಗು, ಹುಡುಗನೇ!"

ಇವನಿಗಿಂತಲೂ ಮಿತ್ರೊಪೊಲ್‌ಕಿ ನನಗೆ ಹೆಚ್ಚು ಇಷ್ಟವಾದ. ಪಾನಮಂದದಿರವನ್ನು ಹೊಕ್ಕೊಡನೆ ಭಾರವಾದ ಹೊರೆಯನ್ನೇನೋ ಹೊತ್ತವನ ಹಾಗೆ ಬಾಗಿ ನಡೆಯುತ್ತ ಒಂದು ಮೂಲೆಗೆ ಸಾಗುತ್ತಿದ್ದ. ಕುರ್ಚಿಯನ್ನು ಒದ್ದು ಎಳೆದು, ಅದರ ಮೇಲೆ ಕುಸಿದು ಕುಳಿತುಕೊಳ್ಳುತ್ತಿದ್ದ. ಅವನ ಮೊಣಕೈಗಳು ಮೇಜಿನ ಮೇಲೂ ಕೆದರಿದ ಕೂದಲ ದೊಡ್ಡ ತಲೆ ಅವನ ಕೈಗಳ ಮೇಲೂ ವಿರಮಿಸುತ್ತಿದ್ದುವು. ಚಕಾರವೆತ್ತದೆ ಎರಡು ಅಥವಾ ಮೂರು ಗ್ಲಾಸು ವೋಡ್ಕಾವನ್ನು ಆತ ಗೊಟಗಟನೆ ಕುಡಿದುಬಿಡುತ್ತಿದ್ದ. ಅವನು ತುಟಿಗಳನ್ನು ಗಟ್ಟಿಯಾಗಿ ಚಪ್ಪರಿಸುವ ಸದ್ದು ಕೇಳಿ, ಪ್ರತಿಯೊಬ್ಬರೂ ಬೆಚ್ಚಿಬಿದ್ದು, ಅವನ ಕಡೆ ನೋಡಲೆಂದು ಹೊರಳುತ್ತಿದ್ದರು, ಅದಕ್ಕೆ ಪ್ರತಿಯಾಗಿ ಆತ ಪ್ರತಿಭಟಿಸುವ ರೀತಿಯಲ್ಲಿ ಅವರನ್ನೆಲ್ಲ ದುರುದುರನೆ ನೋಡುತ್ತಿದ್ದ. ಗಲ್ಲ ಅವನ ಕೈಗಳಲ್ಲಿರುತ್ತಿತ್ತು. ಸಿಕ್ಕುಗಟ್ಟಿದ ನೀಳವಾದ ತಲೆಗೂದಲು, ರಂಗೇರಿ ಉಬ್ಬಿಕೊಂಡಿದ್ದ ಮುಖದ ಮೇಲೆ ಚೆಲ್ಲಾಪಿಲ್ಲಿಯಾಗಿ ಹೇರಳವಾಗಿ ಬಿದ್ದಿರುತ್ತಿತ್ತು.

"ಏನು ನೋಡ್ತಿದೀರಿ ನೀವು? ಏನು ಕಾಣಿಸ್ತಿದೆ ನಿಮಗೆ?" ಎಂದು ಇದ್ದಕ್ಕಿದ್ದಂತೆ ಅವನು ಸಿಡಿದು ಕೇಳುತ್ತಿದ್ದ.

"ನಾವೊಂದು ದೆವ್ವವನ್ನು ಕಾಣ್ತಿದೀವಿ!" ಎಂದು ಕೆಲವೇಳೆ ಅವರು ಉತ್ತರವೀಯುತ್ತಿದ್ದರು.

ಆತ ಸದ್ದಿಲ್ಲದೆ ಕುಡಿದು, ತನ್ನ ಭಾರವಾದ ಪಾದಗಳನ್ನೆಳೆದುಕೊಳ್ಳುತ್ತ ಸದ್ದಿಲ್ಲದೆಯೇ ಹೊರಟು ಹೋಗುತ್ತಿದ್ದ ಸಂಜೆಗಳೂ ಇರುತ್ತಿದ್ದುವು. ಆದರೆ ಅನೇಕಸಾರೆ, ಜನರನ್ನಾತ ಪ್ರವಾದಿಯ ರೀತಿಯಲ್ಲಿ ಧಿಕ್ಕರಿಸುವುದನ್ನು ನಾನು ಕೇಳಿದೆ.

"ನಾನು ಪ್ರಭುವಿನ ಪರಮಪುನೀತ ಸೇವಕ. ಆ ನೆಲೆಯಲ್ಲಿ, ಪ್ರಾಚೀನ ಕಾಲದ ಇಸಯ್ಯನ ಹಾಗೆ, ನಿಮ್ಮನ್ನು ನಾನು ಶಪಿಸುತ್ತಿದ್ದೇನೆ. ಚೋರರೂ ಪಾತಕಿಗಳೂ ತಮ್ಮ ದುರಾಶೆಯ ಕೊಳಚೆಯಲ್ಲಿ ವಾಸಿಸುತ್ತಿರುವ ಏರಿಯಲ್ ನಗರ ನಾಶವಾಗಲಿ! ವಿಶ್ವದ ಜಲಮಾರ್ಗದಲ್ಲಿ ಕಲ್ಮಶದಿಂದ ತುಂಬಿ ತೇಲುತ್ತಿರೋ ಭೂನೌಕೆ ನಾಶವಾಗಲಿ! ಕುಡುಕರೇ, ಹೊಟ್ಟೆಬಾಕರೇ, ಭೂಮಿಯ ಕಸವೇ,—ನೀವೇ ಆ ಕಲ್ಮಶ! ಓ ಪಾಪಿಗಳೇ, ನಿಮ್ಮ ಸಂಖ್ಯೆ ಅಪರಿಮಿತ. ಆದರೂ ನಿಮ್ಮ ಅವಶೇಷಗಳನ್ನು ಭೂಮಿ ತಿರಸ್ಕರಿಸುತ್ತದೆ!"

ಅವನ ಧ್ವನಿಯ ಠೇಂಕಾರದಿಂದ ಕಿಟಕಿಯ ಗಾಜುಗಳು ಕಂಪಿಸುತ್ತಿದ್ದುವು. ಅವನ ಪ್ರೇಕ್ಷಕರನ್ನಿದು ಸಂತೋಷಪಡಿಸುತ್ತಿತ್ತು; ಆತನನ್ನು ಅವರು ಹಾಡಿ ಹೊಗಳುವಂತೆ ಮಾಡುತ್ತಿತ್ತು.

"ಕೆದರಿದ ಕೂದಲ ಮುದಿದೆವ್ವ, ಹೇಗೆ ಮಾತಾಡ್ತಿದಾನೆ!"

ಅವನ ಪರಿಚಯವನ್ನು ಮಾಡಿಕೊಳ್ಳುವುದು ಸುಲಭವಾಗಿತ್ತು—ಅವನಿಗೆ ಒಂದಿಷ್ಟು ಕೊಡಿಸಿದರೆ ಸಾಕಾಗುತ್ತಿತ್ತು. ಖೋಡ್ಕಾದ ಕೂಜೆಯನ್ನೂ ಕೆಂಪು ಮೆಣಸಿನಕಾಯಿಯೊಡನೆ ಖಲಿಜವನ್ನೂ ಆತ ತರಹೇಳುವುದು ಖಂಡಿತವಾಗಿತ್ತು. ಗಂಟಲನ್ನೂ ಜಠರವನ್ನೂ ಅವು ದಹಿಸುತ್ತಿದ್ದ ರೀತಿಗಾಗಿ, ಆ ವಸ್ತುಗಳನ್ನು ಆತ ಇಷ್ಟಪಡುತ್ತಿದ್ದ. ಯಾವ ಪುಸ್ತಕಗಳನ್ನು ನಾನು ಓದಬೇಕೆಂದು ಆತನನ್ನು ಕೇಳಿದಾಗ, ಆತ ದುಷ್ಟವೆನಿಸುವ ಧ್ವನಿಯಲ್ಲಿ ಕಟ್ಟುನಿಟ್ಟಾಗಿ ಅಂದ:

"ಯಾತಕ್ಕೆ ಓದಬೇಕು ನೀನು ?"

ಈ ಪ್ರಶ್ನೆಯಿಂದ ನಾನು ದಂಗಾದುದನ್ನು ಕಂಡು ಅವನು ತುಸು ಮೆತ್ತಗಾಗಿ, ಕ್ಷೀಣ ಧ್ವನಿಯಲ್ಲಿ ಅಂದ:

"ಬೋಧನೆಯ ಗ್ರಂಥವನ್ನು ಎಂದಾದರೂ ಓದಿದ್ದೀಯಾ ?"

"ಹೌದು."

"ಬೋಧನೆಯ ಗ್ರಂಥವನ್ನು ಓದು. ಅಷ್ಟೆ. ಪ್ರಪಂಚದ ಜ್ಞಾನವನ್ನೆಲ್ಲ ಅದರಲ್ಲಿ ಬರೆಯಲಾಗಿದೆ. ಆದರೆ, ನಿಮ್ಮ ಟೊಳ್ಳು ತಲೆಗಳಿಗೆ ಅದು ಅರ್ಥವಾಗುವಂಥಾದ್ದಲ್ಲ. ಯಾರಿಗೂ ಅದು ಅರ್ಥವಾಗೋದಿಲ್ಲ. ಯಾರು ನೀನು, ಹಾಡುಗಾರನೇನು ?"

"ಅಲ್ಲ."

"ಯಾಕಲ್ಲ? ಹಾಡಬೇಕು ನೀನು. ವೃತ್ತಿಗಳಲ್ಲೆಲ್ಲಾ ಅದು ಅತ್ಯಂತ ಮೂರ್ಖವಾದದ್ದು."

ಮಗ್ಗುಲ ಮೇಜಿನ ಬಳಿ ಇದ್ದ ಯಾರೋ ಒಬ್ಬ ಅಂದ:

"ನಿನ್ನ ವಿಷಯವೇನು? ನೀನು ಹಾಡುಗಾರನಲ್ಲವೆ ?"

"ನಾನು? ನಾನೊಬ್ಬ ಪೋಲಿ. ಏನಂತೀಯಾ ?"

"ಏನೂ ಇಲ್ಲ."

"ಸಹಜ. ಆ ನಿನ್ನ ತಲೆ ಖಾಲಿ ಅನ್ನೋದು ಎಲ್ಲರಿಗೂ ಗೊತ್ತಿದೆ. ಮುಂದೆಯೂ ಅಲ್ಲಿ ಏನೂ ಇರಲಾರದು ತಥಾಸ್ತು !"

ಸಹಜವಾಗಿಯೇ ನನ್ನನ್ನೂ ಒಳಗೊಂಡೇ ಎಲ್ಲರೊಡನೆಯೂ ಆತ ಈ ಸರಣಿಯಲ್ಲೇ ಮಾತನಾಡುತ್ತಿದ್ದ. ಹೀಗಿದ್ದರೂ, ಎರಡು ಮೂರು ಸಾರೆ ಉಪಾಹಾರ ಪಾನೀಯಗಳನ್ನು ಕೊಡಿಸಿದ ಬಳಿಕ, ನನ್ನ ವಿಷಯದಲ್ಲಿ ಆತ ಸ್ವಲ್ಪ ಮೃದುವಾದ. ಒಂದು ದಿನ, ತುಸು ಅಚ್ಚರಿಯಿಂದ, ಆತ ಹೀಗೆ ಹೇಳಿಯೂ ಬಿಟ್ಟ:

"ನಿನ್ನ ಕಡೆ ನೋಡಿದಾಗಲೆಲ್ಲ, ನೀನು ಯಾರು, ನೀನು ಏನು ಮತ್ತು ನೀನು ಯಾಕೆ ಅಂತ ತಿಳಕೊಳ್ಳೋದಕ್ಕೆ ನಾನು ಪ್ರಯತ್ನಿಸ್ತೀನಿ. ಆದರೆ ನೀನು ಕೆಟ್ಟು ಹಾಳಾಗಿ ಹೋದರೂ ನನಗೆ ಬೇಸರವೇನೂ ಇಲ್ಲ !"

ಕ್ಲೆಶ್ಚೋವನ ಬಗೆಗೆ ಅವನ ನಿಜವಾದ ಅಭಿಪ್ರಾಯವೇನೆಂಬುದನ್ನು ನಾನು ಕಂಡುಹಿಡಿಯ

ಲಾರದೇ ಹೋದೆ. ಅವನ ಮಾತಿಗೆ ಆತ ಸುವ್ಯಕ್ತವಾದ ಸಂತದಿಂದ ಕಿವಿಗೊಡುತ್ತಿದ್ದ. ಕೆಲವೇಳೆ ಒಲವುತುಂಬಿದ ಮಂದಹಾಸವನ್ನೂ ಬೀರುತ್ತಿದ್ದ. ಆದರೆ ಅವನ ಪರಿಚಯಮಾಡಿಕೊಳ್ಳಲು ಎಂದೂ ಯತ್ನಿಸಲಿಲ್ಲ. ಒರಟಾಗಿ, ತುಚ್ಛೀಕಾರದಿಂದ, ಅವನ ವಿಷಯವಾಗಿ ಮಾತನಾಡುತ್ತಿದ್ದ.

"ಅವನೊಬ್ಬ ವಿದೂಷಕ! ಉಸಿರಾಡೋದು ಹೇಗೇಂತ ಅವನಿಗೆ ಗೊತ್ತಿದೆ. ತಾನು ಹಾಡ್ತಿರೋದು ಏನೂಂತ ಅವನಿಗೆ ಅರ್ಥವಾಗ್ತದೆ: ಆದರೂ ಕೂಡಾ ಅವನೊಬ್ಬ ಕತ್ತೆ !"

"ಯಾಕೆ ?"

"ಅವನು ಹುಟ್ಟಿದ್ದೇ ಕತ್ತೆಯಾಗಿ, ಅದಕ್ಕೆ."

ಮತ್ತೇರದೆ ಇದ್ದ ವೇಳೆಯಲ್ಲಿ ಅವನೊಡನೆ ಮಾತನಾಡಿ ನಾನು ಸಂತೋಷಪಡಬಹುದಿತ್ತು. ಆದರೆ ಅಂತಹ ಘಳಿಗೆಗಳಲ್ಲಿ ಆತ ಬರೇ ಹೂಂಕರಿಸುತ್ತಿದ್ದ, ಮಸಕಾದ ಯಾತನೆಯ ಕಣ್ಣುಗಳಿಂದ ಸುತ್ತಲೂ ನೋಡುತ್ತಿದ್ದ. ಮುಂದಿನ ಆಯುಸ್ಸನ್ನೆಲ್ಲ ಕುಡಿತದಲ್ಲೇ ಮುಗಿಸುವ ಈ ಮನುಷ್ಯ ಒಂದು ಕಾಲದಲ್ಲಿ ಕಜಾನ್ ಅಕಾಡಮಿಯಲ್ಲಿ ಅಧ್ಯಯನಮಾಡುತ್ತಿದ್ದನೆಂದೂ ಮುಂದೆ ಅವನು ಧರ್ಮಗುರುವಾಗಬಹುದಿತ್ತೆಂದೂ ಯಾರಿಂದಲೋ ನಾನು ಕೇಳಿ ತಿಳಿದೆ. ಮೊದಲಲ್ಲಿ ಈ ಕಥೆಯನ್ನು ನಾನು ನಂಬಲಿಲ್ಲ. ಆದರೆ, ಒಂದು ದಿನ ಅವನೊಡನೆ ಮಾತನಾಡುತ್ತಿದ್ದಾಗ, ಬಿಶಪ್ ಕ್ರಿಸಾಂಥನ ಹೆಸರನ್ನು ನಾನು ಪ್ರಸ್ತಾಪಿಸುವ ಪ್ರಮೇಯ ಒದಗಿತು.

ತನ್ನ ತಲೆಯನ್ನೊಮ್ಮೆ ಎತ್ತಿ ಹಾರಿಸಿ ಮಿತ್ರೊಪೊಲ್‌ಸ್ಕಿ ಅಂದ:

"ಕ್ರಿಸಾಂಥ್? ನಾನು ಅವನನ್ನು ಬಲ್ಲೆ. ಅವನು ನನ್ನ ಅಧ್ಯಾಪಕನಾಗಿದ್ದ—ಹಿತೈಷಿಯಾಗಿದ್ದ. ಅದು ಕಜಾನಿನಲ್ಲಿ, ಅಕಾಡಮಿಯಲ್ಲಿ—ನನಗೆ ನೆನಪಿದೆ. ಪಮ್ವಾ ಬೆರಿಂಡಾ ಯಥಾರ್ಥವಾಗಿ ಹೇಳಿರೋ ಹಾಗೆ, 'ಕ್ರಿಸಾಂಥ್' ಅಂದರೆ 'ಬಂಗಾರದ ಹೂ' ಅಂತ ಅರ್ಥ. ಕ್ರಿಸಾಂಥ್ ನಿಜವಾಗಿಯೂ ಬಂಗಾರದ ಮನುಷ್ಯನೇ ಆಗಿದ್ದ !"

"ಪಮ್ವಾ ಬೆರಿಂಡಾ ಯಾರು ?" ಎಂದು ನಾನು ಕೇಳಿದೆ—

ಆದರೆ ಮಿತ್ರೊಪೊಲ್‌ಸ್ಕಿ ಒರಟಾಗಿ ಉತ್ತರವಿತ್ತ:

"ನಿನಗೆ ಬೇಕಾಗಿಲ್ಲ ಅದರ ಉಸಾಬರಿ."

ಮನೆಗೆ ತಲಪಿದಾಗ, 'ಪಮ್ವಾ ಬೆರಿಂಡಾ'ನನ್ನು ತಪ್ಪದೆ ಓದು,' ಎಂದು ಟಿಪ್ಪಣಿ ಪುಸ್ತಕದಲ್ಲಿ ಬರೆದುಕೊಂಡೆ. ನನ್ನ ಆತ್ಮವನ್ನು ಕಳವಳಕ್ಕೆ ಗುರಿಮಾಡಿದ್ದ ಎಲ್ಲ ಪ್ರಶ್ನೆಗಳಿಗೂ ಬೆರಿಂಡಾ ಉತ್ತರವೀಯುವನೆಂಬ ಅಭಿಪ್ರಾಯ ಯಾವುದೋ ಕಾರಣಕ್ಕಾಗಿ ನನ್ನಲ್ಲಿ ಉಂಟಾಯಿತು.

ವಾದ್ಯವೃಂದದ ಆ ಮನುಷ್ಯ ವಿಚಿತ್ರ ಹೆಸರುಗಳನ್ನೂ ಅಸಾಮಾನ್ಯ ಪದಸಂಕಲಗಳನ್ನೂ ಬಳಸಲು ಇಷ್ಟಪಡುತ್ತಿದ್ದ. ಇದರಿಂದ ನನಗೆ ಕಸಿವಿಸಿಯಾಗುತ್ತಿತ್ತು.

"ಬದುಕು ಅನ್ನೋದು ಅನೀಸಿಯಾ ಅಲ್ಲ!" ಎಂದು ಒಮ್ಮೆ ಅವನೆಂದ.

"ಅನೀಸಿಯಾ ಯಾರು ?" ಎಂದು ನಾನು ಕೇಳಿದೆ.

ನಾನು ಕಕ್ಕಾಬಿಕ್ಕಿಯಾದುದನ್ನು ಕಂಡು ಸಂತೋಷಪಟ್ಟು ಅವನು ಉತ್ತರವಿತ್ತ:

"ಅನೋದಿನೆ."

ಅಂತಹ ಪದಗಳನ್ನು ಆತ ಬಳಸುತ್ತಿದ್ದುದರಿಂದಲೂ ಅಕಾಡಮಿಯಲ್ಲಿ ಆತ ಅಭ್ಯಸಿಸಿದ್ದನೆಂಬ ಸಂಗತಿಯಿಂದಲೂ ಜ್ಞಾನದ ದೊಡ್ಡ ಭಂಡಾರವೇ ಅವನಲ್ಲಿರಬೇಕೆಂದು ನಾನು ಭಾವಿಸಿದೆ.

ಹೀಗಿದ್ದು, ಮನಸಿಲ್ಲದ ಮನಸ್ಸಿನಿಂದ ಅಷ್ಟೊಂದು ರಹಸ್ಯಮಯವಾಗಿ ಆತ ಮಾತನಾಡು ತ್ತಿದ್ದುದು ವ್ಯಾಕುಲದ ವಿಷಯವಾಗಿತ್ತು. ಅವನನ್ನು ಸಮಾಪಿಸುವ ಸರಿಯಾದ ರೀತಿಯೇ ಪ್ರಾಯಶಃ ನನಗೆ ತಿಳಿದಿಲ್ಲವೆಂದುಕೊಂಡೆ.

ಅದು ಹಾಗಿದ್ದರೂ, ನನ್ನ ಆತ್ಮದಮೇಲೆ ಅವನ ಹೆಗ್ಗುರುತು ಉಳಿದೇ ಉಳಿಯಿತು. ಪ್ರವಾದಿ ಇಸಯ್ಯನ ರೀತಿಯಲ್ಲಿ ಧಿಕ್ಕರಿಸುವಾಗ ಅವನು ತೋರುತ್ತಿದ್ದ ಮತ್ತೇರಿದ ಧೀರತನ ವನ್ನು ನಾನು ಇಷ್ಟಪಟ್ಟೆ. ಅವನು ಗರ್ಜಿಸುತ್ತಿದ್ದ:

"ಓ ಭೂಮಿಯ ಹೊಲಸೇ, ದುರ್ಗಂಧವೇ! ದುಷ್ಟರೀಗ ಉನ್ನತಪದವಿಗೇರಿಸಲ್ಪಟ್ಟಿದಾರೆ; ನ್ಯಾಯವಂತರು ಕೆಳಕ್ಕೆಸೆಯಲ್ಪಟ್ಟಿದಾರೆ. ಆದರೆ, ತೀರ್ಪಿನ ದಿನ ಬೇಗನೆ ಉದಯವಾಗಲಿದೆ. ಆಗ ಕಾಲಮಿಾರಿ ಹೋಗಿರ್ತದೆ, ಹೋಗಿರ್ತದೆ!"

ನಿರಾಸೆಯ ಈ ಚೀರಾಟವನ್ನು ಕೇಳಿದಾಗ, 'ಭೇಷ್,' ಯಾತನಾಮಯ ದುರ್ವಿಧಿ ಗೊಳಗಾದ ಅಗಸಗಿತ್ತಿ ನಟಾಲ್ಯಾ, ಮಲಿನ ಹಾಳು ಹರಟೆಯ ಮೋಡಗಳಿಂದ ಆಚ್ಛಾದಿತ ಳಾಗಿದ್ದ ಮಾರ್ಗೊಟ್‌ರಾಣಿ—ಇವರೆಲ್ಲರ ನೆನಪು ನನಗಾಗುತ್ತಿತ್ತು. ನೆನಪಿಡಬೇಕಾದ ವಿಷಯ ಗಳು ಆಗಲೇ ನನ್ನಲ್ಲಿದ್ದುವು!....

ಈ ಮನುಷ್ಯನೊಡನೆ ನಾನು ಮಾಡಿಕೊಂಡ ಪರಿಚಯ ಅಲ್ಪಾಯುವಾಗಿತ್ತು; ವಿಚಿತ್ರ ರೀತಿಯಲ್ಲಿ ಅದು ಮುಕ್ತಾಯವಾಯಿತು.

ವಸಂತಋತುವಿನಲ್ಲೊಂದು ದಿನ, ಸೈನಿಕರ ಶಿಬಿರದ ಸಮಾಪದಲ್ಲಿದ್ದ ಹೊಲಗಳಲ್ಲಿ ಅವನನ್ನು ನಾನು ಸಂಧಿಸಿದೆ. ಭಯಾನಕವಾಗಿ ಊದಿಕೊಂಡು, ಒಂಟೆಯ ಹಾಗೆ ತಲೆಯನ್ನ ಲ್ಲಾಡಿಸುತ್ತ, ಒಂಟಿಯಾಗಿ ಆತ ನಡೆಯುತ್ತಿದ್ದ.

ಕರ್ಕಶಕಂಠದಲ್ಲಿ ಅವನು ಕೇಳಿದ:

"ವಾಯುಸೇವನೆಗೆ ಬಂದಿದೀಯೇನು? ಒಟ್ಟಿಗೆ ಹೋಗೋಣ. ನಾನೂ ಅಡ್ಡಾಡೋದ ಕ್ಕೇಂತ ಹೊರಟಿದೀನಿ. ನಾನೊಬ್ಬ ಅಸ್ವಸ್ಥ ಮನುಷ್ಯ, ಗೆಳೆಯ, ನಿಜವಾಗಿಯೂ ಹೌದು."

ಸಲ್ಪ ಹೊತ್ತು ನಾವು ಮೌನವಾಗಿ ನಡೆಯುತ್ತ ಹೋದೆವು. ಇದ್ದಕ್ಕಿದ್ದಂತೆ, ಒಂದು ಕುಣಿಯ ತಳದಲ್ಲಿ ಒಬ್ಬ ಮನುಷ್ಯನಿದ್ದುದು ನಮ್ಮ ಕಣ್ಣಿಗೆ ಬಿತ್ತು. ಆತ ಗೋಡೆಗೊರಗಿ ಮುದ್ದೆ ಯಾಗಿ ಕುಳಿತಿದ್ದ. ಕೋಟನ್ನು ಆತ ಎಳೆದು ಕಳಚಲು ಯತ್ನಿಸಿದ್ದನೇನೋ ಎನ್ನುವಂತೆ, ಅದು ಒಂದು ಕಿವಿಯ ಮೇಲ್ಗಡೆ ಸೆಟೆದು ನಿಂತಿತ್ತು.

ವಾದ್ಯವೃಂದದವನು ನೋಡಲೆಂದು ನಿಂತು ನಿರ್ಣಾಯಕ ಧ್ವನಿಯಲ್ಲಿ ಅಂದ:

"ಕುಡಿದು ಬಿದ್ದಿದ್ದಾನೆ!"

ಆದರೆ ತುಸು ದೂರದಲ್ಲೇ ಎಳೆ ಹುಲ್ಲಿನ ಮೇಲೆ ದೊಡ್ಡದೊಂದು ರಿವಾಲ್ವರ್ ಇತ್ತು; ಆ ಮನುಷ್ಯನ ಟೊಪ್ಪಿಗೆ ಇತ್ತು; ಪೂರ್ತಿ ಬರಿದಾಗದೇ ಇದ್ದ ಒಂದು ವೋಡ್ಕಾ ಶೀಷೆ ಕತ್ತಿನ ವರೆಗೂ ಹುಲ್ಲುಮುಚ್ಚಿಕೊಂಡು ನಿಂತಿತು. ಮನುಷ್ಯನ ಮುಖ, ಲಜ್ಜೆಯಿಂದಲೇನೋ ಎನ್ನುವಂತೆ ಅವನ ಕೋಟಿನ ಕಾಲರಿನೊಳಗೆ ಮುಚ್ಚಿಕೊಂಡಿತ್ತು.

ನಿಮಿಷಕಾಲ ಮಾತಿಲ್ಲದೆ ನಾವು ನಿಂತೆವು. ಬಳಿಕ ಮಿತ್ರೊಪೊಲ್‌ಸ್ಕಿ ತನ್ನ ಪಾದಗಳನ್ನು ಅಗಲವಾಗಿ ಊರಿ, ಅಂದ:

"ಗುಂಡು ಹಾರಿಸಿ ಆತ್ಮಹತ್ಯೆ ಮಾಡ್ಕೊಂಡಿದಾನೆ."

ಕುಡಿದು ಬಿದ್ದಿರುವುದಿಲ್ಲ, ಸತ್ತೇಹೋಗಿದಾನೆ ಈತ—ಎಂಬುದನ್ನು ತಕ್ಷಣವೇ ನಾನು ಕಂಡಿದ್ದೆ. ಆದರೆ ಅದು ಬಹಳ ಅನಿರೀಕ್ಷಿತವಾಗಿತ್ತು. ಹೀಗಾಗಿ, ಆ ವಿಚಾರವನ್ನು ನಾನು ಇದಿರಿಸಿದೆ. ದೊಡ್ಡದಾದ ನುಣ್ಣಗಾದ ತಲೆಬುರುಡೆಯತ್ತ ಹಾಗೂ ಕೋಟಿನ ಕಾಲರಿನ ಮೇಲೆ ತೋರಿಸಿಕೊಂಡಿದ್ದ ನೀಲಿ ಕಿವಿಯತ್ತ ದಿಟ್ಟಿಸುತ್ತಲಿದ್ದಂತೆ. ಭಯ ಕರುಣೆ ಯಾವ ಭಾವನೆಯೂ ನನಗೆ ಆಗಲಿಲ್ಲವೆಂಬುದು ನೆನಪಿದೆ. ವಸಂತದ ಚೇತೋಹಾರಿಯಾದ ಆ ದಿವಸದಂದು ಒಬ್ಬ ಮನುಷ್ಯ ಆತ್ಮಹತ್ಯೆ ಮಾಡಿಕೊಳ್ಳಬಹುದೆಂದು ನಂಬುವುದು ಕಷ್ಟವಾಗಿತ್ತು.

ಮುಖಕ್ಷೌರ ಮಾಡಿಕೊಳ್ಳದೇ ಇದ್ದ ಕೆನ್ನೆಗಳನ್ನು, ಚಳಿಯಾಗಿದೆಯೇನೋ ಎನ್ನುವಂತೆ, ಮಿತ್ರೊಪೊಲ್ಸ್ಕಿ ರಭಸದಿಂದ ಉಜ್ಜಿ, ಮಾತು ಹಿಡಿಸಿದ:

"ವಯಸ್ಸಾಗಿದೆ. ಹೆಂಡತಿ ಇವನನ್ನು ಬಿಟ್ಟುಬಿಟ್ಟಿರಬೇಕು; ಅಥವಾ ಏನೋ ಆರ್ಥಿಕ ತೊಡಕಿನಲ್ಲಿ ಸಿಕ್ಕಿಬಿದ್ದಿರಬೇಕು."

ನನ್ನನ್ನು ಆತ, ಪೋಲೀಸರನ್ನು ಕರೆತರುವಂತೆ ಶಹರಕ್ಕೆ ಕಳುಹಿದ. ಸ್ವತಃ ತಾನು ಕುಣಿಯ ಅಂಚಿನಲ್ಲಿ, ಕಾಲುಗಳನ್ನು ಕೆಳಕ್ಕೆ ತೂಗಾಡಿಸಿ ಕುಳಿತ. ಹೊಲಸಾದ ಅವನ ಕೋಟು ಭುಜಗಳ ಬಳಿ ಬಲವಾಗಿ ಬಿಗಿದುಕೊಂಡಿತು. ಆತ್ಮಹತ್ಯೆಯ ವಿಷಯವನ್ನು ಪೋಲೀಸರಿಗೆ ತಿಳಿದೊಡನೆಯೇ ನಾನು ಹಿಂದಕ್ಕೆ ಧಾವಿಸಿದೆ. ಆದರೆ ಅಷ್ಟರೊಳಗಾಗಿ ವಾದ್ಯವೃಂದದ ಈ ಹಾಡುಗಾರ, ಮೃತನು ಉಳಿಸಿಹೋಗಿದ್ದ ವೋಡ್ಕಾವನ್ನೆಲ್ಲ ಕುಡಿದುಬಿಟ್ಟಿದ್ದ. ನನ್ನನ್ನು ನೋಡುತ್ತಲೆ, ಖಾಲಿ ಶೀಷೆಯನ್ನಾತ ಗಾಳಿಯಲ್ಲಿ ಝುಳಪಿಸಿದ.

"ಇದೀಗ ಅವನ ಸರ್ವನಾಶಕ್ಕೆ ಕಾರಣವಾದದ್ದು!" ಎಂದು ಅವನು ಕೂಗಾಡಿದಾಗ; ಶೀಷೆಯನ್ನು ನೆಲಕ್ಕೆಸೆದು ಪುಡಿಮಾಡಿದ.

ಪೋಲೀಸರವನೊಬ್ಬ ನನ್ನ ಹಿಂದಿನಿಂದಲೇ ಓಡಿ ಬಂದು, ಕುಣಿಯೊಳಕ್ಕೆ ದೃಷ್ಟಿಹಾಯಿಸಿ, ತನ್ನ ಟೋಪಿ ತೆಗೆದ. ಅಳುಕುತ್ತ ಶಿಲುಬೆಯ ವಂದನೆ ಮಾಡಿದ ಬಳಿಕ, ವಾದ್ಯವೃಂದದ ಹಾಡುಗಾರನತ್ತ ಹೊರಳಿದ:

"ಯಾರು ನೀನು?"

"ಯಾರಾದರೆ ನಿನಗೇನು?"

ತುಸು ವಿವೇಚಿಸಿ, ಹೆಚ್ಚು ವಿನಯದಿಂದ ಪೋಲೀಸರವನೆಂದ:

"ಒಬ್ಬ ಮನುಷ್ಯ ಇಲ್ಲಿ ಸತ್ತುಬಿದ್ದಿರೋದು, ನೀನು ಕುಡಿದು ಮತ್ತೇರಿ ಇಲ್ಲಿರೋದು—ಇದು ಹ್ಯಾಗೆ?"

"ನಾನು ಕುಡಿದು ಮತ್ತೇರಿ ಇಪ್ಪತ್ತು ವರ್ಷಗಳಾದುವು!" ಎಂದು ಮಿತ್ರೊಪೊಲ್ಸ್ಕಿ, ತನ್ನ ಎದೆಯಮೇಲೆ ಗುದ್ದಿಕೊಳ್ಳುತ್ತ, ಹೆಮ್ಮೆಯಿಂದ ಅಂದ.

ವೋಡ್ಕಾವನ್ನು ಕುಡಿದು ಮುಗಿಸಿದುದಕ್ಕಾಗಿ ಅವರು ಅವನನ್ನು ಬಂಧಿಸುವರೆಂಬುದು ಖಚಿತವಾಗಿತ್ತು. ಬೇರೆ ಕೆಲವರೂ ಶಹರದಿಂದ ಧಾವಿಸಿ ಬಂದರು. ಕಠಿನ ಮುಖಮುದ್ರೆಯ ಪೋಲೀಸ್ ಅಧಿಕಾರಿಯೊಬ್ಬ ಕುದುರೆ ಗಾಡಿಯಲ್ಲಿ ಕುಳಿತು ಬಂದ. ಆತ ಕುಣಿಯೊಳಕ್ಕೆ ಇಳಿದು, ಮನುಷ್ಯನ ಮುಖವನ್ನು ನೋಡುವುದಕ್ಕಾಗಿ ಆತನ ಕೋಟನ್ನು ಎತ್ತಿದ.

"ಇವನನ್ನು ಮೊದಲು ಇಲ್ಲಿ ಕಂಡವರು ಯಾರು?"

"ನಾನು," ಎಂದ ಮಿತ್ರೊಪ್ರೊಲ್ಸ್ಕಿ.

ಅಧಿಕಾರಿ ಅವನೆಡೆಗೆ ದೃಷ್ಟಿಹಾಯಿಸಿ, ಇದ್ದಕ್ಕಿದ್ದಂತೆ, ಗದರುವ ಧ್ವನಿಯಲ್ಲಿ ರಾಗವೆಳೆದ:

"ಆಹ್, ನನ್ನ ಸೊಗಸಾದ ಮನುಷ್ಯನೇ ನಿನ್ನನ್ನು ನೋಡಿ ಸಂತೋಷವಾಯ್ತಪ್ಪ!"

ಪ್ರೇಕ್ಷಕರು ನೆರೆದರು; ಹತ್ತಿಪ್ಪತ್ತಕ್ಕೂ ಮಿಕ್ಕಿದಷ್ಟು ಜನ. ಏದುಸಿರು ಬಿಡುತ್ತ, ಉದ್ವಿಗ್ನರಾಗಿ, ಅವರೆಲ್ಲ ಕುಣಿಯೊಳಕ್ಕೆ ಇಣಿಕಿದರು; ಅದರ ದಂಡೆಯ ಬಳಿ ಸುತ್ತುಕಟ್ಟಿದರು. ಯಾರೋ ಒಬ್ಬ ಕೂಗಾಡಿದ:

"ಇವನೊಬ್ಬ ಗುಮಾಸ್ತೆ, ನಮ್ಮ ರಸ್ತೆಯವನು ನಾನಿವನನ್ನು ಬಲ್ಲೆ!"

ವಾದ್ಯವೃಂದದ ಹಾಡುಗಾರ ಅಸ್ಪಷ್ಟವಾಗಿ ವಾದಿಸುತ್ತ, ಕರ್ಕಶವಾಗಿ ಕೂಗಾಡುತ್ತ ಪೋಲೀಸ್ ಅಧಿಕಾರಿಯ ಎದುರು ತೂರಾಡಿಕೊಂಡು ನಿಂತ. ಅಧಿಕಾರಿ ಅವನ ಎದೆಗೊಂದು ಗುದ್ದಿದ. ಇದರಿಂದಾಗಿ ಮಿತ್ರೊಪ್ರೊಲ್ಸ್ಕಿ ಮುದುಡಿಕೊಂಡು ಕುಸಿಕುಳಿತುಕೊಳ್ಳಬೇಕಾಯಿತು. ಮೊದಲ ಪೋಲೀಸರವನು ಯಾವ ಅವಸರವೂ ಇಲ್ಲದೆ ಒಂದು ಹಗ್ಗವನ್ನು ಹೊರತೆಗೆದು, ಹಾಡುಗಾರ ಪ್ರತಿಭಟನೆಯೇ ಇಲ್ಲದೆ ಬೆನ್ನ ಹಿಂದೆ ಕಟ್ಟಿದ್ದ ಕೈಗಳನ್ನು ಕಟ್ಟಿದ, ಅಧಿಕಾರಿ ಜನರ ಗುಂಪನ್ನುದ್ದೇಶಿಸಿ ಕನಲಿ ಕೂಗಾಡಿದ:

"ತೊಲಗಿ ಇಲ್ಲಿಂದ, ಲಫಂಗ ಮಕ್ಕಳೇ!"

ತೇವಗೊಂಡ ಕೆಂಪು ಕಣ್ಣುಗಳ, ಉಸಿರಿಗಾಗಿ ಬಡೆದುಕೊಳ್ಳುತ್ತಿದ್ದ ಬಾಯಿಯ, ಇನ್ನೊಬ್ಬ ಪೋಲೀಸರವನು ಓಡಿಬಂದ. ಹಾಡುಗಾರನ ಕೈಗಳನ್ನು ಕಟ್ಟಿದ್ದ ಹಗ್ಗದ ಇನ್ನೊಂದು ಕೊನೆಯನ್ನು ಹಿಡಿದುಕೊಂಡ. ಸದ್ದಿಲ್ಲದೆ ಅವನನ್ನು ಶಹರದೊಳಕ್ಕೆ ಕರಕೊಂಡು ಹೋದ.

ತೀರಾಹತಾಶನಾಗಿ, ಜರ್ಜರಿತ ಮನಸ್ಸಿನಿಂದ, ನಾನೂ ಬಯಲನ್ನು ಬಿಟ್ಟು ನಡೆದೆ. ಕಾಡು ಕಾಗೆಯ ಕರ್ಕಶವಾದ ಕಾ-ಕಾ ಸ್ವರದ ಹಾಗೆ, ನನ್ನ ನೆನಪು ಮರುಕಳಿಸಿತು:

"ಏರಿಯಲ್ ಶಹರ ನಾಶವಾಗಲಿ!"

ಪೋಲೀಸರವನು ಯಾವ ಅವಸರವೂ ಇಲ್ಲದೆ ಹಗ್ಗವನ್ನು ಜೇಬಿನಿಂದ ಹೊರತೆಗೆದುದು; ಗಭೀರಪ್ರವಾದಿ ಸಾವಿರದ ಸಾರೆ ಮಾಡುತ್ತಿರುವನೇನೋ ಎನ್ನುವಂತೆ, ರೋಮ ತುಂಬಿದ ತನ್ನ ಕೆಂಪು ಕೈಗಳನ್ನು ದುರ್ಬಲನಾಗಿ ತನ್ನ ಬೆನ್ನ ಹಿಂದಕ್ಕೆ ತಳ್ಳಿದುದು——ದುಃಖದ ಈ ಚಿತ್ರವನ್ನು ನನ್ನ ಮನಸ್ಸಿನಿಂದ ಹೊರಹಾಕುವುದೂ ನನ್ನಿಂದ ಸಾಧ್ಯವಾಗಲಿಲ್ಲ....

ಆ ಪ್ರವಾದಿಯನ್ನು ಗಡೀಪಾರು ಮಾಡಿದರೆಂದು ಮುಂದೆ ನಾನು ಕೇಳಿ ತಿಳಿದೆ. ಅನಂತರ ಸ್ವಲ್ಪ ಸಮಯದಲ್ಲೇ ಕ್ಲೆಶ್ಕೋವನೂ ಅದೃಶ್ಯನಾದ. ಲಾಭದಾಯಕವಾದೊಂದು ಮದುವೆ ಮಾಡಿಕೊಂಡು, ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವುದಕ್ಕೋಸ್ಕರ ಅವನು ಹೊರಟುಹೋದ. ಅಲ್ಲಿ ಆತ, ಜೀನು ತಯಾರಿಕೆಯ ಒಂದು ಅಂಗಡಿಯನ್ನು ತೆರೆದ.

ಆತನ ಹಾಡುಗಾರಿಕೆಯನ್ನು ನನ್ನ ಯಜಮಾನನೆದುರು ನಾನು ಹೊಗಳಿದ್ದೆ. ಹೀಗಾಗಿ, ಆತ ಹೊರಟು ಹೋದುದಕ್ಕೆ ಮುಂಚೆ ಒಮ್ಮೆ, ನನ್ನ ಯಜಮಾನ ನನ್ನೊಡನೆ ಅಂದಿದ್ದ:

"ಅವನು ಹಾಡೋದನ್ನು ಕೇಳೋದಕ್ಕೆ ಆ ಪಾನಮಂದಿರಕ್ಕೊಮ್ಮೆ ಹೋಗಬೇಕು."

ಒಂದು ದಿನ ಆತ ಹಾಗೆ ಮಾಡಿದ. ಮೇಜಿನ ಬಳಿ ನನಗೆದುರಾಗಿ, ಕಣ್ಣುಗಳನ್ನು ಅಗಲ

ವಾಗಿ ತೆರೆದು ಹುಬ್ಬುಗಳನ್ನು ಅಚ್ಚರಿಯಿಂದ ಮೇಲಕ್ಕೇರಿಸಿ ಅವನು ಕುಳಿತ.

ಪಾನಮಂದಿರಕ್ಕೆ ಹೋಗುತ್ತ ಹಾದಿಯುದ್ದಕ್ಕೂ ನನ್ನನ್ನು ಆತ ಛೇಡಿಸಿದ್ದ. ಒಳಕ್ಕೆ ಪ್ರವೇಶಿಸಿದ ಮೇಲೂ, ನನ್ನ ಬಗೆಗೆ, ಇತರ ಪೋಷಕರ ಬಗೆಗೆ, ಹಾಗೂ ಉಸಿರು ಕಟ್ಟಿಸುವ ವಾಸನೆಯ ವಿಷಯವಾಗಿ ಪರಿಹಾಸ್ಯಮಾಡುತ್ತಲೇ ಇದ್ದ. ಜೇನುಗಾರ ಹಾಡಲು ಆರಂಭಿಸಿದಾಗ, ತಾತ್ಸಾರದ ಮುಗುಳುನಗೆಯೊಡನೆ ಒಂದು ಗ್ಲಾಸಿಗೆ ಬೀರ್ ಹುಯ್ಯತೊಡಗಿದ. ಆದರೆ, ಅರ್ಧ ದಲ್ಲೇ ತಡೆದು ಅವನೆಂದ:

"ಹು—ಂ!....ಎಲಾ ಇವನ!"

ಮೃದುವಾಗಿ, ನಡುಗುವ ಕೈಯಿಂದ, ಶೀಷೆಯನ್ನಾತ ಮೇಜಿನ ಮೇಲಿರಿಸಿ, ಆಲಿಸ ತೊಡಗಿದ.

ಕ್ಲೆಶ್ಕ್ಯೋವ್ ಮುಗಿಸಿದಾಗ, ನಿಟ್ಟುಸಿರುಬಿಟ್ಟು ಅವನೆಂದ:

"ನೀನು ಹೇಳಿದ್ದು ಸರಿ, ತಮ್ಮ. ಹೇಗೆ ಹಾಡಬೇಕು ಅನ್ನೋದು ಅವನಿಗೆ ಗೊತ್ತಿದೆ. ನಾನೇ ಸೋತೆ. ನಾನು ಬೆವತುಕೊಳ್ಳೋ ಹಾಗೂ ಮಾಡಿಬಿಟ್ಟಿದಾನೆ."

ತನ್ನ ತಲೆಯನ್ನು ಹಿಂದಕ್ಕೆ ತಳ್ಳಿ, ಕಣ್ಣುಗಳನ್ನು ಛಾವಣಿಯಲ್ಲಿ ನೆಟ್ಟು, ಜೇನುಗಾರ ಮತ್ತೊಮ್ಮೆ ಹಾಡಿದ:

ಹೊಲದ ಹಾದಿಯಲ್ಲಿ ಒಂಟಿ ಕನ್ಯೆ ನಡೆದಳು
ಸಿರಿಯ ಮನೆಗಳಿಂದ ಆಕೆ ಹೊರಟು ಬಂದಳು

ಸಣ್ಣನೆ ನಕ್ಕು, ತನ್ನ ತಲೆಯಲುಗಿಸಿ, ನನ್ನ ಒಡೆಯ ಗೊಣಗಿದ:

"ಹೂಂ, ಇವನು ಹಾಡಬಲ್ಲ."

ಕೊಳಲಿನಂತೆ ಧ್ವನಿ ಹೊರಡಿಸುತ್ತ ಕ್ಲೆಶ್ಕ್ಯೋವ್ ಮುಂದುವರಿದ:

ಬಳಿಕ ಕನ್ಯೆ ಹೊಸಬನೊಡನೆ ಬಳಲಿ ಅಂದಳು:
ನನ್ನಂಥ ಅನಾಥೆ ಬಾಲೆ ಬೇಡ ಯಾರಿಗೂ

ಕೆಂಪಗಾಗಿದ್ದ ಕಣ್ಣುಗಳನ್ನು ಪಿಳಿಪಿಳಿ ಬಿಡುತ್ತ ನನ್ನ ಯಜಮಾನ ಪಿಸುನುಡಿದ

"ಅದ್ಭುತ ಮನುಷ್ಯ!"

ಹಾಡಿನ ವ್ಯಥೆಯ ಪದಗಳು ಜಯಭೇರಿ ಬಾರಿಸುತ್ತ, ಪಾನಮಂದಿರದ ಸದ್ದನ್ನು ಮೆಟ್ಟಿ ನಿಂತು, ಹೆಚ್ಚು ಹೆಚ್ಚು ಪ್ರಬಲವಾಗುತ್ತ, ಹೆಚ್ಚು ಸುಂದರವಾಗುತ್ತ, ಹೆಚ್ಚು ಸತ್ವಪೂರ್ಣ ವಾಗುತ್ತ ಏರಿನಡೆದಂತೆ, ಸಂತಸತುಂಬಿದ ಹೃದಯದಿಂದ ನನ್ನ ಯಜಮಾನನನ್ನು ನಾನು ಈಕ್ಷಿಸಿದೆ.

ನಮ್ಮ ಹಳ್ಳಿಯಲ್ಲಿ ಇಲ್ಲ ಗೆಳೆಯರೊಬ್ಬರೂ
ಎಳೆಯರೆಲ್ಲ ನಲಿವವೇಳೆ ನಾನು ಒಂಟಿಯೂ
ಹಳ್ಳಿಯಲ್ಲಿ ಇನಿಯರಾರೂ ನನ್ನ ಮೆಚ್ಚರು
ಸೊಬಗಿನುಡುಗೆ ನನಗೆ ಇಲ್ಲದಿಹುದೆ ಕಾರಣ
ಮುದಿಯ ವಿಧುರನೀಗ ನನ್ನ ವರಿಸಬಲ್ಲನು
ಆದರಂಥ ಬದುಕನಾನು ಎಂದೂ ಒಲ್ಲೆನು....

ನನ್ನ ಯಜಮಾನ ಯಾವ ಲಜ್ಜೆಯೂ ಇಲ್ಲದೆ ಅತ್ತ. ಬಾಗಿದ ತಲೆಯೊಡನೆ, ಸುಂಯ್ ಸುಂಯ್ ಉಸಿರುಬಿಡುತ್ತ, ತನ್ನ ಕೆನ್ನೆಗಳ ಮೇಲಿಂದ ಕಂಬನಿಗಳನ್ನು ಉದುರಗೊಡುತ್ತ, ಆತ ಕುಳಿತ.

ಮೂರನೆಯ ಹಾಡಿನ ಬಳಿಕ, ಹೃದಯದ ಕಂಪನ ತಡೆಯಲಾಗದೆ ಅವನೆಂದ:

"ಇನ್ನೂ ಇಲ್ಲಿ ನಾನು ಕುಳಿತಿರಲಾರೆ—ಗಾಳಿ ಇಲ್ಲ—ಈ ಕೆಟ್ಟವಾಸನೆ—ಬಾ ಮನೆಗೆ ಹೋಗೋಣ!"

ಆದರೆ ಒಮ್ಮೆ ಬೀದಿಗಿಳಿದ ಬಳಿಕ ಅವನ ಪ್ರವೃತ್ತಿ ಬದಲಾಯಿತು:

"ದೆವ್ವ ಬಡಿಯ ಇದಕ್ಕೆಲ್ಲ, ಪೆಶ್ಕೋವ್! ಹೋಟೆಲಿಗೆ ಹೋಗಿ ಒಂದಿಷ್ಟು ಏನಾದರೂ ತಿನ್ನೋಣ! ಮನೆಗೆ ಹೋಗಬೇಕೂಂತ ನನಗನಿಸೋದಿಲ್ಲ!"

ಬಾಡಿಗೆ ಎಷ್ಟೆಂದು ಚೌಕಾಶಿಮಾಡದೆಯೇ ಆತ ಒಂದು ಹಿಮಗಾಡಿಯನ್ನೇರಿದ. ಹೋಟೆಲನ್ನು ನಾವು ತಲಪುವವರೆಗೂ ಅವನು ಮೌನವಾಗಿಯೇ ಇದ್ದ. ಅಲ್ಲೊಂದು ಮೂಲೆಯಲ್ಲಿ ಒಂದು ಮೇಜನ್ನು ಹಿಡಿದು, ತಕ್ಷಣವೇ, ಯಾವುದೋ ಆಳವಾದ ನೋವಿನಿಂದ ಕೆರಳಿದವನಂತೆ, ಆಗಾಗ್ಗೆ ಅತ್ತಿತ್ತ ನೋಡುತ್ತ, ಮೃದುವಾಗಿ ಮಾತನಾಡತೊಡಗಿದ:

"ನನ್ನ ಪುಗ್ಗೆಯನ್ನು ತೂತುಮಾಡ್ಬಿಟ್ಟ ಆ ಮುದಿ ಆಡು; ನನ್ನ ಮನಃಸ್ಥಿತೀನ ಎಂದೂ ಇದ್ದಿರದಷ್ಟು ಕೆಡಿಸಿಬಿಟ್ಟ. ಕೇಳು, ನೀನು ಬಹಳ ಓದುವಾತ, ವಿಚಾರ ಮಾಡುವಾತ—ಇದನ್ನು ಹ್ಯಾಗಪ್ಪ ನೀನು ವಿವರಿಸ್ತೀ? ವರ್ಷವರ್ಷಗಳ ಕಾಲ ಇಲ್ಲಿ ನಾನು ಜೀವಿಸ್ತಾ ಬರ್ತಿದೇನೆ; ನಾಲ್ವತ್ತು ವರ್ಷಗಳ ಕಾಲವಿದೆ ನನ್ನ ಹಿಂದೆ. ಹೆಂಡತಿ ಮಕ್ಕಳಿದ್ದಾರೆ. ಹೃದಯ ತೆರೆದು ಮಾತನಾಡೋದಕ್ಕೆ ಮಾತ್ರ ಈ ಪ್ರಪಂಚದಲ್ಲಿ ಯಾರೂ ಇಲ್ಲ. ಯಾರ ಎದುರಿಗಾದರೂ ನನ್ನ ಹೃದಯವನ್ನು ತೋಡ್ಕೊಳ್ಳಲೇಬೇಕು, ಹೇಳೋದಕ್ಕೆ ಏನೇನಿದೆಯೋ ಅದನ್ನೆಲ್ಲಾ ಹೇಳಲೇಬೇಕು, ಅಂತ ಅನಿಸೋ ಘಳಿಗೆಗಳು ಬರ್ತವೆ. ಆದರೆ ಹೇಳೋದಕ್ಕೆ ಮಾತ್ರ, ಯಾರೂ ಇಲ್ಲ! ಆಕೆಗೆ ಅಂದರೆ ಹೆಂಡತಿಗೆ—ಹೇಳಿದೆ ಅಂದರೆ, ಅದು ಅವಳಿಗೆ ಮುಟ್ಟೋದೇ ಇಲ್ಲ. ಅವಳಿಗೆ ಏನಾಗಬೇಕಾಗಿದೆ ಅದರಿಂದ? ಅವಳಿಗೆ ತನ್ನ ಮಕ್ಕಳಿವೆ, ಮನೆ ಇದೆ, ಮಾಡಬೇಕಾದ ಕೆಲಸಗಳಿವೆ. ಅವಳಿರೋದು ನನ್ನ ಆತ್ಮದ ಹೊರಗೆ. ಮೊದಲನೇ ಮಗು ಬರೋವರೆಗೂ ನಿನ್ನ ಹೆಂಡತಿ ನಿನ್ನ ಸ್ನೇಹಿತೆ....ಅದು ಇರೋದೇ ಹಾಗೆ. ಒಟ್ಟಿನಲ್ಲಿ ನನ್ನ ಹೆಂಡತಿ-ಇದೆಲ್ಲಾ ನಿನಗೆ ತಿಳಿದೇ ಇದೆ—ಅವಳ ಜತೆ ವಿನೋದ ಅನ್ನೋದಿಲ್ಲ—ಬರೇ ಮಾಂಸದ ಮುದ್ದೆ, ಸುಡಲಿ ಅದನ್ನೆಲ್ಲ! ಛೆ, ತಮ್ಮ, ಎಂಥ ಹೃದಯವೇದನೆ!"

ಮೈ ಕಂಪಿಸುತ್ತಿದ್ದಂತೆ, ತಣ್ಣಗಿನ ಕಹಿಯಾದ ಬೀರನ್ನು ಕುಡಿದು, ತನ್ನ ತಲೆಗೂದಲ ಮೇಲೆ ಕೈಯಾಡಿಸುತ್ತ, ಮೌನವಾಗಿ ಕುಳಿತ. ಸ್ವಲ್ಪ ಹೊತ್ತಿನ ಬಳಿಕ ಪುನಃ ಮಾತನಾಡತೊಡಗಿದ:

"ಒಟ್ಟಿನಲ್ಲಿ, ತಮ್ಮ, ಜನರೆಲ್ಲಾ ಹಾದರಕ್ಕೆ ಹುಟ್ಟಿದೋರು. ಆ ರೈತರ ಜತೆ ಈ ವಿಷಯ ಆ ವಿಷಯ ಮಾತನಾಡೋಕೆ ನಿನಗೆ ಇಷ್ಟ ಅಂತ ನಾನು ಬಲ್ಲೆ. ಪರಿಸ್ಥಿತಿ ಎಷ್ಟೊಂದು ತಪ್ಪಾದ್ದು, ಎಷ್ಟೊಂದು ಕೊಳೆತದ್ದು, ಅನ್ನೋದೆಲ್ಲಾ ನನಗೆ ಚೆನ್ನಾಗಿ ತಿಳೀತದೆ. ಅದು ನಿಜ, ತಮ್ಮ. ಆ ಜನರೆಲ್ಲಾ ಕಳ್ಳರು. ನಿನ್ನ ಮಾತು ಅವರ ಮೇಲೆ ಪರಿಣಾಮ ಮಾಡ್ತದೆ ಅಂತ ತಿಳಕೊಂಡಿ

ದೀಯೇನು? ಏನೇನೂ ಇಲ್ಲ. ಪಿಯೋತರ್ ಮತ್ತು ಒಸಿಪರನ್ನು ತಗೋ—ಅವರು ನೀಚರು
ಅವರು ಬಂದು, ನೀನು ಹೇಳೋದನ್ನೆಲ್ಲಾ ನನಗೆ ತಿಳಿಸ್ತಾರೆ; ನನ್ನ ವಿಷಯ ಹೇಳಿದ್ದರೂ ಕೂಡ
ತಿಳಿಸ್ತಾರೆ. ಹೂಂ. ಏನಂತೀಯೊ ಇದಕ್ಕೆ?"

ಉತ್ತರವೀಯುವುದೇ ಸಾಧ್ಯವಾಗದಷ್ಟು ನಾನು ಅಪ್ರತಿಭನಾದೆ.

ನನ್ನ ಯಜಮಾನ ಸಣ್ಣನೆ ನಕ್ಕು ಅಂದ:

"ಅಗೋ! ನೋಡಿದೆಯಾ! ಪರ್ಶಿಯಾಕ್ಕೆ ಹೋಗಬೇಕೂಂತ ನೀನು ಅಂತಿದ್ದೆಯಲ್ಲ—
ಅದು ಒಳ್ಳೆಯ ವಿಚಾರ. ಕಡೆಯ ಪಕ್ಷ, ಜನ ಅಲ್ಲಿ ಏನು ಹೇಳ್ತಿದಾರೆ ಅನ್ನೋದಾದರೂ ನಿನ
ಗೊತ್ತಾಗೋದಿಲ್ಲ—ಪರಕೀಯ ಭಾಷೆ. ಆದರೆ ನಿನ್ನ ಭಾಷೆಯಲ್ಲೇ ಇರೋದು ಹೊಲಸಿ
ಹೊರತು ಬೇರೇನೂ ಅಲ್ಲ."

"ನಾನು ಹೇಳೋದನ್ನು ಒಸಿಪ್ ನಿನಗೆ ತಿಳಿಸ್ತಾನೇನು?" ಎಂದು ನಾನು ಪ್ರಶ್ನಿಸಿದೆ.

"ಓಹೋ, ಹೌದು. ಆಶ್ಚರ್ಯವಾಯ್ತೆ? ಎಲ್ಲರಿಗಿಂತ ಹೆಚ್ಚಾಗಿ ಹೇಳೋದು ವಾಚಾ
ಯಾದ ಅವನೇ. ಅವನು ತಂತ್ರದ ನರಿ, ತಮ್ಮ. ಇಲ್ಲ, ಪೆಶ್ಕೋವ್. ಮಾತು ಜನರ ಮೇಲೆ ಪ
ಣಾಮ ಮಾಡೋದಿಲ್ಲ. ಸತ್ಯ? ಯಾರಿಗೆ ಬೇಕಾಗಿದೆ ಅದನ್ನು ಕೇಳೋದು? ಅದು ಶರತ್ಕಾಲದ
ಬೀಳೋ ಹಿಮದ ಹಾಗೆ. ಕೆಸರಿಗೆ ಬಿದ್ದು ಕರಗಿಹೋಗ್ತದೆ. ಎಳಿಯೋದು, ಮತ್ತಷ್ಟು ಕೆಸರ
ಹೊರತು, ಬೇರೇನೂ ಇಲ್ಲ. ನೀನು ತೆಪ್ಪಗಿರೋದು ಮೇಲು."

ಒಂದು ಗಾಸಿನ ಅನಂತರ ಒಂದಾಗಿ ಆತ ಬೀರ್ ಕುಡಿದ. ಮತ್ತೇರಿಸಿಕೊಳ್ಳದೆಯೆ
ಹೆಚ್ಚು ವೇಗವಾಗಿ, ಹೆಚ್ಚು ದ್ವೇಷದಿಂದ ಮಾತನಾಡಿದ:

"ಗಾದೆಯೇ ಇದೆ—ಮೌನ ಬಂಗಾರ, ಮಾತು ಕೊಳಚೆ, ಅಂತ. ಹ್ಞ, ತಮ್ಮ—ಇ
ವ್ಯಥೆಯ ಒಂಟಿಬದುಕು! 'ನಮ್ಮ ಹಳ್ಳಿಯಲ್ಲಿ ಇಲ್ಲ ಗೆಳೆಯರೊಬ್ಬರೂ' ಅಂತ ಅವನು ಹಾಡಿ
ನಲ್ಲ, ಅದು ನಿಜ...."

ತನ್ನ ಸುತ್ತಲೊಮ್ಮೆ ದೃಷ್ಟಿಬೀರಿ, ಸ್ವರವನ್ನಾತ ತಗ್ಗಿಸಿದ:

"ಸ್ವಲ್ಪ ಸಮಯದ ಹಿಂದೆ, ಇನ್ನೇನು—ಒಂದು ಆತ್ಮೀಯ ಚೇತನ ನನಗೆ ಸಿಕ್ಕಿತು—
ಎನ್ನುವಂತಾಯ್ತು. ಇಲ್ಲಿ ಒಬ್ಬಳು ಹೆಂಗಸನ್ನು ನಾನು ಸಂಧಿಸಿದೆ. ವಿಧವೆ. ಅಂದರೆ—ಖೋ
ನಾಣ್ಯ ತಯಾರಿಸಿದ್ದಕ್ಕಾಗಿ ಅವಳ ಗಂಡನಿಗೆ ಸೈಬೀರಿಯಾಕ್ಕೆ ಗಡೀಪಾರಾಗಿತ್ತು. ಅವನಿನ
ಇಲ್ಲಿ ಸೆರೆಮನೇಲಿದಾನೆ. ಹೂಂ. ನನಗೆ ಅವಳ ಪರಿಚಯವಾಯ್ತು. ಅವಳ ಕೈಯಲ್ಲಿ ಒಂ
ಕೊಪೆಕ್ ಕೂಡಾ ಇರಲಿಲ್ಲ. ಆದ್ದರಿಂದ ಅವಳು ತೀರ್ಮಾನ ಮಾಡಿದ್ಳು—ಗೊತ್ತಿಲ್ಲ....ಒ
ದಲ್ಲಾಳಿ ನಮ್ಮಿಬ್ಬರನ್ನು ಪರಸ್ಪರ ಪರಿಚಯಮಾಡಿಕೊಟ್ಟ. ನಾನು ಅವಳ ಕಡೆಗೊ
ನೋಡಿದೆ—ಎಂಥ ಮುದ್ದಾದ ಪುಟ್ಟಪ್ರಾಣಿಯಾಗಿದ್ದಳು ಆಕೆ! ಹೀಗಾಗಿ ನಾನು ಅವಳನ
ಸಂದರ್ಶಿಸತೊಡಗಿದೆ—ಒಮ್ಮೆ, ಎರಡು ಬಾರಿ—ಆ ಮೇಲೆ ಅವಳಿಗೆ ನಾನೆಂದೆ: ನಿನ್ನ ಗಂ
ಸೆರೆಮನೇಲಿರುತ್ತ, ನೇರಮಾರ್ಗದಲ್ಲಿ ನೀನು ಯಾಕಿಲ್ಲ? ಸೈಬೀರಿಯಾಕ್ಕೆ ಅವನ ಜತೆ ನೀ
ಯಾಕೆ ಹೋಗ್ಬೇಕು? ಗಡೀಪಾರಾದವನನ್ನು ಹಿಂಬಾಲಿಸಿ ಹೋಗಲು ಅವಳು ಏರ್ಪಾ
ಮಾಡ್ಕೋತಿದ್ಳು. ಹಾಗೆ ಅಂದದ್ದಕ್ಕೆ ನನಗೆ ಅವಳಂತಾಳೆ: ಅವನು ಏನೇ ಇರಲಿ, ನನಗೆ ಅ
ಸಾಕು. ಯಾಕಂದರೆ, ನಾನು ಅವನನ್ನು ಪ್ರೀತಿಸ್ತೀನಿ. ಪ್ರಾಯಶಃ ನನಗೋಸ್ಕರ ಅವ

ಪ್ಪುಮಾಡಿರಬಹುದು ; ಅವನಿಗೋಸ್ಕರ ನಿನ್ನ ಜತೆ ನಾನು ಈ ಸಂಬಂಧ ಬೆಳೆಸಿದೀನಿ. ಅವನಿಗೆ ಣಬೇಕಾಗಿದೆ. ಅವನು ಸದ್ಗೃಹಸ್ಥ—ಒಳ್ಳೇ ರೀತಿಯಲ್ಲಿ ಜೀವಿಸಿಯೇ ಅವನಿಗೆ ಅಭ್ಯಾಸ. ನು ಒಬ್ಬಳೇ ಆಗಿದ್ದಿದ್ದರೆ ಪ್ರಾಮಾಣಿಕವಾಗಿ ಜೀವಿಸ್ತಿದ್ದೆ. ನೀನೂ ಒಳ್ಳೆಯವನು. ನಿನ್ನ ಷಯದಲ್ಲಿ ನನಗೂ ಒಲವು ಬೆಳೆದಿದೆ. ಆದರೆ ಈ ವಿಷಯ ನೀನು ನನ್ನ ಜತೆ ಮುಂದೆಂದೂ ತಾಡಕೂಡದು.......ಸುಡಲಿ ಇದನ್ನೆಲ್ಲ!.... ನನ್ನಲ್ಲಿ ಇದ್ದದ್ದನ್ನೆಲ್ಲಾ ನಾನು ಆಕೆಗೆ ಕೊಟ್ಟೆ; ನೂರು ಎಂಬತ್ತು ರೂಬಲುಗಳಿಗಿಂತಲೂ ಹೆಚ್ಚು ಇದ್ದಿರಬೇಕು. ಕೊಟ್ಟು ಅವಳೊಡನೆ ಅಂದೆ; ನ್ನನ್ನು ಕ್ಷಮಿಸು. ಇನ್ನು ನಿನ್ನನ್ನು ಕಾಣ್ಣೋದು ನನ್ನಿಂದಾಗದು; ಅದು ಎಷ್ಟು ಮಾತ್ರಕ್ಕೂ ನ್ನಿಂದ ಸಾಧ್ಯವಾಗದು. ಹಾಗೆ ಹೇಳಿ, ಆಗಿಂದಾಗಲೇ, ನಾನು ಹೊರಟು ಹೋದೆ....."

ಮತ್ತೇರಿ, ಒಮ್ಮಿಂದೊಮ್ಮೆಲೆ ಕುಸಿದುಬೀಳುವಂತೆ ಅನಿಸಿದ ತುಸು ಹೊತ್ತಿನ ಬಳಿಕ, ಆತ ಸ್ಪಷ್ಟವಾಗಿ ಅಂದ:

"ನಾನು ಆರುಸಲ ಆಕೆಯ ಜತೆ ಇದ್ದೆ....ಅದು ಹೇಗಿತ್ತೂಂತ ಕಲ್ಪಿಸೋದು ಕೂಡಾ ನ್ನಿಂದ ಸಾಧ್ಯವಾಗದು! ಅವಳು ವಾಸವಾಗಿದ್ದಲ್ಲಿಗೆ ಮತ್ತೂ ಒಂದು ಆರುಸಲ ನಾನು ಹೋಗಿರ ೇಕು ಅನಿಸುತ್ತೆ—ಆದರೆ ಒಳಹೋಗೋ ಧೈರ್ಯ ಇರಲಿಲ್ಲ. ಒಳಹೋಗೋದು ನನ್ನಿಂದಾಗ ಲ್ಲ. ಈಗ ಆಕೆ ಇಲ್ಲ; ಹೋಗಿಬಿಟ್ಟಿದಾಳೆ...."

ಆತ ತನ್ನ ಕೈಗಳನ್ನು ಮೇಜಿನ ಮೇಲಿರಿಸಿ, ಬೆರಳುಗಳಿಂದ ಅದನ್ನು ತಟ್ಟತೊಡಗಿದ.

ಅವನು ಪಿಸುನುಡಿದ:

"ದೇವರ ದಯದಿಂದ ಅವಳನ್ನು ಪುನಃ ನಾನೆಂದೂ ಸಂಧಿಸಲಾರೆ ಅನಿಸುತ್ತೆ. ಹಾಗಾಗ ಂತೆ ದೇವರುಮಾಡಲಿ! ಹಾಗೇನಾದರೂ ಆಯಿತೆಂದರೆ ಅದೇ ಅವಸಾನವಾಗ್ತದೆ! ಬಾ, ಮನೆಗೆ ಹೋಗೋಣ—ಬಾ, ಬಾ!"

ನಾವು ಹೊರಹೋದೆವು. ಆತ ಎಡವುತ್ತ, ಗೊಣಗುತ್ತ, ಇದ್ದ:

"ಈಗ, ನೋಡು, ತೆಮ್ಮ....."

ಆತ ನನ್ನೊಡನೆ ಹೇಳಿದ ಸಂಗತಿ ನನ್ನನ್ನೇನೂ ಆಶ್ಚರ್ಯಕ್ಕೆ ಗುರಿಪಡಿಸಲಿಲ್ಲ. ಕಳೆದ ಲ್ಪ ಸಮಯದಿಂದ, ಅಸಾಧಾರಣವಾದುದೇನೋ ಅವನಿಗೆ ಸಂಭವಿಸುತ್ತಿದೆಯೆಂದು ನಾನು ಹಿಸಿಯೇ ಇದ್ದೆ.

ಆದರೆ, ಬದುಕಿನ ಬಗೆಗೆ ಅವನು ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ, ಅದರಲ್ಲೂ ವಿಶೇಷ ಾಗಿ ಒಸಿಪನನ್ನು ಕುರಿತು ಅವನು ಹೇಳಿದ್ದ ಮಾತುಗಳಿಂದ, ನನ್ನ ಮನಸ್ಸು ಬಹಳವಾಗಿ ಕುಗ್ಗಿ ಹೋಯಿತು.

೨೦

ಆ ನಿರ್ಜೀವ ಶಹರದಲ್ಲಿ ಓವರ್‌ಸೀಯರನಾಗಿ, ಬರಿದು ಕಟ್ಟಡಗಳ ನಡುವೆ, ಕೆಲಸಗಾರರು ತಿ ಶರತ್ಕಾಲವೂ ನಾಜೂಕಿಲ್ಲದ ಕಲ್ಲಿನ ಅಂಗಡಿಗಳನ್ನು ಕಳಚಿ ಪ್ರತಿ ವಸಂತದಲ್ಲಿ ಪುನಃ ಅವು

ಗಳನ್ನು ಕಟ್ಟುವುದನ್ನು ನೋಡುತ್ತ, ಮೂರು ಬೇಸಗೆಗಳ ಪರ್ಯಂತ ನಾನು ದುಡಿದೆ.

ತಾನು ನನಗೆ ಕೊಡುತ್ತಿದ್ದ ಐದು ರೂಬಲುಗಳ ಮೌಲ್ಯದ ದುಡಿಮೆ ತಪ್ಪದೆ ನನ್ನಿಂದ ದೊರೆಯುವಂತೆ, ನನ್ನ ಯಜಮಾನ ಖಚಿತಪಡಿಸಿದ್ದ. ಯಾವುದಾದರೂ ಅಂಗಡಿಗೆ ಹೊಸ ನೆಲವನ್ನು ಅಣಿಗೊಳಿಸಬೇಕಿದ್ದರೆ, ನೆಲದ ಇಡೀ ಮೈಯಿಂದ ಸುಮಾರು ಎರಡು ಅಡಿಗಳ ಆಳದಷ್ಟು ಮಣ್ಣನ್ನು ನಾನು ತೆಗೆದುಹಾಕಬೇಕಾಗುತ್ತಿತ್ತು. ಇಂಥ ದುಡಿಮೆಗಾಗಿ ಸಾಧಾರಣ ಕೆಲಸಗಾರರಿಗೆ ಒಂದು ರೂಬಲು ದೊರೆಯುತ್ತಿತ್ತು; ನನಗೆ ಏನನ್ನೂ ಕೊಡಲಾಗುತ್ತಿರಲಿಲ್ಲ. ಆದರೆ ಈ ಕೆಲಸದಲ್ಲಿ ನಿರತನಾಗಿದ್ದಾಗ, ಬಡಗಿಗಳ ಮೇಲೆ ಕಣ್ಣಿಡುವುದು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಅವರು, ಅಂಥ ಪರಿಸ್ಥಿತಿಯ ಲಾಭಪಡೆದು, ಬೀಗಗಳನ್ನು ಬಾಗಿಲಿನ ಹಿಡಿಗಳನ್ನೂ ಕೀಳುತ್ತಿದ್ದರು; ಮತ್ತು ಇತರ ಪುಟ್ಟ ಕಳವುಗಳನ್ನು ಮಾಡುತ್ತಿದ್ದರು.

ಕೆಲಸಗಾರರು ಕಂಟ್ರಾಕ್ಟರರು—ಇಬ್ಬಗೆಯವರೂ ಪ್ರತಿಯೊಂದು ವಿಧದಲ್ಲೂ ನನ್ನನ್ನು ಮೋಸಗೊಳಿಸಲು ಯತ್ನಿಸುತ್ತಿದ್ದರು. ಯಾವುದೋ ಅತ್ಯಗತ್ಯದ ಒತ್ತಡಕ್ಕೆ ಒಳಗಾದವರಂತೆ ಹೆಚ್ಚುಕಡಮೆ ಬಹಿರಂಗವಾಗಿಯೇ ಕದಿಯುತ್ತಿದ್ದರು. ನಾನು ಅವರನ್ನು ಹಿಡಿದಾಗ ಅವರೆಂದೂ ಸಿಟ್ಟುಗೊಳ್ಳುತ್ತಿರಲಿಲ್ಲ; ಬದಲು ಅಚ್ಚರಿಯಿಂದ ಅನ್ನುತ್ತಿದ್ದರು:

"ಅವೇನು ಇಪ್ಪತ್ತು ರೂಬಲುಗಳೇನೋ ಅನ್ನೋ ಹಾಗೆ ಆ ನಿನ್ನ ಐದು ರೂಬಲುಗಳಿಗಾಗಿ ನೀನು ಶ್ರಮಪಡ್ತೀಯಾ! ನಿನ್ನನ್ನು ನೋಡ್ತಾ ಇದ್ದರೆ ನಗುಬರುತ್ತಪ್ಪ!"

ನನ್ನನ್ನು ದುಡಿಸುವುದರ ಮೂಲಕ ಒಂದು ರೂಬಲು ಉಳಿಸಲು ಹೋಗಿ ಅದಕ್ಕಿಂತ ಎಷ್ಟೋ ಹೆಚ್ಚು ನಷ್ಟಕ್ಕೆ ಒಳಗಾಗುತ್ತಿರುವನೆಂದು, ನನ್ನ ಯಜಮಾನನಿಗೆ ನಾನು ತಿಳಿಯ ಹೇಳಿದೆ.

"ನನ್ನ ಕಣ್ಣಿಗೆ ಮಣ್ಣೆರಚೋಕೆ ಯತ್ನಿಸ್ಬೇಡ!" ಎಂದಷ್ಟೇ ಆತ ಕಣ್ಣು ಮಿಟಿಕಿಸಿ ಉತ್ತರವಿತ್ತ.

ಕದಿಯುವವರ ಜತೆ ನಾನು ಸಹಕರಿಸುತ್ತಿರುವೆನೆಂಬ ಸಂದೇಹ ಅವನಿಗಿತ್ತೆಂಬುದನ್ನು ನಾನು ಮನಗಂಡೆ. ಇದರಿಂದ ನಾನು ನೊಂದುಕೊಳ್ಳಲಿಲ್ಲ; ಬದಲು ಅವನ ಬಗೆಗೆ ನನಗೆ ತಿರಸ್ಕಾರವೆನಿಸಿತು. ವಸ್ತುಸ್ಥಿತಿ ಇದ್ದುದೇ ಹಾಗೆ. ಪ್ರತಿಯೊಬ್ಬರೂ ಕದಿಯುತ್ತಿದ್ದರು. ಇನ್ನೊಬ್ಬರ ಸ್ವತ್ತನ್ನು ವಶಪಡಿಸಿಕೊಳ್ಳುವ ವಿಷಯದಲ್ಲಿ ಸ್ವತಃ ನನ್ನ ಯಜಮಾನನೂ ಹಿಂದುಮುಂದು ನೋಡುತ್ತಿರಲಿಲ್ಲ.

ಜಾತ್ರೆ ಮುಗಿದಾಗ, ಏನೇನು ದುರಸ್ತಿ ಅವಶ್ಯವಿದೆಯೆಂದು ನೋಡಲು ಅಂಗಡಿಗಳನ್ನೆಲ್ಲಾ ಅವನು ಪರಿಶೀಲಿಸುತ್ತಿದ್ದ. ಅನೇಕವೇಳೆ, ಮರೆತು ಹೋಗಿದ್ದ ಚಾದಾನಿಗಳು, ಲೋಟತಟ್ಟೆಗಳು, ಶಗ್ಗುಗಳು, ಕತ್ತರಿಗಳು, ಎಷ್ಟೋಸಾರೆ ಸಾಮಾನು ತುಂಬಿದ್ದ ಸಣ್ಣದೊಡ್ಡ ಪಟ್ಟಿಗೆಗಳು ಕೂಡಾ, ಅವನ ದೃಷ್ಟಿಗೆ ಬೀಳುತ್ತಿದ್ದುವು. ಅವುಗಳನ್ನು ಕಂಡಾಗ ಚುಟುಕಾಗಿ ನಕ್ಕು ಅವನೆನ್ನುತ್ತಿದ್ದ:

"ಈ ಸಾಮಾನುಗಳ ಒಂದು ಪಟ್ಟಿಮಾಡಿ, ಇವನ್ನು ದಾಸ್ತಾನು ಮನೆಯಲ್ಲಿಡು."

ದಾಸ್ತಾನು ಮನೆಯಿಂದ ಕೆಲ ಸಾಮುಗ್ರಿಗಳನ್ನು ತನ್ನ ಮನೆಗೇ ಅವನು ತರಿಸಿಕೊಳ್ಳುತ್ತಿದ್ದ. ಈ ಸಾಮಾನುಗಳನ್ನು ಬಿಟ್ಟು, ಹೊಸದಾಗಿಯೇ ಪಟ್ಟಿ ತಯಾರಿಸುವಂತೆ ನನಗೆ ಹೇಳುತ್ತಿದ್ದ.

ಸೊತ್ತುಗಳ ವಿಷಯದಲ್ಲಿ ನನಗೆ ಒಲವಿರಲಿಲ್ಲ. ನನ್ನ ಸ್ವಂತದ್ದಾಗಿ ಏನನ್ನು ಇಟ್ಟು

ಕೊಳ್ಳುವ ಅಪೇಕ್ಷೆಯೂ ನನಗಿರಲಿಲ್ಲ. ಪುಸ್ತಕಗಳು ಕೂಡಾ ಹೊರೆಯಾಗಿದ್ದುವು. ಬಿರೇಂಜರನದೊಂದು ಪುಟ್ಟ ಸಂಕಲನ ಹಾಗೂ ಹೇಯ್ನನ ಹಾಡುಗಳು—ಇವಿಷ್ಟೇ ನನ್ನಲ್ಲಿದ್ದ ಸೊತ್ತುಗಳು. ಪುಷ್ಕಿನ್ನನ ಕೃತಿಯನ್ನು ಕೊಳ್ಳಬೇಕೆಂದು ನಾನು ಇಚ್ಛಿಸಿದ್ದೆ. ಆದರೆ, ಶಹರದ ಏಕಮಾತ್ರ ಹಳೇ ಪುಸ್ತಕವ್ಯಾಪಾರಿಯಾದ ಜಗಳಗಂಟ ಮುದುಕ, ಅದಕ್ಕೆ ಬಹಳ ಬೆಲೆ ಕೇಳಿದ್ದ. ನನ್ನ ಯಜಮಾನನ ವಸತಿಯಲ್ಲಿ ತುಂಬಿದ್ದ ಪೀಠೋಪಕರಣಗಳು, ರಗ್ಗುಗಳು, ಕನ್ನಡಿಗಳು ಮತ್ತಿತರ ಸಾಮಗ್ರಿಗಳು—ಇವನ್ನೆಲ್ಲ ನಾನು ಇಷ್ಟಪಡಲಿಲ್ಲ. ಅವುಗಳ ಅತಿಯಾದ ಗಾತ್ರವೂ ಅವು ಹೊರ ಸೂಸುತ್ತಿದ್ದ ಜಿಡ್ಡಿನ ಕಲೆ ಹಾಗೂ ಬಣ್ಣದ ವಾಸನೆ ನನಗೆ ಸಹ್ಯವಾಗುತ್ತಿರಲಿಲ್ಲ. ಒಟ್ಟಿನಲ್ಲಿ, ನನ್ನ ಮಾಲಿಕರ ಕೊಠಡಿಗಳು ನನಗೆ ಅಪ್ರಿಯವಾಗಿದ್ದುವು. ಎಲ್ಲಾ ತರಹೆ ಕಲ್ಮಷದಿಂದ ತುಂಬಿದ್ದ ಟ್ರಂಕುಗಳ ನೆನಪನ್ನು ಅವು ನನಗೆ ಮಾಡಿಕೊಡುತ್ತಿದ್ದುವು. ಹೀಗಿರುತ್ತ ನನ್ನ ಯಜಮಾನ, ಇತರ ಜನರ ವಸ್ತುಗಳನ್ನೂ ಕಳ್ಳತನದಿಂದ ತನ್ನ ಮನೆಗೊಯ್ದು, ತನ್ನ ಸುತ್ತಲಿನ ಅನಗತ್ಯ ಸಾಮುಗ್ರಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದುದು, ಮತ್ತಷ್ಟು ಹೇಸಿಕೆಯದಾಗಿತ್ತು. ಮಾರ್ಗೊಟ್‌ರಾಣಿಯ ವಸತಿಯಲ್ಲೂ ಪೀಠೋಪಕರಣಗಳು ತುಂಬಿರುತ್ತಿದ್ದುವು. ಆದರೆ ಅವುಗಳಿಗೊಂದು ಸೊಬಗಾದರೂ ಇತ್ತು.

ಸ್ವತಃ ಬದುಕೇ ಕೀಲುಕಳಚಿದ್ದಂತೆ, ಅಡ್ಡಾದಿಡ್ಡಿಯಾಗಿದ್ದಂತೆ, ಅರ್ಥಹೀನವೆಂದು ಸ್ವಯಂವ್ಯಕ್ತವಾಗುವ ಹೇರಳ ಅಂಶದಿಂದ ಕೂಡಿದ್ದಂತೆ, ನನಗೆ ಅನಿಸುತ್ತಿತ್ತು. ಇಲ್ಲಿ ನಾವೇನೋ ಅಂಗಡಿಗಳನ್ನು ದುರಸ್ತಿಪಡಿಸುತ್ತಿದ್ದೆವು. ಆದರೆ, ವಸಂತದ ಮಹಾಪೂರದಲ್ಲಿ ಅವು ಮುಳುಗಿ ಹೋಗುವಂಥವೇ. ಹಾಗೆ ಮುಳುಗಿ ನೆಲಗಳು ಉಬ್ಬಿಕೊಳ್ಳುತ್ತಿದ್ದುವು; ಬಾಗಿಲುಗಳು ಜೋತುಬೀಳುತ್ತಿದ್ದುವು. ನೀರು ಇಳಿದಾಗ ಛಾವಣಿಯ ತೊಲೆಗಳು ಕೊಳೆಯುತ್ತಿದ್ದುವು. ಪ್ರತಿ ವರ್ಷವೂ ಹತ್ತಾರುವರ್ಷಗಳ ಅವಧಿಯವರೆಗೆ ಜಾತ್ರೆಯ ಬಯಲುಗಳಲ್ಲಿ ನೀರು ತುಂಬಿರುತ್ತಿತ್ತು. ಕಟ್ಟಡಗಳಿಗೂ ಕಲ್ಲುಹಾಸುಗಳಿಗೂ ಧಕ್ಕೆಯುಂಟುಮಾಡುತ್ತಿತ್ತು. ಪ್ರತಿ ವರ್ಷದ ಈ ಮಹಾಪೂರದಿಂದ ಅಪಾರ ನಷ್ಟವಾಗುತ್ತಿತ್ತು. ತಾವಾಗಿಯೇ ಈ ಮಹಾಪೂರಗಳು ನಿಲ್ಲವೆಂಬುದನ್ನು ಪ್ರತಿಯೊಬ್ಬರೂ ತಿಳಿದಿದ್ದರು.

ಪ್ರತಿವಸಂತದಲ್ಲೂ ಮಂಜುಗಡ್ಡೆಯ ಸ್ಫೋಟ, ಫತೇಮಾರುಗಳನ್ನೂ ಹಲವಾರು ಪುಟ್ಟ ದೋಣಿಗಳನ್ನೂ ನಾಶಮಾಡುತ್ತಿತ್ತು. ಜನರು ನಿಟ್ಟುಸಿರುಬಿಟ್ಟು ನರಳಾಡಿ ಹೊಸದೋಣಿಗಳನ್ನು ಕಟ್ಟುತ್ತಿದ್ದರು. ಮಂಜುಗಡ್ಡೆ ಒಡೆದಾಗ ಇವು ಪುನಃ ನಾಶವಾಗುತ್ತಿದ್ದುವು. ಜನರು ಅಂತಹ ವಿಷವೃತ್ತದಲ್ಲೇ ಉರುಳುತ್ತ ಹೋಗುವುದು ಹೇಗೆ ತಾನೆ ಸಾಧ್ಯವಿತ್ತು ?

ಈ ವಿಚಾರವಾಗಿ ನಾನು ಒಸಿಪನನ್ನು ಕೇಳಿದಾಗ, ಆತ ಅಚ್ಚರಿಗೊಂಡಂತೆ ಕಂಡ; ನನ್ನನ್ನು ಪರಿಹಾಸ್ಯಕ್ಕೀಡು ಮಾಡಿದ :

"ನೋಡು ಕಾಗೇನ—ಹ್ಯಾಗೆ ಕಾಕಾ ಅಂತಿದೆ! ಹ್ಯಾಗಾದರೇನು ? ನಿನಗೇನದರಿಂದ ?"

ಆದರೆ ತನ್ನ ನೀಲಿಕಣ್ಣುಗಳಿಂದ, ಆ ವಯಸ್ಸಿಗೆ ಅಸಾಧಾರಣವೆನಿಸುವಷ್ಟು ಸ್ವಚ್ಛವಾದ ಪುಟ್ಟ ಹೊಳೆತವನ್ನು ಅಳಿಸದೆಯೇ, ಹೆಚ್ಚು ಗಭೀರನಾಗಿ, ಆತ ಉತ್ತರವಿತ್ತ :

"ಅಂಥ ವಿಷಯುಗಳನ್ನು ನೀನು ಗಮನಿಸ್ತಿರೋದು ಜಾಣ್ಮೆಯ ಮಾತೇ ಸರಿ! ಪ್ರಾಯಶಃ ಇದು ಅಧಿಕಪ್ರಸಂಗವಿರಬಹುದು. ಅಥವಾ ಪ್ರಾಯಶಃ ಯಾವತ್ತಾದರೂ ಇದರಿಂದ ನಿನಗೆ

ಸತ್ಪ್ರಯೋಜನ ದೊರೆತರೂ ದೊರೆಯಬಹುದು. ಇಗೋ, ನೀನು ಗಮನಿಸೋದಕ್ಕೆ ಬೇರೆಯೂ ಸ್ವಲ್ಪ ಇಲ್ಲಿದೆ...."

ಹೀಗೆ ಆತ, ನಡುನಡುವೆ ಗಾದೆಗಳನ್ನು ಬೆರೆಸುತ್ತ, ಅನಿರೀಕ್ಷಿತ ಉಪಮೆಗಳನ್ನೂ ಹಾಸ್ಯೋಕ್ತಿಗಳನ್ನೂ ಸೇರಿಸುತ್ತ, ನೀರಸವಾದ ಪುಟ್ಟಮಾತುಗಳ ಪ್ರವಾಹವನ್ನೇ ಹರಿಸುತ್ತ ಹೋದ.

"ಇಲ್ಲಿ ಜನ ದೂರಿಕೊಳ್ತಿದಾರೆ: ಭೂಮಿ ಏನೂ ಸಾಲದು; ವೋಲ್ಗಾ ಪ್ರತಿವಸಂತದಲ್ಲೂ ದಡಗಳನ್ನು ಕಿತ್ತುಕೊಂಡು ಹೋಗ್ತದೆ; ಮಣ್ಣನ್ನು ಪ್ರವಾಹದ ಮಧ್ಯಕ್ಕೆ ಒಯ್ದು ನೀರಿನ ಆಳವನ್ನು ಕಡಮೆ ಮಾಡ್ತದೆ. ಬೇರೆಯೇ ಜನ ಇಲ್ಲಿ ಈ ರೀತಿ ದೂರಿಕೊಳ್ತಾರೆ: ವೋಲ್ಗಾದಲ್ಲಿ ಆಳ ಕಡಮೆಯಾಗ್ಬಿಟ್ಟಿದೆ! ವಸಂತದ ಹೊಸನೀರಿನ ಪ್ರವಾಹವೂ ಬೇಸಗೆಯ ಮಳೆಗಳೂ ಕಂದರಗಳನ್ನು ಅಗೆದುಬಿಟ್ಟಿವೆ; ಭೂಮಿ ಪುನಃ ವೋಲ್ಗಾದ ಪಾಲಾಗ್ತಿದೆ!"

ವಿಷಾದದ ಛಾಯೆಯಾಗಲೀ ಅನ್ಯಾಯವಾಯಿತೆನ್ನುವ ಧ್ವನಿಯಾಗಲೀ ಇಲ್ಲದೆ, ಜೀವನಕ್ಕಿದಿರಾದ ಆರೋಪಗಳನ್ನು ಕುರಿತ ತನ್ನ ಪರಿಜ್ಞಾನದ ವಿಷಯದಲ್ಲಿ ಹೆಮ್ಮೆಪಡುತ್ತಿರುವನೇನೋ ಎನ್ನುವಂತೆ, ಅವನು ಮಾತನಾಡಿದ. ಅವನ ಮಾತುಗಳು ನನ್ನ ಸ್ವಂತದ ವಿಚಾರಗಳಿಗೆ ಸರಿಹೋದುವಾದರೂ ಕೇಳಲು ಅವು ಗಡಸಾಗಿದ್ದುವು.

"ಇನ್ನೊಂದು ವಿಷಯ ಇದೆ—ಬೆಂಕಿ."

ವೋಲ್ಗಾದಾಚೆಗಿನ ಕಾಡುಗಳಿಗೆ ಬೆಂಕಿಬಿದ್ದು ಉರಿಯದೆ ಒಂದು ಬೇಸಗೆಯೂ ಕಳೆಯುತ್ತಿರಲಿಲ್ಲವೆಂಬುದನ್ನು ನಾನು ಅರಿತಿದ್ದೆ. ಪ್ರತಿ ಜೂಲೈಯಲ್ಲೂ ಆಕಾಶ, ಕಾವಿಹೊಗೆಯಿಂದ ಆವೃತವಾಗಿರುತ್ತಿತ್ತು. ಇಳಿಮುಖನಾದ ಕಿರಣಗಳಿಲ್ಲದ ಸೂರ್ಯ, ನೋವಿನ ಕಣ್ಣಿನಹಾಗೆ, ಕೆಳಕ್ಕೆ ಭೂಮಿಯತ್ತ ದಿಟ್ಟಿಸುತ್ತಿದ್ದ.

ಒಸಿಪನೆಂದ:

"ಕಾಡುಗಳು—ಅದು ದೊಡ್ಡ ವಿಷಯವಲ್ಲ. ಕಾಡುಗಳು ಶ್ರೀಮಂತರ ಅಥವಾ ಜಾರ್ ಚಕ್ರವರ್ತಿಯ ಸ್ವತ್ತು. ರೈತರದಾಗಿ ಯಾವ ಕಾಡೂ ಇರೋದಿಲ್ಲ. ನಗರಗಳೂ ಉರಿದು ಬೀಳ್ತವೆ—ಅದೂ ದೊಡ್ಡ ದುರಂತವಲ್ಲ. ನಗರಗಳಲ್ಲಿ ವಾಸವಾಗಿರೋದು ಶ್ರೀಮಂತರು—ಅವರ ವಿಷಯದಲ್ಲಿ ಕನಿಕರ ತೋರಿಸಬೇಕಾದ್ದೇ ಇಲ್ಲ. ಆದರೆ, ಪಟ್ಟಣಗಳು ಹಾಗೂ ಗ್ರಾಮಗಳನ್ನು ತಗೋ. ಬೇಸಗೆಯಲ್ಲಿ ಎಷ್ಟೊಂದು ಗ್ರಾಮಗಳು ಬೆಂಕಿಗೆ ಆಹುತಿಯಾಗೋದಿಲ್ಲ! ಕನಿಷ್ಠಪಕ್ಷ ಒಂದು ನೂರು—ಅದೀಗ ನಿಜವಾದ ನಷ್ಟ!"

ಆತ ಮೌನವಾಗಿ ನಕ್ಕ.

"ನಮ್ಮಲ್ಲಿ ಯಾತನೆ ಇದೆ, ಮೆದುಳಿಲ್ಲ. ಮನುಷ್ಯನ ಶ್ರಮದ ಲಾಭ ಅವನಿಗೂ ಸಿಗೋದಿಲ್ಲ, ಭೂಮಿಗೂ ಹೋಗೋದಿಲ್ಲ—ಬದಲು, ಬೆಂಕಿ ಮತ್ತು ನೀರಿನ ಪಾಲಾಗ್ತದೆ. ನೀನೂ ನಾನೂ ಇದನ್ನು ತಿಳೀಬಲ್ಲೆವು!"

"ಯಾಕೆ ನಗ್ತಿದೀಯಾ?"

"ಯಾಕೆ ನಗಬಾರದು? ಬೆಂಕಿಯನ್ನು ಕಣ್ಣೀರಿನಿಂದ ನಂದಿಸೋಕೆ ಆಗುತ್ತೇನು? ಕಣ್ಣೀರು ಹರಿಸಿದರೆ ಮಹಾಪೂರ ಮತ್ತಷ್ಟು ಏರ್ತದೆ, ಅಷ್ಟೆ."

ಹಿತಕರ ನಡವಳಿಕೆಯ ಈ ಮುದುಕ, ನಾನು ಆವರೆಗೆ ಸಂಧಿಸಿದ್ದ ವ್ಯಕ್ತಿಗಳಲ್ಲೆಲ್ಲಾ ಅತ್ಯಂತ ಜ್ಞಾನಿಯೆಂಬುದು ನನಗೆ ಮನದಟ್ಟಾಯಿತು. ಆದರೆ, ಅವನಿಗೆ ಯಾವುದು ಇಷ್ಟ, ಯಾವುದು ಇಷ್ಟವಲ್ಲ—ಎಂಬುದನ್ನು ನಾನು ಕಂಡುಹಿಡಿಯದೇ ಹೋದೆ.

ಈ ವಿಚಾರವಾಗಿ ನಾನು ಯೋಚಿಸುತ್ತಿದ್ದಂತೆ, ತನ್ನ ಮಾತಿನ ಕಟ್ಟಿಗೆ ಚೂರುಗಳನ್ನು ನನ್ನ ಬೆಂಕಿಗೆ ಆತ ಎಸೆಯುತ್ತ ಹೋದ:

"ಜನರು ಶಕ್ತೀನ—ಅದು ತಪ್ಪಾದಿರಲಿ, ಬೇರೆಯವರದಿರಲಿ, ಎಷ್ಟೊಂದು ಅಪವ್ಯಯ ಮಾಡ್ತಾರೇಂತ ಸ್ವಲ್ಪ ನೋಡು! ನಿನ್ನ ಯಜಮಾನ ನಿನ್ನನ್ನು ದಣಿಸ್ತಿರೋ ದೃಷ್ಟಾಂತ ತಗೋ ಅಥವಾ ಪೋಡ್ಕಾ ಉಂಟುಮಾಡೋ ಹಾನಿಯ ಉದಾಹರಣೆ. ಇದು ಇಷ್ಟೇ ಅಂತ ಹೇಳೋದಕ್ಕೆ ಸಾಧ್ಯವಿಲ್ಲ. ಪಾಂಡಿತ್ಯವುಳ್ಳ ಮನಸ್ಸಿಗೆ ಕೂಡಾ ಇದನ್ನು ಗ್ರಹಿಸೋದು ಕಷ್ಟ. ಒಂದು ಗುಡಿಸಲು ಉರಿದು ಹೋದರೆ ಇನ್ನೊಂದನ್ನು ಕಟ್ಟಬಹುದು. ಆದರೆ, ಒಬ್ಬ ಒಳ್ಳೇಮನುಷ್ಯ ಹಾಳಾದ ಅಂದರೆ, ಅವನನ್ನು ಸರಿಪಡಿಸೋ ಮಾತೇ ಇಲ್ಲ. ದೃಷ್ಟಾಂತಕ್ಕೆ ಆರ್ಡಾಲಿಯನ್, ಅಥವಾ ಗ್ರಿಗೊರಿ. ಆ ರೈತನ ಕೊನೆ ಯಾವ ರೀತಿ ಆಗಿಹೋಯ್ತೂಂತ ಸ್ವಲ್ಪ ನೋಡು. ಗ್ರಿಗೊರಿ ಶ್ರೇಷ್ಠತಮನೇನೂ ಅಲ್ಲ,—ಆದರೂ ಅಂತಃ ಸತ್ವವಿದ್ದ ರೈತ! ಆತ ಉರಿದು ಹೋದ ರೀತಿ ನೋಡಿದರೆ, ಹುಲ್ಲಿನ ಬಣವೆಯೇನೋ ಅಂತ ಅಂದ್ಕೋಬೇಕು. ಹೆಣದಲ್ಲಿ ಹುಳಗಳು ಸೇರ್ಕೊಳ್ಳೋ ಹಾಗೆ ಹೆಂಗಸರು ಅವನಮೇಲೆ ಲಗ್ಗೆ ಇಡ್ತಿದ್ರು."

ಯಾವ ಬಗೆಯ ಕಹಿ ಭಾವನೆಯೂ ಇಲ್ಲದೆ, ಬರಿಯ ಕುತೂಹಲದಿಂದಲೇ, ನಾನು ಕೇಳಿದೆ:

"ನಾನು ಹೇಳೋದನ್ನೆಲ್ಲಾ ನನ್ನ ಯಜಮಾನನಿಗೆ ಯಾತಕ್ಕೆ ಹೋಗಿ ತಿಳಿಸ್ತೀಯಾ?"

ಆತ ಸರಳವಾಗಿ—ಮೃದುವಾಗಿಯೇ ಎನ್ನಬಹುದು—ಉತ್ತರವಿತ್ತ:

"ಅವನಿಗೆ ತಿಳಿಸೋದು, ಎಂಥೆಂಥ ಅಪಾಯಕರ ವಿಚಾರಗಳು ನಿನ್ನಲ್ಲಿವೆ ಅನ್ನೋದು ಗೊತ್ತಾಗಲೀಂತ. ನಿನಗೆ ಕಲಿಸಬೇಕಾದ ಜವಾಬ್ದಾರಿ ಅವನದು. ನಿನ್ನ ಯಜಮಾನ ಮಾಡದೇ ಹೋದರೆ ಆ ಕೆಲಸ ಬೇರೆ ಯಾರು ಮಾಡ್ತಾರೆ? ದ್ವೇಷಭಾವನೆಯಿಂದಲ್ಲ ಅವನಿಗೆ ನಾನು ಹೇಳೋದು, ಬದಲು ನಿನ್ನ ವಿಷಯದಲ್ಲಿ ನನಗಿರೋ ಕನಿಕರದ ಕಾರಣದಿಂದ. ನೀನೇನೂ ಪೆದ್ದ ಹುಡುಗನಲ್ಲ. ಆದರೆ ಆ ನಿನ್ನ ತಲೇಲಿ ಯಾವುದೋ ದೆವ್ವ ಇಲ್ಲದ್ದನ್ನು ಕೆರಳಿಸ್ತಾ ಇದೆ. ನೀನು ಏನನ್ನಾದರೂ ಕದ್ದರೆ, ನಾನು ಸುಮ್ಮಗಿರಬಲ್ಲೆ. ನೀನು ಮತ್ತೇರುವಷ್ಟು ಕುಡಿದರೂ, ಒಂದು ಮಾತು ನಾನು ಹೇಳುವವನಲ್ಲ. ಆದರೆ ಆ ನಿನ್ನ ನಿರ್ಲಜ್ಜ ವಿಚಾರಗಳ ವಿಷಯವಾಗಿ, ಯಾವಾಗಲೂ ನಿನ್ನ ಯಜಮಾನನಿಗೆ ಹೇಳಿಯೇ ಹೇಳ್ತೀನಿ. ಇದನ್ನು ನೀನು ಚೆನ್ನಾಗಿ ತಿಳಿದಿರೋದು ಮೇಲು."

"ನಿನ್ನ ಜತೆ ನಾನಿನ್ನು ಮಾತೇ ಆಡೋದಿಲ್ಲ."

ತನ್ನ ಅಂಗೈಗೆ ಸ್ವಲ್ಪ ಅಂಟಿದ್ದ ಡಾಮರನ್ನು ಕೀಳುತ್ತ ತುಸುಹೊತ್ತು ಆತ ಮೌನವಾಗಿದ್ದ. ಬಳಿಕ ನನ್ನೆಡೆಗೆ ಒಲವು ತುಂಬಿದ ನೋಟದಿಂದ ನೋಡಿ, ಅಂದ:

"ಮಾತು ಆಡಿಯೇ ಆಡ್ತೀಯಾ. ನೀನು ಹೇಳ್ತಿರೋದು ಸುಳ್ಳು. ಬೇರೆ ಯಾರ ಜತೆಯಪ್ಪ ನೀನು ಮಾತಾಡೋದು? ಯಾರೂ ಇಲ್ಲ."

ಒಸಿಪ್ ಯಾವಾಗಲೂ ಚೊಕ್ಕಟವಾಗಿ ಸ್ವಚ್ಛವಾಗಿ ಇರುತ್ತಿದ್ದರೂ ಕೂಡಾ, ಆ ಘಳಿಗೆ

ಯಲ್ಲಿ ಆತ ಉಗಿಕೆಲಸಗಾರ ಯಾಕೋವನಂತೆಯೇ ಕಂಡ. ಪ್ರತಿಯೊಬ್ಬರ ವಿಷಯದಲ್ಲೂ ಪ್ರತಿಯೊಂದರ ವಿಷಯದಲ್ಲೂ ಅಷ್ಟೊಂದು ಉಪೇಕ್ಷೆಯಿಂದ ಇದ್ದ ಆತ.

ಕೆಲವೇಳೆ ಅವನು, ಪ್ರಾಚೀನ ತತ್ವವಾದಿ ಪಿಯೋತರ್ ವಾಸಿಲ್ಯೇವಿಚನನ್ನು ಹೋಲುತ್ತಿದ್ದ; ಕೆಲವೇಳೆ ಬಂಡಿಹೊಡೆಯುವ ಪಿಯೋತರನನ್ನು; ಬೇರೆ ಕೆಲಬಾರಿ ನನ್ನ ಅಜ್ಜನಿಗೂ ಆತನಿಗೂ ಏನೋ ಸಾಮ್ಯವಿದ್ದಂತೆ ಅನಿಸುತ್ತಿತ್ತು. ನನಗೆ ಪರಿಚಯವಿದ್ದ ಮುದುಕರೆಲ್ಲರನ್ನೂ ಒಂದಲ್ಲ ಒಂದು ರೀತಿಯಲ್ಲಿ ಅವನು ಹೋಲುತ್ತಿದ್ದ. ಅವರೆಲ್ಲ, ಅದ್ಭುತವೆನಿಸುವಷ್ಟು ಸ್ವಾರಸ್ಯಕರ ವೃದ್ಧರಾಗಿದ್ದರು. ಆದರೆ, ಅವರ ಜತೆ ವಾಸಿಸುವುದು ಮಾತ್ರ ಕಠಿನವೂ ಅಸಹ್ಯವೂ ಆಗಬಹು ದೆಂದು ನನಗೆ ಅನಿಸಿತು. ತಮ್ಮ ಬುದ್ಧಿವಂತಿಕೆಯ ಸಿದ್ಧಾಂತಗಳಿಂದ ನಿಮ್ಮ ಆತ್ಮವನ್ನೆ ಅವರು ಹರಿದುತಿನ್ನುತ್ತಿದ್ದಂತೆ, ಹೃದಯವನ್ನೇ ಕೊರೆಯುತ್ತಿದ್ದಂತೆ ಭಾಸವಾಗುತ್ತಿತ್ತು. ಒಸಿಪ್ ಒಳ್ಳೆಯ ಮನುಷ್ಯನೆ?—ಅಲ್ಲ. ಕೆಟ್ಟ ಮನುಷ್ಯನೆ?—ಅಲ್ಲ. ಅವನು ಚತುರನಾಗಿದ್ದ. ಇದು ನನಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಆ ವೈವಿಧ್ಯಪೂರ್ಣ ಮನಸ್ಸಿನ ವಿಚಿತ್ರ ಸಾಮರ್ಥ್ಯ ಅದ್ಭುತ ವಾಗಿ ನನಗೆ ಕಂಡಿತಾದರೂ, ಆ ವಿಚಾರವೈಖರಿ ನನ್ನ ಮೇಲೆ ಬಲುಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆಂಬುದನ್ನೂ ನನ್ನ ಸ್ವಂತದ ವಿಚಾರಗಳಿಗೆ ಪ್ರತಿಯೊಂದು ರೀತಿಯಲ್ಲೂ ಅದು ವಿರುದ್ಧ ವೆಂಬುದನ್ನು ನಾನು ಮನಗಂಡೆ.

ಕರಿಯ ಯೋಚನೆಗಳು ನನ್ನೊಳಗೆ ಕುದಿಯತೊಡಗಿದುವು:

"ಒಲವಿನ ಮಾತು ಮುಗುಳುನಗೆ ಏನಿದ್ದರೂ ಎಲ್ಲ ಜನರೂ ಪರಸ್ಪರರಿಗೆ ಪರಕೀಯರು; ಎಲ್ಲರೂ ಪರಕೀಯರೇ. ಪ್ರೇಮದ ಬಲವಾದ ರಜ್ಜುಗಳಿಂದ ಬದುಕಿಗೆ ಯಾರೂ ಬಂಧಿತ ರಾದಂತಿಲ್ಲ. ಬದುಕನ್ನೂ ಜನರನ್ನೂ ನಿಜವಾಗಿ ಪ್ರೀತಿಸುವವಳು ಅಜ್ಜಿಯೊಬ್ಬಳೇ. ಅಜ್ಜಿ, ಮತ್ತು ಆಶ್ಚರ್ಯಕರ ವ್ಯಕ್ತಿಯಾದ ಮಾರ್ಗೊಟ್‌ರಾಣಿ."

ಕೆಲವೇಳೆ ಈ ಯೋಚನೆಗಳು ಹಾಗೂ ಇದೇ ಬಗೆಯ ಬೇರೆ ಯೋಚನೆಗಳು, ಕರಿಯ ಮೋಡಗಳಂತೆ ರಾಶಿಬೀಳುತ್ತಿದ್ದುವು. ಇದರಿಂದ ಬದುಕು ನಿರುತ್ಸಾಹಗೊಳ್ಳುತ್ತಿತ್ತು, ಉಸಿರು ಕಟ್ಟಿದಂತಾಗುತ್ತಿತ್ತು. ಆದರೆ, ಬೇರೆ ಯಾವ ಬಗೆಯ ಬದುಕು ಶಕ್ಯವಿತ್ತು? ಇದರಿಂದ ತಪ್ಪಿಸಿ ಕೊಳ್ಳುವುದು ಹೇಗೆ ಸಾಧ್ಯವಿತ್ತು? ಜತೆಮಾತನಾಡಲು ಕೂಡಾ ಒಸಿಪನ ಹೊರತಾಗಿ ಯಾರೂ ಇರಲಿಲ್ಲ. ನಾನು, ಹಿಂದಿಗಿಂತ ಹೆಚ್ಚಾಗಿಯೇ ಅವನೆಡೆಗೆ ಹೊರಳಿದೆ.

ನನ್ನ ಹೃದಯದ ಆಳದಿಂದ ಹೊರಬೀಳುತ್ತಿದ್ದ ಮಾತುಗಳಿಗೆ, ಆತ ಸುವ್ಯಕ್ತ ಆಸಕ್ತಿ ಯಿಂದ ಕಿವಿಗೊಡುತ್ತಿದ್ದ. ನನಗೆ ಪ್ರಶ್ನೆಗಳನ್ನು ಕೇಳುತ್ತಿದ್ದ. ವಿಷಯಗಳನ್ನು ತಿಳಿದು ಕೊಳ್ಳುತ್ತಿದ್ದ. ಬಳಿಕ ಶಾಂತವಾಗಿ ಅನ್ನುತ್ತಿದ್ದ:

"ಮರಕುಟಿಗ ಹಟಮಾರಿಯಾದ ಹಕ್ಕಿ. ಆದರೆ ಭೀತಿಕಾರಕವಲ್ಲ. ಯಾರೂ ಅದಕ್ಕೆ ಅಂಜುವುದಿಲ್ಲ. ನೀನು ಸನ್ಯಾಸಿ ಮಠವನ್ನು ಪ್ರವೇಶಿಸಬೇಕು ಅನ್ನೋದೇ ನನ್ನ ಮನಃಪೂರ್ವಕ ಹಿತವಚನ. ನೀನು ಪ್ರಾಪ್ತವಯಸ್ಕನಾಗೋವರೆಗೂ, ಸೊಗಸಾದ ಮಾತುಗಳಿಂದ ಭಕ್ತರನ್ನು ಸಂತೈಸುತ್ತಾ ಜೀವಿಸಬಹುದು. ನಿನಗೆ ಮಾನಸಿಕ ಶಾಂತಿ ಸಿಗ್ತದೆ; ಸನ್ಯಾಸಿಗಳಿಗೆ ಲಾಭಸಿಗ್ತದೆ. ಹೀಗೆ ಮಾಡೂಂತ ಮನಃಪೂರ್ವಕವಾಗಿ ನಿನಗೆ ಸಲಹೆ ಕೊಡ್ತಿದೀನಿ. ಈ ಜಗತ್ತಿನ ಜತೆ ಏಗೋದು ನಿನ್ನ ಕೈಲಿ ಆಗ್ತಾ ಇಲ್ಲಾಂತ ನನಗೆ ಅನಿಸ್ತದೆ."

ಸನ್ಯಾಸಿಮಠವನ್ನು ಪ್ರವೇಶಿಸುವ ಇಚ್ಛೆ ನನಗಿರಲಿಲ್ಲ. ಆದರೆ, ಅರ್ಥಗ್ರಹಣ ದುಸ್ಸಾಧ್ಯವಾದುದರ ಏಳುಸುತ್ತಿನ ಕೋಟೆಯಲ್ಲಿ ನಾನು ಹಾದಿತಪ್ಪಿದ್ದಂತೆ ನನಗೆ ಭಾಸವಾಯಿತು. ಪರಿಹಾರಕ್ಕಾಗಿ ನಾನು ಹಾತೊರೆದೆ. ಶರತ್ಕಾಲದ ಅಡವಿಗಳ ಹಾಗಿತ್ತು ಬದುಕು. ನಾಯಿಕೊಡೆಗಳು ಮುಗಿದು ಹೋಗಿದ್ದುವು; ಪ್ರತಿಯೊಂದು ಸಂದಿಗೊಂದಿಯೂ ಪರಿಚಿತವಾಗಿದ್ದ ಆ ಶೂನ್ಯದಲ್ಲಿ ಮಾಡುವಂಥದೇನೂ ನನ್ನ ಪಾಲಿಗೆ ಉಳಿದಿರಲಿಲ್ಲ.

ನಾನು ವೋಡ್ಕಾ ಕುಡಿಯಲಿಲ್ಲ; ಅಥವಾ ಹುಡುಗಿಯರ ಹಿಂದೆ ಅಲೆಯಲಿಲ್ಲ. ಆತ್ಮಕ್ಕೆ ಮತ್ತೇರಿಸುವಂತಹ ಈ ಎರಡು ವಿಧಾನಗಳ ಬದಲು ನನ್ನ ಪಾಲಿಗೆ ಪುಸ್ತಕಗಳಿದ್ದುವು. ಆದರೆ ಹೆಚ್ಚು ಓದಿದಷ್ಟೂ, ಬಹ್ವಂಶ ಜನ ಜೀವಿಸುತ್ತಿದ್ದಂತೆ ಕಂಡ ಬರಿದಾದ ಅರ್ಥಹೀನವಾದ ರೀತಿಯಲ್ಲೇ ಬದುಕುತ್ತ ಹೋಗುವುದು ಕಠಿನತರವಾಯಿತು.

ನಾನು ಅದೇ ಆಗ ಹದಿನೈದನೆಯ ವರ್ಷದಲ್ಲಿ ಕಾಲಿರಿಸಿದ್ದೆ. ಆದರೆ, ನಾನು ಮತ್ತಷ್ಟು ವಯಸ್ಕನೆಂದು ಭಾಸವಾಗುತ್ತಿದ್ದ ಕಾಲ ಅದು. ನನ್ನ ಹೃದಯ ಊದಿಕೊಂಡಿದ್ದಂತೆ, ನಾನು ಅನುಭವಿಸಿದ್ದ, ಓದಿದ್ದ, ಅಷ್ಟೊಂದು ಗೊಂದಲದಿಂದ ವಿಚಾರಮಾಡಿದ್ದ ಎಲ್ಲದರಿಂದ ಭಾರವಾಗಿದ್ದಂತೆ, ಅನಿಸಿತು. ನನ್ನ ಅನುಭಾವಗಳ ಭಂಡಾರ, ವ್ಯವಸ್ಥಿತಗೊಳಿಸಲು ಶಕ್ತಿಯಾಗಲೀ ಸಾಮರ್ಥ್ಯವಾಗಲೀ ಇರದಂತಹ ಅನೇಕಾನೇಕ ವಸ್ತುಗಳನ್ನು ಒಟ್ಟಿದ್ದ ಕತ್ತಲಿನ ಸಾಮಾನು ಕೊಠಡಿಯ ಹಾಗಿತ್ತು.

ಈ ಎಲ್ಲ ಅನುಭಾವಗಳ ಸಂಖ್ಯೆ ಹಿರಿದಾಗಿದ್ದರೂ ಇವುಗಳ ಭಾರವೇನೂ ನನ್ನನ್ನು ದೃಢಗೊಳಿಸಲಿಲ್ಲ. ಬದಲು, ಅಲುಗಾಡುತ್ತಿರುವ ಪಾತ್ರೆಯಲ್ಲಿನ ನೀರಿನ ಹಾಗೆ ಅದು ನನ್ನನ್ನು ಉಯ್ಯಾಲೆಯಾಡಿಸಿತು, ಅವ್ಯವಸ್ಥಿತಗೊಳಿಸಿತು.

ಪ್ರಲಾಪ, ಯಾತನೆ, ಜಡತೆ—ಇವನ್ನೆಲ್ಲ ನಾನು ದ್ವೇಷಿಸುತ್ತಿದ್ದೆ. ಕ್ರೌರ್ಯದ ನೋಟ, ರಕ್ತ, ಹೊಡೆತ, ಬಾಯಿಬೈಗಳು ಕೂಡಾ,—ಥಟ್ಟನೆ ನನ್ನಲ್ಲಿ ಹೇಸಿಕೆ ಹುಟ್ಟಿಸುತ್ತಿದ್ದುವು. ಇದು ಸುಲಭವಾಗಿ ಶೀತಲ ಕ್ರೋಧವಾಗಿ ಮಾರ್ಪಡುತ್ತಿತ್ತು. ಕಾಡುಮೃಗದಂತೆ ನಾನು ಕಾದಾಡುತ್ತಿದ್ದೆ. ಅನಂತರ ಮಾತ್ರ ಪಶ್ಚಾತ್ತಾಪದ ಕ್ರೂರ ಯಾತನೆಯನ್ನು ಅನುಭವಿಸುತ್ತಿದ್ದೆ.

ಯಾರನ್ನಾದರೂ ಹಿಂಸಿಸುವವನನ್ನು ಚೆನ್ನಾಗಿ ಥಳಿಸಬೇಕೆಂಬ ಉದ್ವಿಗ್ನ ಬಯಕೆ, ಕೆಲವೇಳೆ ನನ್ನನ್ನು ಆವರಿಸುವುದಿತ್ತು. ಆಗ ನಾನು ಹಿಂದುಮುಂದು ನೋಡದೆ ಜಗಳಕ್ಕೆ ಧುಮುಕುತ್ತಿದ್ದೆ. ಈ ಭಾವೋದ್ರೇಕಗಳಿಗೆ, ಏನನ್ನೂ ಮಾಡಲಾಗದ ಬಂಜೆತನದಿಂದುಂಟಾದ ನಿರಾಸೆಯೇ ಕಾರಣ. ಅವನ್ನೆಲ್ಲ ಸ್ಮರಿಸಿಕೊಂಡಾಗ, ಅಪರಿಮಿತವಾದ ವ್ಯಥೆಯೂ ಲಜ್ಜೆಯೂ ಈಗಲೂ ನನಗೆ ಉಂಟಾಗುತ್ತವೆ.

ನನ್ನೊಳಗೆ ಎರಡು ಜೀವಗಳು ವಾಸವಾಗಿದ್ದುವು: ಒಂದು, ಹೊಲಸು ಹೇಸಿಕೆಗಳನ್ನೆಲ್ಲ ಅತಿಯಾಗಿ ನೋಡಿದ ಕಾರಣದಿಂದ, ಮೆತ್ತಗಾಗಿತ್ತು. ಬದುಕಿನ ಭೀಕರ ಹೆಣಗಾಟದ ಕಾರಣದಿಂದ ಆತ ಸಂಶಯಾತ್ಮಕನೂ ಸಂದೇಹಗ್ರಸ್ತನೂ ಆಗಿದ್ದ. ಸ್ವತಃ ತನ್ನನ್ನೂ ಒಳಗೊಂಡು ಎಲ್ಲ ಜನರನ್ನೂ ಅವನು ಅಸಹಾಯ ಕರುಣೆಯಿಂದ ನೋಡುತ್ತಿದ್ದ. ಶಹರಗಳಿಂದಲೂ ಜನರಿಂದಲೂ ಬಲು ದೂರವಾಗಿ ಶಾಂತವಾದ ನಿವೃತ್ತ ಜೀವನವನ್ನು ನಡೆಸಲು ಈ ವ್ಯಕ್ತಿ ಆಶಿಸುತ್ತಿದ್ದ. ಪರ್ಶಿಯಾಕ್ಕೆ ಹೋಗುವ, ಸನ್ಯಾಸಿಮಠವನ್ನು ಪ್ರವೇಶಿಸುವ, ಅಥವಾ ರೈಲ್ವೆಗಾರ್ಡ್‌ನ ವಸತಿಯಲ್ಲಿರುವ

ಇಲ್ಲವೆ ಶಹರದ ಹೊರವಲಯದಲ್ಲೆಲ್ಲೋ ರಾತ್ರೆಯ ಕಾವಲುಗಾರನಾಗುವ ಕನಸನ್ನು ಕಾಣು ತ್ತಿದ್ದ. ಅಂತಹ ವಾಸಕ್ಕೆ, ಜನರು ಕಡಮೆ ಇದ್ದಷ್ಟೂ ಸ್ಥಳ ದೂರವಿದ್ದಷ್ಟೂ ಉತ್ತಮ ವೆನಿಸುತ್ತಿತ್ತು.

ತಿಳಿವಳಿಕೆಯಿಂದಲೂ ಸತ್ಯದಿಂದಲೂ ತುಂಬಿದ ಗ್ರಂಥಗಳ ಪವಿತ್ರ ಚೇತನದಿಂದ ದೀಕ್ಷಾ ಬದ್ಧನಾದವನು, ಇನ್ನೊಬ್ಬ ವ್ಯಕ್ತಿ. ಬದುಕಿನ ಭೀಕರ ಹೆಣಗಾಟದಿಂದ ನಿರ್ದಯ ಸಾಮರ್ಥ್ಯ ವೊಂದು ಬಲವಾಗಿ ಹೊರಹೊಮ್ಮುತ್ತದೆ; ತನ್ನ ತಲೆಯನ್ನೇ ಸುಲಭವಾಗಿ ಅದು ಕಡಿದೆಸೆಯ ಬಲ್ಲುದು; ಇಲ್ಲವೆ ಒರಟು ಹಿಮ್ಮಡಿಯ ಕೆಳಗೆ ಅಪ್ಪಚ್ಚಿ ಮಾಡಬಲ್ಲುದು—ಎಂಬುದನ್ನು ಆತ ಮನಗಂಡಿದ್ದ. ಹೀಗಾಗಿ, ಆತ್ಮರಕ್ಷಣೆಗೋಸ್ಕರ ತನ್ನೆಲ್ಲ ಶಕ್ತಿಯನ್ನೂ ಅವನು ವಿನಿಯೋಗಿಸು ತ್ತಿದ್ದ. ಪ್ರತಿ ದಿನವೂ, ಜಗಳಕ್ಕಾಗಿಯೋ ವಾದಕ್ಕಾಗಿಯೋ ಹಲ್ಲುಗಳನ್ನು ಮಸೆಯುತ್ತಿದ್ದ. ಮುಷ್ಟಿಗಳನ್ನು ಬಿಗಿಯುತ್ತಿದ್ದ. ಅವನ ಪ್ರೇಮವೂ ಕರುಣೆಯೂ ಕಾರ್ಯಾಚರಣೆಯಲ್ಲಿ ಅಭಿವ್ಯಕ್ತಿ ಗೊಳ್ಳುತ್ತಿದ್ದುವು. ಫ್ರೆಂಚ್ ಕಾದಂಬರಿಯ ಧೀರನಾಯಕನಿಗೊಪ್ಪುವಂತೆ, ಒಂದಿಷ್ಟು ಕೆರಳಿಸಿ ದರೂ ಸಾಕು, ತನ್ನ ಖಡ್ಗವನ್ನು ಆತ ಒರೆಯಿಂದ ಹಿರಿದು ಹೋರಾಟಕ್ಕೆ ಅಣಿಯಾಗಿ ನಿಲ್ಲು ತ್ತಿದ್ದ....

ಆ ಕಾಲದಲ್ಲಿ ನನಗೊಬ್ಬ ದುಷ್ಟ ವೈರಿಯಿದ್ದ. ಆತ, ಮಲಾಯಾ ಪ್ರೊಕೊವ್ಸ್ಕಾಯಾ ರಸ್ತೆಯಲ್ಲಿನ ವೇಶ್ಯಾಗೃಹಗಳಲ್ಲೊಂದರ ಪರಿಚಾರಕ. ನನಗೆ ಅವನ ಪರಿಚಯವಾದದ್ದು—ಒಂದು ಬೆಳಗ್ಗೆ ಸಂತೆಮಾಳಕ್ಕೆ ನಾನು ಹೋಗುತ್ತಿದ್ದಾಗ. ಕುಡಿದು ಅರ್ಧಪ್ರಜ್ಞೆಯಲ್ಲಿದ್ದ ಹುಡುಗಿ ಯೊಬ್ಬಳನ್ನು ಗಾಡಿಯಿಂದ ಆತ ಕೆಳಕ್ಕೆಳೆಯುವುದನ್ನು ನಾನು ನೋಡಿದೆ. ಕಾಲುಚೀಲಗಳು ಕೆಳಕ್ಕೆ ಸರಿದಿದ್ದ ಆ ಹುಡುಗಿಯ ಕಾಲುಗಳನ್ನು ಅಮುಕಿ ಹಿಡಿದು, ಅವಳ ಶರೀರವನ್ನು ನಡುವಿನ ವರೆಗೂ ಬರಿದುಗೊಳಿಸುತ್ತ, ಅಬ್ಬರಿಸುತ್ತ, ನಗುತ್ತ, ಅವಳಮೇಲೆ ಉಗುಳುತ್ತ, ಅಸಭ್ಯವಾದ ರೀತಿಯಲ್ಲಿ ಅವಳನ್ನು ಜಗ್ಗುತ್ತಿದ್ದ. ತಲೆಕೂದಲು ಅಸ್ತವ್ಯಸ್ತವಾಗಿದ್ದ ಹುಡುಗಿ, ಏನೂ ಕಾಣಿ ಸದೆ, ತುಟಿಗಳನ್ನು ಜೋಲುಬಿಟ್ಟು, ಸ್ವಲ್ಪ ಸ್ವಲ್ಪವಾಗಿಯೇ ಕೆಳಕ್ಕೆ ಜಾರುತ್ತಿದ್ದಳು. ಕೀಲಿ ತಪ್ಪಿ ದಂತೆ ತೋರುತ್ತಿದ್ದ ಆಕೆಯ ನಿಶ್ಚೇಷ್ಟಿತ ತೋಳುಗಳು ತಲೆಯನ್ನು ಹಿಂಬಾಲಿಸಿ ಹರಿದುಕೊಂಡು ಬಂದುವು. ಇವು ಗಾಡಿಯ ಆಸನಕ್ಕೆ, ಬಳಿಕ ಮೆಟ್ಟಲಿಗೆ, ಕೊನೆಯಲ್ಲಿ ಕಲ್ಲು ನೆಲಕ್ಕೆ ಬಡೆದುವು.

ಗಾಡಿಯ ಚಾಲಕ ತನ್ನ ಕುದುರೆಗೆ ಚಾಟಿಯಿಂದ ಬಾರಿಸಿ, ಗಾಡಿಯನ್ನು ಓಡಿಸಿಕೊಂಡು ಹೋದ. ಪರಿಚಾರಕ, ಹೇರುಬಂಡಿಯ ಕತ್ತರಿಯ ಹಾಗೆ ಹುಡುಗಿಯ ಕಾಲುಗಳನ್ನೆತ್ತಿಕೊಂಡು, ಬೀದಿಯ ಬದಿಯುದ್ದಕ್ಕೂ ಎಳೆದೊಯ್ದ. ಹುಚ್ಚೆದ್ದ ಕೋಪಾವೇಶದಿಂದ ಅವನತ್ತ ನಾನು ಧಾವಿಸಿದೆ. ಆದರೆ ನನ್ನ ಸುದೈವದಿಂದ, ನಾನು ಹೊತ್ತಿದ್ದ ಏಳಡಿಯ ಕಬ್ಬಿಣದ ಸಲಾಕೆಯನ್ನು ಎಂದೋ ನಾನು ಕೆಳಕ್ಕೆ ಎಸೆದಿರಬೇಕು, ಇಲ್ಲವೆ ಆಕಸ್ಮಿಕವಾಗಿ ಅದು ಬಿದ್ದುಹೋಗಿರಬೇಕು. ಅಂತೂ ಗಭೀರ ಪರಿಣಾಮಗಳಾಗುವುದು ತಪ್ಪಿ, ಪರಿಚಾರಕನೂ ನಾನೂ ಉಳಿದುಕೊಂಡೆವು. ಪೂರ್ಣವೇಗದಿಂದ ಆತನೆಡೆಗೆ ಮುನ್ನುಗ್ಗಿ, ಅವನನ್ನು ನಾನು ಕೆಳಕ್ಕುರುಳಿಸಿದೆ. ಮುಖಮಂಟಪಕ್ಕೆ ಹಾರಿದೆ. ಗಂಟೆಯನ್ನು ಒಂದೇ ಸಮನೆ ಬಾರಿಸಿದೆ. ಇದಕ್ಕೆ ಉತ್ತರವಾಗಿ, ಭೀಕರವಾಗಿಯೇ ಕಂಡ ಕೆಲಜನರು ಓಡಿಬಂದರು. ಏನನ್ನೂ ವಿಹರಿಸಲು ಶಕ್ತನಾಗದೆ, ನನ್ನ ಸಲಕರಣೆಯನ್ನೆತ್ತಿ ಕೊಂಡು ನಾನು ಓಡಿಹೋದೆ.

ಕೆಳಗೆ ನದಿಗೆ ಅಭಿಮುಖವಾಗಿದ್ದ ರಸ್ತೆಯಲ್ಲಿ, ಆ ಗಾಡಿಯವನು ಸಾಗಿದ್ದ. ಅವನನ್ನು ನಾನು ದಾಟಿದೆ. ತನ್ನ ಪೀಠದ ಎತ್ತರದಿಂದ ಕೆಳಕ್ಕೆ ನನ್ನೆಡೆಗೆ ದೃಷ್ಟಿ ಹಾಯಿಸಿ, ಒಪ್ಪಿಗೆ ಸೂಚಿಸುತ್ತ ಅವನೆಂದ:

"ಸರಿಯಾದ ಪಾಠ ಕಲಿಸಿದೆ ಅವನಿಗೆ."

ಆ ಹುಡುಗಿಯೊಡನೆ ಅಷ್ಟೊಂದು ನಿರ್ಲಜ್ಜವಾಗಿ ವರ್ತಿಸಲು ಪರಿಚಾರಕನಾಗಿ ಅವಕಾಶವಿತ್ತುದೇಕೆಂದು ಸಿಟ್ಟಿನಿಂದ ಅವನನ್ನು ನಾನು ಕೇಳಿದೆ.

ಒಂದಿಷ್ಟೂ ಮಿಸುಕದ ತಿರಸ್ಕಾರದಿಂದ ಅವನು ಉತ್ತರವಿತ್ತ:

"ಅವಳನ್ನು ಸುಟ್ಟಿತು. ಗಾಡಿಯೊಳಕ್ಕೆ ಅವಳನ್ನು ಹಾಕಿದಾಗ ಆ ಸದ್ಗೃಹಸ್ಥರು ನನಗೆ ಹಣ ಕೊಟ್ಟರು. ನನಗೆ ಬೇಕಾದದ್ದು ಅಷ್ಟೇ."

"ಆತ ಅವಳನ್ನು ಕೊಂದೇಬಿಟ್ಟಿದ್ದರೆ?"

ಕುಡುಕ ವೇಶ್ಯೆಯರನ್ನು ಕೊಲ್ಲುವುದರಲ್ಲಿ ತಾನು ತಜ್ಞನೇನೋ ಎಂಬ ಭರವಸೆಯಿಂದ ಅವನೆಂದ:

"ಅವಳಂಥವರನ್ನು ಕೊಲ್ಲೋದು ಅಷ್ಟು ಸುಲಭವಲ್ಲ."

ಆ ಬಳಿಕ ನಾನು ಆ ಪರಿಚಾರಕನನ್ನು ಹೆಚ್ಚು ಕಡಮೆ ಪ್ರತಿದಿನವೂ ಸಂಧಿಸುತ್ತಿದ್ದೆ. ಆ ಬೀದಿಯಲ್ಲಿ ನಾನು ನಡೆದು ಬಂದಾಗಲೆಲ್ಲಾ, ಬೀದಿಯ ಅಂಚನ್ನು ಆತ ಗುಡಿಸುತ್ತಿರುತ್ತಿದ್ದ; ಅಥವಾ ನನ್ನ ಹಾದಿ ನೋಡುತ್ತಿರುವನೇನೋ ಎನ್ನುವಂತೆ, ಮೆಟ್ಟಿಲುಗಳ ಮೇಲೆ ಕುಳಿತಿರುತ್ತಿದ್ದ. ನಾನು ಸಮೀಪಿಸಿದಂತೆ, ಅವನು ಎದ್ದು ನಿಂತು, ಅಂಗಿಯ ತೋಳುಗಳನ್ನು ಮೇಲಕ್ಕೆ ಸರಿಸಿ, ಬೆದರಿಸುವ ಧ್ವನಿಯಲ್ಲಿ ಅನ್ನುತ್ತಿದ್ದ:

"ಆ ನಿನ್ನ ಮುಸುಡನ್ನು ಈಗ ಅಪ್ಪಚ್ಚಿ ಮಾಡಿಯೇ ಬಿಡ್ತೀನಿ, ನೋಡು!"

ಅವನಿಗೆ ವಯಸ್ಸು ಸುಮಾರು ನಾಲ್ವತ್ತಕ್ಕೂ ಹೆಚ್ಚಾಗಿರಬೇಕು. ಕಮಾನು ಕಾಲುಗಳ ಸಣ್ಣ ಆಕೃತಿಯ ಮನುಷ್ಯ. ಅವನಿಗೆ ಗರ್ಭಿಣಿ ಹೆಂಗಸಿಗಿರುವಂತಹ ಹೊಟ್ಟೆ ಇತ್ತು. ಅಲ್ಲಿ ಆತ, ನನ್ನನ್ನು ಪರಿಹಾಸ್ಯ ಮಾಡುತ್ತ ನಿಂತಿರುತ್ತಿದ್ದ. ಆದರೆ ಅವನ ಕಣ್ಣುಗಳಲ್ಲಿ ದಯಾಪೂರ್ಣವಾದ ಸದ್ಭಾವನೆಯ ಹೊಳಪಿರುತ್ತಿತ್ತು. ಇದನ್ನು ಕಂಡು ನಾನು ಧೃತಿಗೆಡುತ್ತಿದ್ದೆ. ಕಾದಾಟದಲ್ಲಿ ಅವನೇನೂ ನುರಿತವನಾಗಿರಲಿಲ್ಲ. ತೋಳುಗಳು ನನ್ನದಕ್ಕಿಂತ ಚಿಕ್ಕವಾಗಿದ್ದುವು. ಎರಡು ಮೂರು ಸಾರಿ ಏರಿ ಬಂದಮೇಲೆ ಅಚ್ಚರಿಯಿಂದ ಏದುಸಿರು ಬಿಡುತ್ತ ಬೇಲಿಗೊರಗಿಕೊಂಡು ಅವನು ಶರಣಾಗತನಾಗುತ್ತಿದ್ದ:

"ಒಂದು ಕ್ಷಣ ತಡಿ, ಕಾಡುಬೆಕ್ಕೇ!"

ಈ ಹೊಡೆದಾಟಗಳಿಂದ ನನಗೆ ಬೇಸರ ಬಂದುಬಿಟ್ಟಿತು. ಒಂದು ದಿನ ಅವನೊಡನೆ ನಾನೆಂದೆ:

"ಇಲ್ಲಿ ಕೇಳು, ಮೂರ್ಖನೇ; ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡು, ತಿಳಿಯಿತೆ?"

ಛೇಡಿಸುವ ಸ್ವರದಲ್ಲಿ ಆತ ಕೇಳಿದ:

"ನೀನು ಹೊಡೆದಾಟ ಯಾಕೆ ಆರಂಭಿಸಿದೆ?"

ಹುಡುಗಿಯನ್ನು ಆತ ತುಚ್ಛವಾಗಿ ಕಂಡುದೇಕೆಂದು ನಾನು ಕೇಳಿದೆ.

"ನಿನಗೇನದರಿಂದ? ಅವಳ ವಿಷಯದಲ್ಲಿ ನಿನಗೆ ಕನಿಕರ ಅನಿಸುತ್ತೊ?"

"ಹೌದು, ಅನಿಸಿಯೇ ಅನಿಸುತ್ತೆ."

ತುಸುತಡೆದು, ತನ್ನ ತುಟಿಗಳನ್ನು ಒರೆಸಿ, ಆತನೆಂದ:

"ಬೆಕ್ಕುಗಳಮೇಲೂ ನಿನಗೆ ಕನಿಕರವಿದೆಯೊ?"

"ಹೌದು, ಇದೆ."

ಬಳಿಕ ಅವನೆಂದ:

"ನೀನು ಮೂರ್ಖ, ಸುಳ್ಳ! ಸ್ವಲ್ಪ ತಾಳು, ನಿನಗೆ ಕಲಿಸ್ತೀನಿ!"

ದುಡಿಮೆಯ ಸ್ಥಳಕ್ಕೆ ಹೋಗಲು ಅದೇ ಅತ್ಯಂತ ಸಮೀಪದ ಹಾದಿಯಾಗಿದ್ದುದರಿಂದ ಆ ರಸ್ತೆಯಲ್ಲೇ ನಾನು ಬರಬೇಕಾಗುತ್ತಿತ್ತು. ಆದರೆ, ಆ ಪರಿಚಾರಕನನ್ನು ತಪ್ಪಿಸಿ ಹೋಗಲೆಂದು ಬೆಳಗ್ಗೆ ಮತ್ತೂ ಬೇಗನೆ ನಾನು ಏಳತೊಡಗಿದೆ. ನಾನು ಹೀಗೆ ಯತ್ನಿಸಿದರೂ, ಕೆಲದಿನಗಳ ಬಳಿಕ, ಮೆಟ್ಟಿಲುಗಳಮೇಲೆ ಆತ ಕುಳಿತಿದ್ದುದನ್ನು ನಾನು ಕಂಡೆ. ಅವನ ತೊಡೆಯ ಮೇಲೊಂದು ಬೂದು ಬಣ್ಣದ ಬೆಕ್ಕು ಮಲಗಿತ್ತು. ಅದನ್ನು ಆತ ತಟ್ಟುತ್ತಲಿದ್ದ. ಅವನಿಂದ ಮೂರೇ ಹೆಜ್ಜೆಗಳ ಅಂತರದೊಳಗೆ ನಾನಿದ್ದಾಗ ಆತ ಹಾರಿ ನಿಂತು, ಹಿಂಗಾಲುಗಳಿಂದ ಬೆಕ್ಕನ್ನು ಅಮುಕಿ ಹಿಡಿದು, ಒಂದು ಕಲ್ಲಿನ ಕಂಬಕ್ಕೆ ಅದರ ತಲೆಯನ್ನು ಜಜ್ಜಿದ. ಆತ ಜಜ್ಜಿದ ರಭಸಕ್ಕೆ, ಬಿಸಿರಕ್ತ ನನ್ನ ಮೈಮೇಲೆಲ್ಲಾ ಸಿಡಿತು. ಆಮೇಲೆ ಆತ ಬೆಕ್ಕನ್ನು ನನ್ನ ಪಾದಗಳತ್ತ ಎಸೆದ. ಅಂಗಳದ ಬಾಗಿಲ ಬಳಿ ನಿಂತು, ಅಂದ:

"ಏನಂತಿ?"

ಏನು ಮಾಡಬೇಕಾಗಿತ್ತು ನಾನು? ಎರಡು ನಾಯಿಗಳ ಹಾಗೆ ಅಂಗಳದಲ್ಲಿ ನಾವು ಉರುಳಾಡಿದೆವು. ಮುಂದೆ, ಸಂಕಟದಿಂದ ದಂಗಾಗಿ, ಬೀದಿಯ ಉದ್ದಕ್ಕೂ ಇದ್ದ ಪೊದೆಗಳ ಮಧ್ಯೆ ಕಿರಿಚಾಡದಂತೆ ಹಾಗೂ ಬಿಕ್ಕಿ ಬಿಕ್ಕಿ ಅಳದಂತೆ ನನ್ನ ತುಟಿಗಳನ್ನು ಕಚ್ಚಿಕೊಳ್ಳುತ್ತ ನಾನು ಬಿದ್ದುಕೊಂಡೆ. ನನಗೆ ಹುಚ್ಚು ಹಿಡಿಯಲಿಲ್ಲವಲ್ಲ, ನಾನು ಕೊಲೆಮಾಡಲಿಲ್ಲವಲ್ಲ—ಎಂದು ಸೋಜಿಗಪಡುತ್ತ, ಹೇಸಿಕೆಯ ಕಂಪನದಿಂದ ಇದನ್ನೀಗ ನಾನು ಸ್ಮರಿಸುತ್ತಿದ್ದೇನೆ.

ಇಷ್ಟೊಂದು ತುಚ್ಛವಾದುದರ ಬಗೆಗೆ ನಾನು ಹೇಳುವುದಾದರೂ ಯಾತಕ್ಕೆ? ಪ್ರಿಯ ಓದುಗ, ನಾನು ಹೀಗೆ ಹೇಳುತ್ತಿರುವುದು, ಇದು ಗತಕಾಲದ ಕಥೆಯಷ್ಟೇ ಅಲ್ಲವೆಂದು ನೀವು ತಿಳಿದಿರಬೇಕೆಂದು! ಕಾಲ್ಪನಿಕ ಭಯಾನಕ ಘಟನೆಗಳು ನಿಮಗೆ ಇಷ್ಟ. ಕಗ್ಗೊಲೆಯ ಕಥೆಗಳನ್ನು ಓದಲು ನೀವು ಇಷ್ಟಪಡುತ್ತೀರಿ. ಚಿತ್ತವೇಧಕ ಕಟ್ಟುಕತೆಗಳಿಂದ, ನಿಮ್ಮ ಸೂಕ್ಷ್ಮಭಾವಗಳನ್ನು ಇಂಪಾದ ರೀತಿಯಲ್ಲಿ ಕುಲುಕಾಡಿಸಿಕೊಳ್ಳಲು ನೀವು ಆಕ್ಷೇಪಿಸುವುದಿಲ್ಲ. ಆದರೆ ವಾಸ್ತವಿಕ ಭಯಾನಕ ಸಂಗತಿಗಳನ್ನೇ ನಾನು ಅರಿತಿದ್ದೇನೆ—ದಿನನಿತ್ಯದ ಭಯಾನಕ ಸಂಗತಿಗಳನ್ನು. ನೀವು ಎಲ್ಲಿ ವಾಸಿಸುತ್ತಿದ್ದೀರಿ, ಹೇಗೆ ವಾಸಿಸುತ್ತಿದ್ದೀರಿ—ಎಂಬುದು ನಿರ್ದಿಷ್ಟವಾಗಿ ನಿಮಗೆ ತಿಳಿಯುವುದು ಸಾಧ್ಯವಾಗುವಂತೆ, ಆ ಸಂಗತಿಗಳ ಬಗೆಗೆ ನಿಮಗೆ ಹೇಳಿ ಇಂಪಲ್ಲದ ರೀತಿಯಲ್ಲಿ ನಿಮ್ಮ ಸೂಕ್ಷ್ಮಭಾವಗಳನ್ನು ಕುಲುಕುವ ಹಕ್ಕು ನಮಗಿದೆ.

ನಾವೆಲ್ಲ ನಡೆಸುತ್ತಿರುವುದು, ನೀಚವಾದ ಹೊಲಸಾದ ಬದುಕು. ಯಾರೂ ಇದನ್ನು ಅಲ್ಲಗಳೆಯುವಂತಿಲ್ಲ.

ಮಾನವಕೋಟಿಯನ್ನು ಪ್ರೀತಿಸುವವನು ನಾನು. ಇನ್ನೊಬ್ಬರಿಗೆ ನೋವುಂಟುಮಾಡಲು ಹಿಂದೆಗೆಯುವವನು. ಹೀಗಾಗಿ, ಭಾವವಿಕಾರಕ್ಕೊಳಗಾಗಬಾರದೆಂದು, ಶುಭ್ರವಾಚಾಳಿತನದಲ್ಲಾಗಲೀ ಸೊಗಸಾದ ಸುಳ್ಳುಗಳಲ್ಲಾಗಲೀ ಕಟುಸತ್ಯವನ್ನು ಮರೆಮಾಚಬಾರದೆಂದು, ನಾನು ಬಲ್ಲೆ. ನಾವು ಬದುಕಿಗೆ ಸಮೀಪವಾಗಿ ನಿಂತಿರಬೇಕು, ಹೆಚ್ಚು ಸಮೀಪವಾಗಿರಬೇಕು! ಅದರೊಳಕ್ಕೆ ನಾವು, ನಮ್ಮ ಹೃದಯಗಳಲ್ಲೂ ಮನಸ್ಸುಗಳಲ್ಲೂ ಇರುವ ಎಲ್ಲ ಒಳ್ಳಿತನ್ನೂ ಮಾನವತೆಯನ್ನೂ ಸುರಿಯಬೇಕು.

ಸ್ತ್ರೀಯರ ಬಗೆಗೆ ಸರ್ವಸಾಧಾರಣವಾಗಿರುತ್ತಿದ್ದ ಧೋರಣೆ, ನನ್ನನ್ನು ವಿಶೇಷವಾಗಿ ಕ್ರುದ್ಧನಾಗಿ ಮಾಡಿತು. ಹೆಂಗಸಿಗಿಂತ ಹೆಚ್ಚು ಸೊಗಸಾದುದು ಅರ್ಥಪೂರ್ಣವಾದುದು ಬದುಕಿನಲ್ಲಿ ಬೇರೇನೂ ಇಲ್ಲವೆಂದು, ನಾನು ಓದಿದ್ದ ಪುಸ್ತಕಗಳು ನನಗೆ ಕಲಿಸಿಕೊಟ್ಟಿದ್ದುವು. ಈ ಅಭಿಪ್ರಾಯವನ್ನು ನನ್ನ ಅಜ್ಜಿ, ಕನ್ನಿಕೆ ಹಾಗೂ ಬುದ್ಧಿವಂತೆಯೂ ಆದ ವಾಸಿಲಿಸಾ ಬಗೆಗೆ ಆಕೆ ಹೇಳುತ್ತಿದ್ದ ಕಥೆಗಳು, ನತದೃಷ್ಟೆಯಾದ ಅಗಸಗಿತ್ತಿ ನಟಾಲ್ಯಾ, ಜೀವನದ ತಾಯಂದಿರಾದ ಸ್ತ್ರೀಯರು ಹರ್ಷವೂ ಬಲವೂ ಇಲ್ಲದ ಇರುವಿಕೆಯನ್ನು ಸುಂದರಗೊಳಿಸಲೆಂದು ಬೀರುತ್ತಿದ್ದ ಸಹಸ್ರ ಸಹಸ್ರ ಮುಗುಳುನಗೆಗಳೂ ಹಾಗೂ ನೋಟಗಳು, ದೃಢಪಡಿಸಿದ್ದುವು.

ಟೂರ್ಗೆನೆಫನ ಗ್ರಂಥಗಳು ಸ್ತ್ರೀಯರ ಗುಣಗಾನ ಮಾಡುತ್ತಿದ್ದುವು. ಸ್ತ್ರೀಯರ ಬಗೆಗೆ ಒಳ್ಳೆಯ ವಿಷಯಗಳನ್ನೆಷ್ಟೋ ನಾನು ಅರಿತಿದ್ದೆ. ಈ ಜ್ಞಾನ ಭಂಡಾರಕ್ಕೆ ಹೇಯಿನ್ ಹಾಗೂ ಟೂರ್ಗೆನೆಫರಿಂದ ಅಪಾರ ಕಾಣ್ಕೆ ದೊರೆತಿತ್ತು. ನನ್ನ ರಾಣಿ ಇವೆಲ್ಲದರ ಅವತಾರವಾಗಿ ನನ್ನ ಪಾಲಿಗೆ ಉಳಿದಿದ್ದಳು.

ಜಾತ್ರೆಯ ಬಯಲಿನಿಂದ ಹಿಂತಿರುಗುತ್ತ ಎಷ್ಟೋ ವೇಳೆ, ಕ್ರೆಮ್ಲಿನ್ ಗೋಡೆಯ ಪಕ್ಕದ್ದ ಗುಡ್ಡದಮೇಲೆ, ಸೂರ್ಯಾಸ್ತವನ್ನು ನೋಡಲೆಂದು ನಿಲ್ಲುತ್ತಿದ್ದೆ. ಆಕಾಶದ ಕೆಳಕ್ಕೆ ಜ್ವಲಿಸುವ ನದೀಪ್ರವಾಹಗಳನ್ನು ಹರಿಯಬಿಟ್ಟು, ವೋಲ್ಗಾದ ತಳಕ್ಕೆ ಸೂರ್ಯ ಮುಳುಗುತ್ತಿದ್ದ. ಆಗ ಭೂಮಿಯದಾದ ನನ್ನ ಪ್ರೀತಿಪಾತ್ರ ನದಿ ಕಡುನೇರಳೆ ಬಣ್ಣಕ್ಕೆ ತಿರುಗುತ್ತಿತ್ತು. ಅಂತಹ ಕ್ಷಣಗಳಲ್ಲಿ ಕೆಲವೇಳೆ, ಭೂಮಿಯೊಂದು ಕೈದಿಗಳಿಂದ ತುಂಬಿದ ದೊಡ್ಡ ಘತೇಮಾರಿನಂತೆ ಅಥವಾ ಅಗೋಚರ ಹಗ್ಗದಿಂದ ಎಳೆಯಲ್ಪಡುತ್ತಿರುವ ಹಂದಿಯಂತೆ, ನನಗೆ ಭಾಸವಾಗುತ್ತಿತ್ತು.

ಆದರೆ ಹೆಚ್ಚುಸಾರೆ ನನ್ನ ಯೋಚನೆಗಳು ಭೂಮಿಯ ವಿಶಾಲತೆಯ ಕಡೆಗೆ, ಪುಸ್ತಕಗಳಲ್ಲಿ ನಾನು ಓದಿ ತಿಳಿದಿದ್ದಂತಹ ನಗರಗಳ ಕಡೆಗೆ, ಜನರು ಬೇರೆಯೇ ರೀತಿ ವಾಸಿಸುತ್ತಿದ್ದ ವಿಚಿತ್ರ ರಾಜ್ಯಗಳ ಕಡೆಗೆ, ಹೊರಳುತ್ತಿದ್ದುವು. ವಿದೇಶೀಯ ಗ್ರಂಥಕರ್ತರ ಪುಸ್ತಕಗಳಲ್ಲಿ, ನನ್ನ ಸುತ್ತಲೂ ನಿಧಾನವಾಗಿ ಬೇಸರ ಬರಿಸುವಂತೆ, ನೀರಸವಾಗಿ ಉರುಳುತ್ತಿದ್ದ ಬದುಕಿಗಿಂತ, ಹೆಚ್ಚು ಸ್ವಚ್ಛವೂ ಆಪೇಕ್ಷಣೀಯವೂ ಕಡಮೆ ಯಾತನೆಯದೂ ಆದ ಬದುಕಿನ ಚಿತ್ರಣವಿರುತ್ತಿತ್ತು. ಇದು ನನ್ನ ಭೀತಿಶಂಕೆಗಳನ್ನು ತಣಿಸುತ್ತಿತ್ತು. ನನ್ನ ಸುತ್ತಲು ಇದ್ದುದಕ್ಕಿಂತಲೂ ಉತ್ತಮವಾದ ಜೀವನ ವಿಧಾನ ಸಾಧ್ಯವೆಂಬ ಆಗ್ರಹಪೂರ್ವಕ ನಂಬುಗೆಯನ್ನು ಕೆರಳಿಸುತಿತ್ತು.

ಎಂದಾದರೊಂದು ದಿನ, ವಿಶಾಲವಾದ ಶುಭ್ರವಾದ ರಾಜವೀಧಿಗೆ ನನ್ನನ್ನು ಕರೆದೊಯ್ಯುವಂತಹ ಬುದ್ಧಿವಂತನೂ ಸರಳಪ್ರವೃತ್ತಿಯವನೂ ಆದ ವ್ಯಕ್ತಿಯೊಬ್ಬನನ್ನು ನಾನು ಸಂಧಿಸುವೆನೆಂದು, ಯೋಚಿಸುತಲೇ ಇದ್ದೆ.

ಕ್ರೆಮ್ಲಿನ್‌ಗೋಡೆಯ ಮಗ್ಗುಲಲ್ಲಿದ್ದೊಂದು ಬೆಂಚಿನ ಮೇಲೆ ಒಂದು ದಿವಸ ನಾನ ಕುಳಿತಿದ್ದಾಗ, ಯಾಕೋವ್‌ಮಾವ ಅಲ್ಲಿಗೆ ಬಂದ. ಆತ ಸಮೀಪಕ್ಕೆ ಬರುತ್ತಿದ್ದುದನ್ನು ನಾನ ಗಮನಿಸಿರಲಿಲ್ಲ; ತಕ್ಷಣ ಅವನ ಗುರುತು ನನಗೆ ಹತ್ತಲೂ ಇಲ್ಲ. ಅನೇಕ ವರ್ಷಗಳ ಕಾ ಒಂದೇ ಶಹರದಲ್ಲಿ ನಾವು ವಾಸಸುತ್ತಲಿದ್ದೆವಾದರೂ, ಪರಸ್ಪರ ಸಂಧಿಸುತ್ತಿದ್ದುದೇ ಕಡಮೆ ಸಂಧಿಸಿದರೂ ಅದು ಕೆಲವೇ ನಿಮಿಷಗಳ ಮಟ್ಟಿಗೆ, ಅದೂ ಅನಿರೀಕ್ಷಿತವಾಗಿ.

"ನೀನು ಚಿಗುರ್‍ತಾ ಸಾಗಿದೀಯ," ಎಂದು, ಪರಿಹಾಸ್ಯದ ಧ್ವನಿಯಲ್ಲಿ, ನನ್ನನ್ನು ಮೆಲ್ಲನೆ ತ ಅವನೆಂದ. ಸಂಬಂಧಿಕರಲ್ಲ, ಬದಲು ದೀರ್ಘಕಾಲದ ಪರಿಚಿತರು—ಎಂಬಂತೆ ನಾವು ಮಾ ನಾಡತೊಡಗಿದೆವು.

ಯಾಕೋವ್‌ಮಾವ ತನ್ನಲ್ಲಿದ್ದುದನ್ನೆಲ್ಲಾ ದುಂದುವೆಚ್ಚ ಮಾಡಿದ್ದನೆಂದು ಅಜ್ಜಿ ಹೇಳಿದ್ದಳ ಸ್ವಲ್ಪಸಮಯದವರೆಗೆ ಆತ, ಒಂದು ಸೆರೆಮನೆ ವಸಾಹತಿನಲ್ಲಿ ವಾರ್ಡರನಿಗೆ ಸಹಾಯಕನಾಗಿದ್ ಆದರೆ ಇದು, ದುರಂತದಲ್ಲಿ ಮುಕ್ತಾಯಗೊಂಡಿತ್ತು. ವಾರ್ಡರ್ ಅಸ್ವಸ್ಥನಾಗಿದ್ದಾ ಯಾಕೋವ್‌ಮಾವ ತನ್ನ ವಸತಿಯಲ್ಲಿ ಕೈದಿಗಳಿಗೆ ವಿನೋದಕೂಟಗಳನ್ನೇರ್ಪಡಿಸಿದ್ದ. ಇ ಬಯಲಾದಾಗ, ಅವನನ್ನು ಕೆಲಸದಿಂದ ಕಿತ್ತುಹಾಕಿದರು; ರಾತ್ರಿ ಹೊತ್ತು ಕೈದಿಗಳನ್ನು ಬಂಧ ದಿಂದ ಬಿಟ್ಟ ಆರೋಪದ ಹೊರಿಸಿ ಅವನ ಮೇಲೆ ಖಟ್ಲೆ ಹಾಕಿದರು. ಕೈದಿಗಳಲ್ಲಿ ಯಾರೂ ಓ ಹೋಗಿರಲಿಲ್ಲ. ಆದರೆ ಅವರಲ್ಲೊಬ್ಬ, ಧರ್ಮಗುರುವೊಬ್ಬನ ಕತ್ತು ಹಿಸುಕಲು ಯತ್ನಿಸು ದ್ದಾಗ ಸಿಕ್ಕಿಬಿದ್ದಿದ್ದ. ತನಿಖೆ ದೀರ್ಘಕಾಲದವರೆಗೂ ತಳ್ಳಿಕೊಂಡುಹೋಯಿತು; ಆದ ನ್ಯಾಯಸ್ಥಾನವನ್ನು ಅದು ತಲಪಲೇ ಇಲ್ಲ. ಕೈದಿಗಳೂ ಸೆರೆಮನೆಯ ಕಾವಲುಗಾರರೂ ಹೇಗೆ ಮಾಡಿ ಆ ಅವಹೇಳನದಿಂದ ಮೃದುಹೃದಯದ ಮಾವನನ್ನು ತಪ್ಪಿಸಿದರು. ಈಗ ಆತ ಇಲ್ಲ ದುಡಿಯುತ್ತಿರಲಿಲ್ಲ. ಅವನನ್ನು, ಆ ಕಾಲದಲ್ಲಿ ಪ್ರಖ್ಯಾತವಾಗಿದ್ದ ರುಕಾವಿಶ್ನಿಕೊ ಇಗರ್ಜಿಯ ವಾದ್ಯವೃಂದದಲ್ಲಿ ಹಾಡುಗಾರನಾದ ಅವನ ಮಗ ಪೋಷಿಸುತ್ತಿದ್ದ. ಮಾವ ಮಗನ ಬಗೆಗೆ ವಿಚಿತ್ರ ರೀತಿಯಲ್ಲಿ ಮಾತನಾಡಿದ:

"ಈಚೆಗೆ ಆತ ಬಹಳ ಗಭೀರವಾಗಿದಾನೆ. ಬಹಳ ಮುಖ್ಯ ವ್ಯಕ್ತಿಯಾಗಿದಾನೆ. ಒಂ ಹಾಡುಗಾರ. ಚಹಾದಾನಿ ಸಿದ್ಧಮಾಡೋದರಲ್ಲಿ ಅಥವಾ ಅವನ ಉಡುಪನ್ನು ಝಾಡಿಸಿ ಸ್ವಚ್ಛ ಸೋದರಲ್ಲಿ ನಾನು ಸ್ವಲ್ಪ ತಡಮಾಡಿದೆ ಅಂದರೆ ಕಿಡಿಕಿಡಿಯಾಗ್ತಾನೆ. ಬಹಳ ಚೊಕ್ಕಟವಾ ಹುಡುಗ. ಅಭ್ಯಾಸಗಳೂ ನಿರ್ಮಲ."

ಈಗ ವಯಸ್ಸಾದವನಂತೆ ಕಾಣುತ್ತಿದ್ದ ನನ್ನ ಮಾವ ಮಾತ್ರ, ತಾನು ಸ್ವತಃ ಕೊಳ ಗಿಯೂ ಹೊಲಸಾಗಿಯೂ ಇದ್ದ. ಹೇಗೋ ಏನೋ ಬೆನ್ನುಹುರಿಮುರಿದವನಂತಿದ್ದ. ಸೊ ಸಾಗಿದ್ದ ಗುಂಗುರುಕೂದಲು ತೆಳ್ಳಗಾಗಿತ್ತು; ಕಿವಿಗಳು ಸೆಟೆದು ತೋರುತ್ತಿದ್ದುವು; ಅವನ ಕ ಗಳ ಬಿಳುಪಿನ ಮೇಲೂ ಗಡ್ಡವಿಲ್ಲದ ಕೆನ್ನೆಗಳ ರೇಶಿಮೆಯಂತಹ ಚರ್ಮದ ಮೇಲೂ ಕೆಂ ರಕ್ತನಾಳಗಳು ಬಲೆ ಹೆಣೆದಿದ್ದುವು. ಪರಿಹಾಸ್ಯಮಾಡುತ್ತ ಅವನು ಮಾತನಾಡುತ್ತಿದ್ದ. ಆದ ಹಲ್ಲುಗಳು ಭದ್ರವಾಗಿದ್ದರೂ ಮಾತಿಗೆ ಅಡ್ಡಿಮಾಡುವಂತದೇನೋ ಅವನ ಬಾಯಲ್ಲಿದ್ದ ಅನಿಸುತ್ತಿತ್ತು.

ಹರ್ಷಿತನಾಗಿರುವುದು ಹೇಗೆ ಎಂದು ತಿಳಿದಿದ್ದ, ಎಷ್ಟನ್ನೋ ಅನುಭವಿಸಿದ್ದ, ಎಷ್ಟೋ ತ

ರಬೇಕಾಗಿದ್ದ ವ್ಯಕ್ತಿಯೊಬ್ಬನೊಡನೆ ಮಾತನಾಡುವ ಅವಕಾಶ ದೊರೆತುದಕ್ಕಾಗಿ ನನಗೆ ಂತೋಷವಾಗಿತ್ತು. ಆತ ಹಾಡುತ್ತಿದ್ದ ಧೀರಘಾಷ ಹಾಸ್ಯಮಯವಾದ ಹಾಡುಗಳು, ಹಾಡೋ ಕ್ಕೆ ಡೇವಿಡ್, ಕುಡಿಯೋದಕ್ಕೆ ಅಬ್ಸಾಲಮ್" ಎಂದು" ಅಜ್ಜ ಅವನ ಬಗೆಗೆ ಹೇಳಿದ್ದುದು, ನಗೆ ಚೆನ್ನಾಗಿ ನೆನಪಿದ್ದುವು.

ಹೆಚ್ಚು ಗೌರವಸ್ಥರಾದ ಶಹರವಾಸಿಗಳು—ಹಿರಿಯ ಹಾಗೂ ಪುಟ್ಟ ಅಧಿಕಾರಿಗಳು, ಕೋಮಲೆಯರಾದ ಯುವತಿಯರು—ಉದ್ಯಾನದ ಹಾದಿಯುದ್ದಕ್ಕೂ ನಮ್ಮನ್ನು ದಾಟಿ ಮೆರೆ ುತ್ತ ಹೋದರು. ನನ್ನ ಮಾಮ ಮಲಿನವಾಗಿದ್ದ ಕೋಟನ್ನೂ ಜಜ್ಜಿಹೋಗಿದ್ದ ಟೋಪಿ ನ್ನೂ ತುಕ್ಕುಹಿಡಿದಂತಿದ್ದ ಬೂಟುಗಳನ್ನೂ ತೊಟ್ಟಿದ್ದ. ಇತರರು ಹಾದು ಹೋದಂತೆ ಈತ ಂಚಿನಮೇಲೆ ಮುದುಡುತ್ತಿದ್ದ. ತನ್ನ ಪೋಷಾಕಿನ ವಿಷಯದಲ್ಲಿ ಅವನಿಗೆ ನಾಚಿಕೆಯಾಗಿ ಂಬುದು ಸ್ಪಷ್ಟವಾಗಿತ್ತು. ಪೊಚಾಯಿನ್ಸ್ಕಿ ಕಂದರದ ಮೇಲ್ಗಡೆ ಇದ್ದ ಪಾನಮಂದಿರಗಳಲ್ಲಿ ಂದಕ್ಕೆ ನಾವು ಹೋದೆವು. ಸಂತೆಕಟ್ಟೆ ಕಾಣಿಸುತ್ತಲಿದ್ದ ಕಿಟಕಿಯ ಬಳಿ ಇದ್ದ ಮೇಜನ್ನು ರಿದೆವು.

"ಒಬ್ಬ ತಿರುಕ ಷರಾಯಿಯನ್ನು ಒಣಗಹಾಕ್ದ
ಮತ್ತೊಬ್ಬ ತಿರುಕ ಅತ್ತ ಬಂದು ಅದನು ಕದ್ದ
—ಆತ ನೀನು ಹಾಡ್ತಿದ್ದದ್ದು ನೆನಪಿದೆಯೆ ?"

ಹಾಡಿನ ಪದಗಳನ್ನು ಪುನರುಚ್ಚರಿಸಿದಂತೆ, ಅದರ ವ್ಯಂಗ್ಯಭಾವ ಮೊದಲ ಬಾರಿಗೆ ನನಗೆ ಾಳೆಯಿತು. ತೋರಿಕೆಗೆ ಹರ್ಷಿತನಾಗಿರುತ್ತಿದ್ದ ನನ್ನ ಮಾವನ ಮನಸ್ಸು ವಾಸ್ತವವಾಗಿ ುಳ್ಳುಗಳಿಂದ ಆವೃತವಾಗಿ ಕಹಿಯಾಗಿತ್ತೆಂದು ನನಗೆ ಅನಿಸಿತು.

ಆದರೆ ಆತ, ಗ್ಲಾಸಿಗೆ ವೋಡ್ಕಾ ಸುರಿದುಕೊಳ್ಳುತ್ತಿದ್ದಂತೆ, ಯೋಚನಾಮಗ್ನನಾಗಿ ತ್ತರವಿತ್ತ:

"ಆ, ಹೌದು, ನನ್ನ ಜೀವನವನ್ನು ನಾನು ಬದುಕಿ ಮುಗಿಸಿದ್ದಾಯ್ತು, ಮಜಾ ಮಾಡಿ ಯ್ತು. ಆದರೆ, ಸಾಕಷ್ಟು ಆಗಿಲ್ಲ. ಅದು ನನ್ನ ಹಾಡಲ್ಲ. ಧರ್ಮವಿದ್ಯಾಲಯದ ಅಧ್ಯಾಪಕರ ಲ್ಲಬ್ಬ ಅದನ್ನು ಬರೆದದ್ದು. ಏನಪ್ಪ ಅವನ ಹೆಸರು? ಮರೆತುಹೋಗಿದೆ. ನಾವು ಭಾರೀ ಹಿತರು—ಅವನು ಮತ್ತು ನಾನು. ಆದರೆ ಆತ ಕುಡಿದು ಕುಡಿದು ಸತ್ತ—ಚಳಿಯಲ್ಲಿ ಟ್ಟುಗಟ್ಟಿಹೋದ. ಹೀಗೆ ಕುಡಿದು ಕುಡಿದು ಸತ್ತ ಎಷ್ಟೊಂದು ಜನರನ್ನು ನಾನು ನೋಡಿದೀನಿ! ಿಸೋದು ಸಾಧ್ಯವಿಲ್ಲ! ಕುಡಿಯೋ ಅಭ್ಯಾಸ ಇದೆಯೇನು? ಕುಡೀಬೇಡ. ಸ್ವಲ್ಪ ತಾಳು. ಅಜ್ಜನನ್ನು ಆಗಾಗ್ಗೆ ಭೇಟಿಮಾಡ್ತಿರ್ತೀಯೊ? ಗೋಳಾಡ್ತಿರೋ ಮುದುಕ. ಈಗ ಅವನ ತಲೆ ಲ್ಪ ಕೆಟ್ಟಿದೇಂತ ಕೇಳಿದೀನಿ."

ಒಂದೆರಡು ಗ್ಲಾಸು ಕುಡಿದಾದ ಬಳಿಕ ಆತ ಮೈಯುಬ್ಬಿಸಿ ಕುಳಿತ; ಭುಜಗಳನ್ನು ನಿಡಿದು ಂಡ; ವಯಸ್ಸಿನಲ್ಲಿ ಚಿಕ್ಕವನಾದಂತೆ ಕಂಡ. ಹೆಚ್ಚು ಆಸಕ್ತಿಯಿಂದ ಮಾತನಾಡತೊಡಗಿದ.

ಕೈದಿಗಳಿಗೆ ಸಂಬಂಧಿಸಿದ ಪ್ರಕರಣವನ್ನು ಕುರಿತು ಆತನನ್ನು ಕೇಳಿದೆ.

"ಆ ವಿಷಯ ನಿನ್ನ ಕಿವಿಗೂ ಬಿದ್ದಿದೆ ಹಾಗಾದರೆ?" ಎಂದು ವಿಚಾರಿಸಿಕೊಂಡು, ಧ್ವನಿ

ತಗ್ಗಿಸಿ, ಸುತ್ತುಮುತ್ತೊಮ್ಮೆ ದಿಟ್ಟಿಸಿ, ಅವನೆಂದ:

"ಅವರು ಕೈದಿಗಳಾಗಿದ್ದರೇನಂತೆ? ನಾನೇನೂ ಅವರ ತೀರ್ಪುಗಾರನಲ್ಲ. ಉಳಿದ ನಮ್ಮೆ ಲ್ಲರ ಹಾಗೆ ಅವರೂ ಮನುಷ್ಯರು ಅನ್ನೋದು ನನಗೆ ಕಾಣ್ತಿತ್ತು. ಹೀಗಾಗಿ, ಅವರಿಗೆ ನಾನೆಂದೆ ಬನ್ನಿ ಸೋದರರೇ, ಸ್ನೇಹದಿಂದ ನಾವು ಒಟ್ಟಿಗೆ ಜೀವಿಸೋಣ. ಹಾಡಿನಲ್ಲಿ ಅಂದಿರೋ ಹಾಗೆ ಸ್ವಲ್ಪ ಮಜಾ ಮಾಡೋಣ:

ವಿಧಿ ಏನೇ ಇರಲಿ, ಹರುಷದಿ ನಾವಿರುವಾ
ಇಲ್ಲಿನ ಪಯಣ ಮುಗಿಯುವತನಕ
ದುಃಖಕೆ ಮಣಿಯುವ ಮನುಜನು ಮೂರ್ಖ
ಸಂತಸಕೆಂದೇ ನಡಸುವ ಬದುಕ !"

ಆತ ನಕ್ಕು, ತಳದಲ್ಲಿ ವ್ಯಾಪಾರದ ಅಂಗಡಿಗಳ ಸಾಲು ಇದ್ದು ಕತ್ತಲು ಕವಿಯುತ್ತಲಿದ್ದ ಕಂದರದೆಡೆಗೆ, ಕಿಟಕಿಯಿಂದ ಹೊರಗೆ, ದಿಟ್ಟಿಸಿದ.

ತನ್ನ ಮೀಸೆಯನ್ನು ತಟ್ಟುತ್ತ ಅವನು ಮುಂದುವರಿದ:

"ಅವರಿಗೆ ಖಂಡಿತವಾಗಿಯೂ ಸಂತೋಷವಾಯ್ತು ಅನ್ನು. ಬರಡಾಗಿತ್ತು ಆ ಸೆರೆಮನೆಯ ಜೀವನ. ಹೀಗಾಗಿ, ಹಾಜರಿ ಕರೆದಾದಮೇಲೆ ಅವರು ನನ್ನ ಭೇಟಿಗೆ ಬರುತ್ತಿದ್ದರು; ಆಹಾ ಹೋಡ್ಕಾ; ಕೆಲಸಾರೆ ನನ್ನದು, ಕೆಲಸಾರೆ ಅವರದು. ಎಂಥ ಮಜಾ ಅಂತೀಯಾ! ಹಾಡ ನರ್ತನ ನನಗೆ ಇಷ್ಟ; ಅವರಲ್ಲಿ ಕೆಲವರು ಸೊಗಸಾದ ಹಾಡುಗಾರರೂ ನರ್ತಕರೂ ಇದ್ದರು ನಿಜವಾಗಿಯೂ ಬಹಳ ಸೊಗಸಾದವರು. ನಂಬಲಾರೆ ನೀನದನ್ನು! ಅವರಲ್ಲಿ ಅರ್ಧ ಜ ಬೇಡಿಗಳಿದ್ದವರು. ಸರಿ, ಸಂಕೋಲೆ ತೊಟ್ಕೊಂಡು ನರ್ತಿಸೋದಕ್ಕಾಗುತ್ತೇನು? ಅದನ ಬಿಚ್ಚಿಬಿಡೋದಕ್ಕೆ ನಾನು ಸಮ್ಮತಿಕೊಟ್ಟೆ. ಅದು ಇರೋ ವಿಷಯ. ಕಮ್ಮಾರನಿಲ್ಲದೆ ಸ್ವತ ಅವರೇ ಅದನ್ನು ಮಾಡಲು ಶಕ್ತರಾಗಿದ್ದರು. ಚತುರರಾದ ಜನ, ನಿಜವಾಗಿಯೂ ಬಹ ಚತುರರು. ಆದರೆ ಶಹರದೊಳಕ್ಕೆ ಕಳ್ಳತನ ಮಾಡಲೀಂತ ನಾನು ಅವರನ್ನು ಬಂಧಮುಕ್ತ ಮಾಡಿದೆ ಅನ್ನೋದೆಲ್ಲಾ ಹುಚ್ಚುಚ್ಚಾರ. ಹಾಗೇಂತ ಸಿದ್ಧಮಾಡಿಕೊಡೋಕೆ ಒಬ್ಬನೂ ಸಮರ್ಥ ನಾಗಲಿಲ್ಲ."

ಆತ ಮೌನವಾದ. ಕೆಳಕ್ಕೆ ಕಂದರದೊಳಕ್ಕೆ ದಿಟ್ಟಿಸುತ್ತ ಕುಳಿತ. ಅಲ್ಲಿ ಹಳೆ ಸಾಮಾನುಗಳ ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚುತ್ತಿದ್ದರು. ಬೋಲ್ಟುಗಳ ಕಟಕ ಸದ್ದಾಗುತ್ತಿತ್ತು. ಬೀಗಗಳ ಕಿರಿಕಿರಿ ಸಪ್ಪಳ ಕೇಳಿಸುತ್ತಿತ್ತು. ಹಲಗೆಗಳು ದೊಪ್ ದ್ ಎಂದು ಕೆಳಕ್ಕೆ ಬೀಳುತ್ತಿದ್ದುವು. ಹಾಗೆ ದಿಟ್ಟಿಸುತ್ತ ಇದ್ದ ಬಳಿಕ ಆತ ಮೆಲುದನಿ ವಿನೋದದಿಂದೊಮ್ಮೆ ಕಣ್ಣು ಮಿಟಕಿಸಿ, ಮುಂದುವರಿದ:

"ಸತ್ಯ ಹೇಳಬೇಕಾದರೆ, ಅವರಲ್ಲೊಬ್ಬ ವಾಸ್ತವವಾಗಿಯೂ ರಾತ್ರೆ ಹೊರಹೋ ತ್ತಿದ್ದ. ಆದರೆ, ಅವನು ಬೇಡಿತೊಡಿಸಿದ್ದ ಕೈದಿಯಾಗಿರಲಿಲ್ಲ. ನಿಜ್ನಿ—ನೊವೊಗೊರಡ ಒಬ್ಬ ಸ್ಥಳೀಯ ಸಾಧಾಕಳ್ಳ. ಸಮೀಪದಲ್ಲೇ ಪೆಚೊರ್ಕಾ ನದೀ ದಡದಲ್ಲಿ ಅವನ ಉಪಪತ್ ವಾಸವಾಗಿದ್ದಳು. ಧರ್ಮಗುರುವಿಗೆ ಸಂಬಂಧಿಸಿದ ಗದ್ದಲವೆಲ್ಲ ಬರೇ ಆಕಸ್ಮಿಕವಾಗಿ ಆದದ್ದು

ಧರ್ಮಗುರು ಒಬ್ಬ ವರ್ತಕ ಅಂತ ಈತ ತಪ್ಪು ತಿಳ್ಕೊಂಡ. ಅದು ಸಂಭವಿಸಿದ್ದು, ಬಿರುಗಾಳಿ ಬೀಸುತ್ತಿದ್ದ ಚಳಿಗಾಲದ ರಾತ್ರಿ. ಪ್ರತಿಯೊಬ್ಬರೂ ದೊಡ್ಡ ಕೋಟುಗಳನ್ನು ತೊಟ್ಟಿದ್ದರು. ಧರ್ಮಗುರು ಯಾರು? ವರ್ತಕ ಯಾರು?—ಅಂತ ಹೇಗೆ ತಾನೇ ಹೇಳೋದು ಸಾಧ್ಯವಿತ್ತು ?"

ಇದು ತಮಾಷೆಯಾಗಿ ನನಗೆ ಕಂಡಿತು. ಮುಂದುವರಿಯುತ್ತ ಅವನೂ ನಕ್ಕ:

"ಅವನಂತೂ ಹೇಳೋದಕ್ಕೆ ಶಕ್ತನಾಗಿರ್ಲಿಲ್ಲ."

ಇದ್ದಕ್ಕಿದ್ದಂತೆ, ಸೋಜಿಗವೆನಿಸುವಷ್ಟು ಸುಲಭವಾಗಿ, ನನ್ನ ಮಾವನ ಮನೋಪ್ರವೃತ್ತಿ ಸಿಟ್ಟಿಗೆ ಹೊರಳಿತು. ತನ್ನ ತಟ್ಟೆಯನ್ನಾತ ತಳ್ಳಿ, ಮುಖ ಸಿಂಡರಿಸಿ, ಸಿಗರೇಟು ಹಚ್ಚುತ್ತ, ಗೊಣಗಿದ:

"ಅವರು ಒಬ್ಬರನ್ನೊಬ್ಬರು ...ೀಚ್ತಾರೆ, ಒಬ್ಬರನ್ನೊಬ್ಬರು ಹಿಡೀತಾರೆ, ಒಬ್ಬರನ್ನೊಬ್ಬರು ಸೆರೆಮನೆಗೋ ಅಥವ ಸಶ್ರಮದುಡಿಮೆಗಾಗಿ ಸೈಬೀರಿಯಾಕ್ಕೋ ಕಳಿಸ್ತಾರೆ. ಆದರೆ, ನನ್ನನ್ನು ಯಾತಕ್ಕೆ ಅದರೊಳಕ್ಕೆ ಎಳೀಬೇಕು? ಅದೆಲ್ಲರ ಮೇಲೆ ಉಗುಳ! ನೋಡಿಕೊಳ್ಳೋದಕ್ಕೆ ನನಗೆ ನನ್ನ ಸ್ವಂತದ ಆತ್ಮವೇ ಇದೆ."

ಮೈಯೆಲ್ಲ ರೋಮವಿದ್ದ ಉಗಿಕೆಲಸಗಾರನ ಭವ್ಯಚಿತ್ರ ನನ್ನೆದುರು ಎದ್ದಿತು. 'ಉಗುಳು ಅದರ ಮೇಲೆ!' ಎಂದು ಹೇಳುವುದು ಅವನಿಗೂ ಪ್ರಿಯವಾಗಿತ್ತು. ಅವನ ಹೆಸರೂ ಕೂಡಾ ಯಾಕೋವ್.

"ನೀನು ಏನು ಯೋಚಿಸ್ತಿದೀಯಾ ?" ಎಂದು ನನ್ನ ಮಾವ ಮೃದುವಾಗಿ ಕೇಳಿದ.

"ಕೈದಿಗಳ ವಿಷಯದಲ್ಲಿ ನಿನಗೆ ಕನಿಕರ ಅನಿಸ್ತೇನು ?"

"ಅವರ ವಿಷಯದಲ್ಲಿ ಕನಿಕರ ಅನಿಸೋದು ಬಹಳ ಸುಲಭ. ಅಷ್ಟೊಂದು ಸೊಗಸಾದ ಜನ. ನಿಜವಾಗಿಯೂ ಬಹಳ ಸೊಗಸಾದವರು! ಕೆಲಸಾರೆ ಅವರ ಕಡೆ ನೋಡ್ತಾ ನಾನು ಯೋಚಿಸ್ತಿದ್ದೆ: ನಾನಿದೀನಿ, ನಿಮ್ಮ ಕಾವಲುಗಾರ; ಹ್ಞು! ನಿಮ್ಮ ಬೂಟುಗಳಿಗೆ ಪಾಲಿಷ್ ಹಾಕು ವಷ್ಟೂ ನಾನು ಯೋಗ್ಯನಲ್ಲ. ಜಾಣಪಿಶಾಚಿಗಳು, ತೋಳಗಳ ಹಾಗೆ."

ಮಾದಕ ಪಾನೀಯವೂ ಸಂಸ್ಮರಣೆಗಳೂ ಸೊಗಸಾದ ರೀತಿಯಲ್ಲಿ ಅವನನ್ನು ಸಚೇತನ ಗೊಳಿಸಿದ್ದುವು. ಮೊಣಕೈಗಳನ್ನು ಕಿಟಕಿಯ ದಂಡೆಯ ಮೇಲಿರಿಸಿ, ಬೆರಳುಗಳ ನಡುವೆ ಸಿಗ ರೇಟಿದ್ದ ಹಳದಿ ಕೈಯನ್ನು ಬೀಸುತ್ತ, ಲವಲವಿಕೆಯ ಧ್ವನಿಯಲ್ಲಿ ಅವನು ಮುಂದುವರಿದ:

"ಅವರಲ್ಲೊಬ್ಬ ಹ್ಯಾಗೆ ಮಾತಾಡ್ತಿದ್ದಾಂತ ನೀನು ಎಂದಾದರೂ ಕೇಳೋದು ಸಾಧ್ಯ ವಾಗಿದ್ದಿದ್ದರೆ! ಅವನೊಬ್ಬ ಒಕ್ಕಣ್ಣಿನ ಮನುಷ್ಯ. ಮುದ್ರೆ ಕೊರೆಯುವವನು ಹಾಗೂ ಗಡಿಯಾರ ರಿಪೇರಿಸುವಾತ. ಖೋಟಾ ನಾಣ್ಯ ತಯಾರಿಸಿದ್ದಕ್ಕೆ ದಸ್ತಗಿರಿಯಾಗಿ ತಪ್ಪಿಸಿಕೊಳ್ಳೋದಕ್ಕೆ ಯತ್ನಿಸಿದ್ದ. ಯಾವಾಗಲೂ ವಿದ್ಯುತ್ ಬೆಳಕಿನ ಹಾಗೆ ಮಿಂಚ್ತಿದ್ದ. ಹಕ್ಕಿಯ ಹಾಗೆ ಅವನು ಹಾಡ್ತಿದ್ದ. ಅವನು ಹೇಳ್ತಿದ್ದ: ಇದನ್ನು ನನಗೆ ವಿವರಿಸಿ ಹೇಳಪ್ಪ. ಟಂಕಸಾಲೆಯವರು ನಾಣ್ಯ ಅಚ್ಚುಹಾಕಬಹುದು, ನಾನು ಹಾಕಬಾರದು—ಯಾಕಪ್ಪ? ಹ್ಞ? ಹೂಂ, ವಿವರಿಸು. ವಿವರಿ ಸೋದಕ್ಕೆ ಯಾರೂ ಶಕ್ತರಿರಲಿಲ್ಲ. ಯಾರೂ ಇಲ್ಲ, ನನ್ನಿಂದ ಕೂಡಾ ಆಗಲಿಲ್ಲ. ನಾನೋ— ಅವರ ಕಾವಲುಗಾರ! ಆಮೇಲೆ ಇನ್ನೊಬ್ಬ ಇದ್ದ. ಮಾಸ್ಕೋದ ಒಬ್ಬ ಸುಪ್ರಸಿದ್ಧ ಕಳ್ಳ— ಶಾಂತವಾಗಿ ಸ್ವಚ್ಛವಾಗಿ ಇರ್ತಿದ್ದ; ಒಂದು ರೀತಿಯ ಶೋಕೀವಾಲಾ. ಅವನು ಯಾವಾಗಲೂ

ವಿನಯದಿಂದ ಮಾತಾಡ್ತಿದ್ದ. ಅವನು ಹೇಳ್ತಾನೆ: ಜನರು ಯಾವಾಗಲೂ ಕುಸಿದು ಬೀಳೋ
ವರೆಗೂ ದುಡೀತಾರೆ. ಹಾಗೆ ಮಾಡೋ ಅಪೇಕ್ಷೆ ನನಗಿಲ್ಲ. ಹಿಂದೆ ಒಮ್ಮೆ ನಾನು ಆರೀತಿ
ಮಾಡಿ ನೋಡಿದ್ದೆ. ದುಡಿದು ದುಡಿದು ನನ್ನ ಬೆರಳ ತುದಿಗಳು ಸವೆದೇ ಹೋಗಿದ್ದುವು
ಯಾತಕ್ಕೋಸ್ಕರ? ಆಗ್ತಿದ್ದದ್ದು ಅಲ್ಪ ಸಂಪಾದನೆ. ಕುಡಿಯೋದು ಒಂದು ಗುಟುಕು.
ಇಸ್ಪೀಟು ಆಟದಲ್ಲಿ ಕಳಕೊಳ್ಳೋದು ಒಂದಿಷ್ಟು, ಮುದ್ದುಮಾಡಿದ್ದಕ್ಕಾಗಿ ಒಬ್ಬಳು ಹೆಂಗಸಿಗೆ
ಒಂದು ಚೂರು—ಇಷ್ಟಾಗಿ ಉಳಿಯೋದೇನು?—ಬರಿಗೈ ಬರಿಹೊಟ್ಟೆ. ಅವನಂತಾನೆ; ಇಲ್ಲ,
ಆ ಆಟ ನಾನೀಗ ಆಡೋದಿಲ್ಲ!"

ಮುಂದುವರಿದಂತೆ ಯಾಕೊವ್ ಮಾವ, ಮೇಜಿನಮೇಲೆ ಬಹಳ ತಗ್ಗಾಗಿ ಬಾಗಿದ.
ರೋಮದ ಬೇರುಗಳವರೆಗೂ ಮೈ ಕೆಂಪು ಕೆಂಪಾಗಿತ್ತು. ಕಿವಿಗಳು ಕಿವುಚಿಕೊಳ್ಳುವಷ್ಟು ಆತ
ಉದ್ರೇಕಗೊಂಡಿದ್ದ.

"ಅವರು ಮೂರ್ಖರಲ್ಲ, ತಮ್ಮ ವಸ್ತುಸ್ಥಿತಿಯ ಬಗ್ಗೆ ಸರಿಯಾದ ದೃಷ್ಟಿಕೋನ ಅವರಿಗಿದೆ.
ಈ ತೊಂದರೆಯನ್ನೆಲ್ಲಾ ಸುಟ್ಟತು! ಉದಾಹರಣೆಗೆ ನನ್ನನ್ನು ತಗೋ: ಯಾವರೀತಿಯದು ನನ್ನ
ಬದುಕು? ಅದನ್ನು ನೆನಸಿಕೊಳ್ಳೋದಕ್ಕೆ ಕೂಡ ನಾಚಿಕೆಯಾಗ್ತದೆ. ಒಳ್ಳಿತಾದ್ದನ್ನೆಲ್ಲ
ಆಗಾಗ್ಗೆ ಇದ್ದಕ್ಕಿದ್ದ ಹಾಗೆ ಸದ್ದಿಲ್ಲದೆ ಕಸಿದುಬಿಡ್ತಿದ್ದರು. ಕಷ್ಟಪಟ್ಟು ಸಂಪಾದಿಸಿದ ದುಃಖ
ಕದ್ದು ದೊರೆತ ಸುಖ. ಇದನ್ನು ಮಾಡಬೇಡಾಂತ ನನ್ನ ತಂದೆ ಕೂಗಾಡೋದು. ಅದನ್ನು
ಮಾಡಬೇಡಾಂತ ನನ್ನ ಹೆಂಡತಿ ಕೂಗಾಡೋದು. ಸ್ವತಃ ನನಗೋ ಒಂದು ರೂಬಲು ಖರ್ಚು
ಮಾಡೋದಕ್ಕೆ ಕೂಡಾ ಭಯ. ಹೇಗೆ ಬದುಕು ಜಾರಿಹೋಯ್ತು. ಇಳಿವಯಸ್ಸಿನಲ್ಲಿ ಇಗೋ
ಇಲ್ಲಿದೇನೆ ನಾನು, ನನ್ನ ಮಗನಿಗೆ ಸೇವಕನಾಗಿ. ಅದನ್ನು ಬಚ್ಚಿಡೋಕೆ ಯಾಕೆ ಯತ್ನಿಸಲಿ
ಬಹಳ ದೀನನಾಗಿ ನಾನು ಅವನ ಸೇವೆ ಮಾಡ್ತಿದೇನೆ, ತಮ್ಮ. ಅವನೋ ನಿಜವಾದ ಸದ್ಗೃಹಸ್ಥನ
ಹಾಗೆ ನನ್ನ ಮೇಲೆ ಕೂಗಾಡ್ತಾನೆ. 'ಅಪ್ಪ' ಅಂತ ಅವನು ನನ್ನನ್ನು ಕರೀತಾನೆ. ಆದರೆ ನನ್ನ
ಕಿವಿಗದು 'ಆಳೇ' ಅಂತ ಕೇಳ್ತದೆ. ನಾನು ಹುಟ್ಟಿದ್ದು ಇದಕ್ಕೋಸ್ಕರವೇನು? ನಾನು ಇಷ್ಟೆಲ್ಲಾ
ಅನುಭವಿಸಿದ್ದು ನನ್ನ ಸ್ವಂತ ಮಗನಿಗೇ ಸೇವಕನಾಗಿ ಕೊನೆಗಾಣೋದಕ್ಕೇನು? ಅದು ಹೀಗಿರದೆ
ಇದ್ದರೂ—ನಾನು ಜೀವಿಸಿದ್ದು ಯಾತಕ್ಕೆ? ಬದುಕಿನಿಂದ ಎಂದಾದರೂ ಎಷ್ಟು ಸುಖ ನನಗೆ
ದೊರೆಯಿತು?"

ಬಹಳ ಲಕ್ಷ್ಯಗೊಟ್ಟು ನಾನು ಕೇಳುತ್ತಿರಲಿಲ್ಲ. ತೊದಲುತ್ತ ಉತ್ತರವೀಯಬೇಕೆಂಬ
ಯೋಚನೆಯೂ ಇಲ್ಲದೆ, ನಾನೆಂದೆ:

"ಹೇಗೆ ಜೀವಿಸ್ತಾ ಹೋಗಬೇಕು ಅನ್ನೋದು ನನಗೆ ಕೂಡಾ ಗೊತ್ತಿಲ್ಲ...."

ಅವನು ಹೂಂಕರಿಸಿದ!

"ಹುಂ! ಯಾರಿಗೆ ತಾನೆ ಗೊತ್ತಿದೆ? ಗೊತ್ತಿದ್ದ ಯಾರನ್ನೂ ಈವರೆಗೆ ನಾನು ಸಂಧಿಸಿಲ್ಲ.
ಜನರು ಅಭ್ಯಾಸಬಲದಿಂದ ಜೀವಿಸ್ತಾ ಹೋಗ್ತಾರೆ, ಅಷ್ಟೆ...."

ಸಿಟ್ಟಿನ ಹಾಗೂ ನೋವಿನ ಧ್ವನಿ ಅವನ ಮಾತಿನೊಳಕ್ಕೆ ಮತ್ತೊಮ್ಮೆ ನುಸುಳಿತು:

"ಒರೆಲ್‌ನಿಂದ ಬಂದಿದ್ದ ಇನ್ನೊಬ್ಬ ಆಸಾಮಿ ಇದ್ದ—ಅತ್ಯಾಚಾರ ಮಾಡಿದ್ದಕ್ಕಾಗಿ ಅ

ನಿಗೆ ಶಿಕ್ಷೆಯಾಗಿತ್ತು—ಶ್ರೀಮಂತ ಮನೆತನದವ, ಅದ್ಭುತ ನರ್ತಕ. ವಾಂಕಾನನ್ನು ಕುರಿತಾದ ತನ್ನ ಹಾಡಿನಿಂದ ಜನ ನಗೋ ಹಾಗೆ ಅವನು ಮಾಡ್ತಿದ್ದ :

ಮಸಣದ ಸುತ್ತಲೂ ನಡೆವನು ವಾಂಕಾ
ತಿಳಿವು ತುಂಬಿದ ಮುಖದಿಂದ.
ವಾಂಕಾ, ವಾಂಕಾ, ಅಲ್ಲಿ ಯಾಕ?
ಇಲ್ಲವೇನು ಬೇರೊಳ್ಳೇ ಜಾಗ ?

"ಆದರೆ, ಆ ಹಾಡಿನಲ್ಲಿ ನಗುವಂಥಾದ್ದೇನೂ ಇಲ್ಲಾಂತ ನನ್ನ ಅಭಿಪ್ರಾಯ. ಅದು ಜೀವಂತ ಸತ್ಯ! ಎಷ್ಟೇ ಹೊರಳು, ನುಸುಳು, ಮಸಣದಿಂದ ತಪ್ಪಿಸಿಕೊಳ್ಳೋ ಹಾಗೆಯೇ ಇಲ್ಲ. ಅದನ್ನು ತಲಪಿದಾಗ. ನಾನು ಕೈದಿಯಾಗಿದ್ದರೇನು ವಾರ್ಡರಾಗಿದ್ದರೇನು—ಅದಕ್ಕೆ ಚಿಕ್ಕಾಸಿನ ಬೆಲೆಯನ್ನೂ ನಾನು ಕೊಡುವವನಲ್ಲ."

ಮಾತನಾಡಿ ಬಳಲಿ, ತನ್ನ ವೋಡ್ಕಾವನ್ನಾತ ಕುಡಿದು ಮುಗಿಸಿದ. ಬರಿದು ಗ್ಲಾಸಿನತ್ತ ನೋಡಿ, ಹಕ್ಕಿಯ ಹಾಗೆ, ತನ್ನ ಒಂದು ಕಣ್ಣನ್ನು ಮಿಟಕಿಸಿದ. ಮೌನವಾಗಿ ಸಿಗರೇಟು ಸೇದಿದ. ಮೀಸೆಗಳೆಡೆಯಿಂದ ಸುರುಳಿ ಸುರುಳಿಯಾಗಿ ಹೋಯಿತು ಹೊಗೆ.

ಯಾಕೋವ್ ಮಾವನೊಡನೆ ಯಾವರೀತಿಯ ಹೋಲಿಕೆಯೂ ಇರದಿದ್ದ ಕಲ್ಲುಕೆಲಸಗಾರ ಪಿಯೋತರ್‌ಗೆ," ಮನುಷ್ಯ ಎಷ್ಟೇ ಪ್ರಯತ್ನಿಸಲಿ, ಎಷ್ಟೇ ಆಸೆ ಕಟ್ಟಿಕೊಂಡಿರಲಿ, ಕೊನೆಗೆ ಆತ ತಲಪೋದು ಗೋರಿಯನ್ನು, ಶವದಾನಿಯನ್ನೇ," ಎಂದು ಹೇಳುವುದು ಪ್ರಿಯವಾಗಿತ್ತು. ಅಲ್ಲದೆ ಅದೇ ವಿಚಾರವನ್ನು ಬೇರೆಯೂ ಎಷ್ಟು ನಾಣ್ಣುಡಿಗಳು ವ್ಯಕ್ತಪಡಿಸುತ್ತಿದ್ದುವು!

ನನ್ನ ಮಾವನೊಡನೆ ಬೇರೆ ಯಾವ ಪ್ರಶ್ನೆ ಕೇಳುವ ಬಯಕೆಯೂ ನನಗಿರಲಿಲ್ಲ. ಅವನ ವಿಷಯದಲ್ಲಿ ನನಗೆ ಕನಿಕರವೆನಿಸಿತು. ಅವನ ಸಹವಾಸದಲ್ಲಿ ನಾನು ಬಹಳ ನಿರುತ್ಸಾಹ ತಳೆದೆ. ಬೇಸರದ ನಡುವೆ ಸಂತಸವನ್ನು ಹೆಣೆಯುತ್ತಿದ್ದ ಅವನ ಹರ್ಷದ ಹಾಡುಗಳನ್ನೂ ಗಿಟಾರಿನ ಝೇಂಕಾರವನ್ನೂ ಸ್ಮರಿಸದೆ ಇರುವುದು ನನ್ನಿಂದಾಗಲಿಲ್ಲ. ಹರ್ಷಜೀವಿಯಾದ ಟ್ಸಿಗಾನೊಕನನ್ನೂ ನಾನು ಮರೆತಿರಲಿಲ್ಲ. ಇಲ್ಲ, ಅವನನ್ನು ನಾನು ಮರೆತೇ ಇರಲಿಲ್ಲ. ಯಾಕೋವ್ ಮಾವನ ಮುದುಡಿದ ಆಕೃತಿಯನ್ನು ದಿಟ್ಟಿಸುತ್ತಿದ್ದಂತೆ, ಕ್ರೂಜೆಯ ಕೆಳಗೆ ಟ್ಸಿಗಾನೊಕನನ್ನು ತಾನು ಹೇಗೆ ಅಪ್ಪಚ್ಚಿಮಾಡಿದನೆಂಬುದು ಈತನಿಗೆ ನೆನಪಿದೆಯೆ?—ಎಂದು ಅಚ್ಚರಿಪಡದೇ ಇರುವುದು ನನ್ನಿಂದಾಗಲಿಲ್ಲ.

ಆದರೆ, ಆ ವಿಷಯವಾಗಿ ಅವನನ್ನು ನಾನು ಪ್ರಶ್ನಿಸಲಿಲ್ಲ

ಈಗ ಆಗಸ್ಟ್ ತಿಂಗಳ ಮಂಜಿನಿಂದ ತುಳುಕುತ್ತಿದ್ದ ಕಂದರದೊಳಕ್ಕೆ ಕೆಳಕ್ಕೆ ನಾನು ನೋಡಿದೆ. ಅದರ ಆಳದಿಂದ ಸೇಬು—ಕಲ್ಲಂಗಡಿ ಹಣ್ಣುಗಳ ಸುವಾಸನೆ ಎದ್ದಿತು. ಶಹರದತ್ತ ಸಾಗಿದ್ದ ಅಗಲ ಕಿರಿದಾದ ಹಾದಿಯುದ್ದಕ್ಕೂ ಕಂದೀಲುಗಳು ಬೆಳಗುತ್ತಿದ್ದುವು. ನನ್ನ ಸುತ್ತುಮುತ್ತಲಿನದೆಲ್ಲವೂ ಹೃದಯ ಹಿಂಡುವಷ್ಟು ಪರಿಚಿತವಾಗಿದ್ದುವು: ರೈಬಿನ್ಸ್‌ಗೆ ಹೊರಟಿದ್ದ

ಉಗಿ ಹಡಗದಿಂದ ಶಿಳ್ಳು ಕೇಳಿಸಿತು; ಇನ್ನೊಂದು ಶಿಳ್ಳು ಪರ್ಮ್‌ಗೆಂದು ಹೊರಟಿದ್ದ ಹಡಗದಿಂದ....

"ಆ್ಹ, ಸರಿ—ನಾನಿನ್ನು ಹೊರಡಬೇಕು," ಎಂದ ಮಾವ.

ಪಾನಮಂದಿರದ ಬಾಗಿಲ ಬಳಿ ನನ್ನ ಕೈಯನ್ನಾತ ಕುಲುಕಿ, ಪರಿಹಾಸ್ಯದ ಧ್ವನಿಯಲ್ಲಿ ಅಂದ:

"ಮುಖ ಜೋತು ಹಾಕ್ಕೊಂಡು ಹೋಗ್ಬೇಡ, ಈಗ. ನಿನ್ನ ಮುಖ ಈಗಾಗಲೇ ಸಪ್ಪಗಾಗಿದೆ. ಉತ್ಸಾಹಕಳೆ—ನೀನಿನ್ನೂ ಚಿಕ್ಕವನು. 'ಏಧಿ ಏನೇ ಇರಲಿ, ಹರುಷದಿನಾವಿರುವಾ,' ಇದನ್ನು ನೆನಪಿಡು. ಸರಿ, ವಿದಾಯದ ನಮಸ್ಕಾರ. ನನ್ನ ದಾರಿ ಈಚೆಗಿದೆ, ಉಸ್‌ಪೆನ್ಸ್ಕಿ ದೇವ ಮಂದಿರವನ್ನು ದಾಟಿ ನಾನು ಹೋಗ್ಬೇಕು."

ಹೀಗೆ, ಹರ್ಷಜೀವಿಯಾದ ನನ್ನ ಮಾವ, ತಾನು ಆಡಿದ ಮಾತಿನಿಂದ ನನ್ನ ವಿಚಾರ ಗಳನ್ನು ಎಂದಿಗಿಂತಲೂ ಹೆಚ್ಚು ಗೊಂದಲದಲ್ಲಿ ಕೆಡವಿ, ಹೊರಟುಹೋದ.

ನಾನು ಗುಡ್ಡವನ್ನೇರಿ ಶಹರದತ್ತ ಹೊರಟೆ, ಬಯಲುಗಳ ಮೂಲಕ ಸಾಗಿದೆ. ಆ ದಿನ ಪೂರ್ಣಚಂದ್ರನಿದ್ದ. ಕೆಳಕ್ಕಿದ್ದ ಮೋಡಗಳು, ನನ್ನ ನೆರಳನ್ನು ತಮ್ಮ ನೆರಳಿಂದ ಅಳಿಸುತ್ತ, ಆಕಾಶಕ್ಕೆ ಅಡ್ಡವಾಗಿ ಸಾಗಿದುವು. ಬಯಲುಗಳ ಹಾದಿಯಾಗಿ ಶಹರವನ್ನು ಸುತ್ತುವರಿದು, ಒಟ್ಕೊಸ್ ಬಳಿ ವೋಲ್ಗಾ ನದೀ ತಟಕ್ಕೆ ನಾನು ಬಂದೆ. ಅಲ್ಲಿ ಧೂಳು ಮುಚ್ಚಿದ್ದ ಹುಲ್ಲಿನ ಮೇಲೆ ಮೈಚೆಲ್ಲಿ, ನದಿಯತ್ತ, ಹುಲ್ಲುಗಾವಲಿನತ್ತ, ನಿಶ್ಚಲವಾಗಿದ್ದ ಭೂಮಿಯತ್ತ ಬಹಳ ಹೊತ್ತು ದಿಟ್ಟಿಸಿದೆ. ಮೋಡದ ನೆರಳುಗಳು ನಿಧಾನವಾಗಿ ವೋಲ್ಗಾ ನದಿಯನ್ನು ದಾಟಿ ಹೋದುವು. ನೀರಮೇಲಿನಿಂದ ಹೋಗುತ್ತ ತೊಳೆಯಲ್ಪಟ್ಟುವೇನೋ ಎಂಬ ಹಾಗೆ, ಹುಲ್ಲು ಗಾವಲನ್ನು ತಲಪಿದಂತೆ ಹೆಚ್ಚು ಹೆಚ್ಚು ಶುಭ್ರವಾದವು. ನನ್ನ ಸುತ್ತುಮುತ್ತಲಿನದೆಲ್ಲವೂ ತೂಕಡಿಸುತ್ತಿದ್ದುವು, ಹತ್ತಿಕ್ಕಿದಂತಿದ್ದುವು. ಬದುಕು ಮತ್ತು ಚಲನೆಗೋಸ್ಕರವಾದ ಭಾವೋ ದ್ವೇಗದಿಂದ ಪ್ರೇರಿತವಾಗುವುದರ ಬದಲು, ಅವಶ್ಯತೆಯ ಒತ್ತಡಕ್ಕೆ ಸಿಲುಕಿ, ಮನಸಿಲ್ಲದ ಮನಸ್ಸಿನಿಂದ ಪ್ರತಿಯೊಂದೂ ಚಲಿಸುತ್ತಿತ್ತು.

ಆ ಭೂಮಿಗೂ ಸ್ವತಃ ನನಗೂ ಒಳ್ಳೆಯದೊಂದು ಒದೆಕೊಡಬೇಕೆಂದು ನಾನು ಹಾತೊರೆದೆ. ಹಾಗೆ ಒದೆಕೊಟ್ಟು, ಸಂತಸದ ಸುಳಿಯಲ್ಲಿ, ಪರಸ್ಪರರಲ್ಲೂ ಬದುಕಿನಲ್ಲೂ ಅನು ರಕ್ತರಾದ ಜನರ ಆವೇಶಭರಿತ ನೃತ್ಯದಲ್ಲಿ, ನನ್ನನ್ನೂ ಒಳಗೊಂಡು ಎಲ್ಲವೂ ಸುತ್ತುಸುತ್ತು ತಿರುಗುವಂತೆ ಮಾಡಬೇಕೆಂದು ಬಯಸಿದೆ. ಈ ಬದುಕು ಸೃಷ್ಟಿಯಾಗಿರುವುದೇ ಇನ್ನೊಂದು ಬದುಕಿಗೋಸ್ಕರ; ಹೆಚ್ಚು ಪ್ರಾಮಾಣಿಕವಾಗಿ. ಧೈರ್ಯಶಾಲಿಯಾಗಿ, ಸುಂದರವಾಗಿ ಇರುವುದ ಕ್ಕೋಸ್ಕರ. ಅಂತಹ ಬದುಕನ್ನು ಪ್ರೀತಿಸುವ ಜನರ ನರ್ತನದಲ್ಲಿ ಮೈಮರೆಯಲು ಅಪೇಕ್ಷಿಸಿದೆ.

ನನ್ನಷ್ಟಕ್ಕೆ ನಾನು ಯೋಚಿಸಿದೆ:

"ಏನನ್ನಾದರೂ ನಾನು ಮಾಡದೇ ಹೋದರೆ, ನನ್ನ ನಾಶವಾಗುವುದು ಖಂಡಿತ."

ನೀರಸವಾದ ಶರತ್ಕಾಲದ ದಿನಗಳಲ್ಲಿ ಕಾಡುಗಳನ್ನು ಹೊಕ್ಕು ಎಷ್ಟೋ ಸಾರೆ ನಾನು ಅಲೆ ದಿದ್ದೆ. ಆಗ ಸೂರ್ಯ ಕಾಣಿಸುತ್ತಿರಲಿಲ್ಲ. ಸೂರ್ಯಸ್ಪರ್ಶದ ಅನುಭವವೂ ಇಲಿರಲ್ಲ.

ಸೂರ್ಯನ ಇರುವಿಕೆಯೇ ಮರೆತು ಹೋಗಿರುತ್ತಿತ್ತು. ದಾರಿ ತಪ್ಪಿತೆಂದರೆ, ಹಿಂತಿರುಗಿ ಬರುವ ಕಾಲುಹಾದಿಗಳಿಗಾಗಿ ಕಾತರಗೊಂಡು ಹುಡುಕುತ್ತಿದ್ದೆ. ಕೊನೆಯಲ್ಲಿ ಹುಡುಕಿ ಬೇಸತ್ತು, ಔಡುಕಚ್ಚಿ, ಕಾಡುಗಳ ನಟ್ಟನಡುವಿಗೇ ಧೈರ್ಯದಿಂದ ನುಗ್ಗುತ್ತಿದ್ದೆ. ದಟ್ಟನೆಯ ಪೊದೆಗಳನ್ನು ಹಾಗೂ ಅಪಾಯಕಾರಿ ಜವುಗುಗಳನ್ನು ದಾಟಿ ಮುಂದೆ ಸಾಗುತ್ತಿದ್ದೆ. 'ಹೀಗೆ ಯಾವಾಗಲೂ ಅನಿವಾರ್ಯವಾಗಿ, ರಸ್ತೆಗೆ ಬಂದೇ ಬರುತ್ತಿದ್ದೆ !

ಇದಾಗಿತ್ತು ನಾನು ಕೈಕೊಂಡ ತೀರ್ಮಾನ :

ಆ ವರ್ಷದ ಶರದೃತುವಿನಲ್ಲಿ, ವ್ಯಾಸಂಗ ನಡಸುವ ದಾರಿ ಯಾವುದಾದರೂ ಕಾಣಬಹುದೆಂದು ಅಂತರಂಗದಲ್ಲಿ ಆಶಿಸುತ್ತ ನಾನು ಕಜಾನಿಗೆ ಹೊರಟೆ.

ವರ್ಗೀಕರಣ ಸಂಖ್ಯೆ 92.B.GOR
ಲೇಖಕ ಮಕ್ಸಿಂ ಗಾರ್ಕಿ

ಜಠಾವಾಶ್ರೀಗಣಿ